2012ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ

ರಾಮಚಂದ್ರ ಗುಹ

ಕನ್ನಡಕ್ಕೆ: ಜಿ ಎನ್ ರಂಗನಾಥ ರಾವ್

ಬಾಪೂ ನಂತರದ ಭಾರತ



ವಸಂತ ಪ್ರಕಾಶನ

ಸಂಪುಟ 1



ರಾಮಚಂದ್ರ ಗುಹ ಹುಟ್ಟಿದ್ದು 1958ರಲ್ಲಿ, ಡೆಹರಾಡೂನಿನಲ್ಲಿ. ದೆಹಲಿ, ಕೋಲ್ಕತಾಗಳಲ್ಲಿ ಉನ್ನತ ಶಿಕ್ಷಣ ಪಡೆದಿರುವ ಅವರು ಓಸ್ಲೊ, ಸ್ಟ್ಯಾನ್‌ಫರ್ಡ್, ಯೇಲ್ ವಿಶ್ವವಿದ್ಯಾಲಯಗಳಲ್ಲಿಯೂ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿಯೂ ಬೋಧಿಸಿದ್ದಾರೆ. ಬರ್ಕ್‌ಲೀಯಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಇಂಡೋ-ಅಮೆರಿಕನ್ ಕಮ್ಯೂನಿಟಿ ಚೇರ್ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಲವು ದೇಶಗಳಲ್ಲಿ ಅಧ್ಯಯನ ನಡೆಸಿ, ಹತ್ತು ವರ್ಷಗಳಲ್ಲಿ ಮೂರು ಖಂಡಗಳಲ್ಲಿ ಐದು ಹುದ್ದೆಗಳನ್ನು ನಿರ್ವಹಿಸಿ, ಕಡೆಗೆ ಬೆಂಗಳೂರಿನಲ್ಲಿ ನೆಲೆಸಿರುವ ಗುಹ ಈಗ ಪೂರ್ಣಾವಧಿ ಲೇಖಕರು; ಪ್ರಸಿದ್ಧ ಅಂಕಣಕಾರರು. ಸ್ಯಾವೇಜಿಂಗ್ ದಿ ಸಿವಿಲೈಸ್ಡ್, ಎನ್ವಿರಾನ್ಮೆಂಟಲಿಸಂ, ಅನ್ ಆಂತ್ರಪಾಲಜಿಸ್ಟ್ ಅಮಾಂಗ್ ಮಾರ್ಕ್ಸಿಸ್ಟ್ಸ್ ಅಂಡ್ ಅದರ್ ಎಸ್ಸೇಸ್, ಎ ಕಾರ್ನರ್ ಆಫ್ ಎ ಫಾರಿನ್ ಫೀಲ್ಡ್, ದಿ ಅನ್‌ಕ್ವಯಟ್ ವುಡ್ಸ್, ದಿ ಪಿಕಾಡರ್ ಬುಕ್ ಆಫ್ ಕ್ರಿಕೆಟ್ ಅವರು ರಚಿಸಿರುವ, ಸಂಪಾದಿಸಿರುವ ಮುಖ್ಯ ಕೃತಿಗಳು. ಇಂಡಿಯಾ ಆಫ್ಟರ್ ಗಾಂಧಿ ಅವರು ತಮ್ಮ ವೃತ್ತಿಜೀವನದ ಉದ್ದಕ್ಕೂ ನಡೆಸಿದ ವ್ಯಾಪಕ ಅಧ್ಯಯನದ ಫಲ. ಗುಹ ಅವರ ಪುಸ್ತಕಗಳು ಇಪ್ಪತ್ತಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿವೆ. ಅವರು ಪಡೆದಿರುವ ಪ್ರಶಸ್ತಿಗಳಲ್ಲಿ ಯುಕೆ ಕ್ರಿಕೆಟ್ ಸೊಸೈಟಿಯ ಸಾಹಿತ್ಯ ಪ್ರಶಸ್ತಿ, ಪರಿಸರ ಚರಿತ್ರೆಗಾಗಿ ಅಮೆರಿಕನ್ ಸೊಸೈಟಿ ನೀಡುವ ಲಿಯೊಪೋಲ್ಡ್-ಹೈಡಿ ಪ್ರಶಸ್ತಿ ಮುಖ್ಯವಾದುವು.

ಬಾಪೂ ನಂತರದ ಭಾರತ

ಬಾಪೂ ನಂತರದ ಭಾರತ

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದ ಅಪೂರ್ವ ಇತಿಹಾಸ

ಸಂಪುಟ: ಒಂದು

ರಾಮಚಂದ್ರ ಗುಹ

ಕನ್ನಡಕ್ಕೆ:

ಜಿ. ಎಸ್. ರಂಗನಾಥ ರಾವ್

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ
3ನೇ ಬ್ಲಾಕ್ ಜಯನಗರ, ಬೆಂಗಳೂರು–560 011

Bapu Nantarada Bharata Vol. I (Kannada) : translated by G.N. Ranganatha Rao
published by Vasantha Prakashana,
No. 360, 10'B' Main Road, Jayanagar 3rd Block, Bangalore-560 011, India.
Telephone: 080-22443996 E-mail : vasantha_prakashana@rediffmail.com

First edition : 2010
Second Print : 2011

First published in English as India after Gandhi by Ramachandra Guha, 2007
This Translation first published by Vasantha Prakashana, Bangalore, India. 2010

ISBN : 978-93-81001-01-1

ಸಾಹಿತ್ಯ ಸಲಹೆಗಾರರು : ಎಸ್. ದಿವಾಕರ್

ಪ್ರಥಮ ಮುದ್ರಣ : 2010
ದ್ವಿತೀಯ ಮುದ್ರಣ : 2011
ಉಪಯೋಗಿಸಿದ ಕಾಗದ : 18.6 ಕೆ.ಜಿ. ಮ್ಯಾಪ್‌ಲಿಥೊ
ಪುಟಗಳು : viii+526 ಚಿತ್ರಪುಟಗಳು : 16 ಬೆಲೆ : ರೂ. 290

ಅಕ್ಷರ ಜೋಡಣೆ : ಶ್ರೀಧರ್
ಮುದ್ರಣ : ವಿಶ್ವಾಸ್ ಪ್ರಿಂಟರ್ಸ್, ಬೆಂಗಳೂರು

ಅನುವಾದಕನ ಬಿನ್ನಹ

ಇಂಡಿಯಾ ಆಫ್ಟರ್ ಗಾಂಧಿ–ರಾಮಚಂದ್ರ ಗುಹ ಅವರ ಈ ಬೃಹದ್ಗ್ರಂಥದ ಅನುವಾದ ಒಂದು ಅನುಭವ, ಗತಕಾಲದ ಇಂಡಿಯಾದಲ್ಲಿ ಬದುಕಿ, ವರ್ತಮಾನದಲ್ಲಿ ತಲೆ ಎತ್ತಿದ ಅನುಭವ. ಅವಾಕ್ಕಾಗಿಸುವ ನೋವು, ತಲ್ಲಣ, ತವಕ, ವಿಷಾದ, ವಿಚಾರ, ವಿವೇಕ, ಬೊಗಸೆ ಚೆಲ್ಲಿ ಹರಿಯುವ ಮಾಹಿತಿ, ಧೀಮಂತ ನಾಯಕರಿಂದ ಹಿಡಿದು ಸಾಮಾನ್ಯರವರೆಗಿನ ಜನಮಾನಸದ ಏರು-ಇಳಿಜಾರು, ಕೊನೆಗೊಂದು ಭರವಸೆ – ಹೀಗೆ ಹಲವಾರು ಅಂಬು-ಕೂರಂಬು-ಕೆಣಕುಗಳಿಂದ ನಮ್ಮ ಸಂವೇದನೆಗಳನ್ನು ಘಾತಿಸುವ ಒಂದು ಕೊಡವಿಕೊಳ್ಳಲಾಗದ ಅನುಭವ. ಇಂಥದೊಂದು ಅನುಭವ ಕೊಟ್ಟ ರಾಮಚಂದ್ರ ಗುಹ ಅವರಿಗೆ ನಾನು ಕೃತಜ್ಞ.

ನನ್ನ ಈ ಅನುವಾದದಲ್ಲಿ ಆಸಕ್ತಿವಹಿಸಿ ಅದಕ್ಕೆ ಒತ್ತಾಸೆಯಾಗಿ ನಿಂತ ಸಹೃದಯಿ ಸಾಹಿತ್ಯೋಪಾಸಕ ಎಂ.ವಿ. ವೆಂಕಟೇಶಮೂರ್ತಿ, ಶೂದ್ರ ಶ್ರೀನಿವಾಸ್, ಕವಿಮಿತ್ರರಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್, ಎಚ್.ಎಸ್. ವೆಂಕಟೇಶಮೂರ್ತಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಮಾವಿನಕೆರೆ ರಂಗನಾಥನ್, ಎಸ್. ದಿವಾಕರ್, ಖಾದ್ರಿ ಅಚ್ಯುತನ್, ಅನುವಾದ ಸಾಗಿದಂತೆ ಒಂದೊಂದು ಅಧ್ಯಾಯವನ್ನೂ ಓದಿ ನನ್ನ ಕೆಲಸ ಹಗುರಗೊಳಿಸಿದ ಶ್ರೀಮತಿ ಸರಳಾ, 'ಎಲ್ಲಿಗೆ ಬಂತು' ಎಂದು ಆಗಾಗ್ಗೆ ತಲೆಹಾಕುತ್ತಿದ್ದ ತೀರ್ಥ, ರಶ್ಮಿ, 'ಹೋಂವರ್ಕ್ ಮಾಡಿದ್ದಾಯ್ತ' ಎಂದು ಬೆಳಿಗ್ಗೆ ನನ್ನನ್ನು ಕುರ್ಚಿಗೆ ಕಟ್ಟಿಹಾಕುವ ಮೊಮ್ಮಗಳು ಚಿ. ಶ್ರೇಯಾ–ಇವರೆಲ್ಲರ ನೆನೆವುದೆನ್ನ ಮನ.

ಈ ಅನುವಾದವನ್ನು ಅಕ್ಕರಾಸ್ಥೆಯಿಂದ ಪ್ರಕಟಿಸುತ್ತಿರುವ ತರುಣ ಮಿತ್ರರಾದ ವಸಂತ ಪ್ರಕಾಶನದ ಕೆ.ಎಸ್. ಮುರಳಿಯವರಿಗೆ ನನ್ನ ಧನ್ಯವಾದಗಳು.

–ಜಿ. ಎನ್. ರಂಗನಾಥ ರಾವ್

ಪ್ರಕಾಶಕರ ಮಾತು

ಅಂತರರಾಷ್ಟ್ರೀಯ ಖ್ಯಾತಿಯ ಇತಿಹಾಸಕಾರ ರಾಮಚಂದ್ರ ಗುಹ ಅವರ ಬೃಹದ್ಗ್ರಂಥ ಇಂಡಿಯಾ ಆಫ್ಟರ್ ಗಾಂಧಿ. ಗುಹ ಅವರು ನಮ್ಮ ಪ್ರಕಾಶನದ ಮೂಲಕ ಈ ಕೃತಿಯ ಕನ್ನಡ ಅನುವಾದವನ್ನು ಪ್ರಕಟಿಸಲು ಅನುಮತಿ ನೀಡಿ ಉಪಕರಿಸಿದರು. ಹೆಸರಾಂತ ಪತ್ರಕರ್ತ, ಲೇಖಕ ಜಿ ಎನ್. ರಂಗನಾಥ ರಾವ್ ಅತ್ಯಲ್ಪ ಕಾಲದಲ್ಲಿ, ಮೂಲ ಕೃತಿಯ ಆಶಯಕ್ಕೆ ಚ್ಯುತಿಬಾರದಂತೆ ಸೊಗಸಾಗಿ ಅನುವಾದಿಸಿಕೊಟ್ಟರು. ಇಷ್ಟು ಪರಿಪೂರ್ಣವಾಗಿ, ಸುಂದರವಾಗಿ ಹೊರಬಂದಿರುವ ಈ ಗ್ರಂಥದ ಹಿಂದೆ ಎಸ್. ದಿವಾಕರ್, ರಘುನಾಥ ಚ.ಹ., ಅಪಾರ ರಘು, ಶ್ರೀಧರ್, ವೆಂಕಟೇಶ್, ಕೆ.ಎನ್. ಹರಿಹರ ಹೀಗೆ ಹಲವು ಮಂದಿ ಸ್ನೇಹಿತರ, ಹಿತೈಷಿಗಳ ಸಲಹೆ, ಸಹಕಾರಗಳಿವೆ. ಇವರೆಲ್ಲರಿಗೂ ನಮ್ಮ ಪ್ರಕಾಶನ ಋಣಿಯಾಗಿದೆ.

ಕೆ ಎಸ್. ಮುರಳಿ
ವಸಂತ ಪ್ರಕಾಶನ

ಪರಿವಿಡಿ

ಭಾರತ ಬಹುಸಂಸ್ಕೃತಿಯ ರಾಷ್ಟ್ರ. ಪ್ರಜಾಪ್ರಭುತ್ವ, ಕಾನೂನು ಆಡಳಿತ, ವ್ಯಕ್ತಿಗತ ಸ್ವಾತಂತ್ರ್ಯ, ಸಾಮಾಜಿಕ ಸಂಬಂಧಗಳು, ಸಾಮುದಾಯಿಕ ಸಂಬಂಧಗಳು ಹಾಗೂ ಸಾಂಸ್ಕೃತಿಕ ವೈವಿಧ್ಯತೆ, ಬಹುರೂಪತೆ ಇವೆಲ್ಲದರಲ್ಲೂ ಬಹುಸಂಸ್ಕೃತಿಯ ಇಂದ್ರಜಾಲವನ್ನು ನಾವು ಕಾಣುತ್ತೇವೆ. ಇದೊಂದು ಮೋಡಿ ಮಾಡುವ ವಿಸ್ಮಯಕಾರಿಶಕ್ತಿ. ಧೀಮಂತರಿಗೆ ಅದೆಂಥ ತಾವು ಇದು! ಭಾರತವನ್ನು ಮತ್ತೆ ಮತ್ತೆ ಸಾಕ್ಷಾತ್ಕರಿಸಿಕೊಳ್ಳಲು ಹತ್ತು ಜನ್ಮ ಎತ್ತಲೂ ನಾನು ಸಿದ್ಧ.

ರಾಬರ್ಟ್ ಬ್ಲಾಕ್‌ವಿಲ್

ಅಮೆರಿಕ ರಾಯಭಾರಿ (2003)

ಸಮಕಾಲೀನ ಭಾರತದ ಸತ್ಯಾನ್ವೇಷಣೆ ಮಾಡಲಿಚ್ಛಿಸುವ ವ್ಯಕ್ತಿಯ ಹಾದಿಯಲ್ಲಿ ಎದುರಾಗುವ ಹಳ್ಳಗುಂಡಿಗಳ, ಕಲ್ಲು ಮುಳ್ಳುಗಳ ಬಗ್ಗೆ ನನಗಿಂತ ಹೆಚ್ಚು ತಿಳಿದಿರುವ ಪ್ರಜ್ಞಾವಂತರು ಬೇರೊಬ್ಬರಿರಲಿಕ್ಕೆ ಸಾಧ್ಯವಿಲ್ಲ.

ನೀರದ್ ಚೌಧುರಿ

ದಿ ಆಟೋಬಯಾಗ್ರಫಿ ಆಫ್
ಆ್ಯನ್ ಅನೋನ್ ಇಂಡಿಯನ್ (1950)

ಪ್ರಸ್ತಾವನೆ

ಅಸಹಜ ರಾಷ್ಟ್ರ

I

ಭಾರತ ಬಹುಬಗೆಯ ಜನಬಾಹುಳ್ಯ ಉಳ್ಳ ರಾಷ್ಟ್ರ. ಎಷ್ಟೊಂದು ಜನ, ಎಷ್ಟೊಂದು ವಿಧವಾದ ಜನ. ಎಷ್ಟೊಂದು ವೈವಿಧ್ಯ. ಎಂದೇ ಭಾರತೀಯರು ವಿಭಿನ್ನ ಜನ, ಪ್ರತ್ಯೇಕ-ಪ್ರತ್ಯೇಕವಾದ ಜನ. ಇದು ಲಾಗಾಯ್ತಿನಿಂದಲೂ ಹೀಗೇ ಇದ್ದಿರುವಂತೆ ತೋರುತ್ತದೆ. 1827ರ ವಸಂತ ಋತುವಿನಲ್ಲಿ ಕವಿ ಮಿರ್ಜಾ ಅಸಾದುಲ್ಲಾ ಖಾನ್ ಘಾಲೀಬ್ ದೆಹಲಿಯಿಂದ ಕಲ್ಕತ್ತೆಗೆ ಪಯಣ ಬೆಳಸಿದರು. ಆರು ತಿಂಗಳ ನಂತರ ಅವರು ಹಿಂದೂಗಳ ಪವಿತ್ರ ಪುಣ್ಯಕ್ಷೇತ್ರವಾದ ಕಾಶಿಯನ್ನು ತಲುಪಿದರು. ಅಲ್ಲಿ ಅವರು, "ಚಿರಾಗ್ ಕಿ ಡೈರ್"–ದೇಗುಲದ ದೀಪ–ಎನ್ನುವ ಕವನ ರಚಿಸಿದರು. ಅದರ ಕೆಲವು ಸಾಲುಗಳು ಹೀಗಿವೆ:

ಒಂದು ರಾತ್ರಿ ನಾನು ಆದಿಮ ಅಮಲ ಕಾಲಜ್ಞಾನಿಗೆ ಅರುಹಿದೆ
(ಪರಿಭ್ರಮಿಸುವ ಕಾಲದ ರಹಸ್ಯಗಳ ಬಲ್ಲವನವನು)
'ಸ್ವಾಮಿ,
ನೀವು ಸುಜ್ಞಾನಿ ದ್ರಷ್ಟಾರರು,
ಸದ್ಗುಣ ಸಜ್ಜನಿಕೆ ಶೀಲ ಮತ್ತು ಶ್ರದ್ಧೆ
ಸತ್ಯ ನಿಷ್ಠೆ ನಂಬಿಕೆ ಮತ್ತು ಪ್ರೀತಿ ಪ್ರೇಮಗಳೆಲ್ಲ
ವ್ಯಥಿತ ವಸುಂಧರೆಯಿಂದ ನಿರ್ಗಮಿಸಿರುವುದ ಬಲ್ಲವರು.
ತಂದೆ ಮಕ್ಕಳೆ ಕೊರಳು ಕೊಯ್ಯುವ ಹಗೆಗಳು
ಸೋದರರಲ್ಲೆ ಹೊಡೆದಾಟ-ಬಡಿದಾಟ
ಸ್ನೇಹ-ಸಾಂಗತ್ಯ-ಸಾಮರಸ್ಯಗಳೆಲ್ಲ ಶಿಥಿಲ, ಹಾಳುಪಾಳು-
ಕೇಡುಗಾಲದ ಅಪಶಕುನಗಳು
ಆದಾಗ್ಯೂ ಪ್ರಳಯ ಬಂದಿಲ್ಲವೇಕೆ?
ಕೊನೆಯ ಕಹಳೆ ಮೊಳಗಿಲ್ಲವೇಕೆ?
ಸರ್ವನಾಶದ ಸೂತ್ರಧಾರಿ ಯಾರು?

ಘಾಲಿಬರ ಈ ಕವನ ಸೃಷ್ಟಿಯಾದದ್ದು ಮುಘಲ್ ಸಾಮ್ರಾಜ್ಯದ ಅವನತಿಯ ಹಿನ್ನೆಲೆಯಲ್ಲಿ. ಅವರ ತವರು ನೆಲವಾದ ಸಿಂಧೂ ಗಂಗಾ ಬಯಲು ಪ್ರದೇಶ ಒಂದು ಕಾಲಕ್ಕೆ ಏಕ ಚಕ್ರಾಧಿಪತ್ಯವಾಗಿತ್ತು. ಅದೀಗ ಇಬ್ಬರು ಮಹತ್ವಾಕಾಂಕ್ಷಿ ನಾಯಕರ ರಾಜತ್ವ ಮತ್ತು ಸೇನೆಗಳ ಮಧ್ಯೆ ಹರಿದು ಹಂಚಿಹೋಗಿದೆ. ಸೋದರ, ಸೋದರನ ವಿರುದ್ಧ ಕತ್ತಿ ಹಿರಿದು ಯುದ್ಧ ಸಾರಿದ್ದಾನೆ, ಸೆಣಸುತ್ತಿದ್ದಾನೆ. ಪ್ರೀತಿ-ವಿಶ್ವಾಸ, ಒಗ್ಗಟ್ಟು ಐಕಮತ್ಯಗಳೆಲ್ಲ ಶಿಥಿಲವಾಗಿವೆ. ಘಾಲಿಬ್ ಈ ಕವನ ರಚಿಸುತ್ತಿದ್ದ ಕಾಲದಲ್ಲೇ ಹೊಸ ಶಕ್ತಿಯೊಂದು (ವಿದೇಶಿ) ನಾಡಿನ ಉದ್ದಗಲ ಬ್ರಿಟಿಷರ ರೂಪದಲ್ಲಿ ತನ್ನ ಪ್ರಭಾವ ಸ್ಥಾಪಿಸುತ್ತಿತ್ತು. ಬ್ರಿಟಿಷರು ಉಪಖಂಡದ ಬಹುಭಾಗದ ಮೇಲೆ ಅಚಲವಾಗಿ ತಮ್ಮ ನಿಯಂತ್ರಣವನ್ನು ಸಾಧಿಸುತ್ತಿದ್ದರು; ಬಹುಭಾಗದ ಹತೋಟಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದರು. ಆಗ, ಅಂದರೆ 1857ರಲ್ಲಿ ದೇಶೀಯ ಪ್ರಜೆಗಳಲ್ಲಿ ಬಹುತೇಕ ಜನಸಮುದಾಯ ದಂಗೆ ಎದ್ದಿತು. ಇದನ್ನೇ ವಸಾಹತು ಶಾಹಿಗಳು ಸಿಪಾಯಿ ದಂಗೆ ಎಂದು ಕರೆದರು. ನಂತರದ ದಿನಗಳಲ್ಲಿ ಭಾರತೀಯರು ಈ ದಂಗೆಯನ್ನು ಭಾರತ ಸ್ವಾತಂತ್ರ್ಯದ ಪ್ರಥಮ ಸಮರ ಎಂದು ಕರೆದರು.

ರಕ್ತಸಿಕ್ತ ರಾಕ್ಷಸಿ ಹೋರಾಟಗಳ ರಣರಂಗವಾಗಿತ್ತು ಘಾಲಿಬರ ಜನ್ಮಸ್ಥಳವಾದ ದೆಹಲಿ. ಇನ್ನೂ ಹೆಸರಿಗೆ ಮಾತ್ರ ಮುಘಲರ ರಾಜಧಾನಿಯಾಗಿದ್ದ ದೆಹಲಿ ಮುಂದಿನ ದಿನಗಳಲ್ಲಿ ಬ್ರಿಟಿಷ್ ಆಳ್ವಿಕೆಯ ರಾಜಧಾನಿಯಾಯಿತು. ಘಾಲಿಬರ ಅಂತಃಕರಣ, ಸಹಾನುಭೂತಿಗಳೂ ಸೀಳು ಸೀಳಾದದ್ದೇ. ಮುಘಲ್ ಸಂಸ್ಕೃತಿ ಮತ್ತು ಸಂಸ್ಕಾರಗಳ ಕೂಸಾಗಿದ್ದ ಅವರು ಹೊಸ ಆಳರಸರಿಂದ ವೇತನ ಪಡೆಯುತ್ತಿದ್ದರು. ಅವರಿಗೆ ಬ್ರಿಟಿಷ್ ವಸಾಹತುಶಾಹಿಗಳಿಗಿಂತ ಅಥವಾ ಈಗಿನ ಭಾರತೀಯರು ಕಾಣುತ್ತಿರುವುದಕ್ಕಿಂತ ಸ್ಪಷ್ಟವಾದ ತಿಳುವಳಿಕೆ ಇತ್ತು, ಕಾಣ್ಕೆ ಇತ್ತು. ಅದು, ಈ ನೆಲದಲ್ಲಿ ಸರಿಯನ್ನು ತಪ್ಪಿನಿಂದ ಬೇರ್ಪಡಿಸಲಾಗದು, ಋಜುತ್ವವನ್ನು ಅನ್ಯಾಯ-ಅಧರ್ಮಗಳಿಂದ ಬೇರ್ಪಡಿಸಲಾಗದು. ಎರಡೂ ಕಡೆ ಘೋರ ಅತ್ಯಾಚಾರಗಳು, ಪಾಶವೀಯ ಕೃತ್ಯಗಳು ನಡೆಯುತ್ತಿವೆ ಎಂಬುದು ಅವರಿಗೆ ಸ್ಪಷ್ಟವಾಗಿ ಗೋಚರಿಸಿತ್ತು. ತನ್ನ ಮನೆಯಲ್ಲೇ ಒಂದು ದ್ವೀಪವಾಗಿದ್ದ ಅವರು "ಹಿಂದೂಸ್ತಾನ ಬೇಗ ಪ್ರಬಲ ಸುಂಟರಗಾಳಿ ಮತ್ತು ಧಗಧಗಿಸುವ ದಳ್ಳುರಿಯ ಕಣವಾಗುತ್ತಿದೆ" ಎಂಬುದನ್ನು ವಿಷಣ್ಣತೆಯಿಂದ ಬರೆದರು. ಅದೊಂದು ವಿಷಾದ ಗೀತೆ. "ಭಾರತೀಯ ಎಂಥ ಹೊಸ ವ್ಯವಸ್ಥೆಯನ್ನು ಹಿಗ್ಗಿನಿಂದ ನಿರೀಕ್ಷಿಸಬಹುದು?" ಎಂಬುದು ಅವರ ಪ್ರಶ್ನೆಯಾಗಿತ್ತು.

ಈ ಪ್ರಶ್ನೆಗೆ ಉತ್ತರ ಸಿದ್ಧವಾಗಿತ್ತು. 1857ರ ವಿದ್ಯಮಾನಗಳ ನಂತರ ರಾಜಮಕುಟ ಭಾರತೀಯ ವಸಾಹತುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡಿತು. ಹಳೆಯ ಈಸ್ಟ್ ಇಂಡಿಯಾ ಕಂಪನಿಯ ಹಂಗಾಮಿ ಅವ್ಯವಸ್ಥಿತ ಆಡಳಿತದ ಜಾಗಕ್ಕೆ ವ್ಯವಹಾರ ಕುಶಲಿ ಅಧಿಕಾರಶಾಹಿ ಬಂದು ಕುಳಿತುಕೊಂಡಿತು. ಹೊಸ ಜಿಲ್ಲೆಗಳನ್ನು, ಪ್ರಾಂತ್ಯಗಳನ್ನು ರಚಿಸಲಾಯಿತು. ಪೊಲೀಸ್, ಅರಣ್ಯ, ನೀರಾವರಿ ಮೊದಲಾದ ಇಲಾಖೆಗಳ ಬೆಂಬಲದಿಂದ, ಇಂಡಿಯನ್

ಸಿವಿಲ್ ಸರ್ವಿಸ್‌ನ ಗಣ್ಯ ಅಧಿಕಾರ ವರ್ಗದ ಮೇಲುಸ್ತುವಾರಿಯಲ್ಲಿ ಸರ್ಕಾರಿ ಆಡಳಿತ ನಡೆಯಲಾರಂಭಿಸಿತು. ದೇಶದ ಉದ್ದಗಲ ಅಡ್ಡಾದಿಡ್ಡಿಯಾಗಿ ರೈಲು ಸಂಪರ್ಕ ಜಾಲವನ್ನು ನಿರ್ಮಿಸಲಾಯಿತು. ಇದು ಬ್ರಿಟಿಷ್ ಭಾರತದ ಒಗ್ಗಟ್ಟಿಗೆ, ಐಕಮತ್ಯಕ್ಕೆ ಅಗಾಧವಾಗಿ ಸಹಕಾರಿಯಾಯಿತು. ಬ್ರಿಟಿಷರ ಆಡಳಿತ ಸುಭದ್ರವಾಗಿರಲು, ಸ್ಥಿರವಾಗಿರಲು ನೆರವಾಯಿತು. ಇದರಿಂದ, 1857ರ ದಂಗೆ ಮರುಕಳಿಸುವ ಸಾಧ್ಯತೆಗಳನ್ನು ಪೂರ್ವಭಾವಿಯಾಗಿ ಭಗ್ನಗೊಳಿಸುವ ಕಾರ್ಯದಲ್ಲಿ ಸೇನಾಪಡೆಗಳನ್ನು ಕ್ಷಿಪ್ರವಾಗಿ ರವಾನಿಸಲು ಆಡಳಿತಗಾರರಿಗೆ ಸಾಧ್ಯವಾಯಿತು.

II

1888ರ ವೇಳೆಗೆ ಬ್ರಿಟಿಷರು ಭಾರತದಲ್ಲಿ ಭದ್ರವಾಗಿ ಬೇರೂರಿದ್ದರು. ಒಂದು ಸಾವಿರ ವರ್ಷದ ಆಳ್ವಿಕೆಯಲ್ಲದಿದ್ದರೂ, ತಮ್ಮ ಜೀವಿತಾವಧಿ ಮೀರಿ ಇಲ್ಲಿ ಆಳುವುದು ಸಾಧ್ಯ ಎನ್ನುವ ಆಸೆ-ಮುಂಗಾಣ್ಕೆಗಳನ್ನು ಮೂಡಿಸುವಷ್ಟು ಭದ್ರವಾಗಿ, ಘನವಾಗಿ ನೆಲೆ ಸ್ಥಾಪಿಸಿದ್ದರು. ಆ ವರ್ಷ, ಬ್ರಿಟಿಷ್ ಆಳ್ವಿಕೆಗೆ ಕಾರಣೀಭೂತನಾದ ವ್ಯಕ್ತಿಯೊಬ್ಬ ಕೇಂಬ್ರಿಜ್‌ನಲ್ಲಿ ಸರಣಿ ಉಪನ್ಯಾಸ ನೀಡಿದ. ಈ ಉಪನ್ಯಾಸಗಳನ್ನು ನಂತರ 'ಭಾರತ' ಎಂಬ ಸರಳ ಶೀರ್ಷಿಕೆಯಡಿ ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು. ಈ ವ್ಯಕ್ತಿ ಸರ್ ಜಾನ್ ಸ್ಟ್ರಾಚಿ. ಸ್ಟ್ರಾಚಿ ಉಪಖಂಡದಲ್ಲಿ ಹಲವಾರು ವರ್ಷಗಳನ್ನು ಕಳೆದು ಅಖೈರಾಗಿ ಗೌರ್ನರ್ ಜನರಲ್ ಮಂಡಳಿಯ ಸದಸ್ಯ ಪದವಿಗೇರಿದವನು. ನಿವೃತ್ತಿಯ ನಂತರ ಇಂಗ್ಲೆಂಡಿಗೆ ವಾಪಸಾಗಿ, ಈಗ, ಯೂರೋಪಿನ ಇತ್ತೀಚಿನ ರಾಜಕೀಯ ಬೆಳವಣಿಗೆ, ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ತನ್ನ ಭಾರತೀಯ ಅನುಭವವನ್ನು ಬರೆದು ಪ್ರಕಟಿಸಿದ್ದಾನೆ.

ಸ್ಟ್ರಾಚೆಯ ಗ್ರಂಥದ ಬಹುಭಾಗ ಬ್ರಿಟಿಷ್ ಆಳ್ವಿಕೆಯ ಆಡಳಿತ ಚರಿತ್ರೆಯಿಂದ ಎತ್ತಿಕೊಂಡಿರುವುದೇ ಆಗಿದೆ. ಬ್ರಿಟಿಷ್ ಸೇನೆ ಮತ್ತು ಸಿವಿಲ್ ಸೇವೆಗಳು, ತನ್ನ ಭೂಪ್ರದೇಶ, ತೆರಿಗೆ ನೀತಿಗಳು ಹಾಗೂ ದೇಶೀಯ ಸಂಸ್ಥಾನಗಳ ವಿಚಿತ್ರ-ವಿಲಕ್ಷಣ ಸ್ಥಿತಿ-ಸ್ಥಾನಮಾನಗಳನ್ನು ಸ್ಟ್ರಾಚಿ ನಿರೂಪಿಸಿದ್ದಾನೆ. ಕೇಂಬ್ರಿಜ್‌ನಿಂದ ಹಿಂದಿರುಗಿದ ನಂತರ ಭಾರತದಲ್ಲಿ ಉದ್ಯೋಗ ಮಾಡಲಿಚ್ಛಿಸುವವರಿಗೆ ಇದೊಂದು ಬಾಲಬೋಧೆಯಾಗಿತ್ತು. ಆದರೆ ಇನ್ನೂ ವ್ಯಾಪಕವಾದ ಸೈದ್ಧಾಂತಿಕ ತರ್ಕವೊಂದಿತ್ತು. ಅದು ಪರಿಣಾಮತಃ, "ಭಾರತ ಎನ್ನುವುದೊಂದು ಅನುಕೂಲ-ಸಿಂಧು ಹಣೆಪಟ್ಟಿ ಮಾತ್ರ, ಭಾರತ ಎನ್ನುವುದೊಂದು ವಿವಿಧ ದೇಶಗಳ ಬಾಹುಳ್ಯವುಳ್ಳ ಬೃಹತ್ ಪ್ರದೇಶಕ್ಕೆ ನಾವು ಕೊಡುವ ಒಂದು ಹೆಸರಷ್ಟೇ" ಎನ್ನುವುದು ಈ ತರ್ಕದ ಸಾರಾಂಶ.

ಸ್ಟ್ರಾಚಿಯ ಅಭಿಪ್ರಾಯದ ಪ್ರಕಾರ, ಯೂರೋಪ್ ದೇಶಗಳ ನಡುವಣ ವ್ಯತ್ಯಾಸಗಳು, ಭಿನ್ನತೆಗಳು ಭಾರತದ 'ಸಂಸ್ಥಾನಗಳ' ನಡುವಣ ವ್ಯತ್ಯಾಸಗಳು, ಭಿನ್ನತೆಗಳಿಗಿಂತ ಅತ್ಯಲ್ಪವಾದವು. 'ಬಂಗಾಳ ಪಂಜಾಬಿನಂತಿದೆ ಎನ್ನುವುದಕ್ಕಿಂತ ಸ್ಕಾಟ್ಲೆಂಡ್ ಬಹುತೇಕ ಸ್ಪೈನಿನಂತಿದೆ'. ಭಾರತದಲ್ಲಿ ಇರುವ ಜಾತಿ-ಕುಲ, ಭಾಷೆ ಮತ್ತು ಧರ್ಮಗಳಲ್ಲಿರುವಷ್ಟು ಬಹುರೂಪತೆಗಳು,

ವಿವಿಧತೆಗಳು ಅತ್ಯಧಿಕವಾದವು. ಯೂರೋಪಿನಂತೆ ಇಲ್ಲಿನ ಸಂಸ್ಥಾನಗಳು ರಾಷ್ಟ್ರಗಳಲ್ಲ; ಅವಕ್ಕೆ ವಿಶಿಷ್ಟವಾದ-ವಿಭಿನ್ನವಾದ ರಾಜಕೀಯ ಅಥವಾ ಸಾಮಾಜಿಕ ಅನನ್ಯತೆ ಇಲ್ಲ. ಇದು ಭಾರತದ ಬಗ್ಗೆ ಮೊಟ್ಟಮೊದಲನೆಯದಾಗಿ ಹಾಗೂ ಅತ್ಯಗತ್ಯವಾಗಿ ಮನಗಾಣಬೇಕಾದ ಅಂಶವೆಂದು ಸ್ಟ್ರಾಚಿ ತನ್ನ ಕೇಂಬ್ರಿಜ್ ಸಭಿಕರಿಗೆ ತಿಳಿಯ ಹೇಳಿದ್ದ. "ಭಾರತದ ಬಗ್ಗೆ ತಿಳಿದುಕೊಳ್ಳಲೇ ಬೇಕಾದ ಪ್ರಾಥಮಿಕ ಅಂಶವೆಂದರೆ, ಭಾರತ ಇಲ್ಲ, ಭಾರತ ಎಂಬುದೊಂದು ಯಾವತ್ತಿಗೂ ಇರಲಿಲ್ಲ ಅಥವಾ ಐರೋಪ್ಯ ಪರಿಕಲ್ಪನೆಗಳ ಪ್ರಕಾರ, ಭೌತಿಕ-ರಾಜಕೀಯ-ಸಾಮಾಜಿಕ ಅಥವಾ ಧಾರ್ಮಿಕ ಏಕತೆಯನ್ನು ಹೊಂದಿರುವ ಒಂದೇ ಒಂದು ಸಂಸ್ಥಾನವೂ ಭಾರತದಲ್ಲಿಲ್ಲ."

ಭಾರತೀಯ ರಾಷ್ಟ್ರ ಅಥವಾ ಸಂಸ್ಥಾನ ಎನ್ನುವುದು ಹಿಂದೆ ಇರಲಿಲ್ಲ, ಮುಂದೆ ಇರುವುದೂ ಇಲ್ಲ. "ನಿರ್ದಿಷ್ಟವಾದ ಭಾರತೀಯ ಸಂಸ್ಥಾನಗಳಲ್ಲಿ ರಾಷ್ಟ್ರೀಯ ವಿಚಾರ, ಸಹಾನುಭೂತಿ-ಅನುಕಂಪಗಳು ಮೂಡಬಹುದು ಎನ್ನುವ ಕಲ್ಪನೆ-ಊಹೆಗಳು ಸಾಧ್ಯವಾಗಬಹುದು. ಆದರೆ ಇದನ್ನು ಸಾರ್ವತ್ರಿಕ ಭಾರತದ ಬಗ್ಗೆ ಹೇಳಲಾಗದು. ಪಂಜಾಬ್, ಬಂಗಾಳ, ವಾಯುವ್ಯ ಪ್ರಾಂತ್ಯಗಳು ಮತ್ತು ಮದರಾಸಿನ ಜನರು, ತಾವೆಲ್ಲ ಭಾರತೀಯರು, ಭಾರತವೆಂಬ ಒಂದೇ ರಾಷ್ಟ್ರದ ಪ್ರಜೆಗಳೆಂದು ಎಂದಿಗೂ ಭಾವಿಸುವುದಿಲ್ಲ, ಇದು ಅಸಾಧ್ಯವಾದದ್ದು" ಎನ್ನುವುದೇ ಸ್ಟ್ರಾಚಿಯ ಚಿಂತನೆಯಾಗಿತ್ತು. ನೀವು ಯೂರೋಪಿನ ವಿವಿಧ ರಾಷ್ಟ್ರಗಳ ಸ್ಥಾನದಲ್ಲಿ ಒಂದು ರಾಷ್ಟ್ರ ಸಾಧ್ಯ ಎಂಬುದನ್ನು ಸಕಾರಣವಾಗಿ ಮುಂಗಾಣಬಹುದು. ಭವಿಷ್ಯದಲ್ಲಿ ಯೂರೋಪಿನ ಎಲ್ಲ ರಾಷ್ಟ್ರಗಳೂ ಸೇರಿ ಒಂದೇ ರಾಷ್ಟ್ರ ಸಾಧ್ಯವಾಗಬಹುದು ಎಂದು ಸಕಾರಣವಾಗಿಯೇ ಊಹಿಸಲಡ್ಡಿಯಿಲ್ಲ.

ಸ್ಟ್ರಾಚಿಯ ಈ ಟೀಕೆಟಿಪ್ಪಣಿ ಉದ್ದೇಶಪೂರ್ವಕವಾದ ಒಂದು ಐತಿಹಾಸಿಕ ತೀರ್ಪು. ಆ ಕಾಲಕ್ಕೆ, ಹೊಸ ರಾಷ್ಟ್ರಗಳು, ಭಾಷೆ ಅಥವಾ ಗಡಿಗಳ ಹಕ್ಕು ಬಾಧ್ಯತೆಗಳ ಆಧಾರವನ್ನಾಯ ಯೂರೋಪಿನೊಂದಿಗೆ ತಮ್ಮ ಅನನ್ಯತೆಯನ್ನು ಗುರುತಿಸಿಕೊಳ್ಳಲು ತೀವ್ರ ಪ್ರಯತ್ನಗಳನ್ನು ನಡೆಸಿದ್ದವು. ಆದರೆ ಭಾರತದಲ್ಲಿ ಆತ ಕಂಡ ಯಾವ ಸಂಸ್ಥಾನದಲ್ಲೂ ಹೋಲಿಸಬಹುದಾದಂಥ ರಾಷ್ಟ್ರೀಯ ಜಾಗೃತಿ, ರಾಷ್ಟ್ರೀಯ ಭಾವನೆ ಪ್ರಕಟಗೊಂಡಿರಲಿಲ್ಲ. ಇದನ್ನು ರಾಜಕೀಯ ಆಗ್ರಹಪೂರ್ವಕ ಸೂಚನೆ ಎಂದು ನಾವು ವ್ಯಾಖ್ಯಾನಿಸಬಹುದು. ಬ್ರಿಟಿಷ್ ಆಳ್ವಿಕೆಯಲ್ಲಿ ಸೇವೆ ಸಲ್ಲಿಸಲು ಸಿದ್ಧರಾಗಿದ್ದ, ಅಂದಿನ ಸಭೆಯಲ್ಲಿದ್ದ ಅಭ್ಯರ್ಥಿಗಳ ಬುದ್ಧಿ ಮನಸ್ಸುಗಳನ್ನು ಕಠಿಣವಾಗಿಸುವುದು ಈ ಮಾತುಗಳ ಹಿಂದಿನ ಉದ್ದೇಶವಾಗಿತ್ತು. ಏಕೆಂದರೆ, ಭಾರತದೊಳಗೆ ತಲೆ ಎತ್ತಬಹುದಾದ ಪ್ರತಿಯೊಂದು ಹೊಸ 'ರಾಷ್ಟ್ರವೂ' ಯೂರೋಪಿನ ಶಕ್ತಿ-ಪ್ರತಿಷ್ಠೆಗಳನ್ನು ಹ್ರಾಸಗೊಳಿಸುತ್ತದೆ ಎಂಬುದೇ ಇದರ ಅರ್ಥ.

ವಿಪರ್ಯಾಸವೆಂದರೆ, ಸ್ಟ್ರಾಚಿ ಹೀಗೆಲ್ಲ ಮಾತನಾಡುತ್ತಿರುವಂತೆಯೇ, ಇತ್ತ ಭಾರತದಲ್ಲಿ, ಭಾರತೀಯರ ಸಮೂಹವೊಂದು ಸ್ಟ್ರಾಚಿಯ ತೀರ್ಪಿನ ವಿರುದ್ಧ ದನಿ ಎತ್ತಿದ್ದು. ವಿವಾದ

ಎಬ್ಬಿಸಿತು. ಇವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪಿಸಿದರು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ತಮ್ಮ ಆಡಳಿತ ವ್ಯವಹಾರಗಳಲ್ಲಿ ದೇಶೀಯರಿಗೆ ಮಾತನಾಡುವ ಅವಕಾಶವಿರಬೇಕೆಂಬುದನ್ನು ಪ್ರತಿಪಾದಿಸುತ್ತಿದ್ದ ಪ್ರಾತಿನಿಧಿಕ ಸಂಸ್ಥೆ. ಹೆಸರೇ ಹೇಳುವಂತೆ, ಸಂಸ್ಕೃತಿ-ಭಾಷೆ-ಗಡಿ-ಧರ್ಮ ಈ ಎಲ್ಲ ವಿಭಜನೆಗಳಿಂದ ದೂರವಾಗಿರುವ ಭಾರತೀಯರನ್ನು ದೇಶದುದ್ದಗಲ ಒಂದುಗೂಡಿಸುವುದು ಈ ಸಂಸ್ಥೆಯ ಅಪೇಕ್ಷೆಯಾಗಿತ್ತು. ಈ ಮೂಲಕ, ವಸಾಹತುಶಾಹಿಗಳು ಊಹೆಗೂ ಎಟುಕದ್ದು ಎಂದು ಭಾವಿಸಿದ್ದ ಏಕಭಾರತ ರಾಷ್ಟ್ರ ನಿರ್ಮಾಣವೇ ಇದರ ಮುಖ್ಯ ಧ್ಯೇಯವಾಗಿತ್ತು.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಬೆಳವಣಿಗೆ ಬಗ್ಗೆ, ಸಾಕಷ್ಟು ಒಳ್ಳೆಯ ಪುಸ್ತಕಗಳು ಬಂದಿವೆ. ಕಾಂಗ್ರೆಸ್, ಒಂದು ಚರ್ಚಾಗೋಷ್ಠಿಯಿಂದ ಜನಾಂದೋಲನವಾಗಿ, ಒಂದು ಪಕ್ಷವಾಗಿ ಹೇಗೆ ಬೆಳೆಯಿತು, ಗೋಖಲೆ, ತಿಲಕ್, ಎಲ್ಲರಿಗೂ ಮಿಗಿಲಾಗಿ ಗಾಂಧೀಜಿ ಮೊದಲಾದ ನಾಯಕರು ಈ ಬೆಳವಣಿಗೆಯಲ್ಲಿ ವಹಿಸಿದ ಪಾತ್ರ ಕುರಿತು ಬಹಳಷ್ಟು ಪುಸ್ತಕಗಳು ಪ್ರಕಟವಾಗಿವೆ. ಭಾಷಾವಾರು ಸಮುದಾಯಗಳು, ಜಾತಿಗಳು, ಧರ್ಮಗಳು ಮೊದಲಾದ ಗುಂಪುಗಳ ನಡುವಣ ಅಂತರವನ್ನು ಬೆಸೆಯುವ, ಸಾಮರಸ್ಯ ಉಂಟುಮಾಡುವ ಪ್ರಯತ್ನಗಳತ್ತ ಗಮನ ಹರಿಸಲಾಗಿದೆ. ಇಂಥ ಪ್ರಯತ್ನಗಳು, ಕೆಳಜಾತಿಯವರ ದೃಷ್ಟಿಯಿಂದ ಸಂಪೂರ್ಣ ಯಶಸ್ವಿಯಾಗಿರಲಿಲ್ಲ. ಕಾಂಗ್ರೆಸ್ ಪಕ್ಷ ನಿಜವಾಗಿ 'ರಾಷ್ಟ್ರೀಯ ಪಕ್ಷ' ಎನ್ನುವುದು, ವಿಶೇಷವಾಗಿ ಮುಸ್ಲಿಮರಿಗೆ ಸಂಪೂರ್ಣವಾಗಿ ಮನವರಿಕೆಯಾಗಿರಲಿಲ್ಲ. ಹೀಗಾಗಿ, ಅಖೈರಾಗಿ 1947ರಲ್ಲಿ ರಾಜಕೀಯ ಸ್ವಾತಂತ್ರ್ಯ ಲಭಿಸಿದಾಗ ಅದು ಒಂದು ರಾಷ್ಟ್ರಕ್ಕೆ ಪ್ರಾಪ್ತವಾಗಲಿಲ್ಲ, ಅದರ ಭಾರತ-ಪಾಕಿಸ್ತಾನ ಎಂಬೆರಡು ರಾಷ್ಟ್ರಗಳಿಗೆ ಪ್ರಾಪ್ತವಾಯಿತು.

ಇದು ಭಾರತ ರಾಷ್ಟ್ರೀಯತೆಯ ಇತಿಹಾಸದ ತಾಲೀಮು ನಡೆಸಲು ಸ್ಥಳವಲ್ಲ. ಕಾಂಗ್ರೆಸ್ ಹುಟ್ಟಿದಾಗಿನಿಂದ ಭಾರತ ಸ್ವಾತಂತ್ರ್ಯ ಪಡೆಯುವವರೆಗೆ, ಭಾರತದ ವಿಭಜನೆಯಾಗುವವರೆಗೆ, ಭಾರತೀಯ ರಾಷ್ಟ್ರೀಯತೆ ಎನ್ನುವುದು ಒಂದು ಸಹಜ ಸಂಗತಿಯಲ್ಲ ಎಂದು ಭಾವಿಸಿದ್ದ ಸಂದೇಹವಾದಿಗಳಿದ್ದರು ಎಂಬುದನ್ನಷ್ಟೇ ನಾನಿಲ್ಲಿ ಗಮನಿಸಬೇಕಾಗಿದೆ. ಭಾರತ ಸ್ವಯಮಾಡಳಿತ ಹೊಂದಬೇಕು ಎಂದು ಭಾವಿಸಿದ್ದ, ಸ್ವಯಮಾಡಳಿತ ಸ್ವಾಗತಿಸಿದ ಬ್ರಿಟಿಷ್ ರಾಜಕಾರಣಿಗಳು ಮತ್ತು ಚಿಂತಕರಿದ್ದರು. ಅವರು ಸ್ವಯಮಾಡಳಿತ ತರಲು ತಮ್ಮದೇ ರೀತಿಯಲ್ಲಿ ನೆರವಾದರು. (ಭಾರತ ರಾಷ್ಟ್ರೀಯ ಕಾಂಗ್ರೆಸ್-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಪ್ರಮುಖ ಪ್ರೇರಕರಲ್ಲಿ ಒಬ್ಬರು ವಸಾಹತುಶಾಹಿ ಅಧಿಕಾರಿಯಾಗಿದ್ದ ಸ್ಕಾಟ್ ಸಂಜಾತರಾದ ಎ.ಓ. ಹ್ಯೂಮ್ ಅವರು). ಆದಾಗ್ಯೂ, ಫ್ರಾನ್ಸ್, ಜರ್ಮನಿ ಅಥವಾ ಇಟಲಿಗಳಲ್ಲಿರುವಂತೆ ರಾಷ್ಟ್ರೀಯ ಪಾಕ, ರಾಷ್ಟ್ರೀಯ ಮೂಲತತ್ವ ಇಲ್ಲ, ಜನರನ್ನು ಒಂದುಗೂಡಿಸುವ, ಅವರನ್ನು ನಿರ್ದಿಷ್ಟ ಧ್ಯೇಯ-ಉದ್ದೇಶಗಳ ಗುರಿಯಲ್ಲಿ ಒಟ್ಟಾಗಿ ಕರೆದೊಯ್ಯುವಂಥ ಅಂಟಿನ ನಂಟು ಇಲ್ಲ ಎಂದು ವಾದಿಸುವವರು ಅನೇಕ ಮಂದಿ ಇದ್ದರು. ಬ್ರಿಟಿಷರು ಮತ್ತು ಬ್ರಿಟಿಷ್ ಆಳ್ವಿಕೆ ಮಾತ್ರ

ಭಾರತವನ್ನು, ಭಾರತೀಯರನ್ನು ಒಗ್ಗೂಡಿಸಿತ್ತು ಎನ್ನುವ ಪ್ರತಿಪಾದನೆ ಮೊಳಕೆಯೊಡೆದದ್ದು ಈ ದೃಷ್ಟಿಕೋನದಿಂದಲೇ.

ಸ್ವತಂತ್ರಭಾರತ ರಾಷ್ಟ್ರ ಎಂದಿಗೂ ಸಾಧ್ಯವಿಲ್ಲ ಎಂದ ಜಾನ್ ಸ್ಟ್ರಾಚಿಯ ಅಭಿಪ್ರಾಯವನ್ನು ಅನುಮೋದಿಸಿದವರಲ್ಲಿ ಪ್ರಖ್ಯಾತರೂ ಅನಾಮಧೇಯರೂ ಆದ ಸಾಹಿತಿಗಳೂ ಸೇರಿದ್ದಾರೆ. ಪ್ರಖ್ಯಾತರ ವರ್ಗದಲ್ಲಿ ರಡ್‌ಯಾರ್ಡ್ ಕಿಪ್ಲಿಂಗ್ ಪ್ರಮುಖರು. ರಡ್‌ಯಾರ್ಡ್ ಕಿಪ್ಲಿಂಗ್ ಲೇಖಕರಾಗಿ ರೂಪುಗೊಳ್ಳುತ್ತಿದ್ದ ಕಾಲಾವಧಿಯಲ್ಲಿ ಉಪಖಂಡದಲ್ಲಿ ಇದ್ದವರು ಹಾಗೂ ಉಪಖಂಡದ ಬಗ್ಗೆ ಹಲವು ಉತ್ಕೃಷ್ಟ ಲೇಖನಗಳನ್ನು ಬರೆದವರು. 1891ರ ನವೆಂಬರ್‌ನಲ್ಲಿ ಕಿಪ್ಲಿಂಗ್ ಆಸ್ಟ್ರೇಲಿಯಾಗೆ ಭೇಟಿಕೊಟ್ಟಿದ್ದಾಗ, ಪತ್ರಕರ್ತರೊಬ್ಬರು "ಭಾರತದಲ್ಲಿ ಸ್ವಯಮಾಡಳಿತ ಸರ್ಕಾರದ ಸಾಧ್ಯತೆಯ" ಬಗ್ಗೆ ಕೇಳಿದ್ದರು. "ಓಹ್, ಇಲ್ಲ" ಎನ್ನುವುದು ಆಗ ಅವರ ಉತ್ತರವಾಗಿತ್ತು. "ಅವರು ನಾಲ್ಕು ಸಾವಿರ ವರ್ಷಗಳಷ್ಟು ಪುರಾತನರು. ಸ್ವಯಮಾಡಳಿತ ವ್ಯವಹಾರ-ವ್ಯವಸ್ಥೆಗಳನ್ನು ತಿಳಿಯುವ ವಯಸ್ಸು ಮೀರಿದ ಪ್ರಾಚೀನರು. ಅವರಿಗೆ ಬೇಕಾಗಿರುವುದು ಕಾಯಿದೆ ಮತ್ತು ಸುವ್ಯವಸ್ಥೆ. ಅದನ್ನು ಕೊಡಲು ನಾವು ಅಲ್ಲಿದ್ದೇವೆ. ಪ್ರತ್ಯಕ್ಷ ನಾವು ಅದನ್ನು ಅವರಿಗೆ ದಯಪಾಲಿಸುತ್ತಿದ್ದೇವೆ."

ಕಿಪ್ಲಿಂಗ್ ಭಾರತೀಯ ನಾಗರಿಕತೆಯ ಪ್ರಾಚೀನತೆಯನ್ನು ಒತ್ತಿ ಹೇಳಿದರೆ, ಉಳಿದ ವಸಾಹತುವಾದಿಗಳು ಇದೇ ತೀರ್ಮಾನಕ್ಕೆ ಬರಲು ಭಾರತೀಯ ಮನಸ್ಸಿನ ಅಪ್ರಬುದ್ಧತೆ, ಅಪಕ್ವತೆಗಳನ್ನು ಪ್ರಧಾನವಾಗಿಟ್ಟುಕೊಂಡರು. ಭಾರತೀಯರಿಂದ ಸ್ವಯಮಾಡಳಿತ ಅಸಾಧ್ಯವೆಂದು ಹೇಳಲು ಅಪ್ರಬುದ್ಧತೆಯನ್ನೇ ಮಹತ್ವದ ಕಾರಣವಾಗಿಸಿದರು. ಒಬ್ಬ ಕ್ರಿಕೆಟಿಗ ಹಾಗೂ ಟೀ ತೋಟದ ಮಾಲೀಕ ಭಾರತದಲ್ಲಿ ನಲವತ್ತು ವರ್ಷಗಳು ಇದ್ದ ನಂತರದ ಹಠಪೂರ್ತಿ ಹೇಳಿದ ಮಾತುಗಳು ಏನೆಂದರೆ–

> *ದೇಶೀಯರ ಕೈಗೆ ಅವರ ಆಡಳಿತವನ್ನು ಒಪ್ಪಿಸುವಷ್ಟು ಮೂರ್ಖರು ನಾವಾಗಿದ್ದಿದ್ದಲ್ಲಿ ಭಾರತದಲ್ಲಿ ಅವ್ಯವಸ್ಥೆ, ಗೊಂದಲ ತುಂಬಿರುತ್ತಿತ್ತು. ಓ ದೇವರೇ! ಅವ್ಯವಸ್ಥೆ, ಗೊಂದಲಗಳ ಪಚ್ಚಡಿಯಾಗುತ್ತಿತ್ತು, ಎಡವಟ್ಟು, ಅಡ್ಡಾದಿಡ್ಡಿ, ದುರಾಡಳಿತಗಳ ಧಿಡೀರ್ ಫಲಿತಾಂಶ ಕಾಣಬಹುದಿತ್ತು.*
>
> *ಮಹಾನ್ ಜನತೆ ನಮ್ಮ ನಾಯಕತ್ವವಿದ್ದಲ್ಲಿ, ನಮ್ಮ ಮಾರ್ಗದರ್ಶನವಿದ್ದಲ್ಲಿ ಎಲ್ಲಿ ಹೋಗಿ ಏನನ್ನು ಬೇಕಾದರೂ ಸಾಧಿಸಬಲ್ಲರು.*
>
> *ಆಡಳಿತ ಅಥವಾ ರಾಜನೀತಿ, ರಾಜ್ಯಾಡಳಿತ ವಿವೇಕಗಳ ವಿಷಯದಲ್ಲಿ ಅವರಿನ್ನೂ ಹಸುಳೆಗಳು, ಅವರಿಗೇ ಬಿಟ್ಟಲ್ಲಿ ಏನೂ ಅರಿಯದ ಹೈದರು. ಇನ್ನು ಅವರ ನಾಯಕರೆನಿಸಿಕೊಂಡವರು ಅತಿಕೆಟ್ಟ ಜನ.*

ಭಾರತದಲ್ಲಿದ್ದ ಬ್ರಿಟಿಷರ ಪೈಕಿ ಬಹುತೇಕ ಮಂದಿ ಇಂಥದೇ ಅಭಿಪ್ರಾಯ ಹೊಂದಿದ್ದರು. ತಾಯ್ನಾಡಿನಲ್ಲಿದ್ದ ಬ್ರಿಟಿಷರೂ ಅಷ್ಟೇ. ರಾಜಕೀಯವಾಗಿ ಹೇಳುವುದಾದರ

ಸ್ಟಾಚಿ ಪೈಕಿಯ ವ್ಯಕ್ತಿಗಳಲ್ಲಿ ನಿಸ್ಸಂದೇಹವಾಗಿಯೂ ಅತಿಮುಖ್ಯರಾದವರು ವಿನ್ಸ್ಟನ್ ಚರ್ಚಿಲ್. 1940ರಲ್ಲಿ ಭಾರತ ಸ್ವಾತಂತ್ರ್ಯ ಪಡೆಯುವುದು ಖಾತ್ರಿ ಎನ್ನುವ ವಿಚಾರ ಹರಳುಗಟ್ಟುತ್ತಿದ್ದಾಗ, ಬ್ರಿಟಿಷ್ ಸಾಮ್ರಾಜ್ಯದ ಸಮಾಪ್ತಿ ಸಮಾವೇಶದ ಅಧ್ಯಕ್ಷತೆ ವಹಿಸಲೋಸುಗ ತಾವು ದೊರೆಯ ಪ್ರಧಾನಮಂತ್ರಿಯಾಗಿಲ್ಲ ಎಂದು ಗೊಣಗಿದ್ದರು.

ಇದಕ್ಕೆ ಮುನ್ನ ಒಂದು ದಶಕದ ಹಿಂದೆ ಅವರು ಅಳಿಸಿಹೋಗುತ್ತಿರುವ ತಮ್ಮ ರಾಜಕೀಯ ಜೀವನವನ್ನು ಭಾರತೀಯರಿಗೆ ಸ್ವಯಮ್ಮಾಡಳಿತ ಸರ್ಕಾರ ವಿರೋಧಿಸುವ ಮೂಲಕ ಪುನರುಜ್ಜೀವಗೊಳಿಸಿಕೊಳ್ಳಲು ಪ್ರಯತ್ನಿಸಿದ್ದರು. ತಮ್ಮ ರಾಜಕೀಯ ಪುನರ್‌ಜನ್ಮಕ್ಕಾಗಿ ಭಾರತಕ್ಕೆ ಸ್ವಯಮಾಡಳಿತ ವಿರೋಧಿಸುವುದನ್ನೇ ಒಂದು ಕಾರ್ಯಾಂಶವಾಗಿ ಮಾಡಿಕೊಂಡಿದ್ದರು. ಉಪ್ಪಿನ ತೆರಿಗೆ ವಿರುದ್ಧ ಪ್ರತಿಭಟಿಸಲು ಗಾಂಧೀಜಿ 1930ರಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಿದ ನಂತರ, ಬ್ರಿಟಿಷ್ ಸರ್ಕಾರ ಸಾಮಂತ ರಾಷ್ಟ್ರದ ಸ್ಥಾನಮಾನ ಕೊಡುವ ಸಾಧ್ಯತೆ ಬಗ್ಗೆ ಭಾರತೀಯ ರಾಷ್ಟ್ರ ನಾಯಕರೊಂದಿಗೆ ಮಾತುಕತೆ ಆರಂಭಿಸಿತು. ಇದಕ್ಕೆ ಕಾಲಮಿತಿ ಇರಲಿಲ್ಲ. ಇದನ್ನು ಜಾರಿಗೆ ತರಲು ವೇಳಾಪಟ್ಟಿ ಗೊತ್ತು ಪಡಿಸಿರಲಿಲ್ಲ. ಎಲ್ಲ ಅಸ್ಪಷ್ಟವಾಗಿತ್ತು. ಹೀಗಿದ್ದೂ ಚರ್ಚಿಲ್ ಈ ಆಲೋಚನೆಯನ್ನು "ಅತಿರೇಕದ ಕಲ್ಪನೆ ಮಾತ್ರವಲ್ಲದೆ ಪರಿಣಾಮತಃ ಅಪರಾಧ ಸ್ವರೂಪದ ಕಿಡಿಗೇಡಿತನವಾದೀತು" ಎಂದು ಬಣ್ಣಿಸಿದ್ದರು. ಭಾರತೀಯರು ಸ್ವಯಮಾಡಳಿತಕ್ಕೆ ಅಸಮರ್ಥರಾದ್ದರಿಂದ, ಇಂಥ ಯಾವುದೇ ಪ್ರಯತ್ನವನ್ನು ತಡೆಯಲು 'ಬ್ರಿಟಿಷ್ ಸಾಮ್ರಾಜ್ಯದ ಸಮಚಿತ್ತದ, ದೃಢಸಂಕಲ್ಪದ ಸೇನೆಯನ್ನು' ಮೇಲ್ವಿಚಾರಣೆಗೆ ಕಳುಹಿಸುವುದು ಅತ್ಯಗತ್ಯವಾಗಿತ್ತು.

ಭಾರತಕ್ಕೆ ಸ್ವಾತಂತ್ರ್ಯ ನೀಡುವುದನ್ನು ವಿರೋಧಿಸುತ್ತಿದ್ದ ಜನರನ್ನು ಎತ್ತಿಕಟ್ಟುವ ತಂತ್ರವಾಗಿ ಚರ್ಚಿಲ್ಲರು 1930-31ರಲ್ಲಿ ಹಲವಾರು ಭಾಷಣಗಳನ್ನು ಮಾಡಿದರು. 1930ರ ಡಿಸೆಂಬರ್‌ನಲ್ಲಿ ಲಂಡನ್ ನಗರದ ಸಭೆಯೊಂದನ್ನುದ್ದೇಶಿಸಿ ಮಾತನಾಡುತ್ತ, ಬ್ರಿಟಿಷರು ಉಪಖಂಡ ತ್ಯಜಿಸಿದಲ್ಲಿ ಹಿಂದೂಗಳ ಸಶಸ್ತ್ರ ಉತ್ಕರ್ಷಕ್ಕಾಗಿ ಜರ್ಮನಿಯ ಕೃಪೆಯಿಂದ ತುರ್ಕಿಯ ಬಿಳಿ ಸೇನೆಯನ್ನು ನೇಮಿಸಿಕೊಳ್ಳಬಹುದೆಂದು ಚರ್ಚಿಲ್ ಹೇಳಿದ್ದರು. ಇದಾದ ಮೂರು ತಿಂಗಳ ನಂತರ ಆಲ್ಬರ್ಟ್ ಹಾಲ್‌ನಲ್ಲಿ ತಮ್ಮ ಬಂಧುವಾದ ಮಾರ್ಲ್‌ಬರೋ ಡ್ಯೂಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯೊಂದರಲ್ಲಿ "ಭಾರತದಲ್ಲಿ ನಮ್ಮ ಕರ್ತವ್ಯ" ಎಂಬ ವಿಷಯ ಕುರಿತು ಮಾತನಾಡುತ್ತಾ, ಭಾರತವನ್ನು ಬ್ರಾಹ್ಮಣರ ಆಳ್ವಿಕೆಗೊಪ್ಪಿಸುವುದು ಘೋರವಾದ ಹಾಗೂ ಕೇಡಿಗತನದಿಂದ ಕೂಡಿದ ಉಪೇಕ್ಷೆಯ ಕೃತ್ಯವಾಗುತ್ತದೆ ಎಂದು ವಾದಿಸಿದ್ದರು. (ಚರ್ಚಿಲ್ ದೃಷ್ಟಿಯಲ್ಲಿ ಕಾಂಗ್ರೆಸ್ ಬ್ರಾಹ್ಮಣರ ಪ್ರಾಬಲ್ಯದಿಂದ ಕೂಡಿದ ಪಕ್ಷವಾಗಿತ್ತು). ಬ್ರಿಟಿಷರು ಭಾರತವನ್ನು ತ್ಯಜಿಸಿದಲ್ಲಿ, ಅವರು ಸೃಷ್ಟಿಸಿದ ನ್ಯಾಯಾಂಗ, ವೈದ್ಯಕೀಯ, ರೈಲ್ವೆ, ಲೋಕೋಪಯೋಗಿ ಇಲಾಖೆಗಳು ಮೊದಲ್ಗೊಂಡಂತೆ ಸಾರ್ವಜನಿಕ ಸೇವಾ ಶ್ರೇಣಿಯೇ ನಾಶವಾಗುವುದೆಂದು ಅವರು ಭವಿಷ್ಯ ನುಡಿದಿದ್ದರು. ಹಾಗೂ ಭಾರತ ಕ್ಷಿಪ್ರವಾಗಿ ಶತಮಾನಗಳಷ್ಟು ಹಿಂದಕ್ಕೆ ಸರಿದು ಮಧ್ಯಯುಗದ ರಿಕ್ತತೆ ಮತ್ತು ಬರ್ಬರತೆಗಳಿಗೊಳಗಾಗುವುದೆಂಬುದು ಅವರ ಭವಿಷ್ಯವಾಣಿಯಾಗಿತ್ತು.

III

ಚರ್ಚಿಲ್ಲರು ಈ ಎಚ್ಚರಿಕೆಗಳನ್ನು ನೀಡಿದ ಒಂದೂವರೆ ದಶಕಗಳ ನಂತರ ಬ್ರಿಟಿಷರು ಭಾರತವನ್ನು ಬಿಟ್ಟು ಹೋದರು. ತರುವಾಯ ಬರ್ಬರತೆ ಮತ್ತು ರಿಕ್ತತೆಯ ದಿನಗಳು ಬಂದು ಎರಗಿದವು. ಇವಕ್ಕೆ ಯಾರು ಹೊಣೆ ಎಂಬುದು ಮಾತ್ರ ಇನ್ನೂ ವಿವಾದಾತ್ಮಕ ವಿಷಯವೇ ಆಗಿ ಉಳಿದಿದೆ. ಆದರೆ ಒಂದು ತೆರನ ವ್ಯವಸ್ಥೆ ಜಾರಿಗೆ ಬಂತು. ಜನಜೀವನದಲ್ಲಿ ಪೂರ್ವಸ್ಥಿತಿಯನ್ನು ತರಲಾಯಿತು. ಶಾಂತಿ ಪಾಲನೆಗೆ ಜರ್ಮನ್ನರ ಅಗತ್ಯ ಬೀಳಲಿಲ್ಲ. ಹಿಂದೂ ಪ್ರಾಬಲ್ಯವನ್ನು ಉಳಿಸಿಕೊಳ್ಳಲಾಯಿತು; ಸಶಸ್ತ್ರ ಪಡೆಗಳ ಒತ್ತಡ-ಬಲಾತ್ಕಾರಗಳಿಂದಲ್ಲ; ವಯಸ್ಕ ಮತದಾನ ಆಧಾರಿತ ನಿಯಮಿತ ಚುನಾವಣೆ ಮೂಲಕ ಉಳಿಸಿಕೊಳ್ಳಲಾಯಿತು.

ಆದಾಗ್ಯೂ, ಭಾರತ ಸ್ವಾತಂತ್ರ್ಯ ಪಡೆದ ಅರವತ್ತು ವರ್ಷಗಳುದ್ದಕ್ಕೂ ಅದು ಎಷ್ಟು ಕಾಲ ಒಗ್ಗಟ್ಟಿನಿಂದ ಉಳಿದಿರುತ್ತದೆ ಎನ್ನುವ ಊಹಾಪೋಹದ ಮಾತುಗಳು ಕೇಳಿಬರುತ್ತಲೇ ಇವೆ. ಅಥವಾ ಎಷ್ಟು ಕಾಲ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಹಾಗೂ ಪ್ರಜಾಸತ್ತಾತ್ಮಕ ಸಂರಚನೆಗಳನ್ನು ಉಳಿಸಿಕೊಂಡು ಬರುತ್ತದೆ ಎನ್ನುವ ಮಾತುಗಳು ನಿಂತಿಲ್ಲ. ಪ್ರತಿ ಪ್ರಧಾನ ಮಂತ್ರಿಯ ನಿಧನದ ನಂತರ, ಪ್ರಜಾಸತ್ತೆಯ ಸ್ಥಾನವನ್ನು ಮಿಲಿಟರಿ ಆಡಳಿತ ಆಕ್ರಮಿಸಲಿದೆ ಎಂಬ ಭವಿಷ್ಯವಾಣಿ ಮೊಳಗಿದ್ದುಂಟು. ಮಳೆ ಮಾರುತ ವಿಫಲವಾದಾಗಲೆಲ್ಲ ರಾಷ್ಟ್ರವ್ಯಾಪಿ ಕ್ಷಾಮ-ಡಾಮರ ಶತಃಸಿದ್ಧ ಎನ್ನುವ ಮಾತು ಕೇಳಿ ಬಂದದ್ದುಂಟು. ಪ್ರತಿ ಸಾರಿ ಹೊಸದೊಂದು ಪ್ರತ್ಯೇಕತಾವಾದಿ ಚಳವಳಿ ಶುರುವಾದಾಗಲೂ ಅಖಂಡ ಭಾರತ ಕಣ್ಮರೆಯಾಗಿಹೋಯಿತು ಎನ್ನುವ ಬೊಬ್ಬೆಯೂ ಕೇಳಿಸಿದ್ದುಂಟು.

ಇಂಥ ವಿನಾಶಕಾರಿ ಭವಿಷ್ಯ ನುಡಿದವರಲ್ಲಿ ಅನೇಕ ಮಂದಿ ಪಾಶ್ಚಾತ್ಯ ಲೇಖಕರು ಸೇರಿದ್ದಾರೆ. 1947ರ ನಂತರದ ಈ ಅಪಶಕುನದ ನುಡಿಗಳನ್ನು ಆಡುತ್ತಿರುವವರಲ್ಲಿ ಬ್ರಿಟಿಷರೂ ಅಮೆರಿಕನ್ನರೂ ಇರುವ ಸಾಧ್ಯತೆ ಇದೆ. ಭಾರತದ ಅಸ್ತಿತ್ವ ಒಂದು ಒಗಟಾಗಿ ಕಂಡಿರುವುದು ಗಮನಿಸಬೇಕಾದ ಅಂಶ. ಆಕಸ್ಮಾತ್ತಾಗಿ ರಾಜಕೀಯ ವೀಕ್ಷಣೆಯಲ್ಲಿ ತೊಡಗಿರುವವರಿಗೆ ಮಾತ್ರವಲ್ಲದೆ ಪ್ರಪಂಚಜ್ಞಾನವುಳ್ಳ, ಸಾಮಾನ್ಯ ಜ್ಞಾನವುಳ್ಳ ಪತ್ರಕರ್ತರಿಗೂ ಭಾರತದ ಅಸ್ತಿತ್ವ ಒಂದು ಒಗಟಾಗಿ, ಒಂದು ನಿಗೂಢ ಪ್ರಶ್ನೆಯಾಗಿ ಕಂಡಿದೆ. ರಾಜ್ಯಶಾಸ್ತ್ರ ಪಂಡಿತರಿಗಂತೂ ಭಾರತದ ಅಸ್ತಿತ್ವ ಒಂದು ಅಸಂಗತದಂತೆಯೇ ಕಂಡಿದೆ. ಇವರ ಸ್ವಯಂವೇದ್ಯ ಸತ್ಯದ ಪ್ರಕಾರ ಸಾಂಸ್ಕೃತಿಕ ವಿವಿಧತೆ ಮತ್ತು ಬಡತನಗಳಿಂದ ಒಂದು ರಾಷ್ಟ್ರ ರೂಪುಗೊಳ್ಳುವ ಸಾಧ್ಯತೆ ಇಲ್ಲ. ಇನ್ನು ಪ್ರಜಾಪ್ರಭುತ್ವ ಬೆಳೆಯುವ ಸಾಧ್ಯತೆಯಂತೂ ತೀರಾಕಡಿಮೆ. 'ಭಾರತ ಪ್ರಜಾಸತ್ತಾತ್ಮಕ ಸಂರಚನೆಗಳನ್ನು, ಮೌಲ್ಯಗಳನ್ನು ಉಳಿಸಿಕೊಳ್ಳುವುದು ಎಂಬುದು ಮೇಲ್ನೋಟಕ್ಕೇ ಬಹು ಮಟ್ಟಿಗೆ ಅಸಂಭವವಾಗಿ ಕಾಣುತ್ತದೆ' ಎನ್ನುತ್ತಾರೆ ರಾಜ್ಯಶಾಸ್ತ್ರಜ್ಞರಾದ ರಾಬರ್ಟ್ ಡಹಲ್. "ಅಲ್ಲಿ ಅನುಕೂಲಕರ ಪರಿಸ್ಥಿತಿ ಇಲ್ಲ" ಎಂದೂ ಅವರು ಬರೆದಿದ್ದಾರೆ. "ಸಮಾಜ ವಿಜ್ಞಾನದ ಸಾಮಾನ್ಯ ನಿಯಮಗಳು, ತತ್ವಗಳನ್ನೆಲ್ಲ ಉಲ್ಲಂಘಿಸಿದ ಸುಕೀರ್ತಿ ಭಾರತದ್ದಾಗಿದೆ" ಎಂದು ಮತ್ತೊಬ್ಬ ಅಮೆರಿಕನ್ ವಿದ್ವಾಂಸರು

ಬರೆಯುತ್ತಾರೆ. "ಆದಾಗ್ಯೂ, ಭಾರತವಲ್ಲಿ ಪ್ರಜಾಪ್ರಭುತ್ವದ ತಾಳಿಕೆ-ಬಾಳಿಕೆ, ಅದರ ಯಶಸ್ಸಿನ ಸಾಧ್ಯತೆ ಸಂದೇಹಾಸ್ಪದವಾದುದೇ ಎನ್ನುವುದಕ್ಕೆ ಈ ಲೇಖನದ ಆವಿಷ್ಕಾರಗಳ ಆಧಾರವಿದೆ" ಎನ್ನುವ ಒಕ್ಕಣೆಯನ್ನೂ ಇವರು ಬರೆದಿದ್ದಾರೆ.

ಭಾರತದ ವಿಘಟನೆ ಖಚಿತ, ಅಥವಾ ಅದು ಅರಾಜಕತೆಯಲ್ಲಿ ಅವನತಿ ಹೊಂದಬಹುದು ಅಥವಾ ದಬ್ಬಾಳಿಕೆಯ ಆಡಳಿತ ಬರಬಹುದು ಎನ್ನುವಂಥ ಮಸಾಲೆಗಳು ಈ ಗ್ರಂಥದ ಪುಟಗಳಲ್ಲಿ ರಾರಾಜಿಸಿವೆ. ಇಲ್ಲಿ ಭಾರತದ ಬಗ್ಗೆ ಸಹಾನುಭೂತಿಯುಳ್ಳ ಪ್ರವಾಸಿಯಾದ ಪತ್ರಕರ್ತ ಜಾನ್ ಟೇಲರ್‌ನ ಭವಿಷ್ಯವಾಣಿಯನ್ನು ಉದಹರಿಸುತ್ತಿದ್ದೇನೆ. ಟೇಲರ್ ಇದನ್ನು ಬರೆದದ್ದು 1969ರಲ್ಲಿ. ಆ ವೇಳೆಗೆ ಎರಡು ದಶಕಗಳ ಕಾಲ ಭಾರತ ಅವಿಚ್ಛಿನ್ನವಾಗಿ ಬಾಳಿ ಬದುಕಿ ನಾಲ್ಕು ಸಾರ್ವತ್ರಿಕ ಚುನಾವಣೆಗಳನ್ನು ಕಂಡು ಅನುಭವಗತ ಮಾಡಿಕೊಂಡಿತ್ತು. ಆದಾಗ್ಯೂ ಟೇಲರ್‌ಗೆ ಅನ್ನಿಸಿದ್ದು–

> *ಮುಖ್ಯ ಪ್ರಶ್ನೆಯೆಂದರೆ–ಭಾರತ ಅವಿಚ್ಛಿನ್ನವಾಗಿ ಉಳಿಯುವುದೆ ಅಥವಾ ಚೂರು ಚೂರಾಗುವುದೆ? ಎನ್ನುವುದು...*
>
> *524 ದಶಲಕ್ಷ ಜನರು, ಬಳಕೆಯಲ್ಲಿರುವ 15 ಪ್ರಮುಖ ಭಾಷೆಗಳು, ಸಂಘರ್ಷದ ಧರ್ಮಗಳು, ಅನೇಕ ಜನಾಂಗಗಳನ್ನೊಳಗೊಂಡಿರುವ ಈ ಬೃಹತ್ ರಾಷ್ಟ್ರದತ್ತ ಒಮ್ಮೆ ದೃಷ್ಟಿ ಹರಿಸಿದಾಗ, ಅದು ಎಂದಾದರೂ ಅಖಂಡ ರಾಷ್ಟ್ರವಾಗಿ ಎದ್ದುನಿಲ್ಲುವುದು ಸಾಧ್ಯ ಎನ್ನುವುದನ್ನು ನಂಬಲಿಕ್ಕಾಗದು. ಇದು ನಂಬಲಶಕ್ಯವಾಗಿಯೇ ತೋರುತ್ತದೆ.*
>
> *ಮನೋವಿಹಾರದಲ್ಲೂ ಈ ರಾಷ್ಟ್ರದ ಪರ್ಯಟನ ಅಸಾಧ್ಯ, ಅದನ್ನು ಸುತ್ತುವರಿದು ನಿಲ್ಲುವುದು ಅಸಾಧ್ಯ. ಬಿಸಿಲಿನ ತಾಪದಿಂದ ಸುಟ್ಟು ಕರುಕಲಾದ ಸಿಂಧೂ-ಗಂಗಾ ಪ್ರಸ್ಥಭೂಮಿ, ರುದ್ರಾವತಾರದ ಮಳೆ ಮಾರುತಗಳಿಂದ ಕಂಗೆಟ್ಟ ಹಸಿರುವಲಯವಾದ ಪೂರ್ವ ಪ್ರದೇಶ, ಕಲ್ಕತ್ತ, ಮುಂಬಯಿ, ಮದ್ರಾಸ್‌ಗಳಂಥ ಮಹಾನಗರಗಳು...ಎಷ್ಟೋ ವೇಳೆ ಇದು ಏಕರಾಷ್ಟ್ರ, ಅಖಂಡ ರಾಷ್ಟ್ರದಂತೆ ಕಾಣುವುದೇ ಇಲ್ಲ. ಆದಾಗ್ಯೂ ಭಾರತದಲ್ಲಿ ಚೇತರಿಸಿಕೊಳ್ಳುವ ಗುಣವಿದೆ. ಪುನಶ್ಚೇತನದ ಭರವಸೆಯ ಕಿರಣವೊಂದಿದೆ. ಇದೇ ಭಾರತ ಅಖಂಡವಾಗಿ ಉಳಿಯುವುದೆಂಬ ಭರವಸೆಯ ಕಿರಣ. ಇದನ್ನು ಭಾರತೀಯ ಮನೋಧರ್ಮ ಎಂದು ಮಾತ್ರ ವರ್ಣಿಸಬಹುದೇನೋ.*
>
> *ಪಾಶ್ಚಾತ್ಯ ಅದೃಷ್ಟ, ಹಣೆಯಬರಹ ಭಾರತದ ಅಸ್ತಿತ್ವ, ಅವಿನಾಶಗಳನ್ನೇ ಆಧರಿಸಿದೆ ಎಂದು ಹೇಳಿದಲ್ಲಿ ಅದು ಉತ್ಪ್ರೇಕ್ಷೆಯಾಗದೆಂದು ನಾನು ನಂಬಿದ್ದೇನೆ.*

ಭಾರತ ಉಳಿಯಬೇಕು ಎನ್ನುವುದು ಹೃದಯದ ಹಂಬಲ. ಉಳಿಯುವುದಿಲ್ಲ ಎನ್ನುವುದು ಮನಸ್ಸಿನ ಚಿಂತೆ. ಒಂದು ರಾಷ್ಟ್ರವಾಗಿ ತುಂಬ ಜಟಿಲವಾದ, ತುಂಬ ಸಂಕೀರ್ಣವಾದ ಭೂಪ್ರದೇಶ. ಅದು ಅಸಹಜ ಎಂದು ಯಾರಾದರೂ ಹೇಳಿಯಾರು.

ಸತ್ಯವೆಂದರೆ ಭಾರತ ಒಂದು ಸ್ವತಂತ್ರ ರಾಷ್ಟ್ರವಾಗಿ ರೂಪುಗೊಂಡ ನಂತರವೂ ಅನೇಕ ಮಂದಿ ಭಾರತೀಯರು ಅದು ಅಖಂಡ ರಾಷ್ಟ್ರವಾಗಿ ಉಳಿಯುವ ಬಗ್ಗೆ ಇದೇ ರೀತಿ ಯೋಚಿಸಿರುವುದುಂಟು. ಕೆಲವರು ದೇಶಭಕ್ತರು, ಭಾರತ ಅಖಂಡ ರಾಷ್ಟ್ರವಾಗಿ ಉಳಿಯುವ ಬಗ್ಗೆ ಭಾಷಣಗಳಲ್ಲಿ, ಲೇಖನಗಳಲ್ಲಿ ಶಂಕೆ ವ್ಯಕ್ತಪಡಿಸಿರುವುದುಂಟು. ಇನ್ನು ಕೆಲವರು (ಪ್ರತ್ಯೇಕವಾದಿಗಳು ಅಥವಾ ಕ್ರಾಂತಿಕಾರರು) ಅಖಂಡ ರಾಷ್ಟ್ರವಾಗಿ ಉಳಿಯದೆಂಬ ನಿರೀಕ್ಷೆ ಇಟ್ಟುಕೊಂಡು ಮಾತಾಡಿರುವುದುಂಟು. ಇವರೆಲ್ಲ, ತಮ್ಮ ವಿದೇಶಿ ಮಿತ್ರರಂತೆ, ಭಾರತ ಒಂದು ರಾಷ್ಟ್ರವಾಗಿ ಉಳಿಯಲು ಅಶಕ್ಯವೆನ್ನುವಂಥ ವಿಪರೀತವಾದ ವಿಭಿನ್ನತೆ, ಅಸಾಮ್ಯತೆಗಳನ್ನು ಹೊಂದಿದೆ; ಒಂದು ಪ್ರಜಾಪ್ರಭುತ್ವವಾಗಿ ಬಾಳಿ ಬದುಕಲು ಆಗದಷ್ಟು ಅದು ನಿಶ್ಶಕ್ತ, ಸತ್ವಹೀನ ಎನ್ನುವ ನಂಬಿಕೆಯನ್ನು ಬೆಳೆಸಿಕೊಂಡವರು.

IV

ಕಳೆದ ಶತಮಾನದ ಕೊನೆಯ ದಶಕದಲ್ಲಿ ನಾನು ಘಾಲಿಬರ ಹುಟ್ಟೂರಿನ ನಿವಾಸಿಯಾದೆ. ಘಾಲಿಬರ ಹವೇಲಿ ಅಥವಾ ಮನೆ ಇಂದಿಗೂ ಇರುವ ಹಳೆಯ ಕೋಟೆಯ ಪಟ್ಟಣದಲ್ಲಿ ನಾನು ವಾಸ್ತವ್ಯ ಹೂಡಲಿಲ್ಲ. ಬ್ರಿಟಿಷ್ ಸಾಮ್ರಾಜ್ಯ ಕಟ್ಟಿದ ನವದೆಹಲಿಯಲ್ಲಿ ಮನೆಮಾಡಿದ್ದೆ. ಕವಿಯ ಕಾಲದಲ್ಲಿದ್ದಂತೆಯೇ ಒಬ್ಬ ಭಾರತೀಯ ಇನ್ನೊಬ್ಬ ಭಾರತೀಯನೊಂದಿಗೆ ಹೊಡೆದಾಟ-ಬಡಿದಾಟ ನಡೆಸಿದ್ದ. ಕಚೇರಿಗೆ ಹೋಗುವಾಗ ನಾನು ರಾಜಪಥದ (ಹಿಂದಿನ ಕಿಂಗ್ಸ್‌ವೇ) ಮೂಲಕ ಹಾದುಹೋಗಬೇಕಾಗುತ್ತಿತ್ತು. ರಾಜಪಥ ಎನ್ನುವ ಹೆಸರು ಹಾಗೂ ಆ ಪ್ರದೇಶವೇ ಸರ್ಕಾರಿ ಅಧಿಕಾರ ಚಲಾವಣೆಯ ಸಂಕೇತವಾಗಿದೆ. ಸುಮಾರು ಒಂದು ಮೈಲಿಯುದ್ದಕ್ಕೂ ರಾಜಪಥ ಸಮಪಾತಳಿಯಲ್ಲಿ ಸಾಗುತ್ತದೆ. ಇಕ್ಕೆಲಗಳಲ್ಲೂ ವಿಶಾಲವಾದ ಮೈದಾನ. ಇದು ವಾರ್ಷಿಕ ಗಣರಾಜ್ಯೋತ್ಸವದ ಪೆರೇಡ್ ವೀಕ್ಷಿಸಲು ಬರುವ ಜನರಿಗಾಗಿ ಇರುವ ಮೈದಾನ. ಇಲ್ಲಿಂದ ಮುಂದಕ್ಕೆ ರಸ್ತೆ ಒಂದು ಗುಡ್ಡದ ಆರೋಹಣಮಾಡಿ, ನಾರ್ತ್ ಬ್ಲಾಕ್-ಸೌತ್‌ಬ್ಲಾಕ್ ಎಂದು ಸುವಿಖ್ಯಾತವಾಗಿರುವ ಮರಳುಶಿಲೆಯಿಂದ ನಿರ್ಮಾಣಗೊಂಡಿರುವ ವೈಭವಯುಕ್ತ ಭವನಗಳಿರುವ ತಾಣವನ್ನು ತಲುಪುತ್ತದೆ. ಈ ಭವನಗಳಲ್ಲಿ ಸರ್ಕಾರಿ ಕಚೇರಿಗಳಿವೆ. ಈ ರಸ್ತೆ, ಒಂದು ಕಾಲಕ್ಕೆ ಬ್ರಿಟಿಷರ ಭಾರತದ ವೈಸ್‌ರಾಯಿಯ ನಿವಾಸವಾಗಿದ್ದ ಭವ್ಯ ಬಂಗಲೆಗೆ ಬಂದು ನಿಲ್ಲುತ್ತದೆ.

ನಾನು ನವದೆಹಲಿಗೆ ಬಂದು ನೆಲೆಸುವ ವೇಳೆಗೆ ಬ್ರಿಟಿಷರ ನಿರ್ಗಮನವಾಗಿ ಬಹಳ ಕಾಲವಾಗಿತ್ತು. ಭಾರತ ಈಗ ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಗಣರಾಜ್ಯ. ಆದರೆ ಒಟ್ಟಾರೆಯಾಗಿ ಅದು ಸಂತೋಷದಿಂದಿರುವಂತೆ, ನೆಮ್ಮದಿಯಿಂದಿರುವಂತೆ ತೋರುತ್ತಿಲ್ಲ. ಎಲ್ಲೆಲ್ಲೂ ಅಸಮಾಧಾನದ, ವೈಮನಸ್ಯಗಳ ಹೊಗೆ. ವಿಶೇಷವಾಗಿ ರಾಜಪಥದಲ್ಲಿ. ಸಭೆ ಸಮಾರಂಭಗಳ ದಿನಗಳು ಹೊರತಾಗಿ ಬಾಕಿಯಂತೆ ನಿರ್ಜನವಾಗಿರಬೇಕಾದ ಮೈದಾನಗಳು ಈಗ ಗುಡಾರಗಳ ಹಳ್ಳಿಯಾಗಿಬಿಟ್ಟಿದೆ. ಪ್ರತಿಗುಡಾರದ ಮುಂದೆ ವರ್ಣರಂಜಿತ ಜಾಹಿರಾತು

ಭಿತ್ತಿ ಪತ್ರಗಳು. ಒಂದು ಗುಡಾರವಲ್ಲಿ ಉತ್ತರಖಂಡ ಹಿಮಾಲಯದ ರೈತರಿರಬಹುದು; ಪ್ರತ್ಯೇಕ ರಾಜ್ಯದ ಸ್ಥಾನಮಾನಕ್ಕೆ ಆಗ್ರಹಪಡಿಸಲು ಬಂದಿರಬಹುದಾದ ಮಂದಿ ಇವರು. ಎರಡನೆಯ ಗುಡಾರ ಮಹಾರಾಷ್ಟ್ರದ ರೈತರದು. ತಮ್ಮ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಬೇಕೆಂದು ಇವರ ಹೋರಾಟ. ಮೂರನೆಯ ಗುಡಾರ ದಕ್ಷಿಣ ಕೊಂಕಣ ಕರಾವಳಿಯವರದು. ಭಾರತದ ಸಂವಿಧಾನದ ಎಂಟನೇ ಪರಿಶಿಷ್ಟದಲ್ಲಿ ಸೇರಿಸುವ ಮೂಲಕ ತಮ್ಮ ಭಾಷೆಗೆ ಅಧಿಕೃತ ಮನ್ನಣೆ ನೀಡಬೇಕೆಂಬುದು ಇವರ ಬೇಡಿಕೆ.

ಈ ಗುಡಾರಗಳಲ್ಲಿ ಬೀಡು ಬಿಡುವ ಜನ ಬದಲಾಗುತ್ತಿರುತ್ತಾರೆ, ಹಾಗೂ ಅವರ ಬೇಡಿಕೆಗಳು, ಅವರ ಹೋರಾಟದ ಕಾರಣ-ಉದ್ದೇಶಗಳು ಬದಲಾಗುತ್ತಲೇ ಇರುತ್ತವೆ. ಗುಡ್ಡಗಾಡು ಪ್ರದೇಶದ ರೈತರ ಜಾಗಕ್ಕೆ ಕಾರ್ಮಿಕರು ಬರಬಹುದು. ಕಾರ್ಮಿಕರ ವಜಾ ನಿಲ್ಲಿಸಬೇಕೆಂಬುದು ಇವರ ಬೇಡಿಕೆಯಾಗಿರುತ್ತದೆ. ಮಹಾರಾಷ್ಟ್ರ ರೈತರಿದ್ದ ಗುಡಾರದಲ್ಲಿ ಈಗ ಟಿಬೇಟಿಯನ್ ನಿರಾಶ್ರಿತರು ಬಿಡಾರ ಮಾಡಿರಬಹುದು. ತಮಗೆ ಭಾರತೀಯ ಪೌರತ್ವ ಬೇಕೆಂಬ ಬೇಡಿಕೆಯ ಈಡೇರಿಕೆಗೆ ಒತ್ತಾಯಿಸಿ ಇವರ ಹೋರಾಟ. ಕೊಂಕಣಿಯವರಿದ್ದ ಬಿಡಾರದಲ್ಲಿ ಈಗ ಹಿಂದೂ ಸನ್ಯಾಸಿಗಳನ್ನು ನೋಡುತ್ತೀರಿ. ಗೋಹತ್ಯೆ ನಿಷೇಧಕ್ಕಾಗಿ ಇವರ ಹೋರಾಟ.

ತೊಂಬತ್ತರ ದಶಕದ ಪ್ರಾರಂಭದಲ್ಲಿ ಸರ್ಕಾರ ಈ ಗುಡಾರಗಳನ್ನು ತಡಮಾಡದೆ ಕಿತ್ತುಹಾಕುತ್ತಿತ್ತು. ಇಂಥ, ಬಹಿರಂಗ ಅತೃಪ್ತಿ ಪ್ರದರ್ಶನ ವಿದೇಶಿ ಪ್ರವಾಸಿಗರಲ್ಲಿ ಭಾರತದ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿಸಬಹುದೆಂದು ಸರ್ಕಾರದ ಚಿಂತೆಯಾಗಿತ್ತು. ಹೀಗೆ ರಾಜಪಥವನ್ನು ಅತಿಕ್ರಮಣದಿಂದ ಮುಕ್ತಗೊಳಿಸಲಾಯಿತು. ಅಲ್ಲಿನ ಹುಲ್ಲುಗಾವಲಿಗೆ ಮೊದಲಿನ ವೈಭವ ಮರಳಿಬಂತು. ಆದರೆ ಚಳವಳಿಕಾರರು, ಪ್ರತಿಭಟನಕಾರರು ಮತ್ತೆ ಕಾಣಿಸಿಕೊಂಡರು. ಬೇರೊಂದು ತಾಣದಲ್ಲಿ ಗುಂಪುಗುಂಪಾಗಿ ಎದ್ದು ಕಂಡರು. ಈ ಬಾರಿ ಅವರು ಕನ್ನಾಟ್‌ಪ್ಲೇಸ್‌ನ ಜಂತರ್‌ಮಂತರ್ ವೀಕ್ಷಣಾಲಯದ ಪಕ್ಕದಲ್ಲಿ, ವಾಯುವ್ಯ ದಿಕ್ಕಿನಲ್ಲಿ ಒಂದು ಮೈಲಿ ದೂರದಲ್ಲಿರುವ ಜಾಗದಲ್ಲಿ ಜಮಾಯಿಸಿದ್ದರು. ಇಲ್ಲಿ ಅವರ ಸರ್ಕಾರದ ದೃಷ್ಟಿಪರಿಯದಷ್ಟು ದೂರದಲ್ಲಿದ್ದರು. ಆದರೆ ನೇರವಾಗಿ ಜನರ ಕಣ್ಣಿಗೆ ಬೀಳುತ್ತಿದ್ದರು. ಈ ಜಾಗ ಜನರು ಹಾದು ಹೋಗುವ ಭರಪೂರ ವ್ಯಾಪಾರದ ಮಾರ್ಗವಾಗಿತ್ತು. 1998ರಲ್ಲಿ ಪೊಲೀಸರಿಗೆ ಇದೂ ಸರಿ ಕಾಣಲಿಲ್ಲ. ಇದು ಒಳ್ಳೆಯದಲ್ಲ ಎನ್ನಿಸಿ ಚಳವಳಿಕಾರರ ಗುಡಾರಗಳನ್ನು ಕಿತ್ತೆಸೆದು, ಅಲ್ಲಿದ್ದ ಮಂದಿಯನ್ನು ಹೊರಕ್ಕಟ್ಟಿದರು. ಆದರೆ ವೃತ್ತಪತ್ರಿಕೆಯೊಂದು ಇದನ್ನು ಹೀಗೆ ವರದಿ ಮಾಡಿತು: "ಅಧಿಕಾರಿಗಳ ದೃಷ್ಟಿಯಿಂದ ನೋಡಿದಲ್ಲಿ ಪ್ರತಿಭಟನೆಯ ಸ್ಥಳ ಮಾತ್ರ ಬದಲಾಯಿತು. ಆದರೆ ಸಮಸ್ಯೆ ಹಾಗೇ ಉಳಿಯಿತು. ಚಳವಳಿಕಾರರನ್ನು, ಬೈಠಕ್ ಮುಷ್ಕರ ನಡೆಸುತ್ತಿದ್ದವರನ್ನು ಶಂಕರ್ ರೋಡ್ ಕ್ರಾಸಿಂಗ್ ಸಮೀಪದ ಖಾಲಿ ನಿವೇಶನಕ್ಕೆ ಸ್ಥಳಾಂತರಿಸಲಾಯಿತು. ಇಲ್ಲಿ ಅವರು ಹೆಚ್ಚು ಜನರ ಕಣ್ಣಿಗೆ ಬೀಳಲಾರರು."

1990ರ ದಶಕದಲ್ಲಿ ನಾನು ದೆಹಲಿಯಲ್ಲಿ ವಾಸವಿದ್ದಾಗ ಜನವರಿ ಒಂದನೆಯ ತಾರೀಖಿನಿಂದ ಡಿಸೆಂಬರ್ ಮುವತ್ತೊಂದರವರೆಗೆ ಪ್ರತಿದಿನ ರಾಜಪಥದಲ್ಲಿ ಸಂಚರಿಸಿ, ಅಲ್ಲಿ ಗುಡಾರಗಳು ಪ್ರತ್ಯಕ್ಷವಾಗುವುದು, ಕಣ್ಮರೆಯಾಗುವುದು, ಗುಡಾರದೊಳಗಿನ ಚಳವಳಿಯ ಮಂದಿ ಇತ್ಯಾದಿ ಅಲ್ಲಿನ ಆಗುಹೋಗುಗಳನ್ನು ಕಾಲಾನುಕ್ರಮಣಿಕೆಯಲ್ಲಿ ದಾಖಲಿಸಬೇಕೆಂಬುದು ನನ್ನ ಬಯಕೆಯಾಗಿತ್ತು. ಅದು, ಒಂದು ವರ್ಷದಲ್ಲಿ ರಸ್ತೆಯೊಂದು ಹೇಳಿದ ಭಾರತದ ಕಥೆಯಾಗುತ್ತಿತ್ತು. ಆದರೆ ಈಗ ನಿಮ್ಮ ಕೈಯ್ಯಲ್ಲಿರುವ ಗ್ರಂಥ ಬೇರೆ ವಿಧಾನವನ್ನೇ ಅನುಸರಿಸಿದೆ. 1947ರಿಂದ ತಹಲ್‌ವರೆಗೆ ಇಲ್ಲಿನ ಕಥಾನಕ ಆರು ದಶಕಗಳನ್ನೂ ಮೀರಿ ಚಾಚಿಕೊಂಡಿದೆ. ಆದಾಗ್ಯೂ, ರಾಜಪಥದಲ್ಲಿ ಸಂಚರಿಸುತ್ತಾ ಕಳೆದ ಒಂದು ವರ್ಷದ ಅನುಭವವನ್ನು ಆಧರಿಸಿ ಬರೆಯಲುದ್ದೇಶಿಸಿದ ಪುಸ್ತಕದಂತೆಯೇ ಇದೂ ಸಹ ಒಂದು ಕಥಾನಕವೇ. ಎಲ್ಲಕ್ಕೂ ಮಿಗಿಲಾಗಿ ಸಾಮಾಜಿಕ ಸಂಘರ್ಷಗಳನ್ನು, ತಿಕ್ಕಾಟಗಳನ್ನು ಕುರಿತದ್ದು. ಸಾಮಾಜಿಕ ಸಂಘರ್ಷಗಳು ಹೇಗೆ ಹುಟ್ಟುತ್ತವೆ, ಅವು ಯಾವ ರೀತಿ ಪ್ರಕಟಗೊಳ್ಳುತ್ತವೆ, ಹೇಗೆ ಅವುಗಳಿಗೆ ಪರಿಹಾರ ಅಪೇಕ್ಷಿಸಲಾಗುತ್ತದೆ ಎಂಬುದೇ ಈ ಕಥಾನಕ. ಇದೇ ಇಲ್ಲಿನ ಕಥೆ.

ಈ ಸಂಘರ್ಷಗಳಿಗೆ ಹಲವಾರು ಕಾರಣಗಳಿವೆ, ಉದ್ದೇಶಗಳಿವೆ, ಬೇರೆಬೇರೆ ಆಯಾಮಗಳಿವೆ. ಹೀಗಾಗಿ ಸಂಘರ್ಷಗಳು ಹಲವು ಹನ್ನೊಂದು ವಿಭಜಿತ ರೇಖೆಗಳಲ್ಲಿ, ಮಾರ್ಗಗಳಲ್ಲಿ ನಡೆಯುತ್ತವೆ. ಈ ಕ್ಷಣಕ್ಕೆ ಅವುಗಳಲ್ಲಿ ಅತ್ಯಂತ ಪ್ರಮುಖವಾದ ನಾಲ್ಕನ್ನು ಗುರುತಿಸಬಹುದು.

ಮೊದಲನೆಯದು ಜಾತಿ. ಜಾತಿ ಅನೇಕ ಭಾರತೀಯರಿಗೆ ಅತಿ ಪ್ರಧಾನವಾದ ಗುರುತು. ಇದು ಯಾರನ್ನು ಮದುವೆಯಾಗಬೇಕು, ಯಾರ ಜೊತೆ ಸಂಬಂಧ ಬೆಳೆಸಬೇಕು, ಯಾರ ವಿರುದ್ಧ ಹೋರಾಡಬೇಕು ಮೊದಲಾದವುಗಳನ್ನು ನಿಷ್ಕೃಷ್ಟವಾಗಿ ಹೇಳುತ್ತದೆ. 'ಕಾಸ್ಟ್' ಎನ್ನುವುದು ಪೋರ್ಚುಗೀಸ್ ಪದ. ಇದು ಭಾರತೀಯ ಭಾಷೆಯಲ್ಲಿ ಎರಡು ಪದಗಳನ್ನೊಳಗೊಂಡಿದೆ. ಒಂದು: ಜಾತಿ ಹುಟ್ಟಿಗೆ ಸಂಬಂಧಿಸಿದ್ದು, ಯಾವ ಜಾತಿಯಲ್ಲಿ ಹುಟ್ಟಿದ್ದಾರೆ ಎಂಬುದನ್ನು ಹೇಳುತ್ತದೆ. ಮತ್ತೊಂದು: ವರ್ಣ. ವರ್ಣ, ಹಿಂದೂ ಧರ್ಮಗ್ರಂಥಗಳು ಆದೇಶಿಸಿರುವ ಸಾಮಾಜಿಕ ವ್ಯವಸ್ಥೆಯೊಳಗಿನ ಶ್ರೇಣಿ ಅಥವಾ ವರ್ಗವನ್ನು ಸೂಚಿಸುತ್ತದೆ. ನಾಲ್ಕು ವರ್ಣಗಳಿವೆ. ಅಸ್ಪೃಶ್ಯರು, ಪಂಚಮರು ಅಥವಾ ಐದನೆಯ ವರ್ಣದವರು, ಶ್ರೇಣೀಕೃತ ಸಮಾಜದಲ್ಲಿ ಕೊನೆಯವರು. ಈ ವರ್ಣಗಳೊಳಗೆ ಮೂರು ಸಾವಿರಕ್ಕೂ ಹೆಚ್ಚು ಜಾತಿಗಳು ಬರುತ್ತವೆ. ಪ್ರತಿಯೊಂದೂ ಮತ್ತೊಂದಕ್ಕೆ ಸವಾಲಾಗಿ, ಸಡ್ಡು ಹೊಡೆದು ನಿಲ್ಲುತ್ತವೆ. ಒಂದೇ ಪ್ರದೇಶದಲ್ಲಿ ಒಂದು ಜಾತಿಯನ್ನು ಮತ್ತೊಂದು ಜಾತಿಗಿಂತ ಮೇಲಾಗಿ ಪರಿಗಣಿಸಲಾಗುತ್ತದೆ. ಆಗ ಕೆಳಗಿನವರಿಗೆ ಅದು ಸವಾಲಾಗಿ ಪರಿಣಮಿಸುತ್ತದೆ. ಕೆಳಗಿನವರು ಕೆರಳಿ ಸಡ್ಡು ಹೊಡೆಯುತ್ತಾರೆ.

ನಂತರದ್ದು ಭಾಷೆ. ಭಾರತದ ಸಂವಿಧಾನ ಇಪ್ಪತ್ತೆರಡು ಭಾಷೆಗಳನ್ನು 'ಅಧಿಕೃತ' ಭಾಷೆಗಳೆಂದು ಮಾನ್ಯ ಮಾಡಿದೆ. ಇವುಗಳಲ್ಲಿ ಅತಿ ಮುಖ್ಯವಾದದ್ದು ಹಿಂದಿ. ಹಿಂದಿ, ಒಂದಲ್ಲ ಒಂದು ರೂಪದಲ್ಲಿ 400 ದಶಲಕ್ಷಕ್ಕೂ ಹೆಚ್ಚು ಜನ ಆಡುವ ಭಾಷೆ. ತೆಲುಗು, ಕನ್ನಡ, ತಮಿಳು, ಮಲೆಯಾಳಂ, ಮರಾಠಿ, ಗುಜರಾತಿ, ಒರಿಯಾ, ಪಂಜಾಬಿ, ಬಂಗಾಳಿ, ಅಸ್ಸಾಮಿ ಉಳಿದ ಭಾಷೆಗಳು. ಇವೆಲ್ಲಕ್ಕೂ ಅನನ್ಯವಾದ ಲಿಪಿಯಿದ್ದು ಆಯಾ ಪ್ರದೇಶಗಳ ಲಕ್ಷಾಂತರ ಮಂದಿ ಈ ಭಾಷೆಗಳಲ್ಲಿ ಮಾತನಾಡುವರೆಂದು ಹೇಳಲಾಗುತ್ತದೆ. ಸಹಜವಾಗಿಯೇ, ರಾಷ್ಟ್ರೀಯ ಏಕತೆ ಮತ್ತು ಭಾಷಾ ವೈವಿಧ್ಯ ಎಲ್ಲ ಕಾಲಕ್ಕೂ ಹೊಂದಿಕೊಂಡು ಹೋಗುವುದಿಲ್ಲ, ಅನುರೂಪವಾಗಿ ಉಳಿಯುವುದಿಲ್ಲ. ಒಂದು ಭಾಷೆ ಮಾತನಾಡುವ ಭಾರತೀಯರು ಮತ್ತೊಂದು ಭಾಷೆ ಮಾತನಾಡುವ ಭಾರತೀಯರೊಂದಿಗೆ ಹೊಡೆದಾಟ-ಬಡಿದಾಟ ನಡೆಸಿದ್ದಿದೆ.

ಮೂರನೆಯ ಸಂಘರ್ಷ ರೇಖೆಯೆಂದರೆ ಧರ್ಮ. ಒಂದು ಲಕ್ಷ ಕೋಟಿಗೂ ಮಿಗಿಲಾದ ಭಾರತೀಯರಲ್ಲಿ ಹಿಂದೂಗಳು ಬಹುಸಂಖ್ಯಾತರು. ಆದರೆ ಭಾರತ, ವಿಶ್ವದಲ್ಲೇ ಅತಿ ಹೆಚ್ಚು ಮುಸ್ಲಿಮ್ ಜನಸಂಖ್ಯೆಯನ್ನೊಳಗೊಂಡಿರುವ ಎರಡನೆಯ ರಾಷ್ಟ್ರ. ಸುಮಾರು 140 ದಶಲಕ್ಷ ಮುಸ್ಲಿಮರು ಭಾರತದಲ್ಲಿದ್ದಾರೆ. ಅತಿ ಹೆಚ್ಚು ಮುಸ್ಲಿಮರಿರುವುದು ಇಂಡೋನೇಷ್ಯಾದಲ್ಲಿ. ಇದರ ಜೊತೆಗೆ ಕ್ರಿಶ್ಚಿಯನ್ನರು, ಸಿಖ್ಖರು, ಬೌದ್ಧರು. ಮತ್ತು ಜೈನ ಸಮುದಾಯಗಳು ಗಮನಾರ್ಹ ಪ್ರಮಾಣದಲ್ಲಿವೆ. ಭಾಷೆಯಂತೆ, ನಂಬಿಕೆಯೂ ಮನುಷ್ಯನ ಅನನ್ಯತೆಯ ಮುಖ್ಯ ಲಕ್ಷಣ. ಆದ್ದರಿಂದಲೇ ಒಂದು ದೇವರನ್ನು ಪೂಜಿಸುವ ಭಾರತೀಯರು ಬೇರೊಂದು ದೇವರನ್ನು ಪೂಜಿಸುವ ಭಾರತೀಯರೊಂದಿಗೆ ಕೆಲವು ವೇಳೆ ಜಗಳ ಕದನಗಳನ್ನಾಡಿದ್ದರೆ ಅದು ಅಗಣ್ಯ, ಆಶ್ಚರ್ಯ ಪಡಬೇಕಾದ ಸಂಗತಿ ಏನಲ್ಲ.

ನಾಲ್ಕನೆಯ ಪ್ರಮುಖ ಸಂಘರ್ಷ ರೇಖೆಯೆಂದರೆ ವರ್ಗ. ಭಾರತ, ಬೇರೆಲ್ಲೂ ಕಾಣದಂಥ ಬಹುಸಂಸ್ಕೃತಿಯ ರಾಷ್ಟ್ರ. ಅಂತೆಯೇ ಅಷ್ಟೇನೂ ಪ್ರಿಯವಲ್ಲದ ಇನ್ನೊಂದು ಅಂಶವೆಂದರೆ ವ್ಯಾಪಕವಾಗಿರುವ ಸಾಮಾಜಿಕ ಅಸಮಾನತೆಗಳು. ಲಂಡನ್, ನ್ಯೂಯಾರ್ಕ್‌ಗಳಲ್ಲಿ ಭವ್ಯ ಬಂಗಲೆಗಳ ಮಾಲೀಕತ್ವ ಹೊಂದಿರುವ ಅತ್ಯಮೋಘ ಶ್ರೀಮಂತ ಉದ್ಯಮಿಗಳಿದ್ದಾರೆ ಭಾರತದಲ್ಲಿ. ಆದಾಗ್ಯೂ ದೇಶದ ಒಟ್ಟು ಜನಸಂಖ್ಯೆಯಲ್ಲಿ ಸಂಪೂರ್ಣ ಶೇಕಡ 26ರಷ್ಟು ಮಂದಿ, ಅಂದರೆ 300 ದಶಲಕ್ಷ ಜನರು ಅಧಿಕೃತ ಬಡತನ ರೇಖೆಗಿಂತ ಕೆಳಗಿದ್ದಾರೆ. ಗ್ರಾಮೀಣ ಭಾರತದಲ್ಲಿ ಭೂ ಹಿಡುವಳಿಯಲ್ಲಿ ಅಗಾಧವಾದ ಅಸಮಾನತೆ ಇದೆ. ನಗರ ಪ್ರದೇಶಗಳಲ್ಲಿ, ವರಮಾನದಲ್ಲಿ ವ್ಯಾಪಕ ಭಿನ್ನತೆ, ವ್ಯತ್ಯಾಸಗಳಿವೆ. ಈ ಅಸಮತೆಗಳು ವಿರೋಧ-ಪ್ರತಿಭಟನೆ-ಹೋರಾಟಗಳು ಭುಗಿಲೇಳಲು ಆಜ್ಯ ಹುಯ್ದಿರುವುದು ಅನಿರೀಕ್ಷಿತವೇನಲ್ಲ.

ಈ ಸಂಘರ್ಷ ಕೇಂದ್ರಗಳು, ರೇಖೆಗಳು ಏಕಾಂಗಿಯಾಗಿಯೂ ಒಟ್ಟೊಟ್ಟಿಗೆ ಜೊತೆಗೂಡಿಯೂ ಕಾರ್ಯಾಚರಣೆಯಲ್ಲಿ ತೊಡಗುತ್ತವೆ. ಕೆಲವೊಮ್ಮೆ ಒಂದು ನಿರ್ದಿಷ್ಟ ತತ್ವ-ನಂಬಿಕೆಗಳನ್ನು ಪ್ರತಿಪಾದಿಸುವ ಸಮುದಾಯ ಪ್ರತ್ಯೇಕ ಭಾಷೆಯನ್ನು ಆಡುತ್ತಾರೆ. ಅನೇಕ

ವೇಳೆ ಕೆಳಜಾತಿಯವರೂ ಅಧೀನವರ್ಗದವರೂ ಕೆಳವರ್ಜೆಯವರೂ ಆಗಿರುತ್ತಾರೆ. ಮತ್ತೆ ಈ ನಾಲ್ಕು ಸಂಘರ್ಷ ಕೇಂದ್ರ ರೇಖೆಗಳೊಂದಿಗೆ ಐದನೆಯದೊಂದಿದೆ, ಇದು ಎಲ್ಲೆಡೆ ಇದೆ. ಅದೆಂದರೆ: ಜಾತಿ, ಮತ, ಧರ್ಮ, ವರ್ಗ ಎಲ್ಲೆಡೆಯೂ ಲಿಂಗಭೇದ, ಲಿಂಗ ತಾರತಮ್ಯ ಇದೆ. ಇಲ್ಲಿ ಮತ್ತೆ ಭಾರತದಲ್ಲಿ ಭಯಂಕರವಾದ ವೈರುಧ್ಯಗಳು, ಭಿನ್ನತೆಗಳು ಕಂಡುಬರುತ್ತವೆ. ಹದಿನೈದು ವರ್ಷಗಳ ಕಾಲ ಪೂರ್ಣಾವಧಿ ಮಹಿಳೆಯೊಬ್ಬರು ಭಾರತದ ಪ್ರಧಾನ ಮಂತ್ರಿಯಾಗಿದ್ದರು. ಆದಾಗ್ಯೂ ಭಾರತದ ಕೆಲವು ಭಾಗಗಳಲ್ಲಿ ಹೆಣ್ಣು ಶಿಶುವಿನ ಭ್ರೂಣಹತ್ಯೆ ಸರ್ವಸಾಮಾನ್ಯವಾಗಿದೆ. ಭೂಹೀನ ಕೂಲಿ-ಕಾರ್ಮಿಕರಿಗೆ ಅತ್ಯಲ್ಪ ಸಂಬಳ ನೀಡಲಾಗುತ್ತದೆ. ಮಹಿಳೆಯರಿಗೆ ಪುರುಷರಿಗಿಂತ ತುಂಬ ಕಡಿಮೆ ಸಂಬಳ ನೀಡಲಾಗುತ್ತದೆ. ಕೆಳ ಜಾತಿಯವರನ್ನು ಹಲವು ಹನ್ನೊಂದು ಸಾಮಾಜಿಕ ಕಳಂಕಗಳು ಕಾಡುತ್ತಿವೆ. ಸಾಮಾಜಿಕ ಕಳಂಕಗಳಿಗೆ ಹೆಚ್ಚಾಗಿ ಗುರಿಯಾಗುವವರು ಮಹಿಳೆಯರೇ. ಇನ್ನು ಪ್ರತಿಯೊಂದು ಧರ್ಮದಲ್ಲೂ ಧರ್ಮಗುರುಗಳು, ಸಾಧು ಸಂತರು ಸ್ತ್ರೀಯರನ್ನು ಕೀಳಾಗಿಯೇ ಕಾಣುತ್ತಾರೆ. ಇವರು ಇಹಲೋಕ-ಪರಲೋಕಗಳೆರಡರಲ್ಲೂ ಸ್ತ್ರೀಯರಿಗೆ ನೀಡುವ ಸ್ಥಾನಮಾನ ಕೀಳಾದದ್ದೇ. ಲಿಂಗಭೇದ, ಭಿನ್ನತೆ, ಅಸಮತೆ, ತಾರತಮ್ಯಗಳು ತುಂಬ ವ್ಯಾಪಕವಾಗಿ ಹರಡಿಕೊಂಡಿವೆ. ಆದರೆ ಲಿಂಗಭೇದ, ತಾರತಮ್ಯಗಳ ವಿರುದ್ಧ ಬಹಿರಂಗ ಹೋರಾಟ, ಸಂಘಟಿತ ಪ್ರತಿಭಟನೆ ಅನೇಕ ವೇಳೆ ವ್ಯಕ್ತವಾಗುವುದಿಲ್ಲ.

ಸಾಮಾಜಿಕ ಸಂಘರ್ಷದ ಪ್ರಯೋಗಾಲಯವಾಗಿ ಇತಿಹಾಸಕಾರನೊಬ್ಬನಿಗೆ ಇಪ್ಪತ್ತನೆ ಶತಮಾನದ ಭಾರತ, ಹತ್ತೊಂಬತ್ತನೆ ಶತಮಾನದ ಯೂರೋಪಿನಷ್ಟೇ ಆಸಕ್ತಿದಾಯಕವಾದದ್ದು. ಎರಡೂ ಕಡೆ ಸಾಮಾಜಿಕ ಪರಿವರ್ತನೆಯ ರೂಪಾಂತರ ಪ್ರಕ್ರಿಯೆಗಳ ಸಂಯೋಗವಾಗಿ ಸಂಘರ್ಷಣೆಗಳು ಹುಟ್ಟಿಕೊಂಡಿವೆ. ಕೈಗಾರೀಕರಣ ಹಾಗೂ ಆಧುನಿಕ ರಾಷ್ಟ್ರ ನಿರ್ಮಾಣಗಳೇ ಸಮಾಜಿಕ ಪರಿವರ್ತನೆಯ ಪ್ರಕ್ರಿಯೆಗಳಿಗೆ ಕಾರಣ. ಭಾರತದಲ್ಲಿ ಭಿನ್ನಮತ, ಭಿನ್ನಾಭಿಪ್ರಾಯಗಳಿಗೆ ಅವಕಾಶ ಹೆಚ್ಚು. ಏಕೆಂದರೆ ಧರ್ಮ-ಜಾತಿಮತ-ವರ್ಗ ಮತ್ತು ಭಾಷೆಗಳುದ್ದಕ್ಕೂ ಸ್ಪರ್ಧೆ-ಪೈಪೋಟಿಯುಳ್ಳ ವಿವಿಧ ಗುಂಪುಗಳು, ಸಮುದಾಯಗಳಿವೆ. ಉಪಖಂಡದಲ್ಲಿ ಸಂಘರ್ಷ-ತಿಕ್ಕಾಟಗಳು ಹೆಚ್ಚು. ಏಕೆಂದರೆ ಅದು ಹತ್ತೊಂಬತ್ತನೆಯ ಶತಮಾನದ ಯೂರೋಪಿನಂತಲ್ಲ. ಸಮಕಾಲೀನ ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ವಯಸ್ಕರ ಮತದಾನ ಆಧಾರಿತ ಪ್ರಜಾಸತ್ತಾತ್ಮಕ ರಾಷ್ಟ್ರ. ಸ್ವತಂತ್ರ ಪತ್ರಿಕಾ ಮಾಧ್ಯಮ ಹಾಗೂ ಬಹುಮಟ್ಟಿಗೆ ಸ್ವತಂತ್ರವಾದ ನ್ಯಾಯಾಂಗ ವ್ಯವಸ್ಥೆ ಇಲ್ಲಿದೆ. ಕಲೆ, ಸಾಹಿತ್ಯಗಳಲ್ಲಿ, ಮಾನವ ಇತಿಹಾಸ ಹಿಂದೆಂದೂ ಕಾಣದಷ್ಟು ಪ್ರಬಲವಾಗಿ, ವೈವಿಧ್ಯಮಯವಾಗಿ ಉಗ್ರಸ್ವರೂಪದಲ್ಲಿ ಸಾಮಾಜಿಕ ಸಂಘರ್ಷಗಳು ಅಭಿವ್ಯಕ್ತಿ ಪಡೆದಿವೆ. ಅಥವಾ ರಾಜಕೀಯ ವ್ಯವಸ್ಥೆಯಲ್ಲಿ, ಮಾಧ್ಯಮಗಳಲ್ಲಿ ಸಾಮಾಜಿಕ ಸಂಘರ್ಷಗಳನ್ನು ತೀವ್ರವಾಗಿ ಅಭಿವ್ಯಕ್ತಗೊಳಿಸಲಾಗಿದೆ, ಪ್ರಕಟಿಸಲಾಗಿದೆ, ಪ್ರಚುರ ಪಡಿಸಲಾಗಿದೆ.

ಸಂಘರ್ಷಗಳ ಸರಣಿ ಭೂಪಟ ಅಥವಾ ನಕ್ಷೆ ಬಿಡಿಸುವುದು, ಸ್ವತಂತ್ರ ಭಾರತದ ಇತಿಹಾಸವನ್ನು ಸಾರಾಂಶದಲ್ಲಿ, ಸಂಕ್ಷಿಪ್ತರೂಪದಲ್ಲಿ ಹೇಳಬಹುದಾದ ಒಂದು ವಿಧಾನ. ಈ

ಗ್ರಂಥದ ತಿರುಳು, ವಸ್ತು ವಿಷಯ ಅದೇ ಆಗಿದೆ. ಪ್ರತಿ ದಶಕಕ್ಕೂ ಭಾರತದ ಒಂದೊಂದು ಭೂಪಟವನ್ನು ಬಿಡಿಸುವುದು ಸಾಧ್ಯ. ಈ ಭೂಪಟಗಳಲ್ಲಿ ಆ ದಶಕದಲ್ಲಿ ಕಂಡು ಬಂದ ಸಂಘರ್ಷಗಳನ್ನು ವಿವಿಧ ಬಣ್ಣಗಳಲ್ಲಿ ಗುರುತಿಸಬಹುದು. ಸಂಘರ್ಷದ ತೀವ್ರತೆಯನ್ನು ಅವಲಂಬಿಸಿ ಬಣ್ಣಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಒಂದು ನಿರ್ದಿಷ್ಟ ಗುಂಪಿನ ಹಿತಾಸಕ್ತಿಗಳನ್ನು ಪ್ರಜಾಸತ್ತಾತ್ಮಕವಾಗಿ ಬಿಂಬಿಸುವ ಹೋರಾಟಕ್ಕೆ ನೀಲಿ, ಕಾನೂನಿನಲ್ಲಿ ಪ್ರಮುಖ ಬದಲಾವಣೆಗಾಗಿ, ಅಹಿಂಸಾತ್ಮಕವಾಗಿ, ಆದರೆ ಉಗ್ರವಾಗಿ ನಡೆಸುವ ಹೋರಾಟ ಬಿಂಬಿಸಲು ಕೆಂಪು ಹಾಗೂ ಸಶಸ್ತ್ರ ದಂಗೆ ಮೂಲಕ ಭಾರತ ರಾಷ್ಟ್ರವನ್ನು ವಿನಾಶಗೊಳಿಸುವ ಹೋರಾಟಕ್ಕೆ ಕಪ್ಪು–ಹೀಗೆ ವಿವಿಧ ಬಣ್ಣಗಳನ್ನು ಬಳಸಿ ಸಂಘರ್ಷಗಳನ್ನು ಭೂಪಟಗಳಲ್ಲಿ ಬಿಂಬಿಸಬಹುದು.

ಈ ಭೂಪಟಗಳನ್ನು ಕಾಲಾನುಕ್ರಮಣಿಕೆಯಲ್ಲಿ ಅಧ್ಯಯನ ಮಾಡಿದಾಗ ದಶಕಗಳಲ್ಲಿ ಒಂದಕ್ಕಿಂತ ಒಂದರಲ್ಲಿ ಪ್ರಮುಖ ಮಾರ್ಪಾಡುಗಳನ್ನು, ವ್ಯತ್ಯಾಸಗಳನ್ನು ಕಾಣಬಹುದು. ಆಗ ಕೆಂಪು ಭಾಗಗಳು ಕಪ್ಪಾಗಿರುವುದನ್ನೂ ಕಪ್ಪು ಭಾಗಗಳು ಕೆಂಪಾಗಿರುವುದನ್ನೂ ಹಾಗೂ ನೀಲಿ ಮತ್ತು ಕೆಂಪು ಭಾಗಗಳು ಬಿಳಿಯಾಗಿರುವುದನ್ನೂ ಕಾಣುತ್ತೇವೆ. ಬಿಳಿಯಾಗಿರುವ ನೀಲಿ ಮತ್ತು ಕೆಂಪಾಗಿರುವ ಪ್ರದೇಶಗಳಲ್ಲಿ ಬಿಳಿಬಣ್ಣ ಕಾಣಿಸಿಕೊಂಡರೆ ಆ ನಿರ್ದಿಷ್ಟ ದಶಕದಲ್ಲಿ ಆ ಭಾಗಗಳಲ್ಲಿ ಭಾರಿ ಸಂಘರ್ಷಗಳೇನೂ ಸಂಭವಿಸಿಲ್ಲ ಎಂದು ಅರ್ಥ. ಈ ನಕಾಶೆಗಳು ನಿರಂತರವಾಗಿ ಬಣ್ಣಗಳು ಬದಲಾಗುತ್ತಿರುವುದರ ಸ್ಪಷ್ಟ ಚಿತ್ರವನ್ನು ತೋರಿಸುತ್ತವೆ. ಈ ಎಲ್ಲ ಬದಲಾವಣೆಗಳ ಮಧ್ಯೆಯೂ ವಿವೇಚನಾಶೀಲನಾದ ವೀಕ್ಷಕ ಎರಡು ಸಂಗತಿಗಳು ನಿರಂತರವಾಗಿ, ನಿಶ್ಚಲವಾಗಿರುವುದನ್ನು ಗಮನಿಸದೇ ಇರುವುದಿಲ್ಲ. ಒಂದು: ಪುನರಾವರ್ತನೆ, ಪುನುರುಕ್ತಿಗಳ ಮೂಲಕವೂ ನಕಾಶೆಯ ಅಥವಾ ಭೂಪಟದ ಆಕಾರ ಬದಲಾಗುವುದಿಲ್ಲ. ಏಕೆಂದರೆ ಭಾರತದ ಯಾವುದೇ ಭಾಗವೂ ಯಶಸ್ವಿಯಾಗಿ ಭಾರತದಿಂದ ಬೇರೆಯಾಗಿಲ್ಲ, ಭಾರತ ಬಿಟ್ಟು ಹೋಗಿಲ್ಲ. ಎರಡನೆಯದು: ಯಾವುದೇ ಕಾಲಾವಧಿಯಲ್ಲೂ ನೀಲಿ, ಕೆಂಪು ಮತ್ತು ಕಪ್ಪು ಬಣ್ಣಗಳಿಂದ ಆವೃತವಾದ ಪ್ರದೇಶಗಳಲ್ಲಿ, ಬಿಳಿಬಣ್ಣದ ಪ್ರದೇಶಗಳಲ್ಲಿ ಕಂಡುಬರುವಂತೆ, ಅದೇ ಪ್ರಮಾಣದಲ್ಲಿ ಬದಲಾವಣೆಗಳಾಗಿಲ್ಲ, ವ್ಯತ್ಯಾಸಗಳಾಗಿಲ್ಲ. 'ಅಪಾಯಕಾರಿ ದಶಕಗಳು' ಎಂದು ಒಂದು ಕಾಲಕ್ಕೆ ಪ್ರಖ್ಯಾತವಾಗಿದ್ದ ಕಾಲದಲ್ಲೂ ಶೇಕಡ ಐವತ್ತರಷ್ಟು ಭಾರತ ತನ್ನಷ್ಟಕ್ಕೇ ಶಾಂತಿಯುತವಾಗಿತ್ತು.

ಇತ್ತೀಚಿಗೆ ಪತ್ರಿಕೆಗಳ ತುಂಬ ಭಾರತದ ಅರ್ಥವ್ಯವಸ್ಥೆಯ ಯಶಸ್ಸಿನ ವರದಿಗಳನ್ನೇ ಕಾಣುತ್ತಿದ್ದೇವೆ. ಬ್ರಾಡ್‌ಶೀಟ್, ಟ್ಯಾಬ್ಲಾಯ್ಡ್, ಹಳದಿ-ಕೆಂಪು-ಬಿಳಿ, ಭಾರತೀಯ-ಪಾಶ್ಚಾತ್ಯ ಎಲ್ಲ ಪತ್ರಿಕೆಗಳಲ್ಲೂ ಭಾರತದ ಆರ್ಥಿಕ ಯಶೋಗಾಥೆಯೇ. ಇದು ಬಡತನದ ಇತಿಹಾಸ, ನಷ್ಟ-ಹಾನಿ ಮೊದಲಾದ ಪ್ರತಿಕೂಲಗಳನ್ನು ಲೆಕ್ಕಕ್ಕೆ ಹಿಡಿದೇ ಕಂಡುಕೊಂಡ ಯಶಸ್ಸು. ಆದರ ಆಧುನಿಕ ಭಾರತದ ನಿಜವಾದ ಯಶೋಗಾಥೆ ಇರುವುದು ಆರ್ಥಿಕ ರಂಗದಲ್ಲಲ್ಲ, ಅದು ಕಾಣುವುದು ರಾಜಕೀಯ ರಂಗದಲ್ಲಿ. ಭಾರತದ ಸಾಫ್ಟ್‌ವೇರ್ ಉತ್ಕರ್ಷಕ್ಕೆ, ಭರಾಟೆಗೆ

ಸಲಾಮು ಹೊಡೆಯುವುದು ಅಕಾಲಿಕವಾದೀತು. ಇದು ಜನಸಮುದಾಯದ ಅಭ್ಯುದಯಕ್ಕೆ ದಾರಿಮಾಡಿಕೊಡುವುದೇ ಎಂಬುದು ನಮಗಿನ್ನೂ ತಿಳಿಯದು. ಆದರೆ ಸ್ವಾತಂತ್ರ್ಯಾನಂತರದ ಅರವತ್ತು ವರ್ಷಗಳ ಅಗ್ನಿದಿವ್ಯದ ನಂತರವೂ ಭಾರತ ಇನ್ನೂ ಏಕರಾಷ್ಟ್ರವಾಗಿ ಉಳಿದಿದೆ ಹಾಗೂ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಉಳಿದಿದೆ. ಈ ಸಂಗತಿಗಳು ನಮ್ಮ ತೀವ್ರ ಗಮನವನ್ನು ಬೇಡುತ್ತವೆ; ಗಂಭೀರ ಗಮನಕ್ಕೆ ಆಗ್ರಹಪಡಿಸುತ್ತವೆ. ಪ್ರಜಾಪ್ರಭುತ್ವ ಹಾಗೂ ಅಭಿವೃದ್ಧಿಯ ನಡುವಣ ಸಂಬಂಧ ಕುರಿತು ಇತ್ತೀಚೆಗೆ 135 ರಾಷ್ಟ್ರಗಳಲ್ಲಿ ಅಧ್ಯಯನ ನಡೆಸಿ ಅಂಕಿಅಂಶಗಳನ್ನು ವಿಶ್ಲೇಷಿಸಲಾಯಿತು. ಈ ವಿಶ್ಲೇಷಣೆಯ ಪ್ರಕಾರ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಪ್ರತಿಕೂಲವಾದ ಸಂಗತಿಗಳು ಅತಿ ಹೆಚ್ಚಾಗಿರುವುದೆಂದು ತಿಳಿದು ಬಂದಿದೆ. ವರಮಾನ ಮತ್ತು ಸಾಕ್ಷರತೆಗಳಲ್ಲಿನ ಕೆಳಮಟ್ಟ, ಅತಿಯಾದ ಸಾಮಾಜಿಕ ಸಂಘರ್ಷಗಳು ಇವುಗಳಿಂದಾಗಿ ಅಧ್ಯಯನದ ಅವಧಿಯಲ್ಲಿ (1950-90) ಭಾರತದಲ್ಲಿ ಸರ್ವಾಧಿಕಾರ, ನಿರಂಕುಶ ಪ್ರಭುತ್ವ ಬರುವುದೆಂದು ಭವಿಷ್ಯ ನುಡಿಯಲಾಗಿತ್ತು. ಆದರೆ ವಾಸ್ತವವಾಗಿ ಅಧ್ಯಯನದ ಅವಧಿಯಲ್ಲಿ ಕಾರ್ಯತಃ ಪ್ರಜಾಪ್ರಭುತ್ವ ಇತ್ತು. ಭಾರತದ ಗುಣಲಕ್ಷಣ, ಸ್ವರೂಪಗಳು ನಿರೂಪಿಸಲು ಇದ್ದದ್ದು ಒಂದೇ ಒಂದು ಅಭಿವ್ಯಕ್ತಿ-ಅದೆಂದರೆ, ಭಾರತ ವಿಶ್ವಸಮುದಾಯದಲ್ಲಿ ಒಂದು "ಪ್ರಮುಖ ಬಹಿಷ್ಕೃ" ರಾಷ್ಟ್ರ ಅಥವಾ ವಿಭಿನ್ನ ರಾಷ್ಟ್ರ ಎಂಬುದು.

ಇಂಥ ದೋಷಗಳು, ಅಸಂಗತಗಳು, ವಿರೋಧಾಭಾಸಗಳು ಏಕಾಗುತ್ತವೆ? ಹೇಗಾಗುತ್ತವೆ? ಸಂಖ್ಯಾಶಾಸ್ತ್ರೀಯ ಸಮಾಜವಿಜ್ಞಾನದ ಅಧ್ಯಯನ ವಿಧಾನವನ್ನು ಕೈಬಿಡಬೇಕು, ತಿರಸ್ಕರಿಸಬೇಕು ಎಂಬುದೇ ಇದಕ್ಕೆ ಸೂಕ್ತ ಸಮಜಾಯಿಷಿಯಾದೀತು. ಈ ಸಂಖ್ಯಾಶಾಸ್ತ್ರೀಯ ಸಮಾಜವಿಜ್ಞಾನದ ಅಧ್ಯಯನ ವಿಧಾನ, ಕಥಾನಕ ಚರಿತ್ರಕಾರನ ಪ್ರಾಚೀನ ತಂತ್ರಕೌಶಲ ಮತ್ತು ಪ್ರಯೋಗಶೀಲತೆಗೆ ಅನುಕೂಲಕರವಾಗಿದೆ. ಆದರೆ ಭಾರತ ಯಾವತ್ತಿಗೂ ನಿಯಮಗಳಿಗೆ ಅಪವಾದವಾಗಿ ಉಳಿದಿರುವ ರಾಷ್ಟ್ರ. ಭಾರತವನ್ನು ವಿಭಜಿಸುವ ಶಕ್ತಿಗಳು ಹಲವಾರು. ಈ ಗ್ರಂಥದಲ್ಲಿ ಇದಕ್ಕೆ ಸೂಕ್ತ ಗಮನಹರಿಸಲಾಗಿದೆ. ಆದರೆ ಭಾರತವನ್ನು ಒಗ್ಗೂಡಿಸಿರುವ, ಒಂದಾಗಿ ಇಟ್ಟಿರುವ ಶಕ್ತಿಗಳೂ ಇವೆ. ಈ ಶಕ್ತಿಗಳು, ವರ್ಗ ಮತ್ತು ಸಾಂಸ್ಕೃತಿಕ ಒಡಕುಗಳನ್ನು, ವಿಚ್ಛೇದಕಗಳನ್ನು ನಿಗ್ರಹಿಸುವುದರಲ್ಲಿ, ಮೀರುವುದರಲ್ಲಿ ಸಹಾಯಕವಾಗಿವೆ. ಏನಿಲ್ಲವೆಂದರೂ, ಕನಿಷ್ಠ ಪಕ್ಷ, ಭಾರತ ಒಗ್ಗಟ್ಟಿನಿಂದ ಇರುವುದಿಲ್ಲ, ಭಾರತದಲ್ಲಿ ಪ್ರಜಾಪ್ರಭುತ್ವ ಉಳಿಯುವುದಿಲ್ಲ ಎಂದು ಅನೇಕರು ನುಡಿದ ಭವಿಷ್ಯವನ್ನು ನಿರರ್ಥಕಗೊಳಿಸಿವೆ; ಅಸಿಂಧುಗೊಳಿಸಿವೆ. ಅತಿರೇಕವಲ್ಲದ, ಸೌಮ್ಯವಾದ ಮಧ್ಯಸ್ಥ ಪ್ರಭಾವಗಳು ಹೆಚ್ಚಾಗಿ ಕಂಡುಬರುತ್ತಿಲ್ಲ. ಇಂಥ ಪ್ರಭಾವ, ವರ್ಚಸ್ಸುಗಳನ್ನು ಅಧಿಕಗೊಳಿಸುವುದು ಈ ಗ್ರಂಥದ ಮುಖ್ಯ ಉದ್ದೇಶಗಳಲ್ಲಿ ಒಂದು. ಅವುಗಳನ್ನು ಈಗಲೇ ಗುರುತಿಸಲಿಕ್ಕಾಗದು. ನಿರೂಪಣಾ ಕ್ರಿಯೆ ಸಾಗಿದಂತೆ ಅವು ಸ್ಪಷ್ಟವಾಗುತ್ತವೆ. ಈ ಪ್ರಭಾವಗಳು, ವರ್ಚಸ್ಸುಗಳನ್ನು ಗುರುತಿಸಿ ಬೆಳಕಿಗೊಡ್ಡುವ ಕ್ರಿಯೆಯಲ್ಲಿ ವ್ಯಕ್ತಿಗಳೂ ಸೇರಿದ್ದಾರೆ, ಸಂಸ್ಥೆಗಳೂ ಸೇರಿವೆ ಎಂದಷ್ಟೆ ಹೇಳಿದರೆ ಸಾಕು.

V

1947ರಿಂದೀಚೆಗಿನ ಭಾರತೀಯ ಇತಿಹಾಸದ ಕಾಲವನ್ನು "ರಾಜಕೀಯ ಕಲ್ಪನೆಯೊಂದರ ಸಾಹಸದ ಕಾಲವೆಂದು ನೋಡಬೇಕೆಂದು" ರಾಜಕೀಯ ಸಿದ್ಧಾಂತಿ ಸುನಿಲ್ ಖಿಲ್ನಾನಿ ಬರೆಯುತ್ತಾರೆ. ಪ್ರಜಾಪ್ರಭುತ್ವವೇ ಈ ರಾಜಕೀಯ ಕಲ್ಪನೆ, ಆದರ್ಶ ಎಲ್ಲವೂ. ಹೀಗೆ ನೋಡಿದಾಗ, ಪರಿಭಾವಿಸಿದಾಗ, ಸ್ವತಂತ್ರ ಭಾರತ, ಹದಿನೆಂಟನೆ ಶತಮಾನದಲ್ಲಿ ಅಮೆರಿಕ ಮತ್ತು ಫ್ರೆಂಚ್ ಕ್ರಾಂತಿಗಳು ಚಾಲನೆಗೊಳಿಸಿದ ಮಹಾನ್ ಪ್ರಜಾಪ್ರಭುತ್ವ ಪ್ರಯೋಗದ ಮೂರನೆಯ ಮಹತ್ವದ ಬೆಳವಣಿಗೆಯಾಗಿ ತೋರುತ್ತದೆ. ಇವುಗಳಲ್ಲಿ ಪ್ರತಿಯೊಂದು ಪ್ರಯೋಗವೂ ಅಗಾಧ ಶಕ್ತಿಯನ್ನು ಹೊಮ್ಮಿಸಿದವು. ಶೃಂಗಸದೃಶ ನಿರೀಕ್ಷೆಗಳನ್ನು ಹುಟ್ಟಿಸಿದವು. ಹಾಗೆಯೇ ಪ್ರತಿಯೊಂದೂ ಶೋಚನೀಯ ನಿರಾಶೆಗಳನ್ನು ಅನುಭವಿಸಿದವು. ಖಿಲ್ನಾನಿ ಹೇಳುತ್ತಾರೆ: "ಭಾರತೀಯ ಪ್ರಯೋಗ ಶಿಶುಪ್ರಾಯದ್ದು. ಇದರ ಫಲಿತಾಂಶ ಉಳಿದವುಗಳಿಗಿಂತ ಹೆಚ್ಚು ಮಹತ್ವದ್ದಾಗಿರಬಹುದು. ಏಕೆಂದರೆ, ಭಾಗಶಃ ಮಾನವ ಪ್ರಮಾಣದ ಕಾರಣದಿಂದಾಗಿ; ಮತ್ತೊಂದು ಭಾಗಶಃ ಕಾರಣವೆಂದರೆ ಅದರ ಸ್ಥಳಮಹಾತ್ಮೆ. ಏಷ್ಯಾಖಂಡದ ವಿಮೋಚನಾ ಉತ್ಸಾಹದ ಚಿಲುಮೆಯ ಸೇತುಶಿರ ಭಾರತ. ಎಂದೇ ಏಷ್ಯಾಖಂಡದ ವಿಮೋಚನೆಗೆ ಆಯಕಟ್ಟಿನ ನೆಲೆಯಾಗಿದೆ, ಸ್ಫೂರ್ತಿಬಿಂದುವಾಗಿದೆ ಎಂಬುದೇ ಇದರ ಸ್ಥಳಮಹಾತ್ಮೆ."

ಭಾರತದಲ್ಲಿ ಪ್ರಜಾಪ್ರಭುತ್ವ ಪಶ್ಚಿಮದ ಪ್ರಯೋಗಗಳಿಗಿಂತ ಹೆಚ್ಚು ಮಹತ್ವಪೂರ್ಣವಾದುದೆಂದು ಭಾರತೀಯನಾಗಿ ನನ್ನ ಆಲೋಚನೆ. ಈ ಬಗ್ಗೆ ಹೆಚ್ಚಿನ ಅಧ್ಯಯನವಾಗಿಲ್ಲ ಎಂಬುದು ಇತಿಹಾಸಕಾರನಾದ ನನಗೆ ಗೊತ್ತಿದೆ. ಈ ಅರಿವು ನನ್ನಲ್ಲಿದೆ. ಫ್ರೆಂಚ್ ಮತ್ತು ಅಮೆರಿಕ ಕ್ರಾಂತಿಗಳ ಬಗ್ಗೆ ನೂರಾರು, ಬಹುಶಃ ಸಾವಿರಾರು ಗ್ರಂಥಗಳಿವೆ. ಪ್ರಖ್ಯಾತರೂ ಅನಾಮಧೇಯರೂ ಆದ ನಾಯಕರುಗಳ ಜೀವನ ಚರಿತ್ರೆಗಳು, ಈ ಕ್ರಾಂತಿಗಳಲ್ಲಿ ಭಾಗವಹಿಸಿದವರ ಸಾಮಾಜಿಕ ಹಿನ್ನೆಲೆಗಳ ಅಧ್ಯಯನಗಳು; ಅನಂತರದ ದಶಕಗಳಲ್ಲಿ ಮತ್ತು ಶತಕಗಳಲ್ಲಿ ಈ ಕ್ರಾಂತಿಗಳ ಗಾಢ ಪರಿಣಾಮಗಳು ಅಥವಾ ತಿರಸ್ಕಾರ ಅವನತಿಗಳ ಮೌಲ್ಯಮಾಪನ-ಹೀಗೆ ಹಲವಾರು ಗ್ರಂಥಗಳು ಲಭ್ಯವಿದೆ. ಆದರೆ ಭಾರತದಲ್ಲಿ ಇದಕ್ಕೆ ತದ್ವಿರುದ್ಧವಾದ ಪರಿಸ್ಥಿತಿ. ಭಾರತೀಯ ಪ್ರಜಾಪ್ರಭುತ್ವದ ಯಾವುದೇ ಒಂದು ಅಂಶ, ಅಂಗ ಕುರಿತು ನಮ್ಮ ಚರಿತ್ರೆಕಾರರು ಅಧ್ಯಯನ ನಡೆಸಿದ ಗ್ರಂಥಗಳು ಒಂದು ಕೈ ಬೆರಳೆಣಿಕೆಗೂ ಮೀರಲಾರವು. ತುಂಬ ಮುಕ್ತವಾದ, ಧಾರಾಳವಾದ ಮನಸ್ಸಿನವರಿಗೆ ಎರಡು ಕೈ ಬೆರಳೆಣಿಕೆಗೆ ಸಾಲುವಷ್ಟು ಪುಸ್ತಕಗಳು ಕಾಣಸಿಗಬಹುದೇನೊ.

ಶಿಕ್ಷಣ ತಜ್ಞ ಕೃಷ್ಣಕುಮಾರ್ ಬರೆಯುತ್ತಾರೆ:

"ಭಾರತೀಯ ಮಕ್ಕಳಿಗೆ, ಭಾರತದ ಇತಿಹಾಸ, ವಿಭಜನೆಯಿಂದ ಶುರುವಾಗಿ ಸ್ವಾತಂತ್ರ್ಯದೊಂದಿಗೆ ಮುಕ್ತಾಯಗೊಳ್ಳುತ್ತದೆ. ಸಾಮಾಜಿಕ ಅಧ್ಯಯನದ ಒಂದು ಘಟಕವಾಗಿ, ಅನಂತರ ಸ್ವಯಂಹಕ್ಕು ಬಾಧ್ಯತೆಗಳಿಂದಾಗಿ ಒಂದು ವಿಷಯವ್ಯಾಪ್ತಿ

ಪಡೆಯುವ ಇತಿಹಾಸ ೧೯೪೭ರ ನಂತರ ವಸ್ತುಶೂನ್ಯವಾಗುತ್ತದೆ, ತಿರುಳೇ ಇಲ್ಲದಂತಾಗುತ್ತದೆ...ಕಳೆದ ಐವತ್ತೈದು ವರ್ಷಗಳಲ್ಲಿ ನಡೆದ ಘಟನಾವಳಿಗಳೆಲ್ಲ ಪೌರಶಾಸ್ತ್ರದ ಪಠ್ಯಕ್ರಮದಲ್ಲಿ, ಜನಪ್ರಿಯ ಸಿನಿಮಾ, ಟೆಲಿವಿಷನ್‌ಗಳಲ್ಲಿ ತೊದಲುನುಡಿಗಳಾಗಿ ಕೇಳಿಬರುತ್ತವೆ, ತಡವರಿಸುತ್ತ ಗಿರಕಿಹೊಡೆಯುತ್ತವೆ. ಭೂತಕಾಲದ ಜ್ಞಾನದ ಒಂದು ವಿಧ್ಯುಕ್ತ ಘಟಕವಾದ ಚರಿತ್ರೆ ಇವುಗಳನ್ನೆಲ್ಲ ಒಳಗೊಳ್ಳುವುದೇ ಇಲ್ಲ, ಚರಿತ್ರೆ ಇವುಗಳನ್ನು ಮುಟ್ಟುವುದೇ ಇಲ್ಲ."

ಭಾರತೀಯ ಮಕ್ಕಳಿಗೆ, ಭಾರತದ ಇತಿಹಾಸ ವಿಭಜನೆಯಿಂದ ಶುರುವಾಗಿ ಸ್ವಾತಂತ್ರ್ಯದಲ್ಲಿ ಮುಕ್ತಾಯಗೊಂಡಲ್ಲಿ ಅದನ್ನು ಆ ರೀತಿ ನಿರ್ದೇಶಿಸಲಾಗಿದೆಯಷ್ಟೆ, ಅಪ್ಪಣೆಯನುಸಾರ ನಿರೂಪಿಸಲಾಗಿದೆಯಷ್ಟೆ. ಭಾರತೀಯ ವಯಸ್ಕರು ಚರಿತ್ರೆಯನ್ನು ಆ ರೀತಿಯಲ್ಲಿ, ಆ ಕ್ರಮದಲ್ಲಿ ನೋಡಿದ್ದಾರಷ್ಟೆ. ವಿದ್ವನ್ಮಂಡಳಿಗಳಲ್ಲಿ, ಅಕಾಡೆಮಿಗಳಲ್ಲಿ ಚರಿತ್ರೆ ಭೂತಕಾಲದೊಂದಿಗೆ ವ್ಯವಹರಿಸುತ್ತದೆ. ಚರಿತ್ರೆಯ ಅಧ್ಯಯನದ ವ್ಯಾಪ್ತಿ ಭೂತಕಾಲವಾಗಿರುತ್ತದೆ. ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ವರ್ತಮಾನಕಾಲದ ವಿಷಯಗಳೊಂದಿಗೆ ವ್ಯವಹರಿಸುತ್ತವೆ. ವರ್ತಮಾನಕಾಲದ ಅಧ್ಯಯನ ನಡೆಸುತ್ತವೆ. ಇದು ಸಂಪ್ರದಾಯ ಹಾಗೂ ಅನೇಕ ದೃಷ್ಟಿಯಲ್ಲಿ ನ್ಯಾಯವಾದ, ತಾರ್ಕಿಕವಾದ ವಿಂಗಡಣೆ. ಆದರೆ, ತೊಂದರೆಯೆಂದರೆ, ಭಾರತೀಯ ವಿದ್ವನ್ಮಂಡಳಿ ಅಥವಾ ಅಕಾಡೆಮಿಗಳಲ್ಲಿ ಇತಿಹಾಸವೆಂದರೆ ಒಂದೇ. ಅದು ನಿಶ್ಚಲವಾದ ಒಂದು ತಾರೀಖು: 15 ಆಗಸ್ಟ್ 1947 ಎಂದಷ್ಟೇ ವಿಶದೀಕರಿಸಲಾಗಿದೆ. ಈ ಒಂದು ತಾರೀಖಿಗಷ್ಟೇ ಇತಿಹಾಸದ ಎಲ್ಲೆ-ಮಿತಿಗಳನ್ನು ಗೊತ್ತುಪಡಿಸಲಾಗಿದೆ. ಹೀಗಾಗಿ, ಗಡಿಯಾರ ಮಧ್ಯರಾತ್ರಿ ಗಂಟೆ ಹೊಡೆದಾಗ ಭಾರತ ಸ್ವತಂತ್ರಗೊಂಡಿತು, ಚರಿತ್ರೆ ಮುಗಿಯಿತು; ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ಶುರುವಾಯಿತು.

1947ರ ನಂತರದ ದಶಕಗಳಲ್ಲಿ ಹಾಲಿ ಪರಿಸ್ಥಿತಿಯೇ ಮುಂದುವರಿಯಿತು. 1952ರ ಪ್ರಥಮ ಸಾರ್ವತ್ರಿಕ ಚುನಾವಣೆಯ ಬಗೆ ರಾಜ್ಯಶಾಸ್ತ್ರಜ್ಞರು ಅಧ್ಯಯನ ನಡೆಸಿದರು. ಐದು ವರ್ಷಗಳ ನಂತರ ನಡೆದ ಮುಂದಿನ ಚುನಾವಣೆಯ ಅಧ್ಯಯನವೂ ನಡೆಯಿತು. ಮಾನವ ಶಾಸ್ತ್ರಜ್ಞರು 1950ರಲ್ಲಿ ಭಾರತೀಯ ಗ್ರಾಮಗಳಲ್ಲಿದ್ದ ಸ್ಥಿತಿಗತಿಯ ಬಗ್ಗೆ ಬರೆದರು. 1960ರಲ್ಲಿ ಇನ್ನಷ್ಟು ಬರೆದರು. ಆದರೆ ಗತಕಾಲಕ್ಕೆ, ಅಂದರೆ ಚರಿತ್ರೆಗೆ ಮೊಳೆಹೊಡೆದು ಸ್ಥಿರಪಡಿಸಲಾಯಿತು. ಮನೋಭಾವ ಹಾಗೂ ತರಬೇತಿಗಳಿಂದಾಗಿ ಚರಿತ್ರೆಕಾರರು ಸ್ವಾತಂತ್ರ್ಯಪೂರ್ವದ ಕಾಲಕ್ಕೇ ಸೀಮಿತರಾದರು. ಬ್ರಿಟಿಷ್ ವಸಾಹತುಶಾಹಿ ಸಮಾಜ, ಸಂಸ್ಕೃತಿ, ರಾಜಕೀಯ ಹಾಗೂ ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳ ಬಗ್ಗೆ, ಫಲಿತಗಳ ಬಗ್ಗೆ ವಿಪುಲ ಸಾಹಿತ್ಯ ರಚನೆಯಾಯಿತು. ಇಂಥ ಸಾಹಿತ್ಯ ರಚನೆ ಇಂದಿಗೂ ಮುಂದುವರಿದಿದೆ. ವಸಾಹತುಶಾಹಿಗೆ ವ್ಯಕ್ತವಾದ ವಿರೋಧ, ಪ್ರತಿಭಟನೆಗಳಿಗೆ ಕಾರಣ, ಅವುಗಳ ಪರಿಣಾಮಗಳನ್ನು ನಿರೂಪಿಸುವ ಸಾಹಿತ್ಯ ಬೆಳೆಯುತ್ತಿದೆ. ವಸಾಹತುಶಾಹಿ ಆಳ್ವಿಕೆಯ ರೀತಿ-ನೀತಿ,

ಕಾರ್ಯನಿರ್ವಹಣೆ, ಕಾರ್ಯಶೈಲಿಗಳನ್ನು ಬಿಂಬಿಸುವ, ಇವುಗಳ ವಿರುದ್ಧ ವ್ಯಕ್ತವಾದ ಪ್ರತಿಭಟನೆ, ಅವುಗಳ ಫಲ-ಪರಿಣಾಮಗಳನ್ನು ಬಿಂಬಿಸುವ ಸಾಹಿತ್ಯ ವಿಪುಲವಾಗಿ ಬಂದಿದೆ, ಬರುತ್ತಿದೆ. ಇಂಥ ವಿರೋಧ, ಪ್ರತಿಭಟನೆಯ ನಾಯಕತ್ವ ವಹಿಸಿದವರು, ಸಮಾಜಸುಧಾರಕ, ಪ್ರವಾದಿ ಮತ್ತು ರಾಜಕೀಯ ಸತ್ಯಾಗ್ರಹಿಯಾದ ಮೋಹನದಾಸ ಕರಂಚಂದ್ ಗಾಂಧಿ.

ಗಾಂಧಿ, ಅಂದಿಗೂ-ಇಂದಿಗೂ ಕೆಲವರ ಮುಕ್ತಕಂಠದ ಪ್ರಶಂಸೆಗೆ, ಶ್ಲಾಘನೆ-ಅಭಿಮಾನಗಳಿಗೆ ಪಾತ್ರರಾದವರು. ಹಾಗೆಯೇ ಹೃತ್ಪೂರ್ವಕ ಹಗೆತನ, ದ್ವೇಷ-ಹೇವರಿಕೆಗಳಿಗೂ ಗುರಿಯಾದವರು. ಇದೇ ಮಾತನ್ನು ಅವರು ವಿರೋಧಿಸಿದ ಅದ್ಭುತ ಭವನವಾದ ಬ್ರಿಟಿಷ್ ಆಳ್ವಿಕೆ ಬಗ್ಗೆಯೂ ಹೇಳಬಹುದು. ಬ್ರಿಟಿಷರು ಅಖೈರಾಗಿ 1947ರ ಆಗಸ್ಟ್‌ನಲ್ಲಿ ಭಾರತ ಬಿಟ್ಟು ತೊಲಗಿದರು; ಕೇವಲ ಐದೂವರೆ ತಿಂಗಳಲ್ಲೇ ಒಡನಾಡಿ ಭಾರತೀಯನೊಬ್ಬನಿಂದ ಗಾಂಧೀಜಿಯವರ ಹತ್ಯೆಯಾಯಿತು. ಬ್ರಿಟಿಷ್ ಆಳ್ವಿಕೆಯ ಅವಸಾನದ ತರುವಾಯದಲ್ಲೇ ಸಂಭವಿಸಿದ ಅದರ ಪ್ರಖ್ಯಾತ ಕಡುವಿರೋಧಿಯ ಸಾವು ಇತಿಹಾಸ ರಚನೆಯ ಮೇಲೆ ನಿರ್ಣಾಯಕ ಪ್ರಭಾವ ಬೀರಿತು. ಗಾಂಧೀಜಿ ಇನ್ನಷ್ಟು ಕಾಲ ಬದುಕಿದ್ದಿದ್ದರೆ ಇತಿಹಾಸಕಾರರು ಸ್ವತಂತ್ರ ಭಾರತದ ಚರಿತ್ರೆಯಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ತೋರುತ್ತಿದ್ದರೇನೋ ಎಂಬುದನ್ನು ಯಾರೂ ಖಚಿತವಾಗಿ ಹೇಳಲಾಗದು. ರೂಢಿಗತ ಸಂಪ್ರದಾಯ, ಪದ್ಧತಿಗಳಂತೆ 1947ರ ಆಗಸ್ಟ್ 15ಕ್ಕೆ ಭಾರತೀಯ ಇತಿಹಾಸವನ್ನು "ಪರಿಸಮಾಪ್ತಿ"ಯಾದಂತೆ ಭಾವಿಸಲಾಯಿತು. ಮಹಾತ್ಮರ ಜೀವನ ಚರಿತ್ರೆಕಾರರಿಗೆ ಮಾತ್ರ ಆರು ತಿಂಗಳಷ್ಟು ಈ ಕಾಲಾವಧಿಯನ್ನು ವಿಸ್ತರಿಸಲಾಯಿತು. ಹೀಗಾಗಿ ಬ್ರಿಟಿಷ್ ಭಾರತದ ಸಂಘರ್ಷಮಯ ವರ್ಷಗಳ ಬಗ್ಗೆ, ಕೊನೆಯ ತೀವ್ರತಮ ವರ್ಷಗಳ ಬಗ್ಗೆ ಹಲವಾರು ಒಳ್ಳೆಯ ಪುಸ್ತಕಗಳು ಬಂದಿವೆ. ವಿವಾದಾತ್ಮಕ ಗ್ರಂಥಗಳೂ ಪ್ರಕಟವಾಗಿವೆ. ಬ್ರಿಟಿಷ್ ಆಳ್ವಿಕೆ ಎಂಬ ಮಹಾನ್ ಸಾಂಸ್ಥಿಕ ವ್ಯವಸ್ಥೆ ಹಾಗೂ ಮಹಾನುಭಾವ ಮಹಾತ್ಮ ಗಾಂಧಿ ಇಂದಿಗೂ ಇತಿಹಾಸಕಾರರ ಆಸಕ್ತಿಯನ್ನು ಹಿಡಿದಿರಿಸಿರುವ ಸಂಗತಿಗಳು. ಇವತ್ತಿಗೂ ಇತಿಹಾಸಕಾರರನ್ನು ಈ ಸೆಳೆತ ಬಿಟ್ಟಿಲ್ಲ. ಆದರೆ ಸ್ವತಂತ್ರ ಭಾರತದ ಇತಿಹಾಸ ಮಾತ್ರ ಬಹುತೇಕ ಕನ್ನೆ ನೆಲವಾಗಿಯೇ ಉಳಿಯಿತು; ಅಕ್ಷತವಾಗಿಯೇ ಉಳಿಯಿತು. ಇತಿಹಾಸ ಎನ್ನುವುದು ಗತಕಾಲದ ವಿಧ್ಯುಕ್ತ ಸಂಯೋಜಿತ ಜ್ಞಾನ ಎಂದಾದಲ್ಲಿ 1947ರಿಂದೀಚೆಗೆ ಈ ಜ್ಞಾನ ವ್ಯಾವಹಾರಿಕವಾಗಿ ಅಸ್ತಿತ್ವದಲ್ಲಿಲ್ಲ.

ಅದಾಗ್ಯೂ, ಸ್ವಾತಂತ್ರ್ಯದ ಮೊದಲ ವರ್ಷಗಳು ಬ್ರಿಟಿಷರ ಆಳ್ವಿಕೆಯ ಕೊನೆಯ ವರ್ಷಗಳಷ್ಟೇ ತೀವ್ರತಮವಾದ ನಾಟಕೀಯ ಆಸಕ್ತಿಗಳಿಂದ ಕೂಡಿತ್ತು. ಅಷ್ಟೇ ಆಸಕ್ತಿಪೂರ್ಣವಾಗಿತ್ತು ಎಂಬುದನ್ನು ಈ ಪುಸ್ತಕ ಬಿಂಬಿಸುತ್ತದೆ. ಬ್ರಿಟಿಷರು ವಿಧ್ಯುಕ್ತವಾಗಿ ಅಧಿಕಾರ ಹಸ್ತಾಂತರ ಮಾಡಿದರು. ಆದರೆ ವಿಧಾಯಕಶಕ್ತಿಯನ್ನು ಹೊಸದಾಗಿ ಸೃಷ್ಟಿಸಬೇಕಾಗಿತ್ತು. ವಿಭಜನೆ ಹಿಂದೂ-ಮುಸ್ಲಿಮರ ಸಂಘರ್ಷಕ್ಕೆ ಇತಿಶ್ರೀ ಹಾಡಿರಲಿಲ್ಲ. ಅಥವಾ ಸ್ವಾತಂತ್ರ್ಯವೂ

ವರ್ಗ ಮತ್ತು ಜಾತಿ ಬಿಕ್ಕಟ್ಟುಗಳಿಗೆ, ಘರ್ಷಣೆಗಳಿಗೆ ಸಮಾಪ್ತಿ ಹಾಡಿರಲಿಲ್ಲ. ಭಾರತದ ಭೂಪಟದ ಬಹುಭಾಗ ಇನ್ನೂ ರಾಜಮಹಾರಾಜರುಗಳ ನಿಯಂತ್ರಣದಲ್ಲೇ ಮುಂದುವರಿದಿತ್ತು. ಮನ ಒಲಿಕೆ ಅಥವಾ ಒತ್ತಡ-ಬಲಾತ್ಕಾರಗಳಿಂದ ಇವುಗಳನ್ನು ಭಾರತದ ಒಕ್ಕೂಟದೊಳಕ್ಕೆ ತರಬೇಕಾಗಿತ್ತು. ನಶಿಸುತ್ತಿರುವ ಸಾಮ್ರಾಜ್ಯದ ಭಗ್ನಾವಶೇಷಗಳ ನಡುವೆ ಹೊಸ ರಾಷ್ಟ್ರವೊಂದು ಜನ್ಮ ತಾಳುತ್ತಿತ್ತು, ಹೊಸ ರಾಷ್ಟ್ರವೊಂದನ್ನು ನಿರ್ಮಾಣ ಮಾಡಲಾಗುತ್ತಿತ್ತು.

ಯುದ್ಧೋತ್ತರ ಯೂರೋಪ್ ಕುರಿತ ತನ್ನ ಇತ್ತೀಚಿನ ಚರಿತ್ರೆಯಲ್ಲಿ ಟೋನಿ ಜೂಡ್ ಹೀಗೆ ಬರೆಯುತ್ತಾರೆ: "ಈ ತರಹದ ಗ್ರಂಥ ಮೊದಲ ಹೆಜ್ಜೆಗಳಲ್ಲೇ ಇತರ ಗ್ರಂಥಗಳ ಭುಜವನ್ನು ಆಶ್ರಯಿಸಬೇಕಾಗುತ್ತದೆ". ಎರಡನೆ ಮಹಾಯುದ್ಧದ ನಂತರದ ಆರು ವರ್ಷಗಳ ಸಂಕ್ಷಿಪ್ತ ಅವಧಿಯ ಯೂರೋಪ್ ಚರಿತ್ರೆ ಬಗ್ಗೆ ಇಂಗ್ಲಿಷ್‌ನಲ್ಲಿ ಅಕ್ಷಯವಾದ ಪೂರಕ ಸಾಹಿತ್ಯ ರಚನೆಯಾಗಿದೆ ಎನ್ನುತ್ತಾರೆ ಟೋನಿ ಜೂಡ್. ಭಾರತದಲ್ಲಿ ಪರಿಸ್ಥಿತಿ ಇದಕ್ಕಿಂತ ತೀರಾ ಭಿನ್ನವಾದದ್ದು. ಇಲ್ಲಿ ನಮ್ಮ ತಿಳುವಳಿಕೆ-ಜ್ಞಾನಗಳ ನಡುವಣ ಕಂದರ ಅಗಾಧವೂ ಅಸಾಧಾರಣವೂ ಅಸಾಮಾನ್ಯವೂ ಆದದ್ದು. ಭಾರತ ಗಣರಾಜ್ಯ ಇಪ್ಪತ್ತೆಂಟು ರಾಜ್ಯಗಳ ಒಕ್ಕೂಟ. ಕೆಲವು ರಾಜ್ಯಗಳು ಫ್ರಾನ್ಸಿಗಿಂತ ವಿಸ್ತಾರವಾದವು. ಆದರೇನು, ದೊಡ್ಡದಾದ ಅಥವಾ ಚಿಕ್ಕದಾಗಿರಬಹುದಾದ ಈ ಯಾವುದೇ ರಾಜ್ಯಗಳ ಇತಿಹಾಸ ರಚನೆಯಾಗಿಲ್ಲ. ಇವು ತಮ್ಮ ಇತಿಹಾಸವನ್ನು ಬರೆಸಿಲ್ಲ. 1950-60ರ ದಶಕಗಳಲ್ಲಿ ಭಾರತ, ವಿದೇಶಾಂಗ ನೀತಿಗೆ ಹೊಸದೃಷ್ಟಿ-ಹೊಸ ಹಾದಿಯನ್ನು ರೂಪಿಸಿತು. ಹಾಗೆಯೇ ಆರ್ಥಿಕ ನೀತಿ ಮತ್ತು ಯೋಜನೆಯಲ್ಲೂ ಹೊಸವಿಧಾನಗಳನ್ನು ರೂಪಿಸಿ ಹೊಸಮಾರ್ಗ ಪ್ರವರ್ತಕ ಕಾರ್ಯದಲ್ಲಿ ತೊಡಗಿಕೊಂಡಿತು. ಈ ಹೊಸ ಪ್ರಯೋಗಗಳ ಬಗ್ಗೆ ಅಧಿಕೃತವಾಗಿ ಇನ್ನೂ ಬರೆಯುವುದು ಸಾಧ್ಯವಾಗಿಲ್ಲ. ಈ ಪ್ರಯೋಗಗಳ ಮಾಹಿತಿ, ವಿವರಣೆಗಳನ್ನು ನೀಡುವ ಗ್ರಂಥರಚನೆಯಾಗಿಲ್ಲ. ಭಾರತ ಮಹಾನ್ ದಾರ್ಶನಿಕ ಉದ್ಯಮಿಗಳಿಗೆ, ಮಹಾನ್ ಚೇತನಗಳಿಗೆ ಜನ್ಮ ನೀಡಿದೆ. ಆದರೆ ಈ ಮಹಾನುಭಾವರು ಕಟ್ಟಿದ ಸಂಸ್ಥೆಗಳ ಬಗ್ಗೆ, ಸೃಷ್ಟಿಸಿದ ಸಂಪತ್ತಿನ ಬಗ್ಗೆ ಬರೆದೇ ಇಲ್ಲ. ಇವೆಲ್ಲ ಅಲಿಖಿತವಾಗಿಯೇ ಉಳಿದಿವೆ. ಮತ್ತೆ ಹೇಳುವುದಾದರೆ, ನಮ್ಮ ಆಧುನಿಕ ಇತಿಹಾಸದ ಪ್ರಮುಖ ವ್ಯಕ್ತಿಗಳಾದ ಅನೇಕ ಮಂದಿ ಕಾರಣಪುರುಷರ ಯಥಾರ್ಥವಾದ ಜೀವನ ಚರಿತ್ರೆಗಳು ಅಲಭ್ಯ. ಶೇಖ್ ಅಬ್ದುಲ್ಲಾ, ಮಾಸ್ಟರ್ ತಾರಾಸಿಂಗ್ ಅಥವಾ ಎಂ.ಜಿ. ರಾಮಚಂದ್ರನ್ ಇಂಥವರ ಜೀವನ ಚರಿತ್ರೆಗಳು ಬಂದಿಲ್ಲ. ಇವರಲ್ಲಿ ಪ್ರತಿಯೊಬ್ಬರೂ ಪ್ರಾಂತೀಯ ನಾಯಕರಿರಬಹುದು. ಆದರೆ ಇವರ ಪ್ರಾಂತ್ಯಗಳು ವಿಸ್ತಾರದಲ್ಲಿ ಯೂರೋಪಿಯನ್ ರಾಷ್ಟ್ರಗಳಷ್ಟೇ ದೊಡ್ಡದಾದವು.

ಯುದ್ಧೋತ್ತರ ಯೂರೋಪಿನ ಇತಿಹಾಸದಂತೆ, ಯುದ್ಧೋತ್ತರ ಭಾರತದ ಇತಿಹಾಸವು ವಿಷಯ ತಜ್ಞರ ವಿಶೇಷ ಗ್ರಂಥಗಳ ಭುಜಗಳನ್ನು ಆಶ್ರಯಿಸಿಲ್ಲ. ವಿಷಯ ಸಣ್ಣದಿರಲಿ, ದೊಡ್ಡದಿರಲಿ, ಮಹತ್ವದ್ದಿರಲಿ, ಅಷ್ಟೇನೂ ಮಹತ್ವದ್ದಲ್ಲವಾಗಿರಲಿ, ಮಾಹಿತಿ ಲಭ್ಯವಿಲ್ಲದೆಡೆ ಖಾಲಿ ಜಾಗಗಳನ್ನು ಗ್ರಂಥಕರ್ತ ತಾನು ಹೆಕ್ಕಿ ತೆಗೆದ ಮಾಹಿತಿಗಳು-ಸಂಗತಿಗಳಿಂದಲೇ ಭರ್ತಿ

ಮಾಡಬೇಕಾಗಿದೆ. ನನ್ನ ಮೊದಲ ಆಪ್ತಸಲಹಾಕಾರರಾದ, ವಿವೇಕಯುಕ್ತ ಹಿರಿಯ ಅಧಿಕಾರಿ ಸಿ.ಎಸ್. ವೆಂಕಟಾಚಾರ್ ಒಮ್ಮೆ ಹೀಗೆ ಹೇಳಿದ್ದರು: "ಚರಿತ್ರೆಯ ಪ್ರತಿಯೊಂದು ಗ್ರಂಥವೂ ಹಂಗಾಮಿಯಾದದ್ದು. ಪ್ರಮಾಣೀಕರಿಸಬೇಕಾದದ್ದು, ವಿಸ್ತರಿಸಬೇಕಾದ್ದು, ತಿದ್ದುಪಡಿಮಾಡಬೇಕಾದ್ದು, ಪ್ರಶ್ನಾರ್ಹವಾದದ್ದು–ಇವೆಲ್ಲದರ ಬೆಳಕಿನಲ್ಲಿ ಹೊಸ ಗ್ರಂಥಗಳು ಪ್ರಕಟವಾದಾಗ ತಲೆಬಾಗಿ ಸೋಲನ್ನು ಒಪ್ಪಿಕೊಳ್ಳವಂಥಾದ್ದು. ಇದೇ ಚರಿತ್ರೆಯ ಗ್ರಂಥ." ಈ ಗ್ರಂಥದ ವಿಷಯವ್ಯಾಪ್ತಿ, ವಿಷಯಶ್ರೇಣಿ ವಿಸ್ತಾರವಾದದ್ದು. ಆದಾಗ್ಯೂ ಎಲ್ಲ ವಿಷಯಗಳನ್ನೂ ಸಮಗ್ರವಾಗಿ ನಿರೂಪಿಸಲಾಗಿದೆ ಎನ್ನಲಾಗದು. ಅಂಥದೊಂದು ಆಸೆಯನ್ನು ಈ ಪುಸ್ತಕ ಈಡೇರಿಸಿದೆ ಎಂದೂ ಹೇಳಲಾಗದು. ಪ್ರತಿಯೊಬ್ಬ ಓದುಗನಿಗೂ ಅವನದೇ ಆದ ಗೊಣಗಾಟಗಳಿರುತ್ತವೆ. ಉದಾಹರಣೆಗೆ, ಗುಡ್ಡಗಾಡು ಜನರ ಬಗ್ಗೆ ಸಾಕಷ್ಟು ಸವಿಸ್ತಾರವಾಗಿ ನಾನು ಹೇಳಿಲ್ಲ ಎಂದು ಕೆಲವರು ತಕರಾರು ಎತ್ತಬಹುದು. ಕಾಶ್ಮೀರದ ಬಗ್ಗೆ ಇನ್ನೂ ಹೆಚ್ಚು ಪುಟಗಳನ್ನು ಬರೆಯಬಹುದಿತ್ತೆಂದು ಬೇರೆ ಕೆಲವರು ಹೇಳಬಹುದು.

ಈ ಗ್ರಂಥ ಕುರಿತಂತೆ ನನ್ನ ಆಶೋತ್ತರಗಳೇನೆಂಬುದನ್ನು ಮಾರ್ಕ ಬ್ಲಾಕ್, ಬೇರೊಂದು ರಾಷ್ಟ್ರದ ಬಗ್ಗೆ, ಬೇರೊಂದು ಸಮಯದಲ್ಲಿ ಬರೆಯುತ್ತಾ ತುಂಬ ಚೆನ್ನಾಗಿ ಹೇಳಿದ್ದಾರೆ:

> *ಎಲ್ಲಿಂದ ವಿಸ್ತಾರವಾದ ನೋಟ, ವೀಕ್ಷಣೆಗಳು ಸಾಧ್ಯವಾಗದೊ ಅಂಥ ಗಿಡಗೆಂಟೆಗಳ ಪೊದೆಗಳೊಳಗೆ ಮುಳುಗುವ ಮುನ್ನ ದಿಗಂತದ ಕ್ಷಿಪ್ರ ಸಮೀಕ್ಷೆ ನಡೆಸುವ ಅನ್ವೇಷಕನೊಂದಿಗೆ ನನ್ನ ಹೋಲಿಸಿಕೊಳ್ಳಬಹುದು. ನನ್ನ ಮಾಹಿತಿ, ಸಂಗತಿಗಳ ನಿರೂಪಣೆಯಲ್ಲಿ ಸಾಕಷ್ಟು ಖಾಲಿ ಸ್ಥಳಗಳು, ಹೇಳದೇ ಹೋದ ಮಾತುಗಳು, ವ್ಯತ್ಯಾಸಗಳು ಸಹಜವಾಗಿಯೇ ಹೇರಳವಾಗಿವೆ. ನಮ್ಮ ಜ್ಞಾನ-ತಿಳುವಳಿಕೆಗಳಲ್ಲಿರುವ ಅಥವಾ ನನ್ನ ಸ್ವಂತ ದಾಖಲಾತಿಯಲ್ಲಿರುವ ನ್ಯೂನತೆಗಳನ್ನು ಮುಚ್ಚಿಡದಿರಲು ನನ್ನ ಕೈಲಾದ ಪ್ರಯತ್ನವನ್ನೆಲ್ಲ ಮಾಡಿದ್ದೇನೆ. ಇನ್ನೂ ಹೆಚ್ಚು ಆಳವೂ ವ್ಯಾಪಕವೂ ಆದ ಅಧ್ಯಯನದಿಂದ ಮೂಡಿದ ಹೊಸಗ್ರಂಥವೊಂದು ನನ್ನ ಗ್ರಂಥವನ್ನು ಹಿಂದಿಕ್ಕುವಂಥ, ತಳ್ಳಿಹಾಕುವಂಥ ಕಾಲಬಂದಾಗ ನಾನು ಸನ್ಮಾನಿತನೆಂದು ಭಾವಿಸುವೆ. ನನ್ನ ಸುಳ್ಳು ಸಂದಿಗ್ಧತೆಗಳಿಂದಾಗಿ ಇತಿಹಾಸ ತನ್ನ ಸತ್ಯವನ್ನು ಅರಿಯುವಂತಾದರೆ ಅದು ನನಗೆ ಸಂದ ಯೋಗ್ಯ ಬಹುಮಾನವೆಂದು ಭಾವಿಸುತ್ತೇನೆ.*

VI

ಕೇಂಬ್ರಿಜ್‌ನ ಮಹಾನ್ ಇತಿಹಾಸಕಾರ ಎಫ್.ಡಬ್ಲ್ಯು. ಮೈಟ್ಲ್ಯಾಂಡ್ ತಮ್ಮ ವಿದ್ಯಾರ್ಥಿಗಳಿಗೆ ನೆನಪು ಮಾಡಿಕೊಡುತ್ತಿದ್ದುದು: "ಈಗ ನಾವು ಗತಕಾಲದಲ್ಲಿತ್ತೆಂದು ಕಾಣುವುದು ಒಮ್ಮೆ ಭವಿಷ್ಯದಲ್ಲೂ ಇತ್ತು." ಒಬ್ಬ ಇತಿಹಾಸಕಾರನಿಗೆ ಇದಕ್ಕಿಂತ

ಉತ್ತಮವಾದ ಇನ್ನೊಂದು ನೀತಿವಚನ ಅಥವಾ ಸೂಕ್ತಿ ಇರಲಾರದು. ವಿಶೇಷವಾಗಿ, ತಾನು ತಿಳಿಸಲುದ್ದೇಶಿಸಿರುವ ವಿಷಯಗಳ ಮೇಲಿನ ನಿರ್ಣಾಯಕ ಅಭಿಪ್ರಾಯಗಳೊಂದಿಗೆ ಸಭಿಕರನ್ನುದ್ದೇಶಿಸಿ ಮಾತನಾಡುವ/ಮಾತನಾಡಲಿಚ್ಛಿಸುವ ಇತ್ತೀಚಿನ ಇತಿಹಾಸಕಾರನಿಗೆ ಇದಕ್ಕಿಂತ ಉತ್ತಮವಾದ ಸೂಕ್ತಿ ಬೇರೊಂದಿರಲಾರದು. ವಿಯಟ್ನಾಂ ಕುರಿತಂತೆ ಬರೆದ ಅಮೆರಿಕದ ಇತಿಹಾಸಕಾರನನ್ನೆ ತೆಗೆದುಕೊಳ್ಳೋಣ. ವಿಯಟ್ನಾಂ ಯುದ್ಧ ಅಗತ್ಯವಾಗಿತ್ತೇ ಇಲ್ಲವೇ ಎಂಬ ಬಗ್ಗೆ ಈಗಾಗಲೇ ಒಂದು ನಿರ್ಧಾರಕ್ಕೆ ಬಂದಿರುವವರೇ ಈ ಇತಿಹಾಸಕಾರನ ಓದುಗರು. 1968ರ ವಿದ್ಯಾರ್ಥಿ ಆಂದೋಲನದ ಬಗ್ಗೆ ಬರೆಯುವ ಇತಿಹಾಸಕಾರನಿಗೆ, ತನ್ನ ಓದುಗರು ಗೊತ್ತು; ಅವರ ತೀವ್ರ ಅಭಿಪ್ರಾಯಗಳು ಗೊತ್ತು. ಈ ನಿರ್ದಿಷ್ಟ ದಂಗೆಯ ಬಗ್ಗೆ, ಅರಾಜಕತೆಯ ಬಗ್ಗೆ ಪರಸ್ಪರ ವಿರೋಧಾಭಾಸವುಳ್ಳ, ವಿವಾದಾತ್ಮಕವಾದ ಅಭಿಪ್ರಾಯಗಳಿರುವುದೂ ಗೊತ್ತು.

ಓದುಗರು ನಿಷ್ಕ್ರಿಯವಾದ ಅಥವಾ ಜಡವಾದ ಸಂವಾಹಕರಲ್ಲ ಎನ್ನುವುದು ಸಮಕಾಲೀನ ಚರಿತ್ರೆಯನ್ನು ಬರೆಯುವವರಿಗೆ ತಿಳಿದ ವಿಷಯ. ಅವನ ಅಥವಾ ಅವಳ ಮುಂದೆ ಇರಿಸಿರುವ ಜೋಗುಳವನ್ನು ಚಕಾರವೆತ್ತದೆ ಸ್ವೀಕರಿಸುವಂಥವರಲ್ಲ ಎಂಬುದು ಗೊತ್ತು. ಓದುಗ ಒಬ್ಬ ಪೌರ, ಒಬ್ಬ ಪ್ರಜೆ. ವಿಮರ್ಶಾತ್ಮಕ ಪೌರ, ಪ್ರಜೆ. ಅವನಿಗೆ ತನ್ನದೇ ಆದ ರಾಜಕೀಯ ಹಾಗೂ ಸೈದ್ಧಾಂತಿಕ ಆಯ್ಕೆಗಳಿವೆ, ಆದ್ಯತೆಗಳಿವೆ. ಈ ಆಯ್ಕೆಗಳು, ಆದ್ಯತೆಗಳು ಗತಕಾಲ ಕುರಿತಂತೆ ಓದುಗರ ಅಭಿಪ್ರಾಯ-ಅನ್ನಿಸಿಕೆಗಳನ್ನು ನಿರ್ದೇಶಿಸುತ್ತವೆ, ಆಜ್ಞಾಪಿಸುತ್ತವೆ. ವಿಶೇಷವಾಗಿ ನಾಯಕರುಗಳು ಹಾಗೂ ಕಾನೂನು-ಶಾಸನಗಳ ಸೃಷ್ಟಿಕರ್ತರನ್ನು ನಿರ್ದೇಶಿಸುತ್ತವೆ; ಆಜ್ಞೆಮಾಡುತ್ತವೆ. ಆಧುನಿಕ ರಾಜಕಾರಣಿಗಳು ತೆಗೆದುಕೊಂಡ ನಿರ್ಧಾರಗಳ ಫಲ-ಪರಿಣಾಮಗಳೊಂದಿಗೆ ನಮ್ಮ ಜೀವಿತ ಸಾಗುತ್ತದೆ. ಎಷ್ಟೋ ವೇಳೆ, ತನ್ನನ್ನೇ ಮಾದರಿಯಾಗಿಟ್ಟುಕೊಂಡು ತನ್ನಂತೆಯೇ ಯೋಚಿಸುವ, ಮತ್ತೊಬ್ಬ ರಾಜಕಾರಣಿ ಅಥವಾ ಬೇರೊಬ್ಬನು ಇನ್ನೂ ಉತ್ತಮವಾದ, ವಿವೇಕಯುತವಾದ ನಿರ್ಧಾರಗಳನ್ನು ಕೈಗೊಳ್ಳಲಿದ್ದ, ಕೈಗೊಳ್ಳಬಹುದಿತ್ತು ಎಂದೂ ಭಾವಿಸುತ್ತೇವೆ.

ಹಿಂದಿನ ಕಾಲದತ್ತ ಗಮನಹರಿಸಿದಾಗ, ಆಗ ಈ ಸಮಸ್ಯೆ ಇಷ್ಟೇನೂ ಗಂಭೀರವಾಗಿದ್ದಂತೆ ತೋರುವುದಿಲ್ಲ. ಹದಿನೆಂಟನೆ ಶತಮಾನದ ಚರಿತ್ರಕಾರರು ಆ ಕಾಲವನ್ನು ಅರ್ಥಮಾಡಿಕೊಂಡು ವ್ಯಾಖ್ಯಾನಿಸಲು ಪ್ರಯತ್ನಿಸುತ್ತಿದ್ದರು. ಹಾಗೆಯೇ ಓದುಗರೂ ಅವರನ್ನೇ ಅನುಸರಿಸುತ್ತಿದ್ದರು. ಜೆಫರ್ಸನ್ ಅಥವಾ ನೇಪೋಲಿಯನ್ನನ ಜೀವನ ಚರಿತ್ರಕಾರರು ತಮ್ಮ ನಂಬಲರ್ಹವಾದ ಓದುಗರನ್ನು ನೆಚ್ಚಿಕೊಂಡಿರಬಹುದು. ಅವರ ವಿಶ್ವಾಸಾವಲಂಬಿಗಳಾಗಿರಬಹುದು. ಏಕೆಂದರೆ ಈ ಓದುಗರು, ಜೆಫರ್ಸನ್ ಆಗಲೀ, ನೇಪೋಲಿಯನ್ನಾಗಲೀ ಏನೆಲ್ಲ ಮಾಡಿರಬಹುದೆಂಬುದನ್ನು ಊಹಿಸುವುದಿಲ್ಲ, ಅಥವಾ ಈ ಮಹನೀಯರ ಕೃತ್ಯಗಳನ್ನು ತಾವು ಬೇರೊಂದು ರೀತಿಯಲ್ಲಿ ಮಾಡುವುದು ಸಾಧ್ಯವೆಂದೂ ಊಹಿಸುವುದಿಲ್ಲ. ಇಲ್ಲಿ ಓದುಗರು ತಜ್ಞರ ಮಾರ್ಗದರ್ಶನದಿಂದ ತೃಪ್ತರು. ಆದರೆ ಜಾನ್ ಎಫ್ ಕೆನಡಿ ಅಥವಾ ಚಾರ್ಲ್ಸ್ ಡಿ ಗಾಲೆಯ ಜೀವನ ಚರಿತ್ರಕಾರರು

ಇಷ್ಟು ಅದೃಷ್ಟವಂತರಲ್ಲ. ಕೆಲವು ಸಮರ್ಥ, ಸುಪ್ತ ಶಕ್ತಿಯುಳ್ಳ ಓದುಗರಿಗೆ ಈ ವೇಳೆಗಾಗಲೇ ಇವರುಗಳ 'ಸತ್ಯ' ಏನೆಂಬುದು ಬಹುಶಃ ಗೊತ್ತಿರಲಿಕ್ಕೆ ಸಾಧ್ಯವಿದೆ. ಹೀಗಾಗಿ ಇಂಥ ಓದುಗರು ಈ ಸತ್ಯದ ಮತ್ತೊಂದು ಕಥನ, ವ್ಯಾಖ್ಯಾನ ಅಥವಾ ಅವತರಣಿಕೆಯನ್ನು ಕೇಳಿ ತಿಳಿಯಲು ಸಿದ್ಧವಿರುವುದಿಲ್ಲ ಅಥವಾ ಅಂಥ ಮನಸ್ಸು ಅವರಿಗಿರುವುದಿಲ್ಲ. ಜೀವನ ಚರಿತ್ರೆಕಾರರು ಹೇರಳವಾಗಿ ಅಡಿಟಿಪ್ಪಣಿಗಳನ್ನು ಕೊಟ್ಟು ತಮ್ಮ ಕಥನವನ್ನು-ವ್ಯಾಖ್ಯಾನವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದರೂ ಇಂದಿನ ಓದುಗರು ಇದನ್ನು ಒಪ್ಪುವುದಿಲ್ಲ.

ಹೀಗೆ, ಇತಿಹಾಸಕಾರರು, ವಾಚಕರಿಂದ ಸವಾಲುಗಳನ್ನು ಎದುರಿಸಬೇಕಾಗಿದೆ. ಆದರೆ ಇವತ್ತಿನ ಇತಿಹಾಸಕಾರರ ವಿಮುಖದೃಷ್ಟಿಯ ಸಹೋದ್ಯೋಗಿಗಳು ಇಂಥ ಸವಾಲುಗಳಿಂದ ತಪ್ಪಿಸಿಕೊಳ್ಳಲು ಇಚ್ಛಿಸುತ್ತಾರೆ. ಇದಲ್ಲದೆ, ಇನ್ನೊಂದು ಸವಾಲೂ ಇದೆ. ಇದು ಬಹುಮಟ್ಟಿಗೆ ಮಾನ್ಯ ಮಾಡಲಾದ ಸವಾಲು. ಇತಿಹಾಸಕಾರನೂ ಒಬ್ಬ ಪ್ರಜೆ ಎನ್ನುವುದೇ ಈ ಸವಾಲು. ವಿಯಟ್ನಾಂ ಯುದ್ಧದ ಬಗ್ಗೆ ಬರೆಯಲು ಇಚ್ಛಿಸುವ ವಿದ್ವಾಂಸ ಈ ವೇಳೆಗಾಗಲೇ ಈ ವಿಷಯ ಕುರಿತ ಪ್ರಬಲವಾದ ಅಭಿಪ್ರಾಯಗಳನ್ನು ಹೊಂದಿರಲಿಕ್ಕೆ ಸಾಕು. ಅಮೆರಿಕದ ಯಾವವೀ ಕಲಹ ಕುರಿತು ಬರೆಯಲಿಚ್ಛಿಸುವ ವಿದ್ವಾಂಸನಿಗೆ ಅಂಥ ಗಾಢವಾದ ಅಭಿಪ್ರಾಯಗಳೇನೂ ಇರಲಿಕ್ಕಿಲ್ಲ. ಹಾಗೆಯೇ, ಕ್ರಾಂತಿ ಸಮರದ ಬಗ್ಗೆ ಬರಯಲಿಚ್ಛಿಸುವವನಿಗೆ ಇನ್ನೂ ದುರ್ಬಲವಾದ ಅಭಿಪ್ರಾಯಗಳಿರಲಿಕ್ಕೆ ಸಾಕು. ಏಕೆಂದರೆ, ಇತಿಹಾಸಕಾರರಾಗಲೀ, ಪ್ರಜೆಗಳಾಗಲೀ ವರ್ತಮಾನಕ್ಕೆ ನಿಕಟವಾದಂತೆ ಹೆಚ್ಚು ವಿವೇಚನಾಯುಕ್ತರಾಗುತ್ತಾರೆ.

ಈ ಗ್ರಂಥರಚನೆ ಕಾಲದಲ್ಲಿ, ಸರ್ವದಾ ಮೈಟ್‌ಲ್ಯಾಂಡ್‌ನ ಸೂಕ್ತಿ ನನ್ನೆಮರಿಗಿದೆ. ಖಚಿತತೆಗಿಂತ ಕುತೂಹಲವೇ ನನ್ನನ್ನು ನಡೆಸಿಕೊಂಡು ಹೋಗಿದೆ, ಈ ಪ್ರಯತ್ನದಲ್ಲಿ ತೀರ್ಪು-ತೀರ್ಮಾನಗಳನ್ನು ಕೊಡುವುದಕ್ಕಿಂತ ಅರ್ಥಮಾಡಿಕೊಳ್ಳುವ ಹಂಬಲವೇ ಹೆಚ್ಚಾಗಿದೆ. ಪುನರಾವಲೋಕನ ಅಧ್ಯಯನಗಳಿಗಿಂತ ಮೂಲ ವಿಷಯಗಳತ್ತ ಹೆಚ್ಚು ಗಮನ ಹರಿಸಿದ್ದೇನೆ. ಹೀಗೆ, ಅರ್ಥೈಸುವಾಗ, 1957ರಲ್ಲಿ ಏನೆಲ್ಲ ಇತ್ತು, ಆ ಕಾಲದ ಬಗ್ಗೆ ಏನೆಲ್ಲ ಗೊತ್ತು ಎಂಬುದಕ್ಕೆ ಹೆಚ್ಚು ಮಹತ್ವ-ಪ್ರಾಮುಖ್ಯ ನೀಡಿದ್ದೇನೆ. ಹೊರತಾಗಿ, 1957ರ ಬಗ್ಗೆ 2007 ಏನನ್ನುತ್ತದೆ ಎಂಬುದಕ್ಕಲ್ಲ.

ಈ ಗ್ರಂಥ, ಏನಿದ್ದರೂ, ಮಾನವಕುಲದ ಆರನೇ ಒಂದು ಭಾಗದ ಆಧುನಿಕ ಇತಿಹಾಸವನ್ನು ನಿರೂಪಿಸುವ ವಿನಮ್ರ ಯತ್ನವಷ್ಟೆ. ಈ ಗ್ರಂಥ ಸ್ವತಂತ್ರ ಭಾರತದ ಮುಖ್ಯ ವ್ಯಕ್ತಿಗಳು, ಮುಖ್ಯ ಘಟನೆಗಳು, ಮುಖ್ಯ ವಿಷಯಗಳು, ಮುಖ್ಯ ವಿವಾದಗಳು ಇವೆಲ್ಲವನ್ನೂ ಸಂಶ್ಲೇಷಿಸುವ, ವಿಶ್ಲೇಷಿಸುವ ಒಂದು ಮಾಹಿತಿ ಕೋಶವಷ್ಟೇ. ಆದರೆ ಕಥಾನಕದ ಶೈಲಿ ಮಾತ್ರ ಎರಡು ಪ್ರಮುಖ ಆಕಾಂಕ್ಷೆಗಳಿಂದ ಪ್ರೇರಿತವಾಗಿದೆ. ಒಂದು: ಭಾರತದ ರಾಜಕೀಯ ಹಾಗೂ ಸಾಮಾಜಿಕ ವೈವಿಧ್ಯ ವಿಭಿನ್ನತೆಗಳನ್ನು ಗೌರವಿಸುವುದು ಹಾಗೂ ಎರಡನೆಯದಾಗಿ ಇಲ್ಲಿಯವರೆಗೆ ವಿದ್ವಾಂಸರು ಹಾಗೂ ಸಾಮಾನ್ಯ ಪ್ರಜೆಗಳನ್ನು ಕಾಡುತ್ತಿರುವ ಒಗಟೊಂದನ್ನು ಬಿಡಿಸುವ ಪ್ರಯತ್ನ. ವಿದೇಶೀಯರು ಸ್ವದೇಶಿಯರು ಇಬ್ಬರನ್ನೂ ಕಾಡುತ್ತಿರುವ ಈ ಒಗಟೆಂದರೆ: ಭಾರತ ಎನ್ನುವುದು ಏಕಾದರೂ ಅಸ್ತಿತ್ವದಲ್ಲಿದೆ?

ಭಾಗ 1

ತುಣುಕುಗಳ ಸಂಚಯನ

1

ಸ್ವಾತಂತ್ರ್ಯ ಮತ್ತು ಪಿತೃಹತ್ಯೆ

ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಅದೃಶ್ಯವಾಗುವುದು ಈಗಷ್ಟೆ ಅಲ್ಲ ಮುಂದೆಯೂ ದೀರ್ಘಕಾಲದವರೆಗೆ ಅದು ಅಚಿಂತ್ಯವಾದದ್ದು, ಕಲ್ಪನಾತೀತವಾದದ್ದು. ಅದರ ಜಾಗಕ್ಕೆ ಒಂದು ದೇಶೀಯ ಸರ್ಕಾರ ಅಥವಾ ಸರ್ಕಾರಗಳು ಬರುತ್ತವೆ ಎನ್ನುವುದಂತೂ ಕೆಟ್ಟ ಕನಸುಗಳಲ್ಲೇ ಅತಿ ಕೆಟ್ಟ ಕನಸು...ಬ್ರಿಟಿಷ್ ಕೊನೆಯ ಸೈನಿಕ ಮುಂಬಯಿ ಅಥವಾ ಕರಾಚಿಯಿಂದ ನಿರ್ಗಮಿಸಿದ ಮರುಕ್ಷಣದಲ್ಲೇ ಭಾರತ ಪರಸ್ಪರ ವೈರತ್ವ ಹೊಂದಿರುವ ಜನಾಂಗೀಯ ಹಾಗೂ ಧಾರ್ಮಿಕ ಶಕ್ತಿಗಳ ರಣರಂಗವಾಗುತ್ತದೆ...(ಹಾಗೂ) ಗ್ರೇಟ್ ಬ್ರಿಟನ್ ಕ್ರಮೇಣವಾಗಿ ಭಾರತದಲ್ಲಿ ಖಚಿತವಾಗಿ ನೆಲೆಯೂರಿಸಿದ ಶಾಂತಿಯುತ, ಪ್ರಗತಿಶೀಲ ನಾಗರಿಕತೆ ಒಂದು ರಾತ್ರಿ ಉಡುಗಿ ಹೋಗುತ್ತದೆ.

–ಜೆ.ಇ. ವೆಲ್ಡನ್, ಕಲ್ಕತ್ತೆಯ ಮಾಜಿ ಬಿಷಪ್, 1915.

ಬ್ರಿಟಿಷ್ ಸರ್ಕಾರಗಳು 1900ರಲ್ಲಿ ನೀಡಲು ಸಿದ್ಧವಿದ್ದು 1900ರಲ್ಲಿ ನಿರಾಕರಿಸಿದರೋ ಅದನ್ನು 1900ರಲ್ಲಿ ಕೊಟ್ಟಿದ್ದಿದ್ದರೆ ಅಥವಾ 1920ರಲ್ಲಿ ನೀಡಲು ಸಿದ್ಧವಿದ್ದು 1920ರಲ್ಲಿ ನಿರಾಕರಿಸಿದರೋ ಅದನ್ನು 1940ರಲ್ಲಿ ಕೊಟ್ಟಿದ್ದಿದ್ದರೆ ಅಥವಾ 1940ರಲ್ಲಿ ನಿರಾಕರಿಸಿದ್ದನ್ನು 1940ರಲ್ಲೇ ಕೊಟ್ಟಿದ್ದಿದ್ದರೆ ಆದರೆ 1940ರಲ್ಲಿ ನಿರಾಕರಿಸಿದ್ದನ್ನು 1947ರಲ್ಲಿ ಕೊಟ್ಟರು–ಆಗ ಹತ್ತರಲ್ಲಿ ಒಂಬತ್ತು ಭಾಗ ದುಃಖ, ಸಂಕಟ, ಯಾತನೆ, ದ್ವೇಷ ಮತ್ತು ಹಿಂಸಾಚಾರಗಳನ್ನು, ಬಂಧನಗಳನ್ನು, ಭಯೋತ್ಪಾದನೆಯನ್ನು, ಕೊಲೆಗಳನ್ನು, ಛಡಿಏಟುಗಳನ್ನು, ಗುಂಡೇಟುಗಳನ್ನು, ಜನಾಂಗೀಯ ಕಗ್ಗೊಲೆಗಳನ್ನು ತಪ್ಪಿಸಬಹುದಿತ್ತು. ಅಧಿಕಾರ ಹಸ್ತಾಂತರ ಶಾಂತಿಯುತವಾಗಿ ನಡೆಯುತ್ತಿತ್ತು ಹಾಗೂ ವಿಭಜನೆಯಿಲ್ಲದೆಯೇ ಹಸ್ತಾಂತರ ಸಾಧ್ಯವಾಗುತ್ತಿತ್ತು.

–ಲಿಯೋನಾರ್ಡ್ ವೂಲ್ಫ್, 1967

I

1947ರ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂತು. ಆದರೆ ದೇಶಭಕ್ತ ಭಾರತೀಯರು ಇದಕ್ಕೂ ಹದಿನೇಳು ವರ್ಷ ಮುಂಚೆಯೇ ಪ್ರಥಮ ಸ್ವಾತಂತ್ರ್ಯ ದಿನವನ್ನು ಆಚರಿಸಿದ್ದರು. 1930ರ ಜನವರಿ ಮೊದಲ ವಾರದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್, ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯವನ್ನು ಬೆಂಬಲಿಸಿ ಆ ತಿಂಗಳ ಕೊನೆಯ

ಭಾನುವಾರ ದೇಶದಾದ್ಯಂತ ಪ್ರದರ್ಶನಗಳನ್ನು ನಡೆಸಬೇಕೆಂದು ಗೊತ್ತು ಪಡಿಸುವ ಠರಾವನ್ನು ಅಂಗೀಕರಿಸಿತು. ಇದರಿಂದಾಗಿ ರಾಷ್ಟ್ರೀಯ ಆಶೋತ್ತರಗಳನ್ನು ಉದ್ದೀಪನಗೊಳಿಸಿದಂತಾಗುತ್ತದೆ, ಬ್ರಿಟಿಷರಲ್ಲೂ ಅಧಿಕಾರ ತ್ಯಾಗದ ಬಗ್ಗೆ ಗಂಭೀರವಾಗಿ ಚಿಂತಿಸಲು ಒತ್ತಡ ಹೇರಿದಂತಾಗುತ್ತದೆ ಎಂದು ಭಾವಿಸಲಾಗಿತ್ತು. ತಮ್ಮ 'ಯಂಗ್ ಇಂಡಿಯಾ' ನಿಯತಕಾಲಿಕದಲ್ಲಿ ಪ್ರಕಟಿಸಿದ ಪ್ರಬಂಧವೊಂದರಲ್ಲಿ ಗಾಂಧೀಜಿ ಹೀಗೆ ಅಭಿಪ್ರಾಯಪಟ್ಟಿದ್ದರು: ಮಹಾನ್ ನಾಯಕರ ಅಂಬೋಣವೆಂದರೆ, 'ಇಡಿಯಾಗಿ ಗ್ರಾಮಗಳು, ಹಾಗೂ ಇಡಿಯಾಗಿ ನಗರಗಳು ಸ್ವಾತಂತ್ರ್ಯ ಘೋಷಣೆ ಮಾಡಿದಲ್ಲಿ...ಎಲ್ಲ ಕಡೆಗಳಲ್ಲೂ ಏಕಕಾಲದಲ್ಲಿ ಸಭೆಗಳು ನಡೆದಲ್ಲಿ ಅದರಿಂದ ಒಳ್ಳೆಯದಾಗುವುದು, ಅದು ಒಳಿತು'.

ಸಭೆಯ ವೇಳೆಯನ್ನು ತಮಟೆ ಬಾರಿಸಿ ಸಾರುವ ಮೂಲಕವೇ ಜಾಹೀರುಗೊಳಿಸಬೇಕೆಂದು ಗಾಂಧೀಜಿ ಸಲಹೆಮಾಡಿದ್ದರು. ಸಭೆಯ ಕಾರ್ಯಕ್ರಮ ರಾಷ್ಟ್ರ ಧ್ವಜಾರೋಹಣದೊಂದಿಗೆ ಆರಂಭವಾಗಬೇಕು. ಹಾಗೂ ಆಚರಣೆಯ ಭಾಗವಾಗಿ ದಿನವಿಡೀ ನೂಲುವುದು, ಅಥವಾ ಅಸ್ಪೃಶ್ಯರ ಸೇವೆ, ಅಥವಾ ಹಿಂದೂ ಮುಸ್ಲಿಮರ ಪುನರೈಕ್ಯ, ಅಥವಾ ಪಾನನಿಷೇಧ ಕೆಲಸ ಕಾರ್ಯಗಳಲ್ಲಿ ತೊಡಗಿರಬೇಕು. ಇದೆಲ್ಲವೂ ಒಟ್ಟಿಗೇ ದಿನಪೂರ್ತಿ ನಡೆದರೂ ಸರಿ, ಅದೇನೂ ಅಸಾಧ್ಯವಾದುದಲ್ಲ. ಇತರೆ ಎಲ್ಲ ಜನರಂತೆ ಭಾರತೀಯರಿಗೂ ಸ್ವಾತಂತ್ರ್ಯ ಹೊಂದುವುದು ಪರಭಾರೆ ಮಾಡಲಾಗದ ಹಕ್ಕು. ಹಾಗೂ ಯಾವುದೇ ಸರ್ಕಾರ ಜನತೆಗೆ ಈ ಹಕ್ಕುಗಳನ್ನು ನಿರಾಕರಿಸಿದಲ್ಲಿ ಮತ್ತು ಜನರನ್ನು ದಮನಗೊಳಿಸಿದಲ್ಲಿ, ಜನತೆಗೆ ಇಂಥ ಸರ್ಕಾರವನ್ನು ಬದಲಾಯಿಸುವ ಅಥವಾ ತೆಗೆದುಹಾಕುವ ಮತ್ತೊಂದು ಹಕ್ಕು ಪ್ರಾಪ್ತವಾಗುತ್ತದೆ ಎಂದು ಸಭೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವವರು ಪ್ರತಿಜ್ಞೆ ಮಾಡಬೇಕು.

1930ರ ಜನವರಿಯ ಕೊನೆಯ ಭಾನುವಾರ ಸ್ವಾತಂತ್ರ್ಯ ದಿನವನ್ನು ಆಚರಿಸಬೇಕೆಂದು ಗೊತ್ತುಪಡಿಸುವ ಠರಾವನ್ನು ಲಾಹೋರ್ ನಗರದಲ್ಲಿ ನಡೆದ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನದಲ್ಲಿ ಪಾಸು ಮಾಡಲಾಯಿತು. ಇಲ್ಲೇ ಜವಹರಲಾಲ್ ನೆಹರೂ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಗೊಂಡದ್ದು. ಇದು ಭಾರತ ರಾಷ್ಟ್ರೀಯ ಹೋರಾಟದಲ್ಲಿ ಅವರ ಪ್ರವರ್ಧಮಾನ ಸ್ಥಾನಮಾನದ ದೃಢೀಕರಣವೇ ಆಗಿತ್ತು. 1889ರಲ್ಲಿ, ಗಾಂಧೀಜಿ ಜನನದ ಇಪ್ಪತ್ತು ವರ್ಷಗಳ ನಂತರ ಹುಟ್ಟಿದ ನೆಹರೂ ಹ್ಯಾರೋ ಮತ್ತು ಕೇಂಬ್ರಿಜ್‌ನ ಫಲಿತವಾಗಿದ್ದು ಮಹಾತ್ಮರ ನಿಕಟ ಪೋಷಿತರು. ಅವರು ತೀಕ್ಷ್ಣಮತಿಯಾಗಿದ್ದು ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು. ವಿದೇಶಿ ವಿದ್ಯಮಾನಗಳ ತಿಳುವಳಿಕೆ ಹೊಂದಿದ್ದು ಯುವಜನತೆಗೆ ಒಂದು ವಿಶೇಷ ಆಕರ್ಷಣೆಯಾಗಿದ್ದರು.

1930ರ ಜನವರಿ 26ರಂದು ಸ್ವಾತಂತ್ರ್ಯ ದಿನ ಹೇಗೆ ಬಂತೆಂಬುದನ್ನು ನೆಹರೂ ತಮ್ಮ ಆತ್ಮ ಚರಿತ್ರೆಯಲ್ಲಿ ನೆನಪಿಸಿಕೊಂಡಿದ್ದಾರೆ. ಅದು ಸಳಮಿಂಚೊಂದರಲ್ಲಿ ಇಡೀ ರಾಷ್ಟ್ರದ ಉತ್ಸಾಹಿ ಮನಃಸ್ಥಿತಿಯನ್ನು ನಮ್ಮ ಮುಂದೆ ತೆರೆದಿಟ್ಟಿತೆಂದು ಬರೆದಿದ್ದಾರೆ. ಎಲ್ಲೆಲ್ಲೂ ಸೇರಿದ್ದ

ಬೃಹತ್ ಸಮಾವೇಶ, ಶಾಂತಿಯುತವಾಗಿ, ಶ್ರೀಮದ್ಗಾಂಭೀರ್ಯದಿಂದ, ಯಾವುದೆ ಭಾಷಣ, ಒತ್ತಾಯ ಮನವಿಗಳಿಲ್ಲದೆ ಪ್ರತಿಜ್ಞೆ ಕೈಗೊಂಡಿದ್ದು ತುಂಬ ಪ್ರಭಾವಕಾರಿಯಾಗಿತ್ತು, ಪರಿಣಾಮಕಾರಿಯಾಗಿತ್ತು. ಮರುದಿನ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ನೆಹರೂ, ಗಾಂಭೀರ್ಯದಿಂದ, ವ್ಯವಸ್ಥಿತವಾಗಿ ಪ್ರದರ್ಶನಗಳನ್ನು ನಡೆಸಿ, ಪ್ರತಿಜ್ಞೆ ಸ್ವೀಕರಿಸಿದ್ದಕ್ಕೆ ರಾಷ್ಟ್ರವನ್ನು ಅಭಿನಂದಿಸಿದರು. “ಸ್ವಾತಂತ್ರ್ಯಕ್ಕೆ ಬದ್ಧತೆಯನ್ನು ಪ್ರದರ್ಶಿಸುವ ಉತ್ಸಾಹದಲ್ಲಿ ಪಟ್ಟಣಗಳು, ಹಳ್ಳಿಗಳು ಪೈಪೋಟಿಯಿಂದಿದ್ದಂತೆ ಕಂಡು ಬಂದಿತು. ಕಲ್ಕತ್ತ ಮತ್ತು ಮುಂಬಯಿಗಳಲ್ಲಿ ಬೃಹತ್ ಸಭೆಗಳನ್ನು ನಡೆಸಲಾಯಿತು. ಆದರೆ ಸಣ್ಣ ಪಟ್ಟಣಗಳಲ್ಲಿ ನಡೆದ ಸಭೆಗಳಲ್ಲೂ ಜನ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು.”

1930ರ ನಂತರ, ಪ್ರತಿವರ್ಷ ಕಾಂಗ್ರೆಸ್ ಮನೋಧರ್ಮದ ಭಾರತೀಯರು ಜನವರಿ 26ರಂದು ಸ್ವಾತಂತ್ರ್ಯದಿನ ಆಚರಿಸಿದರು. ಬ್ರಿಟಿಷರು ಅಖೈರಾಗಿ ಉಪಖಂಡ ತ್ಯಜಿಸಿಹೋದಾಗ, ಅವರು ಅಧಿಕಾರ ಹಸ್ತಾಂತರಿಸಲು 1947ರ ಆಗಸ್ಟ್ 15ರ ದಿನಾಂಕವನ್ನು ಆಯ್ಕೆ ಮಾಡಿಕೊಂಡರು. ಈ ತಾರೀಖಿನ್ನು ಆಯ್ಕೆ ಮಾಡಿದ್ದು ವೈಸರಾಯ್ ಲಾರ್ಡ್ ಮೌಂಟ್‌ಬ್ಯಾಟನ್. ಅದು, ಎರಡನೆಯ ಮಹಾಯುದ್ಧದಲ್ಲಿ ಜಪಾನಿಗಳು ಮಿತ್ರರಾಷ್ಟ್ರಗಳ ಪಡೆಗಳಿಗೆ ಶರಣಾಗತಿಯಾದುದರ ಎರಡನೇ ವಾರ್ಷಿಕ ದಿನವಾಗಿತ್ತು. ಇನ್ನು ಕೆಲವರು 1948ರ ಜನವರಿ 26ರಂದು ಅಧಿಕಾರ ಹಸ್ತಾಂತರವಾಗಬೇಕೆಂದು ಬಯಸಿದ್ದರು. ಆದರೆ ಮೌಂಟ್‌ಬ್ಯಾಟನ್ ಮತ್ತು ಅಧಿಕಾರ ಸ್ವೀಕಾರಕ್ಕೆ ಕಾಯುತ್ತಿದ್ದ ರಾಜಕಾರಣಿಗಳು ಅಧಿಕಾರ ಹಸ್ತಾಂತರವನ್ನು ವಿಳಂಬಗೊಳಿಸಲು ಒಪ್ಪಲಿಲ್ಲ.

ಹೀಗೆ, ರಾಷ್ಟ್ರೀಯ ಭಾವನೆಗಿಂತ, ಸಾಮ್ರಾಜ್ಯಶಾಹಿಯ ಹಮ್ಮು-ಪ್ರತಿಷ್ಠೆಗಳನ್ನು ಅನುರಣಿಸಿದ ದಿನ ಸ್ವಾತಂತ್ರ್ಯ ಕೊನೆಗೂ ಬಂತು. ಸ್ವತಂತ್ರ ಭಾರತದ ರಾಜಧಾನಿ ನವದೆಹಲಿಯಲ್ಲಿ ಮಧ್ಯರಾತ್ರಿಗೆ ಸ್ವಲ್ಪ ಮುಂಚೆ ವಿಧ್ಯುಕ್ತ ಆಚರಣೆಗಳೊಂದಿಗೆ, ಸಂಗತಿಗಳೊಂದಿಗೆ ಸ್ವಾತಂತ್ರ್ಯ ಬಂತು. ಆಗಸ್ಟ್ 15 ಮಂಗಳಕರ ದಿನವಲ್ಲವೆಂದು ಜ್ಯೋತಿಷಿಗಳು ಕಟ್ಟಳೆ ಮಾಡಿದ್ದರು. ಆದ್ದರಿಂದ 14ರಂದೇ ಸಂಭ್ರಮಾಚರಣೆಗಳನ್ನು ಆರಂಭಿಸಲು ನಿರ್ಧರಿಸಲಾಯಿತು; ಹೊಸ ಸಂವಿಧಾನ ರಚಿಸಲು ಭಾರತೀಯ ಪ್ರತಿನಿಧಿಗಳನ್ನೊಳಗೊಂಡಿದ್ದ ಸಂವಿಧಾನ ರಚನಾ ಸಭೆಯ ವಿಶೇಷ ಅಧಿವೇಶನವನ್ನು 14ರಂದೇ ನಡೆಸುವುದರೊಂದಿಗೆ ಸ್ವಾತಂತ್ರ್ಯೋತ್ಸವದ ಆಚರಣೆಗಳನ್ನು ಆರಂಭಿಸಲು ನಿರ್ಧರಿಸಲಾಯಿತು.

ಹಿಂದಿನ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಲೆಜಿಸ್ಲೆಟಿವ್ ಕೌನ್ಸಿಲ್ ಅಧಿವೇಶನ ನಡೆಯುತ್ತಿದ್ದ ಎತ್ತರದ ಗುಮ್ಮಟದ ಸಭಾಂಗಣದಲ್ಲಿ ಸಮಾರಂಭ ಏರ್ಪಡಿಸಲಾಗಿತ್ತು. ಉಜ್ವಲ ದೀಪಗಳಿಂದ ಬೆಳಗುತ್ತಿದ್ದ ಸಭಾಂಗಣ ಬಾವುಟಗಳಿಂದ ಅಲಂಕೃತಗೊಂಡಿತ್ತು. ಹಿಂದಿನ ವಾರ ಬ್ರಿಟಿಷ್ ವೈಸ್‌ರಾಯ್‌ಗಳ ಭಾವಚಿತ್ರಗಳಿದ್ದ ಫೋಟೋ ಫ್ರೇಮ್‌ಗಳಲ್ಲಿ ಬಾವುಟಗಳು ರಾರಾಜಿಸುತ್ತಿದ್ದವು. ರಾಷ್ಟ್ರಭಕ್ತಿಗೀತೆ ‘ವಂದೇ ಮಾತರಂ’ ಗಾಯನದೊಂದಿಗೆ ರಾತ್ರಿ 11 ಗಂಟೆಗೆ ಸಮಾರಂಭದ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ “ಭಾರತದ

ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾರತದೊಳಗೆ ಹಾಗೂ ಬೇರೆಡೆ ಪ್ರಾಣಾರ್ಪಣ ಮಾಡಿದವರಿಗೆ" ಎರಡು ನಿಮಿಷಗಳ ಮೌನಾಚರಣೆ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಭಾರತೀಯ ನಾರಿಯರ ಪರವಾಗಿ ರಾಷ್ಟ್ರಧ್ವಜವನ್ನು ಪ್ರದಾನ ಮಾಡುವುದರೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

ಸ್ತೋತ್ರಗೀತೆ ಮತ್ತು ರಾಷ್ಟ್ರಧ್ವಜ ಪ್ರದಾನಗಳ ಮಧ್ಯೆ ಭಾಷಣಗಳಾದವು. ಆ ರಾತ್ರಿ ಮೂವರು ಪ್ರಮುಖರು ಭಾಷಣ ಮಾಡಿದರು. ಒಬ್ಬರು, ಚೌಧುರಿ ಖಲೀಕ್ ಉಸ್ಮಾನ್. ಭಾರತದ ಮುಸ್ಲಿಮರ ಪ್ರತಿನಿಧಿಯಾಗಿ ಇವರನ್ನು ಆರಿಸಲಾಗಿತ್ತು. ಇವರು ಹೊಸದಾಗಿ ಸ್ವಾತಂತ್ರ್ಯಗೊಂಡ ಭಾರತ ದೇಶಕ್ಕೆ ಅಲ್ಪಸಂಖ್ಯಾತರ ನಿಷ್ಠೆಯನ್ನು ಯಥೋಚಿತವಾಗಿ ಘೋಷಿಸಿದರು. ಎರಡನೆಯವರು ತತ್ವಶಾಸ್ತ್ರಜ್ಞ ಡಾ. ಸರ್ವಪಳ್ಳಿ ರಾಧಾಕೃಷ್ಣನ್. ವಾಕ್‌ಶಕ್ತಿ, ಪ್ರಾವೀಣ್ಯತೆ ಹಾಗೂ ಪೂರ್ವ-ಪಶ್ಚಿಮಗಳನ್ನು ಹತ್ತಿರ ತರುವ ಗ್ರಂಥದ ಕರ್ತೃವಾದ್ದರಿಂದ ಇವರನ್ನು ಆಯ್ಕೆ ಮಾಡಲಾಗಿತ್ತು. ಡಚ್ಚರು ಇಂಡೋನೇಷ್ಯಾದಲ್ಲೇ ಉಳಿದಿದ್ದು, ಫ್ರೆಂಚರು ಇಂಡೋ ಚೀನಾದಿಂದ ಕಾಲ್ತೆಗೆಯಲು ನಿರಾಕರಿಸುತ್ತಿರುವ ಸಂದರ್ಭದಲ್ಲಿ, ಭಾರತ ತ್ಯಜಿಸುವುದನ್ನು ಆಯ್ಕೆ ಮಾಡಿಕೊಂಡ ಬ್ರಿಟನ್ನಿನ ರಾಜಕೀಯ ವ್ಯಾವಹಾರಿಕ ವಿವೇಕ ಮತ್ತು ಎದೆಗಾರಿಕೆಯನ್ನು ರಾಧಾಕೃಷ್ಣನ್ ಪ್ರಶಂಸಿಸಿದರು.

ಅಂದಿನ ಭಾಷಣಕಾರರಲ್ಲಿ ತಾರಾ ಆಕರ್ಷಣೆಯೆಂದರೆ ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ. ನೆಹರೂ ಆ ರಾತ್ರಿ ಭಾಷಣಕಾರರಲ್ಲಿ ಧ್ರುವತಾರೆಯಾಗಿದ್ದರು. ಅವರ ಭಾಷಣ ಭಾವತೀವ್ರತೆಯಿಂದಲೂ ವಾಗ್ಮಯ ಕಲೆಯಿಂದಲೂ ತುಂಬಿ ಶ್ರೀಮಂತವಾಗಿತ್ತು. ಆ ರಾತ್ರಿ ಅವರು ಆಡಿದ "ಮಧ್ಯರಾತ್ರಿಯ ಘಂಟಾನಾದದ ಈ ಮುಹೂರ್ತದಲ್ಲಿ, ಇಡೀ ವಿಶ್ವ ನಿದ್ರಿಸುತ್ತಿರುವಾಗ, ಭಾರತ ಜೀವಚೈತನ್ಯಕ್ಕೆ-ಸ್ವಾತಂತ್ರ್ಯಕ್ಕೆ ಕಣ್ತೆರೆಯುತ್ತಿದೆ." ಈ ಮಾತುಗಳು ಅಂದಿನಿಂದ ವ್ಯಾಪಕವಾಗಿ ಉಲ್ಲೇಖನಗೊಂಡವು. "ಈ ಮುಹೂರ್ತ ಇತಿಹಾಸದ ಅತ್ಯಪೂರ್ವ ಕ್ಷಣ, ನಾವು ಹಳೆಯದರಿಂದ ಹೊಸತಿಗೆ ಪದಾರ್ಪಣ ಮಾಡುತ್ತಿದ್ದೇವೆ, ರಾಷ್ಟ್ರಾತ್ಮ ಸುದೀರ್ಘಕಾಲ ತುಳಿತಕ್ಕೊಳಗಾಗಿದ್ದ ಯುಗಾಂತ್ಯಗೊಂಡು ವಾಕ್‌ಶಕ್ತಿ ಪಡೆಯುತ್ತಿರುವ ಮುಹೂರ್ತವಿದು" ಎಂದು ನೆಹರೂ ಹೇಳಿದ್ದರು.

ಇವು ಸ್ತಂಭಯುಕ್ತ ಕೌನ್ಸಿಲ್ ಭವನದೊಳಗೆ ಆಡಿದ ಮಾತುಗಳು. ಹೊರಗೆ, ಬೀದಿಗಳಲ್ಲಿ, ಅಮೆರಿಕದ ಪತ್ರಕರ್ತನೊಬ್ಬ ವರದಿ ಮಾಡಿದಂತೆ, "ಬೊಬ್ಬೆ ಮುಗಿಲು ಹರಿದುಬಿದ್ದಂತೆ ಶುರುವಾಗಿತ್ತು. ಬೀದಿಗಳು ಹುಯಿಲು ಮಾಳಗಳಾಗಿದ್ದವು...ಅವು ಹೊಸವರ್ಷದ ಮುನ್ನಾದಿನ ಟೈಮ್ಸ್ ಸ್ಕ್ವೇರ್‌ನಂತಿದ್ದವು. ಎಲ್ಲರಿಗಿಂತ ಮಿಗಿಲಾಗಿ ಜನಸಂದಣಿಗೆ ಬೇಕಾಗಿದ್ದುದು ನೆಹರೂ. ನೆಹರೂ ಪ್ರತ್ಯಕ್ಷವಾಗುವುದಕ್ಕೂ ಮೊದಲೇ ಮುನ್ನುಗ್ಗಿ ಬರುತ್ತಿದ್ದ ಸಾವಿರಾರು ಜನರ ಪ್ರವಾಹ ಅಸೆಂಬ್ಲಿ ಭವನದ ಬಾಗಿಲಿಗೆ ಹರಿದು ಬಂದಿತ್ತು. ಅಷ್ಟರಾಗಿ, ಸ್ಮರಣಕಾಣಿಕೆಯನ್ನು ಅರಸುತ್ತಾ ಹೊರಟಿದ್ದ ಪ್ರವಾಹ ಸಭಾಭವನವನ್ನು ಕೊಚ್ಚಿಹಾಕುವುದನ್ನು

ತಪ್ಪಿಸಲು ಬಾಗಿಲುಗಳನ್ನು ಮುಚ್ಚಲಾಯಿತು. ಸಂತೋಷವದನರಾಗಿದ್ದ ನೆಹರೂ ಬೇರೊಂದು ನಿರ್ಗಮನ ಮಾರ್ಗದಿಂದ ಪಾರಾದರು. ಸ್ವಲ್ಪ ಕಾಲಾನಂತರ ನಾವೆಲ್ಲರೂ ಹೊರಕ್ಕೆ ನಡೆದೆವು."

ಭಾರತದಲ್ಲಿ ಯಾವುದೇ ಒಂದು ಮಹತ್ವದ ಸಮಾರಂಭವೂ ಎಡವಟ್ಟು-ಅಚಾತುರ್ಯಗಳಿಲ್ಲದೆ ಮುಗಿಯುವುದಿಲ್ಲ. ಈ ಸಂದರ್ಭದಲ್ಲಿ ಆದ ಅಚಾತುರ್ಯ ಹೋಲಿಕೆಯಿಂದ ಸಣ್ಣದು. ಮಧ್ಯರಾತ್ರಿಯ ಅಧಿವೇಶನದ ನಂತರ ಜವಹರಲಾಲ್ ನೆಹರೂ ಅವರು ಗೌರ್ನರ್ ಜನರಲ್ ಅವರಿಗೆ ತಮ್ಮ ಸಂಪುಟದ ಸಚಿವರ ಪಟ್ಟಿ ಸಲ್ಲಿಸಲು ಧಾವಿಸಿದರು. ಅವರು ಗೌರ್ನರ್ ಜನರಲ್ ಅವರಿಗೆ ಖಾಲಿ ಲಕೋಟೆಯೊಂದನ್ನು ನೀಡಿದ್ದರು. ಆದರೆ ಪ್ರಮಾಣವಚನ ಸ್ವೀಕಾರದ ವೇಳೆಗೆ ಕಳೆದುಹೋಗಿದ್ದ ಕಾಗದದ ಚೂರು ಸಿಕ್ಕಿತ್ತು. ಪ್ರಧಾನಮಂತ್ರಿಯಲ್ಲದೆ, ಸಂಪುಟದಲ್ಲಿ ಹದಿಮೂರು ಮಂದಿ ಇತರೆ ಸಚಿವರುಗಳಿದ್ದರು. ಅವರಲ್ಲಿ ವಲ್ಲಭಭಾಯಿ ಪಟೇಲ್, ಮೌಲಾನ ಅಬ್ದುಲ್ ಕಲಾಂ ಅಜಾದ್‌ರಂಥ ರಾಷ್ಟ್ರೀಯ ಅತಿರಥ ಮಹಾರಥ ನಾಯಕರುಗಳಿದ್ದರು. ಅಲ್ಲದೆ ಯುವ ಜನಾಂಗದ ನಾಲ್ವರು ಕಾಂಗ್ರೆಸ್ ರಾಜಕಾರಣಿಗಳೂ ಸೇರಿದ್ದರು.

ಸಂಪುಟದ ಸಚಿವರುಗಳ ಹೆಸರುಗಳಲ್ಲಿ ತುಂಬ ಗಮನಾರ್ಹವಾದವು ಕಾಂಗ್ರೆಸ್ ಪಕ್ಷದವರದಾಗಿರಲಿಲ್ಲ. ಸಂಪುಟದಲ್ಲಿ ವಾಣಿಜ್ಯ ಪ್ರಪಂಚ ಹಾಗೂ ಸಿಖ್ಖರ ಪ್ರತಿನಿಧಿಗಳಿದ್ದರು. ಉಳಿದ ಮೂವರು ಜೀವನದುದ್ದಕ್ಕೂ ಕಾಂಗ್ರೆಸ್ ಪಕ್ಷವನ್ನು ವಿರೋಧಿಸುತ್ತಲೇ ಬಂದವರು. ಇವರು, ಭಾರತದ ಅತ್ಯುತ್ತಮ ವಿತ್ತೀಯ ಬುದ್ಧಿವಂತರೆನ್ನಿಸಿಕೊಂಡ ಮದ್ರಾಸಿನ ವಣಿಕ ಮಹಾಶಯರಾದ ಆರ್.ಕೆ. ಷಣ್ಮುಖಂ ಚೆಟ್ಟಿ, ನ್ಯಾಯಶಾಸ್ತ್ರದ ಮೇಧಾವಿಗಳೂ ಜಾತಿಯಿಂದ ಅಸ್ಪೃಶ್ಯರೂ ಆದ ಬಿ.ಆರ್. ಅಂಬೇಡ್ಕರ್ ಮತ್ತು ಹಿಂದೂ ಮಹಾಸಭಾಗೆ ಸೇರಿದ ಬಂಗಾಳದ ಪ್ರಮುಖ ರಾಜಕಾರಣಿ ಶ್ಯಾಮ್‌ಪ್ರಸಾದ್ ಮುಖರ್ಜಿ. ಕಾಂಗ್ರೆಸ್ಸಿಗರು ಬ್ರಿಟಿಷರ ಜೈಲುಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾಗ ಆಡಳಿತಗಾರರೊಂದಿಗೆ ಕೈಜೋಡಿಸಿದವರು ಇವರುಗಳು. ಆದರೆ ನೆಹರೂ ಮತ್ತು ಅವರ ಸಹೋದ್ಯೋಗಿಗಳು ಈಗ ಆ ಎಲ್ಲ ಭಿನ್ನಾಭಿಪ್ರಾಯಗಳನ್ನೂ ಬುದ್ಧಿವಂತಿಕೆಯಿಂದ ಪಕ್ಕಕ್ಕೆ ದೂಡಿದ್ದರು. 'ಸ್ವಾತಂತ್ರ್ಯ ಬಂದಿರುವುದು ಭಾರತಕ್ಕೆ, ಕಾಂಗ್ರೆಸ್ಸಿಗಲ್ಲ' ಎಂಬುದನ್ನು ನೆನಪಿಸುವ ಮೂಲಕ ಗಾಂಧೀಜಿಯವರು, ಪಕ್ಷಭೇದ ಮರೆತು ಸಮರ್ಥರನ್ನೊಳಗೊಂಡ ಸಂಪುಟವನ್ನು ರಚಿಸಬೇಕೆಂದು ಆಗ್ರಹಪಡಿಸಿದ್ದರು.

ಮೊದಲ ಮಂತ್ರಿ ಮಂಡಳ ರಾಜಕೀಯವಾಗಿಯಷ್ಟೇ ಅಲ್ಲದೆ, ಬೇರೆ ರೀತಿಯಲ್ಲೂ ವ್ಯಾಪಕ ಪ್ರಾತಿನಿಧ್ಯದಿಂದ ಕೂಡಿತ್ತು. ಮಂತ್ರಿ ಮಂಡಲದಲ್ಲಿ ಐದು ಪ್ರಮುಖ ಧರ್ಮಗಳವರಿದ್ದರು (ಸಾಕಷ್ಟು ಪ್ರಮಾಣದಲ್ಲಿ ನಿರೀಶ್ವರವಾದಿಗಳೂ ಇದ್ದರು) ಹಾಗೂ ಭಾರತದ ಎಲ್ಲ ಭಾಗಗಳವರೂ ಇದ್ದರು. ಇಬ್ಬರು ಅಸ್ಪೃಶ್ಯರಲ್ಲದೆ ಮಹಿಳಾ ಪ್ರತಿನಿಧಿಯೆಂಬಂತೆ ರಾಜಕುಮಾರಿ ಅಮೃತಕೌರ್ ಅವರೂ ಇದ್ದರು.

ಆಗಸ್ಟ್ 15ರ ಕಾರ್ಯಸೂಚಿಯ ಮೊದಲ ವಿಷಯ, ಗೌರ್ನರ್ ಜನರಲ್ ಆಗಿ ಲಾರ್ಡ್ ಮೌಂಟ್ ಬ್ಯಾಟನ್ ಅವರಿಂದ ಪ್ರಮಾಣವಚನ ಸ್ವೀಕಾರ. ಇವರು ಹಿಂದಿನ ರಾತ್ರಿಯವರೆಗೆ ಬ್ರಿಟಿಷರ ಕೊನೆಯ ವೈಸರಾಯ್ ಆಗಿದ್ದವರು. ಆ ದಿನ ಉಳಿದ ಕಾರ್ಯಕ್ರಮದ ಪಟ್ಟಿ ಹೀಗಿತ್ತು:

ಬೆಳಿಗ್ಗೆ	8.30-	ಸರ್ಕಾರಿ ಭವನದಲ್ಲಿ ಗೌರ್ನರ್ ಜನರಲ್ ಹಾಗೂ ಸಚಿವರಿಂದ ಪ್ರಮಾಣ ವಚನ ಸ್ವೀಕಾರ.
ಬೆಳಿಗ್ಗೆ	9.40-	ಸಂವಿಧಾನ ರಚನಾ ಸಭೆಗೆ ಸಚಿವರ ಮೆರವಣಿಗೆ
ಬೆಳಿಗ್ಗೆ	9.50-	ಸಂವಿಧಾನ ರಚನಾ ಸಭೆಗೆ ಗೌರ್ನರ್ ಜನರಲ್ ಆಗಮನ
ಬೆಳಿಗ್ಗೆ	9.55-	ಗೌರ್ನರ್ ಜನರಲ್ ಅವರಿಗೆ ರಾಜೋಚಿತ ಗೌರವ ವಂದನೆ.
ಬೆಳಿಗ್ಗೆ	10.30-	ಸಂವಿಧಾನ ರಚನಾ ಸಭೆಯಲ್ಲಿ ಧ್ವಜಾರೋಹಣ
ಬೆಳಿಗ್ಗೆ	10.35-	ಸರ್ಕಾರಿ ಭವನಕ್ಕೆ ಗೌರ್ನರ್ ಜನರಲ್ ನಿರ್ಗಮನ.
ಸಂಜೆ	6-	ಇಂಡಿಯಾ ಗೇಟ್‌ನಲ್ಲಿ ಧ್ವಜಾರೋಹಣ
ಸಂಜೆ	7-	ದೀಪೋತ್ಸವ
ಸಂಜೆ	7.45-	ಬಾಣ ಬಿರುಸುಗಳ ಪ್ರದರ್ಶನ
ಸಂಜೆ	8.45-	ಸರ್ಕಾರಿ ಭವನದಲ್ಲಿ ಅಧಿಕೃತ ಭೋಜನ ಕೂಟ
ರಾತ್ರಿ	10.15-	ಸರ್ಕಾರಿ ಭವನದಲ್ಲಿ ಉತ್ಸವ.

ನಿರ್ಗಮಿಸಿದ ಪ್ರಭುಗಳಂತೆ ಭಾರತೀಯರಿಗೂ ಅದ್ದೂರಿ-ಆಡಂಬರದ ಸಮಾರಂಭಗಳು ಪ್ರಿಯವಾಗಿರುವಂತೆ ತೋರುತ್ತದೆ. ದೆಹಲಿ ಉದ್ದಗಲ ಹಾಗೂ ಭಾರತದ ಇತರ ಭಾಗಗಳಲ್ಲಿ ಸರ್ಕಾರ ಹಾಗೂ ಪ್ರಜೆಗಳು ಸ್ವಾತಂತ್ರ್ಯಾಗಮನವನ್ನು ಹರ್ಷೋಲ್ಲಾಸಗಳಿಂದ ಆಚರಿಸಿದರು. ರಾಜಧಾನಿಯೊಂದರಲ್ಲೇ ಮುನ್ನೂರು ಧ್ವಜಾರೋಹಣ ಸಮಾರಂಭಗಳು ನಡೆದುದಾಗಿ ವರದಿಯಾಗಿದೆ. ರಾಷ್ಟ್ರದ ವಾಣಿಜ್ಯ ಕೇಂದ್ರವಾದ ಮುಂಬಯಿಯಲ್ಲಿ ನಗರದ ಮೇಯರ್ ಭವ್ಯ ತಾಜ್‌ಮಹಲ್ ಹೋಟೆಲಿನಲ್ಲಿ ಔತಣಕೂಟ ಏರ್ಪಡಿಸಿದ್ದರು. ಹಿಂದೂಗಳ ಪವಿತ್ರ ಯಾತ್ರಾಸ್ಥಳವಾದ ಕಾಶಿಯಲ್ಲಿ ದೇವಾಲಯವೊಂದರಲ್ಲಿ, ಗಮನಾರ್ಹವಾಗಿ ಮುಸ್ಲಿಮನೊಬ್ಬನಿಂದ ರಾಷ್ಟ್ರಧ್ವಜಾರೋಹಣ ನಡೆಯಿತು. ಈಶಾನ್ಯದ ಗಿರಿನಗರವಾದ ಶಿಲ್ಲಾಂಗ್‌ನಲ್ಲಿ, ಗೌರ್ನರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ನಾಲ್ವರು ಯುವಪ್ರತಿನಿಧಿಗಳು ಧ್ವಜಾರೋಹಣ ಮಾಡಿದ್ದರು. ಈ ನಾಲ್ವರಲ್ಲಿ ಇಬ್ಬರು ತರುಣಿಯರು ಇಬ್ಬರು ತರುಣರು ಇದ್ದದ್ದು "ಅದೇ ತಾನೆ ಹುಟ್ಟಿದ ಹೊಸಭಾರತದ ಧ್ವಜಾರೋಹಣ ತರುಣ ಭಾರತದ ಸೂಕ್ತ ಸಂಕೇತ"ವಾಗಿತ್ತು.

1930ರ ಜನವರಿ 26ರಂದು ಅದ್ಭುತವಾಗಿ ಆಚರಿಸಲಾದ ಮೊದಲ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ, ನೆಹರೂ ಹೇಳಿರುವಂತೆ, ಭಾಗವಹಿಸಿದವರು ಶಿಸ್ತುಗಾಂಭೀರ್ಯಗಳಿಂದ ಆಜ್ಞಾನುವರ್ತಿಗಳಾಗಿದ್ದರು. ಆದರೆ 1947ರಲ್ಲಿ, ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಬಂದಾಗ ಭಾವನೆಗಳ ಅಭಿವ್ಯಕ್ತಿ, ಪ್ರದರ್ಶನಗಳು ಅತ್ಯಂತ

ಸಹಜವಾಗಿದ್ದವು. ವಿದೇಶಿಯೊಬ್ಬರನ್ನು ಉಲ್ಲೇಖಿಸಿ ಹೇಳುವುದಾದರೆ, "ನಗರಗಳ ನಂತರ ನಗರಗಳಲ್ಲಿ ಉತ್ಸಾಹಭರಿತ ಜನಸಮುದಾಯ, ಅನೇಕ ವರ್ಷಗಳಿಂದ ಅದುಮಿಟ್ಟಿದ್ದ ಹತಾಶೆಗಳು ಕಟ್ಟೆಯೊಡೆದು ಬಂದಂತೆ ಮೋಜಿನಿಂದ, ಆಮೋದ-ಪ್ರಮೋದಗಳಿಂದ ಆಚರಿಸಿತು. ಗಿರಣಿ ಕಾರ್ಖಾನೆಗಳ ಕಾರ್ಮಿಕರ ಕೇರಿಗಳಿಂದ ಹಿಡಿದು ಶ್ರೀಮಂತರ ಸುವರ್ಣ ಮಹಲುಗಳ ವೈಭವೋಪೇತ ಪ್ರದೇಶಗಳವರೆಗೆ ವಿನೋದ-ವಿಲಾಸಗಳು, ಆಮೋದ ಪ್ರಮೋದಗಳು ಓಲಾಡುತ್ತ ನಡೆದವು. ಸಂತೋಷಭರಿತವಾದ ಸಾಂಕ್ರಾಮಿಕ ಸಂಭ್ರಮಾಚರಣೆಗಳು ದಶಕಗಳ ದುಗುಡ ದುಮ್ಮಾನಗಳನ್ನು, ಸಾಹೇಬರ ಹ್ಯಾಟುಗಳನ್ನು ಸಂಕೇತಿಸುತ್ತಿದ್ದ ಪ್ರತಿಯೊಂದರ ವಿರುದ್ಧದ ಪ್ರತಿಭಟನೆಗಳನ್ನು ಮರೆತಂತೆ ಅರಳುತ್ತಿದ್ದವು."

ಭಾರತದ ಅತಿ ಹೆಚ್ಚು ಜನಸಂಖ್ಯೆಯ ನಗರವಾದ ಕಲ್ಕತ್ತೆಯ ಘಟನೆಗಳು-ವಿದ್ಯಮಾನಗಳು ಜನರ ಮನಃಸ್ಥಿತಿಯ, ಅಂತರಂಗದ ಭಾವನೆಗಳ ವಿಶಿಷ್ಟ ಗುಣಲಕ್ಷಣಗಳನ್ನೇ ಬಿಂಬಿಸುತ್ತಿದ್ದವು. ಕಳೆದ ಹಲವಾರು ವರ್ಷಗಳಿಂದ ಜವಳಿ ಅಭಾವದ ಮುಷ್ಟಿಯಲ್ಲಿ ಸಿಕ್ಕಿ ನರಳುತ್ತಿದ್ದ ಈ ನಗರದಲ್ಲಿ ಅಭಾವದ ಕುರುಹುಗಳೆಲ್ಲ ಪವಾಡದಂತೆ ಕಣ್ಮರೆಯಾಗಿ "ಮನೆಗಳು ಮತ್ತು ಕಟ್ಟಡಗಳ ಮೇಲೆ ಸಾಲು ಸಾಲಾಗಿ ನಿಶಾನೆಗಳು ಹಾರಾಡಿದವು...ಕಾರುಗಳ ಮೇಲೆ, ಬೈಸಿಕಲ್ಲುಗಳ ಮೇಲೆ, ಮಕ್ಕಳು, ಹಾಲುಹಸುಳೆಗಳಲ್ಲಿ ಕೈಗಳಲ್ಲಿ ನಿಶಾನೆಗಳು ಹಾರಾಡಿದವು." ಏತನ್ಮಧ್ಯೆ, ಸರ್ಕಾರಿ ಭವನದಲ್ಲಿ ಹೊಸ ಭಾರತೀಯ ಗೌರ್ನರ್‌ನ ಪ್ರಮಾಣವಚನ ಸ್ವೀಕಾರ ನಡೆದಿತ್ತು. ನಿರ್ಗಮಿಸುತ್ತಿದ್ದ ಬ್ರಿಟಿಷ್ ಗೌರ್ನರ್‌ನ ಆಪ್ತ ಕಾರ್ಯದರ್ಶಿ ಈ ಎಲ್ಲ ನೋಟಗಳಿಂದ, ದೃಶ್ಯಗಳಿಂದ ಅಸಂತುಷ್ಟನಾದಂತಿದ್ದ. ಉಡುಪು ವಸ್ತ್ರಗಳ ದೃಷ್ಟಿಯಿಂದ, ಸೇರಿದ್ದ ಜನರ ವಿಧಾವಿಚಿತ್ರವಾದ ಕೂಟ ಘನತೆ ಗಾಂಭೀರ್ಯತೆಗಳಿಂದ ಕೂಡಿರಲಿಲ್ಲವೆಂಬುದು ಈತನ ದೂರಾಗಿತ್ತು. ಔತಣಕೂಟದಲ್ಲಿ ಔಪಚಾರಿಕವಾಗಿ ಧರಿಸುವ ಡಿನ್ನರ್ ಜಾಕೆಟ್‌ಗಳು ಎಲ್ಲೂ ಕಾಣಲಿಲ್ಲ. ಎಲ್ಲೆಲ್ಲೂ ಕಂಡದ್ದು ಕೌಪೀನಗಳು ಹಾಗೂ ಗಾಂಧಿ ಟೋಪಿಗಳು. "ಅರಮನೆಯ ತುಂಬ ಅನಧಿಕೃತ ವ್ಯಕ್ತಿಗಳೇ ತುಂಬಿದ್ದು, ಸಮಾರಂಭ ಬ್ರಿಟಿಷರು ಭಾರತವನ್ನು ತ್ಯಜಿಸಿದ ನಂತರ ಭವಿಷ್ಯದ ದಿನಗಳಲ್ಲಿ ಬರಲಿರುವುದರ ಮುನ್ಸೂಚನೆಯಂತಿತ್ತು." ಬಂಗಾಳದ ಪದಚ್ಯುತ ಗೌರ್ನರ್ ಸರ್ ಫ್ರೆಡ್ರಿಕ್ ಬುರ್ರೋಸ್ ಪ್ರಮಾಣ ವಚನ ಸಮಾರಂಭ ಏರ್ಪಾಟಾಗಿದ್ದ ಅರಮನೆಯಿಂದ ಹೊರಬರುವಾಗ ಬಿಳಿಯ ಗಾಂಧಿ ಟೋಪಿ ಧರಿಸಬೇಕಾಗಿ ಬಂದುದರಲ್ಲಿ ಜನರ ಉತ್ಸಾಹದ ಭರಾಟೆ ಅಧೋಗತಿಗಿಳಿದಿತ್ತು.

II

ದೆಹಲಿಯಲ್ಲಿ ಸಂವಿಧಾನ ರಚನಾಸಭೆಯ ಅಧ್ಯಕ್ಷರು ರಾಷ್ಟ್ರಪಿತ ಮೋಹನದಾಸ್ ಕರಮ್ ಚಂದ್ ಗಾಂಧಿಯವರನ್ನು ಆವಾಹಿಸಿ ಸಭೆಯನ್ನು ಆರಂಭಿಸಿದಾಗ ಸುದೀರ್ಘ ಕರತಾಡನವಾಯಿತು. ಹೊರಗಡೆ ಜಮಾಯಿಸಿದ್ದ ಜನರ ಗುಂಪು "ಮಹಾತ್ಮ ಗಾಂಧೀಕಿ ಜೈ" ಎಂದು ಜಯಘೋಷ ಮಾಡಿತು. ಆದಾಗ್ಯೂ ದೆಹಲಿಯ ಉತ್ಸವದಲ್ಲಿ, ಸಂಭ್ರಮದ

ಆಚರಣೆಗಳಲ್ಲಿ ಗಾಂಧೀಜಿ ಹಾಜರಿರಲಿಲ್ಲ. ಅಥವಾ ಅಲ್ಲಿ ಧ್ವಜಾರೋಹಣವನ್ನೂ ಮಾಡಲಿಲ್ಲ. ಅವರ ಅರಿವಿಗೆ ಬಾರದಂತೆ, ಅವರ ಅನುಮತಿ ಪಡೆಯದೆಯೇ ಸರ್ಕಾರಿ ಭವನದಲ್ಲಿ ಗಾಂಧಿ ಟೋಪಿಯ ಪ್ರದರ್ಶನ ಏರ್ಪಡಿಸಲಾಗಿತ್ತು. 14ರಂದು ಸಂಜೆ ಅವರನ್ನು ಭೇಟಿ ಮಾಡಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳು ಮರುದಿನದ ಸಮಾರಂಭಗಳು ಹೇಗಿರಬೇಕೆಂದು ಕೇಳಿದರು. "ಸುತ್ತ ಮುತ್ತ ಜನ ಹಸಿವಿನಿಂದ ಸಾಯುತ್ತಿದ್ದಾರೆ" ಎಂದು ನುಡಿದ ಗಾಂಧೀಜಿ ಪ್ರಶ್ನಿಸಿದರು: "ವಿಧ್ವಂಸನ, ವಿನಾಶಗಳ ಮಧ್ಯೆ ಸಂಭ್ರಮದ ಸಮಾರಂಭವನ್ನು ಆಚರಿಸಲಿಚ್ಛಿಸುವಿರಾ?"

ಗಾಂಧೀಜಿಯವರ ಮನಸ್ಸು ವಿಷಣ್ಣಭಾವದಿಂದ ತುಂಬಿತ್ತು. ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ವರದಿಗಾರರೊಬ್ಬರು ಸ್ವಾತಂತ್ರ್ಯ ದಿನದ ಸಂದೇಶ ಬಯಸಿದಾಗ "ತಮ್ಮ ಮನಸ್ಸು ಬತ್ತಿ ಹೋಗಿರುವುದಾಗಿ" ಅವರು ಉತ್ತರಿಸಿದರು. ಭಾರತದ ನೈಜ ಪ್ರತಿನಿಧಿ ಎಂದು ಜಗತ್ತು ಭಾವಿಸಿರುವ ಏಕೈಕ ವ್ಯಕ್ತಿಯಿಂದ ಸಂದೇಶವನ್ನು ದಾಖಲು ಮಾಡಿಕೊಳ್ಳಲು ತಮಗೆ ನೆರವಾಗುವಂತೆ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಕೇಳಿದಾಗ, ತಮಗೆ ಬದಲು ನೆಹರೂ ಅವರನ್ನು ಕೇಳುವಂತೆ ಗಾಂಧೀಜಿ ಅವರಿಗೆ ಹೇಳಿದರು. ಬಿ.ಬಿ.ಸಿ. ಇದರಿಂದ ಸಮಾಧಾನಗೊಳ್ಳಲಿಲ್ಲ. ಈ ಸಂದೇಶವನ್ನು ಹಲವಾರು ಭಾಷೆಗಳಿಗೆ ಅನುವಾದಿಸಿ ವಿಶ್ವದಾದ್ಯಂತ ಪ್ರಸಾರ ಮಾಡಲಾಗುವುದೆಂಬ ಪ್ರಲೋಭನೆಯೊಂದಿಗೆ ಬಿ.ಬಿ.ಸಿ. ತನ್ನ ಪ್ರತಿನಿಧಿಯನ್ನು ಮತ್ತೆ ಗಾಂಧೀಜಿಯವರ ಬಳಿಗೆ ಕಳುಹಿಸಿತು. ಗಾಂಧೀಜಿ ವಿಚಲಿತರಾಗಲಿಲ್ಲ. "ನನಗೆ ಇಂಗ್ಲಿಷ್ ಬರುತ್ತದೆ ಎನ್ನುವುದನ್ನು ಮರೆತುಬಿಡುವಂತೆ ಅವರಿಗೆ ತಿಳಿಸಿಬಿಡಿ" ಎಂದು ಬಿಟ್ಟರು.

ಇಪ್ಪತ್ನಾಲ್ಕು ಗಂಟೆಗಳ ಉಪವಾಸ ಸತ್ಯಾಗ್ರಹದೊಂದಿಗೆ ಗಾಂಧೀಜಿ 1947ರ ಆಗಸ್ಟ್ 15ಕ್ಕೆ ವಿಶೇಷ ಗುರುತೊಂದನ್ನು ನೀಡಿದರು; ವಿಶೇಷ ಅಂಕಿತವೊಂದನ್ನು ಛಾಪಿಸಿದರು. ಅವರು ಅಷ್ಟು ದೀರ್ಘಕಾಲ ಹೋರಾಟ ನಡೆಸಿ ಪಡೆದ ಸ್ವಾತಂತ್ರ್ಯಕ್ಕೆ ಸಮ್ಮತವಲ್ಲದ ಬೆಲೆಯನ್ನು ತೆರಬೇಕಾಗಿ ಬಂದಿತ್ತು. ಮನಸ್ಸು ಒಪ್ಪದ ಬೆಲೆಯನ್ನು ತೆತ್ತು ಸ್ವಾತಂತ್ರ್ಯವನ್ನು ಪಡೆದಾಗಿತ್ತು. ಸ್ವಾತಂತ್ರ್ಯವೆಂದರೆ ವಿಭಜನೆಯೂ ಆಗಿತ್ತು. ಕಳೆದ ಹನ್ನೆರಡು ತಿಂಗಳುಗಳು ಬಹುತೇಕ ಸತತವಾಗಿ ಹಿಂದು-ಮುಸ್ಲಿಮರ ನಡುವಣ ಗಲಭೆಗಳನ್ನು ಕಂಡಿದ್ದವು. 1946ರ ಆಗಸ್ಟ್ 16ರಂದು ಕಲ್ಕತ್ತೆಯಲ್ಲಿ ಹಿಂಸಾಚಾರ ಪ್ರಾರಂಭವಾಗಿ ಬಂಗಾಳದ ಗ್ರಾಮೀಣ ಪ್ರದೇಶಕ್ಕೂ ಹಬ್ಬಿತು. ಅಲ್ಲಿಂದ ಬಿಹಾರಿಗೆ, ಅಲ್ಲಿಂದ ಸಂಯುಕ್ತ ಪ್ರಾಂತ್ಯಕ್ಕೆ ಹಿಂಸಾಚಾರ ವ್ಯಾಪಿಸಿ ಆಖೈರಾಗಿ ಪಂಜಾಬ್ ಪ್ರಾಂತ್ಯವನ್ನು ಮುಟ್ಟಿತು. ಪಂಜಾಬಿನಲ್ಲಿ ಹಿಂಸಾಚಾರದ ಪ್ರಮಾಣ ಹಾಗೂ ಕೊಲೆಗಳ ಸಂಖ್ಯೆ ಅದಕ್ಕೆ ಪೂರ್ವದ ಭಯಾನಕ ಕರಾಳ ಕೃತ್ಯಗಳನ್ನು ಮೀರಿಸಿತ್ತು.

1946ರ ಆಗಸ್ಟ್-ಸೆಪ್ಟೆಂಬರ್ ಹಿಂಸಾಚಾರ ಮುಸ್ಲಿಂ ಲೀಗಿನ ಪ್ರಚೋದನೆಯಿಂದ ಭುಗಿಲೆದ್ದದ್ದು. ಪ್ರತ್ಯೇಕ ಪಾಕಿಸ್ತಾನ ರಾಷ್ಟ್ರ ಚಳವಳಿಗೆ ಆಜ್ಯ ಹೊಯ್ದ ಪಕ್ಷ ಮುಸ್ಲಿಂ ಲೀಗ್.

ಮುಹಮದ್ ಅಲೀ ಜಿನ್ನಾ ಮುಸ್ಲಿಂ ಲೀಗ್ ನಾಯಕರು. ತಟಸ್ಥ ಮನೋಭಾವದ, ನಿರ್ದಾಕ್ಷಿಣ್ಯ ಪ್ರವೃತ್ತಿಯ ಜಿನ್ನಾ ತೀಕ್ಷ್ಣಮತಿಯ ರಾಜಕೀಯ ತಂತ್ರಗಾರರಾಗಿದ್ದರು. ನೆಹರೂ ಮತ್ತು ಗಾಂಧಿಯಂತೆ ಅವರೂ ಇಂಗ್ಲೆಂಡಿನಲ್ಲಿ ತರಬೇತಿ ಪಡೆದ ವಕೀಲರಾಗಿದ್ದರು. ಇವರೆಲ್ಲರಂತೆ, ಒಂದು ಕಾಲದಲ್ಲಿ ಅವರೂ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯರಾಗಿದ್ದರು. ಕಾಂಗ್ರೆಸ್ ಹಿಂದೂ ನಾಯಕತ್ವದ ಪಕ್ಷ ಎಂಬ ಕಾರಣಕ್ಕಾಗಿ ಅವರು ಅದನ್ನು ತೊರೆದಿದ್ದರು. ಕಾಂಗ್ರೆಸ್, ಭಾರತದಲ್ಲಿನ ಅತಿದೊಡ್ಡ ಪ್ರಮಾಣದ ಅಲ್ಪ ಸಂಖ್ಯಾತರಾದ ಮುಸ್ಲಿಮರ ಹಿತಾಸಕ್ತಿಗಳ ನೈಜ ಪ್ರತಿನಿಧಿಯಲ್ಲ ಎಂಬುದು ಜಿನ್ನಾರ ವಾದವಾಗಿತ್ತು. ರಾಷ್ಟ್ರೀಯವಾದಿಗಳು ಪ್ರತಿಭಟಿಸಿದರೂ ಅವರು ತಮ್ಮ ಈ ವಾದ ಕೈಬಿಡಲಿಲ್ಲ.

1946ರ ಆಗಸ್ಟ್‌ನಲ್ಲಿ ಕಲ್ಕತ್ತೆಯಲ್ಲಿ ಗಲಭೆಗಳನ್ನು ಆರಂಭಿಸುವ ಮೂಲಕ ಎರಡು ಸಮುದಾಯಗಳನ್ನು ಮತ್ತಷ್ಟು ಧ್ರುವೀಕರಿಸಬಹುದೆಂದು ಜಿನ್ನಾ ಭಾವಿಸಿದ್ದರು. ಮುಸ್ಲಿಂ ಲೀಗ್ ಆಶಯವೂ ಇದೇ ಆಗಿತ್ತು. ಹೀಗೆ ಆಖೈರಾಗಿ ಭಾರತ ಬಿಟ್ಟು ಹೋಗುವಾಗ ಭಾರತವನ್ನು ವಿಭಜಿಸುವಂಥ ಒತ್ತಡವನ್ನು ಹೇರಲಾಯಿತು. ಬಿಹಾರದಲ್ಲಿ ಹಿಂದೂಗಳು ಅನಾಗರಿಕ ರೀತಿಯಲ್ಲಿ ಘೋರವಾಗಿ ಸೇಡು ತೀರಿಸಿಕೊಂಡರು. ಅವರ ಕೃತ್ಯಗಳಿಗೆ ಸ್ಥಳೀಯ ಕಾಂಗ್ರೆಸ್ ನಾಯಕರ ಬೆಂಬಲವಿತ್ತು. "ಭಾರತದ ರಾಷ್ಟ್ರೀಯ ಜೀವನದ ಹೆಚ್ಚು ಮಂದಿ, ಹೆಚ್ಚು ಶಕ್ತಿಶಾಲಿಯಾದವರು ಯಾರ ಅಧಿಕಾರವನ್ನು ತಿರಸ್ಕರಿಸುತ್ತಾರೋ ಅಂಥವರಿಗೆ, ಅಂಥ ಸರ್ಕಾರಕ್ಕೆ ಅಧಿಕಾರ ವರ್ಗಾಯಿಸುವುದಿಲ್ಲವೆಂದು" ಬ್ರಿಟಿಷರು ಈ ವೇಳೆಗಾಗಲೇ ಹೇಳಿಯಾಗಿತ್ತು. 1946-47ರ ರಕ್ತಪಾತ, ಮುಸ್ಲಿಮರು ಇಂಥ ಶಕ್ತಿಗಳೆಂಬುದನ್ನು ಸೂಚಿಸುವಂತಿತ್ತು. ಹಿಂದೂಗಳ ಪ್ರಾಬಲ್ಯದ ಕಾಂಗ್ರೆಸ್ ಸರ್ಕಾರದ ಅಧೀನದಲ್ಲಿ ಬಾಳ್ವೆಯನ್ನು ಮುಸ್ಲಿಮರು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ, ಅದಕ್ಕವರು ಸಿದ್ಧರಿಲ್ಲ ಎಂಬುದನ್ನು ಸೂಚಿಸುವಂತಿತ್ತು. "ಪ್ರತಿಯೊಂದು ಕೋಮುಗಲಭೆಯನ್ನೂ ಎರಡು ರಾಷ್ಟ್ರಗಳ ಪ್ರತಿಪಾದನೆಯ ಅಧಿಕ ಸಮರ್ಥನೆಯಂತೆ, ದೇಶದ ವಿಭಜನೆ ಅನಿವಾರ್ಯ ಎಂಬುದನ್ನು ಹೆಚ್ಚಿನ ಸಮರ್ಥನೆಯಂತೆ ಬಿಂಬಿಸಲಾಗುತ್ತಿತ್ತು. ಹೊಸದಾಗಿ ಕೋಮುಗಲಭೆಯಾದಾಗಲೆಲ್ಲ ಅದನ್ನು ರಾಷ್ಟ್ರವಿಭಜನೆ ಪ್ರತಿಪಾದನೆಯ ಅನಿವಾರ್ಯತೆಯನ್ನು ಸಮರ್ಥಿಸುವ ಮತ್ತೊಂದು ನಿದರ್ಶನವಾಗಿ, ದೃಷ್ಟಾಂತವಾಗಿ ಎತ್ತಿ ತೋರಿಸಲಾಗುತ್ತಿತ್ತು."

ಹಿಂಸಾಚಾರಕ್ಕೆ ಗಾಂಧಿ ಮೂಕಸಾಕ್ಷಿಯಾಗಿರಲಿಲ್ಲ, ಮೌನ ಪ್ರೇಕ್ಷಕರಾಗಿರಲಿಲ್ಲ. ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಹಿಂಸಾಚಾರ ಶುರುವಾದ ಸುದ್ದಿ ಬಂದ ಕೂಡಲೇ ಅವರು ತಮ್ಮೆಲ್ಲ ಕೆಲಸಗಳನ್ನೂ ಬದಿಗಿರಿಸಿ ಅಲ್ಲಿಗೆ ಧಾವಿಸಿದರು. ಎಪ್ಪತ್ತೇಳು ವರ್ಷದ ವೃದ್ಧ, ಗಲಭೆಗಳಿಂದ ಕಡು ಕಷ್ಟನಷ್ಟ ನೋವುಗಳನ್ನು ಹೆಚ್ಚಾಗಿ ಅನುಭವಿಸಿದ್ದ ಹಿಂದೂಗಳನ್ನು ಸಾಂತ್ವನಗೊಳಿಸುತ್ತ, ಕಲ್ಲುಮುಳ್ಳು ಕೆಸರು ತುಂಬಿದ ಪ್ರಯಾಸಕರ ಹಾದಿಗಳಲ್ಲಿ ನಡೆದಾಡಿದರು. ಏಳು ವಾರಗಳ ಪ್ರವಾಸದಲ್ಲಿ, ಅವರು ಬಹುಮಟ್ಟಿಗೆ ಬರಿಗಾಲಿನಲ್ಲಿ 116 ಮೈಲಿ ಸಂಚರಿಸಿದ್ದರು; ಒಂದುನೂರಕ್ಕೂ ಹೆಚ್ಚು ಗ್ರಾಮಸಭೆಗಳನ್ನುದ್ದೇಶಿಸಿ ಮಾತನಾಡಿದ್ದರು. ನಂತರ

ಅವರು ಬಿಹಾರಿಗೆ ಭೇಟಿಕೊಟ್ಟರು. ಬಿಹಾರದಲ್ಲಿ ಮುಸ್ಲಿಮರು ಹೆಚ್ಚು ಹಾನಿಗೊಳಗಾಗಿದ್ದರು, ಹೆಚ್ಚು ಯಾತನೆಯನ್ನುಂಡವರಾಗಿದ್ದರು. ಅಲ್ಲಿಂದ ದೆಹಲಿಗೆ ಹೋದರು. ಹತ್ಯಾಕಾಂಡದಲ್ಲಿ ಸರ್ವಸ್ವವನ್ನೂ ಕಳೆದುಕೊಂಡ ಹಿಂದೂಗಳು-ಸಿಖ್ ನಿರಾಶ್ರಿತರು ಪಂಜಾಬಿನಿಂದ ಪ್ರವಾಹದೋಪಾದಿಯಲ್ಲಿ ದೆಹಲಿಗೆ ಬರುತ್ತಿದ್ದರು. ಅವರು ಕ್ರೋಧತಪ್ತರಾಗಿದ್ದರು, ಸೇಡಿನ ಮನೋಭಾವ ಅವರಲ್ಲಿ ತುಂಬಿ ತುಳುಕುತ್ತಿತ್ತು. ಗಾಂಧೀಜಿ ಅದನ್ನು ನಿಗ್ರಹಿಸಲು, ತಡೆಯಲು ಪ್ರಯತ್ನಿಸಿದರು. ಇಂಥ ಸೇಡು-ಪ್ರತಿಕಾರಗಳು, ಭಾರತದಲ್ಲೇ ಉಳಿಯುವ ಮಾರ್ಗವನ್ನು ಆಯ್ಕೆ ಮಾಡಿಕೊಂಡ ಮುಸ್ಲಿಮರ ವಿರುದ್ಧ ಶಿಕ್ಷಾರೂಪದ ಹಿಂಸಾಚಾರವಾಗಿ ಸ್ಫೋಟಗೊಳ್ಳಬಹುದೆಂಬ ಶಂಕೆ-ಭೀತಿಗಳು ಅವರಲ್ಲಿ ಮೂಡಿದ್ದವು.

ಸ್ವಾತಂತ್ರ್ಯ ಘೋಷಣೆಗೆ ಗೊತ್ತುಪಡಿಸಿದ್ದ ದಿನಕ್ಕೆ ಎರಡು ವಾರ ಮುಂಚಿತವಾಗಿ ಮಹಾತ್ಮ ದೆಹಲಿ ತ್ಯಜಿಸಿದ್ದರು. ಅವರು ಕಾಶ್ಮೀರದಲ್ಲಿ ನಾಲ್ಕು ದಿನ ಕಳೆದು ರೈಲಿನಲ್ಲಿ ಕಲ್ಕತ್ತೆಗೆ ತೆರಳಿದರು. ಕಲ್ಕತ್ತೆಯಲ್ಲಿ ಒಂದು ವರ್ಷದ ಹಿಂದೆ ಶುರುವಾದ ಗಲಭೆಗಳು ಇನ್ನೂ ನಿಂತಿರಲಿಲ್ಲ. 13ರಂದು ಮಧ್ಯಾಹ್ನ ಗಾಂಧೀಜಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಿದ್ದ ಬೆಲಿಯಾಘಾಟಿನ ಒಂದು ಪ್ರದೇಶದಲ್ಲಿ ವಾಸ್ತವ್ಯ ಹೂಡಿದರು. ಅದೊಂದು ಮುರುಕಲು, ಎಲ್ಲ ಕಡೆಯಿಂದಲೂ ಗುಂಪು ಕಾಣಿಸುವಂಥ ಭಗ್ನ ಕುಟೀರ. ಪ್ರಮುಖ ನಗರಿಯಾದ ಕಲ್ಕತ್ತೆಯಲ್ಲಿ ಮತ್ತೆ ಶಾಂತಿ ನೆಲೆಸುವಂತೆ ಮಾಡಲು ತಾವೇನಾದರೂ ಪ್ರಯತ್ನಿಸಲು ಸಾಧ್ಯವೇ ಎಂಬುದು ಅವರ ಮನಸ್ಸಿನಲ್ಲಿತ್ತು.

ಹದಿನೈದರಂದು ಉಪವಾಸ ಮಾಡಿ ಪ್ರಾರ್ಥನೆಯಲ್ಲಿ ದಿನ ಕಳೆಯಲು ಗಾಂಧೀಜಿ ನಿರ್ಧರಿಸಿದ್ದರು. ಕಲ್ಕತ್ತೆಯ ತೀವ್ರ ಗಲಭೆ ಪೀಡಿತ ಪ್ರದೇಶಗಳಲ್ಲಿ ನಂಬಲಸಾಧ್ಯವಾದಂಥ ಜನ ಸಂತೋಷದಿಂದ ಸಂಭ್ರಮಿಸುತ್ತಿರುವ, ಸೋದರ ಭಾವನೆ ತುಂಬಿರುವ ದೃಶ್ಯಗಳು ಕಂಡು ಬರುತ್ತಿವೆಯೆಂಬ ಸುದ್ದಿ (ವೃತ್ತಪತ್ರಿಕೆಯೊಂದರ ವರದಿಯ ಉಲ್ಲೇಖ) ಅವರನ್ನು ತಲುಪಿತ್ತು. “ಹಿಂದೂಗಳು ತಳಿರು ತೋರಣಗಳಿಂದ ತೆಂಗು ಬಾಳೆಗಳಿಂದ, ಧ್ವಜಗಳಿಂದ ಬೀದಿಗಳನ್ನು ಸಿಂಗರಿಸಿ, ವಿಜಯೋತ್ಸವ ಮಂಟಪಗಳನ್ನು ಕಟ್ಟಿ ಸಂಭ್ರಮದಿಂದ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರೆ, ಮುಸ್ಲಿಮರೂ ಹಿಂದೆ ಬೀಳಲಿಲ್ಲ. ಮುಸ್ಲಿಮರು ತಮ್ಮ ಅಂಗಡಿ-ಮನೆಗಳನ್ನು ಸಿಂಗರಿಸಿ ಭಾರತದ ರಾಷ್ಟ್ರಧ್ವಜ ಹಾರಿಸಿ ಸ್ವಾತಂತ್ರ್ಯ ದಿನವನ್ನು ಹಿಗ್ಗಿನಿಂದ ಆಚರಿಸಿದರು. ಹಿಂದೂಗಳು ಮುಸ್ಲಿಮರು ತೆರೆದ ಕಾರುಗಳಲ್ಲಿ, ಲಾರಿಗಳಲ್ಲಿ ‘ಜೈಹಿಂದ್’ ಮೊದಲಾಗಿ ರಾಷ್ಟ್ರೀಯ ಘೋಷಣೆಗಳನ್ನು ಕೂಗುತ್ತ ಬೀದಿಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಬೀದಿ ಬೀದಿಗಳಲ್ಲಿ ಜಮಾಯಿಸಿದ್ದ ಮುಸ್ಲಿಂ ಮತ್ತು ಹಿಂದೂ ಸಮುದಾಯಗಳವರು ಈ ಜಯಘೋಷಗಳಿಗೆ ದನಿಗೂಡಿಸಿ ಸಂತಸದಿಂದ ಸ್ಪಂದಿಸಿದರು.”

ಸ್ವಯಂ ಸ್ಫೂರ್ತಿಯಿಂದ ಹಿಂದೂ-ಮುಸ್ಲಿಮರು ಒಂದುಗೂಡಿ ಸಂಭ್ರಮದಿಂದ ಸ್ವಾತಂತ್ರ್ಯೋತ್ಸವ ಆಚರಿಸಿದ್ದು ಗಾಂಧೀಜಿಯವರ ಮನಸ್ಸಿಗೆ ಉಲ್ಲಾಸ ತಂದಿತು. ಅವರು ಸ್ವಾತಂತ್ರ್ಯ ಸಂದೇಶ ನೀಡಲು ನಿರ್ಧರಿಸಿದರು. ಆದರೆ ಬಿ.ಬಿಸಿ. ಮೂಲಕವಲ್ಲ; ತಮ್ಮದೇ

ಆದ ಸಂವಹನ ಮಾಧ್ಯಮವಾದ ಪ್ರಾರ್ಥನಾ ಸಭೆಯಲ್ಲಿ ಸಂದೇಶವೊಂದನ್ನು ನೀಡಲು ನಿರ್ಧರಿಸಿದರು. ಬೆಲಿಯಾಘಾಟ್‌ನ ರಾಶ್‌ಬಾಗನ್ ಮೈದಾನದಲ್ಲಿ ಅಂದಿನ ಪ್ರಾರ್ಥನಾ ಸಭೆಯಲ್ಲಿ ಹತ್ತು ಸಾವಿರ ಮಂದಿ ಹಾಜರಿದ್ದರೆಂದು ಒಂದು ವರದಿ ತಿಳಿಸಿದರೆ ಮತ್ತೊಂದು ವರದಿ ಪ್ರಕಾರ ಹಾಜರಿದ್ದವರ ಸಂಖ್ಯೆ ಮೂರುಸಾವಿರ. ಅಂದು ವ್ಯಕ್ತಗೊಂಡ ಹಿಂದೂ ಮುಸ್ಲಿಂ ಭ್ರಾತೃತ್ವ ಭಾವನೆ ಕ್ಷಣಿಕ ಸ್ಫೂರ್ತಿಯದಲ್ಲ, ಹೃದಯಾಂತರಾಳದಿಂದ ಬಂದದ್ದು ಎಂದು ತಾವು ಭಾವಿಸುವುದಾಗಿ ಗಾಂಧೀಜಿ ನುಡಿದರು. ಉಭಯ ಸಮುದಾಯಗಳು "ಗಲಭೆಯ ಪಾತ್ರೆಯಿಂದ ವಿಷಪಾನ ಮಾಡಿದ್ದು ಈಗ ಒಂದುಗೂಡಿದ್ದಾರೆ, ಸ್ನೇಹದ ಅಮೃತವನ್ನು ಪಾನ ಮಾಡುತ್ತಿದ್ದಾರೆ. ಈ ಅಮೃತ ಹೆಚ್ಚು ಮಧುರವಿದ್ದೀತು. ಯಾರಿಗೆ ಗೊತ್ತು, ಕಲ್ಕತ್ತೆ ನಗರ ಕೋಮು ಸೋಂಕಿನಿಂದ ಸಂಪೂರ್ಣ ಮುಕ್ತಗೊಳ್ಳಬಹುದು."

ಆಗಸ್ಟ್ 15ರಂದು ಕಲ್ಕತ್ತೆ ಶಾಂತಿಯುತವಾಗಿದ್ದದ್ದು ನೆಮ್ಮದಿ-ಸಮಾಧಾನಗಳನ್ನಷ್ಟೇ ಅಲ್ಲ ಆಶ್ಚರ್ಯವನ್ನೂ ಉಂಟುಮಾಡಿತ್ತು. ಏಕೆಂದರೆ ಸ್ವಾತಂತ್ರ್ಯ ಘೋಷಣೆಗೆ ಹಿಂದಿನ ಕೆಲವು ವಾರಗಳಿಂದ ನಗರ ಉದ್ವಿಗ್ನಗೊಂಡಿತ್ತು. ವಿಭಜನೆಯ ಒಪ್ಪಂದದ ಶರತ್ತುಗಳನ್ವಯ ಬಂಗಾಳ ಒಡೆದು ಎರಡು ಹೋಳಾಗಿತ್ತು. ಪೂರ್ವಬಂಗಾಳ ಪಾಕಿಸ್ತಾನದ ಪಾಲಾಗಿದ್ದರೆ ಪಶ್ಚಿಮ ಬಂಗಾಳ ಭಾರತದಲ್ಲೇ ಉಳಿದುಕೊಂಡಿತ್ತು. ಪ್ರಾಂತ್ಯದ ಪ್ರಮುಖ ನಗರವಾದ ಕಲ್ಕತ್ತೆ ನಗರ ವಿವಾದದ ವಿಷಯವಾಗಿತ್ತು. ಸ್ವಾತಂತ್ರ್ಯಕ್ಕೆ ಮುನ್ನ ಇದು ಹಿಂಸಾಚಾರಕ್ಕೆಡೆ ಮಾಡಿಕೊಡಬಹುದೆಂಬ ಭೀತಿಯ ನೆರಳಲ್ಲೇ ಗಡಿ ಆಯೋಗ ಕಲ್ಕತ್ತೆಯನ್ನು ಭಾರತಕ್ಕೆ ನೀಡಿತ್ತು.

ಉಪಖಂಡದ ಆ ಕಡೆಯಲ್ಲಿ, ಪಂಜಾಬಿನ ರಾಜಧಾನಿ ಲಾಹೋರ್‌ನಲ್ಲಿ ತೊಂದರೆಯಿತ್ತು. ಕಲ್ಕತ್ತೆಯಂತೆ ಇದೂ ಬಹು ಧರ್ಮೀಯರ, ಬಹು ಸಂಸ್ಕೃತಿಯ ನಗರ. ಇಲ್ಲಿನ ಸುಂದರವಾದ ಕಟ್ಟಡಗಳಲ್ಲಿ ಬಲು ಭವ್ಯವಾದದ್ದು ಬಾದಶಾಹಿ ಮಸೀದಿ. ಮುಘಲ್ ಮಹಾಚಕ್ರವರ್ತಿಗಳಲ್ಲಿ ಕೊನೆಯವನಾದ ಔರಂಗಜೇಬ್ ಕಟ್ಟಿಸಿದ್ದು. ಆದರೆ ಲಾಹೋರ್ ಒಂದು ಕಾಲಕ್ಕೆ ಸಿಖ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಹಾಗೂ ಇತ್ತೀಚಿನ ದಿನಗಳಲ್ಲಿ ಅದು ಹಿಂದೂ ಸುಧಾರಣಾ ಪಂಥವಾದ ಆರ್ಯಸಮಾಜದ ಕೇಂದ್ರವೂ ಹೌದು. ಈಗ ಪಂಜಾಬಿನ ಎಲ್ಲ ವಸಾಹತುಗಳಂತೆ ಅದರ ಹಣೆಯಬರಹ ಬ್ರಿಟಿಷರ ಕೈಯ್ಯಲ್ಲಿದೆ. ಅವರು ಆ ಪ್ರಾಂತ್ಯವನ್ನು ವಿಭಜಿಸಲಿದ್ದಾರೆ. ಬಂಗಾಳ ವಿಭಜನೆಯನ್ನು 15ಕ್ಕೆ ಮುಂಚೆಯೇ ಪ್ರಕಟಿಸಲಾಯಿತು. ಆದರೆ ಪಂಜಾಬ್ ಕುರಿತ ಪ್ರಕಟನೆಯನ್ನು ತೀರ್ಪಿನ 15ರ ನಂತರವೂ ಮುಂದೂಡಲಾಯಿತು. ಲಾಹೋರ್ ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳು ಭಾರತಕ್ಕೆ ಬರುವುದೋ? ಪಾಕಿಸ್ತಾನಕ್ಕೆ ಹೋಗುವುದೋ?

ಪಾಕಿಸ್ತಾನಕ್ಕೆ ಹೋಗುವ ಸಾಧ್ಯತೆಯೇ ಹೆಚ್ಚಾಗಿತ್ತು. ಏಕೆಂದರೆ ಲಾಹೋರಿನಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದರು. ನಿಜವಾಗಿ ಹೇಳಬೇಕೆಂದರೆ, ಈ ವೇಳೆಗಾಗಲೇ ಹೊಸ ಪಾಕಿಸ್ತಾನದ ಪ್ರಾಂತ್ಯವಾದ ಪಶ್ಚಿಮ ಪಂಜಾಬಿಗೆ ಹೊಸ ಗೌರ್ನರನ್ನು ನೇಮಕ

ಮಾಡಲಾಗಿತ್ತು. ಆತ ಲಾಹೋರಿನ ಸರ್ಕಾರಿ ಭವನಕ್ಕೆ ಬಂದೂ ಆಗಿತ್ತು. 15ರಂದು ಸಂಜೆ ಹೊಸ ರಾಜ್ಯಪಾಲರು ತಮ್ಮ ಅಧಿಕಾರ ಸ್ವೀಕಾರದ ಅಂಗವಾಗಿ ಮೇಜವಾನಿಯೊಂದನ್ನು ಏರ್ಪಡಿಸಿದ್ದರು.

ಅವರು ಆನಂತರ ಹೇಳಿದಂತೆ "ಇದು ಅತ್ಯಂತ ಕೆಟ್ಟ ಮೇಜವಾನಿ, ಹಿಂದೆ ಯಾರೂ ಯಾವತ್ತೂ ಏರ್ಪಡಿಸದಿದ್ದಷ್ಟು ಕೆಟ್ಟ ಮೇಜವಾನಿಯಾಗಿತ್ತು. ವಿದ್ಯುತ್ ವೈಫಲ್ಯದಿಂದಾಗಿ ದೀಪಗಳು ಉರಿಯುತ್ತಿರಲಿಲ್ಲ, ಫ್ಯಾನುಗಳು ಓಡುತ್ತಿರಲಿಲ್ಲ, ನಮಗೆ ಕಂಡ ಏಕೈಕ ಬೆಳಕೆಂದರೆ, ಅರ್ಧ ಮೈಲಿ ಫಾಸಲೆಯಲ್ಲಿ ಹೊತ್ತಿ ಉರಿಯುತ್ತಿದ್ದ ಲಾಹೋರ್ ನಗರದ ಬೆಂಕಿಯ ಜ್ವಾಲೆಗಳಿಂದ ಹೊಮ್ಮುತ್ತಿದ್ದ ಬೆಳಕು. ಉದ್ಯಾನವನದ ಸುತ್ತಮುತ್ತ ಗುಂಡು ಹಾರಿಸಲಾಗುತ್ತಿತ್ತು. ಅದೇನೂ ವಿರಳವಾದ ಗುಂಡಾಗಿರಲಿಲ್ಲ, ಅದು ಗುಂಡಿನ ಸುರಿಮಳೆಯಾಗಿತ್ತು. ಯಾರು, ಯಾರ ಮೇಲೆ ಗುಂಡು ಹಾರಿಸುತ್ತಿದ್ದಾರೆ ಎಂಬುದು ಯಾರಿಗೂ ತಿಳಿದಿರಲಿಲ್ಲ, ಯಾರೊಬ್ಬರಿಗೂ ತಿಳಿದುಕೊಳ್ಳುವ ಆಸಕ್ತಿಯೂ ಇದ್ದಂತಿರಲಿಲ್ಲ. ಯಾರೂ ಕೇಳಿ ತಿಳಿಯುವ ಗೋಜಿಗೆ ಹೋಗಲಿಲ್ಲ."

ಯಾರೊಬ್ಬರೂ ಆತಂಕ ಪಡಲಿಲ್ಲ. ಬಹುಶಃ ರಾಜ್ಯಪಾಲರ ಮೇಜವಾನಿಯಲ್ಲಿ ಭಾಗವಹಿಸಿದ್ದವರ್‍ಯಾರಿಗೂ ಇದರಿಂದ ಆತಂಕ ಉಂಟಾಗಿರಲಿಕ್ಕಿಲ್ಲ, ಕೇಳಿ ತಿಳಿದುಕೊಳ್ಳುವ ಆಸಕ್ತಿಯೂ ಉಂಟಾಗಿರಲಿಕ್ಕಿಲ್ಲ. ಬೆಲಿಯಾಘಾಟ್‌ನಲ್ಲಿದ್ದ ಮಹಾತ್ಮ ಗಾಂಧೀಜಿಯೊಬ್ಬರೇ "ಈ ಹುಚ್ಚು ಕಿಚ್ಚು ಲಾಹೋರನ್ನು ಇನ್ನೂ ಸುಡುತ್ತಿಲ್ಲ. ಅತ್ಯುಗ್ರವಾಗಿದೆ" ಎಂದು ಉದ್ಗಾರವೆತ್ತಿದ್ದರು. "ಇದು ಯಾವಾಗ ನಿಲ್ಲುತ್ತದೆ? ಹೇಗೆ ಅಂತ್ಯಗೊಳ್ಳುತ್ತದೆ? ಕಲ್ಕತ್ತೆಯ ಉದಾತ್ತ ಉದಾಹರಣೆ ಪಂಜಾಬ್ ಮತ್ತು ಭಾರತದ ಇತರ ಭಾಗಗಳ ಮೇಲೆ ಪ್ರಭಾವ ಬೀರಲಿದೆ" ಎಂಬುದಷ್ಟೇ ಯಾರಲ್ಲಾದರೂ ಮೂಡಬಹುದಾದ ಪ್ರಾಮಾಣಿಕ ಆಶಾಭಾವನೆಯಾಗಿತ್ತು.

III

1946ರ ನವೆಂಬರ್ ವೇಳೆಗೆ ಅಖಿಲಭಾರತ ಮಟ್ಟದಲ್ಲಿ, ಗಲಭೆಗಳಲ್ಲಿ ಮಡಿದವರ ಸಂಖ್ಯೆ ಐದು ಸಾವಿರಕ್ಕೂ ಹೆಚ್ಚಾಗಿತ್ತು. ಸೇನಾಪಡೆಯ ದಾಖಲೆಯೊಂದರಲ್ಲಿ ಹೀಗೊಂದು ದುಃಖತಪ್ತವಾದ ಟಿಪ್ಪಣಿ ಇದೆ: ನೌಖಾಲಿಯಲ್ಲಿ ಕಲ್ಕತ್ತೆ ವಿರುದ್ಧ ಸೇಡು ತೀರಿಸಿಕೊಳ್ಳಲಾಯಿತು. ಬಿಹಾರಿನಲ್ಲಿ ನೌಖಾಲಿ ವಿರುದ್ಧ ಸೇಡು ತೀರಿಸಿಕೊಳ್ಳಲಾಯಿತು. ಗುರು ಮುಕ್ತೇಶ್ವರದಲ್ಲಿ ಬಿಹಾರ್ ವಿರುದ್ಧ ಸೇಡು ತೀರಿಸಿಕೊಳ್ಳಲಾಯಿತು...ಗುರು ಮುಕ್ತೇಶ್ವರದ ವಿರುದ್ಧ...?

1946ರ ಅಂತ್ಯದ ವೇಳೆಗೆ ಗಲಭೆಗಳಿಂದ ಪಾರಾಗಿದ್ದ ಪ್ರಾಂತ್ಯವೆಂದರೆ ಪಂಜಾಬ್ ಒಂದೇ. ಅಲ್ಲಿ ಆಗ ಒಕ್ಕೂಟವಾದಿಗಳ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿತ್ತು. ಈ ಸಮ್ಮಿಶ್ರ ಸರ್ಕಾರದಲ್ಲಿ ಮುಸ್ಲಿಮರು, ಹಿಂದೂಗಳು ಮತ್ತು ಸಿಖ್ ಜಮೀನ್ದಾರರಿದ್ದರು. ಇವರುಗಳು ಶಾಂತಿ ಪಾಲಿಸುತ್ತಿದ್ದರಾದರೂ ಪರಿಸ್ಥಿತಿ ಅನಿಶ್ಚಯವಾಗಿತ್ತು. ಉಗ್ರಗಾಮಿ ಮುಸ್ಲಿಂ ಲೀಗ್

ಮತ್ತು ಉಗ್ರಗಾಮಿ ರಾಜಕೀಯ ಪಕ್ಷವಾದ ಅಕಾಲಿ ದಳಗಳು ಒಕ್ಕೂಟಪರವಾದಿ ಸಮ್ಮಿಶ್ರ ಸರ್ಕಾರದ ವಿರುದ್ಧ ಕತ್ತಿ ಮಸೆಯುತ್ತಿದ್ದವು. ಜನವರಿಯಲ್ಲಿ ಪಂಜಾಬಿನ ನಗರಗಳಲ್ಲಿ ಹಿಂಸಾಕಾಂಡದ ಪ್ರಕರಣಗಳು ಶುರುವಾದವು. ಮಾರ್ಚಿ ಮೊದಲ ವಾರದ ನಂತರ ಹಿಂಸಾಚಾರ ಭುಗಿಲೆದ್ದಿತು. ಆಗ ಒಕ್ಕೂಟವಾದಿಗಳನ್ನು ಅಧಿಕಾರದಿಂದ ಹೊರಕ್ಕೆ ದಬ್ಬಲಾಯಿತು. ಮೇ ವೇಳೆಗೆ ಹಿಂಸಾಚಾರದ ಕೇಂದ್ರ ನಿರ್ಣಾಯಕವಾಗಿ ಪೂರ್ವ ಭಾರತದಿಂದ ವಾಯುವ್ಯ ಭಾರತದತ್ತ ತಿರುಗಿತು. ಭಾರತದಲ್ಲಿ, 1946ರ ನವೆಂಬರ್ 18 ಮತ್ತು 1947ರ ಮೇ 18ರ ನಡುವಣ ಅವಧಿಯಲ್ಲಿ 4014 ಜನ ಗಲಭೆಗಳಲ್ಲಿ ಕೊಲೆಗೀಡಾಗಿದ್ದು ಈ ಪೈಕಿ ಪಂಜಾಬ್ ಒಂದರಲ್ಲೇ 3024 ಮಂದಿ ಹತ್ಯೆಗೀಡಾಗಿದ್ದಾರೆಂದು ಹೌಸ್ ಆಫ್ ಲಾರ್ಡ್ಸ್ ಮುಂದೆ ಮಂಡಿಸಲಾದ ಹೇಳಿಕೆಯೊಂದರಲ್ಲಿ ತಿಳಿಸಲಾಗಿದೆ.

1946-47ರ ಘಟನೆಗಳ ಕೇಂದ್ರಗಳಾಗಿದ್ದ ಬಂಗಾಳ ಮತ್ತು ಪಂಜಾಬ್ ಪ್ರಾಂತ್ಯಗಳ ನಡುವೆ ಗಮನಾರ್ಹವಾದ ಹೋಲಿಕೆಗಳಿವೆ, ಏಕರೂಪತೆಗಳಿವೆ. ಈ ಎರಡೂ ಪ್ರಾಂತ್ಯಗಳಲ್ಲಿ ಮುಸ್ಲಿಂ ಜನಸಂಖ್ಯೆಯೇ ಹೆಚ್ಚು. ಹೀಗಾಗಿ ಇವುಗಳ ಮೇಲೆ ಪಾಕಿಸ್ತಾನದ ಕಣ್ಣು. ಇವೆರಡೂ ತನಗೆ ಸೇರಬೇಕಾದ್ದೆಂದು ಪಾಕಿಸ್ತಾನ ಪ್ರತಿಪಾದಿಸಿತ್ತು. ಆದರೆ ಎರಡೂ ಕಡೆ ಹಿಂದೂಗಳು ಗಣನೀಯ ಸಂಖ್ಯೆಯಲ್ಲಿದ್ದರು. ಎರಡೂ ಪ್ರಾಂತ್ಯಗಳ ವಿಭಜನೆಯಾದಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಜಿಲ್ಲೆಗಳು ಪೂರ್ವ ಅಥವಾ ಪಶ್ಚಿಮ ಪಾಕಿಸ್ತಾನಕ್ಕೆ ಹೋಗಲಿದ್ದವು. ಉಳಿದ ಧರ್ಮಗಳ ಪ್ರಾಬಲ್ಯವಿದ್ದ ಜಿಲ್ಲೆಗಳನ್ನು ಭಾರತಕ್ಕೆ ಕೊಡಲಾಯಿತು.

ಆದರೆ ಈ ಎರಡೂ ಪ್ರಾಂತ್ಯಗಳ ನಡುವೆ ಕೆಲವೊಂದು ಮಹತ್ವಪೂರ್ಣವಾದ ವ್ಯತ್ಯಾಸಗಳೂ, ಭಿನ್ನತೆಗಳೂ ಇದ್ದವು. ಬಂಗಾಳದಲ್ಲಿ ಹಿಂದೂ ಮುಸ್ಲಿಮರ ನಡುವಣ ರಕ್ತಸಿಕ್ತ ಸಂಘರ್ಷಣೆಗಳಿಗೆ ಸುದೀರ್ಘ ಇತಿಹಾಸವಿದೆ. ಈ ಸಂಘರ್ಷ, ತಿಕ್ಕಾಟಗಳು ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಆರಂಭವಾದದ್ದು. ಇದಕ್ಕೆ ತದ್ವಿರುದ್ದ ಎಂಬಂತೆ ಪಂಜಾಬಿನಲ್ಲಿ ಎರಡೂ ಸಮುದಾಯಗಳವರು ಶಾಂತಿಯುತ ಸಹಬಾಳ್ವೆ ನಡೆಸಿಕೊಂಡು ಬಂದಿದ್ದಾರೆ. ಅಲ್ಲಿ 1947ಕ್ಕೆ ಪೂರ್ವದಲ್ಲಿ ಧಾರ್ಮಿಕ ಕಾರಣಗಳಿಂದಾಗಿ ಮಹತ್ವದ ಗಲಭೆ, ಗಲಾಟೆಗಳೇನೂ ನಡೆದದ್ದಿಲ್ಲ. ಬಂಗಾಳದಲ್ಲಿ ಮಧ್ಯಮವರ್ಗದವರು ಸಕ್ರಿಯವಾಗಿ ವಿಭಜನೆಯ ಪರ ಇದ್ದರು. ವಿಭಜನೆ ಪರ ದನಿ ಎತ್ತಿದರು. ಮುಸ್ಲಿಂ ಪ್ರಾಬಲ್ಯದ ಪ್ರದೇಶಗಳನ್ನು ಬಿಟ್ಟುಕೊಟ್ಟು ಪ್ರಾಂತೀಯ ರಾಜಧಾನಿ ಹಾಗೂ ಸುತ್ತಮುತ್ತಲ ಪ್ರದೇಶಗಳನ್ನು ತಮ್ಮ ನೆಲೆಯಾಗಿ ಉಳಿಸಿಕೊಳ್ಳುವುದರಲ್ಲಿ ಅವರು ಸಂತುಷ್ಟರಾಗಿದ್ದರು. ಈಗ್ಗೆ ಕೆಲವು ದಶಕಗಳ ಹಿಂದಿನಿಂದಲೇ ಹಿಂದೂ ವೃತ್ತಿಪರರು ಹಾಗೂ ಕಸುಬುದಾರರು ಪಶ್ಚಿಮದತ್ತ ಗುಳೆ ಹೊರಡಲಾರಂಭಿಸಿದ್ದರು. ಇವರ ಜೊತೆ ಜಮೀನ್ದಾರರುಗಳೂ ಜಮೀನು ಮಾರಿ, ಬಂದ ಹಣವನ್ನು ಕಲ್ಕತ್ತೆಯಲ್ಲಿ ವ್ಯಾಪಾರೋದ್ಯಮಗಳಲ್ಲಿ ಅಥವಾ ಆಸ್ತಿ ಸಂಪಾದನೆಯಲ್ಲಿ ತೊಡಗಿಸಿದ್ದರು. ಪಂಜಾಬಿನಲ್ಲಿ ಇದಕ್ಕೆ ತದ್ವಿರುದ್ಧ ಪರಿಸ್ಥಿತಿ. ಪಂಜಾಬಿನ ಹಿಂದೂ ಸಮುದಾಯ, ವರ್ತಕರು ಮತ್ತು ಲೇವಾದೇವಿದಾರರಿಂದ ಕೂಡಿತ್ತು. ಇವರು ಕೃಷಿಕರೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಇವರುಗಳು ವಿಭಜನೆಯನ್ನು ವಿರೋಧಿಸಿದ್ದರು. ಸ್ಥಳಾಂತರ

ಇವರಿಗಿಷ್ಟವಿರಲಿಲ್ಲ. ಹೇಗಾದರೂ ವಿಭಜನೆ ತಪ್ಪಬಹುದೆಂದು ಕೊನೆಯವರೆಗೂ ಆಸೆ ಇಟ್ಟುಕೊಂಡಿದ್ದರು.

ಕೊನೆಯ ಹಾಗೂ ಪ್ರಬಲವಾದ, ಮಹತ್ತರವಾದ ಭಿನ್ನತೆಯೆಂದರೆ ಪಂಜಾಬಿನ ಸಿಖ್ ಸಮುದಾಯ. ಈ ಮೂರನೆಯದೊಂದು ಆಯಾಮ ಬಂಗಾಳದಲ್ಲಿರಲಿಲ್ಲ. ಇಲ್ಲಿ ಮುಸ್ಲಿಮರು-ಹಿಂದೂಗಳ ನಡುವೆ ನೇರ ಹೋರಾಟ. ಮುಸ್ಲಿಮರಂತೆ ಸಿಖ್ಖರಿಗೂ ಒಂದೇ ಪವಿತ್ರ ಗ್ರಂಥ, ಅಮೂರ್ತನಾದ ದೇವರು. ಹಾಗೂ ಎರಡೂ ಸಮುದಾಯಗಳ ನಿಕಟ ವಿಶ್ವಾಸ, ನಂಬಿಕೆಗಳನ್ನು ಹೊಂದಿದ್ದವು. ಸಾಮಾಜಿಕವಾಗಿ ಸಿಖ್ಖರು ಹಿಂದೂಗಳಿಗೆ ಸಮೀಪವರ್ತಿಗಳಾಗಿದ್ದರು. ಅವರವರಲ್ಲಿ ರೋಟಿ-ಬೇಟಿ-ರಿಷ್ತಾ ಸಂಬಂಧವಿತ್ತು. ಇದೊಂದು ರೀತಿಯ ಪರಸ್ಪರ ಭೋಜನ-ವಿವಾಹಗಳ ಸಂಬಂಧವಾಗಿತ್ತು. ಜೊತೆಗೆ ಮುಘಲರ ಕಾಟಕ್ಕೆ, ದ್ವೇಷಕ್ಕೆ ಗುರಿಯಾಗಿದ್ದ ಇತಿಹಾಸ ಎರಡೂ ಸಮುದಾಯಗಳಲ್ಲಿತ್ತು.

ಆಯ್ಕೆಯ ಅವಕಾಶವಿದ್ದಿದ್ದಲ್ಲಿ ಸಿಖ್ಖರು ಹಿಂದೂಗಳ ಕಡೆಯೇ ವಾಲುತ್ತಿದ್ದರು. ಆದರೆ ಆಯ್ದುಕೊಳ್ಳುವ ಮನಸ್ಥಿತಿಯಲ್ಲಿ ಅವರು ಇರಲಿಲ್ಲ. ಏಕೆಂದರೆ, ಎರಡೂ ಪ್ರಾಂತ್ಯಗಳಲ್ಲಿ ಸಿಖ್ ಕೃಷಿಕರು ಗಮನಾರ್ಹ ಸಂಖ್ಯೆಯಲ್ಲಿದ್ದರು. ಶತಮಾನದ ತಿರುವಿನಲ್ಲಿ ಬ್ರಿಟಿಷರು ಪೂರ್ವ ಪಂಜಾಬಿನ ಸಿಖ್ಖರು ಪಶ್ಚಿಮದಲ್ಲಿ ನೆಲಸುವಂತೆ ನಿರೂಪ ಹೊರಡಿಸಿದ್ದರು. ಪಶ್ಚಿಮದಲ್ಲಿ ಹೊಸದಾಗಿ ನೀರಾವರಿ ಸೌಕರ್ಯ ಕಲ್ಪಿಸಲಾಗಿತ್ತು. ಹೀಗೆ ಪಶ್ಚಿಮಕ್ಕೆ ಬಂದ ಸಿಖ್ಖರು ಕೆಲವು ದಶಕಗಳಲ್ಲಿ ಈ 'ಸೇತುವೆಯ ವಸಾಹತುಗಳಲ್ಲಿ' ಸಂಪದ್ಯುಕ್ತ ಪಾಳೆಯಗಳನ್ನು ಕಟ್ಟಿಕೊಂಡರು. ಈಗೇಕೆ ಇಂಥ ಸಂಪದ್ಯುಕ್ತ ನೆಲೆಗಳನ್ನು ಬಿಟ್ಟು ಹೋಗಬೇಕು? ಅವರ ಪವಿತ್ರಕ್ಷೇತ್ರ ಅಮೃತಸರ ಪೂರ್ವ ಪಂಜಾಬಿನಲ್ಲಿತ್ತು. ಧರ್ಮ ಸಂಸ್ಥಾಪಕನಾದ ನಾನಾಕಾನ ಸಾಹೇಬನ ಹುಟ್ಟೂರು ಪಶ್ಚಿಮದಲ್ಲಿತ್ತು. ಈ ಎರಡೂ ಸ್ಥಳಗಳ ಜೊತೆ ಮುಕ್ತ ಸಂಪರ್ಕ ಅವಕಾಶಗಳ ಸವಲತ್ತು ತಮಗೇಕೆ ಸಲ್ಲಬಾರದು?

ವಿಭಜನೆಯ ಅರ್ಥ ಮತ್ತು ವಾಸ್ತವತೆಯನ್ನು ಪಂಜಾಬಿನ ಸಿಖ್ಖರು, ಬಂಗಾಳದ ಹಿಂದೂಗಳಂತೆ ಬೇಗ ಗ್ರಹಿಸಲಿಲ್ಲ. ಗ್ರಹಿಸಲು ಅವರಿಗೆ ಸ್ವಲ್ಪ ಸಮಯವೇ ಬೇಕಾಯಿತು. ಶುರುವಿಗೆ ತಾವು ಇದ್ದಲ್ಲಿಯೇ ಇರುವುದಾಗಿ ಮೊಂಡುತನ ಮಾಡಿದರು. ನಂತರ ವಿಭಜನೆ ಹೆಚ್ಚು ಸಂಭವನೀಯವೆಂಬುದು ಮನವಟ್ಟಾದಾಗ ತಮಗೆ "ಖಲೀಸ್ತಾನ" ಎಂಬ ಹೊಸರಾಜ್ಯ ಬೇಕೆಂದು ಪಟ್ಟುಹಿಡಿದರು. ಈ ಬೇಡಿಕೆಯನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. ಹಿಂದೂಗಳಾಗಲೀ, ಮುಸ್ಲಿಮರಾಗಲೀ, ಕನಿಷ್ಠಪಕ್ಷ ಬ್ರಿಟಿಷರಾಗಲೀ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

ಇತಿಹಾಸಕಾರ ರಾಬಿನ್ ಜೆಫಿ, ಹೇಳಿರುವಂತೆ, ಕನಿಷ್ಠ 1947ರ ಆಗಸ್ಟ್‌ವರೆಗೆ ಸಿಖ್ಖರು "ದುಷ್ಕೃತ್ಯಗಳನ್ನೆಸಗಿದ್ದಕ್ಕಿಂತ ದುಷ್ಕೃತ್ಯಗಳಿಗೆ ಈಡಾದದ್ದೇ ಹೆಚ್ಚು." "ಬ್ರಿಟಿಷರು ಅವರನ್ನು ಬಿಟ್ಟು ಕೈ ತೊಳೆದುಕೊಂಡಿದ್ದರು. ಕಾಂಗ್ರೆಸ್ ಅವರನ್ನು ಸಹಿಸಿಕೊಂಡಿತ್ತು, ಮುಸ್ಲಿಮ್ ಲೀಗ್ ಮೂದಲಿಸುತ್ತಲಿತ್ತು. ಎಲ್ಲಕ್ಕೂ ಮಿಗಿಲಾಗಿ ಅವರು ತಮ್ಮ ರಾಜಕೀಯ ನಾಯಕತ್ವದ

ವೈಫಲ್ಯಗಳಿಂದ ಹತಾಶರಾಗಿದ್ದರು." ಇದನ್ನು ದುರಂತ ಎಂದು ಕರೆಯಲಾಗದೇನೋ. ಆದರೆ ಸಿಖ್ಖರ ಈ ವಿಚಿತ್ರ ಸಂದಿಗ್ಧತೆ, ಉಭಯ ಸಂಕಟಗಳೇ, ಆಖೈರಾಗಿ ಧಾರ್ಮಿಕ ಹಿಂಸಾಚಾರ ಪಂಜಾಬನ್ನು ಆವರಿಸಿದ್ದಕ್ಕೆ, ಉಗ್ರಸ್ವರೂಪ ತಾಳಿದ್ದಕ್ಕೆ ಕಾರಣಗಳನ್ನು ಹೇಳಬಲ್ಲವು. ಮಾರ್ಚಿಯಿಂದ ಆಗಸ್ಟ್‌ವರೆಗೆ ಪ್ರತಿತಿಂಗಳೂ ಹಿಂಸಾಚಾರದ ತಾಪ ಏರುತ್ತಿತ್ತು. ಒಂದು ತಿಂಗಳು ಹಿಂದಿನ ತಿಂಗಳಿಗಿಂತ ಹೆಚ್ಚು ಕ್ರೂರ, ಹೆಚ್ಚು ರಕ್ತ ಸಿಕ್ತ. ಇದರಲ್ಲಿ ಪ್ರಕೃತಿಯ ಸಿನಿಕ ಪಾಲೂ ಇದೆ. 1947ರಲ್ಲಿ ಮಳೆ ಮಾರುತ ತಡವಾಗಿ ರಾಜಕೀಯ ಹಾಗೂ ಇತಿಹಾಸದ ಮೇಲೆ ತನ್ನ ಒತ್ತಡದ ಛಾಪನ್ನು ಮೂಡಿಸಿತು. ಮಳೆ-ಮಾರುತದಂತೆ ಗಡಿ ಕುರಿತ ತೀರ್ಪೂ ತಡವಾಗಿ ಅನಿಶ್ಚಿತತೆ-ಸಂದಿಗ್ಧತೆಗಳು ಪರಾಕಾಷ್ಠೆಗೇರಿದವು.

ಬಂಗಾಳ ಮತ್ತು ಪಂಜಾಬಿನ ವಿಭಜನೆಯ ಕಾರ್ಯವನ್ನು ಸರ್ ಸಿರಿಲ್ ರ್‍ಯಾಡ್‌ಕ್ಲಿಫ್ ಎಂಬ ಬ್ರಿಟಿಷ್ ನ್ಯಾಯಾಧೀಶರೊಬ್ಬರಿಗೆ ವಹಿಸಲಾಗಿತ್ತು. ಈತನಿಗೆ ಭಾರತದ ಬಗ್ಗೆ ಪೂರ್ವಜ್ಞಾನವಿರಲಿಲ್ಲ (ಇದನ್ನೊಂದು ಅನುಕೂಲಕರ ಅಂಶ ಎಂದೇ ಭಾವಿಸಲಾಗಿತ್ತು). ಆದರೆ, ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಗುರುತಿಸಬೇಕಾದ ಗಡಿರೇಖೆಗಳನ್ನು ನಿರ್ಧರಿಸಲು ಇವನಿಗೆ ಕೇವಲ ಐದು ವಾರಗಳ ಕಾಲಾವಕಾಶ ನೀಡಲಾಗಿತ್ತು. ತುಂಬಾ ಮೃದುವಾಗಿ ಹೇಳಿದರೂ ಅದೊಂದು ಕಠಿಣತಮ ಕೆಲಸವಾಗಿತ್ತು. ಡಬ್ಲ್ಯು.ಎಚ್. ಆಡೆನ್ನನ ಮಾತುಗಳಲ್ಲೇ ಹೇಳುವುದಾದರೆ ಅವನು–

> *ಭೂಪ್ರದೇಶವೊಂದನ್ನು, ಅಂಧಾಭಿಮಾನಗಳ ವಿಲಕ್ಷಣತೆಯಿಂದ ಕೂಡಿದ ಇಬ್ಬರ ನಡುವೆ, ವಿಭಿನ್ನ ಆಹಾರಕ್ರಮ ಹಾಗೂ ಅನನುರೂಪಿ ದೇವರುಗಳನ್ನು ಹೊಂದಿರುವ ಇಬ್ಬರ ನಡುವೆ ಹಂಚಬೇಕಾಗಿತ್ತು.*

"ಅವನ ಕೈಯ್ಯಲ್ಲಿದ್ದ ಭೂಪಟಗಳು ಹಳೆಯದಾಗಿದ್ದವು" ಹಾಗೂ "ಜನಗಣತಿ ವರದಿಗಳೂ ಖಂಡಿತವಾಗಿ ತಪ್ಪಾಗಿದ್ದವು."

ರ್‍ಯಾಡ್‌ಕ್ಲಿಫ್ ಜುಲೈ ಮೊದಲ ವಾರ ಭಾರತಕ್ಕೆ ಆಗಮಿಸಿದರು. ಆತನಿಗೆ, ಪಂಜಾಬಿನ ಬಗ್ಗೆ ನಾಲ್ವರು ಸಲಹೆಗಾರರನ್ನು ನೀಡಲಾಯಿತು. ನಾಲ್ವರಲ್ಲಿ ಇಬ್ಬರು ಮುಸ್ಲಿಮರು, ಒಬ್ಬ ಹಿಂದೂ, ಮತ್ತೊಬ್ಬ ಸಿಖ್. ಈ ನಾಲ್ವರಲ್ಲಿ ಹೊಂದಾಣಿಕೆ ಇರಲಿಲ್ಲ. ಪ್ರತಿ ವಿಷಯದಲ್ಲೂ ಜಗಳವಾಡುತ್ತಿದ್ದರು. ರ್‍ಯಾಡ್‌ಕ್ಲಿಫ್, ಕೆಲವು ದಿನಗಳಲ್ಲೇ ಇವರನ್ನು ಬೇಡವೆಂದು ವಾಪಸು ಕಳುಹಿಸಿದ. ರ್‍ಯಾಡ್‌ಕ್ಲಿಫ್ ತನ್ನ ಸೋದರ ಸಂಬಂಧಿಯೊಬ್ಬರಿಗೆ ಬರೆದ ಪತ್ರದಲ್ಲಿ, "ನನಗೆ ಗೊತ್ತು, ಪಂಜಾಬ್ ಮತ್ತು ಬಂಗಾಳ ಕುರಿತ ತೀರ್ಪಿನಿಂದಾಗಿ ಭಾರತದಲ್ಲಿ ಯಾರೊಬ್ಬರೂ ನನ್ನನ್ನು ಪ್ರೀತಿಸುವುದಿಲ್ಲ. ಸುಮಾರು ಎಂಬತ್ತು ದಶಲಕ್ಷ ಜನರು ಕುಂದುಕೊರತೆಗಳೊಂದಿಗೆ ನನ್ನತ್ತ ಮುಖ ಮಾಡಿದ್ದಾರೆ. ಅವರ ಕಣ್ಣಿಗೆ ಬೀಳುವುದು ನನಗಿಷ್ಟವಿಲ್ಲ..."

ಆಗಸ್ಟ್ ಒಂದರಂದು, ಹಿಂಸಾಚಾರ ನಿಯಂತ್ರಿಸಲು ಪಂಜಾಬ್ ಗಡಿ ಪಡೆಯನ್ನು ರಚಿಸಲಾಯಿತು. ಅಬರ್ಗವೆನ್ನಿಯ ವೇಲ್ಸ್ ಪ್ರಜೆ ಮೇಜರ್ ಜನರಲ್ ಟಿ.ಡಬ್ಲ್ಯು. ರೀಸ್

ನೇತೃತ್ವದಲ್ಲಿ ಈ ಪಡೆಯನ್ನು ರಚಿಸಲಾಯಿತು. ಇವನ ಅಧೀನದಲ್ಲಿ ಬ್ರಿಗೇಡಿಯರ್ ದರ್ಜೆಯ ನಾಲ್ವರು ಸಲಹೆಗಾರರಿದ್ದರು. ಇಬ್ಬರು ಮುಸ್ಲಿಮರು, ಒಬ್ಬ ಹಿಂದೂ, ಮತ್ತೊಬ್ಬ ಸಿಖ್. "ಗಡಿ ತೀರ್ಪು ಸಂಪೂರ್ಣವಾಗಿ ಯಾರನ್ನೂ ಸಂತುಷ್ಟಗೊಳಿಸದು. ಅದು ಸಿಖ್ಖರಲ್ಲಿ ಆಸ್ಫೋಟ ಉಂಟು ಮಾಡಬಹುದು" ಎಂದು ರೀಸ್ ತನ್ನ ಮೊದಲ ವರದಿಯಲ್ಲೇ ಭವಿಷ್ಯ ನುಡಿದಿದ್ದ. ಈ ವರದಿ ನೀಡಿದ್ದು ಆಗಸ್ಟ್ 7ರಂದು. 14ರಂದು, ಬ್ರಿಟಿಷ್ ಭಾರತ ಸೇನೆಯ ಪ್ರಧಾನ ದಂಡನಾಯಕನಾಗಿದ್ದ ಫೀಲ್ಡ್ ಮಾರ್ಷಲ್ ಸರ್ ಕ್ಲಾಡೆ ಉಬಿನ್ ಲೆಕ್ ಹೀಗೆ ಹೇಳಿದ: "ಗಡಿ ಆಯೋಗದ ವರದಿ ಸಲ್ಲಿಕೆಯಲ್ಲಿ ವಿಳಂಬ ತೀವ್ರ ಕಳವಳಕಾರಿಯಾದ ಹಾಗೂ ಹಾನಿಕಾರಕವಾದ ಪರಿಣಾಮಗಳನ್ನುಂಟುಮಾಡಲಿದೆ. ವರದಿ ಪ್ರಕಟಣೆಯಿಂದ ಬೆಂಕಿಗೆ ಮತ್ತಷ್ಟು ತುಪ್ಪ ಸುರಿದಂತಾಗಬಹುದು ಎಂಬುದು ಮನವರಿಕೆಯಾಗಿದೆ. ಆದರೆ ಪ್ರಕಟಣೆಯನ್ನು ಮಾಡದಿರುವ ಕಾರಣದಿಂದಾಗಿ ಹುಚ್ಚಾಬಟ್ಟೆ ವದಂತಿಗಳು ಹರಡುತ್ತಿವೆ. ತಂಟೆಕೋರರು ವದಂತಿಗಳನ್ನು ಹರಡುತ್ತಿದ್ದಾರೆ. ತಂಟೆಕೋರರಿಗೇನೂ ಕೊರತೆ ಇಲ್ಲ."

ಮಳೆ ಇನ್ನೂ ಶುರುವಾಗಿರಲಿಲ್ಲ. ತಾಪಮಾನ ನೂರು ಡಿಗ್ರಿ ಅಂಚಿನಲ್ಲಿತ್ತು. ಇದು ವಿಶೇಷವಾಗಿ ಮುಸ್ಲಿಮರ ಸಹನೆಯನ್ನು ಕೆಣಕಿತ್ತು. ಮುಸ್ಲಿಂ ಸೈನಿಕರು ಹಾಗೂ ಮುಸ್ಲಿಂ ನಾಗರಿಕರು ರಮ್ಜಾನ್ ಸಲುವಾಗಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಉಪವಾಸ ವ್ರತ ಆಚರಿಸುತ್ತಿದ್ದರು. ಆ ವರ್ಷ ಜುಲೈ 19ರಿಂದ ಆಗಸ್ಟ್ 16ರವರೆಗೆ ರಮ್ಜಾನ್ ಅವಧಿಯಾಗಿತ್ತು. ಮಳೆ ಏಕೆ ಬರಲಿಲ್ಲ ಎಂದು ರೀಸ್ ಸಾಹೇಬ ತನ್ನ ಮುಸ್ಲಿಂ ವಾಹನ ಚಾಲಕನನ್ನು ಕೇಳಿದ. ವಾಹನ ಚಾಲಕನ ಉತ್ತರ "ದೇವರೂ ಅಸಂತುಷ್ಟನಾಗಿದ್ದಾನೆ."

ಕೊನೆಗೂ ಆಗಸ್ಟ್ 16ರಂದು ಗಡಿ ತೀರ್ಪನ್ನು ಪ್ರಕಟಿಸಲಾಯಿತು. ಇದರಿಂದ ಮುಸ್ಲಿಮರು ಕೆರಳಿ ಕೆಂಡವಾದರು. ಗುರುದಾಸ್ಪುರ ಜಿಲ್ಲೆ, ಭಾರತಕ್ಕೆ ಬದಲು ಪಾಕಿಸ್ತಾನಕ್ಕೆ ಹೋಗಬೇಕಾಗಿತ್ತೆಂಬುದು ಅವರ ಅನ್ನಿಸಿಕೆಯಾಗಿತ್ತು. ಸಿಖ್ಖರು ಇನ್ನಷ್ಟು ಕೆರಳಿದ್ದರು. ಅವರ ಪ್ರೀತಿಯ ನಾನ ಕಾನ ಸಾಹಿಬ್ ಈಗ ಇಸ್ಲಾಮಿಕ್ ರಾಷ್ಟ್ರದಲ್ಲಿ ಒಂದು ದ್ವೀಪವಾದದ್ದು ಅವರ ಕೋಪತಾಪಗಳಿಗೆ ಕಾರಣ. ಗಡಿಯ ಎರಡೂ ಕಡೆ ಅಮಾನುಷ ಕೃತ್ಯಗಳು ಹಬ್ಬಿದವು. ಪೂರ್ವ ಪಂಜಾಬಿನಲ್ಲಿ ಸಿಖ್ಖರು ತಂಡೋಪತಂಡವಾಗಿ ಮುಸ್ಲಿಮರನ್ನು ಹೊರಬರುವಂತೆ ಪ್ರಚೋದಿಸುತ್ತ, ಕಣ್ಣಿಗೆ ಬಿದ್ದ ಮುಸ್ಲಿಮರನ್ನು ಕೊಚ್ಚಿ ಕೊಲ್ಲುತ್ತಾ, ಗ್ರಾಮೀಣ ಪ್ರದೇಶಗಳಲ್ಲಿ ಬೀದಿ-ಬೀದಿ ಸುತ್ತಿದರು. ಇವರ ಕಣ್ಣಿಂದ ಪಾರಾದವರು ಪಶ್ಚಿಮದ ಗಡಿ ದಾಟಿ ಬದುಕಿ ಉಳಿದರು. ಆದರೆ ಅಲ್ಲಿ ಸೇಡು, ಪ್ರತೀಕಾರಗಳಿಗೆ ಗುರಿಯಾದರು. ಅಮೃತಸರ ಮತ್ತು ಸುತಮುತ್ತಣ ಪ್ರದೇಶದ ಮುಸ್ಲಿಮರು ಸುರಕ್ಷಿತವಾದ ಲಾಹೋರಿಗೆ ಪ್ರವಾಹದೋಪಾದಿ ವಲಸೆ ಹೋದರು. "ಈ ನಿರಾಶ್ರಿತರ ಕಥೆ-ವ್ಯಥೆಗಳು ಗ್ರಂಥಸ್ಥ ಶೈಲಿಯಲ್ಲಿ ಉತ್ಪ್ರೇಕ್ಷಿತ ಎನ್ನಬಹುದಾದರೂ ಪಾಶವೀ ಕೃತ್ಯಗಳಾಧಾರಿತವಾಗಿದ್ದವು. ಕೈಕಾಲು ಕತ್ತರಿಸಿ ಬಿಸುಟ ದೇಹಗಳಿಗೇನೂ ಕೊರತೆ ಇರಲಿಲ್ಲ. ಲಾಹೋರಿನಲ್ಲಿ ಹಾಗೂ ಇನ್ನೂ ಮುಂದೆ ಮುಂದಣ ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಂ ಬಾಂಧವರೆದುರು ಛೇದಿತ ದೇಹಗಳ ಮೆರವಣಿಗೆ ನಡೆಸಿದ್ದೂ ಉಂಟು..."

ರೀಸ್ ಪ್ರಕಾರ ಪಂಜಾಬಿನಲ್ಲಿ ಮಾರ್ಚ್‌ನಿಂದ ಜುಲೈ ಅಂತ್ಯದ ವೇಳೆಗೆ ಸುಮಾರು 4500 ಜನರ ಹತ್ಯೆಯಾಗಿತ್ತು. 2500 ಮಂದಿ ಗಾಯಗೊಂಡಿದ್ದರು. ಆದರೆ, ಆಗಸ್ಟ್ ಮಾಹೆಯೊಂದರಲ್ಲೇ, ಸೇನೆಯ ಅಧಿಕೃತ ವರದಿಯಂತೆ 15 ಸಾವಿರ ಜನರು ಹತ್ಯೆಗೀಡಾಗಿದ್ದಾರೆಂದು ಅಂದಾಜು ಮಾಡಲಾಗಿತ್ತು. ವಾಸ್ತವದಲ್ಲಿ ಹತ್ಯೆಗೀಡಾದವರ ನಿರ್ದಿಷ್ಟ ಸಂಖ್ಯೆ ಇನ್ನೂ ಎರಡು-ಮೂರು ಪಟ್ಟು ಹೆಚ್ಚಾಗಿರಬಹುದೆಂಬುದನ್ನು ರೀಸ್ ಒಪ್ಪಿಕೊಂಡಿದ್ದಾನೆ.

ಪಂಜಾಬಿನ ಸಂಕಷ್ಟಗಳು ಹಾಗೂ ಅದರ ವ್ಯಾಪಕ ಪರಿಣಾಮಗಳ ಬಗ್ಗೆ ಭಾರತದ ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ ತೀವ್ರ ವ್ಯಾಕುಲಗೊಂಡಿದ್ದರು. ಆಗಸ್ಟ್ ತಿಂಗಳ ಕೊನೆಯ ಹದಿನೈದು ದಿನಗಳಲ್ಲಿ ಅವರು ಮೂರು ಸಲ ಈ ಪ್ರಾಂತ್ಯಕ್ಕೆ ಭೇಟಿಕೊಟ್ಟಿದ್ದರು. ಗಡಿಯುದ್ದಕ್ಕೂ ಸಂಚರಿಸಿ, ಗಡಿಯ ಎರಡೂ ಬದಿಯ ಜನರೊಂದಿಗೆ ಮಾತನಾಡಿದ್ದರು. "ಈ ಕಡೆ-ಆ ಕಡೆ, ಉಭಯತ್ರ ಪಾಶವೀಕೃತ್ಯಗಳಲ್ಲಿ ಇದು ಹೆಚ್ಚು ಇದು ಕಡಿಮೆ ಎಂದು ನಿರ್ಣಯಿಸುವಂಥಾದ್ದೇನಿರಲಿಲ್ಲ. ಎರಡೂ ಕಡೆ ನಂಬಲಸದಳವಾದಂಥ ಅಮಾನುಷವಾದ ಮತ್ತು ಬರ್ಬರವಾದ ಕೃತ್ಯಗಳು ನಡೆದಿವೆ" ಎಂದು ನೆಹರೂ ಭಾವಿಸಿದ್ದರು. ಅನಾಗರಿಕ ಕೃತ್ಯಗಳಿಗೆ ರೀಸ್ ಹಚ್ಚಿದ ಗುಣವಾಚಕ "ಮಧ್ಯ ಯುಗ ಪೂರ್ವದ್ದು". ಗಲಭೆಕೋರರು, ಕೊಡಲಿ, ಭಲ್ಲೆ, ಭರ್ಜಿ, ದೊಣ್ಣೆ, ಮೊದಲಾದ ಆದಿಮಕಾಲದ ಅಸ್ತ್ರಗಳಿಂದ ಹಿಡಿದು ಅತ್ಯಾಧುನಿಕವಾದ ಟಾಮಿಗನ್ ಮತ್ತು ಲೈಟ್ ಮೆಷಿನ್‌ಗನ್‌ಗಳವರೆಗೆ ಬಳಸಿದ್ದರು.

ಸೆಪ್ಟಂಬರ್ 2ರಂದು ಪಂಜಾಬ್ ಗಡಿ ಪಡೆಯನ್ನು ವಿಸರ್ಜಿಸಲಾಯಿತು. ಅದೇನೂ ಅಷ್ಟು ಪರಿಣಾಮಕಾರಿಯಾಗಿಯೂ ಇರಲಿಲ್ಲ. ಇಬ್ಬರು ಅಧಿಕಾರಿಗಳ ಅಧೀನದಲ್ಲಿದ್ದುಕೊಂಡು ಕೆಲಸ ಮಾಡಬೇಕಾಗಿದ್ದುದು ಅದಕ್ಕೊಂದು ತೊಡಕಾಗಿತ್ತು. ಲಷ್ಕರಿ ಶಾಸನದ ಅಧಿಕಾರಿಗಳ ಗೈರು ಹಾಜರಿಯಲ್ಲಿ ಗಡಿಪಡೆ ಸಿವಿಲ್ ಅಧಿಕಾರಿಗಳ ಆಜ್ಞಾನುವರ್ತಿಯಾಗಿ ಕೆಲಸ ಮಾಡಬೇಕಾಗಿತ್ತು. ಪಂಜಾಬ್ ಗಡಿ ಪಡೆಯ ನಿರ್ಗಮನದೊಂದಿಗೆ ಕಾಯಿದೆ ಸುವ್ಯವಸ್ಥೆ ಪಾಲನೆಯ ಕರ್ತವ್ಯವನ್ನು ಭಾರತ ಸರ್ಕಾರ ಮತ್ತು ಪಾಕಿಸ್ತಾನ ಸರ್ಕಾರಗಳಿಗೆ ವಹಿಸಲಾಯಿತು. ಗಲಭೆಗಳು ಮುಂದುವರಿದವು. ಅದೇ ರೀತಿ ಎರಡೂ ಕಡೆ ಜನ ಗುಳೇ ಹೋಗುವುದೂ ಮುಂದುವರಿಯಿತು. ಪಶ್ಚಿಮ ಪಂಜಾಬನ್ನು ಹಿಂದೂಗಳು ಮತ್ತು ಸಿಖ್ಖರನ್ನು ಹೊರದೂಡುವ ಮುಖೇನ ಸ್ವಚ್ಛಗೊಳಿಸಲಾಯಿತು. ಅದೇ ರೀತಿ ಪೂರ್ವ ಪಂಜಾಬನ್ನು ಮುಸ್ಲಿಮರಿಂದ ತೆರವುಗೊಳಿಸಲಾಯಿತು. ಹಿಂಸಾಚಾರದ ಸ್ವಚ್ಛ ಸಮದೃಷ್ಟಿ ಕುರಿತು ಮದ್ರಾಸಿನ 'ಸ್ವತಂತ್ರ' ವಾರಪತ್ರಿಕೆಯ ವರದಿಗಾರ ಬರೆದಿದ್ದಾನೆ. ಅವನು ತಾನು ಕಂಡದ್ದನ್ನು ಹೀಗೆ ಬರೆದಿದ್ದಾನೆ:

> ಒಂದು ಮಧ್ಯಾಹ್ನ ಖಾಲಿ ಇದ್ದ ನಿರಾಶ್ರಿತರ ರೈಲು ಹೊಗೆ ಉಗುಳುತ್ತಾ ಫಿರೋಜ್ಪುರ ನಿಲ್ದಾಣಕ್ಕೆ ಬಂತು. ಚಾಲಕ ವಿಪರೀತ ಭಯದಿಂದ ತೊದಲುತ್ತಿದ್ದ. ಗಾರ್ಡ್, ರೈಲ್ವೆ ಗಾರ್ಡುಗಳ ಡಬ್ಬಿಯಲ್ಲಿ ಸತ್ತು ಬಿದ್ದಿದ್ದ. ಉರುವಲು ತುಂಬುವ ಸಾಧನ ನಾಪತ್ತೆಯಾಗಿತ್ತು. ನಾನು ಪ್ಲಾಟ್‌ಫಾರಂನಲ್ಲಿ ಆ ಉದ್ದದಿಂದ ಈ ಉದ್ದದವರೆಗೆ ಓಡಾಡಿದೆ. ಎರಡು

ಬೋಗಿಗಳು ಹೊರತು ಉಳಿದೆಲ್ಲ ಬೋಗಿಗಳು ಒಳಗೆ-ಹೊರಗೆ ರಕ್ತಮಯವಾಗಿದ್ದವು. ಮೂರನೆ ದರ್ಜೆಯ ಬೋಗಿಯೊಂದರಲ್ಲಿ ಮೂರು ಮೃತದೇಹಗಳು ರಕ್ತದ ಮಡುವಿನಲ್ಲಿ ಬಿದ್ದಿದ್ದವು. ಸಶಸ್ತ್ರ ಮುಸ್ಲಿಂರ ಗುಂಪೊಂದು ಲಾಹೋರ್-ಫಿರೋಜ್ಪುರದ ನಡುವೆ ರೈಲನ್ನು ನಿಲ್ಲಿಸಿ ಹಗಲು ಬೆಳಕಿನಲ್ಲೇ ರಾಜಾರೋಷವಾಗಿ ಕಗ್ಗೊಲೆಯ ಕೆಲಸವನ್ನು ನೀಟಾಗಿ ಮಾಡಿ ಮುಗಿಸಿತ್ತು.

ನಾನು ಸುಲಭವಾಗಿ ಮರೆಯಲಾರದ ಇನ್ನೊಂದು ದೃಶ್ಯವಿದೆ. ಸುಮಾರು ಐದು ಮೈಲಿ ಉದ್ದದ ಮುಸ್ಲಿಂ ನಿರಾಶ್ರಿತ ಪಯಣಿಗರು ಬಸವನಹುಳು ವೇಗದಲ್ಲಿ ತೆವಳುತ್ತಾ ಸಾಗಿದ್ದರು; ಸಟ್ಲೇಜ್ ದಾಟಿ ಪಾಕಿಸ್ತಾನದೊಳಕ್ಕೆ ಪಯಣ ಅವರ ಗುರಿಯಾಗಿತ್ತು. ತಿರಸ್ಕಾರಾರ್ಹವಾದ ಚರಸ್ವತ್ತುಗಳನ್ನು ತುಂಬಿದ್ದ ಎತ್ತಿನಗಾಡಿಗಳು ದಾರಿಯುದ್ದಕ್ಕೂ ನಿಧಾನವಾಗಿ ಸಾಗಿದ್ದವು. ಇವುಗಳ ಜೊತೆಗೇ ಜಾನುವಾರುಗಳೂ ಸಾಗಿದ್ದವು. ಮಹಿಳೆಯರು ಕಂಕುಳಲ್ಲಿ ಹಸುಗೂಸುಗಳನ್ನು ಎತ್ತಿಕೊಂಡು, ತಲೆಯ ಮೇಲೆ ತಗಡಿನ ಟ್ರಂಕುಗಳನ್ನು ಹೊತ್ತುಕೊಂಡು ಹೆಜ್ಜೆ ಮೆಲೆ ಹೆಜ್ಜೆ ಹಾಕುತ್ತ ನಡೆದಿದ್ದರು. ಇಪ್ಪತ್ತು ಸಾವಿರ ಸ್ತ್ರೀ ಪುರುಷರು ಮತ್ತು ಮಕ್ಕಳು ಭರವಸೆಯ ಸುಖದ ಸೀಮೆಯತ್ತ ಹೆಜ್ಜೆಹಾಕಿದ್ದರು. ಅದು ಸುಖದ ಸೀಮೆ, ಭರವಸೆಯ ಸ್ವರ್ಗ ಎಂಬ ಕಾರಣಕ್ಕಾಗಿ ಅವರು ಹೊರಟಿರಲಿಲ್ಲ. ಫರೀದಾಕೋಟೆ ಮತ್ತು ಫಿರೋಜ್ಪುರ ಜಿಲ್ಲೆಗಳ ಒಳನಾಡಿನಲ್ಲಿ ಹಿಂದೂಗಳು ಮತ್ತು ಸಿಖ್ಖರು ನೂರಾರು ಮುಸ್ಲಿಮರ ಹತ್ಯೆಗೈದು, ಉಳಿದವರಿಗೆ ಅಲ್ಲಿ ಬದುಕುವುದು ಅಸಾಧ್ಯ ಎನ್ನುವಂಥ ಪರಿಸ್ಥಿತಿ ಉಂಟು ಮಾಡಿದ್ದರು. ಹೀಗಾಗಿ ಭರವಸೆಯ ನಾಡಿನತ್ತ, ಸುಖದ ಸೀಮೆಯತ್ತ ಅವರ ಪಯಣ ಸಾಗಿತ್ತು.

ಕಾಲ್ನಡಿಗೆ, ಎತ್ತಿನಗಾಡಿ, ರೈಲುಗಳಲ್ಲಿ ಹತ್ತು ದಶಲಕ್ಷ ನಿರಾಶ್ರಿತರು ಗುಳೆ ಹೊರಟಿದ್ದರು. ಕೆಲವೊಮ್ಮೆ ಸಶಸ್ತ್ರ ಪಡೆಗಳ ಬೆಂಗಾವಲಿನಲ್ಲಿ, ಇನ್ನು ಕೆಲವೊಮ್ಮೆ ವಿಧಿಯನ್ನು ನೆಚ್ಚಿಕೊಂಡು, ದೇವರಲ್ಲಿ ನಂಬಿಕೆಯಿಟ್ಟು ಸಾಗಿತ್ತು ಇವರ ಪಯಣ. ಹತ್ತು ಮೈಲಿ ಉದ್ದಕ್ಕೂ ಚಾಚಿಕೊಂಡು ಸಾಗಿದ್ದ 100,000 ನಿರಾಶ್ರಿತ ಪಯಣಿಗರಿಗೆ ಜವಹರಲಾಲ್ ನೆಹರೂ ಬೆಂಗಾವಲಾಗಿ ನಿಂತರು. ಈ ನಿರಾಶ್ರಿತರು ಜಲಂಧರ್‌ನಿಂದ ಲಾಹೋರಿಗೆ ಪ್ರಯಾಣ ಮಾಡುತ್ತಿದ್ದರು. ಇವರು ಅಮೃತಸರದ ಮೂಲಕ ಹಾದು ಹೋಗಬೇಕಾಗಿತ್ತು. ಅಮೃತಸರದಲ್ಲಿ ಪಶ್ಚಿಮ ಪಂಜಾಬಿನ 70 ಸಾವಿರ ನಿರಾಶ್ರಿತರು ಬೀಡುಬಿಟ್ಟಿದ್ದರು. ಇವರೆಲ್ಲ ಉದ್ರಿಕ್ತ ಮನಃಸ್ಥಿತಿಯಲ್ಲಿದ್ದರು. ಆಗ ನೆಹರೂ ಅವರು ಅಮೃತಸರವನ್ನು ಬಳಸಿಕೊಂಡು ಹೋಗಲು ಸಾಧ್ಯವಾಗುವಂತೆ ಹೊಸ ರಸ್ತೆಯೊಂದನ್ನು ನಿರ್ಮಿಸಲು ಸಲಹೆಮಾಡಿ ನಿರಾಶ್ರಿತರ ಎರಡು ಗುಂಪುಗಳ ಮುಖಾಮುಖಿಯನ್ನು ತಪ್ಪಿಸಿದರು.

ಇದು ಇತಿಹಾಸ ಕಂಡರಿಯದ ಭಾರಿ ಪ್ರಮಾಣದ ವಲಸೆಯಾಗಿತ್ತು ಎಂಬುದು ಪ್ರಶ್ನಾತೀತ. ಕೆಲವೇ ಕೆಲವು ದಿನಗಳಲ್ಲಿ ಇಷ್ಟೊಂದು ಲಕ್ಷಾಂತರ ಜನ ಗುಳೆ ಹೋದದ್ದು ಕಂಡು ಕೇಳಿದ ಇತಿಹಾಸದಲ್ಲಿ ಎಲ್ಲೂ ಕಾಣಸಿಗುವುದಿಲ್ಲ. ಏಕಾಏಕಿ ಎಲ್ಲವನ್ನೂ ತ್ಯಜಿಸಿ ಅವರು ಪಲಾಯನ ಮಾಡಿದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಬರೆದಿದ್ದಾರೆ:

> *ಬಿಸಿಲು ಮಳೆ ಪ್ರವಾಹ ಪಂಜಾಬಿನ ಮೈ ಗದಗುಟ್ಟಿಸುವ ಚಳಿ ಯಾವುದನ್ನೂ ಲೆಕ್ಕಿಸದೆ ಮನೆ ಮಠ ಬಿಟ್ಟು ಪಲಾಯನಗೈದರು. ನಿರಾಶ್ರಿತರ ತಂಡಗಳ ಪದಾಘಾತದಿಂದ, ನಿರಾಶ್ರಿತರಿದ್ದ ಚಕ್ಕಡಿಗಳಿಂದ ಎದ್ದ ಧೂಳು ಭಾರತೀಯ ಪ್ರಸ್ಥಭೂಮಿಯ ಉದ್ದಗಲ ಆವರಿಸಿ, ಬೆವರು-ಭೀತಿ, ಮಾನವರ ಮಲ-ಮೂತ್ರಗಳು ಮತ್ತು ಕೊಳೆತ ದೇಹಗಳ ವಾಸನೆಯೊಂದಿಗೆ ಬೆರೆತುಹೋಯಿತು. ದ್ವೇಷದ ಕಾರ್ಮೋಡ ಚದುರಿದಂತೆ ಸತ್ತವರ ಯಾದಿ ತಯಾರಿಸುವ ಕಾರ್ಯಾರಂಭವಾಯಿತು. ಸತ್ತವರ ಯಾದಿಯಲ್ಲಿ ಐದು ಲಕ್ಷಕ್ಕೂ ಹೆಚ್ಚು ಹೆಸರುಗಳು ನಾಡಿನುದ್ದಗಲ ಪ್ರತಿಧ್ವನಿಸಿ ಆಘಾತವುಂಟು ಮಾಡಿದವು. ದಿಗ್ಭ್ರಮೆಗೊಳಿಸಿದವು. ಗುಂಡೇಟಿನಿಂದ ಸತ್ತವರು, ಚೂರಿ ಇರಿತದಿಂದ ಸತ್ತವರು, ಕತ್ತಿ ಬೀಸಿನಿಂದ ಸತ್ತವರು, ಸಾಂಕ್ರಾಮಿಕ ರೋಗಗಳಿಂದ ಸತ್ತವರು ಇವರೆಲ್ಲ. ಅಧಿಕ ಸಂಖ್ಯೆಯ ಜನ ಹಿಂಸಾಚಾರಗಳಲ್ಲಿ ಹತ್ಯೆಗೀಡಾದರೆ, ಮುದುಕರು, ಮೋಟರು, ಅಮಾಯಕರು ಲೂಟಿಯಾದ ಹೊಲಮನೆಗಳನ್ನು ನೋಡಿಕೊಳ್ಳುತ್ತಲೇ ಅಸುನೀಗಿದರು. ನ್ಯಾಯ–ವಿವೇಕಗಳು ಅಂತ್ಯಗೊಂಡು, ಮಾನವರು ಉನ್ಮತ್ತರಾಗಿ ರೋಷಾವೇಶದಿಂದ ವರ್ತಿಸತೊಡಗಿದಾಗ ಯಾವ ಸುಖಕ್ಕಾಗಿ ಬದುಕಬೇಕು? ಬದುಕಿನಲ್ಲಿ ಒಳಿತು ಎನ್ನುವುದಾದರೂ ಏನಿದ್ದೀತು? ಭಲ್ಲೆಯ ತುದಿಯಿಂದ ನಿಮ್ಮ ಮಗುವನ್ನು, ಕಗ್ಗತ್ತಲೆಯ ಬಾವಿಯೊಳಗಿಂದ ನಿಮ್ಮ ಪ್ರಿಯಕರನನ್ನು ಏತಕ್ಕಾದರೂ ರಕ್ಷಿಸಬೇಕು?*

ಪಶ್ಚಿಮ ಪಂಜಾಬಿನ ರಾಜ್ಯಪಾಲ ಸರ್ ಫ್ರಾನ್ಸಿಸ್ ಮ್ಯೂಡಿಯ ಕಣ್ಣಿಗೆ ರಾಚುವಂಥ ಪಕ್ಷಪಾತತನದ ಆಡಳಿತ ಪ್ರಾಂತ್ಯದಲ್ಲಿ ಕಷ್ಟ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು; ಪ್ರಕ್ಷುಬ್ಧಗೊಳಿಸಿತು. ಅವನು ಕಾಂಗ್ರೆಸ್‌ನ ಕಡು ವಿರೋಧಿಯಾಗಿದ್ದ. ಯಾರ ನೆರವು ಇಲ್ಲದೇ ತನ್ನಷ್ಟಕ್ಕೇ ಆಳಬಹುದೆಂದು ಮ್ಯೂಡಿ ಭಾವಿಸಿದ್ದ. ಹೀಗೆ ಅವನು ಮಂತ್ರಿಮಂಡಲಕ್ಕೆ ಅಡ್ಡಿಯಾಗಿ ನಿಂತ. ಪಶ್ಚಿಮ ಮತ್ತು ಪೂರ್ವ ಪಂಜಾಬಿನ ನಡುವೆ, ತನ್ಮೂಲಕ ಭಾರತ-ಪಾಕಿಸ್ತಾನಗಳ ನಡುವೆ ಸ್ನೇಹಸೇತು ನಿರ್ಮಿಸುವ ಮಂತ್ರಿ ಮಂಡಲದ ಪ್ರಯತ್ನಗಳನ್ನು ಭಗ್ನಗೊಳಿಸಿದ. ದುರಂತವೆಂದರೆ, ಪಾಕಿಸ್ತಾನದ ರಾಜಕಾರಣಿಗಳು ಧರ್ಮಾಂಧತೆ ವಿರುದ್ಧ ಎದ್ದು ನಿಲ್ಲಲು, ಮಾತನಾಡಲು ಸಿದ್ಧರಿರಲಿಲ್ಲ. ಖಾಸಗಿ ಆಲೋಚನೆಗಳು, ವಿಚಾರಗಳು ಏನೇ ಇದ್ದರೂ ಬಹಿರಂಗವಾಗಿ ಮಾತನಾಡಲು ಅವರು ಸಿದ್ಧರಿರಲಿಲ್ಲ. ಪಾಕಿಸ್ತಾನದ ಹೊಸ ಗೌರ್ನರ್ ಜನರಲ್ ಮೊಹಮದಾಲಿ ಜಿನ್ನಾ ಅವರ ಕೇಂದ್ರ ಕಚೇರಿ ಕರಾವಳಿ ನಗರವಾದ

ಕರಾಚಿಯಲ್ಲಿತ್ತು. ಕರಾಚಿ ದೇಶದ ರಾಜಧಾನಿ. ಜಿನ್ನಾ ಪರ್ದಾದೊಳಗೆ, ಕಟ್ಟೆಚ್ಚರದ ರಕ್ಷಣೆಯೊಳಗೆ ಲಾಹೋರಿಗೆ ಭೇಟಿ ಕೊಟ್ಟಿದ್ದರು. ಈ ಪುಕ್ಕಲುತನ, ಭಾರತದ ಇಬ್ಬರು ಸರ್ವೋಚ್ಚ ರಾಜಕಾರಣಿಗಳು ತಮ್ಮ ನಡುವಣ ಅಲ್ಪಸಂಖ್ಯಾತರ ರಕ್ಷಣೆಯಲ್ಲಿ ತೋರಿದ ಶ್ಲಾಘನೀಯ ಧೈರ್ಯಕ್ಕೆ ತದ್ವಿರುದ್ಧವಾಗಿತ್ತು. ಪಶ್ಚಿಮ ಬಂಗಾಳದ ಮುಸ್ಲಿಮರಲ್ಲಿ ನೆಹರೂ-ಗಾಂಧಿಯವರ ಬಗ್ಗೆ ಗೌರವಾದರಗಳು, ಕೀರ್ತಿಖ್ಯಾತಿಗಳು ಹಿಂದೆಂದೂ ಇಷ್ಟು ಮೇರುಮಟ್ಟದಲ್ಲಿರಲಿಲ್ಲ.

ಏತನ್ಮಧ್ಯೆ, ಬಂಗಾಳದಲ್ಲಿ ಮತ್ತೊಮ್ಮೆ ಗಲಭೆ ಭುಗಿಲೆದ್ದಿತು. ನೌಖಾಲಿಯಲ್ಲಿ ಹೊಸದಾಗಿ ಗಲಭೆಗಳು ಸಂಭವಿಸಿದ್ದ ವರದಿಯಾಯಿತು. ಕಲ್ಕತ್ತೆ ನಗರದಲ್ಲಿ, ಗಾಂಧೀಜಿಯವರು ದತ್ತು ತೆಗೆದುಕೊಂಡಿದ್ದ ಬೆಲಿಯಾಘಾಟ್ ಪ್ರದೇಶಲ್ಲೆ ಶಾಂತಿ ಭಂಗವಾಯಿತು. ಇಲ್ಲಿ ಆಗಸ್ಟ್ 31ರಂದು ಮುಸ್ಲಿಮರು ಹಿಂದೂ ಯುವಕನೊಬ್ಬನ ಮೇಲೆ ಹಲ್ಲೆ ನಡೆಸಿದರು. ಇದಕ್ಕೆ ಪ್ರತೀಕಾರವಾಗಿ ಹಿಂಸಾಚಾರ ಶುರುವಾಯಿತು. ಹಿಂಸಾಚಾರ ಹಬ್ಬಿತು. ಸೆಪ್ಟಂಬರ್ 1ರ ಸಂಜೆ ವೇಳೆಗೆ ಐವತ್ತು ಜನ ಸತ್ತು ಶವವಾಗಿದ್ದರು. ಅಂದು ರಾತ್ರಿ ಗಾಂಧೀಜಿ ಉಪವಾಸ ಸತ್ಯಾಗ್ರಹದ ನಿರ್ಧಾರ ಕೈಗೊಂಡರು. ಆದರೆ ಗೂಂಡಾಗಳ ವಿರುದ್ಧ ಉಪವಾಸ ಸತ್ಯಾಗ್ರಹ ನಿಮ್ಮಿಂದ ಹೇಗೆ ಸಾಧ್ಯವಾದೀತು? ಎಂದು ಮಿತ್ರರೊಬ್ಬರ ಪ್ರಶ್ನೆ. ಪ್ರತ್ಯಕ್ಷದರ್ಶಿಯೊಬ್ಬರ ಪ್ರಕಾರ, ಗಾಂಧೀಜಿ ಉತ್ತರ ಹೀಗಿತ್ತು:

> *"ಕಲ್ಕತ್ತೆಯನ್ನು ನಿಯಂತ್ರಿಸುವುದು ನನ್ನಿಂದ ಸಾಧ್ಯವಾದಲ್ಲಿ ಪಂಜಾಬನ್ನೂ ನಿಭಾಯಿಸಬಲ್ಲೆ ಎಂಬುದು ನನಗೆ ಗೊತ್ತು. ಆದರೆ ನಾನೀಗ ಹಿಂಜರಿದಲ್ಲಿ ದಳ್ಳುರಿ ಶೀಘ್ರದಲ್ಲೇ ಹಬ್ಬಬಹುದು, ಹರಡಬಹುದು. ಎರಡು ಅಥವಾ ಮೂರು ಶಕ್ತಿಗಳು (ವಿದೇಶಿ) ನಮ್ಮ ಮೇಲೆರಗಿ ಅಲ್ಪಾಯುವಾದ ನಮ್ಮ ಸ್ವಾತಂತ್ರ್ಯದ ಕನಸನ್ನು ಕೊನೆಗಾಣಿಸುತ್ತವೆ ಎಂಬುದು ನನಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ."*

"ಆದರೆ ನೀವು ಗತಿಸಿದಲ್ಲಿ ದಳ್ಳುರಿ ಇನ್ನಷ್ಟು ವ್ಯಾಪಿಸುತ್ತದೆ" ಎಂದು ಆ ಮಿತ್ರರ ಮಾರುತ್ತರ. "ಕನಿಷ್ಠ, ಅದನ್ನು ನೋಡಲು ನಾನಂತೂ ಇರುವುದಿಲ್ಲ. ನನ್ನಿಂದಾದ ಕಿಂಚಿತ್ ಕರ್ತವ್ಯವನ್ನು ನೆರವೇರಿಸಿದಂತಾಗುತ್ತದೆ" ಎಂದರು ಗಾಂಧೀಜಿ.

ಗಾಂಧೀಜಿ ಸೆಪ್ಟಂಬರ್ 2ರಂದು ಉಪವಾಸ ಆರಂಭಿಸಿದರು. ಮರುದಿನ, ಹಿಂದೂ-ಮುಸ್ಲಿಂ ಗೂಂಡಾಗಳು ಅವರ ಪದತಲದಲ್ಲಿ ಶಸ್ತ್ರಾಸ್ತ್ರ ತ್ಯಾಗ ಮಾಡಲಿದ್ದರು. ನಗರದ ವಿವಿಧ ಭಾಗಗಳಲ್ಲಿ ಕೋಮು ಸೌಹಾರ್ದತೆಗಾಗಿ ಮಿಶ್ರಸ್ವರೂಪದ ಮೆರವಣಿಗೆಗಳು ನಡೆದವು. ಇನ್ನು ಗಲಭೆಗಳು ನಡೆಯುವುದಿಲ್ಲ ಎಂದು ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಹಿಂದೂ ಮಹಾಸಭಾದ ಪ್ರತಿನಿಧಿಗಳನ್ನೊಳಗೊಂಡ ಪ್ರಮುಖ ರಾಜಕಾರಣಿಗಳ ನಿಯೋಗವೊಂದು ಗಾಂಧೀಜಿಗೆ ಭರವಸೆ ನೀಡಿತು. ಮಹಾತ್ಮರು ತಮ್ಮ ಮೂರು ದಿನಗಳ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿದರು.

ಶಾಂತಿ ನೆಲೆಸಿತು. ನಿರಾಯುಧನಾದ ವ್ಯಕ್ತಿಯೊಬ್ಬ ಪಂಜಾಬಿನಲ್ಲಿ ಐದು ಸಾವಿರ ಸೈನಿಕರಿಗಿಂತಲೂ ಹೆಚ್ಚು ಪರಿಣಾಮ ಉಂಟು ಮಾಡಿದ್ದಾನೆ ಎಂದು ಲಾರ್ಡ್ ಮೌಂಟ್ ಬ್ಯಾಟನ್ ಪ್ರತಿಕ್ರಿಯೆಗೆ ಪ್ರೇರೇಪಿಸಿತು. ಮಹಾತ್ಮರು ಮತ್ತು ಅವರ ಅಭಿಮಾನಿಗಳು 'ಸ್ಟೇಟ್ಸ್ಮನ್'ನ ಅತ್ಯಮೂಲ್ಯವಾದ ಇಂಥದೇ ಪ್ರಶಂಸೆಗೆ ಪಾತ್ರರಾದರು. ಕಲ್ಕತ್ತೆಯ 'ಸ್ಟೇಟ್ಸ್ಮನ್' ಬ್ರಿಟಿಷ್ ಮಾಲೀಕತ್ವದ ಪತ್ರಿಕೆ. ಬಹುಕಾಲದಿಂದ ಗಾಂಧೀಜಿಯವರನ್ನು ಹಾಗೂ ಅವರ ರಾಜಕಾರಣವನ್ನು ವಿರೋಧಿಸುತ್ತಿದ್ದ ಈ ಪತ್ರಿಕೆ ಹೀಗೆ ಬರೆಯಿತು:

> *"ಉಪವಾಸವನ್ನು ಒಂದು ರಾಜಕೀಯ ಅಸ್ತ್ರವಾಗಿ ಮಾಡಿಕೊಳ್ಳುವುದರ ನೈತಿಕತೆ ವಿಷಯದಲ್ಲಿ, ಹಲವಾರು ವರ್ಷಗಳಿಂದ ಆದರ ಪ್ರಖ್ಯಾತ ಭಾರತೀಯ ಕಾರ್ಯಾನುವರ್ತಿಯೊಂದಿಗೆ ಒಡಂಬಡುವುದು ನಮ್ಮಿಂದ ಸಾಧ್ಯವಾಗಿಲ್ಲ...ಆದರೆ, ನಾವು ಕಂಡಂತೆ ಇಷ್ಟು ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಮಹಾತ್ಮ ಗಾಂಧಿಯವರು ಹಿಂದೆಂದೂ ಇಂಥದೊಂದು ಯೋಗ್ಯ ಕಾರ್ಯಕಾರಣಗಳಿಗಾಗಿ ಉಪವಾಸ ಮಾಡಿರಲಿಲ್ಲ ಅಥವಾ ಇದು ಇಷ್ಟು ಕ್ಷಿಪ್ರವಾಗಿ ಸಾರ್ವಜನಿಕರ ಅಂತಃಸ್ಸಾಕ್ಷಿಯ ಮೇಲೆ ಪರಿಣಾಮ ಬೀರುವುದೆಂದು ಎಣಿಕೆ ಮಾಡಿರಲಿಲ್ಲ."*

ಬೆಲಿಯಾಘಾಟ್‌ನಲ್ಲಿ ನಾಲ್ಕು ವಾರಗಳನ್ನೂ ಕಳೆದ ನಂತರ, ಸೆಪ್ಟಂಬರ್ 7ರಂದು ಗಾಂಧೀಜಿ ದೆಹಲಿಗೆ ಪ್ರಯಾಣ ಬೆಳೆಸಿದರು. ಅಲ್ಲಿಂದ ಪಂಜಾಬಿಗೆ ಹೋಗುವುದು ಅವರ ಆಶಯವಾಗಿತ್ತು. ಆದರೆ ರಾಜಧಾನಿಗೆ ಆಗಮಿಸಿದ ಕೂಡಲೆ ಅವರಿಗೆ ಎದುರಾದದ್ದು ಹೊಡೆದಾಟ-ಬಡಿದಾಟಗಳ, ಸಂಘರ್ಷ-ತಿಕ್ಕಾಟಗಳ, ಉಚ್ಚಾಟನೆಗಳ ವರದಿಗಳು. ದೆಹಲಿಯ ಮುಸ್ಲಿಮರು ಭಯಭೀತರಾಗಿದ್ದರು. ಅವರ ಮನೆಗಳು, ಮಸೀದಿಗಳು, ಹೆಚ್ಚು ಹೆಚ್ಚು ಆಕ್ರಮಣಗಳಿಗೆ, ಹಲ್ಲೆಗಳಿಗೆ ಒಳಗಾಗಿದ್ದವು. ಇತ್ತೀಚಿನ ವಾರಗಳಲ್ಲಿ 137ಕ್ಕೂ ಹೆಚ್ಚು ಮಸೀದಿಗಳನ್ನು ನಾಶಪಡಿಸಲಾಗಿದೆಯೆಂಬುದನ್ನು ಗಾಂಧೀಜಿಯವರ ಗಮನಕ್ಕೆ ತರಲಾಯಿತು. ಹಿಂದೂ ಮತ್ತು ಸಿಖ್ ನಿರಾಶ್ರಿತರು ಬಲಾತ್ಕಾರದಿಂದ ಮುಸ್ಲಿಮರ ಮನೆಗಳನ್ನು ವಶಪಡಿಸಿಕೊಂಡಿದ್ದರು. ಶಾಂತಿ ತತ್ವಗಳಲ್ಲಿ ನಿಷ್ಠೆಯುಳ್ಳ ಕ್ವೇಕರ್ ಮಿತ್ರ ಮಂಡಳಿಯ ಪರಿಹಾರ ಕಾಮಗಾರಿ ನೋಡಿಕೊಳ್ಳುತ್ತಿದ್ದ ಕಾರ್ಯಕರ್ತನೊಬ್ಬ ವರದಿ ಮಾಡಿದಂತೆ, ಸರ್ಕಾರಿ ಅಧಿಕಾರಿಗಳು, ವರ್ತಕರು, ಕುಶಲಕರ್ಮಿಗಳು, ಟಾಂಗಾವಾಲಾಗಳು, ಶವವಾಹಕರು ಸೇರಿದಂತೆ ಎಲ್ಲ ವರ್ಗಗಳ ಮುಸ್ಲಿಮರೂ ಪುರಾನಾ ಕಿಲ್ಲಾದಂಥ ಪ್ರಕೃತಿದತ್ತ ಭದ್ರನೆಲೆಗಳಿಗೆ ಪಲಾಯನ ಮಾಡಿದ್ದರು. ಪುರಾನಾ ಕಿಲ್ಲಾ ನಗರದ ಮಧ್ಯಭಾಗದಲ್ಲಿರುವ ಬೃಹತ್ ಗೋಡೆಗಳಿಂದಾವೃತವಾದ ಭದ್ರಕೋಟೆ. ಮುಘಲ್ ಚಕ್ರವರ್ತಿ ಹುಮಾಯೂನ್‌ನ ಗೋರಿ ಇಲ್ಲಿದೆ. ಪುರಾನಾ ಕಿಲ್ಲಾ ಒಂದರಲ್ಲೇ 60,000 ನಿರಾಶ್ರಿತರು ಗುಡಾರಗಳಲ್ಲಿ ಅಡಗಿ ಕುಳಿತಿದ್ದರು. ಕೋಟೆಯ ಮಾಡ-ಮಾಳಿಗೆಗಳಲ್ಲಿ, ಬಯಲಿನಲ್ಲಿ, ತಮ್ಮ ಒಂಟೆಗಳು, ಕುದುರೆಗಳು, ಟಾಂಗಾಗಳು, ಹಳೆಯ ಟ್ಯಾಕ್ಸಿಗಳು ಭವ್ಯ ಲಿಮೋಸಿನ್‌ಗಳೊಂದಿಗೆ ನಿರಾಶ್ರಿತರು ಬಿಡಾರ ಹೂಡಿದ್ದರು.

ಗಾಂಧೀಜಿ ತಮ್ಮ ಪಂಜಾಬ್ ಕಾರ್ಯಕ್ರಮವನ್ನು ತಡೆಹಿಡಿದರು. ರಾಜಧಾನಿಯೊಳಗೆ ಮತ್ತು ಹೊರವಲಯಗಳಲ್ಲಿನ ನಿರಾಶ್ರಿತರ ಶಿಬಿರಗಳಿಗೆ ಭೇಟಿಕೊಟ್ಟರು. ದೆಹಲಿಯ ಸುತ್ತಣ ಬಯಲು ಪ್ರದೇಶದಲ್ಲಿ ಮೆಯೊ ಎಂಬ ರೈತ ಸಮುದಾಯದವರು ಬಿಡಾರ ಹೂಡಿದ್ದರು. ಮಿಯೋಗಳು ಶ್ರದ್ಧೆ-ನಂಬಿಕೆಯಲ್ಲಿ ಮುಸ್ಲಿಂ ಧರ್ಮಾನುಯಾಯಿಗಳಾದರೂ ನಿತ್ಯಜೀವನದಲ್ಲಿ ನೆರೆಹೊರೆಯ ಹಿಂದೂಗಳ ಆಚಾರವಿಚಾರಗಳನ್ನೇ ಅಳವಡಿಸಿಕೊಂಡಿದ್ದರು. ಆಗಿನ ಹುಚ್ಚು ಆವೇಶದಲ್ಲಿ ಈ ಸಮನ್ವಯ ಮರೆತೇ ಹೋಯಿತು. ಸಾವಿರಾರು ಮಂದಿ ಮೆಯೋಗಳ ಹತ್ಯೆಯಾಯಿತು, ಮನೆಗಳಿಂದ ಅವರನ್ನು ಹೊರದೂಡಲಾಯಿತು. ಮೆಯೋಗಳ ಮನೆಗಳು ಭಾರತದ ಗಡಿಯೊಳಗಿರಲಿ ಅಥವಾ ರಾಜ ಮಹಾರಾಜರ ಆಳ್ವಿಕೆಯ ಆಳ್ವಾರ್ ಮತ್ತು ಭರತಪುರಗಳಲ್ಲಿರಲಿ, ಇದಾವುದನ್ನೂ ಲೆಕ್ಕಿಸದೆ ಅವರುಗಳನ್ನು ಹೊರಗಟ್ಟಲಾಯಿತು.

ಗಾಂಧೀಜಿಯವರ ಜೀವನ ಚರಿತ್ರೆಕಾರರಾದ ಡಿ.ಜಿ. ತೆಂಡೂಲ್ಕರ್ ಬರೆಯುತ್ತಾರೆ, "ಸೆಪ್ಟೆಂಬರ್ ತಿಂಗಳು ಉದ್ದಕ್ಕೂ ಗಾಂಧೀಜಿ ಆಸ್ಪತ್ರೆಗಳು ಮತ್ತು ನಿರಾಶ್ರಿತರ ಶಿಬಿರಗಳಿಗೆ ಭೇಟಿಕೊಟ್ಟು ನೊಂದ ಜನರಿಗೆ ಸಾಂತ್ವನ ಹೇಳಿದರು." ಹಿಂದಿನದನ್ನು ಮರೆತುಬಿಡುವಂತೆ ಹಿಂದೂಗಳಿಗೆ, ಸಿಖ್ಖರಿಗೆ ಮತ್ತು ಮುಸ್ಲಿಮರಿಗೆ ಮನವಿಮಾಡಿದ ಅವರು, ನೊಂದ ಈ ಜನ ತಮ್ಮ ಕಷ್ಟ-ನಷ್ಟ-ನೋವುಗಳ ಬಗ್ಗೆಯೇ ಚಿಂತೆ ಮಾಡುತ್ತಾ ಕೂರದೆ, ಸಹಬಾಳ್ವೆಗಾಗಿ ಕೈಚಾಚುವಂತೆ, ಶಾಂತಿಯಿಂದ ಸಹಬಾಳ್ವೆ ನಡೆಸುವ ನಿರ್ಧಾರ ಕೈಗೊಳ್ಳುವಂತೆ ಕೇಳಿಕೊಂಡರು. ಬೇಗ ದೆಹಲಿಯಲ್ಲಿ ಶಾಂತಿ ತನ್ನಿ ಎಂದು ಜನರನ್ನು ಬೇಡಿಕೊಂಡರು. ದೆಹಲಿ ಶಾಂತವಾದರೆ ತಾವು ಪೂರ್ವ ಮತ್ತು ಪಶ್ಚಿಮ ಪಂಜಾಬುಗಳಿಗೆ ಹೋಗಲು ಸಾಧ್ಯವಾದೀತೆಂದು ಜನರಿಗೆ ತಿಳಿಸಿದರು. "ಹಿಂದೂಗಳು ಮತ್ತು ಸಿಖ್ಖರ ಮೇಲೆ ನಡೆಸಿದರೆನ್ನಲಾದ ದೌರ್ಜನ್ಯದ ಕಳಂಕವನ್ನು ತೊಡೆದುಕೊಳ್ಳುವಂತೆ ಮುಸಲ್ಮಾನರ ಮನ ಒಲಿಸಲು ತಾವು ಪಂಜಾಬಿಗೆ ಹೋಗುತ್ತಿರುವುದಾಗಿ ತಮ್ಮ ಮನವಿಯಲ್ಲಿ ತಿಳಿಸಿದ್ದರು. ಆದರೆ ಈ ಕಾರ್ಯದಲ್ಲಿ ತಾವು ಯಶಸ್ವಿಯಾಗುವ ಆಸೆ ನಂಬಿಕೆಗಳು ಅವರಲ್ಲಿರಲಿಲ್ಲ, ಏಕೆಂದರೆ ದೆಹಲಿಯಲ್ಲಿ ಮುಸಲ್ಮಾನರಿಗೆ ನ್ಯಾಯ ದೊರಕಿಸಿಕೊಡದೆ ಅಂಥ ಆಸೆ ಇಟ್ಟುಕೊಳ್ಳುವುದು ಅಸಾಧ್ಯವೆನಿಸಿತ್ತು ಅವರಿಗೆ."

ಗಾಂಧೀಜಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಬಿರವೊಂದನ್ನುದ್ದೇಶಿಸಿಯೂ ಮಾತನಾಡಿದ್ದರು. 1925ರಲ್ಲಿ ಮಹಾರಾಷ್ಟ್ರದ ವೈದ್ಯನೊಬ್ಬ ಸ್ಥಾಪಿಸಿದ ಈ ಸಂಘ, ಒಂದು ಸಂಘಟಿತವಾದ, ಹಿಂದೂ ಯುವ ಜನತೆಯ ಪ್ರೇರಕಶಕ್ತಿಯಾದ ಸಂಸ್ಥೆ. ಈ ಸಂಘದ ಶಿಸ್ತು, ಜಾತಿಮತಗಳ ಬಗೆಗಿನ ನಿರ್ಭಾವುಕತೆಗಳನ್ನು ಗಾಂಧೀಜಿ ಮೆಚ್ಚಿಕೊಂಡಿದ್ದರು. ಆದರೆ ಉಳಿದ ಧರ್ಮಗಳ ಬಗ್ಗೆ ಅದರ ವಿರೋಧ-ವೈಷಮ್ಯಗಳನ್ನು ಅವರು ಮೆಚ್ಚಿಕೊಂಡಿರಲಿಲ್ಲ. ಗಾಂಧೀಜಿ ಆರ್.ಎಸ್.ಎಸ್. ಸದಸ್ಯರಿಗೆ ಹೀಗೆ ಹೇಳಿದರು: "ಭಾರತದಲ್ಲಿ ಹಿಂದೂಗಳು ಹೊರತಾಗಿ ಬೇರೆ ಯಾರಿಗೂ ತಾವಿಲ್ಲ ಎಂಬುದು ಹಿಂದೂಗಳ ಅಭಿಪ್ರಾಯವಾದಲ್ಲಿ, ಇಲ್ಲಿ ಬಾಳಿ ಬದುಕಲಿಚ್ಛಿಸುವ ಹಿಂದೂಗಳಲ್ಲದವರು, ವಿಶೇಷವಾಗಿ ಮುಸ್ಲಿಮರು ಹಿಂದೂಗಳ ಗುಲಾಮರಾಗಿಯೇ ಬದುಕಬೇಕಾಗುತ್ತದೆ. ಇವರು ಹಿಂದುತ್ವವನ್ನು ಕೊಂದು

ಹಾಕುತ್ತಾರೆ.” ಆರ್.ಎಸ್.ಎಸ್. ಸುಸಂಘಟಿತವಾದ, ಸುವ್ಯವಸ್ಥಿತವಾದ, ಶಿಸ್ತಿನಿಂದ ಕೂಡಿದ ಸಂಸ್ಥೆ ಎಂಬುದು ಗಾಂಧೀಜಿಯವರಿಗೆ ಮನವರಿಕೆಯಾಗಿತ್ತು. ಆದರೆ, ಅವರು ಆರ್.ಎಸ್.ಎಸ್. ಸದಸ್ಯರಿಗೆ, ಅವರ ಶಕ್ತಿಯನ್ನು ಭಾರತದ ಹಿತಾಸಕ್ತಿಯ ಪರವಾಗಿಯೂ ಅಥವಾ ವಿರುದ್ಧವಾಗಿಯೂ ಬಳಸಿಕೊಳ್ಳುವ ಸಾಧ್ಯತೆಯಿದೆಯೆಂದು ತಿಳಿಯ ಹೇಳಿದರು. ಕೋಮು ದ್ವೇಷ ಪ್ರಚೋದಿಸುತ್ತಿದೆ ಎಂಬ ಆರ್.ಎಸ್.ಎಸ್. ವಿರುದ್ಧದ ಆಪಾದನೆಗಳಲ್ಲಿ ಸತ್ಯಾಂಶವಿದೆಯೇ ಇಲ್ಲವೇ ಎನ್ನುವುದು ಅವರಿಗೆ ಗೊತ್ತಿರಲಿಲ್ಲ. ಈ ಆಪಾದನೆಗಳು ನಿರಾಧಾರವಾದುದೆಂದು ತಮ್ಮ ಸಮವಸ್ತ್ರ ನಡವಳಿಕೆ ಮೂಲಕ ಸಾಬೀತು ಪಡಿಸುವುದು ಸಂಘದ ಹೊಣೆಯಾಗಿತ್ತು.

ಗಾಂಧೀಜಿಯವರಂತೆ, ಸಂಘಕ್ಕೆ ಸಂಶಯದ ಲಾಭ ಕೊಡಲು ನೆಹರೂ ಸಿದ್ಧರಿರಲಿಲ್ಲ. ಅವರು ತಮ್ಮ ಗೃಹಸಚಿವ ವಲ್ಲಭಭಾಯಿ ಪಟೇಲರಿಗೆ ಹೇಳಿದ್ದರು: “ದೆಹಲಿ ಮಾತ್ರವಲ್ಲ, ಬೇರೆಡೆಗಳಲ್ಲಿಯೂ ಗಲಭೆಗಳಲ್ಲಿ ಆರ್.ಎಸ್.ಎಸ್. ಕೈವಾಡ ದೊಡ್ಡ ಪ್ರಮಾಣದಲ್ಲೇ ಇದೆ.” ಅಮೃತಸರದಲ್ಲಿ ಅವರ ಕಾರ್ಯಚಟುವಟಿಕೆಗಳು ತುಂಬಾ ಸ್ಪಷ್ಟವಾಗಿದ್ದವು. ಆರ್.ಎಸ್.ಎಸ್. ಬಗ್ಗೆ ನೆಹರೂ ಹೊಂದಿದ್ದ ಭಾವನೆಗಳು-ಅಭಿಪ್ರಾಯಗಳು, ಕೋಮು ಪರಿಸ್ಥಿತಿಯ ಬಗೆಗಿನ ವ್ಯಾಕುಲದಿಂದ ಉದ್ಭವಿಸಿತ್ತು. “ಸರ್ಕಾರವನ್ನು ಪದಚ್ಯುತಗೊಳಿಸಲು, ಬುಡಮೇಲುಗೊಳಿಸಲು ಸಿಖ್ಖರು ಮತ್ತು ಹಿಂದೂಗಳ ಕೆಲವು ಶಕ್ತಿಗಳು ಸುಸಂಘಟಿತ ಪ್ರಯತ್ನ ನಡೆಸಿವೆಯೆಂಬುದು” ನೆಹರೂ ಆಲೋಚನೆಯಾಗಿತ್ತು. “ಅಥವಾ ಈಗಿನ ಸರ್ಕಾರದ ಸ್ವರೂಪ ಬದಲಾಯಿಸುವುದಾದರೂ ಈ ಶಕ್ತಿಗಳ ಪ್ರಯತ್ನವಾಗಿತ್ತೆಂದು ಅವರು ಭಾವಿಸಿದ್ದರು. ಇದು ಕೋಮುಗಲಭೆಗಿಂತ ಮೀರಿದ್ದು, ಇವರಲ್ಲಿ ಅನೇಕ ಮಂದಿ ಕ್ರೂರಿಗಳು ಹಾಗೂ ಪಾಷಾಣಿಗಳು. ಇವರು ಶುದ್ಧಾಂಗ ಭಯೋತ್ಪಾದಕರಾಗಿ ಕೆಲಸ ಮಾಡಿದ್ದಾರೆ.”

ಚಿಂತೆ ಹೆಚ್ಚಾಗಲು ಇನ್ನೂ ಒಂದು ಕಾರಣವಿತ್ತು. ಅದೆಂದರೆ, ಮತಾಂಧರು, ಧರ್ಮಾಂಧರು “ಸಾರ್ವಜನಿಕ ಅಭಿಪ್ರಾಯ ತಮ್ಮ ಪರ ಅನುಕೂಲಕರವಾಗಿರುವಂಥ” ಪರಿಸ್ಥಿತಿಯಲ್ಲಿ ಕಾರ್ಯನಿರತರಾಗಿದ್ದರು. ದೆಹಲಿಯಲ್ಲಿ ವಿಶೇಷವಾಗಿ ಪಾಕಿಸ್ತಾನದಿಂದ ಬಂದಿದ್ದ ಹಿಂದೂ ಮತ್ತು ಸಿಖ್ ನಿರಾಶ್ರಿತರು ರಕ್ತದಾಹದಿಂದ ಊಳಿಡುತ್ತಿದ್ದರು. ಭಾರತ, ಮುಸ್ಲಿಮರು ಸ್ವತಂತ್ರವಾಗಿ ದುಡಿದು ಜೀವಿಸುವ ದೇಶವಾಗಿರಬೇಕೆಂಬುದು ಪ್ರಧಾನಮಂತ್ರಿಯವರ ಆಗ್ರಹವಾಗಿತ್ತು. ಗೌರ್ನರ್ ಜನರಲ್ ಸಿಬ್ಬಂದಿಯಾಗಿದ್ದ ಆಂಗ್ಲನೊಬ್ಬ ಹೀಗೆ ಬರೆದಿದ್ದಾನೆ:“ವಿಷಮ ಪರಿಸ್ಥಿತಿಯಲ್ಲಿ ನೆಹರೂ ಅವರನ್ನು ಹತ್ತಿರದಿಂದ, ನಿಕಟವಾಗಿ ಗಮನಿಸುವುದೇ ಒಂದು ಸ್ಫೂರ್ತಿದಾಯಕ ಅನುಭವ. ಅವರು ಮಾನವೀಯತೆಯ ಹಾಗೂ ನಾಗರಿಕ ಬುದ್ಧಿಯ ಸಮರ್ಥನೆಯ ಪ್ರತಿರೂಪದಂತಿದ್ದರು. ವ್ಯಕ್ತಿಗತ ಆಸಕ್ತಿಯಿಂದ ಹಿಡಿದು ಸಮೂಹ ಸನ್ನಿಯವರೆಗೆ ಕೋಮುವಾದದ ಪ್ರಕ್ಷುಬ್ಧತೆ ತನ್ನೆಲ್ಲ ರೂಪಗಳಲ್ಲಿ ತಾಂಡವವಾಡುತ್ತಿದ್ದಾಗ ಅವರು ನ್ಯಾಯ-ನೀತಿ, ಮಾನವಪ್ರೀತಿ, ಕರುಣೆ-ವಾತ್ಸಲ್ಯಗಳ ದನಿಯಲ್ಲಿ ಮಾತನಾಡುತ್ತಾರೆ.”

ಗಾಂಧಿ ಮತ್ತು ನೆಹರೂ ಅವರ ಪ್ರೇರಣೆ ಪ್ರಯತ್ನಗಳಿಂದಾಗಿ ಕಾಂಗ್ರೆಸ್ "ಅಲ್ಪಸಂಖ್ಯಾತರ ಹಕ್ಕುಗಳ" ಬಗ್ಗೆ ನಿರ್ಣಯವೊಂದನ್ನು ಅಂಗೀಕರಿಸಿತು. "ಎರಡು ರಾಷ್ಟ್ರಗಳ ಸಿದ್ಧಾಂತ"ವನ್ನು ಎಂದಿಗೂ ಮಾನ್ಯ ಮಾಡದಿದ್ದ ಕಾಂಗ್ರೆಸ್ ತನ್ನಿಚ್ಛೆಗೆ ವಿರುದ್ಧವಾಗಿ, ಬಲಾತ್ಕಾರದಿಂದ ವಿಭಜನೆಯನ್ನು ಒಪ್ಪಿಕೊಂಡಿತು. ಆದಾಗ್ಯೂ "ಭಾರತ ಅನೇಕ ಧರ್ಮಗಳ, ಜನಾಂಗಗಳ ನೆಲ. ಇವತ್ತಿಗೂ ಹಾಗೇ ಉಳಿದಿದೆ" ಎಂಬುದು ಆ ಪಕ್ಷದ ನಂಬಿಕೆಯಾಗಿತ್ತು. ಪಾಕಿಸ್ತಾನದ ವಿಚಾರ ಏನೇ ಇರಲಿ, ಅಲ್ಲಿನ ಪರಿಸ್ಥಿತಿ ಏನೇ ಇರಲಿ "ಭಾರತ ಪ್ರಜಾಸತ್ತಾತ್ಮಕ ಜಾತ್ಯತೀತ ರಾಷ್ಟ್ರವಾಗಿರುತ್ತದೆ. ಇಲ್ಲಿನ ಪ್ರಜೆಗಳು ಅವರು ಯಾವುದೇ ಧರ್ಮಕ್ಕೆ ಸೇರಿದವರಾಗಿರಲಿ ಸಂಪೂರ್ಣ ಹಕ್ಕುಗಳನ್ನು ಹೊಂದಿರುತ್ತಾರೆ ಹಾಗೂ ಸರ್ಕಾರದ ರಕ್ಷಣೆಗೆ ಸಮಾನ ಹಕ್ಕುಳ್ಳವರಾಗಿರುತ್ತಾರೆ." "ತನ್ನ ಸಂಪೂರ್ಣ ಸಾಮರ್ಥ್ಯ ಬಲದಿಂದ ಅಲ್ಪ ಸಂಖ್ಯಾತರನ್ನು ರಕ್ಷಿಸುವುದಾಗಿ, ಅವರ ಪೌರತ್ವದ ಹಕ್ಕುಗಳನ್ನು ಆಕ್ರಮಣದಿಂದ ರಕ್ಷಿಸುವುದಾಗಿ" ಅಲ್ಪಸಂಖ್ಯಾತರಿಗೆ ಆಶ್ವಾಸನೆ ನೀಡುವುದು ಕಾಂಗ್ರೆಸ್‌ನ ಅಪೇಕ್ಷೆಯಾಗಿತ್ತು.

ಆದರೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸಕ್ರಿಯವಾಗಿಯೇ ಈ ಅಭಿಪ್ರಾಯವನ್ನು ತಿರಸ್ಕರಿಸಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಅದರ ಸರಸಂಘ ಚಾಲಕರಾದ ಎಂ.ಎಸ್. ಗೋಳ್ವಾಲ್ಕರ್ ಎಂಬ ಹೆಸರಿನ ನೀಳಕಾಯದ ಗಡ್ಡಧಾರಿ ವಿಜ್ಞಾನದ ಪದವೀಧರರಾಗಿದ್ದರು. ಧರ್ಮಾಧಾರಿತ ಭಿನ್ನತೆ-ಭೇದಗಳಿಗೆ ಅವಕಾಶವಿಲ್ಲದ ಜಾತ್ಯತೀತ ರಾಷ್ಟ್ರದ ಪರಿಕಲ್ಪನೆಯನ್ನು ಗೋಳ್ವಾಲ್ಕರ್ ಪ್ರಬಲವಾಗಿ ವಿರೋಧಿಸಿದ್ದರು. ಅವರ ಕಲ್ಪನೆಯ ಭಾರತವೆಂದರೆ-

> *ಹಿಂದೂಸ್ತಾನದ ಹಿಂದೂಯೇತರ ಜನರು ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಂಗೀಕರಿಸಬೇಕು. ಹಿಂದೂ ಧರ್ಮವನ್ನು ಅರಿತುಕೊಳ್ಳಬೇಕು, ಗೌರವಿಸಬೇಕು ಹಾಗೂ ಪೂಜ್ಯಭಾವನೆಯಿಂದ ಕಾಣಬೇಕು. ಹಿಂದೂ ಧರ್ಮದ ಬಗ್ಗೆ ಪೂಜ್ಯಭಾವನೆ ಹೊಂದಿರಬೇಕು. ಹಿಂದೂ ಜನಾಂಗ ಮತ್ತು ಹಿಂದೂ ಸಂಸ್ಕೃತಿ ಹೊರತಾಗಿ ಬೇರಾವುದನ್ನೂ ವೈಭವೀಕರಿಸಬಾರದು, ಅಂಥ ಕಲ್ಪನೆಗೂ ಅವಕಾಶ ಕೊಡಬಾರದು... ಒಂದೇ ಮಾತಿನಲ್ಲಿ ಹೇಳುವುದಾದರೆ ತಾವು ವಿದೇಶೀಯರು ಎಂಬುದನ್ನು ಮರೆತುಬಿಡಬೇಕು. ಈ ವಿದೇಶತ್ವ ಅಂತ್ಯಗೊಳ್ಳಬೇಕು ಅಥವಾ ಸಂಪೂರ್ಣವಾಗಿ ಹಿಂದೂ ರಾಷ್ಟ್ರಕ್ಕೆ ಅಧೀನರಾಗಿ ಬಾಳಬೇಕು. ಯಾವೊಂದು ಹಕ್ಕೊತ್ತಾಯವನ್ನೂ ಮಾಡದೆ, ಹಕ್ಕು ಬಾಧ್ಯತೆಗಳಿಗೆ ಅನರ್ಹರಾಗಿ, ರಿಯಾಯತಿ, ಆದ್ಯತೆಗಳಿಗೆ ಆಗ್ರಹಪಡಿಸದೇ, ಪೌರಹಕ್ಕುಗಳಿಗೂ ಆಗ್ರಹಪಡಿಸದೇ ಹಿಂದೂ ರಾಷ್ಟ್ರಕ್ಕೆ ಅಧೀನರಾಗಿ ಈ ದೇಶದಲ್ಲಿ ಬಾಳ್ವೆ ಮಾಡಬಹುದು.*

1947ರ ಡಿಸೆಂಬರ್ 7ರಂದು ಭಾನುವಾರ, ಆರ್.ಎಸ್.ಎಸ್. ದೆಹಲಿಯ ಹೃದಯಭಾಗವಾದ ರಾಮಲೀಲಾ ಮೈದಾನದಲ್ಲಿ ಬೃಹತ್ ರ್‍ಯಾಲಿಯೊಂದನ್ನು ನಡೆಸಿತು. ಮುಖ್ಯ ಭಾಷಣ ಎಂ.ಎಸ್. ಗೋಳ್ವಾಲ್ಕರ್ ಅವರದಾಗಿತ್ತು. ಹಿಂದೂಸ್ತಾನ್ ಟೈಮ್ಸ್

ವರದಿ ಮಾಡಿದಂತೆ, ಹಿಂದೂ ರಾಜ್ಯ ಸ್ಥಾಪನೆ ಆರ್.ಎಸ್.ಎಸ್.ನ ಮುಖ್ಯಗುರಿ ಎಂಬುದನ್ನು ಗೋಳ್ವಾಲ್ಕರ್ ಅಲ್ಲಗಳೆದಿದ್ದರು. ಆದರೆ, "ಹಿಂದೂಗಳ ಏಕತೆ ನಮ್ಮ ಗುರಿ. ಈ ಆದರ್ಶವನ್ನು ಮುಂದಿಟ್ಟುಕೊಂಡು ಈ ಹಾದಿಯಲ್ಲಿ ನಾವು ಮುನ್ನಡೆಯುತ್ತೇವೆ. ಹಾಗೂ ಯಾವುದೇ ಅಧಿಕಾರ ಅಥವಾ ವ್ಯಕ್ತಿಯಿಂದ ನಮ್ಮನ್ನು ತಡೆಯಲಾಗದು" ಎಂದು ಆಗ್ರಹಪೂರ್ವಕವಾಗಿ ಹೇಳಿದ್ದರು.

ಯಾವುದೇ ಅಧಿಕಾರ ಎಂಬ ಮಾತು ಪರೋಕ್ಷವಾಗಿ ಕಾಂಗ್ರೆಸ್ ಪಕ್ಷ ಮತ್ತು ಕೇಂದ್ರ ಸರ್ಕಾರಕ್ಕೆ ಸೂಚನೆಯಾಗಿತ್ತು. ವ್ಯಕ್ತಿ ಆಂದಾಗ ನೆಹರು ಮತ್ತು ಗಾಂಧಿಯವರನ್ನು ಕುರಿತು ಆಡಿದ ಮಾತಾಗಿತ್ತು. ಆರ್.ಎಸ್.ಎಸ್. ಬಗ್ಗೆ ಸದ್ಭಾವನೆ ಹೊಂದಿದ್ದ ನಿರಾಶ್ರಿತರಲ್ಲಿ ಕೆಲವು ಬಣಗಳು ಇವರಿಬ್ಬರ ವಿರುದ್ಧವಾಗಿದ್ದವು. ನಿರಾಶ್ರಿತರು ಗಾಂಧೀಜಿಯವರ ಸಭೆಗಳಿಗೆ ಅಡ್ಡಿಪಡಿಸಿದರು. ಕುರಾನ್‌ನಿಂದ ಆಯ್ದ ಭಾಗಗಳ ಪಠಣಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಪಾಕಿಸ್ತಾನದಲ್ಲಿರುವ ಹಿಂದೂಗಳು ಮತ್ತು ಸಿಖ್ಖರ ಕಷ್ಟ-ನಷ್ಟ-ನೋವು- ಸಂಕಟಗಳ ಬಗ್ಗೆ ಏಕೆ ಮಾತನಾಡುತ್ತಿಲ್ಲ ಎಂದು ಗಾಂಧೀಜಿಯ ಸಭೆಗಳಲ್ಲಿ ಘೋಷಣೆಗಳನ್ನು ಕೂಗಿದರು. ವಾಸ್ತವವಾಗಿ, ಡಿ.ಜಿ. ತೆಂಡೂಲ್ಕರ್ ಬರೆಯುತ್ತಾರೆ: "ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾತರ ಬಗ್ಗೆ ಗಾಂಧೀಜಿ ಇಷ್ಟೇ ಕಾಳಜಿ-ಕಳಕಳಿ ಹೊಂದಿದ್ದರು. ಅವರ ನೆರವಿಗೆ ಧಾವಿಸುವುದು ಗಾಂಧೀಜಿಯವರ ಮನದಿಂಗಿತವಾಗಿತ್ತು. ಆದರೆ ದೆಹಲಿಯಲ್ಲಿರುವ ಮುಸ್ಲಿಮರ ಬದುಕನ್ನು ನೇರ್ಪಡಿಸಲು ಸಾಧ್ಯವಿಲ್ಲದಿರುವಾಗ ಯಾವ ಮುಖ ಇಟ್ಟುಕೊಂಡು ಪಾಕಿಸ್ತಾನಕ್ಕೆ ಹೋಗಲಾದೀತು?"

ಮುಸ್ಲಿಮರ ಮೇಲೆ ಹಲ್ಲೆ ಮುಂದುವರಿದಂತೆ ಗಾಂಧೀಜಿ ಮತ್ತೆ ಉಪವಾಸ ಆರಂಭಿಸಿದರು. ಅವರು ಜನವರಿ 13ರಂದು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಈ ಉಪವಾಸದ ಉದ್ದೇಶ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿತು. ಮೊದಲನೆಯದು ಭಾರತದ ಜನತೆಗೆ ಸಂಬಂಧಿಸಿದ್ದು. ಎರಡು ರಾಷ್ಟ್ರಗಳ ಸಿದ್ಧಾಂತದಲ್ಲಿ ಜನತೆಗೆ ನಂಬಿಕೆ ಇಲ್ಲವಾದಲ್ಲಿ ಅವರು ತಾವು ಆಯ್ಕೆ ಮಾಡಿಕೊಂಡ ರಾಜಧಾನಿಯಾದ ಶಾಶ್ವತ ನಗರ ದೆಹಲಿಯಲ್ಲಿ ಹಿಂದೂ-ಮುಸ್ಲಿಮರು ಶಾಂತಿಯಿಂದ, ಸೋದರಭಾವನೆಯಿಂದ ಬಾಳ್ವೆ ಮಾಡುವುದು ಸಾಧ್ಯ ಎಂಬುದನ್ನು ತೋರಿಸಿಕೊಡಬೇಕು. ಎರಡನೆಯ ವಿಷಯ ಪಾಕಿಸ್ತಾನ ಸರ್ಕಾರವನ್ನು ಗುರಿಯಾಗಿಟ್ಟುಕೊಂಡದ್ದು. ಎಷ್ಟು ಕಾಲ ನಾನು ಹಿಂದೂಗಳು ಮತ್ತು ಸಿಖ್ಖರ ತಾಳ್ಮೆ-ಸಹನೆಗಳನ್ನು ನೆಚ್ಚಿಕೊಂಡಿರಲು ಸಾಧ್ಯ ಎಂಬುದು ಪಾಕಿಸ್ತಾನ ಸರ್ಕಾರಕ್ಕೆ ಗಾಂಧೀಜಿ ಒಡ್ಡಿದ ಪ್ರಶ್ನೆ. ಪಾಕಿಸ್ತಾನ ಈ ವಿದ್ಯಮಾನಗಳಿಗೆ (ಅಲ್ಪಸಂಖ್ಯಾತರನ್ನು ತಮ್ಮ ಗಡಿಯಿಂದ ಹೊರದಬ್ಬುತ್ತಿರುವ ವಿದ್ಯಮಾನ) ಮುಕ್ತಾಯ ಕಾಣಿಸಲೇಬೇಕೆಂದು ಪಾಕಿಸ್ತಾನ ಸರ್ಕಾರದ ಮೇಲೆ ಒತ್ತಡ ಹೇರುವುದೂ ಈ ಉಪವಾಸ ಸತ್ಯಾಗ್ರಹದ ಉದ್ದೇಶವಾಗಿತ್ತು.

ಅಖೈರಾಗಿ ಗಾಂಧೀಜಿಯವರ ಉಪವಾಸ ಭಾರತ ಸರ್ಕಾರವನ್ನು ಉದ್ದೇಶಿಸಿದ್ದೇ ಆಗಿತ್ತು. ಭಾರತ ಸರ್ಕಾರ ಪಾಕಿಸ್ತಾನದ ಹಿಸ್ಸೆಯಾದ ಸ್ಟರ್ಲಿಂಗ್ ಬಾಕಿ ಪಾವತಿಯನ್ನು

ತಡೆಹಿಡಿದಿತ್ತು. ಇದು ಎರಡನೆ ಮಹಾಯುದ್ಧದ ಕಾಲದಲ್ಲಿ ಭಾರತದ ಕೊಡುಗೆ ಮುಖೇನ ಪಡೆದ ಸಾಲದ ಬಾಕಿಯಾಗಿತ್ತು. ಬ್ರಿಟಿಷ್ ಸರ್ಕಾರ ಎರಡು ರಾಷ್ಟ್ರಗಳಿಗೂ ನೀಡಬೇಕಾಗಿದ್ದ ಬಾಕಿ ಇದು. ಇದು 550 ದಶಲಕ್ಷ ರೂಪಾಯಿಗಳಷ್ಟು ಭಾರಿ ಮೊತ್ತವಾಗಿತ್ತು. ಪಾಕಿಸ್ತಾನ ಕಾಶ್ಮೀರ ರಾಜ್ಯವನ್ನು ಅತಿಕ್ರಮಿಸಲು ಪ್ರಯತ್ನ ನಡೆಸಿದ್ದರಿಂದ ಸಿಟ್ಟಿಗೆದ್ದಿದ್ದ ನವದೆಹಲಿಯ ಸರ್ಕಾರ ಪಾಕಿಸ್ತಾನಕ್ಕೆ ಈ ಮೊತ್ತದಲ್ಲಿನ ಅದರ ಪಾಲನ್ನು ಪಾವತಿಸದೇ ತಡೆಹಿಡಿದಿತ್ತು. ಇದು ಜಿದ್ದಿನ, ದ್ವೇಷದ ಕ್ರಮ ಎಂದು ಗಾಂಧೀಜಿ ಭಾವಿಸಿದ್ದರು. ಪಾಕಿಸ್ತಾನಕ್ಕೆ ಕೊಡಬೇಕಾಗಿರುವ ಈ ಹಣವನ್ನು ಪಾವತಿಸಬೇಕೆಂಬುದು ಉಪವಾಸ ನಿಲ್ಲಿಸಲು ಅವರು ಒಡ್ಡಿದ ಷರತ್ತುಗಳಲ್ಲಿ ಒಂದಾಗಿತ್ತು.

ಪಾಕಿಸ್ತಾನ ಸರ್ಕಾರಕ್ಕೆ ಸಲ್ಲಬೇಕಾಗಿರುವ ಹಣವನ್ನು ಸಂದಾಯಮಾಡಲು ಭಾರತ ಸರ್ಕಾರ ಜನವರಿ 15ರ ರಾತ್ರಿ ನಿರ್ಧರಿಸಿತು. ಮರುದಿನವೇ, ದೆಹಲಿಯ ಉಚ್ಚಾಟಿತ ಮುಸ್ಲಿಮರನ್ನು ಸ್ವಾಗತಿಸುವುದಾಗಿ, ಅವರ ಮನೆಗಳಿಗೆ ವಾಪಸಾಗಲು ಅವಕಾಶ ನೀಡುವುದಾಗಿ ಒಂದು ಸಾವಿರ ಮಂದಿ ನಿರಾಶ್ರಿತರು ಘೋಷಣಾ ಪತ್ರವೊಂದಕ್ಕೆ ಸಹಿಹಾಕಿದರು. ಆದರೆ ಇನ್ನೂ ಹೆಚ್ಚು ಅಧಿಕೃತವಾದ ಆಶ್ವಾಸನೆ ಗಾಂಧೀಜಿಯವರ ಅಪೇಕ್ಷೆಯಾಗಿತ್ತು. ಏತನ್ಮಧ್ಯೆ ಅವರ ಆರೋಗ್ಯ ತ್ವರಿತಗತಿಯಲ್ಲಿ ಕ್ಷೀಣಿಸುತ್ತಿತ್ತು. ಮೂತ್ರಕೋಶ ವಿಫಲವಾಗಿತ್ತು. ದೇಹದ ತೂಕ ಕಡಿಮೆಯಾಗುತ್ತಿತ್ತು. ಅವರು ಓಕರಿಕೆ ಮತ್ತು ತಲೆನೋವಿನಿಂದ ಬಳಲುತ್ತಿದ್ದರು. ವೈದ್ಯರು ಎಚ್ಚರಿಕೆ ನೀಡಿದರು: "ಹೆಚ್ಚು ವಿಳಂಬ ಮಾಡದೇ ಉಪವಾಸ ನಿಲ್ಲಿಸಲು ಅಗತ್ಯವಾದ ಪರಿಸ್ಥಿತಿ ಉಂಟುಮಾಡಲು ತಕ್ಷಣ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವಂತ ಜನತೆಗೆ ತಿಳಿಸುವುದು ನಮ್ಮ ಕರ್ತವ್ಯವಾಗಿದೆ."

ಜನವರಿ 17ರಂದು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾದ ರಾಜೇಂದ್ರ ಪ್ರಸಾದ್ ಅವರ ನೇತೃತ್ವದಲ್ಲಿ ಕೇಂದ್ರ ಶಾಂತಿ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಉಳಿದ ಕಾಂಗ್ರೆಸ್ ಸದಸ್ಯರು ಹಾಗೂ ಆರ್.ಎಸ್.ಎಸ್., ಜಮಾಯಿತ್ ಉಲ್ ಉಲೇಮ ಮತ್ತು ಸಿಖ್ ಪ್ರತಿನಿಧಿಗಳಿದ್ದರು. 18ರಂದು ಬೆಳಿಗ್ಗೆ ಇವರುಗಳು ಸಂಯುಕ್ತ ಘೋಷಣೆಯೊಂದನ್ನು ಗಾಂಧೀಜಿಗೆ ಸಲ್ಲಿಸಿದರು. ಇದರಿಂದ ತೃಪ್ತರಾದ ಗಾಂಧೀಜಿ ಉಪವಾಸ ಅಂತ್ಯಗೊಳಿಸಿದರು. "ಮುಸ್ಲಿಮರ ನಂಬಿಕೆ, ಆಸ್ತಿಪಾಸ್ತಿ ಹಾಗೂ ಜೀವವನ್ನು ನಾವು ರಕ್ಷಿಸುತ್ತೇವೆ. ದೆಹಲಿಯಲ್ಲಿ ಆದ ಘಟನೆಗಳು ಮತ್ತೆ ಸಂಭವಿಸುವುದಿಲ್ಲ" ಎಂದು ಸಂಯುಕ್ತ ಘೋಷಣೆಯಲ್ಲಿ ವಾಗ್ದಾನ ಮಾಡಲಾಗಿತ್ತು.

'ಕಲ್ಕತ್ತೆಯ ಪವಾಡ' ದೆಹಲಿಯಲ್ಲಿ ಮರುಕಳಿಸೀತೆ? ಗಾಂಧೀಜಿಯವರ ಉಪವಾಸದಿಂದ ಉಗ್ರಗಾಮಿಗಳ ಗುಂಪಿನ ನಾಯಕರು ಬುದ್ಧಿಕಲಿತಂತಿತ್ತು. ಆದರೆ ಅವರ ಅನುಯಾಯಿಗಳಲ್ಲಿ ಹಗೆತನ ಹೊಗೆಯಾಡುತ್ತಲೇ ಇತ್ತು. ಹಿಂದಿನ ದೆಹಲಿ ಭೇಟಿಯ ಸಂದರ್ಭಗಳಲ್ಲಿ ಗಾಂಧೀಜಿ ಝಾಡಮಾಲಿಗಳ ಕಾಲನಿಯಲ್ಲಿ ತಂಗಿದ್ದರು. ಈ ಬಾರಿ ಅವರ ಕೋಟ್ಯಧಿಪತಿ ಅನುಯಾಯಿ ಬಿರ್ಲಾ ಅವರ ನಿವಾಸದಲ್ಲಿ ಗಾಂಧೀಜಿ ವಾಸ್ತವ್ಯಕ್ಕೆ ಏರ್ಪಾಟು ಮಾಡಲಾಗಿತ್ತು. ಅವರು

ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾಗಲೂ ನಿರಾಶ್ರಿತರು ದಂಡುದಂಡಾಗಿ "ಗಾಂಧಿಯನ್ನು ಸಾಯಲು ಬಿಡಿ" ಎಂದು ಘೋಷಣೆ ಕೂಗುತ್ತಾ ಬಿರ್ಲಾಭವನದ ಮುಂದೆ ಮೆರವಣಿಗೆಯಲ್ಲಿ ಹೋಗಿದ್ದುಂಟು. ಅನಂತರ, ಜನವರಿ 20ರಂದು ಮದನಲಾಲ್ ಎಂಬ ಪಂಜಾಬಿ ನಿರಾಶ್ರಿತನೊಬ್ಬ ಬಿರ್ಲಾಭವನದಲ್ಲಿ ಪ್ರಾರ್ಥನಾ ಸಭೆಯಲ್ಲಿ ನೇತೃತ್ವವಹಿಸಿದ್ದ ಗಾಂಧೀಜಿಯವರ ಮೇಲೆ ಬಾಂಬ್ ಎಸೆದಿದ್ದ. ಅದು ಅವರಿಂದ ಸ್ವಲ್ಪ ದೂರದಲ್ಲಿ ಸ್ಫೋಟಿಸಿತು. ಅದೃಷ್ಟವಶಾತ್ ಯಾರಿಗೂ ಗಾಯಗಳಾಗಲಿಲ್ಲ.

ತಮ್ಮ ಹತ್ಯೆಯ ಈ ಯತ್ನದಿಂದ ಗಾಂಧೀಜಿ ವಿಚಲಿತರಾಗಲಿಲ್ಲ. ಅವರು ಕುಪಿತ ನಿರಾಶ್ರಿತರೂ ಸೇರಿದಂತೆ ಜನರನ್ನು ಭೇಟಿಮಾಡುವ ಕಾರ್ಯಕ್ರಮ ಮುಂದುವರಿಸಿದರು. ಜನವರಿ 26ರಂದು, ಪ್ರಾರ್ಥನಾ ಸಭೆಯಲ್ಲಿ ಅವರು ಹಿಂದೆಲ್ಲ ಸ್ವಾತಂತ್ರ್ಯ ದಿನವನ್ನು ಹೇಗೆ ಆಚರಿಸಲಾಯಿತೆಂಬುದರ ಬಗ್ಗೆ ಮಾತನಾಡಿದರು. ಈಗ ಸ್ವಾತಂತ್ರ್ಯ ಬಂದಿತ್ತು. ಆದರೆ ನಂತರದ ಈ ಕೆಲವು ತಿಂಗಳುಗಳಲ್ಲಿ ಅವರು ತೀವ್ರವಾಗಿ ಭ್ರಮನಿರಸನಗೊಂಡಿದ್ದರು. 'ಕೇಡುಗಾಲ ಮುಗಿಯಿತು', ಎಲ್ಲ ಜಾತಿವರ್ಗಗಳ ಸಮಾನತೆಗಾಗಿ ಭಾರತೀಯರು ಸಂಘಟಿತರಾಗಿ ಶ್ರಮಿಸುವರು. ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತ ಸಮುದಾಯದ ಪ್ರಾಬಲ್ಯ, ಹೆಚ್ಚುಗಾರಿಕೆಗಳು ಇನ್ನಿರುವುದಿಲ್ಲ, ಸಂಖ್ಯೆ ಅಥವಾ ಪ್ರಭಾವಗಳಲ್ಲೂ ನಗಣ್ಯ ಪ್ರಮಾಣದಲ್ಲೂ ಇವುಗಳಿರುವುದಿಲ್ಲ ಎಂದು ಗಾಂಧೀಜಿ ನಂಬಿದ್ದರು. ಭೌಗೋಳಿಕವಾಗಿ, ರಾಜಕೀಯವಾಗಿ ಭಾರತದ ವಿಭಜನೆಯಾಗಿದ್ದರೂ ಹೃದಯದಲ್ಲಿ ನಾವು ಸದಾಕಾಲ ಪರಸ್ಪರ ಸಹಾಯಮಾಡುವ, ಗೌರವಿಸುವ ಸ್ನೇಹಿತರಾಗಿ, ಸೋದರರಾಗಿಯೇ ಮುಂದುವರಿಯುತ್ತೇವೆ. ಹೊರ ಪ್ರಪಂಚದ ಮುಂದೆ ನಾವು ಒಂದಾಗಿಯೇ ಉಳಿಯಲಿದ್ದೇವೆ ಎಂಬ ಭಾವನೆಗೆ ಅವರು ಎಡೆಮಾಡಿಕೊಟ್ಟಿದ್ದರು.

ಸ್ವತಂತ್ರ, ಸಂಯುಕ್ತ ಭಾರತಕ್ಕಾಗಿ ಗಾಂಧೀಜಿ ಜೀವಮಾನದುದ್ದಕ್ಕೂ ಹೋರಾಟ ನಡೆಸಿದರು. ಭಾರತದ ವಿಭಜನೆಯನ್ನು ನಿರ್ಲಿಪ್ತತೆಯಿಂದ, ಚಿತ್ತ ಶಾಂತಿ-ಸ್ಥೈರ್ಯಗಳಿಂದ ಕಂಡರು. ಉಳಿದವರು ಇಷ್ಟು ಕ್ಷಮಾಶೀಲರಾಗಿರಲಿಲ್ಲ. ಜನವರಿ 30ರಂದು ಸಂಜೆ ಗಾಂಧೀಜಿಯವರನ್ನು ಗುಂಡಿಟ್ಟು ಕೊಲ್ಲಲಾಯಿತು. ದಿನನಿತ್ಯದ ಪ್ರಾರ್ಥನಾ ಸಭೆಯಲ್ಲಿ ಯುವಕನೊಬ್ಬ ಗುಂಡು ಹಾರಿಸಿ ಅವರ ಹತ್ಯೆಗೈದಿದ್ದ. ಕೊಲೆ ಪಾತಕಿ ನಂತರ ಶರಣಾಗತನಾದ. ಅವನು ನಾಥೂರಾಮ್ ಗೋಡ್ಸೆ ಎಂಬ ಹೆಸರಿನ ಪುಣೆಯ ಬ್ರಾಹ್ಮಣ. ಗೋಡ್ಸೆಯ ವಿಚಾರಣೆ ನಡೆಸಿ ಮರಣದಂಡನೆ ವಿಧಿಸಲಾಯಿತು. ಗಲ್ಲುಗಂಬ ಏರುವ ಮೊದಲು ಗೋಡ್ಸೆ, ತನ್ನ ಕೃತ್ಯವನ್ನು ಸಮರ್ಥಿಸಿಕೊಳ್ಳಲೂ ಅವಕಾಶ ನೀಡಲಾಯಿತು. "ಮಹಾತ್ಮರು ಸತತವಾಗಿ ಮುಸ್ಲಿಮರನ್ನು ಓಲೈಸಿದ್ದು ಅವರ ಕೊಲೆಗೆ ತನ್ನನ್ನು ಪ್ರಚೋದಿಸಿತೆಂದು" ಹೇಳಿದ ಗೋಡ್ಸೆ "ಮುಸ್ಲಿಮರ ಪರವಾಗಿ ನಡೆಸಿದ ಕೊನೆಯ ಉಪವಾಸ ಸತ್ಯಾಗ್ರಹ, ತತ್‌ಕ್ಷಣ ಗಾಂಧೀಜಿಯವರ ಅಸ್ತಿತ್ವವನ್ನು ಕೊನೆಗಾಣಿಸಬೇಕೆಂಬ ಪರಾಕಾಷ್ಠೆಗೆ ತನ್ನನ್ನು ಒಯ್ದಿತೆಂದು" ತನ್ನ ಕೃತ್ಯವನ್ನು ನೇಣಿಗೆ ಮುಂಚೆ ಸಮರ್ಥಿಸಿಕೊಂಡ.

IV

ಗಾಂಧೀಜಿಯವರ ಮರಣ ಅತಿಶಯವಾದ ದುಃಖದ ಮಹಾಪೂರವನ್ನೇ ಹರಿಸಿತು. ಬಹಳಕಾಲದಿಂದಲೂ ಗಾಂಧೀಜಿಯವರನ್ನು ಇಪ್ಪತ್ತನೇ ಶತಮಾನದ ಮಹಾಪುರುಷ ಎಂದೇ ಭಾವಿಸಿದ್ದ ಆಲ್ಬರ್ಟ್ ಐನ್‌ಸ್ಟೈನ್, ಹಾಗೂ ಒಂದು ಕಾಲಕ್ಕೆ ಗಾಂಧಿಯನ್ನು ಕಪಟಿ, ಆಷಾಢಭೂತಿ ಎಂದೇ ಭಾವಿಸಿದ್ದು, ನಂತರ ಅವರಲ್ಲೊಬ್ಬ ಸಂತನನ್ನು ಕಂಡ ಜಾರ್ಜ್ ಆರ್ವೆಲ್ ಮೊದಲಾದವರು ಹೃದಯಂಗಮವಾಗಿ ಅವರ ಗುಣಗಾನ ಮಾಡಿದರು. ಜಾರ್ಜ್ ಬರ್ನಾರ್ಡ್ ಷಾ ಅವರಂತೂ ತಮ್ಮ ಸ್ವಭಾವ ಸಹಜವಾದ ಹಗುರಧಾಟಿಯಲ್ಲೇ ಪ್ರತಿಕ್ರಿಯಿಸಿದರು: 'ಸಜ್ಜನನಾಗಿರುವುದು ಎಷ್ಟು ಅಪಾಯಕಾರಿ' ಎಂಬುದನ್ನು ಇದು ತೋರಿಸುತ್ತದೆ. ಮೊಹಮದಾಲಿ ಜಿನ್ನಾ ಅವರದೂ ಅಷ್ಟೇ ಸ್ವಭಾವ ಸಹಜವಾದ ಕ್ಷುಲ್ಲಕ ಪ್ರತಿಕ್ರಿಯೆ; ತಮ್ಮ ಹಳೆಯ ಎದುರಾಳಿಯ ನಿಧನದಿಂದ "ಹಿಂದೂ ಸಮೂದಾಯಕ್ಕಷ್ಟೇ ನಷ್ಟವಾಗಿದೆ" ಎಂಬುದು ಜಿನ್ನಾ ಪ್ರತಿಕ್ರಿಯೆಯಾಗಿತ್ತು.

ಆದರೆ ತುಂಬ ಸುಸಂಗತವೂ ಪ್ರಸ್ತುತವೂ ಆದಂಥ ಸಾರ್ವಜನಿಕ ಪ್ರತಿಕ್ರಿಯೆ ಬಂದದ್ದು, ಗಾಂಧೀಜಿಯವರ ಇಬ್ಬರು, ಅಷ್ಟೇನೂ ಪ್ರಬಲರಲ್ಲದ ಘನತೆವೆತ್ತ ಅನುಯಾಯಿಗಳಿಂದ. ಇವರು ವಲ್ಲಭಭಾಯಿ ಪಟೇಲ್ ಮತ್ತು ಜವಹರಲಾಲ್ ನೆಹರೂ. ಈಗ ಭಾರತ ಸರ್ಕಾರದಲ್ಲಿ ಗೃಹಸಚಿವರಾದ ಪಟೇಲ್ ಗುಜರಾತಿ ಸಹವರ್ತಿಯಾಗಿದ್ದು 1918ರಷ್ಟು ಹಿಂದೆಯೇ ಗಾಂಧೀಜಿಯವರ ಜೊತೆಗೂಡಿದ್ದರು. ಅವರು ಮಹಾನ್ ಸಂಘಟನಕಾರರೂ ಕಾರ್ಯತಂತ್ರ ಪ್ರವೀಣರೂ ಆಗಿದ್ದು ಕಾಂಗ್ರೆಸ್ಸನ್ನು ರಾಷ್ಟ್ರೀಯ ಪಕ್ಷವಾಗಿ ಬೆಳೆಸುವುದರಲ್ಲಿ ಗಣನೀಯ ಪಾತ್ರ ನಿರ್ವಹಿಸಿದ್ದರು. ಭಾರತದ ಮಂತ್ರಿಮಂಡಲದಲ್ಲಿ ಅವರದು ಪ್ರಧಾನ ಮಂತ್ರಿ ನೆಹರೂ ನಂತರದ ಎರಡನೆಯ ಸ್ಥಾನವಾಗಿತ್ತು. ಗಾಂಧೀಜಿ ಯವರೊಂದಿಗೆ ನೆಹರೂ ಅವರ ಒಡನಾಟ ಶುರುವಾದದ್ದು ಪಟೇಲರ ಒಡನಾಟ ಆರಂಭವಾದ ಕೆಲವು ವರ್ಷಗಳ ನಂತರ. ನೆಹರೂ ಅವರಿಗೆ ಗಾಂಧೀಜಿಯವರ ಜೊತೆ ಅವರು ಬಲ್ಲ ಮೂರು ಭಾಷೆಗಳ ಪೈಕಿ ಎರಡರಲ್ಲಿ (ಹಿಂದಿ ಮತ್ತು ಇಂಗ್ಲಿಷ್) ಮಾತ್ರ ಮಾತುಕತೆ ನಡೆಸುವುದು ಸಾಧ್ಯವಾಗುತ್ತಿತ್ತು. ಆದರೆ ಅವರಿಗೆ ಗಾಂಧೀಜಿಯವರೊಟ್ಟಿಗೆ ಗಾಢವಾದ ಭಾವನಾತ್ಮಕ ನಂಟಿತ್ತು. ಪಟೇಲರಂತೆ ನೆಹರೂ ಸಹ ಸಾಮಾನ್ಯವಾಗಿ ಗಾಂಧೀಜಿಯವರನ್ನು 'ಬಾಪೂ' ಎಂದೇ ಕರೆಯುತ್ತಿದ್ದರು. ಆದರೆ ಅನೇಕ ರೀತಿಗಳಲ್ಲಿ ನೆಹರೂ ಗಾಂಧೀಜಿಯವರ ಪ್ರೀತಿ ಪಾತ್ರ ಪುತ್ರನಂತಿದ್ದರು (ತಾವು ಜನ್ಮ ಕೊಟ್ಟ ನಾಲ್ವರು ಮಕ್ಕಳಿಗಿಂತ ಗಾಂಧೀಜಿಗೆ ನೆಹರೂ ಬಗ್ಗೆ ಹೆಚ್ಚಿನ ಪ್ರೀತಿ ವಾತ್ಸಲ್ಯವಿತ್ತು). ಜೊತೆಗೆ ಅವರು ಗಾಂಧೀಜಿ ಆಯ್ಕೆಮಾಡಿದ ರಾಜಕೀಯ ವಾರಸುದಾರರೂ ಆಗಿದ್ದರು.

ಯಾದವೀ ಕಲಹದ ಯಾತನೆಯಲ್ಲಿ ಸಿಕ್ಕಿ ಬಿದ್ದಿದ್ದ ರಾಷ್ಟ್ರಕ್ಕೆ ಇವರಿಬ್ಬರೂ ಹೇಳಿದ್ದು: "ಗುರು ಸಮಾನ ಬಾಪೂ ಇನ್ನಿಲ್ಲ, ಆದರೆ ಅವರ ಸಂದೇಶ ಇದೆ". ಗಾಂಧಿಯವರ ಸಾವು ಸಂಭವಿಸಿದ ಕೂಡಲೇ ರಾಷ್ಟ್ರವನ್ನುದ್ದೇಶಿಸಿ ಆಕಾಶವಾಣಿಯಲ್ಲಿ ಪ್ರಸಾರ ಭಾಷಣ ಮಾಡಿದ ಪಟೇಲರು, "ದ್ವೇಷ-ಸೇಡು-ಪ್ರತೀಕಾರಗಳ ಮಾತುಗಳನ್ನಾಡುವುದನ್ನು ಬಿಟ್ಟು ಮಹಾತ್ಮಾಜಿ

ಪ್ರಣೀತ ಪ್ರೀತಿ-ಅಹಿಂಸೆಗಳ ಸಂದೇಶವನ್ನು ಪಾಲಿಸುವಂತೆ" ಮನವಿ ಮಾಡಿಕೊಂಡರು. "ನಾವು ಮಾಡಿದ ಪಾಪಕೃತ್ಯಗಳಿಗೆ ವಿಶ್ವದ ಮಹಾಪುರುಷ ಜೀವ ತೆರಬೇಕಾಗಿ ಬಂದದ್ದು ನಾವೆಲ್ಲ ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಸಂಗತಿ. ಜೀವಂತವಿದ್ದಾಗ ನಾವು ಅವರು ತೋರಿದ ಹಾದಿಯಲ್ಲಿ ನಡೆಯಲಿಲ್ಲ. ಈಗ ಅವರು ನಿಧನರಾಗಿದ್ದಾರೆ. ಇನ್ನಾದರೂ ಅವರ ಮಾರ್ಗವನ್ನು ಅನುಸರಿಸೋಣ" ಗಂಗಾನದಿಯಲ್ಲಿ ಗಾಂಧೀಜಿಯವರ ಅಸ್ಥಿ ವಿಸರ್ಜನೆ ಮಾಡಿದ ನಂತರ ಅಲಹಾಬಾದಿನಲ್ಲಿ ಮಾತನಾಡಿದ ನೆಹರೂ ಈ ರೀತಿ ನುಡಿದರು: "ಅಪಾರ ಬೆಲೆ ತೆತ್ತು ನಾವು ನಮ್ಮ ಪಾಠ ಕಲಿತಿದ್ದೇವೆ. ಗಾಂಧೀಜಿಯವರ ಧ್ಯೇಯ, ಕಾರ್ಯಭಾರವನ್ನು ಪೂರ್ಣಗೊಳಿಸುವುದಾಗಿ ಪ್ರಮಾಣವಚನ ಕೈಗೊಳ್ಳಲು ಬದ್ಧರಾಗಿಲ್ಲದವರು ನಮ್ಮ ನಡುವೆ ಯಾರಾದರೂ ಇದ್ದಾರೆಯೇ? ಭಾರತೀಯರೆಲ್ಲರೂ ಈಗ ಒಂದಾಗಿ, ನಮ್ಮ ಯುಗದ ಮಹಾತ್ಮನನ್ನು ಆಹುತಿ ತೆಗೆದುಕೊಂಡ ಭಯಂಕರ ಕೋಮು ವಿಷದ ವಿರುದ್ಧ ಹೋರಾಡಬೇಕಾಗಿದೆ."

ನೆಹರೂ ಮತ್ತು ಪಟೇಲ್ ಇಬ್ಬರೂ ಏಕತೆ ಮತ್ತು ಕ್ಷಮೆಗೆ ಕರೆ ನೀಡಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಇವರಿಬ್ಬರೂ ಕಟುವಾದ ವೈಮನಸ್ಯ, ಜಗಳ-ವಾಗ್ವಾದಗಳಲ್ಲಿ ತೊಡಗಿದ್ದರು. ಡಿಸೆಂಬರ್ ತಿಂಗಳ ಕೊನೆಯ ಎರಡು ವಾರಗಳಲ್ಲಿ ಗಲಭೆ ಪೀಡಿತ ಅಜ್ಮೀರ್‌ಗೆ ಭೇಟಿಕೊಡುವ ಕಾರ್ಯಕ್ರಮವನ್ನು ನೆಹರೂ ಹಮ್ಮಿಕೊಂಡಿದ್ದರು. ಕೊನೆಗಳಿಗೆಯಲ್ಲಿ ನೆಹರೂ ತಮ್ಮ ಪ್ರವಾಸ ರದ್ದುಗೊಳಿಸಿ ತಮ್ಮ ಆಪ್ತ ಕಾರ್ಯದರ್ಶಿಯನ್ನು ಅಲ್ಲಿಗೆ ಕಳುಹಿಸಿ ಕೊಟ್ಟರು. ಪಟೇಲ್ ಇದರಿಂದ ಸಿಟ್ಟಿಗೆದ್ದರು. ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಗೃಹಸಚಿವ ಶಾಖೆ ಅಜ್ಮೀರ್‌ಗೆ ತನಿಖಾ ತಂಡವೊಂದನ್ನು ಕಳುಹಿಸಿರುವಾಗ ಅಲ್ಲಿ ಪ್ರಧಾನ ಮಂತ್ರಿಯವರ ಕೈಕೆಳಗಿನವರು ಪ್ರವಾಸ ಕೈಗೊಳ್ಳುವುದೆಂದರೆ ಅದು ನಂಬಿಕೆ-ವಿಶ್ವಾಸಗಳ ಕ್ರೂರತೆಯನ್ನು ಸೂಚಿಸುತ್ತದೆ ಎಂಬುದು ಪಟೇಲರ ಆಕ್ಷೇಪಣೆಯಾಗಿತ್ತು. ಕುಟುಂಬದಲ್ಲಿ ಮರಣ ಸಂಭವಿಸಿದ ಕಾರಣ ತಾವು ತಮ್ಮ ಅಜ್ಮೀರ್ ಭೇಟಿಯನ್ನು ರದ್ದುಗೊಳಿಸುವುದು ಅನಿವಾರ್ಯವಾಯಿತೆಂದು ನೆಹರೂ ಸಮಜಾಯಿಷಿ. ತಮ್ಮ ನಿರೀಕ್ಷೆಯಲ್ಲಿದ್ದ ಜನತೆಗೆ ನಿರಾಶೆಯುಂಟು ಮಾಡಬಾರದೆಂಬ ಕಾರಣದಿಂದಾಗಿ ತಮ್ಮ ಕಾರ್ಯದರ್ಶಿಯನ್ನು ಕಳುಹಿಸಿದ್ದಾಗಿಯೂ ನೆಹರೂ ವಿಶದಪಡಿಸಿದ್ದರು. ಇದೆಲ್ಲ ಏನೇ ಇದ್ದರೂ ಸರ್ಕಾರದ ಮುಖ್ಯಸ್ಥನಾಗಿ ತಮಗಿಷ್ಟ ಬಂದೆಡೆ ಪ್ರವಾಸ ಕೈಗೊಳ್ಳುವ ಅಥವಾ ತಮ್ಮ ಪರವಾಗಿ ಬೇರೊಬ್ಬರನ್ನು ಕಳುಹಿಸುವ ಹಕ್ಕು ತಮಗಿದೆಯೆಂದು ನೆಹರೂ ಸ್ಪಷ್ಟ-ನೇರ ನುಡಿ. ಇದಕ್ಕೆ, "ಮಂತ್ರಿ ಮಂಡಲ ವ್ಯವಸ್ಥೆಯಲ್ಲಿ ಪ್ರಧಾನಮಂತ್ರಿಯಾದವನು ಸರಿಸಮಾನರಲ್ಲಿ ಮೊದಲನೆಯವನಷ್ಟೇ, ಅವನು ಸಹ ಸಚಿವರ ಮೇಲಂತಸ್ತಿನವನಲ್ಲ, ಅವರ ಮೇಲೆ ಸವಾರಿ ಮಾಡುವಂತಿಲ್ಲ" ಎಂದು ಪಟೇಲರು ಮಾರುತ್ತರ ನೀಡಿದರು.

ಈ ವಾಗ್ವಾದ ತಕರಾರಿನ ವಿಷಯವಾಗಿ ಬೆಳೆದು, ವಾದಗ್ರಸ್ತವಾಗಿ ಕೊನೆಗೆ ಇಬ್ಬರೂ ರಾಜೀನಾಮೆ ಕೊಡಲು ಮುಂದಾದರು. ತಮ್ಮ ತಮ್ಮ ಅಭಿಪ್ರಾಯಗಳನ್ನು ನಿಲುವುಗಳನ್ನು

ಗಾಂಧೀಜಿ ಮುಂದೆ ಮಂಡಿಸಲು ನಂತರ ಇಬ್ಬರೂ ಒಪ್ಪಿಕೊಂಡರು. ಇದಕ್ಕಾಗಿ ಸೂಕ್ತ ಸಮಯ ಗೊತ್ತುಪಡಿಸುವ ಹವಣಿಕೆಯಲ್ಲಿದ್ದಾಗಲೇ ಗಾಂಧೀಜಿ ತಮ್ಮ ಕೊನೆಯ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅದರ ಮುಂದಿನ ವಾರ ಪಟೇಲರು ದೆಹಲಿಯಲ್ಲಿರಲಿಲ್ಲ. ಆದರೆ ಅವರು ಈ ವಿಷಯವನ್ನು ಮರೆತಿರಲಿಲ್ಲ. ನೆಹರೂ ಸಹ ಮರೆತಿರಲಿಲ್ಲ. ಜನವರಿ 30ರಂದು ಮಾರಕ ಪ್ರಾರ್ಥನಾ ಸಭೆಗೆ ಮೊದಲು, ಗಾಂಧೀಜಿ ಪಟೇಲರ ಭೇಟಿಯಾಗಿತ್ತು. ಆಗ ಗಾಂಧೀಜಿ, ನೀವು ಮತ್ತು ನೆಹರೂ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡಾಯ್ತು ಎಂದು ಪಟೇಲರನ್ನು ಕೇಳಿದರು. ಅವರಿಬ್ಬರನ್ನೂ ಮಾರನೆಯ ದಿನ ತಾವು ಭೇಟಿ ಮಾಡುವ ಇಚ್ಛೆಯನ್ನು ಆಗ ಗಾಂಧೀಜಿ ವ್ಯಕ್ತಪಡಿಸಿದ್ದರು.

ಗಾಂಧೀಜಿಯವರ ಹತ್ಯೆಯಾದ ಮೂರು ದಿನಗಳ ನಂತರ ನೆಹರೂ, ಪಟೇಲರಿಗೆ ಪತ್ರವೊಂದನ್ನು ಬರೆದು, "ಬಾಪೂ ಅವರ ಸಾವಿನಿಂದ ಎಲ್ಲವೂ ಬದಲಾಗಿದೆ. ನಾವೀಗ ಭಿನ್ನವಾದ ಹಾಗೂ ಹೆಚ್ಚು ಕಷ್ಟಮಯವಾದ ಪ್ರಪಂಚವನ್ನು ಎದುರಿಸಬೇಕಾಗಿದೆ. ಹಳೆಯ ವಾದವಿವಾದಗಳಿಗೆ ಈಗ ಹೆಚ್ಚಿನ ಮಹತ್ವ ಇಲ್ಲ. ಈ ಕ್ಷಣದ ತುರ್ತು ಅಗತ್ಯವೆಂದರೆ ನಾವೆಲ್ಲ ಹೆಚ್ಚು ನಿಕಟವಾಗಿ, ಸಾಧ್ಯವಾದಷ್ಟೂ ಸಹಕಾರ ಮನೋಭಾವದಿಂದ ಕೆಲಸ ಮಾಡಬೇಕಾಗಿರುವುದು ಎಂದು ನನಗನ್ನಿಸುತ್ತದೆ". ಇದು ನೆಹರೂ ಪತ್ರದ ಒಕ್ಕಣೆಯಾಗಿತ್ತು. ಈ ಪತ್ರಕ್ಕೆ ಪಟೇಲರು ನೀಡಿದ ಉತ್ತರ ಹೀಗಿತ್ತು: "ನೀವು ಭಾವಪೂರ್ಣವಾಗಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಲ್ಲಿ ನನ್ನ ಸಹಮತವಿದೆ...ಇತ್ತೀಚಿನ ವಿದ್ಯಮಾನಗಳು ನನಗೆ ತುಂಬ ಅಸಮಾಧಾನವುಂಟು ಮಾಡಿದ್ದವು. ಬಾಪೂ ಅವರಿಗೆ ಇದನ್ನೆಲ್ಲ ಬರೆದು ತಿಳಿಸಿದ್ದೆ. ನನ್ನನ್ನು ಪದವಿಮುಕ್ತನನ್ನಾಗಿಸುವಂತೆ ಅವರಲ್ಲಿ ಪ್ರಾರ್ಥಿಸಿಕೊಂಡಿದ್ದೆ. ಆದರೆ ಅವರ ನಿಧನ ಎಲ್ಲವನ್ನೂ ಬದಲಾಯಿಸಿದೆ. ನಮ್ಮನ್ನು ಆವರಿಸಿದ್ದ ಬಿಕ್ಕಟ್ಟು ನಮ್ಮಲ್ಲೀಗ ಹೊಸ ಜಾಗೃತಿಯನ್ನು ಮೂಡಿಸಬೇಕಾಗಿದೆ. ನಾವಿಬ್ಬರೂ ಒಟ್ಟಾಗಿ ಏನು ಸಾಧಿಸಿದ್ದೇವೆ ಎಂಬುದರ ಬಗ್ಗೆ ಹಾಗೂ ದುಃಖಭರಿತ ರಾಷ್ಟ್ರದ ಹಿತರಕ್ಷಣೆಯಲ್ಲಿ ನಾವು ಒಟ್ಟಾಗಿ ಕಾರ್ಯಪ್ರವೃತ್ತರಾಗ ಬೇಕಾದ ಅಗತ್ಯ ಕುರಿತು ಹೊಸ ಸಾಕ್ಷಾತ್ಕಾರ ನಮ್ಮಲ್ಲಿ ಆಗಬೇಕಿದೆ."

ಗಾಂಧೀಜಿ ತಮ್ಮ ಜೀವಿತ ಕಾಲದಲ್ಲಿ ಹಿಂದೂ-ಮುಸ್ಲಿಮರ ವಿಷಯದಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಆಜೀವ ಪರ್ಯಂತ ಅವರು ತಮ್ಮ ನಿಲುವಿಗೆ ಬದ್ಧರಾಗಿದ್ದರು. ಆದರೆ ಸಾವಿನ ಮೂಲಕ ಅವರು ರಾಜಿಮಾಡಿಕೊಂಡರು. ಹಾಗೆಯೇ ಜವಹರಲಾಲ್ ನೆಹರೂ ಮತ್ತು ವಲ್ಲಭಭಾಯಿ ಪಟೇಲರೂ ರಾಜಿಯಾದರು. ಇದೊಂದು ಹೊಸದಾದ, ಭಂಗುರವಾದ ರಾಷ್ಟ್ರದ ಮೇಲೆ ಗಮನಾರ್ಹವಾದ, ಗಣನೀಯವಾದ ಪರಿಣಾಮ ಬೀರುವ ರಾಜಿಯಾಗಿತ್ತು.

○

2

ವಿಭಜನೆಯ ತರ್ಕ

ಹಲವಾರು ಮಾನವಕುಲಗಳು ಮತ್ತು ಸಂಸ್ಕೃತಿಗಳು ಭಾರತಕ್ಕೆ ಹರಿದು ಬಂದದ್ದು, ಆದರಾತಿಥ್ಯಶೀಲವುಳ್ಳ ಭರತಭೂಮಿಯಲ್ಲಿ ನೆಲೆ ಕಂಡುಕೊಂಡದ್ದು, ಜೀವನಯಾತ್ರೆಯ ಹಲವಾರು ಪಯಣಿಗರು ಇಲ್ಲಿ ನೆಮ್ಮದಿಯ ತಾಣವನ್ನು ಕಂಡುಕೊಂಡದ್ದು ಭಾರತದ ಚಾರಿತ್ರಿಕ ನಿಯತಿಯೇ ಆಗಿದೆ. ಹನ್ನೊಂದು ನೂರು ವರ್ಷಗಳ (ಹಿಂದೂ ಧರ್ಮ ಮತ್ತು ಇಸ್ಲಾಮ್ ಧರ್ಮಗಳ) ಸಮಾನವಾದ ಇತಿಹಾಸ ನಮ್ಮ ಸಮಾನ ಸಾಧನೆಗಳಿಂದ ಭಾರತವನ್ನು ಶ್ರೀಮಂತಗೊಳಿಸಿದೆ. ನಮ್ಮ ಭಾಷೆಗಳು, ನಮ್ಮ ಕಾವ್ಯ, ನಮ್ಮ ಸಾಹಿತ್ಯ, ನಮ್ಮ ಕಲೆ, ನಮ್ಮ ವೇಷಭೂಷಣ, ನಮ್ಮ ನಡವಳಿಕೆ, ಶೀಲ ಆಚಾರಗಳು, ಸಂಪ್ರದಾಯ-ಪದ್ಧತಿಗಳು, ನಮ್ಮ ನಿತ್ಯಗಟ್ಟಳೆಯ ಅಸಂಖ್ಯಾತ ವಿದ್ಯಮಾನಗಳು, ಘಟನೆಗಳು ಇವೆಲ್ಲದರ ಮೇಲೂ ನಮ್ಮ ಸಂಯುಕ್ತ ಸಾಹಸ-ಹೋರಾಟಗಳ ಛಾಪು ಇದೆ...ಈ ಸಾವಿರ ವರ್ಷಗಳ ಅವಿಭಕ್ತ ಬದುಕು ನಮ್ಮಲ್ಲಿ ಸಮಾನ ರಾಷ್ಟ್ರೀಯತೆಯ ಲಕ್ಷಣವನ್ನು ರೂಪಿಸಿದೆ...ನಮಗೆ ಇಷ್ಟವಿರಲಿ, ಇಲ್ಲದಿರಲಿ ನಾವೀಗ ಭಾರತೀಯ ರಾಷ್ಟ್ರವಾಗಿದ್ದೇವೆ. ಏಕೀಕೃತವಾದ, ವಿಭಜಿಸಲಾಗದ ಭಾರತರಾಷ್ಟ್ರವಾಗಿದ್ದೇವೆ. ಪ್ರತ್ಯೇಕಿಸುವ ಅಥವಾ ವಿಭಜಿಸುವ ಯಾವ ಕಲ್ಪನಾ ವಿಲಾಸದಿಂದಲೂ ಅಥವಾ ಕೃತಕ ಹುನ್ನಾರಗಳಿಂದಲೂ ಈ ಏಕತೆಯನ್ನು ಭಗ್ನಗೊಳಿಸಲಾಗದು.

ಮೌಲಾನಾ ಅಬುಲ್ ಕಲಾಂ ಆಜಾದ್
ಕಾಂಗ್ರೆಸ್ ಅಧ್ಯಕ್ಷೀಯ ಭಾಷಣದಲ್ಲಿ-1940

ಭಾರತದೊಳಗಿನ ಸಮಸ್ಯೆ ಅಂತರ್‌ಧರ್ಮೀಯವಾದುದಲ್ಲ ಆದರೆ ಸ್ಪಷ್ಟವಾಗಿ ಅಂತರರಾಷ್ಟ್ರೀಯ ಗುಣಲಕ್ಷಣವುಳ್ಳದ್ದು ಹಾಗೂ ಇದನ್ನು ಹಾಗೆಯೇ ಪರಿಗಣಿಸಬೇಕು. ಹಿಂದೂಗಳು ಮತ್ತು ಮುಸ್ಲಿಮರು ಸಮಾನ ರಾಷ್ಟ್ರೀಯತೆಯನ್ನು ರೂಪಿಸಿಕೊಳ್ಳುವುದು

ಸಾಧ್ಯ ಎನ್ನುವುದು ಒಂದು ಕನಸು. ಏಕೀಕೃತ ಭಾರತ ರಾಷ್ಟ್ರದ ತಪ್ಪುಕಲ್ಪನೆ ಮಿತಿಮೀರಿದ್ದು, ನಮ್ಮ ಬಹುತೇಕ ಕಷ್ಟಗಳಿಗೆ ಕಾರಣವಾಗಿದೆ, ಸಕಾಲದಲ್ಲಿ ನಮ್ಮ ಕಾರ್ಯಕ್ರಮಗಳನ್ನು, ಕ್ರಿಯೆಗಳನ್ನು ನಾವು ಪರಿಷ್ಕರಿಸದೇ ಹೋದಲ್ಲಿ ಭಾರತವನ್ನು ವಿನಾಶದ ಹಾದಿಗೆ ಒಯ್ಯಲಿದೆ. ಹಿಂದೂಗಳು ಮತ್ತು ಮುಸ್ಲಿಮರು ಎರಡು ವಿಭಿನ್ನ ಧರ್ಮಗಳ ತತ್ವಸಿದ್ಧಾಂತಗಳಿಗೆ, ಸಾಮಾಜಿಕ ಪದ್ಧತಿಗಳಿಗೆ, ಸಂಪ್ರದಾಯಗಳಿಗೆ ಮತ್ತು ಸಾಹಿತ್ಯಕ್ಕೆ ಸೇರಿದವರು. ಅವರಿಂದ ಸಹವಿವಾಹ, ಸಹ ಭೋಜನ ಸಾಧ್ಯವಿಲ್ಲ. ವಾಸ್ತವವಾಗಿ ಅವರು ಎರಡು ಭಿನ್ನ ನಾಗರಿಕತೆಗಳಿಗೆ ಸೇರಿದವರು, ಮುಖ್ಯವಾಗಿ ಪರಸ್ಪರ ಸಂಘರ್ಷಯುಕ್ತವಾದ ವಿಚಾರಗಳು ಮತ್ತು ಕಲ್ಪನೆಗಳನ್ನು ಆಧರಿಸಿರುವ ಭಿನ್ನ ನಾಗರಿಕತೆಗಳಿಗೆ ಸೇರಿದವರು. ಜೀವನ ಮತ್ತು ಜೀವನದ ಬಗೆಗಿನ ಅವರ ದರ್ಶನಗಳೂ ವಿಭಿನ್ನ.

ಎಂ. ಎ. ಜಿನ್ನಾ,

ಮುಸ್ಲಿಂ ಲೀಗ್ ಅಧ್ಯಕ್ಷೀಯ ಭಾಷಣದಲ್ಲಿ, 1940

I

ಭಾರತದ ವಿಭಜನೆ ಆಗಬೇಕಿತ್ತೆ? ಬ್ರಿಟಿಷರು ತೊರೆದು ಹೋಗುವಾಗ ತಮ್ಮ ಹಿಂದೆ ಏಕರಾಷ್ಟ್ರವನ್ನು ಬಿಟ್ಟು ಹೋಗಲು ಸಾಧ್ಯವಿರಲಿಲ್ಲವೆ? 1947ರ ನಂತರ ಇಂಥ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಈ ಪ್ರಶ್ನೆಗಳಿಗೆ ಉತ್ತರಿಸುವ ಪ್ರಕ್ರಿಯೆಯಲ್ಲಿ ಉಪಪ್ರಶ್ನೆಯೊಂದು ಉದ್ಭವಿಸುತ್ತಿದೆ-ಭಾರತವನ್ನು ಏಕೆ ವಿಭಜಿಸಲಾಯಿತು?

ಅವಿಭಜಿತ ಭಾರತ, ಅವಿಭಕ್ತ ಭಾರತದ ಹಂಬಲ, ವಿರಹ ವೇದನೆಗಳು ಹೆಚ್ಚಾಗಿ ಭಾರತದ ಕಡೆಯ ಗಡಿ ಪ್ರದೇಶಗಳಿಂದ ಪ್ರಕಟಗೊಂಡವು. ಆದರೆ, ಪಾಕಿಸ್ತಾನ ಎಂದಾದ ಪ್ರದೇಶಗಳಲ್ಲೂ ಸ್ವಲ್ಪಮಟ್ಟಿಗೆ ವಿರಹಭಾವ ವ್ಯಕ್ತವಾಯಿತು. 1947ರ ಆಗಸ್ಟ್ 15 ರಂದು ಅನುಭವಿ ಒಕ್ಕೂಟವಾದಿ ರಾಜಕಾರಣಿಯೊಬ್ಬರು ಹೀಗೊಂದು ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು:

ಪಂಜಾಬಿನ ಏಕತೆಯನ್ನು ಕಾಪಾಡಲು ಏನನ್ನು ಬೇಕಾದರೂ ಮಾಡಬಲ್ಲೆ. ಏನೆಲ್ಲ ಆಗುತ್ತಿದೆ ಎಂಬುದನ್ನು ನೋಡುವುದು ಹೃದಯವಿದ್ರಾವಕವಾದದ್ದು...ಇವೆಲ್ಲವೂ ನಿಜವಾದ ಒಪ್ಪಂದಕ್ಕೆ ಬರುವ ಮೊದಲೇ ಎಲ್ಲವನ್ನೂ ಫೈಸಲು ಮಾಡಿ ನಿರ್ಗಮಿಸುವ ನೀತಿಯ ಫಲ...ಅಧಿಕಾರ ಹಸ್ತಾಂತರದ ತಾರೀಖನ್ನು ಗೊತ್ತುಪಡಿಸುವ ಮೂಲಕ ಹೊಂದಾಣಿಕೆಯನ್ನು ತಳ್ಳಿಹಾಕಲಾಯಿತು. ಭೇದವೊಂದೇ, ಜೀವಂತ

ಛಿದ್ರಛಿದ್ರಗೊಳಿಸುವ ಭೇದವೊಂದೇ ಉಳಿದ ಮಾರ್ಗವಾಯಿತು...ನಾವು ಹೊಸದಾಗಿ ಎಲ್ಲವನ್ನೂ ಪ್ರಾರಂಭಿಸಬೇಕಾಗಿದೆ. ಆದರೆ ಪ್ರತಿಯೊಬ್ಬರ ಮನಸ್ಸಿನಲ್ಲೂ ಕೋಮುದ್ವೇಷ ಹಾಗೂ ಪರಸ್ಪರ ವಿನಾಶವೇ ಮೇಲುಗೈ ಸಾಧಿಸಿರುವುದರಿಂದ ಹಳೆಯ ಮಾರ್ಗಾನುಸಾರ ಪುನರ್‌ನಿರ್ಮಾಣದ ಆಸೆ ಇಲ್ಲವೇ ಇಲ್ಲ ಎನ್ನುವಂತಾಗಿದೆ.

ಪಂಜಾಬ್ ಅಥವಾ ಭಾರತದ ಏಕತೆಯನ್ನು ಕಾಪಾಡುವುದು, ಉಳಿಸುವುದು ಏಕೆ ಸಾಧ್ಯವಾಗಲಿಲ್ಲ? ಇದಕ್ಕೆ ಭಿನ್ನಭಿನ್ನವಾದ ಉತ್ತರಗಳನ್ನು ಮುಂದೊಡ್ಡಲಾಗುತ್ತಿದೆ. ಮೊದಲನೆಯದು, ಜಿನ್ನಾ ಮತ್ತು ಮುಸ್ಲಿಮರನ್ನು ಕಾಂಗ್ರೆಸ್ ನಾಯಕತ್ವ ಕೀಳಂದಾಜು ಮಾಡಿತೆಂಬುದು. ಎರಡನೆಯದು, ಮಾನವೀಯ ಪರಿಣಾಮಗಳನ್ನು ಕಡೆಗಣಿಸಿ ಜಿನ್ನಾ ಪ್ರತ್ಯೇಕ ರಾಷ್ಟ್ರದ ಗುರಿ ಸಾಧನೆಗೆ ಮುಂದಾದರು ಎನ್ನುವ ಆಕ್ಷೇಪಣೆ. ಮೂರನೆಯದು, ಬ್ರಿಟಿಷರೇ ಇದಕ್ಕೆಲ್ಲ ಹೊಣೆ ಎನ್ನುವ ಆರೋಪ. ತಮ್ಮ ಆಳ್ವಿಕೆಯನ್ನು ಶಾಶ್ವತಗೊಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರು ಹಿಂದೂ-ಮುಸ್ಲಿಮರ ನಡುವೆ ಒಡಕು ಉಂಟುಮಾಡಿದರೆಂಬುದು ಈ ಆರೋಪದ ತಿರುಳು.

ಈ ಎಲ್ಲ ಸಮಜಾಯಿಷಿಗಳು, ಅಥವಾ ಆರೋಪಗಳು ಎಂದು ಯಾರಾದರೂ ಭಾವಿಸುವುದಾದಲ್ಲಿ ಇವುಗಳಲ್ಲಿ ಒಂದಿಷ್ಟು ಸತ್ಯಾಂಶವಿದೆ. ಮುಸ್ಲಿಂ ಲೀಗ್ ಜೊತೆ ವ್ಯವಹರಿಸುವಾಗ ನೆಹರೂ ಮತ್ತು ಗಾಂಧಿ ಪ್ರಮಾದಗಳನ್ನೆಸಗಿದರು ಎಂಬುದು ನಿಜ. 1920ರ ದಶಕದಲ್ಲಿ ಗಾಂಧೀಜಿ ಜಿನ್ನ ಅವರನ್ನು ಉಪೇಕ್ಷಿಸಿದರು ಹಾಗೂ ಮುಲ್ಲಾಗಳೊಂದಿಗೆ ಸಮಸ್ತರ ಆಸೆ-ಉದ್ದೇಶವನ್ನು ಸಮೀಕರಿಸುವ ಪ್ರಯತ್ನ ಮಾಡಿದರು. 1930ರ ದಶಕದಲ್ಲಿ ನೆಹರೂ ಅವರು, ಮುಸ್ಲಿಂ ಸಮುದಾಯ ಮಿತ್ರರು ಧರ್ಮಾಧಾರಿತ ಪಕ್ಷಕ್ಕಿಂತ ತಮ್ಮ ಸಮಾಜವಾದಿ ಧ್ಯೇಯ ನಂಬಿಕೆಗಳನ್ನು ಅನುಸರಿಸುವರು ಎನ್ನುವ ಅಹಂಕಾರದ ಮಾತುಗಳನ್ನಾಡಿದರು. ಆದರೆ ಇದು ಸುಳ್ಳೆಂದು ನಂತರ ಸಾಬೀತಾಯಿತು. ಏತನ್ಮಧ್ಯೆ, ಮುಸ್ಲಿಮರು ಕ್ರಮೇಣ ಕಾಂಗ್ರೆಸ್‌ನಿಂದ ಮುಸ್ಲಿಂ ಲೀಗ್‌ನತ್ತ ವಾಲಿದರು. 1930ರಲ್ಲಿ ಜಿನ್ನಾ ಅವರು ಒಪ್ಪಂದಕ್ಕೆ ಸಿದ್ಧರಿದ್ದಾಗ ಅವರನ್ನು ಉಪೇಕ್ಷೆ ಮಾಡಲಾಯಿತು. 1940ರಲ್ಲಿ ಮುಸ್ಲಿಮರು ಬಂಡೆಯಂತೆ ಅವರಿಗೆ ಆಧಾರವಾಗಿ ನಿಂತಾಗ ಅವರಿಗೆ ಒಪ್ಪಂದ ಅಗತ್ಯವೆನ್ನಿಸಲೇ ಇಲ್ಲ. ಒಪ್ಪಂದ ಸಕಾರಣವಾದೀತು ಎನ್ನಿಸಲೇ ಇಲ್ಲ.

ಜಿನ್ನಾ ಅವರ ಕೆಲವೊಂದು ರಾಜಕೀಯ ಒಲವು-ನಿಲುವುಗಳಿಗೆ ವೈಯಕ್ತಿಕ ಆಸೆ-ಆಕಾಂಕ್ಷೆಗಳಿಗೆ ಮಿಗಿಲಾದ ಬೇರೊಂದು ವಿವರಣೆ, ಕಾರಣಗಳು ಕಾಣಸಿಗುವುದಿಲ್ಲ ಎಂಬುದೂ ದಿಟ. ಅವರು ಒಂದು ಕಾಲಕ್ಕೆ ಹಿಂದೂ-ಮುಸ್ಲಿಮ್ ಏಕತೆಯ ರಾಯಭಾರಿ, ಸಂವಿಧಾನಾತ್ಮಕ ರಾಜಕಾರಣದಲ್ಲಿ ನಿರತರಾದವರು ಎಂದು ಹೆಸರುವಾಸಿಯಾಗಿದ್ದರು. ಇಸ್ಲಾಂ ಮತ್ತು ಮುಸ್ಲಿಮರ ಸಂರಕ್ಷಕನ ಅವತಾರ ತಾಳಿದ ನಂತರವೂ ಖಾಸಗಿ ಜೀವನದಲ್ಲಿ ಅವರು ಧರ್ಮಶ್ರದ್ಧೆ, ನಂಬಿಕೆಗಳ ಪ್ರತಿಪಾದನೆಗಳನ್ನು ಮಾನ್ಯ ಮಾಡಿರಲಿಲ್ಲ. (ಅವರಿಗೆ ವಿಸ್ಕಿ ಪ್ರಿಯವಾಗಿತ್ತು. ಕೆಲವರು ಹೇಳುವಂತೆ ಹಂದಿ ಮಾಂಸದ ಸ್ಯಾಂಡ್ವಿಚ್ ಸಹ). ಆದರೆ

1930ರ ಅಂತ್ಯದ ದಿನಗಳಿಂದ ಧಾರ್ಮಿಕ ಭಾವನೆಗಳನ್ನು ಉದ್ದೀಪನಗೊಳಿಸುವ ಕಾರ್ಯವನ್ನು ಬಲುಶ್ರದ್ಧೆಯಿಂದ ಆರಂಭಿಸಿದರು. ಇದು, ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡುವುದರೊಂದಿಗೆ ಪರಾಕಾಷ್ಠೆಯನ್ನು ಮುಟ್ಟಿತು. ಈ ದಿನಾಚರಣೆ ಹಿಂಸೆ-ಪ್ರತಿ ಹಿಂಸೆಗಳಿಗೆ ಪ್ರಚೋದನೆಯಾಗಿ ರಕ್ತಪಾತದ ಮಾರ್ಗಕ್ಕೆಡೆ ಮಾಡಿಕೊಟ್ಟಿತು, ರಕ್ತ ಸಿಕ್ತ ಹೋರಾಟಕ್ಕೆ ಜನರನ್ನು ಪಳಗಿಸಿತು, ವಿಭಜನೆಯನ್ನು ಅನಿವಾರ್ಯವಾಗಿಸಿತು.

ಆಶ್ಚರ್ಯರಾಗಿ ಹೇಳಬೇಕೆಂದರೆ, ಹಿಂದೂ-ಮುಸ್ಲಿಮರ ನಡುವಣ ದ್ವೇಷ ವೈಷಮ್ಯಗಳನ್ನು ಬ್ರಿಟಿಷ್ ಸರ್ಕಾರ ಸ್ವಾಗತಿಸಿತು ಹಾಗೂ ಮತ್ತಷ್ಟು ಆಜ್ಯ ಹೊಯ್ದು ಅದನ್ನು ಅಧಿಕಗೊಳಿಸಿತು. 1925ರ ಮಾರ್ಚಿ ತಿಂಗಳ ವೇಳೆಗೆ ವಸಾಹತುಶಾಹಿ ವಿರೋಧಿ ಹೋರಾಟ ಅಪ್ಪಟ ಜನ ಸಮುದಾಯದ ಹೋರಾಟದ ಆಯಾಮವನ್ನು ಪಡೆದುಕೊಂಡಿತ್ತು. ಆಗ ಭಾರತದಲ್ಲಿದ್ದ ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿ ವೈಸ್‌ರಾಯ್‌ಗೆ ಪತ್ರ ಬರೆದು "ಕೋಮು ದಳ್ಳುರಿಯ ಉದ್ವಿಗ್ನ ಪರಿಸ್ಥಿತಿ ಶಾಶ್ವತವಾಗಿ ಉಳಿಯುವುದೆಂಬುದು ನನ್ನ ಉತ್ಕಟವಾದ, ದೃಢವಾದ ಆಶಯವಾಗಿದೆ, ಭರವಸೆಯಾಗಿದೆ" ಎಂದು ತಿಳಿಸಿದ್ದ. ಇಂಗ್ಲೆಂಡಿನೊಳಗೆ ಸ್ವಾತಂತ್ರ್ಯದ ಮೌಲ್ಯಗಳು ಬೆಳೆದಂತೆ ವ್ಯಕ್ತಿಯ ಸಾರ್ವಭೌಮತ್ವಕ್ಕೂ ಹೆಚ್ಚಿನ ಕಿಮ್ಮತ್ತು ಪ್ರಾಪ್ತವಾಯಿತು; ಆದರೆ ವಸಾಹತುಗಳಲ್ಲಿ ಸರ್ವದಾ ವ್ಯಕ್ತಿಯನ್ನು ಸಮುದಾಯದ ಅಧೀನ, ಸಮುದಾಯದ ಕೈಕೆಳಗಿನವನು ಎಂದೇ ಪರಿಗಣಿಸಲಾಗುತ್ತಿತ್ತು. ಸರ್ಕಾರಿ ಉದ್ಯೋಗಗಳಲ್ಲಿ ಇದು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಉದ್ಯೋಗಗಳ ನೇಮಕಾತಿಯಲ್ಲಿ ಹಿಂದೂ-ಮುಸ್ಲಿಂ ಸಿಬ್ಬಂದಿಯ ಸಮತೋಲನ ಸಾಧಿಸಲು ವಿಶೇಷ ಎಚ್ಚರಿಕೆ ವಹಿಸಲಾಗುತ್ತಿತ್ತು. ರಾಜಕಾರಣದಲ್ಲಿ ಬ್ರಿಟಿಷರು ಕೋಮುವಾರು ಮತದಾರರ ಆಯ್ಕೆ ಪದ್ಧತಿಯನ್ನು ಜಾರಿಗೆ ತಂದರು. ಈ ವ್ಯವಸ್ಥೆಯಲ್ಲಿ ಮುಸ್ಲಿಮರು ಮುಸ್ಲಿಂ ಅಭ್ಯರ್ಥಿಗಳಿಗೇ ಮತನೀಡಬೇಕಾಗಿತ್ತು. ಬಹುತೇಕ ಬ್ರಿಟಿಷ್ ಅಧಿಕಾರಿಗಳು ಮುಸ್ಲಿಮರ ಒಲವು ತೋರುವ, ಅವರನ್ನೇ ಆಯ್ಕೆ ಮಾಡಿಕೊಳ್ಳುವ ಪ್ರವೃತ್ತಿಯುಳ್ಳವರಾಗಿದ್ದರು. ಹಿಂದೂಗಳಿಗೆ ಹೋಲಿಸಿದರೆ ಮುಸ್ಲಿಮರ ಪೂಜಾವಿಧಾನಗಳು, ಜೀವನ ಶೈಲಿ ಬ್ರಿಟಿಷ್ ಅಧಿಕಾರಿಗೆ ಅಷ್ಟೇನೂ ಅನ್ಯ, ಪರಕೀಯ ಎನ್ನಿಸುತ್ತಿರಲಿಲ್ಲ. ಒಟ್ಟಾರೆ, ವಸಾಹತುಶಾಹಿ ನೀತಿ ಧಾರ್ಮಿಕ ವಿಭಜನೆಯನ್ನು ಗಾಢವಾಗಿಸಿತು. ಇದು ಬಿಳಿಯರ ಆಳ್ವಿಕೆಯನ್ನು ಗಟ್ಟಿಗೊಳಿಸಲು, ಬಲಪಡಿಸಲು ಸಹಕಾರಿಯಾಯಿತು.

ಕಾಂಗ್ರೆಸ್‌ನಲ್ಲಿದ್ದ ದೂರದೃಷ್ಟಿಯ ಕೊರತೆ, ಜಿನ್ನಾರ ಮಹತ್ವಾಕಾಂಕ್ಷೆ, ಬ್ರಿಟನ್ನಿನ ನೀತ್ಯತೀತ ನಿಲುವು, ಸಿನಿಕತನ ಇವೆಲ್ಲವೂ ವಿಭಜನೆಯಲ್ಲಿ ತಮ್ಮ ಪಾತ್ರ ನಿರ್ವಹಿಸಿರಬಹುದು. ಆದರೆ 1940ರ ಆದಿಭಾಗದ ವೇಳೆಗೇ ವಿಭಜನೆಯನ್ನು ಭಾರತದ ಇತಿಹಾಸದ ತರ್ಕದಲ್ಲಿ ನಮೂದಿಸಿಯಾಗಿತ್ತು. ಬ್ರಿಟಿಷರು ಮತದಾರ ಸಮುದಾಯದ ವ್ಯವಸ್ಥೆಗೆ ಉತ್ತೇಜನ ನೀಡದೇ ಇದ್ದಿದ್ದರೂ ಆಧುನಿಕ ಚುನಾವಣಾ ರಾಜಕಾರಣದ ಉಗಮವೇ ಸಮುದಾಯ ಓಟಿನ ಬ್ಯಾಂಕುಗಳ ಸೃಷ್ಟಿಗೆ ಪ್ರೋತ್ಸಾಹದಾಯಕವಾಗಿರುತ್ತಿತ್ತು. ಮುಸ್ಲಿಮರು "ತಾವು ವಾಸ್ತವವಾಗಿ ಮುಸ್ಲಿಮರೆಂದು" ಯೋಚಿಸಬೇಕೆಂಬ ಪ್ರೇರಣೆ-ಪ್ರಚೋದನೆಗಳು ಹೆಚ್ಚಾಗತೊಡಗಿದವು.

1927ರ ವೇಳೆಗೇ ಮುಸ್ಲಿಂ ಲೀಗ್ 1300 ಜನರ ಸದಸ್ಯತ್ವ ಹೊಂದಿತ್ತು. 1944ರ ವೇಳೆಗೆ ಬಂಗಾಳವೊಂದರಲ್ಲೇ ಐದುಲಕ್ಷ ಜನ ಮುಸ್ಲಿಂ ಲೀಗ್ ಸದಸ್ಯರಾಗಿದ್ದರು. ಪಂಜಾಬಿನಲ್ಲಿ 200,000 ಜನ ಸದಸ್ಯರಾಗಿದ್ದರು. ಎಲ್ಲ ವರ್ಗಗಳ ಮುಸ್ಲಿಮರೂ ಹಿಂಡುಹಿಂಡಾಗಿ ಮುಸ್ಲಿಂ ಲೀಗ್ ಸೇರಿದರು. ಕುಶಲ ಕರ್ಮಿಗಳು, ಕಾರ್ಮಿಕರು, ಕೂಲಿಯಾಳುಗಳು, ವೃತ್ತಿಪರರು, ವಣಿಕರು, ವರ್ತಕರು ಹೀಗೆ ಎಲ್ಲ ವರ್ಗದ ಮುಸ್ಲಿಮರೂ "ಇಸ್ಲಾಂ ಅಪಾಯಕ್ಕೆ ಸಿಕ್ಕಿದೆ" ಎಂಬ ಕರೆಗೆ ಓಗೊಟ್ಟು ಒಂದುಗೂಡಿದರು. ಏಕೀಕೃತ ಭಾರತ 'ಬ್ರಾಹ್ಮಣ, ಬನಿಯರ ರಾಜ್ಯ'ವಾಗುವ ಸಾಧ್ಯತೆಯ ಭೀತಿ ಇವರೆಲ್ಲರನ್ನೂ ಕಾಡುತ್ತಿತ್ತು.

1940ರ ಮಾರ್ಚಿಯಲ್ಲಿ ಮುಸ್ಲಿಂ ಲೀಗ್ ವಿಧ್ಯುಕ್ತವಾಗಿ ಪ್ರತ್ಯೇಕ ಪಾಕಿಸ್ತಾನಕ್ಕೆ ಕರೆ ನೀಡಿತು. ಎರಡನೆಯ ಮಹಾಯುದ್ಧ ಈ ಪ್ರತ್ಯೇಕತೆಯ ಕೂಗನ್ನು ಅದುಮಿಟ್ಟಿತು. ಭಾರತದ ಸ್ವಾತಂತ್ರ್ಯದ ಬೇಡಿಕೆಯನ್ನು ಈ ಯುದ್ಧದಿಂದಾಗಿ ನಿಗ್ರಹಿಸಲಾಯಿತು. ಈ ಯುದ್ಧಾನಂತರ ಗ್ರೇಟ್ ಬ್ರಿಟನ್ನಿನಲ್ಲಿ ಲೇಬರ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂತು. ಲೇಬರ್ ಪಕ್ಷ ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ಕನ್ಸರ್ವೆಟಿವ್‌ಗಳಂತಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ನೀಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದಕ್ಕೆ ತಾನು ನೈತಿಕವಾಗಿ ಬದ್ಧ ಎಂಬುದು ಈ ಪಕ್ಷದ ಭಾವನೆಯಾಗಿತ್ತು. ಭಾರತದ ಬಗ್ಗೆ, ಪ್ರಧಾನಮಂತ್ರಿ ಕ್ಲೆಮೆಂಟ್ ಅಟ್ಲೆಯವರು "ತಮ್ಮ ರಾಜಕೀಯ ಜೀವನದಲ್ಲೇ ಅಪರೂಪವಾಗಿದ್ದಂಥ ತೀವ್ರ ಆಸಕ್ತಿ, ಮಮಕಾರಗಳನ್ನೂ ನಿರ್ಣಾಯಕತೆಗಳನ್ನೂ ತೋರಿದ್ದರು."

ಲೇಬರ್ ಪಕ್ಷದ ಪ್ರಮುಖ ರಾಜಕಾರಣಿಗಳು ಕಾಂಗ್ರೆಸ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಇವರಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸ್ ಒಬ್ಬನು. ಇವನು 1946ರ ಪ್ರಾರಂಭದ ದಿನಗಳಲ್ಲಿ ಭಾರತದ ಸ್ವಾತಂತ್ರ್ಯ ಕುರಿತು ಸಂಧಾನ ನಡೆಸಲು ಕಳುಹಿಸಲಾಗಿದ್ದ ತ್ರಿಸದಸ್ಯ ಕ್ಯಾಬಿನೆಟ್ ನಿಯೋಗದಲ್ಲಿದ್ದನು. ಸಂಯುಕ್ತ ಭಾರತ ಕ್ರಿಪ್ಸ್ ಮತ್ತು ಇತರ ಲೇಬರ್ ನಾಯಕರುಗಳ ಅಪೇಕ್ಷೆಯಾಗಿತ್ತು. ಸಂಯುಕ್ತ ಭಾರತಕ್ಕೆ ಕಾಂಗ್ರೆಸ್ ಮಾರ್ಗದರ್ಶನ ಮಾಡಬೇಕು. ಸಂಯುಕ್ತ ಭಾರತವನ್ನು ಕಾಂಗ್ರೆಸ್ ಆಳಬೇಕು ಎಂಬುದು ಇವರ ಆಶಯವಾಗಿತ್ತು. ಆದರೆ, 1945ರ ಡಿಸೆಂಬರ್‌ನಲ್ಲಿ ಸಿದ್ಧಗೊಳಿಸಲಾದ ಮುಖ್ಯಾಂಶಗಳ ಟಿಪ್ಪಣಿಯೊಂದರಲ್ಲಿ ಇದು ಎಷ್ಟು ಅಸಂಭವ ಎಂಬುದನ್ನು ತೋರಿಸಿಕೊಡಲಾಗಿತ್ತು. ಈ ಟಿಪ್ಪಣಿಯನ್ನು ಬರೆದವನು ಪೆಂಡೆರೆಲ್ ಮೂನ್ ಎಂಬಾತ. ಈತ ಸ್ವಲ್ಪಕಾಲ ಇಂಡಿಯನ್ ಸಿವಿಲ್ ಸರ್ವಿಸ್‌ನಲ್ಲಿದ್ದ ಸಕಲಾತ್ಮಗಳ ಸಂಗಾತಿ. "ಸಂಯುಕ್ತ ಭಾರತಕ್ಕೆ ಮುಸ್ಲಿಮರ ಸಮ್ಮತಿ ಪಡೆಯುವುದಕ್ಕಿಂತ ವಿಭಜನೆಗೆ ಹಿಂದೂಗಳ ಸಮ್ಮತಿ ಪಡೆಯುವ ಸಾಧ್ಯತೆ-ಸಂಭಾವ್ಯತೆಗಳೇ ಹೆಚ್ಚಾಗಿದೆ" ಎಂಬುದನ್ನು ಮೂನ್ ಖಚಿತವಾಗಿ ಹೇಳಿದ್ದ. "ಮುಸ್ಲಿಮರ ಅಪೇಕ್ಷೆ-ಆಶಯಗಳಿಗೆ ವಿರುದ್ಧವಾದ ಸಂಯುಕ್ತ ಭಾರತ ಸ್ಥಾಪನೆಗೆ ಸೈನಿಕ ಕಾರ್ಯಾಚರಣೆ ಅಗತ್ಯವಾಗಬಹುದು ಎನ್ನುವುದು ಬ್ರಿಟಿಷ್ ಸರ್ಕಾರದ ಅಭಿಪ್ರಾಯವಾಗಿತ್ತು. ಹಿಂದೂಗಳ ಇಚ್ಛೆಗೆ ವಿರುದ್ಧವಾಗಿ ಭಾರತವನ್ನು ವಿಭಜಿಸುವುದಕ್ಕೆ ಸೈನಿಕ ಕಾರ್ಯಾಚರಣೆಯ

ಅಗತ್ಯ ಬೀಳುವುದಿಲ್ಲ, ಅಗತ್ಯ ಕಂಡರೂ ಅದು ಅತಿ ಕಡಿಮೆ ಪ್ರಮಾಣದಲ್ಲಿ ಸೇನೆಯನ್ನು ಬಳಸಬೇಕಾಗಬಹುದು ಎನ್ನುವುದು ಬ್ರಿಟಿಷ್ ಚಿಂತನೆಯ ಕ್ರಮವಾಗಿತ್ತು. ಮದ್ರಾಸ್, ಮುಂಬಯಿ, ಉತ್ತರ ಪ್ರದೇಶ, ಸೆಂಟ್ರಲ್ ಪ್ರಾವಿನ್ಸ್‌ನ ಹಿಂದೂಗಳು ಬಂಗಾಳದಲ್ಲಿನ ತಮ್ಮ ಸಹೋದರರಿಗಾಗಿ ಪ್ರಲಾಪಿಸಬಹುದಷ್ಟೇ. ಭರತ ಮಾತೆಯಿಂದ ಹರಿದು ಹಂಚಿ ಹೋದ ಪಂಜಾಬಿನಲ್ಲಿ ತಮ್ಮ ಹತಭಾಗ್ಯ ಸಹೋದರರ ಸಲುವಾಗಿ ಧರ್ಮಯುದ್ಧ ಸಾರುವಂಥ ಮನಸ್ಸಾಗಲೀ ಶಕ್ತಿಯಾಗಲೀ ಇರುವ ಸಾಧ್ಯತೆ ಕಡಿಮೆ.''

ಮುಂದಿನ ಕೆಲವು ತಿಂಗಳುಗಳಲ್ಲಿ ಈ ಮಾತುಗಳ ಹಿಂದಿನ ಹೃದಯಹೀನ ವಿವೇಕ ಸಾಬೀತಾಯಿತು. 1946ರ ಆದಿಯಲ್ಲಿ ವಿವಿಧ ಪ್ರಾಂತೀಯ ವಿಧಾನ ಸಭೆಗಳಿಗೆ ಚುನಾವಣೆ ನಡೆಯಿತು. ಶಿಕ್ಷಣ ಮತ್ತು ಆಸ್ತಿಪಾಸ್ತಿಯ ಅರ್ಹತೆಯ ಮೇಲೆ ನಡೆಸಿದ ಚುನಾವಣೆ ಇದಾಗಿತ್ತು. ವಯಸ್ಕರಲ್ಲಿ ಸುಮಾರು ಶೇ 28ರಷ್ಟು ಮಂದಿ ಓಟು ಚಲಾಯಿಸುವ ಅರ್ಹತೆ ಪಡೆದಿದ್ದರು. ಅಂದರೆ ಬ್ರಿಟಿಷ್ ಭಾರತದ ಭೂಪ್ರದೇಶದ ಜನಸಂಖ್ಯೆಯಲ್ಲಿ 41 ದಶಲಕ್ಷ ಮಂದಿ ಮತದಾನದ ಅರ್ಹತೆ ಪಡೆದಿದ್ದರು.

ವಿಶ್ವಾದ್ಯಂತ, ಆಧುನಿಕ ಪ್ರಜಾಸತ್ತಾತ್ಮಕ ರಾಜಕಾರಣದ ಭಾಷೆ ಎರಡು ವಿರುದ್ಧ ಶೈಲಿಯ ಡಾಂಭಿಕತೆಯಿಂದ ಕೂಡಿರುವುದನ್ನು ಗಮನಿಸಬಹುದು. ಮೊದಲನೆಯ ವಾಗಾಡಂಬರದ ಭಾಷೆ ಆಸೆ-ಭರವಸೆಗಳಿಗೆ ಮೊರೆಯಿಡುತ್ತದೆ. ಆರ್ಥಿಕ ಅಭ್ಯುದಯ ಮತ್ತು ಸಾಮಾಜಿಕ ಶಾಂತಿ ಕುರಿತಂತೆ ಜನತೆಯ ಆಶೋತ್ತರಗಳನ್ನು ಮುಟ್ಟುವುದು ಈ ಮೊರೆಯ ಗುರಿಯಾಗಿರುತ್ತದೆ. ಎರಡನೆಯ ಭಾಷೆ ಜನರ ಭಯ ಭೀತಿಗಳನ್ನುದ್ದೇಶಿಸಿ ಮೊರೆ ಇಡುತ್ತದೆ. ಕೇಡು-ವಿನಾಶಗಳಿಂದ ಪರಿಸ್ಥಿತಿ ಹದಗೆಡಬಹುದೆಂಬ ವಿವಿಧ ಪಂಥ-ಪ್ರದೇಶಗಳ ಜನರ ಚಿಂತೆ ಅಥವಾ ಐತಿಹಾಸಿಕ ಶತ್ರುಗಳು ತಮ್ಮನ್ನು ಕೊಚ್ಚಿ ಹಾಕಬಹುದೆಂಬ ಚಿಂತೆ. ಜನರ ಇಂಥ ಚಿಂತೆ ವ್ಯಾಕುಲಗಳನ್ನೇ ಬಂಡವಾಳವಾಗಿಟ್ಟುಕೊಂಡು ಮಾತನಾಡುವುದು ಪ್ರಜಾಸತ್ತಾತ್ಮಕ ರಾಜಕಾರಣದ ಭಾಷೆಯ ಇನ್ನೊಂದು ಶೈಲಿ. 1946ರ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜನತೆಯ ಆಸೆ-ಭರವಸೆಗಳೇ ಬಂಡವಾಳವಾಯಿತು. ಇದನ್ನೇ ನೆಚ್ಚಿಕೊಂಡಿತು. ಜನರ ಆಸೆ-ಭರವಸೆ-ನಿರೀಕ್ಷೆಗಳಲ್ಲಿ ಪ್ರಬಲವಾದ ಹಾಗೂ ಸಕಾರಾತ್ಮಕವಾದ ಅಂಶಗಳಿದ್ದವು. ಇವನ್ನು ಕಾಂಗ್ರೆಸ್ ತನ್ನ ಕಾರ್ಯಕ್ರಮವನ್ನಾಗಿಸಿಕೊಂಡಿತು. ಭೂಸುಧಾರಣೆ, ಕಾರ್ಮಿಕರ ಹಕ್ಕು ಬಾಧ್ಯತೆಗಳು–ಇಂಥ ಆಶೋತ್ತರಗಳನ್ನು ಈಡೇರಿಸುವುದಾಗಿ ಕಾಂಗ್ರೆಸ್ ಭರವಸೆ ನೀಡಿತು. ಪ್ರತಿಯಾಗಿ ಮುಸ್ಲಿಂ ಲೀಗ್ ಜನರ ಮನದೊಳಡಗಿದ್ದ ಭೀತಿಯನ್ನೇ ಚುನಾವಣೆಯ ಬಂಡವಾಳವನ್ನಾಗಿಸಿಕೊಂಡಿತು. ಪ್ರತ್ಯೇಕ ಮುಸ್ಲಿಂ ರಾಷ್ಟ್ರವಾಗದಿದ್ದಲ್ಲಿ, ಸಂಯುಕ್ತ ಭಾರತದಲ್ಲಿ ಬಹು ಸಂಖ್ಯಾತರಾದ ಹಿಂದೂಗಳು ಮುಸ್ಲಿಮರನ್ನು ತುಳಿದು ಹಾಕುವರೆಂದು ಮುಸ್ಲಿಂ ಲೀಗ್ ಮತದಾರರಿಗೆ ತಿಳಿಸಿತು. ಪರಿಣಾಮತಃ ಮುಸ್ಲಿಂ ಲೀಗ್ ಈ ಮಾತುಗಳ ಮೂಲಕ ಪಾಕಿಸ್ತಾನ ಪ್ರಶ್ನೆ ಬಗ್ಗೆ ಜನಮತ ಸಂಗ್ರಹವನ್ನೇ ಬಯಸಿತ್ತು. ಪ್ರಚಾರ ಭಾಷಣವೊಂದರಲ್ಲಿ ಜಿನ್ನಾ ಹೀಗೆ ನುಡಿದಿದ್ದರು: "ಚುನಾವಣೆಗಳು ಅಂತ್ಯದ ಆರಂಭವಿದ್ದಂತೆ. ಬರುವ

ಚುನಾವಣೆಯಲ್ಲಿ ಮುಸ್ಲಿಮರು ಪಾಕಿಸ್ತಾನ ರಚನೆ ಪರ ನಿಲ್ಲಲು ನಿರ್ಧರಿಸಿದರೆ ಅರ್ಧಯುದ್ಧ ಗೆದ್ದಂತೆಯೇ. ನಮ್ಮ ಯುದ್ಧದ ಮೊದಲ ಹಂತದಲ್ಲೇ ನಾವು ಪರಾಜಿತರಾದರೆ ನಮ್ಮನ್ನು ಮುಗಿಸಿಬಿಡುತ್ತಾರೆ."

ನಾಯಕನ ಸಂದೇಶವನ್ನು ಕಾರ್ಯಕರ್ತರು ಸಶಕ್ತವಾಗಿ, ಉತ್ಸಾಹಭರಿತವಾಗಿ ಮತದಾರರಿಗೆ ಮುಟ್ಟಿಸಿದರು. ಬಿಹಾರದಲ್ಲಿ, ಪ್ರಾಂತೀಯ ಮುಸ್ಲಿಂ ಲೀಗ್ ಮತದಾರರಿಗೆ ಹೀಗೆ ಮನವಿ ಮಾಡಿತು: "ಮತಗಳೆಂಬ ಇಟ್ಟಿಗೆ ಕಲ್ಲುಗಳನ್ನು 'ರಾಮರಾಜ್' ಕೋಟೆಯ ನಿರ್ಮಾಣಕ್ಕೆ ಬಳಸಬೇಕೋ ಅಥವಾ ಮುಸ್ಲಿಮರು ಮತ್ತು ಇಸ್ಲಾಮಿನ ಸ್ವಾತಂತ್ರ್ಯದ ನಿರ್ಮಾಣಕ್ಕೆ ಬಳಸಬೇಕೋ ಎಂಬುದನ್ನು ನೀವೇ ತೀರ್ಮಾನಿಸಿ." ಪಂಜಾಬಿನಲ್ಲಿ ಕಾಣಿಸಿಕೊಂಡ ಮುಸ್ಲಿಂ ಲೀಗ್ ಭಿತ್ತಿಪತ್ರಗಳು ಅರ್ಥಪೂರ್ಣವಾದ ಭಿನ್ನತೆ-ವೈದೃಶ್ಯಗಳ ಜೋಡಿಯನ್ನು ಮತದಾರರ ಮುಂದಿಟ್ಟಿದ್ದವು. ಅವು: ದಿನ್(ನಂಬಿಕೆ)-ದುನಿಯಾ(ಐಹಿಕ ಪ್ರಪಂಚ); ಜಮೀರ್(ಧರ್ಮ ಪ್ರಜ್ಞೆ-ಆತ್ಮಸಾಕ್ಷಿ)-ಜಾಗೀರ್(ಜಮೀನು ಇತ್ಯಾದಿ ಆಸ್ತಿಪಾಸ್ತಿ)-ಹಕ್‌ಕೋಶಿ(ಧರ್ಮಶೀಲ-ಸದಾಚಾರ ನೀತಿ)-ಸುಫೇದ್ ಪೋಶಿ(ಅಧಿಕಾರ) ಇವೆರಡರ ನಡುವೆ ಯಾವುದು ಬೇಕೆಂಬುದನ್ನು ತೀರ್ಮಾನಿಸುವಂತೆ, ಈ ಭಿನ್ನತೆಗಳನ್ನು ಮತದಾರರ ಮುಂದಿಡಲಾಗಿತ್ತು. ಪ್ರತಿಯೊಂದರಲ್ಲೂ ಮೊದಲನೆಯ ವೈದೃಶ್ಯ ಪಾಕಿಸ್ತಾನದ ಪರವಾಗಿದ್ದರೆ ಎರಡನೆಯದು ಹಿಂದೂಸ್ತಾನದ ಪರವಾಗಿತ್ತು.

ಜಾತಿ-ವರ್ಗ-ಪಂಥಗಳ ಸಂಕುಚಿತ ಮನೋಭಾವ ತೊರೆಯುವಂತೆ ಲೀಗ್ ತನ್ನ ಪ್ರಚಾರದಲ್ಲಿ ಮತದಾರರನ್ನು ಆಗ್ರಹಪಡಿಸಿತ್ತು. "ಇಸ್ಲಾಂ ಬಗ್ಗೆ ಒಂದಾಗಿ-ಒಂದುಗೂಡಿ" ಎಂಬುದು ಒಂದು ಭಿತ್ತಿ ಪತ್ರದ ಘೋಷಣೆಯಾಗಿತ್ತು. ಒಂದು ಸಮುದಾಯವಾಗಿ ಒಗ್ಗಟ್ಟಿನಿಂದ ವರ್ತಿಸಿ ಮತ ಚಲಾಯಿಸುವಂತೆ ಮುಸ್ಲಿಮರಿಗೆ ಮನವಿ ಮಾಡಲಾಗಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಮನೆಗೂ ಭೇಟಿಕೊಟ್ಟು ಪ್ರಚಾರಮಾಡಿದ ವಿದ್ಯಾರ್ಥಿ ಸ್ವಯಂಸೇವಕರು ಈ ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸಿದರು.

ಚುನಾವಣೆಯ ಫಲಿತಾಂಶ, ಕಣ್ಣಿಗೆ ರಾಚುವಂತೆ ಮುಸ್ಲಿಂ ಲೀಗ್ ಪ್ರಚಾರವನ್ನು ಸಮರ್ಥಿಸುವ ರೀತಿಯದಾಗಿತ್ತು. ಭಾರತದ ಉದ್ದಗಲ, ಒಂದು ಪ್ರಾಂತ್ಯದ ನಂತರ ಮತ್ತೊಂದರಲ್ಲಿ ಸಾರ್ವತ್ರಿಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಮುಸ್ಲಿಂ ಕ್ಷೇತ್ರಗಳನ್ನು ಲೀಗ್ ಬಾಚಿಕೊಂಡಿತ್ತು. ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರ ಬೇಕೆಂಬ ಏಕೈಕ ವಿಷಯವನ್ನಿಟ್ಟುಕೊಂಡು ಲೀಗ್ ಜಯಭೇರಿ ಬಾರಿಸಿತ್ತು. ಉದಾಹರಣೆಗೆ, ಬಂಗಾಳ ಪ್ರಾಂತ್ಯದಲ್ಲಿ ಮುಸ್ಲಿಮರಿಗೆ ಮೀಸಲಾಗಿದ್ದ 119 ಕ್ಷೇತ್ರಗಳಲ್ಲಿ ಲೀಗ್ 114 ಕ್ಷೇತ್ರಗಳಲ್ಲಿ ಗೆದ್ದಿತ್ತು. ಬಂಗಾಳ ಪ್ರಾಂತೀಯ ವಿಧಾನಸಭೆಯ ಒಟ್ಟು ಸದಸ್ಯ ಸಂಖ್ಯೆ 250 ಆಗಿದ್ದರಿಂದ ಲೀಗ್ ಬಹುಮತ ಸಾಧನೆಗೆ ಅಲ್ಪಶ್ರಮ ಪಡಬೇಕಾಯಿತಷ್ಟೆ. ಯುನೈಟೆಡ್ ಪ್ರಾವಿನ್ಸ್‌ನಲ್ಲಿ 228 ಸ್ಥಾನಗಳಲ್ಲಿ ಕಾಂಗ್ರೆಸ್ 153 ಸ್ಥಾನಗಳನ್ನು ಗೆದ್ದು ಸರ್ಕಾರ ರಚಿಸಿತು. ಆದರೆ ಈ ದೊಡ್ಡ ವಿಜಯದಲ್ಲೂ ಗಮನಾರ್ಹವಾದ ಸೋಲು ಇತ್ತು. ಯುನೈಟೆಡ್ ಪ್ರಾವಿನ್ಸ್‌ನ 66 ಮುಸ್ಲಿಂ

ಕ್ಷೇತ್ರಗಳಲ್ಲಿ ಲೀಗ್ 54 ಸ್ಥಾನಗಳನ್ನು ಗೆದ್ದು ಜಯಭೇರಿ ಬಾರಿಸಿತ್ತು. ದಕ್ಷಿಣದ ಮದ್ರಾಸ್ ಪ್ರಾಂತ್ಯದ ಫಲಿತಾಂಶಗಳು ಇನ್ನಷ್ಟು ಮರ್ಮಭೇದಿಯಾಗಿದ್ದವು. ಇಲ್ಲಿ ಜಿನ್ನಾನ ಅತಿನಿಷ್ಠಾವಂತ ಅನುಯಾಯಿಯೂ ಪ್ರತ್ಯೇಕ ಪಾಕಿಸ್ತಾನದ ಬೇಡಿಕೆಯ ಪರವಾಗಿ ನಿಂತಿರಲಿಲ್ಲ. ಇಲ್ಲಿ ಕಾಂಗ್ರೆಸ್ 215 ಸ್ಥಾನಗಳ ಪೈಕಿ 165 ಸ್ಥಾನಗಳಲ್ಲಿ ವಿಜಯಿಯಾಯಿತು. ಮುಸ್ಲಿಂ ಲೀಗ್ ಮುಸ್ಲಿಮರಿಗೆ ಮೀಸಲಾಗಿದ್ದ 29 ಸ್ಥಾನಗಳನ್ನೂ ಗೆದ್ದುಕೊಂಡಿತ್ತು. ಒಟ್ಟಾರೆಯಾಗಿ, ಸಾರ್ವತ್ರಿಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶೇ 80.9ರಷ್ಟು ಮತ ಗಳಿಸಿತ್ತು. ಮುಸ್ಲಿಮರಿಗೆ ಮೀಸಲಾಗಿದ್ದ ಕ್ಷೇತ್ರಗಳಲ್ಲಿ ಲೀಗ್ ಶೇ 74.7ರಷ್ಟು ಮತ ಗಳಿಸಿತ್ತು.

ಫಲಿತಾಂಶಗಳು ಹೊರಬಿದ್ದ ನಂತರ, ಲೀಗ್‌ನ ಪತ್ರಿಕೆ, 'ಡಾನ್' ಇಂಥದೊಂದು ಘೋಷಣೆಯನ್ನು ಸಾರಿತು: "ಈ ಬಾರಿ ವಿಧಾನಸಭೆಗೆ ಆಯ್ಕೆ ಹೊಂದಿರುವವರಿಗೆ ಅವರು ಪಾಲಿಸಬೇಕಾದ ಕರ್ತವ್ಯವೊಂದರ ಬಗ್ಗೆ ಮತದಾರರು ಆದೇಶವೊಂದನ್ನು ನೀಡಿದ್ದಾರೆ...ಅದು ಪಾಕಿಸ್ತಾನ ಜಯಿಸುವುದು, ಪಾಕಿಸ್ತಾನವನ್ನು ಅಗು ಮಾಡುವುದು. ಪ್ರಾಂತೀಯ ವಿಧಾನಸಭೆಗಳು, ಕೇಂದ್ರ ಅಸೆಂಬ್ಲಿಗಳು, ಕೌನ್ಸಿಲ್‌ಗಳು ಈ ಎಲ್ಲೆಡೆಗಳಲ್ಲಿ ಒಳಗೂ ಹೊರಗೂ ಆಗಬೇಕಾಗಿರುವ 'ಆದ್ಯತೆಯ ಕೆಲಸವೆಂದರೆ' ಅದೊಂದೇ. ನಿರ್ಧಾರದ ಕಾಲ ಮುಗಿಯಿತು, ಈಗ ಕಾರ್ಯಪ್ರವೃತ್ತರಾಗಬೇಕಾದ ಕಾಲ ಬಂದಿದೆ."

ಇದನ್ನು ಬರೆದದ್ದು 1946ರ ಏಪ್ರಿಲ್ 7ರ ಸಂಚಿಕೆಯಲ್ಲಿ. ಮೂರು ದಿನಗಳ ನಂತರ ಜಿನ್ನಾ ಅವರು, ಮುಸ್ಲಿಂ ಟಿಕೆಟ್ ಮೇಲೆ ಗೆದ್ದ 400 ಮಂದಿ ಚುನಾಯಿತ ಶಾಸಕರ ಸಭೆ ಕರೆದರು. ಈ ಸಮಾವೇಶದಲ್ಲಿ ಸ್ವತಂತ್ರ ಪಾಕಿಸ್ತಾನದ ಬೇಡಿಕೆಯನ್ನು/ಕರೆಯನ್ನು ಪುನರುಚ್ಚರಿಸಲಾಯಿತು. ಆದಾಗ್ಯೂ, ಜಿನ್ನಾ ಅವರು ಭಾಗವಹಿಸಿದ್ದ ಸಿಮ್ಲಾ ಸಮ್ಮೇಳನದಲ್ಲಿ ಒಕ್ಕೂಟದ ಪರಿಹಾರ ಕಾಣುವ ಪ್ರಯತ್ನಗಳನ್ನು ಕ್ಯಾಬಿನೆಟ್ ನಿಯೋಗ ನಡೆಸಿತು. ಮುಂದಿನ ಎರಡು ತಿಂಗಳುಗಳಲ್ಲಿ ಹಲವಾರು ಕರಡುಗಳು ಕೈಗಳಿಂದ ಕೈಗಳಿಗೆ ದಾಟಿದವು. ಒಂದು ರಾಷ್ಟ್ರ ಅಥವಾ ಸಂಯುಕ್ತ ರಾಷ್ಟ್ರದ ವಿಚಾರವನ್ನು ಒಪ್ಪಿಕೊಂಡೂ ಪ್ರಾಂತ್ಯಗಳಿಗೆ, ಅವುಗಳು ಇಚ್ಛೆಪಟ್ಟಲ್ಲಿ ಒಕ್ಕೂಟದಿಂದ ಹೊರಗುಳಿಯುವ ಅವಕಾಶ ನೀಡುವಂಥ ಸಲಹೆಗಳು ಈ ಕರಡುಗಳಲ್ಲಿದ್ದವು. ಸಂಯುಕ್ತ ರಾಷ್ಟ್ರದಿಂದ ಹೊರಗುಳಿಯುವ ಅಥವಾ ಸೇರಿಕೊಳ್ಳುವ ಅವಕಾಶವನ್ನು ಪ್ರಾಂತ್ಯಗಳಿಗೆ ನೀಡುವ ಸಲಹೆ-ಷರತ್ತುಗಳನ್ನು ಕಾಂಗ್ರೆಸ್ ಆಗಲೀ ಮುಸ್ಲಿಂ ಲೀಗ್ ಆಗಲಿ ಒಪ್ಪಿಕೊಳ್ಳಲಿಲ್ಲ. ಮಾತುಕತೆಗೆ, ಕಾಂಗ್ರೆಸ್, ತನ್ನ ಪ್ರತಿನಿಧಿಯಾಗಿ ಮುಸ್ಲಿಂ ಒಬ್ಬರನ್ನು ನೇಮಿಸಲಿಲ್ಲ ಎಂದ ಜಿನ್ನಾರವರ ಆಕ್ಷೇಪಣೆ ಮತ್ತೊಂದು ಜಿದ್ದಿನ ವಿಷಯವಾಯಿತು.

ಮುಸ್ಲಿಂ ಸಮುದಾಯದ ಭಾವನಾತ್ಮಕ ಬೆಂಬಲದ ರಕ್ಷೆ ತಮಗಿದೆಯೆಂಬುದನ್ನು ಅರಿತಿದ್ದ ಜಿನ್ನಾ ಅವರು ಸಂಧಾನ ಮಾತುಕತೆಯಲ್ಲಿ ಬಿಗಿ ನಿಲುವು ತಾಳಿದರು. ತುಂಬ ಕೊಸರಾಟ ನಡೆಸಿದರು. ಯಾವುದೇ ರೀತಿಯ ಇತ್ಯರ್ಥ ಅಸಾಧ್ಯ ಎನ್ನುವುದು 1946ರ ಜೂನ್ ಅಂತ್ಯದ ವೇಳೆಗೆ ಸ್ಪಷ್ಟವಾಗಿತ್ತು. ಕ್ಯಾಬಿನೆಟ್ ನಿಯೋಗ ಲಂಡನ್ನಿಗೆ ಹಿಂದಿರುಗಿತ್ತು. ಲೀಗ್ ನಾಯಕರು ಜುಲೈ 29ರಂದು ಭೇಟಿಯಾಗಿ "ಪಾಕಿಸ್ತಾನವನ್ನು ಸಾಧಿಸಲು ಹಾಗೂ

ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು, ತಮ್ಮ ಗೌರವವನ್ನು ಸಮರ್ಥಿಸಿಕೊಳ್ಳಲು, ಬ್ರಿಟಿಷರ ಗುಲಾಮಗಿರಿ ಹಾಗೂ ಉದ್ದೇಶಿತ ಹಿಂದೂ ಪ್ರಾಬಲ್ಯದ ಗುಲಾಮಗಿರಿಯಿಂದ ಬಿಡುಗಡೆ ಹೊಂದಲು ನೇರ ಕಾರ್ಯಾಚರಣೆಗಿಳಿಯಲು ಮುಸ್ಲಿಂ ರಾಷ್ಟ್ರಕ್ಕೆ ಕಾಲಕೂಡಿ ಬಂದಿದೆಯೆಂದು" ಘಂಟಾಘೋಷವಾಗಿ ಹೇಳಿದರು.

ಎರಡು ವಾರಗಳ ನಂತರ ನೇರ ಕಾರ್ಯಾಚರಣೆ ದಿನಾಚರಣೆ ಶುರುವಾಯಿತು. ಇದರೊಂದಿಗೆ ಸಂಯುಕ್ತ ಭಾರತದ ಕನಸಿನ ಅಂತ್ಯದ ಆರಂಭವೂ ಶುರುವಾಯಿತು.

II

15 ಆಗಸ್ಟ್ 1947. ಭಾರತದ ಸ್ವಾತಂತ್ರ್ಯದಿನ. ಈ ಸ್ವಾತಂತ್ರ್ಯ ದಿನವನ್ನು ಸಂಭ್ರಮದ ಆಚರಣೆಗಳಿಗೆ ಬದಲಾಗಿ ಶೋಕ ದಿನವಾಗಿ ಆಚರಿಸಬೇಕೆಂದು ಗಾಂಧೀಜಿ ಒಬ್ಬರೇ ಹೇಳಿರಲಿಲ್ಲ. ನಮಗಿಂತ ಒಂದು ದಿನ ಮುಂಚೆ ಸ್ವಾತಂತ್ರ್ಯ ಪಡೆದ ಪಾಕಿಸ್ತಾನದ ಗಡಿ ಪ್ರದೇಶದೊಳಗಿದ್ದ ಕವಿ ಫಯಾಜ್ ಅಹಮದ್ ಫೈಜ್ ಬರೆದಿದ್ದಾರೆ–

ಇದು ಬೆಳಗಲ್ಲ, ಸಂಗಾತಿಗಳು ಬಯಸಿ ಅರಸಿದ ಬೆಳಗು ಇದಲ್ಲ–
ಕುಷ್ಠಪೀಡಿತ ಬೆಳಗು, ವಿಷಯುಕ್ತ ಕೋರೆಹಲ್ಲುಗಳ ಕಾರಿರುಳ ನಂಜುಸೋಂಕಿನ ಬೆಳಗು.
ಸ್ವರ್ಗ ಸೀಮೆಯ ಬಯಲಲಿ ತಾರೆಗಳಿಗೊಂದು ತಂಗುದಾಣ,
ನೊಂದ ಹೃದಯಗಳಿಗೊಂದು ಲಂಗರುದಾಣ
ಇರಲೇಬೇಕೆಂದು
ಸಂಗಾತಿಗಳು ಅರಸಿದ ಬೆಳಗು ಇದಲ್ಲ
ಇದು ಬೆಳಗಲ್ಲ,

ಈ ಪ್ರಲಾಪ, ಈ ಶೋಕ, ಗೋಳಾಟ ವಿಭಜನೆಗಿಂತ ಹೆಚ್ಚಾಗಿ ಅದರ ಪರಿಣಾಮವಾದ ರಕ್ತಸಿಕ್ತ ನೋವು-ನಷ್ಟ-ಹಾನಿಗಳಿಗಾಗಿ. 1945ರ ಅಂತ್ಯದ ವೇಳೆಗೇ ಒಂದಲ್ಲ ಒಂದು ಬಗೆಯ ಪಾಕಿಸ್ತಾನ ಅನಿವಾರ್ಯವೆಂಬಂತೆ ತೋರಲಾರಂಭಿಸಿತ್ತು. ಕಾಂಗ್ರೆಸ್‌ನ ಉದಾತ್ತತೆ, ಉದಾರ ಮನಸ್ಕತೆಗಳಿಂದಾಗಲೀ ಅಥವಾ ಜಿನ್ನಾ ಧಿಡೀರನೇ ವಿನೀತರಾಗುವುದರಿಂದಾಗಲೀ ಅದನ್ನು ನಿಲ್ಲಿಸುವುದು ಈಗ ಸಾಧ್ಯವಿರಲಿಲ್ಲ. ಆದರೆ ಕವಿಯ ಶೋಕಗೀತೆ, ಪ್ರಲಾಪವಿದೆಯಲ್ಲ ಅದು ನಮ್ಮಲ್ಲಿ ಪ್ರಶ್ನೆಯೊಂದನ್ನು ಕೇಳಬೇಕೆಂದು ಪ್ರಚೋದಿಸುತ್ತದೆ, ಪ್ರೇರೇಪಿಸುತ್ತದೆ. ವಿಭಜನೆ ಆಗಲೇ ಬೇಕಾಗಿದ್ದಲ್ಲಿ, ಅದರಿಂದ ಇಷ್ಟೊಂದು ಪ್ರಾಣಹಾನಿ ಸಂಭವಿಸಲೇಬೇಕಾದ ಅಗತ್ಯ ಅನಿವಾರ್ಯತೆಗಳಿದ್ದವೆ?

ಈ ಪ್ರಶ್ನೆಗೆ ಉತ್ತರ ತಿಳಿಯಲು, ನಾವು ರಾಜ್‌ನ ಕಳೆದ ಆರು ತಿಂಗಳ ವಿದ್ಯಮಾನಗಳು ಸಂಕ್ಷಿಪ್ತ ಪುನಃ ಕಥನ ಮಾಡಬೇಕಾಗುತ್ತದೆ. 1948ರ ಜೂನ್ ವೇಳೆಗೆ

ಬ್ರಿಟಿಷರು ಭಾರತವನ್ನು ತ್ಯಜಿಸುವರು ಹಾಗೂ ವೈಸ್‌ರಾಯ್ ಲಾರ್ಡ್ ವಾವೆಲ್ ಅವರ ಜಾಗಕ್ಕೆ ಮತ್ತೊಬ್ಬರನ್ನು ನೇಮಿಸಲಾಗುವುದೆಂದು ಲೇಬರ್ ಸರ್ಕಾರ 1947ರ ಫೆಬ್ರುವರಿ 20ರಂದು ಲಂಡನ್ನಿನಲ್ಲಿ ಪ್ರಕಟಿಸಿತು. ಮಾರ್ಚ್ 22ರಂದು ನೂತನ ವೈಸ್‌ರಾಯ್ ಆಗಿ ಲಾರ್ಡ್ ಮೌಂಟ್ ಬ್ಯಾಟನ್ ಅಧಿಕಾರ ವಹಿಸಿಕೊಂಡರು. ಮುಂದಿನ ಕೆಲವು ವಾರಗಳ ಅವಧಿಯಲ್ಲಿ ಮೌಂಟ್ ಬ್ಯಾಟನ್ ಅವರು ಬ್ರಿಟಿಷ್ ವಾಪಸಾತಿಯ ಷರತ್ತುಗಳನ್ನು ಕುರಿತು ಸಂಬಂಧಪಟ್ಟ ಪಕ್ಷಗಳೊಡನೆ-ವ್ಯಕ್ತಿಗಳೊಡನೆ ಮಾತುಕತೆ ನಡೆಸಿದರು. ವಿಭಜನೆಯ ಅನಿವಾರ್ಯತೆಯನ್ನು ಬಹುತೇಕ ಕಾಂಗ್ರೆಸ್ ನಾಯಕರು ಮನಗಾಣುತ್ತಿರುವ ಸಂಗತಿಯನ್ನು ಅವರು ಗಮನಿಸಿದರು. "ಇಡೀ ಭಾರತಕ್ಕೆ ಸ್ವಾತಂತ್ರ್ಯ ಘೋಷಣೆಯನ್ನು ಮುಂದೂಡುವುದಕ್ಕಿಂತ ಭಾರತದ ಬಹುಪಾಲು ಭಾಗಕ್ಕೆ ತಕ್ಷಣ ಸ್ವಾತಂತ್ರ್ಯ ನೀಡುವುದೇ ಒಳಿತು" ಎನ್ನುವುದು ಇವರ ಗ್ರಹಿಕೆಯಾಗಿತ್ತು. ಸ್ವತಂತ್ರ ಭಾರತದ ಪ್ರಥಮ ಸರ್ಕಾರದ ನೇತೃತ್ವ ವಹಿಸಿಕೊಳ್ಳುವಂತೆ ಜಿನ್ನಾ ಅವರಿಗೆ ಮನವಿ ಮಾಡುವ ಮೂಲಕ ಗಾಂಧೀಜಿ ಏಕತೆಯನ್ನು ಉಳಿಸಿಕೊಳ್ಳುವ ಕೊನೆಯ ಪ್ರಯತ್ನ ಮಾಡಿದರು. ಇದಕ್ಕೆ ಕಾಂಗ್ರೆಸ್‌ನ ಬೆಂಬಲವಿರಲಿಲ್ಲ. ಏನೇ ಇರಲಿ, ಜಿನ್ನಾ ಅವರೂ ಗಾಂಧೀಜಿ ಸಲಹೆಯನ್ನು ಅಂಗೀಕರಿಸಲಿಲ್ಲ.

ಮೇ 2ರಂದು ವಿಭಜನೆಯ ಯೋಜನೆಯೊಂದಿಗೆ ವೈಸ್‌ರಾಯ್ ಅವರ ಹಿರಿಯ ಅಧಿಕಾರಿಯಾಗಿದ್ದ ಲಾರ್ಡ್ ಇಸ್ಮೆ ಅವರನ್ನು ಲಂಡನ್ನಿಗೆ ಕಳುಹಿಸಲಾಯಿತು. ಅವರು ಅದಕ್ಕೆ ಮಂತ್ರಿಮಂಡಲದ ಒಪ್ಪಿಗೆ ಪಡೆದರು. ಭಾರತಕ್ಕೆ ಮರಳಿದ ನಂತರ ಲಾರ್ಡ್ ಇಸ್ಮೆ ಅವರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳನ್ನು ತೃಪ್ತಿಪಡಿಸುವ ಸಲುವಾಗಿ ಅನೇಕ ಬಾರಿ ಯೋಜನೆಯನ್ನು ತಿದ್ದಿ ಬರೆಯಬೇಕಾಯಿತು. (ಪಾಕಿಸ್ತಾನದ ಪೂರ್ವ ಮತ್ತು ಪಶ್ಚಿಮ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಭಾರತದ ಮೂಲಕ ಹಾದು ಹೋಗುವ 800 ಮೈಲಿ ಉದ್ದದ ಮಾರ್ಗವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಬೇಕೆಂದು ಒಂದು ಹಂತದಲ್ಲಿ ಆಗ್ರಹಪಡಿಸಿದ ಜಿನ್ನಾ ಕೊನೆಗಳಿಗೆಯವರೆಗೂ ಭಂಡಾಟ ನಡೆಸಿದರು). ಪರಿಷ್ಕೃತ ಯೋಜನೆಯನ್ನು ಮೌಂಟ್ ಬ್ಯಾಟನ್ ಬ್ರಿಟಿಷ್ ಮಂತ್ರಿಮಂಡಲದ ಮುಂದೆ ಮಂಡಿಸಿದರು.

ಇದಿಷ್ಟಕ್ಕೂ ತಿಂಗಳ ಬಹುಪಾಲು ಕಾಲಹಿಡಿಯಿತು. ಲಂಡನ್ನಿನಿಂದ ವಾಪಸಾದ ಮೌಂಟ್ ಬ್ಯಾಟನ್, ಜೂನ್ 3ರಂದು ಆಲ್ ಇಂಡಿಯಾ ರೇಡಿಯೋದಲ್ಲಿ ವಿಭಜನೆಯ ಯೋಜನೆಯನ್ನು ಪ್ರಕಟಿಸಿದರು. ಇವರ ನಂತರ ನೆಹರೂ, ಜಿನ್ನಾ ಮತ್ತು ಬಲದೇವ್ ಸಿಂಗ್ (ಸಿಖ್ಖರ ಪರವಾಗಿ) ಆಕಾಶವಾಣಿಯಲ್ಲಿ ಮಾತನಾಡಿದರು. ಮರುದಿನ ಬೆಳಿಗ್ಗೆ ವೈಸ್‌ರಾಯ್ ಅವರು ಅಸೆಂಬ್ಲಿ ಕಟ್ಟಡದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಈ ಪತ್ರಿಕಾಗೋಷ್ಠಿಯಲ್ಲಿ ಮೌಂಟ್ ಬ್ಯಾಟನ್ ಅವರು ಮೊಟ್ಟಮೊದಲಿಗೆ, ಬ್ರಿಟಿಷರು 1948ರ ಜೂನ್‌ಗೆ ಬದಲು 1947ರ ಆಗಸ್ಟ್ ಮಧ್ಯಭಾಗದ ವೇಳೆಗೆ ಭಾರತ ಬಿಟ್ಟು ಹೋಗುವರೆಂದು ಪ್ರಕಟಿಸಿದರು. ಅಂದರೆ ಪೂರ್ವ ನಿಶ್ಚಿತ ಸಮಯಕ್ಕಿಂತ ಹತ್ತುವಾರ ಮುಂಚೆ.

ಬ್ರಿಟಿಷರು ಭಾರತ ತ್ಯಜಿಸುವ ಕಾಲಮಿತಿಯನ್ನು ತಗ್ಗಿಸುವ ಈ ನಾಟಕೀಯ ನಿರ್ಧಾರ ಸ್ವತಃ ಮೌಂಟ್ ಬ್ಯಾಟನ್ ಅವರೇ ತೆಗೆದುಕೊಂಡ ನಿರ್ಧಾರವಾಗಿತ್ತು. ಫಿಲಿಪ್ ಜೆಗ್ಲರ್ ಅವರು ನಿರ್ಧಾರವನ್ನು ಈ ಕೆಳಗಿನಂತೆ ಸಮರ್ಥಿಸಿಕೊಂಡಿದ್ದಾರೆ:

> ಒಮ್ಮೆ ವಿಭಜನೆಯ ತತ್ವವನ್ನು ಒಪ್ಪಿಕೊಂಡ ಕೂಡಲೇ ಕೋಮು ದಳ್ಳುರಿ ಯಾವುದೇ ಅಡೆತಡೆ ಇಲ್ಲದೆ ಸ್ವಚ್ಛಂದವಾಗಿ ಹಬ್ಬುವುದು ಅನಿವಾರ್ಯ. ಅಧಿಕಾರ ಹಸ್ತಾಂತರ ವಿಳಂಬವಾದಷ್ಟೂ ಪ್ರಕ್ಷುಬ್ಧ ಪರಿಸ್ಥಿತಿ ಉಲ್ಬಣಿಸುತ್ತದೆ, ಹಿಂಸಾಚಾರ ಹೆಚ್ಚು ಹೆಚ್ಚಾಗಿ ವ್ಯಾಪಿಸುವ ಅಪಾಯ ತಲೆದೋರುತ್ತದೆ. ಇವತ್ತು ಪಂಜಾಬ್, ನಾಳೆ ಬಂಗಾಳ, ಹೈದರಾಬಾದ್ ಅಥವಾ ಹಿಂದೂ ಮುಸ್ಲಿಮರು ಒತ್ತೊತ್ತಾಗಿ ವಾಸಮಾಡುತ್ತಿರುವ ಉಪಖಂಡದ ಲಕ್ಷೋಪಲಕ್ಷ ಜನಸಮುದಾಯಗಳಿಗೆ ವ್ಯಾಪಿಸಬಹುದು. ಎರಡು ಲಕ್ಷ ಮಂದಿಯ ಸಾವಿನ ಸಂಖ್ಯೆ ಇಪ್ಪತ್ತು ಲಕ್ಷಕ್ಕೇರಬಹುದು ಅಥವಾ ಇಪ್ಪತ್ತು ದಶಲಕ್ಷಕ್ಕೂ ಏರಬಹುದು.

ಜೆಗ್ಲರ್ ಅವರು ಇತ್ತ ಈ ರೀತಿ ಬರೆಯುತ್ತಿದ್ದಂತೆಯೇ ಅತ್ತ ವಿಭಜನೆಯ ಹಿಂಸಾಕಾಂಡದಲ್ಲಿ ಮಡಿದವರ ಸಂಖ್ಯೆ ಹತ್ತುಲಕ್ಷವೆಂದು ಅಂದಾಜು ಮಾಡಲಾಗಿತ್ತು. ನಂತರದ ವಿದ್ವಾಂಸರು ಮಡಿದವರ ಸಂಖ್ಯೆ ಇಪ್ಪತ್ತು ಲಕ್ಷ ಎಂದು ಹೇಳಿರುವುದೂ ಉಂಟು. ಬ್ರಿಟಿಷರು ಮೊದಲಿನ ನಿರ್ಧಾರದಂತೆ 1948ರ ಜೂನ್‌ನಲ್ಲಿ ಭಾರತ ತ್ಯಜಿಸಿದ್ದಿದ್ದರೆ ಹಿಂಸಾಚಾರದಲ್ಲಿ ಸತ್ತವರ ಸಂಖ್ಯೆ ಎಷ್ಟಾಗಬಹುದಿತ್ತು? ಮೌಂಟ್‌ಬ್ಯಾಟನ್ ಆಡಳಿತ ವೈಖರಿಯ ಖ್ಯಾತಿ ಕೀರ್ತಿಗಳನ್ನು ಕಟುವಾಗಿ ಟೀಕಿಸಿರುವ ಆಂಡ್ರ್ಯೂ ರಾಬರ್ಟ್ಸ್, ಬ್ಯಾಟನ್ ಮೃದು ಧೋರಣೆಯ ಚಂಚಲ ಮನಸ್ಕನೆಂದು ಆಪಾದಿಸಿದ್ದಾನೆ-"ಕಾಠಿಣ್ಯ ಪ್ರದರ್ಶಿಸಬೇಕಾದ ಸಂದರ್ಭಗಳಲ್ಲೆಲ್ಲ ನರಸತ್ತವನಂತೆ ದುರ್ಬಲನಾಗಿ ವರ್ತಿಸಿದ್ದಾನೆ. ಕೋಮು ಹಿಂಸಾಚಾರವನ್ನು ಪರಿಣಾಮಕಾರಿಯಾಗಿ ನಿಗ್ರಹಿಸುವ ಮನಸ್ಸಿಲ್ಲದೆ ಡೋಲಾಯಮಾನವಾಗಿ ನಡೆದುಕೊಂಡಿದ್ದಾನೆ. ನಿರ್ದಿಷ್ಟವಾಗಿ ಹೇಳುವುದಾದರೆ ಪಂಜಾಬ್ ಗಡಿ ಪಡೆಗೆ ಸಾಕಷ್ಟು ಸೈನಿಕರನ್ನು ಕಳುಹಿಸಲಿಲ್ಲ. ವಿಮಾನ ಪಡೆಯ ರಕ್ಷಣೆ ನಿರಾಕರಿಸಲಾಯಿತು." ಆತುರಾತುರದಿಂದ ಮೊದಲೇ ಭಾರತದಿಂದ ನಿರ್ಗಮಿಸಿದ್ದೇ ಹೆಚ್ಚು ಸಾವಿಗೆ ಕಾರಣವಾಯಿತೆಂದು ರಾಬರ್ಟ್ಸ್ ಜೆಗ್ಲರ್‌ಗೆ ತದ್ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ಎರಡು ಶತಮಾನದ ಕಾಲಮಾನದಲ್ಲಿ ಕಟ್ಟಿದ ಸಾಮ್ರಾಜ್ಯವನ್ನು ಎರಡೇ ತಿಂಗಳಲ್ಲಿ ತೊಡೆದು ಹಾಕುವ ನಿರ್ಧಾರವೇ ಕಲ್ಪನಾ ದಾರಿದ್ರ್ಯವನ್ನು ಸೂಚಿಸುತ್ತದೆಂದು ಸಮಕಾಲೀನ ವೀಕ್ಷಕರು ಕೆಲವರು ಅಭಿಪ್ರಾಯಪಟ್ಟಿದ್ದಾರೆ. 1947ರ ಬೇಸಿಗೆಯಲ್ಲಿ, ಕಾದ ಹೆಂಚಿನಂತಿದ್ದ ಅವಿಭಜಿತ ಪಂಜಾಬಿನ ಗೌರ್ನರ್ ಹುದ್ದೆಯನ್ನು ಅಲಂಕರಿಸಿದ್ದವನು ಸರ್ ಇವಾನ್ ಜೆನ್‌ಕಿನ್ಸ್. ಭಾರತದ ರಾಜಕೀಯ ಸಮಸ್ಯೆಗೆ ಪರಿಹಾರವೊಂದನ್ನು ಒಳಗೊಂಡಂಥ ಪ್ರಕಟಣೆಯ ಷರತ್ತುಗಳು ಮತ್ತು ವಿಧಿ ವಿಧಾನಗಳನ್ನು ಪುನರ್ವಿಮರ್ಶಿಸುವಂತೆ ಆಗ್ರಹಪಡಿಸಿ ಜೆನ್‌ಕಿನ್ಸ್, ಮೌಂಟ್ ಬ್ಯಾಟನ್‌ಗೆ ಪತ್ರ ಬರೆದಿದ್ದ. ಪಂಜಾಬಿನಲ್ಲಿ ಸಮುದಾಯಗಳು

ಯಾವುದೇ ಶರತ್ತು ಕಾರಣಗಳ ಆಧಾರಗಳ ಮೇಲೂ ಸಹಕಾರ ನೀಡದಂಥ ಪರಿಸ್ಥಿತಿ ಇದೆ. ಸಹಕಾರ ನೀಡಲು ನಿರಾಕರಿಸುವಂಥ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಯಾವುದೊಂದು ಸಮುದಾಯವೂ ಮಾನ್ಯ ಮಾಡದಂಥ, ಒಪ್ಪಿಕೊಳ್ಳದಂಥ ಪಂಜಾಬ್ ವಿಭಜನೆಯ ಪ್ರಕಟಣೆ ನಿಸ್ಸಂದೇಹವಾಗಿ ನಿರರ್ಥಕವಾಗುತ್ತದೆ. ಆದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಇದನ್ನು ಕಡೆಗಣಿಸಿ ನಿರ್ಧಾರ ಕೈಗೊಳ್ಳಲಾಯಿತು. ಪಂಜಾಬನ್ನು ವಿಭಜಿಸಿದಾಗ ಕಾಯಿದೆ ಸುವ್ಯವಸ್ಥೆ ಕಾಪಾಡುವ ಹೊಣೆ ಗೌರ್ನರನದಾಯಿತು. ವಿಭಜನೆಯಿಂದ ಕೂಡಿದ ಸ್ವಾತಂತ್ರ್ಯ ಉತ್ಸಾಹಕ್ಕಿಂತ ಕೋಪತಾಪಗಳನ್ನುಂಟು ಮಾಡಿದೆಯೆಂದು ಜೆನ್‌ಕಿನ್ಸ್ ಜುಲೈ 30ರಂದು ಮೌಂಟ್ ಬ್ಯಾಟನ್‌ಗೆ ಮತ್ತೊಂದು ಪತ್ರ ಬರೆದ. ಇಡೀ ಪಂಜಾಬ್ ತಮ್ಮದಾಗುವುದೆಂದು ಮುಸ್ಲಿಮರು ಭಾವಿಸಿದ್ದರೆ, ಸಿಖ್ಖರು ಮತ್ತು ಮುಸ್ಲಿಮರಲ್ಲಿ ಲಾಹೋರನ್ನು ಕಳೆದುಕೊಳ್ಳುವ ಭೀತಿ ಮೂಡಿತ್ತು. "ಸಂಬಂಧಪಟ್ಟವರೆಲ್ಲ ಸ್ನೇಹಭಾವದಿಂದ ಇದ್ದು ಪ್ರಗತಿಶೀಲರಾಗಿದ್ದಾಗ್ಯೂ 98 ವರ್ಷಗಳ ಕಾಲ ಒಕ್ಕೂಟವಾಗಿ ಆಳ್ವಿಕೆಗೊಳಪಟ್ಟಿದ್ದ 30 ದಶಲಕ್ಷ ಜನಸಂಖ್ಯೆಯುಳ್ಳ ಒಂದು ರಾಷ್ಟ್ರವನ್ನು ಕೇವಲ ಆರುವಾರಗಳ ಕಾಲದಲ್ಲಿ ವಿಭಜಿಸುವುದು ಕಠಿಣವಾದ ಕೆಲಸವೇ ಸರಿ" ಎಂದು ಜೆನ್‌ಕಿನ್ಸ್ ಕುಚೋದ್ಯದ ಟೀಕೆ ಮಾಡಿದ್ದ.

ಹೆಚ್ಚಿನ ಸೈನ್ಯ ಹಾಗೂ ಯುಕ್ತಿಯಿಂದ ಕಾರ್ಯನಿರ್ವಹಿಸುವ ಪ್ರತಿಬಂಧಕ ತುಕಡಿಯೊಂದನ್ನು ಕಳುಹಿಸಿಕೊಡುವಂತೆ ಜೆನ್‌ಕಿನ್ಸ್ ಬೇಡಿಕೆ ಮಂಡಿಸಿದ್ದ. ಗಲಭೆಕೋರರನ್ನು ಹತ್ತಿಕ್ಕಲು ಸೈನ್ಯದ ಕೊರತೆ ಇದ್ದುದಕ್ಕೆ ಒಂದು ಮುಖ್ಯ ಕಾರಣವೆಂದರೆ, ಸೈನ್ಯ ಹೆಚ್ಚಾಗಿ ಸಂಶಯ ಪಿಶಾಚಿ ಆಡಳಿತಗಾರರ ಬೆಂಗಾವಲಿಗೆ ನಿಂತದ್ದು. ಭಾರತ ತ್ಯಜಿಸುವ ನಿರ್ಧಾರ ಪ್ರಕಟಿಸಿದ ಮರುಕ್ಷಣವೇ ಬ್ರಿಟಿಷ್ ನಾಗರಿಕರ ಮೇಲೆ ದೇಶೀಯರು ಹಲ್ಲೆ ನಡೆಸುವುದು ಖಚಿತವೆಂಬುದು ಸಂಶಯಗ್ರಸ್ತ ಆಡಳಿತಗಾರರಿಗೆ ಮನವರಿಕೆಯಾಗಿತ್ತು. ಇಂಗ್ಲಿಷ್ ಅಧಿಕಾರಿಗಳು, ಕ್ರೈಸ್ತ ಪಾದ್ರಿಗಳು, ಪ್ಲಾಂಟರುಗಳು, ವಾಣಿಜ್ಯೋದ್ಯಮಿಗಳು ಸೇರಿದಂತೆ ಭಾರತದಲ್ಲಿದ್ದ ಎಲ್ಲ ಐರೋಪ್ಯರಲ್ಲೂ ಈ ಭಾವನೆ ವ್ಯಾಪಕವಾಗಿತ್ತು. 1946ರ ಬೇಸಿಗೆಯಲ್ಲಿ ಆಂಗ್ಲ ಅಧಿಕಾರಿಯೊಬ್ಬ ತನ್ನ ಮನೆಗೆ ಬರೆದ ಪತ್ರದಲ್ಲಿನ ಒಕ್ಕಣೆ ಈ ರೀತಿ ಇದೆ: "ಅಕ್ಷರಶಃ ಇಡೀ ದೇಶ ನಮ್ಮ ವಿರುದ್ಧ ಎದ್ದು ನಿಂತಿದೆ. (ಅಲ್ಲಲ್ಲಿ ಚದುರಿದಂತಿರುವ ಐರೋಪ್ಯ ಸಮುದಾಯವನ್ನು ನಿರ್ನಾಮಗೊಳಿಸಲು ಹೆಚ್ಚು ಕಾಲ ಬೇಕಿಲ್ಲ). ದೊಂಬಿ ಆರಂಭವಾಗುವುದಕ್ಕೂ ಮೊದಲೇ ನಮ್ಮನ್ನು ಮುಗಿಸಬಹುದು. ದೊಂಬಿ ಎಂದರೆ ಅನಿವಾರ್ಯವಾಗಿರುವ ಹಿಂದೂ-ಮುಸ್ಲಿಮರ ನಡುವಣ ಕಾದಾಟ."

ಬ್ರಿಟಿಷರ ರಕ್ಷಣೆ ರಾಜ್ಯನೀತಿಯ ಆದ್ಯತೆಯ ಕ್ರಮವಾಯಿತು. 1947ರ ಫೆಬ್ರುವರಿಯಲ್ಲಿ ಬಂಗಾಳದ ಗೌರ್ನರ್, ಬ್ರಿಟಿಷ್ ಆಡಳಿತ ರದ್ದತಿಯ ದಿನಾಂಕದ ಪ್ರಕಟಣೆಯಾದ ಕೂಡಲೇ ತಾವು ಕೈಗೊಳ್ಳಲಿರುವ ಮೊದಲ ಕ್ರಮ ಐರೋಪ್ಯದ ರಕ್ಷಣೆ ಎಂದು ಹೇಳಿದ್ದುಂಟು. ಗಲಭೆಗಳು, ವ್ಯತಿರಿಕ್ತವಾದ ಜಗಳದ ಪ್ರಕ್ರಿಯೆ ಆರಂಭವಾದ ಕೂಡಲೇ ಅತ್ಯಲ್ಪ ಕಾಲಾವಧಿಯಲ್ಲಿ ಐರೋಪ್ಯರ ರಕ್ಷಣೆಗೆ ಟೊಂಕ ಕಟ್ಟಿ ನಿಲ್ಲುವಂತೆ ಸೈನ್ಯವನ್ನು ಸಜ್ಜುಗೊಳಿಸುವುದು

ತನ್ನ ಮೊದಲ ಕೆಲಸವೆಂದು ಹೇಳಿದ್ದಾನೆ. ಆದರೆ ವಾಸ್ತವವಾಗಿ 1947ರ ಬೇಸಿಗೆಯಲ್ಲಿ ಬಿಳಿಯ ಸ್ತ್ರೀ-ಪುರುಷರು ಭಾರತೀಯರಿಗಿಂತ ಸುರಕ್ಷಿತವಾಗಿದ್ದರು. ಯಾರೊಬ್ಬರಿಗೂ ಇವರ ಹತ್ಯೆಯಲ್ಲಿ ಆಸಕ್ತಿ ಇರಲಿಲ್ಲ. ಆದರೆ ಅವರಲ್ಲಿದ್ದ ಅಭದ್ರತೆಯ ಭಾವನೆಯಿಂದಾಗಿ ಅನೇಕ ಸೈನ್ಯದ ತುಕಡಿಗಳನ್ನು ಐರೋಪ್ಯರು ವಾಸಮಾಡುತ್ತಿದ್ದ ಸ್ಥಳಗಳಿಗೆ ನಿಯೋಜಿಸಲಾಯಿತು. ಗಲಭೆಪೀಡಿತ ಪ್ರದೇಶಗಳಲ್ಲಿ ಗಲಭೆಯನ್ನು ನಿಯಂತ್ರಿಸಲು ನಿಯೋಜಿಸುವ ಬದಲು ಸೈನಿಕರನ್ನು ಐರೋಪ್ಯರ ಮನೆಗಳ ಮುಂದೆ ಕಾವಲು ನಿಲ್ಲಿಸಲಾಯಿತು.

ಪಂಜಾಬ್ ಗಡಿ ತೀರ್ಪಿನ ಪ್ರಕಟಣೆಯನ್ನು ಸ್ವಾತಂತ್ರ್ಯ ಘೋಷಣೆಯ ತಾರೀಖಿನ ನಂತರದ ದಿನಾಂಕಕ್ಕೆ ಮುಂದೂಡುವ ನಿರ್ಧಾರದ ಹಿಂದೆಯೂ ಈ ಸ್ವಯಂರಕ್ಷಣೆಯ ಪ್ರವೃತ್ತಿ ಅಡಗಿದೆ. ಜುಲೈ 22ರಂದು ಲಾಹೋರಿಗೆ ಭೇಟಿಕೊಟ್ಟ ನಂತರ ಮೌಂಟ್ ಬ್ಯಾಟನ್ ಸರ್ ಸಿರಿಲ್ ರ್‍ಯಾಡ್‌ಕ್ಲಿಫ್ ಅವರಿಗೆ ಪತ್ರ ಬರೆದು ತ್ವರಿತವಾಗಿ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು. ಪ್ರತಿಯೊಂದು ದಿನದ ಅಧಿಕ ಕೆಲಸವೂ ಅವ್ಯವಸ್ಥೆಯ ಅಪಾಯವನ್ನು ತಪ್ಪಿಸಬಹುದೆಂದು ಅವರು ಎಚ್ಚರಿಸಿದ್ದರು. ಗಡಿ ತೀರ್ಪನ್ನು ಸ್ವಾತಂತ್ರ್ಯ ಘೋಷಣೆಗೆ ಮೊದಲು ಪ್ರಕಟಿಸಿದ್ದಲ್ಲಿ ಅಧಿಕಾರ ಹಸ್ತಾಂತರಕ್ಕೆ ಮುನ್ನವೇ ಸೇನೆಯ ಸಂಚಲನಕ್ಕೆ ಅವಕಾಶವಾಗುತ್ತಿತ್ತು.

ಆಖೈರಾಗಿ ಪೂರ್ಣಗೊಂಡ ಕೂಡಲೇ ಗಡಿ ತೀರ್ಪನ್ನು ಪ್ರಕಟಿಸಬೇಕೆಂದು ಪಂಜಾಬಿನ ಗೌರ್ನರ್ ತೀವ್ರ ಆಸಕ್ತಿ ಹೊಂದಿದ್ದರು. ರ್‍ಯಾಡ್‌ಕ್ಲಿಫ್ ಅವರು ಆಗಸ್ಟ್ 9ರಂದೇ ತೀರ್ಪನ್ನು ಅಂತಿಮಗೊಳಿಸಿ ಪ್ರಕಟಣೆಗೆ ಸಿದ್ಧವಾಗಿದ್ದರು. ಆದರೆ ಮೌಂಟ್‌ಬ್ಯಾಟನ್ ತಮ್ಮ ಮನಸ್ಸು ಬದಲಾಯಿಸಿ 15ರ ನಂತರ ಪ್ರಕಟಿಸುವ ನಿರ್ಧಾರ ಕೈಗೊಂಡರು. ವಿಳಂಬಕ್ಕೆ ಅವರು ನೀಡಿದ ಕಾರಣ ವಿಚಿತ್ರವಾಗಿತ್ತು: "ಮುಂಚೆಯೇ ಪ್ರಕಟಿಸಿದ್ದಲ್ಲಿ, ನಿಸ್ಸಂದೇಹವಾಗಿ ಉಂಟಾಗುತ್ತಿದ್ದ ಗಲಭೆಗಳ ಹೊಣೆಯನ್ನು ಬ್ರಿಟಿಷರೇ ಹೊರಬೇಕಾಗಿತ್ತೆಂಬುದು ಪ್ರಶ್ನಾತೀತ. "ಪ್ರಕಟಣೆಯ ಮುಂದೂಡಿಕೆಯಿಂದ ಬ್ರಿಟಿಷರ ಬಗ್ಗೆ ಅನಿವಾರ್ಯವಾಗಿ ಉಂಟಾಗುತ್ತಿದ್ದ ಅಸಹ್ಯ ಭಾವನೆ, ಜಿಗುಪ್ಸೆ ಕಡಿಮೆಯಾದೀತು."

ಚರಿತ್ರೆಯನ್ನು ಅದು ಸಂಭವಿಸಿದಂತೆ ಬರೆಯಬೇಕೆಂಬುದು ನಿಯಮ. ಹೇಗೆ ಸಂಭವಿಸಿರಬಹುದು ಎಂದು ಬರೆಯುವುದಲ್ಲ. ಕಾಲಮಿತಿ ವಿಸ್ತರಣೆಯಿಂದ-ಬ್ರಿಟಿಷರು ಒಂದು ವರ್ಷದ ಅವಧಿಯೊಳಗೆ ಭಾರತ ಬಿಟ್ಟು ಹೋಗುವುದೆಂದು 1947ರ ಏಪ್ರಿಲ್‌ನಲ್ಲಿ ಪ್ರಕಟಿಸಿದ್ದಿದ್ದರೆ-ವಿಭಜನೆಯ ಯಾತನಾಮಯ ಪ್ರಕ್ರಿಯೆ ಕಡಿಮೆಯಾಗುತ್ತಿತ್ತೆ? ಹೆಚ್ಚು ಸೇನಾಪಡೆಗಳ ನೆರವು ನೀಡಿದ್ದಿದ್ದರೆ ಹಾಗೂ ರ್‍ಯಾಡ್‌ಕ್ಲಿಫ್‌ರ ತೀರ್ಪನ್ನು ಮುಂಚೆಯೇ ಪ್ರಕಟಿಸಿದ್ದಿದ್ದರೆ ಪಂಜಾಬಿನಲ್ಲಿ ಹಿಂಸಾಚಾರವನ್ನು ತಗ್ಗಿಸಬಹುದಿತ್ತೆ? ಇರಬಹುದು-ಇಲ್ಲದೆಯೂ ಇರಬಹುದು. ಬ್ರಿಟಿಷರ ಆಡಳಿತದ ಕೊನೆಯ ದಿನಗಳ ಬಗ್ಗೆ ಅತ್ಯಂತ ಸೂಕ್ತ ಎನ್ನಬಹುದಾದ ಚರಮ ವಾಕ್ಯವೊಂದನ್ನು ಆಕ್ಸ್‌ಫರ್ಡ್‌ನ ತರುಣ ಸಮಾಜ ಸೇವಕನೊಬ್ಬ ಹೀಗೆ ನುಡಿದಿದ್ದಾನೆ. ಅದು: "ನೀವು, ಬ್ರಿಟಿಷರು ಸಮಾನವರ್ತನೆಯಲ್ಲಿ ನಂಬಿಕೆಯುಳ್ಳವರು. ನೀವು

ಎಂಥ ಅಸ್ತವ್ಯಸ್ತ ಸ್ಥಿತಿಯಲ್ಲಿ ಭಾರತವನ್ನು ಕಂಡಿರೋ ಅದೇ ಅಸ್ತವ್ಯಸ್ತ ಸ್ಥಿತಿಯಲ್ಲಿ ಭಾರತವನ್ನು ಬಿಟ್ಟು ಬಂದಿದ್ದೀರಿ."

ವಿಭಜನೆಯ ಕಾರಣಗಳ ಬಗ್ಗೆ ಆವೇಶಭರಿತ ಚರ್ಚೆ, ವಾದಗಳು ಮುಂದುವರಿದಿವೆ. ಆದರೆ ಅದರ ಪರಿಣಾಮಗಳ ಬಗ್ಗೆ ಹೆಚ್ಚು ಗಮನ ಹರಿಸಲಿಲ್ಲ, ಹೆಚ್ಚಿನ ನಿಗಾವಹಿಸಲಿಲ್ಲ. ಈ ಗ್ರಂಥ ಸಾಕ್ಷಾತ್ಕರಿಸಲಿರುವಂತೆ ಈ ಪರಿಣಾಮಗಳು ಗಣನೀಯವಾದವು, ಮಹತ್ತರವಾದವು. ಭಾರತದ ವಿಭಜನೆ, ಜನಸಂಖ್ಯೆಯ ಪ್ರಮಾಣ, ಅರ್ಥವ್ಯವಸ್ಥೆ, ಸಂಸ್ಕೃತಿ, ಧರ್ಮ, ಕಾನೂನು, ಅಂತರರಾಷ್ಟ್ರೀಯ ಬಾಂಧವ್ಯ ಹಾಗೂ ಪಕ್ಷ ರಾಜಕಾರಣ ಇವುಗಳ ಮೇಲೆ ದೀರ್ಘವ್ಯಾಪಿಯಾದ ಅತಿದೊಡ್ಡ ಕರಿನೆರಳನ್ನು ಚೆಲ್ಲಿದೆ.

○

3

ಕುಕ್ಕೆಯೊಳಗಿನ ಫಲ

ಭಾರತದ ರಾಜ್ಯಗಳು ಒಡಂಬಡಿಕೆಗಳ ಪ್ರಭುತ್ವಕ್ಕೊಳಪಟ್ಟಿವೆ...ಭಾರತದ ರಾಜ್ಯಗಳು ಈ ಒಕ್ಕೂಟ ಸೇರದಿದ್ದರೆ, ಅವು ಇವತ್ತು ಯಾವ ಸ್ಥಿತಿಯಲ್ಲಿವೆಯೋ ಅದೇ ಸ್ಥಿತಿಯಲ್ಲೇ ಉಳಿದಿರುತ್ತವೆ.

ಸರ್ ಸ್ಟಾಫರ್ಡ್ ಕ್ರಿಪ್ಸ್, *ಬ್ರಿಟಿಷ್ ರಾಜಕಾರಣಿ-1942*

ನಾವು ಇಂದಲ್ಲ, ನಾಳೆ ಮಹಾರಾಜರುಗಳೊಂದಿಗೆ ಬಹಿರಂಗವಾಗಿ ಮಾತನಾಡ ಬೇಕಾಗುತ್ತದೆ, ಎಲ್ಲವನ್ನೂ ಬಹಿರಂಗಪಡಿಸಬೇಕಾಗುತ್ತದೆ. ಕಾರ್ಯತಃ ನಮ್ಮಿಂದ ಆಗದು ಎಂಬುದನ್ನು ತಿಳಿದೂ ಈ ಸಣ್ಣ ರಾಜ್ಯಗಳನ್ನು ನಾವು ನಿಭಾಯಿಸಬಲ್ಲೆವು ಎಂದು ಸೋಗುಹಾಕುತ್ತಿರುವುದು ನಮ್ಮ ಅಪ್ರಾಮಾಣಿಕತೆಯನ್ನು ತೋರಿಸುತ್ತದೆ.

ಲಾರ್ಡ್ ವಾವೆಲ್, *ಭಾರತದ ವೈಸ್‌ರಾಯ್, 1943.*

I

ಇತಿಹಾಸ ತಮ್ಮನ್ನು, ಭಾರತದ ಕೊನೆಯ ವೈಸರಾಯ್ ಮತ್ತು ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್ ಪಾತ್ರದಲ್ಲೂ ಹೇಗೆ ಚಿತ್ರಿಸಬಲ್ಲದು ಎಂದು ಕೆಲವರಿಗಾದರೂ ಅನ್ನಿಸಿರಲಿಕ್ಕೆ ಸಾಕು. ಹಿರಿಯ ಪತ್ರಕರ್ತರೊಬ್ಬರು ಒಮ್ಮೆ ಹೀಗೊಂದು ಟೀಕೆ ಮಾತನ್ನಾಡಿದ್ದರು; "ಮೌಂಟ್ ಬ್ಯಾಟನ್ ಸ್ವತಃ ತಮ್ಮ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ವರ್ತಿಸುತ್ತಿರುವಂತೆ ಭಾಸವಾಗುತ್ತಿದೆ" ಎಂಬುದೇ ಆ ಟೀಕೆ ಮಾತು. ಮೌಂಟ್ ಬ್ಯಾಟನ್ ಅವರ ಸಹಾಯಕ ಅಧಿಕಾರಿಯೊಬ್ಬ ತನ್ನ ಬಾಸನ್ನು "ಜೀವಂತ ಇರುವ ಅತಿಪೊಳ್ಳು ಮನುಷ್ಯ" ಎಂದು ಕರೆಯುವ ಮೂಲಕ ಇನ್ನೂ ಹರಿತವಾದ ಟೀಕೆ ಮಾಡಿದ್ದ. ಮೌಂಟ್ ಬ್ಯಾಟನ್ ತಮ್ಮ ಭಾವಚಿತ್ರ ತೆಗೆಯಲಿಚ್ಛಿಸುವ ಛಾಯಾಗ್ರಾಹಕರಿಗೆ

ದೃಷ್ಟಿ ಪಥಕ್ಕಿಂತ ಆರಂಗುಲ ಮೇಲ್ಮಟ್ಟದಿಂದ ಚಿತ್ರೀಕರಿಸುವಂತೆ ತಿಳುವಳಿಕೆ ನೀಡುತ್ತಿದ್ದರು. ಈ ರೀತಿ ಚಿತ್ರೀಕರಿಸುವುದರಿಂದ ಮುಖದ ಮೇಲಿನ ಸುಕ್ಕುಗಳು ಫೋಟೋದಲ್ಲಿ ಕಾಣಿಸುವುದಿಲ್ಲವೆಂದು ಅವರ ಮಿತ್ರರಾದ, ಚಿತ್ರನಟ ಕ್ಯಾರಿ ಗ್ರಾಂಟ್ ತಿಳಿಸಿದ್ದರಂತೆ. ಫೀಲ್ಡ್ ಮಾರ್ಷಲ್ ಮಾಂಟೆಗೊಮೆರಿ ಭಾರತಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ಪತ್ರಿಕಾ ಛಾಯಾಗ್ರಾಹಕರು ಮೌಂಟ್ ಬ್ಯಾಟನ್ ಮತ್ತು ಮಾಂಟೆಗೊಮೆರಿ ಇವರಿಬ್ಬರೂ ಇರುವ ಚಿತ್ರ ತೆಗೆಯುವ ಇರಾದೆ ವ್ಯಕ್ತಪಡಿಸಿದರು. ಚಿತ್ರಕ್ಕೆ ಒಟ್ಟಿಗೆ ನಿಂತಾಗ ಮಾಂಟೆಗೊಮೆರಿ ತಮಗಿಂತ ಹೆಚ್ಚು ಪದಕಗಳನ್ನು ಧರಿಸಿರುವುದನ್ನು ಕಂಡು ಮೌಂಟ್ ಬ್ಯಾಟನ್ ನಿಬ್ಬೆರಗಾದರಂತೆ.

ಒಟ್ಟಾರೆಯಾಗಿ ಹೇಳುವುದಾದರೆ ಮೌಂಟ್ ಬ್ಯಾಟನ್ ಅವರ ವ್ಯಕ್ತಿತ್ವ ಅವರ ಪೂರ್ವಾಧಿಕಾರಿ ಲಾರ್ಡ್ ವಾವೆಲ್ ವ್ಯಕ್ತಿತ್ವಕ್ಕೆ ತದ್ವಿರುದ್ಧವಾಗಿತ್ತು. ವಾವೆಲ್ ಕೈಕೆಳಗೆ ಕೆಲಸ ಮಾಡಿದ ಸಿವಿಲ್ ಅಧಿಕಾರಿಯೊಬ್ಬರು ಗಮನಿಸಿರುವಂತೆ "ಜಂಬ, ಸ್ವಪ್ರತಿಷ್ಠೆ, ಆಡಂಬರ" ಇಂಥ ದೌರ್ಬಲ್ಯಗಳು ಯಾವತ್ತೂ ವಾವೆಲ್ ಹತ್ತಿರವೂ ಸುಳಿದಿರಲಿಲ್ಲ. ಅಂದರೆ, ವಾವೆಲ್, ಇತಿಹಾಸ ತಮ್ಮ ಬಗ್ಗೆ ಎಂಥ ಅಭಿಪ್ರಾಯ ತಾಳಬಹುದು ಎನ್ನುವ ವಿಚಾರದಲ್ಲಿ ತಲೆಕೆಡಿಸಿಕೊಂಡಿರಲಿಲ್ಲ ಎಂಬುದನ್ನು ಬೇರೆ ಧಾಟಿಯಲ್ಲಿ ಹೇಳಿರುವ ಮಾತುಗಳಿವು. ಆದಾಗ್ಯೂ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಅಂತ್ಯಗೊಳಿಸಲು ಮೊದಲ ಹೆಜ್ಜೆ ಇಟ್ಟ ಕೀರ್ತಿ ಹೆಚ್ಚಾಗಿ ಸಂದಿರುವುದು ವಾವೆಲ್ ಅವರಿಗೇನೇ. ವಾವೆಲ್ ರಾಜಕಾರಣಿಗಳ ಬಗ್ಗೆ ಸಂಶಯ ಮನಸ್ಸಿನವನಾಗಿದ್ದ, ಸುಲಭವಾಗಿ ನಂಬುತ್ತಿರಲಿಲ್ಲ, ಅವರ ಬಗ್ಗೆ ಅಭ್ಯಂತರಗಳನ್ನು ವ್ಯಕ್ತಪಡಿಸಿದ್ದೂ ಉಂಟು. ಆದಾಗ್ಯೂ ಭಾರತೀಯರ ಆಶೋತ್ತರಗಳ ಬಗ್ಗೆ ಗಾಢವಾದ ಸಹಾನುಭೂತಿ ಹೊಂದಿದ್ದ. ಯುದ್ಧ ಅಂತ್ಯಗೊಂಡ ನಂತರ ಚರ್ಚೆ-ಸಂಧಾನಗಳಿಗೆ ಚಾಲನೆ ನೀಡಿದವನು ಇವನೇ. ವಾಪಸಾತಿಗೆ ಖಚಿತವಾದ ಕಾಲಮಿತಿಯೊಂದನ್ನು ಗೊತ್ತುಪಡಿಸುವಂತೆ ಒತ್ತಾಯ ಪಡಿಸಿದವನೂ ಇವನೇ. ಆದರೆ, ಕೊನೆಗಳಿಗೆಯ ನಾಟಕೀಯ ನಡೆಗಳ ಪ್ರದರ್ಶನ, ಎರಡು ರಾಷ್ಟ್ರಗಳ ಜನನದ ಪ್ರಕಟಣೆಯ ಕೆಲಸ ಮಾತ್ರ ವಾವೆಲ್‌ನ ಆಡಂಬರಗಾರ ಉತ್ತರಾಧಿಕಾರಿಯ ಪಾಲಾಯಿತು.

ಭಾರತದಿಂದ ನಿರ್ಗಮಿಸಿದ ನಂತರ ಮೌಂಟ್ ಬ್ಯಾಟನ್, ಭಾರತದಲ್ಲಿ ವೈಸ್‌ರಾಯ್ ಆಗಿ ತನ್ನ ಅಧಿಕಾರಾವಧಿಯ ಅತ್ಯುತ್ಕೃಷ್ಟ ಚಿತ್ರ ನೀಡುವಂಥ ಸಾಹಿತ್ಯ ಹೆಣೆಯಲು ಬಹಳಷ್ಟು ಶ್ರಮಿಸಿದ. ಪುಸ್ತಕಗಳ ರಚನೆಗೆ ವ್ಯವಸ್ಥೆ ಮಾಡಿದ; ತನ್ನ ಅಧಿಕಾರದ ಅವಧಿಯ ತಪ್ಪುಗಳನ್ನು ಪಕ್ಕಕ್ಕೆ ತಳ್ಳಿ, ಯಶಸ್ಸುಗಳನ್ನು ಹಾಡಿ ಹೊಗಳುವಂಥ ಉಜ್ವಲ ಸಾಹಿತ್ಯ ರಚನೆಗೆ ಪ್ರಭಾವ ಬೀರಿದ. ಈ ಗ್ರಂಥಗಳು, ಕಚ್ಚಾಡುವ ಇಬ್ಬರು ಶಾಲಾ ಬಾಲಕರ ನಡುವೆ ಮಧ್ಯಸ್ಥಿಕೆ ನಡೆಸುವ ಯಶಸ್ವೀ ಸಂಧಾನಕಾರನಂತೆ ಮೌಂಟ್ ಬ್ಯಾಟನ್‌ರನ್ನು ಬಿಂಬಿಸುತ್ತವೆ. ಭಾರತ-ಪಾಕಿಸ್ತಾನ ಇರಬಹುದು, ಕಾಂಗ್ರೆಸ್-ಮುಸ್ಲಿಂ ಲೀಗ್ ಇರಬಹುದು, ಮಹಾತ್ಮ ಗಾಂಧೀ-ಜಿನ್ನಾ ಇರಬಹುದು, ನೆಹರೂ-ವಲ್ಲಭ ಭಾಯಿ ಪಟೇಲರಿರಬಹುದು-ಇವರೆಲ್ಲರ ಮಧ್ಯೆ ಸಾಮರಸ್ಯ ಏರ್ಪಡಿಸುವುದರಲ್ಲಿ ಮಿಂಚಿದ ಯಶಸ್ವಿ ಸಂಧಾನಕಾರನಂತೆ ಬ್ಯಾಟನ್‌ರನ್ನು ಈ ಗ್ರಂಥಗಳಲ್ಲಿ

ಚಿತ್ರಿಸಲಾಗಿದೆ. ಮೌಂಟ್ ಬ್ಯಾಟನ್ನರ ಸಾಧನೆಗಳ ಸಮರ್ಥನೆಗಳನ್ನು ತೋರಿಕೆಯ ಕಿಮ್ಮತ್ತಿನ ಮೇಲೆ ಒಪ್ಪಿಕೊಳ್ಳಲಾಗಿದೆ. ಆದರೆ ಇವು ಬಹುತೇಕ ಅಸಂಬದ್ಧ-ಅಸಂಗತವೆನ್ನಿಸುವ ಸಮರ್ಥನೆಗಳು, ಸಾಧನೆಯ ಬಡಾಯಿ ಎನ್ನಿಸುತ್ತದೆ. ಮೌಂಟ್ ಬ್ಯಾಟನ್ನರು ಶಿಫಾರಸು ಮಾಡದೇ ಇದ್ದಿದ್ದರೆ ನೆಹರೂ ಪಟೇಲರನ್ನು ತಮ್ಮ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ ಎನ್ನುವುದು ಇಂಥ ಬಡಾಯಿಗೆ ಒಂದು ಸಣ್ಣ ಉದಾಹರಣೆ.

ವಿಚಿತ್ರವೆಂದರೆ, ಅವನ ಸಂತ ಚರಿತಕಾರರು ಭಾರತಕ್ಕೆ ಹಾಗೂ ಭಾರತೀಯರಿಗೆ ಬ್ಯಾಟನ್ನರ ನಿಜವಾದ ಕೊಡುಗೆಯ ಮಹತ್ವವನ್ನು ತಗ್ಗಿಸಿರುವುದು; ಕೊಡುಗೆಯ ಪ್ರಾಮುಖ್ಯವನ್ನು ಅಪ್ರಧಾನಗೊಳಿಸಿರುವುದು. ಇದು, ಹೊಸದಾಗಿ ಸ್ವಾತಂತ್ರ್ಯ ಪಡೆದ ಯಾವುದೇ ರಾಷ್ಟ್ರವೂ ಹಿಂದೆ ಎದುರಿಸದೇ ಇರುವಂಥ, ಭವಿಷ್ಯದಲ್ಲಿ ಎದುರಿಸುವ ಸಾಧ್ಯತೆ ಇಲ್ಲದಂಥ ಭೌಗೋಳಿಕ ಹಾಗೂ ರಾಜಕೀಯಗಳಿಗೆ ಸಂಬಂಧಿಸಿದ ಭೂರಾಜ್ಯ ಸಮಸ್ಯೆಯೊಂದನ್ನು ಪರಿಹರಿಸುವುದರಲ್ಲಿ ಅವರು ವಹಿಸಿದ ಪಾತ್ರಕ್ಕೆ ಸಂಬಂಧಿಸಿದ್ದು. ಬ್ರಿಟಿಷರು ಭಾರತವನ್ನು ತ್ಯಜಿಸಿದಾಗ ಈ ಉಪಖಂಡದಲ್ಲಿ ತಮ್ಮ ಬೆನ್ನ ಹಿಂದೆ 500 ಗಡಿಗಳ ವಿಶಿಷ್ಟವಾದ ತುಂಡು ತುಂಡು ಪ್ರದೇಶಗಳನ್ನು ಬಿಟ್ಟು ಹೋಗಿದ್ದರು. ಈ ಪೈಕಿ ಎರಡು, ಹೊಸದಾಗಿ ಸೃಜಿತವಾದ ರಾಷ್ಟ್ರಗಳಾದ ಭಾರತ ಮತ್ತು ಪಾಕಿಸ್ತಾನ. ಉಳಿದವು ಜಹಗೀರುಗಳು ಸೇರಿದಂತೆ ಕೆಲವು ತರಹಾವರಿ ಪಾಳೆಯ ಪಟ್ಟುಗಳು. ರಾಜಮಹಾರಾಜರುಗಳ ಭಾರತ ಎಂದು ಕರೆಯಲಾದ ರಾಜ್ಯಗಳು ಅಥವಾ ಪ್ರಾಂತ್ಯಗಳು. ಈ ಘಟಕಗಳ ವಿಸರ್ಜನೆಯೇ ಒಂದು ಅಸಾಧಾರಣವಾದ ಕಥಾನಕ. ಸುಮಾರು ಅರ್ಧ ಶತಮಾನದ ಹಿಂದೆ, ವಿ.ಪಿ. ಮೆನನ್ ಅವರು "ಇಂಟಗ್ರೇಷನ್ ಆಫ್ ಇಂಡಿಯನ್ ಸ್ಟೇಟ್ಸ್" ಗ್ರಂಥದಲ್ಲಿ ಈ ಕಥಾನಕವನ್ನು ಪಕ್ಷಪಾತದ ದೃಷ್ಟಿಯಿಂದಲೇ ಸಾದರಪಡಿಸಿದ್ದಾರೆ.

II

ರಾಜಮಹಾರಾಜರುಗಳ ಆಳ್ವಿಕೆಯ ರಾಜ್ಯಗಳು ಬಹಳಷ್ಟಿದ್ದು ಅವುಗಳ ಸಂಖ್ಯೆಯ ಬಗ್ಗೆಯೇ ಒಮ್ಮತದ ಅಭಿಪ್ರಾಯವಿರಲಿಲ್ಲ. ಒಬ್ಬ ಇತಿಹಾಸಕಾರನ ಪ್ರಕಾರ ಅವುಗಳ ಸಂಖ್ಯೆ 521, ಮತ್ತೊಬ್ಬನ ಪ್ರಕಾರ 565. ಹೇಗೇ ಲೆಕ್ಕ ಮಾಡಿದರೂ ಅವು 500 ಕ್ಕೂ ಹೆಚ್ಚಾಗಿದ್ದವು. ಹಾಗೂ ವಿಸ್ತಾರ ಮತ್ತು ಸ್ಥಾನಮಾನಗಳಲ್ಲಿ ಅವು ಒಂದಕ್ಕಿಂತ ಒಂದು ಭಿನ್ನವಾಗಿದ್ದವು. ಒಂದು ತುದಿಯಲ್ಲಿ ಬೃಹತ್ ರಾಜ್ಯಗಳಾದ ಕಾಶ್ಮೀರ ಮತ್ತು ಹೈದರಾಬಾದ್‌ಗಳಿದ್ದವು. ಇವು ವಿಸ್ತಾರದಲ್ಲಿ ಒಂದು ಐರೋಪ್ಯ ರಾಷ್ಟ್ರದಷ್ಟೇ ದೊಡ್ಡದಾಗಿದ್ದವು. ಇನ್ನೊಂದು ತುದಿಯಲ್ಲಿ ಹನ್ನೆರಡು ಅಥವಾ ಅದಕ್ಕೂ ಕಡಿಮೆ ಗ್ರಾಮಗಳನ್ನೊಳಗೊಂಡ ಜಹಗೀರುಗಳಿದ್ದವು ಅಥವಾ ಊಳಿಗಮಾನ್ಯ ಪ್ರದೇಶಗಳಿದ್ದವು; ಸಾಮಂತ ರಾಜ್ಯಗಳಿದ್ದವು.

ರಾಜಮಹಾರಾಜರುಗಳ ಆಳ್ವಿಕೆಯ ಬಹುತೇಕ ರಾಜ್ಯಗಳು ಭಾರತೀಯ ಇತಿಹಾಸದ ಏಳುಬೀಳುಗಳ ಹೋರಾಟಗಳ ಹಾಗೂ ಬ್ರಿಟಿಷ್ ರಾಜ್ಯನೀತಿಯ ಫಲಗಳಾಗಿದ್ದವು.

ಇವುಗಳಲ್ಲಿ ಕೆಲವು ರಾಜ್ಯಗಳು, ಹನ್ನೊಂದು-ಹದಿನಾರನೇ ಶತಮಾನಗಳ ಅವಧಿಯಲ್ಲಿ ಮುಸ್ಲಿಂ ಆಕ್ರಮಣಕಾರರು ಉತ್ತರಭಾರತದ ಮೇಲೆ ನಡೆಸಿದ ಆಕ್ರಮಣದ ಅಲೆಗಳ ವಿರುದ್ಧ ಕಾಳಗಮಾಡಿ ಆ ಪರಾಕ್ರಮವನ್ನೇ ಬಂಡವಾಳವಾಗಿಟ್ಟುಕೊಂಡು ಅಸ್ತಿತ್ವ ಉಳಿಸಿಕೊಂಡ ರಾಜ್ಯಗಳಾಗಿದ್ದವು. ಉಳಿದ ರಾಜ್ಯಗಳು ಈ ಆಕ್ರಮಣಕಾರರ ಜೊತೆ ಸಹಕಾರ ಸಂಪರ್ಕವನ್ನಿರಿಸಿಕೊಂಡೇ ಅಸ್ತಿತ್ವ ಉಳಿಸಿಕೊಂಡ ರಾಜ್ಯಗಳು. ಆಕ್ರಮಣಕಾರರಿಗೆ ಋಣಿಯಾಗಿದ್ದುಕೊಂಡು ಇತಿಹಾಸ ಬೆಳೆಸಿಕೊಂಡ ರಾಜ್ಯಗಳಲ್ಲಿ ಹೈದರಾಬಾದ್‌ನ ಅಸಫ್ ಝಾ ರಾಜವಂಶವೂ ಒಂದು. ಇದು ಮಹಾನ್ ಮುಘಲ್ ಸಾಮ್ರಾಜ್ಯದ ಸಾಮಂತ ರಾಜ್ಯವಾಗಿ ಹದಿನೆಂಟನೆ ಶತಮಾನದ ಆದಿಯಲ್ಲಿ ಜನ್ಮತಾಳಿತು. ಆದಾಗ್ಯೂ ಪೂರ್ವದ ಕೂಚ್‌ಬಿಹಾರ್ ಹಾಗೂ ಉತ್ತರ ಹಿಮಾಲಯದ ಗಢವಾಲ್‌ನಂಥ ಇಸ್ಲಾಮಿಕ್ ಪ್ರಭಾವದಿಂದ ಅಸ್ಪೃಶ್ಯವಾಗಿಯೇ ಉಳಿದ ಸಣ್ಣಪುಟ್ಟ ರಾಜ್ಯಗಳೂ ಇದ್ದವು.

ಈ ಅರಸರ ಆಳ್ವಿಕೆಯ ರಾಜ್ಯಗಳ ಪೂರ್ವೇತಿಹಾಸ ಏನೇ ಇರಲಿ, ಇಪ್ಪತ್ತನೆ ಶತಮಾನದ ಮಧ್ಯಭಾಗದ ವೇಳೆಗೆ ಅವು ಬಹುಮಟ್ಟಿಗೆ ಬ್ರಿಟಿಷರಿಗೆ ಋಣಿಯಾಗಿದ್ದವು. ಸ್ಥಾನಮಾನ, ಅಧಿಕಾರಬಲ ಅಥವಾ ಅಧಿಕಾರಬಲದ ನ್ಯೂನತೆ ಹೀಗೆ ಹಲವಾರು ಬಾಬುಗಳಲ್ಲಿ ಬ್ರಿಟಿಷರಿಗೆ ಋಣಿಯಾಗಿದ್ದವು. ಒಂದು ಸಣ್ಣ ವ್ಯಾಪಾರಿಗಳ ಸಂಸ್ಥೆಯಾಗಿ ಅಡಿ ಇಟ್ಟ ಈಸ್ಟ್ ಇಂಡಿಯಾ ಕಂಪೆನಿ ಕ್ರಮೇಣ ಅಧಿಪತ್ಯದ ಸಿಂಹಾಸನಕ್ಕೇರಿತು. ಈ ಪ್ರಕ್ರಿಯೆಯಲ್ಲಿ, 1707ರಲ್ಲಿ ಔರಂಗಜೇಬನ ನಿಧನದ ನಂತರದ ಮುಘಲರ ಪ್ರಾಬಲ್ಯ ಇಳಿಮುಖವಾದ ಪರಿಸ್ಥಿತಿ ಈಸ್ಟ್ ಇಂಡಿಯಾ ಕಂಪನಿಗೆ ಸಹಾಯಕವಾಗಿ ಕೂಡಿಬಂತು. ಈಸ್ಟ್ ಇಂಡಿಯಾ ಕಂಪನಿ ಭಾರತದ ಆಳರಸರನ್ನು ಅನುಕೂಲಸಿಂಧು ಮಿತ್ರರೆಂದೇ ಪರಿಗಣಿಸಿತು/ ಸಮಾನ ಶತ್ರುವಾದ ಫ್ರೆಂಚರ ಮಹತ್ವಾಕಾಂಕ್ಷೆಯನ್ನು ನಿಗ್ರಹಿಸಲು ಭಾರತದ ರಾಜ್ಯಗಳ ರಾಜಮಹಾರಾಜರುಗಳೊಂದಿಗೆ ಮೈತ್ರಿ ಸಹಾಯಕವಾದೀತು ಎನ್ನುವುದೇ ಕಂಪನಿಯ ತಂತ್ರವಾಗಿತ್ತು. ಕಂಪನಿ ಈ ರಾಜ್ಯಗಳೊಂದಿಗೆ ಆಗ್ರಹಪೂರ್ವಕವಾಗಿ ಒಡಂಬಡಿಕೆ ಮಾಡಿಕೊಂಡಿತು. ಇದರನ್ವಯ ರಾಜ್ಯಗಳು ಕಂಪನಿಯ ಪರಮಾಧಿಕಾರವನ್ನು ಮಾನ್ಯಮಾಡಿದವು. ಒಡಂಬಡಿಕೆ-ಪ್ರಕಾರ ವಿವಿಧ ನವಾಬರು ಹಾಗೂ ಮಹಾರಾಜರುಗಳ ಆಳ್ವಿಕೆಗೊಳಪಟ್ಟಿದ್ದ ಈ ರಾಜ್ಯಗಳು ಕಾನೂನಿನ್ವಯ ಅವರುಗಳ ಒಡೆತನದಲ್ಲೇ ಇದ್ದವು. ಆದರೆ ಸಚಿವರುಗಳ ನೇಮಕ, ಉತ್ತರಾಧಿಕಾರಿಗಳ ನಿಯಂತ್ರಣದ ಅಧಿಕಾರವನ್ನು ಕಂಪನಿ ತನ್ನ ಕೈಯ್ಯಲ್ಲಿಟ್ಟುಕೊಂಡಿತು. ಜೊತೆಗೆ ರಾಜ್ಯಗಳಿಗೆ ಒದಗಿಸುವ ಆಡಳಿತ ಸೌಕರ್ಯ ಸವಲತ್ತುಗಳು ಹಾಗೂ ಮಿಲಿಟರಿ ಬೆಂಬಲಕ್ಕಾಗಿ ರಾಜಮಹಾರಾಜರುಗಳ ಬೊಕ್ಕಸದಿಂದ ಕಂಪನಿಗೆ ಬೃಹತ್ ಮೊತ್ತದ ಅನುದಾನ ನೀಡಬೇಕಾಗಿತ್ತು. ಅನೇಕ ಸಂದರ್ಭಗಳಲ್ಲಿ ಈ ಒಡಂಬಡಿಕೆಗಳನ್ವಯ ಭಾರತದ ರಾಜ್ಯಗಳ ಅಮೂಲ್ಯವಾದ ಪ್ರದೇಶಗಳನ್ನು ಬ್ರಿಟಿಷರಿಗೆ ವರ್ಗಾಯಿಸಲಾಯಿತು. ಕಾಥೇವಾಡ ಹಾಗೂ ದಕ್ಷಿಣದ ಎರಡು ಪಾಳೆಯಪಟ್ಟುಗಳು ಹೊರತಾಗಿ ಭಾರತದ ಬೇರಾವ ರಾಜ್ಯವೂ ಕಡಲಕರೆಗಳನ್ನು ಹೊಂದಿರಲಿಲ್ಲ. ಇದರಿಂದಾಗಿ

ಕಂಪನಿಯ ಮೇಲಿನ ಅವಲಂಬನೆ ಹೆಚ್ಚಾಯಿತು. ಕಚ್ಚಾವಸ್ತುಗಳು, ಕೈಗಾರಿಕಾ ಉತ್ಪನ್ನಗಳು, ಉದ್ಯೋಗಾವಕಾಶಗಳೂ ಇವೆಲ್ಲದಕ್ಕೂ ಬ್ರಿಟಿಷ್ ಭಾರತವನ್ನು ಅವಲಂಬಿಸುವುದು ಅನಿವಾರ್ಯವಾಯಿತು. ಹೀಗೆ ಆರ್ಥಿಕ ಅವಲಂಬನೆಯಿಂದಾಗಿ ರಾಜಕೀಯ ಅವಲಂಬನೆಯೂ ತೀವ್ರಗೊಂಡಿತು.

ದೊಡ್ಡ ದೊಡ್ಡ ದೇಶೀಯ ಸಂಸ್ಥಾನಗಳು ತಮ್ಮದೇ ಆದ ರೈಲ್ವೆ, ನಾಣ್ಯ ನೋಟುಗಳು ಹಾಗೂ ಮುದ್ರಾಂಕಗಳನ್ನು ಹೊಂದಿದ್ದವು. ರಾಜಮಹಾರಾಜರುಗಳು ಸ್ವಪ್ರತಿಷ್ಠೆ, ಒಣ ಡೌಲುಗಳಿಂದಾಗಿ ಇದೆಲ್ಲ ಸಾಧ್ಯವಾಗಿತ್ತು. ಕೆಲವು ಸಂಸ್ಥಾನಗಳಲ್ಲಿ ಆಧುನಿಕ ಕೈಗಾರಿಕೆಗಳಿದ್ದವು. ಇನ್ನೂ ಕೆಲವೇ ಕೆಲವು ಸಂಸ್ಥಾನಗಳಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆಯೂ ಇತ್ತು. ಇಪ್ಪತ್ತನೆ ಶತಮಾನದ ಆದಿ ಭಾಗದಲ್ಲಿ ಬ್ರಿಟಿಷ್ ವೀಕ್ಷಕನೊಬ್ಬ, "ಒಟ್ಟಾರೆಯಾಗಿ ಹೇಳುವುದಾದರೆ ಸಂಸ್ಥಾನಗಳು ಅದಕ್ಷತೆಯ, ಪ್ರತಿಗಾಮಿತ್ವದ, ಹಾಗೂ ದುಷ್ಟರ ಮತ್ತು ತಲೆಕೆಟ್ಟ ವ್ಯಕ್ತಿಗಳ ಅನಿಯಂತ್ರಿತ ದಬ್ಬಾಳಿಕೆಯ ಕೂಪಗಳಾಗಿದ್ದವೆಂದು" ಬರೆದಿದ್ದಾನೆ. ಸ್ಥೂಲವಾಗಿ ಪ್ರಮುಖ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್‌ನ ಅಭಿಪ್ರಾಯವೂ ಇದೇ ಆಗಿತ್ತು. ಬ್ರಿಟಿಷರಿಗೆ ಅನುಗುಣವಾಗಿ ಅಲ್ಪಸ್ವಲ್ಪ ಪ್ರಮಾಣದಲ್ಲಾದರೂ ರಾಜಕೀಯ ಪ್ರಾತಿನಿಧ್ಯ ನೀಡುವಂತೆ ಕಾಂಗ್ರೆಸ್ ಸಂಸ್ಥಾನಗಳ ಆಳರಸರಿಗೆ 1920ರಲ್ಲಿ ಒತ್ತಾಯಪಡಿಸಿತು. ಕಾಂಗ್ರೆಸ್ ಆಶ್ರಯದಡಿ ಅಖಿಲ ಭಾರತ ಸಂಸ್ಥಾನಗಳ ಜನತಾ ಪರಿಷತ್ತು ಪ್ರಾರಂಭಗೊಂಡಿತು. ಸಂಸ್ಥಾನಗಳ ಪ್ರಜಾಮಂಡಲಗಳು ಈ ಪರಿಷತ್ತಿನಲ್ಲಿ ಸೇರಿಕೊಂಡವು.

ಅತ್ಯಂತ ಉಚ್ಛ್ರಾಯದ ದಿನಗಳಲ್ಲೂ ರಾಜಮಹಾರಾಜರುಗಳ ಬಗ್ಗೆ ಪತ್ರಿಕೆಗಳ ಅಭಿಪ್ರಾಯ ಹಿತಕರವಾಗಿರಲಿಲ್ಲ. ಪತ್ರಿಕೆಗಳ ದೃಷ್ಟಿಯಲ್ಲಿ ರಾಜಮಹಾರಾಜರುಗಳು ಮೈಗಳ್ಳರು, ಲಂಪಟರು, ಜೂಜಿನ ಕುದುರೆಗಳ ವ್ಯಾಮೋಹಿಗಳು, ಪರಸ್ತ್ರೀ ಮೋಹಿಗಳು ಹಾಗೂ ಯೂರೋಪಿನಲ್ಲಿ ಬಿಡುಬೀಸಾಗಿ ಮಜಾ ಉಡಾಯಿಸುವವರಾಗಿದ್ದರು. ದಿನನಿತ್ಯದ ಆಡಳಿತ ವಿಷಯಗಳಲ್ಲಿ ಆಳರಸರು ತುಂಬಾ ಉದಾಸೀನರಾಗಿದ್ದರೆಂಬುದು ಕಾಂಗ್ರೆಸ್ ಹಾಗೂ ಬ್ರಿಟಿಷ್ ಸರ್ಕಾರದ ಅಭಿಪ್ರಾಯವಾಗಿತ್ತು. ಒಂದೆರಡು ಅಪವಾದಗಳು ಹೊರತಾಗಿ ಇದು ಬಹುಮಟ್ಟಿಗೆ ಸತ್ಯಸಂಗತಿಯಾಗಿತ್ತು. ಮೈಸೂರು ಮತ್ತು ಬರೋಡಾ ಮಹಾರಾಜರುಗಳು ಶ್ರೇಷ್ಠ ಮಟ್ಟದ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದ್ದರು. ಜಾತಿಮತ ಪೂರ್ವಾಗ್ರಹಗಳನ್ನು ದೂರವಿರಿಸಿದ್ದರು. ಆಧುನಿಕ ಉದ್ಯಮಗಳ ಪ್ರವರ್ತಕರಾಗಿದ್ದರು. ಉಳಿದ ಮಹಾರಾಜರುಗಳು ಭಾರತೀಯ ಶಾಸ್ತ್ರೀಯ ಸಂಗೀತದ ಮಹಾನ್ ಪರಂಪರೆಯ ಪೋಷಕರಾಗಿದ್ದರು.

ಒಳ್ಳೆಯವರೋ, ಕೆಟ್ಟವರೋ; ಸ್ವೈರಪ್ರವೃತ್ತಿಯವರೋ, ಪ್ರಜಾವತ್ಸಲರೋ, ನಿರಂಕುಶ ಪ್ರಭುಗಳೋ, ಭಾಗಶಃ ಪ್ರಜಾಪ್ರಭುತ್ವಶೀಲರೋ ಆಗಿದ್ದ ಈ ರಾಜಮಹಾರಾಜರುಗಳು 1940ರ ವೇಳೆಗೆ ಸಮಾನವಾದ ಸಮಸ್ಯೆಯೊಂದನ್ನು ಎದುರಿಸಬೇಕಾಗಿ ಬಂತು. ಅದು ಸ್ವತಂತ್ರ ಭಾರತದಲ್ಲಿ ತಮ್ಮ ಭವಿಷ್ಯ ಏನು ಎಂಬ ಸಮಸ್ಯೆ. 1946ರ ಮೊದಲ ಭಾಗದಲ್ಲಿ ಬ್ರಿಟಿಷರ ಭಾರತದಲ್ಲಿ ನಿರ್ಣಾಯಕವಾದ ಚುನಾವಣೆಗಳು ನಡೆದವು. ಆದರೆ ರಾಜಮಹಾರಾಜರ

ಸಂಸ್ಥಾನಗಳಲ್ಲಿ ಈ ಚುನಾವಣೆಗಳನ್ನು ನಡೆಸಲಿಲ್ಲ. ಇದರ ಪರಿಣಾಮವಾಗಿ ರಾಜಮಹಾರಾಜರುಗಳ ಸರ್ಕಾರಗಳ ಬಗ್ಗೆ ಜಿಗುಪ್ಸೆ, ವಿರೋಧ, ಹಗೆತನಗಳು ಹೆಚ್ಚತೊಡಗಿದವು. ಈ ಸಂಸ್ಥಾನಗಳ ಸಂವಿಧಾನಾತ್ಮಕ ಸ್ಥಾನಮಾನ ಅನಿಶ್ಚಿತವಾಯಿತು. 1946ರಲ್ಲಿ ಆಗಮಿಸಿದ ಬ್ರಿಟಿಷ್ ಮಂತ್ರಿಮಂಡಲದ ನಿಯೋಗ ಹಿಂದೂ-ಮುಸ್ಲಿಂ ಸಮಸ್ಯೆ ಅಥವಾ ಸಂಯುಕ್ತ ಭಾರತವೋ ಪಾಕಿಸ್ತಾನವೋ–ಈ ವಿಷಯಗಳತ್ತ ಗಮನ ಕೇಂದ್ರೀಕರಿಸಿತು. ಸಂಸ್ಥಾನಗಳ ಬಗ್ಗೆ ಅದು ವಿಚಾರ ಮಾಡಲೇ ಇಲ್ಲ. ಅಂತೆಯೇ ಬ್ರಿಟಿಷ್ ಆಳ್ವಿಕೆಯ ಅಂತ್ಯವನ್ನು ಘೋಷಿಸಿದ 1947ರ ಫೆಬ್ರುವರಿ 20ರ ಪ್ರಕಟಣೆಯಲ್ಲೂ ಈ ಪ್ರಶ್ನೆಯಿಂದ ನುಣುಚಿಕೊಳ್ಳಲಾಗಿತ್ತು. ಜೂನ್ 3ರಂದು ಬ್ರಿಟಿಷ್ ತನ್ನ ಆಳ್ವೆರು ನಿರ್ಗಮನದ ದಿನಾಂಕವನ್ನೂ ಎರಡು ರಾಷ್ಟ್ರಗಳ ಸೃಷ್ಟಿಯನ್ನೂ ಪ್ರಕಟಿಸಿತು. ಈ ಹೇಳಿಕೆಯಲ್ಲೂ ದೇಶೀಯ ಸಂಸ್ಥಾನಗಳ ಸ್ಥಾನಮಾನ ಏನೆಂಬುದನ್ನು ಖಚಿತವಾಗಿ ತಿಳಿಸಲಿಲ್ಲ. ಕೆಲವು ಆಳರಸರು ಹರಿದು ಹಂಚಿಹೋದ ಭಾರತದಲ್ಲಿ ಸ್ವತಂತ್ರ ಸಂಸ್ಥಾನಗಳಾಗಿ ಮುಂದುವರಿಯುವ ಹುಚ್ಚು ಕನಸಿನ ವೈಭವದಲ್ಲಿ ಮೆರೆಯಲಾರಂಭಿಸಿದರು.

III

1946-47ರಲ್ಲಿ ಜವಹರಲಾಲ್ ನೆಹರೂ ಅಖಿಲ ಭಾರತ ಸಂಸ್ಥಾನಗಳ ಜನತಾ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆಳರಸರ ಸಂಸ್ಥಾನಗಳ ವಿಷಯದಲ್ಲಿ ನೆಹರೂ ದೃಢ ಅಭಿಪ್ರಾಯಗಳನ್ನು ಹೊಂದಿದ್ದರೆಂದು ಅವರ ಜೀವನ ಚರಿತ್ರಕಾರರು ಬರೆದಿದ್ದಾರೆ. "ಅವರು ಊಳಿಗಮಾನ್ಯ ದಬ್ಬಾಳಿಕೆ ಬಗ್ಗೆ ಹಾಗೂ ಜನಾಭಿಪ್ರಾಯವನ್ನು ಹತ್ತಿಕ್ಕುವ ಪ್ರವೃತ್ತಿಯ ಬಗ್ಗೆ ಅಸಹ್ಯ ಭಾವನೆ ಹೊಂದಿದ್ದರು. ಈ ಕೈಗೊಂಬೆ ಅರಸರುಗಳ ಬಗ್ಗೆಯೂ ಹೇವರಿಕೆ ಹೊಂದಿದ್ದರು. ಸ್ವತಂತ್ರ ಚಕ್ರವರ್ತಿಗಳಾಗಿ ತಮ್ಮನ್ನು ಬಿಂಬಿಸಿಕೊಳ್ಳುವ ರಾಜಮಹಾರಾಜರುಗಳ ಆಲೋಚನೆಯಂತೂ ಅವರನ್ನು ತೀವ್ರವಾಗಿ ಕೆರಳಿಸಿತ್ತು." ಈ ಆಲೋಚನೆಗೆ ರಾಜಕೀಯ ಇಲಾಖೆಯ ಅಧಿಕಾರಿಗಳು ಪ್ರೋತ್ಸಾಹವೆರೆದಿದ್ದರು. ಬ್ರಿಟಿಷರು ಭಾರತ ಬಿಟ್ಟು ಹೋದ ಕೂಡಲೇ ರಾಜಮಹಾರಾಜರುಗಳು ತಾವು ಸ್ವತಂತ್ರ ಸಂಸ್ಥಾನವಾಗಿ ಉಳಿಯುವ ಹಕ್ಕೊತ್ತಾಯವನ್ನು ಮಂಡಿಸಬಹುದೆಂದು ಅವರನ್ನು ನಂಬಿಸುವಂಥ ಮಾತುಗಳನ್ನು ಈ ಅಧಿಕಾರಿಗಳು ಆಡಿದ್ದರು.

ರಾಜಮಹಾರಾಜರುಗಳಿಗೆ ನೆಹರೂ ಬಗ್ಗೆ ಪ್ರೀತಿ ಏನೂ ಇರಲಿಲ್ಲ. ಅವರ ಬಗ್ಗೆ ಭೀತಿ ಇತ್ತು. ಅದೃಷ್ಟವಶಾತ್ ಕಾಂಗ್ರೆಸ್ ಪಕ್ಷ ಸಂಸ್ಥಾನಗಳ ಸಮಸ್ಯೆಯನ್ನು ವ್ಯಾವಹಾರಿಕ ಮನೋಭಾವದ ಆಡಳಿತಗಾರ ವಲ್ಲಭಭಾಯಿ ಪಟೇಲರಿಗೆ ವಹಿಸಿತು. 1947ರ ವಸಂತ ಋತುವಿನುದ್ದಕ್ಕೂ ಪಟೇಲರು ರಾಜಮಹಾರಾಜರುಗಳಿಗ ಔತಣಕೂಟಗಳನ್ನೇರ್ಪಡಿಸಿ ಈ ಔತಣಕೂಟಗಳಲ್ಲಿ, ಭಾರತದ ಹೊಸ ಸಂವಿಧಾನ ರಚನೆಯಲ್ಲಿ ಕಾಂಗ್ರೆಸ್‌ಗೆ ನೆರವಾಗುವಂತೆ ಅತಿಥಿ ಆಳರಸರುಗಳ ಮನ ಒಲಿಸಲಾರಂಭಿಸಿದರು. ಸಂವಿಧಾನ ರಚನಾ ಸಭೆಗಳಿಗೆ ತಮ್ಮ

ಪ್ರತಿನಿಧಿಗಳನ್ನು ಕಳುಹಿಸುವ ಮೂಲಕ ಅವರು ಇದನ್ನು ಮಾಡಬಹುದಿತ್ತು. 1946ರ ಡಿಸೆಂಬರ್‌ನಲ್ಲೆ ದೆಹಲಿಯಲ್ಲಿ ಸಂವಿಧಾನ ರಚನಾಸಭೆ ಕಾರ್ಯಕಲಾಪ ಅರಂಭಿಸಿತ್ತು. ಇದೇ ಕಾಲಕ್ಕೆ ಪಟೆಲರು ಹೆಚ್ಚು ಪ್ರಭಾವಶಾಲಿಗಳಾಗಿದ್ದ ದಿವಾನರುಗಳಿಗೆ ಪತ್ರ ಬರೆದು ಭಾರತವನ್ನು ಆಳಲಿರುವ ಪಕ್ಷದೊಂದಿಗೆ ಒಪ್ಪಂದ ಮಾಡಿಕೊಳ್ಳುವಂತೆ ತಮ್ಮ ಮಹಾರಾಜರುಗಳಿಗೆ ತಿಳಿಯ ಹೇಳಲು ಮನವಿ ಮಾಡಿಕೊಂಡರು.

ಪಟೇಲರ ಮನವಿಗೆ ಮೊದಲು ಓಗೊಟ್ಟವರು ಬಿಕನೀರ್ ಮಹಾರಾಜರು. ಗೌರವಾನ್ವಿತ ಇತಿಹಾಸಕಾರರಾದ ಕೆ.ಎಂ. ಪಣಿಕ್ಕರ್, ಬಿಕನೀರ್ ಮಹಾರಾಜರ ದಿವಾನರಾಗಿದ್ದರು. ಏಷ್ಯಾದ ಇತಿಹಾಸದಲ್ಲಿ ವಾಸ್ಕೋಡಿಗಾಮ ಯುಗಾಂತ್ಯ ತ್ವರಿತಗತಿಯಲ್ಲಿ ಸನ್ನಿಹಿತವಾಗಿದೆಯೆಂಬುದನ್ನು ಎಲ್ಲರಿಗಿಂತ ಹೆಚ್ಚು ಖಚಿತವಾಗಿ ಮನಗಂಡವರು ಪಣಿಕ್ಕರ್. ರಾಷ್ಟ್ರೀಯ ಶಕ್ತಿಗಳು ಅದಮ್ಯವಾಗಿದ್ದವು. ಇವರೊಂದಿಗೆ ರಾಜಿಮಾಡಿಕೊಳ್ಳದವರು ಈ ಅಲೆಯಲ್ಲಿ ಕೊಚ್ಚಿ ಹೋಗುವ ಅಪಾಯವಿತ್ತು. ಇದರಂತೆಯೇ 1947ರ ಏಪ್ರಿಲ್ ಮೊದಲ ವಾರದಲ್ಲಿ ಸಾರ್ವಜನಿಕ ಮನವಿಯೊಂದನ್ನು ಹೊರಡಿಸಿ ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಳ್ಳುವಂತೆ ಸಂಗಾತಿ ಮಹಾರಾಜರುಗಳಿಗೆ ಕರೆನೀಡಿದರು. ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಳ್ಳುವುದರಿಂದ, ಭಾರತದ ಮಹಾರಾಜರುಗಳು ತಮ್ಮ ಸಂಸ್ಥಾನಗಳ ಹಿತಕ್ಕಾಗಿ ಹಾಗೂ ಮಾತೃಭೂಮಿಯ ಹಿತಕ್ಕಾಗಿ ಶ್ರಮಿಸುತ್ತಿರುವುದನ್ನು ಸ್ಪಷ್ಟಪಡಿಸಿದಂತಾಗುತ್ತದೆ; ಎಲ್ಲಕ್ಕಿಂತ ಮಿಗಿಲಾಗಿ ತಾವು ದೇಶಭಕ್ತರು ಹಾಗೂ ಭಾರತದ ಸುಪುತ್ರರೆಂಬುದನ್ನು ಸಾಬೀತುಪಡಿಸಿದಂತಾಗುತ್ತದೆ ಎಂದು ಬಿಕನೀರ್ ಮಹಾರಾಜರು ಮನವಿಯಲ್ಲಿ ಕಿವಿಮಾತುಗಳನ್ನು ಹೇಳಿದ್ದರು.

ಸಂವಿಧಾನ ರಚನಾ ಸಭೆಯಲ್ಲಿ ಪ್ರಪ್ರಥಮನಾಗಿ ಪಾಲ್ಗೊಂಡವನು ಬರೋಡೆಯ ಮಹಾರಾಜ. ಇದು ಆದದ್ದು ಫೆಬ್ರುವರಿಯಲ್ಲಿ. ಬಿಕನೀರ್ ಮಹಾರಾಜರ ಮನವಿಯ ನಂತರ ರಾಜಸ್ತಾನದ ಹನ್ನೆರಡಕ್ಕೂ ಹೆಚ್ಚು ಸಂಸ್ಥಾನಗಳ ಮಹಾರಾಜರುಗಳು ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಂಡರು. ಪಣಿಕ್ಕರ್ ಮತ್ತು ಬಿಕನೀರ್ ಮಹಾರಾಜರು, "ಸಾಂಪ್ರದಾಯಿಕ ಭಕ್ತಿ ವಿಧೇಯತೆಗಳ ಪ್ರಕಟಣೆಯ ಹೊಸ ಕ್ರಮವೆಂಬಂತೆ ರಜಪೂತ ಮಹಾರಾಜರುಗಳನ್ನು ದೆಹಲಿಗೆ ತಮ್ಮ ನಾಯಕತ್ವದಲ್ಲಿ ಕರೆದೊಯ್ದರು. ಈಗ ದೆಹಲಿಯ ಅಸ್ಥಾನದಲ್ಲಿ ಮೊಘಲ್ ದೊರೆಯಾಗಲೀ ಬ್ರಿಟಿಷರಾಗಲೀ ಇರಲಿಲ್ಲ. ಪಂಡಿತರೊಬ್ಬರು ಅಲ್ಲಿ ವಿರಾಜಮಾನರಾಗಿದ್ದರು. ಈ ಮಹಾರಾಜರುಗಳು ಕಾಂಗ್ರೆಸ್ಸಿನೊಂದಿಗೆ ಒಂದು ಒಡಂಬಡಿಕೆ ಮಾಡಿಕೊಂಡಿದ್ದರು; ಬಹುಶಃ ತಮ್ಮ ಹಿತದೃಷ್ಟಿಯಿಂದಲೇ ಮಾಡಿಕೊಂಡ ಒಡಂಬಡಿಕೆ ಇದಾಗಿತ್ತು. ಇದು ಬಹುಶಃ ಅವರ ದೃಷ್ಟಿಯಲ್ಲಿ ಸರಿಯಾದ ಕ್ರಮವೂ ಆಗಿತ್ತು."

ಬಿಕನೀರ್ ಸೇರಿದಂತೆ ರಾಜಸ್ಥಾನದ ಪಲವು ಸಂಸ್ಥಾನಗಳು ಪಾಕಿಸ್ತಾನದೊಂದಿಗೆ ಗಡಿಯನ್ನು ಹಂಚಿಕೊಳ್ಳಬೇಕಾಗಿತ್ತು. ಇದು, ಹಾಗೂ ಮುಸ್ಲಿಂ ದೊರೆಗಳ ಜೊತೆ ಯುದ್ಧ ಮಾಡಿದ ಹಿಂದಿನ ನೆನಪುಗಳು ಕಾಂಗ್ರೆಸ್ ಜೊತೆ ರಾಜಿಗೆ ಧಾವಿಸಲು ಕಾರಣವಾಗಿರಬಹುದು.

ಬ್ರಿಟಿಷರು ಭಾರತ ಬಿಟ್ಟು ಹೋದ ನಂತರ ದೆಹಲಿಯ ಹಿಡಿತ ಎಷ್ಟರ ಮಟ್ಟಿಗಿದ್ದೀತು, ದೆಹಲಿ ಆಡಳಿತ ಆಜ್ಞೆ ನಡೆದೀತೆ ಎಂಬುದರ ಬಗ್ಗೆ ಒಳನಾಡಿನ ಸಂಸ್ಥಾನಗಳಿಗೆ ಸಂಶಯವಿತ್ತು. ಹದಿನೆಂಟನೆ ಶತಮಾನದಲ್ಲಿ ಪರ್ಯಾಯ ದ್ವೀಪಗಳನ್ನು ಹನ್ನೆರಡಕ್ಕೂ ಹೆಚ್ಚು ಸಾರ್ವಭೌಮ ರಾಜ್ಯಗಳಾಗಿ ವಿಭಜಿಸಿದಂಥ ಪರಿಸ್ಥಿತಿ ಮರುಕಳಿಸದೇ ಇದ್ದೀತೆ?

ಜೂನ್ 27ರಂದು ಭಾರತ ಸರ್ಕಾರ ಹೊಸದಾಗಿ ರಾಜ್ಯಗಳ ಇಲಾಖೆಯೊಂದನ್ನು ಪ್ರಾರಂಭಿಸಿತು. ಈ ಇಲಾಖೆಯನ್ನು ಹಳೆಯ ರಾಜಕೀಯ ಇಲಾಖೆಯ ಸ್ಥಾನದಲ್ಲಿ ರಚಿಸಲಾಯಿತು. ರಾಜಮಹಾರಾಜರುಗಳ ಪರ ಹಾಗೂ ಕಾಂಗ್ರೆಸ್ ವಿರೋಧಿ ನಿಲುವಿನಿಂದಾಗಿ ಸಾಕಷ್ಟು ಗದ್ದಲವುಂಟು ಮಾಡಿದ ಕುಖ್ಯಾತಿಗೊಳಗಾಗಿದ್ದ ರಾಜಕೀಯ ಇಲಾಖೆಯನ್ನು ರದ್ದುಗೊಳಿಸಲಾಯಿತು. ಪಟೇಲರ ಅಧೀನದಲ್ಲಿ ಈ ಹೊಸ ಇಲಾಖೆ ಇತ್ತು. ಪಟೇಲರು ವಿ.ಪಿ. ಮೆನನ್ನರನ್ನು ತಮ್ಮ ಕಾರ್ಯದರ್ಶಿಯಾಗಿ ನೇಮಿಸಿಕೊಂಡರು. ತುಂಬ ಜಾಗ್ರತ ಮನಸ್ಸಿನ, ಭಯಂಕರ ಬುದ್ಧವಂತರಾಗಿದ್ದ ಮೆನನ್ ಮಲಬಾರಿನ ಮಲೆಯಾಳಿ. ಮೆನನ್ ಈ ಹುದ್ದೆಗೆ ಅಪರೂಪವೆಂಬಂತೆ ಕೆಳ ಶ್ರೇಣಿಯಿಂದ ಬಡ್ತಿ ಪಡೆದವರಾಗಿದ್ದರು. ಸರ್ಕಾರದ ಇತರ ಕಾರ್ಯದರ್ಶಿಗಳಂತೆ ಐ.ಸಿ.ಎಸ್. ಶ್ರೇಣಿಯವರಾಗಿರಲಿಲ್ಲ. ಒಬ್ಬ ಗುಮಾಸ್ತೆಯಾಗಿ ಭಾರತ ಸರ್ಕಾರದಲ್ಲಿ ಸೇವೆ ಆರಂಭಿಸಿದ ಮೆನನ್ ಕ್ರಮೇಣ ಈ ಹುದ್ದೆಗೆ ಏರಿದ್ದರು. ಮೆನನ್ ಸುಧಾರಣಾ ಕಮಿಷನರ್ ಆಗಿದ್ದರು, ಹಿಂದಿನ ವೈಸ್‌ರಾಯ್‌ಗಳಿಗೆ ಸಂವಿಧಾನದ ಸಲಹೆಗಾರರಾಗಿದ್ದರು. ಭಾರತ ಸ್ವಾತಂತ್ರ್ಯ ಮಸೂದೆಯ ಕರಡನ್ನು ಸಿದ್ಧಪಡಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಐ.ಸಿ.ಎಸ್. ಸಮಾನಸ್ಕಂಧರು ಅವರನ್ನು "ಬಾಬು ಮೆನನ್" ಎಂದು ಛೇಡಿಸುತ್ತಿದ್ದರು. ಇದು ಅವರ ಕೆಳದರ್ಜೆಯ ಮೂಲವನ್ನು ಪರೋಕ್ಷವಾಗಿ ನೆನಪಿಸುವುದೇ ಆಗಿತ್ತು. ಬ್ರಿಟಿಷ್ ರಾಜ್ಯ ಕಾಂಗ್ರೆಸ್ ಆಡಳಿತಕ್ಕೆ ಹಾದಿ ಮಾಡಿಕೊಟ್ಟಂತೆ ಸೂಕ್ಷ್ಮವೂ, ಜಟಿಲವೂ ಆದ ಸಂಕ್ರಮಣಾವಸ್ಥೆಯ ಮೇಲುಸ್ತುವಾರಿಗೆ ಇವರಿಗಿಂತ ಇನ್ನೊಬ್ಬ ಉತ್ತಮ ಅಧಿಕಾರಿ ಇದ್ದಿರಲಿಕ್ಕಿಲ್ಲ. ಹೊಸ ಇಲಾಖೆ ನೇತೃತ್ವ ವಹಿಸಿಕೊಂಡ ನಂತರ ಮೆನನ್ ಮಾಡಿದ ಮೊದಲ ಕೆಲಸವೆಂದರೆ ಸ್ವಾತಂತ್ರ್ಯದ ಭ್ರಾಮಕ ಬೇಡಿಕೆಗಳನ್ನು ಬೆಂಬಲಿಸದಂತೆ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರಿದ್ದು. 'ರಾಣಿಯ ಸರ್ಕಾರ ಸ್ವಾತಂತ್ರ್ಯದ ಬೇಡಿಕೆಯನ್ನು ಮಾನ್ಯ ಮಾಡಬಹುದೆಂಬ ಸಣ್ಣ ಸುಳಿವೂ ಸಂಸ್ಥಾನಗಳನ್ನು ಮತ್ತು ಹೊಸ ರಾಷ್ಟ್ರಗಳನ್ನು ಸಮಾನ ಕಳಕಳಿಯ ಮಹತ್ವದ ವಿಷಯದಲ್ಲಿ ಜೊತೆಗೂಡಿಸುವ ಪ್ರಯತ್ನಗಳಿಗೆ ತೊಡಕುಂಟು ಮಾಡಬಹುದೆಂದು' ಮೆನನ್ ಸ್ಪಷ್ಟವಾಗಿ ತಿಳಿಸಿದ್ದರು.

ಹಳೆಯ ಬಾಸ್ ಮೌಂಟ್ ಬ್ಯಾಟನ್ ಹಾಗೂ ಹೊಸ ಬಾಸ್ ವಲ್ಲಭ ಭಾಯಿ ಪಟೇಲ್ ಇವರಿಬ್ಬರ ನಡುವೆ ಸಂಧಾನ ನಡೆಸಲು ಮೆನನ್ ಆದರ್ಶಪ್ರಾಯವಾದ ವ್ಯಕ್ತಿಯಾಗಿದ್ದರು. ಇವರಿಬ್ಬರೂ ಸೇರಿ ವಿಲೀನದ ದಸ್ತಾವೇಜಿನ ಕರಡನ್ನು ಸಿದ್ಧಪಡಿಸಿದರು. ಈ ದಸ್ತಾವೇಜಿನ ಪ್ರಕಾರ, ಸಂಸ್ಥಾನಗಳು ರಕ್ಷಣಾ ಇಲಾಖೆ, ವಿದೇಶಾಂಗ ಇಲಾಖೆ ಮತ್ತು

ಸಂಪರ್ಕ ಸಂವಹನ ಇಲಾಖೆಗಳ ಮೇಲಿನ ನಿಯಂತ್ರಣವನ್ನು ಕಾಂಗ್ರೆಸ್ ಸರ್ಕಾರಕ್ಕೆ ವರ್ಗಾಯಿಸಲು ಒಪ್ಪಿಗೆ ನೀಡಬೇಕಾಗಿತ್ತು. ಜುಲೈ 5ರಂದು ಪಟೇಲರು ಹೇಳಿಕೆಯೊಂದನ್ನು ಬಿಡುಗಡೆ ಮಾಡಿ, ಈ ಮೂರು ವಿಷಯಗಳಲ್ಲಿ ಭಾರತ ಸರ್ಕಾರಕ್ಕೆ ಸಮ್ಮತಿ ಸೂಚಿಸಿ ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸುವಂತೆ ರಾಜಮಹಾರಾಜರುಗಳಿಗೆ ಮನವಿ ಮಾಡಿಕೊಂಡರು. ಸಾಮಾನ್ಯ ಹಿತಾಸಕ್ತಿಯಿಂದ ಸಹಕರಿಸದೇ ಹೋದಲ್ಲಿ ಅರಾಜಕತೆ ಮತ್ತು ಅವ್ಯವಸ್ಥೆಗಳೇ ಪರ್ಯಾಯವಾದೀತೆಂದು ಪಟೇಲರು ಹೇಳಿಕೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದರು. "ಈ ಪವಿತ್ರ ಭೂಮಿಯನ್ನು ವಿಶ್ವರಾಷ್ಟ್ರಗಳ ಸಮುದಾಯದಲ್ಲಿ ಸೂಕ್ತಸ್ಥಾನದಲ್ಲಿ ವಿರಾಜಮಾನವಾಗಿಸುವ ಪ್ರಯತ್ನದಲ್ಲಿ ನಿಮ್ಮ ನೆರವು-ಸಹಕಾರಗಳು ಅತ್ಯಗತ್ಯವಾಗಿದೆ" ಎಂದು ಪಟೇಲರು ರಾಜಮಹಾರಾಜರುಗಳ ದೇಶಭಕ್ತಿಗೇ ಗುರಿ ಇಟ್ಟಿದ್ದರು.

ಜುಲೈ 9ರಂದು ನೆಹರೂ ಮತ್ತು ಪಟೇಲ್ ವೈಸ್‌ರಾಯ್ ಅವರನ್ನು ಭೇಟಿಮಾಡಿ "ಭಾರತವನ್ನು ತತ್‌ಕ್ಷಣದಲ್ಲಿ ಕಾಡುತ್ತಿರುವ ರಾಜಮಹಾರಾಜರುಗಳೊಂದಿಗಿನ ಬಾಂಧವ್ಯದ ಸಮಸ್ಯೆ ಬಗೆಹರಿಸುವುದರಲ್ಲಿ ಭಾರತಕ್ಕೆ ಸಹಾಯಮಾಡಲು ನೀವು ಏನೆಲ್ಲ ಮಾಡಲಿದ್ದೀರಿ" ಎಂದು ಕೇಳಿದರು. ಇದನ್ನು ಆದ್ಯತೆಯ ವಿಷಯವಾಗಿ ಪರಿಗಣಿಸಿ, ಪರಿಶೀಲಿಸಲು ಮೌಂಟ್‌ಬ್ಯಾಟನ್ ಸಮ್ಮತಿಸಿದರು. ಅನಂತರ ಮೌಂಟ್ ಬ್ಯಾಟನ್‌ರನ್ನು ಭೇಟಿ ಮಾಡಲು ಗಾಂಧೀಜಿ ಆಗಮಿಸಿದರು. "ಆಗಸ್ಟ್ 15ರಂದು ಭಾರತ ತ್ಯಜಿಸುವಾಗ, ಸಂಸ್ಥಾನಗಳು ತಾವು ಸ್ವತಂತ್ರರೆಂದು ಘೋಷಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವಂಥ, ಪ್ರಚೋದಿಸುವಂಥ ವಿಘಟನೆಯ ವಿಚ್ಛಿದ್ರಕಾರದ ಪರಂಪರೆಯೊಂದನ್ನು ಬಿಟ್ಟು ಹೋಗಬೇಡಿ" ಎಂದು ಮಹಾತ್ಮ ತಮ್ಮನ್ನು ಕೇಳಿಕೊಂಡರೆಂದು ವೈಸ್‌ರಾಯ್ ದಾಖಲು ಮಾಡಿದ್ದಾರೆ.

ಸಂಸ್ಥಾನಗಳ ವಿಷಯದಲ್ಲಿ ತಮ್ಮ ಪರ ನಿಲ್ಲುವಂತೆ ಕಾಂಗ್ರೆಸ್ಸಿನ ತ್ರಿಮೂರ್ತಿಗಳು ಮೌಂಟ್ ಬ್ಯಾಟನ್ನರಿಗೆ ಒತ್ತಾಯ ಮಾಡಿದ್ದರು. ಮೌಂಟ್ ಬ್ಯಾಟನ್ನರು, ಜುಲೈ 25ರಂದು ರಾಜಮಹಾರಾಜರುಗಳ ಮಂಡಳಿಯಲ್ಲಿ ಮಾಡಿದ ಭಾಷಣದಲ್ಲಿ ಈ ಕೆಲಸವನ್ನು ತುಂಬ ಪರಿಣಾಮಕಾರಿಯಾಗಿ ನಿರ್ವಹಿಸಿದ್ದರು. ಎದೆಯ ಮೇಲೆ ಮಿಲಿಟರಿ ಪದಕಗಳನ್ನು ಭವ್ಯವಾಗಿ ಧರಿಸಿ ನಿಂತಿದ್ದ ಮೌಂಟ್ ಬ್ಯಾಟನ್, ಆಡಂಬರ-ವೈಭವಗಳ ಆಚಾರ-ಕಾರ್ಯಾಚರಣೆಗಳ ರಾಜಮಹಾರಾಜರುಗಳನ್ನು ಚಕಿತಗೊಳಿಸುವ ಮಿಲಿಟರಿ ಠೀವಿಯಲ್ಲಿ ಭಾಷಣಕ್ಕೆ ಜಬರ್ದಸ್ತಾಗಿ ನಿಂತಿದ್ದರು.

"ಭಾರತದ ಸ್ವಾತಂತ್ರ್ಯ ಕಾಯಿದೆಯನ್ವಯ ಸಂಸ್ಥಾನಗಳ ರಾಜಮಹಾರಾಜರುಗಳು ಮಹಾರಾಣಿಯ ಹಂಗಿನಿಂದ ಮುಕ್ತರಾಗಿದ್ದಾರೆ" ಎಂದು ಹೇಳುವ ಮೂಲಕ ಭಾಷಣ ಆರಂಭಿಸಿದ ಮೌಂಟ್‌ಬ್ಯಾಟನ್, "ರಾಜಮಹಾರಾಜರುಗಳು ತಾಂತ್ರಿಕವಾಗಿ ಈಗ ಸ್ವತಂತ್ರರು, ಪರೋಕ್ಷವಾಗಿ ಹೇಳುವುದಾದರೆ ಅವರೀಗ ಚುಕ್ಕಾಣಿರಹಿತರು. ಹಳೆಯ ಕೊಂಡಿಗಳು ಕಡಿದು ಹೋಗಿವೆ. ಇದರ ಜಾಗಕ್ಕೆ ಹೊಸ ಸಂಪರ್ಕ ತಂತುಗಳು ಕೂಡಿಕೊಳ್ಳದೇ ಹೋದಲ್ಲಿ ಅಸ್ತವ್ಯಸ್ತತೆ, ಅವ್ಯವಸ್ಥೆ, ಗೊಂದಲಗಳ ಪರಿಸ್ಥಿತಿ ನಿರ್ಮಾಣವಾಗ

ಬಹುದು" ಎಂದು ತಿಳಿಸಿದರು. ಅಷ್ಟೇ ಅಲ್ಲದೆ, "ನಿಮ್ಮ ನೆರೆಯ ಹೊಸ ರಾಷ್ಟ್ರದ ಸರ್ಕಾರದಿಂದ ಬಿಡಿಸಿಕೊಂಡು ನೀವು ಓಡಿಹೋಗಲಾಗದು, ಯಾರ ಕಲ್ಯಾಣಕ್ಕೆ ನೀವು ಹೊಣೆಗಾರರಾಗಿದ್ದೀರೋ ಆ ಪ್ರಜೆಗಳಿಂದ ಹೇಗೆ ದೂರ ಓಡಿಹೋಗಲಾಗದೋ ಹಾಗೆಯೇ ಹೊಸ ರಾಷ್ಟ್ರದಿಂದ ನೀವು ಪಲಾಯನ ಗೈಯ್ಯಲಾಗದು" ಎಂದು ಕ್ರೂರವಾಗಿಯೇ ಎಚ್ಚರಿಕೆ ನೀಡಿದರು.

"ವಿಲೀನ ದಸ್ತಾವೇಜಿನನ್ವಯ ರಾಜಮಹಾರಾಜರುಗಳನ್ನು ರಕ್ಷಣಾ ಇಲಾಖೆಯನ್ನು ಬಿಟ್ಟುಕೊಡುವಂತೆ ಕೇಳಲಾಗುತ್ತದೆ. ಏನೇ ಇರಲಿ ಆಧುನಿಕ ಶಸ್ತ್ರಾಸ್ತ್ರಗಳ ಸರಬರಾಜಿನಿಂದ ಅವರು ವಂಚಿತರಾಗುವರು. ವಿದೇಶಾಂಗ ಇಲಾಖೆಯೂ ಅವರ ಕೈ ತಪ್ಪುವುದು, ಇದರಿಂದಾಗಿ ರಾಜಮಹಾರಾಜರುಗಳು ವಿದೇಶಗಳಲ್ಲಿ ತಮ್ಮ ರಾಯಭಾರಿಗಳನ್ನಾಗಲೀ, ಮಂತ್ರಿಗಳನ್ನಾಗಲೀ, ರಾಯಭಾರ ಪ್ರತಿನಿಧಿಗಳನ್ನಾಗಲೀ ಇಟ್ಟುಕೊಳ್ಳಲು ಅವಕಾಶವಿರುವುದಿಲ್ಲ. ಸಂವಹನ-ಸಂಪರ್ಕ ಇಲಾಖೆಗಳನ್ನೂ ಬಿಟ್ಟು ಕೊಡಬೇಕಾಗುತ್ತದೆ. ಸಂವಹನ ಸಂಪರ್ಕ ಇಡೀ ಉಪಖಂಡದ ಜೀವನಾಡಿ ಇದ್ದಂತೆ. ಇದೂ ಕೈ ತಪ್ಪುತ್ತದೆ" ಎಂದು ಮೌಂಟ್ ಬ್ಯಾಟನ್ ತಮ್ಮ ಭಾಷಣದಲ್ಲಿ ಖಚಿತಪಡಿಸಿದರು. ಕಾಂಗ್ರೆಸ್, ಆಂತರಿಕ ಅಧಿಕಾರವನ್ನು ಮಾತ್ರ ರಾಜರುಗಳಿಗೆ ನೀಡಲಿದೆ, ಬಾಕಿಯಂತೆ ತಾವು ಸ್ವತಂತ್ರವಾಗಿ ನಿರ್ವಹಿಸಲಾಗದ ಎಲ್ಲ ಬಾಬುಗಳನ್ನೂ ರಾಜರುಗಳಿಂದ ಕಸಿದುಕೊಳ್ಳಲಿದೆ ಎಂದು ಮೌಂಟ್ ಬ್ಯಾಟನ್ ತಿಳಿಸಿದರು.

ರಾಜಮಹಾರಾಜರುಗಳ ಮಂಡಳಿಯಲ್ಲಿ ಮೌಂಟ್ ಬ್ಯಾಟನ್ ಮಾಡಿದ ಭಾಷಣ ಶಕ್ತಿಯುಕ್ತಿಗಳ ಪ್ರದರ್ಶನವೇ ಆಗಿತ್ತು. ನನ್ನ ಅಭಿಪ್ರಾಯದಲ್ಲಿ ಭಾರತದಲ್ಲಿ ಮೌಂಟ್ ಬ್ಯಾಟನ್ನರು ಮಾಡಿದ ಕೆಲಸಗಳಲ್ಲೆಲ್ಲ ಅತಿ ಮಹತ್ವದ ಕೆಲಸ ಇದಾಗಿದೆ. ಬ್ರಿಟಿಷರು ಇನ್ನು ಮುಂದೆ ತಮಗೆ ರಕ್ಷಣೆ ನೀಡುವುದಿಲ್ಲ ಅಥವಾ ಆಶ್ರಯದಾತರೂ ಆಗಿರುವುದಿಲ್ಲ, ಸ್ವಾತಂತ್ರ್ಯವೆನ್ನುವುದು ಇನ್ನು ತಮ್ಮ ಪಾಲಿಗೆ ಒಂದು ಮರೀಚಿಕೆಯಷ್ಟೆ ಎಂಬುದನ್ನು ಮೌಂಟ್ ಬ್ಯಾಟನ್ನರ ಭಾಷಣ ರಾಜಮಹಾರಾಜರುಗಳಿಗೆ ಸ್ಪಷ್ಟವಾಗಿ ಮನವರಿಕೆ ಮಾಡಿಕೊಟ್ಟಿತ್ತು.

ಮೌಂಟ್ ಬ್ಯಾಟನ್ನರು ತಮ್ಮ ಭಾಷಣಕ್ಕೆ ಪೀಠಿಕೆಯಾಗಿ ಪ್ರಮುಖರಾದ ಮಹಾರಾಜರುಗಳಿಗೆ ಪತ್ರಗಳನ್ನು ಬರೆದಿದ್ದರು. ಇದಾದ ನಂತರ ವಿಲೀನದ ದಸ್ತಾವೇಜಿಗೆ ಸಹಿಹಾಕುವಂತೆ ಒತ್ತಡ ಹೇರಲು ಶುರುಮಾಡಿದರು. ಆಗಸ್ಟ್ 15ರೊಳಗೆ ಸಹಿಹಾಕಿದಲ್ಲಿ, ಕಾಂಗ್ರೆಸ್‌ನೊಂದಿಗೆ ಗೌರವಯುತವಾದ ಒಪ್ಪಂದಕ್ಕೆ ಬರುವುದರಲ್ಲಿ ಅವರಿಗೆ ಸಹಾಯಮಾಡಲು ತಮಗೆ ಸಾಧ್ಯವಾದೀತೆಂದು ತಿಳಿಸಿದರು. ಹಾಗೆ ಮಾಡದಿದ್ದಲ್ಲಿ ಸ್ವಾತಂತ್ರ್ಯ ಘೋಷಣೆ ನಂತರ ಸ್ಫೋಟಕ ಪರಿಸ್ಥಿತಿಯನ್ನು ಎದುರಿಸಬೇಕಾದೀತೆಂದೂ ಆಗ ರಾಷ್ಟ್ರೀಯ ಶಕ್ತಿಗಳ ತೀವ್ರ ಕ್ರೋಧ ಅವರ ವಿರುದ್ಧ ತಿರುಗಿ ಬೀಳುವುದೆಂದೂ ಮೌಂಟ್ ಬ್ಯಾಟನ್ ಎಚ್ಚರಿಸಿದರು.

ಆಗಸ್ಟ್ 15ರ ವೇಳೆಗೆ ಅಕ್ಷರಶಃ ಎಲ್ಲ ಸಂಸ್ಥಾನಗಳೂ ವಿಲೀನ ಪತ್ರಕ್ಕೆ ಸಹಿಹಾಕಿದವು. ಏತನ್ಮಧ್ಯೆ ಬ್ರಿಟಿಷರು ನಿರ್ಗಮಿಸಿದರು. ಕಾಂಗ್ರೆಸ್ ಕೊಟ್ಟ ಮಾತಿಗೆ ತಪ್ಪಿತು. ಮೂರು

ನಿರ್ದಿಷ್ಟ ವಿಷಯಗಳು ಹೊರತಾಗಿ ಉಳಿದ ವಿಷಯಗಳಲ್ಲಿ ರಾಜಮಹಾರಾಜರುಗಳ ಸ್ವಾಯತ್ತತೆಯನ್ನು ಚಾಚೂ ತಪ್ಪದೆ ಗೌರವಿಸುವುದಾಗಿ ಹೇಳಿದ್ದ ಕಾಂಗ್ರೆಸ್ ಈ ವಚನದಿಂದ ಹಿಂದೆ ಸರಿಯಿತು. ಪ್ರಜಾಮಂಡಳಗಳು ಮತ್ತೆ ಕ್ರಿಯಾಶೀಲವಾದವು. ರಾಜ್ಯದಲ್ಲಿ ಸಂಪೂರ್ಣ ಪ್ರಜಾಸತ್ತಾತ್ಮಕ ಸರ್ಕಾರಕ್ಕೆ ಒತ್ತಾಯಿಸಿ ಮೈಸೂರಿನಲ್ಲಿ ಚಳವಳಿ ಪ್ರಾರಂಭಿಸಲಾಯಿತು. ಇಲ್ಲಿ ಮೂರು ಸಾವಿರ ಜನ ಚಳವಳಿಗಾರರು ಬಂಧಿತರಾದರು. ಕಾಥೇವಾಡ, ಒರಿಸ್ಸಾ ಮೊದಲಾದ ಕಡೆಗಳಲ್ಲಿ ಪ್ರತಿಭಟನಕಾರರು ಸರ್ಕಾರಿ ಕಛೇರಿಗಳು, ನ್ಯಾಯಾಲಯಗಳು, ಬಂದೀಖಾನೆಗಳನ್ನು ವಶಕ್ಕೆ ತೆಗೆದುಕೊಂಡರು.

ರಾಜಮಹಾರಾಜರುಗಳನ್ನು ಬಲೆಗೆ ಕೆಡವಿಕೊಳ್ಳಲು ವಲ್ಲಭಭಾಯಿ ಪಟೇಲ್ ಮತ್ತು ಕಾಂಗ್ರೆಸ್ ಜನತಾ ಚಳವಳಿಯ ಬೆದರಿಕೆಯನ್ನು ದಾಳವಾಗಿ ಉಪಯೋಗಿಸಿಕೊಂಡವು. ಸಂಸ್ಥಾನಗಳ ಸೇರ್ಪಡೆಯಾಗಿತ್ತು, ಈಗೇನಿದ್ದರೂ ಸಂಸ್ಥಾನಗಳು ಸ್ವತಂತ್ರ ಅಸ್ತಿತ್ವವನ್ನು ವಿಸರ್ಜಿಸಿ ಭಾರತ ಒಕ್ಕೂಟದೊಂದಿಗೆ ವಿಲೀನಗೊಳ್ಳಬೇಕಾಗಿತ್ತು. ಈ ರೀತಿ ವಿಧ್ಯುಕ್ತವಾಗಿ ಮಾಡುವಂತೆ ರಾಜಮಹಾರಾಜರುಗಳಿಗೆ ತಿಳಿಸಲಾಯಿತು. ಇದಕ್ಕೆ ಪ್ರತಿಯಾಗಿ ಅವರಿಗೆ ತಮ್ಮ ಬಿರುದು ಬಾವಲಿಗಳನ್ನು ಉಳಿಸಿಕೊಳ್ಳಲು ಅನುಮತಿ ನೀಡಲಾಗುವುದು ಹಾಗೂ ಶಾಶ್ವತವಾಗಿ ವಾರ್ಷಿಕ ರಾಜಧನ ನೀಡಲಾಗುವುದೆಂದೂ ತಿಳಿಸಲಾಯಿತು. ಇದರಂತೆ ನಡೆದುಕೊಳ್ಳದೇ ಹೋದಲ್ಲಿ ರಾಜಮಹಾರಾಜರುಗಳು ತಮ್ಮ ಪ್ರಜೆಗಳ ಅನಿಯಂತ್ರಿತ ಕ್ರೋಧಕ್ಕೆ ಗುರಿಯಾಗಬೇಕಾದೀತು, ಅದೂ ಸ್ವಾತಂತ್ರ್ಯ ಬಂದ ನಂತರ ಪ್ರಕಟಗೊಳ್ಳುತ್ತಿರುವ ಅದುಮಿಟ್ಟ ಕೋಪತಾಪಗಳನ್ನು ಎದುರಿಸಬೇಕಾದೀತು ಎಂಬುದನ್ನು ಖಚಿತಪಡಿಸಲಾಯಿತು.

1947ರ ಉತ್ತರಾರ್ಧದಲ್ಲಿ ವಿ.ಪಿ. ಮೆನನ್ ಭಾರತದಾದ್ಯಂತ ಪ್ರವಾಸ ಕೈಗೊಂಡು ಒಬ್ಬರ ನಂತರ ಒಬ್ಬರಂತೆ ರಾಜಮಹಾರಾಜರುಗಳ ಮನ ಒಲಿಸತೊಡಗಿದರು. ಅವರ ಪ್ರವಾಸದ ಪ್ರಗತಿ ಬಗ್ಗೆ ನವದೆಹಲಿಯಲ್ಲಿದ್ದ ನ್ಯೂಯಾರ್ಕ್ ಟೈಮ್ಸ್ ಬಾತ್ಮೀದಾರ ಹೀಗೆ ಬರೆದಿದ್ದಾನೆ:

> *ಅವರ ಪ್ರಗತಿಯನ್ನು ವೃತ್ತಪತ್ರಿಕೆಗಳ ಸುದ್ದಿಗಳ ಸರಮಾಲೆಯ ಮಾನದಂಡದಿಂದಲೇ ಅಳೆದು ನೋಡಬಹುದು. ಸುದ್ದಿಗಳ ವೈಖರಿ ಗಮನಿಸಿ:*
>
> *ಮೊದಲಿಗೆ ಒಂದು ಸಣ್ಣ ಶೀರ್ಷಿಕೆ:*
> *ಭೋಟಾಹಜಾರಿ ಸಂಸ್ಥಾನಕ್ಕೆ ವಿ.ಪಿ. ಮೆನನ್ ಭೇಟಿ;*
>
> *ನಂತರದ್ದು: ಗೌರ್ನರ್ ಜನರಲ್ ಅವರ ನಿತ್ಯದ ಕೋರ್ಟ್ ಸೂಚನಾಪತ್ರದಲ್ಲಿ ಕಾಣಿಸಿಕೊಂಡ ಒಂದು ಸಂಕ್ಷಿಪ್ತ ಸೂಚನೆ: ಭೋಟಾಹಜಾರಿಯ ಘನತೆವೆತ್ತ ಮಹಾರಾಜರು ಆಗಮಿಸಿದ್ದಾರೆ.*
>
> *ಮರುಕ್ಷಣದಲ್ಲೇ ಗೋಚರಿಸುವ ಎಂಟುಕಾಲಂಗಳ ಪ್ರಧಾನ ಶೀರ್ಷಿಕೆ: "ಭೋಟಾ ಹಜಾರಿ ವಿಲೀನ"*

ಇವೆಲ್ಲದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಅದು: ವಿಲೀನಕ್ಕೆ ಪಟೇಲ್ ಮತ್ತು ವಿ.ಪಿ. ಮೆನನ್ ಭೂಮಿಕೆ ಸಿದ್ಧಪಡಿಸಿದ್ದರು. ಮೌಂಟ್ ಬ್ಯಾಟನ್ ಅಂತಿಮ ಸ್ಪರ್ಶ ನೀಡಿದರು. ಕೆಲವೊಮ್ಮೆ ರಾಜಮಹಾರಾಜರ ಪೊಳ್ಳು ಪ್ರತಿಷ್ಠೆ, ಆಡಂಬರಗಳಿಗೆ ರಿಯಾಯಿತಿ ತೋರುವಂತೆ ಸಂದರ್ಶನ ನೀಡಲಾಗುವುದಷ್ಟೆ. ಹಾಗೆ ಮೌಂಟ್ ಬ್ಯಾಟನ್ ರಾಜಮಹಾರಾಜರುಗಳ ಮಂಡಳಿಯ ಸಂದರ್ಶನ ಕಾಲದ ಭಾಷಣದಲ್ಲಿ ಅಂತಿಮ ರೂಪುರೇಷೆ ನೀಡಿದರು. ಗೌರ್ನರ್ ಜನರಲ್ ಪ್ರಮುಖ ಜಹಗೀರುಗಳು, ಪಾಳೆಯ ಪಟ್ಟುಗಳಿಗೂ ಭೇಟಿ ನೀಡಿದರು. ಭೇಟಿಕಾಲದಲ್ಲಿ, ಭಾರತದಲ್ಲಿ ಸೇರಿಕೊಳ್ಳುವ ಅವರ ಮುತ್ಸದ್ದಿತನದ ನಿರ್ಧಾರವನ್ನು ಪ್ರಶಂಸಿಸಿ ಮಾತನಾಡಿದರು.

ರಾಜಮಹಾರಾಜರುಗಳ ಸಂಸ್ಥಾನವನ್ನು ಭಾರತದೊಂದಿಗೆ ವಿಲೀನಗೊಳಿಸುವುದರಲ್ಲಿ ಮೌಂಟ್ ಬ್ಯಾಟನ್ನರದು ಸಾಂಕೇತಿಕ ಪಾತ್ರವಾದರೆ, ವಿ.ಪಿ. ಮೆನನ್ ಅದನ್ನು ವಾಸ್ತವವಾಗಿ ಕಾರ್ಯತಃ ಆಗುಮಾಡಿಸಿದರು. ರಾಜಮಹಾರಾಜರುಗಳೊಡನೆ ತಾವು ನಡೆಸಿದ ಯಾತನಾಮಯ ಸಂಧಾನದ ವಿವರಗಳನ್ನು ಮೆನನ್ ತಮ್ಮ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಲೇಣೆ-ದೇಣೆಯ ಪ್ರಕ್ರಿಯೆಯಲ್ಲಿ ಅಹಂ ಮತ್ತು ಆತ್ಮಾಭಿಮಾನಗಳನ್ನು ಸುಪ್ರೀತಗೊಳಿಸುವ ಕೆಲಸವೂ ಸೇರಿತ್ತು. ಒಬ್ಬ ರಾಜ ತಾನು ಶ್ರೀರಾಮನ ವಂಶಜನೆಂದೂ, ಇನ್ನೊಬ್ಬ ತಾನು ಶ್ರೀಕೃಷ್ಣನ ವಂಶಜನೆಂದೂ ಹೇಳಿಕೊಂಡಿರುವುದುಂಟು. ಮೂರನೆಯವನಂತೂ ಸಿಖ್ ಗುರುಗಳ ಕೃಪಾಶೀರ್ವಾದಗಳಿಂದ ಕೂಡಿದ ತನ್ನ ವಂಶ ಅಮರವಾದುದೆಂದು ಹೇಳಿಕೊಂಡಿದ್ದಾನೆ.

ಅವರ ಭೂ ಪ್ರದೇಶಕ್ಕೆ ಪ್ರತಿಯಾಗಿ ಪ್ರತಿ ಮಹಾರಾಜರಿಗೂ ರಾಜಧನವನ್ನು ಕೊಡುವುದಾಗಿ ತಿಳಿಸಲಾಯಿತು. ರಾಜಧನದ ಮೊತ್ತವನ್ನು ಸಂಸ್ಥಾನದ ಆದಾಯಕ್ಕನುಗುಣವಾಗಿ ನಿರ್ಧರಿಸಬೇಕಾಗಿತ್ತು. ವಿಸ್ತೀರ್ಣದಲ್ಲಿ ದೊಡ್ಡದಾದ ಅಯಕಟ್ಟಿನ ಸಂಸ್ಥಾನಗಳಿಗೆ ಹೆಚ್ಚು ರಾಜಧನ ಕೊಡಬೇಕಾಗಿ ಬಂತು. ರಾಜಧನದ ಮೊತ್ತವನ್ನು ನಿಗದಿಪಡಿಸುವಲ್ಲಿ ರಾಜಮಹಾರಾಜರ ವಂಶದ ಪ್ರಾಚೀನತೆಯನ್ನೂ ಗಣನೆಗೆ ತೆಗೆದುಕೊಳ್ಳಬೇಕಾಯಿತು; ಅವರ ಸುತ್ತ ಇದ್ದ ಧಾರ್ಮಿಕ ಪ್ರಭಾವಳಿ, ಸಂಪ್ರದಾಯ ಪರಂಪರೆಗಳನ್ನು ಪರಿಗಣಿಸಬೇಕಾಯಿತು. ವಾರ್ಷಿಕ ರಾಜಧನವಲ್ಲದೆ, ರಾಜಮಹಾರಾಜರುಗಳಿಗೆ ಅವರ ಅರಮನೆಗಳು, ಅವರ ಖಾಸಗಿ ಆಸ್ತಿಗಳು ಮತ್ತು ಬಿರುದು ಬಾವಲಿಗಳನ್ನೂ ಬಿಟ್ಟು ಕೊಡಲಾಯಿತು. ಒಪ್ಪಂದದನ್ವಯ ಭೋಟಾ ಹಾಜರಿಯ ಮಹಾರಾಜ ವಿಲೀನದ ನಂತರವೂ ತಾನು ಮಹಾರಾಜ ಎಂದು ಹೇಳಿಕೊಳ್ಳಬಹುದು, ಈ ಬಿರುದನ್ನು ತನ್ನ ಮಗನಿಗೂ ವರ್ಗಾಯಿಸಬಹುದು.

ಮಹಾರಾಜರುಗಳಲ್ಲಿ ಮತ್ತಷ್ಟು ಭರವಸೆ ಮೂಡಿಸುವ ಉದ್ದೇಶದಿಂದ ಪಟೇಲರು ರಾಜಧನ ಪಾವತಿ ಸಂಬಂಧವಾಗಿ ಸಂವಿಧಾನಾತ್ಮಕ ಖಾತರಿ ಕಲಮನ್ನು ಒಡಂಬಡಿಕೆಯಲ್ಲಿ ಸೇರಿಸಲು ಸಿದ್ಧರಿದ್ದರು. ಆದರೆ ಸಂಸ್ಥಾನಗಳ ವಿಲೀನದಿಂದ ಆಗುವ ಲಾಭಕ್ಕೆ ಹೋಲಿಸಿದರೆ ರಾಜಧನದ ಮೊತ್ತ ಅಲ್ಪವೆಂದು ವಿ.ಪಿ. ಮೆನನ್ ತೋರಿಸಿಕೊಟ್ಟರು. ಸಂಸ್ಥಾನಗಳ

ವಿಲೀನದಿಂದ ಭಾರತದಲ್ಲಿ ರಾಜಕೀಯ ಬಲವರ್ಧನೆ ಜೊತೆಗೆ ಆರ್ಥಿಕವಾಗಿ ನಿಜವಾಗಿ ಸಂಪತ್ತಿನ ಲೂಟಿಯೇ ಆಗುತ್ತಿತ್ತು. ಮೆನನ್ ಅವರ ಲೆಕ್ಕಾಚಾರದಂತೆ, ಸರ್ಕಾರ ಮಹಾರಾಜರುಗಳಿಗೆ 150 ದಶಲಕ್ಷ ರೂಪಾಯಿ ಪಾವತಿಸಿದರೆ, ಅವರ ಸಂಸ್ಥಾನಗಳಿಂದ ಹತ್ತು ವರ್ಷಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ಬರಲಿರುವ ಆದಾಯ ಕನಿಷ್ಠ ಪಕ್ಷ ಇದರ ಹತ್ತು ಪಟ್ಟು ಹೆಚ್ಚಾಗಲಿತ್ತು.

ಸಂಸ್ಥಾನಗಳ ಗಡಿಗಳನ್ನು ಸ್ವಾಧೀನಪಡಿಸಿಕೊಂಡ ನಂತರ ಆಡಳಿತಾತ್ಮಕ ಸಮನ್ವಯ ಸಾಧಿಸುವುದು ಇಷ್ಟೊಂದು ಕಷ್ಟದ ಕೆಲಸವಾಗಿರಲಿಲ್ಲ. ಬಹುತೇಕ ಸಂಸ್ಥಾನಗಳಲ್ಲಿ ಭೂ ಕಂದಾಯ ಮತ್ತು ನ್ಯಾಯಾಂಗ ವ್ಯವಸ್ಥೆಗಳು ತುಂಬಾ ಪ್ರಾಚೀನಕಾಲದ ರೀತಿಯಲ್ಲಿದ್ದವು. ಹಾಗೂ ರಾಜ್ಯವ್ಯವಸ್ಥೆಯಲ್ಲಿ ಯಾವುದೇ ಬಗೆಯ ಜನತಾ ಪ್ರಾತಿನಿಧ್ಯ ಇರಲಿಲ್ಲ. ಹಳೆಯ ವ್ಯವಸ್ಥೆಯ ಜಾಗದಲ್ಲಿ ಹೊಸವ್ಯವಸ್ಥೆ ರೂಪಿಸಲು ರಾಜ್ಯಗಳ ಇಲಾಖೆ ಬ್ರಿಟಿಷರ ಭಾರತದಲ್ಲಿ ತರಬೇತಿ ಪಡೆದಿದ್ದ ಅಧಿಕಾರಿಗಳನ್ನು ನೇಮಿಸಿತು. ಪೂರ್ಣಪ್ರಮಾಣದ ಚುನಾವಣೆಗಳನ್ನು ನಡೆಸುವುದಕ್ಕೆ ಪೂರ್ವಭಾವಿಯಾಗಿ ಹಂಗಾಮಿ ಮಂತ್ರಿಮಂಡಲಗಳ ಅಧಿಕಾರ ಸ್ವೀಕಾರಕ್ಕೂ ವ್ಯವಸ್ಥೆ ಮಾಡಿತು.

ರಾಜಮಹಾರಾಜರುಗಳಲ್ಲಿ ಕೆಲವರನ್ನು ಸೆಳೆದುಕೊಂಡು, ಉಳಿದವರು ಚಡಪಡಿಸುವಂತೆ ಮಾಡುವುದರಲ್ಲಿ ಪಟೇಲ್ ಮತ್ತು ಮೆನನ್ ಬ್ರಿಟಿಷರ 'ಒಡೆದು ಆಳುವ' ನೀತಿಯನ್ನು ಒಂದು ತೂಕ ಹೆಚ್ಚಾಗಿಯೇ ಅನುಸರಿಸಿದರು. ಅವರು ರಾಜಮಹಾರಾಜರುಗಳ ಬಾಲಿಶ ಸ್ವಪ್ರತಿಷ್ಠೆ, ಒಣಜಂಬಗಳನ್ನು ಚೆನ್ನಾಗಿಯೇ ಉಪಯೋಗಿಸಿಕೊಂಡರು. ಬಿರುದು ಬಾವಲಿಗಳನ್ನು ಮುಂದುವರಿಸಲು ಅವಕಾಶ ಮಾಡಿಕೊಟ್ಟರು. ಸಾಲದೆಂಬಂತೆ ಕೆಲವರಿಗೆ ಹೊಸ ಬಿರುದು ಪದವಿಗಳನ್ನೂ ನೀಡಲಾಯಿತು. (ಹೀಗೆ ಅನೇಕ ಮಂದಿ ಮಹಾರಾಜರುಗಳನ್ನು ಪ್ರಾಂತ್ಯಗಳ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಯಿತು). ಆದರೆ, ಹದಿನೆಂಟನೇ ಶತಮಾನದ ಬ್ರಿಟಿಷರಂತೆ ಇವರಿಬ್ಬರೂ ಐಹಿಕ ಲಾಭಗಳತ್ತ ದೃಢವಾಗಿ ತಮ್ಮ ದೃಷ್ಟಿ ನೆಟ್ಟಿದ್ದರು. ಪಟೇಲರು ರಾಜ್ಯಗಳ ಸಚಿವಾಲಯಕ್ಕೆ ಸ್ಪಷ್ಟವಾಗಿ ಸೂಚಿಸಿದ್ದರು: "ನಮಗೆ ಅವರ ಹೆಣ್ಣುಮಕ್ಕಳ ಒಡವೆ, ಆಭರಣಗಳು ಬೇಕಾಗಿಲ್ಲ. ನಮಗೆ ಬೇಕಾಗಿರುವುದು ಅವರ ಭೂಮಿ."

ಕೇವಲ ಎರಡು ವರ್ಷಗಳ ಅವಧಿಯಲ್ಲಿ 500 ಸ್ವಾಯತ್ತ ಸಂಸ್ಥಾನಗಳನ್ನೂ, ಕೆಲವೊಂದು ಪುರಾತನ ಜಹಗೀರು-ಪಾಳೆಯ ಪಟ್ಟುಗಳನ್ನೂ ವಿಸರ್ಜಿಸಿ ಭಾರತದ ಹೊಸ ಆಡಳಿತದ ಹದಿನಾಲ್ಕು ಘಟಕಗಳನ್ನು ರಚಿಸಲಾಯಿತು. ಯಾವುದೇ ಮಾನದಂಡದಿಂದಲೂ ಇದೊಂದು ಅದ್ಭುತ ಸಾಧನೆಯೇ ಸರಿ. ಕೇವಲ ಸಣ್ಣ ಪುಟ್ಟ ಆಸಕ್ತಿಯಿಂದಲ್ಲ, ವಿವೇಕ, ದೂರದೃಷ್ಟಿ ಮತ್ತು ಶ್ರಮದ ದುಡಿಮೆ ಇವುಗಳಿಂದ ಇದು ಸಾಧ್ಯವಾಯಿತು.

IV

ವಲ್ಲಭಭಾಯಿ ಪಟೇಲರು ಮೊಟ್ಟ ಮೊದಲಿಗೆ ಮೌಂಟ್ ಬ್ಯಾಟನ್ನರೊಂದಿಗೆ ಸಂಸ್ಥಾನಗಳ ಸಮಸ್ಯೆಯನ್ನು ಚರ್ಚಿಸಿದಾಗ ಅವರು ಸ್ವಾತಂತ್ರ್ಯ ದಿನದ ವೇಳೆಗೆ ಒಂದು ಕುಕ್ಕೆ ಭರ್ತಿ ಸೇಬಿನ ಹಣ್ಣುಗಳನ್ನು ತಂದುಕೊಡುವಂತೆ ಕೇಳಿದ್ದರು. ಕುಕ್ಕೆಯಲ್ಲಿ ಸಂಪೂರ್ಣ 565 ಫಲಗಳ ಬದಲು 560 ಇದ್ದರೆ ಪಟೇಲರಿಗೆ ತೃಪ್ತಿಯಾದೀತೆ ಎಂದು ಮೌಂಟ್ ಬ್ಯಾಟನ್ ಅಚ್ಚರಿಪಟ್ಟಿದ್ದರು. ಕಾಂಗ್ರೆಸ್ಸಿನ ಉಕ್ಕಿನ ಮನುಷ್ಯ ತಮ್ಮ ಒಪ್ಪಿಗೆ ಸೂಚಿಸಿದ್ದರು. ಕೊನೆಯಲ್ಲಿ ಆದದ್ದೆಂದರೆ ಆಗಸ್ಟ್ 15ಕ್ಕೆ ಮುಂಚೆ ಕೇವಲ ಮೂರು ಸಂಸ್ಥಾನಗಳು ವಿಲೀನಕ್ಕೆ ಅಡಚಣೆಯುಂಟು ಮಾಡಿದವು. 15ರ ನಂತರ ಇನ್ನು ಮೂರು ಸಂಸ್ಥಾನಗಳು ಅಡ್ಡಿ ಆತಂಕ ಸೃಷ್ಟಿಸಿದವು.

ಬ್ರಿಟಿಷರ ಉತ್ತರಾಧಿಕಾರಿಯ ಪರಮೋಚ್ಚ ಅಧಿಕಾರದ ಗದ್ದುಗೆಯೇರುವ ಕಾಂಗ್ರೆಸ್ಸಿನ ಹಕ್ಕನ್ನು ಮೊದಲು ಪ್ರಶ್ನಿಸಿದ್ದು ತಿರುವಾಂಕೂರು ಮಹಾರಾಜರು. ತಿರುವಾಂಕೂರು ಸಂಸ್ಥಾನ ಆಯಕಟ್ಟಿನ ಸ್ಥಾನದಲ್ಲಿದ್ದು ಉಪಖಂಡದ ದಕ್ಷಿಣದ ತುತ್ತತುದಿಯಲ್ಲಿತ್ತು. ಭಾರತದಲ್ಲೇ ಅತಿ ಹೆಚ್ಚು ಪ್ರಮಾಣದಲ್ಲಿ ಉನ್ನತ ಶಿಕ್ಷಣ ಪಡೆದವರು ಇಲ್ಲಿದ್ದರು. ಇಲ್ಲಿ ಕಡಲತಡಿಯ ವಾಣಿಜ್ಯ ವ್ಯಾಪಾರಗಳು ಭರಾಟೆಯಿಂದ ನಡೆದು ಅಭಿವೃದ್ಧಿ ಸಾಗಿತ್ತು. ಅಣುಶಕ್ತಿ ಹಾಗೂ ಪರಮಾಣು ಬಾಂಬುಗಳ ಉತ್ಪಾದನೆಗೆ ಅಗತ್ಯವಾದ ಥೋರಿಯಂ ಖನಿಜನಿಕ್ಷೇಪವನ್ನು ಇಲ್ಲಿ ಅದೇ ತಾನೇ ಶೋಧಿಸಲಾಗಿತ್ತು. ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ತಿರುವಾಂಕೂರಿನ ದಿವಾನರು. ಕುಶಾಗ್ರಮತಿಯೂ, ಮಹತ್ವಾಕಾಂಕ್ಷಿಯೂ ಆಗಿದ್ದ ವಕೀಲ ಅಯ್ಯರ್ ಹದಿನಾರು ವರ್ಷಗಳಿಂದ ದಿವಾನರ ಹುದ್ದೆಯಲ್ಲಿದ್ದರು. ಅಯ್ಯರ್ ತಿರುವಾಂಕೂರು ಸಂಸ್ಥಾನದ ನಿಜವಾದ ಆಳರಸರಾಗಿದ್ದು ಮಹಾರಾಜ ಮತ್ತು ಮಹಾರಾಣಿ ಅವರ ಕೈಗೊಂಬೆಗಳಾಗಿದ್ದರು.

1946ರ ಫೆಬ್ರುವರಿಯಲ್ಲೇ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರು, ಬ್ರಿಟಿಷರು ಭಾರತ ತ್ಯಜಿಸಿದ ಕೂಡಲೇ ತಿರುವಾಂಕೂರು ಸ್ವತಂತ್ರ ರಾಜ್ಯವಾಗುವುದೆಂಬ ತಮ್ಮ ನಂಬಿಕೆಯನ್ನು ಸ್ಪಷ್ಟವಾಗಿ ತಿಳಿಸಿದರು. 1795ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಜೊತೆ ಕರಾರಿಗೆ ಸಹಿಹಾಕಿದಾಗ ಹೇಗೆ ಸ್ವತಂತ್ರ ಸಂಸ್ಥಾನವಾಗಿತ್ತೋ ಹಾಗೇ ಸ್ವತಂತ್ರವಾಗುವುದೆಂದು ಅಯ್ಯರ್ ಗಾಢ ನಂಬಿಕೆಯಾಗಿತ್ತು. 1947ರಲ್ಲಿ ಅವರು ಸರಣಿ ಪತ್ರಿಕಾಗೋಷ್ಠಿಗಳನ್ನು ನಡೆಸಿ ಸ್ವತಂತ್ರವಾಗಿ ಮುಂದುವರಿಯುವ ತಮ್ಮ ಪ್ರಯತ್ನದಲ್ಲಿ ಸಹಕರಿಸುವಂತೆ ತಿರುವಾಂಕೂರು ಪ್ರಜೆಗಳಿಗೆ ಮನವಿ ಮಾಡಿದರು. ತಮ್ಮ ಮಹಾರಾಜರ ಆಳ್ವಿಕೆ ಎಷ್ಟು ಪ್ರಾಚೀನವಾದದ್ದೆಂಬುದನ್ನು ಪ್ರಜೆಗಳಿಗೆ ನೆನಪು ಮಾಡಿದರು. 1741ರಲ್ಲಿ ತಿರುವಾಂಕೂರು ಡಚ್ಚರ ಹಡಗೊಂದನ್ನು ಮುಳುಗಿಸಿದ ವಿಜಯವನ್ನು ಜ್ಞಾಪಿಸಿದರು. (ಇದು, ಐರೋಪ್ಯ ಶಕ್ತಿ ರಾಷ್ಟ್ರಗಳ ವಿರುದ್ಧ ಸಮರದಲ್ಲಿ ಏಷ್ಯಾ ಸಾಧಿಸಿದ ಏಕೈಕ ನೌಕಾ ವಿಜಯವಾಗಿತ್ತು). ಹಳೆಯ ವೈಭವವನ್ನು ನೆನಪು ಮಾಡಿಕೊಡುವ ಈ ಯುಕ್ತಿ, ಸದ್ಯದ ಭಾರತ ರಾಷ್ಟ್ರೀಯತೆಗೆ ಪ್ರತಿಯಾಗಿ ಹೂಡಿದ ತಂತ್ರವೇ ಆಗಿತ್ತು. ಏಕೆಂದರೆ ತಿರುವಾಂಕೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಪ್ರಬಲ ನೆಲೆ ಹೊಂದಿತ್ತು.

ಭಾರತ ಕಮ್ಯುನಿಸ್ಟ್ ಪಕ್ಷವೂ ಪ್ರಬಲವಾಗಿತ್ತು. ಆದಾಗ್ಯೂ ದಿವಾನರು, 1947ರ ಆಗಸ್ಟ್ 15ರ ನಂತರ "ತಿರುವಾಂಕೂರು ಸ್ವತಂತ್ರ ರಾಷ್ಟ್ರವಾಗುವುದೆಂದು" ಪಟ್ಟು ಹಿಡಿದರು. "ಇದಕ್ಕೆ ನಿರ್ದಿಷ್ಟ ಕಾರಣವಾದರೂ ಬೇಕಿಲ್ಲ. ತಿರುವಾಂಕೂರು, ಡೆನ್ಮಾರ್ಕ್, ಸ್ವಿಟ್ಜರ್‌ಲೆಂಡ್ ಮತ್ತು ಸಯಾಮ್‌ಗಳಿಗಿಂತ ಹೀನಸ್ಥಿತಿಯಲ್ಲಿ ಏಕಿರಬೇಕು?" ಎಂದು ಅವರು ಉದ್ಧಟತನದಿಂದಲೇ ಪ್ರಶ್ನಿಸಿದರು.

ತಿರುವಾಂಕೂರಿನ ಸ್ವಾತಂತ್ರ್ಯದ ಪ್ರಯತ್ನವನ್ನು ಮುಹಮದಾಲಿ ಜಿನ್ನಾ ಸ್ವಾಗತಿಸಿದ್ದು ಆಸಕ್ತಿಯ ವಿಷಯ. ಜೂನ್ 20ರಂದು ಜಿನ್ನಾ ಅವರು ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರಿಗೆ ಒಂದು ತಂತಿ ಸಂದೇಶ ಕಳುಹಿಸಿದರು. ಅದರ ಒಕ್ಕಣೆ ಹೀಗಿತ್ತು: "ತಿರುವಾಂಕೂರಿನೊಂದಿಗೆ ಬಾಂಧವ್ಯ ಹೊಂದಲು ಪಾಕಿಸ್ತಾನ ಸಿದ್ಧವಿದೆ. ಇದರಿಂದ ಪರಸ್ಪರ ಲಾಭವಾಗುವುದು." ಮೂರು ವಾರಗಳ ನಂತರ ದಿವಾನರು ಮದ್ರಾಸ್ ಸರ್ಕಾರಕ್ಕೊಂದು ಪತ್ರ ಬರೆದು, "ತನ್ನ ಸ್ವತಂತ್ರ ಅಸ್ತಿತ್ವ ಕಾಪಾಡಿಕೊಳ್ಳಲು ತಿರುವಾಂಕೂರು ಕ್ರಮಗಳನ್ನು ಕೈಗೊಳ್ಳಲಿದೆ" ಎಂದು ತಿಳಿಸಿದರು. 'ಸ್ವತಂತ್ರ ಸಾರ್ವಭೌಮ ತಿರುವಾಂಕೂರು ರಾಷ್ಟ್ರ' ಭಾರತ-ಪಾಕಿಸ್ತಾನ ಸೇರಿದಂತೆ ಹೊಸ ಪ್ರಭುತ್ವದ ಸರ್ಕಾರಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲೂ ಸಿದ್ಧವಿತ್ತು.

ಜುಲೈ 21ರಂದು ತಿರುವಾಂಕೂರಿನ ದಿವಾನರು ದೆಹಲಿಯಲ್ಲಿ ವೈಸ್‌ರಾಯ್ ಅವರನ್ನು ಭೇಟಿ ಮಾಡಲು ವೇಳೆ ನಿಗದಿಯಾಗಿತ್ತು. ಇದರ ಹಿಂದಿನ ಸಂಜೆ ದಿವಾನರು ಹಿರಿಯ ಬ್ರಿಟಿಷ್ ರಾಜ ತಂತ್ರಜ್ಞರೊಬ್ಬರನ್ನು ಭೇಟಿ ಮಾಡಿ ಬ್ರಿಟಿಷ್ ಸರ್ಕಾರದ ಮಾನ್ಯತೆ ಪಡೆಯುವ ಭರವಸೆ ತಮಗಿದೆಯೆಂದು ತಿಳಿಸಿದ್ದರು. ಭಾರತ ಜವಳಿ ಸರಬರಾಜು ಮಾಡಲು ನಿರಾಕರಿಸಿದರೆ, ಯುನೈಟೆಡ್ ಕಿಂಗ್‌ಡಮ್ ಜವಳಿ ಪೂರೈಕೆಗೆ ಮುಂದಾಗುವುದೆ? ಎಂದು ಅವರು ಈ ರಾಜತಂತ್ರಜ್ಞರನ್ನು ಕೇಳಿದ್ದರು. ಲಂಡನ್ನಿನ ಕೆಲವು ರಾಜಕಾರಣಿಗಳು ಸರ್ ಸಿ.ಪಿ. ಯವರ ಮಹತ್ವಾಕಾಂಕ್ಷೆಗೆ ನೀರೆರೆದಿದ್ದಂತೆ ತೋರುತ್ತದೆ. ಸ್ವತಂತ್ರ ತಿರುವಾಂಕೂರು ಮುಂಬರಲಿರುವ ಶೀತಲ ಸಮರಕ್ಕೆ ಮುಖ್ಯವಾದ ದ್ರವ್ಯವನ್ನು ಒದಗಿಸುವ ಮೂಲವಾಗಿರುತ್ತದೆ ಎಂಬುದು ಈ ರಾಜಕಾರಣಿಗಳ ಲೆಕ್ಕಾಚಾರವಾಗಿತ್ತು. ವಾಸ್ತವ ಸಂಗತಿ ಎಂದರೆ ಈ ವೇಳೆಗಾಗಲೇ ಥೋರಿಯಂ ಖನಿಜ ನಿಕ್ಷೇಪ ಸರಬರಾಜು ಮಾಡುವ ಬಗ್ಗೆ ತಿರುವಾಂಕೂರು ಸರ್ಕಾರ ಯು.ಕೆ. ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಸ್ವತಂತ್ರ ರಾಷ್ಟ್ರವಾಗಬೇಕೆಂಬ ತಿರುವಾಂಕೂರಿನ ಹಕ್ಕೊತ್ತಾಯವನ್ನು ಅಡಗಿಸುವುದಕ್ಕೆ ಸಹಾಯಕವಾಗಬಹುದಾದಂಥ ಹೇಳಿಕೆಗಳನ್ನು ನೀಡದಂತೆ ಲಂಡನ್ನಿನ ಸರಬರಾಜು ಖಾತೆ ಸಚಿವರು ಮಂತ್ರಿಮಂಡಲಕ್ಕೆ-ಸರ್ಕಾರಕ್ಕೆ ಸಲಹೆ ಮಾಡಿದ್ದರು. ತಿರುವಾಂಕೂರು ಸಂಸ್ಥಾನದಲ್ಲಿ ಅಮೂಲ್ಯ ಸಂಪತ್ತಾದ ಥೋರಿಯಂ ಖನಿಜವಿದ್ದು, ಸದ್ಯಕ್ಕಾದರೂ ತಿರುವಾಂಕೂರು ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ಉಳಿಸಿಕೊಳ್ಳುವುದು ಬ್ರಿಟಿಷ್ ದೃಷ್ಟಿಯಿಂದ ಲಾಭಕರ ಎಂಬುದು ಸಚಿವರ ಸಲಹೆಯ ಹಿಂದಿನ ಸ್ಪಷ್ಟ ವಿವರಣೆಯಾಗಿತ್ತು.

21ರಂದು ಸಿ.ಪಿ. ಅವರು ಮೌಂಟ್ ಬ್ಯಾಟನ್ನರನ್ನು ಭೇಟಿ ಮಾಡಿದರು. ಇವರಿಬ್ಬರೂ ಸುಮಾರು ಎರಡು ಗಂಟೆಕಾಲ ಮಾತುಕತೆ ನಡೆಸಿದ್ದರು. ಮಾತುಕತೆ ಕಾಲದಲ್ಲಿ ದಿವಾನರು, ಗಾಂಧಿ-ನೆಹರೂ ಮತ್ತು ಕಾಂಗ್ರೆಸ್ ವಿರುದ್ಧ ತೀಕ್ಷ್ಣ ವಾಗ್ದಾಳಿ ನಡೆಸಿದರು. ಸರ್ ಸಿ.ಪಿ ಯವರ ಭಾವಾವೇಶದ ಮಾತುಗಳು ಮುಗಿದ ನಂತರ ಅವರನ್ನು ಬೀಳ್ಕೊಟ್ಟ ವೈಸ್‌ರಾಯ್ ಅವರು ವಿ.ಪಿ. ಯವರನ್ನು ಸಿ.ಪಿ. ವಿರುದ್ಧ ಕಾರ್ಯಾಚರಣೆಗೆ ಛೂ ಬಿಟ್ಟರು. ಸೇರ್ಪಡೆ ಒಡಂಬಡಿಕೆಗೆ ಸಹಿ ಹಾಕುವಂತೆ ಮೆನನ್ ಸರ್ ಸಿ.ಪಿ. ಅವರಿಗೆ ಆಗ್ರಹಪಡಿಸಿದರು. ಇದಕ್ಕೆ ನಿರಾಕರಿಸಿದ ಸಿ.ಪಿ. ಪ್ರತಿಯಾಗಿ ಭಾರತದೊಂದಿಗೆ ತಾವು ಒಪ್ಪಂದವೊಂದನ್ನು ಮಾಡಿಕೊಳ್ಳಲಿಚ್ಛಿಸುವುದಾಗಿ ತಿಳಿಸಿದರು.

ಸರ್ ಸಿ.ಪಿ. ತಿರುವಾಂಕೂರಿಗೆ ವಾಪಸಾದರು. ಸ್ವಾತಂತ್ರ್ಯದ ಬಗ್ಗೆ ಅವರು ದೃಢಮನಸ್ಕರಾಗಿದ್ದರು. ಆನಂತರ, ಜುಲೈ 27ರಂದು ಸಂಗೀತ ಕಛೇರಿಯೊಂದಕ್ಕೆ ಹೊರಟಿದ್ದ ಸರ್ ಸಿ.ಪಿ. ಅವರ ಮೇಲೆ, ಮಾರ್ಗಮಧ್ಯೆ ಮಿಲಿಟರಿ ನಿಕ್ಕರ್‌ಧಾರಿಯಾದ ವ್ಯಕ್ತಿಯೊಬ್ಬ ಹಲ್ಲೆ ನಡೆಸಿದ. ಮುಖ, ಮೈಮೇಲೆಲ್ಲ ಚೂರಿ ಇರಿತದಿಂದ ಗಾಯಗೊಂಡಿದ್ದ ಅವರನ್ನು ತುರ್ತು ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಯಿತು. (ಹಲ್ಲೆ ನಡೆಸಿದವನು ಕೇರಳ ಸಮಾಜವಾದಿ ಪಕ್ಷದ ಸದಸ್ಯನೆಂದು ನಂತರ ತಿಳಿದು ಬಂತು). ತತ್‌ಕ್ಷಣವೇ ಇದರ ಪರಿಣಾಮ ಗೋಚರಿಸಿತು. ಇದು ಭಾರತದ ದೃಷ್ಟಿಯಿಂದ ಸಂತೋಷದಾಯಕ ಪರಿಣಾಮ. ವೈಸ್‌ರಾಯ್ ಅವರು ಲಂಡನ್ನಿಗೆ ಕಳುಹಿಸಿದ ತಮ್ಮ ಸಾಪ್ತಾಹಿಕ ವರದಿಯಲ್ಲಿ ಈ ರೀತಿ ತಿಳಿಸಿದ್ದರು: "ರಾಜ್ಯಗಳ ಪ್ರಜಾ ಸಮಿತಿಯಲ್ಲಿ ಪ್ರಕೋಪ ಉಂಟಾಯಿತು. ಈ ಕೋಪಾವೇಶಕ್ಕೆ ತಿರುವನಂತಪುರ ತಕ್ಷಣ ಮಣಿಯಿತು." ಆಸ್ಪತ್ರೆಯ ಹಾಸಿಗೆಯಿಂದಲೇ ಸರ್ ಸಿ.ಪಿ. ಅವರು "ರಾಜಿ ಸಂಧಾನದ ಮಾರ್ಗ" ಅನುಸರಿಸುವಂತೆ ಮಹಾರಾಜರಿಗೆ ಸಲಹೆ ಮಾಡಿದರು. ಆದರೆ, ನಿರಂಕುಶ ಪ್ರವೃತ್ತಿಯವರೂ, ಖಂಡಿತವಾದಿಯೂ ಆಗಿದ್ದ ಸರ್ ಸಿ.ಪಿ. ಯವರೇ ಸ್ವತಃ ಈ ಮಾರ್ಗ ತುಳಿಯಲಿಲ್ಲ. ಜುಲೈ 30ರಂದು ಮಹಾರಾಜರು ಭಾರತ ಒಕ್ಕೂಟ ಸೇರುವ ನಿರ್ಧಾರವನ್ನು ತಂತಿ ಮೂಲಕ ವೈಸ್‌ರಾಯ್ ಅವರಿಗೆ ತಿಳಿಸಿದರು.

ವಿಲೀನ ಪ್ರಶ್ನೆ ಬಗ್ಗೆ ಡೋಲಾಯಮಾನವಾಗಿದ್ದ ಎರಡನೆಯ ಸಂಸ್ಥಾನ, ಭೋಪಾಲ್. ಇದು ಮಧ್ಯಭಾಗದಲ್ಲಿದ್ದು ಇಲ್ಲಿ ಹಿಂದೂ ಜನಸಂಖ್ಯೆಯೇ ಹೆಚ್ಚಾಗಿತ್ತು. ಮುಸ್ಲಿಂ ಮಹಾರಾಜನ ಆಳ್ವಿಕೆಗೊಳಪಟ್ಟಿತ್ತು. 1944ರಿಂದೀಚೆಗೆ ಭೋಪಾಲಿನ ನವಾಬರು ಮಹಾರಾಜರುಗಳ ಮಂಡಳಿಯ ಚಾನ್ಸಲರ್ ಆಗಿ ಸೇವೆ ಸಲ್ಲಿಸಿದ್ದರು. ಈತ ಕಾಂಗ್ರೆಸ್ಸಿನ ಕಟ್ಟಾ ವಿರೋಧಿಯಾಗಿದ್ದು ಜಿನ್ನಾ ಮತ್ತು ಮುಸ್ಲಿಂಲೀಗ್‌ನ ನಿಕಟವರ್ತಿಯಾಗಿದ್ದರು. ಯುದ್ಧದ ನಂತರ, ಬ್ರಿಟಿಷರು ಭಾರತಬಿಟ್ಟು ಹೋಗುವ ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿದಾಗ, ಈ ಸಾಧ್ಯತೆ ನವಾಬರಲ್ಲಿ ತೀವ್ರ ನಿರಾಶೆಯನ್ನುಂಟು ಮಾಡಿತು. "ಇದು ಮನುಕುಲದ ಮೇಲೆ ಎರಗಿದ ಹಿಂದೆಂದೂ ಕಾಣದಂಥ ಮಹಾದುರಂತಗಳಲ್ಲಿ ಒಂದೆಂದು" ಈತ ಭಾವಿಸಿದರು. "ನ್ಯಾಯಕ್ಕಾಗಿ ಬ್ರಿಟಿಷರನ್ನೇ ಅವಲಂಬಿಸಿದ್ದ, ನೆಚ್ಚಿಕೊಂಡಿದ್ದ ಸಂಸ್ಥಾನಗಳು, ಮುಸ್ಲಿಮರು

ಹಾಗೂ ಇಡೀ ಜನಸಮುದಾಯ ಈಗ ಹಠಾತ್ತನೆ ಸಂಪೂರ್ಣ ಅಸಹಾಯಕರಾಗಿದ್ದಾರೆ, ಅಸಂಘಟಿತರೂ, ಬೆಂಬಲವಿಲ್ಲದವರೂ ಆಗಿಬಿಟ್ಟಿದ್ದಾರೆ" ಎಂದು ಭಾವಿಸಿದ ನವಾಬರಿಗೆ ಆಗ ಉಳಿದದ್ದು ಒಂದೇ ಮಾರ್ಗ: "ವಿಶ್ವದ ಮುಸ್ಲಿಮರಿಗಾಗಿ ಪ್ರಾಣಾರ್ಪಣ ಮಾಡುವುದು."

ಮೇಲಿನ ಸಾಲುಗಳು 1946ರ ನವೆಂಬರಿನಲ್ಲಿ ವೈಸ್‌ರಾಯ್ ಲಾರ್ಡ್ ವಾವೆಲ್ಲನ ರಾಜಕೀಯ ಸಲಹೆಗಾರನಿಗೆ ನವಾಬ ಬರೆದ ಪತ್ರದಲ್ಲಿನ ಸಾಲುಗಳು. ನಾಲ್ಕು ತಿಂಗಳ ನಂತರ ವಾವೆಲ್ಲನ ಸ್ಥಾನಕ್ಕೆ ಲಾರ್ಡ್ ಮೌಂಟ್ ಬ್ಯಾಟನ್ ಬಂದರು. ಮೌಂಟ್ ಬ್ಯಾಟನ್ ಮತ್ತು ಭೋಪಾಲ್ ನವಾಬ ಚೆಡ್ಡಿ ದೋಸ್ತಿಗಳು, ಪೋಲೋ ಆಟಗಾರ ಮಿತ್ರರು. ಇವರಿಬ್ಬರದು ಇಪ್ಪತ್ತೈದು ವರ್ಷಗಳ ಗೆಳೆತನ. ನವಾಬರು ಭಾರತದಲ್ಲಿನ ತಮ್ಮ ದ್ವಿತೀಯ ಪರಮ ಮಿತ್ರರೆಂದು ಮೌಂಟ್ ಬ್ಯಾಟನ್ ಒಮ್ಮೆ ಹೇಳಿದ್ದುಂಟು. ಆದರೆ ತಾವಿಬ್ಬರೂ ಈಗ ಬೇರೆ ಬೇರೆ ಪಕ್ಷಗಳಲ್ಲಿರುವುದು ಇಬ್ಬರಿಗೂ ಅತಿಶೀಘ್ರದಲ್ಲೇ ಅರಿವಾಯಿತು. 1947ರ ಜುಲೈ ಮಧ್ಯಭಾಗದಲ್ಲಿ ಮೌಂಟ್ ಬ್ಯಾಟನ್, ಭಾರತದೊಂದಿಗೆ ವಿಲೀನವಾಗುವಂತೆ ಸಲಹೆಮಾಡಿ ಎಲ್ಲ ರಾಜಮಹಾರಾಜರುಗಳಿಗೂ ಬರೆದಂತೆ ಭೋಪಾಲ್ ನವಾಬರಿಗೂ ಪತ್ರ ಬರೆದರು. ಇದಕ್ಕೆ ಉತ್ತರವಾಗಿ ನವಾಬರಿಂದ ಸ್ವಯಂನಿವೇದನೆಯ ಸುದೀರ್ಘವಾದ ಒಂದು ಭಾವನಾತ್ಮಕ ಪತ್ರ ಬಂತು. ಇಂಗ್ಲೆಂಡಿನ ಸಿಂಹಾಸನದೊಂದಿಗೆ ನಿರಂತರವಾಗಿ ಹೊಂದಿರುವ ನಿಷ್ಠಾವಂತ ಮೈತ್ರಿಯ ಘೋಷಣೆಯೊಂದಿಗೆ ಆರಂಭವಾದ ಈ ಪತ್ರದಲ್ಲಿ, ಈಗ ಹರ್ ಮೆಜಸ್ಟಿಯವರ ಸರ್ಕಾರದ ಏಕ ಪಕ್ಷೀಯ ಕ್ರಮದಿಂದಾಗಿ ಸ್ನೇಹಸಂಬಂಧ ಕಡಿದುಬಿದ್ದಂತಾಗಿದೆಯೆಂದು ಒಕ್ಕಣಿಸಲಾಗಿತ್ತು. ಇವರು ಭೋಪಾಲನ್ನು ಮತ್ತು ನವಾಬರ ಮಿತ್ರರನ್ನು ಯಾರಿಗೆ ಧಾರೆ ಎರೆದು ಕೊಟ್ಟಿದ್ದರು? ಗಾಂಧಿ ನೆಹರೂಗಳ ಪಕ್ಷಕ್ಕೆ. ನವಾಬರು ಗಾಂಧಿ-ನೆಹರೂಗಳ ಪಕ್ಷದ ಪರಮ ವೈರಿಗಳಾಗಿದ್ದರು. "ಮೊತ್ತವನ್ನು ಕಾಂಗ್ರೆಸ್ ನಾಯಕರೇ ತುಂಬಿಕೊಳ್ಳಲು ಅನುಕೂಲವಾಗುವಂತೆ ನಾವು ಒಂದು ಖಾಲಿ ಚೆಕ್‌ಗೆ ಸಹಿ ಹಾಕಿಕೊಡಬೇಕೆ?" ಎಂದು ಕೋಪಾವಿಷ್ಟರಾಗಿ ನವಾಬರು ಪ್ರಶ್ನಿಸಿದ್ದರು.

ವಿಶ್ವಾಸದ್ರೋಹದ ಆಪಾದನೆಗಳನ್ನು ಮಾಡಿದ ನಂತರ ಈ ಪತ್ರದಲ್ಲಿ ಎಚ್ಚರಿಕೆಯೊಂದನ್ನೂ ನೀಡಲಾಗಿತ್ತು. ಭಾರತದಲ್ಲಿ, ಏರುತ್ತಿರುವ ಕಮ್ಯುನಿಸ್ಟ್ ಅಲೆಗಳನ್ನು ತಡೆಯಬಲ್ಲ ಮುಖ್ಯ ಕೋಟೆಕೊತ್ತಳಗಳೆಂದರೆ ಶ್ರೀಮಂತರು, ಆಸ್ತಿವಂತರು. ಜಮೀನ್ದಾರರನ್ನು ನಿರ್ನಾಮ ಗೊಳಿಸುವುದಾಗಿ ಕಾಂಗ್ರೆಸ್ ಈಗಾಗಲೇ ಹೇಳಿಯಾಗಿದೆ. ಈ ಪಕ್ಷದ ಎಡಬಲವಾಗಿ ಭಾರತೀಯ ಕಮ್ಯುನಿಸ್ಟ್ ಪಕ್ಷ ನಿಂತಿದೆ. ಕಮ್ಯುನಿಸ್ಟ್ ಪಕ್ಷ ಸಾರಿಗೆ ನೌಕರರ ಸಂಘಗಳ ಮೇಲೆ ನಿಯಂತ್ರಣ ಸಾಧಿಸಿದೆ. ಬೇಕಾದಲ್ಲಿ ಅವರು ಉಪಖಂಡವನ್ನು ನಿಷ್ಕ್ರಿಯಗೊಳಿಸಿ, ಹಸಿವಿನಿಂದ ಸಾಯುವಂತೆ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಭೋಪಾಲ್ ನವಾಬರು ತಮ್ಮ ಮಿತ್ರನಿಗೆ ನೇರ ಮಾತುಗಳಲ್ಲಿ ಹೀಗೆ ಹೇಳಿದ್ದರು: "ನೀವು ಮತ್ತು ಘನತೆವೆತ್ತ ನಿಮ್ಮ ಸರ್ಕಾರ ಸಂಸ್ಥಾನಗಳನ್ನು ಬೆಂಬಲಿಸಿ, ಭಾರತದ ರಾಜಕೀಯ ಭೂಪಟದಿಂದ ಅವರ ನಿಷ್ಕ್ರಮಣವನ್ನು ತಪ್ಪಿಸದೇ ಹೋದಲ್ಲಿ, ಅತಿ ಶೀಘ್ರದಲ್ಲೇ ಕಮ್ಯುನಿಸ್ಟ್ ಪ್ರಾಬಲ್ಯದ

ಭಾರತವನ್ನು ನೀವು ಕಾಣುವಿರಿ...ಕಮ್ಯುನಿಸ್ಟ್ ಪ್ರಾಬಲ್ಯದಡಿ 450 ದಶಲಕ್ಷ ಜನ ಒಂದುಗೂಡಿದ್ದು ತಾನೂ ಇದರಲ್ಲಿ ಭಾಗಿಯಾಗಿರುವುದು ಮನವರಿಕೆಯಾದ ಕೂಡಲೇ ವಿಶ್ವಸಂಸ್ಥೆಯೂ ತನ್ನ ದುರ್ವಿಧಿಗೆ ಗ್ರೇಟ್ ಬ್ರಿಟನ್ನನ್ನೇ ದೂಷಿಸುವುದು. ಇದೆಲ್ಲದರೊಂದಿಗೆ ನಿಮ್ಮ ಹೆಸರು ಸೇರುವುದು ಸಹಜವಾಗಿಯೇ ನನಗಿಷ್ಟವಾಗದ ವಿಷಯ."

ತಿರುವಾಂಕೂರಿನಂತೆ, ತಾನೂ ಸ್ವತಂತ್ರ ರಾಷ್ಟ್ರವಾಗುವ ಬಯಕೆಯ ಸುಳಿವನ್ನು ಭೋಪಾಲ್ ಸಹ ನೀಡಿತ್ತು. ಏನೇ ಇದ್ದರೂ ಭೋಪಾಲ್ ನವಾಬರು ಜುಲೈ 25ರಂದು ನಡೆದ ಮಹಾರಾಜರುಗಳ ಮಂಡಳಿಯ ಸಮಾವೇಶದಲ್ಲಿ ಭಾಗವಹಿಸಲಿಲ್ಲ. 31ರಂದು ಮೌಂಟ್ ಬ್ಯಾಟನ್ ನವಾಬರಿಗೆ ಮತ್ತೊಂದು ಪತ್ರ ಬರೆದು ವಿಲೀನದ ಒಡಂಬಡಿಕೆಗೆ ಸಹಿ ಹಾಕಲು ಆಮಂತ್ರಿಸಿದರು. ಮೌಂಟ್ ಬ್ಯಾಟನ್, ತಮ್ಮ ಪತ್ರದಲ್ಲಿ, "ತಮ್ಮ ಹೃದಯಕ್ಕೆ ಹತ್ತಿರವಾದ ರಾಷ್ಟ್ರದಿಂದ ಯಾವ ಮಹಾರಾಜನೂ ಪಲಾಯನ ಮಾಡಲಾಗದು" ಎಂದು ಹಿಂದೆ ಭಾಷಣದಲ್ಲಿ ಹೇಳಿದ್ದನ್ನು ನೆನಪಿಸಿದ್ದರು. ಕಮ್ಯುನಿಸ್ಟರ ಬೆದರಿಕೆಯನ್ನೂ ಜಾಣಾಕ್ಷತೆಯಿಂದ ತಳ್ಳಿ ಹಾಕಿದ್ದರು. "ಕೆಂಪಿನ ಬೆದರಿಕೆ ಇದೆ ಎಂಬುದು ದಿಟ, ಕಾಂಗ್ರೆಸ್ ಮತ್ತು ಮಹಾರಾಜರುಗಳು ಕೈ ಜೋಡಿಸಿದಲ್ಲಿ ಮಾತ್ರ ಈ ಬೆದರಿಕೆಯನ್ನು ಎದುರಿಸುವುದು ಸಾಧ್ಯವಾದೀತು. ಏಕೆಂದರೆ, ಪಟೇಲರಂಥವರೂ ನಿಮ್ಮಂತೆಯೇ ಕಮ್ಯುನಿಸ್ಟರ ಬಗ್ಗೆ ಹೆದರಿದ್ದಾರೆ. ರಾಜಮಹಾರಾಜರುಗಳ ವ್ಯವಸ್ಥೆ ಮತ್ತಿತರರ ಪ್ರಭಾವ, ಸದೃಢ ಬೆಂಬಲಗಳಿದ್ದಲ್ಲಿ ಮಾತ್ರ ಕಮ್ಯುನಿಸ್ಟರ ಅಪಾಯವನ್ನು ತೊಡೆದುಹಾಕುವುದು ಅವರಿಂದ ಸಾಧ್ಯವಾದೀತು."

ಈ ವೇಳೆಗೆ ಜುಲೈ 25ರ ಸಭೆಯ ವರದಿಗಳು ಭೋಪಾಲನ್ನು ಮುಟ್ಟಿದ್ದವು. ತಮ್ಮ ಹಳೆಯ ಮಿತ್ರನ ಭಯಾನಕ ಅನ್ನಿಸಿಕೆಗಳು ಮೌಂಟ್ ಬ್ಯಾಟನ್ನರಿಗೆ ತಿಳಿದಾಗಿತ್ತು. ಉಳಿದ ಮಹಾರಾಜರುಗಳು ವಿಲೀನಕ್ಕೆ ಮುಂದಾಗುತ್ತಿರುವ ವಿಷಯವೂ ನವಾಬರಿಗೆ ಗೊತ್ತಾಗಿತ್ತು. ತಮ್ಮ ಹಮ್ಮು ಉಳಿಸಿಕೊಳ್ಳಲು ನವಾಬ ಒಂದು ಸಣ್ಣ ಉಪಾಯಕ್ಕೆ ಶರಣಾದರು. ವಿಲೀನದ ಅಂತಿಮ ಗಡುವನ್ನು ಹತ್ತುದಿನ ಮುಂದಕ್ಕೆ ಹಾಕುವಂತೆ ವೈಸ್‌ರಾಯ್ ಪಟೇಲರನ್ನು ಒಪ್ಪಿಸಿದಲ್ಲಿ, ಆಗಸ್ಟ್ 15ರ ನಂತರ ಭೋಪಾಲ್ ವಿಲೀನದ ತನ್ನ ನಿರ್ಧಾರವನ್ನು ಪ್ರಕಟಿಸಬಹುದೆಂದು ನವಾಬರ ಲೆಕ್ಕಾಚಾರ. "ಹಾಗಾದಲ್ಲಿ ನಿರ್ಮಲ ಆತ್ಮಸಾಕ್ಷಿಯಿಂದ ನಮ್ಮ ಮರಣ ಪತ್ರಕ್ಕೆ ಸಹಿಹಾಕಲು ಸಾಧ್ಯವಾದೀತು" ಎಂದು ನವಾಬ ತಿಳಿಸಿದರು. (ಇಂಥ ವಿನಾಯಿತಿ ತೋರಲು ಸಾಧ್ಯವಿಲ್ಲವೆಂದು ಪಟೇಲರು ಒಪ್ಪದಿದ್ದಲ್ಲಿ, ನವಾಬರು ಆಗಸ್ಟ್ 14ರಂದೇ ವಿಲೀನ ಒಡಂಬಡಿಕೆಗೆ ಸಹಿಹಾಕಬೇಕೆಂದೂ ಆದರೆ ಅದನ್ನು ತಾವು ಮೊಹರು ಮಾಡಿದ ಲಕೋಟೆಯಲ್ಲಿಟ್ಟು 25ರ ನಂತರವೇ ಪಟೇಲರ ವಶಕ್ಕೆ ಕೊಡುವುದಾಗಿಯೂ ಮೌಂಟ್ ಬ್ಯಾಟನ್ ತಿಳಿಸಿದ್ದರು).

ಇದಕ್ಕೂ ಹೆಚ್ಚು ವಿಚಿತ್ರವಾದದ್ದು ಜೋಧಪುರದ ಪ್ರಸಂಗ. ಜುಲೈ ಮಧ್ಯದಲ್ಲಿ ಮೌಂಟ್ ಬ್ಯಾಟನ್ ಏರ್ಪಡಿಸಿದ್ದ ಔತಣಕೂಟದಲ್ಲಿ ಜೋಧಪುರದ ತರುಣ ಮಹಾರಾಜರು ಉಳಿದ ರಜಪೂತ ಮಹಾರಾಜರುಗಳೊಡಗೂಡಿ ವಿಲೀನಕ್ಕೆ ತಮ್ಮ ಸಮ್ಮತಿ ಸೂಚಿಸಿದ್ದರು.

ಇದಾದ ನಂತರ, ಜೋಧಪುರ ಸಂಸ್ಥಾನ ಪಾಕಿಸ್ತಾನದ ಗಡಿಯಲ್ಲಿರುವುದರಿಂದ ಆ ರಾಷ್ಟ್ರದೊಂದಿಗೆ ಸಂಧಾನ ಮಾಡಿಕೊಂಡರೆ ಹೆಚ್ಚು ಲಾಭವಾಗಬಹುದೆಂದು ಯಾರೋ ಯುವ ಮಹಾರಾಜನ ತಲೆತಿಕ್ಕಿದರು. ಯಾರೆಂಬುದು ಸ್ಪಷ್ಟವಾಗಿ ತಿಳಿಯದು. ಬಹುಶಃ ಭೋಪಾಲದ ಮುಂದಾಳತ್ವದಲ್ಲಿ ಜೋಧಪುರ ಮಹಾರಾಜರು ಮತ್ತು ಜಿನ್ನಾರ ನಡುವೆ ಸಭೆಗೆ ವ್ಯವಸ್ಥೆಯಾಯಿತು. ಕರಾಚಿಯಲ್ಲಿ ಸಂಪೂರ್ಣವಾಗಿ ಬಂದರು ಸೌಲಭ್ಯಗಳನ್ನು ಒದಗಿಸುವುದಾಗಿಯೂ, ಸಿಂಧ್‌ನಿಂದ ಶಸ್ತ್ರಾಸ್ತ್ರಗಳ ಆಮದು ಹಾಗೂ ಆಹಾರಧಾನ್ಯಗಳ ಸರಬರಾಜಿಗೆ ಅವಕಾಶ ಕಲ್ಪಿಸುವುದಾಗಿಯೂ ಮುಸ್ಲಿಂ ಲೀಗ್ ನಾಯಕರು ಈ ಸಭೆಯಲ್ಲಿ ಆಶ್ವಾಸನೆಯಿತ್ತರು. ಒಂದು ವರದಿ ಪ್ರಕಾರ, ಜಿನ್ನಾ ಅವರು, ಯುವ ಮಹಾರಾಜನಿಗೆ ಖಾಲಿ ಹಾಳೆ ಮತ್ತು ಫೌಂಟನ್ ಪೆನ್ ಕೊಟ್ಟು ನಿಮ್ಮೆಲ್ಲ ಶರತ್ತುಗಳನ್ನೂ ಇದರಲ್ಲಿ ಬರೆದು ಕೊಡಬಹುದೆಂದು ಹೇಳಿದರಂತೆ.

ಜೋಧಪುರ ಪಾಕಿಸ್ತಾನಕ್ಕೆ ಪಕ್ಷಾಂತರ ಮಾಡಿದ್ದಿದ್ದರೆ, ನೆರೆಯ ಜಯಪುರ, ಉದಯಪುರಗಳೂ ಹಿಂಬಾಲಿಸುತ್ತಿದ್ದವೇನೋ. ಆದರೆ ಈ ವಿಷಯ ತಿಳಿದ ಕೆ.ಎಂ. ಪಣಿಕ್ಕರ್ ಅವರು ಮಧ್ಯ ಪ್ರವೇಶ ಮಾಡುವಂತೆ ವಲ್ಲಭಭಾಯಿ ಪಟೇಲರಿಗೆ ಮನವಿಮಾಡಿಕೊಂಡರು. ಪಟೇಲರು ಜೋಧಪುರದ ಮಹಾರಾಜರನ್ನು ಸಂಪರ್ಕಿಸಿ, ಮುಕ್ತ ಶಸ್ತ್ರಾಸ್ತ್ರ ಆಮದು ಹಾಗೂ ಆಹಾರಧಾನ್ಯ ಸರಬರಾಜಿನ ಆಶ್ವಾಸನೆ ನೀಡಿದರು. ಏತನ್ಮಧ್ಯೆ, ಮುಸ್ಲಿಂ ರಾಷ್ಟ್ರದೊಂದಿಗೆ ಸೌಹಾರ್ದಯುತ ಬಾಂಧವ್ಯ ಸಾಧ್ಯವಾಗದೆಹೋಗಬಹುದೆಂದು ಆಪ್ತರು ಮಹಾರಾಜನಿಗೆ ಕಿವಿಮಾತು ಹೇಳಿದ್ದರು. ಪಾಕಿಸ್ತಾನದ ಜೊತೆ ಸೇರಿಕೊಂಡ ನಂತರ, ಹಿಂದೂ-ಮುಸ್ಲಿಮರ ನಡುವೆ ಗಲಭೆಯುಂಟಾದರೆ ಏನಾದೀತು? ಆಗ ನೀವು ಯಾರ ಪರ ನಿಲ್ಲುವಿರಿ? ಎಂದು ನೆರೆಯ ಜೈಸಲ್ಮೀರ್‌ನ ಮಹಾರಾಜ ಮಾರ್ಮಿಕವಾಗಿ ಜೋಧಪುರ ಮಹಾರಾಜರನ್ನು ಕೇಳಿದ್ದ.

ಹೀಗೆ, ಜೋಧಪುರ ಮಹಾರಾಜರೂ ಹಾದಿಗೆ ಬಂದಿದ್ದರು. ಆದರೆ ಅದಕ್ಕೆ ಮುಂಚೆ ಸಣ್ಣದೊಂದು ಉಲ್ಲಂಘನೆಯ ನಾಟಕೀಯ ಪ್ರಸಂಗವೂ ಕೊನೆಗಳಿಗೆಯಲ್ಲಿ ಸಂಭವಿಸದೇ ಇರಲಿಲ್ಲ. ವಿಲೀನ ಒಡಂಬಡಿಕೆಯ ದಸ್ತಾವೇಜನ್ನು ವೈಸ್‌ರಾಯ್ ಅವರ ಪಕ್ಕದ ಕೋಣೆಯಲ್ಲಿ ಸಹಿಗಾಗಿ ಮುಂದಿಟ್ಟಾಗ ಜೋಧಪುರದ ಯುವ ಮಹಾರಾಜ ಹಠಾತ್ತನೆ ಪಿಸ್ತೂಲ್ ಹೊರ ತೆಗೆದು ಅದನ್ನು ಕಾರ್ಯದರ್ಶಿಯ ಹಣೆಗೆ ಒತ್ತಿ ಹಿಡಿದು "ನಿಮ್ಮ ಆಜ್ಞೆಯನ್ನು ನಾನು ಅಂಗೀಕರಿಸುವುದಿಲ್ಲ" ಎಂದು ಬಡಬಡಿಸಿದರಂತೆ. ಆದರೆ ಕೆಲವೇ ನಿಮಿಷಗಳಲ್ಲಿ ಶಾಂತರಾಗಿ ಸಹಿಹಾಕಿದ್ದರು.

V

ಆಗಸ್ಟ್ 15ರ ವೇಳೆಗೆ ವಿಲೀನ ಒಡಂಬಡಿಕೆಗೆ ಸಹಿಹಾಕದೇ ಉಳಿದ ಪ್ರಾಂತ್ಯಗಳಲ್ಲಿ ಜುನಾಗಢವೂ ಒಂದು. ಇದು ಪಶ್ಚಿಮ ಭಾರತದ ಕಾಥೇವಾಡ ಪರ್ಯಾಯ ದ್ವೀಪದಲ್ಲಿದೆ.

ಇಲ್ಲೂ ಭೋಪಾಲದಂತೆ ಹಿಂದೂಗಳ ಸಂಖ್ಯೆಯೇ ಹೆಚ್ಚಾಗಿದ್ದು, ಮುಸ್ಲಿಂ ನವಾಬ ಆಳ್ವಿಕೆ ನಡೆಸಿದ್ದ. ಜುನಾಗಢ ಮೂರು ಕಡೆಯಿಂದ ಹಿಂದೂ ಸಂಸ್ಥಾನಗಳಿಂದ ಅಥವಾ ಭಾರತದಿಂದ ಸುತ್ತುವರಿದಿತ್ತು. ನಾಲ್ಕನೆಯ ದಿಕ್ಕಿನಲ್ಲಿ ದೀರ್ಘವಾದ ಕರಾವಳಿಯನ್ನು ಹೊಂದಿತ್ತು. ಇದು ಭೋಪಾಲಕ್ಕಿಂತ ಭಿನ್ನವಾದ ಲಕ್ಷಣ. ವೆರಾವಲ್ ಜುನಾಗಢದ ಮುಖ್ಯ ರೇವು ಪಟ್ಟಣ. ಪಾಕಿಸ್ತಾನದ ರೇವು ಪಟ್ಟಣ ಕರಾಚಿಯಿಂದ (ರಾಷ್ಟ್ರದ ರಾಜಧಾನಿ) 325 ನಾವಿಕ ಮೈಲಿ ದೂರದಲ್ಲಿತ್ತು. ಜುನಾಗಢದ ನವಾಬನಾದ ಮೊಹಬತ್ ಖಾನನಿಗೆ ನಾಯಿಗಳ ಬಗ್ಗೆ ಬಿಡಲಾಗದಂಥ ವ್ಯಾಮೋಹವಿತ್ತು. ಇವನ ಮೃಗಾಲಯದಲ್ಲಿ 2000 ತಳಿಯ ನಾಯಿಗಳಿದ್ದವು. ಇವುಗಳಲ್ಲಿ ಅರಮನೆಯ ರಕ್ಷಣೆಗೆಂದೇ ಸಾಕಲಾಗಿದ್ದ ಬೇಟೆನಾಯಿಗಳ ಸಂಖ್ಯೆ ಹದಿನಾರು. ತನಗೆ ಪ್ರಿಯವಾದ ಎರಡು ಬೇಟೆನಾಯಿಗಳು ರತಿಕ್ರೀಡೆಯಾಡಿದರೆ ನವಾಬ ಸಾರ್ವತ್ರಿಕ ರಜೆ ಘೋಷಿಸುತ್ತಿದ್ದ. ನಾಯಿಗಳ ಮದುವೆಗಾಗಿ ಮೂರು ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದ. ಇದು ಅವನ ಪ್ರಜೆಗಳ ಸರಾಸರಿ ವಾರ್ಷಿಕ ಆದಾಯಕ್ಕಿಂತ ಸುಮಾರು ಸಾವಿರ ಪಟ್ಟು ಹೆಚ್ಚಾದುದು.

ಜುನಾಗಢದ ಎಲ್ಲೆಯೊಳಗೇ ಹಿಂದೂಗಳ ಪವಿತ್ರ ಯಾತ್ರಾಸ್ಥಳವಾದ ಸೋಮನಾಥವಿದೆ. ಹಾಗೆಯೇ ಜೈನರು, ಜೈನರಿಗಾಗಿ ಕಟ್ಟಿಸಿದ ಅದ್ಭುತವಾದ ಅಮೃತಶಿಲೆಯ ದೇವಾಲಯಗಳಿರುವ ಗಿರ್ನಾರ್ ಗಿರಿಧಾಮವಿದೆ. ಸೋಮನಾಥ ಮತ್ತು ಗಿರ್ನಾರ್‌ಗಳಿಗೆ ಭಾರತದ ವಿವಿಧ ಭಾಗಗಳಿಂದ ಸಾವಿರಾರು ಮಂದಿ ಯಾತ್ರಿಕರು ಭೇಟಿಕೊಡುತ್ತಾರೆ. ಗಿರ್ನಾರ್ ಅರಣ್ಯಗಳು ಏಷ್ಯಾದ ಸಿಂಹ ಸಂತತಿಯ ಆಶ್ರಯಧಾಮಗಳು. ಮೊಹಬತ್ ಖಾನ್ ಮತ್ತು ಅವನ ಪೂರ್ವಜರು ಸಿಂಹ ಸಂತತಿಯನ್ನು ರಕ್ಷಿಸಿಕೊಂಡು ಬಂದಿದ್ದರು. ಈ ಅರಣ್ಯಗಳಲ್ಲಿ ಬ್ರಿಟಿಷ್ ಅಧಿಕಾರಿಗಳಿಗೂ ಬೇಟೆಯಾಡಲು ಉತ್ತೇಜನ ನೀಡಿರಲಿಲ್ಲ.

1947ರ ಬೇಸಿಗೆಯಲ್ಲಿ ಜುನಾಗಢದ ನವಾಬ ಯುರೋಪಿನಲ್ಲಿ ಪ್ರವಾಸ ಕೈಗೊಂಡಿದ್ದ. ಪ್ರವಾಸದಲ್ಲಿದ್ದಾಗ, ಹಾಲಿ ಇದ್ದ ದಿವಾನರನ್ನು ಪದಚ್ಯುತಿಗೊಳಿಸಿ, ಜಿನ್ನಾರೊಡನೆ ನಿಕಟ ಸಂಬಂಧ ಹೊಂದಿದ್ದ ಸಿಂಧ್ ಪ್ರಾಂತ್ಯದ ಪ್ರಮುಖ ರಾಜಕಾರಣಿಯಾದ ಮುಸ್ಲಿಂ ಲೀಗ್‌ನ ಸರ್ ಷಾ ನವಾಜ್ ಭುಟ್ಟೋ ಅವರನ್ನು ಹೊಸ ದಿವಾನರನ್ನಾಗಿ ನೇಮಿಸಲಾಯಿತು. ಭುಟ್ಟೋ, ಪ್ರವಾಸದಿಂದ ಹಿಂದಿರುಗಿದ ನವಾಬನ ಮೇಲೆ ಭಾರತ ಒಕ್ಕೂಟದಿಂದ ಹೊರಗುಳಿಯುವಂತೆ ಒತ್ತಡ ಹೇರಿದರು. ಅಧಿಕಾರ ಹಸ್ತಾಂತರ ದಿನವಾದ ಆಗಸ್ಟ್ 14ರಂದು ತಾನು ಪಾಕಿಸ್ತಾನದ ಜೊತೆ ಸೇರುವುದಾಗಿ ಜುನಾಗಢ ಸಂಸ್ಥಾನ ಪ್ರಕಟಿಸಿತು. ಕಾನೂನುಬದ್ಧವಾಗಿ ಇದಕ್ಕೆ ಅವಕಾಶ ನೀಡಲಾಯಿತು. ಆದರೆ ಭೌಗೋಳಿಕವಾಗಿ ಇದಕ್ಕೆ ಹೆಚ್ಚಿನ ಅರ್ಥವಿರಲಿಲ್ಲ. ಜುನಾಗಢದಲ್ಲಿ ಹಿಂದೂಗಳ ಜನಸಂಖ್ಯೆ ಶೇ 80 ರಷ್ಟಿತ್ತು. ಹೀಗಾಗಿ ಜಿನ್ನಾರ ದ್ವಿರಾಷ್ಟ್ರ ಸಿದ್ಧಾಂತದ ಮುಖಕ್ಕೆ ರಾಚಿದಂತೆ ಇದು ನಡೆದಿತ್ತು.

ಪಾಕಿಸ್ತಾನ ನವಾಬನ ಮನವಿ ಬಗ್ಗೆ ಕೆಲವು ವಾರಗಳ ಕಾಲ ಮೌನವಹಿಸಿತು. 13ರಂದು ಸೇರ್ಪಡೆಗೆ ಒಪ್ಪಿಗೆ ನೀಡಿತು. ಜುನಾಗಢವನ್ನು, ಜಮ್ಮು-ಕಾಶ್ಮೀರ ಪಡೆದುಕೊಳ್ಳುವ

ಸಂಧಾನದಲ್ಲಿ ಸಾಧನವಾಗಿ ಬಳಸಿಕೊಳ್ಳಬಹುದೆಂಬ ನಂಬಿಕೆಯಿಂದ ಪಾಕಿಸ್ತಾನ ಸೇರ್ಪಡೆಗೆ ಅಸ್ತು ಎನ್ನಲು ತಡಮಾಡಿತ್ತು. ಜಮ್ಮು ಕಾಶ್ಮೀರವೂ ಆಗಸ್ಟ್ 15ರ ವೇಳೆಗೆ ಎರಡು ರಾಷ್ಟ್ರಗಳಲ್ಲಿ ಯಾವುದೊಂದರಲ್ಲೂ ವಿಲೀನ ಹೊಂದಿರಲಿಲ್ಲ. ಜಮ್ಮು ಕಾಶ್ಮೀರದಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಾಗಿದ್ದು ಅದು ಹಿಂದೂ ಮಹಾರಾಜರ ಆಳ್ವಿಕೆಯಲ್ಲಿತ್ತು. ಜುನಾಗಢಕ್ಕೆ ತದ್ವಿರುದ್ಧ.

ಪಾಕಿಸ್ತಾನ ಜುನಾಗಢವನ್ನು ತನ್ನೊಳಕ್ಕೆ ಸೇರಿಸಿಕೊಳ್ಳಲು ಒಪ್ಪಿಗೆ ನೀಡಿದ್ದು ಭಾರತದ ನಾಯಕರನ್ನು ಕೆರಳಿಸಿತ್ತು. ವಿಶೇಷವಾಗಿ ವಲ್ಲಭಭಾಯಿ ಪಟೇಲರಿಗೆ ಮರ್ಮಾಘಾತ ಉಂಟು ಮಾಡಿತ್ತು. ಪಟೇಲರು ಜುನಾಗಢ ಪ್ರದೇಶದವರೇ ಆಗಿದ್ದು ಜುನಾಗಢದ ನಿವಾಸಿಗಳು ಆಡುತ್ತಿದ್ದ ಗುಜರಾತಿ ಭಾಷೆಯನ್ನೇ ಮಾತನಾಡುತ್ತಿದ್ದರು. ಜುನಾಗಢದ ಸಾಮಂತ ರಾಜ್ಯಗಳಾದ ಮಂಗ್ರೋಲ್ ಮತ್ತು ಬಾಬರಿಯಾವಾಡ್‌ಗಳನ್ನು ಭಾರತ ವಶಪಡಿಸಿಕೊಳ್ಳಬೇಕೆಂಬುದು ಪಟೇಲರ ಮೊದಲ ಪ್ರತಿಕ್ರಿಯೆಯಾಗಿತ್ತು. ಈ ಎರಡು ರಾಜ್ಯಗಳ ಹಿಂದೂ ಪ್ರಧಾನರು ತಮಗೆ ಭಾರತ ಒಕ್ಕೂಟ ಸೇರುವ ಹಕ್ಕಿದೆಯೆಂದು ವಾದಿಸಲಾರಂಭಿಸಿದರು. ಇದನ್ನು ತಿರಸ್ಕರಿಸಿದ ಜುನಾಗಢದ ನವಾಬ ಸಾಮಂತರಾದ ಅವರು ಮೊದಲು ತನ್ನ ಅನುಮತಿ ಕೋರಬೇಕೇಂಬ ವಾದ ಮುಂದಿಟ್ಟ. ಭಾರತ ಸರ್ಕಾರ ಸಾಮಂತರನ್ನು ಬೆಂಬಲಿಸಿತು ಹಾಗೂ ಅವರ ರಕ್ಷಣೆಗೆ ಸಣ್ಣ ಸೇನೆಯನ್ನು ಕಳುಹಿಸಿತು.

ಸೆಪ್ಟಂಬರ್ ಮಧ್ಯಭಾಗದಲ್ಲಿ ವಿ.ಪಿ. ಮೆನನ್ ಸಂಧಾನಕ್ಕಾಗಿ ಜುನಾಗಢಕ್ಕೆ ಹೋಗಿದ್ದರು. ನವಾಬ ಇವರನ್ನು ನೋಡಲು, ಅನಾರೋಗ್ಯದ ನೆಪಹೇಳಿ ನಿರಾಕರಿಸಿದ. ಮೆನನ್ ಅವರು ದಿವಾನರೊಂದಿಗೇ ಮಾತುಕತೆ ನಡೆಸಬೇಕಾಯಿತು. ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಎರಡೂ ದೃಷ್ಟಿಯಿಂದಲೂ ಜುನಾಗಢ ಭಾರತ ಒಕ್ಕೂಟ ಸೇರುವುದು ಯೋಗ್ಯವಾದುದೆಂದು ಮೆನನ್ ಸರ್ ಷಾ ನವಾಜ್ ಭುಟ್ಟೋರಿಗೆ ತಿಳಿಸಿದರು. ಷಾ ನವಾಜರು ಇದಕ್ಕೇನೂ ತಕರಾರು ಎತ್ತಲಿಲ್ಲ. ಆದರೆ, ಗುಜರಾತಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ವಿಷಪೂರಿತ ಲೇಖನಗಳಿಂದಾಗಿ ಸ್ಥಳೀಯರು ಕೆಂಡಾಮಂಡಲ ವಾಗಿದ್ದಾರೆಂದು ದೂರಿದರು. ಜನಮತ ಸಂಗ್ರಹದ ಮೂಲಕ ಇದನ್ನು ಇತ್ಯರ್ಥಪಡಿಸಬೇಕೆಂಬುದು ತಮ್ಮ ಇರಾದೆಯೆಂದು ಭುಟ್ಟೋ ತಿಳಿಸಿದರು.

ಏತನ್ಮಧ್ಯೆ ಮುಂಬಯಿಯಲ್ಲಿ ಜುನಾಗಢದ ಹಂಗಾಮಿ ಸರ್ಕಾರವೊಂದನ್ನು ರಚಿಸಲಾಯಿತು. ಮಹಾತ್ಮರ ಸೋದರ ಸಂಬಂಧಿಯಾದ, ಜುನಾಗಢ ನಿವಾಸಿ ಶ್ಯಾಮಲದಾಸ್ ಗಾಂಧಿಯವರ ನೇತೃತ್ವದಲ್ಲಿ ಹಂಗಾಮಿ ಸರ್ಕಾರದ ರಚನೆಯಾಗಿತ್ತು. ಈ 'ಸರ್ಕಾರ' ಜುನಾಗಢದೊಳಗಿನ ಜನತಾ ಆಂದೋಲನಕ್ಕೆ ವಾಹಕವಾಯಿತು. ಹೆದರಿದ ನವಾಬ ಹನ್ನೆರಡು ನಾಯಿಗಳೊಂದಿಗೆ ಕರಾಚಿಗೆ ಪರಾರಿಯಾದ. ಜುನಾಗಢ ಕಾಯುವ ಹೊಣೆ ದಿವಾನರದಾಯಿತು. ಅಕ್ಟೋಬರ್ 27ರಂದು ಸರ್ ಷಾ ನವಾಬರು ಜಿನ್ನಾ ಅವರಿಗೆ ಪತ್ರ ಬರೆದು, ಪಾಕಿಸ್ತಾನದೊಡನೆ ವಿಲೀನಗೊಂಡ ಕೂಡಲೇ ತಮಗೆ ಮತ್ತು ನವಾಬನಿಗೆ ಈ

ನಿರ್ಧಾರದ ಬಗ್ಗೆ ಮುಸ್ಲಿಮರಿಂದ ನೂರಾರು ಅಭಿನಂದವಾ ಸಂದೇಶಗಳು ಬಂದಿವೆಯೆಂದು ತಿಳಿಸಿದರು. ಕಾಥೇವಾಡದ ಮುಸ್ಲಿಮರು ಪಾಕಿಸ್ತಾನದ ಬಗ್ಗೆ ಉತ್ಸಾಹ ಕಳೆದುಕೊಂಡಿರುವಂತಿದೆ ಎಂದೂ ಪತ್ರದಲ್ಲಿ ತಿಳಿಸಿದ್ದರು.

ಹತ್ತು ದಿನಗಳ ನಂತರ ಜುನಾಗಢದ ಆಡಳಿತವನ್ನು ಹಸ್ತಾಂತರಗೊಳಿಸಲು ತಾವು ಇಚ್ಛಿಸಿರುವುದಾಗಿ ಸರ್ ಷಾ ನವಾಬರು ಭಾರತ ಸರ್ಕಾರಕ್ಕೆ ಸುದ್ದಿ ಮುಟ್ಟಿಸಿದರು. ನವೆಂಬರ್ 9ರಂದು ವಿಧ್ಯುಕ್ತವಾಗಿ ಆಡಳಿತ ಹಸ್ತಾಂತರ ನಡೆಯಿತು. ದೆಹಲಿಗೆ ವಾಪಸಾದ ಮೌಂಟ್ ಬ್ಯಾಟನ್ನರು ಈ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಮುನ್ನ ತಮ್ಮೊಡನೆ ಸಮಾಲೋಚನೆ ನಡೆಸಲಿಲ್ಲವೆಂದು ಪ್ರತಿಭಟಿಸಿದರು. ಹೀಗಾಗಿ ಭಾಗಶಃ ಮೌಂಟ್ ಬ್ಯಾಟನ್ನರನ್ನು ಸಮಾಧಾನಗೊಳಿಸಲು ಹಾಗೂ ಇನ್ನೊಂದಂಶ ತನ್ನ ತರ್ಕದ ಯುಕ್ತತೆಯನ್ನು ರುಜುವಾತುಪಡಿಸಲೆಂಬಂತೆ ಜನಮತಗಣ್ಣನೆಯನ್ನು ಏರ್ಪಡಿಸಲಾಯಿತು. 1948ರ ಫೆಬ್ರುವರಿ 20ರಂದು ನಡೆದ ಜನಮತಗಣನೆಯಲ್ಲಿ ಶೇ 91ರಷ್ಟು ಮತದಾರರು ಭಾರತ ಒಕ್ಕೂಟ ಸೇರುವುದರ ಪರವಾಗಿ ಮತ ನೀಡಿದ್ದರು.

VI

ಹೈದರಾಬಾದ್ ಸಂಸ್ಥಾನ ಮುಸ್ಲಿಂ ರಾಜರ ಆಳ್ವಿಕೆಗೊಳಪಟ್ಟಿದ್ದು ಅಲ್ಲಿ ಹಿಂದೂಗಳ ಜನಸಂಖ್ಯೆಯೇ ಹೆಚ್ಚಾಗಿತ್ತು. ಆದರೆ ಹೈದರಾಬಾದ್, ಭೋಪಾಲ್ ಮತ್ತು ಜುನಾಗಢಗಳನ್ನು ಮೀರಿಸಿದ ಸಂಪದವಾಗಿತ್ತು. ದಖನ್ ಪ್ರಸ್ಥಭೂಮಿಯುದ್ದಕ್ಕೂ ಚಾಚಿಕೊಂಡಿರುವ ಈ ಸಂಸ್ಥಾನ ಉಪಖಂಡದ ಮಧ್ಯ ಭಾಗದಲ್ಲಿದೆ. ವಿಸ್ತೀರ್ಣದಲ್ಲಿ 80,000 ಚದರ ಮೈಲಿಗಳಿಗೂ ಹೆಚ್ಚಿನ ಪ್ರದೇಶ, 16 ದಶಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ; ತೆಲುಗು, ಕನ್ನಡ ಮತ್ತು ಮರಾಠಿ ಈ ಮೂರು ಭಾಷಾವಲಯಗಳಲ್ಲಿ ಈ ಜನ ಹಂಚಿಹೋಗಿದ್ದರು. ಹೈದರಾಬಾದ್ ಉತ್ತರಕ್ಕೆ ಕೇಂದ್ರ ಪ್ರಾಂತ್ಯ, ಪಶ್ಚಿಮಕ್ಕೆ ಮುಂಬಯಿ, ದಕ್ಷಿಣ ಮತ್ತು ಪೂರ್ವಕ್ಕೆ ಮದ್ರಾಸ್ ಪ್ರಾಂತ್ಯಗಳಿಂದ ಸುತ್ತುವರಿಯಲ್ಪಟ್ಟಿತ್ತು. ಭೂವೇಷ್ಟಿತ ಸಂಸ್ಥಾನವಾದರೂ ಆಹಾರದಲ್ಲಿ ಸ್ವಯಂಪೂರ್ಣತೆ ಸಾಧಿಸಿತ್ತು. ಹತ್ತಿ, ಎಣ್ಣೆ ಬೀಜಗಳು, ಕಲ್ಲಿದ್ದಲು ಮತ್ತು ಸಿಮೆಂಟ್ ಉತ್ಪಾದನೆಯಲ್ಲೂ ಸ್ವಯಂಪೂರ್ಣವಾಗಿದ್ದು ಪೆಟ್ರೋಲ್ ಮತ್ತು ಉಪ್ಪನ್ನು ಮಾತ್ರ ಬ್ರಿಟಿಷ್ ಭಾರತದಿಂದ ಆಮದು ಮಾಡಿಕೊಳ್ಳುತ್ತಿತ್ತು.

ಮುಘಲ್ ಸಾಮಂತ ರಾಜ್ಯವಾಗಿ 1713ರಲ್ಲಿ ಹೈದರಾಬಾದ್ ಜನ್ಮ ತಾಳಿತು. ಇದರ ಆಳರಸರನ್ನು ನಿಜಾಮ್ ಎಂದು ಕರೆಯುವ ಸಂಪ್ರದಾಯ ರೂಢಿಗೆ ಬಂದಿತ್ತು. ಹೈದರಾಬಾದ್ ಸಂಸ್ಥಾನದ ಒಟ್ಟು ಜನಸಂಖ್ಯೆಯಲ್ಲಿ ಶೇ.85ರಷ್ಟು ಹಿಂದೂಗಳಿದ್ದರು. ಆದರೂ ಸೇನೆ, ಪೊಲೀಸ್ ಪಡೆ ಮತ್ತು ಸಿವಿಲ್ ಆಡಳಿತ ಸೇವೆಯಲ್ಲಿ ಮುಸ್ಲಿಮರದೇ ಪ್ರಾಬಲ್ಯವಿತ್ತು.

ಸಂಸ್ಥಾನದ ಒಟ್ಟು ಜಮೀನಿನಲ್ಲಿ ಶೇ 10ರಷ್ಟು ಜಮೀನು ನಿಜಾಮರದೇ ಆಗಿತ್ತು. ಉಳಿದ ಭೂಮಿ ಜಮೀನ್ದಾರರ ಒಡೆತನದಲ್ಲಿತ್ತು. ತಮ್ಮ ಭೂ ಹಿಡುವಳಿಯಿಂದ ನಿಜಾಮರಿಗೆ ಬಾಡಿಗೆ ರೂಪದಲ್ಲಿ ವರ್ಷಕ್ಕೆ 25 ದಶಲಕ್ಷ ರೂಪಾಯಿ ಆದಾಯವಿತ್ತು. ಇದಲ್ಲದೆ ಇನ್ನೂ 5 ದಶಲಕ್ಷ ರೂಪಾಯಿ ಆದಾಯ ರಾಜ್ಯದ ಬೊಕ್ಕಸದಿಂದ ಬರುತ್ತಿತ್ತು. ಆಗರ್ಭ ಶ್ರೀಮಂತರು ಹಲವರಿದ್ದರು. ಉಳಿದಂತೆ ಮುಸ್ಲಿಂ ಮತ್ತು ಹಿಂದೂ ಸಮುದಾಯಗಳೆರಡರಲ್ಲೂ ಗಿರಣಿ ಕಾರ್ಮಿಕರು, ಕುಶಲಕರ್ಮಿಗಳು, ಕೂಲಿಕಾರರು ಹಾಗೂ ಕೃಷಿಕರೇ ಹೆಚ್ಚಾಗಿದ್ದರು.

1946-47ರಲ್ಲಿ ಮೀರ್ ಉಸ್ಮಾನ್ ಅಲೀ ಎಂಬ ಏಳನೇ ನಿಜಾಮ ಹೈದರಾಬಾದ್ ಸಂಸ್ಥಾನವನ್ನು ಆಳುತ್ತಿದ್ದ. ಇವನು 1911 ರಷ್ಟು ಹಿಂದೆಯೇ ಸಿಂಹಾಸನವನ್ನು ಏರಿದ್ದ. ಇವನು ವಿಶ್ವದ ಅತಿ ಶ್ರೀಮಂತರಲ್ಲಿ ಒಬ್ಬನಾಗಿದ್ದು ಅಷ್ಟೇ ಜಿಪುಣಾಗ್ರೇಸರನೂ ಆಗಿದ್ದ. ಹೊಸಬಟ್ಟೆ ಧರಿಸುತ್ತಿದ್ದುದೇ ಅಪರೂಪ; ಇಸ್ತ್ರಿ ಮಾಡದ ಪೈಜಾಮ, ಷರ್ಟ್ ಮತ್ತು ಬಣ್ಣಗೆಟ್ಟ ತುರ್ಕಿ ಟೋಪಿ ಇವನ ಉಡುಪಾಗಿತ್ತು. 1918ನೇ ಮಾಡಲಿನ ಒಂದು ತಗಡಿನ ಕಾರು ಇವನು ಓಡಾಡುವ ವಾಹನವಾಗಿತ್ತು. ಯಾವತ್ತೂ ಅತಿಥಿಗಳಿಗೆ ಯಾವುದೇ ರೀತ್ಯ ಆತಿಥ್ಯ ನೀಡಿದವನೇ ಅಲ್ಲ.

ತನ್ನ ಸ್ವಂತ ಆಸ್ತಿಗಿಂತ ಮೀರಿದ ಆಸೆ-ಆಕಾಂಕ್ಷೆ ಈ ನಿಜಾಮನಲ್ಲಿತ್ತು. ಬ್ರಿಟಿಷರು ಭಾರತ ತ್ಯಜಿಸಿದಾಗ ಅವನು ತನ್ನ ಸಂಸ್ಥಾನಕ್ಕೆ ಬಯಸಿದ್ದು ಸ್ವಾತಂತ್ರ್ಯವನ್ನು. ತನ್ನ ಹಾಗೂ ಬ್ರಿಟಿಷ್ ಸಿಂಹಾಸನದ ನಡುವೆ ನೇರ ಬಾಂಧವ್ಯಕ್ಕೆಡೆ ಮಾಡಿಕೊಡುವಂಥ ಸ್ವಾತಂತ್ರ್ಯ ಇವನ ಅಪೇಕ್ಷೆಯಾಗಿತ್ತು. ತನ್ನ ವಾದ ಮಂಡನೆಯಲ್ಲಿ ಸಹಾಯಕ್ಕಾಗಿ ಮೀರ್ ಉಸ್ಮಾನ್ ಅಲೀ ಇಂಗ್ಲೆಂಡಿನ ಅತಿ ದುಬಾರಿ ವಕೀಲ ಎನ್ನಿಸಿಕೊಂಡ, ಅರಸು ಮನೆತನದ ವಕೀಲನಾಗಿದ್ದ ಸರ್ ವಾಲ್ಟರ್ ಮಾಂಕ್ಟನ್ ಎಂಬಾತನನ್ನು ನೇಮಿಸಿಕೊಂಡಿದ್ದ. (ಸರ್ ವಾಲ್ಟರ್ ಮಾಂಕ್ಟನ್ ಎಂಟನೆ ಎಡ್ವರ್ಡ್ ದೊರೆಯ ವಕೀಲನಾಗಿದ್ದು ಈ ದೊರೆ ಕರ್ತವ್ಯ ಲೋಪದಿಂದಾಗಿ ಅಧಿಕಾರ ಬಿಡಬೇಕಾಗಿ ಬಂದಾಗ ಸಲಹೆ ನೀಡಿದ್ದ). ಈ ಇಂಗ್ಲಿಷ್ ವಕೀಲನ ಸೇವೆಗೆ ಪ್ರತಿಫಲವಾಗಿ ನಿಜಾಮ ವರ್ಷಕ್ಕೆ 90 ಸಾವಿರ ಗಿನಿಗಳನ್ನು ನೀಡಲು ಸಿದ್ಧನಿದ್ದನೆಂದು ವದಂತಿಗಳು ಹರಡಿದ್ದವು. ಹೈದರಾಬಾದ್ ಸಂಸ್ಥಾನದ ಸ್ವಾತಂತ್ರ್ಯ ಹಾಗೂ ಸಾರ್ವಭೌಮತ್ವವನ್ನು ಬಿಟ್ಟುಕೊಡಬೇಕಾಗಬಹುದಂಥ ಯಾವುದೇ ರೀತಿಯ ರಾಜಿ ಸಂಧಾನ ಮಾರ್ಗ ತನ್ನ ಘನತೆವೆತ್ತ ಸಿಂಹಾಸನಾಧೀಶನಿಗೆ ತ್ರಾಸದಾಯಕವಾದುದೆಂದು ಮಾಂಕ್ಟನ್ ವೈಸ್‌ರಾಯ್ ಸಮ್ಮುಖದಲ್ಲಿ ಬಹಳ ಒತ್ತುಕೊಟ್ಟು ಹೇಳಿದ್ದ. ಹೈದರಾಬಾದ್ ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸಬೇಕೆಂದು ಮೌಂಟ್ ಬ್ಯಾಟನ್ನರು ಸಲಹೆ ಮಾಡಿದಾಗ "ಭಾರತ ಅತಿಯಾದ ಒತ್ತಡ ಹೇರಿದಲ್ಲಿ ತನ್ನ ಕಕ್ಷಿದಾರ ಪಾಕಿಸ್ತಾನ ಸೇರುವ ಪರ್ಯಾಯ ಮಾರ್ಗವನ್ನು ಗಂಭೀರವಾಗಿ ಪರಿಶೀಲಿಸಬೇಕಾಗುತ್ತದೆಂದು" ನಿಜಾಮರ ವಕೀಲ ಉತ್ತರಿಸಿದ್ದ.

ನಿಜಾಮರ ಆಸೆ ಈಡೇರಿದಲ್ಲಿ ಉತ್ತರ ಭಾರತ ಅಕ್ಷರಶಃ ದಕ್ಷಿಣದಿಂದ ಬೇರ್ಪಡುತ್ತಿತ್ತು. ಸಂವಿಧಾನ ತಜ್ಞರಾಗಿದ್ದ ರೆಜಿನಾಲ್ಡ್ ಕೂಪ್‌ಲ್ಯಾಂಡ್ ಅವರು ಬೆರಳು ಮಾಡಿ ಹೇಳಿದಂತೆ,

"ಭಾರತ, ಈಶಾನ್ಯ ಹಾಗೂ ವಾಯುವ್ಯದಲ್ಲಿ ಅದರ ಮುಸ್ಲಿಂ ಕಾಲುಗಳನ್ನು ಛೇದಿಸಿದರೂ ಬದುಕಬಲ್ಲದು, ಆದರೆ ವಪೆಯಿಲ್ಲದೆ ಬದುಕುವುದು ಅದಕ್ಕೆ ಸಾಧ್ಯವಾದೀತೆ?" ಇದನ್ನು ಸರ್ದಾರ್ ಪಟೇಲರು, ಹೈದರಾಬಾದಿಗೆ ಸ್ವಾತಂತ್ರ್ಯ ಕೊಡುವುದೆಂದರೆ ಭಾರತದ ಜಠರಕ್ಕೆ ಕ್ಯಾನ್ಸರ್ ತಗುಲಿದಂತೆಯೇ ಎಂದು ನೇರನುಡಿಗಳಲ್ಲಿ ಖಂಡತುಂಡವಾಗಿ ಹೇಳಿದರು.

ನಿಜಾಮರು ಮತ್ತು ಭಾರತ ಸರ್ಕಾರದ ನಡುವಣ ಈ ಪಂದ್ಯಾಟದ ಶುರುವಿನಲ್ಲಿ ಎರಡೂ ಕಡೆ ಪ್ರತಿನಿಧಿಗಳಿದ್ದರು. ಭಾರತದಿಂದ ಅಧಿಕಾರ ಪಡೆದ ಪ್ರತಿನಿಧಿಯಾಗಿ 1938ರಲ್ಲಿ ಅಸ್ತಿತ್ವಕ್ಕೆ ಬಂದ ಹೈದರಾಬಾದ್ ಕಾಂಗ್ರೆಸ್ ಇತ್ತು. ಹೈದರಾಬಾದ್ ಕಾಂಗ್ರೆಸ್, ಪ್ರತಿನಿಧಿ ಸರ್ಕಾರಕ್ಕೆ ಒತ್ತಾಯಿಸುತ್ತಿತ್ತು. ನಿಜಾಮರ ಅಧಿಕಾರ ಪಡೆದ ಪ್ರತಿನಿಧಿಯಾಗಿ ಇತಿಹಾದ್-ಉಲ್-ಮುಸ್ಲಿಮೀನ್ ಇತ್ತು. ಆಡಳಿತದಲ್ಲಿ ಹಾಗೂ ರಾಜಕಾರಣದಲ್ಲಿ ಮುಸ್ಲಿಮರ ಸ್ಥಾನಮಾನದ ಹಿತರಕ್ಷಣೆ ಇದರ ಅಪೇಕ್ಷೆಯಾಗಿತ್ತು. ಇದರಲ್ಲಿ ಮತ್ತೊಂದು ಮುಖ್ಯಪಾತ್ರ ಭಾರತ ಕಮ್ಯುನಿಸ್ಟ್ ಪಕ್ಷದ್ದಾಗಿತ್ತು. ತೆಲಂಗಾಣ ಪ್ರದೇಶದಲ್ಲಿ ಕಮ್ಯುನಿಸ್ಟ್ ಪ್ರಬಲ ನೆಲೆ ಹೊಂದಿತ್ತು.

1946-47ರಲ್ಲಿ ಇವು ಮೂರೂ ಕರ್ಣಕಠೋರವಾಗಿ ಧ್ವನಿಗೈಯ್ಯಲಾರಂಭಿಸಿದವು. ಹೈದರಾಬಾದ್ ಭಾರತದ ಉಳಿದ ಸಂಸ್ಥಾನಗಳನ್ನೇ ಅನುಸರಿಸಬೇಕೆಂದು ಹೈದರಾಬಾದ್ ಕಾಂಗ್ರೆಸ್ ಆಗ್ರಹಪಡಿಸಿತು. ಕಾಂಗ್ರೆಸ್ ನಾಯಕರು ಬೀದಿಗಳಲ್ಲಿ ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾದರು. ಅಲೀಗಢದಲ್ಲಿ ತರಬೇತಿ ಪಡೆದ, ಮುಸ್ಲಿಂ ಪ್ರತಿಷ್ಠೆಯಲ್ಲಿ ಭಾವನಾತ್ಮಕವಾಗಿ ಉತ್ಕಟ ನಂಬಿಕೆ ಬೆಳೆಸಿಕೊಂಡಿದ್ದ ವಕೀಲ ಕಾಸಿ ರಜ್ವಿ ಇತಿಹಾದ್‌ನ ನವನಾಯಕನಾದ. ಇವನು ಇತಿಹಾದ್‌ನನ್ನು ತೀವ್ರಗಾಮಿಯಾಗಿಸಿ ಆಮೂಲಾಗ್ರ ಬದಲಾವಣೆ ತಂದ. ರಜ್ವಿಯ ನಾಯಕತ್ವದಲ್ಲಿ ಇತಿಹಾದ್ "ರಜಕಾರರು" ಎಂಬ ಅರೆಸೈನಿಕ ಪಡೆಯನ್ನು ಕಟ್ಟಿತು. ರಜಕಾರರು ಹೈದರಾಬಾದ್ ರಸ್ತೆಗಳಲ್ಲಿ ಕತ್ತಿಖಡ್ಗ ಬಂದೂಕುಗಳನ್ನು ಹಿಡಿದು ಓಡಾಡಲಾರಂಭಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಹಳ್ಳಿಗರು ಕಮ್ಯುನಿಸ್ಟರ ಮಾರ್ಗದರ್ಶನದಲ್ಲಿ, ನಾಯಕತ್ವದಲ್ಲಿ ದಂಗೆ ಏಳಲಾರಂಭಿಸಿದರು. ತೆಲಂಗಾಣದಲ್ಲಿ ಭೂಮಾಲೀಕರ ಜಮೀನು ತೋಟತುಡಿಗೆಗಳನ್ನು ವಶಪಡಿಸಿಕೊಂಡು ಭೂಹೀನ ಕೃಷಿಕರಿಗೆ ಹಂಚಲಾಯಿತು. ದಂಗೆಕೋರರು, ಶುರುವಿಗೆ 500 ಎಕರೆಗಿಂತ ಹೆಚ್ಚಿನ ಜಮೀನು ಹೊಂದಿರುವ ಭೂಮಾಲೀಕರ ಹೊಲಗದ್ದೆ ತೋಟಗಳನ್ನು ವಶಪಡಿಸಿಕೊಂಡರು. ಭೂ ಹಿಡುವಳಿಯನ್ನು 200 ಎಕರೆಗೆ, ನಂತರ 100 ಎಕರೆಗೆ ಸೀಮಿತಗೊಳಿಸಿದರು. ಬಲಾತ್ಕಾರದ ಕೂಲಿ ಕೆಲಸಗಳನ್ನು ಬಹಿಷ್ಕರಿಸಿದರು. ನಲಗೊಂಡ, ವಾರಂಗಲ್ ಮತ್ತು ಕರೀಂ ನಗರಗಳಲ್ಲಿ ಕಮ್ಯುನಿಸ್ಟರು ಪರ್ಯಾಯ ಸರ್ಕಾರವನ್ನೇ ನಡೆಸಿದರು. ಸಾವಿರಕ್ಕೂ ಹೆಚ್ಚು ಗ್ರಾಮಗಳನ್ನು ವ್ಯಾವಹಾರಿಕವಾಗಿ ನಿಜಾಮರ ಆಳ್ವಿಕೆಯಿಂದ ಮುಕ್ತಗೊಳಿಸಿದರು.

ಆಗಸ್ಟ್ 15ರಂದು ಕಾಂಗ್ರೆಸ್ ಕಾರ್ಯಕರ್ತರು ಹೈದರಾಬಾದ್ ಸಂಸ್ಥಾನದ ಹಲವೆಡೆ ರಾಷ್ಟ್ರಧ್ವಜವನ್ನು ಹಾರಿಸಿದರು. ಹೀಗೆ ಮಾಡಿದವರನ್ನು ಬಂಧಿಸಿ ಜೈಲಿಗೆ ದೂಡಲಾಯಿತು. ಇನ್ನೊಂದೆಡೆ ರಜಕಾರರು ಹೆಚ್ಚು ಆಕ್ರಮಣಶೀಲರಾದರು. ರೂಕ್ಷರಾದರು. ನಿಜಾಮರ ಸ್ವಾತಂತ್ರ್ಯ ಘೋಷಣೆಗೆ ತಮ್ಮ ಬೆಂಬಲ ಘೋಷಿಸಿದರು. "ಹೈದರಾಬಾದನ್ನು ಹೈದರಾಬಾದಿಗಳಿಂದ ಮುಕ್ತಗೊಳಿಸಿ", "ಭಾರತ ಒಕ್ಕೂಟದೊಂದಿಗೆ ಒಡಂಬಡಿಕೆ ಇಲ್ಲವೇ ಇಲ್ಲ" ಎಂದು ಸಾರುವ ಕರಪತ್ರಗಳನ್ನು ಮುದ್ರಿಸಿ ಹಂಚಿದರು.

ಬ್ರಿಟನ್ನಿನ ಕನ್ಸರ್ವೆಟಿವ್ ಪಕ್ಷ ನಿಜಾಮರ ಆಸೆ ಆಕಾಂಕ್ಷೆಗಳಿಗೆ ಪ್ರೋತ್ಸಾಹ ನೀಡಿತು. ನಿಜಾಮರ ವಕೀಲನಾದ ಸರ್ ವಾಲ್ಟರ್ ಮಾಂಕ್ಟನ್ ಪ್ರಮುಖ ಟೋರಿ ನಾಯಕನಾಗಿದ್ದು ತನ್ನ ಕಕ್ಷಿದಾರನನ್ನು ಬೆಂಬಲಿಸುವಂತೆ ಪಕ್ಷದ ನಾಯಕರಿಗೆ ಪತ್ರ ಬರೆದನು. ಕಾಂಗ್ರೆಸ್ ಪಕ್ಷ "ಅಧಿಕಾರ ರಾಜಕಾರಣ"ವನ್ನು ನಡೆಸುತ್ತಿದ್ದು, ಇದು ಹಿಟ್ಲರ್ ಮತ್ತು ಮುಸಲೋನಿ ನಡೆಸಿದ ರಾಜಕಾರಣದ ಪ್ರತಿಕೃತಿಯೇ ಆಗಿದೆಯೆಂದು ಮಾಂಕ್ಟನ್ ಪ್ರತಿಪಾದಿಸಿದ. ಮೌಂಟ್ ಬ್ಯಾಟನ್, ನೆಹರೂ-ಪಟೇಲರೊಂದಿಗೆ ಕೈ ಜೋಡಿಸಿರುವುದರಿಂದ "ನಮ್ಮ ಈ ಹಳೆಯ ಮಿತ್ರರ ನಾಚಿಕೆಗೇಡಿನ ವಿಶ್ವಾಸದ್ರೋಹವನ್ನು ತಡೆಯಲಿಕ್ಕಾಗದೇ, ಕನಿಷ್ಠ ವಿಶ್ವದ ಆತ್ಮಸಾಕ್ಷಿ ಎದುರು ದಂಡಿಸಲ್ಪಡದೇ ಹೋಗುವುದನ್ನು ತಡೆಯಲಾಗದೇ" ಎಂಬುದನ್ನು ವಿಚಾರ ಮಾಡುವಂತೆ ಮಾಂಕ್ಟನ್ ತನ್ನ ಪತ್ರದಲ್ಲಿ ಆಗ್ರಹಪಡಿಸಿದ್ದ.

ನಿಜಾಮರ ಹೈದರಾಬಾದನ್ನು ಪೋಲೆಂಡ್ ಎಂದೂ ಕಾಂಗ್ರೆಸ್ಸನ್ನು ಹಿಟ್ಲರನ ನಾಜಿಗಳಿಗೆ ಸಮವೆಂದೂ ಹೋಲಿಸುವುದೇ ಕಲ್ಪನಾತೀತವಾದದ್ದು. ಆಕ್ಷೇಪಾರ್ಹವಾದದ್ದು. ಈ ಹೋಲಿಕೆಯನ್ನು ಒಪ್ಪಿಕೊಳ್ಳುವಂತೆ ವಿನ್‌ಸ್ಟನ್ ಚರ್ಚಿಲರ ಮನ ಒಲಿಸುವ ಪ್ರಯತ್ನವೂ ನಡೆಯಿತು. ಬಹುಶಃ, ಚರ್ಚಿಲ್ಲರು ಗಾಂಧಿಯವರನ್ನು ದೀರ್ಘಕಾಲದಿಂದ ಇಷ್ಟಪಡುತ್ತಿರಲಿಲ್ಲ ಎಂಬುದು ಈ ಮನ ಒಲಿಕೆ ಪ್ರಯತ್ನಕ್ಕೆ ಪ್ರೇರಣೆಯಾಗಿದ್ದಿರಬಹುದು. ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾತನಾಡುತ್ತ, ಚರ್ಚಿಲ್ಲರು, "ಸಾರ್ವಭೌಮತ್ವ ಘೋಷಿಸಿಕೊಂಡ ಯಾವುದೇ ಸಂಸ್ಥಾನದ ಕತ್ತು ಹಿಚುಕಲು ಬಿಡಬಾರದು, ಉಪವಾಸ ಸಾಯಲು ಬಿಡಬಾರದು, ಅಥವಾ ಮಿತಿಮೀರಿದ ಹಿಂಸಾಚಾರಕ್ಕೆ ಬಲಿಯಾಗಲು ಬಿಡಬಾರದು. ಹೀಗಾಗದಂತೆ ನೋಡಿಕೊಳ್ಳುವುದು ಬ್ರಿಟನ್ನಿನ ಖಾಸಾ ಜವಾಬ್ದಾರಿಯಾಗಿದೆ" ಎಂದು ವಾದಿಸಿದ್ದರು. ಆಗ ಪಕ್ಷದ ಉದಯೋನ್ಮುಖ ತಾರೆಯಾಗಿದ್ದ ಆರ್.ಎ. ಬಟ್ಲರ್, "ಸ್ವತಂತ್ರವಾಗಿ ಉಳಿಯುವ ಹೈದರಾಬಾದಿನ ನ್ಯಾಯಯುತ ಬೇಡಿಕೆಯನ್ನು ಈಡೇರಿಸುವಂತೆ ಬ್ರಿಟನ್ ಒತ್ತಡ ಹೇರಬೇಕೆಂದು" ಹೇಳುವ ಮೂಲಕ ಚರ್ಚಿಲ್ ಪರ ನಿಂತರು.

ತಮ್ಮ ಉದ್ದೇಶಕ್ಕೆ ಪಾಕಿಸ್ತಾನದಿಂದ ದೊರೆತ ಬೆಂಬಲ ನಿಜಾಮರಿಗೆ ಮತ್ತು ರಜಕಾರರಿಗೆ ಪುಷ್ಟಿದಾಯಕವಾಯಿತು. "ಕಾಂಗ್ರೆಸ್ ಹೈದರಾಬಾದಿನ ಮೇಲೆ ಒತ್ತಡ ಹೇರಲು ಪ್ರಯತ್ನಿಸಿದಲ್ಲಿ, ಬಲಾತ್ಕಾರ ಪ್ರಯೋಗಿಸಿದಲ್ಲಿ, ಭಾರತದಾದ್ಯಂತ ಇರುವ ಪ್ರತಿ ಮುಸ್ಲಿಮನೂ, ಹೌದು ಎಲ್ಲ ನೂರು ದಶಲಕ್ಷ ಮುಸ್ಲಿಮರೂ ಭಾರತದ ಅತಿಪುರಾತನ

ಮುಸ್ಲಿಂ ಸಾಮ್ರಾಜ್ಯದ ರಕ್ಷಣೆಗೆ ಏಕದೇಹಿಯಾಗಿ ಎದ್ದು ನಿಲ್ಲುವರೆಂದು" ಮೌಂಟ್ ಬ್ಯಾಟನ್ನರಿಗೆ ಹೇಳುವಷ್ಟು ದೂರ ಕ್ರಮಿಸಿದ್ದರು ಜಿನ್ನಾ.

ಭಾರತದೊಂದಿಗೆ ಒಪ್ಪಂದಕ್ಕೆ ಸಿದ್ಧವೆಂದೂ ಆದರೆ ಸೇರ್ಪಡೆ ಒಡಂಬಡಿಕೆಗೆ ಸಹಿಹಾಕುವುದಿಲ್ಲವೆಂದು ನಿಜಾಮರು ಹೇಳಿದರು. 1947ರಲ್ಲಿ ಅವರು "ಸ್ತಂಭನ ಒಪ್ಪಂದಕ್ಕೆ" ಸಹಿಹಾಕಲು ಒಪ್ಪಿದರು. ಈ ಒಪ್ಪಂದದ ಪ್ರಕಾರ ಹೈದರಾಬಾದ್ ಮತ್ತು ಬ್ರಿಟಿಷ್ ಸರ್ಕಾರದ ನಡುವೆ ಆಗಿರುವ ಒಪ್ಪಂದಗಳು ಉತ್ತರಾಧಿಕಾರಿ ಸರ್ಕಾರದಲ್ಲೂ ಮುಂದುವರಿಯಲಿದ್ದವು. ಇದರಿಂದ ಉಭಯತ್ರರಿಗೂ ಕೊಂಚ ಕಾಲಾವಕಾಶ ಸಿಕ್ಕಿತು. ನಿಜಾಮರಿಗೆ ತಮ್ಮ ಸ್ವಾತಂತ್ರ್ಯದ ಬೇಡಿಕೆಯನ್ನು ಪುನರ್‌ಪರಿಶೀಲಿಸಲು ಕಾಲಾವಕಾಶ ದೊರೆತಂತಾಯಿತು. ಅದೇ ರೀತಿ ನಿಜಾಮರನ್ನು ಮಣಿಸಲು, ಭಾರತದೊಂದಿಗೆ ಸೇರ್ಪಡೆಗೆ ಅವರ ಮನ ಒಲಿಸಲು ಉತ್ತಮ ಮಾರ್ಗೋಪಾಯಗಳನ್ನು ಹುಡುಕಲು ಭಾರತೀಯರಿಗೆ ಕಾಲಾವಕಾಶ ಸಿಕ್ಕಿದಂತಾಯಿತು.

ಈ ಒಪ್ಪಂದದನ್ವಯ ನಿಜಾಮರು ಮತ್ತು ಭಾರತ ಸರ್ಕಾರ ಅವರ ಪ್ರದೇಶಗಳಿಗೆ ತಮ್ಮ ಏಜೆಂಟರುಗಳನ್ನು ಕಳುಹಿಸಿದರು. ವಲ್ಲಭಭಾಯಿ ಪಟೇಲರ ನಂಬಿಕಸ್ಥ ಮಿತ್ರರಾಗಿದ್ದ ಕೆ.ಎಂ. ಮುನ್ಶಿಯವರು ಭಾರತದ ಏಜೆಂಟರಾಗಿದ್ದರು. ನವೆಂಬರ್‌ನಲ್ಲಿ ನಿಜಾಮರು ಹೊಸದಿವಾನರಾದ ಮೀರ್ ಲೈಕ್ ಅಲೀ ಅವರನ್ನು ತನ್ನ ಏಜೆಂಟರನ್ನಾಗಿ ನೇಮಿಸಿದರು. ಮೀರ್ ಲೈಕ್ ಅಲೀ ಶ್ರೀಮಂತ ವ್ಯಾಪಾರೋದ್ಯಮಿಯಾಗಿದ್ದು ಪಾಕಿಸ್ತಾನದ ಪರ ಸಹಾನುಭೂತಿಯುಳ್ಳವರಾಗಿದ್ದರು. ಲೈಕ್ ಅಲೀ ತಮ್ಮ ಸರ್ಕಾರದಲ್ಲಿ ಹಿಂದೂಗಳಿಗೆ ಪ್ರಾತಿನಿಧ್ಯ ನೀಡುವುದಾಗಿ ತಿಳಿಸಿದರು. ಆದರೆ ರಾಜ್ಯದ ಕಾಂಗ್ರೆಸ್ ನಾಯಕರಿಗೆ ಇದು ತುಂಬ ಅಲ್ಪ ಹಾಗೂ ವಿಳಂಬಿತ ಎನ್ನಿಸಿತು. ಇದೇನೇ ಇರಲಿ, ಈ ವೇಳೆಗಾಗಲೇ ನಿಜವಾದ ಅಧಿಕಾರ ರಜಕಾರರಿಗೆ ಹಾಗೂ ಅವರ ನಾಯಕ ಕಾಸಿಂ ರಜ್ವೀಗೆ ಹಸ್ತಾಂತರವಾಗಿತ್ತು. 1948ರ ವೇಳೆಗೆ ಇತಿಹಾದ್ ಸದಸ್ಯತ್ವ ಹತ್ತುಲಕ್ಷ ದಾಟಿತ್ತು. ಇವರಲ್ಲಿ ಹತ್ತನೇ ಒಂದು ಭಾಗದಷ್ಟು ಮಂದಿಗೆ ಶಸ್ತ್ರಾಸ್ತ್ರ ಪ್ರಯೋಗದಲ್ಲಿ ತರಬೇತಿ ನೀಡಲಾಗಿತ್ತು. "ದಖನ್ನಿನ ಮುಸ್ಲಿಂ ರಾಜ್ಯದ ಸಾರ್ವಭೌಮತ್ವವನ್ನು ಕಾಪಾಡಲು ಕೊನೆಯವರೆಗೆ" ಹೋರಾಡುವುದಾಗಿ ಪ್ರತಿಯೊಬ್ಬ ರಜಕಾರನೂ ಪ್ರತಿಜ್ಞೆ ಮಾಡಿದ್ದ.

1948ರ ಏಪ್ರಿಲ್‌ನಲ್ಲಿ ಲಂಡನ್ನಿನ "ದಿ ಟೈಮ್ಸ್" ಪತ್ರಿಕೆಯ ವರದಿಗಾರ ಹೈದರಾಬಾದಿಗೆ ಭೇಟಿಕೊಟ್ಟಿದ್ದ. ಈತ ಕಾಸಿಂ ರಜ್ವಿಯನ್ನು ಸಂದರ್ಶಿಸಿದ. ವರದಿಗಾರ ರಜ್ವಿಯಲ್ಲಿ "ಸಂಘಟನಾ ಚಾತುರ್ಯವುಳ್ಳ ಅಂಧಾಭಿಮಾನಿ ಜನನಾಯಕನೊಬ್ಬನನ್ನು" ಕಂಡಿದ್ದ. ವರದಿಗಾರನ ಮಾತಿನಲ್ಲಿ ಇವನು "ದೊಂಬಿ ಪ್ರಚೋದಕ ಹಾಗೂ ಏಕಾಂತದ ಮಾತುಕತೆಯಲ್ಲೂ ಮೆಚ್ಚುಗೆಗಳಿಸುವಷ್ಟು ಪ್ರಭಾವಶಾಲಿ". ರಜ್ವಿ ತಾನು ಮುಸ್ಲಿಂ ರಾಷ್ಟ್ರದ ಭವಿಷ್ಯದ ನಾಯಕನೆಂದೇ ಭಾವಿಸಿಕೊಂಡಿದ್ದ. ಹೈದರಾಬಾದಿಗಳ ಜಿನ್ನಾ ತಾನೆಂಬಂತೆ ಊಹಿಸಿಕೊಂಡಿದ್ದ. ಇವೆಲ್ಲ ಅಲ್ಲವಾದರೂ ಅವನೊಬ್ಬ ಉಗ್ರಗಾಮಿಯಾಗಿದ್ದ. ಅವನು ತನ್ನ

ಕೊಠಡಿಯಲ್ಲಿ ಪಾಕಿಸ್ತಾನದ ನಾಯಕನೊಬ್ಬನ ಭಾವಚಿತ್ರವನ್ನು ಎದ್ದು ಕಾಣುವಂತೆ ಗೋಡೆಗೆ ನೇತುಹಾಕಿದ್ದ. ತಾನು ಜಿನ್ನಾರನ್ನು ಬಹಳ ಮೆಚ್ಚುವುದಾಗಿಯೂ ತಾನು ಅವರ ಕಟ್ಟಾಭಿಮಾನಿಯೆಂದೂ ಅವನು ಭಾರತದ ಪತ್ರಕರ್ತನೊಬ್ಬನಿಗೆ ತಿಳಿಸಿದ್ದ. ನನಗೆ ಸಂದೇಹ ತಲೆದೋರಿದಾಗಲೆಲ್ಲ ಸಲಹೆ-ಸಮಾಲೋಚನೆಗಾಗಿ ಜಿನ್ನಾರ ಬಳಿಗೆ ಹೋಗುತ್ತೇನೆ, ಅವರು ಮುಕ್ತ ಮನಸ್ಸಿನಿಂದ ಸಲಹೆ ನೀಡುತ್ತಾರೆ ಎಂದೂ ಹೇಳಿದ್ದ.

ರಜ್ವಿ ಭಾವಚಿತ್ರಗಳಲ್ಲಿ ಅವನು ಹುಲುಸಾಗಿ ಗಡ್ಡ ಬೆಳೆಸಿರುವುದನ್ನು ಕಾಣಬಹುದಿತ್ತು. ಅವನು ಪುರಾಣದ ಸೈತಾನನಂತೆ ಕಾಣುತ್ತಿದ್ದ. ಮಿಂಚುವ ಕಣ್ಣುಗಳು ಅವನ ಪ್ರಧಾನ ಲಕ್ಷಣವಾಗಿತ್ತು. ಈ ಮಿಂಚುಗಣ್ಣುಗಳಿಂದ ಧರ್ಮಾಂಧತೆಯ ಕಿಡಿಗಳು ಸ್ಫುರಿಸುತ್ತಿದ್ದವು. ಅವನಿಗೆ ಕಾಂಗ್ರೆಸ್ ಬಗ್ಗೆ ತಿರಸ್ಕಾರವಿತ್ತು. "ನಮಗೆ ಇಲ್ಲಿ ಬ್ರಾಹ್ಮಣರ ಅಥವಾ ಬನಿಯಾಗಳ ಆಡಳಿತ ಬೇಡ" ಎಂದು ಹೇಳುತ್ತಿದ್ದ. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧವಾದಲ್ಲಿ ನೀವು ಯಾರ ಪರ ಎಂದು ಕೇಳಿದಾಗ "ಪಾಕಿಸ್ತಾನ ತನ್ನನ್ನು ರಕ್ಷಿಸಿಕೊಳ್ಳಬಲ್ಲದು" ಎಂದು ಉತ್ತರಿಸಿ ನಂತರ ಹೇಳಿದ್ದು: "ಎಲ್ಲೆಲ್ಲಿ ಮುಸ್ಲಿಮರ ಹಿತಾಸಕ್ತಿಗೆ ಧಕ್ಕೆಯುಂಟಾಗುವುದೋ ಅಲ್ಲಿರುತ್ತದೆ ನಮ್ಮ ಆಸಕ್ತಿ, ಸಹಾನುಭೂತಿಗಳು. ಈ ಮಾತು ಪ್ಯಾಲೆಸ್ಟೈನರಿಗೂ ಅನ್ವಯಿಸುತ್ತದೆ. ನರಕದಲ್ಲಿ ಮುಸ್ಲಿಮರ ಹಿತಾಸಕ್ತಿಗೆ ಧಕ್ಕೆಯುಂಟಾದರೂ ನಮ್ಮ ಹೃತ್ಪೂರ್ವಕ ಸಹಾನುಭೂತಿ, ಅನುಕಂಪಗಳು ಅವರ ಪರವಾಗಿರುತ್ತವೆ."

ರಜಕಾರರು ದೆಹಲಿ-ಹೈದರಾಬಾದ್ ತಿಕ್ಕಾಟವನ್ನು ಹಿಂದೂ-ಮುಸ್ಲಿಮರ ನಡುವಣ ಸಮರವೆಂದೇ ಭಾವಿಸಿದರು. ಪ್ರತಿಯಾಗಿ ಕಾಂಗ್ರೆಸ್ ಇದನ್ನು ಪ್ರಜಾಪ್ರಭುತ್ವ ಹಾಗೂ ನಿರಂಕುಶ ಪ್ರಭುತ್ವದ ನಡುವಣ ಘರ್ಷಣೆಯೆಂದು ಭಾವಿಸಿತು. ಸ್ವಲ್ಪಮಟ್ಟಿಗೆ ಇವೆರಡೂ ಸತ್ಯವೇ. ಹೈದರಾಬಾದಿನ ನಾಗರಿಕರು ಇವರಿಬ್ಬರ ಘರ್ಷಣೆಯ ಮಧ್ಯೆ ಸಿಕ್ಕಿಬಿದ್ದಿದ್ದರು. ಅವರಿಗೆ 1947ರ ಆಗಸ್ಟ್ ನಂತರದ ತಿಂಗಳುಗಳು ತೀವ್ರ ಅಭದ್ರತೆಯ ಕಾಲವಾಗಿತ್ತು. ಹಿಂದೂಗಳಲ್ಲಿ ಕೆಲವರು ಪಕ್ಕದ ಮದ್ರಾಸ್ ಜಿಲ್ಲೆಗಳಿಗೆ ಪಲಾಯನ ಮಾಡಿದರು. ಏತನ್ಮಧ್ಯೆ ಮಧ್ಯ ಪ್ರಾಂತ್ಯಗಳಿಂದ ಮುಸ್ಲಿಮರು ಗುಂಪುಗುಂಪಾಗಿ ಹೈದರಾಬಾದಿಗೆ ವಲಸೆ ಬಂದರು. ಬಹುತೇಕ ಅನಕ್ಷರಸ್ಥರಾಗಿದ್ದ ಈ ಮುಸ್ಲಿಮರು, ಬಂಗಾಳ ಮತ್ತು ಪಂಜಾಬುಗಳಲ್ಲಿ ತಮ್ಮ ಸಹಧರ್ಮೀಯರ ಮೇಲೆ ಆಕ್ರಮಣ ನಡೆದಿದೆಯೆಂಬ ಭೀತಿಗ್ರಸ್ತ ವರದಿಗಳನ್ನು ಕೇಳಿದ್ದರು. ಹೈದರಾಬಾದಿನಲ್ಲೂ ತಾವು ಅಲ್ಪಸಂಖ್ಯಾತರಾಗುತ್ತೇವೆ ಎಂಬುದು ಅವರಿಗೆ ಅರ್ಥವಾದಂತಿರಲಿಲ್ಲ. ಸ್ವತಂತ್ರ ವೀಕ್ಷಕರೊಬ್ಬರು ಹೇಳಿರುವಂತೆ–"ಬಹುಶಃ ವಲಸೆಬರುತ್ತಿದ್ದ ಮುಸ್ಲಿಮರಿಗೆ ನಿಜಾಮರ ಸೈನ್ಯದಲ್ಲಿ ಹೆಚ್ಚಿನ ನಂಬಿಕೆ ಇದ್ದಂತಿತ್ತು. ಹಾಗೆಯೇ ಯೂನಿಯನ್ ಪ್ರಾಂತೀಯ ಆಡಳಿತದಲ್ಲಿ ಅರಬ್ಬರು ತಮ್ಮನ್ನು ರಕ್ಷಿಸುವರೆಂದು ನಂಬಿರುವಂತಿತ್ತು". ಮಧ್ಯ ಪ್ರಾಂತ್ಯಗಳಿಂದ ಬಂದ ಈ ಮುಸ್ಲಿಮರು ಹೈದರಾಬಾದಿನಲ್ಲಿ ನಿಜಾಮರ ಜನರ ನೆರವಿನಿಂದ ಹಿಂದೂಗಳನ್ನು ಅವರ ಮನೆಗಳಿಂದ ಹೊರದೂಡಿದರು. ರಾಜ್ಯದಲ್ಲಿ ಮುಸ್ಲಿಮರನ್ನು ಬಹುಸಂಖ್ಯಾತರನ್ನಾಗಿ ಮಾಡುವ ಹುನ್ನಾರವೂ ನಡೆದಿತ್ತು. ಔರಂಗಾಬಾದ್, ಬೀದರ್,

ಹೈದರಾಬಾದ್‌ಗಳ ಹಿಂದೂಗಳ ಬಡಾವಣೆಗಳು ಮೇಲ್ನೋಟಕ್ಕೆ ಬಿಕೋ ಎಂದು ಮರುಭೂಮಿಯಂತೆ ಕಂಡವು.

1948ರ ವಸಂತ ಋತುವಿನ ಬೇಸಿಗೆಯುದ್ದಕ್ಕೂ ಬಿಕ್ಕಟ್ಟು ಉಲ್ಬಣಿಸುತ್ತಲೇ ಇತ್ತು. ಬ್ರಿಟಿಷರ ಕೂಲಿ ಸಿಪಾಯಿಗಳು ಪಾಕಿಸ್ತಾನದಿಂದ ಹೈದರಾಬಾದಿಗೆ ಬಂದೂಕುಗಳನ್ನು ಸಾಗಿಸುತ್ತಿರುವ ಆಪಾದನೆಗಳೂ ಕೇಳಿಬಂದವು. ಪೂರ್ವ ಯೂರೋಪಿನಿಂದಲೂ ಹೈದರಾಬಾದಿಗೆ ಶಸ್ತ್ರಾಸ್ತ್ರಗಳು ಆಮದಾಗುತ್ತಿವೆಯೆಂಬ ವರದಿಗಳೂ ಕೇಳಿಬಂದವು. ಮದರಾಸಿನ ಪ್ರಧಾನ ಮಂತ್ರಿ, ಪಟೇಲರಿಗೆ ಪತ್ರ ಬರೆದು, ಹೈದರಾಬಾದಿನಿಂದ ಪ್ರವಾಹದೋಪಾದಿ ಹರಿದು ಬರುತ್ತಿರುವ ನಿರಾಶ್ರಿತರ ನಿರ್ವಹಣೆ ತಮಗೆ ಕಷ್ಟಕರವಾಗಿದೆಯೆಂದು ತಿಳಿಸಿದರು. ಕೆ.ಎಂ. ಮುನ್ಶಿಯವರು, ನಿಜಾಮರ ವಿಶ್ವಾಸದ್ರೋಹ, ಸ್ವಾತಂತ್ರ್ಯ ಕುರಿತಂತೆ ಅವರ ನಿಶ್ಚಿತ ಅಭಿಪ್ರಾಯಗಳು, ಹಾಗೂ ಭಾರತ ಸರ್ಕಾರವನ್ನು "ದೆಹಲಿಯ ಪುಂಡಘಟಿಂಗರೆಂದು" ಕರೆಯುತ್ತಿರುವುದನ್ನು ವರದಿ ಮಾಡಿದರು. ನಿಜಾಮರ ರೇಡಿಯೋ, ವೃತ್ತಪತ್ರಿಕೆಗಳು ಹಾಗೂ ನಾಟಕಗಳ ಮೂಲಕ ಭಾರತ ಒಕ್ಕೂಟದ ವಿರುದ್ಧ ವಿಷಕಾರುತ್ತಿರುವುದರ ಭಯಾನಕ ವರದಿಗಳನ್ನು ಕಳುಹಿಸುತ್ತಿದ್ದರು.

ಆ ಕ್ಷಣಕ್ಕೆ ಭಾರತೀಯರು ಅನುಕೂಲ ಸಿಂಧು ನೀತಿ ಅನುಸರಿಸುತ್ತಿದ್ದರು. 1948ರ ಜೂನ್ ತಿಂಗಳಿನಲ್ಲಿ ದೆಹಲಿಯಲ್ಲಿ, ವಿ.ಪಿ. ಮೆನನ್ ಮತ್ತು ಲೈಕ್ ಅಲೀ ಅವರ ನಡುವೆ ಹಲವಾರು ಸಭೆಗಳು ನಡೆದವು. ಸಂಸ್ಥಾನದಲ್ಲಿ ಪ್ರತಿನಿಧಿ ಸರ್ಕಾರ ರಚಿಸುವಂತೆ ಹಾಗೂ ಸೇರ್ಪಡೆ ಕುರಿತಂತೆ ಜನಮತಗಣನೆ ನಡೆಸುವ ಭರವಸೆ ನೀಡುವಂತೆ ಮೆನನ್ ಕೋರಿದರು. ನಿಜಾಮರ ಘನತೆ ಗೌರವಗಳನ್ನು ರಕ್ಷಿಸಲು ಹಲವಾರು ಸಲಹೆಗಳನ್ನು ಮುಂದಿಡಲಾಯಿತು. ಇದರಲ್ಲಿ ಸೈನ್ಯವನ್ನು ಉಳಿಸಿಕೊಳ್ಳುವ ಸಲಹೆಯೂ ಸೇರಿತ್ತು. ಇದಾವುದೂ ಒಪ್ಪಿತವಾಗಲಿಲ್ಲ. ಏತನ್ಮಧ್ಯೆ, ಹೈದರಾಬಾದಿನ ಗೌರವಾನ್ವಿತ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಮಧ್ಯಸ್ಥಿಕೆಯ ಪ್ರಯತ್ನ ನಡೆಸಿದರು. ಹೈದರಾಬಾದ್ ವಿಷಯವನ್ನು ವಿಶ್ವಸಂಸ್ಥೆಗೆ ಒಯ್ಯದಂತೆ ಮಿರ್ಜಾ ಇಸ್ಮಾಯಿಲ್ ಬುದ್ಧಿ ಮಾತು ಹೇಳಿದರು. (ವಿಶ್ವಸಂಸ್ಥೆಗೆ ಒಯ್ಯುವುದಾಗಿ ಲೈಕ್ ಅಲೀ ಬೆದರಿಸಿದ್ದರು). ರಜಕಾರರ ಕಪಿಮುಷ್ಟಿಯಿಂದ ಮುಕ್ತರಾಗಿ ಭಾರತ ಒಕ್ಕೂಟ ಸೇರಿಕೊಳ್ಳುವಂತೆ ಮಿರ್ಜಾ ಇಸ್ಮಾಯಿಲ್ ಸಲಹೆ ಮಾಡಿದ್ದರು. ಹೈದರಾಬಾದ್ ತನ್ನ ಸ್ಥಾನಮಾನದ ಬಲಹೀನತೆಯನ್ನು ಅರ್ಥಮಾಡಿಕೊಳ್ಳಬೇಕು ಎಂದು ಅವರು ಘನತವೆತ್ತ ನಿಜಾಮರಿಗೆ ಕಿವಿಮಾತು ಹೇಳಿದ್ದರು.

1948ರ ಜೂನ್ 21ರಂದು ಮೌಂಟ್ ಬ್ಯಾಟನ್ ಗೌರ್ನರ್ ಜನರಲ್ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು. ಅದಕ್ಕೆ ಮೂರು ದಿನ ಮುಂಚೆ ಅವರು ನಿಜಾಮರಿಗೆ ಪತ್ರ ಬರೆದು ರಾಜಿ ಮಾಡಿಕೊಳ್ಳುವಂತೆ ಒತ್ತಾಯಪಡಿಸಿದ್ದರು. "ರಾಜಿ ಮಾಡಿಕೊಂಡು, ದಕ್ಷಿಣ ಭಾರತದ ಶಾಂತಿದೂತರಾಗಿ, ನಿಮ್ಮ ಸಂಸ್ಥಾನ, ನಿಮ್ಮ ವಂಶ ಹಾಗೂ ನಿಮ್ಮ ಪ್ರಜೆಗಳ ಉದ್ಧಾರಕ್ಕಾಗಿ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ" ಎಂದು ತಿಳಿಸಿದ್ದರು. "ನೀವು ಹಟ ಹಿಡಿದು

ನಿಮ್ಮ ನಿಲುವಿಗೇ ಅಂಟಿಕೊಂಡರೆ ನೀವು ವಿಶ್ವದಾದ್ಯಂತ ಇರುವ ವಿವೇಕಶಾಲಿ ಜನರ ನಿಂದನೆ-ಖಂಡನೆಗಳಿಗೆ ಗುರಿಯಾಗುವಿರಿ" ಎಂದು ತಿಳಿಯಹೇಳಿದ್ದರು. ಆದರೆ, ಮೌಂಟ್ ಬ್ಯಾಟನ್ನರ ನಿರ್ಗಮನದ ನಂತರ ಪಟೇಲರ ಹಾದಿ ಸುಗಮವಾಯಿತು. ಅವರು ನಿರ್ಣಾಯಕ ಕ್ರಮ ಕೈಗೊಂಡರು. ಸೆಪ್ಟೆಂಬರ್ 13ರಂದು ಹೈದರಾಬಾದಿಗೆ ಭಾರತದ ಸೇನೆಯನ್ನು ಕಳುಹಿಸಲಾಯಿತು. ನಾಲ್ಕೇ ದಿನಗಳಲ್ಲಿ ಭಾರತದ ಸೈನ್ಯ ಹೈದರಾಬಾದ್ ಸಂಸ್ಥಾನದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿತು. ಈ ಹೋರಾಟದಲ್ಲಿ, ನಲವತ್ತೆರಡು ಮಂದಿ ಭಾರತೀಯ ಸೈನಿಕರೂ ಎರಡು ಸಾವಿರಕ್ಕೂ ಹೆಚ್ಚು ರಜಕಾರರು ಸಾವಿಗೀಡಾಗಿದ್ದರು.

17ರಂದು ರಾತ್ರಿ ನಿಜಾಮರು ಆಕಾಶವಾಣಿಯಲ್ಲಿ ಪ್ರಸಾರ ಭಾಷಣ ಮಾಡಿದರು. ಅವರ ಈ ಭಾಷಣವನ್ನು ಬಹುಮಟ್ಟಿಗೆ ಕೆ.ಎಂ. ಮುನ್ಶಿಯವರು ಬರೆದುಕೊಟ್ಟಿರಬಹುದು. ತಮ್ಮ ಪ್ರಸಾರ ಭಾಷಣದಲ್ಲಿ, ರಜಕಾರರ ಮೇಲೆ ನಿಷೇಧ ಪ್ರಕಟಿಸಿದ ನಿಜಾಮರು "ಭಾರತದಲ್ಲಿನ ಉಳಿದ ಪ್ರಜೆಗಳ ಜೊತೆ ಶಾಂತಿ ಸೌಹಾರ್ದತೆಗಳಿಂದ ಬಾಳ್ವೆ ನಡೆಸುವಂತೆ" ತನ್ನ ಪ್ರಜೆಗಳಿಗೆ ಮನವಿ ಮಾಡಿಕೊಂಡರು. ಆರು ದಿನಗಳ ನಂತರ ನಿಜಾಮರು ಮತ್ತೊಂದು ಪ್ರಸಾರ ಭಾಷಣ ಮಾಡಿ, ರಜ್ವಿ ಮತ್ತು ಅವನ ಸಹಚರರು ಹಿಟ್ಲರ್ ವಿಧಾನಗಳ ಮೂಲಕ ಹಾಗೂ ಭಯೋತ್ಪಾದನೆ ಮೂಲಕ ಸಂಸ್ಥಾನವನ್ನು ಸ್ವಾಧೀನಪಡಿಸಿಕೊಂಡಿದ್ದಾರೆಂದು ಹೇಳಿದರು. "ಭಾರತದೊಂದಿಗೆ ಗೌರವಾನ್ವಿತ ಒಪ್ಪಂದ ಮಾಡಿಕೊಳ್ಳಲು ತಾವು ಕಾತರದಿಂದಿರುವುದಾಗಿಯೂ ಆದರೆ ಈ ಬಣ, ಕಾಲಕಾಲಕ್ಕೆ ಭಾರತ ಸರ್ಕಾರ ಕೊಡಮಾಡಿದ್ದನ್ನು ತಿರಸ್ಕರಿಸುವಂತೆ ಮಾಡಿತೆಂದು" ನಿಜಾಮರು ಈ ಭಾಷಣದಲ್ಲಿ ತಿಳಿಸಿದರೆಂದು ಹೇಳಲಾಗಿದೆ.

ಪೂರ್ವನಿಯೋಜಿತವಾಗಿಯೋ ಅಥವಾ ಆಕಸ್ಮಿಕವಾಗಿಯೋ ಹೈದರಾಬಾದ್ ವಿರುದ್ಧ ಭಾರತದ ಸೇನಾ ಕಾರ್ಯಾಚರಣೆ ನಡೆದದ್ದು ಪಾಕಿಸ್ತಾನದ ಗೌರ್ನರ್ ಜನರಲ್ ಅವರ ನಿಧನದ ಎರಡು ದಿನಗಳ ನಂತರ. ನಿಜಾಮರ ರಾಜ್ಯಕ್ಕೆ ಬೆದರಿಕೆ ಒಡ್ಡಿದರೆ ನೂರು ದಶಲಕ್ಷ ಮುಸ್ಲಿಮರು ಏಕದೇಹಿಯಾಗಿ ಎದ್ದು ನಿಲ್ಲುವರೆಂದು ಜಿನ್ನಾ ಭವಿಷ್ಯ ನುಡಿದಿದ್ದರು. ಆದರೆ ಅದು ನಿಜವಾಗಲಿಲ್ಲ. ಪಾಕಿಸ್ತಾನದ ಕೆಲವು ಭಾಗಗಳಲ್ಲಿ ಜನ ಸಿಟ್ಟಿಗೆದ್ದರಷ್ಟೇ. ಕರಾಚಿಯಲ್ಲಿ ಐದುಸಾವಿರ ಜನರ ಗುಂಪೊಂದು ಭಾರತದ ಹೈಕಮಿಷನರ್ ಕಚೇರಿಗೆ ಪ್ರತಿಭಟನಾ ಮೆರವಣಿಗೆ ನಡೆಸಿತು. ಹಿರಿಯಗಾಂಧಿವಾದಿಯಾದ ಹೈಕಮಿಷನರ್ ಹೊರಗೆ ಬಂದು ಪ್ರತಿಭಟನಕಾರರನ್ನು ಸಾಂತ್ವನಗೊಳಿಸಿದರು. "ನೀವು ಹೇಡಿಗಳು, ನಮ್ಮ ಪಿತೃವಿನ ನಿಧನ ಸಂಭವಿಸಿದಾಗ ನೀವು ನಮ್ಮ ಮೇಲೆ ಆಕ್ರಮಣ ನಡೆಸಿದ್ದೀರಿ" ಎಂದು ಪ್ರತಿಭಟನಕಾರರು ಕೂಗಾಡಿದರು.

ಭಾರತ ಒಕ್ಕೂಟದೊಂದಿಗೆ ಶಾಂತಿಮಾಡಿಕೊಂಡರೆ ಘನತೆವೆತ್ತ ತಮ್ಮನ್ನು ಮಾಸ್ಕೋ ಅಥವಾ ವಾಷಿಂಗ್ಟನ್ನಿನಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗುವುದೆಂದು ಜೂನ್ ತಿಂಗಳಿನಲ್ಲೇ ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ನಿಜಾಮರಿಗೆ ಇಂಗಿತ ನೀಡಿದ್ದರು. ಅವರ

ವೇಷಭೂಷಣ, ಆತಿಥ್ಯದ ಶೈಲಿ ಮೊದಲಾದ ಕಾರಣಗಳಿಂದಾಗಿ ಈ ಗೌರವಾನ್ವಿತ ಹುದ್ದೆ ಅವರಿಗೆ ತಪ್ಪಿರಬಹುದು. ಆದರೇನು ಆಶ್ಚರ್ಯರಾಗಿ ಮಣಿದದ್ದಕ್ಕಾಗಿ ನಿಜಾಮರನ್ನು ಭಾರತದ ಹೊಸ ರಾಜ್ಯವಾದ ಹೈದರಾಬಾದಿನ ರಾಜಪ್ರಮುಖರನ್ನಾಗಿ ನೇಮಿಸಲಾಯಿತು.

ಹಳೆಯ ಆಳ್ವಿಕೆ ಪರಿಸಮಾಪ್ತಿಗೊಂಡ ಎರಡು ವರ್ಷಗಳ ನಂತರ ಮುಂಬಯಿ ಪತ್ರಕರ್ತ ಕೆ.ಎ. ಅಬ್ಬಾಸರು ಹೈದರಾಬಾದಿಗೆ ಭೇಟಿಕೊಟ್ಟಿದ್ದರು. ಅಲ್ಲಿ, ರಾಜಾ ದೀನದಯಾಳರ ನೂರು ವರ್ಷಗಳಷ್ಟು ಹಳೆಯದಾದ ಫೋಟೋ ಸ್ಟುಡಿಯೋದ ಪ್ರದರ್ಶನ ಕಿಂಡಿಯಲ್ಲಿ ಅವರು ನಗರದ ವಿಮೋಚಕರಾದ ಭಾರತೀಯ ಸೇನೆಯ ಕರ್ನಲ್ ಜೆ.ಎನ್. ಚೌಧುರಿಯವರ ಭಾವಚಿತ್ರ ರಾರಾಜಿಸುತ್ತಿರುವುದನ್ನು ಅಬ್ಬಾಸ್ ಕಂಡರು. ನಿಜಾಮರ ಭಾವಚಿತ್ರಗಳು ಕಣ್ಮರೆಯಾಗಿದ್ದವು. ಹೈದರಾಬಾದಿನಲ್ಲಿ ಈಗ ಕಾಂಗ್ರೆಸ್ ಟೋಪಿ ಹೊಸ ಆಡಳಿತಗಾರರ ಶಿರಸ್ತ್ರಾಣವಾಗಿತ್ತು. ವಸಾಹತುಶಾಹಿಯ ಟರ್ಬನ್ ಪೊಲೀಸ್ ಕಾರ್ಯಾಚರಣೆಗೆ ಮೊದಲೇ ಕಣ್ಮರೆಯಾಗಿತ್ತು.

VII

1947ರ ಆಗಸ್ಟ್‌ನಲ್ಲಿ, ಉಪಖಂಡದಲ್ಲಿ ಸೇವೆ ಸಲ್ಲಿಸಿದ್ದ ಅನುಭವಿ ಬ್ರಿಟಿಷ್ ಅಧಿಕಾರಿಯೊಬ್ಬ "ಭಾರತ ಮತ್ತು ಭವಿಷ್ಯ" ಎಂಬ ಶಕುನರೂಪದ, ಶ್ರೀಮದ್ಗಾಂಭೀರ್ಯದ ಶೀರ್ಷಿಕೆಯಡಿ ಲೇಖನವೊಂದನ್ನು ಪ್ರಕಟಿಸಿದ. "ಬ್ರಿಟಿಷ್ ಭಾರತ ಎರಡು ರಾಷ್ಟ್ರಗಳಾಗಿ ಈಗ ತಾನೇ ವಿಭಜನೆ ಹೊಂದಿದೆ. ವಿಭಜನೆ ಇಲ್ಲಿಗೇ ನಿಂತೀತೇ? ಅಥವಾ ಉಪಖಂಡ ಅಸಂಖ್ಯಾತ, ಸಣ್ಣಸಣ್ಣ ಸಮರನಿರತ ರಾಷ್ಟ್ರಗಳಾಗಿ ಒಡೆದು ಚೂರಾಗಬಹುದೆ? ಪಾಕಿಸ್ತಾನ ಜನ್ಮತಃ ಅಸ್ಥಿರ-ಅಭದ್ರವಾಗಿ ಕಾಣಿಸುತ್ತಿದೆ. ಅದರ ವಾಯುವ್ಯ ಭಾಗಗಳು ಸ್ವತಂತ್ರ ಪಠಾಣಾಸ್ತಾನವಾಗುವ ಸಾಧ್ಯತೆ ಹೆಚ್ಚಾಗಿದೆ. ಅಥವಾ ಭಾರತ ಇದಕ್ಕಿಂತ ಹೆಚ್ಚು ಸ್ಥಿರವಾಗಿ, ಸುಭದ್ರವಾಗಿಯೇ? ಇಲ್ಲ. ಹೀಗಾಗಿ, ಅನೇಕ ಮಂದಿ ಸಮರ್ಥ ವೀಕ್ಷಕರ ನಂಬಿಕೆ ಪ್ರಕಾರ ಅಂತಿಮವಾಗಿ ಮದ್ರಾಸ್ ಸ್ವತಂತ್ರಗೊಂಡು ಬೇರೆಯಾಗಲಿದೆ. ಸಣ್ಣಪುಟ್ಟ ಮಹಾರಾಜರ ಸಂಸ್ಥಾನಗಳಿಗೆ ಭಾರತದೊಂದಿಗೆ ಸೇರ್ಪಡೆಯಾಗದೆ ಗತ್ಯಂತರವಿರಲಿಲ್ಲ. ಆದರೆ ದಕ್ಷಿಣದ ದೊಡ್ಡ ಸಂಸ್ಥಾನಗಳಾದ, ಮುಖ್ಯವಾಗಿ ಹೈದರಾಬಾದ್, ಮೈಸೂರು, ತಿರುವಾಂಕೂರುಗಳ ಸ್ಥಿತಿಗತಿ ಸ್ಥಾನಮಾನಗಳು ಬೇರೆಯವೇ ಆಗಿವೆ. ಈ ಸಂಸ್ಥಾನಗಳು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಕಾಪಾಡಿಕೊಳ್ಳಬಹುದು. ತಮ್ಮ ಅನುಕೂಲಕ್ಕೆ ತಕ್ಕಂತೆ ತಾವೇ ಏಕೈಕವಾಗಿ ನಿರ್ಧಾರ ಕೈಗೊಳ್ಳುವುದರಲ್ಲಿ ಅವಕ್ಕೆ ಕಾಂಗ್ರೆಸ್‌ನ ಈಚಿನ ಬೆದರಿಕೆಗಳಿಂದ ಏನೂ ಬಾಧಕವಾಗಲಾರದು."

ಅಂತಿಮವಾಗಿ ಬ್ರಿಟಿಷರ ಭಾರತದ ಜಾಗದಲ್ಲಿ ದಕ್ಷಿಣ ಭಾರತದ ರಾಜ್ಯಗಳ ಒಕ್ಕೂಟವೂ ಸೇರಿದಂತೆ ಮೂರು ಅಥವಾ ನಾಲ್ಕು ರಾಷ್ಟ್ರಗಳು ರೂಪುಗೊಳ್ಳಬಹುದು. ಸ್ಥೂಲವಾಗಿ ಹೇಳುವುದಾದರೆ ಅದು ಹದಿನಾರನೇ ಶತಮಾನದ ಭಾರತದ ವಿನ್ಯಾಸವೇ ಆಗುತ್ತದೆ ಎಂದು ಈ ಪ್ರವಾದಿ ಲೇಖನವನ್ನು ಮುಗಿಸಿದ್ದ.

ಅಡೆ-ತಡೆ, ಅಡ್ಡಿ-ಆತಂಕ, ವಿರೋಧ ಇವೆಲ್ಲದರ ಮಧ್ಯೆಯೂ ಹಲವಾರು ಸ್ವತಂತ್ರ ಸಂಸ್ಥಾನಗಳನ್ನು ಒಂದುಗೂಡಿಸಿದ್ದು ನಿಜಕ್ಕೂ ಒಂದು ಮಹತ್ಸಾಧನೆಯೇ. ಈ ಕೆಲಸವನ್ನು ಎಷ್ಟು ಸುಸೂತ್ರವಾಗಿ, ಸುಗಮವಾಗಿ ನೆರವೇರಿಸಲಾಯಿತೆಂದರೆ, ಒಂದು ಕಾಲಕ್ಕೆ ಈ ರಾಷ್ಟ್ರ ಒಂದು ರಾಷ್ಟ್ರವಾಗಿರಲಿಲ್ಲ, ಐದುನೂರು ಸ್ವತಂತ್ರ ಸಂಸ್ಥಾನಗಳಾಗಿದ್ದವು ಎಂಬುದನ್ನು ಭಾರತೀಯರು ಬಲುಬೇಗ ಮರೆತುಬಿಟ್ಟರು. 1947 ಮತ್ತು 1948ರಲ್ಲಿ ವಿಚ್ಛಿದ್ರಗೊಳ್ಳುವ ಬೆದರಿಕೆ ಬೇಕಾದಷ್ಟಿತ್ತು. ಭೋಪಾಲ್, ತಿರುವಾಂಕೂರಿನಂಥ ಜೇನುಹುಟ್ಟುಗಳು, ಹೈದರಾಬಾದಿನಂಥ ಆಕ್ರಮಣಕಾರಿ ಆಯಕಟ್ಟಿನ ಕೇಂದ್ರಗಳು ಇರಲಿಲ್ಲವೆ? ಆದರೆ, ಕೊನೆಯ ಮಹಾರಾಜ ಸೇರ್ಪಡೆಯ ಒಡಂಬಡಿಕೆಗೆ ಸಹಿಹಾಕಿ ತನ್ನ ಸಂಸ್ಥಾನ ಬಿಟ್ಟುಕೊಟ್ಟ ಐದು ವರ್ಷಗಳಲ್ಲೇ ಭಾರತೀಯರು, ಸಮಗ್ರ ಏಕೀಕೃತ ಭಾರತವನ್ನು ಸಹಜವೆಂಬಂತೆ ಒಪ್ಪಿಕೊಂಡರು. ಏಕೀಕೃತ ಭಾರತ ಇದಕ್ಕಿಂತ ಭಿನ್ನವಾಗಿತ್ತೆಂದು ಕಲ್ಪಿಸಿಕೊಳ್ಳಲು ಇವತ್ತಿಗೂ ಸಾಕಷ್ಟು ಬೌದ್ಧಿಕ ಕಸರತ್ತು ನಡೆಸಬೇಕಾದೀತು.

> "ಭಾರತದ ರಾಜ್ಯ ವ್ಯವಸ್ಥೆಯಲ್ಲಿ, ಭಾರತೀಯ ರಾಜಮಹಾರಾಜರುಗಳ ಸ್ಥಾನಮಾನಕ್ಕೆ ಇತಿಹಾಸದಲ್ಲಿ ಹೋಲಿಕೆಯೇ ಇಲ್ಲ. ಅವರ ಸ್ಥಾನಮಾನಗಳಿಗೆ ಹೋಲಿಸಬಹುದಾದಂಥ ಸರಿಸಮಾನ ವ್ಯವಸ್ಥೆಯೊಂದು ಇತಿಹಾಸದಲ್ಲಿ ಕಾಣಸಿಗುವುದಿಲ್ಲ. ಆದಾಗ್ಯೂ ರಾಜಮಹಾರಾಜರುಗಳು ಶಾಂತಿ-ಸೌಹಾರ್ದ ಸಂಧಾನಗಳ ಮೂಲಕ ವಿಸರ್ಜಿತ ರಾದರು. ಹಾಗೂ ಒಕ್ಕೂಟದ ಇತರ ಪ್ರಜಾಸತ್ತಾತ್ಮಕಗಳಿಗಿಂತ ಅನನ್ಯವೆನ್ನಿಸಿಕೊಳ್ಳದೆ ಉಳಿದುಕೊಂಡರು."

ಮೇಲಿನವು, 1950ರಲ್ಲಿ ಭಾರತ ಸರ್ಕಾರ ಪ್ರಕಟಿಸಿರುವ ಪುಸ್ತಿಕೆಯೊಂದರಲ್ಲಿನ ಮಾತುಗಳು. ಈ ಆತ್ಮ ಪ್ರಶಂಸೆ ಯೋಗ್ಯವಾದದ್ದೇ. ಆದರೆ ಬ್ರಿಟಿಷ್ ನಿರ್ದೇಶಿತ ಭಾರತದ ವಿಭಜನೆ ಭಾರಿ ಪ್ರಮಾಣದಲ್ಲಿ ನರಬಲಿ ತೆಗೆದುಕೊಂಡಿತು. ಆದರೆ ಊಳಿಗಮಾನ್ಯ ನಿರಂಕುಶ ಪ್ರಭುತ್ವದ 500 ಕೇಂದ್ರಗಳನ್ನು ಹೆಚ್ಚು ಸಾವು ನೋವುಗಳಿಲ್ಲದೆ ಭಾರತ ಒಕ್ಕೂಟದೊಳಗಿನ ಪ್ರಜಾಸತ್ತಾತ್ಮಕ ಘಟಕಗಳಾಗಿ ಪರಿವರ್ತಿಸಲಾಗಿತ್ತು. "ಭೂಪಟದಲ್ಲಿದ್ದ ಈ ಸಂಸ್ಥಾನಗಳ ಹಳದಿ ಚಿಹ್ನೆಗಳು ಈಗ ಮಾಯವಾಗಿದ್ದವು. ಸಾರ್ವಭೌಮತ್ವ ಮತ್ತು ಅಧಿಕಾರವನ್ನು ಜನರಿಗೆ ವರ್ಗಾಯಿಸಲಾಗಿತ್ತು. ಸಣ್ಣ ಸಣ್ಣ ಓಣಿಗಳಲ್ಲಿ, ಗುಂಪುಗುಂಪಾಗಿ ವಿವಿಕ್ತ ಬದುಕಿಗೆ ಪಳಗಿಹೋಗಿದ್ದ ಜನರು ಭಾರತದ ಸವಿಸ್ತಾರ ಬದುಕಿನ ಭಾಗವಾದರು. ಅವರೀಗ ರಾಷ್ಟ್ರವ್ಯಾಪಿ ಬೀಸುತ್ತಿರುವ ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡಬಹುದು" ಎಂದು ಈ ಪುಸ್ತಿಕೆಯಲ್ಲಿ ಬರೆಯಲಾಗಿದೆ.

ಈ ಪುಸ್ತಿಕೆ ಸರ್ಕಾರದ ಅಧಿಕೃತ ಪ್ರಕಟಣೆ. ಸಿದ್ಧಪಡಿಸಿದ ಹೊಣೆ ಹೊತ್ತವರಿಗೆ ಇದರ ಕೀರ್ತಿ ಸಲ್ಲಬೇಕು. ಪ್ರಚಾರಕ ಲೇಖಕ ಹೀಗೆ ಬರೆದಿದ್ದಾನೆ: "ಎರಡು ಶತಮಾನಗಳ ನಿರಂತರ ಪ್ರಯತ್ನಗಳ ನಂತರವೂ ಯಾವುದನ್ನು ಸಾಧಿಸುವುದರಲ್ಲಿ ಬ್ರಿಟಿಷ್ ಅಧಿಕಾರಿಗಳು

ವಿಫಲರಾದರೋ ಅದನ್ನು, ಸರ್ದಾರ್ ವಲ್ಲಭಭಾಯಿ ಪಟೇಲರು, ರಾಜಮಹಾರಾಜರುಗಳ ಉದಾತ್ತ ಸಂವೇದನೆಗಳನ್ನು, ಹೃದಯಗಳನ್ನು ಮನವಿಯುಕ್ತ ಒಲೈಸುವಿಕೆ ಮೂಲಕ ಸಾಧಿಸಿದರು."

ಪಟೇಲರ ಮಾರ್ಗದರ್ಶನ ಖಚಿತವೂ, ವಿವೇಕಯುತವೂ ಆದುದಾಗಿತ್ತು. ನೆಹರೂ ಸೇರಿದಂತೆ ಬೇರೊಬ್ಬ ಕಾಂಗ್ರೆಸ್ ನಾಯಕರ ಸಹನೆ, ದೂರದೃಷ್ಟಿಗಳ ಮಾರ್ಗದರ್ಶನದಿಂದಲೂ ರಾಜಮಹಾರಾಜರುಗಳ ನಿರ್ಗಮನ ಸಾಧ್ಯವಾಗುತ್ತಿರಲಿಲ್ಲ. ಆದರೆ, ವಿ.ಪಿ. ಮೆನನ್ನರ ಗೈರುಹಾಜರಿಯಲ್ಲಿ ಪಟೇಲರೊಬ್ಬರಿಂದಲೇ ಇದು ಸಾಧ್ಯವಾಗುತ್ತಿತ್ತು ಎಂದು ಹೇಳಲಾಗದು. ವಿ.ಪಿ. ಮೆನನ್ ಸಂಸ್ಥಾನಗಳ ಅರಮನೆಗಳಿಗೆ ನೂರಾರು ಬಾರಿ ಎಡೆತಾಕಿ ರಾಜಮಹಾರಾಜರುಗಳನ್ನು ಮೆದುಗೊಳಿಸಿ ಹಾದಿ ಸುಗಮಗೊಳಿಸಿದರು. ಅಂತೆಯೇ ಮೆನನ್ನರಿಂದಲೂ ಅಧಿಕಾರಿಗಳ ನೆರವಿಲ್ಲದೆ ಪರಿಣಾಮಕಾರಿಯಾಗಿ ಪರಿವರ್ತನೆಯುಂಟು ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಭಾರತದೊಂದಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಒಂದುಗೂಡುವಂಥ ಪರಿಸ್ಥಿತಿಯನ್ನು ಸೃಷ್ಟಿಸುವುದರಲ್ಲಿ ಮೆನನ್ನರ ಹಿಂದೆ, ನೇಪಥ್ಯದಲ್ಲಿ ಅಧಿಕಾರಿಗಳು ಇದ್ದರು.

ಸತ್ಯಸಂಗತಿಯೆಂದರೆ ರಾಜಕಾರಣಿಗಳು ಹಾಗೂ ಅಧಿಕಾರಿಗಳಿಗೆ ಜನ ಸಮುದಾಯದ ಬೆಂಬಲ-ಸಹಕಾರಗಳಿದ್ದವು. ಮಹಾರಾಜರುಗಳ ಸಂಸ್ಥಾನಗಳ ಜನ ಸಾಮಾನ್ಯರು ಹಲವಾರು ದಶಕಗಳಿಂದ ಬ್ರಿಟಿಷರ ಭಾರತದ ಪ್ರಜೆಗಳಿಗೆ ನೀಡಲಾಗಿದ್ದ ಹಕ್ಕುಗಳಿಗಾಗಿ ಬೊಬ್ಬೆಹಾಕುತ್ತಿದ್ದರು. ಅನೇಕ ಸಂಸ್ಥಾನಗಳಲ್ಲಿ ಕ್ರಿಯಾಶೀಲವಾದ ಮತ್ತು ಸಶಕ್ತವಾದ ಪ್ರಜಾಮಂಡಲಗಳಿದ್ದವು. ಈ ಬಗ್ಗೆ ರಾಜಮಹಾರಾಜರುಗಳು ಗಾಢವಾದ ಪರಿಜ್ಞಾನವುಳ್ಳವರಾಗಿದ್ದರು. ಕೆಳ ಹಂತದಿಂದ ಜನತಾ ಪ್ರತಿಭಟನೆಯ ಬೆದರಿಕೆ ಇಲ್ಲವಾಗಿದ್ದಿದ್ದರೆ ರಾಜಮಹಾರಾಜರುಗಳು ಅಷ್ಟು ಸುಲಭವಾಗಿ ಭಾರತ ಸರ್ಕಾರಕ್ಕೆ ರಾಜ್ಯಭಾರ ಬಿಟ್ಟುಕೊಡುತ್ತಿರಲಿಲ್ಲ.

ಭಾರತದ ಏಕೀಕರಣದಲ್ಲಿ ಪಟೇಲರಿಗೆ ಯಥೇಷ್ಟವಾಗಿ ಜನಸಹಾಯ ಒದಗಿಬಂದಿತ್ತು. ಇಂಥ ಸಹಾಯ ನೀಡಿದವರಲ್ಲಿ ಇಂದು ಬಹುತೇಕ ಮಂದಿ ಅಜ್ಞಾತರೂ ಅಮಾನ್ಯರೂ ಆಗಿ ಉಳಿದಿದ್ದಾರೆ. ಸಂಪೂರ್ಣವಾಗಿ ಜನರ ಮನಸ್ಸಿನಿಂದ ಮಾಯವಾಗದಿರುವ, ಜನ ಮರೆಯದಿರುವ ವ್ಯಕ್ತಿ ಎಂದರೆ ವಿ.ಪಿ. ಮೆನನ್. ಈತ ಮಹಾರಾಜರುಗಳ ಸಮನ್ವಯತೆಯ, ಏಕೀಕರಣದ ಮುಖ್ಯ ರೂವಾರಿ. ಹಾಗೂ ಭಾರತ ಏಕೀಕರಣ ದಾಖಲಿಸಿದ ಪ್ರಪ್ರಥಮ ಬಖೈರುಗಾರ, ಚರಿತ್ರೆಕಾರ. ಈ ಪ್ರಕ್ರಿಯೆಯಲ್ಲಿ ಮೆನನ್ ಕಲಿತ ಪಾಠವನ್ನು ಸ್ವಲ್ಪ ಆಲಿಸೋಣ:

"554 ಸಂಸ್ಥಾನಗಳನ್ನು ವಿಸರ್ಜಿಸಿ ಅವುಗಳನ್ನು ಗಣರಾಜ್ಯದ ವಿನ್ಯಾಸದೊಳಗೆ ಏಕೀಕರಣಗೊಳಿಸಿದ್ದರಿಂದ;

ನಾವು ಕಾರ್ಯ ಪ್ರಾರಂಭಿಸಿದಾಗ ಇದ್ದ ಅಸ್ತವ್ಯಸ್ತತೆಯ ದುಃಸ್ವಪ್ನದಿಂದ ಸುವ್ಯವಸ್ಥೆಯನ್ನು ಜಾರಿಗೊಳಿಸಿದ್ದರಿಂದ;

ಎಲ್ಲ ಮಾಜಿ ಆಳರಸರ ಸಂಸ್ಥಾನಗಳಲ್ಲಿ ಆಡಳಿತವನ್ನು ಪ್ರಜಾಸತ್ತಾತ್ಮಕಗೊಳಿಸಿದ್ದರಿಂದ ನಾವೀಗ ಬೇರೆ ರಂಗಗಳಲ್ಲಿ ಸರಿಸಮಾನ ಯಶಸ್ಸನ್ನು ಸಾಧಿಸಲು ಗಟ್ಟಿಯಾಗಬೇಕಿದೆ, ಸಶಕ್ತರಾಗಬೇಕಿದೆ."

ತದನಂತರ, ಸೂಕ್ತ ಕಾಲದಲ್ಲಿ ನಾವು ರಾಷ್ಟ್ರ ನಿರ್ಮಾಣದ ಬೇರೆ ಕ್ಷೇತ್ರಗಳತ್ತ, ಬೇರೆ ರಂಗಗಳತ್ತ ಗಮನಪರಿಸೋಣ. ಅದಕ್ಕೆ ಮುಂಚೆ ನಾವು ಭಾರತದ ಒಕ್ಕೂಟಕ್ಕೆ ತುಂಬಾ ತೊಂದರೆ ಉಂಟುಮಾಡಿದ ಮಹಾರಾಜರ ಸಂಸ್ಥಾನವೊಂದನ್ನು ಪರೀಕ್ಷಿಸಿ ನೋಡುವುದು ಅತ್ಯವಶ್ಯಕವಾಗಿದೆ. ಇದು ಕುಕ್ಕೆಯ ಅಂಚಿನಲ್ಲಿ ಪ್ರಶಸ್ತಸ್ಥಳದಲ್ಲಿ ವಿರಾಜಮಾನವಾಗಿರುವ ಫಲ-ಸೇಬು; ಅದು ಯಾವತ್ತೂ ಬುಟ್ಟಿಯೊಳಗೆ ಇರಲಿಲ್ಲ ಅಥವಾ ಬುಟ್ಟಿಯ ಹೊರಗೂ ಇರಲಿಲ್ಲ.

o

4

ರುದ್ರ ರಮಣೀಯ ಕಣಿವೆ

ಪರ್ವತಗಳ ಬಗೆಗಿನ ನನ್ನ ಪ್ರೀತಿ ಮತ್ತು ಕಾಶ್ಮೀರದೊಂದಿಗಿನ ನನ್ನ ಬಾಂಧವ್ಯ, ಇವೇ ನನ್ನನ್ನು ವಿಶೇಷವಾಗಿ ತಮ್ಮತ್ತ ಸೆಳೆದುಕೊಂಡದ್ದು. ಅಲ್ಲಿ ನಾನು ವರ್ತಮಾನಕಾಲದ ಜೀವನ ಚೈತನ್ಯ ಮತ್ತು ಸೌಂದರ್ಯಗಳನ್ನಷ್ಟೇ ಅಲ್ಲದೆ ಗತಕಾಲದ ಸ್ಮರಣೀಯ ರಮ್ಯತೆ, ಸೊಗಸು, ಚೆಲುವುಗಳನ್ನೂ ಕಂಡಿದ್ದೆ...ಭಾರತದ ಬಗ್ಗೆ ಯೋಚಿಸಿದಾಗ ಅನೇಕ ಸಂಗತಿಗಳು ನನ್ನ ಮನಸ್ಸಿಗೆ ಬರುತ್ತವೆ, ಅನೇಕ ವಿಷಯಗಳ ಬಗ್ಗೆ ವಿಚಾರ ಮಾಡುತ್ತೇನೆ...(ಆದರೆ) ಎಲ್ಲಕ್ಕಿಂತ ಮಿಗಿಲಾಗಿ ಹಿಮಾಲಯ, ಹಿಮಾಚ್ಛಾದಿತ ಪರ್ವತಶ್ರೇಣಿ ಅಥವಾ ಕಾಶ್ಮೀರದ ವಸಂತ ಋತುವಿನ ಪರ್ವತ ಸಾಲು, ಕಣಿವೆ-ಕಂದರಗಳು. ಆದೇ ತಾನೆ ಅರಳಿದ ಹೂವುಗಳಿಂದ ಕಂಗೊಳಿಸುವ ಕಣಿವೆ-ಕಂದರಗಳು, ಇವುಗಳ ಮೂಲಕ ಜುಳು ಜುಳು ನಿನದಿಸುತ್ತ ಹರಿಯುವ ಹೊಳೆ, ತೊರೆಗಳು.

ಜವಹರಲಾಲ್ ನೆಹರೂ-1946

ಐದುನೂರಕ್ಕೂ ಹೆಚ್ಚು ರಾಜಮಹಾರಾಜರ ಸಂಸ್ಥಾನಗಳು ಭಾರತ ಒಕ್ಕೂಟದೊಂದಿಗೆ ವಿಲೀನಗೊಂಡವು. ಇವುಗಳ ಪೈಕಿ ಅತಿಮುಖ್ಯವಾದದ್ದು-ಅಂದಿಗೂ, ಇಂದಿಗೂ ಜಮ್ಮು ಕಾಶ್ಮೀರ ರಾಜ್ಯ. 84,471 ಚದರ ಮೈಲಿ ವಿಸ್ತೀರ್ಣವುಳ್ಳ ಇದು ಹೈದರಾಬಾದಿಗಿಂತ ದೊಡ್ಡದು. ಆದರೆ ಇಲ್ಲಿನ ಜನಸಂಖ್ಯೆ ನಲವತ್ತು ಲಕ್ಷಕ್ಕೂ ಸ್ವಲ್ಪ ಜಾಸ್ತಿ, ಅಷ್ಟೇ. ರಾಜ್ಯದ ಉದ್ದಗಲ ವಿರಳವಾಗಿ ಚದುರಿಹೋದ ಜನಸಂಖ್ಯೆ. ಜಮ್ಮು ಕಾಶ್ಮೀರ ವಿಭಿನ್ನವೂ ವೈವಿಧ್ಯಮಯವೂ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ರಾಜ್ಯ. ಜಮ್ಮು ಕಾಶ್ಮೀರದಲ್ಲಿ ಐದು ಪ್ರಮುಖ ಪ್ರದೇಶಗಳಿದ್ದವು. ಜಮ್ಮು ಪ್ರಾಂತ್ಯ, ಪಂಜಾಬಿಗೆ ಹೊಂದಿಕೊಂಡಂತಿದ್ದು, ಬೆಟ್ಟಸಾಲುಗಳಿಂದ ಕೂಡಿದೆ. ಕೃಷಿಯೋಗ್ಯವಾದ ಹೆಚ್ಚು ಭೂಸಂಪತ್ತನ್ನು ಹೊಂದಿದೆ. ವಿಭಜನೆ ಪೂರ್ವದಲ್ಲಿ ಇಲ್ಲಿ ಜನಸಂಖ್ಯೆ ಸ್ವಲ್ಪ ಹೆಚ್ಚಾಗಿತ್ತು (ಶೇ 53). ಆದರೆ

ವಿಭಜನೆಯ ವರ್ಷ ಭಯಭೀತ ಜನರ ವಲಸೆಯ ಅಲೆಯಿಂದಾಗಿ ಜಮ್ಮು ಹಿಂದೂ ಪ್ರಾಬಲ್ಯದ ಪ್ರದೇಶವಾಯಿತು. ಇದಕ್ಕೆ ತದ್ವಿರುದ್ಧ ಎಂಬಂತೆ, ಜಮ್ಮುವಿಗೆ ಉತ್ತರದಲ್ಲಿರುವ ಕಾಶ್ಮೀರ ಕಣಿವೆಯಲ್ಲಿ ಮುಸ್ಲಿಮರು ಬಹುಸಂಖ್ಯಾತರು. ಕಾಶ್ಮೀರ ಕಣಿವೆ ಭಾರತದ ಅತ್ಯಂತ ಸುಂದರ ತಾಣವೆಂಬುದು ಸರ್ವತ್ರ ಒಪ್ಪಿತವಾದ ಸಂಗತಿ. ಬೇಸಿಗೆಯಲ್ಲಿ ದೆಹಲಿ ಪಂಜಾಬುಗಳ ಶ್ರೀಮಂತ ಪ್ರವಾಸಿಗರು ಕಾಶ್ಮೀರ ಕಣಿವೆಗಳಿಗೆ, ಸರೋವರ ತಾಣಗಳಿಗೆ ವಿಹಾರಾರ್ಥ ಹಿಂಡುಹಿಂಡಾಗಿ ಬರುತ್ತಾರೆ. ರೇಷ್ಮೆ, ಉಣ್ಣೆ, ಮರ, ಹಿತ್ತಾಳೆ ಮೊದಲಾದ ಕುಶಲಕರ್ಮಿಗಳ ತೌರುಮನೆ ಇದು. ಇಲ್ಲಿನ ಕುಶಲಕರ್ಮಿಗಳು ನಯನ ಮನೋಹರವಾದ ಕರಕುಶಲವಸ್ತುಗಳನ್ನು ತಯಾರಿಸಿ ಭಾರತದ ವಿವಿಧೆಡೆಗಳಿಗೆ ಹಾಗೂ ವಿದೇಶಗಳಿಗೆ ರಫ್ತುಮಾಡುತ್ತಾರೆ. ಜಮ್ಮು ಹಾಗೂ ಕಾಶ್ಮೀರ ಕಣಿವೆ ಎರಡೂ ಕಡೆ ಅಲ್ಲಷ್ಟು ಇಲ್ಲಷ್ಟು ಚದುರಿದಂತೆ ಸಾಕಷ್ಟು ಸಿಖ್ಖರೂ ಇದ್ದಾರೆ.

ಕಣಿವೆಯ ಪೂರ್ವದಲ್ಲಿ ಲಡಖ್ಖಿನ ಉತ್ತುಂಗ ಪರ್ವತಶ್ರೇಣಿ ಇದೆ. ಇದು ಟಿಬೆಟ್ ಗಡಿಯಲ್ಲಿದ್ದು ಬೌದ್ಧರು ಇಲ್ಲಿ ಹೆಚ್ಚಾಗಿದ್ದಾರೆ. ಪಶ್ಚಿಮದಲ್ಲಿ ಹೆಚ್ಚಿನ ಜನವಸತಿ ಇಲ್ಲದ ಗಿಲ್ಗಿಟ್ ಮತ್ತು ಬಾಲ್ಟಿಸ್ತಾನ್ ಬಯಲು ಸೀಮೆಯಿದೆ. ಇಲ್ಲಿನ ಬಹುತೇಕ ಜನ ಮುಸ್ಲಿಮರು; ಇಸ್ಲಾಮಿನ ಶಿಯಾ ಮತ್ತು ಇಸ್ಮೈಲಿ ಪಂಥಗಳಿಗೆ ಸೇರಿದವರು. ಕಣಿವೆಯಲ್ಲಿರುವಂತೆ ಸುನ್ನಿ ಪಂಥೀಯರ ಪ್ರಾಬಲ್ಯ ಇಲ್ಲಿಲ್ಲ.

ಸಂಪೂರ್ಣ ಭಿನ್ನವಾದ ಈ ಪ್ರದೇಶಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಒಂದು ರಾಜ್ಯದ ಛತ್ರಿಯಡಿ ಸೇರಿಕೊಂಡವು. ಈ ಪ್ರದೇಶಗಳನ್ನು ಏಕೀಕರಣಗೊಳಿಸಿದವರು ಡೋಗ್ರಾ ರಜಪೂತ ವಂಶಜರು. 1830ರಲ್ಲಿ ಲಡಖ್ಖನ್ನು ಜಯಿಸಿದ ಡೋಗ್ರಾ ರಜಪೂತರು 1840ರಲ್ಲಿ ಬ್ರಿಟಿಷರಿಂದ ಕಾಶ್ಮೀರ ಕಣಿವೆಯನ್ನು ಸ್ವಾಧೀನ ಪಡಿಸಿಕೊಂಡು ಶತಮಾನದ ಕೊನೆಯ ವೇಳೆಗೆ ಗಿಲ್ಗಿಟ್‌ನೊಳಕ್ಕೆ ಪ್ರವೇಶಿಸಿದರು. ಹೀಗೆ ಜಮ್ಮು-ಕಾಶ್ಮೀರ ಸಂಸ್ಥಾನ ಅಫ್ಘನಿಸ್ತಾನ, ಚೀನಾದ ಸಿಂಕಿಯಾಂಗ್ ಮತ್ತು ಟಿಬೆಟ್‌ನೊಂದಿಗೆ ಗಡಿಗಳನ್ನು ಹಂಚಿಕೊಳ್ಳುವಂತಾಯಿತು. ಅಫ್ಘನಿಸ್ತಾನದ ಕಿರಿದಾದ ಒಂದಿಷ್ಟು ಬಯಲು ಪ್ರದೇಶ ಇದನ್ನು ಸೋವಿಯತ್ ಒಕ್ಕೂಟದ ಗಡಿಯಿಂದ ಪ್ರತ್ಯೇಕಿಸಿದೆ.

ಈ ಪ್ರದೇಶವೇ, ಸಂಸ್ಥಾನಕ್ಕೆ ಜನಸಂಖ್ಯೆಗಿಂತ ಹೆಚ್ಚಿನ ಆಯಕಟ್ಟಿನ ಮಹತ್ವವನ್ನು ತಂದುಕೊಟ್ಟಿತು. 1947ರ ಆಗಸ್ಟ್ 15ರ ನಂತರ ಕಾಶ್ಮೀರದ ಈ ಮಹತ್ವ ಮತ್ತಷ್ಟು ಹೆಚ್ಚಾಯಿತು. ಎರಡು ಹೊಸ ರಾಷ್ಟ್ರಗಳೊಂದಿಗೆ ಗಡಿ ಹೊಂದಿದ ಕಾರಣದಿಂದಾಗಿ ಆಯಕಟ್ಟಿನ ಮಹತ್ವ ಮತ್ತಷ್ಟು ಹೆಚ್ಚಿತು. ಬಹುತೇಕ ಮುಸ್ಲಿಂ ಜನಸಂಖ್ಯೆಯೇ ಹೆಚ್ಚಾಗಿರುವ ಸಂಸ್ಥಾನದಲ್ಲಿ ಹಿಂದೂ ಮಹಾರಾಜನ ಆಳ್ವಿಕೆಯ ಅಸಂಗತತೆ ಭೌಗೋಳಿಕ ಅನುಷಂಗಿಕತೆಯಿಂದಾಗಿ ದುಪ್ಪಟ್ಟುಗೊಂಡಿತ್ತು. ಇತರ ವಿವಾದಾತ್ಮಕ ಪ್ರದೇಶಗಳಾದ ಜುನಾಗಢ ಮತ್ತು ಹೈದರಾಬಾದ್‌ಗಳಿಗಿಂತ ವಿಭಿನ್ನವಾದ ಕಾಶ್ಮೀರ, ಭಾರತ ಮತ್ತು ಪಾಕಿಸ್ತಾನ ಎರಡರೊಂದಿಗೂ ಅಕ್ಕಪಕ್ಕ ಅಂಟಿಕೊಂಡಿತ್ತು. ಪಿರಪಕ್ಕೂ ನೆರೆಯಾಗಿತ್ತು.

1947ರಲ್ಲಿ ಹರಿಸಿಂಗ್ ಕಾಶ್ಮೀರದ ಮಹಾರಾಜರಾಗಿದ್ದರು. 1925ರ ಸೆಪ್ಟಂಬರಿನಲ್ಲಿ ಸಿಂಹಾಸನಾರೋಹಣ ಮಾಡಿದ ಇವರು ಮುಂಬಯಿಯ ರೇಸ್ ಕೋರ್ಸಿನಲ್ಲಿ ಹೆಚ್ಚು ಕಾಲಕಳೆಯುತ್ತಿದ್ದರು ಇಲ್ಲವೇ ತಮ್ಮ ಸಂಸ್ಥಾನದ ಅರಣ್ಯದಲ್ಲಿ ಬೇಟೆಯಾಡುವುದರಲ್ಲಿ ಹೆಚ್ಚು ವೇಳೆ ವ್ಯಯ ಮಾಡುತ್ತಿದ್ದರು. ಬೇರೆ ಮಾತಿನಲ್ಲಿ ಹೇಳುವುದಾದರೆ ತಮ್ಮ ರಾಜವಂಶದಲ್ಲೇ ವಿಶಿಷ್ಟ ಎನ್ನಬಹುದಾದ ವ್ಯಕ್ತಿ. ನಾಲ್ಕನೆಯ ಕಿರಿಯ ಮಹಾರಾಣಿಯೇ ದೂರಿರುವಂತೆ, "ಅವರು ಪ್ರಜೆಗಳನ್ನು ಭೇಟಿ ಮಾಡುವುದಿಲ್ಲ. ಅದೇ ಸಮಸ್ಯೆ. ಅವರ ಸುತ್ತ ಗೋಗರೆಯುವ ವಂದಿಮಾಗಧರು ಅಥವಾ ಪ್ರೀತಿ ಪಾತ್ರರೇ ತುಂಬಿರುತ್ತಾರೆ. ಹೊರ ಪ್ರಪಂಚದಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿಯಲು ನಿಜವಾಗಿ ಪ್ರಯತ್ನಮಾಡುವುದೇ ಇಲ್ಲ."

ಆಡಳಿತಾವಧಿಯಲ್ಲಿ ಹರಿಸಿಂಗರನ್ನು ಹೆಚ್ಚಾಗಿ ಶನಿಯಂತೆ ಕಾಡಿದವರು ಕಣಿವೆಯ ಒಬ್ಬ ಮುಸ್ಲಿಂ. ಶೇಖ್ ಅಬ್ದುಲ್ಲಾ ಎಂಬ ಹೆಸರಿನವರು. 1905ರಲ್ಲಿ ಶಾಲು ವ್ಯಾಪಾರಿಯ ಮಗನಾಗಿ ಜನಿಸಿದ ಶೇಖ್ ಮೊಹಮದ್ ಅಬ್ದುಲ್ಲಾ ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದ ವಿಜ್ಞಾನದ ಸ್ನಾತಕೋತ್ತರ ಪದವೀಧರ. ಶೈಕ್ಷಣಿಕ ಅರ್ಹತೆ ಇದ್ದಾಗ್ಯೂ ಶೇಖ್ ಅಬ್ದುಲ್ಲಾಗೆ ಕಾಶ್ಮೀರ ಸರ್ಕಾರದಲ್ಲಿ ಉದ್ಯೋಗ ಸಿಗಲಿಲ್ಲ. ಏಕೆಂದರೆ ಸಂಸ್ಥಾನದ ಆಡಳಿತದಲ್ಲಿ ಹಿಂದೂಗಳದೇ ಪ್ರಾಬಲ್ಯ. ಶೇಖ್ ಅಬ್ದುಲ್ಲಾ ಇದನ್ನು ಪ್ರಶ್ನಿಸಲಾರಂಭಿಸಿದರು. "ಮುಸ್ಲಿಮರಿಗೆ ಏಕೆ ಹೀಗೆ ಮಾಡಲಾಗುತ್ತಿದೆ. ಮುಸ್ಲಿಮರನ್ನು ಪ್ರತ್ಯೇಕಿಸಿ ಏಕೆ ಕಡೆಗಣಿಸಲಾಗುತ್ತಿದೆ. ಸಂಸ್ಥಾನದಲ್ಲಿ ನಾವು ಬಹುಸಂಖ್ಯಾತರಾಗಿದ್ದು ಬೊಕ್ಕಸಕ್ಕೆ ಹೆಚ್ಚಿನ ವರಮಾನ ನೀಡುತ್ತಿದ್ದೇವೆ. ಆದಾಗ್ಯೂ ಸತತವಾಗಿ ನಮ್ಮನ್ನು ತುಳಿಯಲಾಗುತ್ತಿದೆ. ಧಾರ್ಮಿಕ ಪೂರ್ವಾಗ್ರಹಗಳಿಂದಾಗಿ ಮುಸ್ಲಿಮರನ್ನು ಪೀಡಿಸಲಾಗುತ್ತಿದೆ, ನ್ಯಾಯವಾಗಿ ನಡೆಸಿಕೊಳ್ಳುತ್ತಿಲ್ಲ ಎಂಬ ತೀರ್ಮಾನಕ್ಕೆ ನಾನು ಬಂದೆ."

ಸರ್ಕಾರಿ ಕೆಲಸದಿಂದ ವಂಚಿತರಾದ ಶೇಖ್ ಅಬ್ದುಲ್ಲಾ ಪ್ರತಿಯಾಗಿ ಶಾಲಾ ಮಾಸ್ತರರಾದರು. ಅವರು ವಾಚನಾಲಯವೊಂದನ್ನು ಪ್ರಾರಂಭಿಸಿ ಅಲ್ಲಿ ತಮ್ಮ ಸಮುದಾಯದವರ ಪರವಾಗಿ ಮಾತನಾಡಲು ಶುರುಮಾಡಿದರು. ಅವರದು ಸ್ಫೂರ್ತಿದಾಯಕ ವ್ಯಕ್ತಿತ್ವ. ಆರಡಿ ನಾಲ್ಕು ಅಂಗುಲ ಎತ್ತರದ ಅಬ್ದುಲ್ಲಾ ಕೇಳುಗರನ್ನು ಸೆಳೆಯುವಂಥ ವಾಗ್ಮಿಯಾಗಿದ್ದರು. ಮಾತು ವ್ಯಂಗ್ಯದ ಮೊನಚಿನಿಂದ ಕೂಡಿರುತ್ತಿತ್ತು. ಸಿಗರೇಟ್ ಸೇದುತ್ತಿದ್ದರೂ ಮದ್ಯಪಾನ ಮಾಡುತ್ತಿರಲಿಲ್ಲ. ಪ್ರತಿ ಶುಕ್ರವಾರ ಮಸೀದಿಗೆ ಹೋಗಿ ಪ್ರಾರ್ಥನೆ ಮಾಡುತ್ತಿದ್ದರು, ಕುರಾನನ್ನು ಚೆನ್ನಾಗಿ ಓದಿಕೊಂಡಿದ್ದರು.

1931ರಲ್ಲಿ ಅಬ್ದುಲ್ಲಾ ಅವರನ್ನು ಮಹಾರಾಜರ ಮುಂದೆ ತಮ್ಮ ಅಹವಾಲು ಮಂಡಿಸಲು ನಿಯೋಜಿಸಲಾಗಿದ್ದ ಮುಸ್ಲಿಂ ಮುಖಂಡರ ನಿಯೋಗಕ್ಕೆ ಆಯ್ಕೆ ಮಾಡಲಾಯಿತು. ಈ ನಿಯೋಗ ಮಹಾರಾಜರನ್ನು ಭೇಟಿ ಮಾಡುವುದಕ್ಕೆ ಮೊದಲೇ ಅಬ್ದುಲ್ ಕ್ವಾದಿರ್ ಎಂಬ ಸಕ್ರಿಯ ಕಾರ್ಯಕರ್ತನನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಲಾಯಿತು. ಇದು, ಪ್ರತಿಭಟನಕಾರರು ಮತ್ತು ಪೊಲೀಸರ ನಡುವೆ ಘರ್ಷಣೆಗೆ ಕಾರಣವಾಗಿ ಘರ್ಷಣೆಯಲ್ಲಿ

ಇಪ್ಪತ್ತೊಂದು ಮಂದಿ ಸತ್ತರು. ಇದರ ನಂತರ ಕಣಿವೆಯಲ್ಲಿ ಹಿಂಸಾಚಾರ ಭುಗಿಲೆದ್ದಿತು. ಗಲಭೆ ಹಿಂಸಾಚಾರಗಳಲ್ಲಿ ಹಿಂದೂಗಳ ಅಂಗಡಿಗಳನ್ನು ಲೂಟಿಮಾಡಲಾಯಿತು, ಸುಡಲಾಯಿತು.

ಮುಂದಿನ ವರ್ಷ, 1932ರಲ್ಲಿ ಮಹಾರಾಜರ ವಿರುದ್ಧ ಹೆಚ್ಚುತ್ತಿದ್ದ ವಿರೋಧಕ್ಕೆ ಒಂದು ರೂಪ ಕೊಡುವ ಉದ್ದೇಶದಿಂದ ಆಲ್ ಜಮ್ಮು ಕಾಶ್ಮೀರ್ ಮುಸ್ಲಿಂ ಕಾನ್ಫರೆನ್ಸ್ ಸ್ಥಾಪಿಸಲಾಯಿತು. ಶೇಖ್ ಅಬ್ದುಲ್ಲಾ ಹಾಗೂ ಜಮ್ಮುವಿನ ವಕೀಲ ಗುಲಾಂ ಅಬ್ಬಾಸ್ ಈ ಸಂಘಟನೆಯ ದಾರಿದೀಪವಾದರು. ಆರು ವರ್ಷಗಳ ನಂತರ ಈ ಸಂಘಟನೆಯನ್ನು 'ನ್ಯಾಷನಲ್ ಕಾನ್ಫರೆನ್ಸ್' ಆಗಿ ಪರಿವರ್ತಿಸುವುದರಲ್ಲಿ ಶೇಖ್ ಅಬ್ದುಲ್ಲಾ ಮುಂದಾಳತ್ವ ವಹಿಸಿದರು. ನ್ಯಾಷನಲ್ ಕಾನ್ಫರೆನ್ಸ್‌ನಲ್ಲಿ ಹಿಂದೂಗಳು-ಸಿಖ್ಖರನ್ನೂ ಸೇರಿಸಿಕೊಳ್ಳಲಾಯಿತು. ಈ ಹೊಸ ಸಂಘಟನೆ, ಸಾರ್ವತ್ರಿಕ ಮತದಾನದ ಆಧಾರದ ಮೇಲೆ ಸರ್ಕಾರದಲ್ಲಿ ಪ್ರಾತಿನಿಧ್ಯಕ್ಕೆ ಒತ್ತಾಯಪಡಿಸಿತು.

ಇದೇ ಸಮಯದಲ್ಲಿ ಶೇಖ್ ಅಬ್ದುಲ್ಲಾ ಜವಹರಲಾಲ್ ನೆಹರೂ ಅವರ ಜೊತೆ ಸ್ನೇಹ ಸಂಪರ್ಕ ಸಾಧಿಸಿದರು. ಪ್ರಥಮ ಭೇಟಿಯಲ್ಲೇ ಇಬ್ಬರೂ ಮಿತ್ರರಾದರು. ಇಬ್ಬರೂ ಸಾಹಸಪ್ರವೃತ್ತಿಯವರೂ ದೃಢವಾದ ಅಭಿಪ್ರಾಯಗಳನ್ನು ಹೊಂದಿದ್ದವರೂ ಆಗಿದ್ದು, ಅದೃಷ್ಟವಶಾತ್ ಇಬ್ಬರೂ ಹಿಂದೂ ಮುಸ್ಲಿಂ ಸ್ನೇಹ ಸೌಹಾರ್ದತೆ ಮತ್ತು ಸಮಾಜವಾದಕ್ಕೆ ಬದ್ಧರಾಗಿದ್ದರು. ನ್ಯಾಷನಲ್ ಕಾನ್ಫರೆನ್ಸ್, ಭಾರತ ರಾಷ್ಟ್ರೀಯ ಕಾಂಗ್ರೆಸ್‌ಗೆ ಹತ್ತಿರವಾಯಿತು. ಇದರಿಂದಾಗಿ ನ್ಯಾಷನಲ್ ಕಾನ್ಫರೆನ್ಸ್‌ನ ಕೆಲವು ಸದಸ್ಯರು, ಮುಖ್ಯವಾಗಿ ಗುಲಾಂ ಅಬ್ಬಾಸ್ ಅವರಂಥವರು ಪಕ್ಷ ತೊರೆದು ಕಾಶ್ಮೀರಿ ಮುಸ್ಲಿಮರನ್ನು ಸಂಘಟಿಸತೊಡಗಿದರು. ಇದು ಶೇಖ್ ಅಬ್ದುಲ್ಲಾರೊಂದಿಗೆ ವೈರತ್ವದ ಆರಂಭ ಬಿಂದುವಾಯಿತು. ಈ ವೈರತ್ವ ಸೈದ್ಧಾಂತಿಕವೂ ಖಾಸಗಿಯದೂ ಆಗಿತ್ತು.

1940ರ ಮಧ್ಯಭಾಗದ ವೇಳೆಗೆ ಶೇಖ್ ಅಬ್ದುಲ್ಲಾ ಜನಪ್ರಿಯತೆಯಲ್ಲಿ, ಎಲ್ಲ ಸ್ಪರ್ಧೆಗಳಲ್ಲೂ ಜಯಶಾಲಿಯಾಗಿ ಮುಂದಿದ್ದರು. "ಆ ಕಾಲದಲ್ಲಿ ಕಾಶ್ಮೀರದ ಎಲ್ಲರ ಪ್ರೀತಿಪಾತ್ರ ವ್ಯಕ್ತಿಯಾಗಿದ್ದರು" ಎಂದು ಸಮಕಾಲೀನರೊಬ್ಬರು ಬರೆದಿದ್ದಾರೆ. 1931ರಿಂದ 1946ರಲ್ಲಿ ಅವರು ಜೈಲಿನೊಳಗೆ ಹೊರಗೆ ಎರಡೂ ಕಡೆ ಇದ್ದವರು. "ಕಾಶ್ಮೀರ ಬಿಟ್ಟು ತೊಲಗಿ, ಅಧಿಕಾರವನ್ನು ಜನತೆಗೆ ಹಸ್ತಾಂತರಿಸಿ" ಎಂದು ಡೋಗ್ರಾ ಅರಸರನ್ನು ಒತ್ತಾಯಪಡಿಸಿದ ಸಲುವಾಗಿ ಮತ್ತೊಮ್ಮೆ ಅವರನ್ನು ಸೆರೆಮನೆಗೆ ದೂಡಲಾಗಿತ್ತು. ನಂತರದ ಗಲಭೆಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಮಂದಿ ಸತ್ತರು. ಮಹಾರಾಜರು ಲಷ್ಕರಿ ಶಾಸನ ಘೋಷಿಸಿದರು. ದೇಶದ್ರೋಹದ ಆರೋಪದ ಮೇಲೆ ಶೇಖ್ ಅಬ್ದುಲ್ಲಾ ಅವರಿಗೆ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಇದರಿಂದ ಕುಪಿತರಾದ ನೆಹರೂ ಮಿತ್ರನ ರಕ್ಷಣೆಗೆ ಧಾವಿಸಿದರು. ಮಹಾರಾಜರ ಮಂದಿ ಕಾಶ್ಮೀರ ಪ್ರವೇಶಿಸದಂತೆ ನೆಹರೂ ಅವರನ್ನು ತಡೆದರು. ಗಡಿಯಲ್ಲಿ ತಡೆದು ಅವರನ್ನು ಬ್ರಿಟಿಷ್ ಭಾರತಕ್ಕೆ ವಾಪಸು ಕಳುಹಿಸಲಾಯಿತು.

ಇದೇ ಸಮಯಕ್ಕೆ, ಶೀಘ್ರದಲ್ಲೇ ಬ್ರಿಟಿಷರು ಉಪಖಂಡ ತ್ಯಜಿಸುವುದು ಸ್ಪಷ್ಟವಾಗಿತ್ತು. ಹರಿಸಿಂಗ್ ಅವರು ಪ್ರಧಾನ ಮಂತ್ರಿಯಾಗಿದ್ದ ರಾಮಚಂದ್ರ ಕಾಕ್ ಸಂಸ್ಥಾನದ ಸ್ವಾತಂತ್ರ್ಯದ ಬಗ್ಗೆ ಆಲೋಚಿಸುವಂತೆ ಅವರಿಗೆ ಪ್ರೇರೇಪಿಸಿದರು. "ಕಾಶ್ಮೀರಿಗಳು, ಸಂಸ್ಥಾನದ ಅವಿಭಾಜ್ಯ ಅಂಗವಲ್ಲದ ಅನ್ಯರ ಆದೇಶಗಳಿಗೆ ಕಿವಿಗೊಡದೆ ತಮ್ಮ ಭವಿಷ್ಯ-ಅದೃಷ್ಟಗಳನ್ನು ತಾವೇ ರೂಪಿಸಿಕೊಳ್ಳುವರೆಂದು" 1946ರ ಜುಲೈ 15ರಂದು ಮಹಾರಾಜರು ಹೇಳಿಕೆಯೊಂದನ್ನು ನೀಡಿದರು. ನವೆಂಬರ್‌ನಲ್ಲಿ ಶ್ರೀನಗರದಲ್ಲಿನ ಬ್ರಿಟಿಷ್ ರೆಸಿಡೆಂಟರು ಹೀಗೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು:

> *ಭಾರತ ಒಕ್ಕೂಟ ರಚನೆಯಾದಲ್ಲಿ ಕಾಶ್ಮೀರ ಅದರಲ್ಲಿ ಸೇರಿಕೊಳ್ಳದೇ ಇರುವ ಸಾಧ್ಯತೆಯನ್ನು ಮಹಾರಾಜರು ಮತ್ತು ಕಾಕ್ ಗಂಭೀರವಾಗಿ ಪರಿಶೀಲಿಸುತ್ತಿದ್ದಾರೆ. ಕೇಂದ್ರದಲ್ಲಿನ ಕಾಂಗ್ರೆಸ್ ಸರ್ಕಾರ ಕಾಶ್ಮೀರದ ಬಗ್ಗೆ ವಿರೋಧ ವ್ಯಕ್ತಪಡಿಸುವ ಸಂಭವನೀಯತೆಯಿಂದಾಗಿ ಕಾಶ್ಮೀರ ಒಕ್ಕೂಟದಿಂದ ಹೊರಗುಳಿಯಬಹುದೆಂಬ ಇಂಗಿತವನ್ನು ಹಿಂದೊಮ್ಮೆ ಕಾಕ್ ನನ್ನ ಬಳಿ ವ್ಯಕ್ತಿಪಡಿಸಿದ್ದರು. ಬ್ರಿಟಿಷ್ ಸಾರ್ವಭೌಮತ್ವ ಕಣ್ಮರೆಯಾದ ಕೂಡಲೇ ಕಾಶ್ಮೀರ ತನ್ನ ಕಾಲಮೇಲೆ ತಾನು ನಿಲ್ಲಬೇಕಾಗುತ್ತದೆ. ಬ್ರಿಟಿಷರಿಗೆ ನಿಷ್ಠೆ ತೋರುವ ಪ್ರಶ್ನೆ ಉದ್ಭವಿಸುವುದಿಲ್ಲ. ಆಗ ಕಾಶ್ಮೀರ ರಷ್ಯವೂ ಸೇರಿದಂತೆ ಯಾವುದೇ ಶಕ್ತಿ ರಾಷ್ಟ್ರದೊಂದಿಗೆ ಮೈತ್ರಿ ಮಾಡಿಕೊಳ್ಳುವ ಸ್ವಾತಂತ್ರ್ಯ ಹೊಂದಿರುತ್ತದೆ-ಇದು ಮಹಾರಾಜರ ಧೋರಣೆ ಇರುವಂತಿದೆ ಎನ್ನುವುದು ನನ್ನ ಶಂಕೆ.*

ಸ್ವಾತಂತ್ರ್ಯದ ಆಲೋಚನೆ ಮಹಾರಾಜರನ್ನು ಗಟ್ಟಿಯಾಗಿ ಆವರಿಸಿತ್ತು. ಕಾಂಗ್ರೆಸ್ ಬಗ್ಗೆ ಅವರಿಗೆ ಹೇವರಿಕೆ ಇತ್ತು. ಆದ್ದರಿಂದ ಭಾರತ ಒಕ್ಕೂಟ ಸೇರುವ ಬಗ್ಗೆ ಅವರು ಯೋಚಿಸುವ ಸಾಧ್ಯತೆಯೇ ಇರಲಿಲ್ಲ. ಆದರೆ ಪಾಕಿಸ್ತಾನ ಸೇರಿದಲ್ಲಿ ಅವರ ಹಿಂದೂ ರಾಜವಂಶದ ಗತಿ ಕೊನೆಗೊಳ್ಳಬಹುದಿತ್ತು.

1947ರ ಏಪ್ರಿಲ್‌ನಲ್ಲಿ ನವದೆಹಲಿಯಲ್ಲಿ ಹೊಸ ವೈಸ್‌ರಾಯ್ ಅಧಿಕಾರವಹಿಸಿಕೊಂಡರು. ಈ ಹೊಸ ವೈಸ್‌ರಾಯ್ ಮಹಾರಾಜ ಹರಿಸಿಂಗರ ಹಳೆಯ ಮಿತ್ರ. 1921-22ರಲ್ಲಿ ವೇಲ್ಸ್‌ನ ರಾಜಕುಮಾರ ಭಾರತಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ಇವರಿಬ್ಬರೂ ರಾಜಕುಮಾರನ ಸಿಬ್ಬಂದಿ ಪರಿವಾರದಲ್ಲಿ ಸೇವೆ ಸಲ್ಲಿಸಿದ್ದರು. ಭಾರತದ ವಿಭಜನೆ ನಿರ್ಧಾರವಾದ ಬಳಿಕ, 1947ರ ಜೂನ್‌ನ ಮೂರನೆಯ ವಾರದಲ್ಲಿ ಮೌಂಟ್‌ಬ್ಯಾಟನ್ ಕಾಶ್ಮೀರಕ್ಕೆ ಭೇಟಿಕೊಟ್ಟರು. ನೆಹರೂ ಅಥವಾ ಗಾಂಧೀಜಿ ಪ್ರವಾಸ ತಪ್ಪಿಸುವುದೇ ಈ ಭೇಟಿಯ ಉದ್ದೇಶವಾಗಿತ್ತು. ಕಾಶ್ಮೀರ ಎತ್ತ ಹೋಗಬಹುದೆಂಬ ಬಗ್ಗೆ ಸ್ವತಃ ಅಂದಾಜು ಮಾಡುವುದು ಮೌಂಟ್ ಬ್ಯಾಟನ್ನರ ಇಚ್ಛೆಯಾಗಿತ್ತು. ಎರಡು ರಾಷ್ಟ್ರಗಳಲ್ಲಿ ಯಾವುದರ ಜೊತೆ ಬೇಕಾದರೂ ಸೇರಿಕೊಳ್ಳಬಹುದು. ಆದರೆ ಸೇರ್ಪಡೆಯಾಗಲೇ ಬೇಕು ಎಂದು ಮಹಾರಾಜರಿಗೆ ತಿಳಿಸುವಂತೆ ಮೌಂಟ್ ಬ್ಯಾಟನ್ ಕಾಕ್ ಅವರಿಗೆ ಸಲಹೆ ಮಾಡಿದರು. ತಾವು ಸ್ವತಂತ್ರವಾಗಿ

ಉಳಿಯಲಿಚ್ಛಿಸುವುದಾಗಿ ಮಹಾರಾಜರು ಉದ್ಧಟತನದಿಂದಲೇ ಹೇಳಿದರು. ಆಗ ವೈಸ್‌ರಾಯ್‌ರು ಮಹಾರಾಜರೊಂದಿಗೆ ಖಾಸಗಿಯಾಗಿ ಮಾತುಕತೆ ನಡೆಸಲು ದಿನವೊಂದನ್ನು ಗೊತ್ತು ಪಡಿಸಿದರು. ನಿಗದಿತ ದಿನ ಮೌಂಟ್ ಬ್ಯಾಟನ್ನರ ಕಾಶ್ಮೀರ ಭೇಟಿಯ ಕೊನೆಯ ದಿನವಾಗಿತ್ತು. ಮಹಾರಾಜ ಹರಿಸಿಂಗರು ಹೊಟ್ಟೆನೋವು ಬಂದ ಕಾರಣದಿಂದ ಮೌಂಟ್ ಬ್ಯಾಟನ್ನರನ್ನು ಭೇಟಿ ಮಾಡಲಿಲ್ಲ. ಬಹುಶಃ ಅಹಿತಕರವಾದ, ಮುಜುಗರದ ಮುಖಾಮುಖಿ ಯಿಂದ ತಪ್ಪಿಸಿಕೊಳ್ಳುವುದಕ್ಕೆ ಕಾಯಿಲೆಯೊಂದು ನೆಪವಾಗಿರಬಹುದು. ಏಕೆಂದರೆ ಈ ಖಾಸಗಿ ಮಾತುಕತೆ ಹಿತಕರ ವಾತಾವರಣದಲ್ಲಿ ನಡೆಯುವುದಿಲ್ಲ ಎಂಬುದು ಖಚಿತವಾಗಿತ್ತು.

ಆಗ ನೆಹರೂ ಮೌಂಟ್ ಬ್ಯಾಟನ್ನರಿಗೆ ಹೇಳಿದರು: "ನನ್ನದೊಂದು ನಿರ್ದಿಷ್ಟ ದೃಷ್ಟಿಯಿಂದ ಹೇಳುವುದಾದರೆ ನಿಮ್ಮ ಕಾಶ್ಮೀರ ಪ್ರವಾಸ ಯಶಸ್ವಿಯಾಗಲಿಲ್ಲ". ಸ್ವತಃ ತಾವೇ ಕಾಶ್ಮೀರಕ್ಕೆ ಹೋಗಿ ಅಲ್ಲಿನ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವುದು ನೆಹರೂ ಇಚ್ಛೆಯಾಗಿತ್ತು.

ಗಾಂಧೀಜಿಗೂ ಭೇಟಿಕೊಡುವ ಅಪೇಕ್ಷೆ ಇತ್ತು. ಹರಿಸಿಂಗ್ ಇವರಿಬ್ಬರ ಭೇಟಿಯನ್ನು ಬಯಸಿರಲಿಲ್ಲ. ಆದರೆ, ಸಂದರ್ಭಾನುಸಾರವಾಗಿ, ನೆಹರೂ ಅವರು ಇತರ ವಿದ್ಯಮಾನಗಳಲ್ಲಿ ನಿರತರಾಗಿದ್ದುದರಿಂದ ಅವರ ಬದಲು ಗಾಂಧೀಜಿ ಕಾಶ್ಮೀರಕ್ಕೆ ಹೋದರು. ಗಾಂಧೀಜಿ ಶ್ರೀನಗರದಲ್ಲಿ ಮೂರು ದಿನ ತಂಗಿದ್ದರು. ಮಹಾರಾಜರ ಮನವಿಯ ಮೇರೆ ಅವರು ಒಂದೂ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿಲ್ಲ. ಆದರೆ ಅವರು ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ನಿಯೋಗಗಳನ್ನು ಭೇಟಿಮಾಡಿದರು. ಶೇಖ್ ಅಬ್ದುಲ್ಲಾರ ಬಂಧನವಿಮುಕ್ತಿ ಹಾಗೂ ಪ್ರಧಾನ ಮಂತ್ರಿ ಕಾಕ್ ಅವರ ವಜಾ ಈ ನಿಯೋಗಗಳ ಬೇಡಿಕೆಯಾಗಿತ್ತು.

ಆಗಸ್ಟ್ 15ರಂದು ಜಮ್ಮು ಮತ್ತು ಕಾಶ್ಮೀರ ಭಾರತದೊಂದಿಗೆಯಾಗಲೀ ಪಾಕಿಸ್ತಾನದೊಂದಿಗೆಯಾಗಲೀ ಸೇರ್ಪಡೆಯಾಗಲಿಲ್ಲ. ಗಡಿ ಆಚೆ-ಈಚೆ ಜನರ ಮುಕ್ತ ಪ್ರಯಾಣ ಹಾಗೂ ಸರಕು ಸಾಗಣಿಕೆಗಳಿಗೆ ಅವಕಾಶ ನೀಡುವಂಥ ಸ್ತಂಭನ ಒಪ್ಪಂದವನ್ನು ಉಭಯ ರಾಷ್ಟ್ರಗಳೊಡನೆ ಮಾಡಿಕೊಳ್ಳುವುದಾಗಿ ಅದು ತಿಳಿಸಿತು. ಪಾಕಿಸ್ತಾನ ಇಂಥ ಒಂದು ಒಪ್ಪಂದಕ್ಕೆ ಸಹಿಹಾಕಿತು. ಆದರೆ ಭಾರತ, ತಾನು ಕಾದು ನೋಡುವುದಾಗಿ ತಿಳಿಸಿತು. ಆದಾಗ್ಯೂ ಸೆಪ್ಟಂಬರ್ ಮಧ್ಯಭಾಗದ ವೇಳೆಗೆ ಪಶ್ಚಿಮ ಪಂಜಾಬಿನ ಸಯಾಲ್ಕೋಟೆ ಮತ್ತು ಜಮ್ಮು ನಡುವಣ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಯಿತು. ಹಾಗೂ ಸರಕುಗಳನ್ನು ಕೊಂಡೊಯ್ಯುತ್ತಿದ್ದ ಲಾರಿಗಳ ಸಂಚಾರವನ್ನು ಪಾಕಿಸ್ತಾನದ ಗಡಿಯಲ್ಲಿ ನಿಲ್ಲಿಸಲಾಯಿತು.

ಪಾಕಿಸ್ತಾನದೊಂದಿಗೆ ಬಾಂಧವ್ಯ ಕ್ಷೀಣಿಸಿದಂತೆ ಮಹಾರಾಜರು ಇಬ್ಬರು ಪ್ರಧಾನ ಮಂತ್ರಿಗಳನ್ನು ತ್ವರಿತಗತಿಯಲ್ಲಿ ವಜಾ ಮಾಡಿದರು. ಮೊದಲಿಗೆ ರಾಮಚಂದ್ರ ಕಾಕ್ ಅವರ ಸ್ಥಾನಕ್ಕೆ ಜನಕ್ ಸಿಂಗ್ ಎಂಬ ಸಿಪಾಯಿಯೊಬ್ಬನನ್ನು ನೇಮಿಸಲಾಯಿತು. ಅನಂತರ ಜನಕ್ ಸಿಂಗ್ ಅವರನ್ನು ವಜಾಮಾಡಿ ಪಂಜಾಬ್ ಹೈಕೋರ್ಟಿನ ಮಾಜಿ ನ್ಯಾಯಾಧೀಶ ಮೆಹರ್ ಚಂದ್ ಮಹಾಜನ್ ಎಂಬುವರನ್ನು ನೇಮಿಸಲಾಯಿತು. ಮೆಹರ್ ಚಂದ್ ಮಹಾಜನ್

ಅವರಿಗೆ ಕಾಂಗ್ರೆಸ್ ನಾಯಕರುಗಳೊಂದಿಗೆ ಮಧುರ ಬಾಂಧವ್ಯವಿತ್ತು. ಈ ಕಾಂಗ್ರೆಸ್ ನಾಯಕರುಗಳಲ್ಲಿ ಇಬ್ಬರು ತುಂಬ ಮುಖ್ಯವಾಗಿದ್ದರು. ಒಬ್ಬರು, ಜವಹರಲಾಲ್ ನೆಹರೂ ಅವರು. ನೆಹರೂ ಮೂಲತಃ ಕಾಶ್ಮೀರಿಯೇ ಆಗಿದ್ದರು. ಇನ್ನೊಬ್ಬರು ಗೃಹಸಚಿವರೂ ರಾಜ್ಯಗಳ ಸಚಿವರೂ ಆಗಿದ್ದ ವಲ್ಲಭಭಾಯಿ ಪಟೇಲರು. ಇಲ್ಲಿ ಗಮನಿಸಬೇಕಾದ ಮಹತ್ವದ ವಿಚಾರವೊಂದಿದೆ. ಅದೆಂದರೆ, ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಬೇಕೆಂಬುದು ನೆಹರೂ ಅವರ ಚಿಂತನೆಯಾಗಿತ್ತು. ಆದರೆ ಆ ಕಾಲಮಾನದ ಯಾವುದೋ ಒಂದು ಮಜಲಿನಲ್ಲಿ ಪಟೇಲರು ಕಾಶ್ಮೀರ ಪಾಕಿಸ್ತಾನಕ್ಕೆ ಹೋದರೂ ಅಡ್ಡಿ ಇಲ್ಲ ಎನ್ನುವ ನಿಲುವು ತಾಳಿದ್ದರು, ಎಂಬುದು. ಪಾಕಿಸ್ತಾನ ಸರ್ಕಾರ ಜುನಾಗಢದ ಸೇರ್ಪಡೆಗೆ ಒಪ್ಪಿಗೆ ಸೂಚಿಸಿದ ದಿನವಾದ ಸೆಪ್ಟಂಬರ್ 13ರಂದು ಪಟೇಲರು ಮನಸ್ಸು ಬದಲಾಯಿಸಿದರು. "ಮುಸ್ಲಿಂ ಮಹಾರಾಜನ ಆಳ್ವಿಕೆಯಲ್ಲಿರುವ ಹಿಂದೂ ಬಹುಸಂಖ್ಯಾತರ ಸಂಸ್ಥಾನವೊಂದನ್ನು ಜಿನ್ನಾ ಸ್ವಾಧೀನಪಡಿಸಿಕೊಳ್ಳುವುದಾದಲ್ಲಿ ಹಿಂದೂ ಮಹಾರಾಜರ ಆಳ್ವಿಕೆಯಲ್ಲಿರುವ ಮುಸ್ಲಿಂ ಬಹುಸಂಖ್ಯಾತ ಸಂಸ್ಥಾನದ ಬಗ್ಗೆ ಸರ್ದಾರರು ಏಕೆ ಆಸಕ್ತರಾಗಿರಬಾರದು?" ಎಂಬುದೇ ಈ ಮನಃಪರಿವರ್ತನೆಯ ಹಿಂದಿನ ಕಾರಣವಾಗಿತ್ತು.

1947ರ ಸೆಪ್ಟಂಬರ್ 27ರಂದು ನೆಹರೂ ಅವರು ಜಮ್ಮು ಕಾಶ್ಮೀರದಲ್ಲಿನ ಅಪಾಯಕಾರಿಯಾದ ಹಾಗೂ ಕೆಡುತ್ತಿರುವ ಪರಿಸ್ಥಿತಿಯನ್ನು ಕುರಿತು ಪಟೇಲರಿಗೆ ಒಂದು ಸುದೀರ್ಘ ಪತ್ರ ಬರೆದರು. ಪಾಕಿಸ್ತಾನ ಕಾಶ್ಮೀರದೊಳಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಅತಿಕ್ರಮಣಕಾರರನ್ನು ನುಗ್ಗಿಸಲು ಸಿದ್ಧತೆ ನಡೆಸಿದೆಯೆಂಬುದು ಅವರ ಕಿವಿ ಮುಟ್ಟಿತ್ತು. ಇಂಥ ಅಪಾಯವನ್ನು ಎದುರಿಸುವುದು ಮಹಾರಾಜರ ಶಕ್ತಿಗೆ ಮೀರಿದ್ದಾಗಿತ್ತು. ಆದ್ದರಿಂದ ಮಹಾರಾಜ ಹರಿಸಿಂಗರು ನ್ಯಾಷನಲ್ ಕಾನ್ಫರೆನ್ಸ್ ಜೊತೆ ಮೈತ್ರಿ ಮಾಡಿಕೊಳ್ಳಬೇಕೆಂಬುದೂ ಹಾಗಾದಲ್ಲಿ ಪಾಕಿಸ್ತಾನದ ವಿರುದ್ಧ ಜನತಾ ಬೆಂಬಲ ದೊರೆಯುತ್ತದೆ ಎನ್ನುವುದೂ ನೆಹರೂ ಅವರ ಅನ್ನಿಸಿಕೆಯಾಗಿತ್ತು. ಶೇಖ್ ಅಬ್ದುಲ್ಲಾರವರನ್ನು ಜೈಲಿನಿಂದ ಬಿಡುಗಡೆ ಮಾಡಿಸಿ ಅವರ ಅನುಯಾಯಿಗಳ ಬೆಂಬಲ ಗಳಿಸುವ ಕ್ರಮದಿಂದ ಭಾರತ ಒಕ್ಕೂಟದೊಳಗೆ ಕಾಶ್ಮೀರದ ಸೇರ್ಪಡೆಗೆ ಸಹಾಯವಾಗುವುದೆನ್ನುವುದು ನೆಹರೂ ಅಭಿಮತವಾಗಿತ್ತು. ಸುದೀರ್ಘ ಪತ್ರದಲ್ಲಿ ನೆಹರೂ ಇದೆಲ್ಲವನ್ನೂ ಅರುಹಿದ್ದರು.

ಸೆಪ್ಟಂಬರ್ 29ರಂದು ಶೇಖ್ ಅಬ್ದುಲ್ಲಾರನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. ಮುಂದಿನ ಶ್ರೀನಗರದ ಹಜರತ್‌ಬಲ್ ಮಸೀದಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಶೇಖ್ ಅಬ್ದುಲ್ಲಾ ಕಾಶ್ಮೀರದಲ್ಲಿ ಸಂಪೂರ್ಣವಾಗಿ ಅಧಿಕಾರವನ್ನು ಪ್ರಜೆಗಳಿಗೆ ಹಸ್ತಾಂತರಿಸಬೇಕೆಂದು ಒತ್ತಾಯಪಡಿಸಿದರು. ಆಗ, ಪ್ರಜಾಸತ್ತಾತ್ಮಕ ಕಾಶ್ಮೀರದಲ್ಲಿ ಜನತಾ ಪ್ರತಿನಿಧಿಗಳು ಕಾಶ್ಮೀರ ಭಾರತದ ಜೊತೆ ಸೇರಿಕೊಳ್ಳಬೇಕೋ ಪಾಕಿಸ್ತಾನದ ಜೊತೆಗೋ ಎಂಬುದನ್ನು ನಿರ್ಧರಿಸುವರು ಎಂದು ಶೇಖರು ಗುಡುಗಿದರು. ಕಾಶ್ಮೀರದಲ್ಲಿ ಹೀಗೆ

ಸ್ಥಾಪನೆಯಾಗುವ ಜನತಾ ಸರ್ಕಾರ ಯಾವುದೇ ಒಂದು ಸಮುದಾಯದ ಸರ್ಕಾರವಾಗುವುದಿಲ್ಲ. ಅದು ಹಿಂದೂಗಳು, ಸಿಖ್ಖರು ಹಾಗೂ ಮುಸ್ಲಿಮರು ಒಡಗೂಡಿದ ಸಂಯುಕ್ತ ಸರ್ಕಾರವಾಗಿರುತ್ತದೆ. ಇಂಥ ಸರ್ಕಾರಕ್ಕಾಗಿಯೇ ನಾನು ಹೋರಾಡುತ್ತಿರುವುದು ಎಂದು ಘಂಟಾಘೋಷವಾಗಿ ಹೇಳಿದರು.

ಕಾಶ್ಮೀರ ತನ್ನ ಬಹುಸಂಖ್ಯಾತ ಮುಸ್ಲಿಂ ಸಮುದಾಯದೊಂದಿಗೆ ತನ್ನಲ್ಲಿ ಸೇರ್ಪಡೆಯಾಗುವುದೆಂದು ಪಾಕಿಸ್ತಾನದ ಸಹಜ ನಿರೀಕ್ಷೆಯಾಗಿತ್ತು. ವಿಶೇಷವಾಗಿ ಪ್ರಮುಖ ರಾಜಕೀಯ ಪಕ್ಷವಾದ ನ್ಯಾಷನಲ್ ಕಾನ್ಫರೆನ್ಸ್ ಅಂಧಾಭಿಮಾನದ ಪಕ್ಷವಲ್ಲ ಎಂಬುದು ಸರ್ವತ್ರ ತಿಳಿದ ಸಂಗತಿಯಾಗಿದ್ದುದರಿಂದ ಧಾರ್ಮಿಕ ವಿಚಾರ ಅಸಂಗತವಾಗಲಿದೆಯೆಂದು ಭಾರತ ಭಾವಿಸಿತ್ತು. ಅಕ್ಟೋಬರ್ ತಿಂಗಳ ಶುರುವಿನಲ್ಲಿ ಪಟೇಲರು ನೆಹರೂ ಅವರಿಗೆ ಒಂದು ಪತ್ರ ಬರೆದು, "ಕಾಶ್ಮೀರಕ್ಕೆ ಸಂಬಂಧಿಸಿದ ನೀತಿಯಲ್ಲಿ ನನ್ನ ನಿಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ" ಎಂದು ತಿಳಿಸಿದ್ದರು. ಕಾಶ್ಮೀರ ಭಾರತದಲ್ಲಿ ವಿಲೀನಗೊಳ್ಳಬೇಕೆಂಬುದು ಇಬ್ಬರ ಇಚ್ಛೆಯಾಗಿತ್ತು. ಕಾಶ್ಮೀರಿಗಳ ಅಭಿಪ್ರಾಯ ಏನಿದ್ದಿರಬಹುದು? ಶೇಖ್ ಅಬ್ದುಲ್ಲಾರ ಬಂಧ ವಿಮುಕ್ತಿಯ ನಂತರ, ಸಂಸ್ಥಾನದ ಸೇನಾಪಡೆಗಳ ಬ್ರಿಟಿಷ್ ದಂಡನಾಯಕ "ಬಹುತೇಕ, ಅಧಿಕಾಂಶ ಕಾಶ್ಮೀರಿಗಳಿಗೆ ಭಾರತದ ಪರವಾಗಿಯಾಗಲೀ ಕಾಶ್ಮೀರದ ಪರವಾಗಿಯಾಗಲೀ ಪಕ್ಷಪಾತದ ಮನೋಭಾವ ಇಲ್ಲವೆಂಬ" ಅಭಿಪ್ರಾಯ ವ್ಯಕ್ತಪಡಿಸಿದ್ದ. "ಪಾಕಿಸ್ತಾನದೊಳಗೆ ಸೇರ್ಪಡೆಯಾಗಬೇಕೆಂದು ಪ್ರತಿಪಾದಿಸುವ ಸುಸಂಘಟಿತ ಸಂಘ ಸಂಸ್ಥೆಗಳು ಕಾಶ್ಮೀರದಲ್ಲಿಲ್ಲ, ನ್ಯಾಷನಲ್ ಕಾನ್ಫರೆನ್ಸ್ ಕಾಂಗ್ರೆಸ್ ಪರವಾಗಿದ್ದು ಪಾಕಿಸ್ತಾನ ವಿರೋಧಿಯಾಗಿತ್ತು".

ಆದರೆ ಮಹಾರಾಜ ಹರಿಸಿಂಗ್ ಮಾತ್ರ ಇನ್ನೂ ಸ್ವಾತಂತ್ರ್ಯದ ಕನಸಿಗೇ ಜೋತುಬಿದ್ದಿದ್ದರು. ಅಕ್ಟೋಬರ್ 12ರಂದು ಜಮ್ಮು ಕಾಶ್ಮೀರದ ಉಪಪ್ರಧಾನ ಮಂತ್ರಿಗಳು ದೆಹಲಿಯಲ್ಲಿ ಹೀಗೊಂದು ಹೇಳಿಕೆ ನೀಡಿದರು:

> *"ಭಾರತ ಮತ್ತು ಪಾಕಿಸ್ತಾನಗಳೆರಡರ ನಡುವೆಯೂ ಸ್ನೇಹಬಾಂಧವ್ಯ ಹೊಂದಿರುವುದು ನಮ್ಮ ಉದ್ದೇಶವಾಗಿದೆ. ನಿರಂತರವಾಗಿ ವದಂತಿಗಳೂ-ಊಹಾಪೋಹಗಳೂ ಕೇಳಿ ಬರುತ್ತಿವೆಯಾದರೂ ಭಾರತ ಅಥವಾ ಪಾಕಿಸ್ತಾನದ ಜೊತೆ ಸೇರುವ ಉದ್ದೇಶ ನಮಗಿಲ್ಲ. ಇವೆರಡರಲ್ಲಿ ಒಂದಲ್ಲ ಒಂದು ನಮ್ಮ ವಿರುದ್ಧ ಮಿಲಿಟರಿ ಬಲಪ್ರಯೋಗ ನಡೆಸಲು ನಿರ್ಧರಿಸಿದಲ್ಲಿ ಮಾತ್ರ, ಇಂಥ ನಿರ್ಧಾರ ನಮ್ಮ ಮನಸ್ಸನ್ನು ಬದಲಾಯಿಸ ಬಹುದು... ಕಾಶ್ಮೀರವನ್ನು ಸಂಪೂರ್ಣ ತಟಸ್ಥ ರಾಷ್ಟ್ರವನ್ನಾಗಿ, ಪೂರ್ವದ ಸ್ವಿಟ್ಸರ್ಲೆಂಡ್ ಆಗಿ ಮಾಡಬೇಕೆಂಬುದು ತಮ್ಮ ಮಹತ್ವಾಕಾಂಕ್ಷೆ ಎಂದು ಮಹಾರಾಜರು ನನಗೆ ತಿಳಿಸಿದ್ದಾರೆ."*

II

> ಇವೆರಡರಲ್ಲಿ ಒಂದಲ್ಲ ಒಂದು ನಮ್ಮ ವಿರುದ್ಧ ಮಿಲಿಟರಿ ಬಲಪ್ರಯೋಗ ನಡೆಸಲು ನಿರ್ಧರಿಸಿದಲ್ಲಿ, ಇಂಥ ನಿರ್ಧಾರ ಮಾತ್ರ ನಮ್ಮ ಮನಸ್ಸನ್ನು ಬದಲಾಯಿಸಬಹುದು.

–ಈ ಮಾತುಗಳನ್ನು ಹೇಳಿದ ಎರಡು ವಾರಗಳ ನಂತರ ಸಹಸ್ರಾರು ಮಂದಿ ಸಶಸ್ತ್ರ ವ್ಯಕ್ತಿಗಳು ಉತ್ತರದ ದಿಕ್ಕಿನಿಂದ ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದರು. ಅಕ್ಟೋಬರ್ 22ರಂದು ಕಾಶ್ಮೀರವನ್ನು ವಾಯುವ್ಯ ಸರಹದ್ದು ಪ್ರಾಂತ್ಯದೊಂದಿಗೆ ಪ್ರತ್ಯೇಕಿಸುವ ಗಡಿಯನ್ನು ಅತಿಕ್ರಮಿಸಿ ನುಗ್ಗಿದರು. ತ್ವರಿತ ವೇಗದಲ್ಲಿ ರಾಜಧಾನಿ ಶ್ರೀನಗರದತ್ತ ಧಾವಿಸಿದರು.

ಹೀಗೆ ಅತಿಕ್ರಮಣ ಮಾಡಿದ ದಾಳಿಕಾರರಲ್ಲಿ ಬಹುತೇಕ ಮಂದಿ ಪಠಾಣರು. ಈ ಪಠಾಣರುಗಳ ಪ್ರದೇಶ ಈಗ ಪಾಕಿಸ್ತಾನದ ಪ್ರಾಂತ್ಯವಾಗಿತ್ತು. ಇದಿಷ್ಟು ಮಾತ್ರ ನಿರ್ವಿವಾದಾತ್ಮಕವಾಗಿತ್ತು. ಆದರೆ ಪಠಾಣರು ಏಕೆ ಬಂದರು? ಅವರು ಯಾರಿಗೆ ಸಹಾಯ ಮಾಡುತ್ತಿದ್ದಾರೆ ಎನ್ನುವುದು ಇವೆರಡು ಮಾತ್ರ ಖಚಿತವಾಗಿರಲಿಲ್ಲ. ಕಾಶ್ಮೀರ ಸಮಸ್ಯೆಯ ಹೃದ್ಗತಭಾಗ ಎನ್ನಬಹುದಾದ ಈ ಎರಡು ಪ್ರಶ್ನೆಗಳಿಗೆ, ಅರವತ್ತು ವರ್ಷಗಳ ನಂತರವೂ ನಿರ್ದಿಷ್ಟ ಉತ್ತರ ಕಂಡುಹಿಡಿಯಲು ಇತಿಹಾಸಕಾರರಿಗೆ ಸಾಧ್ಯವಾಗಿಲ್ಲ. ಇದಕ್ಕೆ ಒಂದು ಕಾರಣವೆಂದರೆ, ಕಾಶ್ಮೀರದ ಉತ್ತರದ ತುತ್ತತುದಿ ತೀರಾ ಅಸ್ಪಷ್ಟವಾಗಿತ್ತು ಹಾಗೂ ದುರ್ಗಮವಾಗಿತ್ತು. ಈ ಪರ್ವತ ಪ್ರದೇಶಗಳಿಗೆ ರೈಲು ಸಂಪರ್ಕವಾಲೀ ರಸ್ತೆ ಸಂಪರ್ಕವಾಗಲೀ ಇರಲಿಲ್ಲ. ಇಲ್ಲಿಗೆ ಮಾನವ ಶಾಸ್ತ್ರಜ್ಞರಾಗಲೀ ಪತ್ರಕರ್ತರಾಗಲೀ ಎಡೆತಾಕಿರಲಿಲ್ಲ. ಹೀಗಾಗಿ, ಕಾಶ್ಮೀರದ ಮೇಲಿನ ಗುಡ್ಡಗಾಡು ಜನರ ಆಕ್ರಮಣ ಕುರಿತಂತೆ ಪ್ರತ್ಯಕ್ಷದರ್ಶಿ ವಿವರಗಳಾಗಲೀ ಮಾಹಿತಿಗಳಾಗಲೀ ಲಭ್ಯವಿರಲಿಲ್ಲ.

ಆದರೆ, ಒಬ್ಬರಲ್ಲ ಇನ್ನೊಬ್ಬರ ಪರ ಪೂರ್ವಾಗ್ರಹಪೀಡಿತವಾದ ಅಭಿಪ್ರಾಯಗಳಿಗೇನೂ ಕೊರತೆ ಇರಲಿಲ್ಲ. ಆ ಕ್ಷಣ, ಮತ್ತು ಆನಂತರ, ಗುಡ್ಡಗಾಡು ಜನರನ್ನು ಪಾಕಿಸ್ತಾನವೇ ಗಡಿಯಲ್ಲಿ ನುಗ್ಗಿಸಿತೆಂದೂ, ಅವರಿಗೆ ಶಸ್ತ್ರಾಸ್ತ್ರ ಪೂರೈಸಿತೆಂದೂ ನಂಬುವವರು ಇದ್ದಾರೆ. ಪಾಕಿಸ್ತಾನ ಈ ಅತಿಕ್ರಮಣವನ್ನು ನಿರಾಕರಿಸಿತು. ಅದು, ಹಿಂದೂ ದೊರೆ ಹಾಗೂ ಹಿಂದೂ ಪ್ರಜೆಗಳಿಂದ ಪೀಡಿತರಾದ ಸಹಧರ್ಮೀಯರನ್ನು ರಕ್ಷಿಸಲು ಪಠಾಣ ಮುಸ್ಲಿಮರು ತತ್‌ಕ್ಷಣದ ಸ್ಫೂರ್ತಿಯಿಂದ ಧಾವಿಸಿದ ಕ್ರಮವಾಗಿತ್ತೆಂದು ಪಾಕಿಸ್ತಾನದ ಆಗ್ರಹಪೂರ್ವಕ ಅಂಬೋಣವಾಗಿತ್ತು.

ಆದರೆ, ಕಾಶ್ಮೀರದ ಒಂದು ಭಾಗದಲ್ಲಿ ಅತೃಪ್ತಿ ಹೊಗೆಯಾಡುತ್ತಿತ್ತು. ಇದು, ಶ್ರೀನಗರಕ್ಕೆ ಪಶ್ಚಿಮದಲ್ಲಿರುವ ಪೂಂಛ್ ಜಿಲ್ಲೆಯ ಹೊಗೆಯಾಗಿತ್ತು. 1936ರವರೆಗೆ ಪೂಂಛ್, ಡೋಗ್ರಾ ಆಳರಸರ ಸಂತತಿಯ ಸಾಮಂತನೊಬ್ಬನ ಆಳ್ವಿಕೆಗೊಳಪಟ್ಟಿತ್ತು. ಆದರೆ ಆ ವರ್ಷ ಅದು ನೇರವಾಗಿ ಶ್ರೀನಗರದಲ್ಲಿದ್ದ ಮಹಾರಾಜರ ಆಳ್ವಿಕೆಗೊಳಪಟ್ಟಿತು. ಸ್ವಾಯತ್ತತೆಯನ್ನು ಕಸಿಮುಕೊಂಡದ್ದು ಈ ಭಾಗದ ಜನರಲ್ಲಿ ನೋವು ಉಂಟುಮಾಡಿತ್ತು. ಹಾಗೆಯೇ

ಮಹಾರಾಜರು ವಿಧಿಸಿದ ಹೊಸ ತೆರಿಗೆಗಳೂ ಅವರನ್ನು ಘಾಸಿಗೊಳಿಸಿದ್ದವು. ಅರಣ್ಯ ಪ್ರವೇಶಿಸುವ ಮೇಕೆಗಳು, ಕುರಿಗಳು, ದನಕರುಗಳ ಮೇಲೆ ತೆರಿಗೆ ವಿಧಿಸಲಾಯಿತು. ಇದರಿಂದ ತೀವ್ರವಾಗಿ ಸಂಕಷ್ಟಕ್ಕೊಳಗಾದವರು ಪೂಂಛ್‌ನ ಕುರುಬರು. ಇವರಲ್ಲಿ ಹೆಚ್ಚು ಮಂದಿ ಮುಸ್ಲಿಮರೇ ಆಗಿದ್ದರು.

ಎರಡನೇ ಮಹಾಯುದ್ಧದಲ್ಲಿ ಪೂಂಛ್‌ನ ಬಹುಮಂದಿ ಮುಸ್ಲಿಮರು ಬ್ರಿಟಿಷ್ ಭಾರತ ಸೇನಾ ಪಡೆಯಲ್ಲಿ ಸೇವೆ ಸಲ್ಲಿಸಿದ್ದರು. ಇವರೆಲ್ಲ ಅಸಂಘಟಿತ ಸೈನಿಕರಾಗಿ ವಾಪಸಾದವರು, ತಮ್ಮ ರಾಜಕೀಯ ಸ್ಥಾನಮಾನ ಕುರಿತು ತುಂಬಾ ಜಾಗೃತರಾಗಿದ್ದವರು. ಕಾಶ್ಮೀರ ಕಣಿವೆಯಲ್ಲಿ ಮಹಾರಾಜರ ಆಳ್ವಿಕೆಗೆ ಶೇಖ್ ಅಬ್ದುಲ್ಲಾ ಮತ್ತು ಅವರ ಪಕ್ಷ ಈಗಾಗಲೇ ಸಡ್ಡು ಹೊಡೆದು ನಿಂತಾಗಿತ್ತು. ಇದರ ಜೊತೆಗೆ, ಈಗ ಪೂಂಛ್‌ನ ಸ್ವಾತಂತ್ರ್ಯಾಭಿಲಾಷಿ ಜನತೆಯ ಸಡ್ಡು ಸವಾಲುಗಳೂ ಸೇರಿಕೊಂಡವು.

ಆಗಸ್ಟ್ 14ರಂದು ಪೂಂಛ್‌ನ ಅಂಗಡಿ ಮುಂಗಟ್ಟುಗಳು ಹಾಗೂ ಕಛೇರಿಗಳ ಮೇಲೆ ಪಾಕಿಸ್ತಾನಿ ಧ್ವಜಗಳು ಹಾರಾಡಿದವು. ಇದು ತಾವು ಪಾಕಿಸ್ತಾನದ ಮಿತ್ರರೆಂಬುದರ ಸೂಚನೆಯೇ ಆಗಿತ್ತು. ಆದರೆ ಇದು ಸೇರ್ಪಡೆಯಾಗದ ಕಾಶ್ಮೀರ ಸಂಸ್ಥಾನಕ್ಕೆ ಬೆಂಬಲವಾಗಿರಲಿಲ್ಲ. ಮುಂದಿನ ವಾರಗಳಲ್ಲಿ ಡೋಗ್ರಾ ಸೈನಿಕರು ಮತ್ತು ಸ್ಥಳೀಯ ಪ್ರತಿಭಟನಾಕಾರರ ನಡುವೆ ಘರ್ಷಣೆಗಳು ಸಂಭವಿಸಿದ್ದು ವರದಿಯಾದವು. ಸೆಪ್ಟಂಬರ್‌ನ ಪ್ರಾರಂಭದ ವೇಳೆಗೆ ಪೂಂಛ್‌ನ ಹತ್ತಾರು ಮಂದಿ ಶಸ್ತ್ರಸಜ್ಜಿತರಾಗಿದ್ದರು. ಈ ಶಸ್ತ್ರಾಸ್ತ್ರಗಳೆಲ್ಲವೂ "ಪಾಕಿಸ್ತಾನದ ಬಲ್ಲ ಮೂಲಗಳಿಂದ" ಬಂದ ಶಸ್ತ್ರಾಸ್ತ್ರಗಳಾಗಿದ್ದವು. ಅತಿಕ್ರಮಣಕಾರರು ಪಾಕಿಸ್ತಾನದ ಮುರ್ರೆ ಪಟ್ಟಣದಲ್ಲಿ ನೆಲೆಯೂರಿದ್ದು, ಅಲ್ಲಿ ಕಾಶ್ಮೀರಕ್ಕೆ ಅಕ್ರಮವಾಗಿ ಸಾಗಿಸಬೇಕಾಗಿದ್ದ ಮದ್ದುಗುಂಡು-ಶಸ್ತ್ರಾಸ್ತ್ರಗಳನ್ನು ಪಡೆದುಕೊಳ್ಳಲಾಗುತ್ತಿತ್ತು. ಇದು, ಪ್ರಧಾನಮಂತ್ರಿ ಲಿಯಾಕತ್ ಅಲೀ ಮತ್ತು ಪಂಜಾಬ್ ಮುಸ್ಲಿಂ ಲೀಗ್‌ನ ವರಿಷ್ಠ ನಾಯಕ ಮಿಯಾನ್ ಇಫ್ತಿಖುದ್ದೀನ್ ಅವರಿಗೆ ತಿಳಿದಿತ್ತೆಂದೂ, ಪೂಂಛ್ ಬಂಡಾಯಗಾರರಿಗೆ ನೆರವು ನೀಡುತ್ತಿರುವುದು ಮಿಯಾನ್ ಇಫ್ತಿಖುದ್ದೀನ್ ಅವರಿಗೆ ಗೊತ್ತಿತ್ತೆಂದೂ ಪಾಕಿಸ್ತಾನದಲ್ಲೇ ಪುರಾವೆಗಳಿವೆ. ಈ ಕಾರ್ಯಾಚರಣೆಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದವನು, ಪಾಕಿಸ್ತಾನ ಸೇನೆಯಲ್ಲಿ ಕರ್ನಲ್ ಸ್ಥಾನದಲ್ಲಿದ್ದ ಅಕ್ಬರ್ ಖಾನ್ ಎಂಬುವನು. ಖಾನ್, ಸೈನ್ಯಕ್ಕೆಂದು ಮಾಮೂಲಿನಂತೆ ಗೊತ್ತುಪಡಿಸಲಾಗಿದ್ದ 4000 ಬಂದೂಕುಗಳನ್ನು ಕಾಶ್ಮೀರದಲ್ಲಿ ಬಳಕೆಗಾಗಿ ನೀಡಿದನಂತೆ. ಇವನು ಮಧ್ಯಯುಗದಲ್ಲಿ ಸ್ಪೇನಿನಲ್ಲಿ ಕ್ರಿಶ್ಚಿಯನ್ನರ ವಿರುದ್ಧ ಹೋರಾಡಿದ್ದ ಮೂರ್ ಜನಾಂಗದ ರಣವೀರ 'ಜನರಲ್ ತಾರಿಕ್'ನ ಹೆಸರನ್ನು ತನ್ನ ಗುಪ್ತನಾಮವಾಗಿ ಇಟ್ಟುಕೊಂಡಿದ್ದನಂತೆ.

ಪೂಂಛ್‌ನಲ್ಲಿ ಮುಸ್ಲಿಂ ಅಧಿಕಾರಿಗಳು ಮತ್ತು ಸೈನಿಕರು ರಾಜ್ಯಾಡಳಿತವನ್ನು ತ್ಯಜಿಸಿ ಬಂಡುಕೋರರ ಜೊತೆ ಸೇರಿಕೊಂಡರು. ಭಿನ್ನಮತ ಹೊಂದಿದ್ದ ಪೂಂಛ್ ಜಿಲ್ಲೆ ಮತ್ತು ಮಹಾರಾಜ ಹರಿಸಿಂಗರ ಸರ್ಕಾರದ ನಡುವೆ ತೀವ್ರ ಸಂಘರ್ಷ ಶುರುವಾಗಿರುವುದು ಸೆಪ್ಟಂಬರ್ ಅಂತ್ಯದ ವೇಳೆಗೆ ಬಹಿರಂಗವಾಯಿತು. ಅಲ್ಲಲ್ಲಿ ಸಣ್ಣಪುಟ್ಟ ಘರ್ಷಣೆಗಳಾದರೂ

ಭಾರಿ ಪ್ರಮಾಣದ ದೊಂಬಿ ಗಲಭೆಗಳಾಗಲಿ, ಕದನ ಕಾಳಗಗಳಾಗಲೀ ಆಗಲಿಲ್ಲ. ಪೂಂಛ್ ಪಶ್ಚಿಮ ಪಂಜಾಬಿನ ಗಡಿಯಲ್ಲಿದ್ದು ಅಲ್ಲಿಂದ ಪಾಕಿಸ್ತಾನದ ರಾವಲ್ಪಿಂಡಿಯಂಥ ನಗರಗಳಿಗೆ ಸುಲಭವಾಗಿ ಹೋಗಬಹುದಿತ್ತು. ಆದರೆ ವಾಯುವ್ಯ ಸರಹದ್ದು ಪ್ರಾಂತ್ಯ ಪಶ್ಚಿಮದಿಂದ ದೂರದಲ್ಲಿತ್ತು. ಆ ಪ್ರಾಂತ್ಯದ ದಾಳಿಕೋರರಿಗೆ ಪೂಂಛ್‌ನಲ್ಲಿ ಬಂಡಾಯದ ಕುದಿ ಎದ್ದಿರುವ ಸುದ್ದಿ ತಿಳಿದಿತ್ತೆ? ಅಥವಾ ಇದಾವುದರ ಅರಿವೂ ಇಲ್ಲದೆ, ಒಳನುಗ್ಗುವ ಯೋಜನೆಯನ್ನು ಅವರೇ ರೂಪಿಸಿಕೊಂಡಿದ್ದರೋ?

ಈ ಪ್ರಶ್ನೆಗಳಿಗೆ ನಿರ್ವಿವಾದಾತ್ಮಕವಾದ ಉತ್ತರಗಳನ್ನು ಯಾರೂ ಕೊಡಲಾರರು. ನಮಗೆ ಖಚಿತವಾಗಿ ತಿಳಿದಿರುವುದು ಇಷ್ಟು: ಪಠಾಣ್ ದಾಳಿಕಾರರು ಅಕ್ಟೋಬರ್ 22ರಂದು ಗಡಿದಾಟಿ ಒಳಕ್ಕೆ ನುಗ್ಗಿದ ನಂತರ ಅವರು ತ್ವರಿತಗತಿಯಲ್ಲಿ ದಕ್ಷಿಣದತ್ತ ಧಾವಿಸುವುದರಲ್ಲಿ ಪ್ರಚಂಡ ಪ್ರಗತಿ ಸಾಧಿಸಿದ್ದರು. ಗುಡ್ಡಗಾಡು ಜನರ ಅತಿಕ್ರಮಣದ ಮುಖ್ಯಲಕ್ಷಣಗಳನ್ನು ಇತಿಹಾಸಕಾರ ಮೈಕೇಲ್ ಬ್ರೆಚರ್ ಹೀಗೆ ಗುರುತಿಸಿದ್ದಾನೆ:

ಗುಡ್ಡಗಾಡು ಆಕ್ರಮಣಕಾರರು ಚಕಿತಗೊಳಿಸುವ ಧಿಡೀರ್ ತಂತ್ರಗಳನ್ನು ಅಳವಡಿಸಿಕೊಂಡಿದ್ದರು. ಕಾಶ್ಮೀರ ಮಹಾರಾಜರ ಸೈನ್ಯದಲ್ಲಿ ರಕ್ಷಣೆಯ ಆದ್ಯ ವ್ಯವಸ್ಥೆಗಳಿರಲಿಲ್ಲವಾದರಿಂದ ಗುಡ್ಡಗಾಡು ಆಕ್ರಮಣಕಾರರು ಹಿಂದೂ ಮುಸ್ಲಿಂ ಭೇದಭಾವ ಎಣಿಸದಂತೆ ಎಲ್ಲ ಜನರ ಕೊಳ್ಳೆ ಹೊಡೆದರು, ಲೂಟಿ, ಸುಲಿಗೆ, ಡಕಾಯಿತಿ ನಡೆಸಿದರು.

ಅಥವಾ, ಕಾಶ್ಮೀರವನ್ನು ಸ್ಥಳೀಯವಾಗಿ ಬಲ್ಲ ಬ್ರಿಟಿಷ್ ಸಮಾಜ ಸೇವಕನೊಬ್ಬ ಅಭಿಪ್ರಾಯ ಪಟ್ಟಿರುವಂತೆ, "ಧಾರ್ಮಿಕ ಹಿರಿಮೆ ಮೆರೆಸಲು ಹಾಗೂ ಸಂಪತ್ತಿನ ಸೂರೆಹೊಡೆಯಲು ಇದೊಂದು ಉತ್ತಮ ಅವಕಾಶವೆಂದು ಆಕ್ರಮಣಕಾರರು ಗ್ರಹಿಸಿದ್ದರು."

ಕಾಶ್ಮೀರದೊಳಕ್ಕೆ ನುಗ್ಗಿದ ಕೂಡಲೇ ಗುಡ್ಡಗಾಡು ಜನರು ಝೀಲಂ ಕಣಿವೆ ಕೆಳಗಣ ಪ್ರದೇಶದತ್ತ ತ್ವರಿತಗತಿಯಲ್ಲಿ ಚಲಿಸಿದರು. ಕಿಶನ್‌ಗಂಗಾ ತಟದ, ಗಡಿಯಿಂದ ಏಳು ಮೈಲಿಯಷ್ಟು ಸನಿಹದಲ್ಲಿದ್ದ ಮುಜಫರಾಬಾದ್ ಪಟ್ಟಣ ಅವರ ಮೊದಲ ತಂಗುದಾಣವಾಯಿತು. ಇಲ್ಲಿ, ಜಮ್ಮು-ಕಾಶ್ಮೀರದ ಪದಾತಿ ಸೈನ್ಯದ ತುಕಡಿಯೊಂದಿತ್ತು. ಇದರಲ್ಲೂ ಒಡಕುಂಟಾಗಿತ್ತು. ಈ ತುಕಡಿಯಲ್ಲಿದ್ದ ಸೈನಿಕರಲ್ಲಿ ಅರ್ಧದಷ್ಟು ಮಂದಿ ಪೂಂಛ್‌ನ ಮುಸ್ಲಿಮರಾಗಿದ್ದು ಇವರು ಮಹಾರಾಜರ ಬಗ್ಗೆ ತಮಗೆ ಭ್ರಮೆಗಳೇನೂ ಇಲ್ಲವೆಂದು ಹೇಳಲಾರಂಭಿಸಿದ್ದರು. ಈ ಸೇನೆಯ ಪತನವಾಯಿತು. ಸೋತ ಸೈನಿಕರಲ್ಲಿ ಕೆಲವರು ಆಕ್ರಮಣಕಾರರಿಂದ ತಪ್ಪಿಸಿಕೊಂಡು ಪರಾರಿಯಾಗಿ ನಡೆದುದೆಲ್ಲವನ್ನೂ ಫೋನಿನಲ್ಲಿ ಶ್ರೀನಗರಕ್ಕೂ ತಿಳಿಸಿದರು. ಇದರಿಂದಾಗಿ, ನೂರಾರು ಮಂದಿ ಸೈನಿಕರೊಂದಿಗೆ ಯೂರಿಯತ್ತ ಧಾವಿಸುವುದು ಹಂಗಾಮಿ ಸೇನಾದಂಡನಾಯಕ ಬ್ರಿಗೇಡಿಯರ್ ರಾಜೇಂದ್ರ ಸಿಂಗ್ ಅವರಿಗೆ ಸಾಧ್ಯವಾಯಿತು. ಯೂರಿ, ಶ್ರೀನಗರ ಮತ್ತು ಮುಜಫರಾಬಾದ್ ಪಟ್ಟಣಗಳ ಮಧ್ಯೆ ಅರ್ಧದಾರಿಯಲ್ಲಿರುವ ಪಟ್ಟಣ.

ದಾಳಿಕಾರರು ಯೂರಿಯ ಮಾರ್ಗದ ಮಧ್ಯೆ ಪಯಣಿಸುತ್ತಿದ್ದರು. ಅಲ್ಲಿಗೆ ಮೊದಲು ತಲುಪಿದ ರಾಜೇಂದ್ರ ಸಿಂಗ್ ಮುನ್ನೆಚ್ಚರಿಕೆ ಕ್ರಮವಾಗಿ ಯೂರಿ ಪಟ್ಟಣಕ್ಕೆ ರಾಜ್ಯದ ಉತ್ತರ

ಭಾಗದೊಂದಿಗೆ ಸಂಪರ್ಕ ಕಲ್ಪಿಸುತ್ತಿದ್ದ ಸೇತುವೆಯನ್ನು ಸ್ಫೋಟಿಸಿದರು. ಇದರಿಂದಾಗಿ ಆಕ್ರಮಣಕಾರರ ಮುನ್ನಡೆಗೆ ಭಂಗವಾಯಿತು. ನದಿ ದಾಟಲಾಗದೆ ನಲವತ್ತೆಂಟು ಗಂಟೆಕಾಲ ಅವರು ಅಲ್ಲೇ ನಿಲ್ಲಬೇಕಾಯಿತು. ಆಖೈರಾಗಿ ನದಿದಾಟಿ ಯೂರಿ ತಲುಪಿದ ಅವರು ಬ್ರಿಗೇಡಿಯರ್‌ನ ಮಂದಿಯನ್ನು ಕೊಂದು, ಕಾಶ್ಮೀರ ಕಣಿವೆಗೆ ವಿದ್ಯುಚ್ಛಕ್ತಿ ಸರಬರಾಜು ಕೇಂದ್ರವಾಗಿದ್ದ ಮಾಹುತಾದತ್ತ ನುಗ್ಗಿದರು. ವಿದ್ಯುಚ್ಛಕ್ತಿ ಕೇಂದ್ರವನ್ನು ನಿಷ್ಕ್ರಿಯಗೊಳಿಸಿ ಶ್ರೀನಗರವನ್ನು ಅಂಧಕಾರದಲ್ಲಿ ಮುಳುಗಿಸಿದರು.

ದಾಳಿಕಾರರ ಸಂಖ್ಯೆಯ ಅಂದಾಜಿನಲ್ಲಿ ಹೆಚ್ಚು ಕಡಿಮೆ ಇದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಒಂದು ಅಂದಾಜಿನ ಪ್ರಕಾರ ಅವರ ಸಂಖ್ಯೆ 2000, ಮತ್ತೆ ಕೆಲವರ ಅಂದಾಜಿನ ಪ್ರಕಾರ 13000. ದಾಳಿಕಾರರು ಬಂದೂಕುಗಳು ಮತ್ತು ಗ್ರೆನೇಡ್‌ಗಳನ್ನು (ಕೈ ಬಾಂಬು) ಹೊಂದಿದ್ದು ಲಾರಿಗಳಲ್ಲಿ ಪಯಣಿಸುತ್ತಿದ್ದರೆಂಬುದೂ ತಿಳಿದ ಸಂಗತಿಯಾಗಿತ್ತು. ಕಾಶ್ಮೀರದೊಳಕ್ಕೆ ನುಗ್ಗುವಂತೆ ದಾಳಿಕಾರರಿಗೆ ವಾಯುವ್ಯ ಸರಹದ್ದು ಪ್ರಾಂತ್ಯದ ಪ್ರಧಾನ ಮಂತ್ರಿಯಿಂದಲೇ ಬಹಿರಂಗ ಪ್ರೇರಣೆ-ಪ್ರೋತ್ಸಾಹಗಳು ದೊರೆತಿದ್ದವು. ಬ್ರಿಟಿಷ್ ಗೌರ್ನರ್ ಸರ್ ಜಾರ್ಜ್ ಕನ್ನಿಂಗ್‌ಹ್ಯಾಂ ಇದಕ್ಕೆಲ್ಲ ಕಣ್ಣುಮುಚ್ಚಿ ಕುಳಿತಿದ್ದ. ಆಗ ಪಾಕಿಸ್ತಾನದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಬ್ರಿಟಿಷ್ ಅಧಿಕಾರಿಗಳ ವರ್ತನೆಯೂ ಇದೇ ಆಗಿತ್ತು. ಜಿನ್ನಾ ಅವರ ಅಮೆರಿಕನ್ ಜೀವನ ಚರಿತ್ರಕಾರರು ಅಭಿಪ್ರಾಯಪಟ್ಟಿರುವಂತೆ,

> *"ಟ್ರಕ್ಕುಗಳು, ಪೆಟ್ರೋಲ್ ಮತ್ತು ಚಾಲಕರುಗಳು ಮೊದಲಾದವುಗಳಿಂದ ಗುಡ್ಡಗಾಡು ಜನರು ಸಜ್ಜಿತರಾಗಿರಲಿಲ್ಲ. ಇದನ್ನು ತಿಳಿದಿದ್ದ ಬ್ರಿಟಿಷ್ ಅಧಿಕಾರಿಗಳು ಹಾಗೂ ಪಾಕಿಸ್ತಾನಿ ಅಧಿಕಾರಿಗಳು ಹಾದಿಯುದ್ದಕ್ಕೂ ಇವರಿಗೆ ಬೆಂಬಲ ನೀಡಿದರು, ಅನುಕೂಲಗಳನ್ನು ಒದಗಿಸಿಕೊಟ್ಟರು. ಈ ಅಧಿಕಾರಿಗಳು ವಾಸ್ತವವಾಗಿ ದಾಳಿಕಾರರನ್ನು ಸಂಘಟಿಸದೇ ಇರಬಹುದು, ಅತಿಕ್ರಮಣಕ್ಕೆ ಪ್ರಚೋದನೆ ನೀಡದಿರಬಹುದು, ಆದಾಗ್ಯೂ ಅಕ್ಟೋಬರ್‌ನ ಹಿಂಸಾತ್ಮಕ ಕಾರ್ಯಾಚರಣೆಯಿಂದ ಕಾಶ್ಮೀರವನ್ನು ತನ್ನೊಳಕ್ಕೆ ಸೆಳೆದುಕೊಳ್ಳಬಹುದೆಂಬ ಆಸೆ-ಭರವಸೆಗಳನ್ನು ಪಾಕಿಸ್ತಾನ ಹೊಂದಿತ್ತು."*

24ರಂದು ಮಾಹುತಾ ವಿದ್ಯುಚ್ಛಕ್ತಿ ಕೇಂದ್ರವನ್ನು ವಶಪಡಿಸಿಕೊಂಡ ನಂತರ ದಾಳಿಕಾರರು ಶ್ರೀನಗರದತ್ತ ಮುಕ್ತ ರಸ್ತೆಯಲ್ಲಿ ಚಲಿಸಿದರು. ಈ ಮಾರ್ಗ ಮಧ್ಯೆಯೇ ಬಾರಾಮುಲ್ಲ ಪಟ್ಟಣವಿದೆ. ಇಲ್ಲೇ, ನಮಗೆ ಮೊಟ್ಟಮೊದಲಿಗೆ, ಏನಾಯಿತೆಂಬುದರ ಪ್ರತ್ಯಕ್ಷದರ್ಶಿ ವರದಿಗಳು ಸಿಗುವುದು. "ಸುವ್ಯವಸ್ಥಿತವಾಗಿ ಒದಗಿಸಲಾಗಿದ್ದ ಲಾರಿಗಳಲ್ಲಿ ಪೆಟ್ರೋಲ್ ಮತ್ತು ಮದ್ದುಗುಂಡುಗಳಿಂದ ಸುಸಜ್ಜಿತರಾಗಿದ್ದ ದಾಳಿಕಾರರು ಬಂದರು. ಅವರ ಬಳಿ ಎರಡು-ಮೂರು ಅಂಗುಲದ ಸಣ್ಣ ಫಿರಂಗಿಗಳು ಇದ್ದವು" ಎಂದು ಪ್ರತ್ಯಕ್ಷದರ್ಶಿಯಾದ ಬಾರಾಮುಲ್ಲಾದ ಟಿಂಬರ್ ಸಂಸ್ಥೆಯೊಂದರ ಬ್ರಿಟಿಷ್ ಮ್ಯಾನೇಜರ್ ಹೇಳಿದ್ದಾನೆ.

ಮ್ಯಾನೇಜರ್ ಆಗತಾನೆ ಬ್ಯಾಂಕಿನಿಂದ ತಂದಿಟ್ಟುಕೊಂಡಿದ್ದ 1500 ರೂಗಳನ್ನು ದಾಳಿಕಾರರು ಕಿತ್ತುಕೊಂಡರು. ಅವರ ಎರಡನೆಯ ಗುರಿ ಸೇಂಟ್ ಜೋಸೆಫ್ ಕಾನ್ವೆಂಟ್.

ಇಲ್ಲಿ ದಾಳಿಕಾರರು ಆಸ್ಪತ್ರೆಯ ಯಂತ್ರೋಪಕರಣಗಳನ್ನು ಧ್ವಂಸ ಮಾಡಿದರು ಹಾಗೂ ಗುಂಡು ಹಾರಿಸಿ ಮದರ್ ಸುಪೀರಿಯರ್ ಅವರನ್ನು ಗಾಯಗೊಳಿಸಿದರು. ಇದೇ ಕಾಂಪೌಂಡಿನಲ್ಲಿ ವಾಸವಿದ್ದ ನಿವೃತ್ತ ಕರ್ನಲ್ ಒಬ್ಬರನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಹಾಕಿದರು. ಗುಂಡಿಟ್ಟು ಕೊಲ್ಲಲು ಅಲ್ಲಿನ ಕ್ರೈಸ್ತ ಸನ್ಯಾಸಿನಿಯರನ್ನು ಸಾಲಾಗಿ ನಿಲ್ಲಿಸಲಾಗಿತ್ತಂತೆ. ಆದರೆ ಅವರೊಡನಿದ್ದ ಪೆಶಾವರದ ಕಾನ್ವೆಂಟ್ ಶಾಲೆಯಲ್ಲಿ ಓದಿದ ವ್ಯಕ್ತಿಯೊಬ್ಬ ಕೊನೆಗಳಿಗೆಯಲ್ಲಿ ತಪ್ಪಿಸಿದನೆಂದು ವರದಿಯೊಂದು ತಿಳಿಸಿದೆ.

'ಪಠಾಣರು ಯುದ್ಧೋನ್ಮತ್ತರಾಗಿ ನುಗ್ಗಿ ಬರುತ್ತಿದ್ದಾರೆಂಬುದು ಮಾರ್ಗಮಧ್ಯದ ಊರುಗಳ ಜನಕ್ಕೆ ನಿಸ್ಸಂಶಯವಾಗಿ ಕೆಟ್ಟ ಸುದ್ದಿಯಾಗಿತ್ತು' ಎಂದು ಕಾಶ್ಮೀರ ವಿವಾದದ ಚರಿತ್ರಕಾರರಾದ ಅಲಸ್ಟೈರ್ ಲ್ಯಾಂಬ್ ಬರೆದಿದ್ದಾರೆ. ಪಠಾಣರು ಕಾನ್ವೆಂಟ್ ಮೇಲೆ ದಾಳಿ ನಡೆಸಿದ್ದಲ್ಲದೆ ಹಿಂದೂಗಳ ಮತ್ತು ಮುಸ್ಲಿಮರ ಮಾಲೀಕತ್ವದ ಅಂಗಡಿ ಮುಂಗಟ್ಟುಗಳನ್ನು ಸುಟ್ಟು ಹಾಕಿದ್ದರೆಂದು ತಿಳಿಸುವ ಲ್ಯಾಂಬ್, ತಾವು 'ಧರ್ಮಯುದ್ಧದಲ್ಲಿ ತೊಡಗಿರುವ ವೀರರೆಂದು ತಿಳಿದಿದ್ದ ಅವರಿಂದ ಬೇರೇನನ್ನು ತಾನೆ ನಿರೀಕ್ಷಿಸಲು ಸಾಧ್ಯವಿತ್ತು?' ಎಂದು ಪ್ರಶ್ನಿಸುತ್ತಾರೆ. ಆದರೆ ಬಾರಾಮುಲ್ಲಾದಲ್ಲಿ ಗುಡ್ಡಗಾಡು ಜನರ ದುರಾಸೆ ಧರ್ಮದ ಲಾಂಛನದ ಮೇಲೆ ವಿಜಯ ಸಾಧಿಸಿತು. ಇಲ್ಲಿ ಶಾಂತಿಪ್ರಿಯ ಕಾಶ್ಮೀರಿ ಮುಸ್ಲಿಮರ ಮನೆಗಳ ಮೇಲೂ ದಾಳಿ ನಡೆಸಿದರು. ಕಾಶ್ಮೀರಿ ಮುಸ್ಲಿಮರ ಮನೆಗಳನ್ನು ಲೂಟಿಮಾಡಿ ಯುವತಿಯರ ಶೀಲಭಂಗ ಮಾಡಿದರು. ಈ ಯುವತಿಯರ ಭಯ-ಭೀತಿ, ನೋವು-ಯಾತನೆಗಳ ಚೀರಾಟ ಬಾರಾಮುಲ್ಲ ಉದ್ದಗಲ ಪ್ರತಿಧ್ವನಿಸಿತು.

ಬಾರಾಮುಲ್ಲ ಘಟನೆಗಳು ಆಕ್ರಮಣಕಾರರಿಗೆ ಭಾವಿ ಪರಿಣಾಮದ ದೃಷ್ಟಿಯಿಂದ ಮಾರಕವೇ ಆದವು. ಅಪಪ್ರಚಾರದ ವಿಪತ್ತನ್ನು ಎದುರಿಸಬೇಕಾಯಿತು. "ಧರ್ಮ ಯುದ್ಧದ ಅಂಧಾಭಿಮಾನದ ಪೊರೆಹರಿದ ಕೂಡಲೇ ಉಳಿದಿದ್ದ ಮಾರ್ಗ ಲೂಟಿಗೆ ಪ್ರೋತ್ಸಾಹ ದಾಯಕವಾದದ್ದೇ ಸರಿ" ಎಂಬುದನ್ನು ಈ ಘಟನೆಗಳು ತೋರಿಸಿಕೊಟ್ಟವು. ಕಾಶ್ಮೀರದ ಬಜಾರುಗಳಲ್ಲಿ ಕೊಳ್ಳೆಹೊಡೆದ ವಸ್ತುಗಳನ್ನು ಲಾರಿಗಳಲ್ಲಿ ತುಂಬಿ ವಜೀರ್‌ಸ್ತಾನದಲ್ಲಿರುವ ತಮ್ಮ ಮನೆಗಳಿಗೆ ರವಾನಿಸಲು ಗುಡ್ಡಗಾಡು ಜನರಲ್ಲೇ ನೂಕು ನುಗ್ಗಲಾಯಿತು. ಕೊಳ್ಳೆ, ಲೂಟಿ, ಮಾನಭಂಗಗಳಲ್ಲಿ ತೊಡಗಿದ ದಾಳಿಕಾರರು ಶ್ರೀನಗರ ವಶಪಡಿಸಿಕೊಳ್ಳುವ ತಮ್ಮ ಮುಖ್ಯ ಧ್ಯೇಯೋದ್ದೇಶಗಳನ್ನೇ ಮರೆತರು. ಮುಸ್ಲಿಮರು ಹಾಗೂ ಹಿಂದೂಗಳು ಇಬ್ಬರ ಮೇಲೂ ಆಕ್ರಮಣ ನಡೆಸುವ ಮೂಲಕ ತಾವು ಧರ್ಮಯುದ್ಧ ನಡೆಸುತ್ತಿದ್ದೇವೆ ಎಂಬ ಪ್ರತಿಪಾದನೆಯನ್ನು ಹಾಳುಗೆಡವಿದರು. ಯಾವುದೇ ರಾಜಕೀಯ ಪಕ್ಷಕ್ಕೂ ಸೇರದ 'ಒಳ್ಳೆಯ ಕೆಲಸ ಮಾಡುತ್ತಿದ್ದ' ಕ್ರಿಶ್ಚಿಯನ್ ಪಾದ್ರಿಗಳನ್ನು ಕೊಂದದ್ದು ಹೆಚ್ಚಿನ ಹಾನಿಯನ್ನುಂಟು ಮಾಡಿತ್ತು. ಬ್ರಿಟಿಷ್ ಪತ್ರಕರ್ತನೊಬ್ಬ ಆ ಪ್ರದೇಶದಲ್ಲಿ ಪ್ರವಾಸ ಮಾಡಿ ಉಳಿದವರ ಸಾಕ್ಷ್ಯ ಸಂಗ್ರಹಿಸಿದ್ದು ಇನ್ನಷ್ಟು ಹಾನಿಕಾರಕವಾಯಿತು.

ಅಕ್ಟೋಬರ್ 24ರಂದು ಗುಡ್ಡಗಾಡು ಜನರು ಯೂರಿಯಿಂದ ಬಾರಾಮುಲ್ಲಾಗೆ ಹೊರಟಿದ್ದಾಗ, ಮಹಾರಾಜ ಹರಿಸಿಂಗರು ಮಿಲಿಟರಿ ನೆರವು ಕೋರಿ ಭಾರತ ಸರ್ಕಾರಕ್ಕೆ ತಂತಿ ಕಳುಹಿಸಿದರು. ಮರುದಿನ ಬೆಳಿಗ್ಗೆ ನವದೆಹಲಿಯಲ್ಲಿ ಭಾರತ ಸರ್ಕಾರದ ರಕ್ಷಣಾ ಸಮಿತಿ ಸಭೆ ನಡೆಯಿತು. ಈ ಸಭೆಯಲ್ಲಿ ಪ್ರತ್ಯಕ್ಷ ಪರಿಶೀಲನೆಗಾಗಿ ವಿ.ಪಿ. ಮೆನನ್ ಅವರನ್ನು ಕಳುಹಿಸಿಕೊಡಲು ನಿರ್ಧರಿಸಲಾಯಿತು. ಅಂದೇ ವಿ.ಪಿ. ಮೆನನ್ ಶ್ರೀನಗರಕ್ಕೆ ವಿಮಾನದಲ್ಲಿ ತೆರಳಿದರು. ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ "ಅಲ್ಲಿ ಸುತ್ತಲಿದ್ದ ಸ್ಮಶಾನ ಮೌನವನ್ನು ಕಂಡು ಮೆನನ್ ಕುಗ್ಗಿಹೋದರು". ಎಲ್ಲೆಲ್ಲೂ ಸಂಭವನೀಯ ದುರಂತದ ಆತಂಕ ಮಡುಗಟ್ಟಿದ ವಾತಾವರಣವಿತ್ತು. ಅವರು ನೇರವಾಗಿ ಎಂ.ಸಿ. ಮಹಾಜನ್ ಅವರ ನಿವಾಸಕ್ಕೆ ಹೋದರು. ದಾಳಿಕಾರರು ಐವತ್ತು ಮೈಲಿಗೂ ಕಡಿಮೆ ದೂರದಲ್ಲಿರುವ ಬಾರಾಮುಲ್ಲಾದಲ್ಲಿದ್ದಾರೆಂದು ಗೊತ್ತಾಯಿತು. ಅವರು ಮಹಾರಾಜರನ್ನೂ ಭೇಟಿಮಾಡಿದರು, ಸುರಕ್ಷಿತ ಸ್ಥಳವಾದ ಜಮ್ಮುವಿಗೆ ತೆರಳುವಂತೆ ಸಲಹೆ ಮಾಡಿದರು.

26ರಂದು ಬೆಳಿಗ್ಗೆ ಮೆನನ್ ಅವರು ಕಾಶ್ಮೀರದ ಪ್ರಧಾನ ಮಂತ್ರಿಯೊಂದಿಗೆ ದೆಹಲಿಗೆ ವಾಪಸಾದರು. ರಕ್ಷಣಾ ಸಮಿತಿಯ ಮತ್ತೊಂದು ಸಭೆ ಏರ್ಪಡಿಸಲಾಯಿತು. ಈ ಸಭೆಯಲ್ಲಿ ಮೌಂಟ್ ಬ್ಯಾಟನ್ ಅವರಲ್ಲದೇ ನೆಹರೂ ಮತ್ತು ಪಟೇಲರು ಹಾಗೂ ಅಂದು ದೆಹಲಿಯಲ್ಲೇ ಇದ್ದ ಶೇಖ್ ಅಬ್ದುಲ್ಲಾ ಅವರೂ ಭಾಗವಹಿಸಿದ್ದರು. ಆಕ್ರಮಣಕಾರರನ್ನು ಹಿಮ್ಮೆಟ್ಟಿಸಲು ತಕ್ಷಣ ಸೇನೆಯನ್ನು ಕಳುಹಿಸುವಂತೆ ಶೇಖ್ ಅಬ್ದುಲ್ಲಾ ಮತ್ತು ಮಹಾಜನ್ ಭಾರತಕ್ಕೆ ಒತ್ತಾಯ ಪಡಿಸಿದರು. ಅವರ ರಕ್ಷಣೆಗಾಗಿ ಸೈನ್ಯ ಕಳುಹಿಸುವ ಮುನ್ನ ಹರಿಸಿಂಗರಿಂದ ಭಾರತದೊಂದಿಗೆ ಸೇರ್ಪಡೆಗೆ ಒಪ್ಪಿಗೆ ಪಡೆಯುವುದು ಉತ್ತಮವೆಂದು ಮೌಂಟ್ ಬ್ಯಾಟನ್ ಸಲಹೆ ಮಾಡಿದರು.

ಮಹಾರಾಜ ಹರಿಸಿಂಗರ ಆಶ್ರಯ ತಾಣವಾಗಿದ್ದ ಜಮ್ಮುವಿಗೆ ಮೆನನ್ ಧಾವಿಸಿದರು. ಹೋದ ಕೂಡಲೇ ಅರಮನೆಯಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿ ಅವರಿಗೆ ಎದುರಾಯಿತು. ಅಮೂಲ್ಯ ವಸ್ತುಗಳನ್ನೆಲ್ಲ ಅರಮನೆಯಲ್ಲಿ ಚೆಲ್ಲಾಡಲಾಗಿತ್ತು. ಮಹಾರಾಜರು ನಿದ್ದೆ ಮಾಡುತ್ತಿದ್ದರು. ಇಡೀ ರಾತ್ರಿ ಪ್ರಯಾಣದ ಆಲಸ್ಯ ಪರಿಹಾರಕ್ಕಾಗಿ ಅವರು ವಿಶ್ರಮಿಸುತ್ತಿದ್ದರು. ಮಹಾರಾಜರನ್ನು ಎಬ್ಬಿಸಲಾಯಿತು. ಮಹಾರಾಜರು ತಕ್ಷಣವೇ ಭಾರತದೊಂದಿಗೆ ಸೇರ್ಪಡೆಗೆ ಸಮ್ಮತಿಸಿದರು. ಮೆನನ್ ಅವರು ಸೇರ್ಪಡೆ ಒಡಂಬಡಿಕೆಗೆ ಸಹಿ ಹಾಕಿಸಿಕೊಂಡು ದೆಹಲಿಗೆ ಹಿಂದಿರುಗಿದರು.

27ರಂದು ಮುಂಜಾನೆ ಸೇನಾ ಪಡೆಗಳು ಹಾಗೂ ಶಸ್ತ್ರಾಸ್ತ್ರಗಳಿಂದ ಕೂಡಿದ ಮೊದಲನೆಯ ವಿಮಾನ ದೆಹಲಿಯಿಂದ ಶ್ರೀನಗರಕ್ಕೆ ಹಾರಿತು. ಆ ದಿನ ಒಟ್ಟು ಇಪ್ಪತ್ತೆರಡು ಡಕೋಟಾ ವಿಮಾನಗಳು ದೆಹಲಿಯಿಂದ ಶ್ರೀನಗರಕ್ಕೆ ಯಾನ ಮಾಡಿದವು. ಮುಂದಿನ ದಿನಗಳಲ್ಲಿ ನೂರಕ್ಕೂ ಹೆಚ್ಚು ವಿಮಾನಗಳು ದೆಹಲಿಯಿಂದ ಕಾಶ್ಮೀರ ಕಣಿವೆಗೆ ಹಾರಿದವು. ಈ ವಿಮಾನಗಳು ಸಿಪಾಯಿಗಳು ಹಾಗೂ ಸಾಮಗ್ರಿಗಳನ್ನು ಹೊತ್ತು ಕಣಿವೆಗೆ ಯಾನ ಮಾಡಿದವು; ಅಲ್ಲಿಂದ ನಿರಾಶ್ರಿತರನ್ನು, ಗಾಯಾಳುಗಳನ್ನು ದೆಹಲಿಗೆ ಕರೆತಂದವು.

27ರಂದು ಶ್ರೀನಗರಕ್ಕೆ ಹಾರಿದ ವಿಮಾನಗಳಲ್ಲಿ ಕೆಲವು ಭೂಸೇನೆಗೆ ಸಂಬಂಧಿಸಿದವಾದರೆ, ಇನ್ನು ಕೆಲವು ವಾಯುಪಡೆಗೆ ಸೇರಿದವು. ಉಳಿದವು, ಭಾರತಸರ್ಕಾರದ ನಾಯಕತ್ವದಲ್ಲಿ ಯಾನ ಮಾಡಿದ ಖಾಸಗಿ ಸಂಸ್ಥೆಗಳ ವಿಮಾನಗಳಾಗಿದ್ದವು. ಪ್ರಯಾಣಿಕರ ವಿಮಾನದ ಒಬ್ಬ ಅಧಿಕಾರಿ ಹೇಳಿದಂತೆ, "ಸುಖ ಪ್ರಯಾಣಕ್ಕೆ ಸಂಬಂಧಿಸಿದ ವಸ್ತು ಉಪಕರಣಗಳೆಲ್ಲವನ್ನೂ ಕಿತ್ತು ಹಾಕಲಾಯಿತು, ಸುಖಾಸೀನ ಪೀಠಗಳನ್ನು ಕಿತ್ತೊಗೆಯಲಾಯಿತು, ಕೆಲವೇ ನಿಮಿಷಗಳಲ್ಲಿ ವಿಮಾನದಲ್ಲಿ ಸಶಸ್ತ್ರ ಸೈನಿಕರು ತುಂಬಿಕೊಂಡರು. ಅವರು, ನಭದ ಕೆಳಗೆ, ಭೂಮಿಯ ಮೇಲೆ ನಿರಾಶ್ರಿತರು ಸಾಲುಗಟ್ಟಿ ನಡೆಯುತ್ತಿರುವುದನ್ನು ಮೇಲಿನಿಂದ ಕಂಡರು. ಅಲ್ಲಲ್ಲಿ ಮನೆಯೊಂದನ್ನು, ಹೊಗೆಯುಗುಳುತ್ತಿರುವ ಮನೆಗಳನ್ನು, ಮುರಿದು ಬಿದ್ದ ಮನೆಗಳ ಭಗ್ನಾವಶೇಷಗಳನ್ನು ಮೇಲಿಂದ ಕಂಡರು. ಅವರು ಶ್ರೀನಗರದಲ್ಲಿ ಇಳಿದಾಗ, "ಕೈ ಫಿರಂಗಿಗಳ, ಮೆಷನ್‌ಗನ್ನುಗಳ ಸದ್ದು" ಅವರನ್ನು ಸ್ವಾಗತಿಸಿತು.

ತಮ್ಮ ಸೈನ್ಯ ಪಡೆಗಳು ಕಣಿವೆಯಲ್ಲಿ ಹಾಜರಾದುದರೊಂದಿಗೆ ಭಾರತದ ಪ್ರಧಾನ ಮಂತ್ರಿಗಳಿಗೆ ಸ್ವಲ್ಪ ನಿರುಂಬಳವೆನಿಸಿತು. "ನಾವು ಒಂದು ದಿನ ಡೋಲಾಯಮಾನವಾಗಿದ್ದಿದ್ದರೆ, ವಿಳಂಬ ಮಾಡಿದ್ದಿದ್ದರೆ ಶ್ರೀನಗರ ಹೊಗೆಯುಗುಳುವ ಭಗ್ನಾವಶೇಷವಾಗುತ್ತಿತ್ತು" ಎಂದು ನೆಹರೂ ತಮ್ಮ ಸಹೋದರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. "ನಾವು ಸರಿಯಾದ ಮೂಹೂರ್ತದಲ್ಲಿ, ಸಕಾಲದಲ್ಲಿ ಅಲ್ಲಿ ಪದಾರ್ಪಣ ಮಾಡಿದೆವು" ಎಂದಿರುವ ನೆಹರೂ ಪಾಕಿಸ್ತಾನವನ್ನು ಕಾಶ್ಮೀರದಿಂದ ದೂರ ಇರಿಸುವುದರಲ್ಲಿ ತಾವು ಯಶಸ್ವಿಯಾದುದಾಗಿ ಭಾವಿಸಿದ್ದರು. "ಕಾಶ್ಮೀರದ ಭವಿಷ್ಯವನ್ನು ಅಲ್ಲಿನ ಜನತೆಯೇ ನಿರ್ಧರಿಸಬೇಕೆಂಬುದನ್ನು ನಾವು ಒಪ್ಪಿದ್ದೇವೆ". ಏತನ್ಮಧ್ಯೆ, ಮಂತ್ರಿಮಂಡಲ ರಚನೆಯ ಕಾರ್ಯವನ್ನು ಶೇಖ್ ಅಬ್ದುಲ್ಲಾರಿಗೆ ವಹಿಸಲಾಯಿತು. "ಕಾಶ್ಮೀರ, ಸ್ವಲ್ಪ ಹೆಚ್ಚು ಕಡಿಮೆ ಸ್ವತಂತ್ರವಾದರೆ, ನನ್ನಷ್ಟಕ್ಕೇ ಹೇಳುವುದಾದಲ್ಲಿ ನನ್ನ ಆಕ್ಷೇಪಣೆ ಏನೂ ಇಲ್ಲ. ಆದರೆ ಅದು ಪಾಕಿಸ್ತಾನದ ಶೋಷಿತ ಪ್ರದೇಶವಾಗಿದ್ದಿದ್ದರೆ ಅದೊಂದು ಮಾರಕ ಹೊಡೆತವಾಗುತ್ತಿತ್ತು" ಎಂಬುದು ನೆಹರೂ ಅಭಿಪ್ರಾಯವಾಗಿತ್ತು.

ಮತ್ತೊಂದು ಬದಿಯ ಅಭಿಪ್ರಾಯಗಳು ತುಂಬ ಭಿನ್ನವಾಗಿಯೇ ಇದ್ದವು. ಭಾರತದ ಪಡೆಗಳು ಶ್ರೀನಗರದಲ್ಲಿ ಭೂಸ್ಪರ್ಶ ಮಾಡಿದ ಸುದ್ದಿ ಪಾಕಿಸ್ತಾನದ ಗೌರ್ನರ್ ಜನರಲ್‌ರನ್ನು ಕೆರಳಿಸಿತ್ತು. ಹಲವಾರು ಗುಟುಕುಗಳ ಬ್ರಾಂಡಿ ಸೇವನೆಯ ನಂತರ ಸಶಕ್ತರಾದ ಜಿನ್ನಾ, ಕಾಶ್ಮೀರದೊಳಕ್ಕೆ ತಮ್ಮ ಸೇನೆಯನ್ನು ನುಗ್ಗಿಸುವಂತೆ ಪಾಕಿಸ್ತಾನದ ದಂಡನಾಯಕರುಗಳಿಗೆ ಆಜ್ಞಾಪಿಸಿದರು. ಆದರೆ ಅವರ ಬ್ರಿಟಿಷ್ ದಂಡನಾಯಕರು ಈ ಆಜ್ಞೆ ಪಾಲಿಸಲು ನಿರಾಕರಿಸಿದರು. ಹೀಗಾಗಿ, ಆ ಕ್ಷಣ ಪಾಕಿಸ್ತಾನದ ಸೈನಿಕ ಪಡೆಗಳು ಸಂಘರ್ಷದ ಹೊರಗುಳಿದವು. ಆದರೆ ಅದರ ಅಧಿಕಾರಿಗಳು ದಾಳಿಕಾರರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು.

ಭಾರತದ ಪಡೆಗಳು ಬಂದಿಳಿಯುವ ವೇಳೆಗಾಗಲೇ ಮಹಾರಾಜರು ಶ್ರೀನಗರ ತ್ಯಜಿಸಿಯಾಗಿತ್ತು. ಅವರ ಆಡಳಿತ ಇರುವ ಚಿಹ್ನೆಗಳು ಇರಲಿಲ್ಲ. ಪೊಲೀಸರು ಎಲ್ಲೂ

ಕಾಣಿಸುತ್ತಿರಲಿಲ್ಲ. ಅವರ ಬದಲು ನ್ಯಾಷನಲ್ ಕಾನ್ಫರೆನ್ಸಿನ ಸ್ವಯಂ ಸೇವಕರಿದ್ದರು. ಈ ಸ್ವಯಂ ಸೇವಕರು ಬೀದಿ ಮೂಲೆಗಳಲ್ಲಿ, ಸೇತುವೆಗಳಲ್ಲಿ ನಿಂತು ಮಾನವ ಸಂಚಾರ ಹಾಗೂ ಸರಕು ಸಂಚಾರದ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು. ಪಂಜಾಬ್ ಹಿಂಸಾಚಾರವನ್ನು ವರದಿ ಮಾಡಿದ ಪತ್ರಕರ್ತ ಹೇಳುತ್ತಾನೆ: "ಶ್ರೀನಗರದಲ್ಲಿ ಕಂಡಂಥ ಮಧುರಬಾಂಧವ್ಯ ಹಾಗೂ ಭ್ರಾತೃತ್ವಗಳ ನೋಟಕ್ಕೆ ನಾನು ಸಿದ್ಧವಾಗಿರಲಿಲ್ಲ. ಹಿಂದೂಗಳು ಮತ್ತು ಸಿಖ್ಖರು ಮುಸ್ಲಿಮರು ಬಹುಸಂಖ್ಯಾತರಾಗಿರುವ ಪ್ರದೇಶದಲ್ಲಿ ಸಂಪೂರ್ಣವಾಗಿ ಆತ್ಮ ಪ್ರತಿಷ್ಠೆ ಮರೆತು ತಿರುಗಾಡುತ್ತಿದ್ದರು. ಶ್ರೀನಗರದಲ್ಲಿ ಸ್ವಯಂ ಸೇವಕರು ತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿದಂತೆ ಹಿಂದೂಗಳು-ಮುಸ್ಲಿಮರು-ಸಿಖ್ಖರು ಸಮಸಮ ಬೀದಿಬೀದಿಗಳಲ್ಲಿ ಸಂಚರಿಸುತ್ತಿದ್ದರು." ಇನ್ನೊಬ್ಬ ವರದಿಗಾರ, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಸೇನೆಯ ನಡುವೆ ಇದ್ದ ಮಧುರ ಬಾಂಧವ್ಯವನ್ನು ಸ್ಮರಿಸಿದ್ದಾರೆ. ಇದು ಶೇಖ್ ಅಬ್ದುಲ್ಲಾ ಮತ್ತು ವಿಭಾಗೀಯ ದಂಡನಾಯಕರಾದ ಜನರಲ್ ತಿಮ್ಮಯ್ಯ ಅವರುಗಳ ನಡುವಣ ಸ್ನೇಹದ ಸಂಕೇತದಂತೆ ಕಾಣುತ್ತಿತ್ತೆಂದು ಬರೆದಿದ್ದಾರೆ.

ಅತ್ತ ಭಾರತದ ಸೇನೆ ದಾಳಿಕಾರರನ್ನು ಹಿಮ್ಮೆಟ್ಟಿಸಿದಂತೆ ಇತ್ತು. ಮೌಂಟ್ ಬ್ಯಾಟನ್ ಶಾಂತಿ ಮಾತುಕತೆಗಾಗಿ ಲಾಹೋರಿಗೆ ತೆರಳಿದರು. 1947ರ ನವೆಂಬರ್ 1ರಂದು ಮೌಂಟ್ ಬ್ಯಾಟನ್ ಜಿನ್ನಾರೊಂದಿಗೆ ಸತತ ಮಾತುಕತೆ ನಡೆಸಿದರು. ಭಾರತ ಕಾಶ್ಮೀರ ಮೇಲಿನ ಹಕ್ಕನ್ನು ಬಿಟ್ಟುಕೊಟ್ಟರೆ, ಮತ್ತೊಂದು ವಿವಾದಾತ್ಮಕ ಸಂಸ್ಥಾನವಾದ ಜುನಾಗಢದ ಮೇಲಿನ ಹಕ್ಕನ್ನು ಪಾಕಿಸ್ತಾನ ಬಿಟ್ಟುಕೊಡುವುದೆಂದು ಮೌಂಟ್ ಬ್ಯಾಟನ್ನರಿಗೆ ತಿಳಿಸಲಾಯಿತು. ಭಾರತದೊಂದಿಗೆ ಕಾಶ್ಮೀರದ ಸೇರ್ಪಡೆ 'ಮೋಸ ಹಾಗೂ ಹಿಂಸೆ' ಆಧಾರಿತವಾದುದೆಂದು ಜಿನ್ನಾ ವಿವರಿಸಿದರು. ಪಾಕಿಸ್ತಾನಿ ಪ್ರಜೆಗಳಾದ ದಾಳಿಕಾರರಿಂದ ಹಿಂಸಾಚಾರ ನಡೆಯಿತೆಂದು ಮೌಂಟ್ ಬ್ಯಾಟನ್ ತಿಳಿಸಿದರು. ಮಹಾರಾಜ ಹರಿಸಿಂಗರು ಕಾಶ್ಮೀರ ಸ್ವತಂತ್ರವಾಗಿರಬೇಕೆಂದು ಬಯಸಿದ್ದರೆಂಬುದು ತಮಗೆ ಗೊತ್ತೆಂದೂ, ಆದರೆ, ತಮ್ಮ ಸಂಸ್ಥಾನದ ಮೇಲೆ ಆಕ್ರಮಣ ನಡೆದ ನಂತರ ಸೇರ್ಪಡೆಗೆ ಒಪ್ಪಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತೆಂದೂ ಮೌಂಟ್ ಬ್ಯಾಟನ್ ಜಿನ್ನಾ ಅವರಿಗೆ ಶ್ರುತಪಡಿಸಿದರು. ಪೂಂಛ್ ಮುಸ್ಲಿಮರನ್ನು ನ್ಯಾಯವಾಗಿ ನಡೆಸಿಕೊಳ್ಳದೇ ತಾವೇ ಇಂಥ ಪರಿಸ್ಥಿತಿ ಸೃಷ್ಟಿಸಿಕೊಂಡರೆಂದೂ, ಇದು ಸ್ವಯಂಕೃತ ಅಪರಾಧವೆಂದೂ ಜಿನ್ನಾ ವಾದಿಸಿದರು.

ಏತನ್ಮಧ್ಯೆ, ಕಾಶ್ಮೀರದಲ್ಲಿ, ಭಾರತದ ಸೇನೆ ಶ್ರೀನಗರದ ಸುತ್ತ ರಕ್ಷಣೆಯ ಕೋಟೆ ನಿರ್ಮಿಸಿತ್ತು. ಮೆಷಿನ್‌ಗನ್ ಸಜ್ಜಿತರಾದ ನಾಲ್ಕು ಸಾವಿರ ಸೈನಿಕರಿದ್ದರು. ನಗರ ಸುರಕ್ಷಿತವಾಗಿತ್ತು. ಶ್ರೀನಗರ ಭದ್ರವಾದ ಮೇಲೆ ಭಾರತದ ಸೈನ್ಯ ಕಣಿವೆಯ ಇತರ ಪ್ರದೇಶಗಳಿಂದ ಅತಿಕ್ರಮಣ ಕಾರರನ್ನು ಹಿಮ್ಮೆಟ್ಟಿಸಲಾರಂಭಿಸಿತು. ನವೆಂಬರ್ 7ರಂದು ಬಾರಾಮುಲ್ಲವನ್ನು ವಶಪಡಿಸಿ ಕೊಂಡಿತು. ನಾಲ್ಕು ದಿನಗಳ ನಂತರ ಮಾಹುತವನ್ನು ವಶಪಡಿಸಿಕೊಂಡು ದಾಳಿಕಾರರು ವಿದ್ಯುಚ್ಛಕ್ತಿ ಕೇಂದ್ರ ಸ್ಫೋಟಿಸುವುದನ್ನು ತಪ್ಪಿಸಿತು. ಮರುದಿನ ಯೂರಿ ವಶವಾಯಿತು.

ಚಳಿಗಾಲದ ಆರಂಭದೊಂದಿಗೆ ಮಿಲಿಟರಿ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ಮಹಾಜನ್ ಇನ್ನೂ ಪ್ರಧಾನಮಂತ್ರಿಯಾಗಿದ್ದರು. ಆದರೆ ನ್ಯಾಷನಲ್ ಕಾನ್ಫರೆನ್ಸ್ ನಾಯಕರು ಅವರಿಗೆ ಸಕ್ರಿಯ ನೆರವು-ಸಹಕಾರಗಳನ್ನು ನೀಡುತ್ತಿದ್ದರು. ನವೆಂಬರ್ 11ರಂದು ನೆಹರೂ ಅವರು ಹರಿಸಿಂಗರಿಗೆ ಪತ್ರ ಬರೆದು, ಶೇಖ್ ಅಬ್ದುಲ್ಲಾ ಅವರಲ್ಲಿ ಸಂಪೂರ್ಣ ನಂಬಿಕೆ-ವಿಶ್ವಾಸಗಳನ್ನಿಡುವಂತೆ ಕೋರಿದ್ದರು. ಶೇಖ್ ಅಬ್ದುಲ್ಲಾ ಅವರನ್ನು ವಿಧ್ಯುಕ್ತವಾಗಿ ಮಹಾಜನ್ ಸ್ಥಾನದಲ್ಲಿ ಕುಳ್ಳಿರಿಸಿ ಆಡಳಿತಕ್ಕೆ ಅವರನ್ನು ಸಂಪೂರ್ಣವಾಗಿ ಹೊಣೆಗಾರರನ್ನಾಗಿಸುವುದು ಇದರ ಇಂಗಿತವಾಗಿತ್ತು. "ಕಾಶ್ಮೀರದಲ್ಲಿ ಸದ್ಯಕ್ಕೆ ಉದ್ಧಾರ ಮಾಡಬಹುದಾದ ಏಕೈಕ ವ್ಯಕ್ತಿಯೆಂದರೆ ಶೇಖ್ ಅಬ್ದುಲ್ಲಾರೆಂದು" ನೆಹರೂ ಒತ್ತಿ ಹೇಳಿದ್ದರು. "ಶೇಖ್ ಅಬ್ದುಲ್ಲಾ ನಿಜವಾಗಿ ಕಾಶ್ಮೀರದ ಜನಪ್ರಿಯ ವ್ಯಕ್ತಿ. ಬಿಕ್ಕಟ್ಟನ್ನು ಅವರು ನಿಭಾಯಿಸಿದ ರೀತಿಯೇ ಆ ಮನುಷ್ಯನ ಶಕ್ತಿ ಸ್ವಭಾವಗಳನ್ನು ತೋರಿಸಿಕೊಟ್ಟಿದೆ. ಅವರ ಪ್ರಾಮಾಣಿಕತೆ ಮತ್ತು ಸಮಚಿತ್ತದ ಬಗ್ಗೆ ನನಗೆ ತುಂಬ ಒಳ್ಳೆಯ ಅಭಿಪ್ರಾಯವಿದೆ. ಕೋಮು ಶಾಂತಿ ಕಾಪಾಡಲು ಅವರು ಬಹಳಷ್ಟು ಶ್ರಮಿಸಿದ್ದಾರೆ ಹಾಗೂ ಅದರಲ್ಲಿ ಯಶಸ್ವಿಯಾಗಿದ್ದಾರೆ. ಸಣ್ಣಪುಟ್ಟ ವಿಷಯಗಳಲ್ಲಿ ಅವರು ಅನೇಕ ತಪ್ಪುಗಳನ್ನು ಮಾಡಬಹುದು. ಆದರೆ ಪ್ರಮುಖ ನಿರ್ಧಾರಗಳಲ್ಲಿ ಅವರು ಸರಿಯಾಗಿ ವರ್ತಿಸುವ ಸಾಧ್ಯತೆಯೇ ಹೆಚ್ಚು." ಇದು ನೆಹರೂ ಪತ್ರದ ಒಕ್ಕಣೆಯಾಗಿತ್ತು.

ಮಹಾತ್ಮ ಗಾಂಧಿಯವರೂ ಶೇಖ್ ಅಬ್ದುಲ್ಲಾರ ಬಗ್ಗೆ ಇಷ್ಟೇ ಒಳ್ಳೆಯ ಅಭಿಪ್ರಾಯ ಹೊಂದಿದ್ದರು. 1947ರ ನವೆಂಬರ್ ಕೊನೆಯ ವಾರದಲ್ಲಿ ಶೇಖ್ ಅಬ್ದುಲ್ಲಾ ದೆಹಲಿಗೆ ಭೇಟಿ ಕೊಟ್ಟಿದ್ದರು. ಆಗ ಅವರು ಗಾಂಧೀಜಿಯವರ ಜೊತೆ, ಸಿಖ್ ಪಂಥದ ಸಂಸ್ಥಾಪಕ ಗುರುನಾನಕರ ಜಯಂತಿ ಅಂಗವಾಗಿ ನಡೆದ ಸಮಾರಂಭವೊಂದಕ್ಕೆ ಹೋಗಿದ್ದರು. ಗಾಂಧೀಜಿ ಸಭೆಯಲ್ಲಿ ಹೀಗೆ ಹೇಳಿದ್ದರು:

> *"ಶೇಖ್ ಅಬ್ದುಲ್ಲಾ ಸಾಹೇಬರನ್ನು ನೀವು ನನ್ನ ಸಂಗಡ ಕಾಣುತ್ತಿರುವಿರಿ. ಅವರನ್ನು ಕರೆತರುವ ಇಚ್ಛೆ ನನಗಿರಲಿಲ್ಲ. ಏಕೆಂದರೆ, ಒಂದು ಕಡೆ ಹಿಂದೂಗಳು ಮತ್ತು ಸಿಖ್ಖರ ನಡುವೆ, ಮತ್ತೊಂದು ಕಡೆ, ಮುಸ್ಲಿಮರು-ಹಿಂದೂಗಳು-ಸಿಖ್ಖರ ನಡುವೆ ಭಾರಿ ಕಂದರವಿದೆ. ಆದರೆ ಕಾಶ್ಮೀರದ ಸಿಂಹ ಎಂದೇ ಪ್ರಖ್ಯಾತರಾದ ಶೇಖ್ ಸಾಹೇಬರು, ಪಕ್ಕಾ ಮುಸ್ಲಿಮರಾದರೂ ಹಿಂದೂ-ಸಿಖ್ಖರಿಬ್ಬರ ಹೃದಯಗಳನ್ನು ಗೆದ್ದಿದ್ದಾರೆ, ಎಲ್ಲ ಭಿನ್ನಾಭಿಪ್ರಾಯಗಳನ್ನೂ ಮರೆಯುವಂತೆ ಮಾಡಿದ್ದಾರೆ...ಇತ್ತೀಚೆಗೆ ಜಮ್ಮುವಿನಲ್ಲಿ ಹಿಂದೂಗಳು-ಸಿಖ್ಖರಿಂದ ಮುಸ್ಲಿಮರ ಹತ್ಯೆಯಾದರೂ ಅವರು ಜಮ್ಮುವಿಗೆ ಹೋಗಿ, ಹಿಂದೆ ಆದದ್ದನ್ನು ಮರೆತು, ತಮ್ಮ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಡುವಂತೆ ದುಷ್ಕೃತ್ಯವೆಸಗಿದವರನ್ನು ಆಹ್ವಾನಿಸಿದರು. ಹಿಂದೂಗಳು ಮತ್ತು ಸಿಖ್ಖರು ಅವರ ಮಾತಿಗೆ ಓಗೊಟ್ಟರು. ಈಗ ಹಿಂದೂಗಳು-ಮುಸ್ಲಿಮರು-ಸಿಖ್ಖರು ಸುಂದರವಾದ ಕಾಶ್ಮೀರ ಕಣಿವೆ ರಕ್ಷಿಸಲು ಒಟ್ಟಾಗಿ ಹೋರಾಡುತ್ತಿದ್ದಾರೆ."*

ಗಾಂಧಿ ಮತ್ತು ನೆಹರೂಗೆ ಶೇಖ್ ಅಬ್ದುಲ್ಲಾ ಜಾತ್ಯತೀತತೆಯ ಸಂಕೇತವಾಗಿದ್ದರು. ಅಂತರಧರ್ಮೀಯ ಸೌಹಾರ್ದತೆಯ ಕಾರ್ಯಪಟುವಾಗಿದ್ದ ಶೇಖ್ ಅಬ್ದುಲ್ಲಾ ಅವರು ಕಾಶ್ಮೀರದಲ್ಲಿ ನಡೆಸಿದ ಕಾರ್ಯಗಳು ಎರಡು ರಾಷ್ಟ್ರಗಳ ಸಿದ್ಧಾಂತದ ದೃಢ ನಿರಾಕರಣೆಯೇ ಆಗಿದ್ದವು. ಆದರೆ, ಪಾಕಿಸ್ತಾನದ ಪ್ರಧಾನಮಂತ್ರಿ ಲಿಯಾಕತ್ ಅಲೀಖಾನರು ಶೇಖ್ ಅಬ್ದುಲ್ಲಾರನ್ನು ವಿಶ್ವಾಸಘಾತುಕ ಎಂದೇ ನಿಂದಿಸಿ ದೂರವಿಟ್ಟಿದ್ದರು. ನವೆಂಬರ್ 27ರಂದು ಲಿಯಾಕತ್ ಅಲೀ ಖಾನರು, ನೆಹರೂ ಅವರನ್ನು ಭೇಟಿ ಮಾಡಿದ್ದರು. ಇವರಿಬ್ಬರ ಸಭೆಯಲ್ಲಿ ಮೌಂಟ್ ಬ್ಯಾಟನ್ ಮಧ್ಯಸ್ಥಿಕೆದಾರನ ಪಾತ್ರ ವಹಿಸಿದ್ದರು. ಬಿಕ್ಕಟ್ಟಿನ ನಿವಾರಣೆಗೆ ಜನಮತಗಣನೆ ಸಲಹೆ ಮುಂದಿಟ್ಟಾಗ, ಖಾನ್ ಅವರು, "ಮೊದಲು ಕಾಶ್ಮೀರದಲ್ಲಿ ಸಂಪೂರ್ಣವಾಗಿ ಹೊಸ ಆಡಳಿತವನ್ನು ಸ್ಥಾಪಿಸಬೇಕು, ಪಾಕಿಸ್ತಾನದ ಜನತೆ ನಿಷ್ಪಕ್ಷಪಾತ ಎಂದು ಒಪ್ಪಿಕೊಳ್ಳುವಂಥ ಹೊಸ ಆಡಳಿತ ಅದಾಗಿರಬೇಕು" ಎಂದು ಪಟ್ಟು ಹಿಡಿದರು.

"ಕಾಶ್ಮೀರದ ಬಗ್ಗೆ ಭಾರತ ಪಾಕಿಸ್ತಾನ ಸರ್ಕಾರದೊಂದಿಗೆ ತ್ವರಿತವಾದ ಹಾಗೂ ಆಖೈರಾದ ನಿರ್ಧಾರಕ್ಕೆ ಬರಬೇಕೆಂಬುದು" ನೆಹರೂ ಅಭಿಪ್ರಾಯವಾಗಿತ್ತು. "ಮಿಲಿಟರಿ ಕಾರ್ಯಾಚರಣೆ ಮುಂದುವರಿಸುವುದೆಂದರೆ ಕಾಶ್ಮೀರದ ಜನತೆಗೆ ಅಪಾರ ಕಷ್ಟನಷ್ಟ ನೋವುಗಳುಂಟಾಗುವುದು" ಎಂಬುದು ನೆಹರೂ ಅನ್ನಿಸಿಕೆಯಾಗಿತ್ತು. ನೆಹರೂ ಅವರು ಹರಿಸಿಂಗರಿಗೆ ಬರೆದ ಪತ್ರವೊಂದರಲ್ಲಿ ಬಿಕ್ಕಟ್ಟಿನ ಇತ್ಯರ್ಥದ ಹಲವಾರು ಬಗೆಗಳನ್ನು ತಿಳಿಸಿದ್ದರು. ಜನತೆ ತಾವು ಯಾವ ರಾಷ್ಟ್ರ ಸೇರಬಯಸುವರೆಂದು ತಿಳಿಯಲು ಸಂಸ್ಥಾನದಲ್ಲಿ ಜನಮತಗಣನೆ ನಡೆಸಬಹುದು ಅಥವಾ ಸಂಸ್ಥಾನ, ಭಾರತ-ಪಾಕಿಸ್ತಾನಗಳೆರಡರಿಂದಲೂ ತನ್ನ ರಕ್ಷಣೆಯ ಭರವಸೆ ಪಡೆದು ಸ್ವತಂತ್ರ ಅಸ್ತಿತ್ವ ಉಳಿಸಿಕೊಳ್ಳಬಹುದು. ಇದಲ್ಲದೆ ಮೂರನೆಯದೊಂದು ಪರಿಹಾರವನ್ನು ಸೂಚಿಸಿದ್ದರು. ಸಂಸ್ಥಾನದ ವಿಭಜನೆ ಮೂರನೆಯ ಪರಿಹಾರ. ಇದರ ಪ್ರಕಾರ ಜಮ್ಮು ಭಾರತವನ್ನು ಸೇರುವುದು, ಉಳಿದ ಪ್ರದೇಶಗಳು ಪಾಕಿಸ್ತಾನವನ್ನು ಸೇರಿಕೊಳ್ಳುವುದು. ನಾಲ್ಕನೆಯದೊಂದು ಪರಿಹಾರವೂ ಇತ್ತು. ಜಮ್ಮು ಮತ್ತು ಕಾಶ್ಮೀರ ಕಣಿವೆ ಭಾರತದ ಜೊತೆ ಉಳಿಸಿಕೊಳ್ಳುವುದು; ಪೂಂಛ್‌ನ್ನು ಪಾಕಿಸ್ತಾನಕ್ಕೆ ಒಪ್ಪಿಸುವುದು-ಇದು ನಾಲ್ಕನೆಯ ಪರಿಹಾರ. ಸ್ವತಃ ನೆಹರೂ ಅವರೇ ಕೊನೆಯ ಪರಿಹಾರದಲ್ಲಿ ಆಸಕ್ತರಾಗಿದ್ದರು. ಪೂಂಛ್‌ನ ಜನಸಂಖ್ಯೆಯಲ್ಲಿ ಬಹ್ವಂಶ ಜನ ಭಾರತ ಒಕ್ಕೂಟದ ವಿರುದ್ಧ ನಿಲ್ಲುವ ಸಾಧ್ಯತೆ ನೆಹರೂ ಅವರಿಗೆ ತಿಳಿದಿತ್ತು. ಆದರೆ ಕಾಶ್ಮೀರ ಕಣಿವೆಯನ್ನು ಬಿಟ್ಟು ಕೊಡುವುದಕ್ಕೆ ಅವರಿಗೆ ಮನಸ್ಸಿರಲಿಲ್ಲ. ಇಲ್ಲಿನ ಜನಸಮುದಾಯ ಭಾರತದ ಬಗ್ಗೆ ಒಲವು ಹೊಂದಿರುವಂತೆ ತೋರುತ್ತಿತ್ತು. ಹಾಗೂ ಇದು ನ್ಯಾಷನಲ್ ಕಾನ್ಫರೆನ್ಸ್‌ನ ಭದ್ರ ನೆಲೆಯಾಗಿತ್ತು. ಭಾರತದ ದೃಷ್ಟಿಯಿಂದ ನೆಹರೂ ಮಹಾರಾಜರಿಗೆ ಹೀಗೆ ತಿಳಿಸಿದರು:

> "ಕಾಶ್ಮೀರ ಭಾರತದ ಒಕ್ಕೂಟದಲ್ಲಿ ಉಳಿಯಬೇಕೆಂಬುದು ತುಂಬಾ ಮಹತ್ವದ ವಿಷಯ...ಆದರೆ ಇದು ನಮ್ಮ ಅತ್ಯಂತ ಪ್ರಬಲವಾದ ಇಚ್ಛೆಯಾಗಿದ್ದರೂ,

ಆಖೈರಾಗಿ ಜನಸಮುದಾಯದ ಸದಾಶಯ-ಸದ್ಭಾವನೆಗಳ ಮುಖೇನವೇ ಆಗ ಬೇಕಾದದ್ದು. ಈ ಕ್ಷಣಕ್ಕೆ ಮಿಲಿಟರಿ ಪಡೆಗಳು ಕಾಶ್ಮೀರವನ್ನು ತನ್ನ ಹತೋಟಿಯಲ್ಲಿಟ್ಟು ಕೊಳ್ಳಬಹುದು. ಆದರೆ ನಂತರ ಪರಿಣಾಮ ತೀವ್ರವಾದ ವಿರೋಧಿ ಪ್ರತಿಕ್ರಿಯೆ ಗಳಿಂದೊಡಗೂಡಿರಬಹುದು. ಆದ್ದರಿಂದ, ಅತ್ಯವಶ್ಯಕವಾಗಿ ಇದೊಂದು ಜನರ ಮನಸ್ಸನ್ನು ಅರಿಯುವ ಮನೋವೈಜ್ಞಾನಿಕ ಸಮಸ್ಯೆ. ಜನರ ಮನಸ್ಸನ್ನು ಅರಿತು, ಭಾರತ ಒಕ್ಕೂಟದೊಂದಿಗೆ ಸೇರಿಕೊಳ್ಳುವುದರಿಂದ ಒಳಿತಾಗಲಿದೆ, ಲಾಭವಾಗಲಿದೆ ಎಂಬುದನ್ನು ಅವರಿಗೆ ಅನುಭವಗತವನ್ನಾಗಿಸುವ ಕೆಲಸ. ಶ್ರೀಸಾಮಾನ್ಯನಾದ ಒಬ್ಬ ಮುಸ್ಲಿಮನಿಗೆ ತಾನು ಭಾರತ ಒಕ್ಕೂಟದಲ್ಲಿ ಸುರಕ್ಷಿತನಲ್ಲ ಎಂದೆನ್ನಿಸಿದಲ್ಲಿ ಅವನು ಬೇರೆಡೆ ಸುರಕ್ಷಿತ ತಾಣಗಳನ್ನು ಅರಸುವುದು ಸಹಜವಾದದ್ದೇ. ನಮ್ಮ ಮೂಲನೀತಿ ಇದನ್ನು ಗಮನದಲ್ಲಿಟ್ಟುಕೊಂಡಿರಬೇಕು. ಇಲ್ಲವಾದಲ್ಲಿ ನಾವು ನಮ್ಮ ಕರ್ತವ್ಯದಲ್ಲಿ ವಿಫಲರಾದಂತೆಯೇ."

ನೆಹರೂ ಅವರ ಈ ಪತ್ರ ಹೆಚ್ಚಾಗಿ ಸಾರ್ವಜನಿಕರ ಗಮನಕ್ಕೆ ಬರಲಿಲ್ಲ. ಅವರ "ಸೆಲೆಕ್ಟೆಡ್ ವರ್ಕ್ಸ್" ಸಂಪುಟದಿಂದಲೂ ಇದನ್ನು ಹೊರದೂಡಲಾಯಿತು. ಆದರೆ ಇದು, ವಲ್ಲಭಭಾಯಿ ಪಟೇಲರೊಂದಿಗೆ ನಡೆಸಿದ ಪತ್ರವ್ಯವಹಾರದಲ್ಲಿ ಅಡಕವಾಗಿದೆ. ನೆಹರೂ ಮಹಾರಾಜ ಹರಿಸಿಂಗರಿಗೆ ಬರೆದ ಪತ್ರದ ಪ್ರತಿಯೊಂದನ್ನು ಪಟೇಲರಿಗೆ ಕಳುಹಿಸಿದ್ದರು. ಇದರಿಂದ, ಅಂಗೀಕೃತ ವಿವೇಕಕ್ಕೆ ತದ್ವಿರುದ್ಧವಾದ ಒಂದು ಸಂಗತಿ ಬಯಲಾಗುತ್ತದೆ. ಅದು: ಭಾರತದ ಪ್ರಧಾನಮಂತ್ರಿ ಕಾಶ್ಮೀರ ವಿಷಯದಲ್ಲಿ ರಾಜಿಸಂಧಾನಕ್ಕೆ ಸಿದ್ಧವಾಗಿದ್ದರು ಎಂಬುದು. ಆದರೆ, 1947ರ ಡಿಸೆಂಬರಿನಲ್ಲಿ ಬರೆದ ಪತ್ರದಲ್ಲಿ ನೆಹರೂ ಸೂಚಿಸಿದ್ದ ಪರಿಹಾರಗಳು ಇಂದಿಗೂ ಚರ್ಚಾರ್ಹವಾಗಿವೆ; ಚರ್ಚಿಸಲ್ಪಡುತ್ತಿವೆ.

III

ಕಾಶ್ಮೀರ ವಿವಾದವನ್ನು ವಿಶ್ವಸಂಸ್ಥೆಗೆ ಒಯ್ಯಲು 1948ರ ಜನವರಿ 1ರಂದು ಭಾರತ ನಿರ್ಧರಿಸಿತು. ಲಾರ್ಡ್ ಮೌಂಟ್ ಬ್ಯಾಟನ್‌ರ ಸಲಹೆ ಮೇರೆಗೆ ಈ ನಿರ್ಧಾರ ಕೈಗೊಳ್ಳಲಾಯಿತು. ಕಾಶ್ಮೀರ ಭಾರತದೊಳಕ್ಕೆ ಸೇರ್ಪಡೆಯಾಗಿರುವುದರಿಂದ, ಉತ್ತರದ ಭಾಗಗಳನ್ನು ಪಾಕಿಸ್ತಾನಕ್ಕೆ ನಿಷ್ಠರಾಗಿರುವವರ ಆಕ್ರಮಣದಿಂದ ತೆರವುಗೊಳಿಸಲು ಭಾರತ ಸರ್ಕಾರ ವಿಶ್ವಸಂಸ್ಥೆಯ ನೆರವನ್ನು ಬಯಸಿತ್ತು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಜನವರಿ-ಫೆಬ್ರುವರಿ ಉದ್ದಕ್ಕೂ ಕಾಶ್ಮೀರ ವಿಷಯದಲ್ಲಿ ಸಭೆಗಳನ್ನು ನಡೆಸಿತು. ಅತ್ಯದ್ಭುತ ಭಾಷಣಕಲೆಯ ಹುಟ್ಟು ವಾಗ್ಮಿಯಾಗಿದ್ದ ಸರ್ ಜಫರುಲ್ಲಾ ಖಾನ್ ಪಾಕಿಸ್ತಾನದ ಪ್ರತಿನಿಧಿಯಾಗಿದ್ದರು. ಇದರಿಂದಾಗಿ ಪಾಕಿಸ್ತಾನಕ್ಕೆ ಭಾರತಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ತನ್ನ ವಾದ ಸಮರ್ಥಿಸಿಕೊಳ್ಳಲು ಸಾಧ್ಯವಾಯಿತು.

ಅತಿಕ್ರಮಣ, 1946-48ರ ಅವಧಿಯಲ್ಲಿ ಉತ್ತರ ಭಾರತದ ಉದ್ದಕ್ಕೂ ನಡೆದ ದುರಂತಪೂರ್ಣ ಕೋಮು ಗಲಭೆಗಳ ಪರಿಣಾಮವೆಂದು ಜಫರುಲ್ಲಾ ಖಾನ್ ಭದ್ರತಾ ಮಂಡಳಿಗೆ ಮನವರಿಕೆ ಮಾಡಿಕೊಟ್ಟರು. ತಮ್ಮ ಸಹಧರ್ಮೀಯ ಬಂಧು ಬಾಂಧವರ ಸಂಕಷ್ಟಗಳಿಗೆ ಇದೊಂದು ಪ್ರಕೃತಿ ಸಹಜ ಪ್ರತಿಕ್ರಿಯೆಯಾಗಿತ್ತೆಂದು ಅವರು ತಿಳಿಸಿದರು. ಭಾರತೀಯರು ಪೂರ್ವ ಪಂಜಾಬಿನಲ್ಲಿ ಮುಸ್ಲಿಮರ ಮಾರಣಹೋಮ ನಡೆಸಿ, ಅರವತ್ತು ಲಕ್ಷ ಮುಸ್ಲಿಮರು ಪಾಕಿಸ್ತಾನಕ್ಕೆ ಗುಳೆ ಹೋಗುವಂತೆ ಮಾಡಿದರು ಎಂದು ಅವರು ಆಪಾದಿಸಿದರು. ಕಾಶ್ಮೀರ ಸಮಸ್ಯೆಯನ್ನು ವಿಭಜನೆಯ ಮುಗಿಯದೇ ಉಳಿದ ವಿದ್ಯಮಾನವೆಂದು ಪರಿಗಣಿಸಲಾಯಿತು. ಭದ್ರತಾ ಮಂಡಳಿ ತನ್ನ ಕಾರ್ಯ ಸೂಚಿಯಲ್ಲಿ ಬದಲಾವಣೆ ಮಾಡಿತು. "ಜಮ್ಮು-ಕಾಶ್ಮೀರ ಸಮಸ್ಯೆಯನ್ನು", "ಭಾರತ-ಪಾಕಿಸ್ತಾನ ಸಮಸ್ಯೆ" ಎಂದು ಬದಲಾಯಿಸಿತು. ಇದು ಭಾರತದ ಪಾಲಿಗೆ ಒಂದು ಗಂಭೀರವಾದ ಸಾಂಕೇತಿಕ ಸೋಲಾಗಿತ್ತು.

ಕಾಶ್ಮೀರದಿಂದ ಎಲ್ಲ ಸಶಸ್ತ್ರ ಪಡೆಗಳನ್ನೂ ವಾಪಸು ಕರೆಸಿಕೊಂಡು 'ನಿಷ್ಪಕ್ಷಪಾತವಾದ ಹಂಗಾಮಿ ಸರ್ಕಾರ'ವೊಂದರ ಉಸ್ತುವಾರಿಯಲ್ಲಿ ಜನಮತಗಣನೆ ನಡೆಸುವಂತೆ ಈ ಹಂತದಲ್ಲಿ ಪಾಕಿಸ್ತಾನ ಸಲಹೆ ಮಾಡಿತು. ವಿಪರ್ಯಾಸವೆಂದರೆ, ಇದೇ ಪಾಕಿಸ್ತಾನ ಜುನಾಗಢದಲ್ಲಿ ಜನಮತಗಣನೆ ಆಲೋಚನೆಯನ್ನು ತಿರಸ್ಕರಿಸಿತ್ತು. ಮಹಾರಾಜರ ಸಂಸ್ಥಾನ ಯಾವ ರಾಷ್ಟ್ರದಲ್ಲಿ ಸೇರ್ಪಡೆಯಾಗಬೇಕೆಂಬುದನ್ನು ಆಳುವ ರಾಜರ ಇರಾದೆ, ಸಂಕಲ್ಪಗಳೇ ನಿರ್ಧರಿಸುತ್ತೆ ಎಂಬುದು ಆಗ ಜಿನ್ನಾರ ನಿಲುವಾಗಿತ್ತು. ಪ್ರತಿಯಾಗಿ ಭಾರತ ವಿಷಯವನ್ನು ಜನತೆಯ ಇರಾದೆಗೆ ಬಿಟ್ಟುಕೊಟ್ಟಿತು. ಜುನಾಗಢದಲ್ಲಿ ಜನಮತಗಣನೆಗೆ ಒಪ್ಪಿದ ನಂತರ ಕಾಶ್ಮೀರದಲ್ಲಿ ಬೇಡ ಎನ್ನುವಂತಿರಲಿಲ್ಲ. ಸಂಸ್ಥಾನದಲ್ಲಿ ಅತ್ಯಂತ ಜನಪ್ರಿಯ ನೇತಾರರಾಗಿರುವ ಶೇಖ್ ಅಬ್ದುಲ್ಲಾ ಅವರ ನ್ಯಾಷನಲ್ ಕಾನ್ಫರೆನ್ಸ್ ಆಡಳಿತದ ಉಸ್ತುವಾರಿಯಲ್ಲಿ ಜನಮತಗಣನೆ ನಡೆಸಲು ಭಾರತ ಸರ್ಕಾರ ಆಗ್ರಹಪಡಿಸಿತು.

1948ರ ಫೆಬ್ರುವರಿ 5ರಂದು ವಿಶ್ವಸಂಸ್ಥೆಯಲ್ಲಿ ಮಾಡಿದ ಭಾಷಣದಲ್ಲಿ ಶೇಖ್ ಅಬ್ದುಲ್ಲಾ ಇದೇ ಮಾತುಗಳನ್ನಾಡಿದರು. ಅವರ ಭಾಷೆ ಹರಿತವೂ ನೇರವೂ ಆಗಿತ್ತು. ಅದು ರಾಜ ತಾಂತ್ರಿಕ ಭಾಷೆಯಾಗಿರಲಿಲ್ಲ ಎಂದು ವೀಕ್ಷಕರೊಬ್ಬರು ಸ್ಮರಿಸಿದ್ದಾರೆ. "ನಾನು ಇಂದು ಕಾಶ್ಮೀರದಲ್ಲಿ ಹೊಂದಿರುವ ಸ್ಥಾನಮಾನದಿಂದ ಈ ಭೂಮಿಯ ಮೇಲಿನ ಯಾವ ಶಕ್ತಿಯಿಂದಲೂ ನನ್ನನ್ನು ಪದಚ್ಯುತಿಗೊಳಿಸುವುದು ಅಸಾಧ್ಯ" ಎಂದು ಅವರು ಭದ್ರತಾ ಮಂಡಳಿಗೆ ತಿಳಿಸಿದರು. "ಜನರು ನನ್ನೊಡನೆ ಇರುವವರೆಗೂ ನಾನು ಅಲ್ಲಿರುತ್ತೇನೆ" ಎಂದು ಗುಡುಗಿದರು.

ಕಾಶ್ಮೀರದ ಬಗ್ಗೆ ವಿಶ್ವಸಂಸ್ಥೆಯಲ್ಲಿ ನಡೆದ ಚರ್ಚೆಯ ಒಂದು ಎದ್ದು ಕಾಣುವ ಲಕ್ಷಣವೆಂದರೆ, ಬ್ರಿಟನ್ನಿನ ಪಕ್ಷಪಾತತನ. ಬ್ರಿಟಿಷ್ ಪ್ರತಿನಿಧಿ ಫಿಲಿಪ್ ನೋಯಲ್ ಬೇಕರ್ ಪಾಕಿಸ್ತಾನದ ನಿಲುವನ್ನು ಪ್ರಬಲವಾಗಿ ಬೆಂಬಲಿಸಿದರು. ಇದಕ್ಕೆ ಭಾರತೀಯರು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು. ಬ್ರಿಟನ್ನಿನ ಈ ವರ್ತನೆಯನ್ನು ಕೆಲವರು ಸ್ವಾತಂತ್ರ್ಯಪೂರ್ವದ

ದಿನಗಳ ಶೇಷ ಭಾಗವಾಗಿ, ಪಾಕಿಸ್ತಾನವನ್ನು ಬೆಂಬಲಿಸಲು ಮುಸ್ಲಿಂ ಲೀಗ್‌ಗೆ ಬೆಂಬಲವಾಗಿ ಆದ ಬದಲಾವಣೆಯಾಗಿ ಕಂಡರು. ಇದು ಇತ್ತೀಚೆಗೆ ಸೃಷ್ಟಿಸಲಾದ ಇಸ್ರೇಲ್ ವಿಷಯದಲ್ಲಿ ಮುಸ್ಲಿಮರನ್ನು ಸಮಾಧಾನಗೊಳಿಸುವ ಯತ್ನವೆಂದು ಇನ್ನು ಕೆಲವರು ಭಾವಿಸಿದರು. ಇಸ್ರೇಲ್ ಸೃಷ್ಟಿಸಿದ ನಂತರ ವಿಶ್ವದಾದ್ಯಂತ ಇರುವ ಮುಸ್ಲಿಂ ಸಮುದಾಯವನ್ನು ಸಮಾಧಾನಪಡಿಸುವ ಅಗತ್ಯವೂ ಇತ್ತು. ಇದಲ್ಲದೆ ಮೂರನೆಯ ಸಿದ್ಧಾಂತವೊಂದೂ ಇತ್ತು. ಅದೆಂದರೆ-ಸೋವಿಯತ್ ರಷ್ಯಾದೊಂದಿಗೆ ಮುಂದೆ ನಡೆಯಲಿರುವ ಹೋರಾಟದಲ್ಲಿ ಪಾಕಿಸ್ತಾನ ನೆಚ್ಚಬಹುದಾದ ಮಿತ್ರರಾಷ್ಟ್ರವಾಗಬಹುದೆಂಬ ದೂರದೃಷ್ಟಿ. ಅಲ್ಲದೆ ಪಾಕಿಸ್ತಾನದಿಂದ ಮಧ್ಯಪ್ರಾಚ್ಯದಲ್ಲಿನ ಬ್ರಿಟಿಷ್ ವಾಯುಪಡೆ ನೆಲೆಗಳಿಗೆ ಸುಲಭ ಸಂಪರ್ಕ ಸಾಧ್ಯವಿತ್ತು. ಆದ್ದರಿಂದ ಪಾಕಿಸ್ತಾನದೊಡನೆ ಮೈತ್ರಿ ಉತ್ತಮವೆನಿಸಿರಬೇಕು.

1948ರ ಮಾರ್ಚಿಯ ಮೊದಲ ವಾರದಲ್ಲಿ "ಸಂಡೆ ಟೈಮ್ಸ್"ನ ಸಂಪಾದಕರು ನೋಯಲ್ ಬೇಕರ್‌ಗೆ ಬರೆದ ಒಂದು ಪತ್ರದ ಒಕ್ಕಣೆ ಹೀಗಿದೆ: "ಕಮ್ಯುನಿಸ್ಟ್ ಸಿದ್ಧಾಂತದ ವಿರುದ್ಧ ವಿಶ್ವವ್ಯಾಪಿ ಹೋರಾಟದಲ್ಲಿ, ಕಾಶ್ಮೀರ, ಜನ ಅರ್ಥ ಮಾಡಿಕೊಂಡಿರುವುದಕ್ಕಿಂತ ಹೆಚ್ಚಿನ ಮಹತ್ವದ ಸ್ಥಾನವನ್ನು ಹೊಂದಿದೆ. ಬ್ರಿಟಿಷ್ ಕಾಮನ್ವೆಲ್ತ್ ಈ ಮೂಲೆಯಿಂದ ಸೋವಿಯತ್ ರಷ್ಯಾವನ್ನು ಭೌತಿಕವಾಗಿ ತಾಕಬಹುದು. ಕಾಶ್ಮೀರ ಹಿಂದೂ ಮಹಾಸಾಗರದ ರೇವಿನ ಪರಿಧಿಯೊಳಗಿರುವ, ಸಂದೇಹ-ಅಪನಂಬಿಕೆಗಳಿಂದ ಮುಕ್ತವಾದ ಮೃದುತಾಣ. ಕಾಮನ್ವೆಲ್ತ್ ಭದ್ರತೆ ಹಾಗೂ ವಿಶ್ವಶಾಂತಿ ಇವರ ಅನುಲ್ಲಂಘನೀಯ ಸ್ಥಿತಿಯನ್ನೇ ಆಧರಿಸಿದೆ."

ಈ ವೇಳೆಗೆ ವಿಶ್ವಸಂಸ್ಥೆಗೆ ಹೋದುದಕ್ಕಾಗಿ ನೆಹರೂ ಅವರಿಗೆ ತೀವ್ರ ವಿಷಾದವಾಗಿತ್ತು. ಅವರಿಗೆ ಆಘಾತವಾಗಿತ್ತು. ಅವರು ಮೌಂಟ್ ಬ್ಯಾಟನ್ನರಿಗೆ ಹೇಳಿದರು, "ನೀತಿಯಲ್ಲ, ಅಧಿಕಾರ ರಾಜಕಾರಣ ವಿಶ್ವಸಂಸ್ಥೆಯನ್ನು ಆಳುತ್ತಿದೆ" ಎಂದು. "ವಿಶ್ವಸಂಸ್ಥೆಯನ್ನು ಸಂಪೂರ್ಣವಾಗಿ ಅಮೆರಿಕನ್ನರು ನಡೆಸುತ್ತಿದ್ದಾರೆ. ಅಮೆರಿಕನ್ನರು, ಬ್ರಿಟಿಷರಂತೆ ಪಾಕಿಸ್ತಾನದ ವಿಷಯದಲ್ಲಿ ಸಹಾನುಭೂತಿ ತೋರುವುದರಲ್ಲಿ ಮುಚ್ಚುಮರೆ ಮಾಡಲಿಲ್ಲ" ಎಂಬುದನ್ನು ಮನಗಾಣುವಂತೆ ಖಡಾಖಂಡಿತವಾಗಿ ಮೌಂಟ್ ಬ್ಯಾಟನ್ನರಿಗೆ ತಿಳಿಸಿದರು. ಮಂತ್ರಿಮಂಡಲದೊಳಗೆ ನೆಹರೂ ಒತ್ತಡವನ್ನು ಎದುರಿಸಬೇಕಾಯಿತು. ಉತ್ತರ ಕಾಶ್ಮೀರದಿಂದ ಅತಿಕ್ರಮಣಕಾರರನ್ನು ಹೊರದಬ್ಬಲು ಯುದ್ಧ ಕಾರ್ಯಾಚರಣೆ ಪುನರಾರಂಭಿಸುವಂತೆ ಒತ್ತಡ ಶುರುವಾಯಿತು. ಆದರೆ ಮಿಲಿಟರಿಯಿಂದ ಇದು ಸಾಧ್ಯವಾದೀತೆ? ಉಪಖಂಡದಲ್ಲಿ ಹಲವು ವರ್ಷಗಳ ಸೇವೆಯ ಅನುಭವ ಹೊಂದಿದ್ದ ಬ್ರಿಟಿಷ್ ಜನರಲ್ ಒಬ್ಬರು ಈ ರೀತಿ ಎಚ್ಚರಿಸಿದರು:

> "ಕಾಶ್ಮೀರ ಒಂದು 'ಸ್ಪಾನಿಶ್ ವ್ರಣ'ವಾಗಿ ಉಳಿಯಬಹುದು. ನೆಪೋಲಿಯನ್ನನ ಮಾನವ ಸಂಪತ್ತು ಹಾಗೂ ಖಜಾನೆಯನ್ನು ಆಪೋಶನ ತೆಗೆದುಕೊಂಡ ಪೆನಿನ್‌ಸ್ಯುಲರ್ ಯುದ್ಧದ ಪರಿಚಯವುಳ್ಳ ಒಬ್ಬ ಭಾರತೀಯನೂ ನನ್ನ ಕಣ್ಣಿಗೆ ಬಿದ್ದಿಲ್ಲ. ಕಾಶ್ಮೀರದ

(1808-14ರ ನಡುವೆ ಫ್ರೆಂಚರ ವಿರುದ್ಧ ಬ್ರಿಟಿಷರು, ಸ್ಪೈನರು ಹಾಗೂ ಪೋರ್ಚುಗೀಸರು ಒಟ್ಟಾಗಿ ನಡೆಸಿದ ಯುದ್ಧ -ಅನುವಾದಕನ ಟಿಪ್ಪಣಿ)

ವಿಷಯದಲ್ಲಿ ಇಂಥದೊಂದು ಬೆಳವಣಿಗೆಯ ಸಾಧ್ಯತೆಯನ್ನು ಯೋಚಿಸುವ ಮನಸ್ಸೂ ಮಂತ್ರಿಗಳಿಗಿಲ್ಲವೆಂದು ನನಗೆ ಅನೇಕ ಸಲ ಅನ್ನಿಸಿದೆ. ಆದಾಗ್ಯೂ ವಿಷಯವನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದೆಂಬ ಭಾವನೆ ಅವರಲ್ಲಿರುವಂತೆ ನನಗೆ ತೋಚುತ್ತಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಚಂಡವಾದ ಹೊಡೆತ ನೀಡುವಂಥ ನಿರ್ಣಾಯಕ ಪ್ರಚಾರವೇ ಕಾಶ್ಮೀರಕ್ಕೆ ದೂಡುತ್ತಿರುವ ಭಾರತೀಯ ಪಡೆಗಳಿಗಿಂತ ಸಶಕ್ತವಾದದ್ದು, ಶ್ರೇಷ್ಠವಾದದ್ದು."

ಏತನ್ಮಧ್ಯೆ, 1948ರ ಮಾರ್ಚಿಯಲ್ಲಿ ಮೆಹರ್ ಚಂದ್ ಅವರ ಸ್ಥಾನದಲ್ಲಿ ಶೇಖ್ ಅಬ್ದುಲ್ಲಾ ಜಮ್ಮೂ ಕಾಶ್ಮೀರದ ಪ್ರಧಾನ ಮಂತ್ರಿಯಾಗಿ ನೇಮಕಗೊಂಡರು. ಮೇ ಮಧ್ಯದ ವೇಳೆಗೆ, ಹಿಮ ಕರಗಿದ ನಂತರ ಯುದ್ಧ ಪುನರಾರಂಭಗೊಂಡಿತು. ಪದಾತಿ ಸೈನ್ಯದ ತುಕಡಿಯೊಂದು ಯೂರಿಯಿಂದ ವಾಯುವ್ಯ ಸರಹದ್ದಿನತ್ತ ಚಲಿಸಿತು. ಈ ಸೇನೆ ತಿತ್ವಾಲ್ ಪಟ್ಟಣವನ್ನು ವಶಪಡಿಸಿಕೊಂಡಿತು. ಮುಖ್ಯ ಪಟ್ಟಣವಾದ ಮುಜಫರಾಬಾದ್‌ನತ್ತ ಚಲಿಸುತ್ತಿದ್ದಾಗ ಮಾರ್ಗಮಧ್ಯೆ ಪ್ರಬಲ ಪ್ರತಿರೋಧವನ್ನು ಎದುರಿಸಬೇಕಾಯಿತು.

ಅತ್ತಕಡೆ, ಸದಾಕಾಲ ಬದಲಾವಣೆಯಾಗುತ್ತಿದ್ದ ನಿಯಂತ್ರಣ ರೇಖೆಯ ಬದಿಯಲ್ಲಿ ಪಾಕಿಸ್ತಾನ ಅಜಾದ್ ಕಾಶ್ಮೀರ ಸರ್ಕಾರವನ್ನು ಸ್ಥಾಪಿಸಿತು. ಈ ಸರ್ಕಾರ ಅಜಾದ್ ಕಾಶ್ಮೀರ ಸೈನ್ಯವನ್ನು ಕಟ್ಟಿತು. ಈ ಸೈನ್ಯದಲ್ಲಿ ಸ್ಥಳೀಯರೇ ಹೆಚ್ಚಾಗಿದ್ದು ಪಾಕಿಸ್ತಾನದ ಸೈನ್ಯಾಧಿಕಾರಿಗಳಿಂದ ಸಹಾಯ, ಮಾರ್ಗದರ್ಶನಗಳನ್ನು ಪಡೆಯುತ್ತಿದ್ದರು. ಈ ಪಡೆಗಳು ಮಿಲಿಟರಿ ಕಾರ್ಯಾಚರಣೆ ದೃಷ್ಟಿಯಿಂದ ತಮ್ಮ ಭೂಪ್ರದೇಶವನ್ನು ಬಳಸಿಕೊಳ್ಳುವುದರಲ್ಲಿ ಕುಶಲಿಗಳಾಗಿದ್ದರು. 1948ರ ಬೇಸಿಗೆಯಲ್ಲಿ ಅಜಾದ್ ಕಾಶ್ಮೀರದ ಪಡೆಗಳು ಕಾರ್ಗಿಲ್ ಮತ್ತು ಡ್ರಾಸ್ ಪಟ್ಟಣಗಳನ್ನು ವಶಕ್ಕೆ ತೆಗೆದುಕೊಂಡಿತು ಹಾಗೂ ಸಮುದ್ರ ಮಟ್ಟದಿಂದ 11000 ಅಡಿ ಎತ್ತರದಲ್ಲಿದ್ದ ಲಡಾಖ್ ರಾಜಧಾನಿ ಲೆಹ್‌ಗೂ ಬೆದರಿಕೆಯೊಡ್ಡಿದವು. ಆದರೆ, ಲೆಹ್‌ಗೆ ಆಹಾರ ಪೂರೈಸುವುದರಲ್ಲಿ ಭಾರತೀಯ ವಾಯುಪಡೆಯ ವೈಮಾನಿಕ ದಳ ಸಫಲವಾಯಿತು. ದಾಳಿಕಾರರ ನಿಯಂತ್ರಣದಲ್ಲಿದ್ದ ಪೂಂಛ್‌ನ ಪಶ್ಚಿಮ ಭಾಗಕ್ಕೂ ಪರಿಹಾರ ಒದಗಿಸಿದ್ದು ಭಾರತೀಯ ವಾಯು ಪಡೆಯ ದಳಗಳೇ.

1948ರ ಉತ್ತರಾರ್ಧದ ತಿಂಗಳುಗಳಲ್ಲಿ ಎರಡೂ ಸೇನೆಗಳು ಕಾದಾಡಿದವು. ನವೆಂಬರ್‌ನಲ್ಲಿ ಭಾರತದ ಪಡೆಗಳು ಕಾರ್ಗಿಲ್ ಮತ್ತು ಡ್ರಾಸ್ ಪಟ್ಟಣಗಳನ್ನು ಮರುವಶಪಡಿಸಿಕೊಂಡವು. ಇದರಿಂದ ಲಡಾಖ್ ಮತ್ತು ಲೆಹ್ ಸುರಕ್ಷಿತವಾದವು. ಇದೇ ತಿಂಗಳಿನಲ್ಲಿ ಪೂಂಛ್ ಸುತ್ತ ಇದ್ದ ಗುಡ್ಡಗಾಡು ಪ್ರದೇಶಗಳನ್ನೂ ದಾಳಿಕಾರರಿಂದ ತೆರವುಗೊಳಿಸಲಾಯಿತು. ಭಾರತದ ಸೇನಾಪಡೆಯ ಕೆಲವು ದಂಡನಾಯಕರು ಮುನ್ನುಗ್ಗುವ ಇಚ್ಛೆ ತೋರಿ ಬಯಲು ಪ್ರದೇಶದಲ್ಲಿರುವ ಮೂರು ತುಕಡಿ ಸೈನ್ಯದ ಪುನರ್ ನಿಯೋಜನೆಗೆ ಅನುಮತಿ ಕೇಳಿದರು. ಅನುಮತಿ ನಿರಾಕರಿಸಲಾಯಿತು. ಒಂದು, ಚಳಿಗಾಲ ಆರಂಭವಾಗುವು ದರಲ್ಲಿತ್ತು. ಎರಡನೆಯದಾಗಿ ಆಕ್ರಮಣಕ್ಕೆ ಸೈನ್ಯದ ಬಲವರ್ಧನೆಯ ಜೊತೆಗೆ ವಾಯುಪಡೆಯ

ಅಗಾಧ ಬೆಂಬಲ ಬೇಕಾಗಿತ್ತು. ಆದ್ದರಿಂದ ಭಾರತೀಯ ಪಡೆಗಳ ಮುನ್ನುಗ್ಗುವ ಕಾರ್ಯಕ್ರಮವನ್ನು ನಿಲ್ಲಿಸುವುದೇ ಉತ್ತಮವೆನಿಸಿರಬಹುದು. ಏಕೆಂದರೆ, ಕಾಶ್ಮೀರ ಸಮಸ್ಯೆಯನ್ನು ನಿಕಟವಾಗಿ ಗಮನಿಸುತ್ತಿದ್ದ ಪರಿಣತರೊಬ್ಬರು ಆಗ ಹೀಗೊಂದು ಟೀಕೆ ಮಾಡಿದ್ದರು: "ಇಲ್ಲವೇ ವಿಭಜನೆ ಮೂಲಕ ವಿವಾದವನ್ನು ಇತ್ಯರ್ಥ ಪಡಿಸಿಕೊಳ್ಳಬೇಕು ಅಥವಾ ಭಾರತ ಪಶ್ಚಿಮ ಪಂಜಾಬಿನೊಳಕ್ಕೆ ನುಗ್ಗಬೇಕು. ಕಾಶ್ಮೀರದೊಳಗೇ ಕುಳಿತು ಮಿಲಿಟರಿ ನಿರ್ಧಾರಕ್ಕೆ ಬರಲಾಗದು."

ವಿಶ್ವಸಂಸ್ಥೆಯಲ್ಲಿ ಕಾಶ್ಮೀರಕ್ಕಾಗಿ ವಿಶೇಷ ಆಯೋಗವೊಂದನ್ನು ರಚಿಸಲಾಯಿತು. ಈ ಆಯೋಗದ ಸದಸ್ಯರು ಕಾಶ್ಮೀರ ಪ್ರದೇಶದಲ್ಲಿ ವ್ಯಾಪಕ ಪ್ರವಾಸ ನಡೆಸಿದರು. ದೆಹಲಿ, ಕರಾಚಿ, ಕಾಶ್ಮೀರಗಳಿಗೆ ಭೇಟಿಕೊಟ್ಟರು. ಶ್ರೀನಗರದಲ್ಲಿ ಶೇಖ್ ಅಬ್ದುಲ್ಲಾ, ಶಾಲಿಮಾರ್ ಗಾರ್ಡನ್ಸ್‌ನಲ್ಲಿ ಇವರಿಗೆ ಔತಣಕೂಟ ಏರ್ಪಡಿಸಿದರು. ನಂತರ ಶೇಖ್ ಅಬ್ದುಲ್ಲಾ, ವಿಶ್ವಸಂಸ್ಥೆಯ ಪ್ರತಿನಿಧಿಯಾದ ಚೆಕೊಸ್ಲೊವಾಕಿಯಾ ರಾಜತಂತ್ರಜ್ಞ ಮತ್ತು ಪರಿಣತ ಜೋಸೆಫ್ ಕೋರ್ಬೆಲ್‌ರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಪ್ರಧಾನಮಂತ್ರಿಗಳು ಜನಮತಗಣನೆ ಮತ್ತು ಸ್ವಾತಂತ್ರ್ಯ ಕುರಿತ ಎಲ್ಲ ಸಲಹೆ ಸೂಚನೆಗಳನ್ನು ತಳ್ಳಿಹಾಕಿದರು. ಕಾಶ್ಮೀರ ವಿಭಜನೆಯೊಂದೇ 'ಏಕೈಕ ಪರಿಹಾರ'ವೆಂಬುದು ಅವರ ವಾದವಾಗಿತ್ತು. ಇಲ್ಲವಾದಲ್ಲಿ, "ಯುದ್ಧ ಮುಂದುವರಿಯುವುದು. ಭಾರತ ಮತ್ತು ಪಾಕಿಸ್ತಾನ ಅನಿರ್ದಿಷ್ಟ ಕಾಲದವರೆಗೆ ಈ ತಕರಾರನ್ನು ಮುಂದುವರಿಸಿಕೊಂಡು ಹೋಗುತ್ತವೆ. ನಮ್ಮ ಜನರ ಕಷ್ಟ-ನಷ್ಟ-ನೋವುಗಳು ನಿರಂತರವಾಗುತ್ತವೆ" ಎಂದು ಶೇಖ್ ಅಬ್ದುಲ್ಲಾ ಕಂಠೋಕ್ತವಾಗಿ ಹೇಳಿದರು.

ಶ್ರೀನಗರದಲ್ಲಿ ಕೊರ್ಬೆಲ್, ಶೇಖ್ ಅಬ್ದುಲ್ಲಾರ ಮಸೀದಿ ಸಭೆಯೊಂದಕ್ಕೆ ಹೋಗಿದ್ದರು. "ಸಭೆಯಲ್ಲಿದ್ದ ನಾಲ್ಕುಸಾವಿರ ಮಂದಿ ತೀವ್ರ ಗಮನಕೊಟ್ಟು ಶೇಖ್‌ರ ಭಾಷಣವನ್ನು ಆಲಿಸಿದರು. ಅವರ ಮುಖಗಳಲ್ಲಿ ನಂಬಿಕೆ ಮತ್ತು ನಿಷ್ಠೆಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಅಥವಾ, ಸಾಮಾನ್ಯವಾಗಿ ಇಂಥ ನಿಷ್ಠೆ ಪ್ರದರ್ಶನಕ್ಕೆ ಬಳಸುವ ಪೊಲೀಸರು ಸಭೆಯಲ್ಲಿ ನಮ್ಮ ಕಣ್ಣಿಗೆ ಬೀಳಲಿಲ್ಲ." ಆಯೋಗ ನಂತರ ಪಾಕಿಸ್ತಾನಕ್ಕೆ ಭೇಟಿ ನೀಡಿತು. ಮುಸ್ಲಿಮರು ಬಹುಸಂಖ್ಯಾತರಾಗಿರುವ ಕಾಶ್ಮೀರ ಕಣಿವೆಯನ್ನು ಭಾರತಕ್ಕೆ ಬಿಟ್ಟುಕೊಡುವಂಥ ಯಾವುದೇ ಪರಿಹಾರ ಸೂತ್ರವನ್ನು ಪರಿಶೀಲಿಸಲು ಪಾಕಿಸ್ತಾನ ಸಿದ್ಧವಿಲ್ಲವೆಂಬುದು ಆಯೋಗಕ್ಕೆ ಮನದಟ್ಟಾಯಿತು.

IV

1948ರ ಮಾರ್ಚ್ ವೇಳೆಗೆ ಕಾಶ್ಮೀರ ಕಣಿವೆಯಲ್ಲಿ ಶೇಖ್ ಅಬ್ದುಲ್ಲಾ ಅತ್ಯಂತ ಗಣ್ಯವ್ಯಕ್ತಿಯಾಗಿದ್ದರು. ಹರಿಸಿಂಗರು ಔಪಚಾರಿಕ ರಾಜಪ್ರಮುಖರಾಗಿದ್ದರು, ಅವರನ್ನು ಈಗ 'ಸದರ್-ಇ-ರಿಯಾಸತ್' ಎಂದು ಕರೆಯಲಾಗುತ್ತಿತ್ತು. ಆದರೆ ನಿಜವಾಗಿ ಅವರಿಗೆ ಅಧಿಕಾರ ಬಲ ಏನೂ ಇರಲಿಲ್ಲ. ಭಾರತ ಸರ್ಕಾರ ಅವರನ್ನು ಸಂಪೂರ್ಣವಾಗಿ ವಿಶ್ವಸಂಸ್ಥೆ

ಕಾರ್ಯಕಲಾಪಗಳಿಂದ ಹೊರಗಿರಿಸಿತ್ತು. ಶೇಖ್ ಅಬ್ದುಲ್ಲಾರನ್ನು ಕಾಶ್ಮೀರ ಕಣಿವೆಯಲ್ಲಿ ಭಾರತದ ಪ್ರತಿನಿಧಿಯಾಗಿ ಅದು ಭಾವಿಸಿತ್ತು. ಭಾರತ ಒಕ್ಕೂಟದ ಪರವಾಗಿ ಕಾಶ್ಮೀರವನ್ನು ಶೇಖರು ಮಾತ್ರ ರಕ್ಷಿಸಬಲ್ಲರು ಎಂಬುದು ಸರ್ಕಾರದ ಅಭಿಪ್ರಾಯವಾಗಿತ್ತು.

ಈ ಹಂತದಲ್ಲಿ ಶೇಖ್ ಅಬ್ದುಲ್ಲಾ ಅವರೇ ಸ್ವತಃ ಕಾಶ್ಮೀರ ಮತ್ತು ಭಾರತದ ನಡುವಣ ಬಾಂಧವ್ಯಕ್ಕೆ ಹೆಚ್ಚು ಒತ್ತುಕೊಟ್ಟು ಮಾತನಾಡಲಾರಂಭಿಸಿದರು. 1948ರ ಮೇ ತಿಂಗಳಲ್ಲಿ ಅವರು ಶ್ರೀನಗರದಲ್ಲಿ ಸ್ವಾತಂತ್ರ್ಯ ಸಪ್ತಾಹವೊಂದನ್ನು ಸಂಘಟಿಸಿದರು. ಈ ಸಪ್ತಾಹದ ಸಮಾರಂಭಗಳಿಗೆ ಅವರು ಭಾರತದ ನಾಯಕಮಣಿಗಳನ್ನು ಆಹ್ವಾನಿಸಿದರು. ಜಾನಪದ ಗೀತೆಗಳ ಗಾಯನ, ಕಾವ್ಯವಾಚನ, ಹುತಾತ್ಮ ಸ್ಮರಣೆ ಹಾಗೂ ನಿರಾಶ್ರಿತರ ಶಿಬಿರಗಳಿಗೆ ಭೇಟಿ ಈ ಸಾಪ್ತಾಹಿಕದ ಕಾರ್ಯಕ್ರಮಗಳ ಮುಖ್ಯ ಅಂಗವಾಗಿದ್ದವು. "ನಮ್ಮ ಜನರ ದೇಶಭಕ್ತಿ ಹಾಗೂ ಭಾರತೀಯ ಒಕ್ಕೂಟದ ಪಡೆಗಳ ಹೋರಾಟದ ಶೌರ್ಯ ಪರಾಕ್ರಮಗಳನ್ನು" ಕಾಶ್ಮೀರದ ನಾಯಕರು ಕೊಂಡಾಡಿದರು. "ನಮ್ಮ ಹೋರಾಟ, ಕೇವಲ ಕಾಶ್ಮೀರದ ಜನತೆಯ ವಿದ್ಯಮಾನವಲ್ಲ. ಇದು ಭಾರತದ ಪ್ರತಿಯೊಬ್ಬ ಪುತ್ರಪುತ್ರಿಯರ ಸಮರವೇ ಆಗಿದೆ" ಎಂದು ಅವರು ಘೋಷಿಸಿದರು.

ಭಾರತ ಸ್ವಾತಂತ್ರ್ಯದ ಪ್ರಥಮ ವಾರ್ಷಿಕೋತ್ಸವದಂದು ಶೇಖ್ ಅಬ್ದುಲ್ಲಾ ಮದರಾಸಿನ ಪ್ರಮುಖ ಸಾಪ್ತಾಹಿಕವಾದ "ಸ್ವತಂತ್ರ"ಕ್ಕೆ ಒಂದು ಸಂದೇಶ ಕಳುಹಿಸಿದರು. ಉತ್ತರ ಮತ್ತು ದಕ್ಷಿಣ, ಪರ್ವತಾವಳಿ ಮತ್ತು ಕರಾವಳಿ ಹಾಗೂ ಇವೆಲ್ಲದಕ್ಕೂ ಮಿಗಿಲಾಗಿ ಕಾಶ್ಮೀರ-ಭಾರತಗಳ ಏಕೀಕರಣವಾಗಬೇಕೆಂದು ಸಂದೇಶದಲ್ಲಿ ಕರೆನೀಡಲಾಗಿತ್ತು. ಸಂದೇಶದ ಪೂರ್ಣ ಪಾಠವನ್ನು ಕೊಡುವುದು ಉಚಿತವಾದೀತು:

> *'ಸ್ವತಂತ್ರ'ದ ಪುಟಗಳ ಮೂಲಕ ನಾನು ದಕ್ಷಿಣದ ಜನತೆಗೆ ಭ್ರಾತೃತ್ವದ ಸಂದೇಶವನ್ನು ತಲುಪಿಸಲಿಚ್ಛಿಸುತ್ತೇನೆ. ಬಹಳ ಹಿಂದೆಯೇ, ಭಾರತದ ಚರಿತ್ರೆಯಲ್ಲಿ, ದಕ್ಷಿಣ ಮತ್ತು ಉತ್ತರ ಭಾಗಗಳು ಕಾಶ್ಮೀರದ ನೆಲದಲ್ಲಿ ಸಂಧಿಸಿವೆ. ಶಂಕರಾಚಾರ್ಯರು ತಮ್ಮ ಚೈತನ್ಯಶೀಲ ತತ್ವಗಳ ಪ್ರಸಾರಕ್ಕೆ ಕಾಶ್ಮೀರಕ್ಕೆ ಬಂದಿದ್ದರು. ಸಂವಾದದಲ್ಲಿ ಪಂಡಿತಿಣಿಯೊಬ್ಬಳು ಅವರನ್ನು ಸೋಲಿಸಿದಳು. ಇದು, ಕಾಶ್ಮೀರದ ವಿಶಿಷ್ಟ ಶೈವಸಿದ್ಧಾಂತದ ಏಳ್ಗೆಗೆ ಆಸ್ಪದ ನೀಡಿತು. ಶ್ರೀನಗರದ ಶಂಕರಾಚಾರ್ಯಗಿರಿಯಲ್ಲಿ ಶಂಕರಾಚಾರ್ಯರ ಕಾಶ್ಮೀರದ ಸ್ಮಾರಕ ಕಂಗೊಳಿಸುತ್ತಿದೆ. ಅದು ಶಿವನ ಮೂರ್ತಿಯುಳ್ಳ ದೇವಾಲಯ.*
>
> *ಇತ್ತೀಚೆಗೆ ದಕ್ಷಿಣದವರೊಬ್ಬರು ವಿಶ್ವಸಂಸ್ಥೆಯಲ್ಲಿ ಕಾಶ್ಮೀರದ ಪರವಾಗಿ ವಾದ ಮಂಡಿಸಿದರು. ದಕ್ಷಿಣದವರಿಗೆ ರೂಢಿಬದ್ಧವಾದ ಸ್ಥಿರ ಸಂಕಲ್ಪದಿಂದ ಪಟ್ಟುಬಿಡದೆ ಅವರು ಕಾಶ್ಮೀರವನ್ನು ಸಮರ್ಥಿಸಿದರು, ಕಾಶ್ಮೀರದ ರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದರು.*

ಕಾಶ್ಮೀರದಲ್ಲಿರುವ ನಾವು ಇದೇ ಬೆಂಬಲ ಮತ್ತು ಸಹಾನುಭೂತಿಯನ್ನು ಮುಂದೆಯೂ ದಕ್ಷಿಣದ ಜನತೆಯಿಂದ ನಿರೀಕ್ಷಿಸುತ್ತೇವೆ. ಒಂದಲ್ಲ ಒಂದು ದಿನ ನಮ್ಮ ರಾಷ್ಟ್ರದಲ್ಲಿ 'ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ' ಎಂಬ ಘೋಷ ಮೊಳಗಲಿದೆ.

ಮದ್ರಾಸಿನ "ಸ್ವತಂತ್ರ" ಇದಕ್ಕೆ ಪ್ರತಿಕ್ರಿಯೆಯಾಗಿ ಭಾರತದೊಂದಿಗೆ ಕಾಶ್ಮೀರ ವಿಲೀನ ಕುರಿತು ಒಂದು ಕಾವ್ಯಮಯವಾದ ಸ್ತೋತ್ರಗೀತೆಯನ್ನು ಪ್ರಕಟಿಸಿತು. **"ತಮಿಳರು, ಆಂಧ್ರದವರು, ಮಲೆಯಾಳಿಗಳು ಹಾಗೂ ಕೊಡವ ವೀರಯೋಧರ ರಕ್ತ ಕಾಶ್ಮೀರದ ನೆಲವನ್ನು ತೋಯಿಸಿ ಉತ್ತರ ಮತ್ತು ದಕ್ಷಿಣದ ಏಕತೆಯನ್ನು ಚಿರಸ್ಥಾಯಿಗೊಳಿಸಿದೆ."** ಶೇಖ್ ಅಬ್ದುಲ್ಲಾ ಅವರ ಈದ್ ಉಪಸಂಹಾರ ಭಾಷಣವನ್ನು ಕೇರಳ ಮತ್ತು ತಮಿಳುನಾಡಿನ ಅನೇಕ ಮಂದಿ ಮುಸ್ಲಿಂ ಸೈನಿಕರು ತನ್ಮಯರಾಗಿ ಆಲಿಸುತ್ತಾರೆಂದೂ ಈ ಪತ್ರಿಕೆ ವರದಿ ಮಾಡಿತು. ಶ್ರೀನಗರಕ್ಕೆ ಅರವತ್ತು ಮೈಲಿ ದೂರದಲ್ಲಿರುವ ಯೂರಿಯಲ್ಲಿ ತಿರುವಾಂಕೂರಿನ ಕ್ರಿಶ್ಚಿಯನ್ ಸಿಪಾಯಿಯೊಬ್ಬನ ಸಮಾಧಿ ಇದೆ. ಈ ಸಮಾಧಿ ಶಿಲೆಯ ಮೇಲೆ ವೇದದ ಸಂಕೇತ ಚಿತ್ರ ಹಾಗೂ ಕುರಾನಿನ ಶ್ಲೋಕವೊಂದನ್ನು ಕೆತ್ತಲಾಗಿದೆ. "ಏಕತೆ ಹಾಗೂ ಭಾರತ ಏಕೀಕರಣದ ಬಗ್ಗೆ ಇದಕ್ಕಿಂತ ಹೆಚ್ಚು ಮನೋವೇಧಕವಾದ, ಹೃದಯಸ್ಪರ್ಶಿಯಾದ ಸಂಕೇತ ಮತ್ತೊಂದು ಇರಲಾರದು."

ಶೇಖ್ ಅಬ್ದುಲ್ಲಾ ಭಾರತದ ಪರವಾಗಿದ್ದರೋ ಇಲ್ಲವೋ, ಆದರೆ ನಿಶ್ಚಯವಾಗಿಯೂ ಅವರು ಪಾಕಿಸ್ತಾನದ ಪರವಾಗಿರಲಿಲ್ಲ. 1948ರಲ್ಲೇ ಅವರು ಪಾಕಿಸ್ತಾನವನ್ನು "ನೀತಿಗೆಟ್ಟ ಅನಾಗರಿಕ ಕ್ರೂರ ಶತ್ರು"ವೆಂದು ಬಣ್ಣಿಸಿದ್ದರು. ಪಾಕಿಸ್ತಾನವನ್ನು ಪುರೋಹಿತಶಾಹಿ ರಾಷ್ಟ್ರವೆಂದೂ ಮುಸ್ಲಿಂ ಲೀಗನ್ನು ಜನಪರ ಅಲ್ಲ, ಮಹಾರಾಜರ ಪರ ಎಂದೂ ಬಹಳ ಹಿಂದೆಯೇ ತಳ್ಳಿಹಾಕಿದ್ದರು. ಅವರ ಪ್ರಕಾರ, ಕಾಶ್ಮೀರದ ಜನತೆಯ ಹಕ್ಕುಗಳನ್ನು ಉದ್ದಕ್ಕೂ ಬೆಂಬಲಿಸಿದ್ದು, ಅವರ ಪರ ನಿಂತದ್ದು ಭಾರತದ ನಾಯಕರೇ ಹೊರತು ಪಾಕಿಸ್ತಾನಿ ನಾಯಕರಲ್ಲ. ಸ್ವತಂತ್ರ ಕಾಶ್ಮೀರದ ಬೇಡಿಕೆ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ರಾಜತಾಂತ್ರಜ್ಞರೊಬ್ಬರು ದೆಹಲಿಯಲ್ಲಿ ಕೇಳಿದಾಗ, "ಕಾಶ್ಮೀರ ತುಂಬ ಚಿಕ್ಕದು ಹಾಗೂ ತುಂಬ ಬಡಪಾಯಿಯಾದದ್ದು, ಅಲ್ಲಿ ಅದು ಸಾಧ್ಯವಿಲ್ಲ" ಎಂಬುದು ಅವರ ಉತ್ತರವಾಗಿತ್ತು. "ಪಾಕಿಸ್ತಾನ ನಮ್ಮನ್ನು ನುಂಗಿಹಾಕಿಬಿಡುತ್ತದೆ. ಒಮ್ಮೆ ಅವರು ಅಂಥ ಪ್ರಯತ್ನ ಮಾಡಿದ್ದುಂಟು. ಅವರು ಮತ್ತೆ ಅಂಥ ಪ್ರಯತ್ನ ಮಾಡುವರು" ಎನ್ನುವ ಮಾತುಗಳನ್ನು ಅವರ ಉತ್ತರ ಒಳಗೊಂಡಿತ್ತು.

ಕಾಶ್ಮೀರದೊಳಗೆ ಶೇಖ್ ಅಬ್ದುಲ್ಲಾ ಅವರು ಮಹಾರಾಜರ ಆಳ್ವಿಕೆಯಲ್ಲೇ ಜಮೀನಿನ ಮರು ಹಂಚಿಕೆಯ ಪ್ರಯತ್ನ ಮಾಡಿದರು. ಕೆಲವು ಮಂದಿ ಹಿಂದೂಗಳು ಹಾಗೂ ಕೆಲವೇ ಕೆಲವು ಮಂದಿ ಮುಸಲ್ಮಾನರು ಭಾರಿ ಜಮೀನ್ದಾರರುಗಳಾಗಿದ್ದ ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಜನ ಕೂಲಿನಾಲಿ ಮಾಡಿ ಜೀವಿಸುತ್ತಿದ್ದರು ಅಥವಾ ಸ್ವಂತ ಇಚ್ಛೆಯ ಮೇಲೆ ಗೇಣಿದಾರರಾಗಿದ್ದರು. ಅಧಿಕಾರಕ್ಕೆ ಬಂದ ಮೊದಲನೆಯ ವರ್ಷ ಶೇಖ್ ಅಬ್ದುಲ್ಲಾ 40

ಸಾವಿರ ಎಕರೆ ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಹಂಚಿದರು. ಅಲ್ಲದೇ ಅನುಪಸ್ಥಿತ ಮಾಲೀಕತ್ವವನ್ನು ಕಾನೂನು ಬಾಹಿರಗೊಳಿಸಿದರು, ಬೆಳೆಯಲ್ಲಿ ಗೇಣಿದಾರರ ಪಾಲನ್ನು ಶೇ 25 ರಿಂದ ಶೇ 75 ಕ್ಕೆ ಏರಿಸಿದರು. ಸಾಲದ ಮರುಪಾವತಿ ಮೇಲೆ ತಾತ್ಕಾಲಿಕ ನಿಷೇಧ ಹೇರಿದರು. ಅವರ ಈ ಕೆಲವು ಸಮಾಜವಾದಿ ನೀತಿಗಳು ಭಾರತ ಸರ್ಕಾರದಲ್ಲಿ ಕೆಲವು ಶಕ್ತಿಗಳ ಕಿವಿಯಲ್ಲಿ ಎಚ್ಚರಿಕೆ ಗಂಟೆ ಬಾರಿಸಿದವು, ವಿಶೇಷವಾಗಿ ಭೂಮಿ ಕಳೆದುಕೊಂಡ ಜಮೀನ್ದಾರರಿಗೆ ಪರಿಹಾರ ಪಾವತಿಸಿಲ್ಲ ಎಂಬ ಕಾರಣದಿಂದಾಗಿ. ಆದರೆ ಅಬ್ದುಲ್ಲಾ ಅವರು ಕಾಶ್ಮೀರದಲ್ಲಿ ಪ್ರಗತಿಯ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದೇ ಭಾವಿಸಿದ್ದರು. ಭೂ ಸುಧಾರಣೆಯನ್ನು ಅನುಷ್ಠಾನಕ್ಕೆ ತರಲು ತಮಗೆ ಅವಕಾಶ ನೀಡದಿದ್ದಲ್ಲಿ ತಾವು ಜಮ್ಮು-ಕಾಶ್ಮೀರದ ಪ್ರಧಾನಮಂತ್ರಿಯಾಗಿ ಮುಂದುವರಿಯುವುದಿಲ್ಲವೆಂದು ಅವರು ದೆಹಲಿಯ ಪತ್ರಿಕಾಗೋಷ್ಠಿಯೊಂದರಲ್ಲಿ ಘೋಷಿಸಿದ್ದರು. ಕೇಂದ್ರ ಸರ್ಕಾರದಲ್ಲಿ ಪ್ರತಿಗಾಮಿ ಶಕ್ತಿಗಳು ಮೇಲುಗೈ ಸಾಧಿಸಿದಲ್ಲಿ ನೀವೇನು ಮಾಡುವಿರಿ ಎಂಬ ಪ್ರಶ್ನೆಗೆ, "ನೀವು ನನ್ನ ತೊರೆದರೂ ನಾನು ನಿಮ್ಮ ಕೈ ಬಿಡುವುದಿಲ್ಲ. ನಾನು ರಾಜೀನಾಮೆ ಕೊಟ್ಟು, ಭಾರತ ಸರ್ಕಾರದಲ್ಲಿನ ಬಡವರ ಆರ್ಥಿಕ ಪ್ರಗತಿಗೆ ಹೋರಾಡುವವರ ಜೊತೆ ಸೇರಿಕೊಳ್ಳುತ್ತೇನೆ" ಎಂದು ಉತ್ತರ ಕೊಟ್ಟಿದ್ದರು.

ಇದೇ ಪತ್ರಿಕಾಗೋಷ್ಠಿಯಲ್ಲಿ ಶೇಖರು ಮಹಾರಾಜ ಹರಿಸಿಂಗರ ಬಗ್ಗೆ ಅವಹೇಳನಕಾರಿ ಟೀಕೆಗಳನ್ನು ಮಾಡಿದ್ದರು. ಶ್ರೀನಗರ ಅಪಾಯದಲ್ಲಿ ಸಿಲುಕಿದ್ದಾಗ ಮಹಾರಾಜರು ಅದನ್ನು ತೊರೆದು ಪರಾರಿಯಾದರೆಂದು ಬೆರಳು ಮಾಡಿ ಹೇಳಿದ್ದರು. 1949ರ ಏಪ್ರಿಲ್‌ನಲ್ಲಿ ಹರಿಸಿಂಗರು ನಿರ್ವಹಿಸುತ್ತಿದ್ದ ಸದರ್-ಇ-ರಿಯಾಸತ್ ಹುದ್ದೆಗೆ ಅವರ ಹದಿನೆಂಟು ವರ್ಷದ ಸುಪುತ್ರ ಕರಣ್‌ಸಿಂಗರನ್ನು ನೇಮಿಸಿದಾಗ ಶೇಖರು ಮಹಾವಿಜಯವನ್ನೇ ಸಾಧಿಸಿದ್ದರು. ಇದರ ಮರುತಿಂಗಳಲ್ಲೇ, ದೆಹಲಿಯ ಸಂವಿಧಾನ ರಚನಾ ಸಭೆಯಲ್ಲಿ ಕಾಶ್ಮೀರವನ್ನು ಪ್ರತಿನಿಧಿಸಲು ಶೇಖ್ ಅಬ್ದುಲ್ಲಾ ಹಾಗೂ ನ್ಯಾಷನಲ್ ಕಾನ್ಫರೆನ್ಸಿನ ಇತರ ಮೂವರನ್ನು ಆಯ್ಕೆ ಮಾಡಲಾಯಿತು. ಈ ಕ್ರಮ ಭಾರತದೊಂದಿಗೆ ಕಾಶ್ಮೀರ ವಿಲನದ ಮತ್ತೊಂದು ಸಮರ್ಥನೆಯಾಗಿತ್ತು. ಆ ಬೇಸಿಗೆಯಲ್ಲಿ ಮತ್ತೆ ಪ್ರವಾಸಿಗರಿಗೆ ಕಾಶ್ಮೀರದ ಬಾಗಿಲುಗಳನ್ನು ತೆರೆಯಲಾಯಿತು. ಆಗ ಸಹಾನುಭೂತಿಪರರಾದ ಪತ್ರಕರ್ತರೊಬ್ಬರು ಹೀಗೆ ಬರೆದರು: "ಈ ಬೇಸಿಗೆಯಲ್ಲಿ ಕಾಶ್ಮೀರಕ್ಕೆ ಭೇಟಿಕೊಡುವ ಪ್ರತಿಯೊಬ್ಬ ಪ್ರವಾಸಿಯೂ ಗಡಿಯಲ್ಲಿ ಯುದ್ಧಮಾಡುತ್ತಿರುವ ಯೋಧರಂತೆ ಕಾಶ್ಮೀರ ಮತ್ತು ಭಾರತಕ್ಕೆ ಮಹತ್ವದ ಸೇವೆ ಸಲ್ಲಿಸಲಿದ್ದಾರೆ."

ಶರತ್ಕಾಲದಲ್ಲಿ ಹತ್ತುಲಕ್ಷ ಪ್ರವಾಸಿಗರಿಗೂ ಮಿಗಿಲಾದ ಪ್ರಾಮುಖ್ಯ ಹೊಂದಿದ್ದ ಗಣ್ಯರೊಬ್ಬರು ಕಾಶ್ಮೀರಕ್ಕೆ ಭೇಟಿಯಿತ್ತರು. ಅವರು ಜವಹರಲಾಲ ನೆಹರು. ಆಗ ನೆಹರೂ ಮತ್ತು ಶೇಖ್ ಅಬ್ದುಲ್ಲಾ ವಿರಾಮವಾಗಿ ಎರಡು ಗಂಟೆಕಾಲ ಶ್ರೀನಗರದ ಮುಖ್ಯ ಮಾರ್ಗಗಳಲ್ಲಿ ಕಾರಿನಲ್ಲಿ ಸುತ್ತಾಡಿದರು; ಝೀಲಂ ನದಿಯಲ್ಲಿ ದೋಣಿ ವಿಹಾರ ಕೈಗೊಂಡರು.

'ಟೈಮ್ಸ್' ಪತ್ರಿಕೆ ಬರೆದಂತೆ ನೂರಾರು ಸಹಸ್ರಾರು ಜನ ಇವರ ದರ್ಶನಕ್ಕಾಗಿ ರಸ್ತೆ ಬದಿಯಲ್ಲಿ, ನದಿ ದಂಡೆಯಲ್ಲಿ ಜಮಾಯಿಸಿದರು. ನೆಹರೂ ಮೇಲೆ ಪುಷ್ಪವೃಷ್ಟಿ ಕರೆದರು. ಪಟಾಕಿ, ಬಾಣ ಬಿರುಸುಗಳಿಂದ ನೆಹರು ಭೇಟಿಯನ್ನು ಸಂಭ್ರಮದಿಂದ ಆಚರಿಸಿದರು. ಎಚ್ಚರಿಕೆಯಿಂದ ಕಲಿಸಲಾಗಿದ್ದ ಶಾಲಾ ಮಕ್ಕಳು ನೆಹರೂ-ಶೇಖ ಅಬ್ದುಲ್ಲಾರ ಗುಣಗಾನ ಮಾಡುವ ಘೋಷಣೆಗಳನ್ನು ಕೂಗಿದರು. ಈ ಶುಭಸಂದರ್ಭದ ಲಾಭ ಪಡೆಯಲು ವರ್ತಕರು ತಮ್ಮ ಅಂಗಡಿಗಳ ಮುಂದೆ "ಅತ್ಯುತ್ಕೃಷ್ಟ ಪರ್ಷಿಯನ್ ಮತ್ತು ಕಾಶ್ಮೀರಿ ರತ್ನಗಂಬಳಿಗಳು ನಮ್ಮಲ್ಲಿ ದೊರೆಯಲಿವೆ" ಎಂಬ ಜಾಹಿರಾತು ಫಲಕಗಳನ್ನು ತೂಗುಹಾಕಿದರು. 'ಟೈಮ್ಸ್' ಸಮಾಪ್ತಿ ವಾಕ್ಯದಲ್ಲಿ ಹೇಳಿದಂತೆ "ಈ ಅದ್ಭುತ ಕೌತುಕಗಳೆಲ್ಲವೂ ಕಾಶ್ಮೀರ ಯುದ್ಧವನ್ನು ಜಯಿಸಿಯಾಗಿದೆ ಎಂದು ಭಾರತ ಭಾವಿಸಿದೆ ಹಾಗೂ ಈ ಅಮೂಲ್ಯ ರತ್ನವನ್ನು ತನ್ನ ಮುಡಿಗೇರಿಸಿಕೊಳ್ಳಲಿದೆ" ಎಂಬುದನ್ನು ಸೂಚಿಸುವಂತಿತ್ತು.

V

ಕಾಶ್ಮೀರ ಯುದ್ಧ ಕೇವಲ ಒಂದು ಭೂಪ್ರದೇಶದ ಸ್ವಾಮ್ಯದ ಯುದ್ಧವಲ್ಲ. ಶತಮಾನದಷ್ಟು ಹಿಂದೆಯೇ ಜೋಸೆಫ್ ಕೊರ್ಬೆಲ್ ಹೇಳಿದಂತೆ– "ಎರಡು ಬಗೆಯ ಜೀವನಶೈಲಿ, ಎರಡು ಬಗೆಯ ರಾಜಕೀಯ ಪರಿಕಲ್ಪನೆಗಳು, ಎರಡು ಶ್ರೇಣಿಯ ಮೌಲ್ಯಗಳು, ಎರಡು ಬಗೆಯ ಆಧ್ಯಾತ್ಮಿಕ ಧೋರಣೆಗಳ ಸೆಣಸಾಟ, ರಾಜಿಗೆ ಸಗ್ಗದ, ರಾಜಿಸಾಧ್ಯವಿಲ್ಲದಂಥ ಹೋರಾಟ."

ಒಂದು ಕಡೆ ಭಾರತದ ಆದರ್ಶದ ಮೂಲ ಮಾದರಿ; ಮತ್ತೊಂದು ಕಡೆ ಪಾಕಿಸ್ತಾನದ ಆದರ್ಶದ ಮೂಲಮಾದರಿ. 1948ರ ವಸಂತ ಋತುವಿನಲ್ಲಿ ಬ್ರಿಟಿಷ್ ಪತ್ರಕರ್ತ ಕಿಂಗ್‌ಸ್ಲೇ ಮಾರ್ಟಿನ್ ಕಾಶ್ಮೀರದ ದೃಷ್ಟಿಯಿಂದ ಎರಡು ರಾಷ್ಟ್ರಗಳೂ ಹೇಗೆ ಕಾಣುತ್ತವೆ ಎಂಬುದನ್ನು ಅರಿತುಕೊಳ್ಳಲು ಉಭಯ ರಾಷ್ಟ್ರಗಳಿಗೂ ಭೇಟಿಯಿತ್ತ. ಕಾಶ್ಮೀರ ಭಾರತದೊಂದಿಗೆ ಸೇರ್ಪಡೆಯಾಗುವುದು ನ್ಯಾಯಯುತವಾದುದೆಂದು ಭಾರತೀಯರು ಒಪ್ಪಿದ್ದರು; ಆದರೆ, ದಾಳಿಕಾರರಿಗೆ ಸಹಾಯಹಸ್ತ ಚಾಚಿದ ಪಾಕಿಸ್ತಾನದ ಬಗ್ಗೆ ಅವರು ಕಹಿ ಭಾವನೆ ಹೊಂದಿದ್ದರು. ಅವರಿಗೆ ಕಾಶ್ಮೀರಿಗಳ ಧರ್ಮ ಸಂಪೂರ್ಣವಾಗಿ ಅಸಂಗತವಾಗಿತ್ತು. ಶೇಖ್ ಅಬ್ದುಲ್ಲಾ ತುರ್ತು ಪರಿಸ್ಥಿತಿಯ ಆಡಳಿತದ ಮುಖ್ಯಸ್ಥರಾಗಿ ಅತ್ಯಂತ ಜನಾದರಣೀಯರಾಗಿದ್ದ ರೆಂಬುದೇ, ಭಾರತ ಎಂದರೆ ಹಿಂದೂಸ್ತಾನ ಮಾತ್ರವಲ್ಲ ಎಂಬುದಕ್ಕೆ ಸಾಕ್ಷಿಯಾಗಿತ್ತು. ನೆಹರೂ ಅವರು ಹೆಚ್ಚು ಒತ್ತುಕೊಟ್ಟು ಹೇಳಿದಂತೆ, ಅಲ್ಪಸಂಖ್ಯಾತರು ಸ್ವತಂತ್ರವಾಗಿ, ಸುರಕ್ಷತೆಯಿಂದ ಬಾಳಲು ಸಾಧ್ಯವಾಗುವಂಥ ಪ್ರಜಾಸತ್ತಾತ್ಮಕ ವ್ಯವಸ್ಥೆಯಾದ ಭಾರತವನ್ನು ಹಲವಾರು ಮಂದಿ ಮುಸ್ಲಿಮರು ಸ್ವಯಂ ಸ್ಫೂರ್ತಿಯಿಂದ ಆಯ್ಕೆ ಮಾಡಿಕೊಂಡಿದ್ದರು.

ಕಿಂಗ್‌ಸ್ಲೆ ಮಾರ್ಟಿನ್ ಗಡಿದಾಟಿ ಬಂದಾಗ ಚಿತ್ರ ಸಂಪೂರ್ಣ ಭಿನ್ನವಾಗಿತ್ತು. ಪಾಕಿಸ್ತಾನ ದೃಷ್ಟಿಕೋನದಿಂದ ಅದೊಂದು ವಿಭಿನ್ನ ಚಿತ್ರವಾಗಿತ್ತು. ಆತ ಭೇಟಿ ಮಾಡಿದ

ವ್ಯಕ್ತಿಗಳ ಬಂಧು-ಮಿತ್ರರು ಹಿಂದೂಗಳು ಮತ್ತು ಸಿಖ್ಖರಿಂದ ಹತರಾಗಿದ್ದರು. ಪೂಂಛ್‌ನಲ್ಲಿ ಬಂಡಾಯದೊಂದಿಗೆ ಪಾಕಿಸ್ತಾನಿ ವಿವಾದ ಪ್ರಾರಂಭವಾಯಿತು. ಇದನ್ನು ಭಾರತದಲ್ಲಿ ಬಹುಮಟ್ಟಿಗೆ ಅಯೋಗ್ಯವೆಂಬಂತೆ ಮರೆತುಬಿಡಲಾಯಿತು. ಕರಾಚಿ ಮತ್ತು ಲಾಹೋರ್‌ಗಳಲ್ಲಿ ಜನ ಗಡಿನಾಡಿನಿಂದ ಬಂದ ದಾಳಿಕಾರರ ಬಗ್ಗೆ ಸಂಪೂರ್ಣ ಸಹಾನುಭೂತಿ ಹೊಂದಿದ್ದರು. ಈ ಜನರ ದೃಷ್ಟಿಯಲ್ಲಿ ದಾಳಿಕಾರರು "ಇಸ್ಲಾಂ ಪೀಡಕರ ವಿರುದ್ಧ ಧರ್ಮಯುದ್ಧ" ನಡೆಸುತ್ತಿದ್ದರು. ಮಾರ್ಟಿನ್ಸ್‌ನ ತೀರ್ಮಾನಗಳನ್ನು ಆಸ್ಟ್ರೇಲಿಯಾದ ಸಮರ ವರದಿಗಾರ ಅಲನ್ ಮೂರ್‌ಹೆಡ್ ಅನುಮೋದಿಸಿದ್ದಾನೆ. ಪಾಕಿಸ್ತಾನಕ್ಕೆ ಭೇಟಿಕೊಟ್ಟಿದ್ದ ಅಲನ್ ಮೂರ್‌ಹೆಡ್‌ಗೆ ಅಲ್ಲಿ ಕಂಡುಬಂದದ್ದು: "ಕಾಶ್ಮೀರ ಘರ್ಷಣೆಯನ್ನು ಮುಸ್ಲಿಂ ಧರ್ಮಯುದ್ಧವೆಂದೇ ಪರಿಗಣಿಸಿದ್ದರು. ಎಲ್ಲೆಲ್ಲೂ ದೆಹಲಿ ವಿರುದ್ಧ ಕೋಪತಾಪದ ಮಾತುಗಳು. ಎಲ್ಲ ಕಡೆ ಮಿಲಿಟರೀ ನೇಮಕಾತಿ ನಡೆದಿತ್ತು. ಮುಸ್ಲಿಮರ ವಿಜಯದ ಬಗ್ಗೆ ಸಂಭ್ರಮ ಸಡಗರ ಎಲ್ಲೆಡೆ ವ್ಯಕ್ತವಾಗುತ್ತಿತ್ತು."

ಪಾಕಿಸ್ತಾನಿ ರಾಷ್ಟ್ರ ಹಾಗೂ ಅದರ ಸಿದ್ಧಾಂತದ ದುರ್ಬಲತೆ ಅದರ ಪ್ರಮುಖ ನಾಯಕರುಗಳ ಚಂಚಲ ಮನಸ್ಕತೆಯಲ್ಲಿ, ಅಸ್ಥಿರ ವ್ಯಕ್ತಿತ್ವಗಳಲ್ಲಿ ಮೂರ್ತವಾಗಿತ್ತು. ಗೌರ್ನರ್ ಜನರಲ್ ಎಂ.ಎ. ಜಿನ್ನಾ ಗುಜರಾತಿಯಾಗಿದ್ದು ಪಾರ್ಸಿ ಮಹಿಳೆಯನ್ನು ಮದುವೆಯಾಗಿದ್ದರು. ಪ್ರಧಾನಮಂತ್ರಿ ಲಿಯಾಕತ್ ಅಲೀಖಾನ್ ಯುನೈಟೆಡ್ ಪ್ರಾವಿನ್ಸ್‌ನ ಶ್ರೀಮಂತ ಕುಟುಂಬದವನಾಗಿದ್ದು ಕ್ರಿಶ್ಚಿಯನ್ ಮಹಿಳೆಯನ್ನು ಮದುವೆಯಾಗಿದ್ದ. ಇವರಿಬ್ಬರೂ ನಿಜವಾದ ಅರ್ಥದಲ್ಲಿ ಅನುಷ್ಠಾನಶೀಲ ಮುಸ್ಲಿಮರಾಗಿರಲಿಲ್ಲ. ಪಾಕಿಸ್ತಾನದ ಆಡಳಿತ ಸೇವೆಯಲ್ಲಿದ್ದ ಹಿರಿಯ ಅಧಿಕಾರಿಗಳು ಜಿನ್ನಾ ಮತ್ತು ಲಿಯಾಕತ್‌ರಂತೆ 'ಮೊಹಾಜಿರ್'ಗಳಾಗಿದ್ದರು. ಅಂದರೆ ವಲಸಿಗರಾಗಿದ್ದು ಇವರ ಪೂರ್ವಜರ ಆಸ್ತಿಪಾಸ್ತಿ, ಮನೆ ಮಠ ಭಾರತದಲ್ಲಿದ್ದವು. ಆಡಳಿತ ವರ್ಗದ ಮೂಲ ಬೇರುಗಳು ಈಗಿನ ಅವರ ರಾಷ್ಟ್ರದಲ್ಲಿರಲಿಲ್ಲ. ಇದು, ಕಾಶ್ಮೀರವನ್ನು ಪಾಕಿಸ್ತಾನದ ಅಂಗವಾಗಿಸುವ ಅವರ ಉತ್ಕಟ ಬಯಕೆಗೆ ಕಾರಣವಿರಬಹುದು ಎಂದು ಸಂಶಯಪಟ್ಟವರೂ ಉಂಟು.

ಇದೆಲ್ಲ ಏನೇ ಇದ್ದರೂ ನವಭಾರತ ರಾಷ್ಟ್ರ ದಷ್ಟಪುಷ್ಟವಾಗೇನೂ ಇರಲಿಲ್ಲ. ಕಾಶ್ಮೀರದಲ್ಲಿ ಯುದ್ಧ ಮಾಡುತ್ತ ಅಸುನೀಗಿದ ಜಾತ್ಯತೀತ ವೀರ ಯೋಧನಾದ ಮುಸ್ಲಿಂ ಅಧಿಕಾರಿಯೊಬ್ಬನನ್ನು ಪವಿತ್ರಾತ್ಮನನ್ನಾಗಿಸಿದ್ದು ಅದರ ಅಭದ್ರತೆಯನ್ನು ರುಜುವಾತುಗೊಳಿಸುತ್ತದೆ. ಭಾರತದ ಸೈನ್ಯದಲ್ಲಿ ಎಲ್ಲ ಧರ್ಮೀಯರೂ ಇದ್ದರು, ಪಾಕಿಸ್ತಾನದ ಸೇನೆಯಲ್ಲಿ ಇರಲಿಲ್ಲ ಎಂಬುದು ದಿಟ. ಭಾರತದ ಸೇನೆಯ ಹಿರಿಯ ದಂಡನಾಯಕರುಗಳ ಸ್ಥಾನದಲ್ಲಿ ಒಬ್ಬ ಸಿಖ್, ಒಬ್ಬ ಪಾರ್ಸಿ ಹಾಗೂ ಇಬ್ಬರು ಕೊಡವರು ಇದ್ದರು. ಕೊಡವರು ದಕ್ಷಿಣ ಭಾರತದ ಬೆಟ್ಟಗಾಡು ಸಮುದಾಯದವರಾಗಿದ್ದು, ಈ ಸಮುದಾಯ 'ಅಹಿಂದು'ವೆಂದೇ ತನ್ನನ್ನು ಬಿಂಬಿಸಿಕೊಳ್ಳಲು ಇಚ್ಛಿಸುತ್ತದೆ. ಆದಾಗ್ಯೂ ಪೂಜ್ಯ ಭಾವನೆಯಿಂದ ಕಾಣಲಾದ ದಂಡನಾಯಕ ಮುಸ್ಲಿಂ ಆಗಿದ್ದರು. ಈತ ಬ್ರಿಗೆಡಿಯರ್ ಉಸ್ಮಾನ್. ಅಲಹಾಬಾದ್ ಮತ್ತು ಇಂಗ್ಲೆಂಡಿನ

ಸ್ಯಾಂಡ್‌ಹರ್ಸ್ಟ್ ಸೈನಿಕ ಶಿಕ್ಷಣ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದ ಉಸ್ಮಾನ್ ವಿಭಜನೆ ಕಾಲದಲ್ಲಿ ಭಾರತದಲ್ಲೇ ಉಳಿಯಲು ನಿರ್ಧರಿಸಿದ್ದರು. ಪಾಕಿಸ್ತಾನ ಈತನನ್ನು 'ಕಾಫಿರ್' ಎಂದು ಕರೆದಿತ್ತು. ಆಜಾದ್ ಕಾಶ್ಮೀರ ಸರ್ಕಾರ ಈತನನ್ನು ಜೀವಂತವಾಗಿ ಹಿಡಿದುಕೊಟ್ಟವರಿಗೆ ಅಥವಾ ಮೃತದೇಹ ತಂದುಕೊಟ್ಟವರಿಗೆ ಐವತ್ತು ಸಾವಿರ ರೂಪಾಯಿ ಬಹುಮಾನ ಘೋಷಿಸಿತ್ತು.

1948ರ ಜನವರಿ-ಫೆಬ್ರುವರಿಯಲ್ಲಿ ಬ್ರಿಗೇಡಿಯರ್ ಉಸ್ಮಾನ್ ಮತ್ತು ಅವರ ಸೈನಿಕರು ನೌಶೇರಾದಲ್ಲಿ ಉಗ್ರಕಾಳಗದಲ್ಲಿ ಅತಿಕ್ರಮಣಕಾರರನ್ನು ಹಿಮ್ಮೆಟ್ಟಿಸಿದ್ದರು. ಇದೇ ವರ್ಷ ಜುಲೈನಲ್ಲಿ ಉಸ್ಮಾನ್ ಯುದ್ಧ ರಂಗದಲ್ಲಿ ಮಡಿದರು. ಇವರ ಮರಣ ಕುರಿತು ಭಾರತದ ಪತ್ರಕರ್ತರೊಬ್ಬರು ಈ ರೀತಿ ಬರೆದಿದ್ದಾರೆ: "ಅಪೂರ್ವ ಬುದ್ಧಿಶಕ್ತಿಯ ಅಚಲ ದೇಶಭಕ್ತಿಯ ಅಮೂಲ್ಯ ಜೀವವೊಂದು ಕೋಮು ಅಂಧಾಭಿಮಾನಕ್ಕೆ ಬಲಿಯಾಗಿದೆ. ಬ್ರಿಗೇಡಿಯರ್ ಉಸ್ಮಾನರ ಶ್ಲಾಘನೀಯ ವೀರ ದೃಷ್ಟಾಂತ ಸ್ವತಂತ್ರ ಭಾರತಕ್ಕೆ ಶಾಶ್ವತ ಸ್ಫೂರ್ತಿ ಮೂಲವಾಗಲಿದೆ". ಉಸ್ಮಾನರ ಧೀರಮರಣದ ಬಗ್ಗೆ ನೆಹರೂ ಮೊದಲಾದ ಕಾಂಗ್ರೆಸ್ ನಾಯಕರುಗಳಿಂದ ಹಿಡಿದು ದೇಶದ ಅನೇಕ ಮಂದಿ ಗಣ್ಯರು ಶೋಕ ಸಂತಾಪ ವ್ಯಕ್ತಪಡಿಸಿ ಅವರ ಗುಣಗಾನ ಮಾಡಿದ್ದರು. ಅವರೊಬ್ಬ ಮದ್ಯಪಾನ ಮಾಡದ, ಧೂಮಪಾನ ಮಾಡದ ಸಸ್ಯಾಹಾರಿ ಸೈನ್ಯಾಧಿಕಾರಿಯಾಗಿದ್ದರೆಂದು ಭಾರತೀಯರಿಗೆ ಮನವರಿಕೆ ಮಾಡಿಕೊಡಲಾಯಿತು. ಉಸ್ಮಾನರ ಮೃತದೇಹವನ್ನು ಕಾಶ್ಮೀರದಿಂದ ದೆಹಲಿಗೆ ತಂದು ಪೂರ್ಣ ಮಿಲಿಟರಿ ಗೌರವಗಳೊಂದಿಗೆ ಸಮಾಧಿ ಮಾಡಲಾಯಿತು. ಹಿಂದಿನ ತಲೆಮಾರಿನ ರಾಷ್ಟ್ರೀಯವಾದಿ ಮುಸ್ಲಿಂ ನಾಯಕ ಡಾ.ಎಂ.ಎ. ಅನ್ಸಾರಿ ಅವರ ಸಮಾಧಿ ಪಕ್ಕದಲ್ಲೇ ಉಸ್ಮಾನರನ್ನು ಸಮಾಧಿ ಮಾಡಲಾಯಿತು. ಶೇಖ್ ಅಬ್ದುಲ್ಲಾ ಅವರು ಭಾರತದ ರಾಜಕಾರಣದಲ್ಲಿ ಏನೆಲ್ಲ ಆಗಿದ್ದರೋ ಭಾರತದ ಸೇನೆಯಲ್ಲಿ ಉಸ್ಮಾನರು ಅದೆಲ್ಲದರ ಮೂರ್ತಿವೆತ್ತಂತಿದ್ದರು. ಅವರು ಭಾರತದ ಜಾತ್ಯತೀತತೆಯ ಸಂಕೇತವಾಗಿದ್ದರು. ಇದಕ್ಕೆ ವ್ಯತಿರಿಕ್ತವಾದ ಧಾರ್ಮಿಕ ಉದ್ಧಟತನದ ನಡುಗಡ್ಡೆಯಾದ ಪಾಕಿಸ್ತಾನದ ಇನ್ನೊಂದು ಮುಖವಾಗಿದ್ದರು.

ಎರಡೂ ಕಡೆ ಕಾಶ್ಮೀರ ಯುದ್ಧದಲ್ಲಿ ಹಣ ಹಾಗೂ ಮಾನವ ಸಂಪತ್ತನ್ನು ತೊಡಗಿಸಲಾಗಿತ್ತು. ಜೊತೆಗೆ ರಾಷ್ಟ್ರೀಯತೆ ಕುರಿತ ತಮ್ಮ ತತ್ವ ಆದರ್ಶಗಳನ್ನು ಪಣವಾಗಿರಿಸಿದ್ದರು. ಮುಂಬಯಿಯ "ಕರೆಂಟ್" ಸಾಪ್ತಾಹಿಕ ಏರ್ಪಡಿಸಿದ್ದ, ಕಾಶ್ಮೀರದ ಭವಿಷ್ಯ ಕುರಿತ ವಿಚಾರ ಸಂಕಿರಣವೊಂದರಲ್ಲಿ ಈ ತತ್ವಾದರ್ಶಗಳ ಸೈದ್ಧಾಂತಿಕ ಸಂಘರ್ಷವನ್ನು ಬಿಂಬಿಸಲಾಯಿತು. ಈ ಸಂಘರ್ಷದ ಚಿತ್ರವನ್ನು ಮಂಡಿಸಿದವರು ಇಬ್ಬರು ಅಗ್ರೇಸರು. ಇಬ್ಬರೂ ಪತ್ರಕರ್ತರು. ಒಬ್ಬ ಮುಸ್ಲಿಂ, ಮತ್ತೊಬ್ಬ ಭಾರತೀಯ. ಇವರಿಬ್ಬರಿಗೂ ಉತ್ತರಿಸುವಂತೆ ಒಂದು ಪ್ರಶ್ನೆಯನ್ನು ಒಡ್ಡಲಾಯಿತು: ಜನಮತಗಣನೆ ನಡೆಸುವುದರಲ್ಲಿ ವಿಶ್ವಸಂಸ್ಥೆ ಯಶಸ್ವಿಯಾದರೆ ಕಾಶ್ಮೀರಿಗಳು ಯಾರ ಪರ ಮತಹಾಕುವರು?

ಭಾರತದ ಪರವಾಗಿ ಮಾತನಾಡಿದವರು ಪ್ರತಿಭಾವಂತ ಕಾದಂಬರಿಕಾರ ಹಾಗೂ ಚಲಚ್ಚಿತ್ರ ಕಥೆಗಾರ ಖ್ವಾಜಾ ಅಹಮದ್ ಅಬ್ಬಾಸ್. ಕಾಶ್ಮೀರದ ಒಟ್ಟು ಜನಸಂಖ್ಯೆಯಲ್ಲಿ ನಾಲ್ಕನೇ ಒಂದು ಭಾಗದಷ್ಟು ಜನ ಸಂಪೂರ್ಣವಾಗಿ ಶೇಖ್ ಅಬ್ದುಲ್ಲಾ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಬೆಂಬಲಿಗರಾಗಿದ್ದಾರೆ. ಇವರೆಲ್ಲ ರಾಜಕೀಯವಾಗಿ ಪ್ರಜ್ಞಾವಂತರು ಹಾಗೂ ಪ್ರಗತಿಶೀಲ ಮನೋಭಾವದವರು. ಇನ್ನೊಂದು ಕಾಲು ಪಾಲು ಜನ ಶೇಖ್ ಅಬ್ದುಲ್ಲಾ ವಿರೋಧಿಗಳು. ಇವರು ಸಂಪೂರ್ಣವಾಗಿ ಪಾಕಿಸ್ತಾನ ಸಿದ್ಧಾಂತದ ಬೋಧನೆಗೊಳಗಾದವರು. ಇನ್ನುಳಿದ ಅರ್ಧದಷ್ಟು ಮತದಾರರು ಯಾವ ನಿರ್ಧಾರಕ್ಕೂ ಬಾರದೇ ಇರುವವರು. ಇವರು ಯಾವ ಕಡೆ ಬೇಕಾದರೂ ಹೋಗಬಹುದು. ಈ ಡೋಲಾಯಮಾನದ ಮತದಾರರು ಶೇಖ್ ಅಬ್ದುಲ್ಲಾರಿಂದಲೂ ಆಕರ್ಷಿತರು; ಅಂತೆಯೇ ಇಸ್ಲಾಂ ಅಪಾಯದಲ್ಲಿದೆ ಎಂಬ ಬೊಬ್ಬೆಗೆ ಪಕ್ಕಾಗುವವರೂ ಹೌದು. ಜನಮತಗಣನೆಯ ದಿನ ಬಂದಾಗ, ದಾಳಿಕಾರರ ಕ್ರೌರ್ಯ, ಹಿಂಸಾಚಾರಗಳ ಕಹಿನೆನಪು ಹಾಗೂ ಜಾತ್ಯತೀತತೆಯ, ಪ್ರಗತಿಶೀಲ ಸಿದ್ಧಾಂತದ ಆಕರ್ಷಣೆ ತಕ್ಕಡಿಯನ್ನು ಭಾರತದ ಪರ ವಾಲಿಸುವುದೆಂಬುದು ಅಬ್ಬಾಸ್ ಅವರ ಅನ್ನಿಸಿಕೆಯಾಗಿತ್ತು. ಆದರೆ, ನಿರಾಯಾಸಕರವೂ ದೃಢವೂ ಆದ ವಿಜಯ ಸಾಧಿಸಬೇಕಾದರೆ ಮಹಾರಾಜರ ವಂಶವನ್ನು ಕಿತ್ತೊಗೆಯಬೇಕು, ಆರ್ಥಿಕ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಜಾರಿಗೆ ತರಲು ಶೇಖ್ ಅಬ್ದುಲ್ಲಾರಿಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕು ಎಂಬುದು ಅಬ್ಬಾಸರ ವಾದವಾಗಿತ್ತು.

ಮುಂದಿನ ವಾರ ಮಾತನಾಡಿದವರು ಕರಾಚಿಯ ಪತ್ರಕರ್ತ ವಾರೆಸ್ ಇಶಾಕ್ ಎಂಬುವರು. ಧರ್ಮದ ಸೆಳೆತದಿಂದಾಗಿ ಜನಮತಗಣನೆಯಲ್ಲಿ ಪಾಕಿಸ್ತಾನದ ವಿಜಯ ಶತಃಸಿದ್ಧವೆಂಬುದು ಈತನ ನಂಬಿಕೆ. ಇಸ್ಲಾಂ ಕೇವಲ ಒಂದು ಧರ್ಮವಲ್ಲ. ಅದೊಂದು ಸಂಸ್ಕೃತಿ, ಅದೊಂದು ಜೀವನಶೈಲಿ ಎಂದು ಇವರ ವಾದ. ಒಂದೇ ಒಂದು ಸಂದರ್ಭದಲ್ಲಿ ಮಾತ್ರ ಕಾಶ್ಮೀರಿಗಳು ನಂಬಿಕೆಯ ಕರೆಯನ್ನು ಅಗೌರವಿಸಬಹುದು. ಆ ಸಂದರ್ಭವೆಂದರೆ, ಭಾರತ ತಾನು ಜಾತ್ಯತೀತ ರಾಷ್ಟ್ರವೆಂಬ ಹೆಗ್ಗಳಿಕೆಯನ್ನು ಅದಕ್ಕನುಸಾರವಾಗಿ ಬಾಳಿ ಬದುಕಿ ಸಾಬೀತುಗೊಳಿಸಬೇಕು. ಆದರೆ ಮಹಾತ್ಮ ಗಾಂಧಿಯವರ ನಿಧನದ ನಂತರ ಅಲ್ಪ ಸಂಖ್ಯಾತರ ಸ್ಥಿತಿಗತಿ ಕಳವಳಕಾರಿಯಾಗಿದೆ, ಅಪಾಯದ ತೂಗುಕತ್ತಿಗೆ ಸಿಲುಕಿದೆ. ವಿಶೇಷವಾಗಿ ಹೇಳುವುದಾದರೆ, ಹಿಂದೂ ದುರಭಿಮಾನ ಸಂಘಟನೆಯಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೇಲೆ ನಿಷೇಧವನ್ನು ತೆರವುಗೊಳಿಸಿದ ನಂತರ ಭಾರತದಾದ್ಯಂತ ಹಾಗೂ ವಿಶೇಷವಾಗಿ ಕಾಶ್ಮೀರದಲ್ಲಿರುವ ಮುಸ್ಲಿಮರಿಗೆ ಒಂದು ಅಂಶ ಖಚಿತವಾಗಿ ಮನವರಿಕೆಯಾಗಿದೆ. ಅದೆಂದರೆ, ಭಾರತದಲ್ಲಿ ತಮ್ಮ ಸ್ಥಾನಮಾನ ಶಾಶ್ವತವಾಗಿ ದಮನ-ದಬ್ಬಾಳಿಕೆಗೊಳಪಟ್ಟ ಅಲ್ಪಸಂಖ್ಯಾತರದಾಗುವುದು. ತಾವು ಶಾಶ್ವತವಾಗಿ ತುಳಿತಕ್ಕೊಳಪಟ್ಟ ಅಲ್ಪಸಂಖ್ಯಾತರಾಗಿಯೇ ಉಳಿಯುವೆವು ಎಂಬುದಾಗಿದೆ. ಆದ್ದರಿಂದ, ನಿರ್ಣಾಯಕ ಘಟ್ಟ ಬಂದಾಗ ಬಹುಪಾಲು ಕಾಶ್ಮೀರಿಗಳು "ಇಸ್ಲಾಮಿಕ್ ರಾಷ್ಟ್ರಗಳ ಕೂಟ"ದೊಂದಿಗೆ ಸೇರಿಕೊಳ್ಳಲು ಮತಹಾಕುವರು ಎಂದು ಕರಾಚಿ ಪತ್ರಕರ್ತನು ದೃಢವಾಗಿ ಪ್ರತಿಪಾದಿಸಿದ.

VI

1947-48ರ ಘರ್ಷಣೆಯಲ್ಲಿ ಉಳಿದದ್ದು ಕಳೆದುಕೊಂಡವರಷ್ಟೇ ಎಂದು ಯಾರಾದರೂ ಹೇಳಬಹುದು. ಇಲ್ಲಿ ಸಂದಿಗ್ಧತೆಯೆಂದರೆ, ಇಡಿಯಾಗಿ ಕಾಶ್ಮೀರವನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಎರಡೂ ರಾಷ್ಟ್ರಗಳು ಜಯಶಾಲಿಯಾಗಿಲ್ಲದೇ ಇರುವುದು. ಆಗ ರಾಜ್ಯದ ಜನತೆಗೆ ಎರಡೂ ಕಡೆಯಿಂದ ನೋವಾಯಿತು. ಈಗಲೂ ನೋವು ತಪ್ಪಿದ್ದಲ್ಲ. ಆದ್ದರಿಂದಲೇ ಫಿತೂರಿಯ ಸಂಚಿನ ಪ್ರತಿಪಾದನೆಗಳು ಕೇಳಿಬರುತ್ತಲೇ ಇವೆ. ವಿಷಯವನ್ನು ವಿಶ್ವಸಂಸ್ಥೆ ವೇದಿಕೆಗೆ ಒಯ್ದ ಬ್ರಿಟಿಷ್ ಗೌರ್ನರ್ ಜನರಲ್ ಫಿತೂರಿ ಇದು. ಹಾಗೂ ಭಾರತದ ಸೇನೆಯ ದಂಡನಾಯರಾಗಿದ್ದ ಬ್ರಿಟಿಷ್ ಜನರಲ್ ಸಹ ಈ ಫಿತೂರಿಯಲ್ಲಿ ಭಾಗಿಯಾಗಿದ್ದಾನೆ. ಇವನು ಉತ್ತರ ಕಾಶ್ಮೀರದತ್ತ ನುಗ್ಗದಂತೆ ಭಾರತದ ಪಡೆಗಳನ್ನು ತಡೆದ ಎಂದು ಭಾರತ ಹೇಳುತ್ತದೆ. ಹೀಗೆ ಭಾರತ ಬ್ರಿಟಿಷರತ್ತ ಬೆರಳು ಮಾಡುತ್ತದೆ. ಪಾಕಿಸ್ತಾನೀಯರು ಮೌಂಟ್ ಬ್ಯಾಟನ್ನರನ್ನು ದೂಷಿಸುತ್ತಾರೆ. ಗುರುದಾಸಪುರ ಜಿಲ್ಲೆಯನ್ನು ಭಾರತಕ್ಕೆ ಬಳುವಳಿಯಾಗಿ ನೀಡುವಂತೆ ಮೌಂಟ್ ಬ್ಯಾಟನ್ ಸರ್ ಸಿರಿಲ್ ರ್‍ಯಾಡ್‌ಕ್ಲಿಫ್ ಅವರ ಮೇಲೆ ಪ್ರಭಾವ ಬೀರಿದನೆಂದೂ ಗುರುದಾಸಪುರ ನೀಡಿಕೆಯಿಂದಾಗಿ ಕಾಶ್ಮೀರದೊಳಕ್ಕೆ ಭಾರತದ ಹಾದಿ ಸುಗಮವಾಗಿಸುವುದು ಮೌಂಟ್ ಬ್ಯಾಟನ್ ನಡೆಸಿದ ಫಿತೂರಿಯೆಂದೂ ಪಾಕಿಸ್ತಾನವೂ ಬ್ರಿಟಿಷರತ್ತ ಬೆರಳು ಮಾಡುತ್ತದೆ. ಹಾಗೆಯೇ, ದಾಳಿಕಾರರಿಗೆ ಇನ್ನೂ ಹೆಚ್ಚಿನ ಸಹಾಯ ಒದಗಿಸಲಿಲ್ಲವೆಂದು ಪಾಕಿಸ್ತಾನಿಯರು ತಮ್ಮ ಸರ್ಕಾರವನ್ನೂ ನಿಂದಿಸುತ್ತಾರೆ. 1998ರಲ್ಲಿ ಹಿರಿಯ ಸಿವಿಲ್ ಅಧಿಕಾರಿಯೊಬ್ಬರು ಈ ರೀತಿ ಪ್ರಲಾಪಿಸಿರುವುದುಂಟು:

> *"ಕಾಶ್ಮೀರವನ್ನು ವಶಕ್ಕೆ ತೆಗೆದುಕೊಳ್ಳಲು ಉಳಿದಿದ್ದ ಏಕೈಕ ಮಾರ್ಗವೆಂದರೆ ಧರ್ಮ ಯುದ್ಧದ ಕರೆಯ ಜೊತೆಗೆ ಮಿಂಚಿನ ವೇಗದಲ್ಲಿ ಹಠಾತ್ತನೆ ಕ್ಷಿಪ್ರದಾಳಿ ನಡೆಸುವುದೇ ಆಗಿತ್ತು. ಆಗ ಶತ್ರುವಿಗೆ ಆಘಾತದಿಂದ ಎಚ್ಚೆತ್ತುಕೊಳ್ಳುವ ಮುನ್ನವೇ 'ಎಲ್ಲ ಮುಗಿದು ಹೋಯಿತು, ಇನ್ನು ಚರ್ಚಿಸಿ ಪ್ರಯೋಜನವಿಲ್ಲ' ಎಂಬಂಥ ಸ್ಥಿತಿ ಉಂಟಾಗುತ್ತಿತ್ತು. ಗುಡ್ಡಗಾಡು ಜನರ ಅತಿಕ್ರಮಣ ಪೂರ್ವನಿಯೋಜಿತವಾಗಿದ್ದು ಭಾರತದ ಹುನ್ನಾರಗಳಿಗೆ ಇದೊಂದೇ ಮಾರ್ಗವೆಂದು ಭಾವಿಸಲಾಗಿತ್ತು ಹಾಗೂ ಪಾಕಿಸ್ತಾನ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಇದನ್ನು ನಿಯೋಜಿಸಲಾಗಿತ್ತು...ಗುಡ್ಡಗಾಡು ಅತಿಕ್ರಮಣಕಾರರ ದೋಷಪೂರಿತ ನಾಯಕತ್ವವೂ ಪಾಕಿಸ್ತಾನಕ್ಕೆ ಪ್ರತಿಕೂಲಕರ ಪರಿಸ್ಥಿತಿ ಉಂಟಾಗಲು ಕಾರಣವಾಯಿತು. ನಿರ್ಣಾಯಕವಾದ ಈ ಒಂದು ಪ್ರಮಾದಕ್ಕೆ ಅತಿಕ್ರಮಣದ ಸಂಘಟಕರೇ ಹೊಣೆಯಾಗಬೇಕಾಗುತ್ತದೆ."*

ನಿಯತ ವಿರಾಮಗಳ ನಡುವೆ ಕಾಶ್ಮೀರ ಈ ಪುಸ್ತಕದುದ್ದಕ್ಕೂ ಬರುತ್ತಲೇ ಇರುತ್ತದೆ. ಕಾಶ್ಮೀರ ವಿವಾದದ ಹುಟ್ಟು ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಕೆಲವು ಮಂದಿ ಆಗ ನೀಡಿರುವ ಭವಿಷ್ಯ ಸೂಚಕ ಮಾದರಿಯ ಹೇಳಿಕೆಗಳನ್ನು ಪ್ರಸ್ತಾಪಿಸುವುದರೊಂದಿಗೆ

ವಿವಾದದ ಮೂಲ ಶೋಧಿಸುವ ಈ ತಸಿಖಾಬರಹವನ್ನು ಸದ್ಯಕ್ಕೆ ಸಮಾಪ್ತಿಗೊಳಿಸುತ್ತೇನೆ. ಈ ಕೆಳಗೆ ಕೊಟ್ಟಿರುವ ಉಲ್ಲೇಖಗಳು 1990 ಅಥವಾ 2000ದಲ್ಲಿ ಮೂಡಿ ಬಂದ ಅಭಿಪ್ರಾಯಗಳಲ್ಲ. ಇವು ಘರ್ಷಣೆ ಶುರುವಾದ ಆರಂಭಿಕ ವರ್ಷಗಳಲ್ಲಿ ಮೂಡಿ ಬಂದ ಅಭಿಪ್ರಾಯಗಳಿಂದ ಹೆಕ್ಕಿ ತೆಗೆದಿರುವ ಉಲ್ಲೇಖಗಳಾಗಿವೆ.

- *ಕಾಶ್ಮೀರ, ಭಾರತ ಮತ್ತು ಪಾಕಿಸ್ತಾನಗಳ ಪತನಕ್ಕೆ ಕಾರಣವಾಗಬಹುದಾದಂಥ ಗಹನವಾದ ಅತಿದೊಡ್ಡ ಸಮಸ್ಯೆಯಾಗಿದೆ.*

  –ಹೆನ್ರಿ ಗ್ರಾಡಿ,
  ಭಾರತದಲ್ಲಿ ಅಮೆರಿಕ ರಾಯಭಾರಿ, ಜನವರಿ 1948.

- *ಎಲ್ಲಿಯವರೆಗೆ ಕಾಶ್ಮೀರ ವಿವಾದ ಮುಂದುವರಿಯುವುದೋ ಅಲ್ಲಿಯವರೆಗೆ ಅದು ಈ ಎರಡೂ ರಾಷ್ಟ್ರಗಳ ಮಿಲಿಟರಿ ಶಕ್ತಿ, ಆರ್ಥಿಕಶಕ್ತಿ, ಎಲ್ಲದಕ್ಕೂ ಮಿಗಿಲಾಗಿ, ಆಧ್ಯಾತ್ಮಿಕ ಶಕ್ತಿಗಳನ್ನು ಬರಿದು ಮಾಡಲಿದೆ.*

  –ಜನರಲ್ ಮೆಕ್‌ನ್ಯಾಟನ್
  ವಿಶ್ವಸಂಸ್ಥೆಯ ಮಧ್ಯಸ್ಥಿಕೆದಾರ, ಫೆಬ್ರುವರಿ 1950.

- *ಪಾಕಿಸ್ತಾನದ ಆರ್ಥಿಕ ಮತ್ತು ರಾಜಕೀಯ ಭದ್ರತೆಯ ದೃಷ್ಟಿಯಿಂದ ತುಂಬ ಮಹತ್ವದ್ದು. ಪಾಕಿಸ್ತಾನದ ವಿದೇಶಾಂಗ ನೀತಿ ಹಾಗೂ ರಕ್ಷಣಾ ನೀತಿಗಳು ಕಾಶ್ಮೀರ ವಿವಾದದ ಸುತ್ತಲೇ ಆವರಿಸಿಕೊಂಡಿವೆ. ...ಇದಕ್ಕಿಂತ ಮಿಗಿಲಾಗಿ, ಭಯಾನಕವಾದ ಪಂಜಾಬ್ ಹತ್ಯಾಕಾಂಡವೂ ಬೇಗ ಕಣ್ಮರೆಯಾಯಿತು. ಆದರೆ ಕಾಶ್ಮೀರ ವಿವಾದ ಭಾರತ-ಪಾಕಿಸ್ತಾನ ನಡುವಣ ಬಾಂಧವ್ಯದ ಪ್ರತಿಯೊಂದು ದಿಕ್ಕುದೆಸೆಗಳನ್ನೂ ವಿಷಪೂರಿತವಾಗಿಸಿದೆ.*

  –ರಿಚ್ಮಂಡ್ ಸೈಮಾಂಡ್ಸ್
  ಬ್ರಿಟನ್ನಿನ ಲೇಖಕ ಮತ್ತು ಸಮಾಜಸೇವಕ, 1950.

- *ಕಾಶ್ಮೀರ ವಿವಾದವನ್ನು ಹರಡದಂತೆ ಸ್ಥಳೀಯವಾಗಿ ತಡೆಗಟ್ಟಲಾಗದು. ಅದು, ವಿಶ್ವದಲ್ಲೇ ಅತ್ಯಂತ ಅಪಾಯಕಾರಿಯಾದ ಇಡೀ ಮುಸ್ಲಿಂ ಸಮುದಾಯವನ್ನು ಪ್ರಭಾವಿಸುವಂಥಾದ್ದು.*

  –ರಾಲ್ಫ್ ಬಂಚೆ,
  ವಿಶ್ವಸಂಸ್ಥೆಯ ಹಿರಿಯ ಅಧಿಕಾರಿ, ಫೆಬ್ರುವರಿ 1953.

○

5

ನಿರಾಶ್ರಿತರು ಮತ್ತು ಗಣರಾಜ್ಯ

ಭಾರತದಾದ್ಯಂತ ಎಲ್ಲ ಕಡೆಗಳಿಗೆ ನಿರಾಶ್ರಿತರನ್ನು ಕಳುಹಿಸಲಾಗುತ್ತಿದೆ. ಅವರು ಕೋಮುದ್ವೇಷವನ್ನು ಹಬ್ಬಿಸುತ್ತಾರೆ ಹಾಗೂ ಎಲ್ಲೆಡೆ ಬದ್ಧದ್ವೇಷ, ಕೆಟ್ಟ ಭಾವನೆಗಳನ್ನು ಕಲಕುತ್ತಾರೆ. ನಿರಾಶ್ರಿತರ ಯೋಗಕ್ಷೇಮವನ್ನು ನಾವು ನೋಡಿಕೊಳ್ಳಬೇಕು. ಆದರೆ ದ್ವೇಷದ ಸಾಂಕ್ರಾಮಿಕ ಹಬ್ಬದಂತೆ ತಪ್ಪಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಅದನ್ನು ಪೂರ್ತಿಯಾಗಿ ತಡೆಯಲಾಗದು. ಆದರೆ ಅದು ಕನಿಷ್ಠಮಟ್ಟ ಮೀರದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ.

–ಸಿ. ರಾಜಗೋಪಾಲಾಚಾರಿ,
ಬಂಗಾಳದ ಗೌರ್ನರ್, 4 ಸೆಪ್ಟಂಬರ್ 1947

ಗಾಂಧೀಜಿಯವರ ಗಾಯದ ಹುಣ್ಣುಗಳಿಂದ ಹರಿದ ರಕ್ತದಲ್ಲಿ ಮತ್ತು ಅವರ ನಿಧನದ ಸುದ್ದಿ ತಿಳಿದ ನಂತರ ಭಾರತೀಯ ನಾರಿಯರು ಹರಿಸಿದ ಕಣ್ಣೀರುಗಳ ಪ್ರವಾಹದಲ್ಲಿ 1947ರ ಶಾಪ ಕೊಚ್ಚಿ ಹೋಗಲಿ, ಆ ವರ್ಷದ ಘೋರ ದುರಂತ ಇತಿಹಾಸದಲ್ಲಿ ನಿದ್ರೆಗೈಯ್ಯಲಿ, ಅದು ವರ್ತಮಾನದಲ್ಲಿ ರಾಗೋದ್ರೇಕಗಳನ್ನು, ಭಾವನೆಗಳನ್ನು ಕೆರಳಿಸದಿರಲಿ.

–ಸಿ. ರಾಜಗೋಪಾಲಾಚಾರಿ, *20 ಮಾರ್ಚ್ 1948.*

I

ಭಾರತೀಯ ಕಲ್ಪನೆಯಲ್ಲಿ ಕುರುಕ್ಷೇತ್ರಕ್ಕೆ ವಿಶೇಷ ಸ್ಥಾನವಿದೆ. ಮಹಾಕಾವ್ಯವಾದ ಮಹಾಭಾರತದಲ್ಲಿ ವರ್ಣಿಸಲಾಗಿರುವ ಘನಘೋರ ಯುದ್ಧಗಳು ನಡೆದದ್ದು ಇಲ್ಲೇ. ಈ ಮಹಾಕಾವ್ಯದ ಪ್ರಕಾರ, ಪುರಾತನ ಇಂದ್ರಪ್ರಸ್ಥ (ಈಗಿನ ದೆಹಲಿ) ನಗರದ ವಾಯುವ್ಯ ದಿಕ್ಕಿನ

ಬಟ್ಟಂಬಯಲಾದ ಮೈದಾನದಲ್ಲಿ ಯುದ್ಧ ನಡೆಯಿತು. ಈ ಮೈದಾನವನ್ನು ಕುರುಕ್ಷೇತ್ರ ಎಂದು ಕರೆಯಲಾಯಿತು. ಇಂದಿಗೂ ಅದೇ ಹೆಸರು ಉಳಿದುಕೊಂಡಿದೆ.

ಮಹಾಭಾರತ ಕಾವ್ಯರಚನೆಯಾದ ಸಾವಿರಾರು ವರ್ಷಗಳ ನಂತರ, ಮಹಾಭಾರತ ಘಟಿಸಿದ ಬಟ್ಟಂಬಯಲು ಮೈದಾನ ಈಗ ಮತ್ತೊಂದು ಯುದ್ಧದ ಬಲಿಪಶುಗಳಾದ ಸಾವಿರಾರು ಮಂದಿಗೆ ಹಂಗಾಮಿ ಆಶ್ರಯತಾಣವಾಗಿದೆ. ಯುದ್ಧವೂ ಕೌರವ-ಪಾಂಡವರ ನಡುವೆಯಲ್ಲ, ಅಷ್ಟೇ ನಿಕಟಸಂಬಂಧಿ ಬಂಧುಗಳಾದ ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆಯಿತು. ಪಶ್ಚಿಮ ಪಂಜಾಬಿನಿಂದ ಓಡಿಬರುತ್ತಿದ್ದ ಹಿಂದೂಗಳು ಮತ್ತು ಸಿಖ್ಖರನ್ನು ಭಾರತ ಸರ್ಕಾರ ಕುರುಕ್ಷೇತ್ರದಲ್ಲಿ ವ್ಯವಸ್ಥೆ ಮಾಡಲಾಗಿದ್ದ ನಿರಾಶ್ರಿತರ ಶಿಬಿರಗಳಿಗೆ ಕಳುಹಿಸಿಕೊಟ್ಟಿತು. ಈ ಮೈದಾನದಲ್ಲಿ ಗುಡಾರಗಳ ಒಂದು ಬೃಹತ್ ನಗರವೇ ನಿರ್ಮಾಣಗೊಂಡಿತ್ತು. ಅಲೆಅಲೆಯಾಗಿ ಬರುತ್ತಿದ್ದ ನಿರಾಶ್ರಿತರಿಗೆ ಆಶ್ರಯ ನೀಡುವ ತಾಣವಾಗಿತ್ತು. ಕೆಲವೊಮ್ಮೆ ಒಂದೇ ದಿನದಲ್ಲಿ ಇಪ್ಪತ್ತು ಸಾವಿರದವರೆಗೆ ನಿರಾಶ್ರಿತರು ಬಂದದ್ದುಂಟು. ಶುರುವಿಗೆ, ಈ ಶಿಬಿರದಲ್ಲಿ ಹತ್ತು ಸಾವಿರ ಜನರಿಗೆ ಆಶ್ರಯ ಕಲ್ಪಿಸಲು ಯೋಜಿಸಲಾಗಿತ್ತು. ಆದರೆ ಇದಕ್ಕೆ ಮೂರು ಪಟ್ಟು ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲಾಯಿತು. ಅಮೆರಿಕದ ವೀಕ್ಷಕರೊಬ್ಬರು ಅಭಿಪ್ರಾಯ ಪಟ್ಟಿರುವಂತೆ "ಕೊನೆಯ ನಿರಾಶ್ರಿತನ ಆಗಮನಕ್ಕೂ ಮೊದಲು ಗುಡಾರಗಳನ್ನು ನಿರ್ಮಿಸುವುದರಲ್ಲಿ ಸೈನ್ಯ ಒಂದು ಪವಾಡವನ್ನೇ ಮಾಡಿತ್ತು." ಕುರುಕ್ಷೇತ್ರದ ಹೊಸನಿವಾಸಿಗಳಿಗಾಗಿ ಪ್ರತಿದಿನ 100 ಟನ್ ಗೋಧಿಹಿಟ್ಟು, ಜೊತೆಗೆ ಭಾರಿ ಪ್ರಮಾಣದಲ್ಲಿ ಅಕ್ಕಿ ಬೇಳೆ, ಉಪ್ಪು-ಮೆಣಸಿನಕಾಯಿ, ಎಣ್ಣೆ ತರಕಾರಿಗಳನ್ನೊಳಗೊಂಡ ಊಟತಿಂಡಿಗಳು ಸಿದ್ಧವಾಗುತ್ತಿದ್ದವು. ಈ ಊಟ ತಿಂಡಿಗಳನ್ನು ಸರ್ಕಾರ ಉಚಿತವಾಗಿ ಒದಗಿಸುತ್ತಿತ್ತು. ಈ ಮಹಾಕಾರ್ಯದಲ್ಲಿ ಭಾರತ ಮತ್ತು ವಿದೇಶಗಳ ಸಾಮಾಜಿಕ ಕಾರ್ಯಕರ್ತರ ಸಂಘಟನೆಗಳು, ಸಮಾಜ ಸೇವಕರು ಸರ್ಕಾರಕ್ಕೆ ನೆರವಾಗಿದ್ದರು. ಯುನೈಟೆಡ್ ಕೌನ್ಸಿಲ್ ಫಾರ್ ರಿಲೀಫ್ ಅಂಡ್ ವೆಲ್ಫೇರ್ (ಯು.ಸಿ.ಆರ್.ಡಬ್ಲ್ಯು) ಇಂಥ ಸಂಘಟನೆಗಳಲ್ಲಿ ಒಂದು.

ನಿರಾಶ್ರಿತರಿಗೆ ತಂಗಲು ಆಶ್ರಯ, ಊಟ-ತಿಂಡಿಗಳ ಜೊತೆಗೆ ಬಟ್ಟೆ ಬರೆಗಳನ್ನು ಒದಗಿಸಬೇಕಾಗಿತ್ತು. ಅವರ ಮನರಂಜನೆಗೂ ವ್ಯವಸ್ಥೆ ಮಾಡಬೇಕಾಗಿತ್ತು. ಚಳಿಗಾಲ ಸಮೀಪಿಸಿದಂತೆ, ಸಂಜೆರಾತ್ರಿಗಳು ಅಸಹನೀಯ ಚಳಿಯಿಂದ ಗದಗುಡಿಸುತ್ತವೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿತ್ತು. ಯುಸಿಆರ್‌ಡಬ್ಲ್ಯು ದೆಹಲಿಯಲ್ಲಿ ಫಿಲ್ಮ್ ಪ್ರೊಜೆಕ್ಟರುಗಳನ್ನು ಸಂಗ್ರಹಿಸಿತು. ಇವುಗಳನ್ನು ಕುರುಕ್ಷೇತ್ರದಲ್ಲಿ ಅಳವಡಿಸಿ ನಿರಾಶ್ರಿತರಿಗೆ, ಮಿಕಿ ಮೌಸ್, ಡೊನಾಲ್ಡ್ ಡಕ್ ಮೊದಲಾದ ಡಿಸ್ನಿಲ್ಯಾಂಡ್ ಚಿತ್ರಗಳನ್ನು ತೋರಿಸಲಾಯಿತು. ದೊಡ್ಡ ದೊಡ್ಡ ಬಟ್ಟೆಯ ಪರದೆಗಳ ಮೇಲೆ ಎರಡು ಬದಿಯಿಂದ ಚಲನಚಿತ್ರಗಳನ್ನು ಬಿಂಬಿಸಲು ವ್ಯವಸ್ಥೆ ಮಾಡಲಾಗಿತ್ತು. ಇದರಿಂದಾಗಿ ಒಮ್ಮೆಲೇ 15 ಸಾವಿರ ಜನ ಒಂದು ಚಲಚ್ಚಿತ್ರವನ್ನು ವೀಕ್ಷಿಸುವುದು ಸಾಧ್ಯವಾಯಿತು. ಈ ಚಲನಚಿತ್ರ ವೀಕ್ಷಣೆ ಎರಡು ಗಂಟೆಗಳ ಕಾಲ ಕಠೋರ ವಾಸ್ತವತೆಯಿಂದ ವಿಮುಕ್ತಿ ತಂದಿತ್ತು. "ಇದೊಂದು ಜೀವ ಉಳಿಸುವ ವ್ಯವಸ್ಥೆಯಾಗಿತ್ತು.

ನಿರಾಶ್ರಿತರು ಆ ಎರಡು ಗಂಟೆಗಳ ಹರ್ಷೋಲ್ಲಾಸದಲ್ಲಿ ತಮ್ಮ ಆಘಾತಕಾರಿ ಅನುಭವಗಳನ್ನು, ಕಷ್ಟನಷ್ಟಗಳನ್ನು, ಕೊರೆಯುವ ಚಳಿಯನ್ನು ಮರೆತರು. ಹೌದು ಅವರು ಹೊಡೆತಗಳಿಂದ ಜರ್ಝರಿತರಾಗಿದ್ದರು, ಮನೆ ಮಠ ಕಳೆದುಕೊಂಡು ನಿರಾಶ್ರಿತರಾಗಿದ್ದರು, ನೊಂದು ನಲುಗಿ ಹೋಗಿದ್ದರು. ಆದರೂ ಅವರಿಗೆ ನಕ್ಕು ನಲಿಯುವುದು ಸಾಧ್ಯವಾಗಿತ್ತು. ಇಲ್ಲಿ ಆಶಾದೀಪವಾಗಿತ್ತು" ಎಂದು ಸಮಾಜ ಸೇವಕರೊಬ್ಬರು ನುಡಿದಿದ್ದಾರೆ.

ಪಶ್ಚಿಮ ಪಂಜಾಬಿನಿಂದ ಬಂದ ನಿರಾಶ್ರಿತರಿಗಾಗಿ ಕುರುಕ್ಷೇತ್ರದಲ್ಲಿ ಸುಮಾರು ಇನ್ನೂರು ಶಿಬಿರಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಕೆಲವು ಮಂದಿ ನಿರಾಶ್ರಿತರು, ಅಧಿಕಾರ ಹಸ್ತಾಂತರ ದಿನಕ್ಕೆ ಮುಂಚಿತವಾಗಿಯೇ ಆಗಮಿಸಿದ್ದರು. ಇವರಲ್ಲಿ ಮೊದಲೇ ಆಸ್ತಿಪಾಸ್ತಿ ಮಾರಿ, ಬಂದ ಹಣದೊಂದಿಗೆ ವಲಸೆ ಬಂದ ದೂರದೃಷ್ಟಿಯ ವರ್ತಕರೂ ಇದ್ದರು. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ನಿರಾಶ್ರಿತರು ಬಂದದ್ದು 1947ರ ಆಗಸ್ಟ್ 15ರ ನಂತರ. ಇವರ ಮೈಮೇಲೆ ಒಂದು ತುಂಡು ಬಟ್ಟೆ ಮಾತ್ರ ಇತ್ತು. ಬೇರೇನೂ ಇವರಲ್ಲಿರಲಿಲ್ಲ. ಇವರೆಲ್ಲ ರೈತರು. ಮಾನ ಮರ್ಯಾದೆಯಿಂದ ಬಾಳುವ ಸ್ಥಿತಿ ಕಲ್ಪಿಸುವ ಭರವಸೆ ನೀಡಿದಲ್ಲಿ ಪಾಕಿಸ್ತಾನದಲ್ಲೇ ಉಳಿಯುವ ಗಟ್ಟಿ ನಿರ್ಧಾರ ತಾಳಿ ಕೊನೆಗಳಿಗೆಯವರೆಗೆ ಇಂಥ ಭರವಸೆಯ ಎದುರು ನೋಡುತ್ತಾ ಕಾದುನಿಂತವರು. ಆದರೆ ಸೆಪ್ಟಂಬರ್-ಅಕ್ಟೋಬರಿನಲ್ಲಿ ಪಂಜಾಬಿನಲ್ಲಿ ಹಿಂಸಾಚಾರ ದಳ್ಳುರಿಯಂತೆ ವ್ಯಾಪಿಸಿದಾಗ ಇವರು ತಮ್ಮ ಗಟ್ಟಿ ನಿರ್ಧಾರವನ್ನು ಕೈಬಿಡಬೇಕಾಯಿತು. ಹಿಂದೂಗಳು ಮತ್ತು ಸಿಖ್ಖರು ದೊಂಬಿಯಿಂದ ತಪ್ಪಿಸಿಕೊಂಡು ರಸ್ತೆ, ರೈಲು, ಸಮುದ್ರ ಯಾನಗಳ ಮೂಲಕ, ಕಾಲ್ನಡಿಗೆಯಲ್ಲಿ ಭಾರತಕ್ಕೆ ವಲಸೆ ಬಂದರು. ಅಷ್ಟರಮಟ್ಟಿಗೆ ಇವರು ಅದೃಷ್ಟಶಾಲಿಗಳಾಗಿದ್ದರು.

ಕುರುಕ್ಷೇತ್ರವೇನಿದ್ದರೂ ಹಂಗಾಮಿ ತಂಗುದಾಣ ವ್ಯವಸ್ಥೆಯಾಗಿತ್ತು. ನಿರಾಶ್ರಿತರಿಗೆ ಉದ್ಯೋಗದ ವ್ಯವಸ್ಥೆಯಾಗಬೇಕಿತ್ತು. ಕಾಯಂಬಿಡಾರದ ವ್ಯವಸ್ಥೆಯಾಗಬೇಕಿತ್ತು. ಡಿಸೆಂಬರ್ 1947ರಲ್ಲಿ ಕುರುಕ್ಷೇತ್ರಕ್ಕೆ ಭೇಟಿ ನೀಡಿದ್ದ ಪತ್ರಕರ್ತನೊಬ್ಬ ಅದನ್ನು 300,000 ಜನರನ್ನೊಳಗೊಂಡ ಕೆಲಸವಿಲ್ಲದೆ ಕುಳಿತ ಹುಚ್ಚರ ನಗರ ಎಂದು ವರ್ಣಿಸಿದ್ದಾನೆ. ಕುರುಕ್ಷೇತ್ರ ಶಿಬಿರಗಳಲ್ಲಿ ರೈತಾಪಿ ನಿರಾಶ್ರಿತರ ಒಂದೇ ಒಂದು ಬೇಡಿಕೆ ಇತ್ತು. ಸಾಗುವಳಿ ಮಾಡಲು ನಮಗೆ ಜಮೀನು ಕೊಡಿ ಎಂಬುದು ಅವರ ಒಕ್ಕೊರಲಿನ ಕೂಗಾಗಿತ್ತು. "ನಮಗೊಂದಿಷ್ಟು ಜಮೀನು ಕೊಡಿ. ನಾವು ಸಾಗುವಳಿ ಮಾಡುತ್ತೇವೆ." ಇದೇ ಅವರ ಕೂಗು. "ಭೂಮಿ ಎಲ್ಲೇ ಕೊಟ್ಟರೂ ಪರವಾಗಿಲ್ಲ. ಆದರೆ ಅದು ಕೃಷಿಯೋಗ್ಯವಾಗಿರಬೇಕು" ಎಂದು ಜಮೀನಿಗಾಗಿ ಹಸಿದು ನಿಂತ ಆ ಜನರು ನಮ್ಮಲ್ಲಿ ಹೇಳಿಕೊಂಡರು. ಅವರ ಭೂಮಿ ಕಾಮನೆ ಮೂಲಭೂತವಾಗಿತ್ತು.

ಭಾರತದಿಂದಲೂ ಪಾಕಿಸ್ತಾನದತ್ತ ಬೃಹತ್ ಪ್ರಮಾಣದ ವಲಸೆ ಸಾಗಿತ್ತು. ಹೀಗಾಗಿ, ಪಂಜಾಬಿನ ಪೂರ್ವವಲಯದಲ್ಲಿ ಮುಸ್ಲಿಮರು ತೆರವು ಮಾಡಿದ್ದ ಜಾಗಗಳಲ್ಲಿ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವುದು ಮೊದಲು ಆಗಬೇಕಾದ ಕೆಲಸವಾಗಿತ್ತು. ಜನರ ವರ್ಗಾವಣೆ ಇತಿಹಾಸದಲ್ಲೇ ಅತ್ಯಧಿಕವಾದ ಸಮೂಹ ವಲಸೆಯಾಗಿದ್ದರೆ, ಭೂ ಪುನರ್ವಸತಿ ವಿಶ್ವದಲ್ಲೇ

ಅತಿ ದೊಡ್ಡ ಕಾರ್ಯಾಚರಣೆಯಾಗಿತ್ತು. ಪಶ್ಚಿಮ ಪಂಜಾಬಿನಲ್ಲಿ ಹಿಂದೂಗಳು ಮತ್ತು ಸಿಖ್ಖರು ಬಿಟ್ಟು ಬಂದಿದ್ದ ಜಮೀನು 2.7 ದಶಲಕ್ಷ ಹೆಕ್ಟೇರ್. ಆದರೆ ಪೂರ್ವ ಪಂಜಾಬಿನಲ್ಲಿ ಮುಸ್ಲಿಮರು ಬಿಟ್ಟುಹೋಗಿದ್ದ ಜಮೀನು 1.9 ದಶಲಕ್ಷ ಹೆಕ್ಟೇರ್. ಪಶ್ಚಿಮ ಪ್ರಾಂತ್ಯದಲ್ಲಿ ಜಮೀನು ಹೆಚ್ಚು ಫಲವತ್ತಾಗಿದ್ದು ಸಮೃದ್ಧ ನೀರಾವರಿಯಿಂದ ಕೂಡಿತ್ತು. ಇದರಿಂದಾಗಿ ಕೊರತೆಯ ತೀವ್ರತೆ ಇನ್ನಷ್ಟು ಹೆಚ್ಚಿತು. ವಾಸ್ತವವಾಗಿ, ಹತ್ತೊಂಬತ್ತನೆ ಶತಮಾನದಲ್ಲಿ, ಹೊಸದಾಗಿ ಸೃಜಿಸಲಾದ 'ಕಾಲುವೆ ವಸಾಹತು'ಗಳಲ್ಲಿ ಬೇಸಾಯ ಮಾಡುವ ಸಲುವಾಗಿ ನೂರಾರು ಮಂದಿ ಸಿಖ್ಖರು ಅಲ್ಲಿಗೆ ಸಾಮೂಹಿಕವಾಗಿ ವಲಸೆ ಹೋಗಿದ್ದರು. ಅಲ್ಲಿ ಅವರು ಮರುಭೂಮಿಯನ್ನು ನಂದನವನವನ್ನಾಗಿಸಿದ್ದರು. ಆದರೆ 1947ರಲ್ಲಿ ಒಂದು ಮುಂಜಾನೆ ಅವರು ಕೃಷಿ ಮಾಡುತ್ತಿರುವ ಜಮೀನು ಈಗ ಪಾಕಿಸ್ತಾನಕ್ಕೆ ಸೇರಿದ್ದೆಂದು ತಿಳಿಸಲಾಯಿತು. ಹೀಗಾಗಿ, ಎರಡು ತಲೆಮಾರುಗಳ ಅಂತರದಲ್ಲೇ ಉಚ್ಚಾಟಿಸಲ್ಪಟ್ಟ ಈ ಸಿಖ್ಖರು ತೌರೂರಿಗೆ ಹಿಂದಿರುಗುವಂತಾಯಿತು.

ಪ್ರಾರಂಭಕ್ಕೆ, ಬಿಟ್ಟು ಬಂದ ಪಾಕಿಸ್ತಾನದಲ್ಲಿ ಅವರು ಎಷ್ಟೇ ಜಮೀನು ಹೊಂದಿರಲಿ, ಇಲ್ಲಿ ಪ್ರತಿ ಕುಟುಂಬಕ್ಕೆ ನಾಲ್ಕು ಹೆಕ್ಟೇರ್ ಜಮೀನು ನೀಡಲಾಯಿತು. ಬಿತ್ತನೆ ಬೀಜ ಮತ್ತು ಕೃಷಿ ಉಪಕರಣಗಳ ಖರೀದಿಗಾಗಿ ಸಾಲ ಕೊಡಲಾಯಿತು. ಹಂಗಾಮಿಯಾಗಿ ಕೊಡಲಾಗಿದ್ದ ಈ ಜಮೀನಿನಲ್ಲಿ ಬೇಸಾಯ ಶುರುವಾಯಿತು. ಖಾಯಂ ನೀಡಿಕೆಗೆ ಅರ್ಜಿಗಳನ್ನು ಕರೆಯಲಾಯಿತು. ತಾವು ಬಿಟ್ಟು ಬಂದ ಜಮೀನಿನ ವಿಸ್ತೀರ್ಣ ವಿವರಗಳನ್ನು ಸಾಕ್ಷ್ಯಾಧಾರಗಳ ಸಮೇತ ಒದಗಿಸುವಂತೆ ಪ್ರತಿ ಕುಟುಂಬಕ್ಕೂ ಆದೇಶಿಸಲಾಯಿತು. 1948ರ ಮಾರ್ಚಿ 10ರ ವೇಳೆಗೆ ಅರ್ಜಿಗಳು ಬಂದವು, ಐದು ಲಕ್ಷ ಮೀರಿ ಅರ್ಜಿಗಳು ಬಂದಿದ್ದವು. ಈ ಅರ್ಜಿದಾರರ ಬೇಡಿಕೆಗಳನ್ನು ಬಿಟ್ಟು ಬಂದ ಗ್ರಾಮಕ್ಕೆ ಸೇರಿದ ಇತರ ವಲಸೆಗಾರರಿಂದ ಬಹಿರಂಗ ಸಭೆಗಳಲ್ಲಿ ಪರಿಶೀಲನೆಗೊಳಪಡಿಸಲಾಯಿತು. ಸರ್ಕಾರದ ಅಧಿಕಾರಿಗಳು ಅರ್ಜಿದಾರರ ಬೇಡಿಕೆಯನ್ನು ಓದಿದ ನಂತರ ಸಭೆ ಅದಕ್ಕೆ ಒಪ್ಪಿಗೆ ನೀಡುತ್ತಿತ್ತು. ಮಾರ್ಪಾಟು ಮಾಡುತ್ತಿತ್ತು ಅಥವಾ ತಿರಸ್ಕರಿಸುತ್ತಿತ್ತು.

ನಿರೀಕ್ಷೆಯಂತೆ ಅನೇಕ ಮಂದಿ ನಿರಾಶ್ರಿತರು ಉತ್ಪ್ರೇಕ್ಷಿತ ಬೇಡಿಕೆಗಳನ್ನು ಮಂಡಿಸಿದ್ದರು. ಆದರೆ ಸುಳ್ಳು ಮಾಹಿತಿಗಳನ್ನು ಹೆಚ್ಚು ಜಮೀನಿಗೆ ಬೇಡಿಕೆ ಸಲ್ಲಿಸಿದ್ದವರನ್ನು ಶಿಕ್ಷೆಗೆ ಗುರಿಪಡಿಸಲಾಯಿತು. ಈ ಶಿಕ್ಷೆ ಜಮೀನು ಹಂಚಿಕೆಯನ್ನು ತಗ್ಗಿಸುವ ರೂಪದಲ್ಲಿರುತ್ತಿತ್ತು. ಕೆಲವೊಮ್ಮೆ ಅಲ್ಪಾವಧಿ ಜೈಲು ಶಿಕ್ಷೆಯನ್ನೂ ನೀಡಲಾಯಿತು. ಇದು ಹೆಚ್ಚಿನ ಪ್ರಮಾಣದಲ್ಲಿ ಜಮೀನಿನ ಬೇಡಿಕೆ ಮಂಡಿಸುವ ದುರಾಸೆಯ ಪ್ರವೃತ್ತಿಗೆ ಪ್ರತಿಬಂಧಕವಾಯಿತು. ಆದರೂ ಅಧಿಕಾರಿಯೊಬ್ಬರ ಅಂದಾಜಿನ ಪ್ರಕಾರ ಬೇಡಿಕೆ ಶೇ 25 ರಷ್ಟು ಹೆಚ್ಚಾಗಿತ್ತು. ಜಮೀನಿಗಾಗಿ ಬರುವ ಮನವಿಗಳನ್ನು ಸಂಗ್ರಹಿಸಿ, ಅವುಗಳನ್ನು ಪರಿಶೀಲಿಸಲು ಜಲಂಧರ್‌ನಲ್ಲಿ ಪುನರ್ವಸತಿ ಕಾರ್ಯಾಲಯವೊಂದನ್ನು ಆರಂಭಿಸಲಾಯಿತು. ಜಮೀನಿಗಾಗಿ ಬೇಡಿಕೆ ತುತ್ತತುದಿ ಮುಟ್ಟಿದ್ದ ದಿನಗಳಲ್ಲಿ ಈ ಕಾರ್ಯಾಲಯದಲ್ಲಿ 7000 ಸಿಬ್ಬಂದಿ ಕೆಲಸ

ಮಾಡುತ್ತಿದ್ದರು. ಈ ಸಿಬ್ಬಂದಿಯ ವಾಸಸ್ಥಾನವೇ ಒಂದು ರೀತಿ ನಿರಾಶ್ರಿತರ ನಗರವಾಗಿಬಿಟ್ಟಿತ್ತು. ಈ ಸಿಬ್ಬಂದಿಗೆ ಗುಡಾರಗಳನ್ನು ನಿರ್ಮಿಸಲಾಗಿತ್ತು, ಪಾಳಿಯ ಮೇಲೆ ಸೌಕರ್ಯ ಒದಗಿಸುವ ಸ್ನಾನದ ಮನೆ-ಪಾಯಿಖಾನೆಗಳನ್ನು ನಿರ್ಮಿಸಲಾಗಿತ್ತು. ಹಾಗೆಯೇ ದೇವಾಲಯಗಳನ್ನೂ ನಿರ್ಮಿಸಲಾಗಿತ್ತು. ಹಿಂದೂಗಳಿಗೆ ದೇವಾಲಯಗಳು, ಸಿಖ್ಖರಿಗೆ ಗುರುದ್ವಾರಗಳು.

ಈ ಕಾರ್ಯಾಚರಣೆ ನೇತೃತ್ವ, ಪುನರ್ವಸತಿ ಇಲಾಖೆಯ ಡೈರೆಕ್ಟರ್ ಜನರಲ್ ಆಗಿದ್ದ ತಾರಾಲೋಕ ಸಿಂಗ್ ಅವರದಾಗಿತ್ತು. ಇವರು ಐಸಿಎಸ್ ಶ್ರೇಣಿಯ ಅಧಿಕಾರಿ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಪದವೀಧರರಾಗಿದ್ದ ತಾರಾಲೋಕ್ ಸಿಂಗ್ ತಾವು ಪಡೆದ ವೃತ್ತಿ ತರಬೇತಿಯ ಜ್ಞಾನ-ಅನುಭವವನ್ನು ಇಲ್ಲಿ ಪರಿಣಾಮಕಾರಿಯಾಗಿ ಬಳಸಿದರು. ಇವರು ಇಲ್ಲಿ ರೂಪಿಸಿದ ಎರಡು ಆವಿಷ್ಕಾರಗಳು ತುಂಬ ಮಹತ್ವಪೂರ್ಣವಾಗಿ ನಿರಾಶ್ರಿತರ ಪುನರ್ವಸತಿ ಕಾರ್ಯದಲ್ಲಿ ಯಶಸ್ವಿಯಾದವು. 'ಸ್ಟಾಂಡರ್ಡ್ ಎಕರ್' ಮತ್ತು 'ಗ್ರೇಡೆಡ್ ಕಟ್' ತಾರಾಲೋಕ ಸಿಂಗರ ಎರಡು ಹೊಸ ಪರಿಕಲ್ಪನೆಗಳಾಗಿದ್ದವು. ಹತ್ತರಿಂದ ಹನ್ನೊಂದು ಮಣ (ಒಂದು ಮಣ 40 ಕೆ.ಜಿ.ಗೆ ಸಮ) ಭತ್ತದ ಇಳುವರಿ ಕೊಡಬಹುದಾದ ಭೂಮಿಯ ವಿಸ್ತೀರ್ಣವನ್ನು 'ಸ್ಟಾಂಡರ್ಡ್ ಎಕರೆ' ಎಂದು ಗುರುತಿಸಲಾಗುತ್ತಿತ್ತು. ಪೂರ್ವದಲ್ಲಿ, ನೀರಾವರಿ ಸೌಕರ್ಯವಿಲ್ಲದ ನಾಲ್ಕು ಎಕರೆ ಜಮೀನು ಒಂದು ಸ್ಟಾಂಡರ್ಡ್ ಎಕರೆಗೆ ಸಮವಾಗಿತ್ತು. ಕಾಲುವೆ ನೀರಾವರಿ ಸೌಲಭ್ಯವಿದ್ದ ಜಾಗದಲ್ಲಿ ಸಾಂಪ್ರದಾಯಿಕ ಒಂದು ಎಕರೆ ಜಮೀನು ಸ್ಟಾಂಡರ್ಡ್ ಎಕರೆಗೆ ಸಮವಾಗಿರುತ್ತಿತ್ತು. ಅಂದರೆ ಒಂದು ಎಕರೆಯಲ್ಲೇ 10-11 ಮಣ ಭತ್ತ ಬೆಳೆಯಬಹುದಿತ್ತು.

ಪ್ರಾಂತ್ಯದುದ್ದಗಲ ಇದ್ದ ಜಮೀನಿನ ಫಲವಂತಿಕೆ ಹಾಗೂ ವಾತಾವರಣ ವೈಪರೀತ್ಯಗಳನ್ನು ಸ್ಟಾಂಡರ್ಡ್ ಎಕರೆ ಮಾಪನದಿಂದ ಅಳೆಯುವುದು ಸಾಧ್ಯವಾಯಿತು. ನಿರಾಶ್ರಿತರು ಬಿಟ್ಟು ಬಂದ ಜಮೀನಿನ ಪ್ರಮಾಣ ಹಾಗೂ ಈಗ ಲಭ್ಯವಿರುವ ಜಮೀನಿನ ಪ್ರಮಾಣದ ನಡುವಣ ಹೆಚ್ಚು ಕಡಿಮೆಗಳನ್ನು ಸರಿದೂಗಿಸಲು 'ಗ್ರೇಡೆಡ್ ಕಟ್' ಪರಿಕಲ್ಪನೆ ಸಹಕಾರಿಯಾಯಿತು. ಬಿಟ್ಟು ಬಂದ ಜಮೀನು-ಬಿಟ್ಟು ಹೋದ ಜಮೀನುಗಳ ನಡುವಣ ಅಂತರ ಸುಮಾರು ಹತ್ತು ಲಕ್ಷ ಎಕರೆಯಾಗಿತ್ತು. ಜಮೀನಿಗಾಗಿ ಸಲ್ಲಿಸಿದ ಮನವಿಯಲ್ಲಿನ ಮೊದಲು ಹತ್ತು ಎಕರೆಯಲ್ಲಿ ಶೇ 25ರಷ್ಟು ಕಡಿತಗೊಳಿಸಲಾಗುತ್ತಿತ್ತು. ಅಂದರೆ ಹತ್ತು ಎಕರೆಗೆ ಮನವಿ ಸಲ್ಲಿಸಿದವರಿಗೆ, ಅಂದರೆ 10 ರಿಂದ 30 ಎಕರೆ ಕೇಳಿದವರಿಗೆ ಕಡಿತಗೊಳಿಸಲಾಗುತ್ತಿತ್ತು. 500 ಎಕರೆ ಕೇಳಿದವರಿಗೆ ಶೇ 95ರಷ್ಟು ಕಡಿತ. ಈ ಪ್ರಕ್ರಿಯೆಯಲ್ಲಿ ಹೆಚ್ಚು ನಷ್ಟಕ್ಕೀಡಾದ ಮಹಿಳೆ ವಿದ್ಯಾವತಿ ಎಂಬುವರು. ಈಕೆಗೆ ಸಯಲ್ ಕೋಟೆಯ ಗುಜ್ರನ್ವಾಲ ಎಂಬ ಹಳ್ಳಿಯಲ್ಲಿ ಗಂಡನ ಕಡೆಯಿಂದ 11500 ಎಕರ ಜಮೀನು ಬಂದಿತ್ತು. ಇಷ್ಟೂ ಜಮೀನನ್ನು ಬಿಟ್ಟು ಈಕೆ ಭಾರತಕ್ಕೆ ವಲಸೆ ಬಂದಿದ್ದಳು. ಇಲ್ಲಿ ಆಕೆಗೆ ಕರ್ನಾಲ್ ಗ್ರಾಮದಲ್ಲಿ ಮಂಜೂರಾದ ಜಮೀನು 835 ಎಕರೆ ಮಾತ್ರ.

1949ರ ನವೆಂಬರ್ ವೇಳೆಗೆ ತಾರಾ ಲೋಕ್ ಸಿಂಗ್ ನಿರಾಶ್ರಿತರಿಗೆ 250,000 ಎಕರೆ ಜಮೀನು ಹಂಚಿಕೆ ಮಾಡಿದ್ದರು. ನಿರಾಶ್ರಿತರನ್ನು ಪೂರ್ವ ಪಂಜಾಬಿನ ಜಿಲ್ಲೆಗಳಲ್ಲಿ ಪುನರ್ವಸತಿಗೊಳಿಸಲಾಗಿತ್ತು. ಎಲ್ಲ ಬಂಧುಮಿತ್ರರನ್ನು ಒಂದೆ ಜಿಲ್ಲೆಯಲ್ಲಿ ಪುನರ್ವಸತಿಗೊಳಿಸುವ ಪ್ರಯತ್ನ ಮಾಡಲಾಗಿತ್ತು. ಬಂಧುಮಿತ್ರರು ಹೆಚ್ಚು ಕಡಿಮೆ ಹತ್ತಿರಹತ್ತಿರದಲ್ಲೇ ಜಮೀನುಗಳನ್ನು ಪಡೆದಿದ್ದರು. ಆದರೆ ಇಡೀ ಒಂದು ಗ್ರಾಮದ ಸಮುದಾಯವನ್ನು ಒಂದೇ ಪ್ರದೇಶದಲ್ಲಿ ಪುನರ್ವಸತಿಗೊಳಿಸುವುದು ಅಸಾಧ್ಯವಾಗಿತ್ತು. ನಿರಾಶ್ರಿತರಿಗೆ ಅಹವಾಲುಗಳನ್ನು ಸಲ್ಲಿಸಲು ಅವಕಾಶವಿತ್ತು. ಸುಮಾರು ಒಂದು ಲಕ್ಷ ಕುಟುಂಬಗಳು ತಮಗೆ ನೀಡಲಾಗಿರುವ ಜಮೀನು ಇತ್ಯಾದಿಗಳ ಮರು ಪರಿಶೀಲನೆಗೆ ಅರ್ಜಿ ಸಲ್ಲಿಸಿದ್ದರು. ಈ ದೂರುಗಳನ್ನು ಮನವಿಗಳನ್ನು ಪುನರ್‌ಪರಿಶೀಲಿಸಿದ್ದರಿಂದಾಗಿ 80 ಸಾವಿರ ಹೆಕ್ಟೇರ್ ಜಮೀನಿನ ಕೈ ಬದಲಾವಣೆಯಾಯಿತು.

ಪಶ್ಚಿಮದಲ್ಲಿ ಒಳ್ಳೆಯ ನೀರಾವರಿ ಸೌಲಭ್ಯವಿದ್ದ ಜಮೀನಿಗೆ ಪ್ರತಿಯಾಗಿ ಪೂರ್ವದಲ್ಲಿ ಅನೇಕ ಮಂದಿ ನಿರಾಶ್ರಿತರಿಗೆ ನಿಸ್ಸಾರ ಭೂಮಿ ಲಭಿಸಿತ್ತು. ಗ್ರೇಡೆಡ್ ಕಟ್ ಮಾಪನದಿಂದಾಗಿ ದೊರೆತ ಭೂಮಿಯ ಪ್ರಮಾಣವೂ ಕಡಿಮೆಯಾಗಿತ್ತು. ಆದರೆ ತಮಗೆ ಸ್ವಭಾವ ಸಹಜವಾಗಿದ್ದ ದುಡಿಮೆ ಮತ್ತು ಉದ್ಯಮಶೀಲತೆಯಿಂದ ಬಾವಿ ತೋಡಿ ಕೃಷಿ ಮಾಡಿದರು. ಮನೆಗಳನ್ನು ಕಟ್ಟಿಸಿಕೊಂಡರು. ಜನವಸತಿ ಇಲ್ಲದೆ ಬಿಕೋ ಎನ್ನುತ್ತಿದ್ದ ಈ ಪ್ರದೇಶ 1950ರ ವೇಳೆಗೆ ಮತ್ತೆ ಜೀವಂತವಾಗಿ ನಳನಳಿಸಿತು.

ಅದಾಗ್ಯೂ ಕಳೆದುಕೊಂಡ ಭಾವನೆ ನಿರಾಶ್ರಿತರಲ್ಲಿ ತೀವ್ರವಾಗಿತ್ತು. ಅರ್ಥ ವ್ಯವಸ್ಥೆ ಮತ್ತೆ ಕಟ್ಟಿ ಬೆಳೆಸಬಹುದು. ಆದರೆ ವಿಭಜನೆಯಿಂದಾಗಿ ಕಳೆದುಕೊಂಡ ಸಾಂಸ್ಕೃತಿಕ ಪರಂಪರೆಯ ಪುನರ್‌ನಿರ್ಮಾಣ ಅಸಾಧ್ಯವಾಗಿತ್ತು. ಕಳೆದುಕೊಂಡ ಈ ಸಂಪತ್ತನ್ನು ಮತ್ತೆ ಪಡೆಯುವುದು ಕನಸಿನ ಮಾತೇ ಆಗಿದ್ದು. ಇದು ಎರಡೂ ಕಡೆಗೆ ಅನ್ವಯಿಸುವ ಮಾತು. ಸಿಖ್ಖರಿಗೆ ಉಳುಮೆ ಮಾಡಲು ಮತ್ತೆ ಜಮೀನು ಲಭ್ಯವಾಗಿತ್ತು. ಆದರೆ ಅವರು ಪ್ರೀತಿಸಿದ ಗುರುದ್ವಾರಗಳನ್ನು ಅವರು ಮರಳಿ ಪಡೆಯುವುದು ಅಸಾಧ್ಯವಾಗಿತ್ತು. ಇದರಲ್ಲಿ ಮುಖ್ಯವಾದದ್ದು ಲಾಹೋರಿನ ಗುರುದ್ವಾರ ಹಾಗೂ ನಾನಕಾನ ಸಾಹೇಬ. ಲಾಹೋರಿನ ಗುರುದ್ವಾರದಲ್ಲಿ ಮಹಾ ಪರಾಕ್ರಮಿ ರಣಜಿತ್ ಸಿಂಗ್‌ನ ಸಮಾಧಿಯಿದ್ದರೆ, ನಾನಕಾನ ಸಾಹೇಬ ಸಿಖ್ ಪಂಥ ಸಂಸ್ಥಾಪಕ ಗುರುನಾನಕರ ಜನ್ಮಸ್ಥಳ.

1948ರ ಏಪ್ರಿಲ್‌ನಲ್ಲಿ ಕಲ್ಕತ್ತೆಯ 'ಸ್ಟೇಟ್ಸ್ಮನ್' ಪತ್ರಿಕೆಯ ಸಂಪಾದಕರು ನಾನಕಾನ ಸಾಹೇಬಾಗೆ ಭೇಟಿಕೊಟ್ಟಿದ್ದರು. ಇಲ್ಲಿ, ಪೂಜಾಮಂದಿರದ ರಕ್ಷಕರಾಗಿ ಉಳಿಯಲು ಕೆಲವೇ ಕೆಲವು ಮಂದಿ ಸಿಖ್ಖರಿಗೆ ಪಾಕಿಸ್ತಾನ ಸರ್ಕಾರ ಅನುಮತಿ ನೀಡಿತ್ತು. ಇದಾದ ಕೆಲವು ತಿಂಗಳ ನಂತರ ಈ ಸಂಪಾದಕರು, ಭಾರತದ ಪಂಜಾಬಿನ ಕ್ವಾಡಿಯಾನ್ ಪಟ್ಟಣದಲ್ಲಿರುವ ಇಸ್ಲಾಮಿನ ಅಹಮದೀಯ ಪಂಥದ ಕೇಂದ್ರವೊಂದಕ್ಕೆ ಭೇಟಿಕೊಟ್ಟಿದ್ದರು. ಇಲ್ಲಿನ ಅಹಮದೀಯ ಮಸೀದಿಯ ಬೃಹತ್ ಗೋಪುರ ಸುತ್ತ ಹತ್ತಾರು ಮೈಲಿಗಳವರೆಗೆ ಕಾಣಿಸುತ್ತಿತ್ತು. ಆದರೆ ಈಗ ಅಲ್ಲಿ ಸುಮಾರು 12 ಸಾವಿರ ಹಿಂದೂ-ಸಿಖ್ ನಿರಾಶ್ರಿತರು ನಿವಾಸಿಗಳಾಗಿದ್ದರು.

ಕ್ವೆಡಿಯಾನ್ ಮತ್ತು ನಾನಕಾನ ಸಾಹೇಬ ಈ ಎರಡೂ ಕಡೆಗಳಲ್ಲಿ "ದಿನಸಿತ್ಯ ಭಕ್ತರ ಗೈರು ಹಾಜರಿ, ಕೊರತೆಗಳು ಎದ್ದು ಕಾಣುತ್ತಿದ್ದವು. ಇವು, ಶೂನ್ಯತೆ, ನಿರೀಕ್ಷೆ, ನಂಬಿಕೆಗಳಲ್ಲಿ ಕಾತರಿಸಿ ನಿಂತಿರುವಂತೆ ಕಾಣುತ್ತಿದ್ದವು... ನೋವು, ಯಾತನೆಗಳಿಂದ ಪುಷ್ಟಿಗೊಂಡ ನಂಬಿಕೆ, ಧರ್ಮಶ್ರದ್ಧೆ" ಗರಬಡಿದ ಹಾಗೆ ಕಾಣುತ್ತಿದ್ದವು.

II

ಪಶ್ಚಿಮ ಬಂಗಾಳದಿಂದ ಗುಳೆಬಂದ ವಲಸಿಗರಲ್ಲಿ ಹೆಚ್ಚು ಮಂದಿ ರೈತರು. ಆದರೆ ಇವರೊಡನೆ ಕುಶಲಕರ್ಮಿಗಳು, ವರ್ತಕ ವ್ಯಾಪಾರಿಗಳು ಹಾಗೂ ಕೂಲಿ ಕಾರ್ಮಿಕರು ಇದ್ದರು. ಇವರೆಲ್ಲರಿಗೂ ಪುನರ್ವಸತಿ ಕಲ್ಪಿಸಲು ಸರ್ಕಾರ ಹೊಸ ಬಡಾವಣೆಗಳನ್ನು ನಿರ್ಮಿಸಿತು. ಇವುಗಳಲ್ಲಿ ಒಂದು ಫರಿದಾಬಾದ್, ರಾಜಧಾನಿ ದೆಹಲಿಗೆ ಪಶ್ಚಿಮ ದಿಕ್ಕಿನಲ್ಲಿ ಸರ್ಕಾರ ನಿರ್ಮಿಸಿದ ಹೊಸ ಪಟ್ಟಣವಾಗಿತ್ತು. ಇಲ್ಲಿ ತುಂಬ ಸಕ್ರಿಯವಾಗಿದ್ದ ಸಂಘಟನೆಗಳಲ್ಲಿ ಒಂದು: ಇಂಡಿಯನ್ ಕೋಆಪರೇಟಿವ್ ಯೂನಿಯನ್. ಮಹಾತ್ಮ ಗಾಂಧಿಯವರ ನಿಕಟ ಒಡನಾಡಿಯಾಗಿದ್ದ, ಸಮಾಜಕಾರ್ಯಕರ್ತೆ, ಸ್ತ್ರೀ ವಿಮೋಚನಾವಾದಿ ಕಮಲಾದೇವಿ ಚಟ್ಟೋಪಾಧ್ಯಾಯ ಈ ಸಂಸ್ಥೆಯ ಅಧ್ಯಕ್ಷೆಯಾಗಿದ್ದರು.

ಫರಿದಾಬಾದ್‌ನ ಹೆಚ್ಚು ಮಂದಿ ವಾಯುವ್ಯ ಸರಹದ್ದು ಪ್ರಾಂತ್ಯದಿಂದ ವಲಸೆಬಂದ ಹಿಂದೂ ನಿರಾಶ್ರಿತರಾಗಿದ್ದರು. ಸುಧೀರ್ ಘೋಷ್ ಎನ್ನುವ ಸಮಾಜ ಸೇವಕನೊಬ್ಬ ಈ ಮಂದಿಗೆ, ತಮ್ಮ ಮನೆಗಳನ್ನು ತಾವೇ ಕಟ್ಟಿಕೊಳ್ಳುವಂತೆ ಪ್ರೇರೇಪಿಸಿದ. ಆದರೆ ಲೋಕೋಪಯೋಗಿ ಇಲಾಖೆ ಮೂಲಕ ಮನೆಗಳನ್ನು ಕಟ್ಟಿಸಿಕೊಡುವುದು ಸರ್ಕಾರದ ಇಚ್ಛೆಯಾಗಿತ್ತು. ಈ ಲೋಕೋಪಯೋಗಿ ಇಲಾಖೆ ಭ್ರಷ್ಟಾಚಾರದಿಂದಾಗಿ ಜನಜನಿತವಾಗಿತ್ತು. ಇದರ ವಿರುದ್ಧ ಕೆಲವು ಮಂದಿ ನಿರಾಶ್ರಿತರು ದೆಹಲಿಯಲ್ಲಿ ಪ್ರತಿಭಟನೆ ನಡೆಸಿ ಪ್ರಧಾನಮಂತ್ರಿಯ ನಿವಾಸಕ್ಕೆ ಮುತ್ತಿಗೆ ಹಾಕಿದರು. ನೆಹರೂಗೆ ಇದೊಂದು ಮುಜುಗರದ ಪ್ರಸಂಗವಾಗಿತ್ತು. ಎಂದಿನಂತೆ ನೆಹರೂ ಇವರನ್ನು ಎದುರ್ಗೊಂಡರು. ನಿರಾಶ್ರಿತರ ಸಮಸ್ಯೆಗಳ ಬಗ್ಗೆ ಉತ್ಕಟವಾಗಿ ಯೋಚಿಸುವಂತೆ ಮಾಡುವುದರಲ್ಲಿ ಪ್ರತಿಭಟನಾಕಾರರು ಯಶಸ್ವಿಯಾಗಿದ್ದರು. ಶೇ.40ರಷ್ಟು ನಿರಾಶ್ರಿತರು ತಮ್ಮ ಮನೆಗಳನ್ನು ತಾವೇ ಕಟ್ಟಿಕೊಳ್ಳಬಹುದೆಂದೂ ಉಳಿದವುಗಳನ್ನು ಲೋಕೋಪಯೋಗಿ ಇಲಾಖೆ ನಿರ್ಮಿಸುವುದೆಂದೂ ನಿರ್ಧಾರವಾಯಿತು.

ಫರಿದಾಬಾದಿನಲ್ಲಿ, ಐ.ಸಿ.ಯೂ. ಸಹಕಾರ ಸಂಘಗಳನ್ನು, ಸ್ವಯಂ ಸಹಾಯಕ ತಂಡಗಳನ್ನು ಸ್ಥಾಪಿಸಿತು. ಅಂಗಡಿಗಳನ್ನು, ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಇವುಗಳನ್ನು ರೂಪಿಸಲಾಯಿತು. ಇವುಗಳಿಗೆ ವಿದ್ಯುಚ್ಛಕ್ತಿ ಪೂರೈಸಲು, ಮನೆಗಳಲ್ಲಿ ದೀಪಗಳನ್ನು ಬೆಳಗಿಸಲು, ಕ್ಷಿಪ್ರ ಅವಧಿಯಲ್ಲೇ ಡೀಸೆಲ್ ಸ್ಥಾವರವೊಂದನ್ನು ಸ್ಥಾಪಿಸಲಾಯಿತು. ಇದನ್ನು ಕಲ್ಕತ್ತೆಯ ಶೆಡ್ ಒಂದರಲ್ಲಿ ಸ್ಥಾಪಿಸಲಾಯಿತು. ಜರ್ಮನಿಯ ಯುದ್ಧ ಪರಿಹಾರಾರ್ಥವಾಗಿ ಬಂದ ಸಹಕಾರದ ಸಹಯೋಗದಲ್ಲಿ ಇದನ್ನು ಪ್ರಾರಂಭಿಸಲಾಗಿತ್ತು. ಕಲ್ಕತ್ತೆಯಲ್ಲಿ ಇದು

ಯಾರಿಗೂ ಬೇಕಾಗಿರಲಿಲ್ಲ. ಆದ್ದರಿಂದ ಈ ವಿದ್ಯುದುತ್ಪಾದಕ ಘಟಕವನ್ನು ಫರಿದಾಬಾದ್‌ಗೆ ಸ್ಥಳಾಂತರಿಸಲಾಯಿತು. ಹ್ಯಾಂಬರ್ಗ್‌ನಲ್ಲಿ ಇಂಥದೊಂದು ಘಟಕ ಸ್ಥಾಪಿಸಿದ್ದ ಜರ್ಮನಿಯ ಎಂಜಿನಿಯರ್ ಒಬ್ಬನನ್ನು ಪತ್ತೆಹಚ್ಚಿದ ಸುಧೀರ್ ಘೋಷ್ ಭಾರತಕ್ಕೆ ಬರುವಂತೆ ಆತನ ಮನ ಒಲಿಸಿದರು. ಎಂಜಿನಿಯರ್ ಭಾರತಕ್ಕೇನೋ ಬಂದ, ಆದರೆ ಇಲ್ಲಿ ಸ್ಥಾವರವನ್ನು ನಿಲ್ಲಿಸಲು ಅಗತ್ಯವಾದ ಕ್ರೇನುಗಳೇ ಇಲ್ಲದಿರುವುದನ್ನು ಕಂಡು ದಿಗ್ಭ್ರಾಂತನಾದ. ಹೀಗಾಗಿ ಈ ಎಂಜಿನಿಯರ್ ಫರಿದಾಬಾದ್‌ನ ಜನರನ್ನು 15 ಟನ್ ಜಾಕ್‌ನ ತಿರುಪುಗಳನ್ನು ಉಜ್ಜುಗಿಸುವುದರಲ್ಲಿ ತರಬೇತುಗೊಳಿಸಿದ. ಇದೊಂದು ಅಂಗುಲಂಗುಲ ಮೇಲಕ್ಕೆತ್ತುವ ಉಪಕರಣವಾಗಿತ್ತು. ಪತ್ತು ತಿಂಗಳಲ್ಲಿ ಸ್ಥಾವರ ಸಿದ್ಧವಾಯಿತು. 1951ರಲ್ಲಿ ನೆಹರೂ ಈ ಸ್ಥಾವರವನ್ನು ಉದ್ಘಾಟಿಸಿದರು. ನೆಹರೂ ಗುಂಡಿಯೊತ್ತುವುದರ ಮೂಲಕ ಫರಿದಾಬಾದ್‌ನ ಜನರ ಮನ-ಮನೆಗಳಲ್ಲಿ ಬೆಳಕು ಮೂಡಿತು. ತನ್ನ ಕೈಗಾರಿಕೋದ್ಯಮದ ಭವ್ಯ ಭವಿಷ್ಯವನ್ನು ರೂಪಿಸಿಕೊಳ್ಳುವ ಶಕ್ತಿ ಈಗ ಫರಿದಾಬಾದ್‌ಗೆ ಕರಗತವಾಗಿತ್ತು.

ಪತನ್ಮಧ್ಯೆ ಸಾವಿರಾರು ನಿರಾಶ್ರಿತರು ದೆಹಲಿಯನ್ನೇ ತಮ್ಮ ಮನೆಯಾಗಿ ಮಾಡಿಕೊಂಡಿದ್ದರು. 1911ರವರೆಗೆ ದೆಹಲಿ ನಗರ ಸ್ವಭಾವ ಗುಣಲಕ್ಷಣ ಹಾಗೂ ಸಂಸ್ಕೃತಿಗಳಲ್ಲಿ ಮುಸ್ಲಿಂ ಆಗಿತ್ತು. ಇದೇ ವರ್ಷ ಬ್ರಿಟಿಷರು ತಮ್ಮ ರಾಜಧಾನಿಯನ್ನು ಕಲ್ಕತ್ತೆಯಿಂದ ದೆಹಲಿಗೆ ವರ್ಗಾಯಿಸಿದರು. 1947ರ ನಂತರ ನವದೆಹಲಿ ಸ್ವತಂತ್ರ ಭಾರತ ಸರ್ಕಾರದ ಅಧಿಕಾರ ಕೇಂದ್ರವಾಯಿತು. ಉರ್ದು ಮಾತನಾಡುವ ಮುಸ್ಲಿಮರು ಪಾಕಿಸ್ತಾನ ಸೇರಿಕೊಂಡರು. ಕೆಲವರು ಅನಿಚ್ಛೆಯಿಂದಲೇ ಹೋದರು. ಅವರ ಜಾಗಕ್ಕೆ ಪಂಜಾಬಿ ಮಾತನಾಡುವ ಹಿಂದೂಗಳು ಮತ್ತು ಸಿಖ್ಖರು ಬಂದರು. ಸಾಧ್ಯವಾದಲ್ಲೆಲ್ಲ ಇವರು ಮನೆ ಮಠ, ಅಂಗಡಿ ಮುಂಗಟ್ಟುಗಳನ್ನು ಸ್ಥಾಪಿಸಿದರು. ನಗರದ ಹೃದಯ ಭಾಗದಲ್ಲಿ ಕನ್ನಾಟ್ ಸರ್ಕಸ್ ಇದೆ. ಇದು ಎಡ್ವಿನ್ ಲ್ಯೂಟಿನ್ಸ್ ವಿನ್ಯಾಸಗೊಳಿಸಿದ ವಾಣಿಜ್ಯ ಕೇಂದ್ರ. ತನ್ನ ಸೃಷ್ಟಿಯ ಈಗಿನ ಅವತಾರ ಕಂಡಿದ್ದರೆ ಲ್ಯೂಟಿನ್ಸ್ "ಸಮಾಧಿಯೊಳಗೇ ದರವೇಶಿಯಂತೆ ಪರಿತಪಿಸುತ್ತಿದ್ದನೇನೋ". 1948-49 ಅವಧಿಯಲ್ಲಿ ಎಲ್ಲ ಬಗೆಯ ಅಂಗಡಿ ಮುಂಗಟ್ಟುಗಳು, ತಳ್ಳುಗಾಡಿ ಅಂಗಡಿಗಳು ಈ ಕೇಂದ್ರವನ್ನು, ಇಲ್ಲಿನ ಕಾಲು ಹಾದಿಗಳನ್ನು ಆಕ್ರಮಿಸಿದವು. ಹೀಗಾಗಿ, "ಒಂದು ಕಾಲಕ್ಕೆ ಯಾವ ಮಾರಾಟ ಪ್ರತಿನಿಧಿಗಳ ರಗಳೆ ರಾದ್ಧಾಂತಗಳಿಲ್ಲದೆ ನಿರಾಳವಾಗಿ ಓಡಾಡಲು, ಬೇಕಿದ್ದರೆ ಶಾಪಿಂಗ್ ಮಾಡಲು ಅವಕಾಶವಿದ್ದ ಈ ಸ್ಥಳ ಈಗ ಘೋರ ನರಕವಾಗಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ನವದೆಹಲಿ ಗಣ್ಯರು ಹಾಗೂ ಶ್ರೀಮಂತರ ಬೇಕು-ಬೇಡಗಳನ್ನು ಪೂರೈಸುತ್ತಿದ್ದ, ಶ್ರೀಮಂತರಿಗೆ ಪ್ರತ್ಯೇಕವಾಗಿದ್ದ ಮಾರಾಟ ಕೇಂದ್ರವಾಗಿತ್ತು. ಆದರೆ ಈಗ ಅದೊಂದು ವೈಭವೀಕೃತ ಬಜಾರ್ ಅಷ್ಟೇ."

ವಿಭಜನೆಯ ನಂತರ ಬಹುಮಟ್ಟಿಗೆ ಐದು ಲಕ್ಷಮಂದಿ ನಿರಾಶ್ರಿತರು ದೆಹಲಿಗೆ ವಲಸೆ ಬಂದರು. ಎಲ್ಲೆಲ್ಲಿ ಸ್ಥಳವಿದೆಯೋ ಅಲ್ಲೆಲ್ಲ ಅವರು ಪ್ರವಾಹದೋಪಾದಿ ಬಂದು ಸೇರಿಕೊಂಡರು. ಶಿಬಿರಗಳು, ಶಾಲೆಗಳು, ಕಾಲೇಜುಗಳು, ದೇವಾಲಯಗಳು, ಗುರುದ್ವಾರಗಳು,

ಧರ್ಮಶಾಲೆಗಳು, ಮಿಲಿಟರಿ ನೆಲೆಗಳು, ಉದ್ಯಾನವನಗಳು ಹೀಗೆ ಎಲ್ಲೆಲ್ಲಿ ಸ್ಥಳಾವಕಾಶವಿದೆಯೋ ಅಲ್ಲೆಲ್ಲ ಬೀಡುಬಿಟ್ಟರು. ರೈಲ್ವೆ ಪ್ಲಾಟ್‌ಫಾರಮ್ಮುಗಳಲ್ಲಿ, ಬೀದಿಗಳಲ್ಲಿ, ಜಗುಲಿಗಳಲ್ಲಿ ವಾಸಯೋಗ್ಯವಾದ ಎಲ್ಲ ಜಾಗವನ್ನೂ ಆಕ್ರಮಿಸಿಕೊಂಡರು. ಕಾಲಾನಂತರ ಇವರು ತಮಗೆ ಕೊಡಮಾಡಲಾದ, ಪಶ್ಚಿಮ ದೆಹಲಿ ಹಾಗೂ ಲ್ಯೂಟಿನ್ಸ್ ದೆಹಲಿಯ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡರು. ಇಲ್ಲಿ ಬಡಾವಣೆಗಳು ಎದ್ದವು. ಪಂಜಾಬಿಗಳದೇ ಇಲ್ಲಿ ಪ್ರಾಬಲ್ಯ. ಹೊಸ ಬಡಾವಣೆಗಳಿಗೆ, ನಗರಗಳಿಗೆ ತಮ್ಮ ಅಭಿಮಾನಿ ದೇವರುಗಳಾದ ಪಟೇಲ್, ರಾಜೇಂದ್ರ ಪ್ರಸಾದ್, ಲಾಲಾ ಲಜಪತ್ ರಾಯ್ ಮೊದಲಾದವರ ಹೆಸರುಗಳನ್ನಿಡಲಾಯಿತು.

ಪೂರ್ವ ಪಂಜಾಬಿನಲ್ಲಿ ನೆಲೆಸಿದ, ತಮ್ಮ ಬಂಧುಮಿತ್ರರಂತೆ ದೆಹಲಿಯಲ್ಲಿ ನೆಲೆಸಿದ ನಿರಾಶ್ರಿತರೂ ಮಿತವ್ಯಯ ಹಾಗೂ ಚಲನಶೀಲತೆಯನ್ನು ತೋರಿದರು. ಕಾಲಕ್ರಮೇಣ ಇವರು "ದೆಹಲಿಯಲ್ಲಿ ಪ್ರಭಾವಶಾಲಿಗಳಾದರು. ವಾಣಿಜ್ಯ, ಉದ್ಯಮಗಳಲ್ಲಿ ಇವರ ಪ್ರಭಾವ-ಪ್ರಾಬಲ್ಯಗಳು ಹೆಚ್ಚಿದವು. ಒಂದು ಕಾಲಕ್ಕೆ ಮುಘಲರ ನಗರಿಯಾಗಿ, ನಂತರ ಬ್ರಿಟಿಷರ ನಗರಿಯಾಗಿದ್ದ ದೆಹಲಿ 1950ರ ವೇಳೆಗೆ ಸ್ಪಷ್ಟವಾಗಿ ಪಂಜಾಬಿಗಳ ನಗರವಾಯಿತು."

III

ದೆಹಲಿಯಂತೆ, ವಿಭಜನೆಯಿಂದಾಗಿ ಮುಂಬಯಿ ನಗರದ ಸಾಂಸ್ಕೃತಿಕ ಮತ್ತು ಸಾಮಾಜಿಕ ಭೂವಿವರಣೆಯಲ್ಲಿ ಬದಲಾವಣೆಗಳಾದವು. ಜುಲೈ 1948ರ ವೇಳೆಗೆ ಮುಂಬಯಿಯಲ್ಲಿ ಐದುಲಕ್ಷಕ್ಕೂ ಹೆಚ್ಚು ಮಂದಿ ನಿರಾಶ್ರಿತರು ಬಂದಿಳಿದಿದ್ದರು. ಇವರಲ್ಲ ಸಿಂಧ್, ಪಂಜಾಬ್ ಮತ್ತು ಗಡಿನಾಡುಗಳಿಂದ ಬಂದವರಾಗಿದ್ದರು. ಆ ವೇಳೆಗಾಗಲೇ ಉಲ್ಬಣಿಸಿದ್ದ ಮುಂಬಯಿ ಸಮಸ್ಯೆಗಳು ನಿರಾಶ್ರಿತರ ಆಗಮನದಿಂದಾಗಿ ಮತ್ತಷ್ಟು ಉಲ್ಬಣಿಸಿದವು. ವಿಶೇಷವಾಗಿ ವಸತಿ ಅಭಾವದ ಸಮಸ್ಯೆ. ಸುಮಾರು ಹತ್ತುಲಕ್ಷ ಜನ ರಸ್ತೆ ಬದಿ ಕಲ್ಲು ಹಾಸುಗಳ ಮೇಲೆ, ಕಾಲುಹಾದಿಗಳ ಮೇಲೆ ನಿದ್ರಿಸುತ್ತಿದ್ದರು. ಕೊಳೆಗೇರಿಗಳು ಬೆಳೆಯುತ್ತಿದ್ದವು. ಒಂದೇ ಕೋಣೆಯಲ್ಲಿ ಹದಿನೈದು ಇಪ್ಪತ್ತು ಜನ ವಾಸಮಾಡುತ್ತಿದ್ದರು.

ಪತ್ರಕರ್ತರೊಬ್ಬರ ಅಂದಾಜಿನ ಪ್ರಕಾರ ಸಿಂಧ್ ನಿರಾಶ್ರಿತರಿಗೆ 4000 ದಿಂದ 5000 ದಶಲಕ್ಷ ರೂಪಾಯಿ ನಷ್ಟವಾಗಿತ್ತು. ಲಕ್ಷಾಂತರ ಎಕರೆ ಭೂಮಿಯನ್ನು ಕಳೆದುಕೊಂಡಿದ್ದರು. ಆದರೆ ಪಂಜಾಬಿ ನಿರಾಶ್ರಿತರಿಗೆ ಈಗ ಪೂರ್ವ ಪಂಜಾಬ್ ಅವರದೇ ಆಗಿತ್ತು, ಬದುಕನ್ನು ರೂಪಿಸಿಕೊಳ್ಳಲು ಸಂಪನ್ಮೂಲಗಳು ಯಥೇಚ್ಛವಾಗಿತ್ತು. ಆದರೆ ಸಿಂಧ್ ನಿರಾಶ್ರಿತರು ಬರಿಗೈದಾಸರಾಗಿದ್ದರು. ಕೆಲವರು ದೈನ್ಯದಿಂದ ಅಥವಾ ಕೋಪದಿಂದ ಸರ್ಕಾರದತ್ತ ಮುಖ ಮಾಡಿದ್ದರು. ಇನ್ನು ಕೆಲವರು ಯಾರ ಸಹಾಯಕ್ಕೂ ಕಾಯದೆ ತಾವೇ ಕಾಯಕದಲ್ಲಿ ತೊಡಗಿದರು. ನಗರದ ಬೀದಿಗಳಲ್ಲಿ ಸಿಂಧ್ ಯುವಕರು ಬಟ್ಟೆ ಮಾರಾಟ ಆರಂಭಿಸಿದರು.

ಮಾರಾಟ ಅವರಿಗೆ ರಕ್ತಗತವಾಗಿ ಬಂದ ಕಲೆಯಾಗಿತ್ತು. ಇದರಿಂದಾಗಿ ಗುಜರಾತಿಗಳು ಮತ್ತು ಮರಾಠಿಗರ ಕಣ್ಣು ಕೆಂಪಾಯಿತು. ಸಿಂಧ್ ಆಕ್ರಮಣಕಾರರ ವಿರುದ್ಧ ಅವರು ಕಿಡಿಕಾರಿದರು. ಸಿಂಧ್‌ನ ಹಳ್ಳಿಗಾಡಿನ ಚಿಳ್ಳೆಪಿಳ್ಳೆ ಹುಡುಗರು ಉಪನಗರಗಳ ರೈಲುಗಳಲ್ಲಿ ಥಳುಕು ಪಳುಕಿನ ವಸ್ತುಗಳ ಮಾರಾಟ ಆರಂಭಿಸಿ ಬದುಕುವ ಮಾರ್ಗ ಕಂಡುಕೊಂಡರು.

ಮುಂಬಯಿಯಲ್ಲಿ ನಿರಾಶ್ರಿತರ ಐದು ಶಿಬಿರಗಳಿದ್ದವು. ಇಲ್ಲಿನ ಜೀವನಸ್ಥಿತಿ ಹೇಳಿಕೊಳ್ಳುವಂಥಾದ್ದೇನಾಗಿರಲಿಲ್ಲ. ಕೋಳವಾಡ ಶಿಬಿರದಲ್ಲಿ 10400 ಮಂದಿ ಚಾಳುಗಳಲ್ಲಿ ವಾಸಿಸುತ್ತಿದ್ದರು. ಪ್ರತಿಯೊಂದು ಕುಟುಂಬಕ್ಕೂ ನೀಡಲಾಗಿದ್ದ ಜಾಗ ಸರಾಸರಿ ಮೂವತ್ತು ಚದರಡಿ. ಇಡೀ ಶಿಬಿರಕ್ಕೆ ಹನ್ನೆರಡು ನಲ್ಲಿಗಳಿದ್ದವು. ವಿದ್ಯುಚ್ಛಕ್ತಿ ಇರಲಿಲ್ಲ. ಒಂದು ಶಾಲೆಯಿತ್ತು. ವೈದ್ಯರುಗಳಾಗಲೀ, ಆಸ್ಪತ್ರೆಯಾಗಲೀ ಇರಲಿಲ್ಲ. ಪ್ರತಾಪಸಿಂಗ್ ಎನ್ನುವ ಒಬ್ಬ ವ್ಯಕ್ತಿ ಇದರ ನಿರ್ವಹಣೆ ನೋಡಿಕೊಳ್ಳುತ್ತಿದ್ದ. ಇವನದೋ ದಬ್ಬಾಳಿಕೆಯ ಪ್ರವೃತ್ತಿ. 1950ರಲ್ಲಿ ಕೆಲವು ಬಾಡಿಗೆದಾರರು ಬಾಡಿಗೆ ಕೊಡಲು ನಿರಾಕರಿಸಿದಾಗ ದೊಡ್ಡ ಗಲಭೆಯಾಯಿತು. ಪ್ರತಾಪ್‌ಸಿಂಗ್ ಇವರಿಗೆ ಮನೆ ಖಾಲಿ ಮಾಡಲು ಆಜ್ಞೆ ಜಾರಿ ಮಾಡಿದ. ಬಾಡಿಗೆದಾರರು ಖಾಲಿ ಮಾಡಲು ನಿರಾಕರಿಸಿದಾಗ ಪೊಲೀಸರನ್ನು ಕರೆಸಲಾಯಿತು. ಈ ಗಲಭೆಯಲ್ಲಿ ಯುವಕನೊಬ್ಬ ಸತ್ತ. ಈ ಗಲಭೆಯನ್ನು ವರದಿಮಾಡಿದ ಪತ್ರಕರ್ತನೊಬ್ಬ ಶಿಬಿರದಲ್ಲಿ ವಾಸಮಾಡುತ್ತಿದ್ದವರನ್ನು ನಿವಾಸಿಗಳೆಂದು ವರ್ಣಿಸಿದ್ದ. ಹೆಗ್ಗಣ, ತಿಗಣೆ, ಸೊಳ್ಳೆ, ಹಾವುಗಳು ಇಲ್ಲಿನ ಇತರ ನಿವಾಸಿಗಳೆಂದೂ ವರದಿಗಾರ ಬರೆದಿದ್ದ.

ಸಿಂಧ್ ನಿರಾಶ್ರಿತರು ಪಶ್ಚಿಮ ಭಾರತದ ನಗರಗಳು ಹಾಗೂ ಪಟ್ಟಣಗಳಲ್ಲಿ ಹಂಚಿಹೋಗಿದ್ದರು. ಮುಂಬಯಿ ನಗರವಲ್ಲದೇ, ಪುಣೆ, ಅಹಮದಾಬಾದ್‌ಗಳಲ್ಲೂ ನಿರಾಶ್ರಿತರು ನೆಲೆ ಕಂಡುಕೊಂಡಿದ್ದರು. 1950ರ ಶರತ್ಕಾಲದಲ್ಲಿ ಸಿಂಧ್ ನಿರಾಶ್ರಿತರ ತಪಾಸಣೆಗೈದ ಮನಶ್ಶಾಸ್ತ್ರಜ್ಞರೊಬ್ಬರಿಗೆ ಸಿಂಧಿಗಳು ತೀರಾ ಅತೃಪ್ತರಾಗಿರುವುದು ಕಂಡುಬಂದಿತು. ಜನಭರಿತ ಶಿಬಿರಗಳು, ಹೊಲಸು ಚಾಳುಗಳು, ನೀರಿಲ್ಲ, ರೇಷನ್ ಇಲ್ಲ, ಎಲ್ಲಕ್ಕೂ ಮಿಗಿಲಾಗಿ ಸರ್ಕಾರದಿಂದ ಸಾಕಷ್ಟು ನೆರವು ಬೆಂಬಲಗಳು ಸಿಗುತ್ತಿಲ್ಲ ಇತ್ಯಾದಿಗಳು ಸಿಂಧಿಗಳ ದೂರುಗಳಾಗಿದ್ದವು. ಅಹಮದಾಬಾದಿನಲ್ಲಿ ನಿರಾಶ್ರಿತನೊಬ್ಬ ಆಡಿದ ಮಾತುಗಳಿವು: "ಪಾಕಿಸ್ತಾನದಲ್ಲಿ ಪಕ್ಷಿಗಳಿಗೆ ಎಸೆಯುತ್ತಿದ್ದ ಆಹಾರವನ್ನು ಇಲ್ಲಿ ನಾವೇ ತಿಂದು ಬದುಕು ಮಾಡುತ್ತಿದ್ದೇವೆ." ಸ್ಥಳೀಯ ಗುಜರಾತಿಗಳು ತಮಗೆ ಕಿರುಕುಳ ನೀಡುತ್ತಿದ್ದಾರೆಂದು ದೂರಿದ ಕೆಲವರು ವಿಶೇಷವಾಗಿ ಮುಸ್ಲಿಮರ ಬಗ್ಗೆ ಕುಪಿತರಾಗಿದ್ದರು. ಭಾರತ ಸರ್ಕಾರವನ್ನು ಸಿಂಧಿ ನಿರಾಶ್ರಿತರು ಕಟುವಾಗಿ ಖಂಡಿಸುತ್ತಿದ್ದರು. ಆದರೆ ನೆಹರೂ ಅವರ ಬಗ್ಗೆ ಉದಾರವಾಗಿದ್ದರು. "ನಮ್ಮದು ಕೆಲಸಕ್ಕೆ ಬಾರದ ಸರ್ಕಾರ. ನಮ್ಮ ಸರ್ಕಾರ ಅಯೋಗ್ಯ ಸರ್ಕಾರ. ಎಲ್ಲ ಕಳ್ಳರು. ಒಂದಾಗಿರುವ ಕಳ್ಳರು. ಪಂಡಿತ್ ನೆಹರೂ ಒಬ್ಬರೇ ಯೋಗ್ಯ ವ್ಯಕ್ತಿ. ಉಳಿದವರೆಲ್ಲ ನಿರುಪಯುಕ್ತರು, ಸ್ವಾರ್ಥಿಗಳು. ನೆಹರೂ ಅವರೇ ಹೇಳುತ್ತಾರೆ, ಉಳಿದವರೆಲ್ಲ ಕೆಲಸಮಾಡದೇ ಇರುವಾಗ ತಮ್ಮೊಬ್ಬರಿಂದ ಏನು ಮಾಡಲಾದೀತೆಂದು" ಉಗ್ರವಾಗಿ ಟೀಕಿಸಿದ್ದರು.

IV

ನಿರಾಶ್ರಿತರ ಪ್ರವಾಹ ಭಾರತದ ಮೂರನೇ ಮಹಾನಗರವಾದ ಕಲ್ಕತ್ತೆಯ ರೂಪುರೇಷೆಯನ್ನೇ ಬದಲಾಯಿಸಿಬಿಟ್ಟಿತು. ವಿಭಜನೆಗೆ ಮುಂಚೆಯೇ ಪೂರ್ವ ಬಂಗಾಳದ ಶ್ರೀಮಂತ ಕುಟುಂಬಗಳು ತಮ್ಮ ಆಸ್ತಿಪಾಸ್ತಿಯೊಂದಿಗೆ ನಗರಕ್ಕೆ ಬರಲಾರಂಭಿಸಿದ್ದರು. ವಿಭಜನೆಯ ನಂತರ ಹೆಚ್ಚಾಗಿ ಬಂದವರು ದುಡಿಯುವ ಕಾರ್ಮಿಕ ವರ್ಗದವರು ಹಾಗೂ ರೈತಾಪಿ ಜನರು. ಪಂಜಾಬಿನಲ್ಲಿ ಏಕಕಾಲಕ್ಕೆ ನಿರಾಶ್ರಿತರೆಲ್ಲ ಓಡಿ ಬಂದಿದ್ದರು. ಆದರೆ ಇಲ್ಲಿ ಹಂತ ಹಂತವಾಗಿ ಬಂದರು. 1949-50ರ ಚಳಿಗಾಲದಲ್ಲಿ ಪೂರ್ವ ಬಂಗಾಳದಲ್ಲಿ ಸರಣಿ ಕೋಮುಗಲಭೆಗಳು ಸಂಭವಿಸಿದವು. ಇದರಿಂದಾಗಿ ಹೆಚ್ಚು ಮಂದಿ ಹಿಂದೂಗಳು ಗಡಿದಾಟಿ ಬಂದರು. ಹಿಂದಿನ ವರ್ಷಗಳಲ್ಲಿ 400,000 ಮಂದಿ ನಿರಾಶ್ರಿತರು ಪಶ್ಚಿಮ ಬಂಗಾಳಕ್ಕ ವಲಸೆ ಬಂದಿದ್ದರು. 1950ರಲ್ಲಿ ಇವರ ಸಂಖ್ಯೆ 1.7 ದಶಲಕ್ಷಕ್ಕೇರಿತು.

ಇಷ್ಟೊಂದು ಮಂದಿಗೆ ಆಶ್ರಯ ಎಲ್ಲಿ ಸಿಕ್ಕೀತು? ಬಂಧು ಬಾಂಧವರನ್ನು ಹೊಂದಿದ್ದ ನಿರಾಶ್ರಿತರು ಅವರ ಮನೆಗಳಲ್ಲಿ ಆಶ್ರಯ ಪಡೆದರು. ಉಳಿದವರಿಗೆ ರೈಲ್ವೇ ಸ್ಟೇಷನ್ನೇ ವಾಸದ ಮನೆಯಾಯಿತು. ನಿರಾಶ್ರಿತರ ಹಾಸಿಗೆ, ಬಟ್ಟೆ, ಪೆಟ್ಟಿಗೆಗಳು ಪ್ಲಾಟ್‌ಫಾರಮ್ಮುಗಳಲ್ಲಿ ಚೆಲ್ಲಾಪಿಲ್ಲಿ ಹರಡಿಕೊಂಡಿದ್ದವು. "ಇಲ್ಲೇ ನಿರಾಶ್ರಿತರ ವಾಸ, ರಾತ್ರಿ ನಿದ್ದೆ, ಪ್ರಣಯ ಸಲ್ಲಾಪ, ಮೂತ್ರ ಪಾಯಿಖಾನೆ ಎಲ್ಲವೂ ಇಲ್ಲೇ. ಸೊಳ್ಳೆ, ತಿಗಣೆ, ಹೇನು, ವಾಂತಿ-ಭೇದಿಗಳ ಮಧ್ಯೆ ಬದುಕು. ಕಾಲರಾ ಪೀಡಿತರು ತಮ್ಮ ವಾಂತಿ-ಭೇದಿಗಳನ್ನು ಶೂನ್ಯ ನೋಟದಿಂದ ನೋಡುತ್ತ ಬಿದ್ದುಕೊಂಡಿದ್ದರು. ಹೆಂಗಸರು ಹೇನುಗಳನ್ನು ಕುಕ್ಕುತ್ತ ಕುಳಿತಿದ್ದರು. ಭಿಕ್ಷುಕರು ಭಿಕ್ಷೆ ಬೇಡುತ್ತಿದ್ದರು. ಇನ್ನೂ ಅನೇಕ ಮಂದಿ ನಿರಾಶ್ರಿತರು ಬೀದಿಗಳಲ್ಲಿ ಜಾನುವಾರುಗಳ ಮಧ್ಯೆ, ಚರಂಡಿಗಳಲ್ಲಿ ಹರಿವ ಮೋರಿ ನೀರಿನ ಮಧ್ಯೆ, ತಂಗಳು ತಿಂದು ಅಲ್ಲೇ ಕಲ್ಲು ಹಾಸಿಗೆ ಮೇಲೆ ಮಲಗಿ ಬದುಕನ್ನು ದೂಡಿದ್ದರು..."

ಮೇಲಿನದು 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಬಾತ್ಮೀದಾರನ ವರ್ಣನೆ. ವಾಸ್ತವವಾಗಿ, ನಿರಾಶ್ರಿತರ ಬದುಕು ಮೇಲೆ ವರ್ಣಿಸುವಷ್ಟು ಕೆಟ್ಟದಾಗಿರಲಿಲ್ಲ, ಅಸಹನೀಯವಾಗಿರಲಿಲ್ಲ. 1948ರ ಆರಂಭದಲ್ಲೇ, ತಮ್ಮ ಶೋಚನೀಯ ಸ್ಥಿತಿಗತಿಗಳಿಂದ ರೋಸಿಹೋದ ನಿರಾಶ್ರಿತರು ಲೇಕ್ ಮಿಲಿಟರಿ ಜಾಳುಗಳು, ಜೋಧಪುರ ಮಿಲಿಟರಿ ಜಾಳುಗಳು, ಮೈಸೂರು ಭವನ ಮೊದಲಾದ ಖಾಲಿ ಇದ್ದ ಮನೆಗಳನ್ನು ಆಕ್ರಮಿಸಿಕೊಂಡಿದ್ದರು. ಶ್ರೀಪುರ, ದುರ್ಗಾಪುರ, ಬಾಲಿಗಂಜ್ ಸರ್ಕ್ಯುಲರ್ ರಸ್ತೆ, ಧರ್ಮಶಾಲಾಗಳಲ್ಲಿ ಜಾಳುಗಳನ್ನು ಆಕ್ರಮಿಸಿದ್ದರು. ರಾತ್ರೋರಾತ್ರಿ ಖಾಲಿ ಇದ್ದ ಈ ಮನೆಗಳಿಗೆ ನಿರಾಶ್ರಿತರು ಬಂದು ಸೇರಿಕೊಂಡಿದ್ದರು. ಇದೊಂದು ಉದ್ದೇಶಪೂರ್ವಕವಾಗಿ ನಡೆಸಿದ ಅತಿಕ್ರಮ ಪ್ರವೇಶವಾಗಿತ್ತು.

ಕೆಲವರು ನಿರಾಶ್ರಿತರು ತೆರವಾಗಿದ್ದ ಮನೆಗಳನ್ನು ವಶಪಡಿಸಿಕೊಂಡಂತೆ, ಉಳಿದ ಮಂದಿಯೂ ವಸಾಹತುಶಾಹಿಗೆ ಸೇರಿದ ಖಾಲಿಮನೆಗಳನ್ನು ವಶಕ್ಕೆ ತೆಗೆದುಕೊಂಡರು. ಸಂಜೆ ಗತ್ತಲಾದಂತೆ ಖಾಲಿಯಿದ್ದ ಮನೆಗಳನ್ನು-ಜಾಗಗಳನ್ನು ಆಕ್ರಮಿಸಿಕೊಳ್ಳುವುದು, ಖಾಲಿ

ನಿವೇಶನಗಳಲ್ಲಿ ಜೋಪಡಿಗಳನ್ನು ನಿರ್ಮಿಸಿ ಪಾಳಿಯಂತೆ ಅವುಗಳನ್ನು ಉಪಯೋಗಿಸುವುದು ರೂಢಿಗೆ ಬಂತು. ಹೀಗೆ, ಖಾಲಿ ಇದ್ದ ಮನೆಗಳನ್ನು, ಜಾಗಗಳನ್ನು ಆಕ್ರಮಿಸಿಕೊಂಡ ನಿರಾಶ್ರಿತರು ನಂತರ ಅಲ್ಲಿಂದ ಬೇರೆಡೆಗೆ ಹೋಗಲು ನಿರಾಕರಿಸಿದರು. ಕೆಲವು ಸಂದರ್ಭಗಳಲ್ಲಿ ತಾವು ಆಕ್ರಮಿಸಿಕೊಂಡ ಜಾಗಕ್ಕೆ ಕ್ರಯ ನೀಡಲು ಸಿದ್ಧವೆಂದೂ ಆದರೆ ಜಾಗ ಮಾತ್ರ ಬಿಟ್ಟು ಕೊಡಲು ಸಿದ್ಧರಿಲ್ಲವೆಂದೂ ಪಟ್ಟು ಹಿಡಿದರು.

ಪಶ್ಚಿಮ ಬಂಗಾಳ ಸರ್ಕಾರದ ಮೀನಮೇಷ ಎಣಿಸುವ ಅನಿಶ್ಚತತೆಯ ಪ್ರವೃತ್ತಿ ನಿರಾಶ್ರಿತರು ಕಾನೂನನ್ನು ತಮ್ಮ ಕೈಗೆತ್ತಿಕೊಳ್ಳಲು ಪರೋಕ್ಷವಾಗಿ ಪ್ರೇರಣೆಯನ್ನೊದಗಿಸಿತು. ಒಂದು, ಪಶ್ಚಿಮ ಬಂಗಾಳದಿಂದ ಮನೆ-ಮಠ, ಜಮೀನು ತೊರೆದು ಜನರು ಪಾಕಿಸ್ತಾನಕ್ಕೆ ಬೃಹತ್ ಪ್ರಮಾಣದಲ್ಲಿ ವಲಸೆ ಹೋಗಿರಲಿಲ್ಲ. ಹೀಗಾಗಿ ಪಾಕಿಸ್ತಾನದಿಂದ ಬಂದ ಬಂಗಾಳಿ ನಿರಾಶ್ರಿತರಿಗೆ ಹಂಚಲು ಹೆಚ್ಚು ಭೂಮಿ ಲಭ್ಯವಿರಲಿಲ್ಲ. ಎರಡನೆಯದಾಗಿ, ನಿರಾಶ್ರಿತರು ಪ್ರವಾಹದೋಪಾದಿ ಬರುತ್ತಿರುವುದು ಏನಿದ್ದರೂ ತಾತ್ಕಾಲಿಕವಾದದ್ದು, ಪರಿಸ್ಥಿತಿ ಸುಧಾರಿಸಿದ ನಂತರ ಹಿಂದೂಗಳು ಪೂರ್ವ ಬಂಗಾಳದಲ್ಲಿನ ತಮ್ಮ ಮನೆಗಳಿಗೆ ವಾಪಸಾಗುವರೆಂದು ಸರ್ಕಾರ ಭಾವಿಸಿತ್ತು. ಬಂಗಾಳಿಗಳು, ಪಂಜಾಬಿಗಳಷ್ಟು ಕೋಮು ಮನೋಭಾವದವರಲ್ಲ ಎಂಬ ನಂಬಿಕೆಯೂ ಸರ್ಕಾರದ ಈ ಭಾವನೆಗೆ ಪುಷ್ಟಿ ನೀಡಿತ್ತು. ಇಲ್ಲಿ ಮುಸ್ಲಿಮರು ಹಿಂದೂಗಳ ಭಾಷೆಯನ್ನೇ ಮಾತನಾಡುತ್ತಿದ್ದರು, ಊಟ ತಿಂಡಿಗಳಲ್ಲೂ ಹಿಂದೂಗಳಂತೆಯೇ ಇದ್ದರು. ಹೀಗಾಗಿ ಪೂರ್ವದಲ್ಲಿ ಹಿಂದೂ ಮುಸ್ಲಿಮರು ಅನ್ಯೋನ್ಯವಾಗಿ ಸಹಬಾಳ್ವೆ ಮುಂದುವರಿಸಲು ಅವರ ಆಕ್ಷೇಪ-ಅಭ್ಯಂತರಗಳೇನೂ ಇರಲಿಕ್ಕಿಲ್ಲವೆಂಬ ಪ್ರತಿಪಾದನೆಯೂ ಇತ್ತು.

ಆದರೆ ಈ ಕೊನೆಯ ಪ್ರತಿಪಾದನೆಯನ್ನು ನಿರಾಶ್ರಿತರು ಉಗ್ರವಾಗಿ ಅಲ್ಲಗಳೆದರು. ಇಸ್ಲಾಮಿಕ್ ರಾಷ್ಟ್ರವಾಗಿ ಕಂಡ ಪಾಕಿಸ್ತಾನಕ್ಕೆ ವಾಪಸಾಗುವುದು ಅವರಿಗೆ ಇಷ್ಟವಿರಲಿಲ್ಲ. ಆ ಕಾಲದ ಅತ್ಯಂತ ಪ್ರಭಾವಶಾಲಿಯಾದ ಬುದ್ಧಿಜೀವಿ ಎನಿಸಿಕೊಂಡಿದ್ದ ಇತಿಹಾಸಕಾರ ಸರ್ ಯದುನಾಥ್ ಸರ್ಕಾರ್ ನಿರಾಶ್ರಿತರ ವಾದವನ್ನು ಸಮರ್ಥಿಸಿ ಅವರಿಗೆ ಬೆಂಬಲವಾಗಿ ನಿಂತರು. 1948ರ ಆಗಸ್ಟ್ 16ರಂದು ನಡೆದ ನಿರಾಶ್ರಿತರ ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡಿದ ಯದುನಾಥ್ ಸರ್ಕಾರ್, ತಮ್ಮ ಭಾಷಣದಲ್ಲಿ, ಪೂರ್ವಬಂಗಾಳದ ಹಿಂದೂಗಳ ವಲಸೆಯನ್ನು ಹದಿನಾಲ್ಕನೆ ಲೂಯಿ ಕಾಲದ ಫ್ರೆಂಚ್ ಪ್ರಾಟೆಸ್ಟೆಂಟರ ವಲಸೆಗೆ ಹೋಲಿಸಿದರು. ವಲಸೆಗಾರರಿಗೆ ಆಶ್ರಯ ನೀಡಿ, ಅವರೊಡನೆ ಸಾಮರಸ್ಯದಿಂದ ಬದುಕುವ ಮೂಲಕ ತಮ್ಮ ಸಂಸ್ಕೃತಿ ಮತ್ತು ಅರ್ಥವ್ಯವಸ್ಥೆಯನ್ನು ಪಾಲಿಸಿ ಪೋಷಿಸುವಂತೆ ಪಶ್ಚಿಮ ಬಂಗಾಳದ ಜನತೆಗೆ ಅವರು ಆಗ್ರಹಪಡಿಸಿದರು. ನಿರಾಶ್ರಿತರ ಸಹಾಯದಿಂದ "ನಾವು ನಮ್ಮ ಪಶ್ಚಿಮ ಬಂಗಾಳವನ್ನು ಯೆಹೂದಿಗಳ ಆಳ್ವಿಕೆಯ ಪ್ಯಾಲೆಸ್ಟೇನಿನಂತೆ ಪರಿವರ್ತಿಸಬೇಕು, ಪಶ್ಚಿಮ ಬಂಗಾಳ ಗಾಢಾಂಧಕಾರದಲ್ಲಿ ಬೆಳಕಾಗಬೇಕು, ಮಧ್ಯಯುಗದ ಅಜ್ಞಾನ, ತ್ಯಕ್ತ ಪುರೋಹಿತ ಶಾಹಿಯ ಧರ್ಮಾಂಧತೆಗಳ ಮರುಭೂಮಿಯಲ್ಲಿ ನಾಗರಿಕತೆಯ ನಂದನವನವನ್ನಾಗಿಸಬೇಕು" ಎಂದು ಈ ಚರಿತ್ರೆಕಾರರು ಕರೆನೀಡಿದ್ದರು.

1948ರ ಸೆಪ್ಟಂಬರಿನಲ್ಲಿ ಅಖಿಲ ಬಂಗಾಳಿ ನಿರಾಶ್ರಿತರ ಕ್ರಿಯಾ ಸಮಿತಿಯೊಂದನ್ನು ರಚಿಸಲಾಯಿತು. ನಿರಾಶ್ರಿತರಿಗೆ ನ್ಯಾಯಯುತವಾದ ಪರಿಹಾರ ನೀಡಬೇಕೆಂದೂ ಅವರಿಗೆ ಪೌರತ್ವದ ಹಕ್ಕುಗಳನ್ನು ನೀಡಬೇಕೆಂದೂ ಒತ್ತಾಯಪಡಿಸಿ ಮೆರವಣಿಗೆ, ಪ್ರದರ್ಶನಗಳನ್ನು ನಡೆಸಲಾಯಿತು. "ನಿರಾಶ್ರಿತರನ್ನು ರಸ್ತೆ ಮಧ್ಯಕ್ಕೆ ತಂದು ನಿಲ್ಲಿಸಿ ಪ್ರದರ್ಶನ ನಡೆಸುವುದು, ಮೆರವಣಿಗೆಗಳನ್ನು ನಡೆಸುವುದು, ವಾಹನ ಸಂಚಾರಕ್ಕೆ ಅಡಚಣೆಯುಂಟು ಮಾಡುವುದು, ಕಲ್ಲು ತೂರಾಟ ನಡೆಸುವುದು ಇವೇ ಮೊದಲಾದ ಕೃತ್ಯಗಳಿಂದ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರುವುದು ಕ್ರಿಯಾ ಸಮಿತಿಯ ಗುರಿಯಾಗಿತ್ತು. ನಿರಾಶ್ರಿತ ಪ್ರದರ್ಶನಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಬೇಕಾಯಿತು; ಟ್ರಾಮುಗಳನ್ನು, ಬಸ್ಸು ಕಾರುಗಳನ್ನು ಬೆಂಕಿ ಇಟ್ಟು ಸುಡುತ್ತಿದ್ದ ಪ್ರದರ್ಶನಕಾರರನ್ನು ಚದುರಿಸಲು ಲಾಠಿ ಪ್ರಹಾರ ನಡೆಸಬೇಕಾಯಿತು. ನಿರಾಶ್ರಿತರ ಈ ಎಲ್ಲ ಕೃತ್ಯಗಳೂ, ಪೊಲೀಸರ ಕ್ರಮಗಳೂ ಆಗಿನ ಕಲ್ಕತ್ತೆಯ ನಿತ್ಯ ಜೀವನದ ಲಕ್ಷಣಗಳೇ ಆಗಿಬಿಟ್ಟವು."

ತಮ್ಮ ನಿಯಂತ್ರಣಕ್ಕೊಳಪಡದ ಬಾಹ್ಯ ಶಕ್ತಿಗಳಿಂದಾಗಿ ಮನೆ ಮಠ ಕಳೆದುಕೊಂಡು ವಲಸೆಬಂದ ನಿರಾಶ್ರಿತರು ಉಗ್ರಗಾಮಿ ಚಳವಳಿಗಳಿಗೆ ಗ್ರಾಸವಾದರು. ದೆಹಲಿ ಮತ್ತು ಪಂಜಾಬುಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕಸಂಘ ವಲಸಿಗರ ನಡುವೆ ದೃಢವಾಗಿ ಹೆಜ್ಜೆಯೂರಿತು. ಬಂಗಾಳದಲ್ಲಿ ಆರ್.ಎಸ್.ಎಸ್.ನ ಸೋದರ ಸಂಸ್ಥೆಯಾದ ಹಿಂದೂ ಮಹಾಸಭಾ ಸಮಸ್ಯೆಗೆ ಧಾರ್ಮಿಕ ಬಣ್ಣ ಹಚ್ಚಲು ಹಗಲುರಾತ್ರಿ ಶ್ರಮಿಸಿತು. "ಭಾರತ ಸ್ವಾತಂತ್ರ್ಯವೆಂಬ ಮಹಾಯಜ್ಞದಲ್ಲಿ ಬಂಗಾಳಿ ಹಿಂದೂಗಳನ್ನು ಬಲಿಪಶುಗಳನ್ನಾಗಿ ಆಹುತಿ ಕೊಡಲಾಯಿತೆಂದು" ಹಿಂದೂ ಮಹಾಸಭಾ ನಾಯಕರು ಬೊಬ್ಬೆಹಾಕಿದರು. ಪೂರ್ವ ಪಾಕಿಸ್ತಾನಕ್ಕೆ ಹಿಂದಿರುಗುವಂತೆ ನಿರಾಶ್ರಿತರಿಗೆ ಮನವಿ ಮಾಡುವ ಮೂಲಕ ಸರ್ಕಾರ, ವಿರೋಧಿಗಳನ್ನು ತೃಪ್ತಿಪಡಿಸುವ ಹಾಗೂ ನರಮೇಧಕ್ಕೆ ಒತ್ತಾಸೆ ನೀಡುವಂಥ ಅಪರಾಧವನ್ನೆಸಗುತ್ತಿದೆಯೆಂದು ಆರೋಪ ಮಾಡಿದರು. ಸರ್ಕಾರ ಮಣಿಯುವಂತೆ ನಿರಾಶ್ರಿತರಿಗೆ ಸೂಚಿಸುತ್ತಿದೆ, ಆದರೆ ಇಂದು ಆಗಬೇಕಾಗಿರುವುದು ನಿರಾಶ್ರಿತರಿಗೆ ಪುರುಷತ್ವದ ಕಸುವು ತುಂಬುವ ಕೆಲಸ, ಅವರಿಗೆ ಬೇಕಾಗಿರುವುದು ಪುರುಷತ್ವದ ಓಜಸ್ಸು ಎಂಬೆಲ್ಲ ಹೇಳಿಕೆಗಳು ಬಂದವು. "ನಿರಾಶ್ರಿತರ ಮಧ್ಯದಿಂದ ಮತ್ತೊಬ್ಬ ಶಿವಾಜಿ ಅಥವಾ ರಾಣಾ ಪ್ರತಾಪ್ ಉದಿಸಿ ಬರಲಿ ಎಂಬುದೇ ಎಲ್ಲರ ಆಶಯವಾಗಿದೆ" ಎಂದು ಕೋಪತಪ್ತ ಹಿಂದೂ ಒಬ್ಬ 1950ರ ಮಾರ್ಚಿಯಲ್ಲಿ ಬರೆದಿದ್ದ.

ಮಧ್ಯಯುಗದಲ್ಲಿ ಮುಸ್ಲಿಂ ದೊರೆಗಳ ವಿರುದ್ಧ ಹೋರಾಡಿದ ಹಿಂದೂ ವೀರಯೋಧರ ಸ್ಮರಣೆ, ಆವಾಹನೆಗಳಿಗೆ ದೆಹಲಿ, ಪಂಜಾಬುಗಳಲ್ಲಿ ಉತ್ತಮ ಪ್ರತಿಕ್ರಿಯೆ ಬರಲಿಲ್ಲ. ಈ ಆವೇಶದ ಮಾತುಗಳಿಗೆ ಜನ ಕಿವಿಗೊಡಲಿಲ್ಲ. ಆದರೆ ಬಂಗಾಳದಲ್ಲಿ ಕಮ್ಯುನಿಸ್ಟರು ತುಂಬ ಯಶಸ್ವಿಯಾಗಿ ನಿರಾಶ್ರಿತರನ್ನು ಸಂಘಟಿಸಿದರು. ಸರ್ಕಾರಿ ಕಚೇರಿಗಳಿಗೆ ನಿರಾಶ್ರಿತರನ್ನು ಮೆರವಣಿಗೆಯಲ್ಲಿ ಕರೆದೊಯ್ಯುವವರು ಕಮ್ಯುನಿಸ್ಟರೇ. ಸಾಗುವಳಿ ಮಾಡದೇ ಬಿಟ್ಟಿದ್ದ

ಜಮೀನನ್ನು, ಪಾಳುಭೂಮಿಯನ್ನು ಅತಿಕ್ರಮಿಸುವಂತೆ ನಿರಾಶ್ರಿತರಿಗೆ ಪ್ರೇರಣೆ-ಪ್ರಚೋದನೆ ನೀಡಿದವರು ಕಮ್ಯುನಿಸ್ಟರೇ. ಇಂಥ ಅತಿಕ್ರಮಣಕ್ಕೆ ನಿರಾಶ್ರಿತರಲ್ಲಿ, "ಸಂಘಟಿತ ಬಲ ಮತ್ತು ತೀವ್ರವಾದ ಅವಶ್ಯಕತೆ" ಇವೆರಡರ ಹೊರತಾಗಿ ಬೇರಾವ ಸಮರ್ಥನೆಯೂ ಇರಲಿಲ್ಲ. ಹೀಗೆ ನಗರದ ಅನೇಕ ಕಡೆ ಸ್ವಯಂಸ್ಫೂರ್ತಿಯ ವಾಸದ ನೆಲೆಗಳು ನಿರ್ಮಾಣಗೊಂಡವು. ಥಡಿಕೆಯ ಜೋಪಡಿಗಳು, ಹೆಂಚಿನ ಮನೆಗಳು, ಮಣ್ಣಿನ ಗೋಡೆಯ ಮನೆಗಳು, ಬಿದುರು ಕೋಲು, ಚಾಪೆಗಳ ಗುಡಿಸಲುಗಳು ನಿರ್ಮಾಣಗೊಂಡವು. ಇವುಗಳನ್ನು ಪೂರ್ವ ಬಂಗಾಳದ ಶೈಲಿಯಲ್ಲೇ ನಿರ್ಮಿಸಲಾಗಿತ್ತು.

1950ರ ವೇಳೆಗೆ ಇಂಥ ಅಕ್ರಮ ವಸತಿಗಳಲ್ಲಿ 200,000 ನಿರಾಶ್ರಿತರು ವಾಸವಾಗಿದ್ದರು. ಇವರಿಗೆ ಸರ್ಕಾರದ ಬೆಂಬಲವಿರಲಿಲ್ಲ, ನೆರವಿರಲಿಲ್ಲ. ಆದ್ದರಿಂದ ಇವರು ತಮ್ಮದೇ ಆದ ಸಮಿತಿಗಳನ್ನು ರಚಿಸಿಕೊಂಡರು, ಕಾಲೋನಿಗಳ (ವಸಾಹತು) ಆಡಳಿತಕ್ಕೆ ತಮ್ಮದೇ ನಿಯಮಗಳನ್ನು ರೂಪಿಸಿಕೊಂಡರು. ಹೀಗೆ ಒಂದು ಸುಸಂಘಟಿತ ವ್ಯವಸ್ಥೆಯಾಗಿ ಬೆಳೆದರು. ನಿರಾಶ್ರಿತರು ತಮ್ಮ ತಮ್ಮ ವಸಾಹತುಗಳಲ್ಲಿ 500 ಮೈಲಿ ಉದ್ದದ ರಸ್ತೆ ನಿರ್ಮಿಸಿದರೆಂದೂ, 700 ಕೊಳವೆ ಬಾವಿಗಳನ್ನು ತೋಡಿದರೆಂದೂ 45 ಪ್ರೌಢ ಶಾಲೆಗಳನ್ನೂ 100 ಪ್ರಾಥಮಿಕ ಶಾಲೆಗಳನ್ನೂ ತೆರೆದರೆಂದೂ 40 ಸಾವಿರ ನಿರಾಶ್ರಿತ ಕುಟುಂಬಗಳ ಪ್ರಾತಿನಿಧಿಕ ಸಂಸ್ಥೆಯಾದ ದಕ್ಷಿಣ ಕಲ್ಕತ್ತಾ ನಿರಾಶ್ರಿತರ ಪುನರ್ವಸತಿ ಸಮಿತಿ ತಿಳಿಸಿದೆ. ಇಷ್ಟೂ ಕೆಲಸವನ್ನು ನಿರಾಶ್ರಿತರು ತಮ್ಮ ಖರ್ಚಿನಲ್ಲಿ, ತಮ್ಮ ದುಡಿಮೆ, ಮುಂದಾಳತ್ವಗಳಲ್ಲಿ ಮಾಡಿದ್ದರು. ಈ ವಸಾಹತುಗಳನ್ನು ಕಲ್ಕತ್ತೆ ಮುನಿಸಿಪಾಲಿಟಿಯ ಪರಿಧಿಯೊಳಕ್ಕೆ ತರುವ ಮೂಲಕ ಅವುಗಳನ್ನು ಕಾನೂನುಬದ್ಧಗೊಳಿಸಬೇಕೆಂದು ಪುನರ್ವಸತಿ ಸಮಿತಿ ಸರ್ಕಾರಕ್ಕೆ ಒತ್ತಾಯಪಡಿಸಿತು. ಖಾಸಗಿ ನಿವೇಶನಗಳನ್ನು, ಖಾಸಗಿ ಶಾಲೆಗಳನ್ನು ಸಕ್ರಮಗೊಳಿಸಿ ಅವರಿಗೆ ಸಾಲಸೌಲಭ್ಯ ಒದಗಿಸುತ್ತಿರುವ ರೀತಿಯಲ್ಲೇ ನಿರಾಶ್ರಿತರ ವಸಾಹತುಗಳನ್ನು ಸಕ್ರಮಗೊಳಿಸಬೇಕೆಂಬುದು ಸಮಿತಿಯ ಬೇಡಿಕೆಯಾಗಿತ್ತು.

ನಿರಾಶ್ರಿತರ ಬಗ್ಗೆ ಪದೇ ಪದೇ ಮಾತನಾಡುತ್ತಿದ್ದವರು, ಪಂಜಾಬಿ ನಿರಾಶ್ರಿತರಿಗೆ ಪುನರ್ವಸತಿಯಲ್ಲಿ ಆದ್ಯತೆ ನೀಡಲಾಗುತ್ತಿದೆಯೆಂದು ದೂರಿದರು. ಉತ್ತರಭಾರತಕ್ಕೆ ಭೇಟಿಕೊಟ್ಟಿದ್ದ ಬಂಗಾಳಿ ಸಮಾಜ ಸೇವಕರಿಗೆ, ಅಲ್ಲಿನ ನಿರಾಶ್ರಿತರ ಶಿಬಿರಗಳು ಗುಣಮಟ್ಟದಲ್ಲಿ ಹೆಚ್ಚು ಮೇಲ್ದರ್ಜೆಯವಾಗಿ ಕಂಡವು. ಅಲ್ಲಿನ ನಿರಾಶ್ರಿತರ ಮನೆಗಳು ಕಾಯಂ ನಿರ್ಮಾಣವಾಗಿದ್ದವು, ಕುಡಿಯುವ ನೀರಿನ ಸರಬರಾಜು, ನೈರ್ಮಲ್ಯೀಕರಣ ವ್ಯವಸ್ಥೆ ಅಲ್ಲಿ ಚೆನ್ನಾಗಿದ್ದವು. ಆದರೆ ಬಂಗಾಳದ ಶಿಬಿರಗಳಲ್ಲಿ ಇವತ್ತೋ ನಾಳೆಯೋ ಬೀಳಬಹುದಾದಂಥ ಬೊಂಬಿನ ಜೋಪಡಿಗಳು, ಥಡಿಕೆಯ ಗುಡಿಸಲುಗಳೇ ನಿರಾಶ್ರಿತರ ಆಧಾರ-ಆಶ್ರಯತಾಣಗಳಾಗಿದ್ದವು. ಹೆಂಗಸರಿಗೆ ಪ್ರತ್ಯೇಕ ಕೋಣೆಗಳಿರಲಿಲ್ಲ, ಅಡಿಗೆಮನೆಗಳಿರಲಿಲ್ಲ. ಉತ್ತರದಲ್ಲಿ ನಿರಾಶ್ರಿತರಿಗೆ ನೀಡುತ್ತಿದ್ದ ಭತ್ಯೆ ಮತ್ತು ಬಟ್ಟೆಯ ಭತ್ಯೆಯ ಮೊತ್ತವೂ ಹೆಚ್ಚಾಗಿತ್ತು.

ಒಟ್ಟಾರೆ ಹೇಳುವುದಾದರೆ ಪಂಜಾಬಿನಲ್ಲಿ ಪುನರ್ವಸತಿ ಪ್ರಕ್ರಿಯೆ ಅಷ್ಟೇನೂ ತ್ರಾಸದಾಯಕವಾಗಿರಲಿಲ್ಲ. 1950ರ ವೇಳೆಗೇ ಉತ್ತರದಲ್ಲಿ ನಿರಾಶ್ರಿತರಿಗೆ ಹೊಸ ಉದ್ಯೋಗಗಳು ದೊರೆಕಿದ್ದವು, ಹೊಸ ವಸತಿಗಳು ದೊರಕಿದ್ದವು. ಆದರೆ ಪೂರ್ವದಲ್ಲಿ ಅಭದ್ರತೆ ಮುಂದುವರಿದಿತ್ತು. "ಎಲ್ಲಿಯವರೆಗೆ ಬಂಗಾಳಿ ನಿರಾಶ್ರಿತರಲ್ಲಿ ಅನಿಶ್ಚಿತತೆ ಮತ್ತು ನಿರುದ್ಯೋಗ ಸಮಸ್ಯೆ ಮುಂದುವರಿಯುವುದೋ ಅಲ್ಲಿಯ ತನಕ ಆರ್ಥಿಕ ಹಾಗೂ ರಾಜಕೀಯ ಅತೃಪ್ತಿಗಳೂ ಬೆಳೆಯುತ್ತಲೇ ಇರುತ್ತವೆ. ಇವರ ಕುಂದು ಕೊರತೆಗಳ ಲಾಭ ಪಡೆದುಕೊಳ್ಳುವುದರಲ್ಲಿ ಕಮ್ಯುನಿಸ್ಟರು ಯಶಸ್ವಿಯಾಗುತ್ತಾರೆ" ಎಂದು 1954ರ ಜುಲೈನಲ್ಲಿ ಪತ್ರಕರ್ತರೊಬ್ಬರು ಬರೆದಿದ್ದರು.

V

ವಿಭಜನೆಯ ಮುಖ್ಯ ಬಲಿಪಶುಗಳೆಂದರೆ ಮಹಿಳೆಯರು. ಹಿಂದೂ, ಸಿಖ್, ಮುಸ್ಲಿಂ ಎಲ್ಲ ಸಮುದಾಯಗಳ ಮಹಿಳೆಯರು. ಸಿಂಧ್‌ನ ಗೌರವಾನ್ವಿತ ಕಾಂಗ್ರೆಸ್ ರಾಜಕಾರಣಿ ಜೋಯಿತ್ರಾಂ ಗಿದ್ವಾನಿಯವರು ಹೇಳಿರುವಂತೆ: "ಯಾವುದೇ ಯುದ್ಧದಲ್ಲೂ ಮಹಿಳೆಯರು ಇಷ್ಟೊಂದು ಯಾತನೆಯನ್ನು ಅನುಭವಿಸಿರಲಿಲ್ಲ". ಮಹಿಳೆಯರ ಕೊಲೆ, ಶೀಲಹರಣ, ಅಂಗಾಂಗ ಛೇದನ, ಕೊನೆಗೆ ಪರಿತ್ಯಕ್ತಿ. ವಿಭಜನೆ ಕಾಲದಲ್ಲಿ ಇಷ್ಟೆಲ್ಲ ಹಾನಿಗಳನ್ನು, ಕಷ್ಟನಷ್ಟ-ಯಾತನೆಗಳನ್ನು ಅನುಭವಿಸಿದ ಮಹಿಳೆಯರು ಕೊನೆಗೆ ಪರಿತ್ಯಕ್ತೆಯರಾಗಬೇಕಾಯಿತು. ಸ್ವಾತಂತ್ರ್ಯ ಬಂದನಂತರ ದೆಹಲಿ ಮತ್ತು ಮುಂಬಯಿಗಳ ಸೂಳೆಗೇರಿಗಳು ನಿರಾಶ್ರಿತ ಮಹಿಳೆಯರಿಂದ ತುಂಬಿ ತುಳುಕಿದವು. ಇವರೆಲ್ಲ, ತಮ್ಮ ಇಚ್ಛೆಗೆ ವಿರುದ್ಧವಾಗಿ, ಬೇರೊಬ್ಬರು ತಮ್ಮ ಮೇಲೆ ನಡೆಸಿದ ದುಷ್ಕೃತ್ಯಕ್ಕಾಗಿ ತಮ್ಮ ಕುಟುಂಬಗಳಿಂದ ಪರಿತ್ಯಕ್ತರಾದ ಅಭಾಗಿನಿಯರು.

1947ರ ಬೇಸಿಗೆಯಲ್ಲಿ ಪಂಜಾಬಿನಲ್ಲಿ ಹಿಂಸಾಚಾರ ಹಳ್ಳಿಯಿಂದ ಹಳ್ಳಿಗೆ ಕಾಳ್ಗಿಚ್ಚಿನಂತೆ ಹಬ್ಬಿದಾಗ ಪೂರ್ವ ಪ್ರಾಂತ್ಯದಲ್ಲಿ ಹಿಂದೂಗಳು ಮತ್ತು ಸಿಖ್ಖರು ಮುಸ್ಲಿಂ ಮಹಿಳೆಯರನ್ನು ಅಪಹರಿಸಿ ಇಟ್ಟುಕೊಂಡರು. ಇದಕ್ಕೆ ಪ್ರತಿ ಮರ್ಯಾದೆಯ ಕೆಲಸವನ್ನು (ಹಾಗೆಂದು ಕರೆಯಬಹುದಾದಲ್ಲಿ) ಮುಸ್ಲಿಂ ಪುರುಷರು ಮಾಡಿದರು. ಇವರು ಹಿಂದೂ ಮತ್ತು ಸಿಖ್ ಯುವತಿಯರನ್ನು ಅಪಹರಿಸಿಕೊಂಡು ಹೋದರು. ಆದರೆ ವಿಭಜನೆ ಕಾವು ಆರಿದ ನಂತರ, ಹರಿದ ನೆತ್ತರು ಒಣಗಿದ ನಂತರ, ಅಪಹೃತ ಮಹಿಳೆಯರನ್ನು ಬಂಧನಮುಕ್ತರನ್ನಾಗಿ ಮಾಡಿ ಅವರ ಮನೆಗಳಿಗೆ ಕಳುಹಿಸಿಕೊಡಲು ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು ಒಪ್ಪಿಕೊಂಡವು.

ಭಾರತದಲ್ಲಿ ಅಪಹೃತ ಮಹಿಳೆಯರ ಬಂಧನಮುಕ್ತಿ ಕಾರ್ಯಾಚರಣೆ ಮೃದುಲಾ ಸಾರಾಭಾಯಿ ಮತ್ತು ರಾಮೇಶ್ವರಿ ನೆಹರೂ ಅವರ ನೇತೃತ್ವದಲ್ಲಿ ನಡೆಯಿತು. ಇವರಿಬ್ಬರೂ ಕುಲೀನ ಶ್ರೀಮಂತ ಮನೆತನದವರಾಗಿದ್ದು ರಾಷ್ಟ್ರೀಯತಾವಾದಿಗಳಾಗಿದ್ದರು. ಈ ಕಾರ್ಯಾಚರಣೆಯಲ್ಲಿ ತೀವ್ರ ಆಸಕ್ತಿ ತಳೆದಿದ್ದ ಜವಹರಲಾಲ್ ನೆಹರೂ ಅವರು ಇವರಿಬ್ಬರಿಗೆ ಸಂಪೂರ್ಣ

ನೆರವು ನೀಡಿದರು. ನಿರಾಶ್ರಿತರನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣದಲ್ಲಿ "ಈ ಎಲ್ಲ ಕಷ್ಟನಷ್ಟಗಳಲ್ಲಿ ಬಲಿಪಶುಗಳಾದ ಮಹಿಳೆಯರನ್ನು" ವಿಶೇಷವಾಗಿ ಪ್ರಸ್ತಾಪಿಸಿ ಮಾತನಾಡಿದರು. "ತಮ್ಮನ್ನು ಮನೆಗಳಿಗೆ ವಾಪಸು ಕರೆಸಿಕೊಳ್ಳುವುದರಲ್ಲಿ ನಾವು ಅರೆ ಮನಸ್ಸುಳ್ಳವರಾಗಿದ್ದೇವೆ ಅಥವಾ ನಿಮ್ಮ ಶೀಲವನ್ನು ಶಂಕಿಸುತ್ತೇವೆ ಎಂದು ನೀವುಗಳು ಖಂಡಿತವಾಗಿಯೂ ಭಾವಿಸಬಾರದು" ಎಂದು ನೆಹರೂ ಕಳಕಳಿಯಿಂದ ಮನವಿ ಮಾಡಿದ್ದರು. "ಅದು ಅವರ ತಪ್ಪಲ್ಲ, ಆದ್ದರಿಂದ ಅವರನ್ನು ನಾವು ಪ್ರೀತಿ ವಾತ್ಸಲ್ಯಗಳಿಂದ ಮನೆಗಳಿಗೆ ಮತ್ತೆ ಬರಮಾಡಿಕೊಳ್ಳಬೇಕು. ಅವರನ್ನು ಬಲಾತ್ಕಾರದಿಂದ ಅಪಹರಿಸಲಾಯಿತು. ಅವರನ್ನು ಗೌರವಯುತವಾಗಿ ಮತ್ತೆ ನಮ್ಮ ಮನೆಗಳಿಗೆ ಕರೆತರುವುದು ಮತ್ತು ಅವರನ್ನು ಪ್ರೀತಿ ವಾತ್ಸಲ್ಯಗಳಿಂದ ನಡೆಸಿಕೊಳ್ಳುವುದು ನಮ್ಮ ಇಚ್ಛೆಯಾಗಿದೆ. ಅವರೆಲ್ಲರನ್ನು ತಮ್ಮ ಮನೆಗಳಿಗೆ ವಾಪಸು ಕರೆಸಿಕೊಳ್ಳುವ ಬಗ್ಗೆ ಅವರಿಗೆ ಎಲ್ಲ ಸಹಾಯ ನೀಡುವುದರ ಬಗ್ಗೆ ಅವರು ಸಂದೇಹ ಪಡಬಾರದು". ಇವು ನೆಹರೂ ಅಭಾಗಿನಿಯರನ್ನುದ್ದೇಶಿಸಿ ಆಡಿದ ಮಾತುಗಳು.

ಅಪಹೃತ ಮಹಿಳೆಯರನ್ನು ಒಬ್ಬೊಬ್ಬರನ್ನಾಗಿ ಪತ್ತೆ ಹಚ್ಚಲಾಯಿತು. ಅಪಹೃತ ಮಹಿಳೆ ಇರುವ ಜಾಗದ ಸುಳಿವು ತಿಳಿದ ಕೂಡಲೇ, ಅಂದು ಸಂಜೆ ಸೂರ್ಯಾಸ್ತದ ನಂತರ, ಗಂಡಸರುಗಳು ಹೊಲಗದ್ದೆಗಳಿಂದ ಮನೆಗಳಿಗೆ ವಾಪಸಾದ ನಂತರ ಪೊಲೀಸರು ಗ್ರಾಮ ಪ್ರವೇಶಿಸುತ್ತಿದ್ದರು. ಮಾಹಿತಿಗಾರ ಅವರನ್ನು ಅಪಹರಣಕಾರನ ಮನೆಗೆ ಕರೆದೊಯ್ಯುತ್ತಿದ್ದ. ತನ್ನ ವಶದಲ್ಲಿರುವ ಮಹಿಳೆಯನ್ನು ತಾನು ಅಪಹರಿಸಿದ್ದಲ್ಲವೆಂದೇ ತಪ್ಪಿತಸ್ಥ ವಾದಿಸುತ್ತಿದ್ದ. ಈ ಆಕ್ಷೇಪಗಳನ್ನೆಲ್ಲ ಬದಿಗೊತ್ತಿ ಅಪಹರಿಸಿಡಲಾಗಿದ್ದ ಮಹಿಳೆಯನ್ನು ಕರೆದೊಯ್ಯಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಬಲಪ್ರಯೋಗ ಮಾಡಿ ಅಪಹೃತ ಮಹಿಳೆಯರನ್ನು ಮುಕ್ತಗೊಳಿಸಿದ್ದೂ ಉಂಟು. ಅಲ್ಲಿಂದ ಪೊಲೀಸರು ವಿಮುಕ್ತ ಮಹಿಳೆಯನ್ನು ಸರ್ಕಾರದ ಶಿಬಿರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ನಂತರ ಗಡಿದಾಟಿಸಿ ಅವರ ಊರುಗಳಿಗೆ ಕಳುಹಿಸಿಕೊಡುತ್ತಿದ್ದರು.

1948ರ ಮೇ ವೇಳೆಗೆ 12500 ಮಂದಿ ಅಪಹೃತ ಮಹಿಳೆಯರನ್ನು ಬಂಧಮುಕ್ತಗೊಳಿಸಿ ಅವರ ಮನೆಗಳಿಗೆ ಕಳುಹಿಸಿಕೊಡಲಾಗಿತ್ತು. ಇಲ್ಲಿ ದುರಂತವೆಂದರೆ, ವಿಪರ್ಯಾಸವೆಂದರೆ ಅನೇಕ ಮಂದಿ ಅಪಹೃತ ಮಹಿಳೆಯರಿಗೆ ಈ 'ಮುಕ್ತಿ' ಬೇಕಿರಲಿಲ್ಲ. ಏಕೆಂದರೆ ತಮ್ಮ ಮನೆಗಳಿಗೆ ವಾಪಸಾದಾಗ ಬಂಧು ಬಾಂಧವರು ತಮ್ಮನ್ನು ಸ್ವಾಗತಿಸುವರೆಂಬ ಭರವಸೆ ಅವರಿಗಿರಲಿಲ್ಲ. ಅವರ ಶೀಲಭಂಗವಾಗಿತ್ತು. ಅವರಲ್ಲಿ ಅನೇಕರು ಗರ್ಭಿಣಿಯರಾಗಿದ್ದರು. ತಮ್ಮನ್ನು ಬಂಧುಬಾಂಧವರು ಬರಮಾಡಿಕೊಂಡರೂ ಶತ್ರುವಿನ ಸಂಗದಿಂದ ಹುಟ್ಟಿದ ಶಿಶುವನ್ನು ಎಂದೆಂದಿಗೂ ಒಪ್ಪಿಕೊಳ್ಳುವುದಿಲ್ಲ ಎಂಬುದು ಈ ಮಹಿಳೆಯರಿಗೆ ಖಾತ್ರಿಯಾಗಿತ್ತು. ಎಷ್ಟೋ ವೇಳೆ ಪೊಲೀಸರು ಮತ್ತು ಅವರೊಡನೆ ಇದ್ದವರು ಈ ಮಹಿಳೆಯರನ್ನು ಬಲವಂತವಾಗಿ ಅಪಹರಣಕಾರನ ವಶದಿಂದ ಬಿಡುಗಡೆಗೊಳಿಸಬೇಕಾಗಿತ್ತು. ಅಂಥ ಸಂದರ್ಭಗಳಲ್ಲಿ ಈ ಮಹಿಳೆಯರು ಕೇಳಿದ ಪ್ರಶ್ನೆ: **"ಆಗ ನಿಮ್ಮಿಂದ ನಮ್ಮನ್ನು ರಕ್ಷಿಸಲಾಗಲಿಲ್ಲ. ಈಗ ನಮಗೆ ಬಲವಂತಮಾಡಲು ನಿಮಗೇನು ಹಕ್ಕಿದೆ?"**

VI

ಆಹಾರದ ತೀವ್ರ ಅಭಾವ ನಿರಾಶ್ರಿತರ ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಗೊಳಿಸಿತು. ಯುದ್ಧದ ನಂತರ ಆಹಾರಧಾನ್ಯಗಳ ಆಮದು ಕ್ರಮೇಣ ಹೆಚ್ಚುತ್ತಿತ್ತು. 1944ರಲ್ಲಿ 0.8 ದಶಲಕ್ಷ ಟನ್‌ಗಳಷ್ಟಿದ್ದ ಆಹಾರಧಾನ್ಯ ಆಮದು ಪ್ರಮಾಣ ನಾಲ್ಕು ವರ್ಷಗಳ ನಂತರ 2.8 ದಶಲಕ್ಷ ಟನ್‌ಗಳಿಗೇರಿತ್ತು. ಪೂರ್ವಗೋದಾವರಿ ಜಿಲ್ಲೆಯಲ್ಲಿ ಸ್ತ್ರೀಯರು ಪುರುಷರು ಹುಣಿಸೆಬೀಜ, ತಾಳೆಯ ಹಣ್ಣು, ಜೀಲುಗು ಮರದ ತೊಗಟೆ ಇವುಗಳಿಂದ ಹೊಟ್ಟೆ ಹೊರೆಯುತ್ತಿರುವುದನ್ನು ತಾನು ಕಂಡಿದ್ದಾಗಿ ಸ್ವಾತಂತ್ರ್ಯಕ್ಕೆ ಮುನ್ನ ಇಲ್ಲಿ ಪ್ರವಾಸ ಮಾಡಿದ ರಾಜಕಾರಣಿಯೊಬ್ಬರು ಬರೆದಿದ್ದಾರೆ. ಈ ಮೂರನ್ನೂ ಬೇಯಿಸಿ ಗಂಜಿಮಾಡಿ ತಿನ್ನುತ್ತಿದ್ದರಂತೆ. ಇದರಿಂದ ಹೊಟ್ಟೆ ಊತ, ಭೇದಿ ಮೊದಲಾದ ಕಾಯಿಲೆಗಳು ಬರುತ್ತಿದ್ದವು. ಈ ಕಾಯಿಲೆಗಳು ಕೆಲವೊಮ್ಮೆ ಪ್ರಾಣಾಂತಿಕವಾಗಿರುತ್ತಿದ್ದವು. ಇದರ ಮರುವರ್ಷ ಗುಜರಾತಿನ ಪಶ್ಚಿಮ ಪ್ರಾಂತ್ಯದಲ್ಲಿ ಮಳೆ ಕೈಕೊಟ್ಟಿತು. ಇದರಿಂದಾಗಿ ಜಲಕ್ಷಾಮ ಹಾಗೂ ಮೇವು ಕ್ಷಾಮ ತಲೆದೋರಿತು. ಬಾವಿಗಳು, ನದಿಗಳು ಬತ್ತಿಹೋದವು. ಜಾನುವಾರುಗಳು, ಕುರಿಮೇಕೆಗಳು ಮೇವಿಲ್ಲದೆ ಹಸಿವಿನಿಂದ, ಹಾಗೂ ಕಾಯಿಲೆಗಳಿಂದ ಸತ್ತುಹೋದವು.

ಕೆಲವು ಕಡೆಗಳಲ್ಲಿ ರೈತರು ಉಪವಾಸವಿದ್ದರೆ ಇನ್ನು ಕೆಲವು ಕಡೆ ಚಡಪಡಿಸುತ್ತಿದ್ದರು. ಹೈದರಾಬಾದ್ ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಉಂಟಾದ ಅನಿಶ್ಚಿತತೆಯಿಂದಾಗಿ ಕಮ್ಯುನಿಸ್ಟರು ಚುರುಕಾದರು, ತೆಲಂಗಾಣ ಪ್ರದೇಶದ ಮೇಲೆ ತ್ವರಿತವಾಗಿ ಹತೋಟಿ ಹೊಂದಿದರು. ಹಿಮ್ಮೆಟ್ಟುತ್ತಿದ್ದ ರಜಾಕಾರರು ಬಿಟ್ಟುಹೋಗಿದ್ದ "303" ರೈಫಲುಗಳು, "ಮಾರ್ಕ್" ಗನ್ನುಗಳು ಇವರ ನೆರವಿಗೆ ಬಂದವು. ಕಮ್ಯುನಿಸ್ಟರು ಜಮೀನ್ದಾರರ ಭವ್ಯ ಬಂಗಲೆಗಳನ್ನು ನಾಶಪಡಿಸಿದರು, ಅವರು ಜಮೀನುಗಳನ್ನು ಉಳುವ ರೈತರಿಗೆ ಹಂಚಿದರು. ಕಮ್ಯುನಿಸ್ಟರು ದಳಗಳಾಗಿ ಅಥವಾ ಗುಂಪುಗಳಾಗಿ ಸಂಘಟಿತರಾಗಿ ಹಲವಾರು ಹಳ್ಳಿಗಳ ಹೊಣೆ ಹೊತ್ತುಕೊಂಡರು. ಈ ಹಳ್ಳಿಗಳ ಕಾಯಿದೆ ಪಾಲನೆಯನ್ನು ತಾವೇ ಕೈಗೆತ್ತಿಕೊಂಡರು. ಭೂಕಂದಾಯ ಪಾವತಿ ಮಾಡದಂತೆ ರೈತರಿಗೆ ತಾಕೀತು ಮಾಡಿದರು. ವಾರಂಗಲ್ ಮತ್ತು ನಲಗೊಂಡಾಗಳಲ್ಲಿ ಊಳಿಗಮಾನ್ಯ ಪದ್ಧತಿಯನ್ನು ರದ್ದುಗೊಳಿಸುವ ಕಾರ್ಯದಿಂದಾಗಿ ಕಮ್ಯುನಿಸ್ಟರಿಗೆ ಹೆಚ್ಚಿನ ಬೆಂಬಲ ವ್ಯಕ್ತವಾಯಿತು. "ಪ್ರತಿಯೊಂದು ಮನೆಯೂ ಮೌನದಿಂದ ಕಮ್ಯುನಿಸ್ಟರಿಗೆ ಅಮೂಲ್ಯ ನೆರವನ್ನು ನೀಡಿತು. ಮುಗ್ಧ ಹಳ್ಳಿಗರು ಅವರ ಬಗ್ಗೆ ಸಹಾನುಭೂತಿ ಹೊಂದಿದ್ದರು" ಎಂಬುದನ್ನು ಈ ಪ್ರದೇಶದಲ್ಲಿ ಆಗ ಪ್ರವಾಸ ಮಾಡಿದ ಕಾಂಗ್ರೆಸ್ ನಾಯಕರು ಒಪ್ಪಿಕೊಂಡಿದ್ದಾರೆ.

ಹೈದರಾಬಾದಿನ ಯಶಸ್ಸು ಕಮ್ಯುನಿಸ್ಟರಿಗೆ ರಾಷ್ಟ್ರವ್ಯಾಪಿ ರೈತಕ್ರಾಂತಿಗೆ ಪ್ರೋತ್ಸಾಹದಾಯಕವಾಯಿತು. ತೆಲಂಗಾಣ ಕೆಂಪು ಭಾರತದ ಉದಯ ಬಿಂದು ಎಂದೇ ಅವರು ಆಶಿಸಿದರು. 1948ರ ಫೆಬ್ರುವರಿಯಲ್ಲಿ, ಕಲ್ಕತ್ತೆಯಲ್ಲಿ ನಡೆದ ರಹಸ್ಯ ಸಮಾವೇಶದಲ್ಲಿ ಪಕ್ಷ ತಾನು ತುಳಿಯಲಿರುವ ಹೊಸ ಮಾರ್ಗದ ರೂಪುರೇಷೆಯನ್ನು ಅನಾವರಣಗೊಳಿಸಿತು. ತೆಲಂಗಾಣಾದ

ವೀರ ಜನತೆ ಸ್ವಾತಂತ್ರ್ಯ ಮತ್ತು ನಿಜವಾದ ಪ್ರಭುತ್ವದ ದಾರಿಯನ್ನು ತೋರಿಸಿದ್ದಾರೆ, ಅವರು ಸತ್ಯವಾಗಿ ಭಾರತ-ಪಾಕಿಸ್ತಾನಗಳ ಭವ್ಯ ಭವಿಷ್ಯ ಎಂದು ಸಮಾವೇಶದಲ್ಲಿ ಮಾತನಾಡಿದ ನಾಯಕರೊಬ್ಬರು ಕ್ರಾಂತಿ ಮನೋಭಾವವನ್ನು ಹುರಿದುಂಬಿಸಿದರು. "ಕಮ್ಯುನಿಸ್ಟ್ ಕಾರ್ಯಕರ್ತರು ಜನಸಮೂಹದಲ್ಲಿ ಹಾಗೂ ದುಡಿಯುವ ವರ್ಗದಲ್ಲಿ ಈ ಕ್ರಾಂತಿ ಸ್ಫೂರ್ತಿಯನ್ನು ತುಂಬಿದರೆ ಪ್ರತಿಗಾಮಿಗಳು ಇಸ್ಪೀಟಿನ ಅರಮನೆಯಂತೆ ನೆಲಕಚ್ಚುತ್ತಾರೆ" ಎಂದು ಈ ನಾಯಕರು ನುಡಿದಿದ್ದರು.

ಕಲ್ಕತ್ತೆಯ ಸಮಾವೇಶದಲ್ಲಿ ಕಾರ್ಯದರ್ಶಿ ಬಿ.ಟಿ. ರಣದಿವೆ ಅವರ ಸ್ಥಾನಕ್ಕೆ ಪಿ.ಸಿ. ಜೋಶಿಯವರನ್ನು ಆಯ್ಕೆ ಮಾಡಲಾಯಿತು. ರಣದಿವೆ ದೃಢಮನಸ್ಸಿನ ಗಂಭೀರ ವ್ಯಕ್ತಿಯಾಗಿದ್ದರು. ಜೋಶಿಯವರು ಎಲ್ಲರೂ ಇಷ್ಟ ಪಡುವಂಥ ಹುಡುಗಾಟದ ಸ್ವಭಾವದವರು. ಇವರಿಬ್ಬರೂ ಸುಶಿಕ್ಷಿತ ಬ್ರಾಹ್ಮಣರು.

ಜೋಶಿ, ನೆಹರೂ ಅವರ ಮಿತ್ರರಾಗಿದ್ದರು. ಕಮ್ಯುನಿಸ್ಟರು 'ವಿಧೇಯ ವಿರೋಧ ಪಕ್ಷ'ವಾಗಿರಬೇಕೆಂಬುದು ಅವರ ನಿಲುವಾಗಿತ್ತು. ಗಾಂಧಿಯವರ ಕೊಲೆಯ ನಂತರ ಸ್ವತಂತ್ರ ಭಾರತದ ಅಳಿವು-ಉಳಿವು ಗಂಡಾಂತರಕ್ಕೀಡಾಗಿದೆಯೆಂಬುದು ಅವರ ವಾದವಾಗಿತ್ತು. "ನೆಹರೂ ಸರ್ಕಾರವನ್ನು ನಾವು ರಕ್ಷಿಸುತ್ತೇವೆ" ಎಂಬ ಶೀರ್ಷಿಕೆಯಲ್ಲಿ ಪಕ್ಷದ ಕರ ಪತ್ರವೊಂದು ಅವರ ಮಾರ್ಗದರ್ಶನದಲ್ಲೇ ಪ್ರಕಟವಾಗಿತ್ತು. (ಇದು ಹಿಂದೂ ಪುನರುತ್ಥಾನವಾದಿಗಳ ವಿರುದ್ಧವಾಗಿತ್ತು). ರಣದಿವೆ ಪಕ್ಷದ ನೀತಿಗೆ ಪಟ್ಟು ಬಿಡದೆ ಅಂಟಿಕೊಂಡಿದ್ದ ವ್ಯಕ್ತಿಯಾಗಿದ್ದು, ಸಾಮ್ರಾಜ್ಯಶಾಹಿಗಳಿಗೆ ಕೃತಜ್ಞವಾಗಿರುವ ಬೂರ್ಷ್ವಾ ಸರ್ಕಾರದಿಂದ ಭಾರತ ನಿಯಂತ್ರಿತವಾಗಿದೆ ಎಂದು ಅವರು ನಂಬಿದ್ದರು. ಆದರೆ ಈಗ ಈ ಕರಪತ್ರ ಪ್ರಕಟಣೆಯಿಂದ ಪಕ್ಷ ಪೂರ್ತಿ ತಿರುಗುಮುರುಗಾದಂತಿತ್ತು. ಮಾಜಿ ಕಾರ್ಯದರ್ಶಿಯೊಬ್ಬರು ಪ್ರಕಟಿಸಿದ್ದ ಕರಪತ್ರವನ್ನು ಹಿಂತೆಗೆದುಕೊಳ್ಳಲಾಯಿತು. ಜೋಶಿಯವರನ್ನು ಸಾಮಾನ್ಯ ಸದಸ್ಯನ ಸ್ಥಾನಕ್ಕೆ ಕೆಳಗಿಳಿಸಲಾಯಿತು. ಹಾಗೂ ಅವರ ವಿರುದ್ಧ ಹಲವಾರು ಆಪಾದನೆಗಳನ್ನು ಮಾಡಲಾಯಿತು. "ಪಕ್ಷದಲ್ಲಿ ಕ್ರಾಂತಿ ವಿರೋಧಿ ಮನೋಭಾವ ಬೆಳೆಸುತ್ತಿರುವ ಸುಧಾರಣಾವಾದಿ" ಎಂಬ ಹಣೆಪಟ್ಟಿಯನ್ನು ಅವರಿಗೆ ಕಟ್ಟಲಾಯಿತು.

ಸೋವಿಯತ್ ನಾಯಕತ್ವದ ಪ್ರಜಾಸತ್ತಾತ್ಮಕ ಬಣದೊಂದಿಗಿನ ತಿಕ್ಕಾಟದಲ್ಲಿ ನೆಹರೂ ಸರ್ಕಾರ ಆಂಗ್ಲೋ ಅಮೆರಿಕನ್ ಮೈತ್ರಿಕೂಟ ಸೇರಿಕೊಂಡಿತೆಂಬುದು ಕಮ್ಯುನಿಸ್ಟ್ ಪಕ್ಷದ ಹೊಸ ಧೋರಣೆಯಾಗಿತ್ತು. ನೆಹರೂ ಸರ್ಕಾರದ ಬಗ್ಗೆ ವಿರಳವಾಗಿ ಪ್ರಕಟಗೊಂಡ ಭ್ರಮನಿರಸನವನ್ನು ರಣದಿವೆಯವರು "ಹುರಿಗೊಳ್ಳುತ್ತಿರುವ ಕ್ರಾಂತಿಕಾರಿ ಬಂಡಾಯ" ಎಂದೇ ಗ್ರಹಿಸಿದರು. ಗುಪ್ತಚರರಾಗಿ ಅವರು ರಾಷ್ಟ್ರಾದ್ಯಂತ ಸಾರ್ವತ್ರಿಕ ಮುಷ್ಕರಕ್ಕೆ ಹಾಗೂ ರೈತ ಬಂಡಾಯಕ್ಕೆ ಕರೆ ನೀಡಿದರು. ಕಾರ್ಖಾನೆಗಳಲ್ಲಿನ ಕ್ರಾಂತಿಕಾರಿ ಕಾರ್ಮಿಕರು ಹಾಗೂ ಬೀದಿಗಿಳಿದಿರುವ ವಿದ್ಯಾರ್ಥಿಗಳೊಂದಿಗೆ ಸೋದರತ್ವ ಬೆಳೆಸಲು ಕಮ್ಯುನಿಸ್ಟ್ ಕಾರ್ಯಕರ್ತರಿಗೆ ಕರಪತ್ರಗಳ ಮೂಲಕ ಕರೆನೀಡಲಾಯಿತು. 'ನಿಮ್ಮ ಬಂದೂಕು, ಬಯೊನೆಟ್‌ಗಳನ್ನು

ಕಾಂಗ್ರೆಸ್ ಫ್ಯಾಸಿಸ್ಟರ ಮೇಲೆ ಪ್ರಯೋಗಿಸಿ. ಕೊಲೆ ಪಾತಕಿ ಕಾಂಗ್ರೆಸ್ ಸರ್ಕಾರವನ್ನು ನಾಶಗೊಳಿಸುವುದೇ ಅಂತಿಮ ಗುರಿ' ಎಂದು ಕರಪತ್ರದಲ್ಲಿ ಒಕ್ಕಣಿಸಲಾಗಿತ್ತು.

ರಣದಿವೆ ಮತ್ತು ಮಿತ್ರರಿಗೆ ಚೀನಾದಲ್ಲಿನ ಕಮ್ಯುನಿಸ್ಟರ ವಿಜಯ ಹೃದಯಂಗಮವಾಗಿತ್ತು. 1949ರ ಸೆಪ್ಟಂಬರಿನಲ್ಲಿ ಮಾವೋತ್ಸೆ ತುಂಗರು ಅಧಿಕಾರಕ್ಕೆ ಬಂದ ಶೀಘ್ರದಲ್ಲೇ ರಣದಿವೆ ಅವರನ್ನು ಅಭಿನಂದಿಸಿ ಪತ್ರಬರೆದರು. "ಈ ನಿಮ್ಮ ಮಹಾನ್ ವಿಜಯದಿಂದ ಭಾರತದ ಶ್ರಮಿಕ ಜನಸಮುದಾಯ ಆನಂದತುಂದಿಲರಾಗಿದ್ದಾರೆ. ಇದು ತಮ್ಮ ವಿಮೋಚನೆಗೆ ಪ್ರೇರಕ ಶಕ್ತಿಯಾಗಲಿದೆ ಎಂಬುದನ್ನೀಗ ಅವರು ಅರಿತಿದ್ದಾರೆ. ಭಾರತದಲ್ಲಿನ ಈಗಿನ ಆಡಳಿತವನ್ನು ಕೊನೆಗಾಣಿಸಿ ಜನತಾ ಪ್ರಜಾಪ್ರಭುತ್ವದ ಸರ್ಕಾರ ಸ್ಥಾಪಿಸುವ ನಿಟ್ಟಿನಲ್ಲಿ ಇನ್ನೂ ಹೆಚ್ಚು ಸಂಕಲ್ಪ ಬಲದಿಂದ ಹಾಗೂ ಧೈರ್ಯದಿಂದ ಹೋರಾಟ ನಡೆಸಲು ಅವರಿಗೆ ನಿಮ್ಮ ವಿಜಯ ಸ್ಫೂರ್ತಿದಾಯಕವಾಗಿದೆ" ಎಂದು ರಣದಿವೆ ಈ ಪತ್ರದಲ್ಲಿ ಬರೆದಿದ್ದರು. "ಭಾರತದಲ್ಲಿ ಅಧಿಕಾರಕ್ಕೆ ಬಂದಿರುವ ಪ್ರಜಾಪ್ರಭುತ್ವದ ಸರ್ಕಾರ ಅನೇಕ ವಿಷಯಗಳಲ್ಲಿ, ರೀತಿ-ನೀತಿಗಳಲ್ಲಿ ಕೊಮಿಂಟಾಂಗ್ ಚೀನಾದಲ್ಲಿದ್ದ ಪ್ರತಿಗಾಮಿ ಆಡಳಿತದಂತಿದೆ" ಎಂದು ನಂಬಿದ್ದ ರಷ್ಯ ಸಿದ್ಧಾಂತಿಗಳ ಈ ಅನ್ನಿಸಿಕೆ ಭಾರತದ ಕಮ್ಯುನಿಸ್ಟ್ ನಾಯಕರಿಗೆ ಪ್ರೇರಣೆ-ಪ್ರಚೋದನೆಗಳನ್ನು ಒದಗಿಸಿತ್ತು. ದೆಹಲಿಯಲ್ಲಿನ ಸೋವಿಯತ್ ರಾಯಭಾರಿ ಕಚೇರಿಯಲ್ಲಿ ಅಪಾರವಾದ ಸಿಬ್ಬಂದಿ ವರ್ಗ ಇತ್ತು. ಹೀಗಾಗಿ, ಹಿರಿಯ ಸಿವಿಲ್ ಅಧಿಕಾರಿಯೊಬ್ಬರ ಮಾತಿನಲ್ಲೇ ಹೇಳುವುದಾದರೆ "ಭಾರತೀಯ ಕಮ್ಯುನಿಸ್ಟ್ ಚಳವಳಿಗೆ ಸ್ಥಳದಲ್ಲೇ ಪ್ರತ್ಯಕ್ಷವಾಗಿ ಅತ್ಯುತ್ತಮ ಮಾರ್ಗದರ್ಶನ ದೊರೆಯುತ್ತಿತ್ತು."

ಕಮ್ಯುನಿಸ್ಟರು ಭಾರತ ಸರ್ಕಾರದ ವಿರುದ್ಧ ಸಮರ ಘೋಷಿಸಿದರು. ಸರ್ಕಾರ ತನ್ನ ಬಳಿ ಇದ್ದ ಎಲ್ಲ ಬಲವನ್ನು ಒಗ್ಗೂಡಿಸಿ ಪ್ರತಿಸ್ಪಂದಿಸಿತು. ಐವತ್ತು ಸಾವಿರ ಕಮ್ಯುನಿಸ್ಟರನ್ನೂ ಅವರ ಸಹಾನುಭೂತಿಪರರನ್ನೂ ಬಂಧಿಸಿ ಸ್ಥಾನಬದ್ಧತೆಯಲ್ಲಿಡಲಾಯಿತು. ಹೈದರಾಬಾದಿನಲ್ಲಿ ಕಮ್ಯುನಿಸ್ಟ್ ದಳಗಳ ಪ್ರಮುಖ ನಾಯಕರುಗಳನ್ನು ಬಂಧಿಸಲಾಯಿತು. ಆದಾಗ್ಯೂ ಡೆಕ್ಕನ್‌ನಲ್ಲಿ ಕಮ್ಯುನಿಸ್ಟ್ ಚಳವಳಿಯ ಪಿತಾಮಹ ಎಂದೇ ಖ್ಯಾತರಾಗಿದ್ದ ರವಿ ನಾರಾಯಣರೆಡ್ಡಿ ಪೊಲೀಸರ ಕಣ್ ತಪ್ಪಿಸಿದ್ದರು. ಮಿಲಿಟರಿ ಗೌರ್‍ನರ್ ಜೆ.ಎಸ್. ಚತುರ್ವೇದಿ ಕಮ್ಯುನಿಸ್ಟರ ವಿರುದ್ಧ ಪ್ರಚಾರ ಸಮರವನ್ನೇ ನಡೆಸಿದ್ದರು. ನಿಜಾಮರ ಖಾಸಗಿ ಜಮೀನನ್ನು ರೈತಾಪಿ ವರ್ಗಕ್ಕೆ ಹಂಚಲಾಗುವುದೆಂದು ಸಾರುವ ತೆಲುಗು ಭಾಷೆಯ ಕರಪತ್ರಗಳನ್ನು ಹಳ್ಳಿ ಹಳ್ಳಿಗಳಲ್ಲಿ ವಿತರಿಸಲಾಯಿತು. ನಾಟಕದ ಕಂಪನಿಗಳು ನಾಟಕಗಳ ಮೂಲಕ ಮೂಕಾಭಿನಯಗಳ ಮೂಲಕ ಸರ್ಕಾರದ ಈ ಜನತೆಗೆ ಮುಟ್ಟಿಸುವ ಪ್ರಯತ್ನ ಮಾಡಿದವು. ಒಂದು ನಾಟಕದಲ್ಲಂತೂ ಚೌಧುರಿಯವರನ್ನು ಹಿಂದೂ ದೇವತೆಯಾಗಿ, ಕಮ್ಯುನಿಸ್ಟರನ್ನು ರಾಕ್ಷಸರನ್ನಾಗಿ ಬಿಂಬಿಸಲಾಗಿತ್ತು.

ಪ್ರಚಾರ ಮತ್ತು ದಮನಕಾರ್ಯಗಳು ಫಲ ನೀಡಿದ್ದವು. 1948ರಲ್ಲಿ ಕಮ್ಯುನಿಸ್ಟ್ ಪಕ್ಷ ಹೊಂದಿದ್ದ ಸದಸ್ಯರ ಸಂಖ್ಯೆ 89 ಸಾವಿರ. ಎರಡೇ ವರ್ಷಗಳಲ್ಲಿ ಇದು 20 ಸಾವಿರಕ್ಕೆ

ಕುಸಿಯಿತು. ಸರ್ಕಾರದ ಪ್ರತ್ಯಾಕ್ರಮಣದಿಂದಾಗಿ ಲಂಗುಲಗಾಮಿಲ್ಲದ ಕ್ರಾಂತಿಗೆ ಜನರ ಒಲವು ಇಲ್ಲವೆಂಬುದು ಗೊತ್ತಾಯಿತು. ಭಾರತೀಯ ಜನಸಮುದಾಯದ ಮೇಲೆ ಕಾಂಗ್ರೆಸ್ ಪಕ್ಷ ಹೊಂದಿರುವ ಹಿಡಿತ ಪ್ರಭಾವಗಳನ್ನು ಕಮ್ಯುನಿಸ್ಟ್ ಪಕ್ಷ ತಪ್ಪಾಗಿ ಅಂದಾಜು ಮಾಡಿತ್ತು.

ಕಮ್ಯುನಿಸ್ಟರ ಪ್ರಭಾವ ಮಸುಕಾಗುತ್ತಿದ್ದಂತೆ ಬಲಪಂಥೀಯ ತೀವ್ರಗಾಮಿಗಳ ಸಂಘಟನೆಯೊಂದು ಪ್ರಬಲವಾಗುತ್ತಿತ್ತು. ಇದು ರಾಷ್ಟ್ರೀಯ ಸ್ವಯಂ ಸೇವಕ ಸಂಘ. 1948ರ ಜನವರಿಯಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯ ನಂತರ ಸರ್ಕಾರ ಆರೆಸ್ಸೆಸ್ಸನ್ನು ನಿಷೇಧಿಸಿತ್ತು. ಹತ್ಯೆಯಲ್ಲಿ ನೇರವಾಗಿ ಭಾಗಿಯಾಗಿರಲಿಲ್ಲವಾದರೂ ಈ ಸಂಸ್ಥೆ ಪಂಜಾಬಿನ ಹಿಂಸಾಚಾರದಲ್ಲಿ ಸಕ್ರಿಯವಾಗಿತ್ತು; ನಿರಾಶ್ರಿತರ ಬೆಂಬಲ ಹೊಂದಿತ್ತು. ಅವರ ಜೀವನ ಸಿದ್ಧಾಂತ ನಾಥೂರಾಮ್ ಗೋಡ್ಸೆಯ ಚಿಂತನೆಗೆ ಸದೃಶವಾಗಿತ್ತು. ಮಹಾತ್ಮ ಗಾಂಧಿಯವರ ಹತ್ಯೆಗೆ ಆರ್.ಎಸ್.ಎಸ್. ಗುಪ್ತವಾಗಿ ಸಂಭ್ರಮಪಟ್ಟಿತೆಂದು ವದಂತಿಗಳು ಹರಡಿದ್ದವು. ಗಾಂಧಿಯವರ ನಿಧನದ ಎರಡು ವಾರಗಳ ನಂತರ ನೆಹರೂ ಪಂಜಾಬ್ ಸರ್ಕಾರಕ್ಕೆ ಪತ್ರ ಬರೆದು ಈ ರೀತಿ ತಿಳಿಸಿದ್ದರು: "ಆರ್.ಎಸ್.ಎಸ್. ಮತ್ತು ಇಂಥ ತಂಡಗಳಿಂದಾಗಿ ಭಾರತದಲ್ಲಿ ನಾವು ಸಾಕಷ್ಟು ಯಾತನೆಯನ್ನು ಅನುಭವಿಸಿಯಾಗಿದೆ...ಇವರ ಕೈಗಳು ಗಾಂಧಿಯವರ ರಕ್ತದಿಂದ ಮಲೀನವಾಗಿವೆ. ತಮಗೂ ಅದಕ್ಕೂ ಸಂಬಂಧವಿಲ್ಲವೆಂಬ ಸೋಗಲಾಡಿತನದ ಮಾತುಗಳಿಗೆ ಈಗ ಏನೂ ಅರ್ಥವಿಲ್ಲ."

ಆರೆಸ್ಸೆಸ್ಸನ್ನು ನಿಷೇಧಿಸಲಾಯಿತು. ಅದರ ಸದಸ್ಯರನ್ನು ಬಂಧಿಸಲಾಯಿತು. ಆದರೆ ಒಂದು ವರ್ಷದ ನಂತರ ಈ ಸಂಸ್ಥೆಯನ್ನು ಕಾನೂನುಬದ್ಧಗೊಳಿಸಲು ಸರ್ಕಾರ ನಿರ್ಧರಿಸಿತು. ಭಾರತದ ಸಂವಿಧಾನಕ್ಕೆ ಹಾಗೂ ರಾಷ್ಟ್ರ ಧ್ವಜಕ್ಕೆ ತಮ್ಮ ನಿಷ್ಠೆಯನ್ನು ಘೋಷಿಸುವಂತೆ ಹಾಗೂ ಹಿಂಸಾಚಾರ-ರಹಸ್ಯ ಚಟುವಟಿಕೆಗಳನ್ನು ನಿಲ್ಲಿಸಿ ತಮ್ಮ ಕಾರ್ಯ ಚಟುವಟಿಕೆಗಳನ್ನು ಸಾಂಸ್ಕೃತಿಕ ವಲಯಕ್ಕೆ ಸೀಮಿತಗೊಳಿಸಿಕೊಳ್ಳುವಂತೆ ತನ್ನ ಸದಸ್ಯರಿಗೆ ಬುದ್ಧಿ ಹೇಳಲು ಆರೆಸ್ಸೆಸ್ ಮುಖಂಡ ಗೋಲ್ವಾಲ್ಕರ್ ಒಪ್ಪಿಕೊಂಡಿದ್ದರು. "ಆಪತ್ತಿನಲ್ಲಿರುವ ಜನರಿಗೆ ಸಹಾಯ ಮಾಡುವಾಗ ನಾವು ದೇಶದಲ್ಲಿ ಶಾಂತಿ ಸುವ್ಯವಸ್ಥೆಗೆ ಮಹತ್ವ ನೀಡುತ್ತೇವೆ" ಎಂದು ಗೋಲ್ವಾಲ್ಕರ್ ಗೃಹಸಚಿವ ವಲ್ಲಭಭಾಯಿ ಪಟೇಲರಿಗೆ ಭರವಸೆ ನೀಡಿದ್ದರು. ಸ್ವತಃ ಪಟೇಲರಿಗೆ ಆರೆಸ್ಸೆಸ್ ಬಗ್ಗೆ ಮಿಶ್ರ ಭಾವನೆಗಳಿದ್ದವು. ಅದರ ಮುಸ್ಲಿಂ ವಿರೋಧಿ ಬಡಬಡಿಕೆಯನ್ನು ಪಟೇಲರು ಖಂಡಿಸಿದ್ದರು. ಆದರೆ ಅವರ ಶಿಸ್ತು ಮತ್ತು ಸಮರ್ಪಣ ಮನೋಭಾವವನ್ನು ಮೆಚ್ಚಿಕೊಂಡಿದ್ದರು. ನಿಷೇಧವನ್ನು ರದ್ದುಗೊಳಿಸಿದ ನಂತರ ಪಟೇಲರು "ಅವರಿಗಿರುವ ಏಕೈಕ ಮಾರ್ಗವೆಂದರೆ ಕಾಂಗ್ರೆಸ್ಸನ್ನು ಒಳಗಿನಿಂದಲೇ ಸುಧಾರಿಸುವುದು, ಕಾಂಗ್ರೆಸ್ ತಪ್ಪು ಹಾದಿ ಹಿಡಿಯುತ್ತಿದೆ ಎಂದು ಅನಿಸಿದಾಗ ಅದನ್ನು ತಿದ್ದುವುದು" ಎಂದು ಆರೆಸ್ಸೆಸ್‌ಗೆ ಕಿವಿಮಾತು ಹೇಳಿದ್ದರು.

ಆರೆಸ್ಸೆಸ್ಸನ್ನು ಕಾಯಿದೆಬದ್ಧಗೊಳಿಸಿದ ನಂತರ ಗೋಲ್ವಾಲ್ಕರ್ ರಾಷ್ಟ್ರಾದ್ಯಂತ ವಿಜಯದುಂದುಭಿ ಮೊಳಗಿಸುವ ಪ್ರವಾಸ ಕೈಗೊಂಡರು. ಇವರ ಸಭೆಗಳಿಗೆ ಅಪಾರ

ಸಂಖ್ಯೆಯಲ್ಲಿ ಜನ ಸೇರುತ್ತಿದ್ದರು. "ಇತ್ತೀಚಿನ ಸಂಕಷ್ಟಗಳ ನಂತರ ಆರೆಸ್ಸೆಸ್ ಜನಸಮೂಹದ ಬೆಂಬಲದೊಂದಿಗೆ ಹೊರಬಂದಿದೆ. ಈ ಬಗ್ಗೆ ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳೂ ಎಚ್ಚರಿಕೆಯಿಂದಿರಬೇಕಾಗುತ್ತದೆ. ದೇಶವನ್ನು ಅಪಾಯ-ಅನರ್ಥಗಳಿಗೆ ದೂಡುವ ಹಿಂದೂ ರಾಷ್ಟ್ರ ಬಯಸುವವರು ಮಾತ್ರ ಆರೆಸ್ಸೆಸ್‌ನ ಈ ಬಲವರ್ಧನೆಯನ್ನು ಉಪೇಕ್ಷೆ ಮಾಡಬಹುದೇನೋ, ಇದನ್ನು ಒಲ್ಲದವರು ಎಚ್ಚರವಹಿಸಲೇಬೇಕಾಗುತ್ತದೆ" ಎಂದು ವಿದ್ಯಮಾನಗಳ ವೀಕ್ಷಕರೊಬ್ಬರು ಬರೆದಿದ್ದರು. ಆರೆಸ್ಸೆಸ್, ಮುಸ್ಲಿಂ ಲೀಗಿಗೆ ಹಿಂದೂ ಉತ್ತರ. "ಉಗ್ರವಾದ ಕೋಮು ವಿಚಾರಗಳನ್ನು ಮೈಗೂಡಿಸಿಕೊಂಡಿರುವ, ಭರತ ವರ್ಷದಲ್ಲಿ ಶುದ್ಧವಾದ ಮತ್ತು ಪ್ರಬಲವಾದ ಹಿಂದೂ ಸಂಸ್ಕೃತಿಯ ಆದರ್ಶದಲ್ಲಿ ರಾಜಿ ಮಾಡಿಕೊಳ್ಳುವ ಮಾತೇ ಇಲ್ಲ" ಎನ್ನುವಂಥ ಹಿಂದೂ ಮುಖ ಆರೆಸ್ಸೆಸ್ ಎಂದೂ ಇವರು ವಿಶ್ಲೇಷಿಸಿದ್ದರು.

ಕಮ್ಯುನಿಸ್ಟ್ ನಾಯಕ ಬಿ.ಟಿ. ರಣದಿವೆಯವರಂತೆ ಗೋಲ್ವಾಲ್ಕರರೂ ಮಹಾರಾಷ್ಟ್ರದ ಬ್ರಾಹ್ಮಣರಾಗಿದ್ದರು. ಇಬ್ಬರೂ ನಲವತ್ತರ ಪ್ರಾಯದವರು. ಇವರಿಬ್ಬರಿಗೂ ಸಹಸ್ರಾರು ಮಂದಿ ತರುಣ ಅನುಯಾಯಿಗಳಿದ್ದರು. ಆರ್.ಎಸ್.ಎಸ್. ಮತ್ತು ಕಮ್ಯುನಿಸ್ಟರಿಬ್ಬರೂ ಯುವಕರ ಶಕ್ತಿ, ಆದರ್ಶಪ್ರಿಯತೆ ಮತ್ತು ಫ್ಯಾಸಿಸ್ಟ್ ಮನೋಭಾವಗಳನ್ನೇ ಬಂಡವಾಳವಾಗಿಟ್ಟು ಕೊಂಡಿದ್ದರು. ಸ್ವಾತಂತ್ರ್ಯದ ಪ್ರಾರಂಭಿಕ ವರ್ಷಗಳಲ್ಲಿ ಈ ಎರಡೂ ಬಣಗಳೂ ಅಧಿಕಾರಾರೂಢ ಕಾಂಗ್ರೆಸ್ಸಿನ ಪ್ರೇರಿತ ವಿರೋಧಿಗಳಾಗಿದ್ದವು.

ಕಾಂಗ್ರೆಸ್‌ನ ಉನ್ನತ ಸ್ಥಾನದಲ್ಲಿದ್ದ ಜವಹರಲಾಲ್ ನೆಹರೂ ಸಹ ಬ್ರಾಹ್ಮಣರೇ. ಎಡ ಹಾಗೂ ಬಲಪಂಥಗಳ ತೀವ್ರಗಾಮಿಗಳನ್ನು ಎದುರಿಸುವಲ್ಲಿ ನೆಹರೂ ಅವರಿಗೆ ಎರಡು ಪ್ರಮುಖ ತೊಡಕುಗಳಿದ್ದವು. ಒಂದು: ನೆಹರೂ ಮಧ್ಯಮಮಾರ್ಗದ ಸೌಮ್ಯವಾದಿಯಾಗಿದ್ದರು. ಈ ಮಧ್ಯಮ ಮಾರ್ಗ ಜನರನ್ನು ಪ್ರಚೋದಿಸುವಂಥ ಆಡಂಬರ-ಅಟ್ಟಹಾಸಗಳಿಗೆ ಅನುಕೂಲಕರವಲ್ಲ. ಎರಡನೆಯದು: ನೆಹರೂ ಮತ್ತು ಅವರ ಸಹೋದ್ಯೋಗಿಗಳು ತಮ್ಮ ರಾಜಕೀಯ ಎದುರಾಳಿಗಳಿಗಿಂತ ಹೆಚ್ಚು ಹಿರಿಯರಾಗಿದ್ದರು. 1949ರಲ್ಲಿ ನೆಹರೂ ವಯಸ್ಸು ಅರವತ್ತು. ಇದು ಹಿಂದೂ ಪುರುಷನೊಬ್ಬ ಲೌಕಿಕದಿಂದ ನಿವೃತ್ತಿ ಹೊಂದಿ ಸನ್ಯಾಸ ತೆಗೆದುಕೊಳ್ಳುವ ವಯಸ್ಸು.

ಇವರಿಬ್ಬರಲ್ಲಿ ಆರೆಸ್ಸೆಸ್ಸೇ ದೊಡ್ಡ ಗಂಡಾಂತರವೆಂಬುದನ್ನು ನೆಹರೂ ಮನಗಂಡಿದ್ದರು. ಅವರ ಸರ್ಕಾರದಲ್ಲಿ ಉಳಿದವರು, ವಿಶೇಷವಾಗಿ ವಲ್ಲಭಭಾಯಿ ಪಟೇಲ್, ಇದನ್ನು ಒಪ್ಪುತ್ತಿರಲಿಲ್ಲ. ಸಮಾನ ಶತ್ರುವಾದ ಕಮ್ಯುನಿಸ್ಟರ ವಿರುದ್ಧ ಹೋರಾಟದಲ್ಲಿ ನೆರವು ನೀಡುವುದಾಗಿ ಗೋಲ್ವಾಲ್ಕರ್ ಪಟೇಲರಿಗೆ ಪತ್ರ ಬರೆದಿದ್ದರು. "ನಿಮ್ಮ ಸರ್ಕಾರದ ಅಧಿಕಾರ ಬಲವನ್ನೂ ನಮ್ಮ ಸಂಸ್ಥೆಯ ಸಾಂಸ್ಕೃತಿಕ ಬಲವನ್ನೂ ಉಪಯೋಗಿಸಿಕೊಂಡಲ್ಲಿ ಈ ಕೆಂಪು ಪಿಡುಗನ್ನು ಅತಿ ಶೀಘ್ರದಲ್ಲೇ ನಿವಾರಿಸಬಹುದೆಂದು" ಗೋಲ್ವಾಲ್ಕರ್ ಪತ್ರದಲ್ಲಿ ಸಲಹೆಮಾಡಿದ್ದರು. ಸಂಯುಕ್ತ ರಂಗದ ಸಲಹೆ ಪಟೇಲರನ್ನು ಆಕರ್ಷಿಸಿತು. ಆರೆಸ್ಸೆಸ್ಸನ್ನು ಕಾಂಗ್ರೆಸ್ಸಿನೊಳಗೆ ಸೇರಿಸಿಕೊಳ್ಳಬೇಕೆಂಬ ಅವರ ಆಲೋಚನೆಯ ಹಿಂದಿನ ಕಾರಣ ಇದೂ ಆಗಿರಬಹುದು.

ಆಖೈರಾಗಿ ಆರೆಸ್ಸೆಸ್ ಸದಸ್ಯರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳಲಿಲ್ಲ. ಆದರೆ ಗೋಲ್ವಾಲ್ಕರ್ ಸ್ವತಂತ್ರರಾಗಿದ್ದರು. ತಮ್ಮ ವಿಚಾರಗಳನ್ನು, ತಮ್ಮ ಕೇಳುಗರೆದುರು ಪ್ರಚಾರ ಮಾಡಲು ಅವರು ಸ್ವತಂತ್ರರಿದ್ದರು. 1949ರ ನವೆಂಬರ್ ಮೊದಲ ವಾರದಲ್ಲಿ ಈ ಆರೆಸ್ಸೆಸ್ ಮುಖಂಡರು ಮುಂಬಯಿಯ ಶಿವಾಜಿ ಪಾರ್ಕಿನಲ್ಲಿ 100,000 ಜನರ ಪ್ರಚಂಡ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಸಭೆಯಲ್ಲಿ ಹಾಜರಿದ್ದ ವರದಿಗಾರನೊಬ್ಬ ಅವರನ್ನು "ಮಧ್ಯಮ ಎತ್ತರದ, ಕೃಶವಾದ ಎದೆಯ, ಉದ್ದನೆಯ ಬಾಚದ ಕೂದಲಿನ, ಹಾರಾಡುವ ಗಡ್ಡಧಾರಿ ವ್ಯಕ್ತಿ" ಎಂದು ವರ್ಣಿಸಿ ಬರೆದದ್ದುಂಟು. "ಲೋಕದ ಕಣ್ಣಿಗೆ ಅವರೊಬ್ಬ ನಿಷ್ಕಂಟಕ ಹಿಂದೂ ಬೈರಾಗಿ. ಆದರೆ ಹರಿತ ದೃಷ್ಟಿಯ ಕಪ್ಪು ಕಣ್ಣುಗಳು ಈ ಆರೆಸ್ಸೆಸ್ ಮುಖಂಡನಿಗೆ ರಕ್ತ ಹೆಪ್ಪುಗಟ್ಟಿಸುವಂಥ ತಂತ್ರ ಪ್ರಯೋಗಿಸುವ ಒಬ್ಬ ಮಾಟಗಾರನ ವರ್ಚಸ್ಸನ್ನು ನೀಡಿತ್ತು." ಭಾಷಣ ಆರಂಭಿಸುವ ಮುನ್ನ ಗರಡಿ ಮನೆಗಳವರು ಗೋಲ್ವಾಲ್ಕರ್ ಅವರಿಗೆ ಮಾಲಾರ್ಪಣೆ ಮಾಡಿದರು. ಹಿಂದೂ ಸಂಸ್ಕೃತಿಯ ಗುಣವಿಶೇಷಗಳನ್ನು ಕೊಂಡಾಡಿದ ಅವರ ಭಾಷಣ ಆವೇಶಭರಿತವಾಗಿತ್ತು. ವರದಿಗಾರ ಬರೆದಂತೆ: "ರಾಷ್ಟ್ರದ ಎಲ್ಲ ಸಮಸ್ಯೆಗಳಿಗೂ ಅವರಲ್ಲಿ ಪರಿಹಾರವಿತ್ತು. ಗೋಲ್ವಾಲ್ಕರ್ ಅವರನ್ನು ಅಖಿಲಭಾರತದ ಸರ್ವಾಧಿಕಾರಿ ನಾಯಕರನ್ನಾಗಿ ಮಾಡಿ."

ಇದಾದ ಒಂದು ವಾರದ ನಂತರ ಜವಹರಲಾಲ್ ನೆಹರೂ ಮುಂಬಯಿಗೆ ಆಗಮಿಸಿದ್ದರು. ಗೋಲ್ವಾಲ್ಕರ್ ಭಾಷಣ ಮಾಡಿದ ಶಿವಾಜಿ ಪಾರ್ಕಿನಲ್ಲೇ ನೆಹರೂ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಶಿವಾಜಿ ಪಾರ್ಕ್ ಒಂದು ಸುಂದರವಾದ ಹಸಿರು ಉದ್ಯಾನವಲ್ಲ. ಇದರ ಸುತ್ತಮುತ್ತ ಹೆಚ್ಚಾಗಿ ವಾಸಿಸುವವರು ಮಧ್ಯಮ ವರ್ಗದವರು. ಮರಾಠಿ ಮಾತನಾಡುವವರ ಬಡಾವಣೆಗಳೇ ಹೆಚ್ಚಾಗಿರುವ ಮಧ್ಯ ಮುಂಬೈನಲ್ಲಿದೆ ಶಿವಾಜಿ ಪಾರ್ಕ್. ಮೋಟ್ವಾನೆ ಚಿಕಾಗೊ ಟೆಲಿಫೋನ್ ಮತ್ತು ರೇಡಿಯೋ ಕಂಪನಿಯ, ಗೋಲ್ವಾಲ್ಕರ್ ಬಳಸಿದ ಮೈಕಿನಲ್ಲೇ ನೆಹರೂ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಆದರೆ ನೆಹರೂ ನೀಡಿದ ಸಂದೇಶ ಸ್ಪಷ್ಟವಾಗಿತ್ತು. ಭಾರತದ ಒಳಗೆ ಹಾಗೂ ಹೊರಗಿನ ಯುದ್ಧ ಪೀಡಿತ ರಾಷ್ಟ್ರಗಳಲ್ಲಿ ಶಾಂತಿಯನ್ನು ಕಾಪಾಡುವ ಅಗತ್ಯ ಕುರಿತು ನೆಹರೂ ಮಾತನಾಡಿದ್ದರು.

1949ರ ನವೆಂಬರ್ 14ರಂದು, ತಮ್ಮ ಅರವತ್ತನೆಯ ಹುಟ್ಟು ಹಬ್ಬದ ದಿನ ನೆಹರೂ ಭಾಷಣ ಮಾಡಿದ್ದರು. ತಮ್ಮ ದೇಶ ಬಾಂಧವರ ಪ್ರೀತಿ ವಿಶ್ವಾಸಗಳಿಗಿಂತ ಮಿಗಿಲಾದ ಹುಟ್ಟುಹಬ್ಬದ ಉಡುಗೊರೆಯನ್ನು ಅವರೆಂದೂ ನಿರೀಕ್ಷಿಸಿರಲಿಕ್ಕಿಲ್ಲ. ಅಂದು ಪ್ರಧಾನಮಂತ್ರಿಯವರು ಸಂಜೆ ನಾಲ್ಕೂವರೆಗೆ ಮುಂಬಯಿಗೆ ಬರಬೇಕಿತ್ತು. ಸಂತಾಕ್ರೂಜ್ ವಿಮಾನ ನಿಲ್ದಾಣದಲ್ಲಿ, ವಿಮಾನ ಬರುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಜನ ಜಮಾಯಿಸಿದ್ದರು. ಅಂಗಡಿ ಮುಂಗಟ್ಟು ಮುಚ್ಚಿ, ಕೆಲಸಗಳನ್ನು ನಿಲ್ಲಿಸಿ ನೆಹರೂ ದರ್ಶನಾಕಾಂಕ್ಷಿಗಳಾಗಿ ಜನ ಬಂದಿದ್ದರು. ಮಾರ್ಗಮಧ್ಯಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ನಿಂತ

ಜನ ತೆರೆದ ಕಾರಿನಲ್ಲಿದ್ದ ನೆಹರೂ ದರ್ಶನದಿಂದ ಪುಳಕಿತರಾದರು. ಕೈ ಬೀಸಿ ಗೌರವ ಸೂಚಿಸಿದರು.

ಒಂದು ಗಂಟೆಯ ನಂತರ ನೆಹರೂ ಶಿವಾಜಿ ಪಾರ್ಕಿಗೆ ಆಗಮಿಸಿದರು. "ಮೈದಾನ ಜನರಿಂದ ಕಿಕ್ಕಿರಿದು ಭರ್ತಿಯಾಗಿತ್ತು. ಆರು ಲಕ್ಷಕ್ಕೂ ಹೆಚ್ಚು ಜನ ಆ ಸ್ಮರಣೀಯ ಸಂಜೆ ಅಲ್ಲಿ ಸೇರಿದ್ದರು. ಅದೊಂದು ಉತ್ಸಾಹ ತುಂಬಿ ತುಳುಕುತ್ತಿದ್ದ ಜನಸಾಗರವಾಗಿತ್ತು. ಮಕ್ಕಳು, ಯುವಕರು, ದೊಡ್ಡವರು, ವಯೋವೃದ್ಧರಾದಿಯಾಗಿ ನೆಹರೂ ಭಾಷಣ ಕೇಳಲು ಅಲ್ಲಿಗೆ ಬಂದಿದ್ದರು. ನೆಹರೂ ನಾಯಕತ್ವದಲ್ಲಿ ಈ ಜನರಿಗೆ ನಂಬಿಕೆಯಿತ್ತು. ಮುಂಬರುವ ಕಷ್ಟದ ದಿನಗಳಲ್ಲಿ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಅವರಿಗಿದೆ ಎಂದು ಜನ ನಂಬಿದ್ದರು."

ಭಾರತ ಹಿಂದೂ ಪುರೋಹಿತಶಾಹಿ ರಾಷ್ಟ್ರವಾಗಬೇಕೆಂಬ ಗೋಲ್ವಾಲ್ಕರ್ ಪ್ರತಿಪಾದನೆ ಕೇಳಲು ಸಾವಿರಾರು ಜನ ಬಂದಿದ್ದರು. ಆದರೆ, ಪ್ರಜಾಪ್ರಭುತ್ವವನ್ನು ಬೆಂಬಲಿಸಿ, ನಿರಂಕುಶಾಧಿಕಾರವನ್ನು ವಿರೋಧಿಸಿ, ಹಿಂದೂ ಅಂಧಾಭಿಮಾನದ ವಿರುದ್ಧ ಜಾತ್ಯತೀತತೆ ಎತ್ತಿ ಹಿಡಿದು ಮಾತನಾಡಿದ ನೆಹರೂ ಅವರ ಭಾಷಣಕ್ಕೆ ಹರ್ಷೋದ್ಗಾರಗೈಯ್ಯಲು ಇದಕ್ಕೆ ಆರು ಪಟ್ಟು ಹೆಚ್ಚು ಜನ ಬಂದಿದ್ದರು. ಭಾರತದ ಧ್ಯೇಯ ಆದರ್ಶಗಳ ಈ ಆಟ-ಮೇಲಾಟ-ಅಟ್ಟಹಾಸಗಳಲ್ಲಿ ನೆಹರೂ ಅವರದು ಅಮೋಘ ವಿಜಯವಾಗಿತ್ತು.

VII

ಮಹಾರಾಜರುಗಳ ಸಂಸ್ಥಾನಗಳ ವಿಲೀನದಂತೆ ನಿರಾಶ್ರಿತರ ಪುನರ್ವಸತಿಯೂ ನಭೂತೋ ನಭವಿಷ್ಯತಿ ಎನ್ನುವಂಥ ರಾಜಕೀಯ ಸಮಸ್ಯೆಯಾಗಿತ್ತು. ಪಾಕಿಸ್ತಾನದಿಂದ ಭಾರತಕ್ಕೆ ವಲಸೆಬಂದ ನಿರಾಶ್ರಿತರು ಹೇಗಿದ್ದರೆಂದರೆ, ನಿರಾಶ್ರಿತರಲ್ಲಿ ಒಬ್ಬರು ಬರೆದಿರುವಂತೆ, "ಶರತ್ಕಾಲದಲ್ಲಿ ಗಾಳಿಗೆ ಉದುರಿದ ಎಲೆಗಳಂತಿದ್ದರು ಅಥವಾ ಗಾಳಿಯಲ್ಲಿ ಅಲ್ಲಿಂದಿಲ್ಲಿಗೆ ಹಾರಾಡುವ ಕಾಗದದ ಚೂರುಗಳಂತೆ, ದೂಳಿನಂತೆ ಇದ್ದರು. ಕೈಕಾಲು ಸಮೇತ ಸುರಕ್ಷಿತವಾಗಿ ಬಂದವರಿಗೆ ಶಕ್ತಿ ಸಾಮರ್ಥ್ಯಗಳೂ ಇರಲಿಲ್ಲ, ಬೇರುಗಳೂ ಇರಲಿಲ್ಲ."

ಸ್ವಾತಂತ್ರ್ಯಾನಂತರ ಭಾರತಕ್ಕೆ ಬಂದ ನಿರಾಶ್ರಿತರ ಸಂಖ್ಯೆ ಹತ್ತಿರ ಹತ್ತಿರ ಎಂಟು ದಶಲಕ್ಷ. ಇದು, ಆಸ್ಟ್ರಿಯಾ, ನಾರ್ವೆಯಂಥ ಐರೋಪ್ಯ ರಾಷ್ಟ್ರಗಳ ಜನಸಂಖ್ಯೆಗಿಂತ ಹೆಚ್ಚಾದದ್ದು. ಹಾಗೂ ಆಸ್ಟ್ರೇಲಿಯಾ ಉಪಖಂಡದ ಜನಸಂಖ್ಯೆಗಿಂತ ಹೆಚ್ಚಾದದ್ದು. ಇಲ್ಲಿನ ಜನರೆಲ್ಲ ಹಣ, ಕಾಲ ಮತ್ತು ಸ್ವಪ್ರಯತ್ನಗಳಿಂದಾಗಿ ಇಲ್ಲಿ ಪುನರ್ವಸತಿ ಹೊಂದಿದ್ದರು, ಯಾವುದೇ ಆದರ್ಶ ಸಿದ್ಧಾಂತಗಳಿಂದಲ್ಲ.

ನವಭಾರತ ನಿರ್ಮಾಣದಲ್ಲಿ ವೀರಾವೇಶ, ಅಟ್ಟಹಾಸಗಳಿದ್ದವು. ಜೊತೆಗೆ ತಪ್ಪುಗಳೂ ಇದ್ದವು. ಹಣೆಯಲಾಗದೆ ಉಳಿದ ಸಡಿಲ ತುದಿಗಳೂ ಇದ್ದವು. ಮಹಾರಾಜರ ಆಳ್ವಿಕೆಯನ್ನು ಕೊನೆಗಾಣಿಸುವುದರಲ್ಲಿ ನೋವಿತ್ತು, ಕಷ್ಟವಿತ್ತು, ನಿರಾಶ್ರಿತರ ಪುನರ್ವಸತಿಯಲ್ಲೂ ನೋವಿತ್ತು, ಕಷ್ಟವಿತ್ತು. ಆದರೆ, ಆತ್ಮೈರಾಗಿ ಈ ಎರಡನ್ನೂ ಸಾಧಿಸಲಾಯಿತು.

ಜಟಿಲವಾದ, ಸಂಕೀರ್ಣವಾದ ಸಾಧನೆಯ ಈ ಪ್ರಕ್ರಿಯೆಯಲ್ಲಿ ಎಲ್ಲ ಪಾತ್ರಧಾರಿಗಳೂ ಭಾರತೀಯರೇ. ಬ್ರಿಟಿಷರು ಇದನ್ನು ನಿರೀಕ್ಷಿಸಿರಲಿಲ್ಲ. 1947ರಲ್ಲಿ, ಬಂಗಾಳದ ಮಾಜಿ ಗೌರ್ನರ್ ಒಬ್ಬ ಹೀಗೆ ದಾಖಲಿಸಿದ್ದಾನೆ:

> *ಭಾರತದಲ್ಲಿ ಬ್ರಿಟಿಷರ ರಾಜಕೀಯ ಹತೋಟಿಯ ಅಂತ್ಯವೆಂದರೆ ಬ್ರಿಟಿಷರೆಲ್ಲರೂ, ವ್ಯಕ್ತಿಗಳಾಗಿ ಭಾರತದಿಂದ ನಿರ್ಗಮಿಸುತ್ತಾರೆ ಎಂದು ಅರ್ಥವಲ್ಲ. ಸರ್ಕಾರಿ ಸೇವೆಯಲ್ಲಿ ಬ್ರಿಟಿಷರಿಲ್ಲದೆ ನಿರ್ವಹಿಸುವುದು ಅನೇಕ ವರ್ಷಗಳ ಕಾಲ ಭಾರತಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆಡಳಿತ, ಕಾನೂನು, ವೈದ್ಯಕೀಯ, ಪೊಲೀಸ್ ಹಾಗೂ ವೃತ್ತಿನಿರತ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಬ್ರಿಟಿಷರು ಭಾರತ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳ ಸೇವೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಮುಂದುವರಿಯುತ್ತಾರೆ. 400 ದಶಲಕ್ಷ ಜನರ ಆಡಳಿತ ನಿರ್ವಹಣೆ ಮಾಡಲು ಸರ್ಕಾರದಲ್ಲಿರುವ ಈ ಎಲ್ಲ ಸ್ಥಾನಗಳನ್ನೂ ಮಣ್ಣಿನ ಮಕ್ಕಳಿಂದಲೇ ಭರ್ತಿಮಾಡಲು ಭಾರತಕ್ಕೆ ಹಲವಾರು ವರ್ಷಗಳು ಬೇಕಾಗುತ್ತವೆ.*

ಸಹಾಯ ಕೇಳದಿದ್ದಲ್ಲಿ ಸಹಾಯದ ಅಗತ್ಯವಿರಲಿಲ್ಲ ಎಂದೇ ಅರ್ಥ. ಬ್ರಿಟಿಷ್ ಆಡಳಿತಗಾರರು ತಮ್ಮ ಹಿಂದೆ, ಸಿವಿಲ್ ಸರ್ವಿಸ್, ನ್ಯಾಯಾಂಗ, ರೈಲ್ವೆ ಇತ್ಯಾದಿ ಸೇವಾವ್ಯವಸ್ಥೆಗಳನ್ನು ಬಿಟ್ಟು ಹೋದರೆಂಬುದು ಒಪ್ಪತಕ್ಕದ್ದೇ. ಸ್ವಾತಂತ್ರ್ಯ ನಂತರ, ಭಾರತ ಸರ್ಕಾರ ಐ.ಸಿ.ಎಸ್. ಶ್ರೇಣಿಯ ಬ್ರಿಟಿಷ್ ಅಧಿಕಾರಿಗಳನ್ನು ಸೇವೆಯಲ್ಲಿ ಮುಂದುವರಿಯುವಂತೆ ಕೇಳಿಕೊಂಡಿತು. ಉಳಿದ ಬ್ರಿಟಿಷರು ತಮ್ಮ ರಾಷ್ಟ್ರಕ್ಕೆ ಹಿಂದಿರುಗಿದರು. ಹೀಗಾಗಿ ನಾವಿಲ್ಲಿ ಸ್ಮರಿಸಬೇಕಾಗಿರುವುದು ಭಾರತೀಯರನ್ನೇ. ಅವರು ನೆಹರೂ, ಪಟೇಲರಂಥ ರಾಜಕಾರಣಿಗಳಾಗಿರಬಹುದು ಅಥವಾ ಕಮಲಾದೇವಿ ಚಟ್ಟೋಪಾಧ್ಯಾಯ, ಮೃದುಲಾ ಸಾರಾಭಾಯಿ ಅವರಂಥ ಸಮಾಜ ಸೇವಕರಾಗಿರಬಹುದು. ಇದಲ್ಲದೆ ಅಸಂಖ್ಯಾತ ಮಂದಿ ಅನಾಮಧೇಯರಿದ್ದಾರೆ. ಇಂದಿಗೂ ಇದ್ದಾರೆ. ಜಮೀನಿಗಾಗಿ ಅರ್ಜಿಗಳನ್ನು ಸ್ವೀಕರಿಸಿದವರು, ಮನೆಗಳನ್ನು, ಆಸ್ಪತ್ರೆಗಳನ್ನು, ಶಾಲೆಗಳನ್ನು ಕಟ್ಟಿದವರು, ನ್ಯಾಯಾಲಯ-ಸಚಿವಾಲಯಗಳಲ್ಲಿ ಜವಾಬ್ದಾರಿ ನಿರ್ವಹಿಸಿದವರು-ಹೀಗೆ ಸ್ಮರಿಸಬೇಕಾದವರು ಬಹಳಷ್ಟು ಮಂದಿ ಇದ್ದಾರೆ. ಇದಲ್ಲದೆ, ಇದಕ್ಕೂ ಮಿಗಿಲಾಗಿ ನಿರಾಶ್ರಿತರ ಬಗ್ಗೆ ಕಾಳಜಿ ವಹಿಸಿದ, ಅವರಿಗೆ ಆಶ್ರಯ ನೀಡಿದ, ಅವರಿಗೆ ಸಾಂತ್ವನ ಹೇಳಿದ ಪ್ರಚಂಡ ಸಂಖ್ಯೆಯ ಭಾರತೀಯರಿದ್ದಾರೆ.

ಸ್ವಾತಂತ್ರ್ಯ ಬಂದ ಪ್ರಾರಂಭದ ವರ್ಷಗಳಲ್ಲಿ ಭಾರತದಲ್ಲಿ ಕೆಲಸಮಾಡಿದ ಅಮೆರಿಕ ವಾಸ್ತುಶಿಲ್ಪಿಯೊಬ್ಬ ತನ್ನ ಸುತ್ತಮುತ್ತ ಇದ್ದ ಜನರ ಚಾರಿತ್ರ್ಯ ಮತ್ತು ಆದರ್ಶ ಕುರಿತು ಭಾವಪೂರ್ಣವಾಗಿ ಬರೆದಿದ್ದಾನೆ. "ನಾನು ಕಂಡ ಜನರು, ವಿವಿಧ ಬಗೆಯ ಹಲವು ಹನ್ನೊಂದು ಮಂದಿ ಜನರು. ಅವರ ಸಾಮರ್ಥ್ಯ, ಅವರ ಶಕ್ತಿ, ಅವರ ಜೀವನದೃಷ್ಟಿ, ಶ್ರದ್ಧೆ-ನಿಷ್ಠೆ, ಮೈಪುಳಕಗೊಳಿಸುವ ಯೋಜನೆಗಳು, ಅನಿಶ್ಚಿತತೆಗಳು ಇವುಗಳ ಮಧ್ಯೆಯೂ ಸ್ವಸ್ಥ ಚಿತ್ತರಾಗಿ ಕೆಲಸ ಮಾಡುವ ಈ ಜನರನ್ನು ಕಂಡಾಗ ಅನ್ನಿಸುತ್ತದೆ: ಇವೆಲ್ಲವರ ಮೊತ್ತವಾಗಿಯೇ ಹೊಸರಾಷ್ಟ್ರವೊಂದು ಜನ್ಮತಾಳಿದೆ."

ರಾಷ್ಟ್ರ ನಿರ್ಮಾಣದ ಇತಿಹಾಸದಲ್ಲಿ ಸೋವಿಯತ್ ಪ್ರಯೋಗವನ್ನು ಭಾರತದೊಂದಿಗೆ ಹೋಲಿಸಬಹುದು. ಅಲ್ಲೂ ಸಹ ಹಲವಾರು ಮಾನವ ಕುಲಗಳು, ಜಾತಿಧರ್ಮಗಳು, ಭಾಷಾ ಸಮುದಾಯಗಳು ಹಾಗೂ ಸಾಮಾಜಿಕ ವರ್ಗಗಳ ನಡುವೆ ಏಕತೆಯ ಪ್ರಜ್ಞೆಯನ್ನು ಮೂಡಿಸಬೇಕಾಗಿತ್ತು, ಬೆಸೆಯಬೇಕಾಗಿತ್ತು. ಭೌಗೋಳಿಕವಾಗಿ ಹಾಗೂ ಜನಸಂಖ್ಯಾ ಶಾಸ್ತ್ರಕ್ಕನುಗುಣವಾಗಿಯೂ ಇದರ ವಿಸ್ತಾರ ದೊಡ್ಡದೇ. ಸರ್ಕಾರದ ನೆರವಿಗಿದ್ದವರೂ ಅನುಕೂಲಕರವಾಗಿರಲಿಲ್ಲ. ಮತಧರ್ಮ ನಂಬಿಕೆಗಳಿಂದ ವಿಭಜಿತರಾಗಿದ್ದ ಜನ, ಸಾಲಸೋಲ ಮತ್ತು ರೋಗ ರುಜಿನಗಳಿಂದ ಜರ್ಝರಿತರಾಗಿದ್ದ ಜನ.

ಭಾರತ, ಎರಡನೆಯ ಮಹಾಯುದ್ಧದ ನಂತರ ಹೇಗಿತ್ತೆಂದರೆ, ಮೊದಲನೆ ಮಹಾಯುದ್ಧದ ನಂತರದ ಸೋವಿಯತ್ ಒಕ್ಕೂಟದಂತಿತ್ತು. ಅಲ್ಲೂ ಚೂರುಪಾರು, ತುಂಡು-ತುಣುಕುಗಳನ್ನು ಒಂದುಗೂಡಿಸಿ ರಾಷ್ಟ್ರವೊಂದನ್ನು ನಿರ್ಮಾಣ ಮಾಡಲಾಗುತ್ತಿತ್ತು. ವರ್ಗ ಶತ್ರುಗಳ ನಿರ್ಮೂಲನವಾಗಲೀ ಅಥವಾ ಶ್ರಮಶಿಬಿರಗಳ ಸೃಷ್ಟಿಯಾಗಲೀ ರಾಷ್ಟ್ರಕಟ್ಟುವ ಪ್ರಕ್ರಿಯೆಯಲ್ಲಿ ಸಹಾಯಕವಾಗಲಿಲ್ಲ.

6

ಭಾರತೀಯ ಚಿಂತನೆಗಳು

ರಾಜ್ಯಾಧಿಪತ್ಯ ಅಥವಾ ಆಳ್ವಿಕೆಯಲ್ಲಿ ಎಲ್ಲ ವಿಧದ ತ್ಯಾಗಗಳ ಸಾಕ್ಷಾತ್ಕರಣವಿದೆ; ಅಧಿಪತ್ಯದಲ್ಲಿ ಎಲ್ಲ ಧರ್ಮಕರ್ಮ, ಸಂಸ್ಕಾರಗಳು ಸಂಯೋಗ ಹೊಂದಿವೆ; ಆಧಿಪತ್ಯದಲ್ಲಿ ಎಲ್ಲ ಜ್ಞಾನಗಳೂ ಮೇಳೈಸಿವೆ; ಆಧಿಪತ್ಯದಲ್ಲಿ ಎಲ್ಲ ವಿಶ್ವಗಳೂ ಕೇಂದ್ರಿತವಾಗಿವೆ.

–ಮಹಾಭಾರತ

ಸಂವಿಧಾನಾತ್ಮಕ ನೈತಿಕತೆ ಎನ್ನುವುದು ಒಂದು ಸಹಜಭಾವವಲ್ಲ. ಅದನ್ನು ರೂಢಿಸಿಕೊಳ್ಳಬೇಕಾಗುತ್ತದೆ, ಬೆಳೆಸಿಕೊಳ್ಳಬೇಕಾಗುತ್ತದೆ. ನಮ್ಮ ಜನತೆ ಅದನ್ನು ಇನ್ನೂ ಕಲಿಯಬೇಕಾಗಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಭಾರತದಲ್ಲಿ ಪ್ರಜಾಪ್ರಭುತ್ವ ಎನ್ನುವುದು ಭಾರತ ಭೂಮಿಯ ಮೇಲಿನ ಒಂದು ಕೋರಿಕೆಯ ಪ್ರದರ್ಶನವಷ್ಟೆ, ಇದರ ಮೂಲಸ್ವಭಾವವೇ ಪ್ರಜಾಪ್ರಭುತ್ವ ವಿರೋಧಿಯಾದದ್ದು.

–ಬಿ.ಆರ್. ಅಂಬೇಡ್ಕರ್

I

395 ವಿಧಿಗಳು ಮತ್ತು 8 ಪರಿಶಿಷ್ಟಗಳನ್ನು ಹೊಂದಿರುವ ಭಾರತದ ಸಂವಿಧಾನ ಬಹುಶಃ ವಿಶ್ವದಲ್ಲೇ ಅತಿದೊಡ್ಡದು, ಬೃಹತ್ ಗಾತ್ರದ್ದು. 1950ರ ಜನವರಿಯಿಂದ ಅನುಷ್ಠಾನಕ್ಕೆ ಬಂದ ಇದನ್ನು ಮೂರು ವರ್ಷಗಳ ಕಾಲಾವಧಿಯಲ್ಲಿ, ಅಂದರೆ 1946ರ ಡಿಸೆಂಬರ್‌ನಿಂದ 1949ರ ಡಿಸೆಂಬರ್ ನಡುವಣ ಅವಧಿಯಲ್ಲಿ ರಚಿಸಲಾಯಿತು. ಈ ಕಾಲಾವಧಿಯಲ್ಲಿ ಭಾರತದ ಸಂವಿಧಾನ ರಚನಾ ಸಭೆಯಲ್ಲಿ ಈ ಸಂವಿಧಾನದ ಕರಡಿನ ಒಂದೊಂದು ವಿಧಿಯನ್ನೂ ಚರ್ಚಿಸಲಾಯಿತು. ಸಂವಿಧಾನ ರಚನಾ ಸಭೆ ಒಟ್ಟಾರೆ ಹನ್ನೊಂದು ಅಧಿವೇಶನಗಳನ್ನು ನಡೆಸಿತು. ಈ ಅಧಿವೇಶನಗಳ ಒಟ್ಟು ಅವಧಿ 165

ದಿನಗಳು. ಅಧಿವೇಶನಗಳ ನಡುವಣ ಅವಧಿಯಲ್ಲಿ ಹಲವಾರು ಸಮಿತಿಗಳು ಮತ್ತು ಉಪಸಮಿತಿಗಳು ಕರಡುಗಳನ್ನು ಪರಿಷ್ಕರಿಸುವ, ಸಂಸ್ಕರಿಸುವ ಕಾರ್ಯದಲ್ಲಿ ನಿರತವಾಗಿದ್ದವು.

ಭಾರತ ಸಂವಿಧಾನ ರಚನಾಸಭೆಯ ಕಾರ್ಯಕಲಾಪಗಳನ್ನು ಹನ್ನೊಂದು ಬೃಹತ್ ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಸಾವಿರ ಪುಟಗಳಿಗೂ ಮೀರಿದ ಈ ಸಂಪುಟಗಳು ಭಾರತೀಯರ ವಾಚಾಳಿತನಕ್ಕಷ್ಟೇ ಅಲ್ಲದೆ, ಅವರ ಒಳನೋಟ, ಬುದ್ಧಿವಂತಿಕೆ, ಭಾವಾತಿರೇಕಗಳು ಹಾಗೂ ಹಾಸ್ಯಪ್ರಜ್ಞೆಗೂ ಸಾಕ್ಷಿಯಾಗಿವೆ. ಈ ಸಂಪುಟಗಳು ಗುಪ್ತನಿಧಿ ಇದ್ದಂತೆ, ಇತಿಹಾಸಕಾರರಿಗೆ ಅಮೂಲ್ಯವಾದವು, ಅಷ್ಟೇ ಅಲ್ಲದೆ ಆಸಕ್ತ ಪ್ರಜೆಗಳಿಗೆ ಜ್ಞಾನಾರ್ಜನೆಯ ಮೂಲವೂ ಹೌದು. ಇದರಲ್ಲಿ ರಾಷ್ಟ್ರದ ಅನೇಕ ಸೆಣಸಾಟದ ಚಿಂತನೆಗಳು, ಆಲೋಚನೆಗಳು ನಮಗೆ ಎದುರಾಗುತ್ತವೆ. ಈ ರಾಷ್ಟ್ರ ಯಾವ ಭಾಷೆಯನ್ನು ಆಡಬೇಕು, ಎಂಥ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಅದು ಅನುಸರಿಸಬೇಕು, ಯಾವ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು ಅಥವಾ ನಿರಾಕರಿಸಬೇಕು ಈ ಎಲ್ಲದರ ಬಗ್ಗೆ ಪೈಪೋಟಿಯ ಆಲೋಚನೆಗಳನ್ನು, ಚಿಂತನೆಗಳನ್ನು ನಾವು ಕಾಣುತ್ತೇವೆ.

II

ಭಾರತೀಯರು ತಮ್ಮದೇ ಆದ ಸಂವಿಧಾನವನ್ನು ರಚಿಸಿಕೊಳ್ಳುವರೆಂದು ಕಾಂಗ್ರೆಸ್ 1930ರ ದಶಕದಿಂದಲೂ ಹೇಳುತ್ತಾ ಬಂದಿತ್ತು. 1946ರಲ್ಲಿ ಅಂತಿಮವಾಗಿ ಲಾರ್ಡ್ ವಾವೆಲ್ ಇದಕ್ಕೆ ಸಮ್ಮತಿಸಿದರು. ಆ ವರ್ಷದ ಪ್ರಾಂತೀಯ ಚುನಾವಣೆಗಳ ಆಧಾರದ ಮೇಲೆ ಸಂವಿಧಾನ ರಚನಾ ಸಭೆಗೆ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಆದರೆ ಶುರುವಿನಲ್ಲಿ ಮುಸ್ಲಿಂ ಲೀಗ್ ಬಹಿಷ್ಕಾರ ಹಾಕಿತು. ಹೀಗಾಗಿ ಸಂವಿಧಾನ ರಚನಾ ಸಭೆಯು ಪ್ರಾರಂಭದ ಅಧಿವೇಶನಗಳಲ್ಲಿ ಒಂದೇ ಪಕ್ಷದ ವೇದಿಕೆಯಾಗಿ ಪರಿಣಮಿಸಿತು.

ಸಂವಿಧಾನ ರಚನಾಸಭೆಯ ಮೊದಲ ಬೈಠಕ್ 1946ರ ಡಿಸೆಂಬರ್ 9ರಂದು ನಡೆಯಿತು. ಸಭೆಯ ವಾತಾವರಣದಲ್ಲಿ ಒಂದು ರೀತಿಯ ಮುಂಗಾಣ್ಕೆ, ಪೂರ್ವಸಿದ್ಧತೆಗಳು ಕಂಡು ಬರುತ್ತಿತ್ತು. ಪ್ರಮುಖ ಕಾಂಗ್ರೆಸ್ ಸದಸ್ಯರಾದ ನೆಹರೂ ಮತ್ತು ಪಟೇಲ್ ಅಗ್ರ ಪಂಕ್ತಿಯಲ್ಲಿ ಆಸೀನರಾಗಿದ್ದರು. ಆದರೆ ಇದು ಕೇವಲ ಕಾಂಗ್ರೆಸ್ ಪಕ್ಷದ ದೇಖಾವೆ ಅಲ್ಲ ಎಂಬುದನ್ನು ಸಿದ್ಧಪಡಿಸಲೋ ಎಂಬಂತೆ, ಬಂಗಾಳದ ಶರತ್ ಬೋಸ್ ಅವರಂಥ ಪ್ರಮುಖ ವಿರೋಧಿಗಳಿಗೂ ಕಾಂಗ್ರೆಸ್ ನಾಯಕರುಗಳ ಸಾಲಿನಲ್ಲೇ ಆಸನ ವ್ಯವಸ್ಥೆ ಮಾಡಲಾಗಿತ್ತು. 'ಒಂಬತ್ತು ಮಂದಿ ಮಹಿಳೆಯರೂ ಹಾಜರಿದ್ದದ್ದು ಸಭೆಗೆ ವಿಶೇಷ ರಂಗು ತಂದಿತ್ತೆಂದು' ರಾಷ್ಟ್ರೀಯ ಪತ್ರಿಕೆಯೊಂದು ವರದಿ ಮಾಡಿತ್ತು. ಸಭೆಯಲ್ಲಿ ಎದ್ದು ಕಾಣುತ್ತಿದ್ದ ಗಾಂಧಿ ಟೊಪ್ಪಿಗೆ ಮತ್ತು ನೆಹರೂ ಜಾಕೆಟುಗಳ ದೃಶ್ಯದ ಮೆರುಗು ಹೆಚ್ಚಿಸಿದ ವಿಶೇಷ ರಂಗು ಇದಾಗಿತ್ತು.

ಸಂವಿಧಾನ ರಚನಾ ಸಭೆಯಲ್ಲಿ ಬ್ರಿಟಿಷ್ ಭಾರತದ ಪ್ರಾಂತ್ಯಗಳ ಸದಸ್ಯರಲ್ಲದೇ ಮಹಾರಾಜರ ಸಂಸ್ಥಾನಗಳ ಪ್ರತಿನಿಧಿಗಳೂ ಇದ್ದರು. ರಾಜಮಹಾರಾಜರುಗಳು ಒಬ್ಬರಾದ ಮೇಲೆ ಒಬ್ಬರಂತೆ ಸಂವಿಧಾನ ರಚನಾ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲಾರಂಭಿಸಿದರು. ಸಂವಿಧಾನ ರಚನಾ ಸಭೆಯ ಒಟ್ಟು ಸದಸ್ಯರಲ್ಲಿ ಶೇ 82ರಷ್ಟು ಮಂದಿ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದರು. ಕಾಂಗ್ರೆಸ್, ಮೂಲ ಸಿದ್ಧಾಂತವನ್ನು ಹೊಂದಿದ್ದು ಅದನ್ನು ಪ್ರತಿಪಾದಿಸುತ್ತಲೇ ಬೇರೆ-ಬೇರೆ ಅಭಿಪ್ರಾಯಗಳನ್ನು ನಿಲುವುಗಳನ್ನು ಹೊಂದಿರುವಂಥವರನ್ನೂ ಒಳಗೊಂಡ ಒಂದು ದೊಡ್ಡ ಪಕ್ಷವಾಗಿತ್ತು. ಕಾಂಗ್ರೆಸ್ಸಿನೊಳಗೆ ನಿರೀಶ್ವರವಾದಿಗಳಿದ್ದರು, ಜಾತ್ಯತೀತರಿದ್ದರು, ತಾಂತ್ರಿಕವಾಗಿ ಕಾಂಗ್ರೆಸ್ ಸದಸ್ಯರಾಗಿದ್ದು ಅಂತರಂಗದಲ್ಲಿ ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾದಲ್ಲಿ ಒಲವುಳ್ಳವರಿದ್ದರು. ಇನ್ನು ಕೆಲವರು ಸಮಾಜವಾದಿ ಆರ್ಥಿಕ ಸಿದ್ಧಾಂತದಲ್ಲಿ ಒಲವುಳ್ಳವರಾಗಿದ್ದರು. ಮತ್ತೆ ಕೆಲವರು ಜಮೀನ್ದಾರರ ಹಕ್ಕುಗಳ ಪರವಾಗಿದ್ದರು. ತನ್ನೊಳಗೆ ಇಂಥ ವಿವಿಧ ಅಭಿಪ್ರಾಯಗಳನ್ನು ಬಿಂಬಿಸುವ ಸದಸ್ಯರನ್ನು ಹೊಂದಿದ್ದ ಕಾಂಗ್ರೆಸ್, ವಿವಿಧ ಜಾತಿಮತ ಧರ್ಮಗಳನ್ನು ಪ್ರತಿನಿಧಿಸುವ ಪಕ್ಷೇತರರನ್ನೂ ಸಂವಿಧಾನ ರಚನಾ ಸಭೆಗೆ ನಾಮಕರಣ ಮಾಡಿತ್ತು. ಮಹಿಳೆಯರಿಗೂ ಪ್ರಾತಿನಿಧ್ಯ ನೀಡಲಾಗಿತ್ತು. ವಿಶೇಷವಾಗಿ ಕಾನೂನು ತಜ್ಞರಿಗೆ, ನ್ಯಾಯಶಾಸ್ತ್ರ ತಜ್ಞರಿಗೆ ಪ್ರಾಶಸ್ತ್ಯ ನೀಡಲಾಗಿತ್ತು. ಹೀಗೆ, ಪ್ರಸಂಗಾವಧಾನವಾಗಿ ಎಲ್ಲ ಬಗೆಯ ಸಾರ್ವಜನಿಕ ಅಭಿಪ್ರಾಯಗಳೂ ಪ್ರಾತಿನಿಧ್ಯ ಪಡೆದಿದ್ದವು.

ಸಂವಿಧಾನ ರಚನಾ ಸಭೆಗೆ ನಿರ್ಮಿಸಲಾಗಿದ್ದ ಈ ವಿಸ್ತೃತ ಸಾಮಾಜಿಕ ತಳಹದಿ, ಒಂದು ರೀತಿಯಲ್ಲಿ ಬ್ರಿಟಿಷ್ ಟೀಕೆಗೆ ನೀಡಿದ ಉತ್ತರವಾಗಿತ್ತು. ಸಂವಿಧಾನ ರಚನಾ ಸಭೆ, ಭಾರತದ ದೊಡ್ಡ ಸಮುದಾಯವಾದ ಹಿಂದೂಗಳಿಂದಲೇ ತುಂಬಿರುತ್ತದೆ ಎಂದು ವಿನ್ಸ್ಟನ್ ಚರ್ಚಿಲ್ ಹೀಗಳೆದಿದ್ದರು. ಅವರ ಅಭಿಪ್ರಾಯದಲ್ಲಿ: ಕಾಂಗ್ರೆಸ್ ನಿಜವಾಗಿ ಪ್ರಾತಿನಿಧಿಕ ಪಕ್ಷವಾಗಿರಲಿಲ್ಲ; ಅದು ಸಕ್ರಿಯವಾಗಿ ಒಂದುಗೂಡಿಸಲ್ಪಟ್ಟ, ವ್ಯವಸ್ಥೆಗೊಳಿಸಲ್ಪಟ್ಟ ಅಲ್ಪ ಸಂಖ್ಯಾತರ ಮುಖವಾಣಿಯಾಗಿತ್ತು; ಒತ್ತಡ, ಬಲಾತ್ಕಾರ, ವಂಚನೆ ಅಥವಾ ಕುತಂತ್ರಗಳ ಮೂಲಕ ಅಧಿಕಾರಗ್ರಹಣ ಮಾಡಿ, ಈ ಅಧಿಕಾರವನ್ನು, ಬಹಳಷ್ಟು ಹಿಂದೆಯೇ ಸಂಬಂಧ ಕಡಿದುಕೊಂಡಿರುವ ಜನಸಮೂಹದ ಹೆಸರಿನಲ್ಲಿ ಚಲಾಯಿಸುವ ಪಕ್ಷವಾಗಿತ್ತು ಕಾಂಗ್ರೆಸ್.

ವ್ಯಾಪಕ ಪ್ರಾತಿನಿಧ್ಯ ನೀಡುವ ಪ್ರಕ್ರಿಯೆಯಾಗಿ ಸಾರ್ವಜನಿಕರಿಂದ ಮನವಿಗಳನ್ನು ಆಹ್ವಾನಿಸಲಾಯಿತು. ಹೀಗೆ, ಮುಕ್ತ ಜನಸಮುದಾಯದ ಅರಿಕೆ-ನಿವೇದನೆಗಳಿಗೆ ಮಣೆ ಹಾಕಲಾಯಿತು. ನೂರಾರು ಮಂದಿ ಹಾಗೂ ಸಂಘ ಸಂಸ್ಥೆಗಳು ಇದಕ್ಕೆ ಓಗೊಟ್ಟು ಸಂವಿಧಾನ ರಚನಾ ಸಭೆಗೆ ಮನವಿ, ನಿವೇದನೆಗಳನ್ನು ಸಲ್ಲಿಸಿದವು. ಸಂವಿಧಾನ ರಚನಾಕಾರರು ಎಷ್ಟೆಲ್ಲ ಬಗೆಯ ಹಿತಾಸಕ್ತಿಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಯಿತು ಎಂಬುದಕ್ಕೆ ಈ ಮನವಿಗಳೇ ನಿದರ್ಶನಗಳು. "ಸಂವಿಧಾನವನ್ನು ಪ್ರಾಚೀನ ಹಿಂದೂ ಶಾಸ್ತ್ರ ಗ್ರಂಥಗಳ ಆಧಾರದ ಮೇಲೆ ರಚಿಸಬೇಕೆಂದು" ಕಲ್ಕತ್ತೆ ಮೂಲದ ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘ ಮನವಿ ಮಾಡಿತ್ತು. ವಿಶೇಷವಾಗಿ ಗೋಹತ್ಯೆ ನಿಷೇಧಕ್ಕೆ, ಕಸಾಯಿಖಾನೆಗಳನ್ನು ಮುಚ್ಚಲು ಶಿಫಾರಸು

ಮಾಡಲಾಗಿತ್ತು. ಮೇಲ್ಜಾತಿಯ ಜನರು ತಮಗೆ ನೀಡುತ್ತಿರುವ ಕಿರುಕುಳವನ್ನು ಕೊನೆಗಾಣಿಸುವಂತೆ ಹಾಗೂ ತಮ್ಮ ಜನಸಂಖ್ಯೆಯ ಆಧಾರದ ಮೇಲೆ ಶಾಸನಸಭೆಗಳು ಹಾಗೂ ಸರ್ಕಾರಿ ಇಲಾಖೆಗಳಲ್ಲಿ ತಮಗೆ ಮೀಸಲಾತಿ ನೀಡುವಂತೆ ಕೆಳ ಜಾತಿಯ ಜನರು ಆಗ್ರಹಪಡಿಸಿದ್ದರು. ಭಾಷಾ ಅಲ್ಪಸಂಖ್ಯಾತರು, ತಮಗೆ ಮಾತೃಭಾಷೆಯಲ್ಲಿ ಮಾತನಾಡುವ ವಾಕ್‌ಸ್ವಾತಂತ್ರ್ಯ ಬೇಕೆಂದು ಮನವಿ ಮಾಡಿದ್ದರು ಹಾಗೂ ಭಾಷೆಯ ಆಧಾರದ ಮೇಲೆ ಪ್ರದೇಶಗಳ ಪುನರ್ವಿಂಗಡನೆ ಮಾಡುವಂತೆ ಒತ್ತಾಯಪಡಿಸಿದ್ದರು. ಧಾರ್ಮಿಕ ಅಲ್ಪಸಂಖ್ಯಾತರು ವಿಶೇಷ ರಕ್ಷಣೆ ಕೋರಿದ್ದರು. ವಿಜಯನಗರದ ಜಿಲ್ಲಾ ಶಿಕ್ಷಕರ ಸಂಘ ಹಾಗೂ ಮುಂಬಯಿಯ ಕೇಂದ್ರ ಯೆಹೂದ್ಯ ಮಂಡಳಿ "ಶಾಸನ ಸಭೆ ಸೇರಿದಂತೆ ಎಲ್ಲ ಸಾರ್ವಜನಿಕ ಸೇವಾವ್ಯವಸ್ಥೆಯಲ್ಲೂ ಸೂಕ್ತ ಪ್ರಾತಿನಿಧ್ಯ" ತಮಗೆ ಬೇಕೆಂದು ಕೋರಿದ್ದವು.

ಈ ಮನವಿಗಳು ಭಾರತದ ತಬ್ಬಿಬ್ಬುಗೊಳಿಸುವಂಥ ವಿಸದೃಶತೆ, ಭಿನ್ನ ಜಾತೀಯತೆಗಳಿಗೆ ಸಾಕ್ಷಿ. ಅಲ್ಲದೆ ಭಾರತೀಯರಲ್ಲಿ ಮೊದಲಿನಿಂದಲೂ ಬೆಳೆದು ಬಂದಿರುವ ಹಕ್ಕುಗಳ ಸಂಸ್ಕೃತಿಗೂ ಸಾಕ್ಷಿಯಾಗಿ ನಿಲ್ಲುತ್ತವೆ. ಈ ಮನವಿಗಳು ನೂರಾರು, ನೂರಾರು ಬಗೆಯವು, ವಿಭಿನ್ನವಾದವು ಹಾಗೂ ಇವು ಮುಚ್ಚು ಮರೆ ಇಲ್ಲದೆ ಕಂಠೋಕ್ತವಾಗಿದ್ದವು. ಭಾರತದ ಸಂವಿಧಾನ ಸಾವಿರಾರು ಪೈಪೋಟಿಯ ಬೇಡಿಕೆಗಳ ಬಗ್ಗೆ, ಆಗ್ರಹಗಳ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಯಿತು. ಇದು ಕಾಲದ ಸಂಕ್ಷೋಭೆಯ ದೃಷ್ಟಿಯಿಂದ ಸುಲಭದ ಕೆಲಸವಾಗಿರಲಿಲ್ಲ. ಸಂವಿಧಾನ ರಚನಾ ಸಭೆ, ಆಹಾರ ಅಭಾವ, ಕೋಮುಗಲಭೆಗಳು, ನಿರಾಶ್ರಿತರ ಪುನರ್ವಸತಿ ಸಮಸ್ಯೆ, ವರ್ಗ ಸಮರ, ಊಳಿಗಮಾನ್ಯರ ಹಠವಾದಿತನ ಈ ಎಲ್ಲ ಹಿನ್ನೆಲೆಯಲ್ಲಿ 1946ರಿಂದ 1949ರವರೆಗೆ ಸಮಾವೇಶಗೊಂಡಿತ್ತು. ಈ ಪ್ರಕ್ರಿಯೆಯ ಇತಿಹಾಸಕಾರರೊಬ್ಬರು ಅಭಿಪ್ರಾಯ ಪಟ್ಟಿರುವಂತೆ "ಮೂಲಭೂತ ಅನ್ಯಾಯ-ಅಪಚಾರ ಪ್ರಮಾದಗಳ ಹತ್ಯಾಕಾಂಡದ ಮಧ್ಯೆ ಮೂಲಭೂತ ಹಕ್ಕುಗಳನ್ನು ರಚಿಸಬೇಕಾಗಿತ್ತು."

III

ಸಂವಿಧಾನ ರಚನಾ ಸಭೆಯಲ್ಲಿ ಮುನ್ನೂರಕ್ಕೂ ಹೆಚ್ಚು ಸದಸ್ಯರಿದ್ದರು. ಭಾರತೀಯ ಸಂವಿಧಾನ ಕುರಿತಂತೆ ರಚಿಸಿರುವ ತನ್ನ ಅಧಿಕಾರಯುತ ಇತಿಹಾಸದಲ್ಲಿ ಗ್ರ್ಯಾನ್‌ವಿಲೆ ಆಸ್ಟಿನ್ ಇಪ್ಪತ್ತು ಮಂದಿ ಅತಿ ಪ್ರಭಾವಶಾಲಿ ಸದಸ್ಯರನ್ನು ಗುರುತಿಸಿದ್ದಾನೆ. ಈ ಇಪ್ಪತ್ತು ಮಂದಿಯಲ್ಲಿ ಹನ್ನೆರಡು ಮಂದಿ ಕಾನೂನು ಪದವೀಧರರು. ಇವರಲ್ಲಿ ಕಾಂಗ್ರೆಸ್ಸಿನ ಜವಹರಲಾಲ್ ನೆಹರೂ, ವಲ್ಲಭಭಾಯಿ ಪಟೇಲ್ ಮತ್ತು ರಾಜೇಂದ್ರ ಪ್ರಸಾದ್ ಪ್ರಮುಖರು.

ನೆಹರೂ ಅವರು ಪ್ರಥಮ ಪ್ರಧಾನ ಭಾಷಣ ಮಾಡಿದ್ದು 1946ರ ಡಿಸೆಂಬರ್ 13 ರಂದು. ಇದು ನಿರ್ಣಯದ ಧ್ಯೇಯೋದ್ದೇಶಗಳನ್ನು ಮಂಡಿಸಿದಾಗ ಮಾಡಿದ ಭಾಷಣ. ಈ ಧ್ಯೇಯೋದ್ದೇಶ ನಿರ್ಣಯದಲ್ಲಿ, ಭಾರತವನ್ನು ಸರ್ವತಂತ್ರ ಸ್ವತಂತ್ರ ಸಾರ್ವಭೌಮ

ರಾಷ್ಟ್ರವೆಂದು ಘೋಷಿಸಲಾಗಿತ್ತು; ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ, ಸಮಾನ ಹಕ್ಕುಗಳು, ಸಮಾನ ಅವಕಾಶಗಳು, ಕಾನೂನಿನ ಎದುರು ಎಲ್ಲ ಸಮಾನರು, ಹಾಗೂ ಆಲೋಚನಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆಯ ಸ್ವಾತಂತ್ರ್ಯ, ಆರಾಧನೆಯ ಸ್ವಾತಂತ್ರ್ಯ, ಉದ್ಯೋಗ ಸ್ವಾತಂತ್ರ್ಯ, ಕಾನೂನು ಮತ್ತು ಸಾರ್ವಜನಿಕ ನೀತಿಶಾಸ್ತ್ರಕ್ಕೊಳಪಟ್ಟ ಸಹಯೋಗ ಮತ್ತು ಕಾಯಕದ ಸ್ವಾತಂತ್ರ್ಯ-ಈ ಎಲ್ಲ ಭರವಸೆಗಳನ್ನು ಒಳಗೊಂಡ ನಿರ್ಣಯ ಇದಾಗಿತ್ತು. ಇದೆಲ್ಲದರ ಜೊತೆಗೆ ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗಗಳವರಿಗೆ, ಗುಡ್ಡಗಾಡು ಪ್ರದೇಶಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸೂಕ್ತ ರಕ್ಷಣೆಯ ಭರವಸೆ ನೀಡುವ ನಿರ್ಣಯವೂ ಇದಾಗಿತ್ತು. ನಿರ್ಣಯ ಮಂಡಿಸಿ ಮಾಡಿದ ಭಾಷಣದಲ್ಲಿ ನೆಹರೂ ಗಾಂಧೀಜಿಯವರ ದಿವ್ಯ ಚೇತನವನ್ನು, ಭವ್ಯ ಭಾರತೀಯ ಪರಂಪರೆಯನ್ನು ಸ್ಮರಿಸಿದ್ದರು ಹಾಗೂ ಆಧುನಿಕ ಕಾಲದ ಪೂರ್ವನಿದರ್ಶನಗಳಾದ ಫ್ರೆಂಚ್, ಅಮೆರಿಕ, ರಷ್ಯನ್ ಕ್ರಾಂತಿಗಳನ್ನು ಪ್ರಸ್ತಾಪಿಸಿದ್ದರು.

ಒಂಭತ್ತು ತಿಂಗಳ ನಂತರ ಸ್ತಂಭಗಳಿಂದಾವೃತವಾದ ಅದೇ ಸಭಾಂಗಣದಲ್ಲಿ ನೆಹರೂ ಮತ್ತೆ ಮಾತನಾಡಿದ್ದರು. ಆ ಮಧ್ಯರಾತ್ರಿ ಭಾಷಣ ಮಾಡಿ ತಮ್ಮ ಪೂರ್ವನಿಶ್ಚಿತ ಭವಿತವ್ಯದ ಸಮಾಗಮದಿಂದ ಪುನೀತರಾಗುವಂತೆ ಭಾರತೀಯರಿಗೆ ಕರೆನೀಡಿದರು. ಈ ಮಧ್ಯೆ, 1947ರ ಜುಲೈ 22ರಂದು, ಭಾರತದ ರಾಷ್ಟ್ರಧ್ವಜ-ಕೇಸರಿ, ಬಿಳಿ ಹಾಗೂ ಕಡುಹಸಿರು ಬಣ್ಣಗಳಿಂದ ಕೂಡಿದ್ದು, ವರ್ಣ ಸಮ ಪ್ರಮಾಣದಲ್ಲಿದ್ದು, ಮಧ್ಯದಲ್ಲಿ ಗಾಢನೀಲಿಯ ಚಕ್ರದಿಂದೊಡಗೂಡಿದ್ದು, ಅಡ್ಡಗಲದ ಆಕಾರದಲ್ಲಿರಬೇಕೆಂದು ಸೂಚಿಸುವ ನಿರ್ಣಯದ ಮೇಲೆ ಮಾತನಾಡಿದ ನೆಹರೂ ಅವರು ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿಗಳ ಮೇಳಗಾನದ ಸೂತ್ರಧಾರರಾಗಿದ್ದರು. ರಾಷ್ಟ್ರಧ್ವಜದ ಮೇಲಿನ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದವರೆಲ್ಲರೂ ಧ್ವಜದ ಬಣ್ಣಗಳು ಭಾರತಕ್ಕೆ ತಮ್ಮ ಸಮುದಾಯ ನೀಡಿರುವ ಕೊಡುಗೆಯನ್ನು ಬಿಂಬಿಸುತ್ತವೆಯೆಂದು ಅರ್ಥೈಸುವ ಪ್ರಯತ್ನ ಮಾಡಿದ್ದರು.

ಸಾಂಕೇತಿಕ ಮಹತ್ವದ ಕುರಿತ ಭಾಷಣಗಳೆಲ್ಲವೂ ನೆಹರೂ ಅವರ ಕಾಣ್ಕೆಯ ಫಲವೇ ಆಗಿದ್ದವು. ರಾಷ್ಟ್ರಧ್ವಜ ಹೇಗಿರಬೇಕೆಂಬ ಬಗ್ಗೆ ವಲ್ಲಭಭಾಯಿ ಪಟೇಲರೂ ಸಾಕಷ್ಟು ಚಿಂತನ ಮಂಥನ ನಡೆಸಿದ್ದರು. ಸಂಪೂರ್ಣ ಪ್ರಾವೀಣ್ಯತೆಯುಳ್ಳ ಸದಸ್ಯರಾಗಿ ವಲ್ಲಭಭಾಯಿ ಪಟೇಲರು ವಿವಿಧ ವರದಿಗಳನ್ನು ಸಿದ್ಧಪಡಿಸುವುದರಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದರು. ಪಟೇಲರು ನೆಹರೂ ಅವರಿಗಿಂತ ಹೆಚ್ಚು ಸಹನಶೀಲರಾಗಿದ್ದರು. ಭಿನ್ನಮನಸ್ಕರನ್ನು ಒಲಿಸಿಕೊಳ್ಳುವುದರಲ್ಲಿ, ತಕರಾರು ಮಾಡುತ್ತಿದ್ದ ಬಣಗಳನ್ನು ಸಾಂತ್ವನಗೊಳಿಸುವುದರಲ್ಲಿ ಪಟೇಲರ ಪಾಲು ದೊಡ್ಡದು. ಮೊಂಡು ಹಿಡಿದ ಸದಸ್ಯರನ್ನು ತಮ್ಮ ಜೊತೆಯಲ್ಲಿ ಬೆಳಗಿನ ವಾಯು ವಿಹಾರಕ್ಕೆ ಕರೆದೊಯ್ದು, ವಿಶಾಲ ದೃಷ್ಟಿಯಿಂದ, ವಿಶಾಲ ಮನೋಭಾವದಿಂದ ಅಭಿಪ್ರಾಯಗಳನ್ನು ಅರಿತುಕೊಳ್ಳುವಂತೆ ಅವರಲ್ಲಿ ಮನಃಪರಿವರ್ತನೆ ಮಾಡಿದ್ದರು. ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ ವಾದಗ್ರಸ್ತ ನಿರ್ಣಯವನ್ನು ಮಂಡಿಸಿದ್ದೂ ಪಟೇಲರೇ.

ಕಾಂಗ್ರೆಸ್ಸಿನ ಮೂರನೆಯ ಮಹತ್ವದ ಸದಸ್ಯರೆಂದರೆ ಸಂವಿಧಾನ ರಚನಾಸಭೆಯ ಅಧ್ಯಕ್ಷರಾಗಿದ್ದ ರಾಜೇಂದ್ರ ಪ್ರಸಾದರು. ಸಂವಿಧಾನ ರಚನಾ ಸಭೆ ಆರಂಭದ ದಿನವೇ ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಲಾಯಿತು. ಕೊನೆಯವರೆಗೆ ರಾಜೇಂದ್ರ ಪ್ರಸಾದರು ಆ ಪದವಿಯ ಘನತೆ ಗೌರವಗಳಿಗನುಗುಣವಾಗಿ ನಡೆದುಕೊಂಡರು. ಅವರದು ಅಸೂಯಾಜನಕವಲ್ಲದ ಕಾರ್ಯಭಾರವಾಗಿತ್ತು. ಏಕೆಂದರೆ ಭಾರತೀಯರು ಒಳ್ಳೆಯ ವಾಗ್ಮಿಗಳೇ ಹೊರತು ಒಳ್ಳೆಯ ಶ್ರೋತೃಗಳಲ್ಲ. ಈ ಮಾತು ವಿಶೇಷವಾಗಿ ಭಾರತದ ರಾಜಕಾರಣಿಗಳಿಗೆ ಅನ್ವಯಿಸಬಹುದಾದ್ದು. ಹೀಗಾಗಿ ಪ್ರಸಾದರು ಜಗಳಗಂಟಿ ಸದಸ್ಯರು ಮತ್ತು ಸಮಯ ಪಾಲಕರ ನಡುವೆ ಶಾಂತಿ ಉಂಟುಮಾಡಬೇಕಾಗುತ್ತಿತ್ತು. ಸಮಯ ಪಾಲಕರಿಗೆ ಯಾವುದು ಕ್ಷುಲ್ಲಕ ಯಾವುದು ಮಹತ್ವದ್ದು ಎಂಬ ಜ್ಞಾನದ ಕೊರತೆ ಇರುತ್ತಿತ್ತು.

ಈ ಕಾಂಗ್ರೆಸ್ ತ್ರಿಮೂರ್ತಿಗಳಲ್ಲದೆ ಮತ್ತೊಬ್ಬ ಮಹನೀಯರಿದ್ದರು. ಅವರೇ ಕೆಳಜಾತಿಯ ಧೀಮಂತ ವಕೀಲ ಬಿ.ಆರ್. ಅಂಬೇಡ್ಕರ್. ಅಂಬೇಡ್ಕರ್ ಕೇಂದ್ರ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದರು; ಹಾಗೂ ಸಂವಿಧಾನದ ಕರಡು ಪ್ರತಿ ತಯಾರಿಸುವ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಇವರೊಡನೆ ಇದ್ದ ಇನ್ನಿಬ್ಬರು ಅದಮ್ಯ ಬುದ್ಧಿಜೀವಿಗಳೆಂದರೆ ಗುಜರಾತಿನ ಮಹಾವಿದ್ವಾಂಸರಾದ ಕೆ.ಎಂ. ಮುನ್ಷಿ ಮತ್ತು ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್. ಮುನ್ಷಿ ಕಾದಂಬರಿಕಾರರೂ, ವಕೀಲರೂ ಆಗಿದ್ದರೆ, ಕೃಷ್ಣಸ್ವಾಮಿ ಅಯ್ಯರ್ ಹದಿನೈದು ವರ್ಷಗಳ ಕಾಲ ಮದ್ರಾಸ್ ಪ್ರೆಸಿಡೆನ್ಸಿಯ ಅಡ್ವೊಕೇಟ್ ಜನರಲ್ ಆಗಿ ಸೇವೆ ಸಲ್ಲಿಸಿದ್ದರು.

ಈ ಆರು ಮಂದಿಯ ಜೊತೆ ಏಳನೆಯ ಸದಸ್ಯರೊಬ್ಬರಿದ್ದರು. ಅವರು ಬಿ.ಎನ್. ರಾವ್. ರಾವ್ ಸಂವಿಧಾನ ರಚನಾ ಸಭೆಯ ಸದಸ್ಯರಾಗಿರಲಿಲ್ಲ. ರಾವ್ ಅವರು ಭಾರತ ಸರ್ಕಾರದ ಸಂವಿಧಾನ ಸಲಹೆಗಾರರಾಗಿ ಕೆಲಸ ಮಾಡಿದ್ದರು. ಐ.ಸಿ.ಎಸ್. ಅಧಿಕಾರಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದ ಅವರು ಹಲವಾರು ಕಾನೂನು ಹುದ್ದೆಗಳನ್ನು ನಿರ್ವಹಿಸಿದ್ದರು. ತಮ್ಮ ಜ್ಞಾನ, ಅನುಭವ ಹಾಗೂ ಪಾಶ್ಚಾತ್ಯ ಪ್ರಭುತ್ವಗಳ ಅಧ್ಯಯನ ಪ್ರವಾಸದ ಅನುಭವ ಇವೆಲ್ಲವನ್ನೂ ಬಳಸಿ ರಾವ್ ಅವರು ಅಂಬೇಡ್ಕರ್ ಮತ್ತು ಅವರ ತಂಡಕ್ಕೆ ಟಿಪ್ಪಣಿಗಳನ್ನು ಮೆಲುಕಾಡಲು ಬರೆದುಕೊಟ್ಟರು. ಮುಖ್ಯ ಕರಡು ರಚನಾಕಾರರಾಗಿದ್ದ ಎಸ್.ಎನ್. ಮುಖರ್ಜಿ, ರಾವ್ ಅವರ ನೆರವಿಗಿದ್ದರು. "ತುಂಬ ಜಟಿಲವಾದ ಸಲಹೆ ಸೂಚನೆಗಳನ್ನು ಸರಳವಾದ ಸ್ಪಷ್ಟವಾದ ಸಾಟಿಯಿಲ್ಲದ ಕಾನೂನಿನ ಪರಿಭಾಷೆಯಲ್ಲಿ ನಿರೂಪಿಸುವುದರಲ್ಲಿ" ಮುಖರ್ಜಿ ಅತಿಸಮರ್ಥರಾಗಿದ್ದರು.

IV

ನೈತಿಕ ದೃಷ್ಟಿ, ರಾಜಕೀಯ ಪ್ರಾವೀಣ್ಯತೆ ಹಾಗೂ ಕಾನೂನಿನ ವಿವೇಚನಾಶೀಲತೆ ಮತ್ತು ಸೂಕ್ಷ್ಮ ಬುದ್ಧಿ-ಇವೆಲ್ಲದರ ಸಂಗಮ ಭಾರತದ ಸಂವಿಧಾನ. ಸಂವಿಧಾನ ರಚನೆಯಲ್ಲಿ ಇವೆಲ್ಲವನ್ನೂ ಸಂಯೋಜಿಸಲಾಗಿತ್ತು. ಈ ಸಂವಿಧಾನ, ಗ್ರಾನ್‌ವಿಲ್ಲೆ ಆಸ್ಟಿನ್ ಅವರು

ವರ್ಣಿಸಿದಂತೆ, 'ರಾಷ್ಟ್ರೀಯ' ಹಾಗೂ 'ಸಾಮಾಜಿಕ' ಕ್ರಾಂತಿಗಳ ಒಗ್ಗೂಡುವಿಕೆಯಾಗಿತ್ತು. ಇದು ರಾಷ್ಟ್ರೀಯ ಕ್ರಾಂತಿ, ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯ ಕೇಂದ್ರಿತವಾಗಿತ್ತು. ಇವೆರಡನ್ನೂ ವಸಾಹತುಶಾಹಿ ನಮಗೆ ನಿರಾಕರಿಸಿತ್ತೆಂಬುದು ಎಲ್ಲ ಭಾರತೀಯರಿಗೆ ಅನುಭವಜನ್ಯವಾದ ಸಂಗತಿ. ಸಾಮಾಜಿಕ ಕ್ರಾಂತಿ, ಸಮಾನತೆ ಹಾಗೂ ಸ್ವಾತಂತ್ರ್ಯ-ಮುಕ್ತಿಗಳು ಕೇಂದ್ರೀಕೃತವಾಗಿದ್ದವು. ನಮ್ಮ ಧರ್ಮ, ಸ್ಮೃತಿ, ಸಂಪ್ರದಾಯಗಳು ಮಹಿಳೆಯರು ಮತ್ತು ಕೆಳಜಾತಿಯವರಿಗೆ ಇವೆರಡನ್ನೂ ನಿರಾಕರಿಸಿದ್ದವು.

ಈ ಎರಡು ಕ್ರಾಂತಿಗಳನ್ನೂ ಸ್ವದೇಶಿ ಮಾರ್ಗದಲ್ಲಿ ಆಗುಮಾಡುವುದು ಸಾಧ್ಯವೇ? ಕೆಲವರು ಇದಕ್ಕೆ 'ಗಾಂಧಿ ಸಂವಿಧಾನ'ವನ್ನು ಸಲಹೆಮಾಡಿದರು. ಅಂದರೆ, ರಾಜಕಾರಣ ಮತ್ತು ಆಧಿಪತ್ಯಕ್ಕೆ ಗ್ರಾಮವನ್ನು ಮೂಲಘಟಕವನ್ನಾಗಿಟ್ಟುಕೊಂಡು ಗ್ರಾಮ ಪಂಚಾಯಿತಿಗಳ ಪಂಚಾಯತಿ ರಾಜ್ಯ ಪದ್ಧತಿಯನ್ನು ಪುನರುಜ್ಜೀವಗೊಳಿಸುವುದೇ 'ಗಾಂಧಿ ಸಂವಿಧಾನ'. ಬಿ.ಆರ್. ಅಂಬೇಡ್ಕರ್ ಅವರು ಇದನ್ನು ಕಟುವಾಗಿ ಟೀಕಿಸಿದರು. 'ಈ ಗ್ರಾಮ ಗಣರಾಜ್ಯಗಳು ಭಾರತವನ್ನು ನಾಶಗೊಳಿಸಿವೆ' ಎಂದು ಕಟು ವಿರೋಧ ವ್ಯಕ್ತಪಡಿಸಿದ ಅಂಬೇಡ್ಕರ್, "ಪ್ರಾಂತೀಯತೆ ಮತ್ತು ಕೋಮುವಾದವನ್ನು ಖಂಡಿಸುತ್ತಿರುವವರೇ ಈಗ ಹಳ್ಳಿಗಳ ಉದ್ಧಾರಕರಾಗಿ ಮುಂದೆ ಬರುತ್ತಿರುವುದು ಸೋಜಿಗದ ಸಂಗತಿ" ಎಂದು ಆಶ್ಚರ್ಯ ವ್ಯಕ್ತಪಡಿಸಿದರು. "ಹಳ್ಳಿ ಎಂದರೇನು? ಗ್ರಾಮ ಎಂದರೇನು? ಹಳ್ಳಿ ಗ್ರಾಮಗಳು ಸ್ಥಳೀಯ ಕೊಚ್ಚೆಗುಂಡಿ. ಅಜ್ಞಾನ, ಸಂಕುಚಿತತೆ ಮತ್ತು ಕೋಮುವಾದಗಳ ಆಗರ ಈ ಹಳ್ಳಿಗಳು" ಎಂದು ನುಡಿದರು.

ಅಂಬೇಡ್ಕರ್ ಅವರ ಈ ಮಾತುಗಳು ಕೆಲವು ವಲಯಗಳಲ್ಲಿ ತೀವ್ರ ಆಕ್ಷೇಪಣೆ-ಆಕ್ರೋಶಗಳಿಗೆಡೆ ಮಾಡಿಕೊಟ್ಟವು. ಸಮಾಜವಾದಿ ನಾಯಕ ಎಚ್.ವಿ. ಕಾಮತ್, ಅಂಬೇಡ್ಕರ್ ಅವರ ಧೋರಣೆಯನ್ನು ನಗರ ಬುದ್ಧಿಯ ಗರ್ವ ಎಂದು ತಳ್ಳಿಹಾಕಿದರು. ಅಂಬೇಡ್ಕರ್ ಅವರ ಟೀಕೆಗಳು ಭಾರತದ ಇತಿಹಾಸದ ಬಗ್ಗೆ ಅವರ ಅಜ್ಞಾನವನ್ನು ತೋರಿಸುತ್ತವೆ ಎಂದು ರೈತ ನಾಯಕ ಎನ್.ಜಿ. ರಂಗಾ ಅಭಿಪ್ರಾಯಪಟ್ಟರು. "ನಮ್ಮ ದೇಶದ ಎಲ್ಲ ಪ್ರಜಾಸತ್ತಾತ್ಮಕ ಸಂಪ್ರದಾಯಗಳೂ ಅವರಲ್ಲಿ ಮಾಯವಾಗಿವೆ. ಒಂದು ಶತಮಾನದ ಅವಧಿಯಲ್ಲಿ ಆಗಿರುವ ದಕ್ಷಿಣ ಭಾರತದಲ್ಲಿನ ಗ್ರಾಮ ಪಂಚಾಯಿತಿಗಳ ಸಾಧನೆಗಳ ಅರಿವು ಇದ್ದಿದ್ದರೆ ಅವರು ಈ ಮಾತುಗಳನ್ನಾಡುತ್ತಿರಲಿಲ್ಲ" ಎಂದು ರಂಗಾ ಪ್ರತಿಕ್ರಿಯಿಸಿದರು.

ಆದರೆ ಯುನೈಟೆಡ್ ಪ್ರಾವಿನ್ಸ್‌ನ ಜಗಳಗಂಟಿ ಮಹಿಳಾ ಸದಸ್ಯೆ ಬೇಗಂ ಅಯಾಜ್ ರಸೂಲ್ ಅಂಬೇಡ್ಕರ್ ಅವರ ಮಾತುಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡರು. 'ಆಧುನಿಕ ಮನಸ್ಸುಗಳು ಈಗ ತುಡಿಯುತ್ತಿರುವುದು ಪ್ರಜೆಗಳ ಹಕ್ಕುಗಳ ಸಲುವಾಗಿ, ಕಾರ್ಪೊರೆಟ್ ಸಂಸ್ಥೆಗಳಿಗೆ ಅದರ ವಿರೋಧವಿದೆ. ಗ್ರಾಮ ಪಂಚಾಯಿತಿಗಳು 'ಸ್ವೇಚ್ಛಾವರ್ತಿಗಳಾಗಬಹುದು' ಎಂಬುದು ಇವರ ಅಭಿಪ್ರಾಯವಾಗಿತ್ತು.

ಆಪ್ತೆರಾಗಿ, ಗ್ರಾಮದ ಬದಲು ವ್ಯಕ್ತಿಯನ್ನು ಒಂದು ಘಟಕವಾಗಿ ಆಯ್ಕೆ ಮಾಡಲಾಯಿತು. ಬೇರೆ ಬಾಬುಗಳಲ್ಲೂ ಸಂವಿಧಾನ ಭಾರತದ ಪೂರ್ವ ನಿದರ್ಶನಗಳ ಬದಲು ಯೂರೋಪ್ ಅಮೆರಿಕಗಳ ಕಡೆಯೇ ಮುಖ ಮಾಡಿತ್ತು. ಅಮೆರಿಕದ ಅಧ್ಯಕ್ಷೀಯ ಪದ್ಧತಿಯನ್ನು ಪರಿಶೀಲನೆ ನಂತರ ತಿರಸ್ಕರಿಸಲಾಯಿತು. ಹಾಗೆಯೇ ಮಂತ್ರಿಮಂಡಲದ ಸಚಿವರುಗಳ ನೇರ ಆಯ್ಕೆಯ ಸ್ವಿಸ್ ಪದ್ಧತಿಯನ್ನೂ ತಿರಸ್ಕರಿಸಲಾಯಿತು. ಅನೇಕ ಮಂದಿ ಸದಸ್ಯರು ದಾಮಾಷಾ ಪ್ರಾತಿನಿಧ್ಯಕ್ಕೆ ಆಗ್ರಹಪಡಿಸಿದರು. ಆದರೆ ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಬ್ರಿಟನ್ನಿನ ವಸಾಹತು ಆಗಿದ್ದ ಐರ್ಲೆಂಡ್ ದಾಮಾಷಾ ಪ್ರಾತಿನಿಧ್ಯ ಪದ್ಧತಿಯನ್ನು ಅಳವಡಿಸಿಕೊಂಡಿತ್ತು. ಆದರೆ ಸಂವಿಧಾನ ಸಲಹೆಗಾರ ಬಿ.ಎನ್. ರಾವ್ ಅವರು ಡಬ್ಲಿನ್‌ಗೆ ಭೇಟಿಕೊಟ್ಟ ಸಂದರ್ಭದಲ್ಲಿ ಅಲ್ಲಿನ ಎಮಾನ್-ಡಿ-ವಲೇರಾ ಅವರು ಐರ್ಲೆಂಡ್ ಬ್ರಿಟಿಷ್ ಮಾದರಿ ಚುನಾವಣೆ ಮತ್ತು ಸಂಪುಟ ಪದ್ಧತಿಯನ್ನೇ ಅಳವಡಿಸಿಕೊಂಡಿದ್ದರೆ ಚೆನ್ನಾಗಿತ್ತೆಂಬುದು ತಮ್ಮ ಇಚ್ಛೆಯಾಗಿತ್ತೆಂದು ತಿಳಿಸಿದ್ದರು. ಇದರಿಂದ ಬಲವಾದ ಸರ್ಕಾರ ಸಾಧ್ಯವೆಂದು ಅವರ ಅನ್ನಿಸಿಕೆಯಾಗಿತ್ತು. ಭಾರತದಲ್ಲಿ ಸ್ಪರ್ಧೆಯ ಕಣದಲ್ಲಿರುವ ಆಸಕ್ತಿ ಹೊಂದಿರತಕ್ಕ ಬಣಗಳು ಎಣಿಕೆ ಮೀರಿದಷ್ಟು ಹೆಚ್ಚಾಗಿರುವುದರಿಂದ ಬ್ರಿಟಿಷ್ ಪದ್ಧತಿ ಅನುಸರಿಸುವುದು ಹೆಚ್ಚು ಅರ್ಥಪೂರ್ಣವಾಗಿದ್ದಿತು. ಇದರನ್ವಯ ಸಂಸತ್ತಿನ ಕೆಳಮನೆ ಹಾಗೂ ಪ್ರಾಂತ್ಯಗಳ ಕೆಳಮನೆಗಳಿಗೆ ವಯಸ್ಕ ಮತದಾನ ಪದ್ಧತಿ ಮೂಲಕ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾಗುತ್ತಿತ್ತು. ವ್ಯಾಪಕ ಚರ್ಚೆಯ ನಂತರ, ಪ್ರಜಾಪ್ರಭುತ್ವದ ಹುಮ್ಮಸ್ಸಿನಲ್ಲಿ ಆಗಬಹುದಾದ ಅತಿರೇಕಗಳನ್ನು ನಿಯಂತ್ರಿಸಲು ಮೇಲ್ಮನೆ ಹೊಂದಿರಬೇಕೆಂದು ಸಂಸತ್ ಹಾಗೂ ಪ್ರಾಂತೀಯ ಸಭೆಗಳು ನಿರ್ಧರಿಸಿದವು. ಸಂಸತ್ತಿನ ಮೇಲ್ಮನೆಗೆ ರಾಜ್ಯಗಳ ವಿಧಾನಮಂಡಲಗಳ ಸದಸ್ಯರುಗಳು ಆಯ್ಕೆ ಮಾಡಬೇಕು ಹಾಗೂ ರಾಜ್ಯಗಳ ಮೇಲ್ಮನೆಗಳಿಗೆ ಪರೋಕ್ಷ ಚುನಾವಣೆಯಿಂದ ಸದಸ್ಯರುಗಳನ್ನು ಚುನಾಯಿಸಬೇಕಾಗುತ್ತಿತ್ತು.

ಮಂತ್ರಿ ಮಂಡಲಕ್ಕೆ ಪ್ರಧಾನಮಂತ್ರಿ ನೇತಾರರು. ರಾಷ್ಟ್ರಪತಿಯನ್ನು ಸಂಸತ್ ಮತ್ತು ರಾಜ್ಯ ವಿಧಾನಮಂಡಲಗಳ ಸದಸ್ಯರುಗಳನ್ನೊಳಗೊಂಡ ಚುನಾವಣಾ ಕಾಲೇಜ್ ಆಯ್ಕೆ ಮಾಡುವುದು. ರಾಷ್ಟ್ರಪತಿ ಎಲ್ಲ ಸಶಸ್ತ್ರ ಪಡೆಗಳ ಪ್ರಧಾನ ದಂಡನಾಯಕರಾಗಿರುವರು. ಹಾಗೂ ಇವರಿಗೆ ಮಸೂದೆಗಳನ್ನು ಸಂಸತ್ತಿಗೆ ವಾಪಸು ಕಳುಹಿಸುವ ಅಧಿಕಾರವಿರುವುದು. ರಾಷ್ಟ್ರಪತಿ ಹುದ್ದೆಯು ಸ್ಥಾನಮಾನ, ಘನತೆ ಗೌರವಗಳಿಂದ ಕೂಡಿದ್ದರೂ ಬ್ರಿಟಿಷ್ ರಾಣಿಯಂತೆ ನಿಜವಾದ ಅರ್ಥದಲ್ಲಿ ಏನೊಂದು ಅಧಿಕಾರವೂ ಇರುವುದಿಲ್ಲ. ಪ್ರಾಂತ್ಯಗಳ-ರಾಜ್ಯಗಳ ರಾಜ್ಯಪಾಲರುಗಳನ್ನು ಕೇಂದ್ರ ಸರ್ಕಾರ ನೇಮಕ ಮಾಡುವುದು. ಸ್ವಾಯತ್ತ ಚುನಾವಣಾ ಆಯೋಗ ಮತ್ತು ಸ್ವಾಯತ್ತ ಕಂಟ್ರೋಲರ್ ಜನರಲ್ ಆಫ್ ಅಕೌಂಟ್ಸ್ ವ್ಯವಸ್ಥೆ ಹೊಂದಿರಲು ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ನ್ಯಾಯಾಂಗವನ್ನು ರಾಜಕೀಯ ಪ್ರಭಾವಗಳಿಂದ ರಕ್ಷಿಸಲು ನ್ಯಾಯಾಧೀಶರುಗಳನ್ನು, ರಾಷ್ಟ್ರಪತಿಯವರು ಮುಖ್ಯ ನ್ಯಾಯಾಧೀಶರ ಶಿಫಾರಸಿನನ್ವಯ ನೇಮಕ ಮಾಡಬೇಕು. ನ್ಯಾಯಾಧೀಶರುಗಳ

ಸಂಬಳ ಸಾರಿಗೆಯನ್ನು ಸಂಸತ್ ತೀರ್ಮಾನಿಸುವುದಿಲ್ಲ. ಆದರೆ ಸರ್ಕಾರದ ಖಜಾನೆ ನೇರವಾಗಿ ಈ ಬಾಬ್ತು ಖರ್ಚು ಭರಿಸಬೇಕು. ದೆಹಲಿಯಲ್ಲಿರುವ ಸರ್ವೋಚ್ಚ ನ್ಯಾಯಾಲಯ ಸಾಮಾಜಿಕ ಕ್ರಾಂತಿಯ ರಕ್ಷಕನಾಗಿ, ಅಲ್ಪ ಸಂಖ್ಯಾತರ ನಾಗರಿಕ ಹಕ್ಕುಗಳ ಹೊಣೆಗಾರನಾಗಿ ಕಾರ್ಯನಿರ್ವಹಿಸಬೇಕು. ಸರ್ವೋಚ್ಚ ನ್ಯಾಯಾಲಯ ಮೇಲ್ಮನವಿ ಸ್ವೀಕರಿಸುವ ವಿಶಾಲವಾದ ಅಧಿಕಾರ ವ್ಯಾಪ್ತಿಹೊಂದಿದ್ದು, ಸಂವಿಧಾನವನ್ನು ಅರ್ಥೈಸಬೇಕಾದ ಸಂದರ್ಭಗಳಲ್ಲಿ ಸಿವಿಲ್ ಅಥವಾ ಕ್ರಿಮಿನಲ್ ದಾವೆಗಳನ್ನು ಅದಕ್ಕೆ ವಹಿಸಿಕೊಡಬಹುದು.

ವಿತ್ತೀಯ ಸಂಯುಕ್ತ ತತ್ವಕ್ಕೆ ಸಂಕೀರ್ಣ ವ್ಯವಸ್ಥೆಯೊಂದಿರಬೇಕೆಂದು ಸಂವಿಧಾನ ಆದೇಶ ನೀಡಿದೆ. ಕೆಲವು ತೆರಿಗೆಗಳ, ಉದಾಹರಣೆಗೆ ಕಸ್ಟಮ್ಸ್ ಸುಂಕ, ಕಂಪನಿ ತೆರಿಗೆಗಳ ಆದಾಯವನ್ನು ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಉಳಿಸಿಕೊಳ್ಳುವುದು. ವರಮಾನ ತೆರಿಗೆ, ಅಬ್ಕಾರಿ ಸುಂಕ ಮೊದಲಾದವುಗಳಿಂದ ಬರುವ ಆದಾಯವನ್ನು ಕೇಂದ್ರ ಸರ್ಕಾರ, ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕು. ಅಲ್ಲದೆ ಎಸ್ಟೇಟ್ ಸುಂಕದ ಆದಾಯವನ್ನು ಇಡಿಯಾಗಿ ರಾಜ್ಯಗಳಿಗೇ ಬಿಟ್ಟುಕೊಡಬೇಕು. ಏತನ್ಮಧ್ಯೆ ರಾಜ್ಯಗಳು ಸ್ವತಃ ತೆರಿಗೆಗಳನ್ನು ವಿಧಿಸಬಹುದು, ತೆರಿಗೆಗಳನ್ನು ಸಂಗ್ರಹಿಸಬಹುದು. ರಾಜ್ಯಗಳು ವಿಧಿಸಬಹುದಾದ ತೆರಿಗೆಗಳಲ್ಲಿ ಆಸ್ತಿ ತೆರಿಗೆ, ಮಾರಾಟ ತೆರಿಗೆ ಹಾಗೂ ಅಪಾರ ಆದಾಯ ತರುವ ಮದ್ಯದ ಬಾಟಲಿಗಳ ಮೇಲಿನ ತೆರಿಗೆಗಳು ಸೇರಿವೆ. ಇದಿಷ್ಟು ವಿತ್ತೀಯ ಸಂಯುಕ್ತ ತತ್ವಗಳ ಮುಖ್ಯ ರೂಪುರೇಷೆಗಳು.

ಈ ಹಣಕಾಸು ವಿಧಿಗಳನ್ನು ಹೆಚ್ಚಾಗಿ 1935ರ ಭಾರತ ಸರ್ಕಾರದ ಕಾಯಿದೆಯಿಂದ ತೆಗೆದುಕೊಳ್ಳಲಾಗಿದೆ.

ಸಂವಿಧಾನದ ಆತ್ಮಸಾಕ್ಷಿ, ಅಂತರ್ಬೋಧೆಯಾದ ಮೂರು ಮತ್ತು ನಾಲ್ಕನೆಯ ಭಾಗಗಳಲ್ಲಿ ಹಲವಾರು ಮೂಲಭೂತ ಹಕ್ಕುಗಳನ್ನೂ ನಿರ್ದೇಶನ ಸೂತ್ರಗಳನ್ನೂ ಕೊಡಲಾಗಿದೆ. ಮೂಲಭೂತ ಹಕ್ಕುಗಳನ್ನು ನ್ಯಾಯಾಲಯದ ಮೂಲಕ ಜಾರಿಗೆ ತರಬಹುದಾಗಿದ್ದು ಇವು ಸರ್ಕಾರದ ಕರ್ತವ್ಯ-ಹೊಣೆಗಳ ಮೂಲದಿಂದ ಪ್ರಾಪ್ತವಾಗಿದೆ. ವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಬಾರದು, ಸರ್ಕಾರದ ಏಕಪಕ್ಷೀಯ ಕ್ರಮಗಳಿಂದ ವ್ಯಕ್ತಿಗಳನ್ನೂ ಸಂಸ್ಥೆಗಳನ್ನೂ ರಕ್ಷಿಸಬೇಕು ಎಂಬಂಥ ಸರ್ಕಾರದ ಹಂಗು ಹೊಣೆಗಳಿಂದ ಬಂದವಾಗಿವೆ. ಕಾನೂನಿನ ಮುಂದೆ ಸರ್ವರೂ ಸ್ವತಂತ್ರರು ಹಾಗೂ ಸಮಾನರು, ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳು, ಅಸ್ಪೃಶ್ಯತೆ, ಬಲವಂತದ ದುಡಿಮೆಯಂಥ ಪದ್ಧತಿಗಳ ನಿಷೇಧ ಇವೇ ಮೊದಲಾದವುಗಳನ್ನು ಹಕ್ಕುಗಳ ಅರ್ಥ ವಿವರಣೆಯಡಿ ವಿಶದೀಕರಿಸಲಾಗಿದೆ. ನ್ಯಾಯಾಧೀಕರಣ ಕ್ಕೊಳಪಡದ ನಿರ್ದೇಶನ ಸೂತ್ರಗಳ ಮೂಲ ಜನತೆಗೆ ಸಾಂಗವಾಗಿ ಜೀವನ ನಿರ್ವಹಣೆಗೆ ಅವಕಾಶಮಾಡಿಕೊಡುವ ಸರ್ಕಾರದ ಸಕಾರಾತ್ಮಕ ಕರ್ತವ್ಯ–ಹೊಣೆಗಾರಿಕೆಗಳಲ್ಲಿದೆ. ಇವೆಲ್ಲವೂ ಹಲವಾರು ಒತ್ತಡ, ಪೈಪೋಟಿ-ಕಾದಾಟಗಳ ಮಿಶ್ರಫಲವಾಗಿವೆ. ಕೆಲವು, ಕಾಂಗ್ರೆಸ್‌ನ ಸಮಾಜವಾದಿ ಬಣವನ್ನು ತೃಪ್ತಿಪಡಿಸಲು ನೀಡಿರುವ ರಿಯಾಯಿತಿಗಳಾದರೆ, ಇನ್ನು ಕೆಲವು, (ಗೋಹತ್ಯೆ ನಿಷೇಧದಂಥವು) ಸಂಪ್ರದಾಯ ನಿಷ್ಠ ಬಣಕ್ಕೆ ತೋರಿದ ರಿಯಾಯಿತಿಗಳಾಗಿವೆ.

ಯಾವುದೇ ಪೂರ್ವಾಗ್ರಹವಿಲ್ಲದ ಕಣ್ಣಿಗೆ ಸಂವಿಧಾನ ಭಾರತೀಯ ಉದ್ದೇಶಗಳ ಸಾಧನೆಗೆ ಪಾಶ್ಚಾತ್ಯ ತತ್ವಗಳ ಅಳವಡಿಕೆಯಂತೆ ಗೋಚರಿಸುತ್ತದೆ. ಆದರೆ ಹಲವಾರು ದೇಶಭಕ್ತರಿಗೆ ಹಾಗೆ ಕಾಣಿಸುವುದಿಲ್ಲ. ವಯಸ್ಕ ಮತದಾನ ಭಾರತೀಯ ಆವಿಷ್ಕಾರ ಎಂದು ಇವರ ಅಂಬೋಣ. ಮರದ ಎಲೆಗಳನ್ನು ಮತಪತ್ರಗಳನ್ನಾಗಿ, ಮಣ್ಣಿನ ಮಡಕೆಗಳನ್ನು ಮತಪೆಟ್ಟಿಗೆಗಳನ್ನಾಗಿ ಬಳಸಿ ಚುನಾವಣೆಗಳನ್ನು ನಡೆಸಲಾಗುತ್ತಿತ್ತೆಂಬ ಒಕ್ಕಣೆ ಕಾಂಜೀವರಂನ ಒಂದು ಸಾವಿರ ವರ್ಷಗಳಷ್ಟು ಹಿಂದಿನ ಪುರಾತನ ದೇವಾಲಯದಲ್ಲಿರುವ ಶಾಸನದಲ್ಲಿ ಕಂಡುಬಂದಿದೆಯೆಂದು ಟಿ. ಪ್ರಕಾಶಂ ತಿಳಿಸಿದ್ದರು. ಇಂಥ ಕಟ್ಟಾಭಿಮಾನ ದಕ್ಷಿಣಕ್ಕೆ ಮಾತ್ರ ಸೀಮಿತವಾಗಿಲ್ಲ. ಪ್ರಾಚೀನ ಭಾರತವೇ ಗಣರಾಜ್ಯ ಸರ್ಕಾರ ವ್ಯವಸ್ಥೆಯ ಆದ್ಯ ಪ್ರವರ್ತಕ ದೇಶವೆಂದು ಹಿಂದಿ ವಿದ್ವಾಂಸರಾದ ರಘುವೀರ್ ಹೇಳುತ್ತಾರೆ. ಗಣರಾಜ್ಯ ವ್ಯವಸ್ಥೆಯನ್ನು ವಿಶ್ವದ ಉಳಿದೆಡೆಗಳಿಗೆ ಹರಡಿದ್ದು ಪ್ರಾಚೀನ ಭಾರತವೇ ಎಂಬುದು ಇವರ ಪ್ರತಿಪಾದನೆ.

ಸಂವಿಧಾನದ ವಿಧಿಗಳನ್ನು, ಕಲಮ್ಮುಗಳನ್ನು ನಿಕಟವಾಗಿ ಅಧ್ಯಯನ ಮಾಡಿದವರಿಗೆ ಇದಿಷ್ಟರಿಂದಲೇ ಸಮಾಧಾನವಾಗಲಿಲ್ಲ. ಸಂವಿಧಾನದಲ್ಲಿ ಗಾಂಧಿ ತತ್ವ ಎಂಬುದು ಇಲ್ಲವೇ ಇಲ್ಲವೆಂದು ಮಹಾವೀರ ತ್ಯಾಗಿ ತೀವ್ರ ನಿರಾಶೆ ವ್ಯಕ್ತಪಡಿಸಿದ್ದರು. ತಮ್ಮಂಥ ಸ್ವಾತಂತ್ರ್ಯ ಹೋರಾಟಗಾರರು ಸಂವಿಧಾನದಿಂದ ಬಯಸಿದ್ದು ವೀಣೆ ಅಥವಾ ಸಿತಾರಿನ ಸುಶ್ರಾವ್ಯ ಸಂಗೀತವನ್ನು. ಆದರೆ ಅವರಿಗೆ ಸಿಕ್ಕಿರುವುದು ಇಂಗ್ಲೆಂಡಿನ ಬ್ಯಾಂಡಿನ ಸಂಗೀತ ಎಂದು ಕೆಂಗಲ್ ಹನುಮಂತಯ್ಯ ದೂರಿದ್ದರು.

V

ರಾಷ್ಟ್ರೀಯ ಏಕತೆಯ ಸಂವರ್ಧನೆ ಹಾಗೂ ಪ್ರಗತಿಪರ ಸಾಮಾಜಿಕ ಪರಿವರ್ತನೆಗಳಿಗೆ ಸಾಧನ ಸಲಕರಣೆಯಾಗುವುದು ಸಂವಿಧಾನದ ಗುರಿ. ಧರ್ಮ ಪ್ರಸಾರ ಮೂಲಭೂತ ಹಕ್ಕು. ಆದರೆ ಸರ್ಕಾರ ಸಮಾಜ ಸುಧಾರಣೆಗಾಗಿ ಶಾಸನ ಮಾಡುವ (ಏಕರೀತಿಯ ನಾಗರಿಕ ಸಂಹಿತೆಯಂಥ ಶಾಸನ) ಹಕ್ಕನ್ನು ಹೊಂದಿದೆ. ಇಂಥ ಶಾಸನ ಮಾಡುವ, ಜಾರಿಗೆ ತರುವ ಹಕ್ಕನ್ನು ಸರ್ಕಾರ ತನ್ನಲ್ಲೇ ಕಾಯ್ದಿರಿಸಿಕೊಂಡಿದೆ. ರಾಷ್ಟ್ರೀಯ ಯೋಜನೆ ಮೂಲಕ ಶ್ರೀಮಂತ ಪ್ರಾಂತ್ಯಗಳ ಸಂಪನ್ಮೂಲಗಳನ್ನು ಬಡ ಪ್ರಾಂತ್ಯಗಳಿಗೆ ಮರುಹಂಚಿಕೆ ಮಾಡುವ ಅಧಿಕಾರವೂ ಕೇಂದ್ರ ಸರ್ಕಾರಕ್ಕಿದೆ. ಆಸ್ತಿ ಶಾಸನದಲ್ಲಿ ಕಾಯಿದೆಕ್ರಮ ಜರುಗಿಸುವ ಹಕ್ಕನ್ನು ಸೇರಿಸಿಲ್ಲ. ವ್ಯಕ್ತಿಗತ ಹಕ್ಕುಗಳಿಗಿಂತ ಸಾಮಾಜಿಕ ಒಳಿತಿಗೆ ಆದ್ಯತೆ ನೀಡಿರುವುದಕ್ಕೆ ಮತ್ತೊಂದು ಉದಾಹರಣೆ ಇದು. ಅನೇಕ ರಾಜ್ಯಗಳಲ್ಲಿ ಭೂಸುಧಾರಣೆ ಜಾರಿಗೆ ತರುವ ವಿಚಾರ ಪರಿಶೀಲನೆಯಲ್ಲಿದ್ದು ಅತೃಪ್ತ ಜಮೀನ್ದಾರರು ಮತ್ತು ಲೇವಾದೇವಿದಾರರಿಗೆ ತಕರಾರು ಮತ್ತು ಕಾನೂನು ಕಟ್ಟಳೆ ಮಾರ್ಗ ಮುಚ್ಚುವುದು ಸರ್ಕಾರದ ಅಪೇಕ್ಷೆಯಾಗಿತ್ತು.

ಮೂಲಭೂತ ಹಕ್ಕುಗಳು ಬೇಷರತ್ತಾಗಿಲ್ಲ. ಅವುಗಳನ್ನು ಸೀಮಿತವೂ ಅರ್ಹತಾನುಸಾರವೂ ಆಗಿ ನೀಡಲಾಗಿದೆ. ಮೂಲಭೂತ ಹಕ್ಕುಗಳನ್ನು ಭದ್ರತೆ ಮತ್ತು ಸಾರ್ವಜನಿಕ ಶಾಂತಿ ವ್ಯವಸ್ಥೆಗಳನ್ನು ಗಣನೆಗೆ ತೆಗೆದುಕೊಂಡು ರೂಪಿಸಲಾಗಿದೆ. 'ರಾಷ್ಟ್ರೀಯ ತುರ್ತುಪರಿಸ್ಥಿತಿ'ಯಂಥ ಸಂದರ್ಭದಲ್ಲಿ ಹಕ್ಕುಗಳನ್ನು ಅಮಾನತ್ತಿನಲ್ಲಿಡಲೂ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಲಾಗಿದೆ. ವಿಚಾರಣೆಗೆ ಗುರಿಪಡಿಸದೇ 'ಮುನ್ನೆಚ್ಚರಿಕೆ ಸ್ಥಾನ ಬದ್ಧತೆಯಲ್ಲಿಡಲು' ಅವಕಾಶ ನೀಡುವಂಥ ಕಟ್ಟಳೆಯನ್ನೂ ಸಂವಿಧಾನದಲ್ಲಿ ಸೇರಿಸಲಾಗಿದೆ. ಹಿರಿಯ ಸ್ವಾತಂತ್ರ್ಯ ಯೋಧರೊಬ್ಬರು ಇದನ್ನು "ಸಂವಿಧಾನದ ಘೋರ ಕಳಂಕ"ವೆಂದು ಕರೆದಿದ್ದಾರೆ. ಬ್ರಿಟಿಷರ ಗುಲಾಮಗಿರಿ ಕಾಲದಲ್ಲಿ ಮರಣದಂಡನೆಗೆ ಗುರಿಯಾದವರನ್ನು ಬಂಧಿಸಿಡುವ ಜೈಲು ಕೋಣೆಗಳಲ್ಲಿ ಹತ್ತು ವರ್ಷಗಳ ಕಾಲ ಸ್ಥಾನಬದ್ಧತೆಯನ್ನು ಸ್ವಯಂ ಅನುಭವಿಸಿದ್ದ ಈ ಹಿರಿಯ ಸ್ವಾತಂತ್ರ್ಯ ಯೋಧರು "ವಿಚಾರಣೆಗೆ ಗುರಿಪಡಿಸದೇ ಸ್ಥಾನಬದ್ಧತೆಯಲ್ಲಿಡುವುದರ ಚಿತ್ರಹಿಂಸೆ ನನಗೆ ಗೊತ್ತಿದೆ. ಇದನ್ನು ನಾನು ಎಂದಿಗೂ ಒಪ್ಪುವುದಿಲ್ಲ" ಎಂದು ಖಂಡತುಂಡವಾಗಿ ಹೇಳಿದ್ದುಂಟು.

ಸಂವಿಧಾನ ಭಾರತ ಸರ್ಕಾರದ ಬಗ್ಗೆ ಹೆಚ್ಚಿನ ಒಲವು ತೋರಿದೆ. ಭಾರತ ಸರ್ಕಾರದ ಬಗ್ಗೆ ಅದರ ಅಂಗವಾದ ರಾಜ್ಯಗಳಿಗಿಂತ ಹೆಚ್ಚಿನ ಒಲವು ತೋರಿದೆ; ಪಕ್ಷಪಾತದಿಂದ ಕೂಡಿದೆ. ವಸಾಹತುಶಾಹಿ ಜಾರಿಗೆ ತಂದಿದ್ದ ಕೇಂದ್ರೀಕರಣ ವ್ಯವಸ್ಥೆ ಆಗಲೆ ಇತ್ತು. ಆ ಕಾಲದ ಹಿಂಸಾಚಾರಗಳು ಮತ್ತಷ್ಟು ಅಧಿಕಾರ ಕೇಂದ್ರೀಕರಣಕ್ಕೆ ಹಾದಿ ಮಾಡಿಕೊಟ್ಟಿದ್ದವು. ಈಗ ಗೊಂದಲ ಅವ್ಯವಸ್ಥೆಗಳನ್ನು ತಡೆಗಟ್ಟುವ ನೆಪದಲ್ಲಿ, ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ನೆಪದಲ್ಲಿ ಮತ್ತಷ್ಟು ಕೇಂದ್ರೀಕರಣ ಅಗತ್ಯವೆಂದು ಕಂಡು ಬಂದಿತು. ಸಂವಿಧಾನ ಕೇಂದ್ರವಲ್ಲಿ ಹೆಚ್ಚಿನ ಅಧಿಕಾರ ಕೇಂದ್ರೀಕರಣಕ್ಕೆ ಕಟ್ಟಳೆ ಮಾಡಿದೆ.

ಸಂವಿಧಾನ ಮೂರು ಅಂಗಗಳಲ್ಲಿ ಹೊಣೆಗಾರಿಕೆಯ ವ್ಯವಸ್ಥೆಯನ್ನು ಏರ್ಪಾಟು ಮಾಡಿದೆ. ಅವು: ಕೇಂದ್ರ, ರಾಜ್ಯಗಳು ಮತ್ತು ಸಹವರ್ತಿ. ಹೊಣೆಗಾರಿಕೆಯನ್ನು ಸಂವಿಧಾನದಲ್ಲಿ ಈ ಮೂರು ಅಂಗಗಳಲ್ಲಿ ಪಟ್ಟೀಕೃತಗೊಳಿಸಲಾಗಿದೆ. ಮೊದಲನೆಯದು ಕೇಂದ್ರ ಸರ್ಕಾರದ ಹೊಣೆಗಾರಿಕೆಗಳ ಪಟ್ಟಿ. ಎರಡನೆಯದು ರಾಜ್ಯಗಳ ಹೊಣೆಗಾರಿಕೆಗಳ ಪಟ್ಟಿ. ಮೂರನೆಯದು ಸಹವರ್ತಿ ಪಟ್ಟಿ. ಅಂದರೆ ಕೇಂದ್ರ ಮತ್ತು ರಾಜ್ಯಗಳೆರಡಕ್ಕೂ ಸೇರಿದ, ಎರಡೂ ಜಂಟಿಯಾಗಿ ನಿರ್ವಹಿಸಬೇಕಾದ ಹೊಣೆಗಾರಿಕೆಗಳ ಪಟ್ಟಿ. ಆದರೆ ಇವಲ್ಲದೆ ಕೇಂದ್ರ ಸರ್ಕಾರಕ್ಕೆ ಬೇರೆ ಒಕ್ಕೂಟಗಳಲ್ಲಿ ಇಲ್ಲದಂಥ ಕೆಲವೊಂದು ಪ್ರತ್ಯೇಕ ಹೊಣೆಗಾರಿಕೆಗಳನ್ನು ವಹಿಸಲಾಗಿದೆ. ಸಹವರ್ತಿ ಪಟ್ಟಿಯಲ್ಲೂ ರಾಜ್ಯಗಳು ಬಯಸದೇ ಇರುವಂಥ ಹೆಚ್ಚು ಹೊಣೆಗಾರಿಕೆಗಳನ್ನು ಸೇರಿಸಲಾಗಿದೆ. ಖನಿಜಗಳು ಮತ್ತು ಪ್ರಮುಖ ಕೈಗಾರಿಕೋದ್ಯಮಗಳ ನಿಯಂತ್ರಣ ಅಧಿಕಾರ-ಹೊಣೆಗಾರಿಕೆಗಳು ಕೇಂದ್ರ ಸರ್ಕಾರದ ವಶದಲ್ಲೇ ಇವೆ. ಇಷ್ಟೇ ಅಲ್ಲದೆ, ರಾಜ್ಯಪಾಲರ ಶಿಫಾರಸಿನ ಅನ್ವಯ ರಾಜ್ಯದ ಆಡಳಿತವನ್ನು ವಹಿಸಿಕೊಳ್ಳುವ ಅಧಿಕಾರವೂ ಕೇಂದ್ರಕ್ಕಿದೆ. ಇದು ಸಂವಿಧಾನದ 356ನೇ ವಿಧಿಯ ಪ್ರಕಾರ ದತ್ತವಾದ ಅಧಿಕಾರವಾಗಿದೆ.

ಪ್ರಾಂತೀಯ ರಾಜಕಾರಣಿಗಳು ರಾಜ್ಯಗಳಿಗೆ ಹೆಚ್ಚಿನ ಹಕ್ಕುಗಳು, ಅಧಿಕಾರಗಳು ಬೇಕೆಂದು ಹೋರಾಟ ನಡೆಸಿದರು. ಕೇಂದ್ರ ಸರ್ಕಾರದ ಹೊಣೆಗಾರಿಕೆಗಳ ಪಟ್ಟಿ ಹಾಗೂ ಸಹವರ್ತಿ ಹೊಣೆಗಾರಿಕೆಯ ಪಟ್ಟಿ ಕೆಲವೇ ಕೆಲವು ಬಾಬ್ತುಗಳಿಗೆ, ವಿಷಯಗಳಿಗೆ ಮಿತಗೊಳ್ಳಬೇಕೆಂಬುದು ಇವರ ವಾದವಾಗಿತ್ತು. ಸಂವಿಧಾನ, ಕೇಂದ್ರ ಸರ್ಕಾರದಲ್ಲಿ ಅಧಿಕಾರಗಳನ್ನು ಕೇಂದ್ರೀಕರಿಸಿದ್ದು ಇದರ ಭಾರದಿಂದ ಕೇಂದ್ರ ಸರ್ಕಾರವೇ ಕುಸಿದು ಬೀಳಬಹುದೇನೊ ಎನ್ನುವ ಹೆದರಿಕೆ ತಮಗುಂಟಾಗುತ್ತಿದೆಯೆಂದು ಒರಿಸ್ಸಾದ ಸದಸ್ಯರೊಬ್ಬರು ಹೇಳಿದ್ದರು. ಇದು ಒಕ್ಕೂಟ ಸಂವಿಧಾನವಲ್ಲ, ಏಕೀಕೃತ ಸಂವಿಧಾನ ಎಂಬುದು ಮೈಸೂರಿನ ಸದಸ್ಯರೊಬ್ಬರ ಅಭಿಮತವಾಗಿತ್ತು. ಈ ಸಂವಿಧಾನದ ವಿಧಿಗಳನ್ವಯ "ಪ್ರಜಾಪ್ರಭುತ್ವ ದೆಹಲಿಯಲ್ಲಿ ಕೇಂದ್ರೀಕೃತವಾಗಿದೆ. ದೇಶದ ಉಳಿದ ಭಾಗಗಳಲ್ಲಿ ಇದೇ ಪ್ರಜಾಸತ್ತಾತ್ಮಕ ಅರ್ಥ ಮತ್ತು ಇದೇ ಮನೋಧರ್ಮದಿಂದ ಕೆಲಸಮಾಡಲು ಅವಕಾಶವಿಲ್ಲದಂತಾಗಿದೆ" ಎಂದು ಈ ಸದಸ್ಯರ ಅಂಬೋಣವಾಗಿತ್ತು.

ರಾಜ್ಯದ ಹಕ್ಕುಗಳ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ರಾಜ್ಯಗಳ ಪರವಹಿಸಿ ತುಂಬ ಶಕ್ತಿಯುತವಾಗಿ ಮಾತನಾಡಿದವರು ಮದರಾಸಿನ ಕೆ. ಸಂತಾನಂ. ಸಂವಿಧಾನದಲ್ಲಿ ಮಾಡಲಾಗಿರುವ ಹಣಕಾಸು ಕಟ್ಟಳೆಗಳು ರಾಜ್ಯ ಸರ್ಕಾರಗಳನ್ನು ಕೇಂದ್ರ ಸರ್ಕಾರದ ಬಾಗಿಲಿನಲ್ಲಿ ಭಿಕ್ಷುಕರಂತೆ ನಿಲ್ಲಿಸುತ್ತವೆ ಎಂಬುದು ಇವರ ಅನ್ನಿಸಿಕೆಯಾಗಿತ್ತು. ಅಮೆರಿಕದಲ್ಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಎಲ್ಲ ಬಗೆಯ ತೆರಿಗೆಗಳನ್ನು ಹಾಕಬಹುದು. ಆದರೆ ಇಲ್ಲಿ ಮಹತ್ವದ ಆದಾಯ ಮೂಲವಾದ ವರಮಾನ ತೆರಿಗೆಯಿಂದ ರಾಜ್ಯಗಳು ವಂಚಿತವಾಗಿವೆ. "ಅಲ್ಲದೆ ಕರಡು ರಚನಾ ಸಮಿತಿ ಬೇಡವಾದ ಎಲ್ಲ ಬಗೆಯ ಅಧಿಕಾರಗಳಿಂದ ಕೇಂದ್ರದ ಭಾರವನ್ನು ಹೆಚ್ಚಿಸಿದೆ. ಇದರಲ್ಲಿ 'ಅಲೆಮಾರಿ' ಜೀವನವೂ ಸೇರಿದೆ. ಅಲೆಮಾರಿ ಜೀವನವನ್ನು ರಾಜ್ಯಗಳ ಪಟ್ಟಿಯಿಂದ ತೆಗೆದು ಸಹವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಅಲೆಮಾರಿಗಳ ಬಗ್ಗೆ ಇಡೀ ಭಾರತ ತಲೆಕೆಡಿಸಿಕೊಳ್ಳಬೇಕೆಂದು ನಿಮ್ಮ ಅಪೇಕ್ಷೆಯೇ?" ಎಂದು ಸಂತಾನಂ ಕಟಕಿಯಾಡಿದ್ದರು. ಕೇಂದ್ರ ಸರ್ಕಾರದ ಮೇಲೆ ಪ್ರತ್ಯೇಕ ಹೊಣೆಗಾರಿಕೆಗಳ ಭಾರ ಹೇರುವ ಬದಲು "ರಾಜ್ಯಗಳ ಜನತೆಯ ಯೋಗಕ್ಷೇಮ ನೋಡಿಕೊಳ್ಳುವ ಪ್ರಾಥಮಿಕ ಹೊಣೆಗಾರಿಕೆ ರಾಜ್ಯ ಸರ್ಕಾರಗಳದ್ದಾಗಿರಬೇಕು" ಎಂದು ಸಂತಾನಂ ಪ್ರತಿಪಾದಿಸಿದ್ದರು.

ಮರುದಿನ ಮಾತನಾಡಿದ ಯುನೈಟೆಡ್ ಪ್ರಾವಿನ್ಸ್‌ನ ಸದಸ್ಯರೊಬ್ಬರು "ಒಡೆದು ಛಿದ್ರಗೊಳಿಸುವ ಭಾರತದ ಪುರಾತನ ಐತಿಹಾಸಿಕ ಪ್ರವೃತ್ತಿಯೇ ಈ ಕಟ್ಟಾಳುಗಳ ಮುಖೇನ ಮಾತನಾಡುತ್ತಿದೆಯೇ" ಎಂದು ಸಂತಾನಂ ಅವರ ಭಾಷಣದ ಬಗ್ಗೆ ವಿಸ್ಮಯ ವ್ಯಕ್ತಪಡಿಸಿದ್ದರು. "ಒತ್ತಡ ಮತ್ತು ಬಲಗುಂದಿಸುತ್ತಿರುವ" ಈ ಕಷ್ಟಕಾಲದಲ್ಲಿ ಸಶಕ್ತವಾದ ಕೇಂದ್ರ ಅತ್ಯಗತ್ಯವೆಂದು ಈ ಸದಸ್ಯರು ವಾದಿಸಿದ್ದರು. "ಸಶಕ್ತವಾದ ಕೇಂದ್ರ ಸರ್ಕಾರದಿಂದ ಮಾತ್ರ ಇಡೀ ಭಾರತದ ಯೋಗಕ್ಷೇಮ ಕುರಿತು ಚಿಂತನಮಂಥನ ನಡೆಸುವುದು, ಯೋಜನೆಗಳನ್ನು ರೂಪಿಸುವುದು ಸಾಧ್ಯವಾದೀತು" ಎಂದು ಇವರು ಹೇಳಿದ್ದರು.

ಕರಡು ರಚನೆಯ ಸಮಿತಿ ಸದಸ್ಯರು ಸಂವಿಧಾನದ ಕೇಂದ್ರೀಕರಣ ಒಲವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದರು. 1935ರ ಭಾರತ ಸರ್ಕಾರದ ಕಾಯಿದೆಯನ್ವಯ ನಾವು ಸೃಷ್ಟಿಸಿರುವ ಸರ್ಕಾರಕ್ಕಿಂತ ಇನ್ನೂ ಹೆಚ್ಚು ಸಶಕ್ತವಾದ ಏಕೀಕೃತ ಕೇಂದ್ರ ಸರ್ಕಾರವನ್ನು ತಾವು ಬಯಸುವುದಾಗಿ ಅಂಬೇಡ್ಕರ್ ಹೇಳಿದ್ದರು. ನಮ್ಮಿಂದ ಸಾಧ್ಯವಾದಷ್ಟೂ ಸಶಕ್ತವಾಗಿ ರೂಪಿಸಿದ ಕೇಂದ್ರ ಸರ್ಕಾರವುಳ್ಳ ಒಕ್ಕೂಟ ನಿರ್ಮಾಣವಾಗಬೇಕೆಂದು ಕೆ.ಎಂ. ಮುನ್ಷಿ ಪ್ರತಿಪಾದಿಸಿದ್ದರು. ಕೆಲವು ವಿಷಯಗಳಲ್ಲಿ ಮುನ್ಷಿಯವರು ಹಿಂದೂ ಕಟ್ಟಾಭಿಮಾನಿಯಾಗಿದ್ದರು; ಆದರೆ ಈ ಬಾಬಿನಲ್ಲಿ ಅವರು ಮುಸ್ಲಿಂ ಪರವಾಗಿದ್ದರು. 1946 ಮತ್ತು 1947ರ ಭಯಾನಕ ಕೋಮುಗಲಭೆಗಳು, ಹಿಂಸಾಚಾರಗಳು ಪ್ರಬಲವಾದ ಕೇಂದ್ರ ಸರ್ಕಾರದ ಅಗತ್ಯವನ್ನು ಸಾಬೀತುಗೊಳಿಸುತ್ತವೆ ಎಂದು ಮುನ್ಷಿ ಬೆರಳು ಮಾಡಿ ಹೇಳಿದ್ದರು. ಕಾಜಿ ಸಯದ್ ಕಾಜಿಮುದ್ದೀನ್ ಅವರ ಮಾತುಗಳಲ್ಲೇ ಹೇಳುವುದಾದರೆ "ಎಲ್ಲರೂ ಪಂಡಿತ್ ಜವಹರಲಾಲ್ ನೆಹರೂ ಅಲ್ಲ" (ಅಂತರ ಕೋಮು ಸೌಹಾರ್ದತೆ ಬಗ್ಗೆ ನೆಹರೂ ಅವರಿಗಿದ್ದ ಬದ್ಧತೆ ಕುರಿತಂತೆ ಈ ಮಾತು). ರಾಜ್ಯಗಳಲ್ಲಿ ದುರ್ಬಲರೂ ಚಂಚಲಮನಸ್ಕರೂ ಆದ ಆಡಳಿತಾಧಿಕಾರಿಗಳಿದ್ದಾರೆಂದು ಕಾಜಿ ನುಡಿದಿದ್ದರು. "ಆದ್ದರಿಂದ ನಮಗಿಂದು ಬೇಕಾಗಿರುವುದು ರಾಷ್ಟ್ರಪ್ರೇಮಿ-ದೇಶಭಕ್ತ ಸರ್ಕಾರ. ನಮಗಿಂದು ಬೇಕಾಗಿರುವುದು ನಿಷ್ಪಕ್ಷಪಾತವಾದ, ಯಾರಿಗೂ ಬಗ್ಗದ ಆಡಳಿತ, ಕಾರ್ಯಾಂಗ, ಜನಸಮುದಾಯಗಳ ಖಯಾಲಿಗಳಿಗೆ ತಲೆಬಾಗದಂಥ ಕಾರ್ಯಾಂಗ" ಎನ್ನುವುದು ಕಾಜಿಯವರ ಭಾಷಣದ ತಿರುಳಾಗಿತ್ತು.

VI

ಅಲ್ಪಸಂಖ್ಯಾತರುಗಳ ಹಕ್ಕುಗಳ ಬಗ್ಗೆ ಸಂವಿಧಾನ ರಚನಾ ಸಭೆ ಹೆಚ್ಚು ಕಾಳಜಿ ವಹಿಸಿತ್ತು. ವಿಭಜನೆಯಾದ ಕೇವಲ ಹತ್ತು ದಿನಗಳೇ ಈ ವಿಷಯದ ಮೇಲೆ ಮುಂದುವರಿದ ಚರ್ಚೆ ನಡೆಯಿತು. ಮದರಾಸಿನ ಮುಸ್ಲಿಂ ಸದಸ್ಯರೊಬ್ಬರು, ಅಲ್ಪಸಂಖ್ಯಾತರನ್ನು ಪ್ರತ್ಯೇಕ ಮತದಾರರ ಸಮುದಾಯವಾಗಿಯೇ ಉಳಿಸಿಕೊಳ್ಳಬೇಕೆಂದು ಪ್ರಬಲವಾಗಿ ಮನವಿ ಮಾಡಿದರು. "ಈ ದೇಶದಲ್ಲಿ ಈಗಿರುವ ಪರಿಸ್ಥಿತಿಯಲ್ಲಿ ಮುಸ್ಲಿಂ ಸಮುದಾಯದ ಬೇಕು ಬೇಡಗಳನ್ನು, ಅಗತ್ಯಗಳನ್ನು ಮುಸ್ಲಿಮೇತರು ಅರ್ಥಮಾಡಿಕೊಳ್ಳುವುದು ಬಹಳ ತ್ರಾಸದಾಯಕ" ಎಂದರು ಬಿ. ಪೋಕರ್ ಬಹಾದುರ್. ಪ್ರತ್ಯೇಕ ಮತದಾರ ಸಮುದಾಯ ವ್ಯವಸ್ಥೆಯನ್ನು ರದ್ದುಗೊಳಿಸಿದಲ್ಲಿ "ರಾಷ್ಟ್ರದ ಆಳ್ವಿಕೆಯಲ್ಲಿ ತಮಗೆ ಸೂಕ್ತ ಪ್ರಾತಿನಿಧ್ಯ ಇಲ್ಲ, ತಮ್ಮ ಧ್ವನಿ ಇಲ್ಲ ಎನ್ನುವಂಥ ಭಾವನೆ ಮಹತ್ವದ ಸಮುದಾಯಗಳಲ್ಲಿ ಉಂಟಾಗುತ್ತದೆ" ಎಂದು ಬಹಾದುರ್ ತಮ್ಮ ವಾದ ಸಮರ್ಥಿಸಿಕೊಂಡರು.

ಆದರೆ ಗೃಹಸಚಿವ ವಲ್ಲಭಭಾಯಿ ಪಟೇಲ್ ಈ ಬೇಡಿಕೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಹಿಂದಿನ ಪ್ರತ್ಯೇಕ ಮತದಾರರ ವ್ಯವಸ್ಥೆಯೇ ವಿಭಜನೆಗೆ ಹಾದಿ ಸುಗಮ

ಮಾಡಿಕೊಟ್ಟಿತೆಂದು ನುಡಿದ ಪಟೇಲರು "ಇಂಥ ಒಂದು ವ್ಯವಸ್ಥೆ ಬೇಕೆನ್ನುವವರಿಗೆ ಇಲ್ಲಿ ಜಾಗ ಇಲ್ಲ, ಅವರಿಗೆ ಪಾಕಿಸ್ತಾನದಲ್ಲಿ ಜಾಗವುಂಟು" ಎಂದು ಚಪ್ಪಾಳೆಗಳ ನಡುವೆ ಗುಡುಗಿದರು. "ಇಲ್ಲಿ, ನಾವೀಗ ಒಂದು ರಾಷ್ಟ್ರದ ಬುನಾದಿ ನಿರ್ಮಿಸುತ್ತಿದ್ದೇವೆ. ಮತ್ತೆ ವಿಭಜನೆ ಬಯಸುವವರಿಗೆ, ಒಡಕಿನ ಬೀಜ ಬಿತ್ತುವವರಿಗೆ ಇಲ್ಲಿ ಜಾಗವಿಲ್ಲ, ಇಲ್ಲಿ ಅಂಥ ಅವಕಾಶ ಇಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ಹೇಳಲೇ ಬೇಕು."

ಆದರೆ, ಪ್ರಾರಂಭದಿಂದಲೂ ಪ್ರತ್ಯೇಕ ಮತದಾರರ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದ ಕೆಲವು ಮುಸ್ಲಿಮರಿದ್ದರು. ಇವರಲ್ಲಿ ಬೇಗಂ ಅಯಿಜಾಜ್ ರಸೂಲ್ ಒಬ್ಬರು. ಧರ್ಮದ ಆಧಾರದ ಮೇಲೆ ಮೀಸಲಾತಿ ಬಯಸುವುದು ಈಗ ಸಂಪೂರ್ಣವಾಗಿ ಅರ್ಥಹೀನ ಎಂದು ಬೇಗಂ ಕಂಠೋಕ್ತವಾಗಿ ಹೇಳಿದರು. "ಪ್ರತ್ಯೇಕ ಮತದಾರರ ವ್ಯವಸ್ಥೆ ಎನ್ನುವುದು ಅಲ್ಪಸಂಖ್ಯಾತರನ್ನು ಎಲ್ಲ ಕಾಲಕ್ಕೂ ಬಹುಸಂಖ್ಯಾತರಿಂದ ದೂರವಿರಿಸುವ ಆತ್ಮಘಾತುಕ ಅಸ್ತ್ರ" ಎಂದು ಬಣ್ಣಿಸಿದ ಬೇಗಂ ಅವರ ಪ್ರಕಾರ "ಜಾತ್ಯತೀತ ಪ್ರಜಾಸತ್ತೆಯಲ್ಲಿ ಮುಸ್ಲಿಮರ ಹಿತಾಸಕ್ತಿಗಳು ಉಳಿದ ಪ್ರಜೆಗಳ ಹಿತಾಸಕ್ತಿಯಂತೆಯೇ ಇರಬೇಕು."

1949ರ ವೇಳೆಗೆ, ಪ್ರತ್ಯೇಕ ಮತದಾರರ ವ್ಯವಸ್ಥೆಗೆ ಒತ್ತಾಯಿಸಿದ್ದ ಮುಸ್ಲಿಂ ಸದಸ್ಯರೂ ಬೇಗಂ ಅವರ ಅಭಿಪ್ರಾಯವನ್ನು ಅನುಮೋದಿಸಿದರು. "ಮೀಸಲಾತಿ ನಿಜವಾಗಿ ಮುಸ್ಲಿಮರಿಗೆ ಹಾನಿಕಾರಕ" ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು. "ಇದಕ್ಕೆ ಬದಲಾಗಿ ಮುಸ್ಲಿಮರು ಮತದಾರರ ಬಣವಾಗಿ ನಿಲ್ಲಬೇಕು, ಆಗ ಮುಸ್ಲಿಂ ಮತದಾರರು ಅಧಿಕ ಸಂಖ್ಯೆಯಲ್ಲಿರುವ ಕ್ಷೇತ್ರಗಳಲ್ಲಿ ಯಾವ ಅಭ್ಯರ್ಥಿಯೂ ಅವರನ್ನು ಉಪೇಕ್ಷಿಸುವ ಧೈರ್ಯ ಮಾಡಲಾರ. ಅವರು ಚುನಾವಣೆಗಳಲ್ಲಿ ನಿರ್ಣಾಯಕ ಧ್ವನಿಯೂ ಆಗಬಹುದು. ಕೊನೆಯಲ್ಲಿ ಬಹುಸಂಖ್ಯಾತ ಅಭ್ಯರ್ಥಿಯೂ ಒಂದು ಮತದ ಅಂತರದಲ್ಲಿ ಸೋಲಬಹುದು. ಆದ್ದರಿಂದ, ಹಿಂದೂಗಳ ಸಾರ್ವತ್ರಿಕ ಬದುಕಿನಲ್ಲಿ ಪಾಲ್ಗೊಳ್ಳುವ ಮೂಲಕ ವಿವೇಕದಿಂದ ತಮ್ಮ ಪಾತ್ರ ನಿರ್ವಹಿಸುವುದರಲ್ಲೇ ಮುಸ್ಲಿಮರ ಹಿತರಕ್ಷಣೆ ಇದೆ" ಎಂಬುದನ್ನು ಈ ವೇಳೆಗೆ ಮುಸ್ಲಿಂ ಸದಸ್ಯರು ಮನಗಂಡಿದ್ದರು.

ಮುಸ್ಲಿಮರಿಗಿಂತ ಶೋಷಣೆ, ಅನ್ಯಾಯಗಳಿಗೆ ಪಕ್ಕಾಗುವ ಅಲ್ಪಸಂಖ್ಯಾತರೆಂದರೆ ಭಾರತೀಯ ಮಹಿಳೆಯರು. ಸಭೆಯ ಮಹಿಳಾ ಸದಸ್ಯರೂ ರಾಷ್ಟ್ರೀಯ ಚಳವಳಿಯಲ್ಲಿ ಪಾಲ್ಗೊಂಡವರೇ ಆಗಿದ್ದರು. ಹಾಗೂ ಏಕತೆಯ ಮನೋಭಾವವನ್ನು ಹೊಂದಿದವರಾಗಿದ್ದರು. ಮುಂಬಯಿಯ ಹನ್ಸಾ ಮೆಹ್ತಾ ಮೀಸಲಾತಿ, ಪ್ರತ್ಯೇಕ ಸ್ಥಾನ, ಪ್ರತ್ಯೇಕ ಮತದಾರ ವ್ಯವಸ್ಥೆ ಇವೆಲ್ಲವನ್ನೂ ತಿರಸ್ಕರಿಸಿದರು. "ನಾವು ಎಂದೂ ವಿಶೇಷ ಹಕ್ಕು ಸವಲತ್ತುಗಳನ್ನು ಕೇಳಿದವರಲ್ಲ" ಎಂದು ಮೆಹ್ತಾ ನುಡಿದಿದ್ದರು. "ನಾವು ಕೇಳಿದ್ದು ಸಾಮಾಜಿಕ ನ್ಯಾಯವನ್ನು. ಇದು ನಮ್ಮ ಬೇಡಿಕೆ. ನಾವು ಕೇಳುತ್ತಿರುವ ಈ ಸಮಾನತೆಯೇ ಪರಸ್ಪರ ಗೌರವ-ಒಮ್ಮತಗಳಿಗೆ, ಅರ್ಥ ಮಾಡಿಕೊಳ್ಳುವುದಕ್ಕೆ ಅಡಿಪಾಯವಾಗಬಹುದು. ಈ ಸಮಾನತೆ ಇಲ್ಲದೆ ಪುರುಷರು ಮತ್ತು ಸ್ತ್ರೀಯರ ನಡುವ ಸಹಕಾರ ಸಾಧ್ಯವಾಗದು" ಎಂಬುದು ಶ್ರೀಮತಿ ಮೆಹ್ತಾ ಅವರ

ನಿಲುವಾಗಿತ್ತು. "ಭಾರತೀಯ ಮಹಿಳೆಯರ ಹಾದಿ, ಪ್ರಬುದ್ಧರೆಂದು ಹೇಳಿಕೊಳ್ಳುವ ಕೆಲವು ರಾಷ್ಟ್ರಗಳಲ್ಲಿರುವ ಸಂಕುಚಿತ ಸ್ತ್ರೀ ಮತಾಧಿಕಾರವಾದಿ ಚಳವಳಿ ಮಾರ್ಗವಲ್ಲ. ಭಾರತದ ಮಹಿಳೆ ಅವಿರತವಾಗಿ ಪ್ರಯತ್ನಿಸುತ್ತಿರುವುದು ಸಮಾನ ಸ್ಥಾನಮಾನಕ್ಕಾಗಿ, ನ್ಯಾಯಕ್ಕಾಗಿ, ಸಮಾನ ಅವಕಾಶಗಳಿಗಾಗಿ. ಈ ದೇಶದ ಸೇವೆಯಲ್ಲಿ ತಾನೂ ಪಾಲ್ಗೊಂಡು ಹೊಣೆಗಾರಿಕೆಯಿಂದ ಕೆಲಸ ಮಾಡಲು ಸಾಧ್ಯವಾಗುವಂಥ ಸಮಾನತೆ ಮತ್ತು ಸಮಾನ ನ್ಯಾಯ ಭಾರತೀಯ ಮಹಿಳೆಯರ ಬೇಡಿಕೆಯಾಗಿದೆ. ಈ ದೇಶದಲ್ಲಿ ಮಹಿಳಾ ಆಂದೋಲನ ಆರಂಭವಾದಂದಿನಿಂದ ಮಹಿಳೆಯರು ವಿಶೇಷ ಹಕ್ಕುಗಳು ಮತ್ತು ಮೀಸಲಾತಿಯನ್ನು ಮೂಲಭೂತವಾಗಿ ವಿರೋಧಿಸುತ್ತಿದ್ದಾರೆ" ಎಂದು ಬಂಗಾಳದ ರೇಣುಕಾ ರಾಯ್ ಅವರು ಶ್ರೀಮತಿ ಮೆಹ್ತಾ ಅವರ ಮಾತುಗಳಿಗೆ ಸಮ್ಮತಿ ಸೂಚಿಸಿದ್ದರು.

ಮಹಿಳೆಯರಿಗೆ ಮೀಸಲಾತಿ ಇರಬೇಕೆಂದು ಕೇಳಿ ಬಂದ ಒಂಟಿದನಿ ಪುರುಷ ಸದಸ್ಯನದಾಗಿತ್ತು. ಇದೊಂದು ವಿಚಿತ್ರ, ಈ ಸದಸ್ಯರ ವಾದವೂ ವಿಚಿತ್ರ. ಸ್ವಯಂ ಅನುಭವೀ ಸಂಸದೀಯ ಪಟುವೆನಿಸಿಕೊಂಡಿದ್ದ ಆರ್.ಕೆ. ಚೌಧುರಿಯವರ ವಾದ ಹೀಗಿತ್ತು:

> *"ಮಹಿಳೆಯರಿಗೆ ಕ್ಷೇತ್ರ ಮೀಸಲಿಡುವುದು ವಿವೇಕಯುತ ಎಂದು ನನಗೆ ಅನ್ನಿಸುತ್ತದೆ. ಮಹಿಳೆಯೊಬ್ಬಳು ತನಗೆ ಏನು ಬೇಕೆಂಬುದನ್ನು ತಿಳಿಸಿದಾಗ ಅದನ್ನು ಅವಳಿಗೆ ತಂದುಕೊಡುವುದು ಸುಲಭ. ತನಗೇನು ಬೇಕು ಎಂಬುದನ್ನು ಮಹಿಳೆ ವ್ಯಕ್ತಪಡಿಸದೇ ಹೋದಾಗ ಆಕೆಯ ಅಪೇಕ್ಷೆ ಏನು ಎಂಬುದನ್ನು ತಿಳಿದುಕೊಳ್ಳುವುದು ಬಹಳ ಕಷ್ಟ. ಅವರಿಗಾಗಿಯೇ ವಿಶೇಷ ಕ್ಷೇತ್ರ ಮೀಸಲಿಟ್ಟಲ್ಲಿ ಅವರು ಅಲ್ಲೇ ಅಡ್ಡಾದಿಡ್ಡಿ ಮಾತುಗಳನ್ನಾಡುತ್ತಾ ಅವರವರಲ್ಲೇ ಹೊಡೆದಾಡಿಕೊಳ್ಳುತ್ತಾ ಇರಬಹುದು. ಸಾಮಾನ್ಯ ಕ್ಷೇತ್ರದಲ್ಲಿ ಕಾಲಿಡದೇ ತಮ್ಮ ಮೀಸಲು ಕ್ಷೇತ್ರದಲ್ಲೇ ಬಡಿದಾಡಿಕೊಳ್ಳಬಹುದು. ಇಲ್ಲವಾದಲ್ಲಿ ಕೆಲವೊಮ್ಮೆ ನಾವು ದುರ್ಬಲರಾಗಿ, ಅವರಿಗೆ ಮಣಿಯಬೇಕಾಗಬಹುದು, ಅವರಿಗೆ ಹಕ್ಕಿಲ್ಲದ ಸ್ಥಾನಗಳನ್ನು ಬಿಟ್ಟುಕೊಡಬೇಕಾಗಬಹುದು."*

VII

ಮುಸ್ಲಿಮರು ಮತ್ತು ಮಹಿಳೆಯರಿಗೆ ಮೀಸಲಾತಿ ಇರುವುದಿಲ್ಲ. ಆದರೆ ಅಸ್ಪೃಶ್ಯರಿಗೆ ಮೀಸಲಾತಿ ಇರಬೇಕೆಂದು ಸಂವಿಧಾನ ಶಿಫಾರಸು ಮಾಡಿತು. ಇದರಿಂದ ಅಸ್ಪೃಶ್ಯರು ಅನುಭವಿಸಿದ ಭಯಾನಕ ಭೇದಭಾವ, ತಾರತಮ್ಯಗಳನ್ನು ಮಾನ್ಯ ಮಾಡಿದಂತೆಯೇ ಆಯಿತು. ಜೊತೆಗೆ, ಹಿಂದೂ ಸಮಾಜ ಈ ಅಸ್ಪೃಶ್ಯತೆಯ ಕೇಡಿನಿಂದ ಮುಕ್ತವಾದಾಗಲೇ ನಿಜವಾದ ಸ್ವಾತಂತ್ರ್ಯ ಅಥವಾ ಸ್ವರಾಜ್ಯ ಸಾಧ್ಯವೆಂದು ಸಾರಿದ್ದ ಮಹಾತ್ಮ ಗಾಂಧಿಯವರಿಗೆ ಸಲ್ಲಿಸಿದ ಗೌರವವೂ ಇದಾಗಿತ್ತು. ಅಸ್ಪೃಶ್ಯರನ್ನು ಗಾಂಧೀಜಿ ಹರಿಜನರು ಅಥವಾ ದೇವರ ಮಕ್ಕಳೆಂದು ಕರೆದಿದ್ದರು.

ಕೆಳಜಾತಿಯವರಿಗೆ ಶಾಸನಸಭೆ ಸದಸ್ಯತ್ವ ಮತ್ತು ಸರ್ಕಾರಿ ಕಚೇರಿಗಳಲ್ಲಿ ಹುದ್ದೆಗಳನ್ನು ಮೀಸಲಿಡಬೇಕೆಂದು ಸಂವಿಧಾನ ಗೊತ್ತು ಪಡಿಸಿತು. ಜೊತೆಗೆ ಅಸ್ಪೃಶ್ಯರಿಗೆ ದೇವಾಲಯಗಳಲ್ಲಿ ಪ್ರವೇಶಾವಕಾಶ ನೀಡಬೇಕು ಹಾಗೂ ಸಮಾಜದ ಎಲ್ಲ ಸ್ತರಗಳಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸಬೇಕೆಂದು ಸಂವಿಧಾನ ಆದೇಶಿಸಿತು. ಸಂವಿಧಾನದ ಈ ವಿಧಿಗಳಿಗೆ ವ್ಯಾಪಕ ಸ್ವಾಗತ ಸಿಕ್ಕಿತು. ಮದ್ರಾಸಿನ ಮುನಿಸ್ವಾಮಿ ಪಿಳ್ಳೆ ಸಂವಿಧಾನ ರಚನಾ ಸಭೆಯಲ್ಲಿ ಇದಕ್ಕೆ ಈ ರೀತಿ ಪ್ರತಿಕ್ರಿಯಿಸಿದರು: "ಅಸ್ಪೃಶ್ಯತೆ ಭಾರತದ ಚೊಕ್ಕ ಹೆಸರಿಗೆ ಅಂಟಿದ ಒಂದು ಕಳಂಕ...ಅಸ್ಪೃಶ್ಯತೆ ನಿವಾರಣೆಗೆ ಮಹಾನ್ ಸಂತರು-ಸಾಧುಪುರುಷರುಗಳು ಪ್ರಯತ್ನಿಸಿದ್ದುಂಟು. ಆದರೆ, ನಮ್ಮ ದೇಶದಲ್ಲಿ ಇನ್ನು ಮುಂದೆ ಅಸ್ಪೃಶ್ಯತೆ ಇರುವುದಿಲ್ಲ ಎಂದು ಘಂಟಾಘೋಷವಾಗಿ ಹೇಳುವ ಸೌಭಾಗ್ಯ ಹೊಸ ಸಂವಿಧಾನದ್ದಾಗಿದೆ ಹಾಗೂ ಈ ಗೌರವಾನ್ವಿತ ಸಭೆಯದಾಗಿದೆ."

ಎಚ್.ಜೆ. ಖಂಡೇಕರ್ ಹೇಳಿದಂತೆ "ಆಡಳಿತದ ಮೇಲಂತಸ್ತು-ಹಂತಗಳಲ್ಲಿ ಅಸ್ಪೃಶ್ಯರಿಗೆ ಪ್ರಾತಿನಿಧ್ಯ ನೀಡದಿರುವುದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಒಟ್ಟು ಜನಸಂಖ್ಯೆಯಲ್ಲಿ ಶೇ.25ರಷ್ಟು ಅಸ್ಪೃಶ್ಯರಿರುವ ಪ್ರಾಂತ್ಯಗಳಲ್ಲೂ ಅನೇಕ ವೇಳೆ ಒಬ್ಬನೇ ಒಬ್ಬ ಪರಿಜನ ಮಂತ್ರಿ ಇರುತ್ತಿದ್ದ. ಶೇ. ಎರಡರಷ್ಟಿರುವ ಬ್ರಾಹ್ಮಣರಿಗೆ ಸಂಪುಟದ ಮೂರನೇ ಎರಡು ಭಾಗದಷ್ಟು ಸ್ಥಾನಗಳು ಲಭಿಸುತ್ತಿದ್ದವು. ಅಸ್ಪೃಶ್ಯರಿಗೆ ಮೀಸಲಾತಿ ಸೌಲಭ್ಯ ನೀಡಲು ಕಾಂಗ್ರೆಸ್ ಬಹಿರಂಗವಾಗಿ ಬದ್ಧವಾಗಿದ್ದರೂ ಅಲ್ಲಿಯೂ ಮಹಾತ್ಮಗಾಂಧಿ ಮತ್ತು ಮೇಲ್ಜಾತಿಯ ಶೇ ಹತ್ತಿಪ್ಪತ್ತು ಮಂದಿ ಹೊರತಾಗಿ ನಿಜವಾದ ಅರ್ಥದಲ್ಲಿ ಹರಿಜನೋದ್ಧಾರ ಕುರಿತು ಚಿಂತಿಸುವವರಿಲ್ಲ" ಎಂದು ಖಂಡೇಕರ್ ಈ ಸಂದರ್ಭದಲ್ಲಿ ಬಿಚ್ಚು ಮಾತುಗಳನ್ನಾಡಿದ್ದರು.

ಈ ಸದಸ್ಯರು, ಸರ್ಕಾರಿ ಇಲಾಖೆಗಳಲ್ಲಿ ಹರಿಜನರಿಗೆ ಹುದ್ದೆಗಳನ್ನು ಮೀಸಲಿಡಬೇಕೆಂಬ ಸಂವಿಧಾನದ ಆಶಯವನ್ನು ಹೃತ್ಪೂರ್ವಕ ಮಾತುಗಳಿಂದ ಸ್ವಾಗತಿಸಿದರು. ಅವರು ತಮ್ಮ ಭಾಷಣದಲ್ಲಿ ಐ.ಸಿ. ಎಸ್ ಗೆ ಪರ್ಯಾಯವಾಗಿ ಬಂದಿದ್ದ ಐ.ಎ.ಎಸ್. ನೇಮಕಾತಿಯನ್ನು ಪ್ರಸ್ತಾಪಿಸಿದರು. ಐ.ಎ.ಎಸ್ ನೇಮಕಾತಿ ಪ್ರಕ್ರಿಯೆಯಲ್ಲಿ ಅನೇಕ ಮಂದಿ ಹರಿಜನ ಅಭ್ಯರ್ಥಿಗಳನ್ನು ಸಂದರ್ಶಿಸಲಾಯಿತು. ಆದರೆ ಸಂದರ್ಶನದಲ್ಲಿ, ಅವರು ಗಳಿಸಿರುವ ಅಂಕಗಳು, ಅವರ ದರ್ಜೆ ಕಡಿಮೆ ಎಂದು ಅವರನ್ನು ತಿರಸ್ಕರಿಸಲಾಯಿತು. ಖಂಡೇಕರ್ ಅವರು ಸಭೆಯಲ್ಲಿನ ಮೇಲ್ಜಾತಿಯ ಸದಸ್ಯರನ್ನುದ್ದೇಶಿಸಿ ಹೀಗೆ ಹೇಳಿದರು:

> "ನಾವು ಅನರ್ಹರಾಗಿರಲು ನೀವೇ ಜವಾಬ್ದಾರರು. ಸಾವಿರಾರು ವರ್ಷಗಳಿಂದ ನಮ್ಮ ತುಳಿಯಲಾಯಿತು. ನೀವು ನಿಮ್ಮ ಉದ್ಧಾರಕ್ಕಾಗಿಯೇ ನಿಮ್ಮ ಸೇವೆಯನ್ನು-ಉದ್ಯೋಗವನ್ನು ಬಳಸಿಕೊಂಡಿರಿ. ಹಾಗೂ ನಮ್ಮ ಮನಸ್ಸು, ದೇಹ, ಹೃದಯಗಳು ನಿಷ್ಕ್ರಿಯವಾಗುವ ಮಟ್ಟಿಗೆ, ನಾವು ಮುಂದುವರಿಯಲಾಗದಷ್ಟು ಮಟ್ಟಿಗೆ ನಮ್ಮನ್ನು ನಿಗ್ರಹಿಸಿದಿರಿ. ನಮ್ಮನ್ನು ಇಂಥ ಸ್ಥಿತಿಗೆ ದೂಡಿ, ಈಗ ನಾವು ಅಸಮರ್ಥರು, ಅನರ್ಹರು, ಸಾಕಷ್ಟು ಅಂಕಗಳನ್ನು ಗಳಿಸಿಲ್ಲ ಎಂದು ಹೇಳುತ್ತಿದ್ದೀರಿ. ನಾವು ಅರ್ಹತೆಯನ್ನು ಗಳಿಸುವುದಾದರೂ ಹೇಗೆ?"

ಈ ವಾದ ಅಲ್ಲಗಳೆಯಲಾಗದಷ್ಟು ಕಹಿಯಾದ ಸತ್ಯವಾಗಿತ್ತು. ಆದರೆ ಕೆಲವು ಸದಸ್ಯರು ಮೀಸಲಾತಿ ವಿಧಿಗಳ ದುರುಪಯೋಗದ ಬಗ್ಗೆ ಎಚ್ಚರಿಕೆಯ ಮಾತುಗಳನ್ನಾಡಿದರು. "ಸ್ಥಾನಗಳಿಗಾಗಿ, ಮೀಸಲಾತಿಗಾಗಿ ಹಾತೊರೆಯುತ್ತಿರುವ ಈ ಮಂದಿ, ಕೈ ಬೆರಳೆಣಿಕೆಯಷ್ಟಿದ್ದು ಇವರು ಹರಿಜನ ಸಮುದಾಯದ ಕೆನೆವರ್ಗಕ್ಕೆ ಸೇರಿದವರೆಂಬುದು" ಒಬ್ಬ ಸದಸ್ಯರ ಅನ್ನಿಸಿಕೆಯಾಗಿತ್ತು. ಈ ಕೆನೆವರ್ಗದ ಗುಂಪುಗಳಲ್ಲಿ ಇವರೆಲ್ಲ ರಾಜಕೀಯವಾಗಿ ಪ್ರಬಲರೆಂಬ ಮಾತೂ ಕೇಳಿಬಂತು. ವಾಮಪಂಥೀಯ ಕಾಂಗ್ರೆಸ್ ನಾಯಕ ಮಹಾವೀರ ತ್ಯಾಗಿಯವರು ಮೀಸಲಾತಿ ನಿಜವಾದ ಪ್ರಾತಿನಿಧ್ಯಕ್ಕೆಡೆಮಾಡಿಕೊಡುವುದಿಲ್ಲವೆಂದು ಅಭಿಪ್ರಾಯಪಟ್ಟರು. "ಯಾವ ಜಾತಿಯೂ ಮೀಸಲಾತಿಯಿಂದ ಯಾವತ್ತೂ ಯಾವ ಲಾಭವನ್ನೂ, ಪ್ರಯೋಜನವನ್ನೂ ಪಡೆಯುವುದಿಲ್ಲ. ಲಾಭಹೊಂದುವವರು ವ್ಯಕ್ತಿಗಳು ಅಥವಾ ಕುಟುಂಬಗಳು. ಜಾತಿ ಆಧಾರಿತ ಮೀಸಲಾತಿ ಬದಲು ವರ್ಗ ಆಧಾರಿತ ಮೀಸಲಾತಿ ಉತ್ತಮವಾದೀತು. ಆಗ ಚಮ್ಮಾರರು, ಬೆಸ್ತರು ಇಂಥ ವರ್ಗಕ್ಕೆ ಸೇರಿದವರಿಗೆ ಮೀಸಲಾತಿ ಮೂಲಕ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವುದು ಸಾಧ್ಯವಾದೀತು. ಏಕೆಂದರೆ ನಿಜವಾಗಿ ಯಾವ ರೀತಿಯ ಪ್ರಾತಿನಿಧ್ಯವನ್ನೂ ಪಡೆಯದ ಜನರೆಂದರೆ ಇವರೇ" ಎಂದು ತ್ಯಾಗಿಯವರು ಹೇಳಿದ್ದರು.

VIII

1947ರ ಅಂತ್ಯದಲ್ಲಿ ಬಹಿರಂಗಗೊಂಡ ಅಲ್ಪಸಂಖ್ಯಾತರ ಹಕ್ಕುಗಳನ್ನು ಕುರಿತ ವರದಿಯಲ್ಲಿ ಅಸ್ಪೃಶ್ಯರಿಗೆ ಮಾತ್ರ ಮೀಸಲಾತಿಯನ್ನು ಒದಗಿಸಲಾಗಿತ್ತು. ಮುಸ್ಲಿಮರಿಗೆ ಈ ಹಕ್ಕನ್ನು ನಿರಾಕರಿಸಲಾಗಿತ್ತು. ಆಗಿನ ಸಂದರ್ಭದಲ್ಲಿ ಅದು ನಿರೀಕ್ಷಿತವೇ ಆಗಿತ್ತು. ಆದರೆ, ಸಂವಿಧಾನ ರಚನಾ ಸಭೆಯ ಒಬ್ಬ ಸದಸ್ಯರು, "ಮೀಸಲಾತಿಗೆ ಅತ್ಯಂತ ಯೋಗ್ಯವಾದ ಆದಿವಾಸಿಗಳನ್ನು ಸಂಪೂರ್ಣವಾಗಿ ಕೈ ಬಿಡಲಾಗಿದೆಯೆಂದು" ವಿಷಾದಪೂರ್ವಕವಾಗಿ ನುಡಿದರು.

ಹೀಗೆ ವಿಷಾದ ವ್ಯಕ್ತಪಡಿಸಿದ ಸದಸ್ಯರು, ಜೈಪಾಲ್. ಈತ ದಕ್ಷಿಣ ಬಿಹಾರಿನ ಛೋಟಾ ನಾಗ್ಪುರದ 'ಮುಂಡಾ' ಸಮುದಾಯಕ್ಕೆ ಸೇರಿದವರು. ಅರಣ್ಯ ನಿಬಿಡವಾದ ಛೋಟಾ ನಾಗ್ಪುರ, ಹಿಂದೂ ಸಮುದಾಯಕ್ಕೆ ತೀರಾ ವಿಭಿನ್ನರಾದ ಅಸಂಖ್ಯಾತ ಗುಡ್ಡಗಾಡು ಜನರ ವಾಸಸ್ಥಳವಾಗಿತ್ತು. ಕ್ರಿಶ್ಚಿಯನ್ ಧರ್ಮ ಪ್ರಚಾರಕರು ಜೈಪಾಲ್ ಅವರನ್ನು ಉನ್ನತ ಅಧ್ಯಯನಕ್ಕಾಗಿ ಆಕ್ಸ್‌ಫರ್ಡಿಗೆ ಕಳುಹಿಸಿಕೊಟ್ಟಿದ್ದರು. ಆದರೆ ಜೈಪಾಲ್ ರೂಪುಗೊಂಡಿದ್ದು ಅತ್ಯುತ್ತಮ ಹಾಕಿ ಆಟಗಾರರಾಗಿ. ಈತ ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳನ್ನು ಪ್ರತಿನಿಧಿಸುವ ಹಾಕಿ ಆಟಗಾರನಾಗಿ ಮಾನ್ಯತೆ ಪಡೆದು 1928ರ ಒಲಿಂಪಿಕ್ ಕ್ರೀಡೆಗಳಲ್ಲಿ ಭಾರತಕ್ಕೆ ಚಿನ್ನದ ಪದಕ ತಂದು ಕೊಟ್ಟವರು.

ಭಾರತಕ್ಕೆ ವಾಪಸಾದ ನಂತರ ಜೈಪಾಲ್ ತನ್ನನ್ನು ಉನ್ನತ ಅಧ್ಯಯನಕ್ಕೆ ಕಳುಹಿಸಿಕೊಟ್ಟಿದ್ದವರ ನಿರೀಕ್ಷೆಯಂತೆ ಕ್ರೈಸ್ತ ಸುವಾರ್ತೆ ಬೋಧಕನಾಗಲಿಲ್ಲ. ಪ್ರತಿಯಾಗಿ ತನ್ನದೇ ಆದ ಸುವಾರ್ತೆಯನ್ನು ಬೋಧಿಸಲು ಶುರುಮಾಡಿದರು. ಗುಡ್ಡಗಾಡು ಜನರೇ ಉಪಖಂಡದ ಮೂಲ ನಿವಾಸಿಗಳೆಂಬುದು ಈತ ಕಂಡುಹಿಡಿದ ಸುವಾರ್ತೆಯಾಗಿತ್ತು. ಹೀಗಾಗಿಯೇ ಅವರನ್ನು 'ಆದಿವಾಸಿ' ಎಂದು ಕರೆಯಲಾಗುತ್ತಿತ್ತು ಎಂಬುದು ಜೈಪಾಲ್ ಸಮರ್ಥನೆ. ಜೈಪಾಲ್ 1938ರಲ್ಲೇ ಆದಿವಾಸಿಗಳ ಮಹಾಸಭೆ ಸ್ಥಾಪಿಸಿದರು. ಬಿಹಾರ್‌ನಿಂದ ಪ್ರತ್ಯೇಕಗೊಂಡ ಜಾರ್ಖಂಡ್ ರಾಜ್ಯ ರಚನೆ ಈ ಸಂಘಟನೆಯ ಮುಖ್ಯ ಬೇಡಿಕೆಯಾಗಿತ್ತು. ಛೋಟಾ ನಾಗ್ಪುರದ ಗುಡ್ಡಗಾಡು ಜನರಿಗೆ ಜೈಪಾಲ್ ಮಹಾನಾಯಕರಾಗಿದ್ದರು. ಸಂವಿಧಾನ ರಚನಾ ಸಭೆಯಲ್ಲಿ ಜೈಪಾಲ್ ಕೇವಲ ತನ್ನ ಪ್ರದೇಶದ ಗುಡ್ಡಗಾಡು ನಿವಾಸಿಗಳ ಪ್ರತಿನಿಧಿಯಾಗಿರಲಿಲ್ಲ, ಅವರು ಅಖಿಲ ಭಾರತ ಗುಡ್ಡಗಾಡು ಜನರ ಪ್ರತಿನಿಧಿಯಾಗಿದ್ದರು.

ಜೈಪಾಲ್ ಹುಟ್ಟು ವಾಗ್ಮಿಯಾಗಿದ್ದರು. ತಮ್ಮ ವಾಙ್ಮಯ ಕಲೆಯಿಂದ ಸಂವಿಧಾನದ ರಚನಾ ಸಭೆಯಲ್ಲಿ ವಿದ್ಯುತ್ ಸಂಚಾರ ಮಾಡಿದವರು. ಜೈಪಾಲ್ ಆಸಕ್ತಿ ರಾಜಕೀಯದತ್ತ ವಾಲಿತು. ಹೀಗಾಗಿ ಚರ್ಚಿಗಾದ ನಷ್ಟ ರಾಜಕೀಯಕ್ಕೆ ಆದ ಲಾಭವಾಗಿತ್ತು. 1946ರ ಡಿಸೆಂಬರ್ 19ರಂದು ಜೈಪಾಲ್ ಸಂವಿಧಾನ ರಚನಾ ಸಭೆಯಲ್ಲಿ ಮೊಟ್ಟ ಮೊದಲಿಗೆ ಮಾತನಾಡಿದರು. ಇದು ಸಂವಿಧಾನದ ಧ್ಯೇಯೋದ್ದೇಶಗಳ ನಿರ್ಣಯವನ್ನು ಸ್ವಾಗತಿಸಿ ಮಾಡಿದ ಭಾಷಣವಾಗಿತ್ತು. ಈ ಭಾಷಣದಲ್ಲಿ ಅವರು ಆದಿವಾಸಿಗಳ ಜೀವನವನ್ನು ಅತ್ಯಂತ ಸಮರ್ಥವಾಗಿ ಒಟ್ಟಾರೆಯಾಗಿ ಮಂಡಿಸಿದ್ದರು. "ಒಬ್ಬ ಜಂಗ್ಲೀಯಾಗಿ, ಒಬ್ಬ ಆದಿವಾಸಿಯಾಗಿ" ಎಂದು ಅವರು ತಮ್ಮ ಭಾಷಣದಲ್ಲಿ ಆದಿವಾಸಿಗಳ ಜೀವನವನ್ನು ಒಂದು ಪರಿಣಾಮಕಾರಿ ರೂಪಕವಾಗಿ ಚಿತ್ರಿಸಿದ್ದರು:

> *"ನಿರ್ಣಯಕ್ಕೆ ಸಂಬಂಧಿಸಿದ ಕಾನೂನಿನ ಜಟಿಲತೆಗಳನ್ನು ಅರ್ಥ ಮಾಡಿಕೊಳ್ಳುವಂತೆ ನನ್ನಿಂದ ನಿರೀಕ್ಷಿಸಲಾಗದು. ಕಾನೂನು ನನಗೆ ತಿಳಿಯದು. ಆದರೆ, ನಾವೆಲ್ಲ ಸ್ವಾತಂತ್ರ್ಯದ ಮಾರ್ಗದಲ್ಲಿ ಮುನ್ನಡೆಯಬೇಕೆಂದು ಹಾಗೂ ಒಟ್ಟಾಗಿ ಹೋರಾಡಬೇಕೆಂದು ನನ್ನ ಸಾಮಾನ್ಯ ಜ್ಞಾನ ಹೇಳುತ್ತದೆ. ಸ್ವಾಮಿ, ಭಾರತೀಯ ಸಮುದಾಯಗಳಲ್ಲಿ ಅತ್ಯಂತ ಕೆಟ್ಟದಾಗಿ ನಡೆಸಿಕೊಂಡ ಸಮುದಾಯವಿದ್ದರೆ ಅದು ನನ್ನ ಜನರು. ಅವರನ್ನು ಅಪಮಾನಕರವಾಗಿ ನಡೆಸಿಕೊಳ್ಳಲಾಗಿದೆ, ಕಳೆದ 600 ವರ್ಷಗಳಿಂದ ಅವರನ್ನು ಕಡೆಗಣಿಸಲಾಗಿದೆ. ನಾನು ಬಾಲಕನಾಗಿದ್ದಾಗಿನಿಂದ ಸಿಂಧೂ ಕಣಿವೆ ನಾಗರಿಕತೆಯ ಇತಿಹಾಸದ ಶಿಶು. ಆಗಂತುಕರು ನಮ್ಮ ಜನರನ್ನು ಸಿಂಧೂ ಕಣಿವೆಯಿಂದ ದುರ್ಗಮ ಅರಣ್ಯಕ್ಕೆ ಅಟ್ಟಿದರೆಂದು ಈ ಇತಿಹಾಸ ಸ್ಪಷ್ಟವಾಗಿ ಹೇಳುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಇಲ್ಲಿ ಹಾಜರಿರುವ ನೀವೇ, ನಿಮ್ಮಲ್ಲಿನ ಬಹುತೇಕ ಮಂದಿಯೇ ಅತಿಕ್ರಮಣಕಾರರು. ನನ್ನ ಜನರ ಇಡೀ ಇತಿಹಾಸ ನಿರಂತರ ಶೋಷಣೆ ಮತ್ತು ಉಚ್ಚಾಟನೆಗಳಿಂದ ಕೂಡಿದೆ. ನನ್ನ ಜನ*

ಮೂಲನಿವಾಸಿಗಳಲ್ಲದ ಭಾರತೀಯರಿಂದ, ಬಂಡಾಯಗಳಿಂದ, ಅವ್ಯವಸ್ಥೆಗಳಿಂದ ನಿರಂತರವಾಗಿ ಶೋಷಣೆಗೊಳಗಾದವರು, ಉಚ್ಚಾಟಿಸಲ್ಪಟ್ಟವರು. ಆದಾಗ್ಯೂ ನನಗೆ ಪಂಡಿತ ಜವಹರಲಾಲ್ ನೆಹರೂ ಅವರ ಮಾತಿನಲ್ಲಿ ವಿಶ್ವಾಸವಿದೆ. ನಾವು ಹೊಸ ಅಧ್ಯಾಯ ಆರಂಭಿಸುತ್ತಿದ್ದೇವೆ. ಯಾರನ್ನೂ ಕಡೆಗಣಿಸದೆ, ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಸ್ವತಂತ್ರ ಭಾರತದ ಹೊಸ ಅಧ್ಯಾಯವನ್ನು ನಾವು ಪ್ರಾರಂಭಿಸುತ್ತಿದ್ದೇವೆ ಎನ್ನುವ ನಿಮ್ಮ ಮಾತನ್ನು ನಾನು ನಂಬುತ್ತೇನೆ.”

ಇದಾದ ಮೂರು ವರ್ಷಗಳ ನಂತರ ಕರಡು ಸಂವಿಧಾನದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಜೈಪಾಲ್ ಮಾತನಾಡಿದರು. ಅವರ ಭಾಷಣ ಅಮಲೇರಿಸುವಷ್ಟು ತೀಕ್ಷ್ಣವಾಗಿತ್ತು. ಗಾಂಧಿವಾದಿಗಳ ಒತ್ತಡಕ್ಕೆ ಮಣಿದು ಪಾನನಿಷೇಧವನ್ನು ನಿರ್ದೇಶನ ಸೂತ್ರಗಳಲ್ಲಿ ಸೇರಿಸಲಾಗಿತ್ತು. ಪಾನನಿಷೇಧದಿಂದ 'ಈ ರಾಷ್ಟ್ರದ ಅತಿಪುರಾತನ ಜನರ ಧಾರ್ಮಿಕ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ' ಎಂದು ಈ ಆದಿವಾಸಿ ನಾಯಕರು ಆಕ್ಷೇಪವೆತ್ತಿದರು. “ಏಕೆಂದರೆ, ಮದ್ಯಪಾನ ಆದಿವಾಸಿಗಳ ಹಬ್ಬ ಹರಿದಿನ, ಉತ್ಸವ, ಆಚರಣೆಗಳು, ಇವೆಲ್ಲದರ ಒಂದು ಭಾಗವಾಗಿತ್ತು. ಅಷ್ಟೇಕೆ ವಾಸ್ತವವಾಗಿ ಮದ್ಯಪಾನ ಅವರ ನಿತ್ಯ ಜೀವನದ ಒಂದು ಕ್ರಮ. ಪಶ್ಚಿಮ ಬಂಗಾಳದಲ್ಲಿ ಸಂತಾಲರಿಗೆ ಅಕ್ಕಿಯಿಂದ ತಯಾರಿಸಿದ ಬಿಯರ್ ಸೇವಿಸದೆ ಭತ್ತ ನಾಟಿ ಮಾಡುವುದು ಅಸಾಧ್ಯದ ಕೆಲಸ. ಮೈ ಮುಚ್ಚುವಷ್ಟು ಬಟ್ಟೆ ಇಲ್ಲದೆ, ಮಳೆಯಲ್ಲಿ, ಮೊಣಕಾಲುದ್ದದ ನೀರಿನಲ್ಲಿ, ಕೆಸರುಗದ್ದೆಯಲ್ಲಿ ದುಡಿಯುವ ಮಂದಿ ಈ ಸಂತಾಲರು. ಈ ಜನರಲ್ಲಿ, ಉತ್ಸಾಹ-ಹುಮ್ಮಸ್ಸು ಶಕ್ತಿಗಳನ್ನು ತುಂಬುವಂಥಾದ್ದೇನಿದೆ ಅಕ್ಕಿ ಬಿಯರ್‌ನಲ್ಲಿ? ಅಕ್ಕಿ ಬಿಯರ್‌ನಲ್ಲಿ ಏನಿದೆ ಎಂಬುದನ್ನು ಕಂಡುಹಿಡಿಯಲು ವೈದ್ಯಕೀಯ ಅಧಿಕಾರಿಗಳು ತಮ್ಮ ಪ್ರಯೋಗಾಲಗಳಲ್ಲಿ ಸಂಶೋಧನೆ ನಡೆಸಬೇಕೆಂದು ನನ್ನ ಇಚ್ಛೆ. ಆದಿವಾಸಿಗಳಿಗೆ ಇದು ಇಷ್ಟೊಂದು ಅನಿವಾರ್ಯವೆ? ಆದಿವಾಸಿಗಳಿಗೆ ಅತ್ಯಗತ್ಯವೆನಿಸುವಂಥಾದ್ದು, ಅವರನ್ನು ಎಲ್ಲ ರೋಗರುಜಿನಗಳಿಂದ ರಕ್ಷಿಸುವಂಥಾದ್ದು ಏನಿದೆ ಅದರಲ್ಲಿ ಎಂಬುದನ್ನು ಸಂಶೋಧನೆ ಪತ್ತೆ ಹಚ್ಚಬೇಕು” ಇದು ಜೈಪಾಲರ ಕಳಕಳಿ.

ಸಂವಿಧಾನ ರಚನಾ ಸಭೆ, ಗುಡ್ಡಗಾಡು ಜನರ ಹಕ್ಕುಗಳ ಅಧ್ಯಯನಕ್ಕಾಗಿ ಹಿರಿಯ ಸಮಾಜ ಸೇವಕ ಎ.ವಿ. ಠಕ್ಕರ್ ಅಧ್ಯಕ್ಷತೆಯಲ್ಲಿ ಉಪಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯ ವರದಿ ಹಾಗೂ ಜೈಪಾಲ್ ಸಂಗಡಿಗರ ಮಾತುಗಳು ಗುಡ್ಡಗಾಡು ಜನರ ದುಃಸ್ಥಿತಿಯ ಬಗ್ಗೆ ಸಭೆಯಲ್ಲಿ ತೀವ್ರ ಸಂವೇದನೆಗೆಡೆಮಾಡಿಕೊಟ್ಟವು. “ಗುಡ್ಡಗಾಡು ಜನರನ್ನು ಪ್ರಾಂತೀಯ ರಾಜಕೀಯ ಚದುರಂಗದ ಕೈಗೊಂಬೆಗಳನ್ನಾಗಿ ಮಾಡಲಾಗಿದೆ” ಎಂದು ಬಿಹಾರಿನ ಸದಸ್ಯರೊಬ್ಬರು ಅಭಿಪ್ರಾಯಪಟ್ಟರು. “ಭಾರಿ ಪ್ರಮಾಣದಲ್ಲಿ ಶೋಷಣೆ ನಡೆದಿದೆ. ನಾವು ನಾಚಿಕೆಯಿಂದ ತಲೆತಗ್ಗಿಸಬೇಕು. ನಾವು ಹಿಂದೂ ಸಮಾಜ ಏಕತ್ವದಿಂದ ಕೂಡಿದೆ ಎಂದು ಹೇಳುತ್ತೇವೆ. ಆದಿವಾಸಿಗಳನ್ನು ಶೋಷಿಸುವ ಮೂಲಕ, ಕಡೆಗಣಿಸುವ ಮೂಲಕ ಹಿಂದೂ ಸಮಾಜ ಆದಿವಾಸಿಗಳ ಮೇಲೆ ಹೇಯ ಪಾತಕವನ್ನೆಸಗಿದೆ. ಅವರಿಗೆ

ಆಧುನಿಕ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಕಿಂಚಿತ್ತಿನಷ್ಟೂ ಮಾಡಿಲ್ಲ. ಅವರ ಭೂಮಿ, ಅರಣ್ಯಗಳಲ್ಲಿ ಹಿಂದೂ ಸಮಾಜ ತನ್ನ ವಸಾಹತು ಸ್ಥಾಪಿಸಿದೆ; ಅವರನ್ನು ಬಡ್ಡಿ ತೆರುವ ಸಾಲಗಾರರನ್ನಾಗಿ ಮಾಡಿದೆ. ಆದ್ದರಿಂದ, ಭಾಗಶಃ ತಪ್ಪು ತಿದ್ದಿಕೊಳ್ಳುವ ಕ್ರಮವಾಗಿಯಾದರೂ ಆದಿವಾಸಿಗಳಿಗೆ ಶಾಸನಸಭೆಗಳಲ್ಲಿ ಸ್ಥಾನಗಳನ್ನು ಮೀಸಲಿಡಬೇಕು, ಸರ್ಕಾರಿ ಇಲಾಖೆಗಳಲ್ಲಿ ಅವರಿಗಾಗಿ ಹುದ್ದೆಗಳನ್ನು ಮೀಸಲಿಡಬೇಕು" ಎಂದು ಬಿಹಾರಿನ ಸದಸ್ಯರು ಮಾರ್ಮಿಕವಾಗಿ ಮಾತನಾಡಿದ್ದರು.

IX

ಸಂವಿಧಾನ ರಚನಾ ಸಭೆಯಲ್ಲಿ ತುಂಬಾ ವಿವಾದಾತ್ಮಕ ವಿಷಯವಾದದ್ದು ಭಾಷೆ. ಸಭೆಯಲ್ಲಿ ಆಡಬೇಕಾದ ಭಾಷೆ ಯಾವುದು? ಸಂವಿಧಾನವನ್ನು ಯಾವ ಭಾಷೆಯಲ್ಲಿ ಬರೆಯಬೇಕು? ರಾಷ್ಟ್ರೀಯತೆಯ ಅದ್ವಿತೀಯ ಅಂಕಿತ ನೀಡುವ ಭಾಷೆ ಯಾವುದಾಗಬೇಕು? 1946ರ ಡಿಸೆಂಬರ್ 10ರಂದು ಸಭೆಯ ಕಾರ್ಯವಿಧಾನ, ನಡಾವಳಿ ಕುರಿತು ಚರ್ಚೆ ನಡೆಯುತ್ತಿದ್ದಾಗಲೇ ಯುನೈಟೆಡ್ ಪ್ರಾವಿನ್ಸ್‌ನ ಆರ್.ವಿ. ಧೂಲೇಕರ್ ತಿದ್ದುಪಡಿಯೊಂದನ್ನು ಸೂಚಿಸಿದರು. ಅವರು ಸೂಚನೆ ಕುರಿತು ಹಿಂದೂಸ್ತಾನಿಯಲ್ಲಿ ಮಾತನಾಡಲಾರಂಭಿಸಿದಾಗ, ಸಭೆಯ ಅನೇಕ ಸದಸ್ಯರಿಗೆ ಆ ಭಾಷೆ ಅರ್ಥವಾಗದೆಂದು ಸಭಾಧ್ಯಕ್ಷರು ನೆನಪಿಸಿದರು. ಇದಕ್ಕೆ ಧೂಲೇಕರ್ ನೀಡಿದ ಉತ್ತರ:

> *"ಹಿಂದೂಸ್ತಾನಿ ಗೊತ್ತಿಲ್ಲದ ಜನರಿಗೆ ಭಾರತದಲ್ಲಿ ಉಳಿಯುವ ಹಕ್ಕಿಲ್ಲ. ಭಾರತದ ಸಂವಿಧಾನ ರಚಿಸಲು ಇಲ್ಲಿ ಸೇರಿರುವ ಜನರಿಗೆ ಹಿಂದೂಸ್ತಾನಿ ಗೊತ್ತಿಲ್ಲವೆಂದರೆ ಅವರು ಈ ಅಸೆಂಬ್ಲಿಯ ಸದಸ್ಯರಾಗಲು ಯೋಗ್ಯರಲ್ಲ. ಅವರು ಹೊರಕ್ಕೆ ಹೋಗುವುದು ಉಚಿತ."*

–ಈ ಮಾತುಗಳು ಸಭೆಯಲ್ಲಿ ಕೋಲಾಹಲವುಂಟು ಮಾಡಿದವು. ಸಭಾಧ್ಯಕ್ಷರು ಶಾಂತಿಗಾಗಿ ಮನವಿ ಮಾಡುತ್ತಲೇ ಇದ್ದರು, ಆದರೆ ಧೂಲೇಕರ್ ಮಾತು ಮುಂದುವರಿಸಿದರು:

> *"ಕಾರ್ಯ ವಿಧಾನ ಕುರಿತ ನಡಾವಳಿ ಸಮಿತಿ ಹಿಂದೂಸ್ತಾನಿಯಲ್ಲಿ ನಿಯಮಗಳನ್ನು ರೂಪಿಸಬೇಕು, ಇಂಗ್ಲಿಷ್‌ನಲ್ಲಲ್ಲ ಎಂದು ಮನವಿ ಮಾಡುತ್ತೇನೆ. ನಾವು ಸ್ವಾತಂತ್ರ್ಯದ ಹೊಸ್ತಿಲಲ್ಲಿ ನಿಂತಿರುವವರು. ಅದಕ್ಕಾಗಿ ಹೋರಾಟ ನಡೆಸುತ್ತಿರುವವರು, ನಮ್ಮ ಸ್ವಂತ ಭಾಷೆಯಲ್ಲಿ ಯೋಚಿಸಬೇಕು, ಮಾತನಾಡಬೇಕು. ನಾವು ಉದ್ದಕ್ಕೂ ಅಮೆರಿಕ, ಜಪಾನ್, ಜರ್ಮನಿ, ಸ್ವಿಟ್ಸರ್ಲೆಂಡ್, ಹೌಸ್ ಆಫ್ ಕಾಮನ್ಸ್ ಬಗ್ಗೆ ಮಾತಾಡಿಕೊಂಡು ಬಂದಿದ್ದೇವೆ. ಇದನ್ನು ಕೇಳಿ ನನಗೆ ತಲೆನೋವು ಬಂದಿದೆ. ಭಾರತೀಯರು ತಮ್ಮದೇ ಭಾಷೆಯಲ್ಲಿ ಏಕೆ ಮಾತನಾಡಬಾರದು? ಈ ಸಭೆಯ ಕಾರ್ಯಕಲಾಪಗಳು ಹಿಂದೂಸ್ತಾನಿ ಭಾಷೆಯಲ್ಲೇ ನಡೆಯಬೇಕೆಂಬುದು ನನ್ನ*

ಅನ್ನಿಸಿಕೆಯಾಗಿದೆ. ವಿಶ್ವದ ಇತಿಹಾಸ ನಮಗೆ ಸಂಬಂಧಿಸಿದ್ದಲ್ಲ. ನಮಗೆ, ನಮ್ಮದೇ ಆದ, ನಮ್ಮ ದೇಶದ್ದೇ ಆದ ಲಕ್ಷಾಂತರ ವರ್ಷಗಳ ಇತಿಹಾಸವಿದೆ."

–ಅಂದಿನ ಸಭೆಯ ಕಲಾಪಗಳ ಮುದ್ರಿತ ಪಾಠ ಹೀಗಿದೆ:

ಸಭಾಧ್ಯಕ್ಷರು: ಶಾಂತಿ...ಶಾಂತಿ...

ಶ್ರೀ ವಿ.ಆರ್. ಧೂಲೇಕರ್: (ಇನ್ನೂ ಹಿಂದುಸ್ತಾನಿಯಲ್ಲೇ ಮಾತನಾಡುತ್ತಾ) ತಿದ್ದುಪಡಿಯೊಂದನ್ನು ಮಂಡಿಸಲು ಅನುಮತಿಸುವಂತೆ ನಾನು ನಿಮ್ಮಲ್ಲಿ ಕೋರುತ್ತಿದ್ದೇನೆ.

ಸಭಾಧ್ಯಕ್ಷರು: ಶಾಂ...ಶಾಂತಿ! ಮಾತು ಮುಂದುವರಿಸಲು ನಾನು ನಿಮಗೆ ಬಿಡುವುದಿಲ್ಲ. ನಿಮ್ಮ ವರ್ತನೆ ಕ್ರಮಬದ್ಧವಾಗಿಲ್ಲ. ಈ ಸದನ ನನ್ನೊಂದಿಗಿದೆ.

ಈ ಹಂತದಲ್ಲಿ ಜವಹರಲಾಲ್ ನೆಹರೂ ಸಭಾಧ್ಯಕ್ಷರ ಪೀಠದ ಬಳಿಗೆ ಹೋಗಿ ಸ್ವಸ್ಥಾನಕ್ಕೆ ಮರಳುವಂತೆ ಧೂಲೇಕರ್ ಅವರ ಮನ ಒಲಿಸಿದರು. ಆನಂತರ ನೆಹರೂ ಅವರು ಸಭೆಯಲ್ಲಿ ಶಿಸ್ತುಪಾಲನೆ ಅಗತ್ಯವೆಂದು ಈ ಪುಂಡು ಸದಸ್ಯರಿಗೆ ಕಿವಿಮಾತು ಹೇಳಿದರು. 'ಸೋದರ, ಸೋದರಿಯರೇ ಎಂದು ನಿಮ್ಮ ಧ್ವನಿ ಏರಿಸಿ ಮಾತನಾಡಲು ಇದು ಝಾನ್ಸಿಯ ಸಾರ್ವಜನಿಕ ಸಭೆಯಲ್ಲ' ಎಂದು ಬುದ್ಧಿ ಹೇಳಿದರು.

ವಿಷಯ ಇಲ್ಲಿಗೇ ಮುಗಿಯಲಿಲ್ಲ. ಕಾರಿನ ಮೇಲಿನ ನಂಬರುಗಳನ್ನು ಹಿಂದಿ ಅಂಕಿಯಲ್ಲಿ ನಮೂದಿಸುವಂತೆ ಕಾನೂನು ಮಾಡಲು ದೆಹಲಿ ಸರ್ಕಾರಕ್ಕೆ ಆದೇಶ ನೀಡುವಂತೆ ಒಂದು ಸಮಾವೇಶದಲ್ಲಿ ಆಗ್ರಹಪಡಿಸಲಾಯಿತು. ಸಂವಿಧಾನದ ಅಧಿಕೃತ ಭಾಷಾಂತರ ಹಿಂದಿಯಲ್ಲಿರಬೇಕೆಂದೂ ಇಂಗ್ಲಿಷ್‌ನಲ್ಲಿ ಅನಧಿಕೃತ ಸಂವಿಧಾನ ಇರಬಹುದೆಂದೂ ಸದನದಲ್ಲಿ ಹೆಚ್ಚು ದೃಢವಾಗಿ ಕೇಳಿಬಂದ ಮಾತು. ಕರಡು ರಚನಾ ಸಮಿತಿ ಇದಕ್ಕೆ ಒಪ್ಪಲಿಲ್ಲ. ಸಂವಿಧಾನದ ಕಾನೂನು ಮತ್ತು ತಾಂತ್ರಿಕ ಪಾರಿಭಾಷಿಕ ಪದಗಳ ಬಳಕೆಯಲ್ಲಿ ಇಂಗ್ಲಿಷ್ ಭಾಷೆಯೇ ಉತ್ತಮ ಎಂಬುದು ಸಮಿತಿಯ ವಾದವಾಗಿತ್ತು. ಕರಡು ಸಂವಿಧಾನವನ್ನು ಸಭೆಯ ಮುಂದೆ ಚರ್ಚೆಗೆ ಮಂಡಿಸಿದಾಗ ಅದರ ವಿಧಿಗಳನ್ನು ಹಿಂದಿಯಲ್ಲಿ ಬರೆಯಬೇಕೆಂದು ಸದಸ್ಯರು ಪಟ್ಟು ಹಿಡಿದರು. ಇಂಗ್ಲಿಷ್ ಲಿಖಿತ ಸಂವಿಧಾನವನ್ನು ಅಂಗೀಕರಿಸುವುದು ಅವಮಾನಕರವೆಂದು ಈ ಸದಸ್ಯರು ವಾದಿಸಿದರು.

ಈ ಘಟ್ಟದಲ್ಲಿ 'ಹಿಂದೂಸ್ತಾನಿ' ಮತ್ತು 'ಹಿಂದಿ' ನಡುವಣ ವ್ಯತ್ಯಾಸವನ್ನು ಪರಿಚಯಿಸುವುದು ಅಗತ್ಯ. ದೇವನಾಗರಿ ಲಿಪಿಯಲ್ಲಿ ಬರೆಯಲಾಗುವ ಹಿಂದಿಯಲ್ಲಿ ಸಂಸ್ಕೃತವೇ ಹೆಚ್ಚು. ಸುಧಾರಿತ ಅರಬ್ಬೀ ಲಿಪಿಯಲ್ಲಿ ಬರೆಯುವ ಉರ್ದುವಿನಲ್ಲಿ ಪರ್ಶಿಯನ್ ಮತ್ತು ಅರಾಬಿಕ್ ಶಬ್ದಗಳೇ ಹೆಚ್ಚು. ಹಿಂದೂಸ್ತಾನಿ, ಉತ್ತರ ಭಾರತದಲ್ಲಿ ಸರ್ವಸಾಮಾನ್ಯರ ಭಾಷೆ. ಇಲ್ಲಿನ ಹಿಂದೂಸ್ತಾನಿ ಪರ್ಶಿಯನ್-ಅರಾಬಿಕ್‌ಗಳ ಅಪೂರ್ವ ಸಂಗಮ. ಉತ್ತರ ಭಾರತದಲ್ಲಿ ಹತ್ತೊಂಬತ್ತನೇ ಶತಮಾನದಿಂದ ಹಿಂದೂ-ಮುಸ್ಲಿಂ ಬಿಕ್ಕಟ್ಟು ಹೆಚ್ಚುತ್ತಾ

ಹೋಯಿತು. ಇದರಿಂದಾಗಿ ಹಿಂದಿ ಈ ಎರಡು ಭಾಷೆಗಳಿಂದ ದೂರ ಸರಿಯಲಾರಂಭಿಸಿತು. ಹಿಂದಿ ಹೆಚ್ಚಾಗಿ ಸಂಸ್ಕೃತವನ್ನು ಆಧರಿಸಿರಬೇಕೆಂಬ ಚಳವಳಿಯೇ ಶುರುವಾಯಿತು. ಉರ್ದು ಪ್ರಾಚೀನ ಶಾಸ್ತ್ರೀಯ ಭಾಷೆಗಳನ್ನಾಧರಿಸಬೇಕೆಂದು ಮತ್ತೊಂದು ಗುಂಪು ಚಳವಳಿ ಆರಂಭಿಸಿತು. ವಿಶೇಷವಾಗಿ ಸಾಹಿತ್ಯ ವಲಯಗಳಲ್ಲಿ 'ಶುದ್ಧ ಹಿಂದಿ'-'ಶುದ್ಧ ಉರ್ದು' ಪಸರಿಸತೊಡಗಿತು.

ಇವೆಲ್ಲದರ ಮಧ್ಯೆಯೂ ಜನರ ಆಡುಮಾತಾಗಿ ಹಿಂದೂಸ್ತಾನಿಯೇ ಮುಂದುವರಿಯಿತು. ಇದು ಹಿಂದೂ-ಉರ್ದು ಭಾಷಿಕರಿಗೆ ಮಾತ್ರವಲ್ಲದೇ ಸಿಂಧೂ-ಗಂಗಾ ಬಯಲಿನ ಭಾಷಿಕರಿಗೂ ಗ್ರಾಹ್ಯವಾಗಿತ್ತು. ಸಿಂಧೂ-ಗಂಗಾ ಬಯಲಿನ ಜನರು ಅಲ್ಲಿನ ಪ್ರಮುಖ ಪ್ರಾಂತೀಯ ಭಾಷೆಗಳಾದ ಅವಧಿ, ಭೋಜಪುರಿ, ಮೈಥಿಲಿ, ಮಾರವಾರಿ ಹೀಗೆ ಅನೇಕ ಭಾಷೆಗಳನ್ನು ಮಾತನಾಡುತ್ತಿದ್ದರು. ಇವರಿಗೆಲ್ಲ ಹಿಂದೂಸ್ತಾನಿ ಸುಲಭಗ್ರಾಹ್ಯವಾಗಿತ್ತು. ಆದರೆ ಪೂರ್ವ ಮತ್ತು ದಕ್ಷಿಣ ಭಾರತದಲ್ಲಿನ ಪರಿಸ್ಥಿತಿಯೇ ಬೇರೆಯದಾಗಿತ್ತು. ಇಲ್ಲಿನ ಜನತೆಗೆ ಹಿಂದೂಸ್ತಾನಿ ಮಾತ್ರವಲ್ಲದೆ ಹಿಂದಿ-ಉರ್ದು ಭಾಷೆಗಳೂ ತಿಳಿಯದು. ಅಸ್ಸಾಮಿ, ಬಂಗಾಳಿ, ಕನ್ನಡ, ಮಲೆಯಾಳಂ, ಒರಿಯಾ, ತಮಿಳು, ತೆಲುಗು ಇಲ್ಲಿನ ಜನರ ಭಾಷೆಗಳಾಗಿದ್ದುವು ಈ ಭಾಷೆಗಳು ಸುಧಾರಿತ ಲಿಪಿಗಳನ್ನೊಳಗೊಂಡಿದ್ದವು ಹಾಗೂ ವಿಪುಲ ಸಾಹಿತ್ಯ ಸೃಷ್ಟಿಯೂ ಆಗಿತ್ತು. ಈ ಭಾಷೆಗಳಿಗೆ ಶ್ರೀಮಂತ ಸಾಹಿತ್ಯ ಪರಂಪರೆ ಇತ್ತು.

ಬ್ರಿಟಿಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಉನ್ನತ ಶಿಕ್ಷಣದ ಹಾಗೂ ಆಡಳಿತದ ಭಾಷೆಯಾಯಿತು. ಬ್ರಿಟಿಷರ ನಿರ್ಗಮನದ ನಂತರವೂ ಇಂಗ್ಲಿಷ್ ಈ ಸ್ಥಾನದಲ್ಲಿ ಮುಂಮುವರಿದೀತೆ? ಮುಂದುವರಿಯಬೇಕೆ? ಇಂಗ್ಲಿಷ್ ಸ್ಥಾನದಲ್ಲಿ ಹಿಂದಿಯನ್ನಿರಿಸಬೇಕೆಂದು ಉತ್ತರ ಭಾರತದ ರಾಜಕಾರಣಿಗಳ ಆಲೋಚನೆ. ಇಂಗ್ಲಿಷ್ ಅಂತರರಾಜ್ಯ ಸಂವಹನ-ಸಂಪರ್ಕ ಮಾಧ್ಯಮವಾಗಿ ಮುಂದುವರಿಯಬೇಕೆಂದು ದಕ್ಷಿಣದ ರಾಜಕಾರಣಿಗಳು ಹಾಗೂ ಜನತೆಯ ಅಪೇಕ್ಷೆ.

ಜವಹರಲಾಲ್ ನೆಹರೂ ಅವರೇ ಈ ವಿಷಯದಲ್ಲಿ ಚಿಂತನಾಮಗ್ನರಾಗಿದ್ದರು. 1937ರಲ್ಲಿ ಬರೆದ ಪ್ರಬಂಧವೊಂದರಲ್ಲಿ ಅವರು ಪ್ರಮುಖ ಪ್ರಾಂತೀಯ ಭಾಷೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದುಂಟು. ಅವುಗಳ ಬಳಕೆ, ಪ್ರಭಾವಗಳಿಗೆ ಚ್ಯುತಿಯುಂಟುಮಾಡದೆಯೇ, ಸಂವಹನ-ಸಂಪರ್ಕಗಳಿಗಾಗಿ ಅಖಿಲ ಭಾರತ ಭಾಷೆಯೊಂದರ ಅಗತ್ಯವಿದೆಯೆಂದು ನೆಹರೂ ಅಭಿಪ್ರಾಯಪಟ್ಟಿದ್ದರು. ಇಂಗ್ಲಿಷ್ ಜನಸಾಮಾನ್ಯರಿಂದ ದೂರವಿದ್ದ ಭಾಷೆಯಾಗಿತ್ತು. ಆದ್ದರಿಂದ ನೆಹರೂ ಹಿಂದೂಸ್ತಾನಿಗೆ ಒಲವು ತೋರಿದರು. ಹಿಂದೂಸ್ತಾನಿ, ಹಿಂದಿ-ಉರ್ದುಗಳ ಸುವರ್ಣ ಮಧ್ಯಮ ಮಾರ್ಗವೆಂದು ಅವರು ಅರ್ಥೈಸಿದ್ದರು. ಆ ಕಾಲಕ್ಕೆ, ವಿಭಜನೆಯ ಸಾಧ್ಯತೆ ಕಂಡುಬರದಿದ್ದ ಆ ಕಾಲದಲ್ಲಿ ನೆಹರೂ ಭಾವಿಸಿದ್ದರು. ಆಗ ವಿಭಜನೆ ಸಾಧ್ಯತೆಯ ಕಲ್ಪನೆಯೂ ಇರಲಿಲ್ಲ, ಹಿಂದೂಸ್ತಾನಿಗೆ ಸರಳ ವ್ಯಾಕರಣವಿತ್ತು. ಇದನ್ನು ಸುಲಭವಾಗಿ ಕಲಿಯಬಹುದಿತ್ತು. ಇದನ್ನು ಮತ್ತಷ್ಟು ಸುಲಭಗೊಳಿಸಲು ಪ್ರಾಥಮಿಕ ಹಿಂದೂಸ್ತಾನಿಯೊಂದನ್ನು ರೂಪಿಸಬಹುದಿತ್ತು. ದಕ್ಷಿಣ ಭಾರತದಲ್ಲಿನ ಪ್ರಾಥಮಿಕ ಇಂಗ್ಲಿಷ್‌ನ ಹಾಗೆ.

ಹಿಂದೂಸ್ತಾನಿ, ಉತ್ತರ-ದಕ್ಷಿಣವನ್ನೂ ಹಿಂದೂ-ಮುಸ್ಲಿಮರನ್ನೂ ಒಂದುಗೂಡಿಸ ಬಹುದೆಂದು ನೆಹರೂ ಅವರಂತೆಯೇ ಗಾಂಧೀಜಿಯವರೂ ಭಾವಿಸಿದ್ದರು. ಇಂಗ್ಲಿಷ್ ಬದಲು ಅದನ್ನೇ ರಾಷ್ಟ್ರ ಭಾಷೆಯನ್ನಾಗಿ ಮಾಡಬೇಕು ಎಂಬುದು ಗಾಂಧೀಜಿಯವರ ನಿಲುವಾಗಿತ್ತು. ಅವರು ಹೇಳಿದಂತೆ 'ಉರ್ದು ಪದಗಳನ್ನು ಮುಸ್ಲಿಮರು ಬರವಣಿಗೆಯಲ್ಲಿ ಬಳಸುತ್ತಿದ್ದರು' ಹಾಗೂ 'ಸಂಸ್ಕೃತ ಪಂಡಿತರು ಹಿಂದಿ ಪದಗಳನ್ನು ಬಳಸುತ್ತಿದ್ದರು'. ಹಿಂದೂಸ್ತಾನಿ ಇವೆರಡರ ಮಧುರ ಮಿಲನವಾಗಿತ್ತು. ಪುರುಷೋತ್ತಮ ದಾಸ್ ಟಂಡನ್ ಅವರು ಹಿಂದಿಯನ್ನು ಅನ್ಯ ಭಾಷೆಗಳಿಂದ ಮುಕ್ತಗೊಳಿಸಬೇಕೆಂದು ಬಹುವಾಗಿ ಹೋರಾಟ ನಡೆಸಿದವರು. ಟಂಡನ್ ಅವರು ಅಖಿಲ ಭಾರತ ಹಿಂದಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ದೇವನಾಗರಿ ಲಿಪಿಯೊಂದಿಗಿನ ಹಿಂದಿ ಮಾತ್ರ ರಾಷ್ಟ್ರ ಭಾಷೆಯಾಗಬೇಕೆಂದು ಸಾಹಿತ್ಯ ಸಮ್ಮೇಳನದ ವಾದವಾಗಿತ್ತು. ಸಮ್ಮೇಳನದ ಬಹುಕಾಲದ ಸದಸ್ಯರಾಗಿದ್ದ ಗಾಂಧಿಯವರು ಈ ಅಂಧಾಭಿಮಾನದಿಂದ ಗಾಬರಿಗೊಂಡರು. ನಾಗರಿ ಮತ್ತು ಉರ್ದು ಲಿಪಿಗಳೆರಡನ್ನೂ ಬಳಸಬೇಕೆಂಬುದು ತಮ್ಮ ನಂಬಿಕೆಯಾದ್ದರಿಂದ ತಾವು ಸಮ್ಮೇಳನದ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದು ಉಚಿತವೆಂದು ಗಾಂಧೀಜಿ ಭಾವನೆಯಾಗಿತ್ತು. ರಾಜೀನಾಮೆ ಬೇಡ ಎಂದು ಟಂಡನ್ ದುಂಬಾಲುಬಿದ್ದರು. ಎರಡು ಕುದುರೆ ಮೇಲೆ ಸವಾರಿ ಹೇಗೆ ಸಾಧ್ಯ? ರಾಷ್ಟ್ರಭಾಷೆ ಎಂದರೆ ಹಿಂದಿ, ಹಿಂದಿ ಮತ್ತು ರಾಷ್ಟ್ರ ಭಾಷೆ ಎಂದರೆ ಹಿಂದಿ ಮತ್ತು ಉರ್ದು ಸೇರಿದ ಹಿಂದೂಸ್ತಾನಿ. ರಾಷ್ಟ್ರಭಾಷೆ=ಹಿಂದಿ ಮತ್ತು ರಾಷ್ಟ್ರಭಾಷೆ= ಹಿಂದಿ + ಉರ್ದು=ಹಿಂದೂಸ್ತಾನಿ ಎಂದರೆ ಯಾರಿಗೆ ಅರ್ಥವಾದೀತು? ಹೀಗೆ ಹೇಳಿದರೆ ಯಾರು ನನ್ನನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬುದು ಗಾಂಧೀಜಿ ಪ್ರಶ್ನೆ.

ರಾಷ್ಟ್ರ ವಿಭಜನೆಯಿಂದ ಹೆಚ್ಚು ಕಡಿಮೆ ಹಿಂದೂಸ್ತಾನಿ ಪರ ದನಿ ನಿಂತು ಹೋಯಿತು. ಹಿಂದಿಯನ್ನು ಮತ್ತಷ್ಟು ಸಂಸ್ಕೃತಮಯಗೊಳಿಸುವ ಪ್ರಯತ್ನ ಗರಿಗೆದರಿತು. ಇದು ಸಂವಿಧಾನ ರಚನಾ ಸಭೆಯಲ್ಲಿ ಸ್ಪಷ್ಟವಾಗಿ ಗೋಚರಿಸಿತು. ಹಿಂದೂಸ್ತಾನಿ ಬಗ್ಗೆ ಮೊದಲು ಮಾತನಾಡುತ್ತಿದ್ದವರೆಲ್ಲ ಆನಂತರ ಹಿಂದಿ ಬಗ್ಗೆ ಮಾತನಾಡಲಾರಂಭಿಸಿದ್ದರು. ರಾಷ್ಟ್ರ ವಿಭಜನೆ ನಂತರ ಹಿಂದಿ ಪ್ರವರ್ತಕರೆಲ್ಲ ಇನ್ನಷ್ಟು ಅಂಧಾಭಿಮಾನಿಗಳಾದರು. ಗ್ರ್ಯಾನ್‌ವಿಲ್ಲೆ ಆಸ್ಟಿನ್ ಹೇಳಿರುವಂತೆ- "ಭಾಷಾ ಏಕತೆಯ ಪ್ರಯತ್ನದಲ್ಲಿ ಹಿಂದಿವಾಲಾಗಳು ಸಂವಿಧಾನ ಸಭೆಯನ್ನೂ ದೇಶವನ್ನೂ ಒಡೆಯಲು ಸಿದ್ಧವಿದ್ದರು." ಹಿಂದೀವಾಲಾಗಳ ಧರ್ಮಯುದ್ಧ ಸದನದಲ್ಲಿ ರೋಷಾವೇಶದ ಚರ್ಚೆಗೆಡೆ ಮಾಡಿಕೊಟ್ಟಿತು. ಹಿಂದೂಸ್ತಾನಿ ದಕ್ಷಿಣ ಭಾರತೀಯರಿಗೆ ಸ್ವೀಕಾರಾರ್ಹವಾಗಿರಲಿಲ್ಲ, ಹಿಂದಿ ಮತ್ತಷ್ಟು ಸ್ವೀಕಾರಾರ್ಹವಾಗಿರಲಿಲ್ಲ. ಸದಸ್ಯರೊಬ್ಬರು ಹಿಂದಿಯಲ್ಲಿ ಮಾತನಾಡಿದಾಗ ಇನ್ನೊಬ್ಬ ಸದಸ್ಯರು ಅದರ ಇಂಗ್ಲಿಷ್ ಭಾಷಾಂತರಕ್ಕೆ ಆಗ್ರಹಪಡಿಸುತ್ತಿದ್ದರು. ಹಿಂದಿ ಏಕೈಕ ರಾಷ್ಟ್ರಭಾಷೆಯಾಗಬೇಕೆಂಬ ವಾದ ಮಂಡಿಸಿದಾಗ ಅದನ್ನು ತೀವ್ರವಾಗಿ ವಿರೋಧಿಸಲಾಯಿತು. ಟಿ.ಟಿ. ಕೃಷ್ಣಮಾಚಾರಿಯವರು ಆಡಿರುವ ಈ ಮಾತುಗಳು ಹಿಂದಿ ವಿರೋಧದ ಪ್ರಾತಿನಿಧಿಕ ಸ್ವರೂಪದ ಮಾತುಗಳಾಗಿವೆ:

"ನಾವು ಹಿಂದೆ ಇಂಗ್ಲಿಷನ್ನು ಇಷ್ಟಪಟ್ಟಿರಲಿಲ್ಲ. ನನಗೆ ಏಕೆ ಇಂಗ್ಲಿಷ್ ಅಪ್ರಿಯವಾಯಿತೆಂದರೆ, ಶೇಕ್ಸ್‌ಪಿಯರ್ ಮತ್ತು ಮಿಲ್ಟನ್ನರ ಓದನ್ನು ನನ್ನ ಮೇಲೆ ಹೇರಲಾಯಿತು. ನನಗೆ ಅವರ ಸಾಹಿತ್ಯದಲ್ಲಿ ಅಭಿರುಚಿ ಇರಲಿಲ್ಲ...ಹಿಂದಿ ಕಲಿಯುವಂತೆ ನನಗೆ ಒತ್ತಾಯ ಮಾಡಿದ್ದಿದ್ದರೆ, ಅದನ್ನು ಕಲಿಯುವುದು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ನನ್ನ ವಯಸ್ಸೂ ಒಂದು ಕಾರಣ. ಜೊತೆಗೆ ನೀವು ನನ್ನ ಮೇಲೆ ವಿಧಿಸುವ ನಿರ್ಬಂಧಗಳೂ ಕಾರಣವಿದ್ದೀತು. ಈ ರೀತಿಯ ಅಸಹನೆ-ಅಸಹಿಷ್ಣುತೆಯಿಂದಾಗಿಯೇ ಸಶಕ್ತ ಕೇಂದ್ರ ಸರ್ಕಾರ ನಮಗೆ ಅತ್ಯಗತ್ಯವೆನಿಸುತ್ತದೆ, ಕೇಂದ್ರದ ಭಾಷೆಯನ್ನಾಡದ ಜನರನ್ನು ಪಾರುಮಾಡುವಂಥ ಸಶಕ್ತ ಕೇಂದ್ರ ಸರ್ಕಾರ ಅಗತ್ಯವೆನ್ನಿಸುತ್ತದೆ...ಸ್ವಾಮಿ, ನಾನು ದಕ್ಷಿಣ ಭಾರತೀಯರ ಪರವಾಗಿ ಒಂದು ಎಚ್ಚರಿಕೆ ನೀಡಲಿಚ್ಛಿಸುತ್ತೇನೆ, ಈಗಾಗಲೇ ಪ್ರತ್ಯೇಕತೆಯನ್ನು ಬಯಸುವ ಶಕ್ತಿಗಳು ದಕ್ಷಿಣದಲ್ಲಿವೆ...ಇವರ 'ಹಿಂದಿ ಸಾಮ್ರಾಜ್ಯಶಾಹಿ' ಕಲ್ಪನೆಯನ್ನು ಪರಮಾವಧಿಗೆ ಬಡಿದೆಬ್ಬಿಸುವುದರಿಂದ ಉತ್ತರದ ನಮ್ಮ ಗೌರವಾನ್ವಿತ ಮಿತ್ರರು ನಮಗೆ ಯಾವ ರೀತಿಯ ಸಹಾಯವನ್ನೂ ಮಾಡಲಾರರು. ಸ್ವಾಮಿ, ಏಕೈಕ ಭಾರತ ಬೇಕೆ, ಹಿಂದಿ ಭಾರತ ಬೇಕೆ ಎಂಬುದು ಉತ್ತರದ ನನ್ನ ಮಿತ್ರರಿಗೆ ಬಿಟ್ಟ ವಿಚಾರ...ಆಯ್ಕೆ ಅವರದು..."

ಆಖೈರಾಗಿ, ಸಂವಿಧಾನ ರಚನಾ ಸಭೆ ಒಂದು ರಾಜಿ ಮಾಡಿಕೊಂಡಿತು: "ಕೇಂದ್ರ ಸರ್ಕಾರದ ಅಧಿಕೃತಭಾಷೆ ದೇವನಾಗರಿ ಲಿಪಿಯ ಹಿಂದಿಯಾಗಿರುವುದು". ಆದರೆ, ಸಂವಿಧಾನ ಜಾರಿಗೆ ಬಂದ ನಂತರದ ದಿನಗಳಿಂದ ಹದಿನೈದು ವರ್ಷಗಳವರೆಗೆ, ಈಗ ಬಳಸಲಾಗುತ್ತಿರುವಂತೆ, ಇಂಗ್ಲಿಷ್ ಭಾಷೆಯನ್ನು ಕೇಂದ್ರ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಲ್ಲಿ ಬಳಸಲಾಗುವುದು. 1965ರವರೆಗೆ, ನ್ಯಾಯಾಲಯದ ಕಾರ್ಯಕಲಾಪಗಳು, ಸರ್ಕಾರದ ಸೇವೆ, ಅಖಿಲ ಭಾರತ ಆಡಳಿತಶಾಹಿ ಇಂಗ್ಲಿಷ್‌ನಲ್ಲೇ ನಡೆಯುವುದು.

X

ಅಸ್ಪೃಶ್ಯ ಮಹಿಳೆಯೊಬ್ಬಳು ಭಾರತದ ಪ್ರಪ್ರಥಮ ರಾಷ್ಟ್ರಪತಿಯಾಗಬೇಕೆಂಬ ಇಚ್ಛೆಯನ್ನು ಮಹಾತ್ಮ ಗಾಂಧಿ ಒಮ್ಮೆ ವ್ಯಕ್ತಪಡಿಸಿದ್ದರು. ಅದು ಸಾಧ್ಯವಾಗಲಿಲ್ಲ. ಆದರೆ ಸ್ವಲ್ಪ ಸಮಾಧಾನಕರ ಎಂಬಂತೆ, ಅಸ್ಪೃಶ್ಯರಾದ ಡಾ. ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಸಭೆಯ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಇದರಿಂದ ಗಾಂಧೀಜಿಯವರಿಗೆ ಸ್ವಲ್ಪವಾದರೂ ಸಮಾಧಾನವಾಗಿರಬೇಕು.

1949ರ ನವೆಂಬರ್ 25ರಂದು ಸಂವಿಧಾನ ರಚನಾಸಭೆ ತನ್ನ ಕಾರ್ಯಕಲಾಪಗಳನ್ನು ಸಮಾಪ್ತಿಗೊಳಿಸಿತು. ಆಗ, ಅಂಬೇಡ್ಕರ್ ಅವರು ಹೃದಯಂಗಮವಾದ ಮುಕ್ತಾಯ ಭಾಷಣ ಮಾಡಿದರು. ಕರಡು ಸಮಿತಿಯ ಸದಸ್ಯರಿಗೆ, ಬೆಂಬಲ ನೀಡಿದ ಸಿಬ್ಬಂದಿಗೆ ಹಾಗೂ

ಜೀವಮಾನವಿಡೀ ತಾವು ವಿರೋಧಿಸಿದ ಪಕ್ಷಕ್ಕೆ ಅವರು ಆಭಾರ ಮನ್ನಣೆ ಸಮರ್ಪಿಸಿದರು. ಕಾಂಗ್ರೆಸ್ ಧಣಿಗಳು ಸಭೆಯ ಹೊರಗೆ ಮತ್ತು ಒಳಗೆ ಮೌನದಿಂದ ಕೆಲಸಮಾಡದೇ ಇದ್ದಿದ್ದಲ್ಲಿ, ತಮ್ಮಿಂದ ಅವ್ಯವಸ್ಥೆಯೊಳಗಿಂದ ಸುವ್ಯವಸ್ಥೆ ತರಲು ಸಾಧ್ಯವಾಗುತ್ತಿರಲಿಲ್ಲವೆಂದು ಅಂಬೇಡ್ಕರ್ ವಂದನಾಭಾಷಣದಲ್ಲಿ ತಿಳಿಸಿದರು. "ಕಾಂಗ್ರೆಸ್ ಪಕ್ಷದ ಶಿಸ್ತಿನಿಂದಾಗಿ ಕರಡು ಸಮಿತಿಗೆ ಸಭೆಯಲ್ಲಿ ಸಂವಿಧಾನ ಮಂಡಿಸುವುದು ಸಾಧ್ಯವಾಯಿತು" ಎಂದು ಭಾವಪೂರ್ಣವಾಗಿ ನುಡಿದರು.

ರಾಷ್ಟ್ರಪ್ರೇಮ, ದೇಶಭಕ್ತಿಯಂಥ ಭಾವುಕ ಹಂಬಲಗಳನ್ನು ತೃಪ್ತಿಪಡಿಸಲೋ ಎಂಬಂತೆ, ಅಂಬೇಡ್ಕರ್ ಅವರು, ಪ್ರಾಚೀನ ಭಾರತಕ್ಕೂ ಪ್ರಜಾಸತ್ತೆ ಅಪರಿಚಿತವೇನಲ್ಲ. ಆಗಲೂ ಒಂದು ರೀತಿಯ ಪ್ರಜಾಸತ್ತೆ ಇತ್ತೆಂದು ನುಡಿದರು. 'ಭಾರತ ಗಣರಾಜ್ಯಗಳಿಂದ ಭರಿತವಾಗಿದ್ದ ಕಾಲವೊಂದಿತ್ತು' ಎಂದು ಸ್ಮರಿಸಿದರು. ವಿಶೇಷವಾಗಿ, ಭಿಕ್ಷು ಸಂಘಗಳಲ್ಲಿ, ಸಂಸದೀಯ ಕಾರ್ಯಕಲಾಪಗಳಿಗನುಗುಣವಾದ ಮತದಾನ, ನಿರ್ಣಯ, ಖಂಡನೆ, ಶಿಸ್ತುಪಾಲನೆಯ ನಿರೂಪ ಇವುಗಳೆಲ್ಲ ಇದ್ದ, ಇವುಗಳನ್ನು ಜಾರಿಗೆ ತಂದಿದ್ದ ಭಿಕ್ಷು ಸಂಘಗಳನ್ನೊಳಗೊಂಡ ಬೌದ್ಧಧರ್ಮವನ್ನು ಸ್ಮರಿಸಿದರು.

ಸಂವಿಧಾನದ ಒಕ್ಕೂಟ ವ್ಯವಸ್ಥೆ ಯಾವುದೇ ರೀತಿಯಲ್ಲೂ ರಾಜ್ಯಗಳಿಗೆ ಹಕ್ಕುಗಳನ್ನು ನಿರಾಕರಿಸುವುದಿಲ್ಲವೆಂದೂ, ಹಕ್ಕುಗಳಿಂದ ವಂಚಿಸುವುದಿಲ್ಲವೆಂದೂ ಅಂಬೇಡ್ಕರ್ ಸದನಕ್ಕೆ ಭರವಸೆ ನೀಡಿದರು. 'ಕೇಂದ್ರದಲ್ಲಿ ಅಧಿಕಾರ ಕೇಂದ್ರೀಕರಣ ವಿಪರೀತವಾಗಿದ್ದು ರಾಜ್ಯಗಳನ್ನು ಮುನಿಸಿಪಾಲಿಟಿಗಳ ದರ್ಜೆಗೆ ಇಳಿಸಲಾಗಿದೆ' ಎಂಬುದು ತಪ್ಪು ಕಲ್ಪನೆ. ಸಂವಿಧಾನ, ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರವನ್ನು ಪ್ರತ್ಯೇಕಗೊಳಿಸಿದೆ, ವಿಭಾಗಿಸಿದೆ. ಆದರೆ ಕೇಂದ್ರ ಸರ್ಕಾರ ಸ್ವಯಂ ತಾನೇ ತಾನಾಗಿ ಈ ಪ್ರತ್ಯೇಕತೆಯ ವಿಭಾಗದ ಗಡಿಯಲ್ಲಿ ಮಾರ್ಪಾಟು ಮಾಡುವಂತಿಲ್ಲ. ಈ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯಗಳು ಸಮಾನಸ್ಕಂಧರು ಎಂದು ಶಂಕೆಗಳನ್ನು ನಿವಾರಿಸುವ ಪ್ರಯತ್ನ ಮಾಡಿದರು.

ಅಂಬೇಡ್ಕರ್, ಭವಿಷ್ಯದ ಬಗ್ಗೆ ಮೂರು ಎಚ್ಚರಿಕೆಗಳನ್ನು ನೀಡುವುದರೊಂದಿಗೆ ತಮ್ಮ ಭಾಷಣ ಮುಕ್ತಾಯಗೊಳಿಸಿದ್ದರು. ಮೊದಲನೆಯದು, ಪ್ರಜಾಪ್ರಭುತ್ವದಲ್ಲಿ ಜನತಾ ಚಳವಳಿ, ಜನತಾ ಪ್ರತಿಭಟನೆಯ ಸ್ಥಾನ ಕುರಿತದ್ದು. ರಕ್ತ ಕ್ರಾಂತಿಗೆ ಜಾಗವಿಲ್ಲ, ಆದರೆ ಅವರ ಅಭಿಪ್ರಾಯದಲ್ಲಿ ಗಾಂಧಿ ಮಾದರಿಗಳಿಗೂ ಅವಕಾಶವಿರಲಿಲ್ಲ. "ನಾವು ನಾಗರಿಕ ಅಸಹಕಾರ ಚಳವಳಿ, ಸತ್ಯಾಗ್ರಹ ಮಾರ್ಗಗಳನ್ನು ತ್ಯಜಿಸಬೇಕು. ನಿರಂಕುಶ ಪ್ರಭುತ್ವದಲ್ಲಿ ಇವುಗಳಿಗೆ ಸಮರ್ಥನೆ ಇರಬಹುದು. ಆದರೆ ಈಗ, ಅನ್ಯಾಯ ಸರಿಪಡಿಸಲು ಸಂವಿಧಾನಾತ್ಮಕ ಮಾರ್ಗಗಳಿರುವಾಗ ಇದರ ಅಗತ್ಯವಿಲ್ಲ. ಸತ್ಯಾಗ್ರಹ ಮುಂತಾದವು ಅರಾಜಕತೆಯ ರೀತಿನೀತಿಗಳಷ್ಟೇ. ಎಷ್ಟು ಬೇಗ ಇವುಗಳನ್ನೆಲ್ಲ ಕೈ ಬಿಡುತ್ತೇವೋ ಅಷ್ಟು ಉತ್ತಮ."

ಎರಡನೆಯ ಎಚ್ಚರಿಕೆ. ವಿವೇಚನೆ ಇಲ್ಲದೆ ವಿಭೂತಿ ಶಕ್ತಿಗಳಿಗೆ ತಲೆಬಾಗುವುದಕ್ಕೆ ಸಂಬಂಧಿಸಿದ್ದು. "ಎಂಥ ಮಹಾನುಭಾವರ ಪಾದಗಳಲ್ಲೂ ನಿಮ್ಮ ಸ್ವಾತಂತ್ರ್ಯವನ್ನು ಸಮರ್ಪಿಸಬೇಡಿ ಅಥವಾ ಅವರಿಗೆ ನಿಮ್ಮ ವ್ಯವಸ್ಥೆಗಳನ್ನು ಬುಡಮೇಲುಗೊಳಿಸುವಂಥ

ಸಾಮರ್ಥ್ಯವನ್ನು ನೀಡುವ ಶಕ್ತಿಯನ್ನೂ ನಂಬಬೇಡಿ"–ಜಾನ್ ಸ್ಟೂಅರ್ಟ್ ಮಿಲ್‌ನ ಈ ಮಾತುಗಳನ್ನು ಅಂಬೇಡ್ಕರ್ ಉಲ್ಲೇಖಿಸಿದರು. ಈ ಎಚ್ಚರಿಕೆ ಇಂಗ್ಲೆಂಡಿಗಿಂತ ಇಲ್ಲಿಗೆ ಹೆಚ್ಚು ಸುಸಂಗತವಾಗಿವೆ, ಏಕೆಂದರೆ–

"ಭಾರತದಲ್ಲಿ, ಭಕ್ತಿ ಅಥವಾ ಭಕ್ತಿಪಂಥ, ವೀರಪೂಜೆ ಇವೆಲ್ಲವೂ ರಾಜಕೀಯದಲ್ಲಿ ಪಾತ್ರವಹಿಸುತ್ತವೆ. ವಿಶ್ವದ ಬೇರೆ ಯಾವುದೇ ರಾಷ್ಟ್ರದಲ್ಲಿ ಇವು ವಹಿಸುವ ಪಾತ್ರಕ್ಕಿಂತ ಭಾರತದಲ್ಲಿ ಅತಿ ಮಹತ್ವದ ಪಾತ್ರ ವಹಿಸುತ್ತವೆ. ಧರ್ಮದಲ್ಲಿ ಭಕ್ತಿ ಆತ್ಮದ ಮುಕ್ತಿ ಮಾರ್ಗವಿರಬಹುದು. ಆದರೆ ರಾಜಕಾರಣದಲ್ಲಿ ಭಕ್ತಿ ಅಥವಾ ವೀರಪೂಜೆ-ನಾಯಕ ಪೂಜೆ ಖಂಡಿತವಾಗಿಯೂ ಅವನತಿಯ ಮಾರ್ಗ, ಆಖೈರಾಗಿ ನಿರಂಕುಶ ಪ್ರಭುತ್ವಕ್ಕೆ ಒಯ್ಯುವ ಮಾರ್ಗ" ಎಂದು ಅಂಬೇಡ್ಕರ್ ಹೇಳಿದ್ದರು.

ಮೂರನೆಯ ಎಚ್ಚರಿಕೆ: ಕೇವಲ ರಾಜಕೀಯ ಪ್ರಜಾಸತ್ತೆಯಿಂದ ತೃಪ್ತರಾಗಬೇಡಿ. ಭಾರತ ಪರಕೀಯರ ಆಳ್ವಿಕೆಯಿಂದ ವಿಮೋಚನೆ ಪಡೆದಿದೆ. ಆದರೆ ಅಸಮತೆ ಮತ್ತು ಶ್ರೇಣಿಕೃತ ಸಮಾಜದ ಅಂತರ ಇದ್ದೇ ಇರುತ್ತದೆ. ಆದ್ದರಿಂದ 1950ರ ಜನವರಿ 26ರಂದು ವಿಧ್ಯುಕ್ತವಾಗಿ ಭಾರತ ಗಣರಾಜ್ಯವಾದ ನಂತರ-

"ವೈರುಧ್ಯ, ವಿರೋಧಾಭಾಸಗಳು ಶುರುವಾಗುತ್ತವೆ. ರಾಜಕಾರಣದಲ್ಲಿ ನಮಗೆ ಸಮಾನತೆ ಇರುತ್ತದೆ, ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಮ್ಮಲ್ಲಿ ಅಸಮಾನತೆ ಇರುತ್ತದೆ. ರಾಜಕಾರಣದಲ್ಲಿ ಒಬ್ಬನಿಗೆ ಒಂದು ಓಟು, ಒಂದು ಓಟಿಗೆ ಒಂದೇ ಮೌಲ್ಯ ಎನ್ನುವ ತತ್ವವನ್ನು ನಾವು ಮಾನ್ಯ ಮಾಡುತ್ತೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಒಂದು ಜೀವದ ಬೆಲೆ ಎಲ್ಲರಿಗೂ ಒಂದೇ ಎಂಬ ತತ್ವವನ್ನು ಅಲ್ಲಗಳೆಯುವುದು ಮುಂದುವರಿದೇ ಇರುತ್ತದೆ. ಎಷ್ಟು ಕಾಲ ನಾವು ಈ ವೈರುಧ್ಯತೆ, ವೈದೃಶ್ಯ, ಅಸಂಬಂದ್ಧತೆಗಳ ಬಾಳನ್ನು ಸಹಿಸುವುದು? ಎಷ್ಟು ಕಾಲ ಹೀಗೇ ಬದುಕಬೇಕು? ಇನ್ನೂ ಎಷ್ಟು ಕಾಲ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಮ್ಮನ್ನು ಸಮಾನತೆಯಿಂದ ವಂಚಿತರಾಗಿಸುವ ವ್ಯವಸ್ಥೆಯಲ್ಲಿ ಬದುಕುವುದು? ಇನ್ನೂ ಹೆಚ್ಚುಕಾಲ ಈ ಸಮಾನತೆಗಳನ್ನು ನಿರಾಕರಿಸಿದಲ್ಲಿ ಇದರಿಂದ ನಾವು ನಮ್ಮ ರಾಜಕೀಯ ಪ್ರಜಾಸತ್ತೆಯನ್ನು ಗಂಡಾಂತರಕ್ಕೀಡುಮಾಡಲಿದ್ದೇವೆ."

XI

ಭಾರತದ ಸಂವಿಧಾನ ರಚನಾ ಸಭೆಯ ಅಧಿವೇಶನ ಆರಂಭಕ್ಕೆ ಎಂಟು ತಿಂಗಳು ಮುಂಚಿತವಾಗಿ ಜಪಾನಿನಲ್ಲಿ ಹೊಸ ಸಂವಿಧಾನವನ್ನು ಅನುಮೋದನೆಗಾಗಿ ಅಲ್ಲಿನ ಪಾರ್ಲಿಮೆಂಟ್ 'ಡೈಯಟ್' ಮುಂದೆ ಮಂಡಿಸಲಾಯಿತು. ಆದರೆ ಈ ಹೊಸ ಸಂವಿಧಾನವನ್ನು ಬಹುಮಟ್ಟಿಗೆ ವಿದೇಶೀಯರೇ ರಚಿಸಿದ್ದರು. 1946ರ ಫೆಬ್ರುವರಿ ತಿಂಗಳ ಆದಿಯಲ್ಲಿ

ಇಪ್ಪತ್ನಾಲ್ಕು ಮಂದಿ ಟೋಕಿಯೋದ ಬಾಲ್‌ರೂಂವೊಂದರಲ್ಲಿ (ನೃತ್ಯಗೋಷ್ಠಿ ನಡೆಯುವ ಸ್ಥಳ) ಸಭೆ ಸೇರಿದ್ದರು. ಇವರೆಲ್ಲರೂ ಅಮೆರಿಕನ್ನರೇ, ಇವರಲ್ಲಿ ಹದಿನಾರು ಮಂದಿ ಮಿಲಿಟರಿ ಅಧಿಕಾರಿಗಳು. ಇಲ್ಲಿ ಈ ಮಂದಿ ಒಂದು ವಾರ ಕಾಲ ಸಭೆ ನಡೆಸಿ ಸಂವಿಧಾನವೊಂದನ್ನು ರಚಿಸಿದರು. ಈ ಸಂವಿಧಾನವನ್ನು ಜಪಾನ್ ಅಳವಡಿಸಿಕೊಳ್ಳಬೇಕೆಂಬುದು ಅವರ ನಿರೀಕ್ಷೆಯಾಗಿತ್ತು. ಇದನ್ನು 'ಇದು ಸಿದ್ಧಸಂಗತಿ, ಇನ್ನು ಚರ್ಚೆ ಇಲ್ಲ, ಇದೇ ಆಖೈರು' ಎಂಬಂತೆ ಜಪಾನಿನ ರಾಜಕೀಯ ನಾಯಕರುಗಳಿಗೆ ನೀಡಲಾಯಿತು. ಅವಕಾಶ ಇದ್ದದ್ದು ಅದನ್ನು ಸ್ಥಳೀಯ ಭಾಷೆಗೆ ಭಾಷಾಂತರಿಸುವ ಮೂಲಕ ಜಪಾನೀಕರಣಗೊಳಿಸಲಷ್ಟೇ. ಈ ಕರಡು ಸಂವಿಧಾನವನ್ನು ಜಪಾನ್ ಪಾರ್ಲಿಮೆಂಟಿನಲ್ಲಿ ಚರ್ಚಿಸಲಾಯಿತು. ಆದರೆ ಸಣ್ಣಪುಟ್ಟ ತಿದ್ದುಪಡಿಗೂ ಅಮೆರಿಕ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆಯಬೇಕಿತ್ತು.

ಯಾವ ಆಧುನಿಕ ರಾಷ್ಟ್ರದಲ್ಲೂ ಇಂಥ ಪರದೇಶಿ ಸಂವಿಧಾನ ಎಂದಿಗೂ ಇರಲಿಕ್ಕಿಲ್ಲ ಎಂದು ಈ ವಿಚಿತ್ರ ಕಸರತ್ತಿನ ಬಗ್ಗೆ ಇತಿಹಾಸಕಾರರು ಬರೆದಿದ್ದಾರೆ. ಈ ವಿಷಯದಲ್ಲಿ ಭಾರತದ ವೈದೃಶ್ಯ, ವಿಭಿನ್ನತೆಗಳು ಎದ್ದುಕಾಣುವಂಥಾದ್ದು. ಒಂದು ಸಂವಿಧಾನವನ್ನು ಅತ್ಯಂತ ಗೋಪ್ಯವಾಗಿ, ರಹಸ್ಯ ಸಭೆಯಲ್ಲಿ ರಚಿಸಲಾಯಿತು. ಇನ್ನೊಂದನ್ನು ಬಹಿರಂಗವಾಗಿ, ಮುಕ್ತವಾಗಿ ಮಾಧ್ಯಮಗಳ ಸಮ್ಮುಖದಲ್ಲಿ ಚರ್ಚಿಸಿ ರಚಿಸಲಾಯಿತು. ಒಂದು ಸಂವಿಧಾನವನ್ನು ಅಪಾಯಕರವಾದ ವೇಗದಲ್ಲಿ ವಿದೇಶೀಯರು ರಚಿಸಿದರು. ಇನ್ನೊಂದನ್ನು ದೇಶೀಯರೇ ಇಡಿಯಾಗಿ ರಚಿಸಿದರು. ಹಲವಾರು ವರ್ಷಗಳ ಚರ್ಚೆ, ಪರ್ಯಾಲೋಚನೆಗಳ ಫಲವಾಗಿ ಇದು ಮೂಡಿಬಂದಿತ್ತು. ಆದರೆ ನ್ಯಾಯದ ದೃಷ್ಟಿಯಿಂದ ಎರಡೂ ಸಂವಿಧಾನಗಳ ಉಗಮ-ಮೂಲಗಳು ವಿಭಿನ್ನವಾದರೂ ಮೂಲತತ್ವದಲ್ಲಿ ಇವು ಉದಾರ ಮಾನವತಾವಾದಿ ಸೂತ್ರಗಳು. ಜಪಾನಿನ ಕರಡು ಸಂವಿಧಾನದ ಬಗ್ಗೆ ಅಮೆರಿಕದ ಅಧಿಕಾರಿಯೊಬ್ಬರು ಹೇಳಿದ ಮಾತನ್ನು ಭಾರತದ ಸಂವಿಧಾನಕ್ಕೂ ಅನ್ವಯಿಸಿ ಹೇಳಬಹುದು. ಜಪಾನಿನ ಸಂವಿಧಾನದ ಬಗ್ಗೆ ಅಮೆರಿಕನ್ ಅಧಿಕಾರಿ ಹೇಳಿದ ಮಾತು: "ಅದು ರಾಜಕೀಯ ಚಿಂತನೆಯಲ್ಲಿ ತೀವ್ರ ಬಲಪಂಥದ ವಿಮುಖ ದಿಕ್ಕಿನತ್ತ ಓಲಾಡುತ್ತಿರುವಂತೆ ಭಾಸವಾಗುತ್ತದೆಯಾದರೂ ತೀವ್ರವಾದ ಎಡಪಂಥದ ಪರಿಕಲ್ಪನೆಗಳಿಗೆ ಅದರಿಂದ ಏನೂ ಲಾಭವಾಗುವುದಿಲ್ಲ."

ಸಂವಿಧಾನ ರಚನೆ ಮೊದಲು ಆರಂಭವಾದದ್ದು 1787ರಲ್ಲಿ ಫಿಲಡೆಲ್ಫಿಯಾದಲ್ಲಿ. ಭಾರತೀಯ ಸಂವಿಧಾನ ಅಲ್ಲಿಂದೀಚೆಗಿನ ಅತಿದೊಡ್ಡ ರಾಜಕೀಯ ಸಾಹಸ ಎನ್ನುತ್ತಾರೆ ಗ್ರ್ಯಾನ್‌ವಿಲ್ಲೆ ಆಸ್ಟಿನ್. "ರಾಷ್ಟ್ರೀಯ ಆದರ್ಶಗಳ ರೂಪುರೇಷೆಗಳನ್ನು ವಿವರಿಸಿ ಬರೆಯುವುದು, ಹಾಗೂ ಈ ಆದರ್ಶಗಳ ಅನುಷ್ಠಾನದ ನಿಟ್ಟಿನಲ್ಲಿ ಕೆಲಸಮಾಡಲು ಸಾಂಸ್ಥಿಕ ಕಾರ್ಯವ್ಯವಸ್ಥೆಯೊಂದನ್ನು ರೂಪಿಸುವುದು ಒಂದು ದೈತ್ಯ ಸಾಧನೆಯೇ ಸರಿ. ಅದರಲ್ಲೂ ಇತರೆ ಲೌಕಿಕ ಗುರಿಗಮ್ಯತೆಗಳಿಗಾಗಿ ಅತಾರ್ಕಿಕ ಮಾರ್ಗಗಳನ್ನು ಅನುಸರಿಸುತ್ತಿದ್ದ ಜನರಿಗಾಗಿ ಮಾಡಿದ ದೈತ್ಯ ಸಾಧನೆಯೇ ಸರಿ. ಇಂಥ ಸಾಧನೆಯ ಕೀರ್ತಿ ಭಾರತೀಯರಿಗೆ ಸಲ್ಲಬೇಕು" ಎನ್ನುತ್ತಾರೆ ಆಸ್ಟಿನ್. ಆಸ್ಟಿನ್ ತಮ್ಮ ಗ್ರಂಥದ ಕೊನೆಯ ಅಧ್ಯಾಯಕ್ಕೆ ಕೊಟ್ಟಿರುವ ಶೀರ್ಷಿಕೆಯೂ "ಕೀರ್ತಿ ಭಾರತೀಯರಿಗೆ" ಎಂಬುದೇ ಆಗಿದೆ.

○

ಭಾಗ 2

ನೆಹರೂ ಭಾರತ

7

ಇತಿಹಾಸದ ಅತಿದೊಡ್ಡ ಪಣ

ನಾವು ಮಹಾನ್ ಧ್ಯೇಯಗಳ, ಗುರಿಗಳ ಸಾಧನೆಯ ಕೈಂಕರ್ಯದಲ್ಲಿ ತೊಡಗಿರುವ ಅಲ್ಪಮಾನವರು. ಧ್ಯೇಯೋದ್ದೇಶಗಳು, ಗುರಿಗಳು ಮಹತ್ತರವಾದವು, ಘನತರವಾದವು. ಆದ್ದರಿಂದ ಆ ಹಿರಿಮೆಯ ಆಕರ್ಷಣೆ ನಮ್ಮನ್ನು ಆವರಿಸದೇ ಇರದು.

–ಜವಹರಲಾಲ್ ನೆಹರೂ-*1946*

ಇಂಡಿಯಾ ಎಂದರೆ ನಮಗೆ ಕಾಣಿಸುವುದು ಎರಡೇ ಸಂಗತಿಗಳು–ಬರ ಮತ್ತು ನೆಹರೂ.

–ಒಬ್ಬ ಅಮೆರಿಕನ್ ಪತ್ರಕರ್ತ-*1951*

I

ಸ್ವಾತಂತ್ರ್ಯದ ಮೊದಲ ವರ್ಷಗಳಲ್ಲಿ ಅಧಿಕಾರಾರೂಢ ಕಾಂಗ್ರೆಸ್ ಪಕ್ಷ ಒಳಗಿನಿಂದಲೂ ಹೊರಗಿನಿಂದಲೂ ಬೆದರಿಕೆಗಳನ್ನು, ಅಪಾಯದ ಸೂಚನೆಗಳನ್ನು ಎದುರಿಸಬೇಕಾಯಿತು. ಬ್ರಿಟಿಷ್ ಆಳ್ವಿಕೆ ವಿರುದ್ಧ ಬಂಡಾಯವೆದ್ದ ರಾಷ್ಟ್ರೀಯತಾವಾದಿಗಳು, ಸ್ವಾತಂತ್ರ್ಯ ಹೋರಾಟಗಾರರು ತ್ಯಾಗಮಯಿ ಆದರ್ಶವಾದಿಗಳಾಗಿದ್ದರು. ಆದರೆ ಇವರುಗಳು ರಾಜ್ಯಭಾರ ನಡೆಸುವ ಅವಕಾಶ ಸಿಕ್ಕ ಕೂಡಲೇ ಅಧಿಕಾರದ ಫಲಾಕಾಂಕ್ಷಿಗಳಾದರು. ಮದ್ರಾಸಿನ ಅನುಭವೀ ಪತ್ರಕರ್ತರೊಬ್ಬರು ಬರೆದಂತೆ–"ಅಧಿಕಾರಕ್ಕಾಗಿ ಗಾಂಧಿಯೋತ್ತರ ನಡೆದ ಹೋರಾಟದಲ್ಲಿ ಮೊದಲ ಬಲಿಯಾದದ್ದು ಸಭ್ಯತೆ". ಟೈಮ್-ನಿಯತಕಾಲಿಕ ಹೀಗೆ ಟೀಕಿಸಿತು: "ಸ್ವಾತಂತ್ರ್ಯ ಗಳಿಸಿದ ನಂತರ ಕಾಂಗ್ರೆಸ್‌ಗೆ ಒಂದುಗೂಡಿಸುವ ಧ್ಯೇಯೋದ್ದೇಶಗಳು ಯಾವುದೂ ಇಲ್ಲವಾಯಿತು. ಅದು ಸೋಮಾರಿಯಾಗಿ ಮೈ ಬೆಳೆಸಿತು. ಅದು ಇಂದು ಸಮಯ ಸಾಧಕ ಅಧಿಕಾರದಾಹಿಗಳು ಹಾಗೂ ಅಸಂಖ್ಯಾತ ಕಾಳ ಸಂತೆಕೋರರಿಗೆ ಆಶ್ರಯತಾಣವಾಗಿದೆ." ಮುಂಬಯಿ ಪ್ರಭಾವಶಾಲಿ ಸಾಪ್ತಾಹಿಕವೊಂದು ಕಾಂಗ್ರೆಸ್ ಬಗ್ಗೆ ಹೀಗೊಂದು ಷರಾ

ಬರೆಯಿತು: "ಪಶ್ಚಿಮ ಬಂಗಾಳದಿಂದ ಉತ್ತರ ಪ್ರದೇಶದವರೆಗೆ ಗಂಗಾ ಕಣಿವೆಯುದ್ದಕ್ಕೂ ಕಾಂಗ್ರೆಸ್ ಒಡೆದು ಎರಡು ಹೋಳಾಗಿದೆ. ದೇಶದ ಆದ್ಯ ರಾಜಕೀಯ ಸಂಸ್ಥೆ ಹಳೆಯ ಝಗಮಗ ವೈಭವಗಳನ್ನು ಕಳೆದುಕೊಂಡು ಕಳಾಹೀನವಾಗಿದೆ. ಗುಂಪುಗಾರಿಕೆ ದಿನೇ ದಿನೇ ಉಲ್ಬಣಿಸಲಾರಂಭಿಸಿದೆ. ಪಕ್ಷದ ಅಪಖ್ಯಾತಿ ವೃದ್ಧಿಸುತ್ತಿದೆ."

ಕಾಂಗ್ರೆಸ್ ಪಕ್ಷದಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಗುಂಪುಗಾರಿಕೆ ಇತ್ತು. ಆದರೆ ಅತ್ಯಂತ ಅಶುಭಸೂಚಕವಾದ ಬಿರುಕು ಇದ್ದದ್ದು ಪಕ್ಷದ ಇಬ್ಬರು ಮಹಾನಾಯಕರುಗಳಾದ, ಅಧ್ವರ್ಯುಗಳಾದ ಪಂಡಿತ ಜವಹರಲಾಲ್ ನೆಹರೂ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್ ನಡುವೆ. ಇವರಿಬ್ಬರ ನಡುವೆ-ಒಬ್ಬರು ಪ್ರಧಾನ ಮಂತ್ರಿ ಇನ್ನೊಬ್ಬರು ಉಪಪ್ರಧಾನಮಂತ್ರಿ-ಸ್ವಾತಂತ್ರ್ಯ ಪ್ರಾಪ್ತವಾದ ಕೆಲವೇ ತಿಂಗಳುಗಳಲ್ಲಿ ತೀವ್ರಸ್ವರೂಪದ ಭಿನ್ನಾಭಿಪ್ರಾಯಗಳು ತಲೆದೋರಿದವು. ಗಾಂಧಿಯವರ ನಿಧನ ಅವರನ್ನು ಮತ್ತೊಮ್ಮೆ ಒಗ್ಗೂಡಿಸಿತ್ತು. ಆದರೆ 1949 ಮತ್ತು 1950ರಲ್ಲಿ ಭಿನ್ನಾಭಿಪ್ರಾಯ ಮತ್ತೆ ತಲೆದೋರಿದವು.

ಸ್ವಭಾವ-ಗುಣಲಕ್ಷಣ ಹಾಗೂ ವ್ಯಕ್ತಿತ್ವಗಳಲ್ಲಿ ನೆಹರೂ ಮತ್ತು ಪಟೇಲ್ ತೀರಾ ಭಿನ್ನವಾಗಿದ್ದರು. ಪ್ರಧಾನ ಮಂತ್ರಿ ಬ್ರಾಹ್ಮಣರಾಗಿದ್ದು ಮೇಲ್ವರ್ಗದ ಕೌಟುಂಬಿಕ ಹಿನ್ನೆಲೆಯಿಂದ ಬಂದವರಾಗಿದ್ದರು. ಅವರ ತಂದೆಯೂ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ವ್ಯಕ್ತಿಯಾಗಿದ್ದರು. ಅವರ ಡೆಪ್ಯೂಟಿ ಆದ, ಉಪಪ್ರಧಾನ ಮಂತ್ರಿ ರೈತಾಪಿ ಕೌಟುಂಬಿಕ ಹಿನ್ನೆಲೆಯಿಂದ ಬಂದವರಾಗಿದ್ದು 1857ರ ಸಿಪಾಯಿ ದಂಗೆಯಲ್ಲಿ ಭಾಗವಹಿಸಿದ ದಂಗೆಕೋರರ ವಂಶಜರಾಗಿದ್ದರು. ನೆಹರೂ ಭೋಜನಪ್ರಿಯರಾಗಿದ್ದರು, ಮದ್ಯಪ್ರಿಯರಾಗಿದ್ದರು. ಅವರಿಗೆ ಕಲೆ ಸಾಹಿತ್ಯಗಳ ಅಭಿರುಚಿಯೂ ಇತ್ತು. ವಿದೇಶಗಳನ್ನು ಸುತ್ತಿ ಬಂದಿದ್ದರು. ಪಟೇಲ್ ಧೂಮಪಾನ ಮಾಡುತ್ತಿರಲಿಲ್ಲ, ಮದ್ಯಪಾನ ಮಾಡುತ್ತಿರಲಿಲ್ಲ, ಸಸ್ಯಾಹಾರಿಯಾಗಿದ್ದರು. ಅವರು ದುಡಿಮೆಗಾರರಾಗಿದ್ದರು. ಮನರಂಜನೆಗೆ ಅವರಿಗೆ ಪುರಸೊತ್ತೇ ಇರುತ್ತಿರಲಿಲ್ಲ. ಪಟೇಲರು ಪ್ರತಿದಿನ ಮುಂಜಾನೆ 4 ಗಂಟೆಗೆ ಏಳುತ್ತಿದ್ದರು. ಎದ್ದ ನಂತರ ಒಂದು ಗಂಟೆ ಪತ್ರವ್ಯವಹಾರಗಳಿಗೆ ಮನ ಹರಿಸುತ್ತಿದ್ದರು. ನಂತರ ದೆಹಲಿಯ ಮಂಕು ದೀಪಗಳ ಬೆಳಕಿನ ರಸ್ತೆಯಲ್ಲಿ ವಾಯುವಿಹಾರಕ್ಕೆ ಹೋಗುತ್ತಿದ್ದರು. ಕೊರೆಯುವ ಚಳಿ, ತೀವ್ರ ಆಲೋಚನೆಯಲ್ಲಿ ಗಂಟುಗಟ್ಟಿದ ಮುಖಮುದ್ರೆ ಇವೆಲ್ಲವೂ ಸರ್ದಾರರನ್ನು ನಿಜಕ್ಕೂ ಉಕ್ಕಿನ ಮನುಷ್ಯನನ್ನಾಗಿ ಮಾಡಿದ್ದವು. ನ್ಯೂಯಾರ್ಕ್ ಟೈಮ್ಸ್‌ನ ಮಾತುಗಳಲ್ಲೇ ಹೇಳುವುದಾದರೆ, ಅವರು "ಒರಟು ತೊಗಲಿನ ಮನುಷ್ಯರಾಗಿದ್ದರು."

ಇವರಿಬ್ಬರಲ್ಲಿ ಹೋಲಿಕೆಗಳೂ ಇದ್ದವು. ನೆಹರೂ ಮತ್ತು ಪಟೇಲರಿಬ್ಬರಿಗೂ ಪುತ್ರಿಯೇ ಸರ್ವಸ್ವ. ಸಂಗಾತಿ, ನಂಬಿಕಸ್ಥ ಒಡನಾಡಿ ಹಾಗೂ ಮನೆವಾರ್ತೆ ನೋಡಿಕೊಳ್ಳುವವಳು ಎಲ್ಲವೂ ಪುತ್ರಿಯೇ ಆಗಿದ್ದಳು. ಇಬ್ಬರೂ ಎದ್ದು ಕಾಣುವಷ್ಟು ಪ್ರಾಮಾಣಿಕರಾಗಿದ್ದರು; ಋಜು ವ್ಯಕ್ತಿಗಳಾಗಿದ್ದರು. ಇಬ್ಬರೂ ಅಸೀಮ ದೇಶಭಕ್ತರಾಗಿದ್ದರು. ಆದರೆ ಇಬ್ಬರ ಆಲೋಚನೆ,

ಚಿಂತನೆಗಳಲ್ಲಿ ಎಂದಿಗೂ ಸಾಮರಸ್ಯವಿರಲಿಲ್ಲ. ವೀಕ್ಷಕರೊಬ್ಬರು ಅಭಿಪ್ರಾಯಪಟ್ಟಿರುವಂತೆ, "ದೇಶದಲ್ಲಿನ ವಾಮಪಂಥೀಯ ಶಕ್ತಿಗಳ ಬಗ್ಗೆ ಪಟೇಲರಿಗಿದ್ದ ವಿರೋಧ ಭಾರತ ಎದುರಿಸುತ್ತಿದ್ದ ರಾಜಕೀಯ ಹೊಂದಾಣಿಕೆಯ ಪ್ರಮುಖ ಸಮಸ್ಯೆಯಾಗಿತ್ತು. ಪಟೇಲರು ಬಂಡವಾಳಶಾಹಿಗಳಿಗೆ ಸ್ನೇಹಪರರಾಗಿದ್ದರು. ನೆಹರೂ ಸರ್ಕಾರಿ ನಿಯಂತ್ರಿತ ಅರ್ಥವ್ಯವಸ್ಥೆಯ ಪರವಾಗಿದ್ದರು" ಎಂಬುದು ಈ ವೀಕ್ಷಕರ ಮಾತಿನ ಇಂಗಿತ. ಪಟೇಲರು, ತಲೆಎತ್ತುತ್ತಿದ್ದ ಶೀತಲಸಮರದಲ್ಲಿ ಪಾಶ್ಚಾತ್ಯ ರಾಷ್ಟ್ರಗಳನ್ನು ಬೆಂಬಲಿಸುವ ಒಲವು ತೋರಿದ್ದರು. ಪಟೇಲರು ಹಿಂದೂ ಉಗ್ರಗಾಮಿತ್ವವನ್ನು ಕ್ಷಮಿಸುತ್ತಿದ್ದರು, ಪಾಕಿಸ್ತಾನದ ಬಗ್ಗೆ ಕಠಿಣವಾಗಿದ್ದರು.

1949ರ ಕೊನೆಯ ಭಾಗದಲ್ಲಿ ನೆಹರೂ ಮತ್ತು ಪಟೇಲರ ನಡುವೆ ಪ್ರಮುಖ ವಿಷಯವೊಂದರಲ್ಲಿ ತೀವ್ರ ಭಿನ್ನಾಭಿಪ್ರಾಯ ಉಂಟಾಯಿತು. ಬರಲಿರುವ ಹೊಸವರ್ಷದಲ್ಲಿ ಭಾರತ, ಬ್ರಿಟಿಷ್ ರಾಣಿಯ ಆಧಿಪತ್ಯದ 'ಸಾಮ್ರಾಜ್ಯ' ಸ್ಥಾನಮಾನದಿಂದ ಸಂಪೂರ್ಣ ಗಣರಾಜ್ಯವಾಗಿ ರೂಪಾಂತರ ಹೊಂದಲಿತ್ತು. ಆಗ ಸಾಮ್ರಾಜ್ಯದ ಗೌರ್ನರ್ ಜನರಲ್ ಹೋಗಿ ರಾಷ್ಟ್ರಪತಿ ಹುದ್ದೆ ಸೃಷ್ಟಿಯಾಗಲಿತ್ತು. ಈ ರಾಷ್ಟ್ರಪತಿ ಹೊಸ ಹುದ್ದೆಯಲ್ಲಿ ಗೌರ್ನರ್ ಜನರಲ್ ಆಗಿದ್ದ ರಾಜಾಜಿಯವರನ್ನೇ ಮುಂದುವರಿಸುವುದು ನೆಹರೂ ಅವರ ಅಪೇಕ್ಷೆಯಾಗಿತ್ತು. ರಾಜಾಜಿ ಸುಸಂಸ್ಕೃತ ವಿದ್ವಾಂಸರಾಗಿದ್ದು ಪ್ರಧಾನ ಮಂತ್ರಿಯವರಿಗೆ ಅವರೊಂದಿಗೆ ಸಾಮರಸ್ಯವಿತ್ತು. ಆದರೆ ತಮ್ಮ ನಿಕಟವರ್ತಿಯಾದ ರಾಜೇಂದ್ರ ಪ್ರಸಾದರನ್ನು ಆ ಹುದ್ದೆಯಲ್ಲಿ ಕೂರಿಸಬೇಕೆಂಬುದು ಪಟೇಲರ ಆಶಯವಾಗಿತ್ತು. ರಾಜೇಂದ್ರ ಪ್ರಸಾದರು ಕಾಂಗ್ರೆಸ್ ಪಕ್ಷಕ್ಕೂ ಬಹುಮಟ್ಟಿಗೆ ಒಪ್ಪಿತವಾಗಿದ್ದರು. ರಾಷ್ಟ್ರಪತಿ ನೀವೇ ಎಂದು ನೆಹರೂ ರಾಜಾಜಿಗೆ ಆಶ್ವಾಸನೆಯಿತ್ತಿದ್ದರು. ಪಕ್ಷ ರಾಜೇಂದ್ರ ಪ್ರಸಾದರ ಹೆಸರನ್ನು ಸೂಚಿಸುವಂತೆ ಪಟೇಲರು ಏರ್ಪಾಟುಮಾಡಿದರು. ಇದರಿಂದ ನೆಹರೂಗೆ ತುಂಬ ಇರುಸು ಮುರುಸಾಯಿತು, ಕೋಪ ಬಂತು.

ಭಾರತದ ಸ್ವಾತಂತ್ರ್ಯ ಘೋಷಣೆಗೆ ಮೊದಲು ಗೊತ್ತಾಗಿದ್ದ ಜನವರಿ 26ರಂದೇ ಪ್ರಥಮ ಗಣರಾಜ್ಯೋತ್ಸವ ದಿನಾಚರಣೆ ನಡೆಯಬೇಕೆಂದು ನಿರ್ಧರಿಸಲಾಯಿತು. ಅಂದು ರಾಜೇಂದ್ರ ಪ್ರಸಾದರು ಅಭಿವಂದನೆ ಸ್ವೀಕರಿಸಿದರು. ನಂತರ ಇದು ವಾರ್ಷಿಕ ಆಚರಣೆಯಾಯಿತು. ವರ್ಣರಂಜಿತ ಪರೇಡ್ ಸಹ ಸೇರಿಕೊಂಡಿತು. ಸಶಸ್ತ್ರ ಪಡೆಗಳ ಮೂರುಸಾವಿರ ಮಂದಿ ರಾಷ್ಟ್ರಪತಿಯವರ ಸಮ್ಮುಖದಲ್ಲಿ ಪಥ ಸಂಚಲನೆ ಮಾಡುತ್ತಿದ್ದರು. ಫಿರಂಗಿ ದಳ ಮೂವತ್ತೊಂದು ಕುಶಾಲು ತೋಪು ಹಾರಿಸುವುದು ಶುರುವಾಯಿತು. ನಭೋಮಂಡಲದಲ್ಲಿ ವಾಯುಪಡೆ ವಿಮಾನಗಳು ಸಂಚರಿಸಿ ಪುಷ್ಪವೃಷ್ಟಿ ಕರೆಯಲಾರಂಭಿಸಿದವು. ಗಾಂಧಿಯವರ ಭಾರತ ಸರ್ವತಂತ್ರ ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿ ಘೋಷಿಸಿಕೊಂಡಿತು.

ಮೊದಲ ಸುತ್ತಿನಲ್ಲಿ ಪಟೇಲರು ಜಯಶಾಲಿಯಾದರು. ಎರಡನೆಯ ಸುತ್ತಿನ ಹೋರಾಟ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರ ಆಯ್ಕೆಯಲ್ಲಿ ನಡೆಯಿತು. ಪಟೇಲರು ಈ ಸ್ಥಾನಕ್ಕೆ ಯುನೈಟೆಡ್ ಪ್ರಾವಿನ್ಸ್‌ನ ಹಿರಿಯ ಕಾಂಗ್ರೆಸ್ ನಾಯಕ ಪುರುಷೋತ್ತಮ ದಾಸ್

ಟಂಡನ್ ಅವರ ಹೆಸರನ್ನು ಸೂಚಿಸಿದರು. ಟಂಡನ್, ನೆಹರೂ ಅವರ ತೌರೂರಾದ ಅಲಹಾಬಾದಿನವರು. ಟಂಡನ್ ಮತ್ತು ನೆಹರೂ ಸನ್ಮಿತ್ರರಾಗಿದ್ದರು. ಆದರೆ ಇಬ್ಬರಲ್ಲೂ ಸೈದ್ಧಾಂತಿಕ ಅನುರಾಗ ಇರಲಿಲ್ಲ. ಅಧ್ಯಕ್ಷ ಸ್ಥಾನಕ್ಕೆ ಟಂಡನ್ ಕಾಂಗ್ರೆಸ್ಸಿನ ತೀವ್ರ ಕೋಮುವಾದಿ ಬಣವನ್ನು ಪ್ರತಿನಿಧಿಸುವ ಅಭ್ಯರ್ಥಿಯಾಗಿದ್ದರು. ಒಟ್ಟಾರೆಯಾಗಿ ಅವರು, ರಾಜಕೀಯ ಮತ್ತು ಸಾಮಾಜಿಕ ಅರಾಜಕತೆಯ ಮೂರ್ತಸ್ವರೂಪವಾಗಿ, ಮುಸ್ಲಿಂ ವಿರೋಧಿಯಾಗಿ, ಹಿಂದೂ ಕಟ್ಟಾಭಿಮಾನಿಯಾಗಿ, ಮೃತ ಸಂಸ್ಕೃತಿಯ, ಎಂದೋ ನಶಿಸಿ ಹೋಗಿದ್ದ ಸಾಮಾಜಿಕ ವ್ಯವಸ್ಥೆಯ ಪುನರುತ್ಥಾನಕಾರಿಯಾಗಿ ಕಂಡರು.

ಹಿಂದಿ ಬಾರದ ಭಾರತದ ಪ್ರದೇಶಗಳ ಮೇಲೆ ಆ ಭಾಷೆಯನ್ನು ಹೇರುವ ವಿಷಯದಲ್ಲಿ ನೆಹರೂ ಹಿಂದೆ ಟಂಡನ್ನರನ್ನು ಟೀಕಿಸಿದ್ದರು. ಟಂಡನ್ ಹಿಂದಿ ಕಡ್ಡಾಯಗೊಳಿಸುವುದರ ಪರವಾಗಿದ್ದರು. ತಮ್ಮ ಅಲಹಾಬಾದಿನ ಸಂಗಾತಿ ನಿರಾಶ್ರಿತರ ಸಮ್ಮೇಳನವೊಂದರಲ್ಲಿ ಪಾಕಿಸ್ತಾನದ ವಿರುದ್ಧ ಸೇಡು ತೀರಿಸಿಕೊಳ್ಳುವ ಮಾತನಾಡಿದ್ದು ನೆಹರೂ ಅವರನ್ನು ವಿಚಲಿತಗೊಳಿಸಿತ್ತು. ಭಾರತಕ್ಕೆ ಈಗ ನೋವು, ಅಸಮಾಧಾನಗಳನ್ನು ಮಾಯಿಸುವ ಸಾಂತ್ವನದ ಮುಲಾಮು ಅಗತ್ಯವಿದೆ ಎಂದು ನಂಬಿದ್ದ ನೆಹರೂ ಹಿಂದೂ-ಮುಸ್ಲಿಮರ ನಡುವೆ ರಾಜಿಯುಂಟುಮಾಡುವ ನೀತಿಯನ್ನು ಬಯಸಿದ್ದರು. ಭಾರತದ ಪ್ರಮುಖ ರಾಜಕೀಯ ಪಕ್ಷವಾದ, ಪ್ರಧಾನ ಮಂತ್ರಿಯವರ ಪಕ್ಷವಾದ ಕಾಂಗ್ರೆಸ್ಸಿಗೆ ಟಂಡನ್ ಅವರನ್ನು ಚುನಾಯಿಸುವುದರಿಂದ ತಪ್ಪು ಸಂದೇಶವನ್ನು ರವಾನಿಸಿದಂತಾಗುತ್ತದೆಂದು ನೆಹರೂ ಭಾವಿಸಿದ್ದರು.

1950ರ ಆಗಸ್ಟ್‌ನಲ್ಲಿ ನಡೆದ ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆಯಲ್ಲಿ ಟಂಡನ್ ನಿರಾಯಾಸ ಗೆಲುವು ಸಾಧಿಸಿದರು. ಆಗ ನೆಹರೂ ರಾಜಾಜಿಯವರಿಗೆ ಬರೆದ ಪತ್ರದಲ್ಲಿ ಈ ರೀತಿ ಅಭಿಪ್ರಾಯ ಪಟ್ಟಿದ್ದರು: "ಸರ್ಕಾರದಲ್ಲಿ ಅಥವಾ ಪಕ್ಷದಲ್ಲಿ ನಾನು ಮುಂದುವರಿಯುವುದಕ್ಕಿಂತ ಟಂಡನ್ ಅವರ ಆಯ್ಕೆಯೇ ಮುಖ್ಯವಾಯಿತೆಂಬ ಸ್ಪಷ್ಟ ಸೂಚನೆಯನ್ನು ಫಲಿತಾಂಶ ನೀಡಿದೆ. ಸರ್ಕಾರದಲ್ಲಿ ಮತ್ತು ಪಕ್ಷದಲ್ಲಿ ನನ್ನ ಉಪಯುಕ್ತತೆ ಪೂರ್ತಿಯಾಗಿ ತೀರಿಹೋಗಿದೆ; ನನ್ನ ಅಗತ್ಯ ಕಾಣುತ್ತಿಲ್ಲ ಎಂದು ನನ್ನ ಬುದ್ಧಿ ವಿವೇಕಗಳು ಹೇಳುತ್ತಿವೆ." ಇದರ ಮರುದಿನವೇ ಇನ್ನೊಂದು ಪತ್ರ ಬರೆದು, "ದೈಹಿಕವಾಗಿ ಮತ್ತು ಬೌದ್ಧಿಕವಾಗಿ ನನಗೆ ಆಯಾಸವಾಗಿದೆ. ಭವಿಷ್ಯದಲ್ಲಿ ಆತ್ಮತೃಪ್ತಿಯಿಂದ ಕೆಲಸ ಮಾಡುವುದು ನನ್ನಿಂದ ಸಾಧ್ಯವಾಗದು ಎಂದು ನನಗೆ ಭಾಸವಾಗುತ್ತಿದೆ" ಎಂದು ತಿಳಿಸಿದ್ದರು.

ಈ ಘಟ್ಟದಲ್ಲಿ ರಾಜಾಜಿ ಎರಡು ಗುಂಪುಗಳ ನಡುವೆ ರಾಜಿ ಪ್ರಯತ್ನ ಮಾಡಿದರು. ಪಟೇಲರು ರಾಜಿಗೆ ಸಿದ್ಧವಿದ್ದರು. ಕಾಂಗ್ರೆಸ್ಸಿನ ನೀತಿಯ ಕೆಲವೊಂದು ವಿಷಯಗಳನ್ನು ತಾವು ಅನುಷ್ಠಾನಕ್ಕೆ ತರುವುದಾಗಿ ನೆಹರೂ ಮತ್ತು ಪಟೇಲ್ ಜಂಟಿ ಹೇಳಿಕೆ ನೀಡಬೇಕೆಂಬುದು ರಾಜಿಸೂತ್ರಗಳಲ್ಲಿ ಒಂದಾಗಿತ್ತು. ಇದನ್ನು ಪಟೇಲರೇ ಸಲಹೆ ಮಾಡಿದ್ದರು. ಪ್ರಧಾನ ಮಂತ್ರಿ ತಾವೊಬ್ಬರೇ ಇಂಥ ಹೇಳಿಕೆ ನೀಡುವ ನಿರ್ಧಾರ ಕೈಗೊಂಡರು. ಎರಡು ವಾರಗಳ ಚಿಂತನಮಂಥನದ ನಂತರ ನೆಹರೂ ಈ ವ್ಯಾಜ್ಯಕ್ಕೆ ತೆರೆ ಎಳೆಯಲು ನಿರ್ಧರಿಸಿದರು. 1950ರ

ಸೆಪ್ಟಂಬರ್ 13ರಂದು ಅವರು, ಕೋಮುವಾದಿ ಪ್ರತಿಗಾಮಿ ಶಕ್ತಿಗಳು ಟಂಡನ್ನರ ವಿಜಯದ ಬಗ್ಗೆ ಬಹಿರಂಗವಾಗಿ ಸಂತೋಷ ವ್ಯಕ್ತಪಡಿಸಿರುವುದನ್ನು ಖಂಡಿಸಿ ಪತ್ರಿಕಾ ಹೇಳಿಕೆಯೊಂದನ್ನು ನೀಡಿದರು. "ಕೋಮುವಾದ ಹಾಗೂ ಜೀರ್ಣೋದ್ಧಾರ ಪ್ರವೃತ್ತಿಗಳು ಕ್ರಮೇಣ ಕಾಂಗ್ರೆಸ್ಸಿನೊಳಗೆ ನುಸುಳುತ್ತಿರುವುದರಿಂದ ತಮಗೆ ತೀವ್ರ ಸಂತಾಪವಾಗಿದೆಯೆಂದೂ ಇದು ಸರ್ಕಾರದ ನೀತಿಯ ಮೇಲೆ ಪರಿಣಾಮ ಬೀರಬಹುದೆಂಪೂ ಅವರು ತಿಳಿಸಿದ್ದರು. ಆದರೆ ಭಾರತ ಪಾಕಿಸ್ತಾನದಂತಲ್ಲ, ಭಾರತ ಜಾತ್ಯತೀತ ರಾಷ್ಟ್ರ. ನಾವು ಬಹುಸಂಖ್ಯಾತರನ್ನು ಕಾಣುವಂತೆಯೇ, ನಡೆಸಿಕೊಳ್ಳು ವಂತೆಯೇ ಅಲ್ಪಸಂಖ್ಯಾತರನ್ನೂ ಕಾಣಬೇಕು, ನಡೆಸಿಕೊಳ್ಳಬೇಕು. ನ್ಯಾಯೋಚಿತವಾಗಿ ನಡೆಸಿಕೊಂಡರಷ್ಟೇ ಸಾಲದು, ತಮ್ಮನ್ನು ನ್ಯಾಯೋಚಿತವಾಗಿ ನಡೆಸಿಕೊಳ್ಳಲಾಗುತ್ತಿದೆ ಎನ್ನುವ ಭಾವನೆ ಅವರ ಮನದಲ್ಲಿ ಮೂಡಬೇಕು. ಈಗಿರುವ ಗೊಂದಲದ ಹಾಗೂ ಸುಳ್ಳು ಸಿದ್ಧಾಂತಗಳ ಬೆದರಿಕೆಗಳ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಈ ವಿಷಯದಲ್ಲಿ ತನ್ನ ನೀತಿಯನ್ನು ನಿಸ್ಸಂದಿಗ್ಧ ಮಾತುಗಳಲ್ಲಿ ಘೋಷಿಸುವುದು ಅಗತ್ಯವಾಗಿದೆ" ಎಂದು ನೆಹರೂ ಆಗ್ರಹಪೂರ್ವಕವಾಗಿಯೇ ಹೇಳಿದ್ದರು.

ತಾವು ಭಾರತದಲ್ಲಿ ಕ್ಷೇಮ-ಸುಭದ್ರತೆಗಳಿಂದಿದ್ದೇವೆ ಎಂಬ ಭಾವನೆಯನ್ನು ಮುಸ್ಲಿಮರಲ್ಲಿ ಉಂಟುಮಾಡುವುದು ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದ ಹೊಣೆ ಎಂಬುದು ನೆಹರೂ ಅವರ ಅಭಿಪ್ರಾಯವಾಗಿತ್ತು. ಆದರೆ ಈ ಹೊಣೆ ಮುಸ್ಲಿಮರದೇ ಆಗಿದೆ ಎಂದು ಪಟೇಲರ ನಿಲುವಾಗಿತ್ತು. ಮುಸ್ಲಿಮರು ಪಾಕಿಸ್ತಾನ ಬೇಡಿಕೆ ವಿಷಯದಲ್ಲಿ ಹಿಂದೆ ಹೊಂದಿದ್ದ ಸ್ನೇಹ-ಸಂಬಂಧ ಹಾಗೂ ದುರದೃಷ್ಟವಶಾತ್ ಅವರ ಕೆಲವೊಂದು ಚಟುವಟಿಕೆಗಳಿಂದಾಗಿ ಅವರ ನಿಷ್ಠೆ ಬಗ್ಗೆ ಬಹುಸಂಖ್ಯಾತರಲ್ಲಿ ಶಂಕೆ ತಲೆದೋರಿದೆ. ಈ ಶಂಕೆ, ತಪ್ಪು ಕಲ್ಪನೆಗಳನ್ನು ನಿವಾರಿಸುವ ಹೊಣೆ ಮುಸ್ಲಿಮರದೇ ಆಗಿದೆ ಎಂದು ಒಮ್ಮೆ ಪಟೇಲರು ನೆಹರೂಗೆ ತಿಳಿಸಿದ್ದುಂಟು.

ಅಲ್ಪಸಂಖ್ಯಾತರ ವಿಷಯದಲ್ಲಿ ಹಾಗೂ ಇನ್ನೂ ಕೆಲವು ನೀತಿ-ಸಿದ್ಧಾಂತಗಳ ವಿಷಯದಲ್ಲಿ ನೆಹರೂ ಮತ್ತು ಪಟೇಲರ ನಡುವೆ ಒಮ್ಮತವಿರಲಿಲ್ಲ. ಆದರೆ ಕಾಂಗ್ರೆಸ್ ಅಧ್ಯಕ್ಷ ಚುನಾವಣೆ ಫಲಿತಾಂಶದ ನಂತರದ ಪರಿಣಾಮಗಳಿಂದಾಗಿ ಪಟೇಲರು ಈ ಮತಭೇದವನ್ನು ದೊಡ್ಡದು ಮಾಡಲಿಲ್ಲ. ಒತ್ತಾಯಪೂರ್ವಕವಾಗಿ ಹೇಳಲಿಲ್ಲ. ತಮ್ಮ ಪಕ್ಷ ನಾಶವಾದರೆ ದೇಶ ನಾಶ ಖಚಿತ ಎಂಬುದು ಪಟೇಲರಿಗೆ ತಿಳಿದಿತ್ತು. ಹೀಗಾಗಿ ಅವರು ತಮ್ಮನ್ನು ಭೇಟಿಮಾಡಿದ ಕಾಂಗ್ರೆಸ್ ಸದಸ್ಯರಿಗೆ "ಈ ವಿವಾದಗಳಿಗೆಲ್ಲ ಗಮನ ಕೊಡಬೇಡಿ, ನೆಹರೂ ಹೇಳಿದಂತೆ ಮಾಡಿ" ಎಂದು ಸೂಚಿಸುತ್ತಿದ್ದರು. ಅಕ್ಟೋಬರ್ 2ರಂದು ಇಂದೂರಿನಲ್ಲಿ ಮಹಿಳಾ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದಾಗ ಪಟೇಲರು ನೆಹರೂ ಅವರಲ್ಲಿ ತಮ್ಮ ನಿಷ್ಠೆ ವ್ಯಕ್ತಪಡಿಸಲು ಗಾಂಧಿ ಜಯಂತಿಯ ಲಾಭ ಪಡೆದುಕೊಂಡರು. "ಜವಹರಲಾಲ್ ನೆಹರೂ ನಮ್ಮ ನಾಯಕರು. ಬಾಪು, ನೆಹರೂ ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿದ್ದರು, ಅದನ್ನು ಘೋಷಿಸಿದ್ದರೂ ಕೂಡ. ಅವರ ಉಯಿಲನ್ನು

ಅನುಷ್ಠಾನಕ್ಕೆ ತರುವುದು ಬಾಪೂ ಯೋಧರೆಲ್ಲರ ಕರ್ತವ್ಯ...ನಾನು ಅವಿಧೇಯ ಯೋಧನಲ್ಲ" ಎಂದು ಭಾಷಣದಲ್ಲಿ ತಮ್ಮ ನೆಹರೂ ನಿಷ್ಠೆ ಪ್ರದರ್ಶಿಸಿದರು.

ಪಟೇಲರ ಜೀವನ ಚರಿತ್ರಕಾರರಾದ ರಾಜಮೋಹನ ಗಾಂಧಿಯವರ ಮುಂದೆ ಮಂಡಿಸಲಾದ ಸಾಕ್ಷಾಧಾರ ದಾಖಲೆಗಳು ಇದನ್ನು ಹೇಳುತ್ತವೆ. ನೆಹರೂ ಅವರ ಜೀವನ ಚರಿತ್ರಕಾರರು (ಸರ್ವಪಳ್ಳಿ ಗೋಪಾಲ್) ವ್ಯಕ್ತಪಡಿಸಿರುವ ಭಾವನೆಯೊಂದು ಇದನ್ನು ದೃಢಪಡಿಸುತ್ತದೆ. ಇವರಿಬ್ಬರ ನಡುವೆ ಇದ್ದ ಪರಸ್ಪರ ಗೌರವಾದರಗಳು ಹಾಗೂ ಪಟೇಲರ ಕಟ್ಟಾ ಸಭ್ಯತೆ ವೈಮನಸ್ಯ ಬಹಿರಂಗವಾಗುವುದನ್ನು ತಪ್ಪಿಸಿತು. ನೆಹರೂ ಅವರೊಡನೆ ಸಹಕಾರ ಮನೋಭಾವದಿಂದ ಕೆಲಸ ಮಾಡುವುದಾಗಿ ಪಟೇಲರು ಬಾಪೂಗೆ ನೀಡಿದ್ದ ಭರವಸೆಯನ್ನು ನೆನಪು ಮಾಡಿಕೊಂಡರು. ಅಲ್ಲದೆ, ಕಾಂಗ್ರೆಸ್ ಅಧ್ಯಕ್ಷಗಾದಿ ವಿವಾದವಾದಾಗ ಅವರು ತೀವ್ರ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಹಾಸಿಗೆಯಿಂದಲೇ, ಪಟೇಲರು ನವೆಂಬರ್ 14ರಂದು ನೆಹರೂಗೆ ಸ್ವಹಸ್ತದಲ್ಲಿ ಹುಟ್ಟು ಹಬ್ಬದ ಶುಭಾಶಯ ಬರೆದು ಕಳುಹಿಸಿದರು. ಒಂದು ವಾರದ ನಂತರ ಪ್ರಧಾನ ಮಂತ್ರಿಗಳು ಪಟೇಲರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಯೋಗಕ್ಷೇಮ ವಿಚಾರಿಸಿದರು. ಆಗ ಪಟೇಲರು ನುಡಿದಿದ್ದರು: "ಆಯಾಸ ಪರಿಹಾರವಾಗಿ ಸ್ವಲ್ಪ ಶಕ್ತಿಗೂಡಿದ ಕೂಡಲೇ ನಿಮ್ಮೊಡನೆ ಏಕಾಂತವಲ್ಲಿ ಮಾತನಾಡುವ ಇಚ್ಛೆ ನನಗಿದೆ. ನೀವು ನನ್ನಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದೀರಿ ಎಂಬ ಭಾವನೆ ನನ್ನಲ್ಲಿ ಉಂಟಾಗುತ್ತಿದೆ" ನೆಹರೂ ಉತ್ತರ: "ನಾನು ನನ್ನಲ್ಲೇ ವಿಶ್ವಾಸ ಕಳೆದುಕೊಳ್ಳುತ್ತಿದ್ದೇನೆ."

ಮೂರು ವಾರಗಳ ನಂತರ ಪಟೇಲರು ನಿಧನ ಹೊಂದಿದರು. ಪಟೇಲರ ನಿಧನಕ್ಕೆ ಸಂತಾಪ ಸೂಚಿಸುವ ಮಂತ್ರಿಮಂಡಲದ ನಿರ್ಣಯವನ್ನು ಬರೆಯುವ ಹೊಣೆ ನೆಹರೂ ಅವರ ಮೇಲೆ ಬಿತ್ತು. ನೆಹರೂ ನಿರ್ಣಯದಲ್ಲಿ, ರಾಜಮಹಾರಾಜರ ಸಂಸ್ಥಾನಗಳ ಜಟಿಲ ಸಮಸ್ಯೆ ನಿವಾರಣೆಯಲ್ಲಿ ಪಟೇಲರು ತೋರಿದ ಮುತ್ಸದ್ದಿತನವನ್ನೂ ಸಂಯುಕ್ತ ಸಶಕ್ತ ಭಾರತದ ಬಗ್ಗೆ ಅವರಿಗಿದ್ದ ಸಮರ್ಪಣ ಮನೋಭಾವವನ್ನೂ ವಿಶೇಷವಾಗಿ ಪ್ರಸ್ತಾಪಿಸಿ ಮುಕ್ತ ಕಂಠದಿಂದ ಶ್ಲಾಘಿಸಿದ್ದರು. ನೆಹರೂ ಅವರಿಗೆ ಪಟೇಲರು ಸಂಗಾತಿಯೂ ಆಗಿದ್ದರು, ಪ್ರತಿಸ್ಪರ್ಧಿಯೂ ಆಗಿದ್ದರು. ಆದರೆ ದೇಶಬಾಂಧವರಿಗೆ ಅವರು ಮಹಾನ್ ಜನಸೇವಕ, ಮೇಧಾವಿ ಮುತ್ಸದ್ದಿ ಮತ್ತು ಮಹಾನ್ ಸಾಧಕರಾಗಿದ್ದರು.

II

1950ರ ಡಿಸೆಂಬರಿನಲ್ಲಿ ಸಂಭವಿಸಿದ ಪಟೇಲರ ನಿಧನದಿಂದಾಗಿ ಕಾಂಗ್ರೆಸ್ ಪಕ್ಷದಲ್ಲಿ ನೆಹರೂಗೆ ಸರಿಗಟ್ಟಿ ನಿಲ್ಲುತ್ತಿದ್ದ ನಾಯಕನೊಬ್ಬನ ಕಣ್ಮರೆಯಾದಂತಾಯಿತು. ಭಾರತದ ಆಡಳಿತ ಪಕ್ಷದಲ್ಲಿದ್ದ ಎರಡು ಅಧಿಕಾರ ಕೇಂದ್ರಗಳು ಇನ್ನಿಲ್ಲವಾದವು. ಆದಾಗ್ಯೂ ನೆಹರೂ ಅವರು ಇನ್ನಿಬ್ಬರನ್ನು, ಪಟೇಲರಷ್ಟು ಪ್ರಬಲರಲ್ಲದ ಪ್ರತಿಸ್ಪರ್ಧಿಗಳನ್ನು ಎದುರಿಸಬೇಕಾಯಿತು. ಒಬ್ಬರು ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮ ದಾಸ್ ಟಂಡನ್, ಮತ್ತೊಬ್ಬರು ರಾಷ್ಟ್ರಪತಿ

ರಾಜೇಂದ್ರ ಪ್ರಸಾದ್. ನೆಹರೂ ಜೀವನ ಚರಿತ್ರಕಾರರು ಪ್ರಸಾದರನ್ನು "ಮಧ್ಯಯುಗೀನ ಶ್ರೇಣಿಯಲ್ಲಿ ಅಗ್ರಗಣ್ಯರು" ಎಂದು ಬಣ್ಣಿಸಿದ್ದಾರೆ. ಇದು, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅಪಾರ ತ್ಯಾಗ ಮಾಡಿದ ದೇಶಭಕ್ತರೊಬ್ಬರ ಬಗ್ಗೆ ಕಟುವಾದ ಟೀಕೆಯಾಯಿತು. ಇದು ಏನೇ ಇರಲಿ, ಸಾರ್ವಜನಿಕ ಜೀವನದಲ್ಲಿ ಧರ್ಮದ ಸ್ಥಾನದಂಥ ಕೆಲವು ಮಹತ್ವದ ವಿಷಯಗಳಲ್ಲಿ, ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಗಳ ಮಧ್ಯೆ ಭಿನ್ನಾಭಿಪ್ರಾಯಗಳಿದ್ದವು.

1951ರ ವಸಂತಕಾಲದಲ್ಲಿ, ಗುಜರಾತಿನಲ್ಲಿ ಸೋಮನಾಥ ದೇವಾಲಯ ಉದ್ಘಾಟಿಸುವಂತೆ ರಾಷ್ಟ್ರಪತಿಯವರಿಗೆ ಮನವಿ ಮಾಡಿದಾಗ ಭಿನ್ನಾಭಿಪ್ರಾಯಗಳು ಬಹಿರಂಗಗೊಂಡವು. ಸೋಮನಾಥ ದೇವಾಲಯ ಒಂದು ಕಾಲಕ್ಕೆ ಅತ್ಯಂತ ಶ್ರೀಮಂತ ದೇವಾಲಯವಾಗಿತ್ತು. ಹನ್ನೊಂದನೆ ಶತಮಾನದ ಕುಪ್ರಸಿದ್ಧ ಲೂಟಿಗಾರ ಘಜ್ನಿ ಮೊಹಮ್ಮದ್ ಸೇರಿದಂತೆ ಅನೇಕ ಮುಸ್ಲಿಮ್ ದೊರೆಗಳು ಸೋಮನಾಥ ದೇವಾಲಯದ ಮೇಲೆ ದಾಳಿ ನಡೆಸಿದ್ದರು. ಆನಂತರ ಮುಘಲ್ ಚಕ್ರವರ್ತಿ ಔರಂಗಜೇಬ ಸೋಮನಾಥ ದೇವಾಲಯವನ್ನು ಸಂಪೂರ್ಣ ಧ್ವಂಸಮಾಡಲು ಆಜ್ಞೆ ಮಾಡಿದ. ಎರಡೂವರೆ ಶತಮಾನಗಳ ಕಾಲ ಸೋಮನಾಥ ದೇವಾಲಯ ಭಗ್ನಾವಶೇಷವಾಗಿ ನಿಂತಿತ್ತು. 1947ರ ಸೆಪ್ಟಂಬರಿನಲ್ಲಿ ಪಟೇಲರು ಅಲ್ಲಿ ಭೇಟಿಯಿತ್ತಾಗ ದೇವಾಲಯದ ಪುನರ್‌ನಿರ್ಮಾಣಕ್ಕೆ ಸಹಾಯ ಮಾಡುವ ಆಶ್ವಾಸನೆಯಿತ್ತರು. ಪಟೇಲರ ಸಹೋದ್ಯೋಗಿ ಕೆ.ಎಂ. ಮುನ್ಶಿ ಪುನರ್‌ನಿರ್ಮಾಣದ ಕಾರ್ಯವನ್ನು ವಹಿಸಿಕೊಂಡರು.

ಪುನರ್‌ನಿರ್ಮಿತ ದೇವಾಲಯದಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಲು ಭಾರತದ ರಾಷ್ಟ್ರಪತಿಗಳನ್ನು ಆರಿಸಿದಾಗ ನೆಹರೂ ಅವರಿಗೆ ಗಾಬರಿಯಾಯಿತು. ಸೋಮನಾಥ ದೇವಾಲಯದ ವರ್ಣರಂಜಿತ ಉದ್ಘಾಟನೆಯಲ್ಲಿ ಭಾಗವಹಿಸದಂತೆ ರಾಷ್ಟ್ರಪತಿಗೆ ಸಲಹೆ ಮಾಡಿದ ನೆಹರೂ "ಸೋಮನಾಥದಲ್ಲಿ ಬೃಹತ್ ಪ್ರಮಾಣದಲ್ಲಿ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಇದು ಸಕಾಲವಲ್ಲ ಎಂದು ವೈಯಕ್ತಿಕವಾಗಿ ನನಗನ್ನಿಸುತ್ತದೆ. ಇದನ್ನು ನಿಧಾನವಾಗಿ, ಕಾಲಕ್ರಮೇಣ ಕೈಗೆತ್ತಿಕೊಳ್ಳಬಹುದಿತ್ತು ಹಾಗೂ ಇನ್ನೂ ಉಜ್ವಲವಾಗಿ ಮಾಡಬಹುದಿತ್ತು. ಆದಾಗ್ಯೂ, ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ನೀವು ವಹಿಸಬಾರದೆಂದೇ ನನ್ನ ಅನ್ನಿಸಿಕೆ" ಎಂದು ಬರೆದಿದ್ದರು.

ಪ್ರಸಾದರು ಈ ಸಲಹೆಯನ್ನು ಒಪ್ಪಲಿಲ್ಲ. ಸೋಮನಾಥಕ್ಕೆ ಹೋದರು. ಆದರೆ ಆ ಸಮಾರಂಭದಲ್ಲಿ ಗಾಂಧೀಜಿ ಆದರ್ಶವಾದ ಅಂತರಧರ್ಮೀಯ ಸಾಮರಸ್ಯ ಕುರಿತು ಪ್ರಮುಖವಾಗಿ ಮಾತನಾಡಿದರು. ಅಂದಿನ ಭಾಷಣದಲ್ಲಿ ಅವರು ಭಾರತದ ದೇವಾಲಯಗಳಲ್ಲಿದ್ದ ಚಿನ್ನ, ಸಂಪತ್ತು ಹಾಗೂ ಅಭ್ಯುದಯಗಳ ಸಂಕೇತವಾಗಿದ್ದಂಥ ಸುವರ್ಣಯುಗದ ಹಳೆಯ ನೆನಪುಗಳನ್ನು ಮೀಟಿದ್ದರೆಂಬುದೂ ಅಷ್ಟೇ ದಿಟ. "ಧಾರ್ಮಿಕ ಅಸಹನೆ, ದ್ವೇಷ ಮತ್ತು ಅನೈತಿಕ ನಡವಳಿಕೆಗಳಿಗೆ ಪ್ರಚೋದನಕಾರಿಯಾಗುತ್ತದೆ" ಎಂಬುದು ಆನಂತರದ ಸೋಮನಾಥ ದೇವಾಲಯದ ಚರಿತ್ರೆಯಿಂದ ಸಾಬೀತಾಯಿತು. ಎಂದೇ, ಸೋಮನಾಥ ದೇವಾಲಯದ ಪುನರ್‌ನಿರ್ಮಾಣದ ಉದ್ದೇಶ, ಶತಮಾನಗಳಷ್ಟು ಹಿಂದೆಯೇ ವಾಸಿಮಾಡಲಾದ

ಹಳೆಯ ಗಾಯಗಳನ್ನು ಮತ್ತೆ ಕೆರೆಯುವುದಲ್ಲ, ಬದಲಾಗಿ ಪ್ರತಿ ಜಾತಿಗೂ, ಪ್ರತಿ ಸಮುದಾಯಕ್ಕೂ ಸ್ವಾತಂತ್ರ್ಯ ದೊರಕಿಸಿ ಕೊಡುವುದೇ ಇದರ ಉದ್ದೇಶ ಎಂದು ನುಡಿದ ರಾಜೇಂದ್ರ ಪ್ರಸಾದರು ಸಂಪೂರ್ಣ ಕೋಮು ಸಹನೆ-ಸಾಮರಸ್ಯಗಳಿಗೆ ಕರೆನೀಡಿದರು: "ಧರ್ಮದ ತಿರುಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿ. ಸತ್ಯ ಮತ್ತು ದೇವರುಗಳ ಸಾಕ್ಷಾತ್ಕಾರಕ್ಕೆ ಇಂಥದೇ ಒಂದು ಮಾರ್ಗವನ್ನು, ಪಂಥವನ್ನು ಅನುಸರಿಸಬೇಕೆಂಬ ಕಡ್ಡಾಯವೇನಿಲ್ಲ. ಎಲ್ಲ ನದಿಗಳೂ ಸಮುದ್ರದಲ್ಲಿ ಸಂಗಮಿಸುವಂತೆ ವಿವಿಧ ಧರ್ಮಗಳು ದೇವರ ಸಾನ್ನಿಧ್ಯ ಸೇರಲು ಜನರಿಗೆ ಸಹಾಯ ಮಾಡುತ್ತವೆ."

ನೆಹರೂ ಅವರು ಪ್ರಸಾದರ ಭಾಷಣವನ್ನು ಓದಿದರೋ ಇಲ್ಲವೋ ತಿಳಿಯದು. ಏನೇ ಆಗಲಿ ಪ್ರಸಾದರು ಸೋಮನಾಥ ಉದ್ಘಾಟನೆಗೆ ಹೋಗಬಾರದಿತ್ತೆಂಬುದೇ ಅವರ ನಿಲುವಾಗಿತ್ತು. ಸಾರ್ವಜನಿಕ ಜೀವನದಲ್ಲಿ ಉನ್ನತ ಪದವಿಗಳಲ್ಲಿರುವವರು ಧರ್ಮಗಳು-ದೇವಾಲಯಗಳೊಂದಿಗೆ ಸಾರ್ವತ್ರಿಕವಾಗಿ ಸಂಬಂಧವಿಟ್ಟುಕೊಳ್ಳಬಾರದೆಂಬುದು ಪ್ರಧಾನ ಮಂತ್ರಿಯವರ ಆಲೋಚನೆಯಾಗಿತ್ತು. ಆದರೆ ಇಂಥವರು ಎಲ್ಲ ಧರ್ಮಗಳ ಬಗ್ಗೆ ಸಮಾನ ಗೌರವ ಹೊಂದಿರಬೇಕೆಂಬುದು ಪ್ರಸಾದರ ನಿಲುವಾಗಿತ್ತು. ಪ್ರಸಾದರು ಸೋಮನಾಥದಲ್ಲಿ ಹೀಗೆ ಹೇಳಿದ್ದರು: "ನಾನು ಹಿಂದೂ ಆದರೂ ಎಲ್ಲ ಧರ್ಮಗಳನ್ನೂ ಗೌರವಿಸುತ್ತೇನೆ. ಸಂದರ್ಭ ಬಂದಾಗ ಚರ್ಚು, ಮಸೀದಿ, ದರ್ಗಾ ಮತ್ತು ಗುರುದ್ವಾರಗಳಿಗೂ ಹೋಗುತ್ತೇನೆ."

ಏತನ್ಮಧ್ಯೆ ಕಾಂಗ್ರೆಸ್ಸಿನಲ್ಲಿ ಹಿಂದೂ ಲೇಪ ಗಾಢವಾದ ಕಾರಣ ಹುರುಪಿನ ನಾಯಕರನೇಕರು ಪಕ್ಷ ತೊರೆದರು. ಈ ವೇಳೆಗಾಗಲೇ, 1948ರಲ್ಲಿ ಬುದ್ಧಿಶಾಲಿ ತರುಣರು ಕೆಲವರು ಸಮಾಜವಾದಿ ಪಕ್ಷ ಕಟ್ಟಲು ಕಾಂಗ್ರೆಸ್ ತ್ಯಜಿಸಿದ್ದರು. ನಂತರ ಜೂನ್ 1951ರಲ್ಲಿ ಗೌರವಾನ್ವಿತ ಗಾಂಧೀವಾದಿ ಆಚಾರ್ಯ ಜೆ.ಬಿ. ಕೃಪಲಾನಿ, ಕಿಸಾನ್ ಮಜ್ದೂರ್ ಪ್ರಜಾ ಪಾರ್ಟಿ ಕಟ್ಟಲು ಕಾಂಗ್ರೆಸ್ ಬಿಟ್ಟು ಹೋದರು. ಈ ಪಕ್ಷ, ಹೆಸರೇ ಸೂಚಿಸುವಂತೆ ಉಳುವ ಕೃಷಿಕರ ಹಿತರಕ್ಷಣೆಗೆ ಟೊಂಕ ಕಟ್ಟಿ ನಿಂತ ಪಕ್ಷವಾಗಿತ್ತು. ಸಮಾಜವಾದಿ ನಾಯಕರು ಹೇಳಿದಂತೆ, ಪುರುಷೋತ್ತಮ ದಾಸ್ ಟಂಡನ್ನರ ನೇತೃತ್ವದಲ್ಲಿ ಕಾಂಗ್ರೆಸ್ ಒಂದು ಸನಾತನವಾದಿ ಸಂಸ್ಥೆಯಾಗಿದೆಯೆಂದು ಕೃಪಲಾನಿ ಪಕ್ಷ ತ್ಯಜಿಸುವಾಗ ಟೀಕಿಸಿದ್ದರು.

ಕಿಸಾನ್ ಮಜ್ದೂರ್ ಪ್ರಜಾ ಪಾರ್ಟಿ ಸ್ಥಾಪನೆ ಟಂಡನ್ ವಿರುದ್ಧ ನೆಹರೂ ಅವರ ಕೈಗಳನ್ನು ಬಲಪಡಿಸಿತು. ಕಾಂಗ್ರೆಸ್ ಇತ್ತೀಚೆಗೆ ತುಳಿದಿರುವ ಪ್ರತಿಗಾಮಿ ಹಾದಿಯನ್ನು ಬಿಟ್ಟು ತನ್ನ ಪ್ರಜಾಸತ್ತಾತ್ಮಕ ಪರಂಪರೆಯನ್ನು ಮತ್ತೆ ಮೈಗೂಡಿಸಿಕೊಳ್ಳಬೇಕಾಗಿದೆಯೆಂದು ನೆಹರೂ ಕರೆ ನೀಡಲು ಇದು ಪ್ರೇರಣೆ ಒದಗಿಸಿತು. ಬೆಂಗಳೂರಿನಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನದಲ್ಲಿ ನೆಹರೂ ಬಲಾಬಲ ಪ್ರದರ್ಶನಕ್ಕೆ ಮುಂದಾದರು. ಮುಂಬರಲಿರುವ ಚುನಾವಣೆ ಬಗ್ಗೆ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ತಲೆಕೆಡಿಸಿಕೊಂಡಿದ್ದರು. ದಕ್ಷಿಣದ ಪತ್ರಕರ್ತರೊಬ್ಬರು ಹೇಳಿರುವಂತೆ, "ಕಾಂಗ್ರೆಸ್ ಅಧ್ಯಕ್ಷ ಟಂಡನ್ನರಿಗೆ ಓಟುಗಳನ್ನು ಸೆಳೆಯುವ ವರ್ಚಸ್ಸಿಲ್ಲವಾದ್ದರಿಂದ ಎ.ಐ.ಸಿ.ಸಿ. ನೆಹರೂ ಅವರನ್ನು ಬೆಂಬಲಿಸುವುದು

ಖಚಿತವಾಗಿತ್ತು. ಪಂಡಿತ ನೆಹರೂ ಓಟು ಸೆಳೆಯುವ ಅಸಾಧಾರಣ ವರ್ಚಸ್ಸುಳ್ಳವರಾಗಿದ್ದರು. ಚುನಾವಣೆಗೆ ಮುನ್ನ ಆಗ ಓಟುಗಳೇ ಮುಖ್ಯವಾಗಿದ್ದವು. ಬೇರೆ ಯಾರಲ್ಲೂ ಇಲ್ಲದಂಥ ಮೌಲ್ಯವನ್ನು ಕಾಂಗ್ರೆಸ್ ನೆಹರೂ ಅವರಲ್ಲಿ ಕಂಡಿತ್ತು."

ಕೊನೆಗೆ, ವಾಸ್ತವವಾಗಿ ಬೆಂಗಳೂರಿನಲ್ಲಿ ಆದದ್ದು ಇಷ್ಟೇ: "ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಟಂಡನ್ ರಾಜೀನಾಮೆ ಸಲ್ಲಿಸಿದರು, ಅವರ ಸ್ಥಾನಕ್ಕೆ ನೆಹರೂ ಆಯ್ಕೆಯಾದರು." ಇದರಿಂದ ದೇಶದಲ್ಲಿನ ಎಲ್ಲ ಕೋಮು ಶಕ್ತಿಗಳ ವಿರುದ್ಧ ಪೂರ್ಣ ಸಂಗ್ರಾಮ ಸಾರುವುದು ನೆಹರೂ ಅವರಿಗೆ ಸಾಧ್ಯವಾಯಿತು. 1952ರ ಚುನಾವಣೆ ಈ ಸಂಗ್ರಾಮದ ಮೊದಲ ಯುದ್ಧವಾಯಿತು.

III

ಭಾರತದ ಪ್ರಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಅನೇಕ ವಿಷಯಗಳ ಮಧ್ಯೆ ಅತ್ಯಂತ ಪ್ರಮುಖವಾದ ವಿಷಯವಾದದ್ದು, ಧಾರ್ಮಿಕ ಶ್ರದ್ಧೆ. ಹೊಸದಾಗಿ ಸ್ವತಂತ್ರಗೊಂಡ ದೇಶ ನೇರವಾಗಿ ವಯಸ್ಕರ ಮತದಾನ ಪದ್ಧತಿಯನ್ನೇ ಆಯ್ಕೆ ಮಾಡಿಕೊಂಡಿತು. ಪಾಶ್ಚಿಮಾತ್ಯ ರಾಷ್ಟ್ರಗಳಂತೆ, ಮೊದಲಿಗೆ ಶ್ರೀಮಂತ ಆಸ್ತಿವಂತರಿಗೆ ಮಾತ್ರ ಮತದಾನದ ಹಕ್ಕು ನೀಡಿ, ಶ್ರಮಿಕರು ಹಾಗೂ ಮಹಿಳೆಯರನ್ನು ದೂರವಿರಿಸಿದ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಲಿಲ್ಲ. 1947 ಆಗಸ್ಟ್‌ನಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾಯಿತು. ಇದಾದ ಎರಡು ವರ್ಷಗಳ ನಂತರ ಚುನಾವಣಾ ಆಯೋಗವನ್ನು ನೇಮಿಸಲಾಯಿತು. 1950ರ ಮಾರ್ಚಿಯಲ್ಲಿ, ಸುಕುಮಾರ ಸೇನ್ ಅವರನ್ನು ಪ್ರಧಾನ ಚುನಾವಣಾ ಆಯುಕ್ತರನ್ನಾಗಿ ನೇಮಿಸಲಾಯಿತು. ಮುಂದಿನ ತಿಂಗಳು ಸಂಸತ್ ಜನತಾ ಪ್ರಾತಿನಿದ್ಯ ಮಸೂದೆಯನ್ನು ಅಂಗೀಕರಿಸಿತು. ಈ ಶಾಸನವನ್ನು ಮಂಡಿಸಿದ ನೆಹರೂ ಅವರು, ಚುನಾವಣೆಗಳನ್ನು ಆದಷ್ಟು ಶೀಘ್ರದಲ್ಲಿ, ಅಂದರೆ 1951ರ ವಸಂತ ಋತುವಿನೊಳಗೇ ಮುಗಿಸಲಾಗುವುದೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದರು.

ನೆಹರೂ ಅವರ ಆತುರ ಅರ್ಥವಾಗತಕ್ಕದ್ದೇ ಆಗಿತ್ತು. ಆದರೆ ಚುನಾವಣೆಯನ್ನು ಆಗ–ಮಾಡಿಸಬೇಕಾದ ಮಂದಿ ಇದನ್ನು ಕೊಂಚ ಎಚ್ಚರಿಕೆಯಿಂದಲೇ ಬರಮಾಡಿಕೊಂಡರು. ಸುಕುಮಾರ ಸೇನ್ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಇಲ್ಲ. ದುರ್ದೈವವೆಂದರೆ, ಅವರು ಕೂಡ ಕಾಗದ ಪತ್ರಗಳೇನನ್ನೂ ಬಿಟ್ಟಿಲ್ಲ. ಅವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ನಂತರ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಗಣಿತ ಶಾಸ್ತ್ರದಲ್ಲಿ ಚಿನ್ನದ ಪದಕ ವಿಜೇತರು. 1921ರಲ್ಲಿ ಅವರು ಐಸಿಎಸ್ ಸೇರಿದರು. ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಹುದ್ದೆಗೇರುವ ಮುನ್ನ ಅವರು ಅನೇಕ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಾಗಿ, ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು. ಮುಖ್ಯ ಕಾರ್ಯದರ್ಶಿಯಾಗಿದ್ದಾಗ ಅವರನ್ನು ಪ್ರಧಾನ ಚುನಾವಣಾ ಆಯುಕ್ತ ಸ್ಥಾನಕ್ಕೆ ನಿಯೋಜಿಸಲಾಯಿತು.

ಇವರೊಳಗಿದ್ದ ಗಣಿತಶಾಸ್ತ್ರಜ್ಞ ಚುನಾವಣೆಗೆ ಸ್ವಲ್ಪಕಾಲ ಕಾಯುವಂತೆ ಪ್ರಧಾನಮಂತ್ರಿಗಳಿಗೆ ತಿಳಿಸುವ ಮಾತನ್ನು ಅವರ ಬಾಯಿಯಿಂದ ಆಡಿಸಿರಬಹುದು. ಏಕೆಂದರೆ ಸೇನ್ ಅವರ

ಮುಂದೆ, ಇದುವರೆಗೆ ಯಾವ ಅಧಿಕಾರಿಯೂ ಭರಿಸದಂಥ ಅಗಾಧವಾದ ಕೆಲಸವಿತ್ತು. ಮೊಟ್ಟ ಮೊದಲಿಗೆ ಮತದಾರರ ಸಂಖ್ಯೆಯನ್ನೇ ತೆಗೆದುಕೊಳ್ಳಿ, 176 ದಶಲಕ್ಷ ಭಾರತೀಯರು ಇಪ್ಪತ್ತೊಂದಕ್ಕೂ ಹೆಚ್ಚಿನ ವಯೋಮಾನದವರಾಗಿದ್ದರು. ಇವರಲ್ಲಿ ಶೇ 85ರಷ್ಟು ಮಂದಿಗೆ ಓದಲು-ಬರೆಯಲು ಬರುತ್ತಿರಲಿಲ್ಲ. ಪ್ರತಿಯೊಬ್ಬರನ್ನೂ ಗುರುತಿಸಿ, ಹೆಸರಿಸಿ, ನೋಂದಾಯಿಸಬೇಕಾಗಿತ್ತು. ಮತದಾರರ ನೋಂದಾವಣೆ ಮೊದಲ ಹೆಜ್ಜೆಯಾಗಿತ್ತು. ಇದಲ್ಲದೆ ಪಕ್ಷದ ಚಿಹ್ನೆಗಳನ್ನು, ಮತಪತ್ರಗಳನ್ನು, ಮತ ಪೆಟ್ಟಿಗೆಗಳನ್ನು ಸಜ್ಜುಗೊಳಿಸಬೇಕಿತ್ತು. ಇದೆಲ್ಲ ಹೇಗೆ ಮಾಡುವುದು? ಇದಾದ ನಂತರ, ಮತದಾನ ಕೇಂದ್ರ ಸ್ಥಳಗಳನ್ನು ಗುರುತಿಸಬೇಕಿತ್ತು. ದಕ್ಷರೂ, ಪ್ರಾಮಾಣಿಕರೂ, ಆದ ಚುನಾವಣಾಧಿಕಾರಿಗಳನ್ನು ನೇಮಿಸಬೇಕಿತ್ತು. ಇದಲ್ಲದೆ, ಏಕಕಾಲದಲ್ಲಿ ಸಾರ್ವತ್ರಿಕ ಚುನಾವಣೆಯ ಜೊತೆ ರಾಜ್ಯ ವಿಧಾನ ಸಭೆಗಳಿಗೂ ಚುನಾವಣೆ ನಡೆಸಬೇಕಿತ್ತು. ಈ ಮಹಾಕಾರ್ಯದಲ್ಲಿ, ಸುಕುಮಾರ ಸೇನ್ ಜೊತೆ ವಿವಿಧ ರಾಜ್ಯಗಳ ಚುನಾವಣಾ ಆಯುಕ್ತರುಗಳು ಕೈ ಜೋಡಿಸಿದ್ದರು. ಇವರೆಲ್ಲ ಬಹುತೇಕ ಐಸಿಎಸ್ ಅಧಿಕಾರಿಗಳಾಗಿದ್ದರು.

ಆಖೈರಾಗಿ, 1952ರ ಮೊದಲ ತಿಂಗಳುಗಳಲ್ಲಿ ಚುನಾವಣೆಗಳು ನಡೆಯತಕ್ಕದ್ದೆಂದು ತೀರ್ಮಾನವಾಯಿತು. ಹೊರವಲಯದ ಕೆಲವು ಜಿಲ್ಲೆಗಳಲ್ಲಿ ಇನ್ನೂ ಮುಂಚಿತವಾಗಿಯೇ ನಡೆಸಲು ನಿರ್ಧರಿಸಲಾಗಿತ್ತು. ಅಮೆರಿಕದ ವೀಕ್ಷಕರೊಬ್ಬರು ಬರೆದಂತೆ "ಚುನಾವಣೆಯ ಕಾರ್ಯತಂತ್ರಗಳು ಬೃಹತ್ ಪ್ರಮಾಣದ ಸಮಸ್ಯೆಯನ್ನೇ ತಂದೊಡ್ಡಿದ್ದವು". ಒಂದಿಷ್ಟು ಅಂಕಿಅಂಶಗಳನ್ನು ಗಮನಿಸಿದರೆ ಸೇನ್ ಅವರ ಕಾರ್ಯದ ವ್ಯಾಪ್ತಿ-ವಿಸ್ತಾರ, ಅಗಾಧತೆಗಳು ಗೊತ್ತಾಗುತ್ತದೆ. ಒಟ್ಟು 4500 ಸ್ಥಾನಗಳಿಗೆ ಚುನಾವಣೆ ನಡೆಯಬೇಕಿತ್ತು. ಇದರಲ್ಲಿ 500 ಪಾರ್ಲಿಮೆಂಟ್ ಸ್ಥಾನಗಳು. ಉಳಿದವು ರಾಜ್ಯವಿಧಾನ ಸಭೆಗಳ ಸ್ಥಾನಗಳು. ಇದಕ್ಕಾಗಿ 224000 ಮತಗಟ್ಟೆಗಳನ್ನು ನಿರ್ಮಿಸಲಾಯತು. ಇಪ್ಪತ್ತು ಲಕ್ಷ ಉಕ್ಕಿನ ಮತಪೆಟ್ಟಿಗೆಗಳನ್ನು ತಯಾರಿಸಲಾಯಿತು. ಇದಕ್ಕಾಗಿ 8200 ಟನ್ ಉಕ್ಕು ಬಳಕೆಯಾಯಿತು. ಕ್ಷೇತ್ರವಾರು ಮತದಾರರ ಪಟ್ಟಿ ತಯಾರಿಸಿ ಟೈಪ್ ಮಾಡಲು ಆರು ತಿಂಗಳ ಅವಧಿಗೆ 16500 ಗುಮಾಸ್ತರುಗಳನ್ನು ನೇಮಕ ಮಾಡಲಾಯಿತು. ಮತದಾರರ ಪಟ್ಟಿಗಳ ಮುದ್ರಣಕ್ಕೆ 380000 ಟನ್ ಕಾಗದ ಬಳಸಲಾಗಿತ್ತು. ಮತದಾನದ ಮೇಲುಸ್ತುವಾರಿ ನೋಡಿಕೊಳ್ಳಲು 56 ಸಾವಿರ ಚುನಾವಣಾಧಿಕಾರಿಗಳನ್ನು ನೇಮಿಸಿಕೊಳ್ಳಲಾಗಿತ್ತು. ಇವರಿಗೆ 280000 ಸಹಾಯಕರನ್ನು ನೇಮಿಸಿಕೊಳ್ಳಲಾಗಿತ್ತು. ಚುನಾವಣಾ ಕಾಲದ ಭಯೋತ್ಪಾದನೆ ಮತ್ತು ಹಿಂಸಾಚಾರ ನಿಗ್ರಹಿಸಲು 224,000 ಪೊಲೀಸರನ್ನು ನೇಮಿಸಲಾಗಿತ್ತು.

ಚುನಾವಣೆ ಮತ್ತು ಮತದಾರರು ಹತ್ತು ಲಕ್ಷ ಚದರ ಮೈಲಿ ವಿಸ್ತೀರ್ಣದಲ್ಲಿ ವ್ಯಾಪಿಸಿದ್ದರು. ಆಳ-ಅಗಲ, ವ್ಯಾಪ್ತಿ ಎಲ್ಲ ದೃಷ್ಟಿಯಿಂದಲೂ ಚುನಾವಣಾ ಕಾರ್ಯಕ್ಷೇತ್ರ ಕೈ ಅಳತೆಗೆ ಸಿಗದಷ್ಟು ಘೋರವಾದ ಕಾಯಕವಾಗಿತ್ತು. ದೂರದ ಮೂಲೆಗಳಲ್ಲಿರುವ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು ವಿಶೇಷವಾಗಿ ಸೇತುವೆಗಳನ್ನು ನಿರ್ಮಿಸಬೇಕಾಗಿತ್ತು. ಹಿಂದೂ

ಮಹಾಸಾಗರದ ಸಣ್ಣಪುಟ್ಟ ದ್ವೀಪಗಳಿಗೆ ಮತಪತ್ರ, ಮತಪೆಟ್ಟಿಗೆಗಳನ್ನು ಒಯ್ಯಲು ನೌಕಾಪಡೆಯ ನೌಕೆಗಳನ್ನು ಬಳಸಲಾಗಿತ್ತು. ಎರಡನೆಯ ಸಮಸ್ಯೆ, ಭೌಗೋಳಿಕವಾದುದಕ್ಕಿಂತ ಹೆಚ್ಚಾಗಿ ಸಾಮಾಜಿಕವಾಗಿದ್ದಿತು. ಉತ್ತರ ಭಾರತದ ಮಹಿಳೆಯರು ಮತದಾರರಾಗಿ ನೋಂದಾಯಿಸಲು ತಮ್ಮ ಹೆಸರುಗಳನ್ನು ಹೇಳಲು ಹಿಂಜರಿಯುತ್ತಿದ್ದರು. ಇಂಥವರ ತಾಯಿ ಅಥವಾ ಇಂಥವರ ಹೆಂಡತಿ ಎಂದೇ ನೋಂದಾಯಿಸಿಕೊಳ್ಳುವಂತೆ ಹೇಳುತ್ತಿದ್ದರು. ಸುಕುಮಾರ್ ಸೆನ್‌ಗೆ "ಇದೊಂದು ಅರ್ಥಹೀನ ಭಗ್ನಾವಶೇಷವಾಗಿಯೇ" ಕಂಡು ಅವರ ಕೋಪ ಕೆರಳಿಸಿತ್ತು. ಹೀಗೆ ಹೆಸರಿನ ವಿವರಗಳ ಬದಲು ನಿಜವಾದ ಹೆಸರುಗಳಲ್ಲೇ ಮತದಾರರನ್ನು ನೋಂದಾಯಿಸುವಂತೆ ಅವರು ಆಜ್ಞೆ ಮಾಡಿದರು. ಹೀಗಾಗಿ 2.8 ದಶಲಕ್ಷ ಮಹಿಳೆಯರು ಮತದಾರರ ಪಟ್ಟಿಯಿಂದ ಹೊರಗುಳಿಯಬೇಕಾಯಿತು. ಇದರಿಂದ ಕೋಲಾಹಲವೇ ಆಯಿತು. ಆದರೆ ಸೆನ್ ಅವರು ಆದದ್ದೆಲ್ಲ ಒಳಿತೇ ಆಯಿತು ಎಂದು ನಿಟ್ಟುಸಿರಿಟ್ಟರು. ಇದರಿಂದಾಗಿ ಜಂಬದ ಪೂರ್ವಾಗ್ರಹಗಳೆಲ್ಲ ತೊಲಗಿ ಮುಂದಿನ ಚುನಾವಣೆಯಲ್ಲಿ ಮಹಿಳೆಯರು ನಿಜನಾಮಧೇಯ ತಿಳಿಸಿ ನೋಂದಾಯಿಸಿಕೊಳ್ಳುವರೆಂಬುದು ಅವರ ಅಂಬೋಣವಾಗಿತ್ತು.

ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷಗಳನ್ನು ಅವುಗಳ ಹೆಸರುಗಳಿಂದಲೇ ಗುರುತಿಸಬಹುದಿತ್ತು. ಆದರೆ ಈ ಗುರುತಿಸುವಿಕೆಯನ್ನು ಸುಲಭಗೊಳಿಸಲು ಭಾರತದಲ್ಲಿ ಚಿಹ್ನೆಗಳನ್ನು ಜಾರಿಗೆ ತರಲಾಯಿತು. ಚಿಹ್ನೆಗಳನ್ನು ನಿತ್ಯ ಜೀವನದಿಂದ ಆಯ್ಕೆಮಾಡಲಾಗಿದ್ದು ಅವುಗಳನ್ನು ಸುಲಭವಾಗಿ ಗುರುತಿಸಬಹುದಾಗಿತ್ತು. ಒಂದು ಪಕ್ಷಕ್ಕೆ ಜೋಡೆತ್ತು, ಮತ್ತೊಂದಕ್ಕೆ ಗುಡಿಸಲು, ಮಗದೊಂದಕ್ಕೆ ಆನೆ, ನಾಲ್ಕನೆಯದಕ್ಕೆ ದೀಪ-ಹೀಗೆ ರಾಜಕೀಯ ಪಕ್ಷಗಳಿಗೆ ಚಿಹ್ನೆಗಳನ್ನು ನೀಡಲಾಯಿತು. ಎರಡನೆಯ ಆವಿಷ್ಕಾರವೆಂದರೆ ಹಲವಾರು ಮತಪೆಟ್ಟಿಗೆಗಳನ್ನು ಬಳಸಿದ್ದು. ಒಂದೇ ಮತ ಪೆಟ್ಟಿಗೆಯಿದ್ದಲ್ಲಿ ನಿರಕ್ಷರಕುಕ್ಷಿ ಭಾರತೀಯ ಮತದಾರರು ತಪ್ಪು ಮಾಡಬಹುದೆಂದು ಗ್ರಹಿಸಿ ಪ್ರತಿಯೊಂದು ಮತಗಟ್ಟೆಯಲ್ಲೂ ಪ್ರತಿಯೊಂದು ಪಕ್ಷಕ್ಕೂ ಅದರ ಚಿಹ್ನೆಯನ್ನು ಅಂಟಿಸಿದ ಮತಪೆಟ್ಟಿಗೆಗಳನ್ನು ಇಡಲಾಗಿತ್ತು. ಇದರಿಂದಾಗಿ ಮತದಾರರು ನಿರಾತಂಕವಾಗಿ ಮತಪತ್ರಗಳನ್ನು ಪೆಟ್ಟಿಗೆಗೆ ಹಾಕಲು ಸುಲಭಮಾಡಿಕೊಡಲಾಗಿತ್ತು. ಸೋಗಿನ ಮತದಾರರನ್ನು ತಪ್ಪಿಸಲು ಅಳಿಸಲಾಗದ ಶಾಯಿಯನ್ನು ತಯಾರಿಸಲಾಯಿತು. ಮತದಾರರ ಬೆಟ್ಟಿನ ಮೇಲೆ ಈ ಶಾಯಿಯಿಂದ ಗುರುತು ಹಾಕಲಾಗುತ್ತಿತ್ತು. ಈ ಗುರುತು ಬೆರಳ ಮೇಲೆ ಒಂದು ವಾರ ಕಾಲ ಇರುತ್ತಿತ್ತು. ಮೊದಲ ಚುನಾವಣೆಯಲ್ಲಿ 389,816 ಸೀಸೆ ಶಾಯಿ ಬಳಸಲಾಯಿತು.

1951ರ ಚುನಾವಣೆಯಲ್ಲಿ, ಪ್ರಜಾಪ್ರಭುತ್ವ ಈ ನವನವೀನ ಪದ್ಧತಿಯನ್ನು ಜನತೆಗೆ ಪರಿಚಯಿಸಲು ಚುನಾವಣಾ ಆಯೋಗ ಚಲಚ್ಚಿತ್ರ ಮತ್ತು ಆಕಾಶವಾಣಿ ಮಾಧ್ಯಮಗಳನ್ನು ಬಳಸಿಕೊಂಡಿತು. ಚುನಾವಣೆಯ ಕಾರ್ಯವಿಧಾನ, ಮತದಾನ, ಮತದಾರರ ಕರ್ತವ್ಯಗಳು ಇತ್ಯಾದಿಗಳನ್ನು ತಿಳಿಸುವ ಸಾಕ್ಷ್ಯ ಚಿತ್ರವನ್ನು 3000 ಸಿನಿಮಾ ಮಂದಿರಗಳಲ್ಲಿ ಪ್ರದರ್ಶಿಸಲಾಗಿತ್ತು.

ಸಂವಿಧಾನ, ವಯಸ್ಕ ಮತದಾನ, ಮತದಾರರ ಪಟ್ಟಿ ತಯಾರಿಕೆ ವಿಧಾನ, ಮತದಾನ ಪ್ರಕ್ರಿಯೆ ಇವುಗಳಿಗೆ ಸಂಬಂಧಿಸಿದಂತೆ ಆಕಾಶವಾಣಿ ಅಸಂಖ್ಯಾತ ಕಾರ್ಯಕ್ರಮಗಳನ್ನು ಬಿತ್ತರಿಸಿತು.

IV

ಭಾರತದ ಮೊಟ್ಟಮೊದಲ ಸಾರ್ವತ್ರಿಕ ಚುನಾವಣೆಗೆ ಪೂರ್ವಭಾವಿಯಾಗಿ ಅಂತರರಾಷ್ಟ್ರೀಯ ಪರಿಸ್ಥಿತಿ ಹೇಗಿತ್ತು ಎಂದು ತಿಳಿಯಲು ಪ್ರಯತ್ನಿಸುವುದು ಬೋಧಪ್ರದವಾದೀತು. ಏಷ್ಯಾದಲ್ಲಿ ಒಂದು ಕಡೆ ಫ್ರೆಂಚರು ವಿಯಟ್‌ಮಿನ್ಹಾದ ಜೊತೆ ಯುದ್ಧದಲ್ಲಿ ತೊಡಗಿದ್ದರು. ವಿಶ್ವಸಂಸ್ಥೆ ಪಡೆಗಳು ಉತ್ತರ ಕೊರಿಯಾದ ಆಕ್ರಮಣ ತಡೆಯಲು ಹೋರಾಡುತ್ತಿದ್ದುವು. ದಕ್ಷಿಣ ಆಫ್ರಿಕಾದಲ್ಲಿ, ಆಫ್ರಿಕಾನಾರ್ ನ್ಯಾಷನಲ್ ಪಾರ್ಟಿ, ಬಿಳಿಯೇತರರಾದ ಮಿಶ್ರಸಂತತಿಯ ಜನರಿಗೆ ಮತದಾನದ ಹಕ್ಕನ್ನು ನಿರಾಕರಿಸಿತ್ತು. ಅಮೆರಿಕ ಮೊದಲ ಜಲಜನಕ ಬಾಂಬನ್ನು ಪ್ರಯೋಗ ಮಾಡಿತ್ತು. ಮೆಕ್ಲಿನ್ ಮತ್ತು ಬರ್ಗೆಸ್ ದೇಶಬಿಟ್ಟು ರಷ್ಯ ಸೇರಿಕೊಂಡಿದ್ದರು. ಆ ವರ್ಷ ಮೂರು ರಾಜಕೀಯ ಹತ್ಯೆಗಳಾಗಿದ್ದವು. ಜೋರ್ಡಾನಿನ ದೊರೆ, ಇರಾನಿನ ಪ್ರಧಾನ ಮಂತ್ರಿ ಹಾಗೂ ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಕತ್ ಅಲೀಖಾನ್ ಅವರುಗಳ ಕೊಲೆಯಾಗಿತ್ತು. ಭಾರತದಲ್ಲಿ ಪ್ರಪ್ರಥಮ ಮತದಾನವಾಗುವುದಕ್ಕೆ ಒಂಬತ್ತು ದಿನ ಮೊದಲು, 1951ರ ಅಕ್ಟೋಬರ್ 16ರಂದು ಲಿಯಾಕತ್ ಅಲೀಖಾನ್ ಅವರನ್ನು ಗುಂಡಿಟ್ಟು ಕೊಲ್ಲಲಾಗಿತ್ತು.

ಇನ್ನೂ ಹೆಚ್ಚು ಆಸಕ್ತಿ ಉಂಟುಮಾಡುವ ಸಂಗತಿ ಎಂದರೆ ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಏಕಕಾಲದಲ್ಲಿ ಸಾರ್ವತ್ರಿಕ ಚುನಾವಣೆಗಳಾದದ್ದು. ಹಳೆಯ ಸೇನಾನಿ ವಿನ್ಸ್ಟನ್ ಚರ್ಚಿಲ್ಲರು ಕನ್ಸರ್ವೇಟಿವ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಹೆಣಗಾಟ ನಡೆಸಿದ್ದರು. ಯು.ಕೆ. ನಲ್ಲಿ ಚುನಾವಣೆ ಮೂಲಭೂತವಾಗಿ ಎರಡು ಪಕ್ಷಗಳ ನಡುವೆ ನಡೆಯುತ್ತಿತ್ತು. ಭಾರತದಲ್ಲೋ ಬೆರಗುಗೊಳಿಸುವಷ್ಟು ವೈವಿಧ್ಯಮಯ ರಾಜಕೀಯ ಪಕ್ಷಗಳು ಮತ್ತು ನಾಯಕರುಗಳು. ಸ್ವಾತಂತ್ರ್ಯ ಹೋರಾಟದ ಪ್ರಮುಖ ದಾಯಗ್ರಾಹಿಯೂ ಫಲಾನುಭವಿಯೂ ಆದ ಜವಹರ ಲಾಲ್ ನೆಹರೂ ಅವರ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಕೆಲವರು ಪ್ರತಿಭಾವಂತರು ಕಟ್ಟಿದ ವಿರೋಧ ಪಕ್ಷಗಳಿದ್ದವು.

ಆಚಾರ್ಯ ಜೆ.ಬಿ. ಕೃಪಲಾನಿಯವರ ಕೆಎಂಪಿಪಿ ಮತ್ತು ಸಮಾಜವಾದಿ ಪಕ್ಷಗಳು ಇವುಗಳಲ್ಲಿ ಪ್ರಮುಖವಾಗಿದ್ದವು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯ ಬಂಡಾಯಗಾರ ಜಯಪ್ರಕಾಶ ನಾರಾಯಣ್ ಸೇರಿದಂತೆ ಅನೇಕ ನಾಯಕ ಶಿಖಾಮಣಿಗಳು ಸಮಾಜವಾದಿ ಪಕ್ಷದಲ್ಲಿದ್ದರು. ಕಾಂಗ್ರೆಸ್ ಬಡವರ ಬಗ್ಗೆ ತನಗಿದ್ದ ಬದ್ಧತೆಯನ್ನು ಬಿಟ್ಟು ವಿಶ್ವಾಸದ್ರೋಹವೆಸಗಿದೆಯೆಂಬುದು ಈ ಪಕ್ಷಗಳ ದೂರಾಗಿತ್ತು. ಜಮೀನ್ದಾರರು ಮತ್ತು ಬಂಡವಾಳಶಾಹಿಗಳ ಹಿತಾಸಕ್ತಿಗಿಂತ ಮಿಗಿಲಾಗಿ ಕಾರ್ಮಿಕರು, ರೈತರು ಮೊದಲಾದ

ದುಡಿಯುವ ವರ್ಗದ ಹಿತಾಸಕ್ತಿ ರಕ್ಷಣೆ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದ ಹಳೆಯ ಗಾಂಧಿ ಕಾಂಗ್ರೆಸ್ಸಿನ ಆದರ್ಶಗಳಿಗೆ ತಾವು ಬದ್ಧರೆಂದು ಈ ವಿರೋಧ ಪಕ್ಷಗಳು ಹೇಳಿಕೊಂಡಿದ್ದವು. ಜನಸಂಘದ ರಾಜಕೀಯ ವಿಮರ್ಶೆ, ವಿಶ್ಲೇಷಣೆಗಳು ಬೇರೆಯೇ ಆಗಿದ್ದವು. ಧಾರ್ಮಿಕ ಸಂಘಟನೆ, ಭಾರತದ ಅತಿದೊಡ್ಡ ಧಾರ್ಮಿಕ ಸಮುದಾಯವಾದ ಹಿಂದೂಗಳನ್ನು ಒಂದು ಮತಬ್ಯಾಂಕ್ ಆಗಿ ಒಗ್ಗೂಡಿಸುವುದು ಜನಸಂಘದ ಧ್ಯೇಯವಾಗಿತ್ತು. 1951ರ ಸೆಪ್ಟಂಬರ್ 21ರಂದು ನವದೆಹಲಿಯಲ್ಲಿ ನಡೆದ ಜನಸಂಘದ ಉದ್ಘಾಟನಾ ಸಮಾವೇಶವೇ ಸಾಂಕೇತಿಕವಾಗಿತ್ತು. ಸಮಾವೇಶ ವೇದಮಂತ್ರಗಳ ಪಠಣ ಮತ್ತು ವಂದೇ ಮಾತರಂ ಗಾಯನದೊಂದಿಗೆ ಪ್ರಾರಂಭವಾಗಿತ್ತು. ವೇದಿಕೆಯ ಮೇಲೆ ಪಕ್ಷದ ಸಂಸ್ಥಾಪಕ ಶ್ಯಾಮಪ್ರಸಾದ ಮುಖರ್ಜಿಯವರು ಇತರ ನಾಯಕರುಗಳೊಂದಿಗೆ ಆಸೀನರಾಗಿದ್ದರು. ಅವರ ಬೆನ್ನಿಗೆ-

> *"ಶಿವಾಜಿ, ಭಗವಾನ್ ಕೃಷ್ಣ ಇವರುಗಳ ಭಿತ್ತಿ ಚಿತ್ರಗಳಿದ್ದವು. ಕುರುಕ್ಷೇತ್ರ ಯುದ್ಧದಲ್ಲಿ ಕೌರವ ದುಷ್ಟಶಕ್ತಿ ವಿನಾಶಕ್ಕಾಗಿ ಅಸ್ತ್ರ ಕೈಗೆತ್ತಿಕೊಳ್ಳುವಂತೆ ಕೃಷ್ಣ ಅರ್ಜುನನಿಗೆ ಉಪದೇಶ ಮಾಡುತ್ತಿರುವ ಚಿತ್ರವಿತ್ತು. ರಾಣಾ ಪ್ರತಾಪಸಿಂಗ್ ಕೇಸರಿ ಬಣ್ಣದ ಮಣ್ಣಿನ ಹಣತೆ ಹಿಡಿದು ನಿಂತಿದ್ದ. ಪೆಂಡಾಲ್‌ನಲ್ಲಿ 'ಸಂಘಶಕ್ತಿ ಕಲಿಯುಗ' ಎನ್ನುವ ಘೋಷಣೆ ಸಾರುವ ಬ್ಯಾನರ್‌ಗಳಿದ್ದವು. ಮಹಾಭಾರತದಿಂದ ಆಯ್ದ ಯುಕ್ತಿಯೊಂದನ್ನು ತಿರುಚಿ ಕಲಿಯುಗದಲ್ಲಿ ಜನಸಂಘ ಮಾತ್ರ ಬಲಶಾಲಿಯಾದುದೆಂಬ ಸಂದೇಶವನ್ನು ಜನತೆಗೆ ರವಾನಿಸುವ ಪ್ರಯತ್ನ ಇದಾಗಿತ್ತು."*

ಹಿಂದೂ ಮಹಾಕಾವ್ಯಗಳಿಂದ ಆಯ್ಕೆ ಮಾಡಿಕೊಂಡ ಪ್ರತಿಮೆ, ರೂಪಕಗಳು ಕಣ್ಣಿಗೆ ರಾಚುವಂತಿದ್ದವು. ಮುಸ್ಲಿಂ ಆಕ್ರಮಣಕಾರರ ವಿರುದ್ಧ ಹೋರಾಡಿದ ಹಿಂದೂ ಸೇನಾನಿಗಳನ್ನು ಪ್ರಚಾರಕ್ಕೆ ಬಳಸಿಕೊಳ್ಳಲಾಗಿತ್ತು. ಆದರೆ ಕೌರವರು ಯಾವ ದುಷ್ಟ ಶತ್ರುವನ್ನು ಪ್ರತಿನಿಧಿಸುತ್ತಾರೆ ಎಂಬುದು ಒಂದು ಚೋದ್ಯವೇ ಆಗಿತ್ತು. ಪಾಕಿಸ್ತಾನವನ್ನೇ, ಮುಸ್ಲಿಮರನ್ನೇ, ಜವಹರಲಾಲ ನೆಹರೂ ಅವರನ್ನೇ ಅಥವಾ ಕಾಂಗ್ರೆಸ್ ಪಕ್ಷವನ್ನೇ? ಜನಸಂಘದ ನಾಯಕರುಗಳ ಭಾಷಣಗಳಲ್ಲಿ ಇವರೆಲ್ಲ ಅವರ ದ್ವೇಷದ ಗುರಿಯಾಗಿದ್ದರು. ಪಾಕಿಸ್ತಾನವನ್ನು ಸೇರಿಸಿಕೊಂಡು ಅಖಂಡ ಭಾರತ ಕಟ್ಟುವುದು, ಭಾರತ ಏಕೀಕರಣ, ಜನಸಂಘದ ನೀತಿಯಾಗಿತ್ತು. ಅದು ಮುಸ್ಲಿಮರನ್ನು ಒಂದು ಸಮಸ್ಯಾತ್ಮಕ ಅಲ್ಪಸಂಖ್ಯಾತ ವರ್ಗ ಎಂದು ಸಂಶಯದ ಕಣ್ಣಿನಿಂದ ನೋಡಿತು. ಮುಸ್ಲಿಮರು ಈ ದೇಶವನ್ನು, ಈ ದೇಶದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿಲ್ಲ, ಭಾರತ ಅವರ ಪ್ರಥಮ ಪ್ರೀತಿಪಾತ್ರವಲ್ಲ ಎಂಬುದು ಜನಸಂಘದ ಆರೋಪವಾಗಿತ್ತು. ಕಾಂಗ್ರೆಸ್ ಪಕ್ಷ ಮುಸ್ಲಿಮರನ್ನು ತೃಪ್ತಿಪಡಿಸುವ ಪ್ರಯತ್ನ ನಡೆಸಿದೆ ಎಂಬುದು ಅದರ ಆಪಾದನೆಯಾಗಿತ್ತು.

ಶ್ಯಾಮ ಪ್ರಸಾದ ಮುಖರ್ಜಿ ಕೇಂದ್ರ ಸಂಪುಟದಲ್ಲಿ ಸ್ವಲ್ಪಕಾಲ ಸಚಿವರಾಗಿದ್ದವರು. ಅಂತೆಯೇ ಅಸ್ಪೃಶ್ಯ ಜಾತಿಗೆ ಸೇರಿದ ಧೀಮಂತ ವಕೀಲ ಅಂಬೇಡ್ಕರ್ ಅವರೂ. ಭಾರತ ಸಂವಿಧಾನ ಶಿಲ್ಪಿಯಾದ ಅಂಬೇಡ್ಕರ್ ಚುನಾವಣಾ ಸಮಯಕ್ಕೆ ಪರಿಶಿಷ್ಟ ಜಾತಿಯ ಒಕ್ಕೂಟ

ಕಟ್ಟುವ ಸಲುವಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕೆಳಜಾತಿಯ ಜನರ ಅಭ್ಯುದಯಕ್ಕೆ ಕಾಂಗ್ರೆಸ್ ಸರ್ಕಾರ ಏನೂ ಕ್ರಮ ಕೈಗೊಂಡಿಲ್ಲವೆಂದು ಅವರು ತಮ್ಮ ಭಾಷಣಗಳಲ್ಲಿ ನೇರ ದಾಳಿ ನಡೆಸಿದ್ದರು. ಸ್ವಾತಂತ್ರ್ಯ ಈ ಜನರ ಬದುಕಿನಲ್ಲಿ ಏನೊಂದು ಬದಲಾವಣೆಯನ್ನೂ ತಂದಿಲ್ಲ, ಅದೇ ಹಳೆಯ ದಬ್ಬಾಳಿಕೆ, ಶೋಷಣೆಗಳು, ತಾರತಮ್ಯಗಳು. ಸ್ವಾತಂತ್ರ್ಯ ಗಳಿಸಿದ ನಂತರ ಕಾಂಗ್ರೆಸ್ ಪಕ್ಷ ಒಂದು ಧರ್ಮಶಾಲೆಯಾಗಿಬಿಟ್ಟಿದೆಯೆಂದೂ ಯಾವುದೇ ಒಂದು ಉದ್ದೇಶ-ಧ್ಯೇಯ-ತತ್ವಗಳಿಗೆ ಬದ್ಧರಲ್ಲದ ಠಕ್ಕರು, ನೀಚರು, ಮಿತ್ರರು-ಶತ್ರುಗಳು, ಕೋಮುವಾದಿಗಳು, ಜಾತ್ಯತೀತರು, ಸುಧಾರಣಾವಾದಿಗಳು, ಸುಧಾರಣಾ ವಿರೋಧಿಗಳು, ಸಂಪ್ರದಾಯಶರಣರು, ಬಂಡವಾಳಶಾಹಿಗಳು, ಬಂಡವಾಳಶಾಹಿ ವಿರೋಧಿಗಳು–ಹೀಗೆ ಎಲ್ಲರಿಗೂ ಕಾಂಗ್ರೆಸ್ ಮುಕ್ತದ್ವಾರವಾಗಿಬಿಟ್ಟಿದೆಯೆಂದೂ ಅಂಬೇಡ್ಕರ್ ಹೇಳಿದ್ದರು.

ಇನ್ನಷ್ಟು ಎಡದಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷವಿತ್ತು. ನಾವು ಗಮನಿಸಿರುವಂತೆ 1948ರಲ್ಲಿ ಈ ಪಕ್ಷದ ಅನೇಕ ಮಂದಿ ಸಕ್ರಿಯ ಕಾರ್ಯಕರ್ತರು ರೈತಕ್ರಾಂತಿಯ ನೇತೃತ್ವ ವಹಿಸಲು ಭೂಗತರಾಗಿದ್ದರು. ರೈತ ಬಂಡಾಯದಿಂದ ಭಾರತದಾದ್ಯಂತ ಚೀನಾದ ಮಾದರಿಯ ಕ್ರಾಂತಿಕಾರಿಗಳು ರೂಪುಗೊಳ್ಳುವದೆಂಬುದು ಇವರ ಆಶಯವಾಗಿತ್ತು. ಆದರೆ ಪೊಲೀಸರು ಹಾಗೂ ಕೆಲವೆಡೆ ಸೇನೆ ಇವರನ್ನು ಬಗ್ಗುಬಡಿಯಿತು. ಹೀಗಾಗಿ, ಭೂಗತರಾಗಿದ್ದ ಕಮ್ಯುನಿಸ್ಟರೆಲ್ಲ ಚುನಾವಣೆ ಎದುರಿಸಲು ಪ್ರತ್ಯಕ್ಷರಾದರು. ತೆಲಂಗಾಣ ಹೋರಾಟವನ್ನು ಬೇಷರತ್ತಾಗಿ ವಾಪಸು ತೆಗೆದುಕೊಳ್ಳಲಾಗಿದೆಯೆಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಟಿಸಿದರು. ಹಂಗಾಮಿ ಕ್ಷಮಾದಾನ ಘೋಷಿಸಲಾಯಿತು. ಕ್ರಾಂತಿಕಾರಿಗಳು ಶಸ್ತ್ರಾಸ್ತ್ರ ತ್ಯಜಿಸಿ ಮತ ಯಾಚನೆಗೆ ಬೀದಿಗಿಳಿದರು. ಈ ಹಠಾತ್ ಬದಲಾವಣೆಯಿಂದಾಗಿ, ಮಾರ್ಕ್ಸ್ ಅಥವಾ ಲೆನಿನ್ ಸಿದ್ಧಾಂತಗಳಿಂದ ಸಮಸ್ಯೆಗಳಿಗೆ ಪರಿಹಾರವಿಲ್ಲವೆ ಎಂಬ ಸಂದಿಗ್ಧತೆ ಉದ್ಭವಿಸಿತು. ಹೀಗಾಗಿ, ತಾನು ಬಡತನದ ಪ್ರತಿನಿಧಿ ಎಂಬುದನ್ನು ತೋರಿಸಿಕೊಳ್ಳಲು ಸುಕ್ಕು ಸುಕ್ಕಾದ ಸೀರೆ ಉಡಬೇಕೆ ಅಥವಾ ಮಧ್ಯಮವರ್ಗದ ಪ್ರತಿನಿಧಿಯೆಂದು ತೋರಿಸಿಕೊಂಡು ಅವರನ್ನು ಒಲಿಸಿಕೊಳ್ಳಲು ಇಸ್ತ್ರಿ ಮಾಡಿದ ಸೀರೆ ಉಡಬೇಕೆ ಎಂದು ಪಶ್ಚಿಮ ಬಂಗಾಳದ ಮಹಿಳಾ ಕಮ್ಯುನಿಸ್ಟ್ ಅಭ್ಯರ್ಥಿ ಗೊಂದಲಕ್ಕೊಳಗಾಗಿದ್ದರಂತೆ. ತೆಲಂಗಾಣ ರೈತ ಬಂಡಾಯ ತೀವ್ರವಾಗಿದ್ದ ಪ್ರದೇಶ. ಅಲ್ಲಿಂದ ಲೋಕಸಭೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಯೊಬ್ಬರಿಗೆ ಹಿರಿಯ ಅಧಿಕಾರಿಯೊಬ್ಬರು ಪಾನೀಯವೊಂದನ್ನು ನೀಡಿದಾಗ, "ಅದೀತು" ಎಂದು ಅದನ್ನು ಗುಟುಕರಿಸಿದಾಗ ತಲೆಗೇರಿದ್ದು ವಿಸ್ಕಿ. ಅಭ್ಯರ್ಥಿ ಅದನ್ನು ಹಣ್ಣಿನ ರಸ ಎಂದೇ ಭಾವಿಸಿದ್ದರು.

ಸಾರ್ವಜನಿಕ ಸಭೆಗಳು, ಮನೆ ಮನೆಗೆ ಭೇಟಿ ಮತ್ತು ದೃಶ್ಯ ಮಾಧ್ಯಮಗಳ ಮೂಲಕ 1951-52ರ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಚಾರ ನಡೆಸಲಾಯಿತು. ಬ್ರಿಟಿಷ್ ವೀಕ್ಷಕರೊಬ್ಬರು ಬರೆದಿರುವಂತೆ ಪ್ರಚಾರ ಪರಾಕಾಷ್ಠೆಗೇರಿದ್ದು ಎಲ್ಲೆಲ್ಲೂ ಕಂಡು ಬರುತ್ತಿದ್ದ ಭಿತ್ತಿ ಪತ್ರಗಳು ಮತ್ತು ಬ್ಯಾನರುಗಳ ಬರಹಗಳಲ್ಲಿ. ನವದೆಹಲಿಯಲ್ಲಿ ಮಾಜಿ ವೈಸರಾಯರುಗಳ ಪ್ರತಿಮೆಗಳನ್ನೂ

ಭಿತ್ತಿಪತ್ರಗಳು ಬಿಡಲಿಲ್ಲ. ಕಲ್ಕತ್ತೆಯಲ್ಲಿ ನವೀನ ರೀತಿಯ ಪ್ರಚಾರವೊಂದು ಎಲ್ಲರ ಕಣ್ ಸೆಳೆಯಿತು. ಅದು: ಬೀದಿ ಹಸುಗಳ ಬೆನ್ನ ಮೇಲೆ ಬಂಗಾಳಿಯಲ್ಲಿ ಬರೆದ 'ಕಾಂಗೆಸ್ಸಿಗೆ ಮತ ನೀಡಿ' ಕರೆ.

ಎಲ್ಲ ಪಕ್ಷಗಳ ನಾಯಕರುಗಳೂ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದರು. ಎಲ್ಲ ಪಕ್ಷಗಳೂ ಭಿತ್ತಿ ಪತ್ರಗಳನ್ನು ಬಳಸಿದವು. ಆಕಾಶವಾಣಿಯಲ್ಲಿ ಪಕ್ಷದ ಪ್ರಚಾರ ನಿಷೇಧಿಸಲಾಗಿತ್ತು, ಆದರೆ ಮಾಸ್ಕೊ ರೇಡಿಯೋ ತಾಷ್ಕೆಂಟ್ ಕೇಂದ್ರದ ಮೂಲಕ ಪ್ರಚಾರ ಭಾಷಣ ಬಿತ್ತರಿಸಿತು. ಕಮ್ಯುನಿಸ್ಟೇತರ ಪಕ್ಷಗಳು ಹೇಗೆ ಆಂಗ್ಲೋ ಅಮೆರಿಕ ಸಾಮ್ರಾಜ್ಯಶಾಹಿಯ ಭ್ರಷ್ಟ ಬಾಲಬಡುಕರಾಗಿದ್ದಾರೆ, ಹೇಗೆ ಕಾರ್ಮಿಕರನ್ನು ತುಳಿಯುತ್ತಿದ್ದಾರೆ ಎಂಬುದನ್ನು ಭಾರತೀಯರು ಮಾಸ್ಕೋ ರೇಡಿಯೋದಲ್ಲಿ ಕೇಳಬಹುದಿತ್ತು. ಮದ್ರಾಸಿನ ಸಾಪ್ತಾಹಿಕವೊಂದು 'ಪ್ರಾವ್ಡಾ'ದ ಲೇಖನವೊಂದನ್ನು ಭಾಷಾಂತರಿಸಿ ವಿದ್ಯಾವಂತ ಮತದಾರರಿಗಾಗಿ ಪ್ರಕಟಿಸಿತು. ಈ ಲೇಖನದಲ್ಲಿ ಕಾಂಗ್ರೆಸ್ ಸರ್ಕಾರ, ಜಮೀನ್ದಾರರ, ಏಕಸ್ವಾಮ್ಯವಾದಿಗಳ ಸರ್ಕಾರವೆಂದೂ ವಿಶ್ವಾಸ ದ್ರೋಹಿಗಳ ಸರ್ಕಾರವೆಂದೂ ಬಣ್ಣಿಸಲಾಗಿತ್ತು. ಇದಕ್ಕೆ ಬದಲಾಗಿ ಕಮ್ಯುನಿಸ್ಟ್ ಪಕ್ಷವನ್ನು ಅಧಿಕಾರಕ್ಕೆ ತಂದಲ್ಲಿ ದೇಶದ ಎಲ್ಲ ಪ್ರಗತಿಶೀಲರೂ, ರಾಷ್ಟ್ರ ಹಿತ ಬಯಸುವ ಎಲ್ಲ ಶಕ್ತಿಗಳೂ ಒಗ್ಗೂಡಲು ಸಾಧ್ಯವಾಗುವುದೆಂದು ಲೇಖನದಲ್ಲಿ ವಿಶ್ಲೇಷಿಸಲಾಗಿತ್ತು.

ಧರ್ಮ ಹಾಗೂ ಜನಾಂಗಗಳ ಆಧಾರಿತ ಪ್ರಾದೇಶಿಕ ಪಕ್ಷಗಳೂ ಸೇರಿಕೊಂಡು ಚುನಾವಣೆ ಮತ್ತಷ್ಟು ವರ್ಣರಂಜಿತವಾಯಿತು. ಉತ್ತರ ಭಾರತೀಯರ ವಿರುದ್ಧ ತಮಿಳರ ಪ್ರತಿಷ್ಠೆಯನ್ನು ಎತ್ತಿಹಿಡಿಯುವ ಪಣತೊಟ್ಟ ದ್ರಾವಿಡ ಕಳಗಂ, ಸಿಖ್ಖರ ಪಕ್ಷವಾದ ಪಂಜಾಬಿನ ಅಕಾಲಿದಳ ಇವುಗಳಲ್ಲಿ ಮುಖ್ಯವಾದವು. ಗುಡ್ಡಗಾಡಿನ ಜನರಿಗೆ ಪ್ರತ್ಯೇಕ ರಾಜ್ಯ ಬೇಕೆಂಬ ಬೇಡಿಕೆಯನ್ನು ಮಂಡಿಸಿದ ಜಾರ್ಖಂಡ್ ಪಕ್ಷ ಬಿಹಾರಿನಲ್ಲಿ ಕಣಕ್ಕಿಳಿಯಿತು. ಇದಲ್ಲದೆ ವಾಮಪಕ್ಷಗಳಿಂದ ಒಡೆದ ಬಣಗಳಿದ್ದವು. ಜನಸಂಘಕ್ಕಿಂತ ಹೆಚ್ಚು ಸನಾತನವಾದಿಯಾದ ಹಿಂದೂ ಮಹಾಸಭೆ ಮತ್ತು ರಾಮರಾಜ್ಯ ಪರಿಷತ್ತುಗಳಿದ್ದವು.

ಈ ಎಲ್ಲ ಪಕ್ಷಗಳ ನಾಯಕರುಗಳಿಗೆ ಹಲವಾರು ವರ್ಷಗಳ ರಾಜಕೀಯ ಅನುಭವವಿತ್ತು. ಕೆಲವರು ರಾಷ್ಟ್ರೀಯ ಧ್ಯೇಯಗಳ ಸಲುವಾಗಿ ಸೆರೆಮನೆವಾಸ ಅನುಭವಿಸಿದ್ದರು. ಕಮ್ಯುನಿಸ್ಟ್ ತತ್ವಕ್ಕಾಗಿ ಜೈಲಿಗೆ ಹೋದವರೂ ಇದ್ದರು. ಶ್ಯಾಮ ಪ್ರಸಾದ ಮುಖರ್ಜಿ, ಜಯಪ್ರಕಾಶ ನಾರಾಯಣರಂಥ ಉದ್ದಾಮ ಭಾಷಣಕಾರರಿದ್ದರು. ಇವರ ಭಾಷಣಗಳಲ್ಲಿ ಜನರನ್ನು ಆಕರ್ಷಿಸುವ ಮೋಡಿ ಇತ್ತು. ಚುನಾವಣೆಗೆ ಮುನ್ನ ರಾಜ್ಯ ಶಾಸ್ತ್ರಜ್ಞ ರಿಚರ್ಡ್ ಪಾರ್ಕ್ ಹೀಗೆ ಬರೆದಿದ್ದ:

> *"ಚುನಾವಣಾ ತಂತ್ರದಲ್ಲಿ, ವಿಷಯ ಮಂಡನೆಯಲ್ಲಿ, ವಾಗ್ವೈಖರಿಯಲ್ಲಿ, ರಾಜಕೀಯ ಮನಶ್ಶಾಸ್ತ್ರ ಪಾಂಡಿತ್ಯದಲ್ಲಿ–ಇದಾವುದರಲ್ಲೂ ಭಾರತೀಯ ರಾಜಕೀಯ ಪಕ್ಷಗಳು ಬೇರಾವುದೇ ದೇಶವನ್ನೂ ಮೀರಿಸಿವೆ."*

ಈ ವೈವಿಧ್ಯತೆ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಸಶಕ್ತತೆಗೆ ಸಾಕ್ಷಿ ಎಂದು ಕೆಲವರು ಸಂಭ್ರಮಪಟ್ಟಿರಬಹುದು. ಆದರೆ ಶಂಕಿಸುವವರೂ ಇದ್ದರು. ಶಂಕರ್ಸ್ ವೀಕ್ಲಿಯ ವ್ಯಂಗ್ಯ ಚಿತ್ರವೊಂದರಲ್ಲಿ ಮತ ಸೆಳೆಯುವ ಕಸರತ್ತಿನ ಹಿಂದಿನ ಬೂಟಾಟಿಕೆಯನ್ನು ವಿಡಂಬಿಸಲಾಗಿತ್ತು. ಈ ವ್ಯಂಗ್ಯ ಚಿತ್ರದಲ್ಲಿ ಕಪ್ಪು ಕೋಟಿನ ದಢೂತಿ ಮನುಷ್ಯನೊಬ್ಬ ವಿವಿಧ ವರ್ಗಗಳ ಮತದಾರರಲ್ಲಿ ಮತಯಾಚಿಸುವ ದೃಶ್ಯವನ್ನು ರೇಖಿಸಲಾಗಿತ್ತು. ಈ ಪ್ರಚಾರಕ "ರೈತರಿಗೆ ಹೊಲಗದ್ದೆ ಕೊಡಿಸುವುದೇ ನನ್ನ ಗುರಿ" ಎಂದು ಉಳುವವರ ಉದ್ಧಾರದ ಮಾತನಾಡಿದ್ದ, ಸುಶಿಕ್ಷಿತ ಮತದಾರನೊಬ್ಬನಿಗೆ ಜಮೀನ್ದಾರರ ಹಕ್ಕಿನ ರಕ್ಷಣೆಯೇ ನನ್ನ ಗುರಿ ಎಂದು ಪೂಸಿ ಹೊಡೆದಿದ್ದ, ಖಾಸಗಿ ಉದ್ಯಮಕ್ಕೆ ಪ್ರೋತ್ಸಾಹವೇ ನನ್ನ ಪ್ರಣಾಳಿಕೆ ಎಂದು ಒಂದು ಕಡೆ, ಇನ್ನೊಂದು ಕಡೆ ರಾಷ್ಟ್ರೀಕರಣ ನನ್ನ ಗುರಿ ಎಂದು ಪ್ರಚಾರ ಮಾಡಿದ್ದ. ಸೀರೆ ಉಟ್ಟ ಮಹಿಳೆಯ ಬಳಿ ಹೋಗಿ ಹಿಂದೂ ಸಂಹಿತೆ (ಮಹಿಳೆಯರ ಉದ್ಧಾರಕ್ಕಾಗಿ) ಶಾಸನಕ್ಕೆ ಒತ್ತಾಯಪಡಿಸುವುದಾಗಿ ಮತ ಕೇಳಿದ್ದ. ಪಿಳ್ಳ ಜುಟ್ಟು ಬಿಟ್ಟ ಬ್ರಾಹ್ಮಣರಿಗೆ ಪ್ರಾಚೀನ ಸಂಸ್ಕೃತಿ ರಕ್ಷಿಸುವ ಭರವಸೆ ನೀಡಿದ್ದ.

V

ಈ ಎಲ್ಲ ವಿವಿಧ ಬಗೆಯ ಪಕ್ಷಗಳ ಏಕೈಕ ಗುರಿ: ಅಧಿಕಾರಾರೂಢ ಕಾಂಗ್ರೆಸ್. ಅದರ ನಾಯಕ ಜವಹರಲಾಲ ನೆಹರೂ ಅವರು ಎಲ್ಲ ಸವಾಲುಗಳನ್ನೂ ಎದುರಿಸಿ ಕಾಂಗ್ರೆಸ್ಸಿನ ಅಜೇಯ ನಾಯಕನಾಗಿ ಹೊರಹೊಮ್ಮಿದ್ದರು. ವಲ್ಲಭಭಾಯಿ ಪಟೇಲರ ನಿಧನದಿಂದಾಗಿ ಸರ್ಕಾರದಲ್ಲೂ ಅವರು ಪ್ರಬಲರಾಗಿದ್ದರು. ಆದರೆ ಅವರು ಅಪಾರ ಸಮಸ್ಯೆಗಳನ್ನೆದುರಿಸಬೇಕಾಯಿತು. ಈ ಸಮಸ್ಯೆಗಳಲ್ಲಿ ತೀವ್ರತರವಾದದ್ದು, ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಿಂದ ಬಂದ ಕೋಪತಪ್ತ ನಿರಾಶ್ರಿತರದು. ಈ ನಿರಾಶ್ರಿತರಿನ್ನೂ ತಮ್ಮ ಹೊಸ ನೆಲೆಗಳಿಗೆ ಹೊಂದಿಕೊಂಡಿರಲಿಲ್ಲ. ದಕ್ಷಿಣದಲ್ಲಿ ಆಂಧ್ರೀಯರು, ಉತ್ತರದಲ್ಲಿ ಸಿಖ್ಖರು ಪ್ರಕ್ಷುಬ್ಧರಾಗಿದ್ದರು. ಪ್ರಪಂಚದ ಕಣ್ಣಿನಲ್ಲಿ ಕಾಶ್ಮೀರ ಪ್ರಶ್ನೆ ಇನ್ನೂ ಇತ್ಯರ್ಥವಾಗದೇ ಉಳಿದಿತ್ತು. ಬಡತನ ಹಾಗು ಅಸಮತೆ ನಿವಾರಣೆಯಲ್ಲಿ ಸ್ವಾತಂತ್ರ್ಯ ಏನೂ ಪರಿಣಾಮ ಬೀರಿರಲಿಲ್ಲ. ಈ ಒಂದು ವಿದ್ಯಮಾನಕ್ಕೆ ಅಧಿಕಾರಾರೂಢ ಪಕ್ಷವನ್ನೇ ಹೊಣೆಯಾಗಿಸಲಾಗಿತ್ತು.

ಚುನಾವಣಾ ಪ್ರಚಾರದ ಸಂಕಥನದ ಒಂದು ವಿಧಾನವೆಂದರೆ, ವೃತ್ತ ಪತ್ರಿಕೆಗಳ ಶೀರ್ಷಿಕೆಗಳ ಪಠಣ. ಈ ಶೀರ್ಷಿಕೆಗಳು, ಭಾರತೀಯ ಚುನಾವಣೆಯ ಮುಂಚೂಣಿಯಲ್ಲಿರುವ ವಿಷಯಗಳನ್ನು ಬಿಡಿದೆಬ್ಬಿಸುತ್ತವೆ ಎಂಬ ಒಂದೇ ಕಾರಣಕ್ಕಾಗಿ ಕುತೂಹಲದಾಯಕವಲ್ಲ. "ಸಚಿವರಿಗೆ ಉಗ್ರ ವಿರೋಧ"—ಇದೊಂದು ಉತ್ತರ ಪ್ರದೇಶದ ಪತ್ರಿಕೆಯ ಶೀರ್ಷಿಕೆ. "ಜಾತಿ ವೈಷಮ್ಯಗಳಿಂದ ಬಿಹಾರ ಕಾಂಗ್ರೆಸ್ ದುರ್ಬಲ" ಇದು ಇನ್ನೊಂದು ಶೀರ್ಷಿಕೆ. "ಸ್ವಾಯತ್ತತೆಗೆ ಮಣಿಪುರ ಬೇಡಿಕೆ"- ಇದು ಈಶಾನ್ಯ ಪ್ರದೇಶದ ಕೂಗು. ಗೌಹಾಟಿಯ ಪತ್ರಿಕೆಯೊಂದರ

ಶೀರ್ಷಿಕೆ: "ಅಸ್ಸಾಮಿನಲ್ಲಿ ಕಾಂಗ್ರೆಸ್ಸಿನ ಭವಿಷ್ಯ-ಮುಸ್ಲಿಮರು ಮತ್ತು ಗುಡ್ಡಗಾಡು ಜನರ ಮತದಾನದ ಮಹತ್ವ". ಗ್ವಾಲಿಯರ್‌ನ ಪತ್ರಿಕೆಯೊಂದರ ಶೀರ್ಷಿಕೆ: "ಕಾಂಗ್ರೆಸ್ಸಿಗರಲ್ಲಿ ಅತೃಪ್ತಿ: ಅಭ್ಯರ್ಥಿಗಳ ಪಟ್ಟಿಯಿಂದ ವ್ಯಾಪಕ ಒಡಕು." ಕಲ್ಕತ್ತೆ ಪತ್ರಿಕೆಯೊಂದರ ಶೀರ್ಷಿಕೆ: "ಸಭೆಯಲ್ಲಿ ಪಶ್ಚಿಮ ಬಂಗಾಳ ಕಾಂಗ್ರೆಸ್ ಅಧ್ಯಕ್ಷರಿಗೆ ಛೀಥೂ." (ಛೀ-ಥೂ ಹೇಳಿದವರು ಪೂರ್ವಪಾಕಿಸ್ತಾನದಿಂದ ಬಂದ ನಿರಾಶ್ರಿತರು). "ಮುಕ್ತ ನ್ಯಾಯ ಸಮ್ಮತ ಚುನಾವಣೆಯ ಭರವಸೆಯಿಲ್ಲ" ಇದು ಲಖನೌದ ಪತ್ರಿಕೆಯೊಂದರಲ್ಲಿ ಬಂದ ಜೆ.ಬಿ. ಕೃಪಲಾನಿಯವರ ತೀರ್ಮಾನದ ವರದಿಯ ಶೀರ್ಷಿಕೆ. ಇನ್ನು, ಮುಂಬಯಿ ಮಹಾನಗರದ ಪತ್ರಿಕೆಗಳು ಚುನಾವಣೆಯ ಮೂರು ಮಜಲುಗಳಲ್ಲಿ ಹೆಚ್ಚು ಕಡಿಮೆ ಇದೇ ಶೀರ್ಷಿಕೆಯನ್ನು ಕೊಟ್ಟಿದ್ದುವು. "ಕಾಂಗ್ರೆಸ್ ಮುಸ್ಲಿಮರ ಬೆಂಬಲ ನೆಚ್ಚಿಕೊಂಡಿದೆ"; "ಪರಿಶಿಷ್ಟ ಜಾತಿಯವರ ಬಗ್ಗೆ ಕಾಂಗ್ರೆಸ್ ನಿರ್ಲಕ್ಷ್ಯ: ಅಂಬೇಡ್ಕರರಿಂದ ಆಪಾದನೆಗಳ ಪುನರುಚ್ಚಾರ"; "ನಗರದ ಚುನಾವಣಾ ಘರ್ಷಣೆಗಳಲ್ಲಿ ಹದಿನಾಲ್ಕು ಮಂದಿಗೆ ಗಾಯ". ಇವೆಲ್ಲದರ ಮಧ್ಯೆ ಗಮನಿಸಲೇ ಬೇಕಾದಂಥ ಶೀರ್ಷಿಕೆಗಳು ಪಟ್ನಾದ "ಸರ್ಚ್‌ಲೈಟ್"ನಲ್ಲಿ ಪ್ರಕಟವಾಗಿದ್ದವು: "ಬಿಹಾರದಲ್ಲಿ ಶಾಂತಿಯುತ ಮತದಾನದ ಆಶಯ."

ಹೊರಗಿನಿಂದ ಬರುತ್ತಿದ್ದ ವ್ಯಾಪಕ ವಿರೋಧಗಳ ಜೊತೆಗೆ ನೆಹರೂ ಪಕ್ಷದೊಳಗಿನ ವಿರೋಧಗಳನ್ನೂ ಎದುರಿಸಬೇಕಾಗಿತ್ತು. ನೆಹರೂ ರಸ್ತೆ ಪ್ರಯಾಣ, ರೈಲು ಪ್ರಯಾಣ, ವಿಮಾನ ಯಾನಗಳಲ್ಲಿ ವಿರೋಧಿಗಳಿಗೆ ಉತ್ತರಿಸಿದರು. ಅಕ್ಟೋಬರ್ ಒಂದರಿಂದ ಅವರು ಪ್ರವಾಸ ಆರಂಭಿಸಿದರು. ಪಕ್ಷದ ಕಾರ್ಯಕರ್ತನೊಬ್ಬ ವರ್ಣಿಸಿರುವಂತೆ, "ಸಮುದ್ರ ಗುಪ್ತ, ಅಶೋಕ, ಅಕ್ಬರ ಇವರುಗಳ ಸಾಮ್ರಾಜ್ಯಶಾಹಿ ದಂಡಯಾತ್ರೆಗಳಿಗೆ, ಜೈತ್ರಯಾತ್ರೆಗಳಿಗೆ ಹೋಲಿಸಬಹುದಾದ ಪ್ರವಾಸ". ಹಾಗೆಯೇ ಫಾಹಿಯಾನ್ ಮತ್ತು ಹುಯೆನ್‌ತ್ಸಾಂಗ್ ಅವರುಗಳ ಯಾತ್ರೆಗೂ ಹೋಲಿಸಬಹುದಾದ ಪ್ರವಾಸ. ಒಂಬತ್ತು ವಾರಗಳ ಅವಧಿಯಲ್ಲಿ ನೆಹರೂ ದೇಶದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಪ್ರಚಾರ ಪ್ರವಾಸ ಕೈಗೊಂಡಿದ್ದರು. ಅವರು ಒಟ್ಟು 25 ಸಾವಿರ ಮೈಲಿ ಚುನಾವಣಾ ಪ್ರವಾಸ ಮಾಡಿದ್ದರು: 18 ಸಾವಿರ ಮೈಲಿ ವಿಮಾನದಲ್ಲಿ, 5200 ಮೈಲಿ ಕಾರಿನಲ್ಲಿ, 1600 ಮೈಲಿ ರೈಲಿನಲ್ಲಿ ಹಾಗೂ 90 ಮೈಲಿ ದೋಣಿ ಪಯಣದಲ್ಲಿ.

ಸೆಪ್ಟಂಬರ್ 30ರಂದು ಲುಧಿಯಾನದ ಗಡಿ ಪಟ್ಟಣವೊಂದರಲ್ಲಿ ನೆಹರೂ ಚುನಾವಣಾ ಪ್ರಚಾರ ಪ್ರಾರಂಭಿಸಿದರು. ಸ್ಥಳದ ಆಯ್ಕೆ "ಕೋಮುವಾದದ ವಿರುದ್ಧ ಸಮರ ಸಾರಿದ್ದಷ್ಟೇ" ಮಹತ್ವಪೂರ್ಣದ್ದಾಗಿತ್ತು. "ಹಿಂದೂ ಮತ್ತು ಸಿಖ್ ಸಂಸ್ಕೃತಿಗಳ ಹೆಸರಿನಲ್ಲಿ, ಕೆಲವು ಸಂಸ್ಥೆಗಳು, ಒಂದು ಕಾಲಕ್ಕೆ ಮುಸ್ಲಿಂ ಲೀಗ್ ಮಾಡಿದಂತೆ ಕೋಮು ವಿಷ ಹರಡುತ್ತಿರುವುದನ್ನು" ಅವರು ಖಂಡಿಸಿದ್ದರು. "ಈ ದುಷ್ಟ ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬಂದಲ್ಲಿ ದೇಶದಲ್ಲಿ ಸರ್ವನಾಶವಾಗುವುದೆಂದು" ಅವರು ನುಡಿದಿದ್ದರು. "ನಿಮ್ಮ ಮನೆಬಾಗಿಲುಗಳನ್ನು ಮುಕ್ತವಾಗಿಡಿ. ವಿಶ್ವದ ಎಲ್ಲ ಭಾಗಗಳಿಂದಲೂ ಹೊಸ ಗಾಳಿಗೆ ತೆರೆದಿಡಿ" ಎಂದು ಕರೆನೀಡಿದ್ದರು.

ಈ ಮಾತುಗಳು ಗಾಂಧೀಜಿಯವರ ಮಾತುಗಳಂತೆಯೇ ಇದ್ದವು. ನೆಹರೂ ಇನ್ನೊಂದು ಮಹತ್ವದ ಚುನಾವಣಾಸಭೆ ಗಾಂಧೀ ಜಯಂತಿಯ ದಿನವಾದ ಅಕ್ಟೋಬರ್ 2ರಂದು ನವದೆಹಲಿಯಲ್ಲಿ ನಡೆಯಿತು. ಅಂದು ಬೃಹತ್ ಸಭೆಯನ್ನುದ್ದೇಶಿಸಿ ಹಿಂದೂಸ್ತಾನಿಯಲ್ಲಿ ಮಾತನಾಡಿದ ಅವರು, ಅಸ್ಪೃಶ್ಯತೆ ಮತ್ತು ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸುವ ತಮ್ಮ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದರು. ಮತ್ತೊಮ್ಮೆ ಅವರು ಕೋಮುವಾದಿಗಳನ್ನು ಪ್ರಮುಖ ಶತ್ರುಗಳೆಂದು ಗುರುತಿಸಿ ಅಂಥವರಿಗೆ ದೇಶದಲ್ಲಿ ಜಾಗವಿಲ್ಲವೆಂದೂ ಸಕಲ ಶಕ್ತಿಗಳಿಂದಲೂ ಅವರನ್ನು ನಿಗ್ರಹಿಸಲಾಗುವುದೆಂದೂ ಹೇಳಿದರು. 95 ನಿಮಿಷಗಳ ಭಾಷಣದುದ್ದಕ್ಕೂ ಜನ ಚಪ್ಪಾಳೆ ತಟ್ಟಿ ಅವರ ಮಾತುಗಳನ್ನು ಸ್ವಾಗತಿಸಿದರು: “ಧರ್ಮದ ಆಧಾರದ ಮೇಲೆ ಯಾರಾದರೂ ಮತ್ತೊಬ್ಬರನ್ನು ನಿರ್ನಾಮಗೊಳಿಸಲು ಕೈ ಎತ್ತಿದಲ್ಲಿ ಅಂಥವರ ವಿರುದ್ಧ ಜೀವದ ಕೊನೆಯುಸಿರು ಇರುವವರೆಗೆ ಸರ್ಕಾರದ ಮುಖ್ಯಸ್ಥರಾಗಿ ಹಾಗೂ ಹೊರಗಿನಿಂದ ಹೋರಾಡುವುದಾಗಿ” ನೆಹರೂ ಘೋಷಿಸಿದಾಗ ಸಭಿಕರ ಹರ್ಷೋದ್ಗಾರ ಮೇರೆ ಮುಟ್ಟಿತ್ತು.

ನೆಹರೂ ಎಲ್ಲೆಲ್ಲಿ ಪ್ರಚಾರಕ್ಕೆ ಹೋದರೋ ಅಲ್ಲೆಲ್ಲ ಕೋಮುವಾದವನ್ನು ಪ್ರಬಲವಾಗಿ ಖಂಡಿಸಿದರು. ಶ್ಯಾಮ ಪ್ರಸಾದ ಮುಖರ್ಜಿಯವರ ತೌರು ರಾಜ್ಯವಾದ ಬಂಗಾಳದಲ್ಲಿ ಅವರು ಜನಸಂಘವನ್ನು ಆರ್.ಎಸ್.ಎಸ್. ಮತ್ತು ಹಿಂದೂ ಮಹಾಸಭಾಗಳ ಅಕ್ರಮ ಸಂತಾನವೆಂದು ತಳ್ಳಿಹಾಕಿದರು. ಬೇರೆ ವಿಷಯಗಳ ಬಗ್ಗೆಯೂ ಮಾತಾಡಿದ್ದರು. ಬಿಹಾರದಲ್ಲಿ ಜಾತಿ ಪಿಡುಗನ್ನು ಖಂಡಿಸಿದ್ದರು. ಮುಂಬಯಿಯಲ್ಲಿ, “ಕಾಂಗ್ರೆಸ್ಸಿಗೆ ನೀಡುವ ಮತ ತಟಸ್ಥ ವಿದೇಶಾಂಗ ನೀತಿಗೆ ನೀಡುವ ಮತವಾಗುತ್ತದೆ” ಎಂದು ಘೋಷಿಸಿದ್ದರು. ಭರತಪುರ ಮತ್ತು ಬಿಲಾಸ್ಪುರಗಳಲ್ಲಿ ವಾಮ ಪಂಥೀಯರ ಅಸಹನೆಯನ್ನು ಖಂಡಿಸಿದ್ದರು. ವಾಮಪಂಥೀಯರ ಕಾಳಜಿಯನ್ನು ತಾವು ಒಪ್ಪುವುದಾದರೂ ಅವರ ಮಾರ್ಗವನ್ನು ಒಪ್ಪುವುದಿಲ್ಲವೆಂದೂ ಸಮಾಜವಾದವನ್ನು ‘ಇಟ್ಟಿಗೆ ಮೇಲೆ ಇಟ್ಟಿಗೆಯಿಟ್ಟಂತೆ’ ಹಂತಹಂತವಾಗಿಯೇ ನಿರ್ಮಿಸಬೇಕಾಗಿದೆಯೆಂದೂ ತಿಳಿಸಿದ್ದರು. ಅನೇಕ ಕಡೆಗಳಲ್ಲಿ, ಅಂಬೇಡ್ಕರ್, ಕೃಪಲಾನಿ, ಜಯಪ್ರಕಾಶ್ ನಾರಾಯಣ್‌ರಂಥ ವಿರೋಧಿ ಮುಖಂಡರ ಪ್ರಶಂಸೆ ಮಾಡಿದ್ದರು. ಇವರೆಲ್ಲ ಕಾಂಗ್ರೆಸ್ ಪಕ್ಷ ಅಥವಾ ಸರ್ಕಾರದಲ್ಲಿ ನೆಹರೂ ಸಹೋದ್ಯೋಗಿಗಳಾಗಿದ್ದವರೇ. “ಇಂಥ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಯುಳ್ಳ ವ್ಯಕ್ತಿಗಳು ನಮಗಿಂದು ಬೇಕಾಗಿದ್ದಾರೆ. ಇವರಿಗೆ ಸ್ವಾಗತವಿದೆ. ಆದರೆ ಇವರೆಲ್ಲ ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಸಾಗುತ್ತಿದ್ದು, ಅಖೈರಾಗಿ ಏನನ್ನೂ ಸಾಧಿಸುತ್ತಿಲ್ಲವೆಂದು ನೆಹರೂ ಹೇಳಿದ್ದರು. ವಿಶೇಷವಾಗಿ ಸಮಾಜವಾದಿ ಪಕ್ಷ ವಿರೋಧಿಯಾಗಿರುವುದಕ್ಕೆ ತಮಗೆ ವಿಷಾದವಾಗಿದೆಯೆಂದು” ಹೇಳಿದ ಅವರು “ಆ ಪಕ್ಷದಲ್ಲಿ ನನ್ನ ಹಳೆಯ ಆಪ್ತ ಗೆಳೆಯರಿದ್ದಾರೆ, ಅವರ ಬಗ್ಗೆ ನನ್ನಲ್ಲಿ ಗೌರವಾಭಿಮಾನಗಳಿವೆ” ಎಂದು ನುಡಿದಿದ್ದರು. ಆದರೆ ಅವರ ಮಗಳಾದ ಇಂದಿರಾಗಾಂಧಿಯವರಲ್ಲಿ ಇಂಥ ಭಾವನೆಗಳಿರಲಿಲ್ಲ. ಸಮಾಜವಾದಿಗಳು ಅಮೆರಿಕದಿಂದ ಹಣ ಪಡೆಯುತ್ತಿದ್ದಾರೆಂದು ಇಂದಿರಾಗಾಂಧಿ ತಮ್ಮ ಭಾಷಣಗಳಲ್ಲಿ ಟೀಕಿಸಿದ್ದುಂಟು.

ಚುನಾವಣಾ ಪ್ರಚಾರ ಪ್ರವಾಸದ ಅವಧಿಯಲ್ಲಿ ನೆಹರೂ 'ನಿದ್ದೆ ಮಾಡಿದ್ದಕ್ಕಿಂತ ಹೆಚ್ಚು ಕಾಲ ಪ್ರಯಾಣ ಮಾಡಿದರು, ಪ್ರಯಾಣ ಮಾಡಿದ ಕಾಲಕ್ಕಿಂತ ಹೆಚ್ಚು ಕಾಲ ಮಾತನಾಡಿದ್ದರು'. ಅವರು 300 ಬೃಹತ್ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದ್ದರು, ಲೆಕ್ಕವಿಡಲು ಗೊತ್ತಿಲ್ಲದಷ್ಟು ಹಾದಿಬದಿಯ ಸಭೆಗಳನ್ನುದ್ದೇಶಿಸಿ ಮಾತನಾಡಿದ್ದರು. ಅವರು 20 ದಶಲಕ್ಷ ಜನರೊಂದಿಗೆ ಮುಖಾಮುಖಿ ಮಾತನಾಡಿದ್ದರು. ಇಷ್ಟೇ ಮಂದಿ ಅವರ ದರ್ಶನಭಾಗ್ಯ ಪಡೆದಿದ್ದರು. ಅವರಿದ್ದ ಕಾರು ಸಾಗಿದಂತೆ ಅವರ ದರ್ಶನಕ್ಕಾಗಿ ರಸ್ತೆಬದಿಯಲ್ಲಿ ಜನ ಸಾಲುಗಳಲ್ಲಿ ನಿಂತಿದ್ದರು. ಗಣಿ ಕೆಲಸಗಾರರು, ಕೃಷಿಕರು, ಕೃಷಿಕಾರ್ಮಿಕರು, ಕಾರ್ಖಾನೆಗಳ ಕಾರ್ಮಿಕರು ಅವರ ಮಾತನ್ನು ಆಲಿಸಿದರು, ಅವರನ್ನು ಪ್ರತ್ಯಕ್ಷ ಕಂಡರು. ಎಲ್ಲ ವರ್ಗದ ಮಹಿಳೆಯರೂ ಸಾವಿರ ಸಾವಿರ ಸಂಖ್ಯೆಯಲ್ಲಿ ಅವರ ಸಭೆಗಳಿಗೆ ಬರುತ್ತಿದ್ದರು. ಕೆಲವೊಮ್ಮೆ ಅವರ ಸಭೆಗಳಲ್ಲಿ ಗದ್ದಲ ಮಾಡಿದ್ದುಂಟು. ನೆಹರೂ ಗೋಮಾಂಸ ಭಕ್ಷಕರಾದ್ದರಿಂದ ಅವರನ್ನು ನಂಬಬಾರದೆಂದು ಘೋಷಣೆಗಳು ಕೇಳಿ ಬಂದಿದ್ದವು. ಸುತ್ತಿಗೆ ಮತ್ತು ಕುಡುಗೋಲುಗಳ ಧ್ವಜಗಳನ್ನು ಪ್ರದರ್ಶಿಸುತ್ತಾ ತಮಗೆದುರಾದ ಕಮ್ಯುನಿಸ್ಟರಿಗೆ ಅವರು "ಯಾವ ದೇಶದ ಧ್ವಜಗಳನ್ನು ನೀವು ಪ್ರದರ್ಶಿಸುತ್ತಿರುವಿರೋ ಆ ದೇಶಗಳಿಗೆ ನೀವುಗಳು ಹೋಗುವುದು ಉಚಿತ" ಎಂದು ತಿಳಿಸಿದರು. "ನೀವೇಕೆ ನ್ಯೂಯಾರ್ಕಿಗೆ ಹೋಗಿ ವಾಲ್‌ಸ್ಟ್ರೀಟ್ ಸಾಮ್ರಾಜ್ಯಶಾಹಿಗಳೊಂದಿಗೆ ವಾಸ್ತವ್ಯ ಮಾಡಬಾರದು?" ಎಂದು ಕಮ್ಯುನಿಸ್ಟರು ಪ್ರಶ್ನಿಸಿದ್ದುಂಟು.

ಆದರೆ ಸಭೆಗಳಿಗೆ ಬರುತ್ತಿದ್ದವರಲ್ಲಿ ಹೆಚ್ಚು ಮಂದಿ ನೆಹರೂ ಬಗ್ಗೆ ಸಹಾನುಭೂತಿ ಹೊಂದಿದ್ದರು, ಅವರ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದರು. ಕಾಂಗ್ರೆಸ್ಸಿನ ಪುಸ್ತಿಕೆಯೊಂದರಲ್ಲಿನ ಸಾರಾಂಶದ ಈ ಮಾತುಗಳು ಸ್ವಲ್ಪ ಉತ್ಪ್ರೇಕ್ಷೆ ಎನ್ನಿಸಿದರೂ ಅತಿಯಾದ ಉತ್ಪ್ರೇಕ್ಷೆ ಏನಲ್ಲ:

> *"ನಗರ, ಪಟ್ಟಣ, ಹಳ್ಳಿ, ಹಾದಿಯ ಬದಿ ಹೀಗೆ ಎಲ್ಲ ಕಡೆ ನೆಹರೂ ಅವರನ್ನು ಸ್ವಾಗತಿಸಲು ಹಗಲುರಾತ್ರಿ ಜನ ಕಾದು ನಿಂತಿರುತ್ತಿದ್ದರು. ಶಾಲಾಕಾಲೇಜುಗಳಿಗೆ ರಜೆ ಘೋಷಿಸಿರಲಾಗಿತ್ತು. ಹಾಲು ಮಾರುವ ಮಹಿಳೆಯರು, ದನಗಾಹಿಗಳು ಕೆಲಸಬಿಟ್ಟು ಸಭೆಗಳಿಗೆ ಬರುತ್ತಿದ್ದರು. ಕೃಷಿಕರು ಮತ್ತು ಅವರ ಕೂಲಿಯಾಳುಗಳು ಹೊಲಮನೆ ಕೆಲಸ ಬಿಟ್ಟು ಸಭೆಗಳಲ್ಲಿ ಜಮಾಯಿಸುತ್ತಿದ್ದರು. ನೆಹರೂ ಹೆಸರಿನಲ್ಲಿ ತಂಪು ಪಾನೀಯಗಳು ಅಪಾರವಾಗಿ ಖರ್ಚಾದವು...ನೆಹರೂ ಸಭೆಗಳಿಗೆ ಹೋಗುವವರಿಗೆ ಬರುವವರಿಗೆ ಅನುಕೂಲವಾಗುವಂತೆ ವಿಶೇಷ ರೈಲುಗಳನ್ನು ಓಡಿಸಲಾಯಿತು. ಉತ್ಸಾಹಿಗಳು ರೈಲು ಬಸ್ಸುಗಳ ಫುಟ್‌ಬೋರ್ಡ್‌ಗಳ ಮೇಲೆ, ಚಾವಣಿಗಳ ಮೇಲೆ ಪಯಣಿಸಿ ಸಭೆಗಳಿಗೆ ಬರುತ್ತಿದ್ದರು. ಸಭೆಯ ಜನಜಂಗುಳಿಯಲ್ಲಿ ಮೂರ್ಛೆ ಹೋದವರ ಸಂಖ್ಯೆಯೂ ಕಡಿಮೆ ಏನಲ್ಲ."*

ಪತ್ರಿಕೆಗಳು ಜನಸಮುದಾಯದ ಭಾವನೆಗಳನ್ನು ಬಿಂಬಿಸುವ ವರದಿಗಳನ್ನು ಪ್ರಕಟಿಸಿದವು. ನೆಹರೂ ಮುಂಬಯಿಯಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದಾಗ, ಪ್ರಧಾನವಾಗಿ

ಮುಸ್ಲಿಮರು ಕೊಂಬು ಕಹಳೆಗಳೊಂದಿಗೆ ಮೆರವಣಿಗೆಯಲ್ಲಿ ಚೌಪಾಟಿಯ ಸಭೆಗೆ ಬಂದಿದ್ದರು. ಮೆರವಣಿಗೆಯ ಮುಂಚೂಣಿಯಲ್ಲಿ ಜೋಡೆತ್ತು ಮತ್ತು ನೇಗಿಲು ಇದ್ದವು (ಕಾಂಗ್ರೆಸ್ ಚುನಾವಣಾ ಸಂಕೇತ). ಪ್ರತಿಯೊಂದು ಕಡೆಯೂ ಮಧ್ಯಾಹ್ನ, ಸಂಜೆಯ ಸಭೆಗಳಿಗೆ ಜನ ಬೆಳಗಿನಿಂದಲೇ ಸೇರುತ್ತಿದ್ದರು. ನೆಹರೂ ಅವರ ದರ್ಶನಕ್ಕಾಗಿ ನಡೆಯುತ್ತಿದ್ದ ನೂಕುನುಗ್ಗಲಿನಲ್ಲಿ ಅಡ್ಡಗಟ್ಟೆಗಳೇ ಮುರಿದು ಬೀಳುತ್ತಿದ್ದವು. ದೆಹಲಿಯ ಸಭೆಯೊಂದರಲ್ಲಿ ಭಾಷಣ ಮುಗಿಸಿ ವೇದಿಕೆಯಿಂದ ಇಳಿಯುತ್ತಿದ್ದಾಗ ನೆಹರೂ ಅವರಿಗೆ ಎದುರಾದ ಖ್ಯಾತ ಕುಸ್ತಿ ಪೈಲ್ವಾನ್ ಅವರಿಗೆ ಚಿನ್ನದ ಸರವೊಂದನ್ನು ಅರ್ಪಿಸಿ, "ಇದೇನಿದ್ದರೂ ಸಾಂಕೇತಿಕ. ನಿಮಗಾಗಿ ಮತ್ತು ದೇಶಕ್ಕಾಗಿ ಪ್ರಾಣತ್ಯಾಗ ಮಾಡಲೂ ನಾನು ಸಿದ್ಧ" ಎಂದು ಹೇಳಿದ್ದಾಗಿ ವರದಿಯಾಗಿದೆ. ಖರಗ್ಪುರದಲ್ಲಿ ನೆಹರೂ ಸಭೆಗೆ ಬಂದಿದ್ದ ತೆಲುಗು ಮಾತನಾಡುವ ಮಹಿಳೆಯೊಬ್ಬಳ ಬಗ್ಗೆ ಮಾಧ್ಯಮಗಳು ವಿಶೇಷ ವರದಿಗಳನ್ನೇ ಪ್ರಕಟಿಸಿದವು. ನೆಹರೂ ಭಾಷಣದ ಮಧ್ಯೆ ಮಹಿಳೆಗೆ ಹೆರಿಗೆ ಬೇನೆ ಶುರುವಾಯಿತಂತೆ. ಇದನ್ನು ಅರಿತ ಜನ ಅವಳ ಸುತ್ತ ಕೋಟೆ ಕಟ್ಟಿದರು. ಸೂಲಗಿತ್ತಿಯರು ನೆಹರೂ ಭಾಷಣವನ್ನು ಕಿವಿಗೊಟ್ಟು ಆಲಿಸುತ್ತಿದ್ದಾಗ ಸಭೆಯ ಮಧ್ಯೆಯೇ ಮಹಿಳೆಗೆ ಹೆರಿಗೆಯಾಗಿತ್ತು.

ನೆಹರೂ ಅವರ ಜನಪ್ರಿಯತೆ, ಜನಾದರಣೆ ಮತ್ತು ಆಕರ್ಷಣೆಗಳಿಗೆ ಸಾಕ್ಷಿ ಎನ್ನುವಂತಿದೆ ಅವರ ಟೀಕಾಕಾರರಾದ 'ಕರೆಂಟ್' ಪತ್ರಿಕೆಯ ಸಂಪಾದಕ ಡಿ.ಎಫ್. ಕರ್ಕಾ ಅವರ ವರದಿಗಳು. ಚೌಪಾಟಿ ಸಮುದ್ರ ದಂಡೆಯಲ್ಲಿ ನೆಹರೂ ಮಾತುಗಳನ್ನು ಕೇಳಲು ಬಂದಿದ್ದ 200,000 ಜನರ ಮಧ್ಯೆ ಕರ್ಕಾ ಇದ್ದರು. "ಭಾಷಣಕಾರರು ಮತ್ತು ಸಭಿಕರ ನಡುವಣ ಒಲವು ಕಂಡು" ಕರ್ಕಾ ಪಶ್ಚಾತ್ತಾಪಪಡುವಂತಾಗಿತ್ತು. ನೆಹರೂ ಭಾಷಣವನ್ನು ಕರ್ಕಾ ವರದಿಮಾಡಿದ್ದು ಹೀಗೆ:

> *ಅನೇಕ ವರ್ಷಗಳ ತರುವಾಯ ತಾವು ಮುಂಬಯಿಗೆ ಬರುತ್ತಿರುವುದಾಗಿ ಅವರು ಹೇಳಿದರು. ಅನೇಕ ವರ್ಷಗಳು, ಅವರು ಒಂದು ಕ್ಷಣ ಮಾತು ನಿಲ್ಲಿಸಿ, ತಮಗೇ ವಿಶೇಷವಾದ ಧಾಟಿಯಲ್ಲಿ ಆಸೆ ತುಂಬಿದ ಕಂಗಳಿಂದ ಸಭಿಕರತ್ತ ನೋಡಿದರು. ಈ ಒಂದು ಕ್ಷಣದ ಮೌನ ನೋಟದಲ್ಲಿ ಸಾವಿರ ಓಟುಗಳು ಅವರ ಪರ ಬಿದ್ದಿರಬಹುದು. ವಿರೋಧಿಗಳ ಪಾಲಿಗೆ ಅದೊಂದು ಅಪಶಕುನದ ನಿಲುಗಡೆ.*
>
> *ಹೌದು, ನಗರದ ಬಗ್ಗೆ ಅವರಿಗೆ ವಿಶೇಷ ಮಮತೆ ಇತ್ತು. ಮತ್ತೆ ಮಾತಿನ ಓಘಕ್ಕೆ ಒಂದು ಕ್ಷಣ ನಿಲುಗಡೆ. ಎರಡು ಸಾವಿರ ಓಟುಗಳು ಬಿದ್ದಿದ್ದವು.*
>
> *ಇದೊಂದು ರೀತಿ ತೌರುಮನೆಗೆ ಬಂದಿರುವಂತೆ. ಮತ್ತೆ ಮಾತಿನ ನಿಲುಗಡೆ. ಆಸೆಗಣ್ಣಿನ ನೋಟ. ಐದುಸಾವಿರ ಓಟುಗಳು ಬಿದ್ದಿದ್ದವು.*
>
> *ಮುಂಬಯಿಯಲ್ಲಿ ತಾವು ತಮ್ಮ ಜೀವನದ ಸಂತಸಕರ ಕ್ಷಣಗಳನ್ನು ಕಳೆದುವಾಗಿ ಹೇಳಿದರು. ಹೌದು ಅತ್ಯಂತ ಸಂತೋಷಕರ... ಮಾತು ಬಂದಾಯಿತು. ಅದೇ ಆಸೆಗಣ್ಣಿನ ನೋಟ ಸಭಿಕರತ್ತ.*

ಇನ್ನೂ ಐದು ಸಾವಿರ ಓಟುಗಳು ಬಿದ್ದಿದ್ದವು.

ಅವರು ಉಲ್ಲಾಸಭರಿತರಾಗಿ ಆ ಅದ್ಭುತ ಗಳಿಗೆಗಳನ್ನು ಸವಿಸ್ತಾರವಾಗಿ ನೆನಪಿಸಿಕೊಂಡರು. ಕೆಲವು ದುಃಖದ, ಕಷ್ಟದ ದಿನಗಳನ್ನೂ ಸ್ವಾತಂತ್ರ್ಯ ಹೋರಾಟ ಕಾಲದ ದಿನಗಳನ್ನೂ ನೆನಪಿಸಿಕೊಂಡರು.

ಕಾಂಗ್ರೆಸ್ಸಿಗೆ ಹತ್ತು ಸಾವಿರ ಓಟುಗಳು.

ಮತ್ತೆ ಮಾತಿನ ಓಘಕ್ಕೆ ನಿಲುಗಡೆ.

ನನ್ನೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಕಷ್ಟನಷ್ಟಗಳೆನ್ನೆದುರಿಸಿ ಹೋರಾಡಿದ ಜನರತ್ತ ನೋಡಿದಾಗ ನನಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಶಕ್ತಿ ಲಭಿಸುತ್ತದೆ- ಎಂದು ಅವರು ನುಡಿದರು.

ಬಾಂಧವ್ಯದ ಬೆಸುಗೆ ಪೂರ್ಣಗೊಂಡಿತ್ತು. ಇಪ್ಪತ್ತು ಸಾವಿರ ಮತಗಳು.

ಮಾತು ಮೌನ.

ಮುಸ್ಸಂಜೆಯ ಮಸುಕು ಕವಿಯುತ್ತಿದ್ದ ಆ ಸಮಯದಲ್ಲಿ ಗಾಢವಾದ, ವಿಷಾದ ಪೂರ್ಣವಾದ, ಭಾವಪೂರ್ಣವಾದ ನೋಟ ಬೀರಿದರು. ಅದೊಂದು ಭಾವಗರ್ಭಿತ ನೋಟವಾಗಿತ್ತು. ತಾವು ತಿರುಪೆ ಎತ್ತುವ ಭಿಕ್ಷುಕ ಪಾತ್ರವನ್ನು ವಹಿಸುತ್ತಿರುವುದಾಗಿ ಸಭಿಕರಿಗೆ ತಿಳಿಸಿದರು. 'ನಾನು ಭಿಕ್ಷೆ ಬೇಡುತ್ತಿದ್ದರೆ ಅದು ಜನರ ಪ್ರೇಮದ ಭಿಕ್ಷೆಗಾಗಿ, ನಿಮ್ಮ ವಾತ್ಸಲ್ಯಕ್ಕಾಗಿ, ಈ ದೇಶ ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗಾಗಿ ನಿಮ್ಮ ಪ್ರಬುದ್ಧ ಸಹಕಾರ ಬೇಡಿ ಭಿಕ್ಷಾ ಪಾತ್ರೆ ಹಿಡಿದು ನಿಮ್ಮ ಮುಂದೆ ನಿಂತಿದ್ದೇನೆ' ಎಂದು ಜನರ ಹರ್ಷೋದ್ಗಾರಗಳ ಮಧ್ಯೆ ನುಡಿದರು.

ಮೂವತ್ತು ಸಾವಿರ ಮತಗಳು ನೆಹರೂಗೆ ಖಾತ್ರಿಯಾದವು.

ಮಾತಿಗೆ ನಿಲುಗಡೆ.

ಸಭಿಕರಲ್ಲಿ ಗುಜುಗುಜು, ಗುಸುಗುಸು, ಸಮುದ್ರ ದಂಡೆಯಲ್ಲಿ ನಿಂತ ಸಭಿಕರೊಬ್ಬರ ಕಣ್ಣಲ್ಲಿ ಒಂದೆರಡು ಹನಿ. ಸೀರೆ ಸೆರಗಿನಿಂದ ಒರೆಸಿಕೊಳ್ಳುತ್ತಿರುವ ಮಹಿಳೆಯ ಕಂಗಳಲ್ಲಿ ಕಂಬನಿಯ ಬಿಂದುಗಳು. ಯಾರು ಏನು ಬೇಕಾದರೂ ಹೇಳಲಿ, ಈಕೆಯ ಓಟು ನೆಹರೂಗೇ. ಜನರಿಗೆ ಗಾಂಧೀಜಿಯವರ ನೆನಪು ಉಕ್ಕಿ ಬಂತು. ಗಾಂಧೀಜಿಯವರ ಪಕ್ಕದಲ್ಲಿ ನೆಹರೂ ನಿಂತಿರುತ್ತಿದ್ದ ಆ ದಿನಗಳ ನೆನಪು.. ನೆಹರೂ... ನಮಗೆ ತಮ್ಮ ರಾಜಕೀಯ ಉತ್ತರಾಧಿಕಾರಿಯಾಗಿ ಗಾಂಧಿ ಬಿಟ್ಟು ಹೋಗಿರುವ ನೆಹರೂ...

ಐವತ್ತು ಸಾವಿರ ಓಟುಗಳು, ನೂರು ಸಾವಿರ, ಇನ್ನೂರು ಸಾವಿರ!!

ಜನಸಮುದಾಯ ನೆಹರೂ ಅವರ ದರ್ಶನದಿಂದ ಭಾವಪರವಶರಾಗುತ್ತಿದ್ದರು. ನೆಹರೂ ಅವರು ಜನಸಾಗರವನ್ನು ಕಂಡು ಭಾವಪರವಶರಾಗುತ್ತಿದ್ದರು. ನಯ-ನಾಜೂಕು ಸಂವೇದನೆಗಳನ್ನೊಳಗೊಂಡ ನಿಜವಾದ ಅರ್ಥದಲ್ಲಿ ಆಪ್ತಗೆಳತಿ ಎಂದು ಹೇಳಬಹುದಾದ ಎಡ್ವಿನಾ ಮೌಂಟ್‌ಬ್ಯಾಟನ್ ಅವರಿಗೆ ಬರೆದ ಪತ್ರವೊಂದರಲ್ಲಿ ನೆಹರೂ ಅವರ ಭಾವನೆಗಳು ಅತ್ಯುತ್ತಮವಾಗಿ ಬಿಂಬಿತವಾಗಿವೆ:

> *"ನಾನು ಎಲ್ಲೆ ಹೋಗಲಿ ನನ್ನ ಸಭೆಗಳಿಗೆ ಅಸಂಖ್ಯಾತ ಜನ ಸೇರುತ್ತಾರೆ. ನಾನು ಅವರ ಮುಖಗಳನ್ನು, ಅವರ ಉಡುಪುಗಳನ್ನು, ಅವರು ನನಗೆ, ನನ್ನ ಮಾತುಗಳಿಗೆ ತೋರುವ ಪ್ರೀತಿ ವಾತ್ಸಲ್ಯಗಳನ್ನು ನನ್ನೊಂದಿಗೆ ಹೋಲಿಸಿ ನೋಡುತ್ತೇನೆ. ನನಗೆ ಇದೊಂದು ಪ್ರೀತಿಯ ಕೆಲಸ. ಭಾರತದ ಇತಿಹಾಸದ ದೃಶ್ಯಗಳು ಆ ಕಾಲಘಟ್ಟದೊಂದಿಗೆ ನನ್ನೆದುರು ಪ್ರತ್ಯಕ್ಷವಾಗುತ್ತವೆ. ನನ್ನ ಮನಸ್ಸು ಹಳೆಯ ಘಟನೆಗಳ ಜ್ಞಾಪಕ ಚಿತ್ರ ಶಾಲೆಯಾಗುತ್ತದೆ. ಆದರೆ ಗತಕಾಲಕ್ಕಿಂತ ವರ್ತಮಾನ ಕಾಲ ನನ್ನ ಮನಸ್ಸನ್ನು ಹೆಚ್ಚಾಗಿ ಆವರಿಸುತ್ತದೆ. ಈ ಲಕ್ಷೋಪಲಕ್ಷ ಜನರ ಮನಸ್ಸು, ಹೃದಯಗಳನ್ನು ಒಳಹೊಕ್ಕು ನೋಡುವ ಪ್ರಯತ್ನ ಮಾಡುತ್ತೇನೆ. ಬಹಳ ದಿನಗಳ ಕಾಲ ದೆಹಲಿ ಸಚಿವಾಲಯದಲ್ಲಿ ಬಂದಿಯಾಗಿದ್ದ ನನಗೆ ಭಾರತೀಯ ಜನತೆಯ ತಾಜಾ ಸಂಪರ್ಕದಿಂದ ಖುಷಿಯಾಗುತ್ತದೆ...ಸರಳವಾದ ಮಾತುಗಳಲ್ಲಿ ನಮ್ಮ ಸಮಸ್ಯೆಗಳನ್ನು, ನಮ್ಮ ಕಷ್ಟಗಳನ್ನು ವಿವರಿಸಿ ಹೇಳುವುದು, ಮುಗ್ಧ ಮನಸ್ಸುಗಳನ್ನು ಮುಟ್ಟಲೆತ್ನಿಸುವುದು ತ್ರಾಸದಾಯಕವೂ ಉಲ್ಲಾಸದಾಯಕವೂ ಆದ ಕೆಲಸ.*
>
> *ನಾನು ಪರ್ಯಟನ ನಡೆಸಿದಂತೆ ಗತಕಾಲ-ವರ್ತಮಾನಗಳು ಒಂದರೊಳಗೊಂದು ವಿಲೀನಗೊಳ್ಳುತ್ತವೆ. ಈ ವಿಲಯನ ಭವಿಷ್ಯದ ಬಗ್ಗೆ ಚಿಂತಿಸುವಂತೆ ನನ್ನನ್ನು ಪ್ರೇರೇಪಿಸುತ್ತದೆ. ಕಾಲ ಎನ್ನುವುದು ಸತತವಾಗಿ, ಒಂದಕ್ಕೊಂದು ಸಂಬಂಧಿಸಿದ ಘಟನೆಗಳೊಂದಿಗೆ ಹರಿಯುವ ನದಿಯ ಪ್ರವಾಹದಂತೆ ತೋರುತ್ತದೆ."*

VI

ನೆಹರೂ ಸಹ ಭೇಟಿ ಕೊಡದಿದ್ದ ಒಂದು ತಾಲ್ಲೂಕೆಂದರೆ ಹಿಮಾಚಲ ಪ್ರದೇಶದ ಚಿನಿ. ಇಲ್ಲಿ ಭಾರತದ ಪ್ರಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡಲಿದ್ದ ಭಾರತೀಯರೆಂದರೆ ಬೌದ್ಧರು. ಚಳಿಗಾಲದಿಂದಾಗಿ ವಿಶ್ವದೊಂದಿಗೆ ಸಂಪರ್ಕ ಕಡಿದುಕೊಳ್ಳುವ ಮುನ್ನ 1951ರ ಅಕ್ಟೋಬರ್ 25ರಂದು ಇವರು ಮತದಾನ ಮಾಡಿದ್ದರು. ಚಿನಿಯ ಗ್ರಾಮಸ್ಥರು ಟಿಬೆಟ್ಟಿನ ಪಂಚೆನ್ ಲಾಮಾ ಅವರ ಶಿಷ್ಯವರ್ಗಕ್ಕೆ ಸೇರಿದ ಬೌದ್ಧ ಧರ್ಮೀಯರು. ಸ್ಥಳೀಯ ಪುರೋಹಿತರು ಇವರಿಗೆ ಆಚಾರ ವಿಚಾರಗಳಲ್ಲಿ ಮಾರ್ಗದರ್ಶನ ನೀಡುತ್ತಿದ್ದರು. ಗೋರಾಸಾಂಗ್, ಕಾಂಗುರ್ ಝುಲ್ಮೋ, ಮೆಂಥಾಕೋ, ಜೋಖಿಯಾ

ಚುಗ್ ಸಿಮಿಗ್ ಇವರ ಪ್ರಮುಖ ಆಚರಣೆಗಳಾಗಿದ್ದವು. ಗೋರಾ ಸಾಂಗ್, ನೂತನ ಗೃಹಪ್ರವೇಶ ಸಂದರ್ಭದ ಆಚರಣೆಯಾದರೆ, ಕಾಂಗುರ್ ಝುಲ್ಮೋ ಕನಾಂನಲ್ಲಿರುವ ಬೌದ್ಧ ಗ್ರಂಥಾಲಯ ಭೇಟಿ ಸಂದರ್ಭದ ಆಚರಣೆ. ಮೆಂಥಾಕೊ ಆಚರಣೆಯಂದು ಪುರುಷರು, ಸ್ತ್ರೀಯರು, ಮಕ್ಕಳು ಆದಿಯಾಗಿ ಎಲ್ಲರೂ ಗುಡ್ಡಬೆಟ್ಟ ಹತ್ತಿ ಹಾಡಿ ಕುಣಿದು ನಕ್ಕು ನಲಿಯುವರು. ಜೋಖಿಯಾ ಚಂಗ್ ಸಿಮಿಂಗ್ ಬಂಧುಗಳ ಮನೆಗೆ ಭೇಟಿಕೊಟ್ಟಾಗ ನಡೆಯುವ ಹಬ್ಬ. ಇವೆಲ್ಲದರ ಜೊತೆಗೆ ಇದುವರೆಗೆ ತಿಳಿಯದಿದ್ದ ಹೊಸ ಆಚರಣೆಯೊಂದು ಸೇರಿಕೊಂಡಿತ್ತು. ಅದು: ಪಂಚವಾರ್ಷಿಕ ಚುನಾವಣೆ.

ಇಲ್ಲಿ ಮತದಾನ ನಡೆದ ದಿನವೇ ಯು.ಕೆ. ನಲ್ಲೂ ಸಾರ್ವತ್ರಿಕ ಚುನಾವಣೆ ನಡೆಯಿತು. ಇಲ್ಲಿನಂತೆ ಅಲ್ಲಿ ಹಿಮಾಲಯದ ಕಣಿವೆಯ ಬೌದ್ಧರು ಮತದಾನ ಮಾಡಲಿಲ್ಲ. ಬದಲಾಗಿ ಗೌಳಿಗರು, ಮನೆವಾರ್ತೆ ಮಹಿಳೆಯರು, ರಾತ್ರಿ ಪಾಳಿಯ ಕಾರ್ಮಿಕರು ಅಲ್ಲಿ ತಮ್ಮ ಕೆಲಸಗಳಿಂದ ಮನೆಗಳಿಗೆ ಹಿಂದಿರುಗುವಾಗ ಮತದಾನ ಮಾಡಿದ್ದರು. ಅಲ್ಲಿ ಮರುದಿನವೇ ಫಲಿತಾಂಶ ಪ್ರಕಟ. ಲೇಬರ್ ಪಕ್ಷ ಪರಾಭವಗೊಂಡು ಚರ್ಚಿಲ್ಲರು ಮತ್ತೊಂದು ಅವಧಿಗೆ ಪ್ರಧಾನ ಮಂತ್ರಿಯಾಗಿ ಆಯ್ಕೆ ಹೊಂದಿದ್ದರು. ಭಾರತದಲ್ಲಿ ಪ್ರಪ್ರಥಮವಾಗಿ ಮತದಾನ ಮಾಡಿದವರು ಫಲಿತಾಂಶಕ್ಕಾಗಿ ತಿಂಗಳುಗಟ್ಟಳೆ ಕಾಯಬೇಕಾಯಿತು. ಏಕೆಂದರೆ, ಚಿನಿ ಹೊರತು ರಾಷ್ಟ್ರದ ಉಳಿದೆಡೆ ಚುನಾವಣೆ ನಡೆದದ್ದು 1952ರ ಜನವರಿ-ಫೆಬ್ರುವರಿಯಲ್ಲಿ.

ಈಗಿನ ಕೇರಳದ ಕೊಟ್ಟಾಯಂ ಲೋಕಸಭಾ ಕ್ಷೇತ್ರದಲ್ಲಿ ಅತಿಹೆಚ್ಚು ಮತದಾನ (ಶೇ.80.5) ಆಗಿತ್ತು. ಮಧ್ಯಪ್ರದೇಶದ ಷಹಡೋಲ್‌ನಲ್ಲಿ ಅತಿಕಡಿಮೆ (ಶೇ 18) ಮತದಾನವಾಗಿತ್ತು. ಒಟ್ಟಾರೆಯಾಗಿ ದೇಶದಾದ್ಯಂತ ಸರಾಸರಿ ಶೇ 60ರಷ್ಟು ಮತದಾನವಾಗಿತ್ತು. ಅನಕ್ಷರಸ್ಥರ ಸಂಖ್ಯೆ ಹೆಚ್ಚಿದ್ದಾಗ್ಯೂ ಇಷ್ಟು ಮತದಾನವಾಗಿತ್ತು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಪಂಡಿತರೊಬ್ಬರು ವರ್ಣಿಸಿರುವಂತೆ, ಹಿಮಾಚಲದಲ್ಲಿ ತರುಣಿಯೊಬ್ಬಳು ತನ್ನ ನಿಶ್ಶಕ್ತ ತಾಯಿಯೊಂದಿಗೆ ಮತದಾನ ಮಾಡಲು ಮೈಲಿಗಟ್ಟಳೆ ನಡೆದು ಬಂದಿದ್ದಳು. ಏಕೆಂದರೆ, "ಈ ಒಂದು ದಿನವಾದರೂ ತಾನು ಮುಖ್ಯ" ಎಂದು ತನ್ನ ಮಹತ್ವವನ್ನು ಆಕೆ ಬಲ್ಲವಳಾಗಿದ್ದಳು. ಒರಿಸ್ಸಾದ ಗುಡ್ಡಗಾಡು ಜನರು ಬಿಲ್ಲು-ಬಾಣ ಹಿಡಿದು ಮತಗಟ್ಟಗಳಿಗೆ ಬಂದಿದ್ದರೆಂದು ಮುಂಬಯಿ ಸಾಪ್ತಾಹಿಕವೊಂದು ಬರೆದಿದೆ. ಅರಣ್ಯ ಪ್ರದೇಶದ ಒಂದು ಮತಗಟ್ಟೆಯಲ್ಲಿ ಶೇ. 70ಕ್ಕೂ ಹೆಚ್ಚು ಮತದಾನವಾಗಿತ್ತು. ಆದರೆ ಇದರ ನೆರೆಯ ಮತಗಟ್ಟೆಗೆ ಭೇಟಿಯಿತ್ತ ಇಬ್ಬರು ಮತದಾರರೆಂದರೆ ಒಂದು ಆನೆ ಮತ್ತು ಎರಡು ಚಿರತೆಗಳು. ಮಧುರೆಯಲ್ಲಿ 110 ವರ್ಷದ ವೃದ್ಧನೊಬ್ಬ ಹಾಗೂ ಅಂಬಾಲದಲ್ಲಿ 95 ವರ್ಷದ ವೃದ್ಧೆಯೊಬ್ಬಳು ಮತದಾನ ಮಾಡಿದ್ದನ್ನು ಪತ್ರಿಕೆಗಳು ವಿಶೇಷವಾಗಿ ಪ್ರಕಟಿಸಿದ್ದವು. ಅಸ್ಸಾಂ ಗ್ರಾಮೀಣ ಪ್ರದೇಶದಲ್ಲಿ 90 ವರ್ಷದ ಮುಸ್ಲಿಂ ಮತದಾರನೊಬ್ಬ ನಿರಾಶೆಯಿಂದ ಹಿಂದಿರುಗಬೇಕಾಯಿತು. ನೆಹರೂಗೆ ಮತ ನೀಡುವುದಾಗಿ ಪಟ್ಟು ಹಿಡಿದ ಈ ವೃದ್ಧನಿಗೆ 'ನೆಹರೂಗೆ ಮತ ನೀಡಲು ಅವಕಾಶವಿಲ್ಲವೆಂದು' ಮತಗಟ್ಟೆ ಅಧಿಕಾರಿ ಹೇಳಲೇಬೇಕಾಯಿತು.

ಮಹಾರಾಷ್ಟ್ರದಲ್ಲಿ ನವತಿ ವರ್ಷೀಯ ಮತದಾರನೊಬ್ಬ ವಿಧಾನ ಸಭೆಗೆ ಮತದಾನ ಮಾಡಿ ಲೋಕಸಭೆಗೆ ಮತನೀಡುವ ಮೊದಲೇ ಸಾವನ್ನಪ್ಪಿದ್ದ. ಹೈದರಾಬಾದ್‌ನಲ್ಲಿ ನಿಜಾಮರೇ ಮೊದಲಿಗೆ ಮತದಾನ ಮಾಡಿ ಪ್ರಜಾಪ್ರಭುತ್ವವನ್ನು ಸಮರ್ಥಿಸಿದ್ದರು.

ಮುಂಬಯಿಯಲ್ಲಿ ತುರುಸಿನ ಮತದಾನವಾಗಿತ್ತು. ದೆಹಲಿ ಆಳುವವರ ರಾಜಧಾನಿಯಾಗಿದ್ದರೆ ಮುಂಬಯಿ ದೇಶದ ಆರ್ಥಿಕ ರಾಜಧಾನಿ. ರಾಜಕೀಯವಾಗಿ ತುಂಬ ಪ್ರಜ್ಞಾವಂತ ನಗರ. ಮುಂಬಯಿಯಲ್ಲಿ ಆಗ 900000 ಮತದಾರರಿದ್ದು ಶೇ 70ರಷ್ಟು ಮತದಾನವಾಗಿತ್ತು. ಶೋಕಿಲಾಲ ಮಧ್ಯಮ ವರ್ಗದವರಿಗಿಂತ ಬೆವರಿನ ದುಡಿಮೆಯ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿದ್ದರು. ಟೈಮ್ಸ್ ಆಫ್ ಇಂಡಿಯಾ ಹೀಗೆ ವರದಿ ಮಾಡಿತ್ತು: "ಕೈಗಾರಿಕಾ ಪ್ರದೇಶಗಳಲ್ಲಿ ಮತಗಟ್ಟೆಗಳ ಬಾಗಿಲು ತೆರೆಯುವುದಕ್ಕೂ ಮುಂಚಿತವಾಗಿಯೇ ಮಂಜು ಸುರಿಯುತ್ತಿದ್ದ ಮುಂಜಾವಿನಲ್ಲೇ ಕಾರ್ಮಿಕರು ಸಾಲುಗಟ್ಟಿ ನಿಂತಿದ್ದರು. ಇದಕ್ಕೆ ತದ್ವಿರುದ್ಧವಾಗಿ ಮಲಬಾರ್ ಹಿಲ್‌ನ ಮತಗಟ್ಟೆಯಲ್ಲಿ ಟೆನ್ನಿಸ್‌ಗೋ, ಬ್ರಿಜ್ ಆಡಲಿಕ್ಕೋ ಹೋಗುವ ಮಂದಿಯಂತೆ ಆಕಸ್ಮಿಕವಾಗಿ ಒಬ್ಬಿಬ್ಬರು ಮತಗಟ್ಟೆಗೆ ಬರುತ್ತಿದ್ದರು."

ಮುಂಬಯಿ ಮತದಾನದ ಮರುದಿನ ಮಿಜೋ ಗುಡ್ಡಗಾಡು ಪ್ರದೇಶದಲ್ಲಿ ಚುನಾವಣೆ ನಡೆಯಿತು. ಸಾಂಸ್ಕೃತಿಕವಾಗಿ ಹಾಗೂ ಭೌಗೋಳಿಕವಾಗಿ ಒಂದಕ್ಕೊಂದು ತದ್ವಿರುದ್ಧ. ಮುಂಬಯಿಯಲ್ಲಿ ಕೇವಲ 92 ಚದರ ಮೈಲಿ ಪ್ರದೇಶದಲ್ಲಿ 1349 ಮತಗಟ್ಟೆಗಳಿದ್ದವು. ಪೂರ್ವ ಪಾಕಿಸ್ತಾನ ಮತ್ತು ಬರ್ಮಾಗಳೊಂದಿಗೆ ಗಡಿಹೊಂದಿದ್ದ 8000 ಚದರ ಮೈಲಿ ವಿಸ್ತೀರ್ಣದ ಮಿಜೋದಲ್ಲಿ ಕೇವಲ 113 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಇಲ್ಲಿನ ಜನರಿಗೆ ಯುದ್ಧದ ಸೇನಾವ್ಯೂಹ ಹೊರತಾಗಿ ಚುನಾವಣೆಯ ವ್ಯೂಗಳ ಪರಿಚಯವಿರಲಿಲ್ಲ. ಆದರೆ ಇವರು ವಿಶೇಷ ಮುತುವರ್ಜಿಯಿಂದ ಮತದಾನ ಮಾಡಿದ್ದರು. ರಾತ್ರೋರಾತ್ರಿ ಕಾಲ್ನಡಿಗೆಯಲ್ಲಿ ಬಂದು, ಮಧ್ಯ ಅರಣ್ಯದಲ್ಲಿ ತಂಗಿ, ಬೆಂಕಿ ಸುತ್ತ ಹಾಡಿ ಕುಣಿದು, ಬೆಳಿಗ್ಗೆ ಮತಗಟ್ಟೆ ತಲುಪಿದ್ದರು. 92 ಸಾವಿರ ಮಂದಿ ಮಿಜೋಗಳು, ಶತಮಾನಗಳ ಕಾಲದಿಂದ ಬಿಲ್ಲುಬಾಣ ಭರ್ಜಿ ಹಿಡಿದು ಹೋರಾಡಿದ ಮಿಜೋಗಳು, ಮತಪತ್ರಗಳ ಮೂಲಕ ತಮ್ಮ ನಿರ್ಣಯ ತಿಳಿಸಲು ಮತಗಟ್ಟೆಗಳಿಗೆ ಧಾವಿಸಿ ಬಂದಿದ್ದರು.

ಹಿಮಾಚಲದ ಚುನಾವಣಾಧಿಕಾರಿಗಳಲ್ಲಿ ಕಂಡ ಬದ್ಧತೆಯಿಂದ ಅಮೆರಿಕದ ಫೋಟೊಗ್ರಾಫರ್ ಒಬ್ಬಾಕೆ ದಂಗಾಗಿದ್ದಳು. ಜಿಲ್ಲಾ ಮ್ಯಾಜಿಸ್ಟ್ರೇಟರು ವ್ಯವಸ್ಥೆಗೊಳಿಸಿದ್ದ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಒಬ್ಬ ಅಧಿಕಾರಿ ಆರು ದಿನ ನಡೆದು ಜಿಲ್ಲಾ ಕೇಂದ್ರ ತಲುಪಿದ್ದ. ಮತ್ತೊಬ್ಬ ಹೇಸರಗತ್ತೆ ಮೇಲೆ ಆರು ದಿನ ಸವಾರಿ ಮಾಡಿ ಬಂದಿದ್ದ. ಇವರುಗಳು ತರಬೇತಿಯ ನಂತರ ಮತಗಟ್ಟೆಗಳು, ಮತ ಪತ್ರಗಳು ಮೊದಲಾದ ಚುನಾವಣಾ ಸಾಮಗ್ರಿಗಳನ್ನೊಳಗೊಂಡ ಬೀಗಮುದ್ರೆಯ ಭಾಂಗಿಗಳೊಂದಿಗೆ ತಮ್ಮ ಮತಗಟ್ಟೆಗಳಿಗೆ ವಾಪಸಾಗಿದ್ದರು. ಚುನಾವಣೆಯ ದಿನ ಈ ಛಾಯಾಗ್ರಾಹಕಿ ಭೂತಿ ಎಂಬ ಗ್ರಾಮದ

ಮತಗಟ್ಟೆಯೊಂದನ್ನು ತನ್ನ ಕೆಲಸಕ್ಕೆ ಆಯ್ಕೆ ಮಾಡಿಮಾಡಿಕೊಂಡಳು. ಇಲ್ಲಿ ಒಂದೇ ಬಾಗಿಲು ಇದ್ದ ಶಾಲೆಯೇ ಮತಗಟ್ಟೆಯಾಗಿತ್ತು. ಮತದಾರರು ಒಂದು ಬಾಗಿಲಿನಿಂದ ಪ್ರವೇಶಿಸಿ ಮತಹಾಕಿದ ನಂತರ ಬೇರೊಂದು ಬಾಗಿಲಿನಿಂದ ನಿರ್ಗಮಿಸಬೇಕೆಂಬುದು ಚುನಾವಣಾ ನಿಯಮ. ಹೀಗಾಗಿ ಈ ಶಾಲೆಯಲ್ಲಿ ಕಿಟಕಿಯನ್ನೇ ಬಾಗಿಲಾಗಿ ಪರಿವರ್ತಿಸಲಾಗಿತ್ತು. ಕಿಟಕಿಗೆ ಬಾಗಿಲಬಳಿ ಮೆಟ್ಟಿಲೊಂದನ್ನು ಜೋಡಿಸಲಾಗಿತ್ತು. ಮತಹಾಕಿದ ನಂತರ, ಈ ಮೆಟ್ಟಿಲು ಹತ್ತಿ ಕಿಟಕಿಯಿಂದ ಹೊರಕ್ಕೆ ಜಿಗಿಯಬೇಕಾಗಿತ್ತು.

ಕನಿಷ್ಠ ಪಕ್ಷ ಮೊದಲ ಚುನಾವಣೆಯಲ್ಲಾದರೂ ರಾಜಕಾರಣಿಗಳು ಮತ್ತು ಸಾರ್ವಜನಿಕರು ಶಾಂತಿ ಸುವ್ಯವಸ್ಥೆಗೆ ಬದ್ಧರಾಗಿ ನಡೆದುಕೊಂಡಿದ್ದರು. ಈ ಚುನಾವಣೆಯಲ್ಲಿ ಕೇವಲ 1250 ಚುನಾವಣಾ ಅಪರಾಧಗಳು ವರದಿಯಾಗಿದ್ದವು. ಇವುಗಳಲ್ಲಿ 817 ಪ್ರಕರಣಗಳು ಬೇರೆಯವರ ಹೆಸರಿನಲ್ಲಿ ಮತ ನೀಡಲೆತ್ನಿಸಿದ ಠಕ್ಕು ಮತದಾನದವು, 106 ಪ್ರಕರಣಗಳು ಮತಪತ್ರಗಳನ್ನು ಮತಗಟ್ಟೆಯಿಂದ ಹೊರಕ್ಕೊಯ್ಯಲು ನಡೆಸಿದ ಪ್ರಯತ್ನಗಳು, ಇನ್ನೂ 100 ಮತಗಟ್ಟೆಯ ನೂರು ಗಜ ವ್ಯಾಪ್ತಿಯೊಳಗೇ ಪ್ರಚಾರ ನಡೆಸಿದ ಪ್ರಕರಣಗಳು. ಇವುಗಳಲ್ಲಿ ಹೆಚ್ಚು ಅಪರಾಧಗಳು ಅಜ್ಞಾನದಿಂದ ನಡೆದವಾಗಿದ್ದವು.

VII

1952ರ ಫೆಬ್ರುವರಿ ಕೊನೆಯ ವಾರದಲ್ಲಿ ಸಾರ್ವತ್ರಿಕ ಚುನಾವಣೆಯ ಮತದಾನ ಅಂತ್ಯಗೊಂಡಿತು. ಮತಗಳ ಎಣಿಕೆ ನಡೆದಾಗ, ಕಾಂಗ್ರೆಸ್ ಸುಖೀ ವಿಜಯಗಳಿಸಿತ್ತು. ಲೋಕಸಭೆಯ 489 ಸ್ಥಾನಗಳಲ್ಲಿ 364 ಸ್ಥಾನಗಳನ್ನೂ ರಾಜ್ಯವಿಧಾನಸಭೆಗಳ 3280 ಸ್ಥಾನಗಳಲ್ಲಿ 2247 ಸ್ಥಾನಗಳನ್ನೂ ಕಾಂಗ್ರೆಸ್ ಗೆದ್ದಿತ್ತು. ಕಾಂಗ್ರೆಸ್ ಟೀಕಾಕಾರರು ತುದಿಗಾಲಮೇಲೆ ನಿಂತಂತೆ ಇದನ್ನು, "ಮೊಟ್ಟಮೊದಲ ಭೂತ-ಭವಿಷ್ಯ ಪದ್ಧತಿಯ ಈ ಫಲ ಪ್ರಾತಿನಿಧಿಕವಲ್ಲ" ಎಂದು ಬಣ್ಣಿಸಿದವು. ಶೇ.50ಕ್ಕೂ ಹೆಚ್ಚು ಮತದಾರರು ಕಾಂಗ್ರೆಸ್ಸೇತರ ಅಭ್ಯರ್ಥಿಗಳಿಗೆ-ಪಕ್ಷಗಳಿಗೆ ಮತ ಚಲಾಯಿಸಿದ್ದರು. ಪಾರ್ಲಿಮೆಂಟ್ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ದೊರೆತದ್ದು ಶೇ.45ರಷ್ಟು ಮತಗಳು. ಆದರೆ ಅದು ವಿಜಯಿಯಾದದ್ದು ಶೇ.74.4ರಷ್ಟು ಸ್ಥಾನಗಳಲ್ಲಿ. ರಾಜ್ಯ ವಿಧಾನಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಗಳಿಸಿದ್ದು ಶೇ.42.4ರಷ್ಟು ಮತಗಳು ಹಾಗೂ ಗೆದ್ದದ್ದು ಶೇ.68.6ರಷ್ಟು ಸ್ಥಾನಗಳು. ಆದಾಗ್ಯೂ, ಇಪ್ಪತ್ತೆಂಟು ಕಾಂಗ್ರೆಸ್ ಮಂತ್ರಿಗಳು ಪರಾಜಿತರಾಗಿದ್ದರು. ಇವರಲ್ಲಿ ಜಯನಾರಾಯಣ ವ್ಯಾಸ್ (ರಾಜಸ್ಥಾನ), ಮುರಾರಜಿ ದೇಸಾಯಿ (ಮುಂಬಯಿ) ಸೇರಿದ್ದರು. ಫಲಿತಾಂಶದಲ್ಲಿ ಎದ್ದುಕಂಡ ಮಹತ್ವದ ಗೆಲುವೆಂದರೆ, ಚುನಾವಣೆ ಪ್ರಚಾರದಲ್ಲಿ ವಿಸ್ಕಿಯನ್ನು ಮೊಟ್ಟಮೊದಲಿಗೆ ಸವಿದ ಕಮ್ಯುನಿಸ್ಟ್ ಮುಖಂಡ ರವಿ ನಾರಾಯಣ ರೆಡ್ಡಿಯವರ ವಿಜಯ. ಈತ ಜವಹರಲಾಲ್ ನೆಹರೂ ಅವರಿಗಿಂತ ಅತ್ಯಧಿಕ ಮತಗಳನ್ನು ಗಳಿಸಿ ವಿಜಯಿಯಾಗಿದ್ದ.

ಪರಾಜಿತರಲ್ಲಿ ಅತಿ ಗಮನಾರ್ಹರಾದವರೆಂದರೆ, ಪರಿಶಿಷ್ಟರ ನಾಯಕ ಡಾ. ಅಂಬೇಡ್ಕರ್. ಮುಂಬಯಿಯಲ್ಲಿ ಇವರ ಪ್ರತಿಸ್ಪರ್ಧಿಯಾಗಿದ್ದವನು ಕಾಂಗ್ರೆಸ್ ಹುರಿಯಾಳು ಅನಾಮಧೇಯ ಗೌಳಿಗ ಕಾಜ್ರೋಳ್ಕರ್. ಮರಾಠಿಯ ಅಭಿಜಾತ ಪತ್ರಕರ್ತ ಪಿ.ಕೆ. ಅತ್ರೆ ಇಂಥದೊಂದು ಉಕ್ತಿಯನ್ನು ಬರೆದರು. ಅದು ಮುಂದೆ ಜನಪ್ರಿಯವಾಯಿತು:

ಎಲ್ಲಿಯ ಸಂವಿಧಾನ ಶಿಲ್ಪಿ ಅಂಬೇಡ್ಕರ್
ಎಲ್ಲಿಯ ಅನಾಮಧೇಯ ಗೌಳಿ ಕಾಜ್ರೋಳ್ಕರ್.

ಆದರೂ ಕೊನೆಯಲ್ಲಿ ಕಾಂಗ್ರೆಸ್ಸಿನ ಪ್ರತಿಷ್ಠೆ-ಪ್ರಭಾವಗಳು, ಮುಂಬಯಿಯಲ್ಲಿ ನೆಹರೂ ಮಾಡಿದ ಭಾಷಣಗಳು ಕಾಜ್ರೋಳ್ಕರ್ ಅವರನ್ನು ಗೆಲ್ಲಿಸಿದ್ದವು. ಕುಚೋದ್ಯಗಾರನೊಬ್ಬ ಹೇಳಿದಂತೆ ಕಾಂಗ್ರೆಸ್ ಟಿಕೆಟ್ ಮೇಲೆ ದೀಪದ ಕಂಭ ನಿಂತರೂ ವಿಜಯ ಶತಃಸಿದ್ಧವಾಗಿತ್ತು. ಅಥವಾ ರಾಜ್ಯಶಾಸ್ತ್ರಜ್ಞರೊಬ್ಬರು ಹೇಳಿರುವಂತೆ-"ನೆಹರೂ ಅವರ ವೈಯಕ್ತಿಕ ವರ್ಚಸ್ಸು, ಜನಪ್ರಿಯತೆ ಹಾಗೂ ಸ್ವತಂತ್ರ ಭಾರತದ ಆಶೋತ್ತರಗಳನ್ನು ಬಿಂಬಿಸುವ ಅವರ ಸಾಮರ್ಥ್ಯ-ಪ್ರಭಾವಗಳಿಂದಾಗಿ ಕಾಂಗ್ರೆಸ್ ಚುನಾವಣೆಯಲ್ಲಿ ಜಯಗಳಿಸಿತು."

ಚುನಾವಣೆಗೆ ಮೊದಲು ಸುಕುಮಾರಸೇನ್ "ಮಾನವ ಇತಿಹಾಸದಲ್ಲೇ ಕಂಡರಿಯದಂಥ ಅತಿದೊಡ್ಡ ಪ್ರಜಾಪ್ರಭುತ್ವ ನಮ್ಮದು" ಎಂದು ಹೇಳಿದ್ದರು. ಮದ್ರಾಸಿನ ಹಿರಿಯ ಪತ್ರಕರ್ತರೊಬ್ಬರು ಇನ್ನೂ ಕೊಂಚ ತಟಸ್ಥರಾಗಿಯೇ ಹೀಗೆ ಹೇಳಿದ್ದರು: "ಅತಿ ಹೆಚ್ಚು ಮಂದಿ ಮೊದಲಸಲ ಮತ ಹಾಕಿದರು. ಅವರಲ್ಲಿ ಅನೇಕ ಮಂದಿಗೆ, ನಾವೇಕೆ ಮತದಾನ ಮಾಡಬೇಕು? ಯಾರಿಗೆ ಮತನೀಡಬೇಕು? ಎಂಬುದು ಗೊತ್ತೇ ಇರಲಿಲ್ಲ—ಈ ಪರಿಜ್ಞಾನ ಇರಲೇ ಇಲ್ಲ. ಹೀಗಾಗಿ ಇದು ಇತಿಹಾಸದ ಅತಿದೊಡ್ಡ ಪಣ." ಇತ್ತೀಚೆಗೆ ರಾಜ್ಯರಹಿತರಾಗಿದ್ದ ಮಹಾರಾಜರೊಬ್ಬರು ಅಮೆರಿಕದ ಪತ್ರಕರ್ತನೊಬ್ಬನಿಗೆ ಈ ರೀತಿ ತಿಳಿಸಿದ್ದರು: "ಅನಕ್ಷರಸ್ಥರ ನಾಡಿಗೆ ವಯಸ್ಕರ ಮತದಾನ ಮಂಜೂರು ಮಾಡಿದ ಸಂವಿಧಾನ ಒಂದು 'ಹುಚ್ಚು', ಒಂದು ವಿಲಕ್ಷಣ. ಪುಡಾರಿತನ, ತಪ್ಪು ಮಾಹಿತಿ, ಅಪ್ರಾಮಾಣಿಕತೆ ಇವುಗಳನ್ನು ಊಹಿಸಿಕೊಳ್ಳಿ. ಈ ಪ್ರಪಂಚ, ಇಂಥದೊಂದು ಪ್ರಯೋಗಕ್ಕೆ ತುಂಬಾ ದುರ್ಬಲವಾಗಿದೆ, ಅಶಕ್ತವಾಗಿದೆ."

ಈ ಸಂದೇಹವನ್ನು ಒಪ್ಪುವ ಇನ್ನೊಬ್ಬ ವ್ಯಕ್ತಿ ಪೆಂಡೆರಲ್ ಮೂನ್, ಆಲ್‌ಸೋಲ್ಸ್ ಕಾಲೇಜಿನ ಫೆಲೋ ಹಾಗೂ ಭಾರತದಲ್ಲೇ ಉಳಿಯಲಿಚ್ಛಿಸಿದ ಮಾಜಿ ಐ.ಸಿ.ಎಸ್. ಅಧಿಕಾರಿ. 1941ರಲ್ಲಿ ಮೂನ್ ಪಂಜಾಬ್ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳನ್ನುದ್ದೇಶಿಸಿ ಉಪನ್ಯಾಸ ನೀಡಿದ್ದರು. ವಿಷಯ: "ಭಾರತದ ಸಾಮಾಜಿಕ ಸಂದರ್ಭದಲ್ಲಿ ಪಾಶ್ಚಾತ್ಯ ಮಾದರಿ ಪ್ರಜಾಸತ್ತೆಯ ಅಪ್ರಸ್ತುತತೆ. ಪಾಶ್ಚಾತ್ಯ ಮಾದರಿ ಪ್ರಜಾಸತ್ತೆ ಭಾರತಕ್ಕೆ ಹೊಂದುವುದಿಲ್ಲ" ಎಂಬುದು ಮೂನ್ ವಾದವಾಗಿತ್ತು. ಈಗ ಹನ್ನೊಂದು ವರ್ಷಗಳ ನಂತರ ಮಣಿಪುರದಲ್ಲಿ ಚೀಫ್ ಕಮಿಷನರ್. ಚುನಾವಣೆ ನಡೆಸಲು ಹಾಗೂ ಮತಗಳ ಎಣಿಕೆಗೆ ಅಧಿಕಾರಿಗಳನ್ನು ಕಳುಹಿಸುವುದು ಇವರ ಜವಾಬ್ದಾರಿಯಾಗಿತ್ತು. ಜನವರಿ 29ರಂದು ಮಣಿಪುರದ ಜನತೆ ಮತ ಚಲಾಯಿಸಿದಂತೆ, ಮೂನ್ ತಮ್ಮ ತಂದೆಗೆ

ಬರೆದ ಪತ್ರದಲ್ಲಿ, "ಲಕ್ಷಾಂತರ ಮಂದಿ ನಿರಕ್ಷರಕುಕ್ಷಿಗಳ ಮತದಾನ ಪ್ರಹಸನವನ್ನು ಭವಿಷ್ಯದ ಪ್ರಜ್ಞಾವಂತ ಯುಗದ ಜನರು ವಿಸ್ಮಯದಿಂದ, ಸ್ತಂಭೀಭೂತರಾಗಿ ಗ್ರಹಿಸುವರು."

ಆಲ್‌ಪೋರ್ಟ್‌ ಮನುಷ್ಯನಷ್ಟೇ ಸಂದೇಹ ಹೊಂದಿದ್ದ ಪತ್ರಿಕೆ "ಆರ್ಗನೈಸರ್". ಇದು ಆರ್.ಎಸ್.ಎಸ್. ಹಿಂದೂ ಪುನರ್ವಶತಾವಾದಿಯ ಮುಖವಾಣಿ. ಭಾರತದಲ್ಲಿ ವಯಸ್ಕ ಮತದಾನದ ವೈಫಲ್ಯವನ್ನು ನೆಹರೂ ಒಂದಲ್ಲ ಒಂದು ದಿನ ಒಪ್ಪಿಕೊಳ್ಳುವರೆಂಬುದು ಈ ಪತ್ರಿಕೆಯ ಭರವಸೆಯಾಗಿತ್ತು. ಮಹಾತ್ಮಾ ಗಾಂಧಿ "ಈ ಪ್ರಜಾಸತ್ತೆಯ ಅವಸರದ ಚಿಕಿತ್ಸೆ" ವಿರುದ್ಧ ಎಚ್ಚರಿಕೆ ನೀಡಿದ್ದರು, ರಾಜೇಂದ್ರ ಪ್ರಸಾದರು "ಕರಾಳ ಓವರಿಯಲ್ಲಿನ ಈ ಜಿಗಿತದ ಬಗ್ಗೆ" ಸಂದೇಹಪೀಡಿತರಾಗಿದ್ದರು. ಆದಾಗ್ಯೂ ಜೀವಮಾನವಿಡೀ ಘೋಷಣೆಗಳು, ಅವುಟಗಳು-ಪ್ರದರ್ಶನಗಳಿಂದಲೇ ಉಸಿರಾಡುತ್ತಿರುವ ನೆಹರೂ ಇವರ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ ಎನ್ನುವುದು ಈ ಪತ್ರಿಕೆಯ ಅಭಿಪ್ರಾಯವಾಗಿತ್ತು.

ನೆಹರೂ ಕೂಡ, ವಯಸ್ಕ ಮತದಾನದ ಬಗ್ಗೆ ಎರಡೆರಡು ಬಾರಿ ಯೋಚಿಸದೇ ಇರಲಿಲ್ಲ. 1951ರ ಡಿಸೆಂಬರ್ 20ರಂದು ನೆಹರೂ ಪ್ರಚಾರದಿಂದ ಮುಕ್ತರಾಗಿ ದೆಹಲಿಯಲ್ಲಿ ನಡೆದ ಯುನೆಸ್ಕೋ ವಿಚಾರ ಸಂಕಿರಣವೊಂದರಲ್ಲಿ ಮಾತನಾಡಿದರು. ಭಾಷಣದಲ್ಲಿ ಪ್ರಜಾಸತ್ತೆ ಅಥವಾ ಸ್ವಯಂಮಾಡಳಿತ ಅತ್ಯುತ್ತಮ ರೀತಿಯ ಸರ್ಕಾರವೆಂದು ಒಪ್ಪಿಕೊಂಡರು, ಆದರೂ-

> *"ಚಿಂತನೆಯ ಕೊರತೆ, ಪ್ರಚಾರದ ಅಬ್ಬರಗಳಿಂದಾಗಿ ಈ ಆಧುನಿಕ ಪ್ರಜಾಸತ್ತಾತ್ಮಕ ವಯಸ್ಕ ಮತದಾನ ಪದ್ಧತಿಯಲ್ಲಿ ಆಯ್ಕೆಗೊಳ್ಳುವ ವ್ಯಕ್ತಿಗಳ ಗುಣವಿಶೇಷ ಕ್ಷೀಣಿಸಬಹುದು... ಮತದಾರರು ಅಬ್ಬರ, ಅರ್ಭಟ, ಕಿವಿಗಡಚಿಕ್ಕುವ ಭಾಷಣಗಳಿಗೆ ಪ್ರತಿಕ್ರಿಯಿಸುತ್ತಾರೆ, ಪುನರುಚ್ಚಾರಗಳಿಗೆ ಪ್ರತಿಕ್ರಿಯಿಸುತ್ತಾರೆ ಹಾಗೂ ಸಂವೇದನಾರಹಿತನಾದ ಒಬ್ಬ ಸರ್ವಾಧಿಕಾರಿಯನ್ನೋ ಮೂಕ ರಾಜಕಾರಣಿಯನ್ನೋ ಆಯ್ಕೆ ಮಾಡುತ್ತಾರೆ. ಇಂಥ ರಾಜಕಾರಣಿ ಪ್ರಪಂಚದ ಎಲ್ಲ ಅಬ್ಬರ-ಅರ್ಭಟ-ಅರಚಾಟಗಳನ್ನು ತಡೆದುಕೊಳ್ಳುವಷ್ಟು ಸಮರ್ಥ ಹಾಗೂ ಹಾಯಾಗಿ ತನ್ನ ಪಾಡಿಗೆ ತಾನಿರುತ್ತಾನೆ ಕೊನೆಯಲ್ಲಿ ಚುನಾಯಿತನಾಗುತ್ತಾನೆ. ಏಕೆಂದರೆ ಉಳಿದವರು ಈ ಅಬ್ಬರ-ಅರ್ಭಟಗಳಲ್ಲಿ ಕೊಚ್ಚಿಹೋಗಿರುತ್ತಾರೆ."*

ಎನ್ನುವ ಕೌತುಕವನ್ನೂ ಅವರು ಹೊಂದಿದ್ದರು.

ಆದರೆ ಇದೊಂದು, ತಮ್ಮ ಇತ್ತೀಚಿನ ರಸ್ತೆ ಬದಿ ಸಭೆಗಳ ಅನುಭವದಿಂದ ಮೂಡಿದ ಕೌತುಕವಾಗಿತ್ತು. ಕೆಳ ಹಂತದಲ್ಲಿ, ಗ್ರಾಮ ಮತ್ತು ಜಿಲ್ಲೆಗಳ ಮಟ್ಟದಲ್ಲಿ ನೇರ ಚುನಾವಣೆ ನಡೆಸಿ, ಮೇಲ್‌ಹಂತದಲ್ಲಿ ಪರೋಕ್ಷ ಚುನಾವಣೆ ನಡೆಸುವುದು ಉತ್ತಮವಾದೀತೇನೋ ಎಂಬ ಅಭಿಪ್ರಾಯವನ್ನು ಒಂದು ವಾರದ ನಂತರ ವ್ಯಕ್ತಪಡಿಸಿದ್ದರು. "ಬೃಹತ್ ಪ್ರಮಾಣದಲ್ಲಿ ನೇರ ಚುನಾವಣೆ ನಡೆಸುವುದು ಜಟಿಲ ಸಮಸ್ಯೆಯಾಗಿದ್ದು ಅಭ್ಯರ್ಥಿಗಳಿಗೆ

ಮತದಾರರ ಜೊತೆ ಸಂಪರ್ಕವೇ ಸಾಧ್ಯವಾಗದಂತಾಗಿ ಇಡೀ ಕಸರತ್ತು ಗಗನ ಕುಸುಮವೇ ಆಗಿ ಬಿಡಬಹುದೇನೋ" ಎನ್ನುವ ಸಂದೇಹವೂ ಅವರನ್ನು ಕಾಡದೇ ಇರಲಿಲ್ಲ.

ನೆಹರೂ ಅವರಲ್ಲಿ ನಾಣ್ಯದ ಎರಡೂ ಬದಿಗಳನ್ನು, ಸಮಸ್ಯೆಯ ಎರಡೂ ಮುಖಗಳನ್ನು ನೋಡಿ ತಿಳಿದುಕೊಳ್ಳುವ ಅಪೂರ್ವ ಗುಣವಿತ್ತು. ಸಾಮಾನ್ಯವಾಗಿ ಎಲ್ಲ ರಾಜಕಾರಣಿಗಳಲ್ಲಿ ಕಂಡುಬರದ ವಿಶೇಷ ಗುಣವಿದು. ಯಾವುದೇ ಒಂದಕ್ಕೆ ಬದ್ಧವಾದಾಗಲೂ ಅದರ ಕಾರ್ಯಪ್ರಕ್ರಿಯೆಯಲ್ಲಿನ ಅಪರಿಪೂರ್ಣತೆಗಳನ್ನು ಅವರು ಗ್ರಹಿಸಬಲ್ಲವರಾಗಿದ್ದರು. ಇದೆಲ್ಲ ಏನೇ ಇದ್ದರೂ ಅಂತಿಮವಾಗಿ ಫಲಿತಾಂಶ ಪ್ರಕಟವಾದಾಗ ಕಾಂಗ್ರೆಸ್ ಪಕ್ಷ ಪ್ರಶ್ನಾತೀತವಾಗಿ ಆಡಳಿತ ಪಕ್ಷವಾಗಿ ಹೊರಹೊಮ್ಮಿತ್ತು. ನೆಹರೂ ಅವರ ಮನದ ಸಂದೇಹಗಳು ಮಾಯವಾಗಿದ್ದವು. "ನಿರಕ್ಷರಕುಕ್ಷಿ ಎಂದು ಹೇಳಲಾಗುವ ಮತದಾರರ ಬಗ್ಗೆ ನನ್ನ ಗೌರವ ಇಮ್ಮಡಿಸಿದೆ. ಭಾರತದಲ್ಲಿ ವಯಸ್ಕ ಮತದಾನ ಪದ್ಧತಿ ಕುರಿತು ನನ್ನ ಮನಸ್ಸಿನಲ್ಲಿದ್ದ ಅನುಮಾನಗಳೆಲ್ಲ ಈಗ ಅಳಿಸಿಹೋಗಿವೆ" ಎಂದು ಅವರು ಘೋಷಿಸಿದರು.

ಚೆಸ್ಟರ್ ಬೌಲ್ಸ್ ಅವರು ಭಾರತದಲ್ಲಿ ಅಮೆರಿಕದ ನೂತನ ರಾಯಭಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದವರೊಂದಿಗೆ ಚುನಾವಣೆ ಬಗೆಗಿನ ಎಲ್ಲ ಶಂಕೆಗಳಿಗೂ ತೆರೆ ಬಿದ್ದಂತಾಯಿತು. ವಿಶ್ವದ ಅತಿ ಶ್ರೀಮಂತ ಪ್ರಜಾಪ್ರಭುತ್ವವಾದ ಅಮೆರಿಕದ ಈ ರಾಯಭಾರಿ 1951ರ ಶರತ್ಕಾಲದಲ್ಲಿ ದೆಹಲಿಯಲ್ಲಿ ಅಧಿಕಾರವಹಿಸಿಕೊಂಡರು. "200 ಮಂದಿ ಅರ್ಹ ಮತದಾರರನ್ನೊಳಗೊಂಡ, ಬಹುತೇಕ ಅವಿದ್ಯಾವಂತ ಮತದಾರರನ್ನೊಳಗೊಂಡ ಚುನಾವಣೆಯ ಸಂಭಾವ್ಯತೆಯಿಂದಾಗಿಯೇ ನಾನು ಗಾಬರಿಗೊಂಡಿದ್ದೆ. ಇದು ಪ್ರಜಾಸತ್ತೆಯ ಹೆಸರಿನಲ್ಲಿ ವಿಶ್ವದಲ್ಲಿ ಬೇರೆಲ್ಲೂ ನಡೆಯದಂಥ ಪ್ರಹಸನ ಎಂದು ಹೆದರಿದ್ದೆ. ಆದರೆ ದೇಶದಾದ್ಯಂತ ಪ್ರವಾಸ ಕೈಗೊಂಡ ನಂತರ ನನ್ನ ಮನಸ್ಸನ್ನು ಬದಲಾಯಿಸಬೇಕಾಯಿತು" ಎಂದು ಹೇಳಿದರೆಂದು 'ಮದ್ರಾಸ್ ಮೈಲ್' ವರದಿ ಮಾಡಿದೆ. ಬಡರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವಕ್ಕೆ ಪೂರ್ವಸಿದ್ಧತೆಯಾಗಿ ದಯಾಪರನಾದ ಸರ್ವಾಧಿಕಾರಿಯ ಆಳ್ವಿಕೆ ಅಗತ್ಯ ಎಂದು ಹಿಂದೊಮ್ಮೆ ಅವರು ಭಾವಿಸಿದ್ದುಂಟು. ಆದರೆ ಹಲವಾರು ಪಕ್ಷಗಳು ಮುಕ್ತವಾಗಿ ಚುನಾವಣೆಯಲ್ಲಿ ಭಾಗವಹಿಸಿದ್ದು, ಅಸ್ಪೃಶ್ಯರು-ಬ್ರಾಹ್ಮಣರು ಒಟ್ಟಾಗಿ ಸಾಲಿನಲ್ಲಿ ನಿಂತು ಮತದಾನ ಮಾಡಿದ್ದು ಅವರ ಮನಸ್ಸಿನಲ್ಲಿ ಪರಿವರ್ತನೆಯನ್ನುಂಟು ಮಾಡಿತ್ತು. ಸಾಕ್ಷರತೆಯೊಂದೇ ಬುದ್ಧಿವಿವೇಕಗಳ ಒರೆಗಲ್ಲು ಅಲ್ಲ ಎಂಬುದನ್ನು ಅವರೀಗ ಮನಗಂಡಿದ್ದರು. ಏಷ್ಯಾಕ್ಕೆ ಅಲ್ಲಿನ ಜನರು ಪ್ರಜಾಪ್ರಭುತ್ವಕ್ಕೆ ಸಜ್ಜುಗೊಳ್ಳುವ ಮುನ್ನ ತುರ್ಕಿಯ ಕೆಮಾಲ್ ಅತಾತುರ್ಕ್ ಮುಸ್ತಫಾರಂಥ ಮಿಲಿಟರಿ ಆಡಳಿತ ಸರಣಿಯ ಅಗತ್ಯವಿದೆ ಎಂಬ ಅನ್ನಿಸಿಕೆ ಈಗ ಅವರ ಮನದಿಂದ ಮಾಯವಾಗಿತ್ತು. ಭಾರತದ ಸಾರ್ವತ್ರಿಕ ಚುನಾವಣೆ ವರದಿಯನ್ನು ಅವರು ಹೀಗೆ ಸಮಾರೋಪಗೊಳಿಸಿದ್ದಾರೆ: "ಏಷ್ಯಾದಲ್ಲಿ ಹಾಗೂ ಅಮೆರಿಕದಲ್ಲಿ ಇದಕ್ಕಿಂತ ಮಿಗಿಲಾದ ಪ್ರಜಾಸತ್ತಾತ್ಮಕ ದರ್ಶನವನ್ನು ನಾನು ಕಂಡಿಲ್ಲ. ಆಳಿಸಿಕೊಳ್ಳುವವರ ಅಂಗೀಕಾರ ಪಡೆದ ಸರ್ಕಾರ-ಎಂಥ ಭವ್ಯ-ದಿವ್ಯ ಕಾಣ್ಕೆ."

ಭಾರತಕ್ಕೆ ಆಗ ಭೇಟಿಕೊಟ್ಟಿದ್ದ ತುರ್ಕಿಯ ಪತ್ರಕರ್ತನೊಬ್ಬ ಚುನಾವಣಾ ವಿಧಾನಕ್ಕಿಂತ ಅದರ ಸತ್ವವನ್ನು ಕೇಂದ್ರೀಕರಿಸಿ ವರದಿ ಮಾಡಿದ್ದುಂಟು. ಟೀಕೆ-ವಿಮರ್ಶೆ, ಭಿನ್ನಮತಗಳ ಬಗ್ಗೆ ಅಸಹನೆ ಬೆಳೆಸಿಕೊಂಡು ಅಧಿಕಾರ ಕೇಂದ್ರೀಕೃತ ನಿರಂಕುಶ ಪ್ರಭುತ್ವ ರೂಪಿಸುವ ಏಷ್ಯಾ ಪ್ರವೃತ್ತಿಯನ್ನೂ, ಕನಿಷ್ಠ ಪ್ರತಿರೋಧವನ್ನೂ ಸಹಿಸದಂಥ ಮಾರ್ಗ ತುಳಿಯದೇ ಇದ್ದುದಕ್ಕಾಗಿ ಈ ಪತ್ರಕರ್ತ ನೆಹರೂ ಅವರನ್ನು ಹೊಗಳಿದ್ದ. ಪ್ರಧಾನ ಮಂತ್ರಿಯವರು ಬುದ್ಧಿವಂತಿಕೆಯಿಂದ ಇಂಥ ತುಡಿತಗಳಿಂದ ದೂರ ಉಳಿದಿದ್ದಾರೆ. ಆದಾಗ್ಯೂ, ತಮ್ಮ ಆತ್ಮಸಾಕ್ಷಿಯಿಂದ ಮತಪೆಟ್ಟಿಗೆಯನ್ನು ಎದುರಿಸಿದ 176,000,000 ಭಾರತೀಯ ಮತದಾರರಿಗೆ ಈ ಕೀರ್ತಿ ಸಲ್ಲಬೇಕು ಎಂಬುದು ಈ ತುರ್ಕಿ ಲೇಖಕನ ಅಭಿಮತ. ಅದೊಂದು ನೇರ, ರಹಸ್ಯ ಮತದಾನದ ಚುನಾವಣೆಯಾಗಿತ್ತು. ಪುರೋಹಿತಶಾಹಿ, ಅಂಧಾಭಿಮಾನ, ಕೋಮು ಪ್ರತ್ಯೇಕತೆ, ಪ್ರತ್ಯೇಕತಾ ನೀತಿ-ಇವಿಷ್ಟು ಒಂದು ಕಡೆಯಾದರೆ; ಜಾತ್ಯತೀತ ನೀತಿ, ರಾಷ್ಟ್ರೀಯ ಏಕತೆ, ಸ್ಥಿರತೆ, ಆಧುನೀಕರಣ, ವಿಶ್ವದ ಇತರ ಭಾಗಗಳೊಂದಿಗೆ ಮಧುರ ಸ್ನೇಹ ಬಾಂಧವ್ಯ ಇವೆಲ್ಲ ಇನ್ನೊಂದು ಬದಿಗಿದ್ದವು. ಆಯ್ಕೆ ಇವೆರಡರಲ್ಲಿ ಒಂದು ಆಗಬೇಕಾಗಿತ್ತು. ಪ್ರತಿಗಾಮಿತ್ವ ಮತ್ತು ಅಶಾಂತಿಯನ್ನು ತಿರಸ್ಕರಿಸಿ, ಸೌಮ್ಯತೆ ಮತ್ತು ಪ್ರಗತಿಯನ್ನು ಆಯ್ಕೆ ಮಾಡುವ ಮೂಲಕ ಮತದಾರರು ತಮ್ಮ ಪ್ರಬುದ್ಧತೆ ಮೆರೆದಿದ್ದಾರೆ ಎಂದು ವ್ಯಾಖ್ಯಾನ ಮಾಡಿರುವ ಈ ಲೇಖಕ ಚುನಾವಣೆಯಿಂದ ತುಂಬಾ ಪ್ರಭಾವಿತನಾಗಿದ್ದ. ಸುಕುಮಾರ ಸೇನ್ ಬಳಿಗೆ ತನ್ನ ದೇಶದ ನಿಯೋಗವೊಂದನ್ನು ಕೊಂಡೊಯ್ದಿದ್ದ. ಪ್ರಧಾನ ಚುನಾವಣಾ ಆಯುಕ್ತರು ಈ ನಿಯೋಗಕ್ಕೆ ಮತಪೆಟ್ಟಿಗೆಗಳ ಮಾದರಿಗಳನ್ನು, ಮತಪತ್ರಗಳನ್ನು, ಚುನಾವಣಾ ಸಂಕೇತಗಳನ್ನು ಪ್ರದರ್ಶಿಸಿದರು. ಅಲ್ಲದೆ ಮತಗಟ್ಟೆಗಳ ವ್ಯವಸ್ಥೆಯನ್ನು ನಿರೂಪಿಸಿದರು. ತಮ್ಮ ದೇಶದಲ್ಲೂ ಇವರುಗಳು ಪ್ರಜಾಸತ್ತೆಯ ಪ್ರಗತಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಪ್ರೇರಕವಾಗಲಿ ಎಂಬುದು ಸೇನ್ ಅವರ ಉದ್ದೇಶವಾಗಿತ್ತು.

ಒಂದು ಅರ್ಥದಲ್ಲಿ ತುರ್ಕಿ ಪತ್ರಕರ್ತನ ಬರಹ ಸರಿಯಾದದ್ದು. 176 ದಶಲಕ್ಷ ಹೀರೋಗಳು-ಇವರು ಅರ್ಹರಾದ ಮತದಾರರಾಗಿದ್ದು ಓಟು ಮಾಡುವ ಶ್ರಮ ವಹಿಸಿದ್ದರು. ಆದರೂ ಈ ಹೀರೋಗಳಲ್ಲಿ ಕೆಲವರು ಉಳಿದವರಿಗಿಂತ ಮಿಗಿಲಾದವರು. ಲಖನೌದ ಗೌರವಾನ್ವಿತ ಸಮಾಜಶಾಸ್ತ್ರಜ್ಞರಾದ ಡಿ.ಪಿ. ಮುಖರ್ಜಿಯವರು ಹೇಳಿರುವಂತೆ-

> "ಮಹಾಕೀರ್ತಿ, ಭಾರತದ ಇತಿಹಾಸದಲ್ಲೇ ಮೂಕ ವಿಸ್ಮಯವಾಗಿಸುವಂಥ ಈ ಅಗಾಧ ಕಾಯಕವನ್ನು ನಿರ್ವಹಿಸಿದವರಿಗೆ ಸಲ್ಲಬೇಕು. ಪ್ರಾಮಾಣಿಕರಾದ ಪ್ರಧಾನಮಂತ್ರಿಯವರು ತಮಗೆ ವಹಿಸಿದ ಕರ್ತವ್ಯವನ್ನು ಪ್ರಮಾಣಿಕವಾಗಿ ನೆರವೇರಿಸುವ ಮೂಲಕ ಆಡಳಿತಶಾಹಿ ನಿಜಕ್ಕೂ ತನ್ನ ಯೋಗ್ಯತೆಯನ್ನು ಮೆರೆಸಿದೆ."

ಪಕ್ಕ ಪಕ್ಕದಲ್ಲಿಟ್ಟು ನೋಡುತ್ತಿರುವ ಈ ಕ್ರಮ ಮಹತ್ವಪೂರ್ಣವಾದದ್ದೂ ಹೌದು, ವ್ಯಂಗ್ಯವೂ ಹೌದು. ಏಕೆಂದರೆ, ಅಧಿಕಾರಶಾಹಿ ಬಗ್ಗೆ ನೆಹರೂ ತಿರಸ್ಕಾರ ಮನೋಭಾವ

ಹೊಂದಿದ್ದ ಕಾಲವೊಂದಿತ್ತು. ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿರುವಂತೆ-"ಉನ್ನತ ಸೇವೆಯಲ್ಲಿ, ವಿಶೇಷವಾಗಿ ಐ.ಸಿ.ಎಸ್. ಶ್ರೇಣಿಯಲ್ಲಿ ನೈತಿಕವಾಗಿ ಹಾಗೂ ಬೌದ್ಧಿಕವಾಗಿ ಆಗುತ್ತಿರುವ ಅವನತಿಗಿಂತ ಬೇರೆ ಕೆಲವು ಸಂಗತಿಗಳೇ ಇಂದು ಭಾರತದಲ್ಲಿ ಪ್ರಮುಖವಾಗಿ ಗೋಚರಿಸುತ್ತಿವೆ. ಇದು ಉನ್ನತಾಧಿಕಾರ ಸ್ಥಾನಗಳಲ್ಲಿರುವವರಲ್ಲಿ ಹೆಚ್ಚು ಸ್ಪಷ್ಟವಾಗಿ ಕಂಡು ಬರುತ್ತದೆ. ಶ್ರೇಣಿಯುದ್ದಕ್ಕೂ ಇದು ದಾರದ ಎಳೆಯಂತೆ ಆವರಿಸಿದೆ." ನೆಹರೂ ಈ ಮಾತುಗಳನ್ನು ಬರೆದದ್ದು 1935ರಲ್ಲಿ. ಇಂಥ ತಿರಸ್ಕಾರಕ್ಕೆ ಗುರಿಯಾದವರು ನೆಹರೂ ಮತ್ತು ಅವರಂಥವರನ್ನು ಜೈಲಿಗೆ ಹಾಕುವಷ್ಟು ಅಧಿಕಾರ ಬಲ ಹೊಂದಿದ್ದರು. ಆದಾಗ್ಯೂ, ಹದಿನೈದು ವರ್ಷಗಳ ನಂತರ ನೆಹರೂ, ಒಂದು ಕಾಲಕ್ಕೆ ಸಾಮ್ರಾಜ್ಯಶಾಹಿಯ ಬಂಟರು ಎಂದು ತಾವು ದೂಷಿಸಿದ್ದ ಅಧಿಕಾರಶಾಹಿಯ ಕೈಗೇ ಚುನಾವಣೆಯ ಹೊಣೆಗಾರಿಕೆಯನ್ನು ಒಪ್ಪಿಸಬೇಕಾಗಿ ಬಂತು.

ಈ ದೃಷ್ಟಿಯಲ್ಲಿ, 1952ರ ಚುನಾವಣೆ ಬಹಳ ಕಾಲದಿಂದ ಒಬ್ಬರನ್ನೊಬ್ಬರು ವಿರೋಧಿಸುತ್ತಿದ್ದ ಐತಿಹಾಸಿಕ ಶಕ್ತಿಗಳು ಸಂಯುಕ್ತವಾಗಿ ಬರೆದ ದಾಖಲೆಯಾಗಿತ್ತು. ಬ್ರಿಟಿಷ್ ವಸಾಹತುಶಾಹಿ ಮತ್ತು ಭಾರತ ರಾಷ್ಟ್ರೀಯವಾದಿಗಳೇ ಈ ಶಕ್ತಿಗಳು. ಈ ಎರಡು ಶಕ್ತಿಗಳೂ ಸೇರಿ ಈ ಹೊಸ ರಾಷ್ಟ್ರದಲ್ಲಿ ಪ್ರಜಾಸತ್ತೆಗೆ ಚಾಲನೆ ನೀಡಿದವು.

○

8

ಮನೆ ಮತ್ತು ಪ್ರಪಂಚ

ಸೂಕ್ಷ್ಮ ವಿವರಗಳು, ತಪಶೀಲುಗಳಿಗೆ ಕಟ್ಟು ಬೀಳದಿದ್ದಾಗ ನೆಹರೂ ಅತಿ ಶ್ರೇಷ್ಠರಾಗಿ ಮಿಂಚುತ್ತಾರೆ.

–ಎಕನಾಮಿಕ್ ವೀಕ್ಲಿ, 28 ಜುಲೈ 1951.

I

1952ರ ಚುನಾವಣೆ ಮುಗಿದ ಸ್ವಲ್ಪ ಕಾಲದ ನಂತರ ಭಾರತೀಯ ಲೇಖಕ ನೀರದ್ ಚೌಧುರಿಯವರು ಜನಪ್ರಿಯ ಪತ್ರಿಕೆಯೊಂದಕ್ಕೆ ನೆಹರೂ ಬಗ್ಗೆ ಪ್ರಬಂಧವೊಂದನ್ನು ಬರೆದುಕೊಟ್ಟರು. ಈ ವೇಳೆಗಾಗಲೇ ನೀರದ್ ಚೌಧುರಿಯವರು ಹಾಳತವಾಗಿ ಜನಪ್ರಿಯ ಲೇಖಕರಾಗಿದ್ದರು. ಆದರೆ ಅವರು ಲೇಖನಕ್ಕೆ ಆರಿಸಿಕೊಂಡ ವ್ಯಕ್ತಿ ಅವರಿಗಿಂತ ಹಾಗೂ ಬೇರೆಲ್ಲರಿಗಿಂತ ಮೇರು ಸದೃಶರಾದವರು. "ನೆಹರೂ ನಾಯಕತ್ವ ಭಾರತದ ಅಖಂಡತೆಯ ಹಿಂದಿನ ಮಹತ್ವದ ನೈತಿಕ ಶಕ್ತಿ" ಎಂದು ನೀರದ್ ಚೌಧುರಿಯವರು ಗುರುತಿಸಿದ್ದರು. "ಅವರು ಒಂದು ಪಕ್ಷದ ನಾಯಕರಲ್ಲ, ಆದರೆ ಭಾರತದ ಒಟ್ಟು ಜನಸಮುದಾಯದ ಜನನಾಯಕರು, ಗಾಂಧೀಜಿಯವರ ನ್ಯಾಯೋಚಿತ ಉತ್ತರಾಧಿಕಾರಿ" ಎಂದು ಅಭಿಪ್ರಾಯಪಟ್ಟಿದ್ದ ನೀರದ್ ಚೌಧುರಿಯವರು ನೆಹರೂ ಅವರನ್ನು ಕಂಡದ್ದು ಹೀಗೆ:

> "ನೆಹರೂ ಸರ್ಕಾರಿ ಯಂತ್ರ ಮತ್ತು ಜನತೆ ಇವೆರಡನ್ನೂ ಒಂದುಗೂಡಿಸಿದ್ದಾರೆ. ಈ ನಂಟು ಇಲ್ಲದಿದ್ದಲ್ಲಿ, ಅತಿ ಮಹತ್ವದ ಕಾಲಘಟ್ಟದಲ್ಲಿ ಭಾರತ ಸುಭದ್ರ ಸರ್ಕಾರದಿಂದ ವಂಚಿತವಾಗುತ್ತಿತ್ತು. ಅವರು ಇವೆರಡರ ನಡುವೆ ಸಹಕಾರವನ್ನು ಖಾತ್ರಿ ಪಡಿಸಿದ್ದಷ್ಟೇ ಅಲ್ಲದೆ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಆಗಬಹುದಿದ್ದ ಘರ್ಷಣೆಗಳನ್ನು ತಪ್ಪಿಸಿದರು. ಮಹಾತ್ಮಾಜಿ ಇದ್ದಿದ್ದರೂ ಅವರ ನಾಯಕತ್ವ ಅವಕ್ಕೆ ಸಮನಾಗುತ್ತಿರಲಿಲ್ಲ. ರಾಷ್ಟ್ರದೊಳಗೆ ನೆಹರೂ, ಆಡಳಿತ ನಡೆಸುವ ಮಧ್ಯಮವರ್ಗ ಹಾಗೂ ಜನಸಾರ್ವಭೌಮರ ನಡುವೆ ಅನಿವಾರ್ಯವಾದ

ಕೊಂಡಿಯಾಗಿದ್ದರು. ಅಲ್ಲದೆ ಅವರು ಭಾರತ ಮತ್ತು ವಿಶ್ವದ ನಡುವೆ ಪ್ರೀತಿ-ವಿಶ್ವಾಸ ಮೂಡಿಸುವ ಸಂಪರ್ಕ ತಂತುವಾಗಿದ್ದರು. ಅವರು ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತದ ಪ್ರತಿನಿಧಿಯಾಗಿದ್ದಾರೆ. ಜೊತೆಗೆ ಭಾರತದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಪ್ರತಿನಿಧಿಯಾಗಿದ್ದಾರೆ. ನಿಶ್ಚಯವಾಗಿಯೂ ಪಾಶ್ಚಾತ್ಯ ರಾಷ್ಟ್ರಗಳು ನೆಹರೂ ಅವರನ್ನು ಹಾಗೆಯೇ ಕಾಣುತ್ತವೆ, ಅವರಿಂದ ಭಾರತದ ಬೆಂಬಲವನ್ನು ನಿರೀಕ್ಷಿಸುತ್ತವೆ. ಆದ್ದರಿಂದಲೇ ನೆಹರೂ ಪಾಶ್ಚಾತ್ಯ ವಿರೋಧಿ ನಿಲುವು ತಾಳಿದಾಗ ಅಥವಾ ತಟಸ್ಥ ಧೋರಣೆ ಅನುಸರಿಸಿದಾಗ ಅವರು ಅಸಮಾಧಾನ ಪಡುತ್ತಾರೆ, ಗೊಂದಲಗೊಳ್ಳುತ್ತಾರೆ."

ಪ್ರಧಾನಮಂತ್ರಿಯಾಗಿದ್ದಷ್ಟೂ ಕಾಲವೂ ನೆಹರೂ ಅವರೇ ಕೇಂದ್ರ ಸರ್ಕಾರದ ವಿದೇಶಾಂಗ ಖಾತೆಯ ಕೆಲಸವನ್ನೂ ನಿರ್ವಹಿಸಿದರು. ಇದು ಸಹಜವೇ ಆಗಿತ್ತು. ಏಕೆಂದರೆ ಕಾಂಗ್ರೆಸ್ ನಾಯಕರಲ್ಲಿ ಅವರೊಬ್ಬರಿಗೇ ಅಂತರರಾಷ್ಟ್ರೀಯ ದೃಷ್ಟಿಕೋನವಿದ್ದದ್ದು. ಅಂತರರಾಷ್ಟ್ರೀಯ ವಿಷಯಗಳಲ್ಲಿ ಪರಿಜ್ಞಾನವಿದ್ದದ್ದು. ಗಾಂಧೀಜಿಯವರು ವಿಶ್ವಮಾನವ ಪ್ರಜ್ಞೆಯುಳ್ಳವರಾಗಿದ್ದರೂ ವಿದೇಶಗಳಲ್ಲಿ ಹೆಚ್ಚಾಗಿ ಪ್ರವಾಸ ಮಾಡಿರಲಿಲ್ಲ. ವಲ್ಲಭಭಾಯಿ ಪಟೇಲರಂಥವರು ಸಂಕಲ್ಪ ಮಾತ್ರದಿಂದಲೇ ಅಂತರ್ಮುಖಿಯಾದವರು. ದೇಶದೊಳಗಿನ ವ್ಯವಹಾರಗಳಲ್ಲೇ ಹೆಚ್ಚಿನ ಆಸಕ್ತಿ ಉಳ್ಳವರಾಗಿದ್ದರು. ನೆಹರೂ ಆದರೋ ವಿಶ್ವದ ಧೋರಣೆಗಳು, ನೀತಿಗಳು, ಚಳವಳಿಗಳು, ಆಂದೋಲನಗಳಿಂದ ಸದಾ ಆಕರ್ಷಿತರು. ಅಂತರರಾಷ್ಟ್ರೀಯ ವಿದ್ಯಮಾನಗಳಲ್ಲಿ ಸದಾ ಆಸಕ್ತರು.

ಮೊದಲನೆ ಮತ್ತು ಎರಡನೆ ಮಹಾ ಯುದ್ಧಗಳ ಕಾಲದಲ್ಲಿ ನೆಹರೂ ಐರೋಪ್ಯ ಚರ್ಚೆಗಳನ್ನು ನಿಕಟವಾಗಿ ಗಮನಿಸುತ್ತಿದ್ದರು, ಚರ್ಚೆಗಳಲ್ಲಿ ಭಾಗವಹಿಸಿಯೂ ಇದ್ದರು. 1927ರಲ್ಲಿ ಅವರು ಸೋವಿಯತ್ ರಷ್ಯಾಕ್ಕೆ ಭೇಟಿಕೊಟ್ಟಿದ್ದರು. ಮುಂದಿನ ದಶಕದಲ್ಲಿ ಉಪಖಂಡದಲ್ಲಿ ವ್ಯಾಪಕ ಪ್ರವಾಸ ಕೈಗೊಂಡಿದ್ದರು. 1930ರ ದಶಕದಲ್ಲಿ ಸ್ಪೇನಿನಲ್ಲಿ ಗಣರಾಜ್ಯ ಸ್ಥಾಪನೆಗೆ ಬೆಂಬಲ ಸಂಘಟಿಸುವುದರಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಅನೇಕ ವೇಳೆ ಸಾರ್ವಜನಿಕ ವೇದಿಕೆಗಳಿಂದ ಮಾತನಾಡಿದ್ದ ನೆಹರೂ ಪ್ರಗತಿಶೀಲ ವಾಮಪಂಥದ ಆಧಾರಸ್ತಂಭವಾಗಿದ್ದರು. 1936ರಲ್ಲಿ ಲಂಡನ್ನಿನಲ್ಲಿ ನೆಹರೂ ಅವರ ಆತ್ಮಚರಿತ್ರೆ ಪ್ರಕಟವಾಯಿತು. ಇದರ ಯಶಸ್ಸಿನಿಂದ ಅವರ ಖ್ಯಾತಿ, ಕೀರ್ತಿಗಳು ಹೆಚ್ಚಿದವು.

1938ರ ಜುಲೈನಲ್ಲಿ, ಯೂಸ್ಟನ್ನಿನ ಫ್ರೆಂಡ್ಸ್ ಹೌಸ್‌ನಲ್ಲಿ 'ಶಾಂತಿ ಮತ್ತು ಸಾಮ್ರಾಜ್ಯ' ಎನ್ನುವ ವಿಷಯ ಕುರಿತು ನೆಹರೂ ಮಾಡಿದ ಭಾಷಣ ಅವರ ವಿಚಾರ ಮತ್ತು ಆದರ್ಶಗಳ ಪ್ರಾತಿನಿಧಿಕ ಸ್ವರೂಪದ ಭಾಷಣ ಎನ್ನಬಹುದು. ಈ ಭಾಷಣ ಶುರುವಾದದ್ದು 'ಫ್ಯಾಸಿಸ್ಟರ ಆಕ್ರಮಣ'ದಿಂದ. ಆದರೆ ಆಖೈರಾಗಿ ಫ್ಯಾಸಿಸಂ ಸಹ ವಿಭಿನ್ನವಾದ ಸಾಮ್ರಾಜ್ಯಶಾಹಿಯೇ ಎಂದು ನೆಹರೂ ವಿಶ್ಲೇಷಿಸಿದ್ದರು. ಆದರೆ ಬ್ರಿಟನ್ನಿನಲ್ಲಿ ಇವೆರಡೂ ಬೇರೆಯೇ ಆದವು ಎಂಬ

ಅಭಿಪ್ರಾಯ ಚಾಲ್ತಿಯಲ್ಲಿತ್ತು. ವಿಶ್ವದ ಸಮಸ್ತ ಜನರಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವವರು ಫ್ಯಾಸಿಸಂ ಮತ್ತು ಸಾಮ್ರಾಜ್ಯಶಾಹಿ ಇವೆರಡನ್ನೂ ವಿರೋಧಿಸಿ ನಿಲ್ಲಬೇಕಾಗುತ್ತದೆ ಎಂಬುದು ನೆಹರೂ ವಿಚಾರಧಾರೆಯಾಗಿತ್ತು. ಇದರಲ್ಲಿ ಅವರಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ.

ಕಾಲಕಾಲದಲ್ಲಿ ಉದ್ಭವಿಸಿದ ಬಿಕ್ಕಟ್ಟುಗಳು, ವಿವಿಧ ವರ್ಗಗಳ ಜನರಲ್ಲಿ ಏಕತೆಯನ್ನು ಬೆಳೆಸಿವೆ ಹಾಗೂ ಅಂತರರಾಷ್ಟ್ರೀಯ ಸ್ನೇಹ ಸೌಹಾರ್ದತೆ, ಸಾಂಗತ್ಯಗಳ ಭಾವನೆಯನ್ನು ಮೂಡಿಸಿವೆ ಎಂದು ನೆಹರೂ ತಿಳಿಸಿದ್ದರು. ಅಂದು ಅವರು ತಮ್ಮ ಭಾಷಣದಲ್ಲಿ ವಿಶ್ವದ ಕುದಿಬಿಂದುಗಳ ಬಗ್ಗೆ ಪ್ರಸ್ತಾಪಿಸಿದರು. ಸ್ಪೇನ್, ಅಬಸೀನಿಯಾ, ಚೀನಾ, ಪ್ಯಾಲೆಸ್ಟೈನ್‌ಗಳ ವಿಚಾರವನ್ನು ಚರ್ಚಿಸಿದ್ದರು. ಹಾಗೂ ವಿಶೇಷ ಸಂವೇದನೆಯಿಂದ ಆಫ್ರಿಕಾ ಕುರಿತು ಮಾತನಾಡಿದ್ದರು. "ಆಫ್ರಿಕಾದ ಜನರನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ. ಬಹುಶಃ ವಿಶ್ವದ ಬೇರೆ ಯಾವುದೇ ಪ್ರದೇಶದ ಜನರು ಇವರಷ್ಟು ನೋವು ಸಂಕಟಗಳನ್ನು ಅನುಭವಿಸಿರಲಿಕ್ಕಿಲ್ಲ. ಇವರಷ್ಟು ಶೋಷಣೆಗೊಳಗಾಗಿರಲಿಕ್ಕಿಲ್ಲ."

1939ರ ನವೆಂಬರಿನಲ್ಲಿ ಭಾರತದ ಅತಿದೊಡ್ಡ ಏಷ್ಯನ್ ನೆರೆ ರಾಷ್ಟ್ರವಾದ ಚೈನಾಕ್ಕೆ ಭೇಟಿ ಕೊಡಲು ಆಲೋಚಿಸಿದ್ದರು. ಚಿಯಾಂಗ್ ಕೈ ಶೆಕ್ ಅವರೊಡನೆ ಪತ್ರವ್ಯವಹಾರದ ಮೈತ್ರಿ ಹೊಂದಿದ್ದರು. ನೆಹರೂ ಅವರು ಮಿತ್ರರೊಬ್ಬರಿಗೆ "ಭವಿಷ್ಯದಲ್ಲಿ ಭಾರತ ಮತ್ತು ಚೈನಾ ಕೂಡಿ ಬಾಳುವ, ಒಟ್ಟೊಟ್ಟಿಗೆ ಸಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ನನಗನ್ನಿಸುತ್ತದೆ" ಎಂದು ತಿಳಿಸಿದ್ದರು. ವಿಮಾನದಲ್ಲಿ ಚುಂಗ್ ಕಿಂಗ್‌ಗೆ ಹೋಗಿ ಅಲ್ಲಿಂದ ಮೂರುವಾರಗಳ ಕಾಲ ಹಿನ್ನಾಡು ಪ್ರದೇಶಗಳಲ್ಲಿ ಪ್ರವಾಸ ಮಾಡಿ ಬರ್ಮಾ ರಸ್ತೆ ಮೂಲಕ ತಾಯ್ನಾಡಿಗೆ ವಾಪಸಾಗುವುದು ನೆಹರೂ ಚೈನಾ ಪ್ರವಾಸ ಕಾರ್ಯಕ್ರಮವಾಗಿತ್ತು. ಯುರೋಪಿನಲ್ಲಿ ಯುದ್ಧ ಆರಂಭವಾಗಿ ಇದು ಕೈಗೂಡಲಿಲ್ಲ.

ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ 1942ರಲ್ಲಿ ನೆಹರೂ ಅವರನ್ನು ಸೆರೆಮನೆಗೆ ದೂಡಲಾಯಿತು. 1945ರ ಜುಲೈನಲ್ಲಿ ಜೈಲಿನಿಂದ ಹೊರಬಂದ ನಂತರ ನೆಹರೂ ತಮ್ಮೆಲ್ಲ ಶಕ್ತಿಯನ್ನೂ ಬ್ರಿಟಿಷ್ ಚಕ್ರಾಧಿಪತ್ಯದ ಕೊನೆಯ ಸಾಹಸಗಳಿಗೆ ವಿನಿಯೋಗಿಸಿದರು. ಶೀಘ್ರದಲ್ಲೇ ಭಾರತ ಸ್ವತಂತ್ರಗೊಳ್ಳಲಿದೆ ಎಂಬುದು ಖಚಿತವಾದ ನಂತರ ಅವರ ಮನಸ್ಸು ವಿದೇಶ ವ್ಯವಹಾರಗಳತ್ತ ತಿರುಗಿತು. 1946ರ ಸೆಪ್ಟಂಬರಿನಲ್ಲಿ ಮಾಡಿದ ಪ್ರಸಾರ ಭಾಷಣದಲ್ಲಿ ನೆಹರೂ, ಭಾರತದ ಭವಿಷ್ಯದಲ್ಲಿ ಅಮೆರಿಕ, ರಷ್ಯ ಮತ್ತು ಚೈನ ಹೆಚ್ಚು ಸುಸಂಗತವಾಗಲಿವೆ ಎಂದು ತಿಳಿಸಿದರು. ಮುಂದಿನ ವರ್ಷ ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡುತ್ತ, ಭಾರತ, ಅಮೆರಿಕ ಮತ್ತು ಸೋವಿಯತ್ ರಷ್ಯಾ ಜೊತೆ ಮಿತ್ರರಾಷ್ಟ್ರವಾಗಿರುತ್ತದೆಯೇ ವಿನಾ ಅವುಗಳ ಹಿಂಬಾಲಕ ರಾಷ್ಟ್ರವಾಗಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು. "ಏನಾದರೂ ಚೂರುಪಾರು ಲಾಭವಾದೀತೆಂಬ ಆಸೆಬುರುಕತನದಿಂದ ನಾವು ಯಾವುದೇ ಶಕ್ತಿ ರಾಷ್ಟ್ರದ ಹಿಂಬಾಲಕರಾಗುವುದಿಲ್ಲ. ನಾವು ನಮ್ಮದೇ ಹಾದಿಯಲ್ಲಿ ಸಾಗುತ್ತೇವೆ."

ಅಲಿಪ್ತ ಚಳವಳಿಯ ಬಗ್ಗೆ ನೆಹರೂ ಅವರು 1947ರ ಜನವರಿಯಲ್ಲಿ ಕೆ.ಪಿ.ಎಸ್. ಮೆನನ್ ಅವರಿಗೆ ಬರೆದ ಪತ್ರದಲ್ಲಿ ಪ್ರಸ್ತಾಪಿಸಿದ್ದರು. ಇದು ಮೆನನ್ ಅವರು ಚೈನಾದಲ್ಲಿ ಭಾರತದ ರಾಯಭಾರಿಯಾಗಿ ಅಧಿಕಾರವಹಿಸಿಕೊಳ್ಳುವುದಕ್ಕೆ ಮುನ್ನ ಬರೆದ ಪತ್ರವಾಗಿತ್ತು.

> "ಶಕ್ತಿ ರಾಜಕಾರಣದೊಂದಿಗೆ ಸಿಕ್ಕಿಹಾಕಿಕೊಳ್ಳದೇ ಇರುವುದು, ಅವರ ಬಲೆಯಿಂದ ತಪ್ಪಿಸಿಕೊಳ್ಳುವುದು ನಮ್ಮ ನೀತಿಯಾಗಿದೆ. ಅಥವಾ ಒಂದು ಬಣದ ವಿರುದ್ಧ ನಿಂತು ಇನ್ನೊಂದು ಬಣ ಸೇರಿಕೊಳ್ಳುವುದೂ ನಮ್ಮ ನೀತಿಯಲ್ಲ. ರಷ್ಯ ಮತ್ತು ಆಂಗ್ಲೋ ಅಮೆರಿಕ ಇಂದಿನ ಎರಡು ಪ್ರಮುಖ ಬಣಗಳು. ಇವೆರಡರ ಜೊತೆಯೂ ನಮಗೆ ಸ್ನೇಹಬೇಕು ಆದರೆ ಈ ಬಣದಲ್ಲಿ ನಾವು ಸಹಭಾಗಿಗಳಾಗುವುದಿಲ್ಲ. ಅಮೆರಿಕ ಮತ್ತು ರಷ್ಯ ಎರಡೂ ಪರಸ್ಪರ ಶಂಕೆಯಿಂದ ನೋಡುವ ರಾಷ್ಟ್ರಗಳು. ಉಳಿದ ರಾಷ್ಟ್ರಗಳನ್ನೂ ಅವು ಸಂದೇಹದಿಂದಲೇ ನೋಡುತ್ತವೆ. ಇದರಿಂದ ನಮ್ಮ ಹಾದಿ ತೊಡಕಿನದಾಗುತ್ತದೆ. ನಮ್ಮನ್ನೂ ಇವು ಸಂಶಯದಿಂದಲೇ ನೋಡಬಹುದು. ಇದಕ್ಕೆ ಉಪಾಯವಿಲ್ಲ."

ನೆಹರೂ ಭಾರತದ ಸ್ವಾತಂತ್ರ್ಯವನ್ನು ಏಷ್ಯಾದ ಪುನರುಜ್ಜೀವವಾಗಿಯೇ ಕಂಡಿದ್ದರು. ಕಳೆದ ಶತಮಾನಗಳು ಯೂರೋಪಿನದಾಗಿರಬಹುದು ಅಥವಾ ಬಿಳಿಯರದಾಗಿರಬಹುದು. ಆದರೆ ಇದು, ಶ್ವೇತವರ್ಣೀಯೇತರರು, ಹಾಗೂ ಹಿಂದೆ ಅಧೀನರಾಗಿದ್ದವರು ಎದ್ದು ನಿಲ್ಲಲು ಸಕಾಲ, ತಮ್ಮ ಕಾಲ ಮೇಲೆ ತಾವು ಸ್ವತಂತ್ರವಾಗಿ ನಿಲ್ಲಲು ಸಕಾಲವೆಂದು ನೆಹರೂ ಭಾವಿಸಿದ್ದರು.

1947ರ ಮಾರ್ಚಿ ಕೊನೆಯವಾರ ನವದೆಹಲಿಯಲ್ಲಿ ನಡೆದ ಏಷ್ಯಾ ಬಾಂಧವ್ಯ ಸಮ್ಮೇಳನ ಈ ನಿಟ್ಟಿನಲ್ಲಿಟ್ಟ ಒಂದು ಮಹತ್ವದ ಹೆಜ್ಜೆ. ಈ ಸಮ್ಮೇಳನದಲ್ಲಿ ಇಪ್ಪತ್ತೆಂಟು ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದ ನಿಕಟ ನೆರೆ ರಾಷ್ಟ್ರಗಳಾದ ಅಫ್ಘನಿಸ್ತಾನ, ಬರ್ಮಾ, ಸಿಲೋನ್, ನೇಪಾಳ, ಹಾಗೂ ಇನ್ನೂ ವಸಾಹತುಗಳಾಗಿದ್ದ ಮಲಯ, ಇಂಡೋನೇಷ್ಯಾ, ವಿಯಟ್ನಾಂ, ಚೈನಾ, ಟಿಬೆಟ್‌ಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಸೋವಿಯತ್‌ನ ಏಳು ಗಣರಾಜ್ಯಗಳು ಮತ್ತು ಕೊರಿಯಾ ಪಾಲ್ಗೊಂಡಿದ್ದವು. ಅರಬ್ ಲೀಗ್ ಮತ್ತು ಪ್ಯಾಲೆಸ್ಟೈನಿನ ಯೆಹೂದಿ ನಿಯೋಗಗಳು ಬಂದಿದ್ದವು. ಈ ಸಮ್ಮೇಳನವನ್ನು ವರದಿ ಮಾಡಲು ಆಗಮಿಸಿದ್ದ ಪಾಶ್ಚಾತ್ಯ ಪತ್ರಕರ್ತನೊಬ್ಬ ಬರೆದಂತೆ-ಇಡೀ ವಾರ ದೆಹಲಿ ನಗರ ಬಹು ಸಂಕೀರ್ಣವಾದ, ವೈವಿಧ್ಯಮಯ ಜನರಿಂದ ತುಂಬಿಹೋಗಿತ್ತು. ಆಗ್ನೇಯ ಏಷ್ಯಾದ ಬ್ರೊಕೇಡ್‌ಗಳು, ಪೂರ್ವ ಸೋವಿಯತ್ ಗಣರಾಜ್ಯದ ಬೆಲ್ ಬಾಟಮ್‌ಗಳು, ಟಿಬೆಟ್‌ನ ನೀಳ ಪೋಷಾಕುಗಳು ಮೊದಲಾದವುಗಳಿಂದ ದೆಹಲಿ ಬೀದಿಗಳು ಕಂಗೊಳಿಸುತ್ತಿದ್ದವು. ವೈವಿಧ್ಯಮಯವಾದ ವೇಷಭೂಷಣ, ಭಾಷೆಗಳು, ಉಚ್ಚಾರಣೆಗಳು, ಧ್ವನಿಗಳು ಇವೆಲ್ಲ ಒಂದಲ್ಲ ಒಂದು ರೀತಿ ವಿಶ್ವದ ಅರ್ಧದಷ್ಟು ಜನರ ಪ್ರಾತಿನಿಧ್ಯವನ್ನು ನೆನಪಿಸುತ್ತಿದ್ದವು.

ಶೇರ್ ಷಹಾ ಸೂರಿ ಹದಿನಾರನೇ ಶತಮಾನದಲ್ಲಿ ಕಟ್ಟಿದ ಪುರಾನಾ ಕಿಲ್ಲಾದಲ್ಲಿ ಸಮ್ಮೇಳನ ನಡೆಯಿತು. ಈ ಸಮ್ಮೇಳನದ ಉದ್ಘಾಟನಾ ಮತ್ತು ಮುಕ್ತಾಯ ಸಮಾವೇಶಗಳು

ಸಾರ್ವಜನಿಕರಿಗೂ ಮುಕ್ತವಾಗಿದ್ದವು. 20,000 ಜನರು ಈ ಸಮಾವೇಶಗಳಲ್ಲಿ ಪಾಲ್ಗೊಂಡಿದ್ದರು. ಇಲ್ಲಿ ಅಧಿಕೃತ ಭಾಷೆ ಇಂಗ್ಲಿಷ್. ಪ್ರತಿನಿಧಿಗಳ ಸೌಲಭ್ಯಕ್ಕಾಗಿ ಭಾಷಾಂತರದ ವ್ಯವಸ್ಥೆಯೂ ಇತ್ತು. ಭಾಷಣಕಾರರು ವೇದಿಕೆಯ ಮೇಲಿಂದ ಮಾತನಾಡಿದರು. ವೇದಿಕೆಗೆ ಹಿನ್ನೆಲೆಯಾಗಿ ಉಪಖಂಡದ ಭೂಪಟವನ್ನು ವಿನ್ಯಾಸಗೊಳಿಸಲಾಗಿತ್ತು. ನಿಯಾನ್ ದೀಪಗಳ ಬೆಳಕಿನಲ್ಲಿ ASIA ಕಂಗೊಳಿಸುತ್ತಿತ್ತು. ಉದ್ಘಾಟನಾ ಭಾಷಣ ಮಾಡಿದ ನೆಹರೂ 'ದೀರ್ಘಾವಧಿಯ ನಿಷ್ಕ್ರಿಯೆ, ಜಡತ್ವಗಳ ನಂತರ, ಏಷ್ಯಾ, ಈಗ ಹಠಾತ್ತನೆ ವಿಶ್ವ ವಿದ್ಯಮಾನಗಳಲ್ಲಿ ಪ್ರಮುಖ ಪಾತ್ರವಹಿಸಲಾರಂಭಿಸಿದೆ' ಎಂದು ಒತ್ತಿ ಹೇಳಿದರು. ಏಷ್ಯಾದ ರಾಷ್ಟ್ರಗಳನ್ನು ಇನ್ನು ಮುಂದೆ ಕೈಗೊಂಬೆಗಳಾಗಿ ಬಳಸಿಕೊಳ್ಳಲಾಗದೆಂಬುದನ್ನೂ ಅವರು ಸ್ಪಷ್ಟಪಡಿಸಿದರು. ಆದರೆ, ಪತ್ರಕರ್ತ ಜೆ.ಎಚ್. ಜಾನ್ಸನ್ ಸ್ಮರಿಸಿರುವಂತೆ, ನೆಹರೂ ಭಾಷಣ ಪ್ರತ್ಯಕ್ಷವಾಗಿ, ಪ್ರಬಲವಾಗಿ ವಸಾಹತು ವಿರೋಧಿಯಾಗಿರಲಿಲ್ಲ. 'ಹಳೆಯ ಸಾಮ್ರಾಜ್ಯಶಾಹಿಗಳು ಅಳಿಸಿಹೋಗುತ್ತಿವೆ' ಎಂದು ಅವರು ಹೇಳಿದರು. ತಿರಸ್ಕಾರ ಮನೋಭಾವದಿಂದ ಕೈಝಾಡಿಸಿ ಅವರು ವಸಾಹತುಶಾಹಿಗೆ ಸಮಾಪ್ತಿ ಘೋಷಿಸಿದ್ದರು. ಈ ಭಂಗಿ ಮಾತಿಗಿಂತ ಪ್ರಖರವಾಗಿತ್ತು.

ನೆಹರೂ ಉದ್ಘಾಟನಾ ಭಾಷಣದ ನಂತರ, ಅಕ್ಷರಾನುಕ್ರಮಣಿಕೆಯಲ್ಲಿ ಪ್ರತಿನಿಧಿಗಳನ್ನು ಮಾತನಾಡಲು ವೇದಿಕೆಗೆ ಆಹ್ವಾನಿಸಲಾಯಿತು. ಮಾತುಕತೆ, ಭಾಷಣ, ಸಂವಾದ, ದುಂಡು ಮೇಜಿನ ಚರ್ಚೆ ಇವೆಲ್ಲ ಎರಡು ದಿನಗಳ ಕಾಲ ನಡೆಯಿತು. ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಹೋರಾಟ, ಏಷ್ಯಾ ದೇಶಗಳ ವಲಸಿಗರ ಜನಾಂಗೀಯ ಸಮಸ್ಯೆಗಳು, ಎಲ್ಲವನ್ನೂ ಪಶ್ಚಿಮದ ಕನ್ನಡಕದಿಂದಲೇ ನೋಡಬೇಕಾಗಿಲ್ಲ, ಅಣುಬಾಂಬ್ ಅನುಕರಣೀಯವಲ್ಲ ಇತ್ಯಾದಿ ಗಾಂಧೀಜಿ ಆದರ್ಶಗಳನ್ನೊಳಗೊಂಡಂತೆ ಅನೇಕ ವಿಷಯಗಳ ಬಗ್ಗೆ ಚರ್ಚಾಗೋಷ್ಠಿ ಗಳಾದವು. ಸಾಂಸ್ಕೃತಿಕ ಸಮಸ್ಯೆಗಳು, ಮಹಿಳಾ ಸಮಸ್ಯೆಗಳೂ ಇದರಲ್ಲಿ ಸೇರಿದ್ದವು.

ಮಹಾತ್ಮಾಗಾಂಧಿಯವರ ಭಾಷಣದೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು. ಸಮ್ಮೇಳನ ನಿಜವಾದ ಗ್ರಾಮೀಣ ಭಾರತದಲ್ಲಿ ಸಮಾವೇಶಗೊಂಡಿಲ್ಲ, ಪಾಶ್ಚಾತ್ಯ ಪ್ರಭಾವಿತ ನಗರದಲ್ಲಿ ಸಮಾವೇಶಗೊಂಡಿದೆಯೆಂದು ವಿಷಾದ ವ್ಯಕ್ತಪಡಿಸಿದ ಗಾಂಧೀಜಿಯವರು, ಎಲ್ಲವನ್ನೂ ಪಾಶ್ಚಾತ್ಯ ಕಣ್ಣುಗಳಿಂದಲೇ ನೋಡುವುದು, ಅಣುಬಾಂಬುಗಳನ್ನು ಅನುಕರಿಸುವುದು ಏಷ್ಯಾದ ಸಂದೇಶವಲ್ಲ. ಪ್ರೀತಿ ಮತ್ತು ಸತ್ಯಗಳ ಮುಖೇನ ಏಷ್ಯಾ ಪಶ್ಚಿಮವನ್ನು ಗೆಲ್ಲಬೇಕಾಗಿದೆ ಎಂಬುದನ್ನು ಮನಗಂಡು ನೀವು ನಿಮ್ಮ ದೇಶಗಳಿಗೆ ವಾಪಸಾಗಬೇಕು ಎಂದು ಸ್ಪಷ್ಟ ಮಾತುಗಳಲ್ಲಿ ತಮ್ಮ ಸಂದೇಶ ನೀಡಿದ್ದರು.

ಗಾಂಧಿ ಸಮ್ಮೇಳನಕ್ಕೆ ಬಂದಿದ್ದರು, ಆದರೆ ನಿಜವಾಗಿ ಇದೊಂದು ನೆಹರೂ ದೇಖಾವೆಯಾಗಿತ್ತು. ಪುನರುಜ್ಜೀವಗೊಳ್ಳುತ್ತಿರುವ ಏಷ್ಯಾದ ನೈಜ ದನಿ ಎಂದು ಅಭಿಮಾನಿಗಳು ನೆಹರೂ ಅವರ ಸ್ಥಾನಮಾನವನ್ನು ಒಪ್ಪಿಕೊಂಡರು. ಆದರೆ ಟೀಕಾಕಾರರು ಇಷ್ಟು ಉದಾರವಾಗಿರಲಿಲ್ಲ. ಮುಸ್ಲಿಂ ಲೀಗ್ ಪತ್ರಿಕೆ 'ಡಾನ್' ನೆಹರೂ ಚಾಕಚಕ್ಯತೆ ಹಾಗೂ

ಜಾಣತನಗಳಿಂದ ಅಖಿಲ ಏಷ್ಯಾ ನಾಯಕರಂತೆ ತಮ್ಮನ್ನು ಬಿಂಬಿಸಿಕೊಂಡಿದ್ದಾರೆಂದು ಬರೆಯಿತು. ಇದು ಮಹತ್ವಾಕಾಂಕ್ಷೆಯ ಹಿಂದೂ ನಾಯಕನೊಬ್ಬ ಏಷ್ಯಾ ದೇಶಗಳ ಮೇಲೆ ಅವರ ನೇತಾರನಾಗಿ ತನ್ನನ್ನು ಪ್ರತಿಷ್ಠಾಪಿಸುವ ಹುನ್ನಾರ, ಇಂಥದೊಂದು ಕೀರ್ತಿ ಪ್ರತಿಷ್ಠೆಗಳ ಮೂಲಕ ಭಾರತೀಯ ಹಿಂದುತ್ವವನ್ನು ಹೇರುವ ವಿಸ್ತರಣವಾದಿ ತಂತ್ರ ಇದೆಂದು 'ಡಾನ್' ಈ ಸಮ್ಮೇಳನವನ್ನು ಟೀಕಿಸಿತು.

II

ಸ್ವಾತಂತ್ರ್ಯಕ್ಕೆ ಪೂರ್ವದಲ್ಲೇ ನೆಹರೂ ಅನೇಕ ಸಲ ಯೂರೋಪ್ ಪ್ರವಾಸ ಮಾಡಿ ಬಂದಿದ್ದರು. ಅವರು ಅಮೆರಿಕಕ್ಕೆ ಪ್ರಪ್ರಥಮವಾಗಿ ಭೇಟಿ ನೀಡಿದ್ದು ಪ್ರಧಾನಮಂತ್ರಿಯಾಗಿ ಅಧಿಕಾರವಹಿಸಿಕೊಂಡ ಎರಡು ವರ್ಷಗಳ ನಂತರ. ನೆಹರೂ ಕಲ್ಪನೆಯಲ್ಲಿ ಅಮೆರಿಕ ಅಷ್ಟೇನೂ ದೊಡ್ಡದಾಗಿ ಕಂಡಿರಲಿಲ್ಲ. ಅವರು 'ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ' ಗ್ರಂಥದಲ್ಲಿ ಅಮೆರಿಕಕ್ಕಿಂತ ಹೆಚ್ಚಾಗಿ ಚೈನ ಅಥವಾ ರಷ್ಯದ ಬಗ್ಗೆ ಬರೆದಿದ್ದಾರೆ. ಹಾಗೂ ಅಮೆರಿಕದ ಬಗ್ಗೆ ಅವರು ಹೇಳಿರುವುದೆಲ್ಲವೂ ಪ್ರಶಂಸಾತ್ಮಕವಾಗೇನಿಲ್ಲ. ಅಮೆರಿಕದ ಬಂಡವಾಳಶಾಹಿ ಆ ದೇಶವನ್ನು ಗುಲಾಮಗಿರಿ, ದರೋಡೆಕೋರತನ ಹಾಗೂ ಅತಿ ಶ್ರೀಮಂತಿಕೆ ಮತ್ತು ಭಯಂಕರವಾದ ಬಡತನಗಳಿಗೆ ದೂಡಿತ್ತು. ಅಮೆರಿಕದ ಲೇವಾದೇವಿಗಾರ ಜೆ. ಪೈಯರ್ ಪಾಂಟ್ ಮಾರ್ಗನ್ ಆರು ದಶಲಕ್ಷ ಡಾಲರು ಮೌಲ್ಯದ ಹಡಗಿನ ಒಡೆಯನಾಗಿದ್ದ. ನ್ಯೂಯಾರ್ಕ್ ನಗರ 'ಹಸಿವಿನ ನಗರಿ' ಎಂದು ಕುಖ್ಯಾತವಾಗಿತ್ತು. ಅರ್ಥವ್ಯವಸ್ಥೆಯನ್ನು ನಿಯಂತ್ರಿಸಲು ರೂಸ್‌ವೆಲ್ಟ್‌ರು ನಡೆಸಿದ ಪ್ರಯತ್ನಗಳನ್ನು ನೆಹರೂ ಮೆಚ್ಚಿಕೊಂಡಿದ್ದರು. ಆದರೆ ಇದರಲ್ಲಿ ರೂಸ್‌ವೆಲ್ಟ್ ಯಶಸ್ವಿಯಾಗುವರೆಂಬ ಭರವಸೆ ಅವರಿಗಿರಲಿಲ್ಲ. "ಅಮೆರಿಕದ ಬೃಹತ್ ವಾಣಿಜ್ಯೋದ್ಯಮ ಆಧುನಿಕ ವಿಶ್ವದಲ್ಲೇ ಅತಿದೊಡ್ಡ ಪಟ್ಟಭದ್ರ ಹಿತಾಸಕ್ತಿಯಾಗಿದ್ದು, ಕೇವಲ ರೂಸ್‌ವೆಲ್ಟ್‌ರ ಪ್ರಯತ್ನಗಳಿಗೆ ಅದು ತನ್ನ ಅಧಿಕಾರಶಕ್ತಿ ಮತ್ತು ಹಕ್ಕುಗಳನ್ನು ಬಿಟ್ಟುಕೊಡುವುದಿಲ್ಲ" ಎಂಬುದು ನೆಹರೂಗೆ ಖಚಿತವಾಗಿತ್ತು.

1949ರಲ್ಲಿ ನೆಹರೂ ಅಮೆರಿಕಕ್ಕೆ ಭೇಟಿ ಕೊಡುವುದಕ್ಕೆ ಮುನ್ನ 'ಟೈಮ್ಸ್' ನಿಯತಕಾಲಿಕದ ವರದಿಗಾರನೊಬ್ಬ ನೆಹರೂ ಅವರ ಬರಹಗಳನ್ನು ಅಭ್ಯಾಸ ಮಾಡಿದ್ದ. ಈ ವರದಿಗಾರ ಗ್ರಹಿಸಿದಂತೆ ನೆಹರೂ, "ಅಮೆರಿಕದ ಬಗ್ಗೆ ಹೆಚ್ಚು ಚಿಂತನಮಂಥನ ನಡೆಸಿರಲಿಲ್ಲ. ಬ್ರಿಟಿಷ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾದ ಅವರು ಸಂಸ್ಕೃತಿಯಲ್ಲಿನ ಅಮೆರಿಕದ ನ್ಯೂನತೆ-ಅಪೂರ್ಣತೆಗಳನ್ನು ಜಂಬಗಾರಿಕೆಯಿಂದ ಕೀಳಾಗಿ ಕಂಡಿರಬೇಕು. ಭಾವುಕ ಸಮಾಜವಾದಿಯಾದ ಅವರು ಅಮೆರಿಕವನ್ನು ತಂತ್ರಜ್ಞಾನದಲ್ಲಿ ಅಪ್ರತಿಮ, ಆದರೆ ಬಂಡವಾಳಶಾಹಿಯಾಗಿ ಪರಭಕ್ಷಕವೆಂದು ಭೇಡಿಸಿದ್ದಾರೆ."

ನೆಹರೂ ಅವರ ಈ ಅಭಿಪ್ರಾಯಗಳನ್ನು ಇನ್ನೂ ಅನೇಕ ಮಂದಿ ಹೊಂದಿದ್ದರು. ಬ್ರಿಟಿಷ್ ಶ್ರೀಮಂತ ಸಂಪ್ರದಾಯವಾದಿಗಳಂತೆ ಭಾರತದ ಗಣ್ಯರೂ ಅಮೆರಿಕವನ್ನು

ಸುಸಂಸ್ಕೃತವಲ್ಲದ ಅವಲಕ್ಷಣದ ರಾಷ್ಟ್ರವೆಂದೇ ಭಾವಿಸಿದ್ದರು. ಅಮೆರಿಕದ ಬಗ್ಗೆ ದಕ್ಷಿಣ ಭಾರತದ ಪ್ರಸಿದ್ಧ ಮನೆತನದ ವಂಶಜರಾದ ಪಿ.ಪಿ. ಕುಮಾರ ಮಂಗಳಂ ಅವರ ಅಭಿಪ್ರಾಯಗಳನ್ನು ಪ್ರಾತಿನಿಧಿಕವಾಗಿ ಪರಿಶೀಲಿಸಬಹುದು. ಕುಮಾರ ಮಂಗಳಂ ಅವರ ತಂದೆ ಡಾ. ಪಿ. ಸುಬ್ಬರಾಯನ್ ಶ್ರೀಮಂತ ಜಮೀನ್ದಾರರೂ ಪ್ರಭಾವಿ ರಾಜಕಾರಣಿಯೂ ಆಗಿದ್ದವರು. ನೆಹರೂ ಸಂಪುಟದಲ್ಲಿ ಅವರು ಸಚಿವರೂ ಆಗಿದ್ದರು. ಕುಮಾರ ಮಂಗಳಂ ಸ್ಯಾಂಥರ್ಸ್ಟ್‌ನಲ್ಲಿ ವ್ಯಾಸಂಗ ಮಾಡಿದವರು. ಇವರ ಮಕ್ಕಳು ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್‌ಗಳಲ್ಲಿ ಓದಿದವರು. ಇವರು, ಇವರ ತಮ್ಮ ಮೋಹನ್ ಹಾಗೂ ಸೋದರಿ ಪಾರ್ವತಿ ನಂತರ ಕಮ್ಯುನಿಸ್ಟ್ ಪಕ್ಷದ ದಾರಿದೀಪಗಳೆನಿಸಿಕೊಂಡರು. ಇದು ಅಮೆರಿಕದ ಬಗ್ಗೆ ಕೆಲವೊಂದು ಪೂರ್ವಾಗ್ರಹಗಳಿಗೆ ಕಾರಣವಾಯಿತು. ಆದರೆ ಈ ವಿಚಾರದಲ್ಲಿ ಸೈನ್ಯದಲ್ಲಿ ಅಧಿಕಾರಿಯಾಗಿದ್ದ ಸೋದರ ಅಣ್ಣನನ್ನು ಮೀರಿಸಿದ್ದ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಕುಮಾರ ಮಂಗಳಂ ಅವರನ್ನು ತರಬೇತಿಗಾಗಿ ಓಕ್ಲಾಹಾಮಾದ ಫೋರ್ಟ್ ಸಿಲ್‌ನ ಸೈನಿಕ ಶಾಲೆಗೆ ಕಳುಹಿಸಲಾಯಿತು. ಅಲ್ಲಿಂದ ಅವರು ಆಪ್ತಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ:

> "ಇದು ನಾನು ಯಾವತ್ತೂ ಇಷ್ಟಪಡದ ರಾಷ್ಟ್ರ ಇವರ ಬಗ್ಗೆ ನನ್ನಲ್ಲಿ ಸದಭಿಪ್ರಾಯವಿಲ್ಲ. ನಾನು ಯಾರೊಡನೆ ವ್ಯವಹರಿಸಬೇಕಾಗಿದೆಯೋ ಆ ಜನರೆಲ್ಲ ದಯಾಶೀಲರೂ ಸಜ್ಜನರೂ ಆಗಿದ್ದಾರೆ. ಆದರೆ ಅವರ ದಯೆ-ಕರುಣೆ, ಸಜ್ಜನಿಕೆಗಳಲ್ಲಿ ಒಂದು ಬಗೆಯ ಕೃತಕತೆ ನನಗೆ ಕಾಣುತ್ತದೆ. ಇದು ಇನ್ನೊಬ್ಬರನ್ನು ಮೆಚ್ಚಿಸುವ ಪ್ರಯತ್ನದ ಫಲವಾದ ಕೃತಕತೆ. ಅವರು ಪ್ರಾಚೀನ ಸಂಸ್ಕೃತಿ ಮತ್ತು ಅದರ ಹಿನ್ನೆಲೆ ಬಗ್ಗೆ ಅಸೂಯೆಯುಳ್ಳವರು. ಇದರಿಂದಾಗಿ ಇವರಲ್ಲಿ ಆಕ್ರಮಣಕಾರಿಯಾದ ಕೀಳರಿಮೆ ಉಂಟಾಗಿದೆ ಎಂದೇ ನನ್ನ ಭಾವನೆ. ಇನ್ನು ಇವರಲ್ಲಿ ನೈತಿಕತೆ ಎಂಬುದೇ ಇಲ್ಲ. ಏನಕೇನ, ಮುಖ್ಯವಾಗಿ ಕುಟಿಲ ಮಾರ್ಗೋಪಾಯಗಳಿಂದ, ಒಬ್ಬರನ್ನೊಬ್ಬರು ಮೀರಿಸುವುದರಲ್ಲೇ ಸಂತೋಷಪಡುತ್ತಾರೆ. ರಾಜಕಾರಣಿಗಳು ದಗಲ್ಬಾಜಿಗಳು. ರಾಷ್ಟ್ರದ ಪ್ರತಿಯೊಂದನ್ನೂ ಬೃಹತ್ ವಾಣಿಜ್ಯೋದ್ಯಮ ತನ್ನ ಕಪಿಮುಷ್ಟಿಯಲ್ಲಿಟ್ಟು ಕೊಂಡಿದೆ. ಶ್ರೀಮಂತರು ಗ್ರಾಮೀಣ ಪ್ರದೇಶದ ರೈತರು ಮತ್ತು ಸಣ್ಣಪುಟ್ಟ ವ್ಯಾಪಾರಿಗಳ ಕೈಕಟ್ಟಿದ್ದಾರೆ. ನಮ್ಮ ದೇಶ ಎಚ್ಚರಿಕೆಯಿಂದ ಹೆಜ್ಜೆ ಇಡುವುದು ಹಾಗೂ ಅಮೆರಿಕದ ಪ್ರಭಾವಕ್ಕೊಳಗಾಗದು ಎಂದು ನಾನು ಆಶಿಸುತ್ತೇನೆ."

ಭಾರತದ ಬಗ್ಗೆ ಅಮೆರಿಕನ್ನರಿಗೂ ಪೂರ್ವಾಗ್ರಹಗಳಿದ್ದವು. ಗಾಂಧೀಜಿ ಹಾಗೂ ಅವರ ಸ್ವಾತಂತ್ರ್ಯ ಹೋರಾಟವನ್ನು ಅಮೆರಿಕನ್ನರು ಮೆಚ್ಚಿಕೊಂಡಿದ್ದರು. ಆದರೆ ಭಾರತದ ಬಗ್ಗೆ ಅವರ ಜ್ಞಾನ ಅತ್ಯಲ್ಪ. ಹೆರಾಲ್ಡ್ ಐಸಾಕರು ಒಮ್ಮೆ ಹೇಳಿದಂತೆ ಯುದ್ಧೋತ್ತರ ಅಮೆರಿಕನ್ನರು ಕಂಡದ್ದು ಕೇವಲ ನಾಲ್ಕು ಬಗೆಯ ಭಾರತೀಯರನ್ನು. ಅವರೆಂದರೆ: 1. ಭಾರಿ ಶ್ರೀಮಂತರು,

ಮಹಾರಾಜರುಗಳು, ಮಾಂತ್ರಿಕರು, ಹುಲಿ-ಆನೆಗಳ ಸದೃಶರಾದ ಮಾಂತ್ರಿಕರು. 2. ತಪಸ್ಸು, ಯೋಗ, ಜ್ಞಾನಗಳಲ್ಲಿ ನಿಸ್ಸೀಮರಾದ ಅತೀಂದ್ರಿಯವಾದಿಗಳು, ಅಧ್ಯಾತ್ಮವಾದಿಗಳು. 3. ಚೈನಾಕ್ಕಿಂತಲೂ ಅನಾಗರಿಕವಾದ ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದು ಪಶುಪ್ರಾಣಿಗಳನ್ನೂ ದೇವರುಗಳನ್ನೂ ಪೂಜಿಸುವ ಅಜ್ಞಾನಿ ಭಾರತೀಯರು. 4. ಬಾಡಿದ ಕಣ್ಣುಗಳ, ಡೊಳ್ಳು ಹೊಟ್ಟೆಗಳ, ಬೀದಿಗಳಲ್ಲಿ ವಾಸಮಾಡುವ ಕಡುಬಡವರಾದ ಶೋಚನೀಯ ಭಾರತೀಯರು. ಈ ನಾಲ್ಕು ಬಗೆಯ ಭಾರತೀಯರಲ್ಲಿ ಕೊನೆಯ ಎರಡು ಬಗೆ ಅಮೆರಿಕನ್ನರ ಮನದಲ್ಲಿ ಪ್ರಬಲವಾಗಿ ಅಚ್ಚೊತ್ತಿದ್ದವು. ಭಾರತ ಉಪಖಂಡ ಕುರಿತು ಕ್ಯಾಥರಿನ್ ಮೇಯೋ ಬರೆದಿರುವ 'ಮದರ್ ಇಂಡಿಯಾ' ಅಮೆರಿಕದಲ್ಲಿ ತುಂಬಾ ಪ್ರಖ್ಯಾತ ಗ್ರಂಥವೆನಿಸಿಕೊಂಡಿರುವುದು ಆಕಸ್ಮಿಕವೇನಿರಲಾರದು. ಗಾಂಧೀಜಿಯವರು ಈ ಗ್ರಂಥವನ್ನು "ಗಟಾರದ ಇನ್ಸ್‌ಪೆಕ್ಟರನ ವರದಿ" ಎಂದು ವರ್ಣಿಸಿದ್ದಾರೆ.

ಭಾರತೀಯರ ಈ ಕೆಲವು ಪೂರ್ವಾಗ್ರಹಗಳು ನೆಹರೂ ಅವರಲ್ಲೂ ಇದ್ದವು. ಆದರೆ ಅವರು ಅಮೆರಿಕನ್ನರ ಬಗ್ಗೆ ಸೂಕ್ಷ್ಮ ತಿಳುವಳಿಕೆಯುಳ್ಳವರೂ ಆಗಿದ್ದರು. ಇದೆಲ್ಲ ಏನೇ ಇದ್ದರೂ, ಅತಿ ಕಿರಿಯದೂ ಹಾಗೂ ಅತಿ ಶ್ರೀಮಂತವೂ ಆದ ಎರಡು ಪ್ರಜಾಸತ್ತೆಗಳ ಪ್ರಥಮ ಭೇಟಿಯಲ್ಲೇ ನೆಹರೂ ಅಮೆರಿಕನ್ನರನ್ನು ಅಡಗಿಸುವ ಸಕಲಸಿದ್ಧತೆಗಳನ್ನೂ ಮಾಡಿಕೊಂಡಿದ್ದರು. 1949ರ ಆಗಸ್ಟ್‌ನಲ್ಲಿ ಅಮೆರಿಕ ಪ್ರವಾಸಕ್ಕೆ ಸಿದ್ಧತೆ ನಡೆಸುತ್ತಿದ್ದಾಗ ನೆಹರೂ ಅವರ ಸ್ವಭಾವಕ್ಕೆ ವಿರುದ್ಧವೆನಿಸುವಂತೆ ಅಧೀರರಾಗಿದ್ದರು. "ಯಾವ ಮನೋಭಾವದಿಂದ, ಯಾವ ಭಾವಲಹರಿಯಿಂದ ನಾನು ಅಮೆರಿಕನ್ನರನ್ನುದ್ದೇಶಿಸಿ ಭಾಷಣ ಮಾಡಲಿ?" ಎಂದು ಸೋದರಿ ವಿಜಯಲಕ್ಷ್ಮಿಯವರನ್ನು ಕೇಳಿದ್ದರು. "ಅವರನ್ನು ಏನೆಂದು ಉದ್ದೇಶಿಸಿ ಮಾತನಾಡುವುದು? ಅಮೆರಿಕ ಸರ್ಕಾರದೊಂದಿಗೆ, ಅಲ್ಲಿನ ವಾಣಿಜ್ಯೋದ್ಯಮಿಗಳೊಂದಿಗೆ ಯಾವ ರೀತಿ ವ್ಯವಹರಿಸುವುದು? ಅಮೆರಿಕನ್ನರ ಎದುರು ನನ್ನ ಭಾರತೀಯ ಬಿಂಬವನ್ನೇ ಅಥವಾ ಐರೋಪ್ಯ ಬಿಂಬವನ್ನೇ-ಯಾವುದನ್ನು ಪ್ರತಿಷ್ಠಾಪಿಸುವುದು? ಅಮೆರಿಕನ್ನರೊಂದಿಗೆ ನನಗೆ ಸ್ನೇಹ ಬೇಕು. ಆದರೆ ನಮ್ಮ ನಿಲುವನ್ನು ಸ್ಪಷ್ಟಪಡಿಸುವ ಮೂಲಕ ಸ್ನೇಹ ಸಾಧ್ಯವಾಗಬೇಕು"–ಇಂಥ ತೊಳಲಾಟಗಳು ಅಮೆರಿಕ ಭೇಟಿಗೆ ಮುನ್ನ ನೆಹರೂ ಅವರಲ್ಲಿದ್ದವು.

ನೆಹರೂ ಮೂರು ವಾರಗಳನ್ನು ಅಮೆರಿಕದಲ್ಲಿ ಕಳೆದರು. ಅಮೆರಿಕ ಕಾಂಗ್ರೆಸ್ಸಿನಿಂದ ಹಿಡಿದು ಶಿಕಾಗೋದ ಪ್ರಾರ್ಥನಾಲಯದವರೆಗೆ ಅನೇಕ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಹತ್ತುಸಾವಿರ ಸಭಿಕರಿದ್ದ ಬೃಹತ್ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಕೊಲಂಬಿಯಾ ವಿಶ್ವವಿದ್ಯಾನಿಲಯ ಡಾಕ್ಟರೇಟ್ ನೀಡಿ ಅವರನ್ನು ಗೌರವಿಸಿತು. ಬೋಸ್ಟನ್ನಿನಲ್ಲಿ ಟ್ಯಾಕ್ಸಿ ಚಾಲಕನೊಬ್ಬನೊಂದಿಗೆ ಛಾಯಾಚಿತ್ರ ತೆಗೆಸಿಕೊಂಡು ಸಾಮಾನ್ಯರಲ್ಲಿ ಸಾಮಾನ್ಯನಂತೆ ವರ್ತಿಸಿದರು. ಶ್ರೀಮಂತರೊಡನೆ,

ಬುದ್ಧಿಜೀವಿಗಳೊಡನೆ ಬೆರೆತರು. ಪ್ರಿನ್ಸ್‌ಟನ್‌ನಲ್ಲಿನ ಆಲ್ಬರ್ಟ್ ಐನ್‌ಸ್ಟೈನ್ ಮನೆಗೆ ಭೇಟಿಕೊಟ್ಟರು.

ಅಮೆರಿಕ ಕಾಂಗ್ರೆಸ್ ಸದಸ್ಯರನ್ನುದ್ದೇಶಿಸಿ ಮಾತನಾಡಿದಾಗ ಅಮೆರಿಕದ ಸಂಸ್ಥಾಪಕರನ್ನು ಗೌರವಪೂರ್ವಕವಾಗಿ ಸ್ಮರಿಸಿದರು. ಪ್ರತಿಯಾಗಿ ತಮ್ಮ ದೇಶದ ಒಬ್ಬ ಮಹಾನ್ ವ್ಯಕ್ತಿಯ ಬಗ್ಗೆಯೂ ಮಾತನಾಡಿದರು. ಈ ಮಹಾನ್ ವ್ಯಕ್ತಿ ಗಾಂಧೀಜಿ. ಗಾಂಧೀಜಿಯವರ ಶಾಂತಿ ಮತ್ತು ಸತ್ಯದ ಸಂದೇಶ ಭಾರತದ ವಿದೇಶಾಂಗ ನೀತಿಗೆ ಸ್ಫೂರ್ತಿ ನೀಡಿತೆಂದು ನೆಹರೂ ತಿಳಿಸಿದರು. 'ಮಹಾತ್ಮ ಯಾವುದೇ ಒಂದು ದೇಶದ ಗಡಿಗಳ ಪರಿಧಿಗೆ ಮೀರಿದ ಮಹಾನುಭಾವರು. ಅವರು ನೀಡಿರುವ ಸಂದೇಶ ವಿಶ್ವದ ವ್ಯಾಪಕ ಸಮಸ್ಯೆಗಳ ನಿವಾರಣೆಯಲ್ಲಿ ನಮಗೆ ಸಹಾಯಕವಾಗಬಹುದು. ಏಕೆಂದರೆ, ಇಂದು ದೇಶ-ದೇಶಗಳ ನಡುವೆ, ಜನರ ನಡುವೆ ಪರಸ್ಪರ ತಿಳುವಳಿಕೆ ಮತ್ತು ಮೆಚ್ಚುಗೆಯ ಕೊರತೆ ವಿಶ್ವದಲ್ಲಿ ಎದ್ದು ಕಾಣುತ್ತಿದೆ' ಎಂದು ನೆಹರೂ ಒತ್ತಿ ಹೇಳಿದರು.

ಇಲ್ಲಿ ಒಬ್ಬ ರಾಜಕೀಯ ಮುತ್ಸದ್ದಿಯಂತೆ ನೈಪುಣ್ಯದಿಂದ ಮಾತನಾಡಿದ ನೆಹರೂ ಬೇರೆಡೆಗಳಲ್ಲಿ ನೇರವಾಗಿ ಮಾತನಾಡಿದರು. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಮಾತನಾಡುತ್ತಾ, "ವಿಶ್ವವನ್ನು ಎರಡು ಶತ್ರು ಪಾಳೆಯಗಳನ್ನಾಗಿಸಿ ಯುದ್ಧ ಸನ್ನದ್ಧರಾಗಿಸುವ" ಪ್ರವೃತ್ತಿ-ಬಯಕೆಗಳನ್ನು ಖಂಡಿಸಿದರು. ಭಾರತ ಇವೆರಡರ ಜೊತೆಯೂ ಸೇರುವುದಿಲ್ಲ, ಆದರೆ ಪ್ರತಿವಿಷಯ, ವಿವಾದದ ಬಗ್ಗೆ ಸ್ವತಂತ್ರವಾಗಿ ಆಲೋಚಿಸುತ್ತದೆ ಎಂದು ಸ್ಪಷ್ಟಪಡಿಸಿದರು. ವರ್ಣಭೇದ ನೀತಿ ಮತ್ತು ವಸಾಹತುಶಾಹಿ ನೀತಿಗಳ ಮುಂದುವರಿಕೆಯೇ ಯುದ್ಧಕ್ಕೆ ಮುಖ್ಯ ಕಾರಣವೆಂಬುದು ನೆಹರೂ ಖಚಿತ ಅಭಿಪ್ರಾಯವಾಗಿತ್ತು. ಒಂದು ದೇಶ ಅಥವಾ ಒಂದು ಜನಾಂಗ ಮತ್ತೊಂದರ ಮೇಲೆ ಸವಾರಿ ಮಾಡುವ, ಪ್ರಾಬಲ್ಯ ನಡೆಸುವ ಪ್ರವೃತ್ತಿ ಕೊನೆಗೊಂಡಾಗಲೇ ಶಾಂತಿ ಮತ್ತು ಸ್ವಾತಂತ್ರ್ಯ ಸಾಧ್ಯವೆಂದು ತಿಳಿಸಿದರು.

ನೆಹರೂ ಅಮೆರಿಕದ ಪತ್ರಿಕೆಗಳ ಮೇಲೆ ಒಳ್ಳೆಯ ಪರಿಣಾಮ ಬೀರಿದ್ದರು. "ವಿಶ್ವದ ಎಲ್ಲೆಡೆ ಇರುವ ಜನತೆಯ ಸ್ವಾತಂತ್ರ್ಯದ ಸಾರ್ವತ್ರಿಕ ಆಶೋತ್ತರಗಳಿಗೆ ದನಿಕೊಡುವುದರಲ್ಲಿ ನೆಹರೂ ಈ ತಲೆಮಾರಿನಲ್ಲಿ ಥಾಮಸ್ ಜಾಫರ್ಸನ್‌ಗೆ ಹತ್ತಿರವಾಗಿದ್ದಾರೆಂದು" 'ದಿ ಶಿಕಾಗೊ ಸನ್ ಟೈಮ್ಸ್' ಪತ್ರಿಕೆ ಬರೆಯಿತು. ದಿ ಕ್ರಿಶ್ಚಿಯನ್ ಸೈನ್ಸ್ ಮಾನಿಟರ್, ಅವರನ್ನು 'ವಿಶ್ವದ ದೈತ್ಯ' (ಟೈಟನ್) ಎಂದು ವರ್ಣಿಸಿತು. ನೆಹರೂ ಅಮೆರಿಕದಿಂದ ಭಾರತಕ್ಕೆ ವಾಪಸು ಹೊರಟಾಗ 'ಸೇಂಟ್ ಲೂಯಿಸ್ ಡಿಸ್ಪಾಚ್'ನ ಅಂಕಣಕಾರ "ನೆಹರೂ ನಮ್ಮಿಂದ ನಿರ್ಗಮಿಸಿದ್ದಾರೆ; ತಮ್ಮ ಹಿಂದೆ ಮಂಜುಕವಿದ ಕಣ್ಣುಗಳ ಮಹಿಳೆಯರ ಮೇಘರಾಶಿಯನ್ನು ಬಿಟ್ಟುಹೋಗಿದ್ದಾರೆ" ಎಂದು ಬರೆದ. "ನೆಹರೂ ಅವರ ನಿಲುವೇನು ಎಂಬುದು ಅಮೆರಿಕನ್ನರಿಗೆ ಇನ್ನೂ ಖಾತ್ರಿಯಾಗಿ ಅರ್ಥವಾಗಿಲ್ಲ. ಅವರು ನೆಹರೂ ಅವರಲ್ಲಿ ಅಪೂರ್ವ ಸತ್ವವೊಂದನ್ನು, ಅಪೂರ್ವವಾದ ಹೃದಯವಂತಿಕೆಯನ್ನು ಗ್ರಹಿಸಿದ್ದಾರೆ" ಎಂದು 'ಟೈಮ್ಸ್' ಅಂಗೀಕಾರ ಮುದ್ರೆಯನ್ನೊತ್ತಿತ್ತು.

ಆದರೆ ಈ ಭಾರತೀಯ ಪ್ರವಾಸಿ ಬಗ್ಗೆ ಅಷ್ಟೇನೂ ಒಲವು ತೋರದ ಮಂದಿಯೂ ಇದ್ದರು. ಅವರು ಅಮೆರಿಕ ವಿದೇಶಾಂಗ ಇಲಾಖೆಯ ಉನ್ನತಾಧಿಕಾರಿಗಳು. ನೆಹರೂ ಅವರು ವಿದೇಶಾಂಗ ಸಚಿವ ಡೀನ್ ಅಚೆಸನ್ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದ್ದರು. ಆದರೆ ಇದರಿಂದ ಏನೂ ಪರಿಣಾಮವಾದಂತಿರಲಿಲ್ಲ. ಅಚೆಸನ್ ತಮ್ಮ ಆತ್ಮವೃತ್ತಾಂತದಲ್ಲಿ ನೆಹರೂ ಭೇಟಿಯ ಬಗ್ಗೆ ನಿರಾಶಾಭಾವನೆಯಿಂದ ತಳ್ಳಿಹಾಕುವಂತೆ ಬರೆದಿದ್ದಾರೆ. ಮಾತುಕತೆ ಕಾಲದಲ್ಲಿ ನೆಹರೂ ಅವರು ಅಚೆಸನ್‌ಗೆ 'ಮುಳ್ಳಿನ ಮೊನೆಯಾಗಿ' ಅಹಂಕಾರಿಯಾಗಿ ಕಂಡರಂತೆ. (ನಾನೊಬ್ಬ ಸಾರ್ವಜನಿಕ ಸಭೆಯ ಸಭಿಕನೋ ಎಂಬಂತೆ ಅವರು ನನ್ನ ಜೊತೆ ಮಾತನಾಡಿದರು) "ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳದೇ ಬೇರೆಯವರ ತಪ್ಪುಗಳನ್ನು ಎತ್ತಿ ತೋರಿಸಲು (ವಿಶೇಷವಾಗಿ ಫ್ರೆಂಚ್ ಮತ್ತು ಡಚ್ ವಸಾಹತುಶಾಹಿಗಳ) ಸದಾ ತುದಿಗಾಲಲ್ಲಿ ನಿಂತಿರುತ್ತಿದ್ದರು" ಎಂದು ಅಚೆಸನ್ ಅಭಿಪ್ರಾಯಪಟ್ಟಿದ್ದಾರೆ. ಕಾಶ್ಮೀರ ವಿಷಯ ಪ್ರಸ್ತಾಪಿಸಿದಾಗ ಅಚೆಸನ್‌ಗೆ ನೆಹರೂ ಮಾತುಗಳು "ಸಾರ್ವಜನಿಕ ಭಾಷಣ ಮತ್ತು ಕೋಪ ಹಾಗೂ ವಿರೋಧಿಗಳ ಬಗೆಗಿನ ತೀವ್ರ ತಾತ್ಸಾರ ಭಾವಗಳ ಮಿಶ್ರಣದಂತೆ" ಕಂಡವಂತೆ. ಒಟ್ಟಾರೆಯಾಗಿ ಅಚೆಸನ್ ದೃಷ್ಟಿಯಲ್ಲಿ ನೆಹರೂ, "ನಾನು ಭೇಟಿ ಮಾಡಿದ ಅತಿ ಜಟಿಲವ್ಯಕ್ತಿ, ಅವರೊಡನೆ ಮಾತುಕತೆ ನಡೆಸುವುದು ನನಗೆ ಬಹಳ ಕಷ್ಟವಾಯಿತು."

ನೆಹರೂ ಬಗ್ಗೆ ಸಹಾನುಭೂತಿಯುಳ್ಳವರೂ ಅಮೆರಿಕದ ಅಧಿಕಾರಿಗಳ ವರ್ಗದಲ್ಲಿದ್ದರು. ಚೆಸ್ಟರ್ ಬೌಲ್ಸ್ ಅಂಥವರಲ್ಲಿ ಒಬ್ಬರು. ಚೆಸ್ಟರ್ ಬೌಲ್ಸ್ 1951-53ರವರೆಗೆ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದರು. ನೆಹರೂ ತಮ್ಮದೆ ಪರಿಸರದಲ್ಲಿ ಕೆಲಸ ಮಾಡಿದ್ದನ್ನು ಪ್ರತ್ಯಕ್ಷ ಕಂಡವರು ಇವರು. ಪ್ರಜಾಪ್ರಭುತ್ವ ಹಾಗೂ ಪ್ರಜಾಪ್ರಭುತ್ವದ ಕಾರ್ಯ ವಿಧಾನಗಳಲ್ಲಿ, ಅಲ್ಪಸಂಖ್ಯಾತರ ಹಕ್ಕುಗಳಲ್ಲಿ ನೆಹರೂ ಅವರಿಗಿದ್ದ ಬದ್ಧತೆಯನ್ನು ಕಂಡು ಪ್ರಭಾವಿತರಾಗಿದ್ದವರು. ಡೀನ್ ಅಚೆಸನ್ ಮತ್ತು ಇತರ ಅಮೆರಿಕನ್ನರು ಪ್ರಪಂಚವನ್ನು "ಸ್ನೇಹಿತರು ಹಾಗೂ ವೈರಿಗಳು" ಎಂದು ಎರಡು ವರ್ಗವಾಗಿ ವಿಂಗಡಿಸುವ ದೃಷ್ಟಿಕೋನದವರಾಗಿದ್ದರು. ಆದರೆ ಚೆಸ್ಟರ್ ಬೌಲ್ಸ್ ಈ ದೃಷ್ಟಿಕೋನವನ್ನು ಅನುಮೋದಿಸಿದವರಲ್ಲ. "ನೆಹರೂ ನೂರಕ್ಕೆ ನೂರರಷ್ಟು ನಮ್ಮವರಲ್ಲ, ನಮ್ಮ ಪರ ಇಲ್ಲ, ಅವರು ನಮ್ಮ ವಿರೋಧಿ ಎಂದು ನಾವು (ಅಮೆರಿಕನ್ನರು) ತೀರ್ಮಾನಕ್ಕೆ ಬರುವುದು ಅಪ್ರಬುದ್ಧವಾಗುತ್ತದೆ" ಎಂಬುದು ಬೌಲ್ಸ್ ಅಭಿಮತವಾಗಿತ್ತು.

ಚೆಸ್ಟರ್ ಬೌಲ್ಸ್ ರಾಯಭಾರಿಯಾಗಿದ್ದಾಗ, ಭಾರತ-ಅಮೆರಿಕ ನಿಕಟವಾಗಿದ್ದವು. ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾರತಕ್ಕೆ ನೆರವಾಗಲು ಅಮೆರಿಕ ತಜ್ಞರನ್ನು ಕಳುಹಿಸಿತು. ಆಧುನಿಕ ಉಪಕರಣಗಳನ್ನು ನೀಡಿತು. ಆದಾಗ್ಯೂ ಅಪನಂಬಿಕೆ ಹೋಗಿರಲಿಲ್ಲ. ಡೆಲಾವೇರ್‌ನ ಸಾಹಿತಿಯೊಬ್ಬ ಐವತ್ತರ ದಶಕದಲ್ಲಿ ಭಾರತಕ್ಕೆ ಬಂದಿದ್ದ. ಆಗ ಆತ ಅನೇಕ ವಿದ್ಯಾವಂತ ಭಾರತೀಯರನ್ನು ಭೇಟಿ ಮಾಡಿದ್ದ. ವಿದ್ಯಾವಂತ ಭಾರತೀಯರ ದೃಷ್ಟಿಯಲ್ಲಿ ಅಮೆರಿಕ, "ಕಣ್ಣು ಕುಕ್ಕುವ ಪ್ರಮಾದಗಳ, ಲೌಕಿಕ ಪಾಪಕೂಪಗಳಲ್ಲಿ ಬಿದ್ದು ಒದ್ದಾಡುತ್ತಿರುವ,

ಸಾಮ್ರಾಜ್ಯಶಾಹಿ ಆಕಾಂಕ್ಷೆಗಳ, ಯುದ್ಧೋನ್ಮಾದದ, ರಾಜಕೀಯವಾಗಿ ಭ್ರಷ್ಟವಾದ, ಸಂಸ್ಕೃತಿಹೀನವಾದ, ವರ್ಣಭೇದ ಮತ್ತು ಅನ್ಯಾಯಗಳಿಂದ ಕೂಡಿದ ಒಂದು ವಿವಕ್ತ ರಾಷ್ಟ್ರವಾಗಿ" ಕಂಡುಬಂದಿತೆಂಬುದು ಈ ಸಾಹಿತಿಯ ಅನುಭವ.

ಅಮೆರಿಕ-ಭಾರತದ ನಡುವಣ ಪರಸ್ಪರ ಅಪನಂಬಿಕೆ 1953ರ ನಂತರ ಇನ್ನಷ್ಟು ಹೆಚ್ಚಿತು. ಆ ವರ್ಷ ರಿಪಬ್ಲಿಕನ್ನರು ಇಪ್ಪತ್ತು ವರ್ಷಗಳ ನಂತರ ಮರಳಿ ಅಧಿಕಾರಕ್ಕೆ ಬಂದಿದ್ದರು. ಆ ವರ್ಷಾಂತ್ಯದಲ್ಲಿ ರಿಪಬ್ಲಿಕನ್ ಪಕ್ಷದ ವರಿಷ್ಠರಲ್ಲೊಬ್ಬನಾದ ವಿಲಿಯಂ ಎಫ್. ನೊಲ್ಯಾಂಡ್ ಆರು ವಾರಗಳ ಕಾಲ ವಿಶ್ವಪರ್ಯಟನ ಕೈಗೊಂಡ. ಸ್ವದೇಶಕ್ಕೆ ವಾಪಸಾದ ನಂತರ ಈತ "ಯುಎಸ್ ನ್ಯೂಸ್ ಅಂಡ್ ವರ್ಲ್ಡ್ ರಿಪೋರ್ಟ್‌ಗೆ" ನೀಡಿದ ಸಂದರ್ಶನದಲ್ಲಿ, ಜವಹರಲಾಲ್ ನೆಹರೂ ಏಷ್ಯದ ಎಲ್ಲ ದೇಶಗಳು ಹಾಗೂ ಜನತೆಯನ್ನು ಪ್ರತಿನಿಧಿಸುವುದಿಲ್ಲ ಎಂದು ಹೇಳಿದ್ದ. ಸೆನೆಟರ್ ನೊಲ್ಯಾಂಡ್ ಸ್ಪಷ್ಟವಾಗಿ ಹೀಗೆ ತಿಳಿಸಿದ್ದ: "ಖಂಡಿತವಾಗಿಯೂ ನೆಹರೂ ಕೊರಿಯಾ ಗಣರಾಜ್ಯ, ಸ್ವತಂತ್ರ ಚೈನಾ, ಅಥವಾ ಫಾರ್ಮೋಸಾ, ಥಾಯ್ಲೆಂಡ್, ವಿಯಟ್ನಾಂ, ಲಾವೋಸ್ ಅಥವಾ ಕಾಂಬೋಡಿಯಾಗಳ ಪರವಾಗಿ ಮಾತನಾಡಲಾರರು. ಪಾಕಿಸ್ತಾನದ ಪರವಾಗಿಯಂತೂ ಅವರಿಂದ ಮಾತನಾಡಲು ಸಾಧ್ಯವೇ ಅಗದು. ಅವರು ಏನಿದ್ದರೂ ಭಾರತ, ಇಂಡೋನೇಷ್ಯಾ (ಇದೂ ಸಹ ತಟಸ್ಥ), ಬಹುಶಃ ಬರ್ಮಾ ಈ ರಾಷ್ಟ್ರಗಳ ಪರವಾಗಿ ಸ್ವಲ್ಪ ಮಟ್ಟಿಗೆ ಅಧಿಕಾರಯುತವಾಗಿ ಮಾತನಾಡಬಲ್ಲರು ಅಥವಾ ಅವರ ಅಭಿಪ್ರಾಯಗಳನ್ನು ಪ್ರತಿನಿಧಿಸಬಲ್ಲರು..."

ಅಮೆರಿಕದ ಹೊಸ ವಿದೇಶಾಂಗ ಸಚಿವ ಜಾನ್ ಫಾಸ್ಟರ್ ಡಲ್ಲೆಸ್ ಅವರದೂ ಇದೇ ಅಭಿಪ್ರಾಯವಾಗಿತ್ತು. ಡಲ್ಲೆಸ್ ಶೀತಲ ಸಮರ ಯೋಧರಲ್ಲಿ ಅತಿಶೀತಲನಾಗಿದ್ದು ಈತನ ವಿದೇಶಾಂಗ ನೀತಿ ಕಮ್ಯುನಿಸ್ಟ್ ಗೀಳಿನಿಂದ ಗ್ರಸ್ತವಾಗಿತ್ತು. ಸೋವಿಯತ್ ಒಕ್ಕೂಟದ ವಿರುದ್ಧ ಸಮರದಲ್ಲಿ ಡಲ್ಲೆಸ್ ಉಳಿದ ರಾಷ್ಟ್ರಗಳ ಆಂತರಿಕ ರಾಜಕೀಯ ವ್ಯವಸ್ಥೆಯನ್ನು ಕಡೆಗಣಿಸಲೂ ಸಿದ್ಧನಿದ್ದ. ಸಾಮಾನ್ಯೀಕರಿಸಿ ಹೇಳುವುದಾದರೆ, ಪ್ರಜಾಪ್ರಭುತ್ವವಾದಿಗಳಿಗಿಂತ ಅಮೆರಿಕವನ್ನು ಹಿಂಬಾಲಿಸುವ ನಿರಂಕುಶ ಪ್ರಭುಗಳೇ ಡಲ್ಲೆಸ್‌ಗೆ ಹೆಚ್ಚು ಪ್ರಿಯವಾಗುತ್ತಿದ್ದರು. 'ಅವನೊಬ್ಬ ಸೂಳೆ ಮಗನಾದರೆ, ಕನಿಷ್ಠ ಅವನು ನಮ್ಮ ಸೂಳೆಯ ಮಗ'- ಇದು ಡಲ್ಲೆಸ್‌ನ ಸುವಿಖ್ಯಾತ ವಾಣಿ.

ಶುರುವಿನಿಂದಲೇ ನೆಹರೂ ಮತ್ತು ಡಲ್ಲೆಸ್ ನಡುವೆ ಪರಸ್ಪರ ಪ್ರೀತಿ-ವಿಶ್ವಾಸಗಳಿರಲಿಲ್ಲ. "ತಟಸ್ಥ ಅಥವಾ ಅಲಿಪ್ತ ನೀತಿ ಹಳೆಯ ಕಂದಾಚಾರದ್ದು, ಅನೈತಿಕವಾದದ್ದು ಹಾಗೂ ದೂರದೃಷ್ಟಿ ಹೀನವಾದದ್ದು" ಎಂದು ಅಮೆರಿಕದ ಅಭಿಮತವಾಗಿತ್ತು. ಅಲಿಪ್ತ ನೀತಿಯನ್ನು ಬೋಧಿಸುವವರು ಕಮ್ಯುನಿಸ್ಟರ ಗುಪ್ತ ಅನುಯಾಯಿಗಳೇ ಸರಿ ಎನ್ನುವುದು ಅಮೆರಿಕದ ಅನ್ನಿಸಿಕೆ. ಇಂಥದೊಂದು ವ್ಯಾಖ್ಯಾನ ನೆಹರೂಗೆ ಹಿಡಿಸಲಿಲ್ಲ. ಆಸ್ಟ್ರೇಲಿಯಾದ ರಾಜತಂತ್ರಜ್ಞ ವಾಲ್ಟರ್ ಕ್ರಾಕರ್ ಬರೆದಂತೆ ಭಾರತದ ಪ್ರಧಾನಮಂತ್ರಿ ಇದರಲ್ಲಿನ ಕಟಕಿಯನ್ನು ಗಮನಿಸದೇ ಇರಲಿಲ್ಲ–

ಡಲ್ಲೆಸ್ ಅವರು ಘೋಷಿಸಿದ ಮುಕ್ತ ಪ್ರಪಂಚ ಮತ್ತು ಮುಕ್ತ ಜೀವನದ ಪಾವಿತ್ರ್ಯವನ್ನು, ಡಲ್ಲೆಸ್ ಅವರಿಂದ ಖಂಡನೆಗೊಳಗಾಗಿರುವ ಅವರೇ (ನೆಹರೂ) ಸ್ವತಂತ್ರ ಭಾರತದಲ್ಲಿ ಕಾಪಾಡಿಕೊಂಡು ಬಂದಿದ್ದಾರೆ. ಸಂಸದೀಯ ಪ್ರಜಾಸತ್ತೆಯ ನಿಟ್ಟಿನ ದೃಢ ಪ್ರಯತ್ನಗಳಿಂದ, ಕಾನೂನಿನ ಆಡಳಿತದಿಂದ, ಎಲ್ಲ ಧರ್ಮೀಯರಿಗೂ ಸ್ವಾತಂತ್ರ್ಯ-ಸಮಾನತೆಗಳನ್ನು ನೀಡುವುದರಿಂದ, ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳಿಂದ ಸ್ವಾತಂತ್ರ್ಯದ ಪಾವಿತ್ರ್ಯವನ್ನು ಪಾಲಿಸಿಕೊಂಡು ಬಂದಿದ್ದಾರೆ. ಆದರೆ ಡಲ್ಲೆಸ್ ಅವರ ಪ್ರಶಂಸೆಗೆ ಪಾತ್ರವಾಗಿರುವ, ಸಹಾಯ ಪಡೆದಿರುವ ರಾಷ್ಟ್ರಗಳು ಯಾವ ಕ್ಷಣದಲ್ಲಾದರೂ ಕಮ್ಯುನಿಸ್ಟ್ ವಿರೋಧಿ ರಾಷ್ಟ್ರಗಳಾಗಿ ತಲೆ ಎಣಿಕೆಗೆ ಎದ್ದು ನಿಲ್ಲಲು ಸಿದ್ಧವಾಗಿವೆ. ಈ ರಾಷ್ಟ್ರಗಳು ಪ್ರಜಾಪೀಡಕ, ಮಿತಜನತಂತ್ರವಾದಿ, ಪುರೋಹಿತಶಾಹಿ, ಭ್ರಷ್ಟ, ಅವನತಿಯ ರಾಷ್ಟ್ರಗಳಾಗಿವೆ.

ಪೋರ್ಚುಗಲ್ ಅಮೆರಿಕದ ನಂಬಿಕಸ್ಥ ರಾಷ್ಟ್ರ. ಪೋರ್ಚುಗಲ್ ಗೋವೆಯಲ್ಲಿ ತನಗಿಷ್ಟ ಬಂದಷ್ಟು ಕಾಲ ವಸಾಹತುಶಾಹಿ ಮುಂದುವರಿಸಬಹುದೆಂದು ಡಲ್ಲೆಸ್ ನೀಡಿದ ಹೇಳಿಕೆ ಭಾರತೀಯ ಪ್ರಜ್ಞೆ-ಸಂವೇದನೆಗಳನ್ನು ಮತ್ತಷ್ಟು ಘಾಸಿಗೊಳಿಸಿತು. ಆದರೆ, 1954ರಲ್ಲಿ ಡಲ್ಲೆಸ್ ಪಾಕಿಸ್ತಾನದ ಜೊತೆ ಮಿಲಿಟರಿ ಒಪ್ಪಂದಕ್ಕೆ ಸಹಿಹಾಕುವುದರೊಂದಿಗೆ ಭಾರತ-ಅಮೆರಿಕ ನಡುವಣ ಸ್ನೇಹಬಾಂಧವ್ಯ ಭಗ್ನಗೊಂಡಿತು. ಒಬ್ಬ ಇತಿಹಾಸಕಾರ ಶುಷ್ಕವಾಗಿ ಟೀಕಿಸಿರುವಂತೆ- "ಡಲ್ಲೆಸ್‌ಗೆ ಒಪ್ಪಂದಗಳು ಬೇಕಾಗಿದ್ದವು...ಪಾಕಿಸ್ತಾನಕ್ಕೆ ಹಣ ಮತ್ತು ಶಸ್ತ್ರಾಸ್ತ್ರ ಬೇಕಾಗಿತ್ತು."

ಸ್ವಾತಂತ್ರ್ಯದ ಕಾಲದಿಂದಲೂ ಯುನೈಟೆಡ್ ಕಿಂಗ್‌ಡಮ್ ಪಾಕಿಸ್ತಾನವನ್ನು ಶೀತಲ ಸಮರದಲ್ಲಿ ಮಿತ್ರ ರಾಷ್ಟ್ರವೆಂದೇ ಪರಿಗಣಿಸಿತ್ತು; "ಕಮ್ಯುನಿಸ್ಟ್ ವಿರೋಧಿ ಸುಭದ್ರ ಕೋಟೆ" ಎಂದೇ ಭಾವಿಸಿತ್ತು. ಇದಕ್ಕೆ ತದ್ವಿರುದ್ಧವಾಗಿ, ಭಾರತವನ್ನು ಸೋವಿಯತ್ ಬಗ್ಗೆ ಮೃದುವಾಗಿರುವ ರಾಷ್ಟ್ರ ಎಂದೇ ಭಾವಿಸಲಾಗಿತ್ತು. ರಷ್ಯದ ಪೂರ್ವಬದಿಯಲ್ಲಿ ಪಾಕಿಸ್ತಾನವನ್ನು ಬಲವಾಗಿ ಎತ್ತಿಕಟ್ಟಬಹುದೆಂಬ ವಾದದಿಂದ ಸ್ವತಃ ವಿನ್‌ಸ್ಟನ್ ಚರ್ಚಿಲ್ಲರೇ ಪ್ರಭಾವಿತರಾಗಿದ್ದರು. ಪಶ್ಚಿಮದ ತುರ್ಕಿಯಷ್ಟೇ ಪಾಕಿಸ್ತಾನ, ರಷ್ಯ ವಿರುದ್ಧ ಬಲವಾಗಿ ನಿಲ್ಲಬಲ್ಲದು ಎಂಬ ಮಾತನ್ನು ನಂಬಿದಂತಿತ್ತು. ಹಾರ್ವರ್ಡ್ ಯುವ ಪ್ರೊಫೆಸರ್ ಹೆನ್ರಿ ಕೀಸಿಂಜರ್ ಅವರ ಅಭಿಪ್ರಾಯದ ಪ್ರಕಾರ "ಸೋವಿಯತ್ತರಿಂದ ಅಫ್ಘನೀಸ್ತಾನವನ್ನು ರಕ್ಷಿಸುವುದು ಹೆಚ್ಚಾಗಿ ಪಾಕಿಸ್ತಾನದ ಬಲವನ್ನೇ ಅವಲಂಬಿಸಿದೆ."

ಡಲ್ಲೆಸ್‌ನಂಥ ರಿಪಬ್ಲಿಕನ್ ರಾಜಕಾರಣಿಗಳಿಗೆ ಕಮ್ಯುನಿಸ್ಟ್ ಸಿದ್ಧಾಂತದ ವಿರುದ್ಧ ಹೋರಾಟವೇ ಪರಮ ಗುರಿ, ಪರಮ ಕರ್ತವ್ಯವಾಗಿತ್ತು. ಇದರಿಂದಾಗಿಯೇ ಪಾಕಿಸ್ತಾನದತ್ತ ವಾಲಿದ್ದು. ರಷ್ಯದ ವಿರುದ್ಧ ರಕ್ಷಣಾವ್ಯೂಹದಲ್ಲಿ ಪಾಕಿಸ್ತಾನ ಪ್ರಮುಖ ರಾಷ್ಟ್ರವೆಂದು ಡಲ್ಲೆಸ್ ಭಾವಿಸಿದ್ದರು. ಪಾಕಿಸ್ತಾನದ ನೆಲೆಗಳಿಂದ ಅಮೆರಿಕ ವಿಮಾನಗಳು ಸೋವಿಯತ್ ಮಧ್ಯ ಏಷ್ಯಾ ಮೇಲೆ ದಾಳಿ ನಡೆಸಬಹುದಿತ್ತು. ಉಪಾಧ್ಯಕ್ಷ ರಿಚರ್ಡ್ ನಿಕ್ಸನ್, ಡಲ್ಲೆಸ್ ಅವರ ಅಭಿಪ್ರಾಯಗಳನ್ನು ಅನುಮೋದಿಸಿದರು. ಇವರಿಬ್ಬರ ಸಂಘಟಿತ ಪ್ರಯತ್ನ ಅಧ್ಯಕ್ಷ ಐಸನ್

ಹೋವರ್ ಅವರ ಮನ ಒಲಿಸುವುದರಲ್ಲಿ ಸಫಲಗೊಂಡಿತು. ಪಾಕಿಸ್ತಾನದೊಂದಿಗೆ ವಿಧ್ಯುಕ್ತ ಒಪ್ಪಂದ ಮಾಡಿಕೊಳ್ಳುವುದರಿಂದ ಭಾರತದೊಂದಿಗೆ ಮೈತ್ರಿನಷ್ಟವಾಗಬಹುದೆಂಬ ಚಿಂತೆ ಐಸೆನ್‌ಹೋವರನ್ನು ಕಾಡದೇ ಇರಲಿಲ್ಲ. ಆದರೆ ಸಂಘಟಿತ ಯತ್ನ ಗೆದ್ದಿತ್ತು.

ಪಾಕಿಸ್ತಾನಕ್ಕೆ ಅಮೆರಿಕ ವರ್ಷಕ್ಕೆ 80 ದಶಲಕ್ಷ ಡಾಲರುಗಳನ್ನು ಮಿಲಿಟರಿ ನೆರವಾಗಿ ನೀಡುತ್ತಿತ್ತು. ಮಧ್ಯ ಹಾಗೂ ಆಗ್ನೇಯ ಏಷ್ಯಾದಲ್ಲಿದ್ದ ಸೋವಿಯತ್ ವಿರೋಧಿ ಮಿಲಿಟರಿ ಒಕ್ಕೂಟಗಳಾದ ಸೆಂಟೋ (CENTO) ಮತ್ತು ಸಿಯಾಟೋ (SEATO) ಸೇರಿಕೊಳ್ಳುವಂತೆ ಅಮೆರಿಕ ಪಾಕಿಸ್ತಾನವನ್ನು ಪ್ರೋತ್ಸಾಹಿಸಿತು. ಡಲ್ಲಸ್ ಅವರು ಪಾಕಿಸ್ತಾನದ ಜೊತೆ ಒಪ್ಪಂದಕ್ಕೆ ಸಹಿ ಹಾಕುವುದಕ್ಕೆ ಎರಡು ತಿಂಗಳು ಮೊದಲು, ಉಪಖಂಡದಲ್ಲಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಅಮೆರಿಕನ್ ಪಾದ್ರಿಯೊಬ್ಬರು “ಭಾರತದ ವಿರುದ್ಧ ಪಾಕಿಸ್ತಾನದ ಮಿಲಿಟರಿಯನ್ನು ಬಲಪಡಿಸುವುದರಿಂದ ಭಾರತವನ್ನು ದೂರವಿಟ್ಟಂತಾಗುತ್ತದೆ” ಎಂದು ಎಚ್ಚರಿಕೆ ನೀಡಿದ್ದರು. ಈ ಮಾತು ನಿಜವಾಯಿತು. ಇದರ ಜೊತೆಗೆ, ಭಾರತ-ಅಮೆರಿಕ ಬಾಂಧವ್ಯ ಹದಗೆಡಲು ಬೇರೆ ಕಾರಣಗಳೂ ಇದ್ದವು. ಶೀತಲ ಸಮರ ಜಟಾಪಟಿಗಳಲ್ಲಿ ಭಾರತ ತುಂಬ ತಟಸ್ಥ ಧೋರಣೆ ತಾಳಿದೆಯೆಂದು ಭಾವಿಸಲಾಯಿತು. ಜನತಾ ಚೈನಾ ಗಣರಾಜ್ಯಕ್ಕೆ ಮಾನ್ಯತೆ ನೀಡಬೇಕೆಂದು ಭಾರತ ತೀವ್ರವಾಗಿ ಪ್ರಚಾರ ಮಾಡಿದ್ದು, ಹಾಗೂ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಅದಕ್ಕೆ ಕಾಯಂ ಸದಸ್ಯತ್ವ ನೀಡಬೇಕೆಂದು ಪಟ್ಟು ಹಿಡಿದದ್ದು ವಾಷಿಂಗ್ಟನ್ನಿಗೆ ಸರಿ ಕಾಣಲಿಲ್ಲ. “ನೆಹರೂ ಅವರು ಅಮೆರಿಕದ ವಿವೇಕಕ್ಕೆ ಸವಾಲೊಡ್ಡುವ ನಾಯಕರಾಗಿ ವಿಶ್ವ ರಾಜಕೀಯ ರಂಗವನ್ನು ಪ್ರವೇಶಿಸಿದ್ದಾರೆ” ಎಂಬ ಭಾವನೆ ಅಮೆರಿಕನ್ನರಲ್ಲಿ ಹೆಚ್ಚಾಗಿ ಬೆಳೆಯುತ್ತಿತ್ತು.

1954ರ ಮೇ ತಿಂಗಳಿನಲ್ಲಿ ನೆಹರೂ ಜೆ.ಡಿ. ಬಿರ್ಲಾ ಅವರಿಗೆ ಒಂದು ಪತ್ರ ಬರೆದಿದ್ದರು. ಅದರ ಒಕ್ಕಣೆ ಹೀಗಿದೆ:

> *“ಕಳೆದ ಐದಾರು ವರ್ಷಗಳಲ್ಲಿ ದೂರ ಪ್ರಾಚ್ಯದಲ್ಲಿ ಅಮೆರಿಕದಂಥ ರಾಷ್ಟ್ರವೊಂದು ಸತತವಾಗಿ ತಪ್ಪು ನೀತಿಗಳನ್ನು ಅನುಸರಿಸುತ್ತಿರುವಂಥ ಹೆಚ್ಚು ಉದಾಹರಣೆಗಳು ಇತಿಹಾಸದಲ್ಲಿ ಸಿಗಲಾರವು. ಅವರು ಒಂದಾದ ನಂತರ ಒಂದು ತಪ್ಪು ಹೆಜ್ಜೆಗಳನ್ನಿಡುತ್ತಿದ್ದಾರೆ...ಹಣ ಮತ್ತು ಶಸ್ತ್ರಾಸ್ತ್ರಗಳಿಂದ ಯಾವ ಸಮಸ್ಯೆಯನ್ನು ಬೇಕಾದರೂ ಇತ್ಯರ್ಥಗೊಳಿಸಬಹುದೆಂದು ಅವರು ಭಾವಿಸಿದಂತಿದೆ. ಆದರೆ ಅವರು ಮಾನವೀಯ ಅಂಶವನ್ನು ಮರೆತಿದ್ದಾರೆ. ಅವರು ಜನರ ಸ್ವಾತಂತ್ರ್ಯದ, ರಾಷ್ಟ್ರೀಯತೆಯ ಒತ್ತಾಸೆಗಳನ್ನು ಮರೆತಿದ್ದಾರೆ. ಹೇರಿಕೆಗಳ ವಿರುದ್ಧ ಏಷ್ಯನ್ನರ ತೀವ್ರ ಪ್ರತಿಭಟನೆಯನ್ನು ಅವರು ಮರೆತಿದ್ದಾರೆ.”*

ಭಾರತ-ಅಮೆರಿಕ ಮಧುರ ಬಾಂಧವ್ಯ ಹೊಂದಿರಬೇಕೆಂಬುದರಲ್ಲಿ ಕೈಗಾರಿಕೋದ್ಯಮಿಗೆ ತೀವ್ರ ಆಸಕ್ತಿ ಇತ್ತು. 1954ರ ಅಕ್ಟೋಬರ್‌ನಲ್ಲಿ ಬಿರ್ಲಾ ಅಮೆರಿಕಕ್ಕೆ ಭೇಟಿ ಕೊಟ್ಟಾಗ ಅಲ್ಲಿನ

ಪ್ರಭಾವಿ ಜನರುಗಳೊಂದಿಗೆ ಮಾತುಕತೆ ನಡೆಸಿದ್ದರು. ಜಾನ್ ಫಾಸ್ಟರ್ ಡಲ್ಲೆಸ್ ಅವರನ್ನೂ ಅರ್ಧಗಂಟೆ ಕಾಲ ಭೇಟಿಯಾಗಿದ್ದರು. ಭಾರತ ತಮ್ಮನ್ನು ಯುದ್ಧ ಪಿಪಾಸುಗಳೆಂದು ತಪ್ಪಾಗಿ ಭಾವಿಸಿದೆಯೆದು ಡಲ್ಲೆಸ್ ಆಗ ದೂರಿದ್ದುಂಟು. 1956ರ ಫೆಬ್ರುವರಿಯಲ್ಲಿ ಬಿರ್ಲಾ ಮತ್ತೊಮ್ಮೆ ಅಮೆರಿಕಕ್ಕೆ ಭೇಟಿಕೊಟ್ಟಿದ್ದರು. ಇದೊಂದು ಸ್ನೇಹಸೇತು ನಿರ್ಮಿಸುವ ಪ್ರಯತ್ನದ ಭೇಟಿಯಾಗಿತ್ತು. ಹೋಗುವ ಮುನ್ನ ನೆಹರೂ ಅವರನ್ನು ಭೇಟಿಯಾಗಿದ್ದರು. ಗೋವಾ ಬಗ್ಗೆ ಡಲ್ಲೆಸ್ ನೀಡಿರುವ ಹೇಳಿಕೆ ಹೇಗೆ ಭಾರತೀಯರನ್ನು ಕೆರಳಿಸಿದೆ ಎಂಬುದನ್ನು ನಿರೂಪಿಸಿದ ನೆಹರೂ, "ಭಾರತ-ಅಮೆರಿಕ ಬಾಂಧವ್ಯಕ್ಕೆ ಇಂಥ ಹೇಳಿಕೆಗಳಿಂದ ಹೆಚ್ಚಿನ ಧಕ್ಕೆಯಾಗುತ್ತದೆ. ಅವರು ಕೊಡುವ ನೆರವು ಇದರ ಮುಂದೆ ಏನೂ ಇಲ್ಲ. ಜೊತೆಗೆ ಅಮೆರಿಕ ಪಾಕಿಸ್ತಾನಕ್ಕೆ ಮಿಲಿಟರಿ ನೆರವು ನೀಡುತ್ತಿದೆ. ಪಾಕಿಸ್ತಾನ ನಮಗೆ ಸತತವಾಗಿ ಬೆದರಿಕೆಯೊಡ್ಡುತ್ತಿದ್ದು ಇದರಿಂದಾಗಿ ಅಮೆರಿಕದ ನೆರವಿಗಿಂತ ಹೆಚ್ಚಿನ ಭಾರ ನಮ್ಮ ಮೇಲೆ ಬೀಳುತ್ತಿದೆ" ಎಂದು ತಿಳಿಸಿದ್ದರು.

ಅದರ ಮುಂದಿನ ತಿಂಗಳು ಜಾನ್ ಫಾಸ್ಟರ್ ಡಲ್ಲೆಸ್ ಭಾರತಕ್ಕೆ ಭೇಟಿಕೊಡುವ ಧೈರ್ಯ ಮಾಡಿದರು. ಆಗ ಡಲ್ಲೆಸ್ ಭಾರತ ಸರ್ಕಾರದ ಜೊತೆ ನಡೆಸಿದ ಮಾತುಕತೆ ಇಂದಿಗೂ ವರ್ಗೀಕೃತ ಕಡತವಾಗಿ ಉಳಿದಿದೆ. ಆದರೆ ಡಲ್ಲೆಸ್ ನಡೆಸಿದ ಪತ್ರಿಕಾಗೋಷ್ಠಿಯ ವಿವರಗಳು ಲಭ್ಯವಿದೆ. ಪತ್ರಿಕಾಗೋಷ್ಠಿಯಲ್ಲಿ ಡಲ್ಲೆಸ್ ಪ್ರತಿಕೂಲಕರ ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಗೋವೆ, ಪೋರ್ಚುಗಲ್‌ನ ಅವಿಭಾಜ್ಯ ಅಂಗವೆಂದು ಏಕೆ ಹೇಳಿದಿರಿ ಎನ್ನುವುದು ಇಂಥದೊಂದು ಪ್ರಶ್ನೆಯಾಗಿತ್ತು. ಡಲ್ಲೆಸ್ ತಮ್ಮ ಹೇಳಿಕೆಯನ್ನು ಅಲ್ಲಗಳೆಯಲಿಲ್ಲ. ಆದರೆ ಈ ವ್ಯಾಜ್ಯ ಶಾಂತಿಯುತವಾಗಿ ಬಗೆಹರಿಯಬೇಕೆಂಬುದು ತಮ್ಮ ಇಚ್ಛೆಯೆಂದು ಸ್ಪಷ್ಟೀಕರಿಸಿದರು. ನಂತರ ಮಾತು ಪಾಕಿಸ್ತಾನಕ್ಕೆ ಮಿಲಿಟರಿ ನೆರವು ನೀಡಿಕೆಯತ್ತ ಹೊರಳಿತು. ಇದರಿಂದಾಗಿ ಕಾಶ್ಮೀರದಲ್ಲಿ ಘರ್ಷಣೆ ಹೆಚ್ಚಬಹುದೆಂಬ ಅಭಿಪ್ರಾಯ ವ್ಯಕ್ತವಾಯಿತು. "ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೆರವು ನೀಡಿಕೆ ಭಾರತದ ವಿರುದ್ಧದ ಹುನ್ನಾರವೇನಲ್ಲ" ಎಂದು ರಕ್ಷಣಾತ್ಮಕವಾಗಿ ಉತ್ತರಿಸಿದರು. ಈ ಬಗ್ಗೆ ಪದೇ ಪದೇ ಪ್ರಶ್ನಿಸಿದಾಗ, ಕೋಪಗೊಂಡ ಡಲ್ಲೆಸ್ "ಕಾಶ್ಮೀರದ ಬಗ್ಗೆ ವಿವಾದ ಇದೆ ಎಂದ ಮಾತ್ರಕ್ಕೆ ಪಾಕಿಸ್ತಾನಕ್ಕೆ ಸೋವಿಯತ್ ಕಮ್ಯುನಿಸ್ಟ್‌ರ ಆಕ್ರಮಣ ಎದುರಿಸಲು ಶಸ್ತ್ರಾಸ್ತ್ರ ನೀಡಬಾರದು ಎಂದೇನಿಲ್ಲವೆಂದು" ಉತ್ತರ ಕೊಟ್ಟರು. ನಂತರ "ಗೋವಾ ಅಥವಾ ಕಾಶ್ಮೀರದ ಬಗ್ಗೆ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಕೇಳುವುದಿದ್ದಲ್ಲಿ ತಾವು ಪತ್ರಿಕಾಗೋಷ್ಠಿಯಿಂದ ಹೊರನಡೆಯುವುದಾಗಿ" ಈ ವಿದೇಶಾಂಗ ಸಚಿವರು ಕೊನೆಯ ಅಸ್ತ್ರ ಪ್ರಯೋಗಿಸಿದರು.

ಪ್ರಜಾಸತ್ತಾತ್ಮಕ ಜೀವನ ಶೈಲಿ, ಬಹು ಸಂಸ್ಕೃತಿ ಹಾಗೂ ಬ್ರಿಟಿಷರ ದಮನಕಾರಿ ಆಡಳಿತದ ವಿರುದ್ಧ ದಂಗೆ ಎದ್ದುದರ ಫಲವಾಗಿ ಮೂಡಿತೆಂಬ ರಾಷ್ಟ್ರೀಯತೆ-ಸ್ವಾತಂತ್ರ್ಯಗಳ ಕಲ್ಪನೆ ಇತ್ಯಾದಿ ಹಲವು ಬಾಬುಗಳಲ್ಲಿ ಭಾರತ-ಅಮೆರಿಕ ನಡುವೆ ಸಾಮ್ಯತೆಗಳು ಕಂಡು ಬಂದಿದ್ದವು. ಆದರೆ ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಎರಡೂ ರಾಷ್ಟ್ರಗಳೂ ದೃಢನಿಶ್ಚಿತ ಭಿನ್ನ ನಿಲುವುಗಳನ್ನು ತಾಳಿದ್ದವು. ಕಮ್ಯುನಿಸ್ಟ್ ಸಿದ್ಧಾಂತದ ಬಗ್ಗೆ ಭಾರತ ಮೃದು ಧೋರಣೆ

ತಾಳಿದೆ ಎಂದು ಅಮೆರಿಕ ಭಾವಿಸಿತ್ತು. ಅಮೆರಿಕ ವಸಾಹತುಶಾಹಿ ಬಗ್ಗೆ ಮೃದು ಧೋರಣೆ ತಾಳಿದೆ ಎಂದು ಭಾರತ ಭಾವಿಸಿತ್ತು. ಅಂತಿಮವಾಗಿ ಯಾವುದು ಎರಡನ್ನೂ ವಿಮುಖಗೊಳಿಸಿತ್ತೋ ಅಥವಾ ಒಂದುಗೂಡಿಸುವುದರಲ್ಲಿ ಯಾವುದು ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ಮಾಡಿತೋ ಹೇಳಲಿಕ್ಕಾಗದು. ಭಾಗಶಃ ಪ್ರಮುಖ ಪಾತ್ರಧಾರಿಗಳ ವೈಯಕ್ತಿಕ ಇಷ್ಟಾನಿಷ್ಟಗಳು, ಸ್ವಭಾವ, ಗುಣ ವಿಶೇಷಗಳು ಅಥವಾ ಇವುಗಳ ಕೊರತೆಯೇ ಇದಕ್ಕೆಲ್ಲ ಕಾರಣವಿದ್ದೀತು.

III

ಜವಹರಲಾಲ್ ನೆಹರೂ ಉತ್ತರ ಅಮೆರಿಕ ಪ್ರವಾಸಕ್ಕೆ ಎರಡು ದಶಕಗಳಿಗೂ ಮುಂಚಿತವಾಗಿಯೇ ಸೋವಿಯತ್ ಒಕ್ಕೂಟಕ್ಕೆ ಭೇಟಿಕೊಟ್ಟಿದ್ದರು. ಬರ್ಲಿನ್‌ನಿಂದ ರೈಲಿನಲ್ಲಿ ಪಯಣಿಸಿದ ಅವರು 1927ರ ನವೆಂಬರ್ 7ರಂದು ರಷ್ಯದ ಗಡಿ ತಲುಪಿದ್ದರು. ಅಂದು ಬೋಲ್ಷೆವಿಕ್ಕರು ಅಧಿಕಾರ ಗ್ರಹಣ ಮಾಡಿದ ಹತ್ತನೆಯ ವಾರ್ಷಿಕೋತ್ಸವದ ದಿನವಾಗಿತ್ತು. ಲೆನಿನ್ ಆರಾಧ್ಯ ದೈವವಾಗಿ ಎಲ್ಲೆಲ್ಲೂ ಕಂಗೊಳಿಸುತ್ತಿದ್ದರು. ಕೆಂಪು ಬಾವುಟಗಳು, ಬೋಲ್ಷೆವಿಕ್ ನಾಯಕರ ಚಿತ್ರಗಳು ಬೀದಿ ಬೀದಿಗಳಲ್ಲಿ ವಿಜೃಂಭಿಸುತ್ತಿದ್ದವು. ನೆಹರೂಗೆ, ಮಾಸ್ಕೋ ನಗರ, ತನ್ನ ಲೌಕಿಕ ಭವ್ಯತೆಯಿಂದ ಹಾಗೂ ಸಾಮಾಜಿಕ ತತ್ವಬದ್ಧತೆಯಿಂದ ಆಕರ್ಷಣೀಯವೆನ್ನಿಸಿತು. “ಕಡು ಬಡತನ ಅಥವಾ ಕಡು ಶ್ರೀಮಂತಿಕೆಗಳ ವೈರುಧ್ಯವಾಗಲೀ, ಜಾತಿ-ವರ್ಗಗಳ ಮೇಲಾಟವಾಗಲೀ ಕಂಡುಬರಲಿಲ್ಲ” ಎಂದು ನೆಹರೂ ದಾಖಲಿಸಿದ್ದಾರೆ.

ನೆಹರೂ ತಮ್ಮ ಸೋವಿಯತ್ ಒಕ್ಕೂಟದ ಭೇಟಿ ಕುರಿತು ಪ್ರವಾಸ ಕಥನವೊಂದನ್ನು ಬರೆದರು. ಕೂಡೊಕ್ಕಲು ಬೇಸಾಯವಾಗಿರಲೀ, ರಷ್ಯದ ಸಂವಿಧಾನವಾಗಿರಲೀ, ಅಲ್ಪಸಂಖ್ಯಾತರ ಬಗೆಗಿನ ಆರೋಪಿತ ಸಹಿಷ್ಣುತೆಯಾಗಲೀ ಅಥವಾ ಆರ್ಥಿಕ ಪ್ರಗತಿಯಾಗಲೀ ಇವೆಲ್ಲದರ ಬಗ್ಗೆ ನೆಹರೂ ಅತ್ಯುತ್ಸಾಹದಿಂದಲೇ ಬರೆದಿದ್ದಾರೆ. ಲೆನಿನ್ ಸಮಾಧಿಗೆ ಭೇಟಿಕೊಟ್ಟಾಗ, ಆ ಸಮಾಧಿದರ್ಶನ ಆ ಮಹಾನ್ ನಾಯಕನ ಬಗ್ಗೆ ಅವರಲ್ಲಿ ಭಾವನೆಗಳ ಲಹರಿಯನ್ನು ಮೀಟಿತ್ತು. “ಬೋಲ್ಷೆವಿಕ್ ನಾಯಕ ನಮ್ಮ ಶತಮಾನದ ಮಹಾನಾಯಕ, ಅದೇ ಕಾಲಕ್ಕೆ ನಿಸ್ವಾರ್ಥಿ” ಎಂದ ರೋಮಿನ್ ರೋಲ್ಯಾಂಡ್ ಅವರ ಮಾತನ್ನು ಅತ್ಯಂತ ಭಾವುಕತೆಯಿಂದ ಸ್ಮರಿಸಿದ್ದಾರೆ. ನೆಹರೂ ಅವರನ್ನು ಸುಧಾರಿತ ಬಂದೀಖಾನೆಗೆ ಕರೆದೊಯ್ಯಲಾಗಿತ್ತು. ಈ ಬಂದೀಖಾನೆ ಅವರಿಗೆ “ಸಮಾಜವಾದಿ ಸಮಾಜದ ಅತ್ಯುತ್ತಮ ಸಾಮಾಜಿಕ ವ್ಯವಸ್ಥೆಯಾಗಿ, ಅಪರಾಧಿಗಳ ಮಾನವೀಯ ನೆಲೆಯಾಗಿ ಕಂಡುಬಂದಿತು.”

ಬೂರ್ಷ್ವಾ ರಾಷ್ಟ್ರಗಳಿಗೆ ಹೋಲಿಸಿದರೆ, ಸೋವಿಯತ್ ರಷ್ಯಾ ತನ್ನ ಕಾರ್ಮಿಕರನ್ನು, ತನ್ನ ರೈತರನ್ನು, ತನ್ನ ದೇಶದ ಮಕ್ಕಳು ಮಹಿಳೆಯರನ್ನು, ಕೈದಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದೆ ಎನ್ನುವ ತೀರ್ಮಾನಕ್ಕೆ ನೆಹರೂ ಬಂದಿದ್ದರು.

ನೆಹರೂ ಅವರು ಸೋವಿಯತ್ ದೇಶಕ್ಕೆ ಅದರ ಉಚ್ಛ್ರಾಯ ದಿನಗಳ ಕೊನೆಗಾಲದಲ್ಲಿ ಭೇಟಿ ನೀಡಿದ್ದರೆಂದು ನೆಹರೂ ಜೀವನ ಚರಿತ್ರಕಾರರು ಬರೆಯುತ್ತಾರೆ. ನೆಹರೂ ಪ್ರತಿಕ್ರಿಯೆ ತುಂಬ ಆದರ್ಶನೀಯವಾಗಿ ಕಂಡುಬಂದರೆ ಆಗಿನ್ನೂ ಅಲ್ಲಿ ಅಲ್ಪ ಸ್ವಲ್ಪ ಆದರ್ಶ ಉಳಿದದ್ದೇ ಕಾರಣ. ಇದು ನಿಜ. ಲೆನಿನ್ ಆಕರ್ಷಣೆ ಇನ್ನೂ ಇತ್ತು. ಲೆನಿನ್ ಉಜ್ವಲಕಾಂತಿ ಇನ್ನೂ ಆರಿರಲಿಲ್ಲ. (ಲೆನಿನ್ ಅಸಹನೆ ರಷ್ಯದ ಹೊರಗೆ ಗೊತ್ತಿರಲಿಲ್ಲ). ರಷ್ಯದಲ್ಲಿ ಜಮೀನ್ದಾರಿ ಪದ್ಧತಿ ಮೂಲೋತ್ಪಾಟನೆ, ಸೈಬೀರಿಯಾದ ಮರಣ ಶಿಬಿರಗಳು ಆಗ ಇನ್ನೂ ಭವಿಷ್ಯ ಗರ್ಭದಲ್ಲಿ ಅಡಗಿದ್ದವು. 1920ರ ದಶಕದಲ್ಲಿ ಪ್ರವಾಸ ಕೈಗೊಂಡಿದ್ದ ಪಾಶ್ಚಾತ್ಯರೂ ರಷ್ಯದ ಬಗ್ಗೆ ಆದರಣೀಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಇವರೆಲ್ಲರಂತೆ ನೆಹರೂ ಕೂಡ ಒಳ್ಳೆಯ ಅಭಿಪ್ರಾಯವನ್ನಿಟ್ಟುಕೊಂಡೇ, ಪ್ರಭಾವಕಾರಿ ನಿರೀಕ್ಷೆಗಳನ್ನಿಟ್ಟುಕೊಂಡೇ ಸೋವಿಯತ್ ರಷ್ಯಾಕ್ಕೆ ಭೇಟಿ ನೀಡಿದ್ದರು.

ಎಲ್ಲಕ್ಕಿಂತ ಮಿಗಿಲಾಗಿ ಸೋವಿಯತ್ ಅರ್ಥವ್ಯವಸ್ಥೆ ನೆಹರೂ ಅವರಿಗೆ ತುಂಬ ಪ್ರಿಯವಾಗಿತ್ತು. ಆ ಕಾಲದ ಪ್ರಗತಿಶೀಲ ಚಿಂತಕರಾಗಿದ್ದ, ಬುದ್ಧಿ ಜೀವಿಯಾಗಿದ್ದ ನೆಹರೂ ಆಸ್ತಿಯ ಖಾಸಗಿ ಸ್ವಾಮ್ಯ ಮತ್ತು ಖಾಸಗಿ ಮಾರುಕಟ್ಟೆ ವ್ಯವಸ್ಥೆಗಿಂತ ಸರ್ಕಾರಿ ಸ್ವಾಮ್ಯ ಹಾಗೂ ಸರ್ಕಾರಿ ಯೋಜನೆಗಳು ಉತ್ತಮ ಎಂಬ ಖಚಿತ ನಿಲುವು ಹೊಂದಿದ್ದರು. ಅವರು "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ" ಗ್ರಂಥದಲ್ಲಿ ಸೋವಿಯತ್ ಪಂಚವಾರ್ಷಿಕ ಯೋಜನೆಗಳನ್ನು ಪ್ರಶಂಸಿಸಿದ್ದಾರೆ. ಆದರೆ ಯಾವತ್ತಿಗೂ ಅವರು ಬೋಲ್ಷೆವಿಕ್ ಮಾದರಿಯ ಸಶಸ್ತ್ರ ಕ್ರಾಂತಿಯನ್ನಾಗಲೀ ಒಂದೇ ಪಕ್ಷದ ಆಡಳಿತವನ್ನಾಗಲೀ ಒಪ್ಪಿರಲಿಲ್ಲ. ಗಾಂಧೀಜಿಯವರ ತರಬೇತಿಯಿಂದಾಗಿ ಅಹಿಂಸೆ ನೆಹರೂ ಮನಸ್ಸಿನಲ್ಲಿ ಬೇರೂರಿತ್ತು. ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಡ ಉದಾರವಾದದಿಂದ ಪ್ರಭಾವಿತರಾಗಿದ್ದ ಅವರು ಚುನಾಯಿತ ಪ್ರಜಾಸತ್ತೆ ಮತ್ತು ಪತ್ರಿಕಾ ಸ್ವಾತಂತ್ರ್ಯಗಳ ಬಗ್ಗೆ ಉತ್ಸುಕರಾಗಿದ್ದರು.

ಸ್ವಾತಂತ್ರ್ಯ ಬಂದ ನಂತರ ಸೋವಿಯತ್ ಒಕ್ಕೂಟದೊಂದಿಗೆ ಭಾರತದ ಬಾಂಧವ್ಯ ಅಷ್ಟೇನೂ ಉಲ್ಲಾಸಭರಿತವಾಗಿರಲಿಲ್ಲ. ಮಾಸ್ಕೋ ಆಶೀರ್ವಾದದಿಂದ ಭಾರತದ ಕಮ್ಯುನಿಸ್ಟ್ ಪಕ್ಷ ಸರ್ಕಾರವನ್ನು ಉರುಳಿಸುವ ಪ್ರಯತ್ನ ಮಾಡಿದ್ದೇ ಇದಕ್ಕೆ ಕಾರಣವಾಗಿತ್ತು. ಆದರೆ ಕಮ್ಯುನಿಸ್ಟರ ದಂಗೆ ವಿಫಲಗೊಂಡಿತು, ಸೋವಿಯತ್ ಒಕ್ಕೂಟಕ್ಕೂ ಉತ್ಸಾಹಭಂಗವಾಯಿತು. ಸೋವಿಯತ್ ಒಕ್ಕೂಟ ನಂತರ ಭಾರತವನ್ನು ಪಶ್ಚಿಮ ರಾಷ್ಟ್ರಗಳ ಪಾಳಯದಿಂದ ತನ್ನತ್ತ ಸೆಳೆದುಕೊಳ್ಳುವ ಪ್ರಯತ್ನ ಆರಂಭಿಸಿತು. 1951ರಲ್ಲಿ ಅಮೆರಿಕ ಕಾಂಗ್ರೆಸ್ ಭಾರತಕ್ಕೆ ಆಹಾರ ಸಾಮಗ್ರಿ ನೆರವು ನೀಡುವ ವಿಷಯ ಚರ್ಚಿಸುತ್ತಿದ್ದಂತೆ, ಸೋವಿಯತ್ತರು ಪ್ರಜಾಸತ್ತಾತ್ಮಕ ಕಾರ್ಯವಿಧಾನಗಳಿಗೆ ತಲೆಕೆಡಿಸಿಕೊಳ್ಳದೆ 50 ಸಾವಿರ ಟನ್ ಗೋಧಿ ಕಳುಹಿಸಲು ಮುಂದಾಗಿದ್ದರು. ಕೊರಿಯಾ ಘರ್ಷಣೆಯಲ್ಲಿ ಮಧ್ಯಸ್ಥಿಕೆ ನಡೆಸುವ ಭಾರತದ ಪ್ರಯತ್ನಗಳನ್ನು ಮಾಸ್ಕೋ ಮೆಚ್ಚಿಕೊಂಡಿತ್ತು. ಮೊದಲಿಗೆ ಏಷ್ಯ ರಾಷ್ಟ್ರಗಳೊಡನೆ ಮೈತ್ರಿಯನ್ನು ಅವು ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಸೂಕ್ತವೇ, ಹೊಂದಿಕೊಳ್ಳಬಲ್ಲವೇ ಎಂಬುದರ ಆಧಾರದ ಮೇಲೆ

ನಿರ್ಧರಿಸಲಾಗುತ್ತಿತ್ತು. ಆದರೆ ಶೀತಲ ಸಮರದ ಶುರುವಿನ ನಂತರ ಸಿದ್ಧಾಂತ ವಿಚಾರದಲ್ಲಿ ಒಕ್ಕೂಟದ ನಿಲುವು ಸಡಿಲಗೊಂಡಿತು. ಮೈತ್ರಿ ಅಪೇಕ್ಷಿಸುವ ದೇಶ ಸಮಾಜವಾದಿ ದೇಶ ಹೌದೇ ಅಲ್ಲವೇ ಎನ್ನುವ ಮಾನದಂಡ ಹಿಂದೆ ಸರಿದು ಆ ದೇಶ ತನ್ನೊಂದಿಗೆ ಬೆಂಬಲವಾಗಿ ನಿಲ್ಲುವುದೇ ಎನ್ನುವ ಅಂಶವೇ ಮಹತ್ವದ್ದಾಯಿತು.

ನಿಲುವಿನಲ್ಲಿ ಆದ ಈ ಬದಲಾವಣೆ 1955ರಲ್ಲಿ ನೆಹರೂ ಸೋವಿಯತ್ ಒಕ್ಕೂಟಕ್ಕೆ ಭೇಟಿ ಕೊಟ್ಟಾಗ ಅವರಿಗೆ ನೀಡಿದ ಅದ್ಧೂರಿಯ ಸ್ವಾಗತದಲ್ಲಿ ಸಾಂಗವಾಗಿ ಪ್ರತ್ಯಕ್ಷಗೊಂಡಿತ್ತು. "ನೆಹರೂ ಎಲ್ಲೆ ಹೋಗಲಿ ಅಲ್ಲೆಲ್ಲ ಜನ ಸಾಲುಗಟ್ಟಿ ನಿಂತು ಅವರನ್ನು ಸಂಭ್ರಮದಿಂದ ಸ್ವಾಗತಿಸಿದರು. ಅವರ ದರ್ಶನಕ್ಕಾಗಿ ಕಾರ್ಖಾನೆಗಳಲ್ಲಿ ಕಾರ್ಮಿಕರು ಸಹಸ್ರಾರು ಸಂಖ್ಯೆಯಲ್ಲಿ ಸಾಲುಗಟ್ಟಿ ನಿಂತಿದ್ದರು" ಎಂದು ವೀಕ್ಷಕರೊಬ್ಬರು ದಾಖಲಿಸಿದ್ದಾರೆ. ಮಾಸ್ಕೋ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳು ತರಗತಿಗಳಿಂದ ಹೊರಬಂದು ಜಯಘೋಷ ಮಾಡಿ ನೆಹರೂ ಅವರನ್ನು ಸ್ವಾಗತಿಸಿದ್ದರು. (ಈ ವಿದ್ಯಾರ್ಥಿಗಳಲ್ಲಿ ಮಿಖಾಯಿಲ್ ಗೋರ್ಬಚೆವ್ ಒಬ್ಬರಾಗಿದ್ದರು. ಇವರು ನೆಹರೂ ಮತ್ತು ಅವರ ನೈತಿಕ ರಾಜಕಾರಣ ತಮ್ಮ ಮೇಲೆ ಪರಿಣಾಮ ಉಂಟು ಮಾಡಿದ್ದನ್ನು ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ). ಪ್ರವಾಸದ ಕೊನೆಯ ದಿನ ನೆಹರೂ ಗಾರ್ಕಿ ಪಾರ್ಕಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಬೇಕಿತ್ತು. ಆ ಸಭೆಗೆ ನಿರೀಕ್ಷೆ ಮೀರಿ ಜನ ಜಮಾಯಿಸಿದ್ದ ಕಾರಣ ಭಾಷಣ ಕಾರ್ಯಕ್ರಮವನ್ನು ಡೈನಮೋ ಮಾಸ್ಕೋ ಫುಟ್‌ಬಾಲ್ ತಂಡದ ಸ್ಟೇಡಿಯಂನಲ್ಲಿ ನಡೆಸಬೇಕಾಯಿತು.

ಆರು ತಿಂಗಳ ನಂತರ ಸೋವಿಯತ್ ನಾಯಕರುಗಳಾದ ಬುಲ್ಗಾನಿನ್ ಮತ್ತು ಕ್ರುಶ್ಚೇವ್ ಭಾರತಕ್ಕೆ ಭೇಟಿಕೊಟ್ಟರು. ಇವರಿಬ್ಬರೂ ದೆಹಲಿಯಲ್ಲಿ ಬಂದಿಳಿಯುವುದಕ್ಕೆ ಮುಂಚೆಯೇ, ರಷ್ಯನ್ನರು ನೆಹರೂ ಅವರಿಗೆ ನೀಡಿದ ಭವ್ಯ ಸ್ವಾಗತಕ್ಕನುಗುಣವಾಗಿ ರಷ್ಯನ್ ನೇತಾರರನ್ನು ಸ್ವಾಗತಿಸಲು ಸಹಸ್ರಾರು ಸಂಖ್ಯೆಯಲ್ಲಿ ಬರುವಂತೆ ದೆಹಲಿ ಜನತೆಯನ್ನು ಹುರಿದುಂಬಿಸಲಾಯಿತು. ನಂತರ ಉಭಯ ನಾಯಕರಿಗೆ ಅವರು ಹೋದಲ್ಲೆಲ್ಲ ವರ್ಣರಂಜಿತ ಸ್ವಾಗತ ಕಾದಿತ್ತು. ಈ ಸಂಭ್ರಮ-ಉತ್ಸಾಹಗಳಿಗೆ ಕಾರಣವಿಲ್ಲದೇ ಇರಲಿಲ್ಲ. ವಿದೇಶಿ ಆಕರ್ಷಣೆ, ಭಾರತೀಯರ ಪ್ರದರ್ಶನಪ್ರಿಯತೆ ಹಾಗೂ ಅಮೆರಿಕಕ್ಕೆ ಸಡ್ಡು ಹೊಡೆದು ನಿಂತ ರಷ್ಯದ ಬಗ್ಗೆ ಪಾಶ್ಚಾತ್ಯ ವಿರೋಧಿ ಭಾವನೆಯಿಂದಾಗಿ ಮೂಡಿದ ಹೆಮ್ಮೆ ಇವೆಲ್ಲ ಇದ್ದವು. ಸಾಮ್ರಾಜ್ಯಶಾಹಿ ವಿರೋಧಿಯಾಗಿದ್ದ ಸುಧಾರಣಾವಾದಿ ಕಲ್ಕತ್ತೆ ನಗರದಲ್ಲಿ ಭಾರಿ ಜನಸ್ತೋಮವೇ ಈ ಸೋವಿಯತ್ ಧುರೀಣರನ್ನು ಸ್ವಾಗತಿಸಿತು. ಈ ಜನಸ್ತೋಮದಲ್ಲಿ ಜಯಕಾರ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ ಐದು ಲಕ್ಷ ದಾಟಿತ್ತು. ನವದೆಹಲಿಯೂ ದೀಪಾಲಂಕಾರದಿಂದ ವಿಜೃಂಭಿಸಿತು. ದೀಪಾಲಂಕಾರದ ವೈಭವದಲ್ಲಿ ದೆಹಲಿ ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಕಮ್ಯುನಿಸ್ಟ್ ಪಕ್ಷದ ನಡುವೆ ಪೈಪೋಟಿ ಎದ್ದುಕಾಣುತ್ತಿತ್ತು.

ತಮ್ಮ ಮೂರು ವಾರಗಳ ಕಾಲದ ಭಾರತ ಪ್ರವಾಸದಲ್ಲಿ ಬುಲ್ಗಾನಿನ್ ಮತ್ತು ಕ್ರುಶ್ಚೇವ್ ಉಕ್ಕಿನ ಕಾರ್ಖಾನೆಗಳಿಗೆ, ಜಲವಿದ್ಯುತ್ ಕೇಂದ್ರಗಳಿಗೆ ಭೇಟಿಕೊಟ್ಟರು. ಏಳಕ್ಕೂ

ಕಡಿಮೆ ಇಲ್ಲದಂತೆ ರಾಜ್ಯಗಳ ರಾಜಧಾನಿಯಲ್ಲಿ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಇವುಗಳಲ್ಲಿ ನಿಸ್ಸಂಶಯವಾಗಿಯೂ ಅತಿಮುಖ್ಯವಾದದ್ದು ಜಮ್ಮು ಕಾಶ್ಮೀರ ರಾಜ್ಯದ ಶ್ರೀನಗರ ಭೇಟಿ. ಈ ಭೇಟಿ ಕಾಲದಲ್ಲಿ ಇವರಿಬ್ಬರೂ ಜಮ್ಮುಕಾಶ್ಮೀರ ಭಾರತ ಒಕ್ಕೂಟದ ಅವಿಭಾಜ್ಯ ಅಂಗವೆಂಬುದನ್ನು ತಾವು ಮಾನ್ಯ ಮಾಡಿರುವುದಾಗಿ ಸ್ಪಷ್ಟಪಡಿಸಿದರು. ಕಾಶ್ಮೀರಿಗಳು ತುಂಬಾ ಪ್ರತಿಭಾಶಾಲಿಗಳೆಂದೂ ಉದ್ಯಮಶೀಲರೆಂದೂ ಸ್ಥಳೀಯರನ್ನು ಹೊಗಳಿದರು. ಭಾರತೀಯರ ಕಿವಿಗಳಿಗೆ ಇದಕ್ಕಿಂತ ಇಂಪಾದುದು ಮತ್ತೊಂದಿದ್ದಿರಲಿಕ್ಕಿಲ್ಲ.

IV

1955ರಲ್ಲಿ ಮಾಸ್ಕೋಗೆ ನೆಹರೂ ಭೇಟಿ ನೀಡುವ ಮುನ್ನ ಟೀಕಾಕಾರರು ತಲೆಬಿಸಿಮಾಡಿಕೊಳ್ಳದೇ ಇರಲಿಲ್ಲ. "ಇಪತ್ತು ಮೂವತ್ತರ ದಶಕಗಳ ಎಲ್ಲ ಸಂವೇದನಾಶೀಲರಂತೆ ನೆಹರೂ ಅವರೂ ಸೋವಿಯತ್ ಒಕ್ಕೂಟವನ್ನು ನಿಜಕ್ಕೂ ಪ್ರಗತಿಶೀಲ ಎಂದೇ ಮಾನ್ಯಮಾಡಿದ್ದರು. ಆದರೆ ಆ ದಿನಗಳ ಈ ಅಭಿಪ್ರಾಯ ಇನ್ನೂ ಅವರ ಮನಸ್ಸಿನಿಂದ ಮಾಸಿದಂತೆ ಕಾಣುವುದಿಲ್ಲ. ಅನಂತರ ಅಲ್ಲಿ ಏನೆಲ್ಲ ನಡೆದಿದ್ದರೂ ಸೋವಿಯತ್ ಒಕ್ಕೂಟದ ಬಗ್ಗೆ ಇನ್ನೂ ಅವರು ಮೋಹವಾಂಛಿತರಾಗಿಯೇ ಇದ್ದಾರೆ. ಸೋವಿಯತ್ ಒಕ್ಕೂಟದ ಗುಣವಿಶೇಷಗಳ ಬಗ್ಗೆ ಅವರು ತುಂಬಾ ದಯಾಳು, ಆದರೆ ಅಲ್ಲಿನ ಪಾಪಕೃತ್ಯಗಳು-ಕ್ರೌರ್ಯ ಅಮಾನುಷತೆಗಳ ಬಗ್ಗೆ ಅವರು ಬಹುಮಟ್ಟಿಗೆ ಕುರುಡರು" ಎಂದು ಬರೆದಿದ್ದ ಈ ಟೀಕಾಕಾರರು ಸೋವಿಯತ್ ಒಕ್ಕೂಟ ಈ ಭೇಟಿಕಾಲದಲ್ಲಿ ಅವರನ್ನು ಮೋಹಪರವಶ-ವನ್ನಾಗಿಸುತ್ತದೆ ಎಂದು ಚಿಂತಾಕ್ರಾಂತರಾಗಿದ್ದರು.

ಮೇಲಿನ ಮಾತುಗಳು ಪಾಶ್ಚಾತ್ಯ ಉದಾರವಾದಿ ಪರ ಲೇಖಕರಾದ ಎ.ಡಿ. ಗೋರ್ವಾಲ ಅವರದು. ಭಾರತ, ಶೀತಲ ಸಮರದಲ್ಲಿ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಜೊತೆ ಪ್ರಬಲವಾದ ಮೈತ್ರಿ ಹೊಂದಿರಬೇಕೆಂದು ಈ ಲೇಖಕರಂತೆಯೇ ನಂಬಿದ್ದ ಭಾರತೀಯರೂ ಇದ್ದರು. ಆದರೆ ಅಮೆರಿಕದ ಬಗ್ಗೆ ಸಂಶಯಾತ್ಮಕ ದೃಷ್ಟಿ ಹೊಂದಿದ್ದ ಹಾಗೂ ಸೋವಿಯತ್‌ಪರ ಒಲವುಳ್ಳ ಭಾರತೀಯರು ಇವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇದಕ್ಕೆ ಒಂದು ಮುಖ್ಯ ಕಾರಣವಿತ್ತು. ಅದು: ಏಷ್ಯಾ ಮತ್ತು ಆಫ್ರಿಕಾಗಳಲ್ಲಿನ ತಮ್ಮ ರಾಜ್ಯಭಾರ ನಿಲ್ಲಿಸಿ ಅಲ್ಲಿಂದ ಹೊರಬರುವಂತೆ ತನ್ನ ಐರೋಪ್ಯ ಮಿತ್ರರಾಷ್ಟ್ರಗಳಿಗೆ ಹೇಳುವ ಮನಸ್ಸು ಅಮೆರಿಕಕ್ಕಿರಲಿಲ್ಲ. ಆದರೆ ರಷ್ಯನ್ನರು ಪದೇಪದೇ ವರ್ಣಭೇದ ನೀತಿ ಹಾಗೂ ವಸಾಹತುಶಾಹಿ ವಿರೋಧಿಸಿ ಮಾತನಾಡುತ್ತಿದ್ದರು.

ಶುರುವಿನಲ್ಲಿ ನೆಹರೂಗೆ ಶೀತಲಸಮರದಲ್ಲಿ ಯಾರ ಪರ ವಹಿಸುವ ಉಮೇದೂ ಇರಲಿಲ್ಲ. ಯಾರ ಪರ ಎಂಬುದನ್ನೇ ಅವರು ಇಷ್ಟಪಡುತ್ತಿರಲಿಲ್ಲ. ತಾವು ಯಾವ ಪರವೂ ಅಲ್ಲ ಎಂದು ತೋರಿಸಿಕೊಳ್ಳಲು ಅವರು ಹೆಣಗಾಡಿದ್ದುಂಟು. ಆದರೆ ಅವರು ಅನೇಕ ವೇಳೆ

ಹೇಳಿದಂತೆ ಅಲಿಪ್ತ ನೀತಿ ಒಂದು ಸಬೂಬು ಆಗಿರಲಿಲ್ಲ. ಅದಕ್ಕೊಂದು ನಿರ್ದಿಷ್ಟ ಹೊಣೆಗಾರಿಕೆಯಿತ್ತು. ಮೂರನೆಯ ಬಣವೊಂದು, ಬಲಿಷ್ಠ ರಾಷ್ಟ್ರಗಳ ದುರಹಂಕಾರವನ್ನು ತಗ್ಗಿಸುವಂಥ ಸತ್ಪ್ರಭಾವ ಬೀರಬಹುದು ಎಂಬುದು ಅವರ ಅಭಿಪ್ರಾಯವಾಗಿತ್ತು. ಈಗಾಗಲೇ 1947ರ ಏಷ್ಯಾ ಬಾಂಧವ್ಯ ಸಮ್ಮೇಳನವನ್ನು ಪ್ರಸ್ತಾಪಿಸಲಾಗಿದೆ. ನೆಹರೂ ಮಹತ್ವದ ಪಾತ್ರ ನಿರ್ವಹಿಸಿದಂಥ ಇಂಥದೇ ಇನ್ನೊಂದು ಪ್ರಯತ್ನವೆಂದರೆ 1955ರಲ್ಲಿ ಇಂಡೋನೇಷ್ಯಾದ ಬಾಂಡುಂಗ್ ನಗರದಲ್ಲಿ ನಡೆದ ಆಫ್ರೇಶ್ಯಾ ಸಮ್ಮೇಳನ.

ಸ್ವತಂತ್ರ ಸರ್ಕಾರಗಳಿರುವಂಥ ರಾಷ್ಟ್ರಗಳನ್ನು ಮಾತ್ರ ಬಾಂಡುಂಗ್ ಸಮ್ಮೇಳನಕ್ಕೆ ಆಮಂತ್ರಿಸಲಾಗಿತ್ತು. ಭಾರತ ಮತ್ತು ಚೈನಾ ಸೇರಿದಂತೆ ಇಪ್ಪತ್ತೊಂಬತ್ತು ರಾಷ್ಟ್ರಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ನಾಲ್ಕು ಆಫ್ರಿಕನ್ ರಾಷ್ಟ್ರಗಳೂ ಪ್ರತಿನಿಧಿಗಳನ್ನು ಕಳುಹಿಸಿದ್ದವು. ಉಳಿದ ಆಫ್ರಿಕನ್ ರಾಷ್ಟ್ರಗಳು ಇನ್ನೂ ವಸಾಹತು ನೊಗದಡಿಯೇ ಇದ್ದವು. ಇರಾನ್, ಇರಾಕ್, ಸೌದಿ ಅರೇಬಿಯಾ, ಸಿರಿಯಾಗಳೂ ಭಾಗವಹಿಸಿದ್ದವು. ಈ ಸಮ್ಮೇಳನ ವಸಾಹತುಶಾಹಿ ಅಂತ್ಯಕ್ಕೆ ಬದ್ಧವಾಗಿತ್ತು. ಸಮ್ಮೇಳನದಲ್ಲಿ ಆರ್ಥಿಕ ಮತ್ತು ಸಾಂಸ್ಕೃತಿಕ ಸಹಕಾರ ಕುರಿತು ಚರ್ಚಿಸಲಾಯಿತು. "ಏಷ್ಯಾ ಮತ್ತು ಆಫ್ರಿಕಾದ ಬಹುತೇಕ ಪ್ರದೇಶಗಳು ಇನ್ನೂ ವಿದೇಶಿ ಶೃಂಖಲೆಗಳಲ್ಲೇ ಇರುವಾಗ ವಸಾಹತುಶಾಹಿ ಅಂತ್ಯಗೊಂಡಿದೆಯೆಂದು ಹೇಗೆ ಹೇಳುವುದು?" ಎಂದು ಇಂಡೋನೇಷ್ಯಾದ ಅಧ್ಯಕ್ಷ ಸುಕರ್ಣೊ ಪ್ರಶ್ನಿಸಿದ್ದರು.

ಬಾಂಡುಂಗ್ ಸಮ್ಮೇಳನವನ್ನು ನೆಹರೂ ಒಂದು ದೊಡ್ಡ ಸಾಧನೆ ಎಂದೇ ಪರಿಗಣಿಸಿದ್ದರು. ಈ ಸಮ್ಮೇಳನ "ಪ್ರಪಂಚದ ವಿದ್ಯಮಾನಗಳಲ್ಲಿ ವಿಶ್ವದ ಅರ್ಧಕ್ಕೂ ಹೆಚ್ಚು ಜನಸಂಖ್ಯೆ ಒಂದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿರುವುದನ್ನು ಬಹಿರಂಗವಾಗಿ ಶ್ರುತಪಡಿಸಿದೆ. ಆದರೆ ಇದು ಯಾರ ಬಗ್ಗೆಯೂ ದ್ವೇಷ ಹೊಂದಿಲ್ಲ, ಯಾರಿಗೂ ಅಸಹಕಾರದ ಸವಾಲುಗಳನ್ನೊಡ್ಡಿಲ್ಲ" ಎಂದು ನೆಹರೂ ಭಾವಿಸಿದ್ದರು. ಸಮ್ಮೇಳನದಿಂದ ವಾಪಸಾದ ನಂತರ ಅವರು ಸಂಸತ್ತಿಗೆ ತಿಳಿಸಿದಂತೆ, ವಸಾಹತುಶಾಹಿಗಳು ಏಷ್ಯಾ ಮತ್ತು ಆಫ್ರಿಕನ್ ರಾಷ್ಟ್ರಗಳ ನಡುವಣ ಐತಿಹಾಸಿಕ ಸಂಬಂಧಗಳನ್ನು ಬೇರ್ಪಡಿಸಿದ್ದರು. ಆದರೆ ಈಗ ಸ್ವಾತಂತ್ರ್ಯೋದಯವಾದ ನಂತರ ಆ ಸಂಬಂಧಗಳನ್ನು ಪುನರುಜ್ಜೀವಗೊಳಿಸುವುದು, ಪುನರ್ದೃಢೀಕರಿಸುವುದು ಸಾಧ್ಯವಾಯಿತು.

ಬಾಂಡುಂಗ್ ಸಮ್ಮೇಳನ ಹಾಗೂ ಇಂಥವು ಸಾರಾಂಶದಲ್ಲಿ ಪಾಶ್ಚಾತ್ಯ ವಿರೋಧಿ ಎನ್ನುವ ಆಪಾದನೆಗೆ ಮೇಲಿನ ಮಾತುಗಳು ಉತ್ತರವಾಗಿದ್ದವು. ಅಲಿಪ್ತ ನೀತಿ, ವಾಸ್ತವದಲ್ಲಿ ಎಷ್ಟರ ಮಟ್ಟಿಗೆ ಅಲಿಪ್ತವಾಗಿತ್ತು? ಭಾರತದಲ್ಲಿ, 1956ರ ದ್ವಿತೀಯಾರ್ಧದಲ್ಲಿ ಅಲಿಪ್ತ ನೀತಿಯ ಆದರ್ಶಗಳು ತೀವ್ರ ಪರೀಕ್ಷೆಗೊಳಪಟ್ಟವು. ಆ ವರ್ಷ ಜುಲೈನಲ್ಲಿ ಗಮಾಲ್ ಅಬ್ದುಲ್ ನಾಸೆರ್ ಅವರು ಸೂಯೆಜ್ ಕಾಲುವೆಯ ಆಡಳಿತ ನಿರ್ವಹಣೆಯ ಹೊಣೆ ಹೊತ್ತಿದ್ದ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಿದರು. ಇದರಿಂದ ಬ್ರಿಟನ್ನಿನ ಯುದ್ಧೋಪಾಯ

ಆಯಕಟ್ಟು ಹಿತಕ್ಕೆ ಧಕ್ಕೆಯಾಗಿತ್ತು. ಹೀಗಾಗಿ ಬ್ರಿಟನ್ ಸೂಯೆಜ್ ಕಾಲುವೆ ಅಂತರರಾಷ್ಟ್ರೀಯ ಹತೋಟಿಗೆ ಒಳಪಡಬೇಕೆಂದು ಆಗ್ರಹಪಡಿಸಿತು. ಉಭಯ ಪಕ್ಷಗಳನ್ನು ಬಲ್ಲವರಾಗಿದ್ದ ನೆಹರೂ ಮಧ್ಯಸ್ಥಿಕೆ ವಹಿಸಲು ಮುಂದಾದರು. ಆದರೆ ಇದರಲ್ಲಿ ಅವರು ವಿಫಲರಾದರು. ಆಖೈರಾಗಿ, ಅಕ್ಟೋಬರಿನಲ್ಲಿ ಬ್ರಿಟನ್, ಫ್ರೆಂಚ್ ಮತ್ತು ಇಸ್ರೇಲಿಗಳ ಜೊತೆಗೂಡಿ ಈಜಿಪ್ಟ್ ಮೇಲೆ ಮಿಲಿಟರಿ ಆಕ್ರಮಣ ನಡೆಸಿತು. ಈ ನವವಸಾಹತುಶಾಹಿ ಆಕ್ರಮಣ ವಿಶ್ವವ್ಯಾಪಿ ಖಂಡನೆಗಳೊಗಾಯಿತು. ಅಂತಿಮವಾಗಿ ಅಮೆರಿಕ ಒತ್ತಡಕ್ಕೆ ಮಣಿದು ಆಂಗ್ಲೋ ಫ್ರೆಂಚ್ ಮಿತ್ರರು ಆಕ್ರಮಣ ತೆರವು ಮಾಡಬೇಕಾಯಿತು.

ಈಜಿಪ್ಟ್ ಮೇಲಿನ ಆಕ್ರಮಣದ ಬೆನ್ನಿಗೇ ಬುಡಾಪೆಸ್ಟ್‌ನೊಳಕ್ಕೆ ಸೋವಿಯತ್ ಟ್ಯಾಂಕುಗಳು ನುಗ್ಗಿದ ಆಕ್ರಮಣ ನಡೆಯಿತು. ಇದರ ನಂತರ ಅಲ್ಲಿ ಜನ ದಂಗೆ ಎದ್ದು ಸೋವಿಯತ್ ಹಂಗಿನ ಆಡಳಿತವನ್ನು ಕಿತ್ತುಹಾಕಿ ಪ್ರಾತಿನಿಧ್ಯ ಸರ್ಕಾರವನ್ನು ತಂದರು. ಯಥಾಸ್ಥಿತಿ ಮುಂದುವರಿಸಲು ಮಾಸ್ಕೋ ಅತ್ಯಂತ ಕ್ರೂರವಾಗಿ ವರ್ತಿಸಿತು. ಮಧ್ಯಪ್ರಾಚ್ಯದಲ್ಲಿ ಬ್ರಿಟಿಷರು-ಫ್ರೆಂಚರು ನಡೆಸಿದಂತೆ ಸೋವಿಯತ್ ಒಕ್ಕೂಟ ಬುಡಾಪೆಸ್ಟ್‌ನಲ್ಲಿ ನಡೆಸಿದ ಆಕ್ರಮಣವನ್ನೂ ರಾಷ್ಟ್ರೀಯ ಸಾರ್ವಭೌಮತ್ವದ ಉಲ್ಲಂಘನೆ ಎಂದೇ ಪರಿಗಣಿಸಲಾಯಿತು.

ಈಜಿಪ್ಟ್ ಮತ್ತು ಹಂಗರಿ ಮೇಲಿನ ಆಕ್ರಮಣಗಳನ್ನು ಭಾರತೀಯರು ಹೋಲಿಸಿ ನೋಡಿದರು. ಈ ಎರಡೂ ಆಕ್ರಮಣಗಳನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಗಿಟ್ಟಿಸಿಕೊಂಡಿರುವ ಬಲಿಷ್ಠ ರಾಷ್ಟ್ರಗಳು ನಡೆಸಿದ ಅಂತರರಾಷ್ಟ್ರೀಯ ಡಕಾಯಿತಿ ಎಂದೇ ಭಾವಿಸಲಾಯಿತು. ವಿಶ್ವಾದ್ಯಂತ ಇವು ಸಿನಿಕತೆಯ ಪ್ರದರ್ಶನಕ್ಕೆಡೆ ಮಾಡಿಕೊಟ್ಟವು. ಮದರಾಸಿನ ನಿಯತಕಾಲಿಕವೊಂದು ಬರೆದಂತೆ, ಈಜಿಪ್ಟಿನ ಸ್ವಾತಂತ್ರ್ಯ ಬ್ರಿಟನ್ ಮತ್ತು ಫ್ರಾನ್ಸ್‌ಗಳ ತೈಲ ಸಂಪನ್ಮೂಲಕ್ಕೆ ಬೆದರಿಕೆಯಾಗಿ ಪರಿಣಮಿಸಿದ್ದರೆ, ಹಂಗರಿಯ ಸ್ವಾತಂತ್ರ್ಯ ಕೆಂಪು ಸೇನೆಯನ್ನು ಬಲಿಷ್ಠವಾಗಿ ಉಳಿಸಿಕೊಳ್ಳಲು ಅಗತ್ಯವಾದ ಯುರೇನಿಯಂ ಸರಬರಾಜಿಗೆ ಧಕ್ಕೆ ತರಬಹುದು ಎಂದು ಭಾವಿಸಲಾಯಿತು. ಜೊತೆಗೆ ಇದರಿಂದ ಸೋವಿಯತ್ ಒಕ್ಕೂಟದಲ್ಲಿ ಅಪಾಯಕಾರಿ ಬಿರುಕುಂಟಾಗಬಹುದೆಂಬ ಭೀತಿಯೂ ಉದ್ಭವಿಸಿತು. ಮೊದಲನೆಯದನ್ನು ಖಂಡಿತವಾಗಿ ಲಂಡನ್ ಒಪ್ಪುವುದಿಲ್ಲ, ಎರಡನೆಯದನ್ನು ಮಾಸ್ಕೋ ಸಹಿಸುವುದಿಲ್ಲ. ಹೀಗಾಗಿ ಮೃಗೀಯ ಪ್ರವೃತ್ತಿಯನ್ನು ಬಿಂಬಿಸುವ ನಗ್ನ ಆಕ್ರಮಣ.

ನೆಹರೂ, ಆಂಗ್ಲೋ-ಫ್ರೆಂಚ್ ಅತಿಕ್ರಮಣವನ್ನು ಕೂಡಲೇ ಖಂಡಿಸಿದ್ದರು. ಆದರೆ ಇದೇ ವೇಳೆಗೆ, ಹಂಗರಿಯ ಗಡಿ ಪ್ರದೇಶದಿಂದ ಸೇನೆಯನ್ನು ವಾಪಸು ಕರೆಸಿಕೊಳ್ಳುವಂತೆ ಸೋವಿಯತ್ ಒಕ್ಕೂಟಕ್ಕೆ ಕರೆ ನೀಡುವ ನಿರ್ಣಯವನ್ನು ಚರ್ಚಿಸಲು ವಿಶ್ವ ಸಂಸ್ಥೆ ಸಮಾವೇಶಗೊಂಡಿತ್ತು. ವಿ.ಕೆ. ಕೃಷ್ಣ ಮೆನನ್ ಅವರು ಪ್ರತಿನಿಧಿಯಾಗಿದ್ದ ಭಾರತ ಈ ಸಭೆಯ ಮತದಾನದಲ್ಲಿ ಭಾಗವಹಿಸಲಿಲ್ಲ. ಇದು ಪಾಶ್ಚಾತ್ಯ ಪ್ರಪಂಚದಲ್ಲಿ ತೀವ್ರ ಪ್ರತಿಭಟನೆ, ವಿರೋಧಗಳಿಗೆ ಗುರಿಯಾಯಿತು. ಹಾಗೂ ಇದರಿಂದ ಭಾರತ ಸರ್ಕಾರ ಇಬ್ಬಗೆಯ ನೀತಿ ಅನುಸರಿಸುತ್ತಿದೆ ಎಂಬ ಮಾತು ಜಗಜ್ಜಾಹೀರಾಯಿತು.

ಭಾರತದ ನಿಲುವಿನ ಬಗ್ಗೆ ದೇಶದೊಳಗೂ ತುಂಬ ಟೀಕೆಗಳು ಕೇಳಿಬಂದವು. ಸಂಸತ್ತಿನಲ್ಲಿ ಬಿಸಿಬಿಸಿ ಚರ್ಚೆಯಾಯಿತು. "ಸೋವಿಯತ್ ಆಡಳಿತಗಾರರಿಗೆ ನಮ್ಮ ನಾಚಿಕೆಗೆಟ್ಟ ಛಟ್ಟಂಗಿತನ" ಎಂದು ಪತ್ರಿಕೆಗಳು ಖಂಡಿಸಿದವು. "ರಷ್ಯಕ್ಕೆ ಗುಲಾಮಿಯಂತೆ ನಡೆದುಕೊಳ್ಳುವ ಮೂಲಕ ನಮ್ಮ ನೈತಿಕ ಯೋಗ್ಯತೆಯನ್ನೇ ಕಳೆದುಕೊಂಡಿದ್ದೇವೆ" ಎಂದು ಪತ್ರಕರ್ತರೊಬ್ಬರು ಬರೆದರು. ಕಾಶ್ಮೀರದ ಮೇಲಿನ ತನ್ನ ಹಿಡಿತದ ಅನಿಶ್ಚಿತತೆಯೂ ಸರ್ಕಾರದ ಈ ನಿಲುವಿಗೆ ಕಾರಣವಿದ್ದೀತು. ಏಕೆಂದರೆ, ಹಂಗರಿಯಲ್ಲಿ ಅಂತರರಾಷ್ಟ್ರೀಯ ಮೇಲುಸ್ತುವಾರಿಯಲ್ಲಿ ಜನಮತಗಣನೆ ನಡೆಯಬೇಕೆಂದು ಕೇಳುವ ನಿರ್ಣಯವೊಂದು ವಿಶ್ವಸಂಸ್ಥೆಯ ಮುಂದಿದ್ದು ಭಾರತ ಈ ನಿರ್ಣಯದ ಮೇಲಿನ ಮತದಾನದಲ್ಲಿ ಭಾಗವಹಿಸಿರಲಿಲ್ಲ.

ಸೋವಿಯತ್ ಆಕ್ರಮಣದಿಂದ ನೆಹರೂ ತೀವ್ರ ಅಸಮಾಧಾನ ಹೊಂದಿದ್ದರೆಂದು ನಂತರ ತಿಳಿದುಬಂತು. ಸೇನೆ ವಾಪಸು ಕರೆಸಿಕೊಳ್ಳುವಂತೆ ಒತ್ತಾಯಪಡಿಸಿ ಅವರು ಸೋವಿಯತ್ ನಾಯಕರುಗಳಿಗೆ ಖಾಸಗಿಯಾಗಿ ಪತ್ರಗಳನ್ನು ಬರೆದಿದ್ದರು. ಇದಾದ ನಂತರ ಭಾರತ ಬಹಿರಂಗವಾಗಿಯೂ ರಷ್ಯದ ಆಕ್ರಮಣವನ್ನು ಖಂಡಿಸಿತ್ತು. ಆದರೆ ಇದು ವಿಳಂಬಿತ ಕ್ರಮವಾಗಿತ್ತು. ಆ ವೇಳೆಗೆ ಭಾರತದ ಮಾನಕ್ಕೆ ಮುಕ್ಕಾಗಿತ್ತು.

ಹಂಗರಿ ಕುರಿತ ಅಧ್ವಾನದಿಂದಾಗಿ ನೆಹರೂ ಅವರ ಅಂತರರಾಷ್ಟ್ರೀಯ ವಿಶ್ವಾಸಾರ್ಹತೆಗೆ ಕುಂದುಂಟಾಗಿತ್ತು. ಅಲಿಪ್ತ ನೀತಿಯೆಂದರೆ, "ಪಶ್ಚಿಮ ರಾಷ್ಟ್ರಗಳನ್ನು ಅವು ತಪ್ಪು ಮಾಡಿದಾಗ ತೀವ್ರವಾಗಿ ಖಂಡಿಸುವುದು, ಅದೇ ಸೋವಿಯತ್ ಬಣ ತಪ್ಪುಮಾಡಿದಾಗ ದ್ವಂದ್ವಾರ್ಥದಲ್ಲಿ ಮಾತನಾಡುವುದು, ಸಂದಿಗ್ಧವಾಗಿ ಮಾತನಾಡುವುದು ಎಂದಷ್ಟೇ ಅರ್ಥ" ಎಂದು ಆಡಿಕೊಳ್ಳುವಂತಾಯಿತು. ಈ ಹಗರಣದಿಂದಾಗಿ, ಪ್ರಧಾನಮಂತ್ರಿಯವರು ರಾಷ್ಟ್ರೀಯ ಉದ್ದೇಶಗಳಿಗಿಂತ ವೈಯಕ್ತಿಕ ನಿಷ್ಠೆಯ ಪ್ರದರ್ಶನಕ್ಕೇ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ ಎನ್ನುವಂತಾಗಿದೆ ಎಂಬ ಮಾತುಗಳೂ ಕೇಳಿಬಂದವು. ಏಕೆಂದರೆ ನೆಹರೂ ಖಾಸಗಿಯಾಗಿ ಕೃಷ್ಣ ಮೆನನ್ ವರ್ತನೆಯನ್ನು ಖಂಡಿಸಿದ್ದರು. ಆದರೆ ಸಾರ್ವಜನಿಕವಾಗಿ ಅವರನ್ನು ಬೆಂಬಲಿಸಿದ್ದರು.

ಕೃಷ್ಣ ಮೆನನ್ ನೆಹರೂ ಅವರ ಹಳೆಯ ಮಿತ್ರರು, ಹಾಗೂ ಅವರದೇ ವೈಖರಿಯಲ್ಲಿ ಅದ್ಭುತವಾದ ವ್ಯಕ್ತಿಯಾಗಿದ್ದರು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದ ಮೆನನ್ ಪೆಂಗ್ವಿನ್ ಪ್ರಕಾಶನ ಸಂಸ್ಥೆಯ ಕಥಾಸಾಹಿತ್ಯೇತರ ಪ್ರಕಟಣ ವಿಭಾಗ ಪೆಲಿಕಾನ್ ಬುಕ್ಸ್‌ನ ಪ್ರಥಮ ಸಂಪಾದಕರಾಗಿದ್ದರು. 1930ರಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಬೆಂಬಲ ಪಡೆಯಲು ತುಂಬಾ ಶ್ರಮಿಸಿದ್ದರು. ಅಲ್ಲದೆ ಅವರು ನೆಹರೂ ಅವರ ಅನಧಿಕೃತ ವಕ್ತಾರರಾಗಿ, ಲಿಟರರಿ ಏಜೆಂಟ್ ಆಗಿಯೂ ಕೆಲಸ ಮಾಡಿದ್ದರು. ಸ್ವಾತಂತ್ರ್ಯ ಬಂದನಂತರ ಅವರನ್ನು ಲಂಡನ್ನಿನಲ್ಲಿ ಭಾರತದ ಹೈಕಮಿಷನರಾಗಿ ನೇಮಿಸಲಾಯಿತು. ಇಲ್ಲಿ ಅವರು ಬಹಳ ಕಷ್ಟಪಟ್ಟು ದುಡಿದರು. ಹಾಗೆಯೇ ತಾವು ಪ್ರಧಾನ ಮಂತ್ರಿಯ ಮಿತ್ರರು ಎಂದು ಪದೇ ಪದೇ ಜಾಹೀರು ಪಡಿಸುವ ಮೂಲಕ, ತಮ್ಮ ಅಹಂಕಾರದ ವರ್ತನೆಗಳ ಮೂಲಕ ಶತ್ರುಗಳನ್ನೂ ಸಂಪಾದಿಸಿಕೊಂಡಿದ್ದರು.

ಲಂಡನ್ನಿನಿಂದ ವಾಪಸಾದ ನಂತರ ಕೃಷ್ಣ ಮೆನನ್ನರನ್ನು ಖಾತೆ ರಹಿತ ಸಂಪುಟ ಸಚಿವರನ್ನಾಗಿ ನೇಮಿಸಲಾಯಿತು. ಇವರು ಒಂದು ರೀತಿ ಭಾರತದ ಸಂಚಾರಿ ರಾಯಭಾರಿಯಾದರು. ವಿಶ್ವಸಂಸ್ಥೆಯಲ್ಲಿ ಹಾಗೂ ಜಿನೀವಾದಲ್ಲಿ ನಡೆದ ನಿಶ್ಶಸ್ತ್ರೀಕರಣ ಸಭೆಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ತಮ್ಮದೇ ಆದ ಪ್ರಬಲ ಅಭಿಪ್ರಾಯಗಳನ್ನು ಹೊಂದಿದ್ದ ಕೃಷ್ಣ ಮೆನನ್ ಭಾರತದ ಒಳಗೆ, ಹೊರಗೆ ವಿವಾದಾತ್ಮಕ ವ್ಯಕ್ತಿಯಾಗಿದ್ದರು. ಅವರ ತೀಕ್ಷ್ಣ, ನಿಚ್ಚಳ ಬುದ್ಧಿಮತ್ತೆ ಕೆಲವೊಮ್ಮೆ ಭಾವಾವೇಶ-ಪ್ರತಿಭಟನೆಗಳಿಂದ ಕೂಡಿರುತ್ತಿತ್ತು ಎಂದು ಮೆನನ್ನರನ್ನು ನಿಕಟವಾಗಿ ಅರಿತಿದ್ದ ಪತ್ರಕರ್ತರೊಬ್ಬರು ಬರೆದದ್ದುಂಟು. ಅವರ ಬೇಕು-ಬೇಡಗಳು, ಇಷ್ಟ-ಅನಿಷ್ಟಗಳು ಕೆಲವೊಮ್ಮೆ ಆಸ್ಥಾನದಲ್ಲಿರುವವರಿಗೆ ಕ್ಷೇಮಕರವಲ್ಲ ಎನ್ನುವಷ್ಟು ಪ್ರಬಲವಾಗಿರುತ್ತಿದ್ದವು. ಬಿರುಗಾಳಿಯನ್ನೇ ಹಾಸಿ ಹೊದ್ದುಕೊಂಡು, ವಿವಾದಗಳ ಗಾಳಿ ಎಬ್ಬಿಸುತ್ತಿದ್ದ ಇಂಥ ವ್ಯಕ್ತಿಯನ್ನು ಸೂಕ್ಷ್ಮಾತಿಸೂಕ್ಷ್ಮವಾದ ರಾಯಭಾರ ಕೆಲಸಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದದ್ದು ವಿಚಿತ್ರವೇ ಸರಿ ಎಂದು ಈ ಪತ್ರಕರ್ತರು ಟೀಕಿಸಿದ್ದರು.

ಹಂಗರಿ ಹಗರಣಕ್ಕೆ ಮೊದಲೇ, ಪ್ರಧಾನಮಂತ್ರಿಗಳು ಕೃಷ್ಣ ಮೆನನ್ ಅವರನ್ನು ಹೆಚ್ಚಾಗಿ ಅವಲಂಬಿಸುತ್ತಿದ್ದಾರೆಂಬ ಮಾತುಗಳು ಕೇಳಿಬಂದಿದ್ದವು. ನೆಹರೂ ಅವರ ಕಮ್ಯುನಿಸ್ಟ್ ಪರ ಒಲವುಗಳಿಂದಾಗಿ ಕಾಂಗ್ರೆಸ್ಸಿನೊಳಗೇ ಅಸಂತುಷ್ಟರಾದ ಮಂದಿ ಇದ್ದರು. ಪಾಶ್ಚಾತ್ಯ ಪತ್ರಿಕೆಗಳಂತೂ ಪ್ರೀತಿಯಿಂದಲೇ ಅವರ ಬಗ್ಗೆ ಹಗೆತನ ಸಾಧಿಸುತ್ತಿದ್ದವು. "ಇಂಥ ಕನಿಷ್ಠ ಜಾಕಚಕ್ಯತೆಯೂ ಇಲ್ಲದ ರಾಜ ತಂತ್ರಜ್ಞರಿಂದಾಗಿ", "ಸ್ನೇಹ ವಿಶ್ವಾಸಗಳ ಕೊರತೆ ಎದ್ದು ಕಾಣುತ್ತದೆ" ಎಂದು ನ್ಯೂಯಾರ್ಕ್ ಪತ್ರಿಕೆಯೊಂದು ನೆಹರೂ ಬಗ್ಗೆ ಬರೆದಿತ್ತು.

ಆದರೆ ನೆಹರೂ, ಕೃಷ್ಣ ಮೆನನ್ನರನ್ನು ಬಿಡಲಿಲ್ಲ, ಅವರನ್ನು ಬೆಂಬಲಿಸಿದ್ದರು. 1953ರರಷ್ಟು ಮುಂಚಿತವಾಗಿಯೇ, "ತಮ್ಮ ನೆಚ್ಚಿನ ರಾಜತಂತ್ರಜ್ಞ ಕೃಷ್ಣ ಮೆನನ್ನರನ್ನು ಯಾರಾದರೂ ಟೀಕಿಸಿದಾಗ ಪ್ರಧಾನಮಂತ್ರಿಗಳು ಬೇಸರಗೊಳ್ಳುತ್ತಾರೆ" ಎಂಬ ಮಾತು ದೆಹಲಿಯಲ್ಲಿ ಜನಜನಿತವಾಗಿತ್ತು. ಈ ಕುರುಡು ವ್ಯಾಮೋಹದಿಂದಾಗಿ 1956ರಲ್ಲಿ ಹಂಗರಿ ಪ್ರಕರಣದಲ್ಲಿ ನೆಹರೂ ದುಬಾರಿ ಬೆಲೆಯನ್ನೇ ತೆರಬೇಕಾಯಿತು. ಆದಾಗ್ಯೂ ನೆಹರೂ ಮೆನನ್ನರ ಕೈ ಬಿಡಲಿಲ್ಲ. ಏಕೆ? ಆ ಕಾಲದಲ್ಲಿ ಸ್ವೀಡನ್ನಿನಲ್ಲಿ ಭಾರತದ ರಾಯಭಾರಿಯಾಗಿದ್ದ, ನೆಹರೂ ಅವರನ್ನು ನಿಕಟವಾಗಿ ಬಲ್ಲವರಾಗಿದ್ದ ಆಲ್ವಾ ಮಿರ್ಡಾಲ್ ಈ ಪ್ರಶ್ನೆಗೆ ಉತ್ತರ ನೀಡಿದ್ದಾರೆ: "ಪ್ರಧಾನ ಮಂತ್ರಿಯವರಿಗೆ ಕೃಷ್ಣ ಮೆನನ್ನರ ನ್ಯೂನತೆಗಳೇನೆಂಬುದು ತಿಳಿದಿತ್ತು. ಆದರೆ ಅವರ ತೀಕ್ಷ್ಣ ಬುದ್ಧಿಮತ್ತೆಯಿಂದಾಗಿ ನೆಹರೂ ಮೆನನ್ನರ ಮಾತುಗಳಿಗೆ ಕಿವಿಗೊಡುತ್ತಿದ್ದರು. ಕೃಷ್ಣ ಮೆನನ್ ನೆಹರೂ ಸರ್ಕಾರದ ಏಕೈಕ ಅಪ್ಪಟ ಬುದ್ಧಿಮತ್ತೆಯ ಪ್ರಭಾವಳಿಯಾಗಿದ್ದರು. ಇವರೊಬ್ಬರೊಂದಿಗೆ ಮಾತ್ರ ನೆಹರೂಗೆ ಮಾರ್ಕ್ಸ್ ಮತ್ತು ಮಿಲ್, ಡಿಕನ್ಸ್ ಮತ್ತು ಡಾಸ್ಟೋವಸ್ಕಿಯವರುಗಳನ್ನು ಚರ್ಚಿಸುವುದು ಸಾಧ್ಯವಿತ್ತು."

V

ನಾವೀಗ, ಅತಿಹೆಚ್ಚು ಜನನಿಬಿಡ ನೆರೆರಾಷ್ಟ್ರವಾದ ಚೈನಾದ ಜೊತೆ ಭಾರತದ ಬಾಂಧವ್ಯದತ್ತ ನೋಟ ಹರಿಸೋಣ. ಈ ಎರಡು ನಾಗರಿಕತೆಗಳೂ ಸುದೀರ್ಘವಾದ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿವೆ. ಇತ್ತೀಚೆಗೆ ಇವೆರಡೂ ಐರೋಪ್ಯ ಪ್ರಾಬಲ್ಯದ ವಿರುದ್ಧ ಸೆಣಸಾಡಿವೆ. ಒಂದರ ಹೋರಾಟವನ್ನು ಮತ್ತೊಂದು ಆಸಕ್ತಿಯಿಂದ ಗಮನಿಸಿದೆ. ಕೊಮಿಂಟಾಂಗ್ ನಾಯಕ ಚಿಯಾಂಗ್ ಕೈ ಶೇಕ್ ಬಗ್ಗೆ ಕಾಂಗ್ರೆಸ್ ಹಾಗೂ ನೆಹರೂಗೆ ಅಪಾರ ಗೌರವ. ಭಾರತಕ್ಕೆ ಸ್ವಾತಂತ್ರ್ಯ ನೀಡುವ ಬಗ್ಗೆ ಚಿಯಾಂಗ್ ಕೈ ಶೇಕ್ ಅಮೆರಿಕದ ಮೇಲೆ ಒತ್ತಡ ಹೇರಿದ್ದರು. ಅಮೆರಿಕ ಬ್ರಿಟನ್ನಿನ ಮೇಲೆ ಒತ್ತಡ ಹೇರಿತು.

1949ರಲ್ಲಿ ಕಮ್ಯುನಿಸ್ಟರು ಕೊಮಿಂಟಾಂಗ್ ನಾಯಕನನ್ನು ಪದಚ್ಯುತಿಗೊಳಿಸಿದರು. ಭಾರತ-ಚೈನಾ ಬಾಂಧವ್ಯ ಮುಂದೆ ಹೇಗಿರಬೇಕು? ಬಾಂಧವ್ಯ ಮುಂದುವರಿಕೆ ಸೂಚಿಯಾಗಿ ಇತಿಹಾಸಕಾರ ಕೆ.ಎಂ. ಪಣಿಕ್ಕರ್ ಅವರನ್ನು ಬೀಜಿಂಗ್‌ನಲ್ಲಿ ಭಾರತದ ರಾಯಭಾರಿಯಾಗಿ ಮುಂದುವರಿಸಲಾಯಿತು. 1950 ಮೇ ತಿಂಗಳಿನಲ್ಲಿ ಪಣಿಕ್ಕರ್ ಅವರಿಗೆ ಮಾವೋತ್ಸೆ ತುಂಗ್ ಸಂದರ್ಶನ ನೀಡಿದರು. ಈ ಭೇಟಿಯಿಂದ ಪಣಿಕ್ಕರ್ ಪ್ರಭಾವಿತರಾದರು. "ಮಾವೋ ದೃಷ್ಟಿ ಅಪ್ಯಾಯಮಾನಕರವಾಗಿತ್ತು. ಅವರ ಕಣ್ಣುಗಳು ದಯೆ, ಕರುಣೆಗಳನ್ನು ಸೂಸುತ್ತಿದ್ದವು. ಅವರ ನೋಟದಲ್ಲಾಗಲೀ ಮಾತಿನಲ್ಲಾಗಲೀ ಕ್ರೌರ್ಯ ಅಥವಾ ದ್ವೇಷಭಾವ ಇರಲಿಲ್ಲ" ಎಂದು ಪಣಿಕ್ಕರ್ ನಂತರ ಸ್ಮರಿಸಿದ್ದಾರೆ. "ಅವರಲ್ಲಿ ನಾನು ಒಬ್ಬ ದಾರ್ಶನಿಕನ, ಸ್ಥಿತಪ್ರಜ್ಞನ ಮನೋಮುದ್ರೆ ಕಂಡೆ. ತತ್ವಸಿದ್ಧಾಂತಿಯ ಭಾವನೆಯನ್ನು ನನ್ನಲ್ಲಿ ಅವರು ಮೂಡಿಸಿದ್ದರು. ಕೊಂಚ ಕನಸುಗಾರನಂತೆ ಕಂಡರೂ ಆತ್ಮಜ್ಞಾನಿಯಾಗಿದ್ದರು."

ಈ ಚೀನೀ ನಾಯಕರು ಅನೇಕ ಕಷ್ಟನಷ್ಟ ನೋವುಗಳನ್ನು ಕಂಡಿದ್ದರು, ಅನುಭವಿಸಿದ್ದರು; ಸಹಿಸಿಕೊಂಡಿದ್ದರು. ಆದಾಗ್ಯೂ ಅವರ ಮುಖದಲ್ಲಿ ಕಹಿಭಾವನೆಗಳಿರಲಿಲ್ಲ; ಕ್ರೌರ್ಯವಾಗಲೀ ಅಥವಾ ದುಃಖ ವಿಷಾದಗಳಾಗಲೀ ಇರಲಿಲ್ಲ. ಮಾವೋ ಅವರನ್ನು ಕಂಡಾಗ ಪಣಿಕ್ಕರ್ ಅವರಿಗೆ ತಮ್ಮ ಬಾಸ್ ನೆಹರೂ ನೆನಪಾದರಂತೆ. ಏಕೆಂದರೆ, ಇಬ್ಬರೂ ಕರ್ಮಯೋಗಿಗಳು, ಕನಸುಗಾರರು ಮತ್ತು ಆದರ್ಶ ಮನೋಭಾವದವರಾಗಿದ್ದರು. ಹಾಗೂ ಇಬ್ಬರನ್ನೂ, ಮಾನವೀಯತೆಯ ವಿಶಾಲ ಅರ್ಥದಲ್ಲಿ ಮಾನವತಾವಾದಿಗಳೆಂದೇ ಕರೆಯಬಹುದು.

ಮೇಲಿನ ಮಾತುಗಳನ್ನು ಹಗುರವಾಗಿ ಕಾಣುವಂತಿಲ್ಲ, ಏಕೆಂದರೆ ಅವು ಗಂಭೀರ ಸ್ವರೂಪದವೇ ಆಗಿವೆ. ಬುದ್ಧಿಜೀವಿಗಳಿಗೆ ಅಧಿಕಾರಶಕ್ತಿ ಹೊಂದಿರುವವರ ಬಗ್ಗೆ ವಿಚಿತ್ರವಾದ ಆಕರ್ಷಣೆ ಇರುತ್ತದೆ. ಜಾರ್ಜ್ ಬರ್ನಾರ್ಡ್ ಷಾ ಲೆನಿನ್ ಬಗ್ಗೆ ಹೆಚ್ಚು ಕಡಿಮೆ ಹೀಗೇ ಬರೆದಿದ್ದರು. ಷಾ ಯಾವುದೇ ಬಣಕ್ಕೂ ಒಳಪಡದ ಸ್ವಂತ ಹೊಣೆಗಾರರಾದ ಲೇಖಕರು. ಆದರೆ ಪಣಿಕ್ಕರ್ ಆದರೋ ತಮ್ಮ ಸರ್ಕಾರದ ಪ್ರತಿನಿಧಿಗಳು. ಅವರ ಮಾತಿಗೆ, ಅವರ ದರ್ಶನಕ್ಕೆ ಅದರದೇ ಆದ ತೂಕವಿರುತ್ತದೆ. ಆದರೆ ಇಲ್ಲಿ ಪಣಿಕ್ಕರ್ ಅವರು ಇತಿಹಾಸದ

ಅತಿಕ್ರೂರ ಸರ್ವಾಧಿಕಾರಿಯೊಬ್ಬನನ್ನು ಕನಸುಗಾರ, ಮೃದು, ಕವಿಹೃದಯದ ವ್ಯಕ್ತಿ ಎಂಬಂತೆ ಬಣ್ಣಿಸಿದ್ದಾರೆ.

1950ರ ಅಕ್ಟೋಬರಿನಲ್ಲಿ, ಮಾವೋ ಪಣಿಕ್ಕರ್ ಅವರನ್ನು ಭೇಟಿ ಮಾಡಿದ ಕೆಲವೇ ತಿಂಗಳುಗಳ ಅಂತರದಲ್ಲಿ ಚೈನಾ ಆಕ್ರಮಣ ನಡೆಸಿ ಟಿಬೇಟನ್ನು ವಶಪಡಿಸಿಕೊಂಡಿತು. ಟಿಬೆಟ್ ಮೇಲೆ ತಮಗೆ ಅಧಿಪತ್ಯವಿದೆಯೆಂದು ಚೀನೀಯರು ಬಹಳ ಕಾಲದಿಂದ ಹೇಳಿಕೊಳ್ಳುತ್ತಿದ್ದರು ಹಾಗೂ ಅನೇಕ ಬಾರಿ ಅದರ ಮೇಲೆ ಹತೋಟಿ ಚಲಾಯಿಸಿದ್ದೂ ಉಂಟು. ಆದರೆ ಟಿಬೆಟ್ ಸಹ ಸುದೀರ್ಘಕಾಲ ನಿಜವಾದ ಸ್ವತಂತ್ರ ರಾಷ್ಟ್ರವಾಗಿತ್ತು. ಕಮ್ಯುನಿಸ್ಟರ ಆಕ್ರಮಣಕ್ಕೆ ನಾಲ್ಕು ದಶಕಗಳಷ್ಟು ಹಿಂದೆ ಇದ್ದಂತೆ ಸ್ವತಂತ್ರವಾಗಿತ್ತು, ಸ್ವಾಯತ್ತವಾಗಿತ್ತು. 1947ರಲ್ಲಿ ನಡೆದ ಏಷ್ಯಾ ಬಾಂಧವ್ಯ ಸಮ್ಮೇಳನಕ್ಕೆ ಚೈನಾ ಮತ್ತು ಟಿಬೆಟ್ ಪ್ರತ್ಯೇಕವಾದ, ಸ್ವತಂತ್ರ ನಿಯೋಗಗಳನ್ನು ಕಳುಹಿಸಿದ್ದವು.

ನೆಹರೂ ಈಗ ಅಸೂಯಾಜನಕವಲ್ಲದ ಸ್ಥಿತಿಯಲ್ಲಿದ್ದರು. ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಭಾರತ ಟಿಬೆಟ್‌ನೊಂದಿಗೆ ನಿಕಟ ಬಾಂಧವ್ಯ ಹೊಂದಿತ್ತು. ಆದರೆ ಹೊಸದಾಗಿ ಸ್ವತಂತ್ರಗೊಂಡ ಭಾರತ ಟಿಬೆಟ್ ಪರವಾಗಿ ಯುದ್ಧರಂಗಕ್ಕಿಳಿಯುವ ಸ್ಥಿತಿಯಲ್ಲಿರಲಿಲ್ಲ. ಚೀನೀ ಮಿಲಿಟರಿ ಕಾರ್ಯಾಚರಣೆಯ ಕೆಲವು ವಾರಗಳ ನಂತರ ಸಂಸತ್ತಿನಲ್ಲಿ ಮಾತನಾಡುತ್ತಾ, ನೆಹರೂ ವಿವಾದ ಶಾಂತಿಯುತವಾಗಿ ಬಗೆಹರಿಯುವುದೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಚೈನಾ, ಟಿಬೆಟ್ ಮೇಲೆ ಚಾರಿತ್ರಿಕವಾಗಿ ಅಧಿಪತ್ಯ ನಡೆಸಿದ್ದನ್ನು ತಾವು ನಂಬುವುದಾದರೂ ಅದು ಟಿಬೆಟ್ ಮೇಲಿನ ಸಾರ್ವಭೌಮತ್ವವಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರು. ಟಿಬೆಟ್, ಯಾವ ರೀತಿಯಲ್ಲೂ ಚೈನಾಕ್ಕೆ ಬೆದರಿಕೆಯಲ್ಲವೆಂದು ತಾವು ಭಾವಿಸಿರುವುದಾಗಿಯೂ ಅವರು ತಿಳಿಸಿದ್ದರು.

ಟಿಬೆಟನ್ನು ವಶಪಡಿಸಿಕೊಳ್ಳುವ ಮೂಲಕ ಚೈನಾ ಮೂರ್ಖತನದಿಂದ ವರ್ತಿಸಿದೆ-ಯೆಂಬುದು ನೆಹರೂ ಅವರ ಖಾಸಗಿ ಆಲೋಚನೆಯಾಗಿತ್ತು. ಅವರಿಂದ ನಮಗೆ (ಭಾರತಕ್ಕೆ) ಮೋಸವಾಗಿದೆಯೆಂಬ ಭಾವನೆ ಇಲ್ಲಿದೆ. ಆದರೆ ನಾವು ಎಚ್ಚರಿಕೆಯಿಂದ ಇರಬೇಕಾಗಿದೆ. ಐರೋಪ್ಯ ಪ್ರಾಬಲ್ಯದಿಂದ ಹೊರಬರುತ್ತಿರುವ ನಮ್ಮ ನೆರೆ ರಾಷ್ಟ್ರದ ಬಗ್ಗೆ ಅತಿಯಾದ ಟೀಕೆ ಮಾಡದಂತೆ ಎಚ್ಚರದಿಂದಿರಬೇಕಾಗಿದೆ ಎಂಬುದು ನೆಹರೂ ಅನ್ನಿಸಿಕೆಯಾಗಿತ್ತು.

ಚೈನಾದ ಬಗ್ಗೆ ಕಠಿಣ ನಿಲುವು ತಾಳಬೇಕೆಂಬುದು ಮಂತ್ರಿಮಂಡಲದ ಇತರ ಸದಸ್ಯರ ಆಗ್ರಹವಾಗಿತ್ತು. ಚೀನೀಯರು ಪಣಿಕ್ಕರ್ ಅವರನ್ನು ಮರುಳುಗೊಳಿಸಿದ್ದಾರೆಂದು ವಲ್ಲಭಭಾಯಿ ಪಟೇಲರಿಗೆ ಮನವರಿಕೆಯಾದಂತಿತ್ತು. "ಅವರು ಪಣಿಕ್ಕರ್ ಅವರಲ್ಲಿ ಸುಳ್ಳು ವಿಶ್ವಾಸದ ಭರವಸೆ ಮೂಡುವಂತೆ ವಂಚಿಸಿದ್ದಾರೆ. ಆದ್ದರಿಂದಲೇ ರಾಯಭಾರಿಗಳು ಸಂಪೂರ್ಣವಾಗಿ ಆಕ್ರಮಣದ ಮುನ್ಸೂಚನೆಗಳನ್ನು ಅಲಕ್ಷಿಸಿರಬಹುದು." ಆದರೆ ಕೆಲಸ ಆಗಿಹೋಗಿತ್ತು. ಭಾರತ ಅನಿವಾರ್ಯವಾಗಿ ಜಾಗರೂಕತೆಯಿಂದಿರಬೇಕು ಎಂಬಂಥ ಪರಿಸ್ಥಿತಿಯನ್ನು ಚೈನಾ ಸೃಷ್ಟಿಸಿತ್ತು.

ನವೆಂಬರ್ 7ರಂದು ನೆಹರೂಗೆ ಬರೆದ ಪತ್ರದಲ್ಲಿ ಪಟೇಲರು, "ಚೈನಾದಲ್ಲಿ ಒಡಕು ಇಲ್ಲ. ಅದೀಗ ಒಗ್ಗಟಿನಿಂದ ಕೂಡಿದ ಬಲಶಾಲಿ" ಎಂದು ಎಚ್ಚರಿಸಿದ್ದರು. ಪಟೇಲರ ಪತ್ರದ ಒಕ್ಕಣೆ ಹೀಗಿದೆ:

> "ಕಮ್ಯುನಿಸ್ಟ್ ಸಿದ್ಧಾಂತ ಸಾಮ್ರಾಜ್ಯಶಾಹಿ ವಿರುದ್ಧ ಗುರಾಣಿಯಲ್ಲ ಎಂಬುದನ್ನು ಇತ್ತೀಚಿನ ಕಹಿಯಾದ ಚರಿತ್ರೆ ಹೇಳುತ್ತದೆ. ಕಮ್ಯುನಿಸ್ಟರು ಸಾಮ್ರಾಜ್ಯಶಾಹಿಗಳಷ್ಟೇ ಒಳ್ಳೆಯವರೂ ಕೆಟ್ಟವರೂ ಎರಡೂ ಹೌದು. ಚೈನಾದ ಮಹತ್ವಾಕಾಂಕ್ಷೆಯಲ್ಲಿ ನಮ್ಮ ಹಿಮಾಲಯದ ತಪ್ಪಲಷ್ಟೇ ಅಲ್ಲ ಅಸ್ಸಾಮಿನ ಮುಖ್ಯ ಭಾಗಗಳೂ ಸೇರಿವೆ. ಕೈಬಿಟ್ಟು ಹೋಗಿರುವ ಪ್ರದೇಶಗಳನ್ನು ಒಂದುಗೂಡಿಸುವ ಚೈನಾದ ಆಕಾಂಕ್ಷೆ ಮತ್ತು ಕಮ್ಯುನಿಸ್ಟರ ಸಾಮ್ರಾಜ್ಯಶಾಹಿ ನೀತಿ, ಪಾಶ್ಚಾತ್ಯ ಬಲಿಷ್ಠ ರಾಷ್ಟ್ರಗಳ ವಿಸ್ತರಣಾನೀತಿ ಅಥವಾ ಸಾಮ್ರಾಜ್ಯಶಾಹಿಗಿಂತ ಭಿನ್ನವಾದುದಾಗಿದೆ. ಕಮ್ಯುನಿಸ್ಟರು ಆದರ್ಶಸಿದ್ಧಾಂತಗಳ ನಿಲುವಂಗಿ ಧರಿಸಿದ್ದಾರೆ. ಇದು ಹತ್ತು ಪಟ್ಟು ಹೆಚ್ಚು ಅಪಾಯಕಾರಿಯಾದುದಾಗಿದೆ. ಆದರ್ಶಸಿದ್ಧಾಂತಗಳ ವಿಸ್ತರಣೆಯ ಮಾರುವೇಷದ ಹಿಂದೆ ಜನಾಂಗೀಯ, ರಾಷ್ಟ್ರೀಯ ಅಥವಾ ಐತಿಹಾಸಿಕ ಹಕ್ಕೊತ್ತಾಯಗಳು ಅಡಗಿವೆ."

ಚೈನಾದಿಂದ ತಲೆದೋರಿರುವ ಹೊಸ ಅಪಾಯದ ಬಗ್ಗೆ ಜಾಗರೂಕತೆಯಿಂದಿರುವಂತೆ ಪಟೇಲರು ನೆಹರೂಗೆ ಒತ್ತಾಯಪೂರ್ವಕವಾಗಿ ಹೇಳಿದ್ದರು. ಭದ್ರತೆ ಹೆಚ್ಚಿಸಲು ಅವರು ಅನೇಕ ಕ್ರಮಗಳನ್ನು ಸೂಚಿಸಿದ್ದರು. ಟಿಬೆಟ್ ವಿಚಾರದಲ್ಲಿ ಮುಖಭಂಗವಾಗಿರುವ ಕಾರಣ ಭಾರತ ವಿಶ್ವಸಂಸ್ಥೆ ಸದಸ್ಯತ್ವ ನೀಡಿಕೆ ವಿಷಯದಲ್ಲಿ ಚೈನಾದ ಪರ ವಾದಿಸಬಾರದೆಂಬುದು ಪಟೇಲರ ನಿಲುವಾಗಿತ್ತು. ಇತ್ತೀಚಿನ ಹೊಸ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಚೈನ, ರಷ್ಯ, ಅಮೆರಿಕ ಮತ್ತು ಬ್ರಿಟನ್ ಮತ್ತು ಬರ್ಮಾಗಳ ಜೊತೆ ನಮ್ಮ ಬಾಂಧವ್ಯವನ್ನು ಪುನರ್ವಿಮರ್ಶಿಸಬೇಕಾಗಿದೆ ಎನ್ನುವುದು ಪಟೇಲರ ವಾದವಾಗಿತ್ತು. ಭಾರತ ತನ್ನ ಅಲಿಪ್ತ ನೀತಿಯನ್ನು ಪಶ್ಚಿಮ ರಾಷ್ಟ್ರಗಳೊಡನೆ ಮೈತ್ರಿಗೆ ಅನುಕೂಲವಾಗುವಂತೆ ಪುನರ್ ಪರಿಶೀಲಿಸ ಬೇಕೆಂಬುದು ಪಟೇಲರ ಇಂಗಿತವಿದ್ದಂತೆ ತೋರುತ್ತದೆ.

ಅಲಿಪ್ತ ನೀತಿಯ ಪಲ್ಲಟದ ಅಗತ್ಯತೆಯನ್ನು ಪತ್ರಕರ್ತ ಡಿ.ಎಫ್. ಕಾರ್ಕ ಇನ್ನಷ್ಟು ಉಗ್ರವಾಗಿ ಸಮರ್ಥಿಸಿದ್ದಾರೆ. ಪಣಿಕ್ಕರ್ ಅವರ ಅಜಾಗರೂಕತೆ ಬಗ್ಗೆ ಪಟೇಲರಂತೆ ಕಾರ್ಕ ಅವರೂ ಭೀತರಾಗಿದ್ದರು. (ಆಕಾಶವಾಣಿ ಪ್ರಕಟಿಸುವವರೆಗೆ ಈ ರಾಯಭಾರಿಗೆ ಚೀನಿ ಆಕ್ರಮಣದ ಬಗ್ಗೆ ತಿಳಿದಿರಲಿಲ್ಲ). ಟಿಬೆಟ್ ವಶಪಡಿಸಿಕೊಂಡ ನಂತರ ಚೈನಾಕ್ಕೆ ಹಿಮಾಲಯ ಅಭೇದ್ಯವಲ್ಲ ಎಂಬುದು ಸ್ಪಷ್ಟವಾಗಿತ್ತು. ಅಲ್ಲದೆ ದೃಢ ಸಂಕಲ್ಪ-ಸಾಮರ್ಥ್ಯಗಳಿಂದ ದೃಷ್ಟಿ ಕೇಂದ್ರೀಕರಿಸಿದ್ದ ಶತ್ರುವಿನ ಮೇಲೆರಗಲು ಅಗತ್ಯವಾದ ಮಿಲಿಟರಿ ಉಪಕರಣಗಳಾಗಲೀ, ಸಿದ್ಧತೆ-ತರಬೇತಿಗಳಾಗಲೀ ಭಾರತದ ಸೈನ್ಯಕ್ಕಿರಲಿಲ್ಲ. ಈ ಕಾರಣದಿಂದಾಗಿ ಕಾರ್ಕ ತಮ್ಮ ಲೇಖನವನ್ನು ಹೀಗೆ ಸಮಾಪ್ತಿಗೊಳಿಸಿದ್ದರು:

"ಬ್ರಿಟನ್ನಿನ ಜೊತೆ ನಮ್ಮ ಗತ ಬಾಂಧವ್ಯ ಏನೇ ಇರಲಿ, ಏಷ್ಯಾದಲ್ಲಿ ವಿಸ್ತರಣಾಕಾಂಕ್ಷೆ ಹೊಂದಿರುವ ಅಮೆರಿಕದ ಸಾಮ್ರಾಜ್ಯಶಾಹಿ ಬಗ್ಗೆ ನಮ್ಮ ಭೀತಿ ಎಷ್ಟೇ ಇರಲಿ, ಈ ತಟಸ್ಥ ಧೋರಣೆಯನ್ನು ಮುಂದುವರಿಸಬೇಕೆ ಹಾಗೂ ನಮ್ಮ ಗಡಿಗಳನ್ನು ಅಪಾಯಕ್ಕೊಡ್ಡಬೇಕೆ ಇಲ್ಲವೇ ಅಲ್ಪ ಅಪಾಯಕ್ಕೆ ತಲೆ ಕೊಡುವ ಸಾಹಸ ಮಾಡುವ ಮೂಲಕ ಅಮೆರಿಕ ಮತ್ತು ಗ್ರೇಟ್ ಬ್ರಿಟನ್ನಿನ ಜೊತ ಮಿಲಿಟರಿ ಒಪ್ಪಂದ ಮಾಡಿಕೊಳ್ಳಬೇಕೆ ಎನ್ನುವುದನ್ನು ನಾವೀಗ ನಿರ್ಧರಿಸಬೇಕಾಗಿದೆ."

ಕಾರ್ಕ ಅವರಂಥ ಪತ್ರಕರ್ತರನ್ನು ಗಮನಿಸುವಷ್ಟು ದೊಡ್ಡ ಮನಸ್ಸಾಗಲೀ ಸಾವಧಾನ ವಾಗಲೀ ನೆಹರೂ ಅವರಿಗಿರಲಿಲ್ಲ. ಆದರೆ ಅವರು ಪಟೇಲರಿಗೆ ಉತ್ತರ ನೀಡಿದ್ದರು. ಮಂತ್ರಿಮಂಡಲದ ಸಭೆಗೆ ಕೊಡಲಾದ ಟಿಪ್ಪಣಿಯೊಂದರಲ್ಲಿ ಪ್ರತಿಕ್ರಿಯಿಸಿದ್ದರು. ಟಿಬೆಟನ್ನು ರಕ್ಷಿಸಲಾಗದಿದ್ದುದಕ್ಕೆ ತಮಗೆ ಮರುಕವುಂಟಾಗಿದೆಯೆಂದೂ ಆದರೆ ಭಾರತ ಈಗ ಚೀನದಿಂದ ಆಕ್ರಮಣ ಎದುರಿಸಲಿದೆ ಎಂಬುದು ತೀವ್ರ ಅಸಂಭವವೆಂದೇ ತಾವು ಭಾವಿಸಿರುವುದಾಗಿಯೂ ನೆಹರೂ ಈ ಟಿಪ್ಪಣಿಯಲ್ಲಿ ಅಭಿಪ್ರಾಯಪಟ್ಟಿದ್ದರು. ಅವರು ಹಿಮಾಲಯದ ಆಸುಪಾಸುಗಳಲ್ಲಿ ಕೆಟ್ಟ ಸಾಹಸಕ್ಕಿಳಿಯುವರೆಂಬುದು ಊಹಾತೀತ ಎನ್ನುವುದು ಅವರ ಅನ್ನಿಸಿಕೆಯಾಗಿತ್ತು. ಕಮ್ಯುನಿಸ್ಟ್ ಸಿದ್ಧಾಂತವೆಂದರೆ, ಆಖೈರಾಗಿ ಅನಿವಾರ್ಯವಾಗುವ ಯುದ್ಧ ಮತ್ತು ವಿಸ್ತರಣಾಕಾಂಕ್ಷೆಯ ಮಾರ್ಗ ಎನ್ನುವುದನ್ನು ಅವರು ಒಪ್ಪಲಿಲ್ಲ. ಸ್ಪಷ್ಟವಾಗಿ ಹೇಳುವುದಾದರೆ ಚೈನಾದ ಕಮ್ಯುನಿಸ್ಟ್ ಸಿದ್ಧಾಂತವೆಂದರೆ, ಅದರ ಅರ್ಥ, ಭಾರತದತ್ತ ಅನಿವಾರ್ಯ ಆಕ್ರಮಣವೇ ಆಗಿದೆ ಎನ್ನುವುದು ಭೋಳೆತನವೇ ಸರಿ ಎಂದು ನೆಹರೂ ಭಾವಿಸಿದ್ದರು. ಟಿಬೆಟ್‌ನಲ್ಲಿ ಏನೇ ಆಗಿರಲಿ, ಭಾರತ ಆದಾಗ್ಯೂ ಚೈನಾದೊಡನೆ ಒಂದಲ್ಲ ಒಂದು ಬಗೆಯ ಒಮ್ಮತಕ್ಕೆ ಬರಬೇಕು. ಏಕೆಂದರೆ ಭಾರತ ಮತ್ತು ಚೈನಾ ಶಾಂತಿ ಮೈತ್ರಿಗಳಿಂದಿರುವುದು ಇಡೀ ವ್ಯವಸ್ಥೆಯಲ್ಲಿ ಹಾಗೂ ವಿಶ್ವದ ಸಮತೋಲದಲ್ಲಿ ವ್ಯಾಪಕವಾದ ವ್ಯತ್ಯಾಸಗಳನ್ನುಂಟು ಮಾಡುವುದು ಎಂದೇ ನೆಹರೂ ನಂಬಿದ್ದರು.

ಇದೆಲ್ಲ ಆದ ಒಂದು ತಿಂಗಳ ನಂತರ ಪಟೇಲರು ನಿಧನರಾದರು. ಈಗ ಚೈನಾ-ದೊಂದಿಗೆ 'ಒಮ್ಮತ'ದ ನೀತಿಗೆ ನಿಜವಾದ ವಿರೋಧ ಇರಲಿಲ್ಲ. ಎರಡೂ ರಾಷ್ಟ್ರಗಳ ನಡುವೆ ಸಾವಿರಾರು ಮೈಲಿಗಳಷ್ಟು ಗಡಿಪ್ರದೇಶವಿತ್ತು. ಈ ಗಡಿಗಳನ್ನು ಗುರುತಿಸಿರಲಿಲ್ಲ. ಸರ್ವೆ ಸಹ ಮಾಡಿರಲಿಲ್ಲ. ಭಾರತಕ್ಕೆ ಪಶ್ಚಿಮದಲ್ಲಿ, ಜಮ್ಮು-ಕಾಶ್ಮೀರದ ಬೌದ್ಧರ ಪ್ರಾಬಲ್ಯದ ಲಡಾಖ್ ಜಿಲ್ಲೆ ಯುದ್ಧದ ಪ್ರದೇಶವು ಚೈನಾದ ಗಡಿಯಲ್ಲಿತ್ತು. ಲಡಾಖ್ ಜಿಲ್ಲೆಯ ಗಡಿ ಪ್ರದೇಶ ಚೀನಿ ಪ್ರಾಂತ್ಯಗಳಾದ ಟಿಬೆಟ್ ಮತ್ತು ಸಿಂಕಿಯಾಂಗ್‌ವರೆಗೂ ವ್ಯಾಪಿಸಿತ್ತು. ಪೂರ್ವದಲ್ಲಿ, ಮೆಕ್‌ಮಹೋನ್ ಗಡಿ ರೇಖೆಯಲ್ಲಿ ವಿವರಿಸಿರುವಂತೆ ಹಿಮಾಲಯದ ಶಿಖೆಯವರೆಗೂ ಭಾರತ ಚೀನದೊಂದಿಗೆ ಗಡಿಯನ್ನು ಹೊಂದಿತ್ತು. 1914ರಲ್ಲಿ ಬ್ರಿಟಿಷರು ಮತ್ತು ಟಿಬೆಟ್ಟಿನ ನಡುವೆ ಆದ ಒಪ್ಪಂದವನ್ವಯ ಈ ಗಡಿಯನ್ನು ಗುರುತಿಸಲಾಗಿತ್ತು. ಈ ಮಧ್ಯೆ, ಭಾರತದ

ಉತ್ತರ ಪ್ರದೇಶವನ್ನು ಟಿಬೆಟ್ಟಿನಿಂದ ಬೇರ್ಪಡಿಸುವ ಗಂಗಾನದಿಯ ಜಲಾನಯನ ಪ್ರದೇಶದವರೆಗೆ ಭಾರತ-ಚೈನಾಗಳಿಗೆ ಹೊಂದಿಕೊಂಡಂತೆ ಗಡಿ ಇತ್ತು.

ಮಧ್ಯಭಾಗವ ಗಡಿಗಳ ಬಗ್ಗೆ ತಕರಾರುಗಳೇನೂ ಇರಲಿಲ್ಲ. ಉಳಿದೆರಡು ತುದಿಗಳಲ್ಲಿನ ಗಡಿಗಳ ಬಗ್ಗೆ ಸಮಸ್ಯೆಗಳಿದ್ದವು. ವಿಶೇಷವಾಗಿ ಮೆಕ್ ಮಹೋನ್ ಗಡಿರೇಖೆ ಸಾಮ್ರಾಜ್ಯಶಾಹಿ ಹೇರಿದ್ದು ಎಂದು ಚೈನಾದ ತಕರಾರು. ಆ ಕ್ಷಣಕ್ಕೆ ಇದೆಲ್ಲವನ್ನೂ ಮರೆತು ಭಾರತದೊಂದಿಗೆ ಸೌಹಾರ್ದಯುತ ಬಾಂಧವ್ಯ ಹೊಂದುವುದು ಚೈನಾದ ಅಭೀಪ್ಸೆಯಾಗಿತ್ತು. ಏಕೆಂದರೆ ಪಾಶ್ಚಾತ್ಯ ಪ್ರಪಂಚಕ್ಕೆ ಒಂದು ಸಂಪರ್ಕ ಸೇತುವಾಗಿ ಚೈನಾಕ್ಕೆ ಭಾರತದ ಅಗತ್ಯವಿತ್ತು. 1952ರ ಬೇಸಿಗೆಯಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ನೇತೃತ್ವದಲ್ಲಿ ಭಾರತದ ನಿಯೋಗವೊಂದು ಬೀಜಿಂಗ್‌ಗೆ ಭೇಟಿಕೊಟ್ಟಿತು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮಾಸ್ಕೋದಲ್ಲಿ ಭಾರತದ ರಾಯಭಾರಿಯಾಗಿ ಕೆಲಸ ಮಾಡಿದ್ದರು. ಇದಕ್ಕಿಂತ ಮಿಗಿಲಾಗಿ ಅವರು ನೆಹರೂ ಸೋದರಿಯಾಗಿದ್ದರು. ಶ್ರೀಮತಿ ಪಂಡಿತ್ ಮಾವೋ ಅವರನ್ನು ಒಂದು ಸಲ ಹಾಗೂ ಚೌಎನ್ ಲಾಯ್ ಅವರನ್ನು ಎರಡು ಸಲ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಇವರಿಬ್ಬರಿಂದಲೂ ಅವರು ಗಾಢವಾಗಿ ಪ್ರಭಾವಿತರಾಗಿದ್ದರು. ಮಾವೋ ಕರಾರುವಾಕ್ಕಾಗಿದ್ದರು, ನಿಯಮನಿಷ್ಠರೂ ಪ್ರಶಾಂತ ಸ್ವಭಾವದವರೂ ಹಾಗೂ ವಿನೋದ ಪ್ರಜ್ಞೆಯುಳ್ಳವರೂ ಅಗಿ ತಮಗೆ ಕಂಡರೆಂದು ಶ್ರೀಮತಿ ಪಂಡಿತ್ ನೆಹರೂಗೆ ಬರೆದ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. "ಅವರು ಸಾರ್ವಜನಿಕ ಸಭೆಗಳಲ್ಲಿ ನನಗೆ ಗಾಂಧಿಯ ನೆನಪು ತಂದರು. ಮಹಾತ್ಮರ ಸಭೆಗಳಲ್ಲಿ ನಡೆಯುತ್ತಿದ್ದಂತೆ, ಸಭಿಕರು ಸುಮ್ಮನೆ ಚಪ್ಪಾಳೆ ತಟ್ಟುವುದಿಲ್ಲ ಅವರನ್ನು ಪೂಜಿಸುತ್ತಾರೆ. ಅವರನ್ನು ನೋಡುವವರ ಕಂಗಳಲ್ಲಿ ಪ್ರೀತಿ ಮತ್ತು ಪೂಜ್ಯ ಭಾವನೆಗಳೆರಡೂ ಕಾಣುತ್ತವೆ. ಇದನ್ನು ನೋಡುವುದೇ ಒಂದು ಹೃದಯಂಗಮ ಅನುಭವ. ಇನ್ನು ಚೌಎನ್ ಲಾಯ್ ಬಗ್ಗೆ ಹೇಳುವುದಾದರೆ, ಈತನೊಬ್ಬ ಮಹಾಮುತ್ಸದ್ದಿ, ತುಂಬ ಸತ್ವಶಾಲಿ ಹಾಗೂ ಮೋಹಕ ವ್ಯಕ್ತಿತ್ವವುಳ್ಳವನು. ಈತ ನಯ-ನಾಜೂಕಿನ ಮನುಷ್ಯ. ತುಂಬಾ ಹಾಸ್ಯಪ್ರಜ್ಞೆಯುಳ್ಳವನು. ಈತನ ಹಾಸ್ಯ ಸಾಂಕ್ರಾಮಿಕವಿದ್ದಂತೆ. ನಗುತ್ತಲೇ ಇರುತ್ತಾರೆ. ಅವರೊಂದಿಗೆ ಉಳಿದವರೂ ನಗಲೇಬೇಕಾಗುತ್ತದೆ. ಭೇಟಿಯಾದ ಮರುಕ್ಷಣದಲ್ಲೇ ಮನೆಯವರೊಂದಿಗೆ ಮಾತನಾಡುತ್ತಿರುವಂತೆ ಭಾಸವಾಗುತ್ತದೆ. ಅವರ ಮಾತಿನ ಭಾಷಾಂತರವೂ ಚಾಚೂ ತಪ್ಪುವುದಿಲ್ಲ" ಎಂದು ಶ್ರೀಮತಿ ಪಂಡಿತ್ ಪತ್ರದಲ್ಲಿ ಒಕ್ಕಣಿಸಿದ್ದಾರೆ.

ಶ್ರೀಮತಿ ಪಂಡಿತ್ ಅವರ ಪತ್ರದಲ್ಲಿ ಕೊಂಚ ಅನಿಶ್ಚಿತತೆ, ಚಂಚಲತೆಗಳೂ ಇಲ್ಲದಿಲ್ಲ. ನಾವು ಒಟ್ಟಿಗೆ ಆಹಾರಾಪಾನಾದಿಗಳನ್ನು ಸೇವಿಸಿದೆವು. ನನಗೆ ಆಯಾಸವೆನ್ನಿಸುವವರೆಗೂ ನಾವು ಮೈತ್ರಿ, ಸಂಸ್ಕೃತಿ, ಶಾಂತಿಗಳ ಬಗ್ಗೆ ಮಾತನಾಡಿದೆವು ಎಂದು ಬರೆದಿರುವ ಶ್ರೀಮತಿ ಪಂಡಿತ್ ಅವರಿಗೆ ಚೀನದ ಆಡಳಿತದ ಚುಕ್ಕಾಣಿ ಹಿಡಿದಿರುವ ಈ ಮಹಾನ್ ನಾಯಕ ತಮಗೆ ಹೆಚ್ಚಾಗಿ ಗಾಂಧಿಯನ್ನು ನೆನಪಿಗೆ ತಂದರೋ ಅಥವಾ ಸ್ಟಾಲಿನ್ನರನ್ನೋ ಎಂಬುದು ಖಾತ್ರಿಯಾಗಿ ತಿಳಿಯದು. ಅವರು ಬರೆದಿದ್ದಾರೆ: "ಮಾವೋ ತುಂಬ ದಯಾಳು, ಸಹಿಷ್ಣು,

ವಿವೇಕಶಾಲಿ ಎಂಬ ಭಾವನೆಯನ್ನು ಮೂಡಿಸುತ್ತಾರೆ. ಅವರ ಸಹಿಷ್ಣುತೆ ಕಂಡಾಗ ರಷ್ಯನ್ ನಾಯಕರು, ವಿಶೇಷವಾಗಿ ಸ್ಟಾಲಿನ್ ನೆನಪಾದರು. ಸಾರ್ವಜನಿಕರೊಂದಿಗೆ ಸಂಭಾಷಿಸುವಾಗ, ಕುಶಲೋಪರಿ ವಿಚಾರಿಸುವಾಗ ಅವರು ಸ್ಟಾಲಿನ್ನರ ಹಾವಭಾವ, ತಂತ್ರಗಳನ್ನೂ ಬಳಸುತ್ತಾರೆ. ಆದಾಗ್ಯೂ ಎದ್ದು ಕಾಣುವುದೆಂದರೆ ಆ ಜನ ಸಮರ್ಪಣ ಮನೋಭಾವದಿಂದ ದುಡಿಯುತ್ತಿರುವುದರಲ್ಲಿ ಪ್ರಕಟವಾಗುವ ಚೈತನ್ಯಶೀಲತೆ. ಮಾಸ್ಕೋದಲ್ಲಿ ಅನುಭವಕ್ಕೆ ಬರುವ ದಬ್ಬಾಳಿಕೆ ಇಲ್ಲಿ ಕಾಣುವುದಿಲ್ಲ. ಪ್ರತಿಯೊಬ್ಬರೂ ಸಂತೋಷದಿಂದಿರುವಂತೆ, ರಾಷ್ಟ್ರದ ಅಭಿವೃದ್ಧಿಗೆ ಕಂಕಣಬದ್ಧರಾಗಿರುವಂತೆ ಕಾಣಿಸುತ್ತಾರೆ."

1927ರಲ್ಲಿ ತಮ್ಮ ಸೋದರ ರಷ್ಯದ ಬಗ್ಗೆ ಪ್ರತಿಕ್ರಿಯಿಸಿದಂತೆ ಶ್ರೀಮತಿ ಪಂಡಿತ್ 1952ರಲ್ಲಿ ಚೈನಾದ ಬಗ್ಗೆ ಪ್ರತಿಕ್ರಿಯಿಸಿರುವಂತೆ ತೋರುತ್ತದೆ. ಬಹುಶಃ ಇಂಥ ಸ್ಫುರಣೆಗಳು ನಂತರ ಸುಳ್ಳಾಗಲಾರದು ಎಂದೂ ತಿಳಿದಿರಬಹುದೇನೋ. ನೆಹರೂ ಸಹ ಹೀಗೇ ಅಂದುಕೊಂಡಿದ್ದಿರಬಹುದು. ಅತಿಶೀಘ್ರದಲ್ಲೇ ಭಾವಾವೇಶಗಳೆಲ್ಲ ಹೋಗಿ ನಿಜವಾದ ರಾಜಕಾರಣ ಶುರುವಾಯಿತು. ಅಮೆರಿಕ ಪಾಕಿಸ್ತಾನದತ್ತ ವಾಲುವುದಕ್ಕೆ ಆರಂಭಿಸಿತು. ಇದರಿಂದ ಚೈನಾದ ಜೊತೆ ಮೈತ್ರಿ ಮಾಡಿಕೊಳ್ಳಲು ನವದೆಹಲಿಗೆ ಮತ್ತೊಂದು ಕಾರಣ ಸಿಕ್ಕಂತಾಯಿತು. 1954ರ ಏಪ್ರಿಲ್‌ನಲ್ಲಿ ಸಹಿಹಾಕಲಾದ ವ್ಯಾಪಕವಾದ ಒಪ್ಪಂದದಲ್ಲಿ ಭಾರತ, ಟಿಬೆಟ್ಟನ್ನು ಚೀನದ ಭಾಗವೆಂದು ಮಾನ್ಯ ಮಾಡಿತು. ಜಂಟಿ ಹೇಳಿಕೆಯಲ್ಲಿ ಶಾಂತಿ ಸಹಬಾಳ್ವೆಗಳ ಐದು ಸೂತ್ರಗಳನ್ನು-ಪಂಚಶೀಲ-ಖಚಿತವಾಗಿ ಹೇಳಲಾಗಿತ್ತು. ಪರಸ್ಪರ ಆಕ್ರಮಣ ನಡೆಸದೇ ಇರುವುದು ಹಾಗೂ ಪರಸ್ಪರ ಗಡಿಗಳ ಸಮಗ್ರತೆಯನ್ನು ಗೌರವಿಸುವುದು ಈ ಪಂಚಶೀಲಗಳಲ್ಲಿ ಮುಖ್ಯವಾದವುಗಳಾಗಿದ್ದವು.

ಈ ಒಪ್ಪಂದವನ್ನು ಸ್ವಾಗತಿಸದಿದ್ದ ಒಬ್ಬ ವ್ಯಕ್ತಿ, ವಿದೇಶಾಂಗ ಇಲಾಖೆಯ ಮಹಾಕಾರ್ಯದರ್ಶಿಯಾಗಿದ್ದ ಸರ್ ಗಿರಿಜಾಶಂಕರ ಬಾಜಪೈ. "ಕಮ್ಯುನಿಸ್ಟ್ ಚೈನಾ ವಿಸ್ತರಣಾಕಾಂಕ್ಷೆಯ ಗುರಿಯಲ್ಲಿ ಯಾವುದೇ ರೀತಿಯಿಂದಲೂ ರಷ್ಯದ ಕಮ್ಯುನಿಸ್ಟ್ ಸಿದ್ಧಾಂತಕ್ಕಿಂತ ಭಿನ್ನವಲ್ಲವೆಂದು" ಅವರು ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ ಎಚ್ಚರಿಸಿದ್ದರು. ಪ್ರಸ್ತುತ ದೆಹಲಿಯ ಯೋಚನಾಲಹರಿ ಹೇಗಿದೆಯೆಂದರೆ, 'ಚೀನ ಮತ್ತು ನಮ್ಮ ನಡುವೆ ಅನಿರ್ದಿಷ್ಟವಾದ ಶಾಂತಿ ಮತ್ತು ಮೈತ್ರಿಗಳು ಅನಿರ್ದಿಷ್ಟಕಾಲ ಮುಂದುವರಿಯಲಿವೆ' ಎನ್ನುವ ರೀತಿಯದು. "ಚೈನಾ ಈಗ ಏಷ್ಯಾದ ನೆರೆ ರಾಷ್ಟ್ರಗಳ ಬಗ್ಗೆ ತಾಳಿರುವ ಶಾಂತಿ ನೀತಿ ಬದಲಾಗುವ ಸಾಧ್ಯತೆಯನ್ನು ಖಂಡತುಂಡವಾಗಿ ಅಲ್ಲಗಳೆಯುವಂಥ ವ್ಯಕ್ತಿಗಳನ್ನೇ ಪ್ರಧಾನ ಮಂತ್ರಿಯವರು ಸಲಹೆಗಾಗಿ ಅವಲಂಬಿಸಿದ್ದಾರೆ" ಎನ್ನುವುದು ಬಾಜಪೈ ಅಭಿಮತವಾಗಿತ್ತು.

ಈ ಎಚ್ಚರಿಕೆ ನೆಹರೂ ಅವರ ಕಿವಿಗೆ ಬಿದ್ದಿರುವುದು ಅಸಂಭವ. ಅವರಿಗೆ ಗೊತ್ತಾಗಿದ್ದರೂ ಅದನ್ನು ಮಾನ್ಯ ಮಾಡುತ್ತಿರಲಿಲ್ಲ. 1954ರ ಕೊನೆಯಲ್ಲಿ ನೆಹರೂ ಮೊದಲ ಬಾರಿಗೆ ಚೈನಾಕ್ಕೆ ಭೇಟಿಕೊಟ್ಟರು. ಆರು ತಿಂಗಳ ಹಿಂದೆ ರಷ್ಯದಲ್ಲಿ ಆದಂತೆ ಚೈನಾದಲ್ಲೂ ನೆಹರೂಗೆ ಭವ್ಯಸ್ವಾಗತ ಕಾದಿತ್ತು. ಹೋದಲ್ಲೆಲ್ಲ ಜನಸ್ತೋಮ ಜಯಕಾರ ಹಾಕಿ ಸ್ವಾಗತಿಸಿತು.

ಚೀನೀಯರ ಈ ಭಾವಪೂರ್ಣ ಸ್ಪಂದನವನ್ನು ನೆಹರೂ ಮೆಚ್ಚಿಕೊಂಡರು. ನೆಹರೂ, ಗಡಿ ಸಮಸ್ಯೆಗಳನ್ನು ಕುರಿತು ಚೌ ಎನ್ ಲಾಯ್ ಅವರೊಂದಿಗೆ, ವಿಶ್ವ ಪರಿಸ್ಥಿತಿ ಕುರಿತು ಮಾವೋತ್ಸೆ ತುಂಗರೊಂದಿಗೆ ಚರ್ಚಿಸಿದರು. ಟಿಬೆಟ್‌ಗೆ ಪೀಪಲ್ಸ್ ರಿಪಬ್ಲಿಕ್ ಆಫ್ ಚೈನಾದಲ್ಲಿ ಯಾವ ಪ್ರಾಂತ್ಯಕ್ಕೂ ಸಿಗದಂಥ ಸ್ಥಾನ ಮಾನವನ್ನು ನೀಡಲಾಗುವುದೆಂದು ಚೈನಾದ ನಾಯಕರು ದಲಾಯಿಲಾಮಾ ಅವರ ಸಮ್ಮುಖದಲ್ಲೇ ಆಶ್ವಾಸನೆಯಿತ್ತರು.

ಚೈನಾದಿಂದ ವಾಪಸಾದ ನಂತರ ನೆಹರೂ ಕಲ್ಕತ್ತೆಯಲ್ಲಿ ಬೃಹತ್ ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಮಾತನಾಡಿದರು. ಅವರನ್ನು ಆಲಿಸಿದ ಲಕ್ಷಾಂತರ ಮಂದಿ "ಚೀನದ ಜನತೆಗೆ ಯುದ್ಧ ಬೇಕಿಲ್ಲ" ಎಂಬುದನ್ನು ನಿಜವೆಂದು ಒಪ್ಪಿಕೊಂಡರು. ಚೀನೀಯರಿಗೆ ತಮ್ಮ ದೇಶವನ್ನು ಬಡತನದಿಂದ ಮುಕ್ತಗೊಳಿಸುವ ಕೆಲಸ ಬೊಗಸೆಗಳೇ ಬೇಕಾದಷ್ಟಿವೆ ಎಂಬುದನ್ನು ದೃಢೀಕರಿಸಿದರು. ಚೈನಾದಲ್ಲಿನ ಒಗ್ಗಟ್ಟಿನ ಬಗ್ಗೆ, ಅಲ್ಲಿ ಭಾರತವನ್ನು ಕಾಡುತ್ತಿರುವಂಥ ಪ್ರಾಂತೀಯ ಮತ್ತು ಧಾರ್ಮಿಕ ಹಿತಾಸಕ್ತಿಗಳು ಇಲ್ಲದೇ ಇರುವುದರ ಬಗ್ಗೆ ನೆಹರೂ ಪ್ರಶಂಸಾತ್ಮಕವಾಗಿ ಮಾತಾಡಿದರು. "ವಿಶೇಷ ಸಾಮರ್ಥ್ಯವುಳ್ಳ ಜವಹರಲಾಲ್ ನೆಹರೂ ಎಂದು ಅಲ್ಲಿನ ಜನತೆ ನನ್ನನ್ನು ಸ್ವಾಗತಿಸಲಿಲ್ಲ. ಚೈನಾದ ಜನತೆ ಹೃತ್ಪೂರ್ವಕವಾಗಿ ಪ್ರೀತಿಸುವ, ಸೌಹಾರ್ದಯುತ ಮೈತ್ರಿ ಬಯಸುವ ದೇಶವಾದ ಭಾರತದ ಪ್ರಧಾನಮಂತ್ರಿ ಎಂಬ ಕಾರಣಕ್ಕಾಗಿ ನನ್ನನ್ನು ಪ್ರೀತ್ಯಾದರಗಳಿಂದ ಬರಮಾಡಿಕೊಂಡರು" ಎಂದು ತಮಗೆ ದೊರೆತ ಭವ್ಯ ಸ್ವಾಗತವನ್ನು ವ್ಯಾಖ್ಯಾನಿಸಿದರು.

ಎರಡು ವರ್ಷಗಳ ನಂತರ ಚೌ ಎನ್ ಲಾಯ್ ಭಾರತಕ್ಕೆ ಭೇಟಿಕೊಟ್ಟಾಗ ಇಂಥದೇ ಮರ್ಯಾದೆಯನ್ನು ಅವರಿಗೆ ತೋರಿಸಲಾಯಿತು. ಬುದ್ಧನ 2500ನೇ ಜಯಂತಿ ಆಚರಣೆಗಾಗಿ ಅವರ ಜೊತೆ ದಲಾಯಿಲಾಮಾ ಮತ್ತು ಪಂಚನ್ ಲಾಮಾ ಅವರಿಗೂ ಆಮಂತ್ರಣ ನೀಡಲಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಪ್ರವಾಸದುದ್ದಕ್ಕೂ ದಲಾಯಿ ಲಾಮಾ ಚೀನೀ ಮೇಲ್ವಿಚಾರಕರ ಕಣ್ಣುತಪ್ಪಿಸಿ ನೆಹರೂ ಜೊತೆಯಲ್ಲೇ ಇದ್ದರು. ಆಕ್ರಮಣಕಾರರ ವಿರುದ್ಧ ಟಿಬೆಟ್ಟಿನಲ್ಲಿ ಒಳಗುದಿ ಆರಂಭವಾಗಿತ್ತು. ಭಾರತದಲ್ಲಿ ಆಶ್ರಯ ಪಡೆಯಬಾರದೇಕೆ ಎಂದು ತಮಗನ್ನಿಸುತ್ತಿದೆಯೆಂದು ದಲಾಯಿ ಲಾಮಾ ನೆಹರೂಗೆ ತಿಳಿಸಿದ್ದರು. ಇದು ಸಾಧ್ಯವಾಗದಿದ್ದಲ್ಲಿ, ಚೈನಾ ಪರವಾಗಿಲ್ಲದ ಅಥವಾ ಕಮ್ಯುನಿಸ್ಟ್ ಪರವಾಗಿಲ್ಲದ ಒಬ್ಬ ಪ್ರತಿನಿಧಿಯನ್ನು ನೆಹರೂ ಅವರು ಲ್ಹಾಸಾಗೆ ಕಳುಹಿಸಬಹುದೆಂದೂ ಅವರು ಮನವಿ ಮಾಡಿದ್ದರು. ಟಿಬೆಟ್ಟಿನಲ್ಲಿನ ಪರಿಸ್ಥಿತಿ ಕುರಿತು ನೆಹರೂ ಚೌಎನ್ ಲಾಯ್ ಅವರನ್ನು ಕೇಳಿದಾಗ "ಅಲ್ಲಿ ಕೆಲವು ದುರದೃಷ್ಟಕರವಾದ ಘಟನೆಗಳು ಸಂಭವಿಸಿವೆ" ಎಂದು ಹೇಳಿ ಆ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು.

ಅಲ್ಲಿಗೆ ವಿಷಯ ಒಂದು ನಿಲುಗಡೆಗೆ ಬಂದಂತಾಯಿತು. ದಲಾಯಿಲಾಮ ಲ್ಹಾಸಾಗೆ ಹಿಂದಿರುಗಿದರು. ಭಾರತ-ಚೈನಾ 'ಹಿಂದೂ ಚೀನಿ ಭಾಯಿ ಭಾಯಿ' ಎಂದು ಅಣ್ಣತಮ್ಮಂದಿರಂತೆ ಮೆರೆದರು. ಇದಕ್ಕೆಲ್ಲ ಮುಖ್ಯ ಹೊಣೆಗಾರನೆಂದರೆ ಆಕರ್ಷಕ ವ್ಯಕ್ತಿತ್ವದ ಚೌ ಎನ್ ಲಾಯ್.

ಈ ಮನುಷ್ಯ ನೆಹರೂ ಅವರ ಮೇಲೆ ಪ್ರಭಾವ-ಪರಿಣಾಮಗಳನ್ನು ಬೀರಿದ್ದರು ನಿಜ, ಅಲ್ಲದೇ ಹಿರಿಯ ಅನುಭವೀ ರಾಜಕಾರಣಿ, ಸಿನಿಕರೆಂದೇ ಹೆಸರಾಗಿದ್ದ ರಾಜಾಜಿಯವರ ಮೇಲೂ ಪ್ರಭಾವಬೀರಿದ್ದರು. ರಾಜಾಜಿ ಚೈನಾದ ಪ್ರಧಾನ ಮಂತ್ರಿಯವರ ಜೊತೆ ಭೋಜನಮಾಡಿದ್ದರು. ಆನಂತರ ಅವರು ಸ್ನೇಹಿತರೊಬ್ಬರಿಗೆ ಬರೆದ ಪತ್ರದಲ್ಲಿ, "ಪ್ರಾಮಾಣಿಕವಾಗಿ ಹೇಳಬೇಕೆಂದರೆ ನನ್ನ ಅನ್ನಿಸಿಕೆಗಳು ತುಂಬ ಅನುಕೂಲಕರವಾಗಿದೆ. ಚೀನೀ ಕಮ್ಯುನಿಸ್ಟರೆಲ್ಲರಿಗಿಂತ ಮಿಗಿಲಾಗಿ ಪ್ರಧಾನಮಂತ್ರಿ ಸಜ್ಜನನೂ ನಂಬಿಕಸ್ಥರೂ ಆಗಿ ಕಾಣುತ್ತಾರೆಂದು ನನ್ನ ಅನ್ನಿಸಿಕೆ" ಎಂದು ತಿಳಿಸಿದ್ದರು.

ಬಹಿರಂಗದಲ್ಲಿ ಭಾರತ-ಚೈನಾಗಳೆರಡೂ ಪರಸ್ಪರ ಚಿರಮೈತ್ರಿಯನ್ನು ವ್ಯಕ್ತಪಡಿಸುತ್ತಿದ್ದವು. ಆದರೆ ತಳಮಟ್ಟದಲ್ಲಿ ಎರಡೂ ತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ತಂತ್ರೋಪಾಯಗಳನ್ನು ರೂಪಿಸುತ್ತಿದ್ದವು. ಭಾರತ, ಪೂರ್ವವಲಯದ ಬಗ್ಗೆ ಹೆಚ್ಚು ಕಳವಳ ಹೊಂದಿತ್ತು. ಚೀನಾ ಪಾಶ್ಚಾತ್ಯ ಶಕ್ತಿಗಳ ಬಗ್ಗೆ ಕಳವಳ ಹೊಂದಿತ್ತು. ಅಸ್ಸಾಂ ಪ್ರಾಂತ್ಯದ ಶ್ರೀಮಂತ ಟೀ ಎಸ್ಟೇಟ್ ಮಾಲೀಕರನ್ನು, ಜನ ಶಂಕಿಸಿದಂತೆ, ಹಿಮಾಲಯದ ಕಡೆಯಿಂದ ಸಂಭವಿಸಬಹುದಾದ ದಾಳಿಯಿಂದ ರಕ್ಷಿಸಲು ಬ್ರಿಟಿಷರು ಮೆಕ್ ಮಹೋನ್ ಗಡಿರೇಖೆ ಎಳೆದಿದ್ದರು. ಹಿಮಾಲಯಾದ ತಪ್ಪಲಿನಲ್ಲಿ ಒಂದು 'ಅಂತರ್ಗಡಿ ರೇಖೆ'ಯಿತ್ತು. ಅನುಮತಿ ಇಲ್ಲದೆ ಅದನ್ನು ಯಾರೂ ದಾಟುವಂತಿರಲಿಲ್ಲ. ಈ ಅಂತರ್ಗಡಿ ರೇಖೆ ಮತ್ತು ಗಡಿಯ ನಡುವೆ 50000 ಚದರ ಮೈಲಿಗಳಷ್ಟು ನಿಬಿಡ ಅರಣ್ಯ ಪ್ರದೇಶವಿತ್ತು. ಈ ಅರಣ್ಯ ಪ್ರದೇಶದೊಳಗೆ ಸ್ವಸಂಪೂರ್ಣವೂ ಸ್ವಯಂ ಆಡಳಿತಾತ್ಮಕವೂ ಆದ ಗುಡ್ಡಗಾಡು ಜನರ ನೆಲೆಗಳಿದ್ದವು. ಗುಡ್ಡಗಾಡು ಜನರ ಈ ನೆಲೆಗಳು ಪ್ರತ್ಯೇಕ ರಾಜ್ಯವೆಂದು ಘೋಷಿಸಿಕೊಳ್ಳಲಾಗವಷ್ಟು ಸಣ್ಣ ಪುಟ್ಟದಾಗಿದ್ದವು. ಹಾಗೂ ಒಂದು ಇನ್ನೊಂದರ ಅಧೀನಕ್ಕೊಳಪಡಲಾಗದಷ್ಟು ದೂರದ ಮೂಲೆಗಳಲ್ಲಿದ್ದವು. ಗುಡ್ಡಗಾಡು ಜನರ ಪೈಕಿ ಕೆಲವರು ಬೌದ್ಧ ಧರ್ಮೀಯರಾಗಿದ್ದರು. ತವಾಂಗ್‌ನಲ್ಲಿ ಹಳೆಯ ಬೌದ್ಧ ಮಠವೊಂದಿತ್ತು. ಈ ಮಠ ಟಿಬೆಟ್ ಆಡಳಿತ ವರ್ಗಕ್ಕೆ ಕಪ್ಪಕಾಣಿಕೆ ನೀಡುತ್ತಿತ್ತು ಹಾಗೂ ಧಾರ್ಮಿಕವಾಗಿ ಲ್ಹಾಸಾದ ಸ್ವಾಧೀನಕ್ಕೊಳಪಟ್ಟಿತ್ತು.

1914ರ ಒಪ್ಪಂದದನ್ವಯ, ತವಾಂಗ್ ಮೇಲಿನ ಹತೋಟಿಯನ್ನು ತನಗೆ ಬಿಟ್ಟು ಕೊಡುವಂತೆ ಬ್ರಿಟಿಷರು ಟಿಬೇಟಿಯನ್ನರ ಮನ ಒಲಿಸುವ ಪ್ರಯತ್ನ ನಡೆಸಿದ್ದರು. ಏಕೆಂದರೆ, ವಸಾಹತುಶಾಹಿ ಅಧಿಕಾರಿಯೊಬ್ಬರು ಪ್ರತಿಪಾದಿಸಿರುವಂತೆ, "ಟಿಬೆಟ್ ಗಡಿ ಪ್ರದೇಶವನ್ನು ಬ್ರಿಟಿಷ್ ಭಾರತದೊಳಕ್ಕೆ ಸೇರಿಸಿಕೊಳ್ಳಬೇಕಾದ್ದು ಅತ್ಯಗತ್ಯ. ಇಲ್ಲವಾದಲ್ಲಿ ಟಿಬೆಟ್ ಮತ್ತು ಅಸ್ಸಾಂ ಹೊಂದಿಕೊಂಡಿದ್ದು, ಟಿಬೆಟ್ ಮತ್ತೊಮ್ಮೆ ಚೀನದ ಹತೋಟಿಗೊಳಪಟ್ಟಲ್ಲಿ ನಮಗೆ ಅಪಾಯಕರ ಪರಿಸ್ಥಿತಿ ಶತಃಸಿದ್ಧ."

ಗಡಿಯ ಒಳರೇಖೆ ಮತ್ತು ಹೊರರೇಖೆಗಳಾಚೆ ನೆಲೆಗಳನ್ನು ಹೊಂದಿದ್ದ ಇತರ ಗುಡ್ಡಗಾಡು ಜನರು ಟಿಬೆಟ್ ಪ್ರಭಾವಕ್ಕೆ ಅತೀತರಾಗಿದ್ದರು. ಈ ಗುಡ್ಡಗಾಡು ಜನರು, ಬೌದ್ಧರಂತೆ, ಭಾರತದ ಪ್ರಜೆಗಳಾದರು. 1947ರ ಆಗಸ್ಟ್ ನಂತರ ಹೊಸ ಸರ್ಕಾರ

ಬ್ರಿಟಿಷರಿಂದ ಒಪ್ಪಂದದನ್ವಯ ಗಡಿಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡಾಗ ಅನುಪಸ್ಥಿತಿಯಲ್ಲೇ ಭಾರತೀಯ ಪ್ರಜೆಗಳೆನ್ನಿಸಿಕೊಂಡರು. ಸ್ವಾತಂತ್ರ್ಯಾನಂತರ ಕ್ರಮೇಣ ನವದೆಹಲಿ ಸರ್ಕಾರ ಬ್ರಿಟಿಷರು ತೆರವು ಮಾಡಿದ ಜಾಗಗಳನ್ನು ವಶಕ್ಕೆ ತೆಗೆದುಕೊಳ್ಳಲಾರಂಭಿಸಿತು. 1951ರ ಫೆಬ್ರುವರಿಯಲ್ಲಿ ಸೇನೆಯ ಸಣ್ಣ ತುಕಡಿಯೊಂದು ರಾಜಕೀಯ ಅಧಿಕಾರಿಯೊಬ್ಬರೊಂದಿಗೆ ತವಾಂಗ್‌ಗೆ ಭೇಟಿಕೊಟ್ಟಿತು. ಹಾಗೂ ನೀವುಗಳು ಇನ್ನು ಮುಂದೆ ಲ್ಹಾಸಾಗೆ ಕಪ್ಪಕಾಣಿಕೆ ಕೊಡುವ ಅಗತ್ಯವಿಲ್ಲವೆಂದು ಇಲ್ಲಿನ ಲಾಮಾಗಳಿಗೆ ಭಾರತ ಸರ್ಕಾರದ ಈ ತಂಡ ತಿಳಿಸಿತು. ಅಧಿಕಾರಿಗಳು, ಈಗ ನೇಫಾ (ನಾರ್ತ್ ಈಸ್ಟ್ ಫ್ರಾಂಟಿಯರ್ ಏಜೆನ್ಸಿ) ಎಂದು ಕರೆಯಲಾಗುವ ಪ್ರದೇಶಗಳಿಗೂ ಹರಡಿಕೊಂಡರು. ಇಲ್ಲಿಗೆ ಭಾರತೀಯ ಗಡಿ ಆಡಳಿತ ಸೇವೆಯ ಅಧಿಕಾರಿಗಳನ್ನು ನೇಮಿಸಲಾಯಿತು. ಈ ಅಧಿಕಾರಿಗಳಿಗೆ ರೂಕ್ಷ ಗುಡ್ಡಗಾಡು ಜನರೊಂದಿಗೆ ಹೇಗೆ ವರ್ತಿಸಬೇಕೆಂಬ ಬಗ್ಗೆ ತರಬೇತಿ ನೀಡಲಾಯಿತು. ನೆಹರೂ ನಂಬಿಕಸ್ಥನೂ ಈಗ ಭಾರತೀಯ ಪ್ರಜೆಯೂ ಆಗಿದ್ದ ಬ್ರಿಟಿಷ್ ಸಂಜಾತ ಮಾನವ ಶಾಸ್ತ್ರಜ್ಞ ವೆರ್ರಿಯರ್ ಎಲ್ವಿನ್ ಹೊಸ ಅಧಿಕಾರಿಗಳಿಗೆ ತರಬೇತಿ ನೀಡಿದರು.

ಚೀನೀಯರು ಪಶ್ಚಿಮ ವಲಯದಲ್ಲಿ ಹೆಜ್ಜೆಯೂರುವ ಮೂಲಕ ತಮ್ಮ ವಿಸ್ತರಣಾ ಕಾರ್ಯದಲ್ಲಿ ಮಗ್ನರಾಗಿದ್ದರು. ಇಲ್ಲೂ ಸಹ ಚೀನದ ಗಡಿಗೆ ಹೊಂದಿಕೊಂಡಿದ್ದ ಲಡಾಖ್ ಬೌದ್ಧ ಧರ್ಮೀಯರ ಪ್ರಾಬಲ್ಯವುಳ್ಳ ಪ್ರದೇಶವಾಗಿತ್ತು. ಲಡಾಖ್ ಹತ್ತನೇ ಶತಮಾನದಿಂದ ಸ್ವತಂತ್ರ ದೇಶವಾಗಿತ್ತು. ಕಳೆದ 150 ವರ್ಷಗಳಿಂದ ಅದು ಕಾಶ್ಮೀರದ ಮಾಂಡಲಿಕನ ಆಳ್ವಿಕೆಗೊಳಪಟ್ಟಿತ್ತು. ಈ ಮಾಂಡಲಿಕನೂ ಭಾರತದೊಂದಿಗೇ ಮೈತ್ರಿಪರನಾಗಿದ್ದ.

ಈಶಾನ್ಯದ ಲಡಾಖ್ ಮತ್ತು ಸಿಂಕಿಯಾಂಗ್ ನಡುವೆ ಅಕ್ಸಾಯಿ ಚಿನ್ ಎಂಬ ಪ್ರಸ್ಥಭೂಮಿ ಇದ್ದು, ಇದು ಬಂಜರು ನೆಲವಾಗಿದ್ದು ಆಗೊಮ್ಮೆ ಈಗೊಮ್ಮೆ ಇಲ್ಲಿ ಗಿಡಮೂಲಿಕೆ ಸಸ್ಯದ ಪೊದೆಗಳಷ್ಟೇ ಕಾಣಿಸಿಕೊಳ್ಳುತ್ತಿದ್ದವು. ಗತಕಾಲದಲ್ಲಿ ಲಡಾಖಿನ ಕುರುಬರು ಅಕ್ಸಾಯಿ ಚಿನ್‌ನಲ್ಲಿ ಕುರಿ ಮೇಯಿಸುತ್ತಿದ್ದರು ಹಾಗೂ ಇಲ್ಲಿಂದ ಉಪ್ಪು ಸಂಗ್ರಹಿಸುತ್ತಿದ್ದರು. 1842ರಲ್ಲಿ ಒಪ್ಪಂದವೊಂದರ ಮೂಲಕ ಈ ಪ್ರದೇಶವನ್ನು ಕಾಶ್ಮೀರದ ಭಾಗವೆಂದು ಗುರುತಿಸಲಾಯಿತು. ಇದಕ್ಕೆ ಬ್ರಿಟಿಷರು ಮಾನ್ಯತೆ ನೀಡಿದ್ದರು. ರಷ್ಯನ್ನರು, ಬ್ರಿಟಿಷ್ ಭಾರತದೊಳಕ್ಕೆ ತಮ್ಮ ಸೇನೆ ನುಗ್ಗಿಸಲು ಈ ಪ್ರದೇಶವನ್ನು ಬಳಸಿಕೊಳ್ಳಬಹುದೆಂಬುದು ಬ್ರಿಟಿಷರ ಚಿಂತೆಯಾಗಿತ್ತು.

ಬ್ರಿಟಿಷರು ಅಂದುಕೊಂಡಂತೆ ಏನೂ ಆಗಲಿಲ್ಲ. ಆದರೆ 1950ರ ನಂತರ ಚೀನೀಯರು ಅಕ್ಸಾಯಿ ಚಿನ್ ಪ್ರಸ್ಥಭೂಮಿ ಮೂಲಕ ಟಿಬೆಟ್ ಪ್ರಾಂತ್ಯಕ್ಕೆ ದಾರಿಕಂಡುಕೊಂಡರು. ಸಿಂಕಿಯಾಂಗ್‌ನ ಯಾರ್ಕಾಂಡ್ ಪಟ್ಟಣದಿಂದ ಈ ಪ್ರಸ್ಥಭೂಮಿ ಮೂಲಕ ದಾರಿ ಮಾಡಿಕೊಂಡರು. ಪೀಕಿಂಗ್ ಈ ಪ್ರದೇಶದ ಸರ್ವೆ ಮಾಡಲು ಸಿಬ್ಬಂದಿಯನ್ನು ಕಳುಹಿಸಿತು. 1956ರಲ್ಲಿ ಅಕ್ಸಾಯಿ ಚಿನ್ ಆಚೀಚೆ ಉದ್ದಕ್ಕೂ ರಸ್ತೆ ನಿರ್ಮಾಣ ಕಾರ್ಯ ಆರಂಭಿಸಿತು. ಅಕ್ಟೋಬರ್ 1957ರ ವೇಳೆಗೆ ರಸ್ತೆ ಸಿದ್ಧವಾಯಿತು. ಯಾರ್ಕಾಂಡ್‌ನಿಂದ ಲ್ಹಾಸಾವರೆಗೆ

ಹತ್ತು ಟನ್ ಭಾರದ ಶಸ್ತ್ರಾಸ್ತ್ರ ತುಂಬಿದ, ಸೈನಿಕರು ತುಂಬಿದ ಮಿಲಿಟರಿ ಟ್ರಕ್ಕುಗಳು ಸಂಚರಿಸಲು ಯೋಗ್ಯ ಎನ್ನುವಂತೆ ಈ ರಸ್ತೆಯನ್ನು ನಿರ್ಮಿಸಲಾಗಿತ್ತು.

ಪಶ್ಚಿಮದಲ್ಲಿ ಚೀನೀಯರ ಈ ಚಟುವಟಿಕೆಗಳು, ಪೂರ್ವದಲ್ಲಿ ಭಾರತೀಯರ ಚಟುವಟಿಕೆಗಳು ಪರಸ್ಪರ ಕಣ್ಣಳತೆಯ ದಿಟ್ಟನೋಟದಲ್ಲೆ ನಡೆದಿದ್ದವು. ಆದರೆ ಹೊರಗಿನ ಪ್ರಪಂಚಕ್ಕೆ, ಹಾಗೂ ಆಯಾ ಪ್ರಜೆಗಳಿಗೆ ಏಷ್ಯಾದ ಈ ಎರಡು ನೆರೆರಾಷ್ಟ್ರಗಳೂ ಆದರ್ಶಪ್ರಾಯವಾದ ಮೈತ್ರಿ ಮತ್ತು ಸಹಕಾರದ ಮಧುರ ಬಾಂಧವ್ಯ ಹೊಂದಿರುವ ರಾಷ್ಟ್ರಗಳಾಗಿಯೇ ಕಾಣುತ್ತಿದ್ದವು. ಬಾಹ್ಯ ಪ್ರಪಂಚದ ದೃಷ್ಟಿಯಲ್ಲಿ 'ಭಾಯಿ-ಭಾಯಿ'ಯೇ.

VI

ಭ್ರಾತೃತ್ವ ಭಾವನೆಯ ಮೈತ್ರಿ ಮತ್ತು ಸೌಹಾರ್ದಯುತ ಒಮ್ಮತದೊಂದಿಗೆ ಬಾಳ್ವೆ ಮಾಡುವಂಥ ಭರವಸೆ ಹುಟ್ಟಿಸುವ ರಾಷ್ಟ್ರಗಳೇನಾದರೂ ಇದ್ದಲ್ಲಿ ಅವು ಭಾರತ ಮತ್ತು ಪಾಕಿಸ್ತಾನ ಮಾತ್ರ. ಈ ಎರಡು ರಾಷ್ಟ್ರಗಳ ನಡುವೆ ಜನಾಂಗೀಯ ಸಂಬಂಧ, ಭಾಷಾಸಂಬಂಧ, ಭೌಗೋಳಿಕ, ಆರ್ಥಿಕ, ಸಾಂಸ್ಕೃತಿಕ–ಹೀಗೆ ಎಲ್ಲ ಬಗೆಯ ಸಂಬಂಧದ ಎಳೆಗಳು ಇವೆಯೆಂದು1952ರ ಜನವರಿಯಲ್ಲಿ ಮುಂಬಯಿಯ ಪತ್ರಿಕೆಯೊಂದು ಈ ರೀತಿ ಬರೆದಿತ್ತು.

ಆದಾಗ್ಯೂ ಪಾಕಿಸ್ತಾನದೊಂದಿಗೆ ಭಾರತದ ಬಾಂಧವ್ಯ ಶುರುವಿನಿಂದಲೂ ವಿಷಪೂರಿತ ವಾಗಿತ್ತು. ಹಿಂಸಾಚಾರ, ಪರಸ್ಪರ ಅಪನಂಬಿಕೆ, ನಿರಂತರವಾದ ದ್ವೇಷ ಭಾವನೆಗಳು–ಈ ಹಿನ್ನೆಲೆಯಲ್ಲಿ ದೇಶದ ವಿಭಜನೆಯಾಗಿತ್ತು. 1949-50ರ ಚಳಿಗಾಲದಲ್ಲಿ ಪೂರ್ವ ಪಾಕಿಸ್ತಾನದಲ್ಲಿ ಕೋಮುಗಲಭೆಯ ಚಂಡಮಾರುತವೆದ್ದಿತ್ತು. ನೂರಾರು ಸಾವಿರಾರು ಹಿಂದೂಗಳು ಗಡಿದಾಟಿ ಭಾರತಕ್ಕೆ ಬಂದಿದ್ದರು. ಆಗ ನೆಹರೂ, ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಕತ್ ಅಲೀ ಖಾನ್ ಅವರಿಗೆ ಪತ್ರ ಬರೆದು, ತಾವಿಬ್ಬರೂ ಕೋಮುಗಲಭೆಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟು ಶಾಂತಿ ಉಂಟುಮಾಡಬಹುದೆಂದು ತಿಳಿಸಿದ್ದರು. ಇದನ್ನು ಲಿಯಾಕತ್ ಅಲೀ ಖಾನ್ ನಿರಾಕರಿಸಿದರು. ಆದರೆ, ದೆಹಲಿಗೆ ಬಂದು, ಉಭಯರಾಷ್ಟ್ರಗಳು ತಮ್ಮಲ್ಲಿನ ಅಲ್ಪಸಂಖ್ಯಾತರನ್ನು ಮಾನವೀಯತೆಯಿಂದ ನಡೆಸಿಕೊಳ್ಳಲು ಬದ್ಧವಾಗುವಂಥ ಒಪ್ಪಂದ ಒಂದಕ್ಕೆ ಸಹಿಹಾಕಲು ಒಪ್ಪಿದ್ದರು. ಆದರೆ ನೆಹರೂ-ಲಿಯಾಕತ್ ಅಲೀ ಒಪ್ಪಂದ ನಿರಾಶ್ರಿತರ ಪ್ರವಾಹದೋಪಾದಿ ಆಗಮನವನ್ನು ನಿಯಂತ್ರಿಸುವುದರಲ್ಲಿ ವಿಫಲಗೊಂಡಿತು. ಪಶ್ಚಿಮ ಬಂಗಾಳದಲ್ಲಿನ ಹಿಂದೂಗಳು ತುಂಬ ವ್ಯಗ್ರರಾಗಿದ್ದರು. ಕೆಲವರಂತೂ ಸರ್ಕಾರ ಪಾಕಿಸ್ತಾನದ ಮೇಲೆ ಸಮರ ಸಾರಬೇಕೆನ್ನುತ್ತಿದ್ದರು.

ಈ ಘರ್ಷಣೆಗಳಲ್ಲಿ ಎರಡು ಪ್ರಮುಖವಾದ ಮಾನವೀಯ ಅಂಶಗಳಿದ್ದವು. ಅವು, ನೆಲ ಮತ್ತು ಜಲಕ್ಕೆ ಸಂಬಂಧಿಸಿದವು. ಮೊದಲನೆಯದು ಕಾಶ್ಮೀರ ಸ್ಥಾನಮಾನ ಕುರಿತದ್ದು. ಎರಡನೆಯದು ಸಿಂಧೂ ಮತ್ತು ಅದರ ಐದು ಉಪನದಿಗಳ ನೀರಿನ ನ್ಯಾಯಯುತ ಹಂಚಿಕೆಗೆ

ಸಂಬಂಧಿಸಿದ್ದು. ಈ ನದಿಗಳು, ಪೂರ್ವದಿಂದ ಪಶ್ಚಿಮಕ್ಕೆ ಭಾರತದಿಂದ ಪಾಕಿಸ್ತಾನದತ್ತ ಹರಿಯುತ್ತಿದ್ದವು. ಸಿಂಧೂ ಮತ್ತು ಝೀಲಂ, ಬೊಗಸೆ ಭರ್ತಿಗೆ ಮುನ್ನವೇ ಪಾಕಿಸ್ತಾನದೊಳಕ್ಕೆ ಹರಿಯುತ್ತಿದ್ದವು. ಉಳಿದ ನಾಲ್ಕೂ ನದಿಗಳು ಮೈಲಿಗಟ್ಟಳೆ ಭಾರತದ ಪ್ರದೇಶದಲ್ಲಿ ಹರಿಯುತ್ತಿದ್ದವು. ಇದರಿಂದಾಗಿ ಈ ನದಿಗಳ ಹರಿಯುವಿಕೆ ನಿಯಂತ್ರಿಸಿ, ಪಾಕಿಸ್ತಾನಕ್ಕೆ ಹೋಗುವ ಮುನ್ನ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದು ಭಾರತಕ್ಕೆ ಸಾಧ್ಯವಿತ್ತು.

ವಿಭಜನೆಯ ನಂತರ, ಪೂರ್ವ ಮತ್ತು ಪಶ್ಚಿಮ ಪಂಜಾಬ್ ಸರ್ಕಾರಗಳು ಯಥಾಸ್ಥಿತಿ ಪಾಲನೆ ಒಪ್ಪಂದವೊಂದಕ್ಕೆ ಸಹಿಹಾಕಿದ್ದವು. ಈ ಒಪ್ಪಂದದ ಪ್ರಕಾರ ನದಿಗಳಲ್ಲಿ ನೀರು ಅನಿಯಂತ್ರಿತವಾಗಿ ಹರಿಯುತ್ತಿತ್ತು. 1948ರ ಏಪ್ರಿಲ್‌ನಲ್ಲಿ ಈ ಒಪ್ಪಂದ ಚ್ಯುತಿ ಹೊಂದಿದಾಗ, ಭಾರತ ರಾವಿ ಮತ್ತು ಸಟ್ಲೇಜ್ ನದಿಗಳ ಪಶ್ಚಿಮದ ಹರಿಯುವಿಕೆಗೆ ತಡೆಯೊಡ್ಡಿತು. ಹೊಸ ಒಪ್ಪಂದ ಆಗಿಲ್ಲವೆಂಬುದು ಭಾರತದ ನಿಲುವಾಗಿತ್ತು. ಕಾಶ್ಮೀರದ ಮೇಲೆ ಪಾಕಿಸ್ತಾನ ನಡೆಸಿದ ಆಕ್ರಮಣದ ಸೇಡು ತೀರಿಸಿಕೊಳ್ಳಲು ಈ ಕ್ರಮ ಕೈಗೊಳ್ಳಲಾಯಿತೆಂಬ ಭಾವನೆಯೂ ಉಂಟಾಗಿತ್ತು. ಇದೆಲ್ಲ ಏನೇ ಇರಲಿ, ಪಶ್ಚಿಮ ಪಂಜಾಬಿನಲ್ಲಿ ಕಾಲುವೆಗಳು ಬತ್ತಿಹೋಗಿ ಅಲ್ಲಿನ ರೈತರಲ್ಲಿ ಭೀತಿ ಮೂಡಿಸಿದವು. ಒಂದೇ ತಿಂಗಳಲ್ಲಿ ಹೊಸ ಒಪ್ಪಂದವಾಗಿ ಕಾಲುವೆಗಳಲ್ಲಿ ನೀರು ಹರಿಯುವಿಕೆ ಪುನರಾರಂಭಗೊಂಡಿತು. ಆದರೆ, ಭಾರತದ ಕಡೆಯಿಂದ ಸಟ್ಲೇಜ್ ನದಿಗೆ ಭಕ್ರಾನಂಗಲ್ ಅಣೆಕಟ್ಟು ನಿರ್ಮಾಣ ಪಾಕಿಸ್ತಾನದಿಂದ ಹೊಸ ಪ್ರತಿಭಟನೆಗೆ ಕಾರಣವಾಯಿತು.

ಉಭಯ ಪಕ್ಷಗಳೂ ಈ ಸಮಸ್ಯೆಗೊಂದು ಕಾಯಂ ಪರಿಹಾರ ಬಯಸಿದವು. ಇದನ್ನು ಅಂತರರಾಷ್ಟ್ರೀಯ ಪಂಚಾಯಿತಿಗೊಪ್ಪಿಸಬೇಕೆಂದು ಪಾಕಿಸ್ತಾನ ಕೇಳಿತು. ಭಾರತ ಇದಕ್ಕೆ ಒಪ್ಪಲಿಲ್ಲ. ಶಾಂತಿದೂತನಾಗಿ ವಿಶ್ವಬ್ಯಾಂಕ್ ಪ್ರವೇಶಮಾಡಿತು. ಈ ವಿಷಯದಲ್ಲಿ ಉಭಯ ರಾಷ್ಟ್ರಗಳ ಮೊಂಡುತನ ಅರಿತಿದ್ದ ವಿಶ್ವಬ್ಯಾಂಕ್ ಒಂದು ಶಸ್ತ್ರಚಿಕಿತ್ಸಕ ಪರಿಹಾರವನ್ನು ಮುಂದಿಟ್ಟಿತು. ಮೂರು ನದಿಗಳ ನೀರು ಪಾಕಿಸ್ತಾನಕ್ಕೆ ಹರಿಯಬೇಕು. ಇನ್ನು ಮೂರು ನದಿಗಳ ನೀರು ಭಾರತಕ್ಕೆ ಹರಿಯಬೇಕು ಎನ್ನುವುದೇ ಈ ಪರಿಹಾರ. ವಿಶ್ವಬ್ಯಾಂಕ್ 1954ರ ಫೆಬ್ರುವರಿಯಲ್ಲಿ ಇದನ್ನು ಸೂಚಿಸಿತಾದರೂ ಈ ಒಪ್ಪಂದಕ್ಕೆ ಆಖೈರಾಗಿ ಸಹಿಹಾಕಲು ಎರಡು ರಾಷ್ಟ್ರಗಳೂ ಆರು ವರ್ಷ ತೆಗೆದುಕೊಂಡವು.

ಕಾಶ್ಮೀರ ಇರಲಿ ಅಥವಾ ಉಪಖಂಡದಲ್ಲಿ ಯಾವುದೇ ಸಮಸ್ಯೆ ಆಂತರಿಕ ರಾಜಕಾರಣದಿಂದಾಗಿ ಜಟಿಲವಾಗಿ ಬಿಡುತ್ತಿತ್ತು. ನದಿ ನೀರಿನ ಒಪ್ಪಂದವೂ ಆಂತರಿಕ ರಾಜಕಾರಣದ ಬಿಸಿಯನ್ನು ಎದುರಿಸಬೇಕಾಯಿತು. ಮಾತುಕತೆಗೆ ಮುಂದಾಗುತ್ತಿದ್ದವರ ಮೇಲೆ,–ಅವರು ಭಾರತ ಸರ್ಕಾರದ ನಾಯಕರಾಗಿರಲಿ, ಅಥವಾ ಪಾಕಿಸ್ತಾನದ ನಾಯಕರಿರಲಿ– ಎದುರು ಪಕ್ಷದ ಜೊತೆ ಸೇರಿಕೊಂಡು ತಮ್ಮ ದೇಶಕ್ಕೆ ದ್ರೋಹಬಗೆದರೆಂಬ ಆರೋಪ ಬರುತ್ತಿತ್ತು. 1949-51ರ ವಾಣಿಜ್ಯ ಸಮರ ಇದಕ್ಕೊಂದು ನಿದರ್ಶನ. ಇದರಿಂದಾಗಿ ಭಾರತದ ರೂಪಾಯಿಯನ್ನು ಅಪಮೌಲ್ಯಗೊಳಿಸಬೇಕಾಯಿತು. ಇದಕ್ಕೆ ಪ್ರತಿಭಟಿಸಿ ಪಾಕಿಸ್ತಾನ ಸೆಣಬು

ಸರಬರಾಜು ನಿಲ್ಲಿಸಿತು. ಪ್ರತೀಕಾರವಾಗಿ ಭಾರತ ಕಲ್ಲಿದ್ದಲು ಪೂರೈಕೆ ನಿಲ್ಲಿಸಿತು. 1951 ಫೆಬ್ರುವರಿಯಲ್ಲಿ, ನೆಹರೂ ಪಾಕಿಸ್ತಾನ ರೂಪಾಯಿಯ ಸರಿಸಮ ಬೆಲೆ ಮಾನ್ಯ ಮಾಡಲು ಒಪ್ಪಿದಾಗಲೇ ಈ ತಕರಾರು ಇತ್ಯರ್ಥಗೊಂಡದ್ದು. ನೆಹರೂ ನಿರ್ಧಾರವನ್ನು ವಾಣಿಜ್ಯ ಮಂಡಳಿ ಸ್ವಾಗತಿಸಿತು. ಆದರೆ ಎಲ್ಲ ರಾಜಕಾರಣಿಗಳೂ ವಿರೋಧಿಸಿದರು. ನವದೆಹಲಿಯಲ್ಲಿ ಮೂಡಿದ್ದ ಸರ್ವಸಮ್ಮತ ಅಭಿಪ್ರಾಯದ ಪ್ರಕಾರ "ಭಾರತಕ್ಕೆ ಸಂಪೂರ್ಣ ಸೋಲಾಗಿತ್ತು". "ಸರ್ದಾರ್ ಪಟೇಲರು ಬದುಕಿದ್ದಿದ್ದರೆ ಇಂಥ ಮುಖಭಂಗವಾಗುತ್ತಿರಲಿಲ್ಲ" ಎನ್ನುವ ಭಾವನೆ ಪಕ್ಷದ ಕಛೇರಿಯಲ್ಲಿದೆ ಎಂದು ಕಾಂಗ್ರೆಸ್ ಸದಸ್ಯರೊಬ್ಬರು ಹೇಳಿದ್ದೂ ವರದಿಯಾಗಿತ್ತು. ನಿರಾಶ್ರಿತ ನಾಯಕರೊಬ್ಬರು, "ಈಗಿರುವ ನಿಜವಾದ ಪ್ರಶ್ನೆಯೆಂದರೆ ಮುಂದೆ ಯಾವ ವಿಷಯದಲ್ಲಿ ನೆಹರೂ ಪಾಕಿಸ್ತಾನಕ್ಕೆ ಶರಣಾಗುವರೆಂಬುದನ್ನು ಪತ್ತೆ ಹಚ್ಚುವುದೇ ಆಗಿದೆ. ಅದು ಕಾಶ್ಮೀರ ಇರಬಹುದೇ?" ಎಂದು ಕಟಕಿಯಾಡಿದ್ದರು. ಹಿಂದೂ ಮಹಾಸಭಾದ ವಕ್ತಾರರ ಅಂಬೋಣ: "ವಿಶ್ವ ನಾಯಕ ಪಟ್ಟಕ್ಕಾಗಿ ನೆಹರೂ ಇಡೀ ಭಾರತವನ್ನು ಪಾಕಿಸ್ತಾನಕ್ಕೆ ಒಪ್ಪಿಸುವ ಮಟ್ಟಕ್ಕೂ ಹೋಗಬಲ್ಲರು". ಆರ್.ಎಸ್.ಎಸ್.ನ ಆರ್ಗನೈಸರ್ "ಇದು ಮುಂದೆ ಬರಲಿರುವುದರ ಸೂಚಿಯಾಗಿದೆ. ಜನಸಮುದಾಯ ನೆಹರೂ ಅವರನ್ನು ನಿಯಂತ್ರಿಸದಿದ್ದರೆ ಇನ್ನಷ್ಟು ಶರಣಾಗತಿ, ಇನ್ನಷ್ಟು ತುಷ್ಟೀಕರಣ" ಎಂದು ಟೀಕಿಸಿತ್ತು.

ಪಾಕಿಸ್ತಾನದಲ್ಲೂ ಇದೇ ಮನಃಸ್ಥಿತಿ ಇತ್ತು. ಭಾರತಕ್ಕೆ ತೋರಿದ ಯಾವುದೇ ರಿಯಾಯಿತಿಯನ್ನೂ ಶತ್ರುವಿನ ತುಷ್ಟೀಕರಣವೆಂದು ವಿರೋಧ ಪಕ್ಷಗಳ ರಾಜಕಾರಣಿಗಳು ಟೀಕಿಸುತ್ತಿದ್ದರು. ಜನಸಮುದಾಯದ ನೆಲೆಯಲ್ಲಿ ಮಿಶ್ರ ಭಾವನೆಗಳಿರುತ್ತಿದ್ದವು. ರಾಷ್ಟ್ರೀಯತೆ ಸಿದ್ಧಾಂತ ಎರಡೂ ದೇಶಗಳ ಜನಸಾಮಾನ್ಯರನ್ನು ದೂರಮಾಡಿತ್ತು. ಆದರೆ ಸಮುದಾಯ ಸಂಸ್ಕೃತಿ ಅವರನ್ನು ಮತ್ತೆ ಹತ್ತಿರಕ್ಕೆ ತಂದಿತ್ತು. ಅವರ ಊಟ-ವಸತಿ ಎಲ್ಲವೂ ಒಂದೇ ರೀತಿ ಎಂಬುದಷ್ಟೇ ಅಲ್ಲ ಉಭಯ ರಾಷ್ಟ್ರಗಳ ಜನಸಾಮಾನ್ಯರ ಮನರಂಜನೆ, ಉಲ್ಲಾಸಗಳು, ಅಭಿರುಚಿಗಳೂ ಒಂದೇ ತೆರನಾಗಿದ್ದವು. ಭಾರತದ ಚಲನಚಿತ್ರಗಳನ್ನು ಪಾಕಿಸ್ತಾನಿಗಳು ಇಷ್ಟಪಡುತ್ತಿದ್ದರು. ಪಾಕಿಸ್ತಾನದ ಕ್ರಿಕೆಟ್ ಆಟಗಾರರು ಭಾರತದಲ್ಲಿ ಆಡಲು ಬಂದಾಗ ಅವರಿಗೆ ಭವ್ಯ ಸ್ವಾಗತ ದೊರೆಯುತ್ತಿತ್ತು.

ಉಭಯ ರಾಷ್ಟ್ರಗಳ ಜನಸಾಮಾನ್ಯರ ಮನಸ್ಸಿನ ಹೊಯ್ದಾಟಗಳು 1955ರಲ್ಲಿ ಕರಾಚಿಯ 'ಡಾನ್' ಪತ್ರಿಕೆಯ ಅಂಕಣದಲ್ಲಿ ನಡೆದ ಪತ್ರವ್ಯವಹಾರದಲ್ಲಿ ಚೆನ್ನಾಗಿ ಪ್ರತಿಫಲನಗೊಂಡಿವೆ. ಇತ್ತೀಚೆಗೆ ಭಾರತದಲ್ಲಿನ ತನ್ನ ಬಂಧುಗಳ ಮನೆಗೆ ಹೋಗಿ ಬಂದಿದ್ದ ಮಹಿಳೆಯೊಬ್ಬಳು ಅಮೃತಸರದಿಂದ ಅಂಬಾಲವರೆಗಿನ ತನ್ನ ರೈಲು ಪ್ರಯಾಣದ ಅನುಭವಗಳನ್ನು ಈ ಪತ್ರಿಕೆಗೆ ಬರೆದಿದ್ದಳು. ಆಕೆ ಪಾಕಿಸ್ತಾನದಿಂದ ಬಂದವಳು ಎಂದು ಗೊತ್ತಾದ ಕೂಡಲೇ ರೈಲಿನಲ್ಲಿದ್ದ ಸಿಂಧ್ ಮತ್ತು ಪಶ್ಚಿಮ ಪಂಜಾಬಿನ ನಿರಾಶ್ರಿತ ಪ್ರಯಾಣಿಕರು ನಿಂದಿಸಲಾರಂಭಿಸಿದರು. ರೈಲಿನಲ್ಲಿದ್ದ ನಿರಾಶ್ರಿತರಲ್ಲದ ಹಿಂದೂ ಪ್ರಯಾಣಿಕರು ಇದಕ್ಕೆ ಪ್ರತಿಭಟಿಸಿದರು. "ನಿರಾಶ್ರಿತರಲ್ಲದವರಿಗೆ ಪಾಕಿಸ್ತಾನದಿಂದ ಬಂದಿರುವ ನಿರಾಶ್ರಿತರ

ಕಷ್ಟನಷ್ಟ ನೋವುಗಳು ಅರ್ಥವಾಗುವುದಿಲ್ಲವೆಂದು" ನಿರಾಶ್ರಿತ ಪಯಣಿಗರು ಪ್ರತಿಭಟನೆಗೆ ಸೊಪ್ಪುಹಾಕಲಿಲ್ಲ. ಭಾರತದಲ್ಲಿ ಕಂಡುಬಂದ ಹಗೆತನ ಮನೋಭಾವ ಕುರಿತ ಈ ಪತ್ರ ಹಲವಾರು ಪತ್ರಗಳಿಗೆ ಪ್ರೇರಣೆ ಒದಗಿಸಿತು. ಗಡಿಯ ಈ ಭಾಗದಲ್ಲಿರುವ ಜನ ಎಷ್ಟು ಉದಾರ ಹೃದಯಿಗಳು, ಸ್ನೇಹಶೀಲರು ಎಂಬುದನ್ನು ತೋರಿಸಿಕೊಡಬೇಕಾಗಿದೆ ಎಂದು ಅನೇಕ ಮಂದಿ ಬರೆದಿದ್ದರು. ಇನ್ನು ಮುಂದೆ ಭಾರತಕ್ಕೆ ಹೋಗುವವರು ತಮ್ಮ ಸಹ ಪಯಣಿಗರಿಗೆ ಎಲೆ ಅಡಿಕೆ ಕೊಟ್ಟು ಸೌಹಾರ್ದದಿಂದ ಮಾತನಾಡಿಸಬೇಕೆಂದೂ ಭಾರತ-ಪಾಕಿಸ್ತಾನದ ನಡುವೆ ವೈಮನಸ್ಯ ಬೆಳೆಸುವಂಥ ಮಾತುಗಳನ್ನಾಡಬಾರದೆಂದೂ ಒಬ್ಬರು ಸಲಹೆ ಮಾಡಿದ್ದರು. ಇಂಥ ತಪ್ಪು ಹೇಳಿಕೆಗಳ ಪ್ರಕಟಣೆಯಿಂದಾಗಿ ಭಾರತ-ಪಾಕಿಸ್ತಾನದ ನಡುವೆ ಕಹಿಭಾವನೆ ಹೆಚ್ಚಿ ಸ್ನೇಹ ವಿಶ್ವಾಸಗಳಿಗೆ ಧಕ್ಕೆಯಾಗುವುದೆಂದು ಮಹಿಳಾ ಬಾತ್ಮೀದಾರರೊಬ್ಬರು ಅಸಮಾಧಾನ ವ್ಯಕ್ತಪಡಿಸಿದ್ದರು. ಇದಕ್ಕೆ ಉತ್ತರವಾಗಿ ಮೊದಲು ಪತ್ರ ಬರೆದಿದ್ದ ಮಹಿಳೆ ಈ ರೀತಿ ಎಚ್ಚರಿಕೆ ನೀಡಿದ್ದರು: "ಒಬ್ಬ ಪಾಕಿಸ್ತಾನಿ ಪ್ರಜೆಯಾಗಿ (ಆಕೆ ಪಾಕಿಸ್ತಾನಿ ಎಂದೇ ನಾನು ಭಾವಿಸುವೆ) ಆಕೆ "ಭಾರತ ಮತ್ತು ಪಾಕಿಸ್ತಾನ" ಎನ್ನುವ ಬದಲು "ಪಾಕಿಸ್ತಾನ ಮತ್ತು ಭಾರತ" ಎಂದು ಹೇಳುವ ಸೌಜನ್ಯವನ್ನಾದರೂ ತೋರಬಹುದಿತ್ತು."

VII

ಭಾರತದ ವಿದೇಶಾಂಗ ನೀತಿ, ವಿಶ್ವದ ಯಾವುದೇ ಭಾಗದಲ್ಲೂ ವಸಾಹತುಶಾಹಿಯನ್ನು ವಿರೋಧಿಸುವುದಾಗಿತ್ತು. ಈ ನೀತಿಗನುಗುಣವಾಗಿ ಇನ್ನೂ ವಿದೇಶೀಯರ ಹತೋಟಿಯಲ್ಲಿರುವ ಪ್ರದೇಶಗಳ ಮೇಲೆ ಭಾರತದ ಹಕ್ಕೊತ್ತಾಯ ಮಂಡನೆ ಸಹಜ ಕ್ರಮವಾಗಿತ್ತು. 1947ರಲ್ಲಿ ಬ್ರಿಟಿಷರು ಭಾರತ ತ್ಯಜಿಸಿದಾಗ ಪೋರ್ಚುಗೀಸರು ಗೋವೆಯಲ್ಲೇ ಉಳಿದುಕೊಂಡರು. ಹಾಗೂ ಭಾರತದಲ್ಲಿ ತಮ್ಮ ಹತೋಟಿಯಲ್ಲಿದ್ದ ಪ್ರದೇಶಗಳಿಂದ ಕದಲಲಿಲ್ಲ. ಇದೇ ರೀತಿ ಫ್ರೆಂಚರೂ ದಕ್ಷಿಣದ ಪುದುಚೇರಿ ಹಾಗೂ ಪೂರ್ವದ ಚಂದ್ರನಾಗೂರ್‌ಗಳಿಂದ ಕಾಲ್ತೆಗೆಯಲಿಲ್ಲ.

1949ರ ಜೂನ್‌ನಲ್ಲೇ ಚಂದ್ರನಾಗೂರಿನ ಜನ ಭಾರತದ ಜೊತೆ ವಿಲೀನಕ್ಕೆ ಬಹುಮತದಿಂದ ಒಪ್ಪಿಗೆ ನೀಡಿದ್ದರು. ಈ ಚುನಾವಣೆ ದೇಶಭಕ್ತಿಯ ಅದ್ಭುತ ಪ್ರದರ್ಶನವಾಗಿತ್ತು. ಭಾರತೀಯ ಉಡುಪು ಧರಿಸಿದ ತಾಯಿಯೊಬ್ಬಳು ಪಾಶ್ಚಾತ್ಯ ಉಡುಗೆ ತೊಟ್ಟಿದ್ದ ತನ್ನ ಮಗುವನ್ನು ಮರಳಿ ತನ್ನ ಮಡಿಲಿಗೆ ಸೆಳೆದುಕೊಳ್ಳುವ ಭಂಗಿಯಲ್ಲಿದ್ದ ಭಿತ್ತಿಚಿತ್ರಗಳು ಈ ಚುನಾವಣೆಯಲ್ಲಿ ಕಂಡುಬಂದಿದ್ದವು. ಒಂದು ವರ್ಷದ ನಂತರ ಚಂದ್ರನಾಗೂರ್ ಪ್ರದೇಶ ಭಾರತಕ್ಕೆ ಹಸ್ತಾಂತರಗೊಂಡಿತು. ಆದರೆ ಫ್ರೆಂಚರು ದಕ್ಷಿಣ ಭಾರತಕ್ಕೆ ಅಂಟಿಕೊಂಡೇ ಇದ್ದರು. 1954ರ ವಸಂತಕಾಲದಲ್ಲಿ ಅಲ್ಲಿ ಪರಿಸ್ಥಿತಿ ಬಿಗಡಾಯಿಸಿತು. ಪುದುಚೇರಿಯಲ್ಲಿ ಭಾರತದೊಂದಿಗೆ ವಿಲೀನ ಪರ ಚಳವಳಿ ಶುರುವಾಯಿತು. ಪ್ರತಿದಿನ ಮದರಾಸಿನ ಫ್ರೆಂಚ್ ರಾಯಭಾರ ಪ್ರತಿನಿಧಿ ಕಛೇರಿ ಎದುರು ಪ್ರತಿಭಟನಾ ಸತ್ಯಾಗ್ರಹ ನಡೆಯಲಾರಂಭಿಸಿತು. ನವೆಂಬರ್

ಒಂದರಂದು ಫ್ರೆಂಚರು ತಮ್ಮ ವಶದಲ್ಲಿದ್ದ ಪ್ರದೇಶಗಳನ್ನು ಭಾರತಕ್ಕೆ ವಹಿಸಿಕೊಟ್ಟರು. ಜನ ಪಟಾಕಿ, ಬಾಣ ಬಿರುಸುಗಳಿಂದ ಇದನ್ನು ಸ್ವಾಗತಿಸಿದರು. ಇದರ ಮರುವರ್ಷವೇ ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಪುದುಚೇರಿಯ ಸಾಂಸ್ಕೃತಿಕ ತಂಡವೊಂದು ಭಾಗವಹಿಸಿತು. ಈ ತಂಡದಲ್ಲಿದ್ದ ಹೆಣ್ಣುಮಕ್ಕಳು ಫ್ರೆಂಚ್ ಗೀತೆಗಳನ್ನು ಹಾಡಿದರು.

ಗೋವೆ, ಪುದುಚೇರಿಗಳನ್ನು ಸ್ವಾಗತಿಸಿದ ನೆಹರೂ ಎರಡೂ ಸರ್ಕಾರಗಳ ಸಹಿಷ್ಣುತೆ, ಸದ್ಭಾವನೆ ಮತ್ತು ವಿವೇಕಗಳನ್ನು ಪ್ರಶಂಶಿಸಿದ್ದರು. ಫ್ರೆಂಚ್ ಭಾರತದ ಸಮಸ್ಯೆಯನ್ನು ಬಗೆಹರಿಸಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈ ಮಾತುಗಳ ಗುರಿ ಪೋರ್ಚುಗೀಸ್ ಆಗಿತ್ತು. ಪೋರ್ಚುಗೀಸರು ಗೋವೆ ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಎಷ್ಟು ದಿನ ಸಾಧ್ಯವೋ ಅಷ್ಟು ದಿನ ಇರೋಣ ಎನ್ನುವುದು ಅವರ ನಿಲುವಾಗಿತ್ತು. ಪುದುಚೇರಿಯ ವರ್ಗಾವಣೆಯನ್ನು ಅಂತಿಮಗೊಳಿಸುತ್ತಿದ್ದಂತೆ, ಪೋರ್ಚುಗೀಸ್ ಸರ್ವಾಧಿಕಾರಿ ಆಂಟೋನಿಯೋ ಡಿ ಆಲಿವೇರಿಯಾ ಸಲ್ಜಾರ್ ರಾಷ್ಟ್ರೀಯ ರೇಡಿಯೋ ಭಾಷಣದಲ್ಲಿ ಪೋರ್ಚುಗೀಸರ ಭಾರತೀಯ ವಸಾಹತುಗಳು ಐತಿಹಾಸಿಕ ಕಟ್ಟಳೆ ಹಾಗೂ ಕಾನೂನಿನ್ವಯ ಪೋರ್ಚುಗಲ್‌ಗೆ ಸೇರಿವೆಯೆಂದು ಘೋಷಿಸಿದ್ದರು. ಗೋವೆ ಭಾರತದಲ್ಲಿ ಪೋರ್ಚುಗೀಸ್ ಸಮುದಾಯವಾಗಿದೆ ಎಂದು ಸಾರಿದ್ದರು. ಗೋವೆ, ಪೂರ್ವದಲ್ಲಿನ ಪಾಶ್ಚಾತ್ಯ ಜಗತ್ತಿನ ಬೆಳಕಿನ ಪ್ರತಿನಿಧಿ ಎಂದು ಆಗ್ರಹಪೂರ್ವಕವಾಗಿಯೇ ನುಡಿದಿದ್ದರು. ಗೋವೆ ನಮ್ಮಲ್ಲೇ ಉಳಿಯಬೇಕು. ಅದನ್ನು ಪೋರ್ಚುಗೀಸ್ ಶೋಧನೆಗಳ ಸ್ಮಾರಕವಾಗಿ ಹಾಗೂ ಪೂರ್ವದಲ್ಲಿ ಪಶ್ಚಿಮದ ಚಿನ್ಮಯ ಕುಟೀರವಾಗಿ ಉಳಿಸಿಕೊಳ್ಳ ಬೇಕು ಎಂದು ಸಲ್ಜಾರ್ ತುಂಬಾ ಕಕ್ಕುಲಾತಿಯಿಂದ ಪ್ರಸಾರ ಭಾಷಣದಲ್ಲಿ ಹೇಳಿದ್ದರು.

ಸ್ವಾತಂತ್ರ್ಯ ಪೂರ್ವದಿಂದಲೇ ಗೋವಾದಲ್ಲಿ ಕಾಂಗ್ರೆಸ್ ಸಕ್ರಿಯವಾಗಿತ್ತು. ಗೋವಾ ಕಾಂಗ್ರೆಸ್ ಸಮಿತಿ ಕೆಲಸಮಾಡುತ್ತಿತ್ತು. ಗೋವಾ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಗೋವಾದಲ್ಲೇ ಹುಟ್ಟಿ ಬೆಳೆದ ಸ್ಥಳೀಯರಿದ್ದರು ಹಾಗೂ ಮುಂಬಯಿಗೆ ವಲಸೆ ಹೋದ ಗೋವಾದವರಿದ್ದರು. ಗೋವಾದಲ್ಲಿ ಪರಿಸ್ಥಿತಿ ಬ್ರಿಟಿಷರ ಭಾರತದ ಪರಿಸ್ಥಿತಿಗಿಂತ ಹೀನಾಯವಾಗಿದೆಯೆಂದು ಗೋವಾ ಕಾಂಗ್ರೆಸ್ಸಿಗರು ವಾದ ಮಾಡಿದ್ದೂ ಉಂಟು. ಗೋವಾದಲ್ಲಿ ವರ್ಣಭೇದ ನೀತಿ, ಜನಾಂಗೀಯ ಪೂರ್ವಾಗ್ರಹಗಳು ತಾಂಡವವಾಡುತ್ತಿದ್ದು ಮಾನವ ಹಕ್ಕುಗಳಂತೂ ಇಲ್ಲವೇ ಇಲ್ಲ ಎಂದು ಅವರು ಹೇಳುತ್ತಿದ್ದರು. 1946ರಲ್ಲಿ ಕಾಂಗ್ರೆಸ್‌ನ ವಾಮಪಂಥೀಯ ರಾಜಕಾರಣಿ ರಾಮ ಮನೋಹರ ಲೋಹಿಯಾ ಗೋವೆಗೆ ಭೇಟಿ ಕೊಟ್ಟು ವಸಾಹತು ಆಡಳಿತ ವಿರುದ್ಧ ದಂಗೆ ಏಳಲು ಜನತೆಗೆ ಕರೆ ನೀಡಿದ್ದರು. ಇದರ ಮೇರೆ ಪ್ರತಿಭಟನೆಗಳು, ಮುಷ್ಕರಗಳು, ಸತ್ಯಾಗ್ರಹಗಳು ಆರಂಭವಾದವು. ಇದೆಲ್ಲವನ್ನೂ ವಸಾಹತು ಸರ್ಕಾರ ಬಗ್ಗುಬಡಿಯಿತು. 1947ರ ಆಗಸ್ಟ್ 15ರಂದು ಗೋವಾದ ಕೆಲವೆಡೆ ಭಾರತದ ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸಲಾಯಿತು. ಆದರೆ ಪೊಲೀಸರು ಪ್ರತಿಭಟನಾಕಾರರನ್ನು ಸೆರೆಗೆ ದೂಡಿದರು.

ಗೋವೆಯಲ್ಲದೆ, ಕೊಂಕಣದ ಕರಾವಳಿಯವರೆಗೆ ಇನ್ನೂ ಕೆಲವು ಸಣ್ಣ ಪುಟ್ಟ ಪ್ರದೇಶಗಳು ಪೋರ್ಚುಗೀಸರ ಸ್ವಾಧೀನದಲ್ಲಿದ್ದವು. ಇಂಥ ಒಂದು ಪ್ರದೇಶ, ದಾಮನ್.

ಇಲ್ಲಿ ಪೋರ್ಚುಗೀಸ್, ಪೂರ್ವ ಆಫ್ರಿಕಾದಿಂದ ಕರೆ ತಂದಿದ್ದ 1500 ಆಫ್ರಿಕನ್ ಸೈನಿಕರುಗಳನ್ನೊಳಗೊಂಡ ಕಾವಲು ಪಡೆಯೊಂದನ್ನಿರಿಸಲಾಗಿತ್ತು. ಇದು ಭಾರತದ ಮುಂಬಯಿ ಪ್ರಾಂತ್ಯಕ್ಕೆ ಅಂಟಿಕೊಂಡ ಪ್ರದೇಶವಾಗಿತ್ತು. ಸ್ವಾತಂತ್ರ್ಯ ನಂತರ ಮುಂಬಯಿ ಪ್ರಾಂತ್ಯದಲ್ಲಿ ಪಾನ ನಿರೋಧ ಘೋಷಿಸಲಾಯಿತು. ಇದರಿಂದಾಗಿ ದಾಮನ್‌ನಿಂದ ಮುಂಬಯಿಗೆ ಅಕ್ರಮವಾಗಿ ಮದ್ಯ ಸಾಗಿಸುವ ದಂಧೆ ಶುರುವಾಯಿತು. ಭಾನುವಾರಗಳಂತೂ ಮುಂಬಯಿ-ದಮನ್ ನಡುವಣ ಎಲ್ಲಿಗಳಲ್ಲಿ 'ತೀರ್ಥ' ಯಾತ್ರಿಗಳೇ ತುಂಬಿರುತ್ತಿದ್ದರು. ದಮನ್ ಪ್ರವೇಶಕ್ಕೆ ಬಂದು ಸುರಾಪಾನ ಮಾಡಿ ಸಂಜೆ ಪವಿತ್ರ ತಾಯ್ನಾಡಾದ ಭಾರತಕ್ಕೆ ವಾಪಸಾಗುವುದು ಸಾಮಾನ್ಯ ದೃಶ್ಯವಾಗಿತ್ತು.

ಸುರಾಪಾನ ಹಾವಳಿಯ ಜೊತೆಗೆ, ತಮ್ಮ ವಸಾಹತುಗಳ ಬಗ್ಗೆ ಪೋರ್ಚುಗೀಸರ ಧೋರಣೆ ಕಂಡು ಭಾರತೀಯರು ರೋಸಿ ಹೋಗಿದ್ದರು, ಕ್ರುದ್ಧರಾಗಿದ್ದರು. ಗೋವೆ ಸಮಸ್ಯೆಯನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬಹುದೆಂದು ಶುರುವಿಗೆ ನೆಹರೂ ಸಾವಧಾನದಿಂದಲೇ ಇದ್ದರು. ಆದರೆ ಸಮಾಜವಾದಿ ಪಕ್ಷದ ತೀವ್ರಗಾಮಿಗಳಿಂದಾಗಿ ಅವರು ಕೈಕಟ್ಟುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಈ ತೀವ್ರಗಾಮಿಗಳು ಭಾರತ ಒಕ್ಕೂಟದೊಂದಿಗೆ ಸೇರಿಕೊಳ್ಳುವಂತೆ ಗೋವೆಯ ಜನರನ್ನು ಒತ್ತಾಯಪಡಿಸುವ ಸತ್ಯಾಗ್ರಹ ಆರಂಭಿಸಿದ್ದರು. 1954ರ ಜುಲೈನಲ್ಲಿ ಮುಂಬಯಿಯ ಕಾರ್ಯಕರ್ತರ ಪಡೆಯೊಂದು ದಾದ್ರಾವನ್ನು ವಶಪಡಿಸಿಕೊಂಡಿತು. ಇದರ ಮುಂದಿನ ತಿಂಗಳು ನಗರ್ ಹವೇಲಿಯೂ ಹೆಚ್ಚಿನ ಪ್ರತಿರೋಧವಿಲ್ಲದೆ ಮುಂಬಯಿ ಕಾರ್ಯಕರ್ತರ ವಶಕ್ಕೆ ತನ್ನನ್ನು ಒಪ್ಪಿಸಿಕೊಂಡಿತು. ನಂತರ ಒಂದು ಸಾವಿರ ಸ್ವಯಂಸೇವಕರು ಸ್ವಾತಂತ್ರ್ಯದಿನದಂದು ದಮನ್‌ನೊಳಕ್ಕೆ ನುಗ್ಗಲು ಪ್ರಯತ್ನಿಸಿದರು. ಆಗ ಭಾರತದ ಪೊಲೀಸರು ಸ್ವಯಂಸೇವಕರನ್ನು ತಡೆದರು. ತಮ್ಮ ಬೆಂಬಲಕ್ಕೆ ಬರುವಂತೆ ಸ್ವಯಂ ಸೇವಕರು ಪ್ರಧಾನ ಮಂತ್ರಿ ನೆಹರೂಗೆ ತಂತಿ ಕಳುಹಿಸಿದರು. ಆಗ ನೆಹರೂ ಅವರು "ಇಂಥ ಬಲಪ್ರದರ್ಶನದಿಂದ" ನಮ್ಮ ಉದ್ದೇಶಕ್ಕೆ ನೆರವಾಗದು ಎಂದು ತಂತಿ ಕಳುಹಿಸಿದರು.

ಸಮಾಜವಾದಿಗಳನ್ನು ತಾತ್ಕಾಲಿಕವಾಗಿ ತಡೆಯಲಾಗಿತ್ತಷ್ಟೇ. ಒಂದು ವರ್ಷದ ನಂತರ ಎನ್.ಜಿ. ಗೋರೆಯವರ ನಾಯಕತ್ವದಲ್ಲಿ ಸಮಾಜವಾದಿ ಕಾರ್ಯಕರ್ತರ ಗುಂಪೊಂದು ಘೋಷಣೆ ಕೂಗುತ್ತ ಗೋವೆಯನ್ನು ಪ್ರವೇಶಿಸಿತು. ಪೊಲೀಸರು ತಡೆಯುವ ವೇಳೆಗೆ ಅವರು ಹಲವಾರು ಮೈಲಿ ಗೋವೆಯೊಳಕ್ಕೆ ಬಂದಾಗಿತ್ತು. ಪೊಲೀಸರ ಹೊಡೆತದಿಂದ ಸತ್ಯಾಗ್ರಹಿಗಳಲ್ಲಿ ಅನೇಕ ಮಂದಿ ಗಾಯಗೊಂಡರು. ಸತ್ಯಾಗ್ರಹಿಗಳನ್ನು ಅಗುಡಾ ಜೈಲಿನಲ್ಲಿಡಲಾಯಿತು. ಇಪ್ಪತ್ತು ತಿಂಗಳ ನಂತರ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಲಾಯಿತು. 1954-55ರ ಅವಧಿಯ ಸತ್ಯಾಗ್ರಹಗಳಲ್ಲಿ ಪೋರ್ಚುಗೀಸರು 2000 ಜನರನ್ನು ಬಂಧಿಸಿ ಸೆರೆಯಲ್ಲಿಟ್ಟಿದ್ದರು.

VIII

ಜವಹರಲಾಲ್ ನೆಹರೂ ಅವರಿಗೆ ವಿದೇಶಾಂಗ ನೀತಿ ಎನ್ನುವುದು ವಿಶ್ವಕ್ಕೆ ಭಾರತದ ಅಸ್ತಿತ್ವವನ್ನು ತೋರಿಸಿಕೊಡಲು ಒಂದು ಸಾಧನವಾಗಿತ್ತು. ಸ್ವಾತಂತ್ರ್ಯ ಬಂದ ನಂತರ ಅವರು ಸ್ವಂತ ಮುತುವರ್ಜಿಯಿಂದ ಭಾರತ ವಿದೇಶಾಂಗ ಸೇವಾ ಶ್ರೇಣಿಯನ್ನು (ಐ.ಎಫ್.ಎಸ್.) ರೂಪಿಸಿದರು. ಐ.ಸಿ.ಎಸ್.ನ ಸಮರ್ಥ ಅಧಿಕಾರಿಗಳನ್ನು ಇಲ್ಲಿಗೆ ತಂದರು. ಹೊಸದಾಗಿ ಸಮರ್ಥ ತರುಣರನ್ನು ಈ ಸೇವೆಗೆ ನೇಮಕ ಮಾಡಿಕೊಂಡರು. ಐ.ಎಫ್.ಎಸ್ ಆದರ್ಶ ಮತ್ತು ಝಗಮಗ ಮೋಹಕತೆಗಳ ಆಕರ್ಷಣೆಯ ಕೇಂದ್ರವಾಯಿತು. ಜೊತೆಗೆ ಇಲ್ಲಿ ಪ್ರಧಾನಮಂತ್ರಿಯವರೊಂದಿಗಿನ ನಿಕಟ ಸಂಪರ್ಕದ ಆಕರ್ಷಣೆಯೂ ಸೇರಿಕೊಂಡಿತು. 1948ರಲ್ಲಿ ಒಂದು ದಿನ ಪ್ರಧಾನಮಂತ್ರಿಗಳು ತನ್ನನ್ನು ತಮ್ಮ ಕೋಣೆಗೆ ಕರೆಸಿಕೊಂಡು ವಿಶ್ವಭೂಪಟವನ್ನು ಪರಿಚಯಿಸಿದ ಪರಿಯನ್ನು ಐ.ಎಫ್.ಎಸ್. ಅಧಿಕಾರಿಯೊಬ್ಬರು ಸ್ಮರಿಸಿಕೊಂಡಿದ್ದಾರೆ. ಪ್ರಧಾನಮಂತ್ರಿಯವರ ಕಂಗಳು ಭೂಗೋಳದ ಮೇಲೆ ಚಲಿಸ ಲಾರಂಭಿಸಿದವು. ಅವರ ಬೆರಳುಗಳು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳತ್ತ ಚಾಚಿಕೊಂಡವು. ಬೆರಳುಗಳಲ್ಲಿ ತೋರುತ್ತಾ "ನಾವು ನಲವತ್ತು ರಾಯಭಾರ ಕಛೇರಿಗಳನ್ನು ಹೊಂದಲಿದ್ದೇವೆ"–"ನಾವು ನಲವತ್ತು ರಾಯಭಾರ ಮಂಡಳಿಗಳನ್ನು ಸ್ಥಾಪಿಸಲಿದ್ದೇವೆ" ಎಂದು ನೆಹರೂ ಉದ್ಗರಿಸಿದರೆಂದು ಈ ಅಧಿಕಾರಿ ನೆನಪುಗಳಲ್ಲಿ ಬರೆದಿದ್ದಾರೆ.

ಐದು ವರ್ಷಗಳ ನಂತರ, ಭಾರತ ನಲವತ್ತು ರಾಯಭಾರ ಮಂಡಳಿಗಳನ್ನು ಸ್ಥಾಪಿಸಿದ ನಂತರ ನೆಹರೂ ಈ ಎಲ್ಲ ರಾಯಭಾರಿಗಳಿಗೂ ಪತ್ರ ಬರೆದಿದ್ದರು. "ಆತ್ಮಾಭಿವಂದನೆಯ" ಪತ್ರಗಳನ್ನು ಬರೆದಿದ್ದರು. "ಸ್ವಾತಂತ್ರ್ಯ ಬಂದನಂತರ ಭಾರತದ ಪ್ರತಿಷ್ಠೆ ಗೌರವಗಳು ಹೆಚ್ಚಿವೆ. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ನಾವು ಯಾವತ್ತೂ ಥಳಕು-ಪಳುಕಿನ ಪಾತ್ರವನ್ನು ತಿರಸ್ಕರಿಸುತ್ತಲೇ ಬಂದಿದ್ದೇವೆ. ಒಮ್ಮತವಿಲ್ಲದಿದ್ದಾಗ್ಯೂ ಕ್ರಮೇಣ ನಮ್ಮ ಧ್ಯೇಯ-ಆದರ್ಶ-ಉದ್ದೇಶಗಳ ಪ್ರಾಮಾಣಿಕತೆ ಬಗ್ಗೆ ಬೇರೆ ರಾಷ್ಟ್ರಗಳಲ್ಲಿ ಮೆಚ್ಚುಗೆ-ಪ್ರಶಂಸೆಗಳು ಬೆಳೆಯುತ್ತಿವೆ. ಭಾರತವನ್ನು ಪ್ರತಿನಿಧಿಸುವ ರಾಯಭಾರಿಯಿಂದ ಹಿಡಿದು, ರಾಯಭಾರ ಕಛೇರಿಯ ಕಟ್ಟಕಡೆಯ ವಿನೀತ ನೌಕರನವರೆಗೆ," ಅವರು ಮಾಡಿದ ಮನವಿ: "ಒಂದು ಕುಟುಂಬದಂತೆ ಭಾವಿಸಿ ಕೆಲಸಮಾಡಿ, ಪರಸ್ಪರ ಸಹಕಾರದೊಂದಿಗೆ, ಮಹಾನ್ ಸಾಹಸದಲ್ಲಿ ನಾವೆಲ್ಲ ಪಾಲುದಾರರು, ನಾವೆಲ್ಲ ಭಾಗಿಗಳು ಹಾಗೂ ನಾವೆಲ್ಲ ಒಂದೇ ಸೂರಿನಡಿಯ ಸಂಗಾತಿಗಳು."

ಪ್ರಧಾನಮಂತ್ರಿಯವರ ಈ ಸಾಹಸವನ್ನು ಸಾಮುದಾಯಿಕ ಪ್ರಯತ್ನವೆಂದು ಬಿಂಬಿಸಲಾಯಿತಾದರೂ ಇದರ ಮೇಲೆ ನೆಹರೂ ಛಾಪು ಎದ್ದು ಕಾಣುತ್ತಿತ್ತು. 1950ರಲ್ಲಿ ನೆಹರೂ ಮಂತ್ರಿಮಂಡಲದ, ಬಾಲಬಡುಕನಲ್ಲದ ಅತಿ ಬುದ್ಧಿವಂತರೆನಿಸಿಕೊಂಡ ಸಚಿವರೊಬ್ಬರು, ನೆಹರೂ ಹೇಗೆ ಅಮೆರಿಕ, ಬ್ರಿಟನ್ ಮತ್ತಿತರ ಎಲ್ಲರನ್ನೂ ಮೀರಿಸಿ ಮಹಾಪುರುಷನಾಗಿ ಬೆಳೆಯುತ್ತಿದ್ದಾರೆ ಎನ್ನುವುದರ ಬಗ್ಗೆ ಮಾತನಾಡಿದ್ದರು. "ಮಾನವ

ಸಂಪತ್ತು, ಭೌತಿಕ ಸಂಪನ್ಮೂಲ, ಅಧಿಕಾರ ಇದಾವುದೂ ಇಲ್ಲದೆ, ತನ್ನ ನಾಯಕನ ಮುಖೇನ, ಅತಿಶೀಘ್ರಗಾಮಿಯಾಗಿ ನಾಗರಿಕ ಪ್ರಪಂಚದಲ್ಲಿ ಭಾರತ ಒಂದು ದೈತ್ಯ ನೈತಿಕ ಶಕ್ತಿಯಾಗಿ ಬೆಳೆಯುತ್ತಿದೆ" ಎಂಬುದನ್ನು ಈ ಸಚಿವರು ಸಾರಿದ್ದರು. "ಮಹಾ ಮಹಾ ರಾಷ್ಟ್ರಗಳ ಮಂಡಳಗಳಲ್ಲಿ ಭಾರತದ ಮಾತಿಗೆ ಹೇಗೆ ಗೌರವಾದರಗಳು ಲಭಿಸುತ್ತಿವೆ" ಎಂಬುದನ್ನೂ ಇವರು ಎತ್ತಿ ತೋರಿಸಿದ್ದರು. ಅಂತರರಾಷ್ಟ್ರೀಯ ನಿಲುವಿನಲ್ಲಿ ನೆಹರೂ ಅವರ ಸಾಧನೆಗಳನ್ನು ವಿರೋಧ ಪಕ್ಷಗಳೂ ಮೆಚ್ಚಿಕೊಂಡಿದ್ದವು. ಇವರಿಗೆ ಭಾರತದ ಅಲಿಪ್ತ ನೀತಿ, ವಿಶ್ವ ವಿದ್ಯಮಾನಗಳಲ್ಲಿ ಗಾಂಧಿ ತತ್ವಗಳ ಸೃಜನಶೀಲ ಅನ್ವಯಿಸುವಿಕೆಯಾಗೇ ಕಂಡಿತು. ಆ ಕಾಲದ ಯಾದವೀ ಕಲಹಗಳಲ್ಲಿ ಮಹತ್ವದ ಮಧ್ಯಸ್ಥಿಕೆ ಪಾತ್ರ ನಿರ್ವಹಿಸುವಂತೆ ಭಾರತಕ್ಕೆ ಕರೆ ನೀಡಿರುವುದರಲ್ಲಿ ಗೌರವ-ವಿಶ್ವಾಸಗಳು ಸಶಕ್ತವಾಗಿ ವ್ಯಕ್ತಗೊಂಡವು.

ವಿದೇಶಿ ಬುದ್ಧಿಜೀವಿಗಳೂ ನೆಹರೂ ಅವರ ಅಲಿಪ್ತ ನೀತಿಯನ್ನು ಕೊಂಡಾಡಿದರು. 1955ರಲ್ಲಿ ಅತಿ ದೊಡ್ಡ ಪ್ರಕಾಶನ ಸಂಸ್ಥೆಯಾದ ಮಿಲನ್‌ನ ಫೆಲ್‌ಟ್ರಿನೆಲ್ಲಿ ಕಾರ್ಯಾರಂಭ ಮಾಡಿದಾಗ ಅದು ಪ್ರಕಟಿಸಿದ ಮೊದಲ ಎರಡು ಪುಸ್ತಕಗಳಲ್ಲಿ ನೆಹರೂ ಅವರ ಆತ್ಮಕಥೆಯೂ ಒಂದು. ಈ ಒಂದು ಪ್ರಕಟಣೆಯ ಮೂಲಕ ಅದು "ಸತತವೂ ಸದೃಢವೂ ಆದ ಫ್ಯಾಸಿಸ್ಟ್ ವಿರೋಧಿ ದನಿಯನ್ನೂ ವಿಶ್ವ ರಾಜಕೀಯ ರಂಗದಲ್ಲಿ ತನ್ನ ಸ್ಥಾನವನ್ನು ಪಡೆಯುತ್ತಿರುವ, ವಸಾಹತುಶಾಹಿ ಪ್ರಾಬಲ್ಯದಿಂದ ಹೊರಹೊಮ್ಮುತ್ತಿರುವ ದೇಶಗಳ" ದನಿಯನ್ನೂ ವಿಜೃಂಭಿಸಿತ್ತು. ಸ್ವೀಡನ್ನಿನಲ್ಲಿ ಭಾರತದ ರಾಯಭಾರಿಯಾಗಿದ್ದ ಆಲ್ವ ಮಿರ್ಡಾಲ್ ತನ್ನ ಗಂಡ ಗುನ್ನಾರ್‌ಗೆ ಬರೆದ ಪತ್ರದಲ್ಲಿ ನೆಹರೂ ಹೇಗೆ ಅಧಿಕಾರಯುತ ಪಾತ್ರವನ್ನು ನಿರ್ವಹಿಸುತ್ತಿದ್ದಾರೆಂಬುದನ್ನು ವಿವರಿಸಿ ಬರೆದಿದ್ದರು. "ಇದು ನಿರಂಕುಶ ಪ್ರಭುತ್ವದ ಪಾತ್ರವಲ್ಲ, ಇದೊಂದು ಅತ್ಯಂತ ಸಹಜವಾದ ವಿಶ್ವ ಚಾರಿತ್ರಿಕ ಪಾತ್ರ. ಆತ್ಮರತಿ, ಸ್ವಯಂ ಮಹತ್ವದ ಆಕಾಂಕ್ಷೆಗಳಿಲ್ಲದೇ ಇಂಥದೊಂದು ಮಹತ್ವದ, ಅಧಿಕಾರಬಲದ ಸ್ಥಾನದಲ್ಲಿ ಪ್ರಕಾಶನಮಾನರಾಗುತ್ತಿರುವ ಏಕೈಕ ವ್ಯಕ್ತಿ ಇವರು ಎಂದೆನಿಸುವುದಿಲ್ಲವೇ?" ಆಲ್ವ ಮಿರ್ಡಾಲ್ ಪತ್ರದ ಉದ್ಗಾರಗಳು ಇದಾಗಿದ್ದವು.

ಶೀತಲ ಸಮರ ಕಾಲದಲ್ಲಿ ವಿಶ್ವರಾಷ್ಟ್ರಗಳ ಸಾಲಿನಲ್ಲಿ ನೆಹರೂ ಸ್ಥಾನಮಾನ ಹೀಗಿತ್ತು. ಅದರಲ್ಲೂ ಅಮೆರಿಕ-ರಷ್ಯ ಈ ಎರಡೂ ಬಣಗಳಿಗೆ ಸೇರದೆ, ಮಧ್ಯಸ್ಥವಾಗಿದ್ದ ರಾಷ್ಟ್ರಗಳ ದೃಷ್ಟಿಯಲ್ಲಿ ನೆಹರೂ ಸ್ಥಾನಮಾನ ಹೀಗೆ ಬೆಳಗಿತ್ತು. 1955ರಲ್ಲಿ ಅಲಿಪ್ತ ಚಳವಳಿಗೆ ಇನ್ನೂ ಹೊಳಪಿತ್ತು ಹಾಗೂ ನೈತಿಕ ಪ್ರಭೆ-ಪ್ರಭಾವಗಳಿತ್ತು. ಮುಂದಿನ ವರ್ಷ ಹಂಗರಿ ಅಪಜಯ ಎದುರಾಯಿತು. ನೆಹರೂ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ಭ್ರಮನಿರಸನ ಶುರುವಾಯಿತು. ಕೆಲಕಾಲದ ನಂತರ ಜನರ ಸಮ್ಮೋಹಕ ಬೆಂಬಲವೂ ಕ್ರಮೇಣ ಇಳಿಮುಖವಾಯಿತು.

○

9

ಭೂಪಟದ ಪುನರ್‌ರೇಖನ

ಕೆಲವರು ಶಿವಾಜಿ ಸಂಪ್ರದಾಯವನ್ನು ಪುನರುಜ್ಜೀವಗೊಳಿಸಬೇಕೆನ್ನುತ್ತಾರೆ ಹಾಗೂ ಸಂಯುಕ್ತ ಮಹಾರಾಷ್ಟ್ರದಲ್ಲಿ ಭಗವತ್ ಝಂಡಾ ಹಾರಿಸಲು ಇಚ್ಛಿಸುತ್ತಾರೆ. ಇನ್ನು ಕೆಲವರಿಗೆ, ಮುಂಬಯಿ-ಅಹಮದಾಬಾದುಗಳ ಲಕ್ಷಾಧೀಶ್ವರರ ಆರ್ಥಿಕ ಸಾಮ್ರಾಜ್ಯವನ್ನು ಮಹಾ ಗುಜರಾತಿನಾದ್ಯಂತ ವಿಸ್ತರಿಸುವ ಮಹದಾಶೆ ಇದೆ. ಪ್ರಾಂತೀಯ ಪೂರ್ವಾಗ್ರಹಗಳು, ಪೈಪೋಟಿ-ಮೇಲಾಟಗಳು, ಅಸೂಯೆಗಳು ಎಲ್ಲ ಕಡೆಗಳಿಂದಲೂ ಎಲ್ಲ ಕಡೆಯಿಂದಲೂ ಮರುಕಳಿಸುತ್ತಿವೆ; ಇವುಗಳನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಒಂದುಗೂಡುವ ಬದಲು ಪ್ರತಿಯೊಬ್ಬರೂ ಪ್ರತ್ಯೇಕಗೊಳ್ಳುವ ತವಕದಿಂದಿರುವಂತೆ ತೋರುತ್ತದೆ. ಅಸ್ಸಾಮಿಗಳಿಗೆ ಬಂಗಾಳದಿಂದ ಪ್ರತ್ಯೇಕಗೊಳ್ಳುವ ತುಡಿತ, ಬಂಗಾಳಿಗಳಿಗೆ ಬಿಹಾರದ ಒಂದಿಷ್ಟು ಜಾಗ ಕಿತ್ತುಕೊಳ್ಳುವ ತುಡಿತ, ಒರಿಸ್ಸಾದಲ್ಲಿ ತೆಲುಗರು ತೀವ್ರ ಅತೃಪ್ತರು, ತಮಿಳು ಅಲ್ಪಸಂಖ್ಯಾತರಿಗೆ ತಿರುವಾಂಕೂರಿನಿಂದ ಪ್ರತ್ಯೇಕಗೊಳ್ಳುವ ತುಡಿತ...

–ಕೆ. ಎ. ಅಬ್ಬಾಸ್, *ವಾಮಪಂಥೀಯ ಲೇಖಕ, ಜನವರಿ 1951*

I

ಜನರನ್ನು ಜಾಗೃತಗೊಳಿಸುವುದರಲ್ಲಿ ಹಾಗೂ ಜನತೆಯಲ್ಲಿ ಸಂಚಲನವುಂಟು ಮಾಡುವುದರಲ್ಲಿ ಮಾತೃಭಾಷೆ ತುಂಬಾ ಪ್ರಭಾವಶಾಲಿಯಾದದ್ದು, ಸಶಕ್ತವಾದದ್ದು ಎಂಬುದರ ಅರಿವು ಭಾರತದ ಪ್ರಮುಖ ರಾಷ್ಟ್ರೀಯ ನಾಯಕರಿಗೆ ಮೊದಲಿನಿಂದಲೂ ಇದ್ದದ್ದೇ ಆಗಿದೆ. ಇದು ಹಲವಾರು ಭಾಷೆಗಳ ನಾಡು. ಪ್ರತಿಯೊಂದು ಭಾಷೆಗೂ ಅನನ್ಯವಾದ ಲಿಪಿ, ವ್ಯಾಕರಣ, ಶಬ್ದಕೋಶ ಮತ್ತು ಸಾಹಿತ್ಯ ಪರಂಪರೆ ಇದೆ. ಈ ವೈವಿಧ್ಯತೆಯನ್ನು ಅಲ್ಲಗಳೆಯುವ ಬದಲು ಅದಕ್ಕೊಂದು ಸ್ಥಾನಮಾನ ಕಲ್ಪಿಸುವುದು ಉಚಿತವೆಂದು ಕಾಂಗ್ರೆಸ್ ಭಾವಿಸಿತು. 1917ರಷ್ಟು ಮುಂಚೆಯೇ ಕಾಂಗ್ರೆಸ್ ಪಕ್ಷ ಸ್ವತಂತ್ರ ಭಾರತದಲ್ಲಿ ಭಾಷಾವಾರು

ಪ್ರಾಂತ್ಯಗಳನ್ನು ರಚಿಸುವ ಬದ್ಧತೆಯನ್ನು ಪ್ರಕಟಿಸಿತ್ತು. ಆ ವರ್ಷ ಪ್ರತ್ಯೇಕ ಆಂಧ್ರವಲಯವೊಂದನ್ನು ರಚಿಸಲಾಯಿತು. ಮುಂದಿನ ವರ್ಷ ಪ್ರತ್ಯೇಕ ಸಿಂಧ್‌ವಲಯ ಅಸ್ತಿತ್ವಕ್ಕೆ ಬಂತು. 1920ರಲ್ಲಿ ನಾಗಪುರ ಕಾಂಗ್ರೆಸ್ ಮಹಾಧಿವೇಶನದ ನಂತರ, ಭಾಷಾವಾರು ಪ್ರತ್ಯೇಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳನ್ನು ರಚಿಸುವ ಮೂಲಕ ಈ ತತ್ವವನ್ನು ವಿಧ್ಯುಕ್ತವಾಗಿ ಕಾರ್ಯಗತ ಮಾಡಲಾಯಿತು. ಹೀಗೆ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಒರಿಸ್ಸಾ ಪ್ರದೇಶ ಕಾಂಗ್ರೆಸ್ ಸಮಿತಿ, ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ, ಇತ್ಯಾದಿಗಳು ಅಸ್ತಿತ್ವಕ್ಕೆ ಬಂದವು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದೆಂದರೆ ಈ ಭಾಷಾವಾರು ಪ್ರದೇಶ ಸಮಿತಿಗಳು ಬ್ರಿಟಿಷರ ಭಾರತದ ಆಡಳಿತ ವಿಂಗಡಣೆಗಳನ್ನು ಅನುಸರಿಸಲಿಲ್ಲವೆಂಬುದು. ಇವು ಅನೇಕ ವೇಳೆ ಬ್ರಿಟಿಷರ ಭಾರತದ ಆಡಳಿತಾತ್ಮಕ ವಿಂಗಡಣೆಗೆ ಪ್ರತಿಯಾಗಿ ನಡೆದುಕೊಂಡದ್ದೂ ಉಂಟು.

ಕಾಂಗ್ರೆಸ್‌ನ ಭಾಷಾವಾರು ಪುನರ್ರಚನೆಗೆ ಗಾಂಧೀಜಿಯವರ ಆಶೀರ್ವಾದವಿತ್ತು. ಸ್ವಾತಂತ್ರ್ಯ ಬಂದ ನಂತರ ಗಾಂಧೀಜಿಯವರು ಹೊಸರಾಷ್ಟ್ರದ ರಾಜ್ಯಗಳನ್ನು ಭಾಷೆಯ ಆಧಾರದ ಮೇಲೆ ನಿಷ್ಕೃಷ್ಟವಾಗಿ ರೂಪಿಸಬೇಕೆಂದು ಆಲೋಚಿಸಿದ್ದರು. 1947ರ ಅಕ್ಟೋಬರ್ 10ರಂದು ಅವರು ತಮ್ಮ ಸಹೋದ್ಯೋಗಿಯೊಬ್ಬರಿಗೆ ಈ ರೀತಿ ಬರೆದು ತಿಳಿಸಿದ್ದರು:

> "ಭಾಷಾವಾರು ಪ್ರಾಂತ್ಯಗಳ ಪುನರ್ರಚನೆ ಕಾರ್ಯವನ್ನು ನಾವು ತ್ವರಿತವಾಗಿ ಕೈಗೆತ್ತಿಕೊಳ್ಳಬೇಕೆಂಬುದು ನನ್ನ ಎಣಿಕೆಯಾಗಿದೆ...ವಿವಿಧ ಭಾಷೆಗಳು ವಿವಿಧ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ ಎಂಬ ಭ್ರಮೆ ಸದ್ಯದಲ್ಲಿದೆ. ಆದರೆ ಭಾಷಾವಾರು ಪ್ರಾಂತ್ಯಗಳ ನಂತರ ಇದು ಕಣ್ಮರೆಯಾಗುವ ಸಾಧ್ಯತೆಯೂ ಇದೆ. ಸಮಯ ಸಿಕ್ಕಲ್ಲಿ ಈ ಬಗ್ಗೆ ನಾನು ಮತ್ತಷ್ಟು ಬರೆಯುತ್ತೇನೆ...ಭಾಷಾವಾರು ಪ್ರಾಂತ್ಯಗಳ ರಚನೆ ತಪ್ಪೆಂದು ಹೇಳುವ ವರ್ಗವೊಂದಿದೆ ಎಂಬುದನ್ನು ನಾನು ಬಲ್ಲೆ...ನನ್ನ ಅಭಿಪ್ರಾಯದಲ್ಲಿ ಈ ವರ್ಗಕ್ಕೆ ಅಡ್ಡಿ ಆತಂಕಗಳನ್ನು ಸೃಷ್ಟಿಸುವುದರಲ್ಲೇ ಸುಖವಿದೆ."

ಭಾರತದ ಭಾಷಾವಾರು ವೈವಿಧ್ಯತೆ ಬಗ್ಗೆ ನೆಹರೂಗೆ ಮೆಚ್ಚುಗೆ ಇತ್ತು. 1937ರಲ್ಲಿ ರಚಿಸಿದ ಪ್ರಬಂಧವೊಂದರಲ್ಲಿ ಅವರು ಹೀಗೆ ಬರೆದಿದ್ದಾರೆ:

> "ಒಂದು ಜೀವಂತ ಭಾಷೆ ಹೃದಯಸ್ಪಂದಿಯೂ ಭಾವೋದ್ದೀಪನಕಾರಿಯೂ ಆದದ್ದು. ಅದೊಂದು ಜೀವಾಧಾರಕವಾದದ್ದು, ಅದೊಂದು ಜೈವಿಕ ಶಕ್ತಿ, ಸದಾ ಬದಲಾವಣೆ ಹೊಂದುತ್ತಿರುವಂಥಾದ್ದು, ಸದಾ ಬೆಳೆಯುತ್ತಿರುವಂಥಾದ್ದು, ಆ ಭಾಷೆಯನ್ನಾಡುವ, ಆ ಭಾಷೆಯಲ್ಲಿ ಬರೆಯುವ ಜನರನ್ನು ಬಿಂಬಿಸುವ ದರ್ಪಣ...ಹಾಗೂ ನಮ್ಮ ಮಹಾನ್ ಪ್ರಾಂತೀಯ ಭಾಷೆಗಳು, ಅಜ್ಞಾನಿಗಳು ಕೆಲವೊಮ್ಮೆ ಹೇಳುವಂತೆ, ಉಪಭಾಷೆಗಳಲ್ಲ, ದೇಶೀಯ ಭಾಷೆಗಳಲ್ಲ. ಅವು ಶ್ರೀಮಂತ ಪರಂಪರೆಯುಳ್ಳ ಪ್ರಾಚೀನ ಭಾಷೆಗಳು. ಪ್ರತಿಯೊಂದು ಭಾಷೆಯನ್ನೂ ಲಕ್ಷಾಂತರ ಮಂದಿ ಆಡುತ್ತಾರೆ. ಪ್ರತಿಯೊಂದು ಭಾಷೆಗೂ ಜನಸಮುದಾಯ ಹಾಗೂ ಮೇಲ್ವರ್ಗದ ಜನರ ಸಂಸ್ಕೃತಿ,

ಆಚಾರ-ವಿಚಾರಗಳೊಂದಿಗೆ ಬಿಡಿಸಿಕೊಳ್ಳಲಾಗದಂಥ ನಂಟಿದೆ. ತಮ್ಮ ಭಾಷಾ ಮಾಧ್ಯಮದ ಮೂಲಕ ಮಾತ್ರ ಜನ ಸಮುದಾಯ ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆಯುವುದು ಸಾಧ್ಯ ಎನ್ನುವುದು ಸ್ವತಃಸ್ಸಿದ್ಧವಾದದ್ದು."

–ಇದು 1937ರಲ್ಲಿ ನೆಹರೂ ಹೊಂದಿದ್ದ ಅಭಿಪ್ರಾಯ. 1947ರ ವೇಳೆಗೆ ಬೇರೆ ಅಭಿಪ್ರಾಯಗಳು ಅವರಲ್ಲಿ ಮೂಡಿದ್ದವು. ರಾಷ್ಟ್ರ ಆಗಷ್ಟೇ ಧರ್ಮದ ಆಧಾರದ ಮೇಲೆ ವಿಭಜನೆಗೊಂಡಿತ್ತು. ಭಾಷೆಯ ಆಧಾರದ ಮೇಲೆ ಮತ್ತಷ್ಟು ವಿಭಜನೆಗೆ ಪ್ರೋತ್ಸಾಹಿಸುವುದರಿಂದ ದೇಶದ ಒಕ್ಕೂಟ ವ್ಯವಸ್ಥೆಗೆ, ಏಕತೆಗೆ ಭಂಗವುಂಟಾಗವೆ? ಈಗಿರುವಂತೆಯೇ, ಮದ್ರಾಸಿನಂಥ ಆಡಳಿತಾತ್ಮಕ ಘಟಕಗಳ ವ್ಯವಸ್ಥೆಯನ್ನೇ ಮುಂದುವರಿಸಬಾರದೇಕೆ? ಮದ್ರಾಸಿನಲ್ಲಿ ತಮಿಳು, ಮಲೆಯಾಳಂ, ಕನ್ನಡ, ಉರ್ದು, ಕೊಂಕಣಿ ಮಾತಾಡುವ ಜನಸಮುದಾಯಗಳಿವೆ; ಮುಂಬಯಿಯಲ್ಲಿ ಮರಾಠಿ, ಗುಜರಾತಿ, ಉರ್ದು, ಸಿಂಧಿ, ಗೋಂಡಿ, ಮತ್ತಿತರ ಭಾಷೆಗಳನ್ನಾಡುವ ಜನರು ಬದುಕುತ್ತಿಲ್ಲವೆ? ಇಂಥ ಬಹುಭಾಷಾ ಹಾಗೂ ಬಹುಸಂಸ್ಕೃತಿಯ ರಾಜ್ಯಗಳು ಸೌಹಾರ್ದಯುತ ಬಾಳ್ವೆಗೆ ಮಾದರಿಯಾಗದೆ? ಸ್ನೇಹ ಸೌಹಾರ್ದತೆಗಳನ್ನು ಕಲಿಸುವ ಮೇಲ್ಪಂಕ್ತಿಯಾಗದೆ? ಏನೇ ಆಗಲಿ, ಹೊಸ ರಾಷ್ಟ್ರ, ಆದಿಕಾಲದ ಜಾತಿ ಮತ್ತು ಭಾಷೆಗಳ ಅಸ್ಮಿತೆ ಆಧರಿಸಿ ಪ್ರತ್ಯೇಕ ಅಸ್ತಿತ್ವ ಸಾಧಿಸುವ ಬದಲು ಶಾಂತಿ, ಸ್ಥಿರತೆ, ಜಾತ್ಯತೀತತೆ ಹಾಗೂ ಆರ್ಥಿಕ ಅಭಿವೃದ್ಧಿಯ ಆದರ್ಶಗಳ ಛತ್ರವಡಿಯಲ್ಲಿ ಒಂದುಗೂಡುವುದು ಉತ್ತಮವಲ್ಲವೆ?

ಸ್ವಾತಂತ್ರ್ಯ ಬಂದ ಮೂರು ತಿಂಗಳ ನಂತರ ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡುತ್ತ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಒಂದು ಕಾಲದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಆಶ್ವಾಸನೆ ನೀಡಿತ್ತು ಎಂಬುದು ದಿಟ. ಆದರೀಗ ರಾಷ್ಟ್ರ ವಿಭಜನೆಯ ಫಲವಾಗಿ ತುಂಬ ಸಂಕಷ್ಟ ಸ್ಥಿತಿಯನ್ನು ಎದುರಿಸುತ್ತಿದೆ. ಈಗ ವಿಚ್ಛಿದ್ರಕಾರಿ ಶಕ್ತಿಗಳು ತಲೆಎತ್ತಿವೆ, ಇವುಗಳನ್ನು ನಿಗ್ರಹಿಸಲು ಭಾರತದ ಭದ್ರತೆ ಮತ್ತು ಸ್ಥಿರತೆಗೆ ಪ್ರಾಮುಖ್ಯತೆ ನೀಡಬೇಕಾಗುತ್ತದೆ...ಇದಕ್ಕೆ ಮೊದಲ ಅಗತ್ಯವೆಂದರೆ, ಭಾರತ ಇಡಿಯಾಗಿ ಸುಭದ್ರವಾಗಿ ಸದೃಢವಾಗಿ ನಿಲ್ಲಬೇಕು. ಎಲ್ಲ ಸಂಭವನೀಯ ಅಪಾಯಗಳನ್ನೂ ಎಲ್ಲ ಸಮಸ್ಯೆಗಳನ್ನೂ ಎದುರಿಸುವ ತನ್ನ ಸಾಮರ್ಥ್ಯ, ಆತ್ಮವಿಶ್ವಾಸಗಳನ್ನು ಇಡಿಯಾಗಿ ಪ್ರಕಟಿಸಬೇಕು. ಭಾರತ ಬದುಕಿದ್ದಲ್ಲಿ ಅದರ ಎಲ್ಲ ಭಾಗಗಳೂ ಬದುಕಿ ಬಾಳಿ ಅಭ್ಯುದಯ ಹೊಂದುತ್ತವೆ. ಭಾರತ ದುರ್ಬಲಗೊಂಡಲ್ಲಿ ಅದರ ಎಲ್ಲ ಅಂತರ್ಗತ ಭಾಗಗಳೂ ದುರ್ಬಲವಾಗುತ್ತವೆ.

ಭಾರತ ಸುಭದ್ರವಾದ ಬಲಿಷ್ಠ ರಾಷ್ಟ್ರವಾಗುವವರೆಗೆ ಹಾಗೂ ಅಂಥ ಆತ್ಮವಿಶ್ವಾವುಳ್ಳ ರಾಷ್ಟ್ರವಾಗುವವರೆಗೆ ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ತಡೆಹಿಡಿಯಬೇಕಾಯಿತು. ನೆಹರೂ ಈ ಬಗ್ಗೆ ಗಾಂಧಿಯವರ ಮನ ಒಲಿಸಿದಂತೆಯೂ ಇತ್ತು. ಹಾಗೆಂದೇ ಇರಬೇಕು 1947ರ ನವೆಂಬರಿನಲ್ಲಿ ಗಾಂಧೀಜಿ ಹೀಗೆ ಬರೆದರು: "ಭಾಷಾವಾರು ಪುನರ್ವಿಂಗಡಣೆಯನ್ನು ಕಾರ್ಯಗತಗೊಳಿಸಲು ಪ್ರತಿರೋಧವಿರುವುದು ಇಂದಿನ ವಿಷಣ್ಣ ವಾತಾವರಣದಲ್ಲಿ

ಸಮರ್ಥನೀಯವಾದದ್ದೇ. ಇಡೀ ಭಾರತದ ಬಗ್ಗೆ ಯಾರೂ ಯೋಚಿಸುವುದಿಲ್ಲ.” ಶಾಂತ, ಸಮಾಧಾನಕರ ಪರಿಸ್ಥಿತಿ ಉಂಟಾಗುವವರೆಗೆ ಪ್ರಾಂತ್ಯಗಳ ಪುನರ್‌ರಚನೆಯನ್ನು ಮುಂದೂಡಬೇಕೆಂಬುದು ಈಗ ಗಾಂಧೀಜಿಯವರ ಎಣಿಕೆಯಾಗಿತ್ತು. “ಕೋಮು ವಿರಸ ವೈಷಮ್ಯ, ಘರ್ಷಣೆಗಳು ನಿಶ್ಶೇಷಗೊಂಡು ಅವರ ಸ್ಥಳದಲ್ಲಿ ಆರೋಗ್ಯಕರ ವಾತಾವರಣ ಉಂಟಾಗುವವರೆಗೆ, ಅಸಮ್ಮತಿಯ ಜಾಗದಲ್ಲಿ ಸಮ್ಮತಿ, ಘರ್ಷಣೆಯ ಜಾಗದಲ್ಲಿ ಶಾಂತಿ, ಅಧೋಗತಿಯ ಜಾಗದಲ್ಲಿ ಪ್ರಗತಿ, ಮರಣದ ಜಾಗದಲ್ಲಿ ಜೀವಂತಿಕೆ” ಇಂಥ ಆರೋಗ್ಯಕರ ವಾತಾವರಣ ನಿರ್ಮಾಣವಾಗುವವರೆಗೆ ಭಾಷಾವಾರು ಆಧಾರದ ಮೇಲೆ ಪ್ರಾಂತ್ಯಗಳ ಪುನರ್‌ರಚನೆ ಮುಂದೂಡುವುದೇ ವಿಹಿತವೆಂಬುದು ಗಾಂಧೀಜಿಯವರ ಈಗಿನ ಅಭಿಪ್ರಾಯವಾಗಿತ್ತು.

ಎಂದಿನಂತೆ ಗಾಂಧೀಜಿ ‘ಒಂದು ಸಲಕ್ಕೆ ಒಂದು ಹೆಜ್ಜೆ’ ಇಡಬೇಕಾದ ಅಗತ್ಯವನ್ನು ಮರೆತಿರಲಿಲ್ಲ. ಅವರು ಈ ಸೂತ್ರದ ಆರಾಧಕರಾಗಿದ್ದರು ಎಂದೇ ಅವರು ತತ್ತ್ವಾದರ್ಶಗಳನ್ನೇ ಒಪ್ಪಿಸಿ ಶರಣಾಗಲು ಸಿದ್ಧರಿರಲಿಲ್ಲ. 1948ರ ಜನವರಿ 25ರಂದು ಪ್ರಾರ್ಥನಾ ಸಭೆಯಲ್ಲಿ ಭಾಷಾವಾರು ರಾಜ್ಯಗಳ ವಿಷಯವನ್ನು ಪ್ರಸ್ತಾಪಿಸಿ, ಈ ರೀತಿ ನುಡಿದರು: “ಸುಮಾರು ಇಪ್ಪತ್ತು ವರ್ಷಗಳಷ್ಟು ಹಿಂದೆ ಕಾಂಗ್ರೆಸ್, ದೇಶದಲ್ಲಿ ಎಷ್ಟು ಪ್ರಮುಖ ಭಾಷೆಗಳಿವೆಯೋ ಅಷ್ಟು ಪ್ರಾಂತ್ಯಗಳಿರಬೇಕೆಂದು ನಿರ್ಧರಿಸಿತ್ತು. ಈಗ ಕಾಂಗ್ರೆಸ್ ಅಧಿಕಾರದಲ್ಲಿದೆ. ಆ ಭರವಸೆಯನ್ನು ಕಾರ್ಯಗತಗೊಳಿಸುವ ಸ್ಥಿತಿಯಲ್ಲಿದೆ.” ಆದರೆ, ಭಾಷೆಯ ಆಧಾರದ ಮೇಲೆ ಹೊಸ ರಾಜ್ಯಗಳನ್ನು ರಚಿಸಿದ್ದೇ ಆದಲ್ಲಿ...ಗಾಂಧೀಜಿ ಚಿಂತನೆ ಹೀಗೆ ಸಾಗಿತ್ತು...

> *“ಭಾಷೆ ಆಧಾರದ ಮೇಲೆ ಹೊಸ ರಾಜ್ಯಗಳನ್ನು ರಚಿಸಿ ಅವುಗಳನ್ನು ದೆಹಲಿ ಅಧಿಕಾರದ ಸ್ವಾಧೀನಕ್ಕೊಳಪಡಿಸಿದಲ್ಲಿ ಏನೂ ತೊಂದರೆಯಾಗಲಾರದು. ಆದರೆ ಈ ರಾಜ್ಯಗಳು ಸ್ವತಂತ್ರವಾಗಿರಲು ಬಯಸಿ ಕೇಂದ್ರದ ಅಧಿಕಾರಕ್ಕೊಳಪಡಲು ನಿರಾಕರಿಸಿದಲ್ಲಿ ತುಂಬ ಕೆಡಕಾಗುತ್ತದೆ. ಆನಂತರ ಮುಂಬಯಿಗೂ ಮಹಾರಾಷ್ಟ್ರಕ್ಕೂ ಏನೂ ಸಂಬಂಧವಿಲ್ಲ ಎನ್ನುವಂತಾಗಬಾರದು. ನಾವೆಲ್ಲ ಸೋದರರಂತೆ ಬಾಳೋಣ. ಎಲ್ಲಕ್ಕಿಂತ ಹೆಚ್ಚಾಗಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿದ್ದೇ ಆದಲ್ಲಿ ಪ್ರದೇಶ ಭಾಷೆಗಳಿಗೆ ಪ್ರೋತ್ಸಾಹ ಸಿಗುತ್ತದೆ. ಆಗ ಎಲ್ಲ ಪ್ರದೇಶಗಳಲ್ಲೂ ಹಿಂದೂಸ್ತಾನಿಯನ್ನು ಶಿಕ್ಷಣ ಮಾಧ್ಯಮವಾಗಿ ಮಾಡುವುದು ಅಸಂಗತವಾಗುತ್ತದೆ. ಹಾಗೂ ಈ ಉದ್ದೇಶಕ್ಕಾಗಿ ಇಂಗ್ಲಿಷನ್ನು ಬಳಸುವುದು ಇನ್ನಷ್ಟು ಅಸಂಗತ-ಅಸಂಬದ್ಧವಾಗುತ್ತದೆ.”*

–ಈ ಮಾತುಗಳನ್ನಾಡಿದ ಒಂದು ವಾರದಲ್ಲಿ ಗಾಂಧೀಜಿ ನಿಧನ ಹೊಂದಿದರು. ಅಧಿಕಾರ ಸೂತ್ರ ಹಿಡಿದಿದ್ದ ಮಂದಿಗೆ ತಕ್ಷಣ ತುರ್ತಾಗಿ ಕೈಗೆತ್ತಿಕೊಳ್ಳಬೇಕಾದ ಕೆಲಸಗಳು ಇನ್ನೂ ಹಲವಾರು ಇದ್ದವು. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಿಂದ ಬಂದ ನಿರಾಶ್ರಿತರಿಗೆ ವಸತಿ, ಉದ್ಯೋಗಗಳನ್ನು ಕಲ್ಪಿಸಬೇಕಾಗಿತ್ತು. ಕಾಶ್ಮೀರದಲ್ಲಿ ಅಘೋಷಿತ ಸಮರ ನಡೆದಿತ್ತು. ಹೊಸ ಸಂವಿಧಾನವನ್ನು ರಚಿಸಬೇಕಾಗಿತ್ತು. ಚುನಾವಣಾ ವ್ಯವಸ್ಥೆ ಮಾಡಬೇಕಿತ್ತು,

ವೇಳಾಪಟ್ಟಿ ನಿಗದಿ ಮಾಡಬೇಕಾಗಿತ್ತು. ಆರ್ಥಿಕ ನೀತಿ ರೂಪಿಸಿ ಜಾರಿಗೊಳಿಸಬೇಕಾಗಿತ್ತು. ಹೀಗಾಗಿ, ಈಗ ಸದ್ಯಕ್ಕೆ ಭಾಷಾವಾರು ಪ್ರಾಂತ್ಯ ರಚನೆ ಕಾಯಬಹುದು, ಅನಿರ್ದಿಷ್ಟ ಕಾಲದವರೆಗೆ ಕಾಯಬಹುದು ಎನ್ನಿಸಿತು.

ಇತ್ತೀಚಿನ ರಾಷ್ಟ್ರ ವಿಭಜನೆಯ ಮೇಲೆ ಭಾಷೆ ಆಧಾರದನ್ವಯ ಮತ್ತೊಂದು ವಿಭಜನೆಯನ್ನು ಹೇರದಿರುವ ನೆಹರೂ ನಿರ್ಧಾರಕ್ಕೆ ವಲ್ಲಭಭಾಯಿ ಪಟೇಲ್ ಮತ್ತು ಸಿ. ರಾಜಗೋಪಾಲಾಚಾರಿಯವರ ಬೆಂಬಲವಿತ್ತು. "ಮತ್ತಷ್ಟು ವಿಭಜನೆ ಉಂಟುಮಾಡುವ ಪ್ರತ್ಯೇಕತಾ ಪ್ರವೃತ್ತಿಯ ಶಕ್ತಿಗಳನ್ನು ತಕ್ಷಣ ನಿಯಂತ್ರಿಸಬೇಕು" ಎನ್ನುವುದು ರಾಜಾಜಿಯವರ ಅಭಿಪ್ರಾಯವಾಗಿತ್ತು. ಇನ್ನು ವಲ್ಲಭಭಾಯಿ ಪಟೇಲರು ಸಂವಿಧಾನ ರಚನಾ ಸಭೆಯೊಳಗೆ, ಕಾಂಗ್ರೆಸ್ಸಿನ ಅಧಿಕೃತ ನಿಲುವನ್ನು ಪಲ್ಲಟಗೊಳಿಸುವ ನಿಟ್ಟಿನಲ್ಲಿ ಸಾಕಷ್ಟು ಶ್ರಮ ವಹಿಸಿದರು. ಅವರ ನಿರ್ದೇಶನದನ್ವಯ ಈ ಪ್ರಶ್ನೆಯನ್ನು ಪರಿಶೀಲಿಸಿ ವರದಿ ಮಾಡಲು ನ್ಯಾಯವಾದಿಗಳು ಮತ್ತು ಆಡಳಿತಾಧಿಕಾರಿಗಳನ್ನೊಳಗೊಂಡ ಸಂವಿಧಾನ ರಚನಾ ಸಭೆ ಸಮಿತಿಯೊಂದನ್ನು ರಚಿಸಿತು. ಈ ಸಮಿತಿ, 'ನಮ್ಮ ದೇಶ ಬಾಂಧವರು' ಮಾಡಿದ ಮನವಿ, ವ್ಯಕ್ತಪಡಿಸಿದ ಭಾಷಾಭಾವನೆಗಳನ್ನು ಪರಿಶೀಲಿಸಿದ ನಂತರ, "ಭಾರತದಲ್ಲಿ ಇವತ್ತು ಮೊಟ್ಟ ಮೊದಲಿಗೆ ಅತ್ಯವಶ್ಯಕವಾಗಿ ಆಗಬೇಕಾದ ಕೆಲಸವೆಂದರೆ ಭಾರತವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಕಟ್ಟುವುದು. ರಾಷ್ಟ್ರೀಯತೆಗೆ ಸಹಕಾರಿಯಾಗುವಂಥ ಸಕಲ ಚಟುವಟಿಕೆಗಳೂ ಮುನ್ನಡೆಯಬೇಕು ಹಾಗೂ ಈ ಹಾದಿಯಲ್ಲಿ ಅಡ್ಡಿ ಆತಂಕಗಳನ್ನೊಡ್ಡುವ ಸಕಲವನ್ನೂ ತಿರಸ್ಕರಿಸಬೇಕು" ಎಂದು ವರದಿ ಸಲ್ಲಿಸಿತು. "ಈ ಮಾನದಂಡವನ್ನೇ ನಾವು ಭಾಷಾವಾರು ಪ್ರಾಂತ್ಯಗಳ ಬೇಡಿಕೆಗೂ ಅನ್ವಯಿಸಿದೆವು. ಈ ಮಾನದಂಡಗಳಿಂದ ಇದನ್ನು ಮಾನ್ಯ ಮಾಡಲಾಗದೆಂಬ ತೀರ್ಮಾನಕ್ಕೆ ಬಂದಿದ್ದೇವೆ" ಎಂದು ಸಮಿತಿ ಸ್ಪಷ್ಟವಾಗಿ ಹೇಳಿತು.

ಈ ತೀರ್ಪು ಸಂವಿಧಾನ ರಚನಾ ಸಭೆಯ ಅನೇಕರಿಗೆ ನಿರಾಶೆಯುಂಟುಮಾಡಿತು. ಮರಾಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಸದಸ್ಯರು ಮಹಾರಾಷ್ಟ್ರ ರಾಜ್ಯರಚನೆಗೆ ಒತ್ತಾಯಪಡಿಸಿದರು. ಗುಜರಾತಿ ತಮ್ಮ ಮಾತೃಭಾಷೆಯೆಂದು ಹಕ್ಕೊತ್ತಾಯ ಮಂಡಿಸಿದ ಗುಜರಾತಿನವರು ತಮಗೆ ಪ್ರತ್ಯೇಕ ರಾಜ್ಯಬೇಕು ಎಂದರು. ತೆಲುಗು, ಕನ್ನಡ, ಮಲೆಯಾಳ, ಒರಿಯಾ ಭಾಷಿಕರು ಇದೇ ಧಾಟಿಯಲ್ಲಿ ಮಾತನಾಡಿದರು. ಈ ಬೊಬ್ಬೆಯನ್ನು ತಣ್ಣಗಾಗಿಸಲು ಹೊಸ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ನೆಹರೂ ಮತ್ತು ಪಟೇಲರು ಇಬ್ಬರೂ ಇದ್ದರು. ಇತಿಹಾಸಕಾರ ಹಾಗೂ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಪಟ್ಟಾಭಿ ಸೀತಾರಾಮಯ್ಯ ಅವರೂ ಈ ಸಮಿತಿಯ ಮೂರನೆಯ ಸದಸ್ಯರಾಗಿದ್ದರು. ಈ ಸಮಿತಿ 'ಜೆವಿಪಿ' ಸಮಿತಿಯೆಂದೇ ಖ್ಯಾತಿ ಪಡೆಯಿತು.

ಈ ಸಮಿತಿ, ಒಂದು ಕಾಲಕ್ಕೆ ಕಾಂಗ್ರೆಸ್ ಅನುಮೋದಿಸಿದ್ದ ಭಾಷಾವಾರು ಆಧಾರಿತ ರಾಜ್ಯಗಳ ಪುನರ್ರಚನೆ ನಿರ್ಣಯವನ್ನು ಅಸಿಂಧುಗೊಳಿಸಿತು. "ಭಾಷೆ, ನಂಟು ಕೂಡಿಸುವ ಬಂಧವಷ್ಟೇ ಅಲ್ಲ ಬೇರ್ಪಡಿಸುವ ಶಕ್ತಿಯೂ ಹೌದು" ಎನ್ನುವುದು ಈ ಸಮಿತಿಯ

ವಾದವಾಗಿತ್ತು. ಈಗ, ಭದ್ರತೆಯೇ ಮುಖ್ಯ ಕಾಳಜಿಯಾಗಿರುವಾಗ, ಭಾರತದ ಏಕತೆ ಮತ್ತು ಆರ್ಥಿಕ ಅಭ್ಯುದಯಗಳೇ ಮುಖ್ಯ ಕಾಳಜಿಯಾಗಿರುವಾಗ "ಪ್ರತ್ಯೇಕತಾ ಪ್ರವೃತ್ತಿಗಳನ್ನು, ವಿಚ್ಛಿದ್ರಕಾರಿ ಪ್ರವೃತ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸಬೇಕು" ಎಂದು ಸಮಿತಿ ಆಗ್ರಹಪೂರ್ವಕವಾಗಿ ತಿಳಿಸಿತು.

II

ರಾಬರ್ಟ್ ಕಿಂಗ್ ಪ್ರಕಾರ 'ಜೆವಿಪಿ' ಸಮಿತಿ ವರದಿ ಒಂದು ಕಣ್ಣೀರೊರೆಸುವ ಕ್ರಮವಾಗಿತ್ತಷ್ಟೇ. ಸ್ವಲ್ಪಕಾಲ ಅದು ಚಾಲನೆಗೆ ತಡೆಯೊಡ್ಡಿತು. ಮಂದಗತಿಗೆ ಕಾರಣವಾಯಿತು. ಆದರೆ, ಶೀಘ್ರದಲ್ಲೇ ಬೆಂಕಿ ಹೊತ್ತಿಕೊಂಡಿತು. ಜ್ವಾಲೆಗಳೆದ್ದವು. 1948 ಮತ್ತು 1949ರಲ್ಲಿ ಭಾಷಾವಾರು ಸ್ವಾಯತ್ತತೆ ಬೇಡಿಕೆಯ ಚಳವಳಿ ಮತ್ತೆ ಗರಿಗೆದರಿತು. ಮದ್ರಾಸ್, ಮೈಸೂರು, ಮುಂಬಯಿ ಮತ್ತು ಹೈದರಾಬಾದ್‌ಗಳಲ್ಲಿನ ಕನ್ನಡ ಮಾತನಾಡುವ ಜನರನ್ನು ಒಂದುಗೂಡಿಸುವ ಕರ್ನಾಟಕ ಏಕೀಕರಣ ಚಳವಳಿ ಶುರುವಾಯಿತು. ಇದಕ್ಕೆ ಪೂರಕವಾಗಿ ಸಂಯುಕ್ತ ಮಹಾರಾಷ್ಟ್ರ ಚಳವಳಿ ಶುರುವಾಯಿತು. ಮರಾಠಿ ಮಾತನಾಡುವ ಜನರೆಲ್ಲರನ್ನೂ ಏಕ ರಾಜಕೀಯ ಛತ್ರಿಯಡಿ ತರಬೇಕೆಂಬುದು ಇದರ ಉದ್ದೇಶವಾಗಿತ್ತು. ಮಲೆಯಾಳಿಗಳಿಗೆ ಅವರದೇ ಸ್ವಂತ ರಾಜ್ಯಬೇಕಾಗಿತ್ತು. ಕೊಚ್ಚಿನ್ ಮತ್ತು ತಿರುವಾಂಕೂರ್ ಮಹಾರಾಜರುಗಳ ರಾಜ್ಯಗಳನ್ನು ಮಲಬಾರ್‌ನೊಂದಿಗೆ ಏಕೀಭವಿಸಬೇಕೆಂಬುದು ಅವರ ಬೇಡಿಕೆಯಾಗಿತ್ತು. ಇದರ ಜೊತೆಗೆ ಮಹಾಗುಜರಾತ್ ಚಳವಳಿಯೂ ಶುರುವಾಗಿತ್ತು.

ಪಂಜಾಬಿನಲ್ಲಿ ಸಿಖ್ ರಾಜ್ಯಕ್ಕಾಗಿ ಹೋರಾಟ ಅದರದೇ ಆದ ಒಂದು ರಖಂ ಆಗಿತ್ತು. ಇದು ಭಾಷೆ ಹಾಗೂ ಪ್ರಾದೇಶಿಕ ಬೇಡಿಕೆಗಳನ್ನು ಒಂದೇ ವೇದಿಕೆಗೆ ತಂದಿತು. ವಿಭಜನೆಯಿಂದಾಗಿ ತೀವ್ರ ಕಷ್ಟನಷ್ಟಕ್ಕೀಡಾದವರು ಸಿಖ್ಖರು. ಅವರು ತಮ್ಮ ಫಲವತ್ತಾದ ಭೂಮಿಯನ್ನು ಕಳೆದುಕೊಂಡಿದ್ದರು. ಅವರ ಫಲವತ್ತು ನೆಲ ಪಾಕಿಸ್ತಾನದ ಪಾಲಾಗಿತ್ತು. ಆದರೆ ಈಗ, ಭಾರತದಲ್ಲಿ ಉಳಿದು ಹಿಂದೂಗಳ ಆಸರೆ ಪ್ರಭಾವಗಳಲ್ಲಿ ಅವರು ಬದುಕಬೇಕಾಗಿತ್ತು.

1950ರ ಸುಮಾರಿನಲ್ಲಿ ಭಾರತದ ಪಂಜಾಬಿನಲ್ಲಿ ಶೇಕಡ 62ರಷ್ಟು ಹಿಂದೂಗಳಿದ್ದರು, ಶೇ.35ರಷ್ಟು ಸಿಖ್ಖರಿದ್ದರು. ಈ ಅಂಕಿಅಂಶಗಳೇ ದೊಡ್ಡದಾದ ವಿಂಗಡಣೆಯನ್ನು ಸಾದರಪಡಿಸುತ್ತವೆ. ಪೂರ್ವಾರ್ಧದಲ್ಲಿ ಹಿಂದಿ ಮಾತನಾಡುವ ಜನರ ಪ್ರಾಬಲ್ಯವಿತ್ತು, ಇಲ್ಲಿನ ಜನಸಂಖ್ಯೆಯಲ್ಲಿ ಶೇ 88ರಷ್ಟು ಜನ ಹಿಂದೂಗಳಾಗಿದ್ದರು. ಪಶ್ಚಿಮಾರ್ಧ ಪಂಜಾಬಿ ಮಾತನಾಡುವ ಜನಪ್ರದೇಶವಾಗಿತ್ತು. ಇಲ್ಲಿನ ಜನಸಂಖ್ಯೆಯಲ್ಲಿ ಸಿಖ್ಖರು ಶೇ ಐವತ್ತಕ್ಕೂ ಹೆಚ್ಚಾಗಿದ್ದರು.

ಧರ್ಮ ಆಧಾರಿತ ವಿಭಜನೆ ಭಾಷಾವಾರು ವಿಭಜನೆಗೆ ಹೊಂದಿಕೊಳ್ಳುತ್ತಿರಲಿಲ್ಲ. ಎಲ್ಲಿ ಸಿಖ್ಖರು ಪಂಜಾಬಿಯನ್ನು ಪ್ರಾಥಮಿಕ ಭಾಷೆಯನ್ನಾಗಿ ಅಭ್ಯಾಸಮಾಡುತ್ತಿದ್ದರೋ ಅಲ್ಲಿ

ಹಿಂದೂಗಳೂ ಪಂಜಾಬಿಯನ್ನೇ ಅಭ್ಯಾಸ ಮಾಡುತ್ತಿದ್ದರು. ಆದರೆ ಹಿಂದೂಗಳಲ್ಲಿ ಪಂಜಾಬಿ ಭಾಷೆ ಹಿಂದೂಸ್ತಾನಿಯ ದೇಶೀಯ ಭಾಷೆ ಎಂಬ ಭಾವನೆಯಿತ್ತು. ಆದರೆ, ಪಂಜಾಬಿ ಭಾಷೆ ತನ್ನಷ್ಟಕ್ಕೇ ಒಂದು ಭಾಷೆಯಾಗಿರದೇ ಅದೊಂದು ದೇವ ಭಾಷೆ ಎಂದು ಸಿಖ್ಖರು ಪಟ್ಟು ಹಿಡಿದಿದ್ದರು. ಸಿಖ್ಖರು ಗುರುಮುಖಿ ಲಿಪಿಯಲ್ಲಿ ಪಂಜಾಬಿಯನ್ನು ಓದಿ, ಬರೆದರು. ಈ ಭಾಷೆಯ ಅಕ್ಷರಮಾಲೆ ಗುರುಮುಖದಿಂದಲೇ ಪ್ರಾಪ್ತವಾಗಿತ್ತೆಂದು ಅವರು ನಂಬಿದ್ದರು.

1920ರ ನಂತರ ರಾಜಕೀಯವಾಗಿ ಪ್ರಜ್ಞಾವಂತರಾಗಿದ್ದ ಸಿಖ್ಖರ ಪ್ರತಿನಿಧಿಯಾಗಿತ್ತು ಅಕಾಲಿದಳ. ಇದು ರಾಜಕೀಯ ಸಂಸ್ಥೆಯೂ ಹೌದು, ಧಾರ್ಮಿಕ ಸಂಸ್ಥೆಯೂ ಹೌದು. ಇದು ಸಿಖ್ಖರ ಗುರುದ್ವಾರಗಳನ್ನು ಪತೋಟಿಯಲ್ಲಿಟ್ಟುಕೊಂಡಿತ್ತು. ಹಾಗೆಯೇ ಚುನಾವಣೆಗಳಲ್ಲೂ ಸ್ಪರ್ಧಿಸುತ್ತಿತ್ತು. ಮಾಸ್ಟರ್ ತಾರಾಸಿಂಗ್ ಅಕಾಲಿ ದಳದ ದೀರ್ಘಕಾಲೀನ ನಾಯಕರು. ಈತ ಮಹಾನ್ ನಾಯಕ. ಒಳ್ಳೆಯ ಪಿತೂರಿಗಾರರಾಗಿದ್ದ ತಾರಾಸಿಂಗರ ಜೀವನ ಚರಿತ್ರೆ ಇನ್ನೂ ಬೆಳಕು ಕಂಡಿಲ್ಲ.

ತಾರಾಸಿಂಗ್ 1885ರ ಜೂನ್ ತಿಂಗಳಲ್ಲಿ ಹುಟ್ಟಿದರು. ಜನ್ಮತಃ ಅವರು ಹಿಂದೂ. ಈ ಬಗ್ಗೆ ನಾವು ಆಶ್ಚರ್ಯಚಕಿತರಾಗಬೇಕಿಲ್ಲ. ಯಾವಾಗಲೂ ಮೊದಲ ತಲೆಮಾರಿನ ಮತಾಂತರಗಾರರು ಧಾರ್ಮಿಕ ನಾಯಕರಾಗಿ ಹೆಚ್ಚು ಪ್ರಭಾವಶಾಲಿಗಳಾಗಿರುತ್ತಾರೆ. ಹಾಗೆಂದು ಇವರನ್ನು ಮೂಲಭೂತವಾದಿಗಳೆಂದು ಕರೆಯುವಂತಿಲ್ಲ. ತಾರಾಸಿಂಗ್ ಅಮೃತಸರದ ಖಲ್ಸಾ ಕಾಲೇಜಿನಲ್ಲಿ ಓದಿದರು. ಓದಿನಷ್ಟೇ ಫುಟ್‌ಬಾಲ್ ಆಟದಲ್ಲೂ ಮುಂದಿದ್ದರು. ಫುಟ್‌ಬಾಲ್‌ನಲ್ಲಿ ರಕ್ಷಕ ಆಟಗಾರನಾಗಿ ತೋರಿದ ಸ್ಥೈರ್ಯ-ಸ್ಥಿರತೆಗಳು ಅವರಿಗೆ 'ಬಂಡೆ' ಎಂಬ ಖ್ಯಾತಿಯನ್ನು ತಂದುಕೊಟ್ಟಿದ್ದವು. ತಾರಾಸಿಂಗ್ ಓದಿನ ನಂತರ ವಸಾಹತುಶಾಹಿ ಸರ್ಕಾರಿ ಉದ್ಯೋಗಕ್ಕೆ ಬದಲು ಲೈಲಾಪುರದ ಸಿಖ್ ಶಾಲೆಯೊಂದರ ಮುಖ್ಯೋಪಾಧ್ಯಾಯರಾದರು. ಈ ಹುದ್ದೆಯೊಂದಿಗೆ ಅವರ ಹೆಸರಿಗೆ ಮಾಸ್ಟರ್ ಅಂಟಿಕೊಂಡು ಮಾಸ್ಟರ್ ತಾರಾಸಿಂಗ್ ಆದರು.

1920ರ ದಶಕದಲ್ಲಿ ತಾರಾಸಿಂಗರು ಸಿಖ್ ಗುರುದ್ವಾರಗಳನ್ನು ಲೋಲುಪ್ತ ಪುರೋಹಿತರಿಂದ ಮುಕ್ತಗೊಳಿಸುವ ಚಳವಳಿಗೆ ಧುಮುಕಿದರು. 1931ರಲ್ಲಿ ಅವರು ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಅಧ್ಯಕ್ಷರಾದರು. ಈ ಹುದ್ದೆ ತುಂಬ ಅಧಿಕಾರಬಲವುಳ್ಳ ಪ್ರಭಾವಶಾಲಿಯದಾಗಿತ್ತು. ಹಣದ ಮಾತಂತೂ ಹೇಳಲಶಕ್ಯ. ಮುಂದಿನ ಮೂವತ್ತು ವರ್ಷಗಳ ಕಾಲ ತಾರಾಸಿಂಗರು ಸಿಖ್ ಸಮುದಾಯದ ದೃಢಸಂಕಲ್ಪಶಕ್ತಿಯ ಅವಿಚ್ಛಿನ್ನ ರಕ್ಷಕರಾಗಿ ಮೆರೆದರು. "ತಾವು ಸತತವಾಗಿ ಪಂಥದ ಸಂಕಷ್ಟಗಳನ್ನು ಎದುರಿಸುತ್ತಾ ಪಂಥಕ್ಕೆ ಪ್ರತ್ಯೇಕ ರಾಜಕೀಯ ಅಸ್ತಿತ್ವಕ್ಕಾಗಿ ಹೋರಾಡುತ್ತಾ ಬಂದಿರುವ ಸಿಖ್ ನಾಯಕರೆಂದೂ ಸಿಖ್ ಸಮುದಾಯಕ್ಕಾಗಿ ಪ್ರಾದೇಶಿಕವಾಗಿ ಸಂಘಟಿತವಾದ ರಾಜಕೀಯ ಅಧಿಕಾರದ ಗುರಿಸಾಧಿಸಲು ವೈಯಕ್ತಿಕ ಆಸೆ-ಆಕಾಂಕ್ಷೆಗಳನ್ನಿಟ್ಟುಕೊಳ್ಳದೇ ಹೋರಾಡುತ್ತಿರುವ ನಿಸ್ವಾರ್ಥಿ ನಾಯಕರೆಂದೂ" ತಮ್ಮನ್ನು ಬಿಂಬಿಸಿಕೊಳ್ಳುವುದರಲ್ಲಿ ಅವರು ಯಶಸ್ವಿಯಾಗಿದ್ದರು.

1947ಕ್ಕೆ ಮುಂಚೆ ತಾರಾಸಿಂಗರು, ಸಿಖ್ ಪಂಥ ಮುಸ್ಲಿಮರಿಂದ ಮತ್ತು ಮುಸ್ಲಿಂ ಲೀಗ್‌ನಿಂದ ಅಪಾಯವನ್ನೆದುರಿಸುತ್ತಿದೆಯೆಂದು ಪಟ್ಟುಬಿಡದೆ ವಾದಿಸುತ್ತಿದ್ದರು. 1947ರ ನಂತರ ಅವರು ಸಿಖ್ ಪಂಥ ಹಿಂದೂಗಳು ಮತ್ತು ಕಾಂಗ್ರೆಸ್‌ನಿಂದ ಅಪಾಯವನ್ನೆದುರಿಸುತ್ತಿದೆಯೆಂದು ಹೇಳಲಾರಂಭಿಸಿದರು. 1951-52ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರ ಈ ವಾದ ಹೆಚ್ಚು ವಾಗಾಡಂಬರವಾಯಿತು. ಅವರು ಹಿಂದೂ ಪ್ರಾಬಲ್ಯದ ವಿರುದ್ಧ ಅಬ್ಬರದಿಂದ ದೂಷಿಸಲಾರಂಭಿಸಿದರು. "ಧರ್ಮದ ಸಲುವಾಗಿ, ಸಂಸ್ಕೃತಿಯ ಸಲುವಾಗಿ, ಪಂಥದ ಸಲುವಾಗಿ, ಗುರುಗಳ ಪತಾಕೆ ಎತ್ತಿಹಿಡಿಯುವ ಸಲುವಾಗಿ, ಸಿಖ್ಖರು ಸ್ವಾತಂತ್ರ್ಯಗಳಿಸಲು ಕಟಿಬದ್ಧರಾಗಿ ಎದ್ದು ನಿಂತಿದ್ದಾರೆಂದು" ಅವರು ಚುನಾವಣೆ ಕಾಲದಲ್ಲಿ ಘೋಷಿಸಿದರು.

ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಬೆಂಕಿಕಾರುವ ಭಾಷಣ ಮಾಡಿದ್ದಕ್ಕಾಗಿ ತಾರಾಸಿಂಗರನ್ನು 1948-52ರ ಅವಧಿಯಲ್ಲಿ ಅನೇಕ ಸಲ ಬಂಧಿಸಿ ಸೆರೆಮನೆಗೆ ದೂಡಲಾಗಿತ್ತು. ಅವರೊಂದಿಗೆ ಅವರ ನೂರಾರು ಮಂದಿ ಅನುಯಾಯಿಗಳೂ ಜೈಲಿಗೆ ಹೋಗಿದ್ದರು. ಸಿಖ್ ರೈತ ಸಮುದಾಯದ ಬೆಂಬಲ ತಾರಾಸಿಂಗರಿಗಿತ್ತು. ವಿಶೇಷವಾಗಿ ಮೇಲ್ಜಾತಿಯ ಜಾಟರ ಬೆಂಬಲ ಹೆಚ್ಚಾಗಿತ್ತು. ತಾರಾಸಿಂಗರು 'ಸ್ವಾತಂತ್ರ್ಯ' ಪದವನ್ನು ಉದ್ದೇಶಪೂರ್ವಕವಾಗಿಯೇ ಸಂದಿಗ್ಧವಾಗಿ ಬಳಸುತ್ತಿದ್ದರು. ಜಾಟರಿಗೆ ಬೇಕಾಗಿದ್ದುದು ಭಾರತದೊಳಗೆ ಒಂದು ಸಿಖ್ ಪ್ರಾಂತ್ಯವೇ ಹೊರತು ಸಾರ್ವಭೌಮ ರಾಷ್ಟ್ರವಲ್ಲ. ಅವರಿಗೆ ಪೂರ್ವ ಪಂಜಾಬಿನ ಹಿಂದೂ ಪ್ರಾಬಲ್ಯದಿಂದ ಮುಕ್ತಿ ಬೇಕಾಗಿತ್ತು. ತಾವು ಹಿತಕರವಾದ ಬಹುಮತದಿಂದ ಬಾಳ್ವೆ ಮಾಡುವಂಥ ರಾಜ್ಯ ಅವರಿಗೆ ಬೇಕಾಗಿತ್ತು. ಬೇರೆಯಾಗುವಂಥ ಸುಳಿವು ನೀಡುವ ಮೂಲಕ ತಾರಾಸಿಂಗ್ ಸರ್ಕಾರದ ಮೇಲೆ ಒತ್ತಡ ಹೇರಿದರು. ಈ ಧ್ಯೇಯ ಸಾಧನೆಗೆ ತಾವು ಬದ್ಧರೆಂದು ಅನುಯಾಯಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಆದರೆ ಸಿಖ್ ಸಮುದಾಯ ಇಡಿಯಾಗಿ ತಾರಾಸಿಂಗರ ಬೆನ್ನಿಗಿರಲಿಲ್ಲ. ಜಾಟರ ಬಗ್ಗೆ ಭಯಭೀತರಾಗಿದ್ದ ಕೆಳಜಾತಿಯ ಸಿಖ್ಖರು ಅಕಾಲಿದಳವನ್ನು ವಿರೋಧಿಸುತ್ತಿದ್ದರು. ಜಾಟರಲ್ಲಿ ಪ್ರಮುಖರು ಕೆಲವರು ಕಾಂಗ್ರೆಸ್ ಸೇರಿಕೊಂಡಿದ್ದರು. 1951ರ ಜನಗಣತಿಯಲ್ಲಿ ಪಂಜಾಬಿ ಮಾತನಾಡುವ ಹಿಂದೂಗಳು ತಮ್ಮ ಮಾತೃಭಾಷೆಯಾದ ಹಿಂದಿ ಭಾಷೆಗೆ ಮತ್ತೆ ಒಲಿದರು. ಇದೊಂದು ಒಳ ಉದ್ದೇಶವುಳ್ಳ ನಡೆಯಾಗಿತ್ತು.

ಸಾರ್ವತ್ರಿಕ ಚುನಾವಣೆ ತಾರಾಸಿಂಗರಿಗೆ ದೊಡ್ಡ ಹೊಡೆತವಾಗಿ ಪರಿಣಮಿಸಿತು. 126 ಪಂಜಾಬ್ ವಿಧಾನ ಸಭಾಸ್ಥಾನಗಳಲ್ಲಿ ಅಕಾಲಿದಳ ಗೆದ್ದದ್ದು ಕೇವಲ 14 ಸ್ಥಾನಗಳನ್ನು.

III

ಭಾಷಾವಾರು ಸ್ವಾಯತ್ತತೆಗಾಗಿ ಅತ್ಯುಗ್ರ ಚಳವಳಿ ನಡೆಸಿದವರು ತೆಲುಗು ಮಾತನಾಡುವ ಆಂಧ್ರದವರು ಎಂಬುದು ಪ್ರಶ್ನಾತೀತವಾದದ್ದು. ಹಿಂದಿ ಹೊರತಾಗಿ ಭಾರತದಲ್ಲಿ ಅತಿ ಹೆಚ್ಚು

ಜನ ಮಾತನಾಡುವ ಭಾಷೆ ತೆಲುಗು. ತೆಲುಗು ಭಾಷೆಗೆ ಶ್ರೀಮಂತವಾದ ಸಾಹಿತ್ಯ ಪರಂಪರೆ ಇದೆ. ವಿಜಯನಗರ ಸಾಮ್ರಾಜ್ಯದಂಥ ಧವಳ ಕೀರ್ತಿ ಲಾಂಛನಗಳು ಆಂಧ್ರದ ಮುಡಿಯಲ್ಲಿವೆ. ಭಾರತ ಇನ್ನೂ ಬ್ರಿಟಿಷರ ದಾಸ್ಯದಲ್ಲಿದ್ದ ಕಾಲದಲ್ಲೇ ತಮಿಳರ ಪಕ್ಷಪಾತದ ವಿರುದ್ಧ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿನ ತೆಲುಗು ಮಾತನಾಡುವ ಜನ ಬಂಡೆದಿದ್ದರು. ತೆಲುಗರ ಅಸ್ಮಿತೆಯನ್ನು ಎತ್ತಿ ಹಿಡಿಯಲು ಆಂಧ್ರ ಮಹಾಸಭಾ ಬಹುವಾಗಿ ಶ್ರಮಿಸಿತ್ತು. ಆಂಧ್ರ ಮಹಾಸಭಾ ನಿಜಾಮರ ಹೈದರಾಬಾದ್ ಸಂಸ್ಥಾನದಲ್ಲೂ ಸಕ್ರಿಯವಾಗಿತ್ತು.

ಸ್ವಾತಂತ್ರ್ಯ ಬಂದ ನಂತರ ತೆಲುಗರು ಭಾಷಾವಾರು ರಾಜ್ಯರಚನೆಯ ತಮ್ಮ ನಿರ್ಣಯವನ್ನು ಅನುಷ್ಠಾನಕ್ಕೆ ತರುವಂತೆ ಕಾಂಗೆಸ್‌ಗೆ ಮನವಿಮಾಡಿಕೊಂಡರು. ತಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಅವರು, ಅರ್ಜಿ ಬರೆಯುವುದು, ಬೀದಿಗಳಲ್ಲಿ ಮೆರವಣಿಗೆ ನಡೆಸುವುದು, ಉಪವಾಸ ಸತ್ಯಾಗ್ರಹ ನಡೆಸುವುದು ಹೀಗೆ ಹಲವಾರು ಮಾರ್ಗಗಳನ್ನು ಹಿಡಿದರು. ಮದ್ರಾಸಿನ ಮಾಜಿ ಮುಖ್ಯಮಂತ್ರಿ ಟಿ. ಪ್ರಕಾಶಂ ಇದಕ್ಕಾಗಿ 1950ರಲ್ಲಿ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟರು. ಇದು ಕಾಂಗ್ರೆಸ್‌ಗೆ ಬಿದ್ದ ದೊಡ್ಡ ಹೊಡೆತವಾಯಿತು. ತತ್‌ಕ್ಷಣವೇ ಆಂಧ್ರಪ್ರದೇಶ ರಾಜ್ಯ ರಚನೆಯಾಗಬೇಕೆಂದು ಒತ್ತಾಯಿಸಿ ಮದ್ರಾಸ್ ವಿಧಾನಸಭೆಯ ತೆಲುಗು ಮಾತನಾಡುವ ಸದಸ್ಯರು ಪಕ್ಷಭೇದ ಮರೆತು ರಾಜೀನಾಮ ನೀಡಿದರು. 1951ರ ಮಳೆಗಾಲದಲ್ಲಿ, ಕಾಂಗ್ರೆಸ್ ರಾಜಕಾರಣಿಯಾಗಿದ್ದು ನಂತರ ಸನ್ಯಾಸ ಸ್ವೀಕರಿಸಿದ್ದ ಸೀತಾರಾಮ್ ಎಂಬುವರು ಆಂಧ್ರ ರಾಜ್ಯ ರಚನೆಗೆ ಬೆಂಬಲವಾಗಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಐದು ವಾರಗಳ ನಂತರ ವಿನೋಬಾಭಾವೆಯವರ ಮನವಿಗೆ ಮಣಿದು ಸೀತಾರಾಂ ಉಪವಾಸ ನಿಲ್ಲಿಸಿದರು.

ಈಗ ಆಂಧ್ರ ರಾಜ್ಯ ರಚನೆಯ ವಿಷಯ ವಯಸ್ಕ ಮತದಾನದ ನಿಕಷಕ್ಕೆ ಬಿತ್ತು. ಚುನಾವಣೆ ಪ್ರಚಾರಕ್ಕಾಗಿ ನೆಹರೂ ತೆಲುಗು ಮಾತನಾಡುವ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಾಗ ಅನೇಕ ಕಡೆ ಪ್ರತಿಭಟನಕಾರರು ಕಪ್ಪು ಬಾವುಟ ಪ್ರದರ್ಶಿಸಿ ಅವರನ್ನು ಸ್ವಾಗತಿಸಿದರು. "ನಮಗೆ ಆಂಧ್ರ ಬೇಕು" ಘೋಷಣೆಗಳು ಮುಗಿಲು ಮುಟ್ಟಿದವು. "ಕಾಂಗ್ರೆಸ್ ಅಧ್ಯಕ್ಷರು ಆಂಧ್ರ ರಾಜ್ಯ ನೇತಾರರ ಪ್ರತಿಭಟನಾ ಪ್ರದರ್ಶನವನ್ನು, ಘೋಷಣೆಗಳನ್ನು, ಭಿತ್ತಿ ಪ್ರತಗಳನ್ನು ಎದುರಿಸಬೇಕಾಯಿತೆಂದು" ಪಕ್ಷದ ಪತ್ರಿಕೆ ವರದಿಮಾಡಿತು. "ಕೆಲವು ಕಡೆ ನೆಹರೂ ಪ್ರದರ್ಶನಕಾರರನ್ನು ನಸುನಗೆಯಿಂದ ಎದುರಿಸಿದರು, ಇನ್ನು ಕೆಲವು ಕಡೆ ಪ್ರದರ್ಶನಕಾರರ ವರ್ತನೆಯಿಂದ ಕೆರಳಿದರು" ಎಂದೂ ಕಾಂಗ್ರೆಸ್ ಪತ್ರಿಕೆ ಎದೆಗುಂದಿ ಬರೆದಿತ್ತು. ಅಪಶಕುನದ ಸೂಚನೆಗಳು ಸ್ಪಷ್ಟವಾಗಿ ಗೋಚರಿಸಿದ್ದವು. ಚುನಾವಣೆಯಲ್ಲಿ ಕಾಂಗ್ರೆಸ್ ಸಾಧನೆ ಗಣನೀಯವಾಗಿರಲಿಲ್ಲ. ಮದ್ರಾಸ್ ವಿಧಾನ ಸಭೆಯ 145 ಸ್ಥಾನಗಳಲ್ಲಿ ಕಾಂಗ್ರೆಸ್ ಗೆದ್ದದ್ದು ಕೇವಲ 43 ಸ್ಥಾನಗಳನ್ನು. ಆಂಧ್ರ ರಾಜ್ಯ ಚಳವಳಿ ಬೆಂಬಲಿಸಿದ ಪಕ್ಷಗಳು ಹೆಚ್ಚು ಸ್ಥಾನಗಳನ್ನು ಜಯಿಸಿದ್ದವು. ಈ ಪಕ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷವೂ ಒಂದು. ಕಮ್ಯುನಿಸ್ಟರು 41 ಸ್ಥಾನಗಳನ್ನು ಗೆದ್ದಿದ್ದರು.

ಚುನಾವಣೆ ಫಲಿತಾಂಶ ಆಂಧ್ರ ಚಳವಳಿಗೆ ಪುನಶ್ಚೇತನ ನೀಡಿತು. 1952ರ ಫೆಬ್ರುವರಿಯಲ್ಲಿ ಸ್ವಾಮಿ ಸೀತಾರಾಮ್ ತೆಲುಗು ಮಾತನಾಡುವ ಜಿಲ್ಲೆಗಳಲ್ಲಿ ಪಾದಯಾತ್ರೆ ಕೈಗೊಂಡರು. ಹೋರಾಟಕ್ಕೆ ಬೆಂಬಲಗಳಿಸುವುದೇ ಪಾದಯಾತ್ರೆ ಉದ್ದೇಶವಾಗಿತ್ತು. "ಆಂಧ್ರ ರಾಜ್ಯದ ರಚನೆಗೆ ಇನ್ನು ಹೆಚ್ಚು ದಿನ ಕಾಯುವುದು ಸಾಧ್ಯವಿಲ್ಲ- ಈ ಗುರಿ ಸಾಧನೆಗಾಗಿ ಯಾವುದೇ ಬೆಲೆ ತೆರಲು ನಾವು ಸಿದ್ಧ" ಎಂದು ಪಾದಯಾತ್ರೆಯಲ್ಲಿ ಸ್ವಾಮಿ ಸಾರಿದರು. ತಮ್ಮ ಕನಸಿನ ರಾಜ್ಯ ನನಸಾಗುವವರೆಗೆ ಮದ್ರಾಸ್ ವಿಧಾನ ಸಭೆಯ ಕಾರ್ಯಕಲಾಪಗಳನ್ನು ಬಹಿಷ್ಕರಿಸುವಂತೆ ಸ್ವಾಮಿ ತೆಲುಗು ಸದಸ್ಯರಿಗೆ ಕರೆ ನೀಡಿದರು.

ಆಂಧ್ರದ ಸತ್ಯಾಗ್ರಹಿಗಳಿಗೆ ಇಬ್ಬರು ಹಿತಶತ್ರುಗಳಿದ್ದರು. ಒಬ್ಬರು ಪ್ರಧಾನ ಮಂತ್ರಿಯಾದರೆ ಮತ್ತೊಬ್ಬರು ಮದ್ರಾಸ್ ಮುಖ್ಯಮಂತ್ರಿ ಸಿ. ರಾಜಗೋಪಾಲಾಚಾರಿಯವರು. ಆಂಧ್ರ ರಾಜ್ಯ ರಚನೆ ಒಳ್ಳೆಯ ಆಲೋಚನೆಯಲ್ಲ ಎಂದು ಇವರಿಬ್ಬರೂ ಹೇಳಿದ್ದರು. ತಮ್ಮ ಇಷ್ಟಕ್ಕೆ ವಿರುದ್ಧವಾಗಿ ಆಂಧ್ರ ರಾಜ್ಯ ರಚನೆಯಾದಲ್ಲಿ ಮದ್ರಾಸ್ ಅದರ ಭಾಗವಾಗಿರುವುದಿಲ್ಲ ಎಂಬುದು ಇವರಿಬ್ಬರಲ್ಲೂ ಸ್ಪಷ್ಟವಾಗಿತ್ತು. ಇದು ಆಂಧ್ರದವರನ್ನು ಮತ್ತಷ್ಟು ರೊಚ್ಚಿಗೆಬ್ಬಿಸಿತ್ತು. ಏಕೆಂದರೆ ಮದ್ರಾಸ್ ನಗರದಲ್ಲಿ ಆರ್ಥಿಕವಾಗಿ ಹಾಗೂ ಜನಸಂಖ್ಯೆಯಲ್ಲಿ ತೆಲುಗರ ಪ್ರಾಬಲ್ಯ ಹೆಚ್ಚಾಗಿತ್ತು. ಹೀಗಾಗಿ ಮದ್ರಾಸ್ ಮೇಲೆ ತಮಿಳರಿಗಿಂತ ತಮಗೆ ಹೆಚ್ಚಿನ ಹಕ್ಕಿದೆ ಎಂದು ತೆಲುಗರು ಭಾವಿಸಿದ್ದರು.

ಮೇ 22ರಂದು ನೆಹರೂ ಸಂಸತ್ತಿನಲ್ಲಿ ಒಂದು ಹೇಳಿಕೆ ನೀಡಿದರು. "ಕಳೆದ ಕೆಲವು ವರ್ಷಗಳಿಂದ ನಮ್ಮೆಲ್ಲ ಆದ್ಯ ಕರ್ತವ್ಯಗಳೂ ಭಾರತದ ಬಲವರ್ಧನೆಯ ನಿಟ್ಟಿನಲ್ಲಿ ಸಾಗಿವೆ. ವೈಯಕ್ತಿಕವಾಗಿ ಈ ಬಲವರ್ಧನೆಯ ಪ್ರಕ್ರಿಯೆಗೆ ಸಹಾಯಕವಾಗದಂಥ ಯಾವುದೇ ಸಂಗತಿಯನ್ನು ನಾನು ವೈಯಕ್ತಿಕವಾಗಿ ಅನಪೇಕ್ಷಣೀಯ ಎಂದೇ ಭಾವಿಸುತ್ತೇನೆ. ಕೆಲವರ ವಿಷಯದಲ್ಲಿ, ಕೆಲವು ಪ್ರಸಂಗಗಳಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಅಪೇಕ್ಷಣೀಯವಿರಬಹುದು. ಆದರೆ ಅದಕ್ಕೆ ಇದು ಸೂಕ್ತಕಾಲವಲ್ಲ. ಸೂಕ್ತಕಾಲ ಪ್ರಾಪ್ತವಾದಾಗ ಸರ್ವಥಾ ಅದನ್ನು ಮಾಡೋಣ" ಎಂಬುದು ಅವರ ಹೇಳಿಕೆಯ ತಾತ್ಪರ್ಯ.

ಕೆ.ವಿ. ನಾರಾಯಣ ರಾವ್ ಬರೆದಿರುವಂತೆ "ನೆಹರೂ ಮಾತುಗಳು ಆಂಧ್ರದವರಿಗೆ ತುಂಬ ಅಸ್ಪಷ್ಟವಾಗಿ, ನೆಪಮಾತ್ರದ್ದಾಗಿ ತೋರಿದವು. ಸೂಕ್ತಕಾಲ ಯಾವುದು, ಅದು ಯಾವಾಗ ಬರುತ್ತದೆ ಎನ್ನುವುದು ಯಾರಿಗೂ ಗೊತ್ತಿರಲಿಲ್ಲ." ಕಾಯುತ್ತಿದ್ದ ಆಂಧ್ರದವರ ಸಹನೆಯ ಕಟ್ಟೆಯೊಡೆಯಿತು. ಪ್ರತಿಭಟನೆಯನ್ನು ತೀವ್ರಗೊಳಿಸಿದರು. 1952ರ ಅಕ್ಟೋಬರ್ 19ರಂದು ಪೊಟ್ಟಿ ಶ್ರೀರಾಮುಲು ಎಂಬುವರು ಮದ್ರಾಸಿನಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಈತನಿಗೆ ಸ್ವಾಮಿ ಸೀತಾರಾಮ್ ಅವರ ಆಶೀರ್ವಾದವಿತ್ತು. ಅಲ್ಲದೆ ಸಹಸ್ರಾರು ಮಂದಿ ತೆಲುಗರ ಬೆಂಬಲವಿತ್ತು.

1901ರಲ್ಲಿ ಮದ್ರಾಸಿನಲ್ಲಿ ಜನಿಸಿದ ಶ್ರೀರಾಮುಲು ಸ್ಯಾನಿಟರಿ ಎಂಜಿನಿಯರಿಂಗ್ ಓದಿ ರೈಲ್ವೆಸ್ನಲ್ಲಿ ಉದ್ಯೋಗಸ್ಥರಾಗಿದ್ದರು. 1928ರಲ್ಲಿ ಪತ್ನಿ ಮತ್ತು ನವಜಾತ ಶಿಶು ಇಬ್ಬರನ್ನೂ

ಕಳೆದುಕೊಂಡ ಶ್ರೀರಾಮುಲು ಈ ದುರಂತದಿಂದ ತತ್ತರಿಸಿ ಹೋಗಿದ್ದರು. ಇದಾದ ಎರಡು ವರ್ಷಗಳ ನಂತರ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ರೈಲ್ವೆ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟರು. ಆನಂತರ ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲಿ ಕೆಲಕಾಲ ಇದ್ದರು. 1940-41ರಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಹದಿನೆಂಟು ತಿಂಗಳಕಾಲ ಸೆರೆಮನೆ ವಾಸ ಅನುಭವಿಸಿದ್ದರು.

ಆಂಧ್ರ ಚಳವಳಿಯ ಇತಿಹಾಸ ಸಮಿತಿ 1985ರಲ್ಲಿ ಪ್ರಕಟಿಸಿರುವ ಜೀವನ ಚರಿತ್ರೆಯ ಪ್ರಕಾರ, ಗಾಂಧೀಜಿ ಆಶ್ರಮದ ವಾಸ್ತವ್ಯ ಪೊಟ್ಟಿ ಶ್ರೀರಾಮುಲು ಅವರ ಜೀವನದ ಒಂದು ಪರ್ವಾರಂಭ ಕಾಲವಾಗಿತ್ತು. "ಇಲ್ಲಿ ಅವರು ಪ್ರೀತಿ-ವಿನಯಗಳಿಂದ, ತ್ಯಾಗದಿಂದ, ಸೇವಾಮನೋಭಾವದಿಂದ ದುಡಿಯುತ್ತಿದ್ದ ಸಾಧಕರಾಗಿದ್ದರು, ಅನ್ವೇಷಕರಾಗಿದ್ದರು. ಇಲ್ಲಿ ಅವರಿಗೆ ವಿಶ್ವದ ಮಹೋಪಾಧ್ಯಾಯರಾಗಿದ್ದ ಗುರು ದೊರಕಿದ್ದರು. ಅಷ್ಟೇ ಪ್ರೀತಿ-ವಿಶ್ವಾಸ, ವಿನಯ-ವಿನಮ್ರತೆಗಳಿಂದ ದರಿದ್ರನಾರಾಯಣನ ಸಂಕಷ್ಟಗಳನ್ನು ಅರಿಯುವ ಕಾಯಕ ಕೈಗೊಂಡಿದ್ದ ಸತ್ಯಾನ್ವೇಷಿಯಾಗಿದ್ದರು ಈ ಗುರುಗಳು. ಸಾಬರಮತಿಯಲ್ಲಿ ಪೊಟ್ಟಿ ಶ್ರೀರಾಮುಲು ಆಶ್ರಮವಾಸಿಗಳ ಪ್ರೀತಿ-ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಅಂತೆಯೇ ಕುಲಪತಿ ಗಾಂಧೀಜಿಯವರ ಪ್ರೀತಿ-ಪ್ರಶಂಸೆಗಳಿಗೂ ಪಾತ್ರರಾಗಿದ್ದರು."

ಗಾಂಧೀಜಿಗೆ ಶ್ರೀರಾಮುಲು ಅವರಲ್ಲಿ ಪ್ರೀತಿವಾತ್ಸಲ್ಯಗಳಿದ್ದವು. ಇದರೊಂದಿಗೆ ಅವರ ಬಗ್ಗೆ ಕೊಂಚ ಅಸಮಾಧಾನವೂ ಇತ್ತು. 1946ರ ನವೆಂಬರ್ 25ರಂದು ಈ ಪ್ರೀತಿಯ ಶಿಷ್ಯ ಮದ್ರಾಸ್ ಪ್ರಾಂತ್ಯದ ಎಲ್ಲ ದೇವಾಲಯಗಳಲ್ಲೂ ಅಸ್ಪೃಶ್ಯರಿಗೆ ಪ್ರವೇಶಾವಕಾಶ ವಿರಬೇಕೆಂದು ಒತ್ತಾಯಿಸಿ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಭಾರತದ ಸ್ವಾತಂತ್ರ್ಯದಲ್ಲಿ ಮಗ್ನರಾಗಿದ್ದ ಉಳಿದ ಕಾಂಗ್ರೆಸ್ಸಿಗರು ಸತ್ಯಾಗ್ರಹ ನಿಲ್ಲಿಸುವಂತೆ ಶ್ರೀರಾಮುಲು ಅವರಿಗೆ ಹೇಳಿದರು. ಆದರೆ ಶ್ರೀರಾಮುಲು ಈ ಮಿತ್ರರ ಮಾತಿಗೆ ಕಿವಿಗೊಡಲಿಲ್ಲ. ಆಗ ಈ ಕಾಂಗ್ರೆಸ್ಸಿಗರು ಗಾಂಧಿಯವರ ಮೊರೆಹೊಕ್ಕರು. ಗಾಂಧೀಜಿ ಉಪವಾಸ ನಿಲ್ಲಿಸುವಂತೆ ಶಿಷ್ಯನ ಮನ ಒಲಿಸುವುದರಲ್ಲಿ ಸಫಲರಾದರು. ಆನಂತರ ಗಾಂಧೀಜಿ ಟಿ. ಪ್ರಕಾಶಂ ಅವರಿಗೆ ಬರೆದ ಪತ್ರದಲ್ಲಿ, "ನೀವು ಹೇಳಿದ ರೀತಿ ಶ್ರೀರಾಮುಲು ಉಪವಾಸ ನಿಲ್ಲಿಸಿದ್ದರಿಂದ ನನಗೆ ಸಂತೋಷವಾಗಿದೆ. ಉಪವಾಸ ನಿಲ್ಲಿಸಿದ ಕೂಡಲೇ ಆತ ನನಗೆ ತಂತಿ ಕಳುಹಿಸಿದ್ದಾನೆ. ಅವನೊಬ್ಬ ಘನ ಕಾರ್ಯಕರ್ತ ಎಂಬುದನ್ನು ನಾನು ಬಲ್ಲೆ, ಆದರೆ ಕೊಂಚ ತಿಕ್ಕಲು" ಎಂದು ಅಭಿಪ್ರಾಯಪಟ್ಟಿದ್ದರು.

1946ರಲ್ಲಿ ಪೊಟ್ಟಿ ಶ್ರೀರಾಮುಲು ಗಾಂಧೀಜಿ ಕರೆಗೆ ಓಗೊಟ್ಟು ಉಪವಾಸ ನಿಲ್ಲಿಸಿದರು. ಆದರೆ 1952ರಲ್ಲಿ ಮಹಾತ್ಮರು ಇರಲಿಲ್ಲ. ಏನೇ ಇರಲಿ ಒಂದು ಕಾಲಕ್ಕೆ ಅಸ್ಪೃಶ್ಯರ ಬಗ್ಗೆ ಇದ್ದ ಕಾಳಜಿಗಿಂತ ಆಂಧ್ರದ ಬಗ್ಗೆ ಹೆಚ್ಚಿನ ಕಾಳಜಿ ಶ್ರೀರಾಮುಲು ಅವರಿಗಿತ್ತು. ಕೊನೆಯ ಉಸಿರಿರುವವರೆಗೂ ಆಂಧ್ರಕ್ಕಾಗಿ ಅವರು ಸತ್ಯಾಗ್ರಹ ಮಾಡಿದರು, ಅಥವಾ ಕೇಂದ್ರ ಸರ್ಕಾರ ತನ್ನ ಪಟ್ಟು ಸಡಿಲಿಸುವವರೆಗೆ ಉಪವಾಸ ಸತ್ಯಾಗ್ರಹ ನಡೆಸಿ ಆಂಧ್ರಕ್ಕಾಗಿ ಅಸುನೀಗಿದರು.

ಡಿಸೆಂಬರ್ 3ರಂದು ನೆಹರೂ ರಾಜಗೋಪಾಲಾಚಾರಿಯವರಿಗೆ ಬರೆದರು: "ಆಂಧ್ರ ಪ್ರಾಂತ್ಯಕ್ಕಾಗಿ ಉಪವಾಸ ಸತ್ಯಾಗ್ರಹ ನಡೆದಿದೆ. ನನಗೆ ರೋಷೋನ್ಮತ್ತ ತಂತಿಗಳು ಬರುತ್ತಿವೆ. ನಾನು ಇದರಿಂದ ಎಳ್ಳಷ್ಟೂ ವಿಚಲಿತನಾಗಲಿಲ್ಲ. ನಾನು ಇದನ್ನು ಸಂಪೂರ್ಣವಾಗಿ ಅಲಕ್ಷಿಸಿದ್ದೇನೆ." ಈ ಪತ್ರ ಬರೆಯುವ ವೇಳೆಗೆ ಶ್ರೀರಾಮುಲು ಸತ್ಯಾಗ್ರಹ ಆರಂಭಿಸಿ ಆರು ವಾರಗಳಾಗಿದ್ದವು. ಆರು ವಾರದಿಂದ ಅವರು ಆಹಾರ ತೆಗೆದುಕೊಂಡಿರಲಿಲ್ಲ. ಶ್ರೀರಾಮುಲು ನಿರಶನದ ಅಗ್ನಿ ಪರೀಕ್ಷೆಯಲ್ಲಿ ಬೇಯುತ್ತಿದ್ದಂತೆ ಅವರ ಸತ್ಯಾಗ್ರಹಕ್ಕೆ ಬೆಂಬಲ ವೃದ್ಧಿಸಿತು. ಅನೇಕ ನಗರಗಳಲ್ಲಿ ಪ್ರತ್ಯೇಕ ಆಂಧ್ರ ಬೆಂಬಲಿಸಿ ಹರತಾಳಗಳು ನಡೆದವು. ಈ ಅವಧಿಯಲ್ಲಿ ಮದ್ರಾಸಿನಿಂದ ಕಲ್ಕತ್ತೆಗೆ ಪಯಣಿಸುತ್ತಿದ್ದ ಸಮಾಜಶಾಸ್ತ್ರಜ್ಞ ಆಂಡ್ರೆ ಬೆಟಿಲ್ಲೆ ಅವರಿದ್ದ ರೈಲನ್ನು ವೈಜಾಗ್‌ನಲ್ಲಿ ಉದ್ರಿಕ್ತ ಜನರು ತಡೆದು ನಿಲ್ಲಿಸಿದ್ದರಂತೆ. ಪ್ರದರ್ಶನಕಾರರು ರಾಜಾಜಿ ಮತ್ತು ನೆಹರೂ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರಂತೆ.

ಜನರ ಭಾವನೆಗಳನ್ನು ಮಾನ್ಯ ಮಾಡುವುದು ನೆಹರೂ ಅವರಿಗೆ ಅನಿವಾರ್ಯವಾಯಿತು. ಡಿಸೆಂಬರ್ 12ರಂದು ನೆಹರೂ ರಾಜಾಜಿ ಅವರಿಗೆ ಆಂಧ್ರದ ಬೇಡಿಕೆಯನ್ನು ಒಪ್ಪಿಕೊಳ್ಳಬೇಕಾದ ಕಾಲ ಬಂದಿದೆ ಎಂದು ಮತ್ತೊಂದು ಪತ್ರ ಬರೆದರು. "ಇಲ್ಲವಾದಲ್ಲಿ ಆಂಧ್ರದ ಜನರು ಸಂಪೂರ್ಣವಾಗಿ ಹತಾಶರಾಗುವರು. ಹಾಗಾದಾಗ ಪರಿಸ್ಥಿತಿ ಸಂಭಾಳಿಸುವುದು ನಮ್ಮಿಂದ ಸಾಧ್ಯವಾಗದೇ ಹೋಗಬಹುದು" ಎಂದು ನೆಹರೂ ಬರೆದಿದ್ದರು. ಇದಾದ ಎರಡು ದಿನಗಳ ನಂತರ ರಾಜಾಜಿ ತೀವ್ರ ಹತಾಶೆಯಿಂದ ಪ್ರಧಾನಮಂತ್ರಿಗೆ ಒಂದು ಕೇಬಲ್ ಕಳುಹಿಸಿದರು: "ನೀವು ಸ್ವಾಮಿ ಸೀತಾರಾಮ್ ಅವರನ್ನು ದೆಹಲಿಗೆ ಕರೆಸಿಕೊಂಡಲ್ಲಿ ನಾವಿಲ್ಲಿ ಹೆಚ್ಚಿನ ಅನಾಹುತ ತಪ್ಪಿಸುವುದು ಸಾಧ್ಯವಾಗಬಹುದು. ಸ್ವಾಮಿ ಸೀತಾರಾಮ ಈಗ ಮದ್ರಾಸಿನಲ್ಲಿ ನಿರಶನ ಮಾಡುತ್ತಿರುವ ಮಹಾನುಭಾವ ಶ್ರೀರಾಮುಲು ಹತ್ತಿರವೇ ಇದ್ದಾರೆ. ಅನಾಹುತಗಳೆಲ್ಲ ಈ ಕೇಂದ್ರದಿಂದಲೇ ಸ್ಫುರಿಸುತ್ತವೆ. ಆಂಧ್ರದ ಯುವಕರು ತೀವ್ರ ಉದ್ರಿಕ್ತರಾಗಿದ್ದು ಹಿಂಸಾಚಾರಕ್ಕೆ ಪಕ್ಕಾದವರಾಗಿದ್ದಾರೆ. ನೀವು ಮಾತುಕತೆಗಾಗಿ ಸೀತಾರಾಮ್ ಅವರನ್ನು ದೆಹಲಿಗೆ ಆಹ್ವಾನಿಸಿದಲ್ಲಿ ವಾತಾವರಣ ಬದಲಾಗಬಹುದು, ಅನಾಹುತದ ಸಾಧ್ಯತೆ ಕರಗಿಹೋಗಬಹುದು."

ಆದರೆ ಇದು ತುಂಬ ತಡವಾದ ಕ್ರಮವಾಗಿತ್ತು. ವೇಳೆ ಮೀರಿತ್ತು. ಡಿಸೆಂಬರ್ 15ರಂದು, ಐವತ್ತೆಂಟು ದಿನಗಳ ನಿರಶನದ ನಂತರ ಪೊಟ್ಟಿ ಶ್ರೀರಾಮುಲು ಅಸುನೀಗಿದರು. ದೊಂಬಿ, ಗಲಭೆಗಳು ಭುಗಿಲೆದ್ದವು. ನರಕ ಸದೃಶ್ಯವಾಯಿತು ತೆಲುಗು ಪ್ರದೇಶ. ಪೊಟ್ಟಿ ಶ್ರೀರಾಮುಲು ನಿಧನದ ಸುದ್ದಿ ಕಾಳ್ಗಿಚ್ಚಿನಂತೆ ಆಂಧ್ರದಾದ್ಯಂತ ಆವರಿಸಿತು. ಇಡೀ ಆಂಧ್ರ ಅರಾಜಕತೆಯಲ್ಲಿ ಮುಳುಗಿಹೋಯಿತು. ಸರ್ಕಾರದ ಕಛೇರಿಗಳ ಮೇಲೆ ದಾಳಿ ನಡೆಯಿತು. ರೈಲು ಸಂಚಾರ ತಡೆಯಲಾಯಿತು. ದೊಂಬಿ, ಗಲಭೆಗಳಲ್ಲಿ ಲಕ್ಷಾಂತರ ರೂಪಾಯಿ ಬೆಲೆಯ ಆಸ್ತಿಪಾಸ್ತಿಗೆ ಹಾನಿಯಾಯಿತು. ಪೊಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ ಹಲವಾರು ಮಂದಿ ಪ್ರತಿಭಟನಕಾರರು ಸತ್ತರು. ವಿಷಯವನ್ನು ಇತ್ಯರ್ಥಗೊಳಿಸುವುದು "ಉಪವಾಸವಲ್ಲ-

ವಾಸ್ತವ ಸಂಗತಿಗಳು" ಎಂದೊಮ್ಮೆ ನೆಹರೂ ಹೇಳಿದ್ದರು. ಈಗ ವ್ಯಾಪಕವಾದ ಹಿಂಸಾಚಾರ ಮತ್ತು ನಿಯಂತ್ರಿಸಲಾಗದಂಥ ಪ್ರತಿಭಟನೆಗಳ ಸಾಧ್ಯತೆ ಎದುರು ನೆಹರೂ ಮಣಿಯಬೇಕಾಯಿತು. ಪೊಟ್ಟಿ ಶ್ರೀರಾಮುಲು ನಿಧನದ ಎರಡು ದಿನಗಳ-ನಂತರ ಆಂಧ್ರ ರಾಜ್ಯ ರಚನೆಯಾಗಲಿದೆ ಎಂದು ಅವರು ಹೇಳಿಕೆ ನೀಡಿದರು.

ಮುಂದಿನ ತಿಂಗಳುಗಳಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿನ ತೆಲುಗು ಜಿಲ್ಲೆಗಳನ್ನು ಪ್ರತ್ಯೇಕತೆಗಾಗಿ ಗುರುತಿಸಲಾಯಿತು. ಪ್ರಾಂತ್ಯ ವಿಭಜನೆ ಕಾರ್ಯ ಶುರುವಾಯಿತು. ಮುಖ್ಯಮಂತ್ರಿಗಳು ಬರೆದಿರುವಂತೆ "ವಿಭಜನೆಯೊಂದಿಗೆ ಬಯ್ಗುಳ, ಕೋಪ-ತಾಪ, ಅಪನಂಬಿಕೆಗಳೂ" ಶುರುವಾದವು. ತಮ್ಮ ಭಾವನೆಗಳನ್ನು ಅದುಮಿಟ್ಟು, ಕರ್ನೂಲಿನಲ್ಲಿ 1953ರ ಅಕ್ಟೋಬರ್ 1ರಂದು ನಡೆದ ನೂತನ ಆಂಧ್ರ ರಾಜ್ಯದ ಉದ್ಘಾಟನಾ ಸಮಾರಂಭದಲ್ಲಿ ರಾಜಾಜಿ ಪಾಲ್ಗೊಂಡರು. ಅಂತೆಯೇ ಈ ಸಮಾರಂಭದಲ್ಲಿ ಆಂಧ್ರದ ಮಾಜಿ ಶತ್ರು ಪ್ರಧಾನಮಂತ್ರಿ ಜವಹರಲಾಲ್ ನೆಹರೂ ಅವರೂ ಮುಖ್ಯ ಅತಿಥಿಗಳಾಗಿದ್ದರು.

IV

ಆಂಧ್ರಪ್ರದೇಶ ರಾಜ್ಯರಚನೆ ಆಗಿನ ಪ್ರಧಾನ ಮಂತ್ರಿಯವರನ್ನು ಒಂದು ಚೌಕಟ್ಟಿನೊಳಗೆ ಬಂದಿಯನ್ನಾಗಿಸಿತು. ನೆಹರೂ ತಮ್ಮ ಸಹೋದ್ಯೋಗಿಯೊಬ್ಬರಿಗೆ ದುಗುಡದಿಂದ ಹೀಗೆ ಬರೆದಿದ್ದರು: "ನಾವೀಗ ಜೇನುಗೂಡಿಗೆ ಹೊಗೆ ಹಾಕಿದ್ದೇವೆ. ನಮ್ಮಲ್ಲಿ ಬಹುತೇಕ ಮಂದಿ ಇದರ ಕಡಿತದ ನೋವನ್ನು ಅನುಭವಿಸಬೇಕಾಗುತ್ತದೆ ಎಂದು ನನ್ನ ಎಣಿಕೆ."

ನೆಹರೂ ಅವರ ಅಂಜಿಕೆಯಂತೆಯೇ ಆಂಧ್ರದ ಸೃಷ್ಟಿ ಉಳಿದ ಭಾಷಾವಾರು ಬಣಗಳಿಂದ ಇಂಥದೇ ಬೇಡಿಕೆಗೆ ಪುಟಕೊಟ್ಟಿತು. ಕೇಂದ್ರ ಸರ್ಕಾರ ಒಲ್ಲದ ಮನಸ್ಸಿನಿಂದಲೇ ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ನೇಮಿಸಿತು. "ಈ ಭಾಷಾ ಸಮಸ್ಯೆ ಪರಿಹಾರಕ್ಕೆ ತತ್ವ ನಿಯಮಗಳನ್ನು ಸೂಚಿಸಲು" ಇದರ ನೇಮಕವಾಗಿತ್ತು. 1954-55ರ ಅವಧಿಯಲ್ಲಿ ಆಯೋಗದ ಸದಸ್ಯರು ಭಾರತದ ಉದ್ದಗಲ ಪ್ರಯಾಣ ಮಾಡಿದರು. ಅವರು 104 ಪಟ್ಟಣ/ನಗರಗಳಿಗೆ ಭೇಟಿಕೊಟ್ಟರು. 9 ಸಾವಿರಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿದರು ಹಾಗೂ 152,250 ಲಿಖಿತ ಮನವಿಗಳನ್ನು ಸ್ವೀಕರಿಸಿದರು.

ಅತಿ ಹೆಚ್ಚು ಅಹವಾಲುಗಳು ಬಂದದ್ದು ಮುಂಬಯಿ ನಾಗರಿಕರ ಸಮಿತಿಯಿಂದ. ತಮ್ಮ ವಾದ ಪ್ರತಿಪಾದನೆಗೆ ಅವರು 200 ಪುಟಗಳ ಆಕರ್ಷಕ ಪುಸ್ತಕವೊಂದನ್ನೇ ಹೊರತಂದಿದ್ದರು. ಈ ಪುಸ್ತಕ ನಕ್ಷೆಗಳು, ಭೂಪಟಗಳು, ಅಂಕಿಅಂಶ ತಃಖ್ತೆಗಳಿಂದ ಕೂಡಿತ್ತು. ಈ ಪುಸ್ತಕದ ಮೊದಲ ಅಧ್ಯಾಯದಲ್ಲಿ ಇತಿಹಾಸ, ಈ ನಗರದಲ್ಲಿ ಹೇಗೆ ವಿವಿಧ ಭಾಷೆಗಳ ವಲಸಿಗರು ಬಂದು ನೆಲೆಸಿದರೆಂಬ ನಿರೂಪಣೆ ಇತ್ತು. ಹತ್ತೊಂಬತ್ತನೆ ಶತಮಾನದವರೆಗೆ ಮಹಾರಾಷ್ಟ್ರ ವಲಸಿಗರ ಸಂಖ್ಯಾಪ್ರಮಾಣ ಅತಿಕಡಿಮೆ, ಅಂದರೆ ಇಂದಿನ ಮುಂಬಯಿಯ ಜನಸಂಖ್ಯೆ ಶೇ 41ರಷ್ಟಿತ್ತು. ಎರಡನೆಯ ಅಧ್ಯಾಯದಲ್ಲಿ ಭಾರತದ ಅರ್ಥವ್ಯವಸ್ಥೆಯಲ್ಲಿ

ಮುಂಬಯಿಯ ಮಹತ್ವವನ್ನು ತೋರುಗಾಣಿಸಲಾಗಿತ್ತು. ಮುಂಬಯಿ, ವಾಣಿಜ್ಯೋದ್ಯಮ, ಹಣಕಾಸು ಹಾಗೂ ವಿದೇಶಿ ವಾಣಿಜ್ಯದ ಕೇಂದ್ರವಾಗಿತ್ತು. ಮುಂಬಯಿ, ವಿಶ್ವಕ್ಕೆ ಭಾರತದ ಬೆಳಕಿಂಡಿಯಾಗಿತ್ತು. ಭಾರತದ ಉಳಿದೆಲ್ಲ ನಗರಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ವಿಮಾನಗಳು ಬಂದಿಳಿಯುತ್ತಿದ್ದವು, ಇಲ್ಲಿಂದ ಹಾರುತ್ತಿದ್ದವು. ಮೂರು ಮತ್ತು ನಾಲ್ಕನೆಯ ಅಧ್ಯಾಯಗಳು ಸಾಮಾಜಿಕ ಜೀವನಕ್ಕೆ ಮೀಸಲಾಗಿದ್ದವು. ಈ ಅಧ್ಯಾಯಗಳಲ್ಲಿ ಮುಂಬಯಿ ನಗರದ ಬಹುಭಾಷಾ ಹಾಗೂ ಬಹುಸಂಸ್ಕೃತಿಯ ಗುಣವಿಶೇಷಗಳನ್ನು ವರ್ಣಿಸಲಾಗಿತ್ತು. ಐದನೆಯ ಅಧ್ಯಾಯ, ಮುಂಬಯಿಯ ಭೌತಿಕ ಪ್ರತ್ಯೇಕತೆಗೆ ಸಂಬಂಧಿಸಿದ್ದಾಗಿತ್ತು. ಸಮುದ್ರ ಹಾಗೂ ಪರ್ವತಾವಳಿ ಹೇಗೆ ಮುಂಬಯಿಯನ್ನು ಮರಾಠಿ ಭಾಷಿಗರ ಹೃದಯಭಾಗಗಳಿಂದ ಪ್ರತ್ಯೇಕಿಸಿದೆ ಎಂಬುದನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿತ್ತು.

ಮುಂಬಯಿಯಲ್ಲಿ ಮೊದಲ ನೆಲಸಿಗರೆಂದರೆ ಐರೋಪ್ಯ ವರ್ತಕರು ಹಾಗೂ ಬಂಡವಾಳಶಾಹಿಗಳಾದ ಗುಜರಾತಿಗಳು ಮತ್ತು ಪಾರ್ಸಿಗಳು. ಮುಂಬಯಿ ನಗರದ ನಿರ್ಮಾತೃಗಳು ಮಹಾರಾಷ್ಟ್ರದ ಹೊರಗಿನವರು. ದುಡಿಯುವ ಕೂಲಿಯಾಳುಗಳಲ್ಲೂ ಮರಾಠಿ ಮಾತನಾಡುವವರಿಗಿಂತ ಹೆಚ್ಚಾಗಿ ಉತ್ತರ ಭಾರತೀಯರು ಮತ್ತು ಕ್ರಿಶ್ಚಿಯನ್ನರೇ ಇದ್ದರು. ಮುಂಬಯಿ ನಾಗರಿಕರ ಸಮಿತಿ ಪ್ರಕಾರ, "ಭೂಗೋಳ, ಇತಿಹಾಸ, ಭಾಷೆ, ಜನಸಂಖ್ಯೆ, ಕಾನೂನು ಪದ್ಧತಿ ಈ ಯಾವ ಪ್ರಮಾಣ, ಆಧಾರಗಳ ಮೇಲೂ ಮುಂಬಯಿ ಮತ್ತು ಉತ್ತರ ಕೊಂಕಣ, ಸಂಯುಕ್ತ ಮಹಾರಾಷ್ಟ್ರದ ನಾಯಕರು ಹೇಳುವಂತೆ ಮಹಾರಾಷ್ಟ್ರದ ಭಾಗವೆಂದು ಪರಿಗಣಿಸಲಾಗದು."

ಮುಂಬಯಿಯ ವಿಶ್ವಬಂಧುತ್ವವನ್ನು ಪ್ರತಿಪಾದಿಸುವ ತರ್ಕದ ಹಿಂದೆ ಒಂದು ಭಾಷೆಯ ಗುಂಪೂ ಇತ್ತು. "ಮುಂಬಯಿ ಉಳಿಸಿ" ಘೋಷಣೆಯ ಈ ಚಳವಳಿ ಹಿಂದೆ ಇದ್ದದ್ದು ಗುಜರಾತಿಗಳ ಪ್ರಾಬಲ್ಯ. ಮುಂಬಯಿ ಬೃಹತ್ ಮಹಾರಾಷ್ಟ್ರದ ರಾಜಧಾನಿಯಾದರೆ ರಾಜಕಾರಣಿಗಳು ಮತ್ತು ಸಚಿವರುಗಳು ಹೆಚ್ಚಾಗಿ ಮರಾಠಿಗರೇ ಆಗಿರುತ್ತಾರೆ. ಇದು ಗುಜರಾತಿಗಳ ಭವಿಷ್ಯಕ್ಕೆ ಹಿತಕಾರಿಯಾದುದೇನಲ್ಲ ಅಥವಾ ಪಾರ್ಸಿಗಳಿಗೂ. ಈ ಮಂದಿಯೇ ಮುಂಬಯಿ ನಾಗರಿಕರ ಸಮಿತಿಯ ಹಿಂದಿನ ಶಕ್ತಿಯಾಗಿದ್ದರು. ಇವರೇ ಅದರ ಮಾನವಶಕ್ತಿ ಮತ್ತು ಧನಶಕ್ತಿಯಾಗಿದ್ದರು.

ಮುಂಬಯಿಯನ್ನು ಯಾವುದೇ ಒಂದು ಭಾಷೆಯ ನಿಯಂತ್ರಣಕ್ಕೊಳಪಡಿಸುವುದು ಸ್ವತಃ ನೆಹರೂಗೇ ಇಷ್ಟವಿರಲಿಲ್ಲ. ಮರಾಠಿ ಮಾತನಾಡುವ ಎಂ.ಎಸ್. ಗೋಳ್ವಾಲ್ಕರ್ ಅವರದೂ ಮುಂಬಯಿಯನ್ನು ಒಂದು ಭಾಷೆಯ ನಿಯಂತ್ರಣದಿಂದ ಹೊರಗಿರಿಸಬೇಕೆಂಬುದೇ ಅಭಿಪ್ರಾಯವಾಗಿತ್ತು. ಈ ವಿಷಯದಲ್ಲಿ ಪ್ರಧಾನಮಂತ್ರಿ ಮತ್ತು ಆರ್.ಎಸ್.ಎಸ್. ಮುಖಂಡರ ನಡುವೆ ಒಂದು ಅಪೂರ್ವ ಸಂಯೋಗ. ಭಾಷಾವಾರು ರಾಜ್ಯಗಳ ರಚನೆಯಿಂದ ಕಹಿಭಾವನೆಗಳುಂಟಾಗಿ, ದೇಶಕ್ಕೆ ಅಪಾಯವುಂಟುಮಾಡುವ ಪ್ರತ್ಯೇಕತಾ ಪ್ರವೃತ್ತಿ ಶಕ್ತಿಗಳು ತಲೆ ಎತ್ತಲು ಅವಕಾಶವಾಗುತ್ತದೆ ಎಂಬುದು ಇವರಿಬ್ಬರ ಅಭಿಮತವಾಗಿತ್ತು.

1954ರಲ್ಲಿ ಗೋಳ್ವಾಲ್ಕರ್, ಪ್ರಾಂತೀಯ ವಿರೋಧಿ ಸಮ್ಮೇಳನವೊಂದರಲ್ಲಿ ಭಾಷಣ ಮಾಡಿದರು. ಭಾಷಾವಾರು ಬೇಡಿಕೆಗಳು ಪ್ರಾಂತೀಯತೆ ಮತ್ತು ಪಂಥೀಯತೆಗಳ ಮೂರ್ತಸ್ವರೂಪವೆಂದು ಈ ಸಮ್ಮೇಳನ ಸಂಘಟಕರ ಅಭಿಪ್ರಾಯವಾಗಿತ್ತು. "ಬಾಹುಳ್ಯತೆ ಕಲಹ ತಿಕ್ಕಾಟಗಳಿಗೆ ಜನ್ಮ ಕೊಡುತ್ತದೆ. ತಾನು ತಮಿಳ, ತಾನು ಮರಾಠಿಗ ಎನ್ನುವುದು ರಾಷ್ಟ್ರವೊಂದರ ವೀರ್ಯವಂತಿಕೆಯನ್ನು, ಜೀವಶಕ್ತಿಯನ್ನು ಹರಣಗೊಳಿಸಿದಂತೆ" ಎಂದು ಈ ಸಮ್ಮೇಳನದಲ್ಲಿ ಗೋಳ್ವಾಲ್ಕರ್ ಗರ್ಜಿಸಿದರು. ಇವರೆಲ್ಲರೂ ಹಿಂದೂಗಳು, ತಾವು ಹಿಂದೂಗಳೆಂಬ ಹಣೆಪಟ್ಟಿಯನ್ನೇ ಹಚ್ಚಿಕೊಳ್ಳಬೇಕೆಂದು ಅವರು ತಾಕೀತು ಮಾಡಿದರು. ಇಲ್ಲೇ ಗೋಳ್ವಾಲ್ಕರ್ ನೆಹರೂ ಅವರಿಂದ ವಿಮುಖವಾದದ್ದು. ಇವರೆಲ್ಲ ಭಾರತೀಯರು ಎಂಬುದು ನೆಹರೂ ನಿಲುವು.

ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷದೊಳಗೂ ನೆಹರೂ ನಿಲುವನ್ನು ಒಪ್ಪದೇ ಇರುವವರಿದ್ದರು. ಹಾಗೆಯೇ ಆರ್.ಎಸ್.ಎಸ್. ನಲ್ಲೂ ಗೋಳ್ವಾಲ್ಕರ್ ಅಭಿಪ್ರಾಯವನ್ನು ಒಪ್ಪದೇ ಇರುವವರಿದ್ದರು. 1946ರಷ್ಟು ಹಿಂದಿನಿಂದಲೇ ಸಂಯುಕ್ತ ಮಹಾರಾಷ್ಟ್ರ ಪರಿಷತ್ ಎಂಬ ಸಂಸ್ಥೆ ಕ್ರಿಯಾಶೀಲವಾಗಿತ್ತು. ಈ ಪರಿಷತ್ತಿನಲ್ಲಿ ಎಲ್ಲ ರಾಜಕೀಯ ಪಕ್ಷಗಳಿಗೆ ಸೇರಿದ ಮರಾಠಿಗರಿದ್ದರು. ಬಲ-ಎಡ ಪಂಥೀಯರು, ಜಾತ್ಯತೀತರು, ಕೋಮುವಾದಿಗಳು, ಬ್ರಾಹ್ಮಣರು, ಹರಿಜನರು ಇತ್ಯಾದಿ ಎಲ್ಲರೂ ಇದ್ದರು. ಹಲವು ಹನ್ನೊಂದು ರಾಜಕೀಯ ಘಟಕಗಳಲ್ಲಿ ಹಂಚಿಹೋಗಿದ್ದ ಮರಾಠಿಗರನ್ನು ಒಂದುಗೂಡಿಸುವ ಪ್ರತ್ಯೇಕ ರಾಜ್ಯ ಪರಿಷತ್ತಿನ ಬೇಡಿಕೆಯಾಗಿತ್ತು. ಇಂಥದೊಂದು ರಾಜ್ಯಕ್ಕೆ ಒಂದೇ ರಾಜಧಾನಿ ಬೇಕು, ಮುಂಬಯಿಯೇ ರಾಜಧಾನಿಯಾಗಬೇಕೆಂಬುದು ನಿಸ್ಸಂದೇಹವಾಗಿ ಇವರ ಮನದಿಚ್ಛೆಯಾಗಿತ್ತು.

ಹಿರಿಯ ಕಾಂಗ್ರೆಸ್ ನಾಯಕ ಶಂಕರ ರಾವ್ ದೇವ್ ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಓದಿದ ಅರ್ಥಶಾಸ್ತ್ರಜ್ಞ ಡಿ.ಆರ್. ಗಾಡ್ಗೀಳ್ ಪರಿಷತ್ತಿನ ಕಾರ್ಯದರ್ಶಿಯೂ ಮುಖ್ಯ ಸಿದ್ಧಾಂತಿಯೂ ಆಗಿದ್ದರು. ಮುಂಬಯಿ ನಗರದ ಕೈಗಾರಿಕೆಗಳ ಕಡ್ಡಾಯ ವಿಕೇಂದ್ರೀಕರಣವಾಗಬೇಕು. ಮುಂಬಯಿ ಮಹಾರಾಷ್ಟ್ರದ ಪ್ರಮುಖ ಬಂದರು ಮತ್ತು ಆರ್ಥಿಕ ಕೇಂದ್ರವಾಗಬೇಕು ಎನ್ನುವುದು ಗಾಡ್ಗೀಳರ ಅಭಿಮತವಾಗಿತ್ತು. ಮತ್ತೊಬ್ಬ ಸಿದ್ಧಾಂತಿ ಜಿ.ವಿ. ದೇಶಮುಖ್ ಇನ್ನೂ ಹೆಚ್ಚು ಖಡಾಖಂಡಿತವಾದಿಗಳಾಗಿದ್ದರು. ಮುಂಬಯಿ ಮಹಾರಾಷ್ಟ್ರದ ಭಾಗವಾಗದೇ ಹೋದಲ್ಲಿ ಮರಾಠಿಗರು, ದಲ್ಲಾಳಿಗಳಿಗೆ ಉಪ ದಲ್ಲಾಳಿಗಳಾಗಿ, ಏಜೆಂಟರುಗಳಿಗೆ ಉಪ ಏಜೆಂಟರುಗಳಾಗಿ, ಪ್ರೊಫೆಸರುಗಳ ಕೈಕೆಳಗಿನ ಅಸಿಸ್ಟೆಂಟ್ ಪ್ರೊಫೆಸರುಗಳಾಗಿ, ಮ್ಯಾನೇಜರುಗಳ ಕೈಕೆಳಗಿನ ಗುಮಾಸ್ತರುಗಳಾಗಿ, ಅಂಗಡಿಕಾರರ ಕೂಲಿಗಳಾಗಿ ಇರಬೇಕಾಗುತ್ತದೆ ಎಂದು ದೇಶ್‌ಮುಖ್ ಕಟು ವಿಮರ್ಶೆ ಮಾಡಿದ್ದರು.

ಗುಜರಾತಿಗಳ ನಾಗರಿಕರ ಸಮಿತಿಗೆ ಉತ್ತರವಾಗಿ ಸಂಯುಕ್ತ ಮಹಾರಾಷ್ಟ್ರ ಪರಿಷತ್ 200 ಪುಟಗಳ ಸಮರ್ಥನೀಯ ಪುಸ್ತಕವೊಂದನ್ನು ಹೊರತಂದಿತು. ಈ ಪುಸ್ತಕದ ಮೊದಲ

ಭಾಗ ಭಾಷಾವಾರು ರಾಜ್ಯಗಳ ಸೈದ್ಧಾಂತಿಕ ಸಮರ್ಥನೆಗೆ ಮೀಸಲಾಗಿತ್ತು. ಒಂದೇ ಭಾಷೆ ಮಾತನಾಡುವವರನ್ನು ಒಂದು ಸೌಹಾರ್ದಯುತ ಘಟಕವಾಗಿ ಬಲಪಡಿಸುವ ಮೂಲಕ ಭಾಷಾವಾರು ರಾಜ್ಯಗಳು ಫೆಡರಲ್ ವ್ಯವಸ್ಥೆ ಆಳವಾಗಿ ಬೇರುಬಿಡಲು ಸಹಾಯಕವಾಗುತ್ತದೆಂದು ಇದರ ವಾದವಾಗಿತ್ತು. "ಭಾಷಾವಾರು ಪ್ರಾಂತ್ಯಗಳಲ್ಲಿ ಶ್ರೀಸಾಮಾನ್ಯರ ಭಾಷೆಯೇ ಆಡಳಿತ ಭಾಷೆಯಾಗುವುದರಿಂದ ಜನರಿಗೆ ಪ್ರಜಾಸತ್ತೆಯ ಕಾರ್ಯಾನುಸಂಧಾನ ಸುಲಭವಾಗಿ ಅರ್ಥವಾಗುತ್ತದೆ, ಅದರಲ್ಲಿ ಜನತೆ ಭಾಗವಹಿಸಲು ಸಾಧ್ಯವಾಗುತ್ತದೆ" ಎನ್ನುವುದು ಇದರ ವಾದದ ಇನ್ನೊಂದು ಮುಖ.

ಮರಾಠಿ ಪ್ರಾಂತ್ಯದಾದ್ಯಂತ ಸಮಾಜ ಅಖಂಡವಾಗಿದೆ, ಏಕರೂಪದಿಂದಿದೆ. ಜಾತಿಮತ, ದೇವರು, ಸಾಧುಸಂತರು, ಜಾನಪದ ಇತ್ಯಾದಿ ಎಲ್ಲದರಲ್ಲೂ ಮರಾಠಿಗರಲ್ಲಿ ಸಮಗ್ರಾಕೃತಿಯನ್ನು ಕಾಣಬಹುದು. ಮರಾಠಿ ಮಾತನಾಡುವವರು ಈಗ ಹೈದರಾಬಾದ್, ಬಾಂಬೆ ಸ್ಟೇಟ್ ಮತ್ತು ಕೇಂದ್ರ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದಾರೆ. ಇದೊಂದು ಚಾರಿತ್ರಿಕ ಅಪಘಾತ, ಆಕಸ್ಮಿಕ. ಇದನ್ನು ಸರಿಪಡಿಸುವುದು ಈಗ ಅತ್ಯಗತ್ಯವಾಗಿದೆ ಎಂದು ಪುಸ್ತಕದಲ್ಲಿ ಪ್ರಬಲವಾಗಿ ಪ್ರತಿಪಾದಿಸಲಾಗಿತ್ತು.

"ಮುಂಬಯಿಯನ್ನು ರಾಜಧಾನಿಯನ್ನಾಗಿಸಿ ಹೊಸ ಏಕೀಕೃತ ಮಹಾರಾಷ್ಟ್ರ ರಾಜ್ಯದ ರಚನೆಯಾಗಬೇಕು. ಮುಂಬಯಿಯೇ ಹೊಸರಾಜ್ಯದ ರಾಜಧಾನಿಯಾಗಬೇಕು. ಏಕೆಂದರೆ, ಈ ನಗರದಲ್ಲಿ ಮರಾಠಿ ಮಾತನಾಡುವವರೇ ವಾಸಿಸುತ್ತಿದ್ದಾರೆ. ಮುಂಬಯಿ ಪಶ್ಚಿಮಕ್ಕಿದ್ದರೆ, ಅದರ ಉತ್ತರ, ದಕ್ಷಿಣ, ಪೂರ್ವ ಪ್ರದೇಶಗಳಲ್ಲಿ ಮರಾಠಿ ಮಾತನಾಡುವವರೇ ಬಹುಸಂಖ್ಯಾತರು; ಅವರದೇ ಪ್ರಾಬಲ್ಯ. ಮುಂಬಯಿ ನಗರವೇ ಮರಾಠಿ ಪತ್ರಿಕೋದ್ಯಮದ ಕೇಂದ್ರವಾಗಿದೆ. ಮರಾಠಿ ಭಾಷೆ ಮತ್ತು ಸಂಸ್ಕೃತಿಯ ಪತ್ರಿಕೆಗಳೆಲ್ಲ ಪ್ರಕಟವಾಗುವುದು ಇಲ್ಲಿಂದಲೇ. ಮುಂಬಯಿ ನಗರ ಹೆಚ್ಚಾಗಿ ಮರಾಠಿಯ ಒಳನಾಡನ್ನು ಅವಲಂಬಿಸಿದೆ. ಮುಂಬಯಿ ನಗರಕ್ಕೆ ಬೇಕಾಗಿರುವ ಕೂಲಿಕಾರ್ಮಿಕರು ಲಭ್ಯವಿರುವುದು ಒಳನಾಡಿನಿಂದಲೇ. ನೀರು, ವಿದ್ಯುತ್ ಪೂರೈಕೆಯಾಗುವುದು ಒಳನಾಡಿನಿಂದಲೇ. ಅದರ ಸಂಪರ್ಕ ಜಾಲ ಮರಾಠಿ ಒಳನಾಡಿನೊಳಗೆ ಹಾಸುಹೊಕ್ಕಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಮುಂಬಯಿ ರಾಜಧಾನಿಯಾಗಿರದ ಮಹಾರಾಷ್ಟ್ರ ರಾಜ್ಯ ಯೋಚನಾತೀತವಾದದ್ದು. ಮುಂಬಯಿಯನ್ನು ಮಹಾರಾಷ್ಟ್ರದಿಂದ ಬೇರ್ಪಡಿಸುವ ಪ್ರಯತ್ನ ಮಾಡಿದಲ್ಲಿ ಮಹಾರಾಷ್ಟ್ರ ರಾಜ್ಯ ಕೆಲಸ ಮಾಡುವುದೇ ಅಸಾಧ್ಯವಾಗುತ್ತದೆ." ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ವಾದದ ತಿರುಳು ಇದಾಗಿತ್ತು. ಮುಂಬಯಿಯಲ್ಲಿ ಮರಾಠಿ ಮಾತನಾಡುವವರು ಬಹುಸಂಖ್ಯಾತರಲ್ಲ ಎನ್ನುವ ವಾದಕ್ಕೆ ಮರಾಠಿ ಮಾತನಾಡುವವರೇ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಪ್ರತಿವಾದ ಮಂಡಿಸಿತು.

"ಏನೇ ಆದರೂ ದೊಡ್ಡ ಬಂದರುಗಳ ನಗರಗಳ ಮುಖ್ಯ ಲಕ್ಷಣವೇ ಬಹುಭಾಷಾ ಸಂಸ್ಕೃತಿಯದು. ಬರ್ಮದ ರಾಜಧಾನಿಯಲ್ಲಿ ಕೇವಲ ಶೇ 32ರಷ್ಟು ಜನರು ಮಾತ್ರ

ರಾಷ್ಟ್ರಭಾಷೆ ಮಾತನಾಡುತ್ತಾರೆ. ಆದರೆ, ರಂಗೂನನ್ನು ಬರ್ಮೇತರ ಪ್ರದೇಶವೆಂದು ಪರಿಗಣಿಸಬೇಕೆಂದು ಹೇಳುವ ಧೈರ್ಯ ಯಾರಿಗೂ ಇಲ್ಲ" ಎನ್ನುವ ದೃಷ್ಟಾಂತವನ್ನು ತನ್ನ ವಾದಕ್ಕೆ ಸಮರ್ಥನೆಯಾಗಿ ಮುಂದೊಡ್ಡಿತು.

ಮುಂಬಯಿ ಮರಾಠಿ ಮಾತನಾಡುವ ಜಿಲ್ಲೆಗಳಿಂದ ಸುತ್ತುವರಿದಿದೆ. ಆದ್ದರಿಂದ ಅದನ್ನೇ ಮಹಾರಾಷ್ಟ್ರ ಹೊಸರಾಜ್ಯದ ರಾಜಧಾನಿಯನ್ನಾಗಿ ಮಾಡಬೇಕೆಂದು ಸಂಯುಕ್ತ ಮಹಾರಾಷ್ಟ್ರ ಪರಿಷತ್ ವಾದ ಮಾಡಿತು. ಮುಂಬಯಿ ನಗರವನ್ನು ಹೆಚ್ಚಾಗಿ ಮಹಾರಾಷ್ಟ್ರೇತರರೇ ಪೋಷಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಮುಂಬಯಿ ನಗರವನ್ನೇ ಒಂದು ಪ್ರತ್ಯೇಕ ರಾಜ್ಯವನ್ನಾಗಿ ಮಾಡಬೇಕು ಎಂದು ನಾಗರಿಕ ಸಮಿತಿ ಪಟ್ಟು ಹಾಕಿತು. ಉಭಯ ಬಣಗಳ ನಡುವೆ ಈ ವಿಷಯದಲ್ಲಿ ಒಮ್ಮತ ಸಾಧ್ಯವೇ ಇರಲಿಲ್ಲ. 1954ರ ಜೂನ್‌ನಲ್ಲಿ ಶಂಕರರಾವ್ ದೇವ್ ಅವರು, ಪರಿಹಾರ ಸೂತ್ರವೊಂದನ್ನು ಚರ್ಚಿಸಲು ಸರ್ ಪುರುಷೋತ್ತಮ ದಾಸ್ ಟಂಡನ್ ಅವರನ್ನು ಭೇಟಿ ಮಾಡಿದರು. ಮುಂಬಯಿ ಮಹಾರಾಷ್ಟ್ರದ ರಾಜಧಾನಿಯಾಗಬೇಕೆಂಬ ತಮ್ಮ ಮುಖ್ಯ ಬೇಡಿಕೆ ವಿಷಯದಲ್ಲಿ ರಾಜಿ ಸಂಧಾನ ಸಾಧ್ಯವೇ ಇಲ್ಲ. ಆದರೆ ವಾಣಿಜ್ಯ ವ್ಯವಹಾರ, ಕೈಗಾರಿಕೆ ಮೊದಲಾದ ರಂಗಗಳಲ್ಲಿ ವಿಶ್ವಮಾನವ ಸಂಸ್ಕೃತಿಯನ್ನುಳಿಸಿಕೊಂಡು, ಮಹಾನಗರದ ಈಗಿನ ಸ್ವಾಯತ್ತ ಗುಣಲಕ್ಷಣಗಳನ್ನು ಮುಂದುವರಿಸಿಕೊಂಡು ಹೋಗಬಹುದೆಂದು ಶಂಕರರಾವ್ ದೇವ್ ತಿಳಿಸಿದರು. ಮರಾಠಿ ಮತ್ತು ಗುಜರಾತಿ ಮಾತನಾಡುವವರ ಬಹುಸಂಸ್ಕೃತಿಯ ಲಕ್ಷಣಗಳನ್ನುಳಿಸಿಕೊಳ್ಳಬಹುದೆಂಬ ಸಲಹೆ ಟಂಡನ್‌ಗೆ ಒಪ್ಪಿತವಾಗಿತ್ತು. ಪ್ರತ್ಯೇಕ ರಾಜ್ಯದ ಬೇಡಿಕೆ ಕೈಬಿಡಲು ಅವರು ಒಪ್ಪಿದರು. ಈ ಸಭೆ ಅನೌಪಚಾರಿಕವಾಗಿದ್ದು ಅಪೂರ್ಣವಾಗಿತ್ತು. ಅಷ್ಟರಲ್ಲಿ ಮುಂಬಯಿ ವಿವಾದವನ್ನು ರಾಜ್ಯಗಳ ಪುನರ್ವಿಂಗಡಣಾ ಆಯೋಗಕ್ಕೆ ವಹಿಸಲಾಯಿತು. ಈ ಜ್ವಾಲಾಮುಖಿ ಸ್ವರೂಪದ ವಿವಾದ ಬಗೆಹರಿಸುವುದು ಆಯೋಗದ ದೌರ್ಭಾಗ್ಯವಾಯಿತು.

V

ರಾಜ್ಯ ಪುನರ್ವಿಂಗಡಣಾ ಆಯೋಗದ ಸದಸ್ಯರುಗಳ ನೇಮಕವಾಗಿತ್ತು. ಅವರು: ನ್ಯಾಯವಾದಿ ಎಸ್. ಫಜಲ್ ಅಲೀ, ಮಾಜಿ ಐಸಿಎಸ್ ಅಧಿಕಾರಿ ಮತ್ತು ಇತಿಹಾಸಕಾರ ಕೆ.ಎಂ. ಪಣಿಕ್ಕರ್ ಮತ್ತು ಸಮಾಜ ಸೇವಕ ಎಚ್.ಎನ್. ಕುಂಜ್ರು. ಈ ಮೂವರಲ್ಲಿ ಯಾರಿಗೂ ಗತಕಾಲದಲ್ಲಾಗಲೀ ವರ್ತಮಾನದಲ್ಲಾಗಲೀ ಕಾಂಗ್ರೆಸ್ಸಿನೊಂದಿಗೆ ನಿಕಟ ಸಂಬಂಧವಿರಲಿಲ್ಲ. ಹದಿನೆಂಟು ತಿಂಗಳುಗಳ ತೀವ್ರ ಕೆಲಸ, ಕಾರ್ಯ ತತ್ಪರತೆಗಳ ನಂತರ ಈ ತ್ರಿಮೂರ್ತಿಗಳು 1955ರ ಅಕ್ಟೋಬರಿನಲ್ಲಿ ವರದಿ ಸಲ್ಲಿಸಿದರು. ಈ ವರದಿಯಲ್ಲಿ ಶುರುವಿಗೆ, ಭಾಷಾವಾರು ರಾಜ್ಯಗಳ ಪರ ಹಾಗೂ ವಿರೋಧದ ವಾದಗಳನ್ನು ವಿಶದಪಡಿಸಲಾಗಿತ್ತು. ಆಡಳಿತದ ದೃಷ್ಟಿಯಿಂದ, ದಕ್ಷತೆಯ ದೃಷ್ಟಿಯಿಂದ ತುಂಬ ಮಹತ್ವವೆನಿಸುವ ಭಾಷಾ ಸಾಮರಸ್ಯವನ್ನು ಮಾನ್ಯ ಮಾಡುವಂಥ ಸಮತೋಲನ ಅತ್ಯಗತ್ಯವೆಂದು ಆಯೋಗ

ಮಾನ್ಯ ಮಾಡಿತ್ತು. ಆದಾಗ್ಯೂ ಉಳಿದ ವಿಷಯಗಳ ಪರಿಗಣನೆಯ ಮೇಲೆ ಸವಾರಿ ಮಾಡುವಂಥ ನೀತಿಗೆ ಇದು ಅವಕಾಶ ಕಲ್ಪಿಸಬಾರದೆಂದು ಆಯೋಗ ಹೇಳಿತ್ತು. ಈ ಪರಿಗಣನೆಗಳಲ್ಲಿ ಭಾರತದ ಭದ್ರತೆ ಮತ್ತು ಏಕತೆ ಮುಖ್ಯ ವಿಷಯಗಳಾಗಿದ್ದವು.

ಉಳಿದ ಹದಿನೈದು ಅಧ್ಯಾಯಗಳಲ್ಲಿ ಆಯೋಗದ ವರದಿ ಪುನರ್ವಿಂಗಡಣೆಯ ಬಗ್ಗೆ ನಿರ್ದಿಷ್ಟ ಸಲಹೆಗಳನ್ನು ಸೂಚಿಸಿತ್ತು. ದಕ್ಷಿಣ ರಾಜ್ಯಗಳಲ್ಲಿ ಪ್ರದೇಶಗಳನ್ನು ಭಾಷಾವಾರು ವಲಯಗಳಾಗಿ ಪುನರ್ವಿಂಗಡಿಸುವುದು ಅಷ್ಟೇನೂ ಕಷ್ಟವೆನಿಸಿರಲಿಕ್ಕಿಲ್ಲ. ತೆಲುಗು, ಕನ್ನಡ, ತಮಿಳು, ಮಲೆಯಾಳಂ, ತಾಲ್ಲೂಕುಗಳಾಗಿ, ಭಾಷಾವಾರು ಬಹುಸಂಖ್ಯಾತರ ಆಧಾರದ ಮೇಲೆ ಪುನರ್ವಿಂಗಡಿಸುವುದು ಕಷ್ಟವಾಗಲಿಲ್ಲ. ಬ್ರಿಟಿಷರ ಕಾಲದ ಕಲಸುಮೇಲೋಗರದ ಜಾಗದಲ್ಲಿ ಭಾಷಾವಾರು ರಾಜ್ಯಗಳ ರಚನೆಗೆ ಆಯೋಗ ಶಿಫಾರಸು ಮಾಡಿತು.

ಇನ್ನು ಉತ್ತರ ಭಾರತ. ಹಿಂದಿ ಮಾತನಾಡುವ ಈ ಪ್ರದೇಶವನ್ನು ನಾಲ್ಕು ರಾಜ್ಯಗಳಾಗಿ ವಿಂಗಡಿಸಲು ಆಯೋಗ ಶಿಫಾರಸು ಮಾಡಿತು. ಬಿಹಾರ್, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ರಾಜಾಸ್ತಾನ್ ಈ ನಾಲ್ಕು ರಾಜ್ಯಗಳು. ಪೂರ್ವಾಂಚಲದಲ್ಲಿ, ಸಣ್ಣ ಪುಟ್ಟ ಹೊಂದಾಣಿಕೆಗಳೊಂದಿಗೆ ಈಗಿರುವ ಪ್ರಾಂತ್ಯಗಳು ಹಾಗೇ ಇರಬೇಕೆಂಬುದು ಆಯೋಗದ ನಿಲುವಾಗಿತ್ತು. ಬಿಹಾರ್ ಮತ್ತು ಅಸ್ಸಾಮ್‌ಗಳಿಂದ ಪ್ರತ್ಯೇಕಗೊಂಡ ಗುಡ್ಡಗಾಡು ರಾಜ್ಯಗಳ ರಚನೆಯ ಬೇಡಿಕೆಯನ್ನು ಆಯೋಗ ತಿರಸ್ಕರಿಸಿತ್ತು.

ಪ್ರತ್ಯೇಕ ಸಿಖ್ ರಾಜ್ಯ ರಚನೆ ಬೇಡಿಕೆಯನ್ನೂ ಆಯೋಗ ತಿರಸ್ಕರಿಸಿತ್ತು. ಮದ್ರಾಸ್ ನಗರವನ್ನು ಆಂಧ್ರಕ್ಕೆ ನೀಡಲು ನಿರಾಕರಿಸಿತ್ತು. ಸಂಯುಕ್ತ ಮಹಾರಾಷ್ಟ್ರ ರಚನೆ ಸಲ್ಲದು ಎನ್ನುವುದು ಆಯೋಗದ ಅತ್ಯಂತ ವಿವಾದಾಸ್ಪದವಾದ ಶಿಫಾರಸ್ಸಾಗಿತ್ತು. ಇದಕ್ಕೊಂದು ಸಮಾಧಾನವಾಗಿ, ಆಯೋಗ, ಮರಾಠಿ ಮಾತನಾಡುವ ಒಳನಾಡು ಪ್ರದೇಶಗಳನ್ನೊಳಗೊಂಡ ಪ್ರತ್ಯೇಕ ವಿದರ್ಭ ರಾಜ್ಯ ರಚನೆಗೆ ಸಲಹೆ ಮಾಡಿತ್ತು. ಮುಂಬಯಿ, ಗುಜರಾತಿ ಮತ್ತು ಮರಾಠಿಗರ ದ್ವಿಭಾಷಾ ನಗರವಾಗಿಯೇ ಮುಂದುವರಿಯತಕ್ಕದ್ದು ಎಂಬುದು ಆಯೋಗದ ಶಿಫಾರಸ್ಸಾಗಿತ್ತು. ಸಂಯುಕ್ತ ಮಹಾರಾಷ್ಟ್ರ ಚಳವಳಿಯ ಭಾವನೆಗಳನ್ನು, ವಾದಗಳನ್ನು ತಾವು ಗೌರವಿಸುವುದಾಗಿಯೂ, ಆದರೆ "ಉಳಿದ ಸಮುದಾಯಗಳ ಭೀತಿ ಆತಂಕಗಳನ್ನು" ತಮ್ಮಿಂದ ತಳ್ಳಿಹಾಕಲಾಗದೆಂದೂ ಆಯೋಗ ತಿಳಿಸಿತ್ತು.

VI

ಮುಂಬಯಿ ದ್ವಿಭಾಷಾ ರಾಜ್ಯದ ರಾಜಧಾನಿಯಾಗಬೇಕೆಂದು ರಾಜ್ಯ ಪುನರ್ವಿಂಗಡಣಾ ಆಯೋಗ ಮಾಡಿದ್ದ ಶಿಫಾರಸನ್ನು 1955ರ ನವೆಂಬರ್ 15ರಂದು ಸಂಸತ್ತಿನಲ್ಲಿ ಚರ್ಚಿಸಲಾಯಿತು. ಮುಂಬಯಿಯ ಮಹತ್ವಾಕಾಂಕ್ಷಿ ಸದಸ್ಯರಾದ ಎಸ್.ಕೆ. ಪಾಟೀಲರ ದೃಷ್ಟಿಯಲ್ಲಿ ಆಯೋಗ ಇನ್ನೂ ಹೆಚ್ಚು ಅನುಕೂಲಕರವಾದ ಶಿಫಾರಸು ಮಾಡಬಹುದಿತ್ತು. ಸರ್ಕಾರ ಮುಂಬಯಿ ನಗರ ರಾಜ್ಯವೊಂದನ್ನು ರಚಿಸಬೇಕೆಂಬುದು ಎಸ್.ಕೆ. ಪಾಟೀಲರ ಆಲೋಚನೆಯಾಗಿತ್ತು.

ಅದಕ್ಕೆ ತಾವೇ ಮುಖ್ಯಮಂತ್ರಿಯಾಗಬೇಕೆಂಬ ಅಪೇಕ್ಷೆಯೂ ಅವರಲ್ಲಿತ್ತು ಎಂಬ ಬಗ್ಗೆ ಸಂದೇಹವಿಲ್ಲ. ಉದ್ದೇಶಿತ ಮುಂಬಯಿ ನಗರ ರಾಜ್ಯ "ಎಲ್ಲ ದೃಷ್ಟಿಯಿಂದಲೂ ವಿಶ್ವಬಂಧುತ್ವದ ಜನಸಂಖ್ಯೆಯ ನಗರವಾಗಿದ್ದು ಪ್ರತಿಯೊಬ್ಬರ ಬೆವರಿನ ದುಡಿಮೆಯಿಂದ ನಗರ ನಿರ್ಮಾಣಗೊಂಡಿದೆ. ಅದರ ಆಡಳಿತವನ್ನು ಅದಕ್ಕೇ ವಹಿಸಿದಲ್ಲಿ ಮುಂಬಯಿ ಅಂತರರಾಷ್ಟ್ರೀಯ ಗುಣಮಟ್ಟದ ಮಿನಿ ಭಾರತವಾಗುವುದು" ಎಂದು ಎಸ್.ಕೆ. ಪಾಟೀಲರು ವಾದ ಮಂಡಿಸಿದರು. "ಹಲವು ಜನಾಂಗ, ಸಂಸ್ಕೃತಿಗಳ ಸಮ್ಮಿಳನ ಸ್ಥಾನವಾದ ಮುಂಬಯಿ ಒಂದು ವೈಭವಯುತ ನಾಗರಿಕತೆಯಾಗಿ ಹೊರಹೊಮ್ಮುವುದು...ವಿಶೇಷ ಕಾಕತಾಳೀಯ ವೆಂಬಂತೆ, ಮುಂಬಯಿ ನಗರದ ಜನಸಂಖ್ಯೆ ಇಡೀ ರಾಷ್ಟ್ರದ ಜನಸಂಖ್ಯೆಯಲ್ಲಿ ಶೇಕಡ ಒಂದರಷ್ಟಿದೆ. ಈ ಶೇಕಡ ಒಂದರಷ್ಟು ಜನ ಬೇರೆ ಬೇರೆ ರಾಜ್ಯಗಳಿಂದ ಬಂದವರಾಗಿದ್ದು ಜಾತ್ಯತೀತತೆ ಮತ್ತು ಸ್ನೇಹ-ಸೌಹಾರ್ದ ಒಮ್ಮತಗಳನ್ನು ಆಚರಣೆಯಲ್ಲಿ ರೂಢಿಸಿಕೊಂಡವ ರಾಗಿದ್ದಾರೆ" ಎಂದು ಪಾಟೀಲ್ ನುಡಿದಿದ್ದರು.

ರಾಜಿ ಮನೋಭಾವದಿಂದ ಮುಂಬಯಿ ಮೇಲಿನ ಹಕ್ಕನ್ನು ಬಿಟ್ಟು ಕೊಡುವಂತೆ, ಪಾಟೀಲರು, ರಾಜ್ಯ ಪುನರ್ವಿಂಗಡಣಾ ಆಯೋಗದಂತೆಯೇ ಮರಾಠಿಗರಿಗೆ ಮನವಿ ಮಾಡಿಕೊಂಡರು. ಆದರೆ ಅವರು ತಮ್ಮೆಲ್ಲ ಮರಾಠಿ ಬಂಧುಗಳನ್ನು ಧ್ವನಿಸುತ್ತಿಲ್ಲವೆಂಬುದು ಅತಿ ಕ್ಷಿಪ್ರವಲ್ಲೇ ಸ್ಪಷ್ಟವಾಯಿತು. ಪಾಟೀಲರ ನಂತರ ಲೋಕಸಭೆಯಲ್ಲಿ ಮಾತನಾಡಿದ ಪುಣೆಯ ಕಾಂಗ್ರೆಸ್ ಸದಸ್ಯ ಎನ್.ವಿ. ಗಾಡ್ಗೀಳರು ರಾಜಿಮನೋಭಾವಕ್ಕೆ ತಮ್ಮ ವಿರೋಧವಿಲ್ಲವೆಂದು ತಿಳಿಸಿದರು. ಆದರೆ, "ಎಲ್ಲದಕ್ಕೂ ಒಂದು ಮಿತಿ ಇದೆ. ಯಾರೂ ಆತ್ಮಗೌರವದ ವಿಷಯದಲ್ಲಿ ರಾಜಿಮಾಡಿಕೊಳ್ಳುವುದಿಲ್ಲ, ಯಾವ ಮಹಿಳೆಯೂ ತನ್ನ ಶೀಲದ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ, ಯಾವ ರಾಷ್ಟ್ರವೂ ತನ್ನ ಸ್ವಾತಂತ್ರ್ಯದ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ" ಎಂದು ಖಡಾಖಂಡಿತವಾಗಿ ನುಡಿದರು. ಈ ಒಂದು ಪ್ರಕರಣ ಹೊರತಾಗಿ ಬೇರೆಡೆ ಎಲ್ಲೆಲ್ಲೂ ಭಾಷೆಯನ್ನು ಮಾನ್ಯ ಮಾಡಲಾಗಿದೆ. ಆಯೋಗದ ವರದಿ ಮರಾಠಿ ಮಾತನಾಡುವ ಜಗತ್ತಿನಲ್ಲಿ ತೀವ್ರ ನೋವನ್ನುಂಟು ಮಾಡಿದೆ- "ಮುಂಬಯಿಯನ್ನು ರಾಜಧಾನಿಯಾಗುಳ್ಳ ಸಂಯುಕ್ತ ಮಹಾರಾಷ್ಟ್ರಕ್ಕಿಂತ ಕಡಿಮೆಯಾದುದು ಅಂಗೀಕಾರಾರ್ಹವಲ್ಲ" ಎಂಬುದನ್ನು ಪ್ರತಿಭಟನಾ ಸಭೆಗಳ ವರದಿಗಳು ಸ್ಪಷ್ಟಪಡಿಸಿವೆ. ಈ ಭಾವನೆಗಳನ್ನು ಪುರಸ್ಕರಿಸದಿದ್ದಲ್ಲಿ ಮುಂಬಯಿ ಮಹಾನಗರದ ಭವಿಷ್ಯವನ್ನು ಮುಂಬಯಿ ಬೀದಿಗಳಲ್ಲೇ ನಿರ್ಧರಿಸಲಾಗುವುದು ಎಂದು ಗಾಡ್ಗೀಳರು ಎಚ್ಚರಿಸಿದರು.

ರಾಷ್ಟ್ರದ ಏಕತೆಯ ಹಿತದೃಷ್ಟಿಯಿಂದ ಮುಂಬಯಿ ನಷ್ಟ ಒಪ್ಪಿಕೊಳ್ಳುವಂತೆ ಪುನರ್ವಿಂಗಡಣಾ ಆಯೋಗ ಮರಾಠಿಗರಿಗೆ ಆಗ್ರಹಪಡಿಸಿತ್ತು. ಗಾಡ್ಗೀಳರು ಇದನ್ನು ಅಪಮಾನಕರ ಎಂದು ಕರೆದು ತೀವ್ರವಾಗಿ ಪ್ರತಿಭಟಿಸಿದರು. ಕಳೆದ 150 ವರ್ಷಗಳಲ್ಲಿ ಮರಾಠಿಗರು ರಾಷ್ಟ್ರೀಯ ಭಾವನೆ ಬೆಳೆಸಲು ಅಗಾಧ ಕೊಡುಗೆ ನೀಡಿದ್ದಾರೆ. ಮರಾಠಿಗರು ಮೊದಲಿಗೆ ಭಾರತೀಯ ಶಾಲೆಗಳನ್ನು, ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದರು. ಭಾರತ

ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಸಹಕರಿಸಿದರು. ಬ್ರಿಟಿಷರ ವಿರುದ್ಧ ಉಗ್ರ ಸಮರ ಸಾರಿದವರಲ್ಲಿ ಮರಾಠಿಗರು ಮೊದಲಿಗರು. ನಂತರ ಇಪ್ಪತ್ತನೇ ಶತಮಾನದಲ್ಲಿ ಕಾಂಗ್ರೆಸ್ ಸೊರಗಿದಾಗ, ಅದಕ್ಕೆ ಹೊಸ ಜೀವ ಕೊಟ್ಟವರು ಯಾರು? ಹೊಸ ತತ್ವ ಸಿದ್ಧಾಂತಗಳನ್ನು ಕೊಟ್ಟವರು ಯಾರು? ಅವರು ಲೋಕಮಾನ್ಯ ತಿಲಕರು. 1920ರಲ್ಲಿ ತಿಲಕರು ಹೋಂ ರೂಲ್ ಚಳವಳಿಯ ನಾಯಕತ್ವ ವಹಿಸಿದಾಗ ಉಳಿದೆಲ್ಲ ರಾಜ್ಯಗಳಿಗಿಂತ ಮುಂಚೂಣಿಯಲ್ಲಿದ್ದವರು ನಾವು... "ಮಹಾರಾಷ್ಟ್ರ ರಾಷ್ಟ್ರೀಯ ಕಾರ್ಯಕರ್ತರ ಜೇನುಗೂಡಿದ್ದಂತೆ." ಮಹಾತ್ಮಗಾಂಧಿಯವರು ನಮಗೆ ಕೊಟ್ಟ ಅರ್ಹತಾ ಪತ್ರವನ್ನು ಮಾತ್ರ ನಾನಿಲ್ಲಿ ಉಲ್ಲೇಖಿಸುತ್ತಿದ್ದೇನೆ. "ಈಗಲೂ ಸ್ವತಂತ್ರ ಭಾರತದಲ್ಲಿ ಗಾಂಧೀಜಿಯವರ ತತ್ವ ಪತಾಕೆಯನ್ನು ಎತ್ತಿಹಿಡಿದು ಊರಿಂದ ಊರಿಗೆ ಅಲೆಯುತ್ತ ಬಾಪೂ ಸಂದೇಶವನ್ನು ಪಸರಿಸುತ್ತಿರುವ ವಿನೋಬಾಭಾವೆ ಮಹಾರಾಷ್ಟ್ರದವರು."

ಮುಂಬಯಿ ವಿಷಯದಲ್ಲಿ– "ರಾಷ್ಟ್ರದ ಒಗ್ಗಟ್ಟು, ಒಳಿತು, ಸುರಕ್ಷತೆಯ ಅಗತ್ಯವನ್ನು ಮನಗಾಣುವಂತೆ" ಮಹಾರಾಷ್ಟ್ರದವರಿಗೆ ಉಪದೇಶಿಸಲಾಗುತ್ತಿದೆ. "ಆದರೆ ಇಷ್ಟು ವರ್ಷಗಳ ಕಾಲ ನಾವು ಮಾಡಿರುವುದು ಅದನ್ನೇ" ಎಂದು ಪುಣೆಯ ಎಂಪಿ ಕಟುವಾಗಿ ನುಡಿದರು. ಸಂಯುಕ್ತ ಮಹಾರಾಷ್ಟ್ರದ ಪರ ವಾದ ಮಂಡಿಸಿದ ಗಾಡ್ಗೀಳರು ಅತ್ಯಂತ ಪರಿಣಾಮಕಾರಿಯಾದ ಮಾತುಗಳಲ್ಲಿ ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದ್ದರು: "ರಾಷ್ಟ್ರಸೇವೆ ಮಾಡಿ ಎಂದು ನಮಗೆ ಉಪದೇಶಿಸುವುದು ಶ್ರೀಗಂಧಕ್ಕೆ ಸುಗಂಧ ಸೂಸುವಂತೆ ತಾಕೀತು ಮಾಡಿದಂತೆ."

ಸದನದಿಂದ ಬೀದಿಗಿಳಿಯಲಾಗುವುದೆಂದು ಗಾಡ್ಗೀಳ್ ಎಚ್ಚರಿಕೆ ನೀಡಿದಂತೆ ವಿಷಯ ಈಗ ಸ್ಥಳಾಂತರಗೊಂಡಿತ್ತು. ಮುಂಬಯಿಯ ಪತ್ರಿಕೆಯೊಂದು ಬರೆದಂತೆ, "ಇದು ಅಕ್ಷರಶಃ ಒಳಗಿನ ತಳಮಳ ಕುದಿತಗಳು ಅಶಾಂತಿಗೆ, ಕ್ಷೋಭೆಗೆ ಚಾಚಿಕೊಂಡಂತೆಯೇ. ಒಳಗಿನ ಲಾವಾ ಹೊರಕ್ಕೆ ಬಂದಂತೆಯೇ... ಇದು ಭಯಂಕರ ದಬ್ಬಾಳಿಕೆ, ಬಲಪ್ರಯೋಗಗಳಾಗಿ ಸ್ಫೋಟಿಸಬಹುದು. ಬರುವ ದಿನಗಳಲ್ಲಿ ಸ್ವಲ್ಪಕಾಲ ನೆಮ್ಮದಿಯ ಬದುಕನ್ನು ಹಾಳುಗೆಡಹಬಹುದು." ಬಲ ಮತ್ತು ಎಡಪಂಥೀಯ ರಾಜಕಾರಣಿಗಳಿಬ್ಬರೂ ಅತೃಪ್ತಿಗೆ ಅಜ್ಯ ಹುಯ್ಯುತ್ತಿದ್ದರು. ಪ್ರಮುಖ ಕಮ್ಯುನಿಸ್ಟ್ ನಾಯಕ ಎಸ್.ಎ. ಡಾಂಗೆ ಸಂಯುಕ್ತ ಮಹಾರಾಷ್ಟ್ರದ ಪರ ನಿಂತರು. ಕೆಳಜಾತಿವರ್ಗದ ಪ್ರಮುಖ ರಾಜಕಾರಣಿ ಅಂಬೇಡ್ಕರ್ ಅವರೂ ಸಂಯುಕ್ತ ಮಹಾರಾಷ್ಟ್ರದ ಪರ ನಿಂತರು. ಜನಸಂಘ, ಸಮಾಜವಾದಿ ಪಕ್ಷಗಳೂ ಜೊತೆಗೂಡಿದವು. ಸಮಾಜವಾದಿ ಪಕ್ಷ ಈ ವಿಷಯದಲ್ಲಿ ಉಳಿದವರೆಲ್ಲರಿಗಿಂತಲೂ ಹೆಚ್ಚು ಕ್ರಿಯಾಶೀಲವಾಗಿತ್ತು. ಕಾಂಗ್ರೆಸ್ ಪಕ್ಷದ ಭಿನ್ನಮತೀಯರೂ ಸೇರಿಕೊಂಡರು. ಹೀಗೆ ಇವರೆಲ್ಲ ಒಟ್ಟುಗೂಡಿ ಮರಾಠಿಗರ ಭ್ರಮನಿರಸನ ಮತ್ತು ಕೋಪಗಳು ಮೂರ್ತಿವೆತ್ತ ಪ್ರತಿನಿಧಿಗಳಂತೆ ಕಂಡರು.

ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿಗೆ ಸಂಯುಕ್ತ ಮಹಾರಾಷ್ಟ್ರ ಸಮಿತಿ ಎಂಬ ಮರುನಾಮಕರಣದೊಂದಿಗೆ ಅದರ ವ್ಯಾಪ್ತಿ ವಿಸ್ತೃತಗೊಂಡಿತು. ಪರಿಷತ್ತು ಎಂದರೆ ಅದೊಂದು ಸಂಸ್ಥೆಯಾಗಿದ್ದು ಅದರಲ್ಲಿ ಪದಾಧಿಕಾರಿಗಳಿರುತ್ತಾರೆ. ಸಮಿತಿ ಎಂದರೆ ಇಡೀ

ಸಮಾಜವನ್ನೇ ಒಳಗೊಂಡಿದ್ದು ಅದು ಹೆಚ್ಚಿನ ಜನರ ಸಹಕಾರ, ಸಹಭಾಗಿತ್ವಗಳ ಅರ್ಥವನ್ನು ಸೂಚಿಸುತ್ತದೆ.

ಗಲಭೆ, ಗಲಾಟೆಗಳನ್ನು ಶಂಕಿಸಿದ ಮುಂಬಯಿ ಪೊಲೀಸರು ಜನವರಿ 16ರಂದು ಮುಂಜಾವಿನಲ್ಲೇ ಹೊಸದಾಗಿ ರಚನೆಯಾಗಿದ್ದ ಸಂಯುಕ್ತ ಮಹಾರಾಷ್ಟ್ರ ಸರ್ವಪಕ್ಷ ಕ್ರಿಯಾ ಸಮಿತಿಯ ನಾಯಕರು ಮತ್ತು ಸಕ್ರಿಯ ಕಾರ್ಯಕರ್ತರನ್ನು ಬಂಧಿಸಿದರು. ಸುಮಾರು 400 ಜನರನ್ನು ಬಂಧಿಸಲಾಗಿತ್ತು. ಇದು 18ರಂದು ಸಾರ್ವತ್ರಿಕ ಮುಷ್ಕರದ ಕರೆಗೆ ಪ್ರೇರಣೆಯಾಯಿತು. ಅಂದು ಅಂಗಡಿ ಮುಂಗಟ್ಟುಗಳು ಬಂದಾದವು. ಕಾರ್ಖಾನೆಗಳು ಕೆಲಸಮಾಡಲಿಲ್ಲ, ಬಸ್ಸು-ರೈಲುಗಳ ಸಂಚಾರ ಸ್ಥಗಿತಗೊಂಡಿತು. ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆಕಾರರು ನೆಹರೂ ಮತ್ತು ಗುಜರಾತಿ ಮಾತನಾಡುವ ಮುಂಬಯಿ ರಾಜ್ಯದ ಮುಖ್ಯಮಂತ್ರಿ ಮುರಾರಜಿ ದೇಸಾಯಿಯವರ ಪ್ರತಿಕೃತಿಗಳನ್ನು ಸುಟ್ಟರು. ರಸ್ತೆಬದಿಯಲ್ಲಿ ನಿಲ್ಲಿಸಿದ್ದ ಹರಿದು ವಿರೂಪಗೊಂಡಿದ್ದ ನೆಹರೂ ಭಾವಚಿತ್ರದ ಫೋಟೋ ತೆಗೆಯಲು ಪ್ರಯತ್ನಿಸಿದ ಐರೋಪ್ಯ ಪತ್ರಕರ್ತನೊಬ್ಬನನ್ನು ಮಹಡಿ, ಬಾಲ್ಕನಿಗಳಲ್ಲಿ ನಿಂತಿದ್ದ ಜನ ಹುರಿದುಂಬಿಸಿದರು. "ತೆಗೆದುಕೊ, ಫೋಟೊ ತೆಗೆದು ನೆಹರೂ ಬಗ್ಗೆ ನಮ್ಮ ಭಾವನೆಗಳನ್ನು ಲೋಕಕ್ಕೆ ತೋರಿಸು" ಎಂದು ಘೋಷಣೆ ಕೂಗಿದರು.

ಇದಕ್ಕೆ ಎರಡು ದಿನ ಮುಂಚಿತವಾಗಿ, ಅಂದರೆ 16ರಂದು ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಘರ್ಷಣೆಯಾದ ಘಟನೆಗಳು ವರದಿಯಾಗಿದ್ದವು. ಜನ ಅಂಗಡಿ ಮುಂಗಟ್ಟುಗಳನ್ನು ದೋಚಿದರು. ಕಛೇರಿಗಳ ಮೇಲೆ ದಾಳಿ ನಡೆಸಿದರು. ಸುಮಾರು ಒಂದು ವಾರಕಾಲ ಮುಂಬಯಿ ಜನಜೀವನ ಸ್ತಬ್ಧಗೊಂಡಿತ್ತು. ಸಂಪೂರ್ಣ ಬಂದಾಗಿತ್ತು. ಗಲಭೆಕೋರರನ್ನು ಎದುರಿಸಲು 15 ಸಾವಿರ ಪೊಲೀಸರನ್ನು ಕರೆಸಲಾಯಿತು. ಬೆಂಕಿ ಆರಿದ ನಂತರ ಹನ್ನೆರಡಕ್ಕೂ ಹೆಚ್ಚು ಮಂದಿ ಹತರಾದದ್ದು ಬೆಳಕಿಗೆ ಬಂತು. ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಪಾಸ್ತಿ ಹಾನಿಯಾಗಿತ್ತು. ಜನ ಹಿಂದೆ ಎಂದೂ ಕಂಡು ಕೇಳದಂಥ, ಭಯಂಕರ ಗಲಭೆ ಅದಾಗಿತ್ತು.

ಮುಂಬಯಿ ಘಟನೆಗಳಿಂದ ನೆಹರೂ ತಲ್ಲಣಿಸಿ ಹೋಗಿದ್ದರು. ಅವರು ಸಹೋದ್ಯೋಗಿಯೊಬ್ಬರಿಗೆ ಹೀಗೆ ಬರೆದಿದ್ದರು: "ಭಾಷಾವಾರು ಪ್ರಶ್ನೆ, ವಿಭಜನೆ ಸೃಷ್ಟಿಸಿದ ಪರಿಸ್ಥಿತಿಗಿಂತ ಘೋರವಾದದು. ನಾವು ಇತ್ಯಾತ್ಮಕವಾಗಿ, ಸಕಾರಾತ್ಮಕವಾಗಿ ಮುನ್ನಡೆಸ ಬೇಕಾಗಿದೆ." ಜನವರಿ ಮೂರನೆಯ ವಾರದಲ್ಲಿ ಅಮೃತಸರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಮುಂಬಯಿ ಹಿಂಸಾಚಾರವನ್ನು ಖಂಡಿಸಲಾಯಿತು. ಇದರಿಂದ ಮುಂಬಯಿಗೆ ಮತ್ತು ಭಾರತಕ್ಕೆ ಕಳಂಕವುಂಟಾಯಿತೆಂಬ ಅಭಿಪ್ರಾಯ ವ್ಯಕ್ತವಾಯಿತು. ನೆಹರೂ ಆದೇಶದಂತೆ ಪಕ್ಷ "ಪ್ರತ್ಯೇಕತಾವಾದಿ, ವಿಚ್ಛಿದ್ರಕಾರಿ ಹಾಗೂ ಪ್ರಾಂತೀಯವಾದಿ ಶಕ್ತಿಗಳನ್ನು" ಉತ್ತೇಜಿಸದಂತೆ ತನ್ನ ಸದಸ್ಯರಿಗೆ ಆಗ್ರಹಪಡಿಸಿತು. ಹಾಗೂ "ಈ ಮಹಾನ್ ರಾಷ್ಟ್ರದ ಎಲ್ಲ ಭಾಗಗಳ ಸಮಗ್ರತೆ, ಸಾಮರಸ್ಯಗಳಿಗಾಗಿ ಶ್ರಮಿಸುವಂತೆ" ಕರೆ ನೀಡಲಾಯಿತು.

ಬಿಹಾರ್ ಮತ್ತು ಪಶ್ಚಿಮ ಬಂಗಾಳಗಳ ಮುಖ್ಯಮಂತ್ರಿಗಳು ತಮ್ಮೆರಡು ರಾಜ್ಯಗಳ ವಿಲೀನವನ್ನು ಸೂಚಿಸುವ ಜಂಟಿ ಹೇಳಿಕೆಯೊಂದನ್ನು ನೀಡಿದರು. ಭಾರತ ಒಕ್ಕೂಟ "ಪ್ರತ್ಯೇಕತಾವಾದಿ ಪ್ರವೃತ್ತಿಗಳನ್ನು" ಹತ್ತಿಕ್ಕುತ್ತದೆ. ಆರ್ಥಿಕ ಪ್ರಗತಿ ಸಾಧಿಸುತ್ತದೆ ಎಂಬ ವಿಶ್ವಾಸವನ್ನೂ ಜಂಟಿ ಹೇಳಿಕೆಯಲ್ಲಿ ವ್ಯಕ್ತಪಡಿಸಲಾಗಿತ್ತು. "ಎಲ್ಲಕ್ಕಿಂತ ಮಿಗಿಲಾಗಿ ಪಕ್ಷದ ನಾಯಕರು ಕರೆನೀಡಿರುವಂತೆ ಭಾರತ ಏಕತೆ, ಸಮಗ್ರತೆಗಳ ಸಮಸ್ಯೆಯನ್ನು ಇತ್ಯಾತ್ಮಕವಾಗಿ, ಸಕಾರಾತ್ಮಕವಾಗಿ ಎದುರಿಸಬೇಕೆಂಬುದಕ್ಕೆ ಇವು ನಿದರ್ಶನವಾಗಲಿ" ಎಂದು ಒತ್ತಿ ಹೇಳಲಾಗಿತ್ತು.

ನೆಹರೂ ಮಿತ್ರರಲ್ಲಿ ಗೃಹಸಚಿವ ಜಿ.ಬಿ. ಪಂತ್ ಮತ್ತು ಅವರೊಡನೆ ಪ್ರತಿಕೃತಿ ದಹನಶಿಕ್ಷೆಗೆ ಗುರಿಯಾದ ಸಂಗಡಿಗ ಮುರಾರಜಿ ದೇಸಾಯಿ ಪ್ರಮುಖರಾಗಿದ್ದರು. ಸರ್ಕಾರವನ್ನು ಉರುಳಿಸಿ ಬಲಾತ್ಕಾರವಾಗಿ ನಗರವನ್ನು ವಶಕ್ಕೆ ತೆಗೆದುಕೊಳ್ಳುವುದು ಪ್ರತಿಭಟನಾಕಾರರ ಉದ್ದೇಶವಾಗಿತ್ತು. ನಗರದಲ್ಲಿರುವ ಮರಾಠಿಯೇತರರನ್ನು ಬೆದರಿಸಿ ಮಣಿಸುವುದೂ, ಮುಂಬಯಿ ನಗರ ಮಹಾರಾಷ್ಟ್ರಕ್ಕೇ ಹೋಗಬೇಕೆಂಬ ಬೇಡಿಕೆಗೆ ಸಮ್ಮತಿಸುವಂತೆ ಮಾಡುವುದೂ ಅವರ ಉದ್ದೇಶವಾಗಿತ್ತು ಎಂದು ಮುರಾರಜಿ ತಿಳಿಸಿದ್ದರು.

ಮುರಾರಜಿಯವರ ಈ ಮಾತುಗಳನ್ನು ಎನ್.ವಿ. ಗಾಡ್ಗೀಳ್ ಉಗ್ರವಾಗಿ ವಿರೋಧಿಸಿದರು. ಆಡಳಿತ ಅವಶ್ಯಕತೆಗಿಂತ ಹೆಚ್ಚಾಗಿ ಬಲಪ್ರಯೋಗ ಮಾಡಿತೆಂದು ಗಾಡ್ಗೀಳ್ ಎಣಿಕೆಯಾಗಿತ್ತು."ಪೊಲೀಸರ ಗೋಲಿಬಾರ್ ಮತ್ತು ಲಾಠಿ ಪ್ರಹಾರಗಳು ಈಗ ಇಂಗ್ಲೆಂಡಿನಲ್ಲಿರುವ ಮಾಜಿ ಬ್ರಿಟಿಷ್ ಅಧಿಕಾರಿಗಳನ್ನೂ ನಾಚಿಸುವ ಪ್ರಮಾಣದಲ್ಲಿದ್ದವು" ಎಂದು ಗಾಡ್ಗೀಳರು ನೆಹರೂ ಮತ್ತು ಪಂತ್ ಇಬ್ಬರಿಗೂ ಪತ್ರಬರೆದು ತಿಳಿಸಿದರು. "1919ರಲ್ಲಿ ಅಮೃತಸರದಲ್ಲಿ ನಡೆದ ಜಲಿಯನ್‌ವಾಲಾಬಾಗ್ ಶಾಂತಿಯುತ ಸಭೆಯನ್ನು ಬ್ರಿಟಿಷರು ಸರ್ಕಾರದ ವಿರುದ್ಧ ದಂಗೆ ಎಂದು ಕರೆದು ಜನರಲ್ ಡಯರ್ ನಡೆಸಿದ ಕಗ್ಗೊಲೆಯನ್ನು ಸಮರ್ಥಿಸಿಕೊಂಡರು. ಅದೇ ರೀತಿ ಈಗ ಮುರಾರಜಿ ದೇಸಾಯಿಯವರು ಪೊಲೀಸರ ದೌರ್ಜನ್ಯಗಳನ್ನು ಉತ್ಪ್ರೇಕ್ಷೆ ಮಾಡಿ ತಿಳಿಸಿದ್ದಾರೆ. ಒಳ್ಳೆ ಗುರಿಕಾರ ಒಳ್ಳೆಯ ಆಡಳಿತಗಾರನೂ ಹೌದು ಎಂಬಂತೆ ದೆಹಲಿ ಮುರಾರಜಿಯವರನ್ನು ಆಯ್ಕೆ ಮಾಡಿಕೊಂಡಿದೆ" ಎಂದು ಗಾಡ್ಗೀಳ್ ಕಟುವಾಗಿಯೇ ಬರೆದಿದ್ದರು. ಆದರೆ ಕಾಂಗ್ರೆಸ್ ಇದಕ್ಕೆ ಭಾರಿ ಬೆಲೆ ತೆರಬೇಕಾಯಿತು. ಮುಂಬಯಿಯಲ್ಲಿ ಪೊಲೀಸರು ಯದ್ವಾತದ್ವಾ ಗುಂಡು ಹಾರಿಸಿದ್ದರಿಂದ ಹಾಗೂ ಮತ್ತಿತರ ದೌರ್ಜನ್ಯಗಳಿಂದಾಗಿ ಮಹಾರಾಷ್ಟ್ರದ ಜನತೆ ಸಂಪೂರ್ಣವಾಗಿ ಕಾಂಗ್ರೆಸ್ಸಿನಿಂದ ದೂರ ಸರಿದರು; ಭಾರತ ಸರ್ಕಾರದಿಂದ ವಿಮುಖರಾದರು.

ಏತನ್ಮಧ್ಯೆ ಪ್ರತಿರೋಧ ಹೊಗೆಯಾಡುತ್ತಲೇ ಇತ್ತು. "ಲಾಠಿ ಗುಂಡುಗಳನ್ನು ಎದುರಿಸುತ್ತೇವೆ. ನಾವು ಮುಂಬಯಿಯನ್ನು ಗೆದ್ದೇ ಗೆಲ್ಲುತ್ತೇವೆ" ಘೋಷಣೆಗಳು ಜನರ ನಾಲಿಗೆಗಳ ಮೇಲೆ ನಲಿದಾಡಿದವು. ಗಣರಾಜ್ಯ ದಿನವಾದ ಜನವರಿ 26ರಂದು ಮುಂಬಯಿಯ ಕೆಲವು ಕಾರ್ಮಿಕ ಬಡಾವಣೆಗಳಲ್ಲಿ ಕಪ್ಪು ಧ್ವಜಗಳು ಹಾರಾಡಿದವು. ನೆಹರೂ

ಫೆಬ್ರುವರಿಯಲ್ಲಿ ಮುಂಬಯಿಗೆ ಭೇಟಿ ಕೊಡುವ ಉದ್ದೇಶ ಹೊಂದಿದ್ದರು. ಭೇಟಿ ಕಾಲದಲ್ಲಿ ನೆಹರೂಗೆ ಅರ್ಪಿಸಲು ಸಂಯುಕ್ತ ಮಹಾರಾಷ್ಟ್ರ ಸಮಿತಿ ಮಕ್ಕಳಿಂದ ಅರ್ಜಿಯೊಂದನ್ನು ಬರೆಸಿತು. 100,000 ಮಕ್ಕಳು ಸಹಿ ಹಾಕಿದ್ದ ಪತ್ರದಲ್ಲಿ "ಚಾಚಾ ನೆಹರೂ, ಮುಂಬಯಿ ಕೊಡಿ" ಎಂದು ಮಕ್ಕಳು ಮನವಿ ಮಾಡಿದ್ದರು. ನೆಹರೂ ಬಿಗಿಯಾದ ಭದ್ರತಾ ವ್ಯವಸ್ಥೆಯ ಮಧ್ಯೆ ಬಂದು ಹೋದರು. ಅವರು ಮಕ್ಕಳಿರಲಿ, ಪತ್ರಕರ್ತರನ್ನೂ ಭೇಟಿಮಾಡಲಿಲ್ಲ.

1956ರ ಜೂನ್‌ನಲ್ಲಿ ಮುಂಬಯಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಬೇಕಿತ್ತು. ವಿಮಾನ ನಿಲ್ದಾಣದಲ್ಲಿ ಹಾಗೂ ಮಾರ್ಗದುದ್ದಕ್ಕೂ ನೆಹರೂ ಕಪ್ಪು ಬಾವುಟ ಪ್ರದರ್ಶನವನ್ನೆದುರಿಸಬೇಕಾಯಿತು. ಅಧಿವೇಶನದ ಸಭಾಂಗಣದ ಹೊರಗೆ ಪರಿಸ್ಥಿತಿ ಬಿಗಡಾಯಿಸಿತ್ತು. ಅಧಿವೇಶನದ ಎರಡನೆಯ ದಿನ ಸದಸ್ಯರ ಮೇಲೆ ಗುಂಪೊಂದು ಕಲ್ಲು ತೂರಾಟ ನಡೆಸಿತು. ಇದರಿಂದ ಅನೇಕರು ಗಾಯಗೊಂಡರು. ಕಲ್ಲು ತೂರಾಡುತ್ತಿದ್ದವರನ್ನು ಚದುರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದರು.

ಕಾಂಗ್ರೆಸ್ ಪಕ್ಷದೊಳಗಿನ ಮಹಾರಾಷ್ಟ್ರದ ಸದಸ್ಯರಲ್ಲಿ ಬಹಿರಂಗವಾಗಿ ಅತೃಪ್ತಿ ಅಸಮಾಧಾನಗಳು ವ್ಯಕ್ತಗೊಂಡದ್ದು ನೆಹರೂ ಸಮಸ್ಯೆಗಳನ್ನು ಇಮ್ಮಡಿಗೊಳಿಸಿತು. ದಕ್ಷಿಣ ಮುಂಬಯಿಯಿಂದ ಲೋಕಸಭೆಗೆ ಆಯ್ಕೆಯಾಗಿದ್ದ ಕೇಂದ್ರ ಅರ್ಥ ಸಚಿವ ಸಿ.ಡಿ. ದೇಶಮುಖ್, ಮುಂಬಯಿಯನ್ನು ಮಹಾರಾಷ್ಟ್ರಕ್ಕೆ ಕೊಡಮಾಡದಿರುವುದರ ವಿರುದ್ಧ ಪ್ರತಿಭಟಿಸಿ ರಾಜೀನಾಮೆ ಕೊಟ್ಟಿದ್ದರು. ಉಳಿದವರ ರಾಜೀನಾಮೆಗಳೂ ಇದನ್ನು ಹಿಂಬಾಲಿಸಿದವು.

ಮುಂಬಯಿ ಬಗ್ಗೆ ಕೇಂದ್ರ ಸರ್ಕಾರದ ನಿರ್ಧಾರಕ್ಕಾಗಿ 1956ರ ಬೇಸಿಗೆಯುದ್ದಕ್ಕೂ ಉಭಯ ಬಣಗಳೂ ತುದಿಗಾಲಲ್ಲಿ ಕಾದು ನಿಂತರು. ಕೇಂದ್ರ ಮಂತ್ರಿ ಮಂಡಲ ರಾಜ್ಯ ಪುನರ್ವಿಂಗಡಣಾ ಸಮಿತಿಯ ಇತರ ಶಿಫಾರಸುಗಳನ್ನು ಒಪ್ಪಿಕೊಂಡಿತ್ತು. ಮುಂಬಯಿಯನ್ನು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವನ್ನಾಗಿ ಪರಿವರ್ತಿಸುವುದು ನೆಹರೂ ಮತ್ತು ಪಂತರ ಆಶಯವಾಗಿದೆ ಎಂಬ ವದಂತಿ ಹಬ್ಬಿತು. ಆಗಿದ್ದ ವಾತಾವರಣದಲ್ಲಿ ಇದು ಅಸಾಧ್ಯವಾಗಿತ್ತು. ನವೆಂಬರ್ ಒಂದರಂದು ಭಾಷೆ ಆಧರಿಸಿದ ಹೊಸ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಮುರಾರಜಿ ದೇಸಾಯಿಯವರ ಜಾಗದಲ್ಲಿ 41 ವರ್ಷದ ಮರಾಠಿಗ ವೈ.ಬಿ. ಚವಾಣರನ್ನು ಮುಖ್ಯಮಂತ್ರಿಯಾಗಿ ನೇಮಿಸಲಾಯಿತು. ಇದೊಂದೇ ಪ್ರತಿಭಟನಾಕಾರರು ಗಿಟ್ಟಿಸಿಕೊಂಡ ರಿಯಾಯಿತಿ.

VII

ಭಾಷಾವಾರು ರಾಜ್ಯಗಳ ರಚನೆ, ಇತರ ವಿಷಯಗಳೊಡಗೂಡಿ ಜನತಾ ವಿಜಯವಾಗಿತ್ತು. ಜವಹರಲಾಲ ನೆಹರೂಗೆ ಅದು ಬೇಕಿರಲಿಲ್ಲ. ಆದರೆ ಪೊಟ್ಟಿ ಶ್ರೀರಾಮುಲು ಅದನ್ನು ಆಗು ಮಾಡಿಸಿದರು. ಶ್ರೀರಾಮುಲು ಐವತ್ತೆಂಟು ದಿನಗಳ ಕಾಲ ಉಪವಾಸ

ಸತ್ಯಾಗ್ರಹ ನಡೆಸಿದರು. ಆದರೆ ಉಪವಾಸ ಸತ್ಯಾಗ್ರಹದ ಮೊದಲ ಐವತ್ತೈದು ದಿನಗಳ ಕಾಲ ನೆಹರೂ ಸಂಪೂರ್ಣವಾಗಿ ಅದನ್ನು ಅಲಕ್ಷಿಸಿದರು. ಈ ಅವಧಿಯೊಳಗೆ, ಪತ್ರಕರ್ತರೊಬ್ಬರ ಪ್ರಕಾರ ನೆಹರೂ ದೇಶದ ಉದ್ದಗಲ ಪ್ರವಾಸ ಮಾಡಿ ಭಾಷೆ ಹೊರತಾದಂತೆ ಬೇರೆ ಬೇರೆ ವಿಷಯಗಳ ಬಗ್ಗೆ ಮಾತನಾಡಿದ್ದರು. ಒಂದಲ್ಲ ಎರಡಲ್ಲ 132 ಭಾಷಣಗಳು. ಆದರೆ ನೆಹರೂ ಆಂಧ್ರಕ್ಕೆ ಮಣಿದರು, ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ನೇಮಕ ಮಾಡಿದರು. ಇಡೀ ರಾಷ್ಟ್ರವನ್ನು ಭಾಷೆಯ ಆಧಾರದ ಮೇಲೆ ಮಾನ್ಯ ಮಾಡುವುದು ಅನಿವಾರ್ಯವಾಗಿತ್ತು.

ಭಾಷಾವಾರು ರಾಜ್ಯಗಳ ಆಂದೋಲನಗಳು ಜನ ಸಮುದಾಯದ ಭಾವನೆಗಳ ಆಳ-ವಿಸ್ತಾರ, ತೀವ್ರತೆಗಳನ್ನು ಬಹಿರಂಗಗೊಳಿಸಿದ್ದವು. ಕನ್ನಡಿಗರಿಗೆ, ತೆಲುಗರಿಗೆ, ಒರಿಯಾದವರಿಗೆ, ಮರಾಠಿಗರಿಗೆ ಭಾಷೆಯೊಂದು ತಮ್ಮ ಅಸ್ಮಿತೆಯ ಪ್ರಬಲ ಸೂಚಿಯಾಗಿತ್ತು. ಭಾಷೆ, ಮತ-ಧರ್ಮಗಳಿಗಿಂತ ಪ್ರಬಲವಾದ ಅಸ್ಮಿತೆಯಾಗಿತ್ತು. ಅವರ ಹೋರಾಟಗಳಲ್ಲಿ, ಅವರು ಜಯಿಸಿದ ಹೋರಾಟಗಳಲ್ಲಿ ಇದು ಸ್ಫುಟವಾಗಿ ಪ್ರಕಟಗೊಂಡಿತ್ತು.

ಭಾಷಾವಾರು ರಾಜ್ಯಗಳ ರಚನೆಯ ಒಂದು ಮುಖ್ಯ ಲಕ್ಷಣವೆಂದರೆ ಕಲೆಗೆ ದೊರೆತ ಸರ್ಕಾರದ ಆಶ್ರಯ, ಪ್ರೋತ್ಸಾಹಗಳು. ಸಾಹಿತ್ಯ, ರಂಗಭೂಮಿ, ಸಿನಿಮಾ, ಚಿತ್ರಕಲೆ, ಸಂಗೀತ ಮೊದಲಾಗಿ ಅಧಿಕೃತ ಭಾಷೆಯಲ್ಲಿ ಅಭಿವ್ಯಕ್ತಗೊಂಡ ಕಲೆಗೆ ಸರ್ಕಾರದಿಂದ ಧನ ಸಹಾಯ ಸಿಗಲಾರಂಭವಾಯಿತು. ಇದರ ಪರಿಣಾಮವಾಗಿ ಶ್ರೇಷ್ಠ ಕೃತಿಗಳೂ ಅತಿಕೆಟ್ಟ ಕೃತಿಗಳೂ ಪ್ರಕಟವಾದವು. ಭಾಷಾವಾರು ರಾಜ್ಯಗಳ ರಚನೆಯ ಫಲವಾಗಿ ಪ್ರದೇಶ ಭಾಷೆಗಳು ಸಮೃದ್ಧವಾಗಿ ಬೆಳೆದವು.

ಇಂಥದೇ ಇನ್ನೊಂದು ದೃಷ್ಟಾಂತ ವಾಸ್ತುಶಿಲ್ಪ. ಹೊಸರಾಜ್ಯಗಳಲ್ಲಿ, ಹೊಸರಾಜಧಾನಿಗಳ ನಿರ್ಮಾಣ ಅಥವಾ ಹೊಸ ಶಾಸನ ಸಭೆಗಳ ಭವ್ಯ ಕಟ್ಟಡಗಳ ನಿರ್ಮಾಣ ಅನಿವಾರ್ಯವಾದ ಅಗತ್ಯವೆನಿಸಿಬಿಟ್ಟಿತು. ಉದಾಹರಣೆಗೆ ಹೇಳುವುದಾದರೆ, ಒರಿಸ್ಸಾದಲ್ಲಿ ಹೊಸ ಸರ್ಕಾರಿ ಕಟ್ಟಡಗಳ ವಿನ್ಯಾಸ ರೂಪಿಸಲು ಇಬ್ಬರು ವಾಸ್ತುಶಿಲ್ಪಿಗಳನ್ನು ವಿಶೇಷವಾಗಿ ನೇಮಿಸಲಾಯಿತು. ಹೊಸ ಭವನಗಳು ಒರಿಸ್ಸಾ ಸಂಸ್ಕೃತಿ ಮತ್ತು ಕರಕೌಶಲವನ್ನು ಪ್ರತಿಬಿಂಬಿಸುವಂತಿರಬೇಕೆಂದು ಈ ವಾಸ್ತುಶಿಲ್ಪಿಗಳಿಗೆ ಆದೇಶಿಸಲಾಗಿತ್ತು. ಸ್ತಂಭಗಳು, ಪ್ರಭಾವಳಿಗಳು, ದೇವಾನುದೇವತೆಗಳ ಶಿಲ್ಪಗಳನ್ನು ಬಳಸಿ ಭವನಗಳನ್ನು ನಿರ್ಮಿಸಲಾಯಿತು. ಇತಿಹಾಸಕಾರರೊಬ್ಬರು ಬರೆದಿರುವಂತೆ, "ಹೊಸ ಭುವನೇಶ್ವರದ ವಾಸ್ತುಶಿಲ್ಪ ನೆಲದ ಮಣ್ಣಿನಿಂದ ರೂಪುಗೊಂಡ ಪವಿತ್ರವೂ ಪರಿಶುದ್ಧವೂ, ಆದ ವಾಸ್ತುಶಿಲ್ಪ."

ಪ್ರಾದೇಶಿಕ ಹೆಮ್ಮೆ-ಪ್ರತಿಷ್ಠೆಗಳ ಮತ್ತೊಂದು ಭವ್ಯ ನಿರ್ಮಾಣವೆಂದರೆ ಮೈಸೂರು ರಾಜ್ಯದ ವಿಧಾನಸೌಧ. ಬೆಂಗಳೂರು ನಗರದ ಅತಿಸುಂದರ ನಿರ್ಮಾಣಗಳಲ್ಲಿ ಒಂದಾದ ಹೈಕೋರ್ಟಿನ ಕೆಂಪು ಕಟ್ಟಡದ ಎದುರು ಇದನ್ನು ನಿರ್ಮಿಸಲಾಗಿದೆ. ಸುಂದರ ಹೈಕೋರ್ಟ್ ಕಟ್ಟಡ ಕೆಂಗಲ್ ಹನುಮಂತಯ್ಯನವರಿಗೆ ವಸಾಹತುಶಾಹಿಯ ಒಂದು ಅನಪೇಕ್ಷಿತ

ಅವಶೇಷವಾಗಿ ಕಂಡಿರಬೇಕು. ಈ ಕಟ್ಟಡವನ್ನು ಕೆಡವಲು ಅವರು ಅನುಮತಿ ಕೇಳಿದರು. ಅನುಮತಿ ನಿರಾಕರಿಸಲಾಯಿತು. ಆಗ ಅವರು ಇದರ ಎದುರು ಭವ್ಯ ವಿಧಾನಸೌಧ ಕಟ್ಟುವ ನಿರ್ಧಾರ ಕೈಗೊಂಡರು. ವಿಧಾನಸೌಧದ ಮುಂದೆ ಈ ಕೆಂಪು ಕಟ್ಟಡ ಕುಬ್ಜವಾಗಿ ಕಾಣಬೇಕೆಂಬುದು ಅವರ ಇರಾದೆಯಿದ್ದಂತಿತ್ತು. ವಿಧಾನಸೌಧ, "ಅಧಿಕಾರ, ಘನತೆ, ಭಾರತೀಯ ಶೈಲಿ, ವಿಶೇಷವಾಗಿ ಮೈಸೂರಿನ ವಾಸ್ತುಶೈಲಿಯ" ಭವ್ಯ ಸಂದೇಶವನ್ನು ಸಾರುವಂತಿರಬೇಕು ಎಂಬುದು ಅವರ ಕಲ್ಪನೆಯಾಗಿತ್ತು.

ವಿಧಾನಸೌಧ ಕರ್ನಾಟಕದ ಮಹಾರಾಜರುಗಳ ಕಾಲದ ವಾಸ್ತುಶಿಲ್ಪದ ಸ್ಫೂರ್ತಿಯಿಂದ ನಿರ್ಮಾಣಗೊಂಡ ಒಂದು ಭವ್ಯ ಸೌಧವಾಯಿತು. ಮೈಸೂರು ಅರಮನೆಯ ಕಂಬಗಳು, ಹಳೆಯ ದೇವಾಲಯಗಳು, ಬಾಗಿಲುಗಳು ಮೊದಲಾದವುಗಳನ್ನು ಅನುಕರಿಸುವಂತೆ ಹನುಮಂತಯ್ಯನವರು ಕಟ್ಟಡ ನಿರ್ಮಾಪಕರಿಗೆ ಸಲಹೆಮಾಡಿದ್ದರು.

ಅಂತಿಮವಾಗಿ ಕಟ್ಟಡ ಪೂರ್ಣಗೊಂಡಾಗ ವಿಧಾನಸೌಧ ಒಂದು ಕಲಸುಮೇಲೋಗರವಾಗಿತ್ತು. ಆದರೂ ಅದರ ಉದ್ದೇಶ ಈಡೇರಿತ್ತು: "ವಸಾಹತುಶಾಹಿ ಅಠಾರಾ ಕಚೇರಿಗಿಂತ ಭವ್ಯವಾಗಿ ಅದು ವಿಜಯಸಾಧಿಸಬೇಕು, ಕನ್ನಡದ ಕೀರ್ತಿ ಪ್ರತಿಷ್ಠೆಗಳ ಸಾರಬಿಂಬವಾಗಬೇಕು. ಕನ್ನಡಾಭಿಮಾನದ ದ್ಯೋತಕವಾಗಿ ವಿಧಾನಸೌಧ ಕೆಲಸ ಮಾಡಬೇಕು" ಎಂಬುದೇ ಮುಖ್ಯ ಆಶಯವಾಗಿತ್ತು. ಈ ಆಶಯ ಸಾಕಾರಗೊಂಡು ಈಡೇರಿತ್ತು.

ಶುರುವಿನಲ್ಲಿ ಭಾಷಾವಾರು ರಾಜ್ಯಗಳ ಚಳವಳಿ ರಾಷ್ಟ್ರದ ಗಣ್ಯರಲ್ಲಿ ತೀವ್ರವಾದ ಭಯಭೀತಿಗಳನ್ನು ಉಂಟುಮಾಡಿತ್ತು. ಇದು ಭಾರತದ ವಿಘಟನೆಗೆ, ಇನ್ನೂ ಹಲವಾರು ಪಾಕಿಸ್ತಾನಗಳ ಸೃಷ್ಟಿಗೆ ಎಡೆಮಾಡಿಕೊಡಬಹುದೆಂಬುದೇ ಇವರ ಭೀತಿಯಾಗಿತ್ತು. 1952ರ ಫೆಬ್ರುವರಿಯಲ್ಲಿ ಟೈಮ್ಸ್ ಆಫ್ ಇಂಡಿಯಾ ಹೀಗೆ ಬರೆದಿತ್ತು: "ಭಾಷೆಯ ಆಧಾರದ ಮೇಲೆ ಭಾರತದ ಭೂಪಟವನ್ನು ಪುನರ್‌ರೇಖಿಸುವ ಪ್ರಯತ್ನದಿಂದ ಬಹುಕಾಲದಿಂದ ಕಾಯುತ್ತಿರುವ ಪ್ರತಿಗಾಮಿ ಶಕ್ತಿಗಳು ತಲೆ ಎತ್ತಲು ಹಾಗೂ ತಮ್ಮನ್ನು ಸಮರ್ಥಿಸಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ. ಈ ಶಕ್ತಿಗಳು ಭಾರತದ ಸಮಗ್ರತೆಯ ಬೇರಿಗೇ ಕುಠಾರಪ್ರಾಯವಾಗುತ್ತವೆ."

ಈಗ ಪುನರಾವಲೋಕನ ಮಾಡಿದಾಗ ರಾಜ್ಯಗಳ ಪುನರ್ವಿಂಗಡಣೆಯಿಂದ ಭಾರತದ ಸಮಗ್ರತೆ ಬಲಿಷ್ಠಗೊಂಡಂತೆ ಕಾಣುತ್ತದೆ. ನಿಜ, ಬೆಂಗಳೂರಿನ ವಿಧಾನ ಸೌಧದಂಥ ವ್ಯಕ್ತಿ ಸೃಷ್ಟಿಗಳು ಎಲ್ಲರ ಅಭಿರುಚಿಗೆ ತಕ್ಕುದಲ್ಲದೇ ಇರಬಹುದು. ನದಿನೀರು ಹಂಚಿಕೆಯಲ್ಲಿ ಕೆಲವು ರಾಜ್ಯಗಳ ನಡುವೆ ತೀವ್ರ ವಿರಸ, ವಿರೋಧಗಳು, ವಿವಾದಗಳು ಉಂಟಾಗಿವೆ. ಇವೆಲ್ಲ ಏನೇ ಇದ್ದರೂ ಭಾಷಾವಾರು ರಾಜ್ಯ ರಚನೆಯಿಂದ ಪ್ರಾಂತೀಯ ಪ್ರತಿಷ್ಠೆಗೊಂದು ರಚನಾತ್ಮಕ ಮಾಧ್ಯಮ ದೊರೆತಂತಾಯಿತು. ಕನ್ನಡಿಗರಾಗಿ, ತಮಿಳರಾಗಿ ಏಕಕಾಲಕ್ಕೆ ಭಾರತೀಯರೂ ಆಗಿ ಶಾಂತಿಯಿಂದ ಬಾಳ್ವೆ ಮಾಡುವುದು ಇದರಿಂದ ಸಾಧ್ಯವಾಯಿತು.

1955ರಲ್ಲಿ ಆಂಧ್ರ ವಿಧಾನಸಭೆಗೆ ನಡೆದ ಚುನಾವಣೆಯೇ ಮೇಲಿನ ಮಾತಿಗೆ ಮೊಟ್ಟಮೊದಲ ನಿದರ್ಶನ. ಮೂರು ವರ್ಷಗಳ ಹಿಂದೆ ಕಾಂಗ್ರೆಸ್ ಈ ಪ್ರದೇಶದಲ್ಲಿ ಘೋರ

ಪರಾಜಯವನ್ನು ಕಂಡಿತ್ತು. ರಾಜ್ಯ ಸ್ಥಾನಮಾನ ವಿಷಯದಲ್ಲಿ ತಾಳಿದ ಸಂದಿಗ್ಧ ನಿಲುವಿನಿಂದಾಗಿ ತೆಲುಗರು ಕಾಂಗ್ರೆಸ್ಸನ್ನು ಸಂಶಯಗ್ರಸ್ತ ಕಣ್ಣುಗಳಿಂದ ಕಂಡಿದ್ದರು. ಇದಕ್ಕೆ ತದ್ವಿರುದ್ಧವಾಗಿ ಕಮ್ಯುನಿಸ್ಟರು ವಿಶಾಲ ಆಂಧ್ರದ ಪರ ದನಿ ಎತ್ತಿ ಜಯಶಾಲಿಗಳಾಗಿದ್ದರು. ಆದರೆ 1955ರಲ್ಲಿ, ಆಂಧ್ರಪ್ರದೇಶ ಸದೃಢ ರಾಜ್ಯವಾಗಿತ್ತು; ಕಾಂಗ್ರೆಸ್ ಜಯಭೇರಿ ಬಾರಿಸಿತು. ಕಾಂಗ್ರೆಸ್ಸಿನ ಪ್ರಮುಖ ವಿರೋಧಿಗಳಾದ ಕಮ್ಯುನಿಸ್ಟರು ನೆಲ ಕಚ್ಚಿದ್ದರು. ಆಗ ಒಬ್ಬ ವ್ಯಾಖ್ಯಾನಕಾರರು ಹೀಗೆ ಉದ್ಗಾರವೆತ್ತಿ ಬರೆದರು: "ಇನ್ನು ಮುಂದೆ ಆಂಧ್ರವನ್ನು ಭಾರತದ ಯೆನಾನ್ ಎಂದು ಯಾರೂ ಸಂಶಯಿಸಲಾರರು."

ಆಂಧ್ರ ಭಾರತದಿಂದ ಪ್ರತ್ಯೇಕವಾಗಲಿಲ್ಲ. ಆದರೆ ಅವರು ಭಾರತೀಯತೆಯ ಪುನರ್‌ವ್ಯಾಖ್ಯಾನ ಮಾಡಿದ್ದರು. ಭಾರತೀಯ ಎಂದರೇನು ಎಂಬುದರ ಹೊಸ ಅರ್ಥ ಬರೆದಿದ್ದರು. ಅಥವಾ ಕನಿಷ್ಠ ಒಬ್ಬ ತೆಲುಗನಾದರೂ ಈ ಕೆಲಸ ಮಾಡಿದ್ದಾನೆ. ಆತ ಇವತ್ತು ಮರೆತು ಹೋಗಿರುವ ವ್ಯಕ್ತಿ, ಪೊಟ್ಟಿ ಶ್ರೀರಾಮುಲು. ಈತ ಈ ರಾಷ್ಟ್ರದ ಇತಿಹಾಸ ಮತ್ತು ಭೂಗೋಳದ ಮೇಲೆ ಅಲ್ಪಕ್ಕಿಂತ ಮಿಗಿಲಾದ ಪ್ರಬಲ ಪರಿಣಾಮ ಬೀರಿದ್ದಾನೆ. ಇವನನ್ನು ಮರೆತಿರುವುದು ಒಂದು ವಿಷಾದದ ಸಂಗತಿ. ಪೊಟ್ಟಿ ಶ್ರೀರಾಮುಲು ನಿರಶನ ಸತ್ಯಾಗ್ರಹ ಮತ್ತು ಇದರ ಪರಿಣಾಮವಾದ ಅವರ ನಿಧನದಿಂದಾಗಿ ಭಾಷೆಯ ಆಧಾರದ ಮೇಲೆ ಇಡೀ ಭಾರತದ ಭೂಪಟವನ್ನು ಪುನರ್ ರೇಖಿಸುವಂತಾಯಿತು. ಜವಹರಲಾಲ್ ನೆಹರೂ ಅವರನ್ನು ಆಧುನಿಕ ಭಾರತದ ನಿರ್ಮಾಪಕ ಎಂದು ಕರೆಯುವುದಾದಲ್ಲಿ ಪೊಟ್ಟಿ ಶ್ರೀರಾಮುಲು ಅವರನ್ನು ಆಧುನಿಕ ಭಾರತದ ನಕ್ಷೆಗಾರ ಎಂದು ಕರೆಯಬಹುದೇನೋ.

○

10

ನಿಸರ್ಗದ ಜಯಭೇರಿ

ಭಾರತೀಯರು ಆಯ್ಕೆ ಮಾಡಿಕೊಳ್ಳಬೇಕಾಗಿದೆ–
ತಾವು ವಿದ್ಯಾವಂತರಾಗಲಿಚ್ಛಿಸುತ್ತಾರೋ

ಅಥವಾ

ಅಜ್ಞಾನಿಗಳಾಗಿಯೇ ಉಳಿಯಲು ಇಚ್ಛಿಸುತ್ತಾರೋ,
ಬಾಹ್ಯ ಪ್ರಪಂಚದೊಂದಿಗೆ ನಿಕಟ ಸಂಪರ್ಕ ಹೊಂದಿ
ಅದರ ಪ್ರಭಾವಗಳಿಗೆ ಸ್ಪಂದಿಸುತ್ತಾರೋ-

ಅಥವಾ

ಉದಾಸೀನ ಮನೋಭಾವದಿಂದ ದೂರ ಉಳಿಯುತ್ತಾರೋ-
ಅವರು ಸಂಘಟಿತರಾಗುತ್ತಾರೋ

ಅಥವಾ

ಅಸಂಘಟಿತರಾಗಿ ಉಳಿಯುತ್ತಾರೋ
ಧೈರ್ಯವಾಗಿ ಎದೆಗಾರಿಕೆ ತೋರುತ್ತಾರೋ

ಅಥವಾ

ಕುನ್ನಿಗಳಾಗಿ ಉಳಿಯುತ್ತಾರೋ,
ಉದ್ಯಮಶೀಲರಾಗುತ್ತಾರೋ

ಅಥವಾ

ಇತ್ಯಾತ್ಮಕವಾಗಿ ಕೈಗಾರಿಕಾ/ಕೃಷಿರಾಷ್ಟ್ರವಾಗಿ ಇರಲಿಚ್ಛಿಸುತ್ತಾರೋ, ಶ್ರೀಮಂತರಿರಲಿ, ಬಡವರಿರಲಿ, ಸಾಧುಸಜ್ಜನರಿರಲಿ, ಅಂಥ ಪ್ರಗತಿರಾಷ್ಟ್ರಗಳ ಅನುಯಾಯಿಗಳಾಗುತ್ತಾರೋಎಂಬುದು ನಿರ್ಧಾರವಾಗಬೇಕು. ಇವುಗಳಲ್ಲಿ ಆಯ್ಕೆ ಜನಸಾಮಾನ್ಯರಿಗೇ ಬಿಟ್ಟದ್ದು. ಕ್ರಿಯೆ, ಭಾವನೆಯಲ್ಲ, ಕ್ರಿಯೆ ಮಾತ್ರ ಇಲ್ಲಿ ಸಂಕಲ್ಪ ಶಕ್ತಿ.

–ವಿಶ್ವೇಶ್ವರಯ್ಯ, ಎಂಜಿನಿಯರ್, 1920.

ಸಮಾಜವಾದದ ಲಕ್ಷಣಾರ್ಥಗಳಿಗೆ ಭಾರತದ ಬದ್ಧತೆ, ನಮ್ಮ ಮುಕ್ತ ಉದ್ಯಮಶೀಲತೆಯ ಲಕ್ಷಣಾರ್ಥಗಳಷ್ಟೇ ಗಾಢವಾದದ್ದು. ಭಾರತದ ಅತಿಥಲಗಾರ ಬಂಡವಾಳಗಾರನೂ ಸಂದರ್ಭ ಬಂದಾಗ ತಾನು ಹೃತ್ಪೂರ್ವಕ ಸಮಾಜವಾದಿಯೆಂದು ನಟಿಸಬಲ್ಲ.

–ಜೆ.ಕೆ. ಗಾಲ್‌ಬ್ರಿತ್, ಅರ್ಥಶಾಸ್ತ್ರಜ್ಞ, 1958.

I

'ಹಳ್ಳಿಗಳು ಭಾರತದ ತೌರುಮನೆ' ಎಂದು ಹೇಳಲು ಗಾಂಧೀಜಿ ಇಷ್ಟಪಡುತ್ತಿದ್ದರು. ಸ್ವಾತಂತ್ರ್ಯ ಬಂದಾಗ ಭಾರತ ಕೃಷಿಕರು ಮತ್ತು ಕಾರ್ಮಿಕರಿಂದ, ಕೂಲಿಕಾರರಿಂದ ತುಂಬಿದ ದೇಶವಾಗಿತ್ತು. ದುಡಿಯುವ ವರ್ಗದಲ್ಲಿ ಮುಕ್ಕಾಲು ಪಾಲು ಜನ ಬೇಸಾಯದಲ್ಲಿ ತೊಡಗಿದವರು. ಭಾರತದ ಸಮಗ್ರ ಅಂತರ್ದೇಶೀಯ ಉತ್ಪಾದನೆಗೆ (ಜಿ.ಡಿ.ಪಿ) ಕೃಷಿವಲಯದ ಕೊಡುಗೆ ಶೇ 60ರಷ್ಟು. ಬೆಳೆಯುತ್ತಿದ್ದ ಸಣ್ಣ ಪ್ರಮಾಣದ ಕೈಗಾರಿಕಾ ಕ್ಷೇತ್ರವಿತ್ತು. ಕೈಗಾರಿಕೆಗಳಲ್ಲಿ ಶೇ 12ರಷ್ಟು ಕೆಲಸಗಾರರಿದ್ದು ಜಿ.ಡಿ.ಪಿ.ಗೆ ಇದರ ಕೊಡುಗೆ ಶೇ 25ರಷ್ಟಾಗಿತ್ತು.

ರೈತ ಭಾರತದ ಬೆನ್ನೆಲುಬು, ಭಾರತದ ಅರ್ಥವ್ಯವಸ್ಥೆಯ ಬೆನ್ನೆಲುಬು. ಭಾರತ ಉಪಖಂಡದ ಉದ್ದಗಲ ಅಗಾಧ ಪ್ರಮಾಣದ ವಿವಿಧ ಬಗೆಯ ಕೃಷಿ ಪದ್ಧತಿಗಳಿದ್ದವು. ಉದಾಹರಣೆಗೆ ನೋಡುವುದಾದರೆ ಉತ್ತರ ಮತ್ತು ಪಶ್ಚಿಮ ಭಾಗದ ಗೋಧಿ ಬೆಳೆಯುವ ಪ್ರದೇಶಗಳ ನಡುವೆಯೇ ಭಿನ್ನತೆಗಳಿದ್ದವು, ಪ್ರತ್ಯೇಕತೆಗಳಿದ್ದವು. ಇಲ್ಲಿ ಮಹಿಳೆಯರು ಕೃಷಿಕೆಲಸಗಳಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ದಕ್ಷಿಣ ಮತ್ತು ಪೂರ್ವ ವಲಯಗಳಲ್ಲಿ ಭತ್ತ ಬೆಳೆಯಲಾಗುತ್ತಿತ್ತು. ಇಲ್ಲಿ ಮಹಿಳೆಯರು ಕೃಷಿ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದರು. ಭತ್ತದ ಸಸಿ ನಾಟಿ ಮಾಡುವುದು, ಪೈರು ಕುಯಿಲು ಮಾಡುವುದು ಮೊದಲಾದ ಕೆಲಸಗಳನ್ನು ಮಹಿಳೆಯರು ಮಾಡುತ್ತಿದ್ದರು. ಭಾರತದ ಹೆಚ್ಚು ಭೂಭಾಗದಲ್ಲಿ ಭತ್ತ ಅಥವಾ ಗೋಧಿ ಪ್ರಮುಖ ಬೆಳೆ. ಇನ್ನು ಉಳಿದಂತೆ, ಬೇಳೆ ಕಾಳು, ಜೋಳ, ನವಣೆ, ರಾಗಿ ಮುಖ್ಯ ಬೆಳೆಗಳು. ಇದಲ್ಲದೆ ರೈತರು ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು, ಹಣ್ಣು, ತರಕಾರಿಗಳನ್ನು ಬೆಳೆಯುವುದು ರೂಢಿಯಲ್ಲಿದೆ.

ವೈವಿಧ್ಯತೆ ಏನೇ ಇದ್ದರೂ, ಭಾರತದ ಕೃಷಿ ಪದ್ಧತಿ ಅನುಭವಜನ್ಯವಾದದ್ದು. ತಲೆಮಾರಿನಿಂದ ತಲೆಮಾರಿಗೆ ಹರಿದುಬಂದ ಜ್ಞಾನ ಮತ್ತು ಸಂಪ್ರದಾಯಗಳನ್ನು ಆಧರಿಸಿದ್ದು. ಇಲ್ಲಿನ ಕೃಷಿ ವಿಚಾರಗಳು ಪುಸ್ತಕದ ಬದನೆಕಾಯಿಯಲ್ಲ. ಎಲ್ಲ ಕಡೆಯೂ ಸ್ಥಳೀಯ ಮಾಹಿತಿಗಳನ್ನು, ಸ್ಥಳೀಯ ಸಂಪನ್ಮೂಲಗಳನ್ನಾಧರಿಸಿಯೇ ಕೃಷಿಕೆಲಸಗಳು ನಡೆಯುತ್ತಿದ್ದವು. ನೀರು, ಇಂಧನ, ಮೇವು, ಗೊಬ್ಬರ ಎಲ್ಲವನ್ನೂ ಗ್ರಾಮದ ಆಸುಪಾಸಿನಿಂದಲೇ ಪಡೆದುಕೊಳ್ಳುತ್ತಿದ್ದರು. ಜೋಡಿ ಎತ್ತುಗಳಿಗೆ ಹೂಡಿದ ನೇಗಿಲಿನಿಂದ ಉಳುಮೆ ಮಾಡುತ್ತಿದ್ದರು. ಹತ್ತಿರದ ಕಾಡಿನಿಂದ ತಂದ ಮರಮಟ್ಟುಗಳಿಂದ, ಬಿದಿರಿನ ತಡಿಕೆಗಳಿಂದ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು.

ಎಲ್ಲ ಕಡೆಯೂ ಜನವಸತಿ ಒತ್ತೊತ್ತಾಗಿರುತ್ತಿತ್ತು. ಜನ ಅನ್ಯೋನ್ಯವಾಗಿ ಬದುಕುತ್ತಿದ್ದರು. ಕೃಷಿಕರು ಹೆಚ್ಚಾಗಿ ಸ್ಥಳೀಯ ಕಮ್ಮಾರರು, ಕ್ಷೌರಿಕರೂ, ಜಾಡಮಾಲಿಗಳೂ ಮೊದಲಾದವರನ್ನು ತಮ್ಮ ಕೆಲಸಕಾರ್ಯಗಳಿಗೆ ಅವಲಂಬಿಸಿದ್ದರು. ಅನೇಕ ಪ್ರದೇಶಗಳಲ್ಲಿ ನೇಯ್ಗೆಯವರು ಪ್ರಧಾನವಾಗಿದ್ದರು. ಕೆಲವು ಕಡೆಗಳಲ್ಲಿ ಅಲೆಮಾರಿ ಕುರುಬರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಸಾಮಾಜಿಕ ಬದುಕಿನಲ್ಲೂ ಹೆಚ್ಚಿನ ವ್ಯತ್ಯಾಸಗಳಿರಲಿಲ್ಲ. ಸಾದೃಶ್ಯತೆ ಇತ್ತು. ಸಾಕ್ಷರತೆಯ ಮಟ್ಟ ತುಂಬ ಕೆಳಗಿತ್ತು. ಜಾತಿಭಾವನೆಗಳು ಪ್ರಬಲವಾಗಿದ್ದವು. ಹಳ್ಳಿಗಳು ಅರ್ಧ ಡಜನ್ನಿಗೂ ಹೆಚ್ಚಿನ ಅಂತರ್ವೈವಾಹಿಕ ಜಾತಿಗಳಿಂದ ವಿಂಗಡಣೆಗೊಂಡಿದ್ದವು. ಧಾರ್ಮಿಕ ಭಾವನೆಗಳು ತೀವ್ರವಾಗಿದ್ದವು.

ಗ್ರಾಮೀಣ ಭಾರತ ಕಾಲಾತೀತ ಸ್ಥಿತಿಯಲ್ಲಿತ್ತು. ರೈತರು, ಕುರುಬರು, ಬಡಗಿಗಳು, ನೇಕಾರರು ಎಲ್ಲ ತಮ್ಮ ತಾತಮುತ್ತಾತಂದಿರಂತೆಯೇ ಬಾಳ್ವೆ ನಡೆಸುತ್ತಿದ್ದರು. 1940ರ ಸಮೀಕ್ಷೆಯೊಂದರ ಪ್ರಕಾರ:

> *"ಒಂದೇ ರೀತಿಯ ನಿಷ್ಕಾಪಟ್ಯದ ಋಜು ಜೀವನ. ಹವಾಮಾನದ ಅನಿಶ್ಚಿತತೆ, ವೈಪರೀತ್ಯಗಳ ವಿರುದ್ಧ ಅದೇ ಹೋರಾಟ, ಸರಳವಾದ ಆಟಗಳು, ಕ್ರೀಡೆ, ಹಾಡು, ಕುಣಿತಗಳ ಬಗ್ಗೆ ಅದೇ ಪ್ರೀತಿ ಉತ್ಸಾಹ, ನೆರೆಹೊರೆಯವರಿಗೆ ಸಹಾಯ ಮಾಡುವ ಅದೇ ಉಪಕಾರ ಮನೋಭಾವ ಮತ್ತು ಹಣಕಾಸಿನ ಸಾಲದ ಹೊರೆ, ಅದೇ ಋಣಭಾರ."*

–ಹೀಗಿತ್ತು ಹಳ್ಳಿಯ ಜೀವನ.

ಭಾರತದ ಪ್ರಜೆಗೆ ಸಾತತ್ಯತೆ ಎನ್ನುವುದು ಸ್ಥಗಿತತೆಗೆ, ಜಡತೆಗೆ ಒಂದು ಸೌಮ್ಯೋಕ್ತಿಯಾಗಿತ್ತು. ಕೃಷಿ ಉತ್ಪಾದನೆ ಕಡಿಮೆಯಾಗಿತ್ತು. ಹೀಗಾಗಿ ಆರೋಗ್ಯ, ಪೌಷ್ಟಿಕತೆಗಳ ಮಟ್ಟವೂ ಕುಸಿದಿತ್ತು. ಏರುತ್ತಿದ್ದುದು ಜನಸಂಖ್ಯೆ ಮಾತ್ರ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದ ನಂತರ ವೈದ್ಯಕೀಯ ಸೇವಾ ಸೌಲಭ್ಯ ವಿಸ್ತರಣೆಯಿಂದಾಗಿ ಮರಣ ಪ್ರಮಾಣ ತೀವ್ರ ಇಳಿಮುಖವಾಯಿತು. ಜನಸಂಖ್ಯೆ ಕ್ರಮೇಣ ಹೆಚ್ಚುತ್ತಲೇ ಇತ್ತು. 1881-1941ರ ಅವಧಿಯಲ್ಲಿ ಬ್ರಿಟಿಷ್ ಭಾರತದ ಜನಸಂಖ್ಯೆ 257 ದಶಲಕ್ಷದಿಂದ 389 ದಶಲಕ್ಷಕ್ಕೇರಿತ್ತು. ಆದರೆ ಲಭಿಸುತ್ತಿದ್ದ ತಲಾ ಆಹಾರ 200 ಕಿಲೋಗ್ರಾಮಿನಿಂದ 150ಕ್ಕೆ ಕುಸಿದಿತ್ತು.

1885ರಲ್ಲಿ ಕಾಂಗ್ರೆಸ್ ಸಂಸ್ಥಾಪನೆಯಾದಂದಿನಿಂದಲೂ ಬ್ರಿಟಿಷರು ರೈತ ಸಮುದಾಯದ ಶೋಷಣೆ ನಡೆಸಿದ್ದಾರೆಂದು ಆಪಾದಿಸಲಾಗಿತ್ತು. ತಮ್ಮ ಕೈಗೆ ಅಧಿಕಾರ ಬಂದಾಗ ಕೃಷಿಸುಧಾರಣೆ ತಮ್ಮ ಕಾರ್ಯಸೂಚಿಯ ಮೊದಲ ವಿಷಯವಾಗಿರುವುದೆಂದು ಕಾಂಗ್ರೆಸ್ಸಿಗರು ಹೇಳುತ್ತಿದ್ದರು. ಕೃಷಿ ಸುಧಾರಣೆಯಲ್ಲಿ ಮೂರು ಕೆಲಸಗಳು ಅತಿ ಮುಖ್ಯವಾಗಿದ್ದವು. ಮೊದಲನೆಯದು ಭೂಕಂದಾಯ ರದ್ದತಿ. ಎರಡನೆಯದು ಕೃಷಿ ಉತ್ಪಾದನೆ ಹೆಚ್ಚಿಸಲು, ಮಳೆ ಮಾರುತದ ಮೇಲಿನ ಅವಲಂಬನೆ ತಗ್ಗಿಸಲು, ವ್ಯಾಪಕವಾಗಿ ನೀರಾವರಿ

ಯೋಜನೆಗಳನ್ನು ಕೈಗೊಳ್ಳುವುದು. ಮೂರನೆಯದು, ಭೂ ಹಿಡುವಳಿ ಪದ್ಧತಿಯಲ್ಲಿ ಸುಧಾರಣೆ. ವಿಶೇಷವಾಗಿ ಉತ್ತರ ಮತ್ತು ಪೂರ್ವ ಭಾರತದಲ್ಲಿ ಬ್ರಿಟಿಷರು ಅನುಪಸ್ಥಿತಿ ಜಮೀನ್ದಾರಿ ಪದ್ಧತಿಯನ್ನು ಪ್ರೋತ್ಸಾಹಿಸಿದ್ದರು. ಇನ್ನೂ ಅನೇಕ ಕಡೆಗಳಲ್ಲಿ ಉಳುವವರೇ ಹೊಲದ ಒಡೆಯರಾಗಿರಲಿಲ್ಲ.

ರೈತ ಹಿಡುವಳಿದಾರರಿಗೆ ಭೂ ಹಿಡುವಳಿಯ ಭದ್ರತೆ ಇರಲಿಲ್ಲ. ಕೃಷಿಕಾರ್ಮಿಕರಿಗೆ ಮೊದಲನೆಯದಾಗಿ ಉಳಲು ಭೂಮಿಯೇ ಇರಲಿಲ್ಲ. ಕೃಷಿ ಅರ್ಥವ್ಯವಸ್ಥೆಯಲ್ಲಿ ಅಸಮತೆ ತಾಂಡವವಾಡುತ್ತಿದ್ದಿರಬಹುದು. ಶೋಷಣೆ ಹಲವಾರು ರೂಪಗಳಲ್ಲಿದ್ದವು. ಶೋಷಣೆ ನವನವೀನವೂ ಆಗಿತ್ತು. ಸರ್ಕಾರಕ್ಕೆ ತೆರುವ ಭೂಕಂದಾಯವಲ್ಲದೆ ಜಮೀನ್ದಾರರು ಹಿಡುವಳಿದಾರರಿಗೆ 'ಮೋಟೋರಾಗಾ', 'ಹಾಥಿರಾಣಾ'ದಂಥ ತೆರಿಗೆಗಳನ್ನು ವಿಧಿಸುತ್ತಿದ್ದರು. ಮೋಟೋರಾಣಾ ಜಮೀನ್ದಾರರು ಹೊಸ ಕಾರು ಖರೀದಿಸಲು ಕೊಡಬೇಕಾದ ತೆರಿಗೆ. ಹಾಥಿರಾಣಾ ಜಮೀನ್ದಾರರು ಆನೆ ಸಾಕಲು ಅನುಕೂಲವಾಗುವಂತೆ ಪಾವತಿಸಬೇಕಾದ ತೆರಿಗೆ. ಜಮೀನ್ದಾರರು ತಮ್ಮ ಸಾಕು ಪ್ರಾಣಿಗಳನ್ನು, ವಾಹನಗಳನ್ನು ಭೂ ಹಿಡುವಳಿದಾರರಿಗಿಂತ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಸ್ವಾತಂತ್ರ್ಯಕ್ಕೆ ಎರಡು ವಾರ ಮುಂಚೆ, ಮದ್ರಾಸಿನ ಸಾಪ್ತಾಹಿಕವೊಂದು ಗ್ರಾಮೀಣ ಮಲಬಾರಿನ ದುರ್ಭರ ಪರಿಸ್ಥಿತಿ ಬಗ್ಗೆ ವಿಶೇಷ ವರದಿಯೊಂದನ್ನು ಪ್ರಕಟಿಸಿತ್ತು. ಈ ವಿಶೇಷ ವರದಿಯಲ್ಲಿ ಏಳು ಆನೆಗಳ ಒಡೆಯನಾದ ಒಬ್ಬ ಭಾರೀ ಜಮೀನ್ದಾರನ ವ್ಯಕ್ತಿ ಚಿತ್ರವಿತ್ತು. ಈ ಆನೆಗಳಿಗಾಗಿ ಇವನಿಗೆ 25 ಸಾವಿರ ಕೆಜಿ ಭತ್ತದ ಅಗತ್ಯವಿತ್ತು. ಆದರೆ ಅವನು ತನ್ನ ಗೇಣಿದಾರ ರೈತರಿಗೆ ವಾರದಲ್ಲಿ ಮೂರುದಿನಕ್ಕೆ ಆಗುವಷ್ಟು ಮಾತ್ರ ದವಸಧಾನ್ಯ ಪೂರೈಸುತ್ತಿದ್ದ.

ಬೃಹತ್‌ಪ್ರಮಾಣದ ಭೂಮಾಲೀಕತ್ವ ರದ್ದತಿ, ಗೇಣಿದಾರರ ಹಿತರಕ್ಷಣೆ ಹಾಗೂ ಭದ್ರತೆ, ಹೆಚ್ಚುವರಿ ಭೂಮಿಯ ಮರುಹಂಚಿಕೆ ಇವುಗಳನ್ನೊಳಗೊಂಡ ತೀವ್ರ ಸ್ವರೂಪದ ಭೂಸುಧಾರಣೆ ಜಾರಿಗೆ ತರಲು ಕಾಂಗ್ರೆಸ್ ಕಂಕಣಬದ್ಧವಾಗಬೇಕೆಂದು ಕಾಂಗ್ರೆಸ್ಸಿನೊಳಗಿನ ಸಮಾಜವಾದಿ ಶಕ್ತಿಗಳು ಒತ್ತಡ ಹೇರಲಾರಂಭಿಸಿದವು. ಗ್ರಾಮೀಣ ಪ್ರದೇಶಗಳಲ್ಲಿನ ರೈತರನ್ನು ಸಾಲದ ಹೊರೆಯಿಂದ ಋಣಮುಕ್ತರನ್ನಾಗಿಸಲು ಸರ್ಕಾರ ಸಾಲಸೌಲಭ್ಯವನ್ನು ಅವರಿಗೂ ವಿಸ್ತರಿಸಬೇಕೆಂದು ಸಮಾಜವಾದಿಗಳು ಪ್ರತಿಪಾದಿಸಿದ್ದರು.

ಆದರೆ, ಕೃಷಿ ಸುಧಾರಣೆಗಳೊಂದಿಗೆ ಕೈಗಾರಿಕಾ ಬೆಳವಣಿಗೆಯ ಗತಿವರ್ಧನೆಗೂ ಆದ್ಯತೆ ನೀಡಬೇಕೆನ್ನುವುದು ರಾಷ್ಟ್ರೀಯತಾ ವಾದಿಗಳ ಬೇಡಿಕೆಯಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿನ ಬೊಗಸೆಭರ್ತಿ ಕೆಲಸವಿಲ್ಲದ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ದೇಶದಲ್ಲಿ ಕಾರ್ಖಾನೆಗಳ ಸ್ಥಾಪನೆ ಅಗತ್ಯವಾಗಿತ್ತು. ಜೊತೆಗೆ ರಾಷ್ಟ್ರದ ಆಧುನೀಕರಣಕ್ಕೂ ಕಾರ್ಖಾನೆಗಳ ಅಗತ್ಯವಿತ್ತು. ವಿಶ್ವ ರಾಷ್ಟ್ರಗಳ ಸಮುದಾಯದಲ್ಲಿ ಸೇರಲು ಭಾರತ ಸುಶಿಕ್ಷಿತ ವಾಗಬೇಕಿತ್ತು. ಏಕತೆಯಿಂದಿರಬೇಕಾಗಿತ್ತು ಹಾಗೂ ಕೈಗಾರಿಕಾಭ್ಯುದಯ ಹೊಂದಬೇಕಾಗಿತ್ತು.

ವಸಾಹತುಶಾಹಿಯಲ್ಲಿ, ಬ್ರಿಟಿಷರ ಒಡೆತನದ ಕಾರ್ಖಾನೆಗಳು ಮತ್ತು ಭಾರತೀಯರ ಒಡೆತನದ ಕಾರ್ಖಾನೆಗಳ ನಡುವೆ ತಿಕ್ಕಾಟ, ವಿರಸ-ವೈಷಮ್ಯಗಳಿದ್ದವು. ಉದಾಹರಣೆಗೆ ಹೇಳುವುದಾದರೆ ಸೆಣಬು ಉದ್ಯಮ ವಿದೇಶೀಯರ ಸ್ವಾಮ್ಯದಲ್ಲಿತ್ತು. ಜವಳಿ ಉದ್ಯಮ ದೇಶೀಯರ ಒಡೆತನದಲ್ಲಿತ್ತು. ಬ್ರಿಟಿಷರು, ಭಾರತೀಯ ಉದ್ಯಮಿಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿಲ್ಲ, ಉದ್ದೇಶಪೂರ್ವಕವಾಗಿಯೇ ಅವರ ಧೈರ್ಯಗೆಡಿಸಲಾಗುತ್ತಿದೆ. ಅವರ ಶಕ್ತಿ ಕುಂದಿಸಲಾಗುತ್ತಿದೆ ಎನ್ನುವ ಆಪಾದನೆ ಪದೇ ಪದೆ ಕೇಳಿಬರುತ್ತಿತ್ತು. ಬ್ರಿಟಿಷ್ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡಲು ತೆರಿಗೆ ಪದ್ಧತಿ, ವಾಣಿಜ್ಯ ಪದ್ಧತಿಗಳನ್ನು ವಿಕೃತಗೊಳಿಸಿದ ಆರೋಪಗಳೂ ಕೇಳಿಬಂದಿದ್ದವು. ಭಾರತೀಯ ಬಂಡವಾಳದಾರರಲ್ಲಿ ಕೆಲವರು ಯಾವುದೇ ರಾಜಕೀಯ ಪಕ್ಷಕ್ಕೂ ಸೇರಿರಲಿಲ್ಲ. ಇನ್ನು ಕೆಲವರು ಕಾಂಗ್ರೆಸ್‌ನ ಕಟ್ಟಾಬೆಂಬಲಿಗರಾಗಿದ್ದರು. ಸ್ವಾತಂತ್ರ್ಯ ಬಂದ ಕೂಡಲೇ ಈ ತಾರತಮ್ಯಗಳು ತೊಲಗುವವು. ಇದರಿಂದ ವಿದೇಶಿ ಬಂಡವಾಳದಾರರಿಗೆ ಪ್ರತಿಕೂಲ ಪರಿಸ್ಥಿತಿ ಉಂಟಾಗುವುದೆಂದು ಕಾಂಗ್ರೆಸ್ ಬೆಂಬಲಿಗ ಉದ್ಯಮಿಗಳು ನಂಬಿದ್ದರು.

ಭಾರತ ಕೈಗಾರಿಕಾ ರಾಷ್ಟ್ರವಾಗಬೇಕಾದರೆ ಯಾವ ಮಾದರಿಯನ್ನು ಅದು ಅನುಸರಿಸಬೇಕು? ಸ್ವದೇಶಿ ಚಳವಳಿ ನಾಯಕರಿಗೆ 'ಸಾಮ್ರಾಜ್ಯಶಾಹಿ' ಮತ್ತು 'ಬಂಡವಾಳಶಾಹಿ' ಎರಡೂ ಅಸಹ್ಯ. ಜಾನ್ ಕೆನೆಥ್ ಗಾಲ್‌ಬ್ರಿತ್ ಹೇಳಿರುವಂತೆ, "ಇತ್ತೀಚಿನವರೆಗೆ ಭಾರತದಲ್ಲಿ ಬಹುಮಟ್ಟಿನ ಬಂಡವಾಳಶಾಹಿ ಉದ್ಯಮಗಳು ಸಾಮ್ರಾಜ್ಯಶಾಹಿಯ ವಿಸ್ತೃತ ಬಾಹುಗಳೇ ಆಗಿದ್ದವು; ಇವುಗಳ ಸ್ಥಾಪನೆಯ ಮೂಲೋದ್ದೇಶವೂ ಅದೇ ಆಗಿತ್ತು. ಹೀಗಾಗಿ ಏಷ್ಯಾದಲ್ಲಿ ಮುಕ್ತ ಉದ್ಯಮಶೀಲತೆ ಎನ್ನುವುದು ವಸಾಹತು ಕಳಂಕದಿಂದ ಕೂಡಿತ್ತು, ಇದೊಂದು ಸಹಿಸಲಾಗದ ಹೊರೆಯಾಗಿತ್ತು."

ಹಾಗಿದ್ದಲ್ಲಿ ಪರ್ಯಾಯ ಮಾರ್ಗಗಳೇನು? ಕೆಲವು ರಾಷ್ಟ್ರೀಯ ನಾಯಕರಿಗೆ ಸೋವಿಯತ್ ಒಕ್ಕೂಟ ಮೆಚ್ಚುಗೆಯ ಮಾದರಿ ಎನಿಸಿತು. ಜನತೆಯ ಹಸಿವು ಮತ್ತು ದಾರಿದ್ರ್ಯ ನಿವಾರಣೆಯಲ್ಲಿ ಆಧುನಿಕ ವಿಜ್ಞಾನವನ್ನು ಬಳಸಿಕೊಂಡಿದ್ದು ಸೋವಿಯತ್ ಒಕ್ಕೂಟದ ವೈಶಿಷ್ಟ್ಯವಾಗಿ ಅನೇಕರಿಗೆ ಕಂಡಿತು. ಹೀಗೆ, ಎರಡೇ ದಶಕಗಳಲ್ಲಿ ಅರೆಹೊಟ್ಟೆ ತಿಂದು ಬದುಕುತ್ತಿದ್ದ ಜನಸಮುದಾಯವನ್ನು ಹೊಟ್ಟೆ ಬಟ್ಟೆಗಳಲ್ಲಿ ಸಂತೃಪ್ತ ಕಾರ್ಮಿಕರನ್ನಾಗಿ ಪರಿವರ್ತಿಸಿದ್ದು ಸೋವಿಯತ್ ಒಕ್ಕೂಟದ ದೊಡ್ಡ ಸಾಧನೆಯಾಗಿಯೇ ಕಂಡಿತು. ರಾಷ್ಟ್ರದ ಹಿತದೃಷ್ಟಿಯಿಂದ ಲಾಭಕೋರತನ ಮರೆತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿದ್ದು, ನದಿಗಳನ್ನು ವಿದ್ಯುಚ್ಛಕ್ತಿಯ ಮೂಲಸಾಧನವನ್ನಾಗಿ ಬಳಸಿಕೊಂಡದ್ದು, ಉತ್ಪಾದನೆಯನ್ನು ಒಂಬತ್ತು ಪಟ್ಟು ಹೆಚ್ಚಿಸಿದ್ದು, ಉತ್ಪಾದನಾ ಕ್ಷೇತ್ರದಲ್ಲಿ ನಿರುದ್ಯೋಗ ಮತ್ತು ಅರಾಜಕತೆಗಳನ್ನು ನಿರ್ನಾಮಗೊಳಿಸಿದ್ದು ಇವೆಲ್ಲವೂ ಆಕರ್ಷಣೀಯವಾಗಿ ಕಂಡವು.

ಮೆಚ್ಚುಗೆಗೆ ಪಾತ್ರವಾದ ಮತ್ತೊಂದು ಮಾದರಿಯೆಂದರೆ, ಜಪಾನ್. ಮೊದಲನೆ ಮಹಾಯುದ್ಧದ ಸಮಯದಲ್ಲಿ ಜಪಾನಿಗೆ ಭೇಟಿಕೊಟ್ಟಿದ್ದ ಪ್ರಮುಖ ಕಾಂಗ್ರೆಸ್ ಅಧ್ವರ್ಯು

ಲಾಲಾ ಲಜಪತ್ ರಾಯ್ ಅಲ್ಲಿ ಆಗಿರುವ ಪರಿವರ್ತನೆ ಕಂಡು ಆಶ್ಚರ್ಯಚಕಿತರಾಗಿದ್ದರು. ಪುರಾತನ ಕೃಷಿಯಿಂದ ಹಿಡಿದು ಆಧುನಿಕ ಕೈಗಾರಿಕಾ ನಾಗರಿಕತೆವರೆಗೆ ಕೇವಲ ಐವತ್ತು ವರ್ಷಗಳಲ್ಲಿ ಜಪಾನ್ ಸಾಧಿಸಿರುವುದನ್ನು ಕಂಡು ಬೆರಗಾಗಿದ್ದರು. ಜಪಾನ್ ಕಾರ್ಖಾನೆಗಳನ್ನು ಸ್ಥಾಪಿಸಿತ್ತು, ಬ್ಯಾಂಕುಗಳನ್ನು ಸ್ಥಾಪಿಸಿತ್ತು, ವಿದೇಶಿ ಪೈಪೋಟಿ ಎದುರಿಸಲು ವಾಣಿಜ್ಯ ವ್ಯವಸ್ಥೆ ರೂಪಿಸಿತ್ತು. ರಾಷ್ಟ್ರದ ಪಾತ್ರ ಇಲ್ಲಿ ಮಹತ್ವದ್ದಿತ್ತು. "ಜಪಾನಿನ ಇಂದಿನ ಕೈಗಾರಿಕಾ ಅಭ್ಯುದಯಕ್ಕೆ ಅದರ ದೂರದೃಷ್ಟಿ, ಅದರ ವ್ಯಾವಹಾರಿಕ ವಿವೇಕ ಮತ್ತು ರಾಷ್ಟ್ರ ಭಕ್ತಿಗಳೇ ಕಾರಣ" ಎಂದು ಅವರು ಹೇಳಿದ್ದರು. ಒಂದು ಕಾಲಕ್ಕೆ ಭಾರತದಷ್ಟೇ ಹಿಂದುಳಿದಿದ್ದ ಜಪಾನ್, "ಪೌರ್ವಾತ್ಯದ ಮಹಾಮಹೋಪಾಧ್ಯಾಯನಾಗಿ ಬೆಳೆದಿದೆ. ಒಂದು ಕಾಲಕ್ಕೆ ಪಾಶ್ಚಾತ್ಯ ದೇಶಗಳಿಂದ ತರಿಸಿಕೊಳ್ಳುತ್ತಿದ್ದ ಬದುಕಿನ ಭೋಗ ಸಾಮಗ್ರಿಗಳನ್ನೆಲ್ಲ ಪೂರೈಸುವ ರಾಷ್ಟ್ರವಾಗಿ ಬೆಳೆದಿದೆ."

II

1938ರಲ್ಲೇ ಕಾಂಗ್ರೆಸ್, ಅತಿಶೀಘ್ರದಲ್ಲೇ ಸ್ವತಂತ್ರವಾಗಲಿರುವ ಭಾರತದ ಆರ್ಥಿಕ ಅಭಿವೃದ್ಧಿಗಾಗಿ ನೀತಿಯೊಂದನ್ನು ರೂಪಿಸಲು ರಾಷ್ಟ್ರೀಯ ಯೋಜನಾ ಸಮಿತಿಯನ್ನು ರಚಿಸಿತ್ತು. ಪಂಡಿತ್ ಜವಹರಲಾಲ್ ನೆಹರೂ ಅಧ್ಯಕ್ಷರಾಗಿದ್ದ ಈ ಸಮಿತಿಯಲ್ಲಿ ಮುವತ್ತು ಮಂದಿ ಸದಸ್ಯರಿದ್ದರು. ಈ ಸದಸ್ಯರುಗಳು ವಿಜ್ಞಾನ, ಕೈಗಾರಿಕೆ, ಮತ್ತು ರಾಜಕೀಯ ಕ್ಷೇತ್ರಗಳಿಗೆ ಸೇರಿದವರಾಗಿದ್ದರು. ಉಪಸಮಿತಿಗಳನ್ನು ರಚಿಸಿ, ಕೃಷಿ, ಕೈಗಾರಿಕೆ, ವಿದ್ಯುಚ್ಛಕ್ತಿ ಮತ್ತು ಇಂಧನ, ಹಣಕಾಸು, ಸಮಾಜಸೇವೆ, ಯೋಜಿತ ಅರ್ಥವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಮೊದಲಾದ ನಿರ್ದಿಷ್ಟ ವಿಷಯಗಳನ್ನು ಅವರಿಗೆ ವಹಿಸಲಾಯಿತು. ಮುಂದಿನ ಹತ್ತು ವರ್ಷಗಳಲ್ಲಿ "ರಾಷ್ಟ್ರೀಯ ಸ್ವಯಂ ಪರಿಪೂರ್ಣತೆ" ಹಾಗೂ ಜೀವನ ಮಟ್ಟ "ದ್ವಿಗುಣಗೊಳಿಸುವುದು" ಮುಖ್ಯ ಗುರಿಗಳಾಗಬೇಕೆಂದು ರಾಷ್ಟ್ರೀಯ ಯೋಜನಾ ಸಮಿತಿ ಶಿಫಾರಸು ಮಾಡಿತು. ಯೋಜನೆ ಎಂದರೆ, ಬಳಕೆದಾರರು, ಉತ್ಪಾದನೆ, ಬಂಡವಾಳ ಹೂಡುವಿಕೆ, ವರಮಾನ ವಿತರಣೆ ಮೊದಲ್ಗೊಂಡಂತೆ ರಾಷ್ಟ್ರದ ಪ್ರಾತಿನಿಧಿಕ ಸಂಸ್ಥೆಗಳು ಗೊತ್ತುಪಡಿಸುವ ಸಾಮಾಜಿಕ ಉದ್ದೇಶಗಳನ್ನು ಆಗು ಮಾಡಿಸುವ ತಾಂತ್ರಿಕ ಸಮನ್ವಯ ಕಾಯಕವೆಂದು ವಿಶದಪಡಿಸಲಾಯಿತು.

ತಡವಾಗಿ ಕೈಗಾರಿಕಾ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸರ್ಕಾರದ ಮಧ್ಯಪ್ರವೇಶವನ್ನು ಅವಲಂಬಿಸಬೇಕಾಯಿತೆಂಬ ಅಂಶವನ್ನು ಸಮಿತಿ ಗಮನಕ್ಕೆ ತೆಗೆದುಕೊಂಡಿತು. ಇದಕ್ಕೆ ಸಮಿತಿಯ ಮುಂದೆ ಜಪಾನ್ ಮತ್ತು ರಷ್ಯಾಗಳ ಉದಾಹರಣೆ ಇತ್ತು. ಎರಡು ಶತಮಾನಗಳ ವಸಾಹತುಶಾಹಿಯಿಂದ ವಿಕೃತಗೊಂಡಿರುವ ಅರ್ಥವ್ಯವಸ್ಥೆ ಹೊಂದಿರುವ ಭಾರತಕ್ಕೆ ಜಪಾನ್-ರಷ್ಯಾಗಳ ಪಾಠ ಹೆಚ್ಚಾಗಿ ಅನ್ವಯಿಸುತ್ತದೆ ಎಂಬುದನ್ನು ಸಮಿತಿ ಮನಗಂಡಿತ್ತು. 'ಲಾಭಕ್ಕಲ್ಲ, ಸೇವೆಗೆ ಮೊದಲ ಆದ್ಯತೆ' ಎನ್ನುವ ತತ್ವವನ್ನು ಯೋಜಿತ ಅಭಿವೃದ್ಧಿ

ಎತ್ತಿಹಿಡಿಯಬೇಕಾಗಿದೆಯೆಂಬುದನ್ನು ಸಮಿತಿಯೊಂದು ಮುಖ್ಯವಾಗಿ ಪ್ರಸ್ತಾಪಿಸಿತ್ತು. ಖಾಸಗಿ ಕ್ಷೇತ್ರವನ್ನು ನಂಬಲಾಗದಂಥ ವ್ಯಾಪಕ ವಲಯಗಳು ಅರ್ಥವ್ಯವಸ್ಥೆಯಲ್ಲಿವೆ. ಇಲ್ಲಿ ಸಾಮುದಾಯಿಕ ಸರ್ಕಾರಿ ಉದ್ಯಮದ ನಿರ್ವಹಣೆಯಿಂದ ಮಾತ್ರ ಯೋಜನೆಯ ಗುರಿಯನ್ನು ತಲುಪುವುದು ಸಾಧ್ಯವಾಯಿತು ಎಂದು ಸಮಿತಿ ತನ್ನ ವರದಿಯಲ್ಲಿ ತಿಳಿಸಿತ್ತು.

ವಿಶೇಷವೆಂದರೆ, ಖಾಸಗಿಕ್ಷೇತ್ರ ಇದನ್ನು ಒಪ್ಪಿಕೊಂಡಿತು ಎನ್ನುವುದು. 1944ರಲ್ಲಿ ಪ್ರಮುಖ ಕೈಗಾರಿಕೋದ್ಯಮಿಗಳು "ಭಾರತದ ಆರ್ಥಿಕ ಅಭಿವೃದ್ಧಿಗೆ ಒಂದು ಯೋಜನೆ" ಎಂಬ ದಸ್ತಾವೇಜೊಂದನ್ನು ಪ್ರಕಟಿಸಿದರು. ಇದು ಮುಂಬಯಿ ಯೋಜನೆ ಎಂದೇ ಪ್ರಸಿದ್ಧಿ ಪಡೆಯಿತು. "ಈಗಿರುವ, ಖಾಸಗಿ ಉದ್ಯಮ ಮತ್ತು ಬಂಡವಾಳ ಆಧಾರಿತ ಅರ್ಥವ್ಯವಸ್ಥೆ ರಾಷ್ಟ್ರೀಯ ವರಮಾನದ ತೃಪ್ತಿಕರ ವಿತರಣೆಯಲ್ಲಿ ವಿಫಲಗೊಂಡಿದೆ" ಎಂಬುದನ್ನು ಈ ಕೈಗಾರಿಕೋದ್ಯಮಿಗಳು ಒಪ್ಪಿದ್ದರು. ಸರ್ಕಾರದಿಂದ ಮಾತ್ರ ವರಮಾನದಲ್ಲಿನ ಅಸಮತೆಯನ್ನು ಅಳಿಸಿಹಾಕಲು ಸಾಧ್ಯ ಎಂದು ಇವರು ಸ್ಪಷ್ಟಪಡಿಸಿದ್ದರು. ಆದರೆ ಉತ್ಪಾದನೆ ವರ್ಧನೆಗೆ ಸರ್ಕಾರದ ನೆರವು ಅತ್ಯಗತ್ಯ. ವಿದ್ಯುಚ್ಛಕ್ತಿ, ಮೂಲಭೂತ ಸೌಕರ್ಯಗಳು, ಸಾರಿಗೆ ಮೊದಲಾದ ಕ್ಷೇತ್ರಗಳಲ್ಲಿ ಸರ್ಕಾರದ ಏಕಸ್ವಾಮ್ಯತೆ ಅಗತ್ಯವಾಗಿದೆ ಎಂಬುದು ಭಾರತದ ಬಂಡವಾಳದಾರರ ಅಭಿಪ್ರಾಯವಾಗಿತ್ತು. ಕೈಗಾರೀಕರಣದ ಪ್ರಾರಂಭಿಕ ಹಂತದಲ್ಲಿ ಸಮುದಾಯದ ಹಿತದೃಷ್ಟಿಯಿಂದ ಸರ್ಕಾರ ಕೆಲವೊಂದು ಹಸ್ತಕ್ಷೇಪ ಮತ್ತು ಹತೋಟಿಗಳನ್ನು ಹೊಂದಿರಬೇಕು. ವಾಸ್ತವವಾಗಿ, ಬೃಹತ್ ಪ್ರಮಾಣದ ಆರ್ಥಿಕ ಯೋಜನೆಗಳಲ್ಲಿ ಸರ್ಕಾರ ಇತ್ಯಾತ್ಮಕವಾದ ಹಾಗೂ ಪ್ರತಿಬಂಧಾತ್ಮಕವಾದ ಕ್ರಮಗಳನ್ನು, ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ ಎಂಬುದು ಬಂಡವಾಳದಾರರ ನಿಲುವಾಗಿತ್ತು.

ಜವಹರಲಾಲ್ ನೆಹರೂ ಅವರೇ ಕೇಂದ್ರೀಕೃತ ಆರ್ಥಿಕ ಅಭಿವೃದ್ಧಿಯ ಯೋಜನೆಯೊಂದನ್ನು ಒಲ್ಲದ ಬಂಡವಾಳಶಾಹಿಗಳ ಮೇಲೆ ಹೇರಿದ್ದರೆಂಬ ಮಾತನ್ನು ಈಗ ಮರೆಯಲಾಗಿರುವ ಮುಂಬಯಿ ಯೋಜನೆ ಸುಳ್ಳಾಗಿಸಿದೆ. ಮುಕ್ತ ಪೇಟೆಯ ಪಂಡಿತರು ಈ ಬಗ್ಗೆ ಈಗ ಏನೆನ್ನುತ್ತಾರೆ ಎಂಬುದು ವಿಸ್ಮಯದ ಸಂಗತಿಯೇ ಆದೀತು. ಬಹುಶಃ ಮುಂಬಯಿ ಯೋಜನೆಯನ್ನು ನಿಯಂತ್ರಣ ನೀತಿ, ಬಂಡವಾಳ ಮತ್ತು ಬಂಡವಾಳ ಹೂಡಿಕೆದಾರರಿಗೆ ಯೋಗ್ಯವಲ್ಲದ್ದು ಎಂದು ಭಾವಿಸಬಹುದು. ಸತ್ಯವಾಗಿ ಹೇಳುವುದಾದರೆ ಅದು ಯುಗಧರ್ಮದ, ಆ ಕಾಲದ ಮನೋಧರ್ಮದ ಸೂಚಿಯಾಗಿತ್ತು ಎನ್ನಬಹುದು.

ಕೇಂದ್ರೀಕೃತ ಯೋಜನೆಗೆ ಆ ಕಾಲದ ಮನೋಧರ್ಮ ಅನುಕೂಲಕರವಾಗಿತ್ತು. ಅರ್ಥವ್ಯವಸ್ಥೆಯಲ್ಲಿ ಸರ್ಕಾರ ಆಜ್ಞೆ ಮಾಡುವ ಉನ್ನತ ಸ್ಥಾನದಲ್ಲಿರಬೇಕು ಎಂಬುದು ಆಗಿನ ಮನೋಭಾವವಾಗಿತ್ತು. ಆ ಕಾಲದ ಚಿಂತನೆಯಾಗಿತ್ತು. ಹೀಗಾಗಿ, ಸಮುದಾಯದ ಭೌತಿಕ ಸಂಪನ್ಮೂಲಗಳು ಎಲ್ಲರ ಒಳಿತಿಗಾಗಿ ವಿತರಣೆಯಾಗುವಂತೆ ಅವರ ಮಾಲೀಕತ್ವ ಮತ್ತು ನಿಯಂತ್ರಣಗಳನ್ನು ಖಾತ್ರಿಗೊಳಿಸಬೇಕೆಂದು ಭಾರತದ ಸಂವಿಧಾನ ಸರ್ಕಾರಕ್ಕೆ ಆದೇಶ ನೀಡಿತು. ಹಾಗೂ ಈ ಆರ್ಥಿಕ ನಿರ್ವಹಣೆಯಿಂದ ಸಂಪತ್ತು ಕೆಲವೇ ಜನರ ಕೈಯ್ಯಲ್ಲಿ

ಕ್ರೋಢೀಕರಣಗೊಂಡು ಶ್ರೀ ಸಾಮಾನ್ಯರು ಪರದಾಡುವಂತಾಗದಂತೆ ನೋಡಿಕೊಳ್ಳಬೇಕೆಂದೂ ಸಂವಿಧಾನ ಸ್ಪಷ್ಟಪಡಿಸಿತ್ತು. ಸಂವಿಧಾನದ ಅಂಗೀಕಾರವಾದ ಒಂದು ತಿಂಗಳೊಳಗಾಗಿಯೇ, ಈ ನಿರ್ದೇಶನ ತತ್ವಗಳನ್ನು ಜಾರಿಗೆ ತರಲು ಯೋಜನಾ ಆಯೋಗವೊಂದನ್ನು ರಚಿಸಿತು. ನೆಹರೂ ಅವರ ಅಧ್ಯಕ್ಷತೆಯಲ್ಲಿದ್ದ ಯೋಜನಾ ಆಯೋಗದಲ್ಲಿ, ಕೇಂದ್ರ ಮಂತ್ರಿಮಂಡಲದ ಸಚಿವರೂ ಐ.ಸಿ.ಎಸ್‌ನ ಅನುಭವೀ ಅಧಿಕಾರಿಗಳೂ ಸದಸ್ಯರಾಗಿದ್ದರು.

1951ರ ಬೇಸಿಗೆಯಲ್ಲಿ ಯೋಜನಾ ಆಯೋಗ ಮೊದಲನೆ ಪಂಚವಾರ್ಷಿಕ ಯೋಜನೆಯ ಕರಡನ್ನು ಪ್ರಕಟಿಸಿತು. ಇದರಲ್ಲಿ, ವಿಭಜನೆಯಿಂದ ತೀವ್ರ ಹಾನಿಗೊಳಗಾಗಿದ್ದ ಕೃಷಿಗೆ ಮಹತ್ವ ನೀಡಲಾಗಿತ್ತು. ಆಹಾರ ಉತ್ಪಾದನೆ ಏರಿಕೆಯೊಂದಿಗೆ, ಸಾರಿಗೆ ಮತ್ತು ಸಂಪರ್ಕ, ಸಾಮಾಜಿಕ ಸೇವೆಗಳಿಗೆ ಇದರಲ್ಲಿ ಆದ್ಯತೆ ನೀಡಲಾಗಿತ್ತು. ಯೋಜನಾ ಆಯೋಗದ ಸಲಹೆಗಳನ್ನು ಸಂಸತ್ತಿನಲ್ಲಿ ಮಂಡಿಸಿದ ನೆಹರೂ "ಕೃಷಿ, ಕೈಗಾರಿಕೆ, ಆರ್ಥಿಕತೆ ಮೊದಲಾದ ಸಾಮಾಜಿಕ ಕ್ಷೇತ್ರಗಳನ್ನೊಳಗೊಂಡ ಇಡೀ ಭಾರತವನ್ನು ಒಂದೇ ಚಿಂತನೆಯ ಚೌಕಟ್ಟಿನೊಳಗೆ ಒಂದುಗೂಡಿಸುವ ಪ್ರಯತ್ನವನ್ನು" ಇದೇ ಪ್ರಪ್ರಥಮವೆಂದು ಕೊಂಡಾಡಿದರು. ಯೋಜನಾ ಆಯೋಗದ ಕೆಲಸ ಇಡೀ ರಾಷ್ಟ್ರವನ್ನು ಯೋಜನಾಮಗ್ನವನ್ನಾಗಿಸಿದೆ ಎಂದು ಹೇಳಿದರು.

ಯೋಜನಾ ಆಯೋಗದ ನಿರೀಕ್ಷೆಗಳು ವಿಪರೀತವಾಗಿದ್ದವು. ಅಂಕಣಕಾರರೊಬ್ಬರು ಬರೆದಂತೆ:

> *"ಪ್ರಜಾಪ್ರಭುತ್ವದ ಒಂದು ನ್ಯೂನತೆಯೆಂದರೆ ಅದು ಬೇರೆ ಎಲ್ಲ ರಾಜಕೀಯ ವ್ಯವಸ್ಥೆಗಳಿಗಿಂತ ವಿಳಂಬಗತಿಯಲ್ಲಿ ಕೆಲಸ ಮಾಡುತ್ತದೆ. ಆದರೆ ಆರ್ಥಿಕ ಮುನ್ನಡೆಯಲ್ಲಿ ವಿಳಂಬಗತಿಯನ್ನು ಸಹಿಸುವಷ್ಟು ತಾಳ್ಮೆ ಭಾರತೀಯರಿಗಿಲ್ಲ."*

ಮೊದಲನೆಯ ಸಾರ್ವತ್ರಿಕ ಚುನಾವಣೆಯ ನಂತರ ಆರ್ಥಿಕ ಮುನ್ನಡೆಯನ್ನು ತ್ವರಿತಗೊಳಿಸಲಾಯಿತು. ದೂರದೃಷ್ಟಿಯೂ ಇಲ್ಲ, ಮಹತ್ವಾಕಾಂಕ್ಷೆಯೂ ಇಲ್ಲ ಎಂದು ಬಲ-ಎಡಗಳ ವಿಮರ್ಶಕರು, ಟೀಕಾಕಾರರು ತರಾಟೆಗೆ ತೆಗೆದುಕೊಂಡರು. ಆಹಾರ ಧಾನ್ಯಗಳ ಉತ್ಪಾದನೆ, ಈ ಅವಧಿಯಲ್ಲಿ ಹೆಚ್ಚಿತೆಂಬುದು ನಿಜವಾದರೂ ಉಳಿದ ಕ್ಷೇತ್ರಗಳಲ್ಲಿ ಗುರಿಮುಟ್ಟಲಾಗಿರಲಿಲ್ಲ.

ಮೊದಲನೆ ಪಂಚವಾರ್ಷಿಕ ಯೋಜನೆಯನ್ನು ಮಂಡಿಸಿದ ನೆಹರೂ, "ಕೈಗಾರಿಕೆಯನ್ನು ಭಾರತದೊಳಕ್ಕೆ ತರಬೇಕಾಗಿದೆ, ಭಾರತಕ್ಕೆ ಪರಿಚಯಿಸಬೇಕಾಗಿದೆ, ಇದನ್ನು ಆದಷ್ಟು ತ್ವರಿತಗತಿಯಲ್ಲಿ ಮಾಡಬೇಕು" ಎಂದು ಹೇಳಿದ್ದರು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಮಹತ್ವ ನೀಡಲಾಯಿತು. ಪ್ರಶಾಂತಚಂದ್ರ ಮಹಲಾನೋಬಿಸ್ ಎರಡನೇ ಪಂಚವಾರ್ಷಿಕ ಯೋಜನೆಯ ಕರಡು ರಚನಾಕಾರರಾಗಿದ್ದರು. ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಭೌತಶಾಸ್ತ್ರಜ್ಞರಾಗಿದ್ದ ಮಹಲಾನೋಬಿಸ್ ಸಂಸ್ಕೃತ, ತತ್ವಶಾಸ್ತ್ರ, ಸಾಹಿತ್ಯದಲ್ಲಿ, ಬಂಗಾಳಿ

ಸಾಹಿತ್ಯದಲ್ಲಿ ನಿಷ್ಣಾತರಾಗಿದ್ದರು. ಮೊತ್ತದಲ್ಲಿ ಹೇಳುವುದಾದರೆ ಮಹಲಾನೋಬಿಸ್ ಬಹುಭಾಷಾ ಪಂಡಿತರಾಗಿದ್ದು, ನೆಹರೂ ಬಯಸಿದಂಥ ವ್ಯಕ್ತಿಯಾಗಿದ್ದರು. ನೆಹರೂ ನಿಶ್ಚಯವಾಗಿ ಅವರಿಗೆ ಮಾರುಹೋಗಿದ್ದರು.

ಮಹಲಾನೋಬಿಸ್ ಇನ್ನೂ ಅನೇಕ ವಿಷಯಗಳಂತೆಯೇ ಆಧುನಿಕ ಅಂಕಿಅಂಶ ಶಾಸ್ತ್ರವನ್ನು ಭಾರತಕ್ಕೆ ಪರಿಚಯಿಸಿದವರು. 1931ರಲ್ಲಿ ಅವರು ಕಲ್ಕತ್ತೆಯಲ್ಲಿ ಭಾರತೀಯ ಅಂಕಿಅಂಶ ಶಾಸ್ತ್ರ ಅಧ್ಯಯನ ಸಂಸ್ಥೆಯನ್ನು (ಐಎಸ್ಐ-ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್‌ಟಿಟ್ಯೂಟ್) ಸ್ಥಾಪಿಸಿದರು. ಒಂದೇ ದಶಕದಲ್ಲಿ ಅವರು ಈ ಸಂಸ್ಥೆಯನ್ನು ವಿಶ್ವಮಟ್ಟದ ತರಬೇತಿ ಮತ್ತು ಸಂಶೋಧನಾ ಕೇಂದ್ರವಾಗಿ ಬೆಳೆಸಿದರು. ಮಹಲಾನೋಬಿಸ್ ಅಂತರರಾಷ್ಟ್ರೀಯ ಸಂಶೋಧನೆಯ ಪ್ರವರ್ತಕರು. ಅವರು ಮಾನವಶಾಸ್ತ್ರ, ಕೃಷಿ ವಿಜ್ಞಾನ, ಪವನಶಾಸ್ತ್ರಗಳ ಕ್ಷೇತ್ರದಲ್ಲಿ ಅಂಕಿಅಂಶ ಶಾಸ್ತ್ರದ ತಂತ್ರಗಳನ್ನು ಅನ್ವಯಿಸಿ ಹೊಸ ಪ್ರಯೋಗಗಳನ್ನು ಮಾಡಿದರು.

1949ರ ಫೆಬ್ರುವರಿಯಲ್ಲಿ ಮಹಲಾನೋಬಿಸ್ ಅವರನ್ನು ಕೇಂದ್ರ ಸಂಪುಟದ ಅಂಕಿಅಂಶ ಶಾಸ್ತ್ರ ಸಲಹೆಗಾರರನ್ನಾಗಿ ನೇಮಿಸಲಾಯಿತು. ಇದರ ಮುಂದಿನ ವರ್ಷವೇ ಅವರು ನ್ಯಾಷನಲ್ ಸ್ಯಾಂಪಲ್ ಸರ್ವೆ ಸಂಸ್ಥೆಯನ್ನು ಸ್ಥಾಪಿಸಿದರು. ಇದರ ಮರುವರ್ಷ ಸೆಂಟ್ರಲ್ ಸ್ಟ್ಯಾಟಿಸ್ಟಿಕಲ್ ಆರ್ಗನೈಸೇಷನ್ ಎಂಬ ಸಂಸ್ಥೆ ಸ್ಥಾಪಿಸಿದರು. ಉದ್ಯೋಗ, ವೇತನ, ಬಳಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಬದಲಾಗುತ್ತಿರುವ ಜೀವನ ಗುಣಮಟ್ಟದ ಬಗ್ಗೆ ನಂಬಲರ್ಹವಾದ ಅಂಕಿಅಂಶ ಸಂಗ್ರಹಿಸುವುದು ಈ ಸಂಸ್ಥೆಗಳ ಕೆಲಸ. ಈ ಸಂಸ್ಥೆಗಳ ಸ್ಥಾಪನೆಯ ಮುಖ್ಯ ಉದ್ದೇಶವೆಂದರೆ ಪಶ್ಚಿಮೇತರ ಪ್ರಪಂಚದಿಂದ ಬರುವ ಅಂಕಿಅಂಶಗಳಿಗಿಂತ ಹೆಚ್ಚು ನಂಬಲರ್ಹವಾದ ಅಧಿಕೃತ ಅಂಕಿಅಂಶಗಳನ್ನು ಪಡೆಯುವುದೇ ಆಗಿತ್ತು.

ಇದು ಮಹಲಾನೋಬಿಸ್ ಅವರ ಪ್ರಶ್ನಾತೀತ ಪರಂಪರೆ. ಆದರೆ ತುಂಬ ಮುಖ್ಯವಾದದ್ದು ಹಾಗೂ ತುಂಬ ವಿವಾದಾತ್ಮಕವಾದುದೆಂದರೆ ಯೋಜನೆಯ ತತ್ವಸಿದ್ಧಾಂತ ಹಾಗೂ ಅದರ ಕಾರ್ಯಾನುಷ್ಠಾನಕ್ಕೆ ಸಂಬಂಧಿಸಿದಂತೆ ಅವರು ನೀಡಿದ ಕೊಡುಗೆ. 1954ರಲ್ಲಿ ನೆಹರೂ ಅವರು "ಸಮಾಜವಾದಿ ಮಾದರಿಯ ಸಮಾಜ" ನಿರ್ಮಾಣಕ್ಕೆ ಬದ್ಧವಾಗಿರಬೇಕೆಂದು ತಮ್ಮ ಪಕ್ಷಕ್ಕೆ ಹಾಗೂ ದೇಶಕ್ಕೆ ತಿಳಿಸಿದ್ದರು. ಅದೇ ವರ್ಷ ನಿರುದ್ಯೋಗ ಸಮಸ್ಯೆ ಕುರಿತು ಒಂದು ಅಧ್ಯಯನ ನಡೆಸುವಂತೆ ಐಎಸ್ಐಗೆ ಸರ್ಕಾರ ಆದೇಶಿಸಿತು. ಮಹಲಾನೋಬಿಸ್ ಅವರು ಈ ವಿಷಯದ ಬಗ್ಗೆ ಒಂದು ಟಿಪ್ಪಣಿ ಬರೆದರು. ಇದರಿಂದ ಪ್ರಭಾವಿತರಾದ ನೆಹರೂ ಎರಡನೆ ಪಂಚವಾರ್ಷಿಕ ಯೋಜನೆಯ ಕರಡನ್ನು ರೂಪಿಸುವ ಹೊಣೆಯನ್ನು ಐಎಸ್ಐಗೆ ವಹಿಸಿದರು.

ಮಹಲಾನೋಬಿಸ್ ಈ ಕೆಲಸವನ್ನು ಗಂಭೀರವಾಗಿ ತೆಗೆದುಕೊಂಡರು. 1954ರ ಬೇಸಿಗೆಯಲ್ಲಿ ಅವರು ಯೂರೋಪ್ ಮತ್ತು ಉತ್ತರ ಅಮೆರಿಕ ಪ್ರವಾಸ ಕೈಗೊಂಡರು.

ಆಗ ತಮ್ಮಲ್ಲಿ ಆರ್ಥಿಕ ವಿಷಯಗಳ ಬಗ್ಗೆ ಕೀಳರಿಮೆ ಇತ್ತೆಂದು ಅವರೇ ಒಪ್ಪಿಕೊಂಡಿದ್ದಾರೆ. ಹೀಗಾಗಿ ಈ ಪ್ರವಾಸ ಒಂದು ರೀತಿಯಲ್ಲಿ ತಮ್ಮ ವಿಷಯಜ್ಞಾನ ಹೆಚ್ಚಿಸಿಕೊಳ್ಳಲು ಶೈಕ್ಷಣಿಕವಾಗಿದ್ದರೆ, ಇನ್ನೊಂದು ರೀತಿಯ ಪ್ರಚಾರದ ಪ್ರವಾಸವಾಗಿತ್ತು. ವಿದೇಶಿ ಅರ್ಥಶಾಸ್ತ್ರಜ್ಞರನ್ನು ಅರಿತು, ರೂಢಿಸಿಕೊಳ್ಳುವ ಮೂಲಕ ಭಾರತದ ಅರ್ಥಶಾಸ್ತ್ರಜ್ಞರನ್ನು ತಮ್ಮ ಅಭಿಪ್ರಾಯಗಳಿಗೆ ಒಲಿಸಿಕೊಳ್ಳುವುದು ಅವರ ಅಪೇಕ್ಷೆಯಾಗಿತ್ತು. "ನನ್ನ ಮನಸ್ಸಿನೊಳಗಿರುವ ಎಲ್ಲ ಚಿಂತನೆ-ಆಲೋಚನೆಗಳ ಹಿಂದೆ ಅಡಗಿರುವ ಏಕೈಕ ಸಂಗತಿಯೆಂದರೆ ನಮ್ಮ ಯೋಜನೆಗಳನ್ನು ರೂಪಿಸುವುದರಲ್ಲಿ ಹಾಗೂ ಅವರುಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಎಷ್ಟು ಪರಿಣಾಮಕಾರಿಯಾದ ನೆರವು ಪಡೆಯಬಹುದು ಎಂಬುದೇ ಆಗಿದೆ" ಎಂದು ಅವರು ತಮ್ಮ ಮಿತ್ರರೊಬ್ಬರ ಬಳಿ ಹೇಳಿದ್ದುಂಟು.

ಮಹಲಾನೋಬಿಸ್ ಅವರು ಮೊದಲು ಅಮೆರಿಕಕ್ಕೆ ಹೋದರು. ಅಲ್ಲಿ ಅವರು ಯೋಜನೆ ಮತ್ತು ಉತ್ಪಾದನಗಳ ಸಹಕರ್ತೃತ್ವ ಮತ್ತು ಗುಣಾಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿದರು. ಕೇಂಬ್ರಿಜ್‌ನಲ್ಲಿ ಮಹಾ ಮಹಾ ಪಂಡಿತರನ್ನು ಭೇಟಿ ಮಾಡುವ ಮೊದಲು ಅವರು ಈ ವಿಷಯ ತಜ್ಞರ ಜೊತೆ ಚರ್ಚಿಸಿದರು. (ಈ ತಜ್ಞರ ಹೆಸರು ವಾಸ್ಸಿಲಿ ಲಿಯೋನ್‌ಟಿಫ್. ಮುಂದೆ ಈತನಿಗೆ ನೊಬೆಲ್ ಪ್ರಶಸ್ತಿ ಬಂತು.) ಅವರು ಭೇಟಿ ಮಾಡಿದವರಲ್ಲಿ ಅತಿ ಬುದ್ಧಿಶಾಲಿಯಾಗಿದ್ದವಳು ಜೋನಾ ರಾಬಿನ್ಸನ್. ಈಕೆ ಅದೇ ತಾನೆ ಚೈನ ಪ್ರವಾಸ ಮುಗಿಸಿ ಬಂದಿದ್ದಳು. ಭಾರತದಲ್ಲಿ ಆಮದು-ರಫ್ತುವಲಯದ ಮೇಲೆ ಹೆಚ್ಚಿನ ಸರ್ಕಾರಿ ನಿಯಂತ್ರಣ ಅಗತ್ಯವೆಂದು ಈಕೆಯ ಅನ್ನಿಸಿಕೆಯಾಗಿತ್ತು. ಮಹಲಾನೋಬಿಸ್ ಇದನ್ನು ಒಪ್ಪಿಕೊಂಡರು. ಹಾಗೂ ಐಎಸ್‌ಐ ಅತಿಥಿಯಾಗಿ ಭಾರತಕ್ಕೆ ಭೇಟಿ ನೀಡುವಂತೆ ಜೋನ್ ರಾಬಿನ್ಸನ್ನಳಿಗೆ ಆಮಂತ್ರಣವಿತ್ತರು. ಇಂಥ ಭೇಟಿಯಿಂದ, ಅಭಿವೃದ್ಧಿ ಕುರಿತು ನಮ್ಮ ಯೋಜನೆಗಳು ಮುರ್ಖತನದ್ದಲ್ಲ ಎಂಬುದರ ಬಗ್ಗೆ ಆಕೆಯ ಬೆಂಬಲದಿಂದ ನಿಶ್ಚಿತ ಅಭಿಪ್ರಾಯ ಮೂಡಿಸಬಹುದೆಂಬುದು ಅವರ ಅನ್ನಿಸಿಕೆಯಾಗಿತ್ತು. ಇದನ್ನು ಅವರು ರಾಬಿನ್ಸನ್ನಳಿಗೆ ಹೇಳಿದರು. ಅದಕ್ಕೆ ಆಕೆಯ ಪ್ರತಿಕ್ರಿಯೆ ಇದಾಗಿತ್ತು: "ಹೌದು ನಿಮ್ಮ ದೇಶದ ಅರ್ಥಶಾಸ್ತ್ರಜ್ಞರ ತಲೆಯಲ್ಲಿ ಸ್ವಲ್ಪ ಬುದ್ಧಿ ತುಂಬುವುದು ನನ್ನಿಂದ ಸಾಧ್ಯವಾಗಬಹುದು."

ಇದಾದ ನಂತರ ಮಹಲಾನೋಬಿಸ್ ಕಡಲ್ಗಾಲುವೆ ದಾಟಿ ಫ್ರಾನ್ಸ್‌ಗೆ ಭೇಟಿಕೊಟ್ಟರು. ಫ್ರೆಂಚ್ ಮಾರ್ಕ್ಸ್‌ವಾದಿಗಳೊಂದಿಗೆ ಸಂವಾದ ನಡೆಸಿದರು. ಅಲ್ಲಿಂದ ಪ್ರಾಗ್ ಮೂಲಕ ಮಾಸ್ಕೋ ತಲುಪಿದರು. ಅಲ್ಲಿನ ಕಟ್ಟಡ ನಿರ್ಮಾಣ ಚಟುವಟಿಕೆ ಕಂಡು ಮೂಕವಿಸ್ಮಿತರಾದರು. ಭವ್ಯ ಕಟ್ಟಡಗಳು; ಅವುಗಳ ನಿರ್ಮಾಣದ ಗತಿಯೋ ತ್ವರಿತವಾಗಿತ್ತು. ತಾವು ಕಂಡರಿಯದಷ್ಟು ವೇಗದ ಗತಿಯಲ್ಲಿ ನಿರ್ಮಾಣ ಕಾರ್ಯ ನಡೆದಿತ್ತು. ಅಲ್ಲಿನ ತಜ್ಞರೊಂದಿಗೆ, ಶಾಸ್ತ್ರಜ್ಞರೊಂದಿಗೆ ಸುದೀರ್ಘ ಮಾತುಕತೆ ನಡೆಸಿದರು. ಇವರೆಲ್ಲ ಹೇಳಿದ್ದು: "ಭಾರತ ಗಂಭೀರವಾಗಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಇಚ್ಛೆ ಹೊಂದಿದ್ದಲ್ಲಿ ಅದಕ್ಕೆ ಹಲವರಲ್ಲ ನೂರಾರು ಮಂದಿ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಎಂಜಿನಿಯರುಗಳ ಸಕ್ರಿಯ ಸಹಾಯ-ಸಹಕಾರ

ಬೇಕಾಗುತ್ತದೆ." ಮಹಲಾನೋಬಿಸ್ ಅವರಿಗೆ ಈ ಮಾತು ಸರಿದೋರಿತು. "ಯೋಜನೆಯ ಅರ್ಥವ್ಯವಸ್ಥೆಯಲ್ಲಿ ತಜ್ಞರು, ಪರಿಣತರುಗಳ ತುರ್ತು ಅಗತ್ಯ ಕಂಡುಬಂದಿರುವ ತಮ್ಮ ದೇಶಕ್ಕೆ ಭೇಟಿಕೊಡುವಂತೆ" ಅವರನ್ನು ಆಹ್ವಾನಿಸಿದರು.

ಈ ಎಲ್ಲ ಪ್ರವಾಸಗಳು ಫಲಪ್ರದವಾದವು. 1954ರ ಮಾರ್ಚ್ ತಿಂಗಳಿನಲ್ಲಿ ಮಹಲಾನೋಬಿಸ್ ಯೋಜನಾ ಆಯೋಗದ ಮುಂದೆ ಮಂಡಿಸಿದ ಪ್ರಬಂಧದಲ್ಲಿ ಇದು ಸುವ್ಯಕ್ತವಾಗಿತ್ತು. ಇದರಲ್ಲಿ ಮಹಲಾನೋಬಿಸ್ ಎರಡನೆ ಪಂಚವಾರ್ಷಿಕ ಯೋಜನೆಯ ಎಂಟು ಮುಖ್ಯ ಉದ್ದೇಶಗಳನ್ನು ನಿರೂಪಿಸಿದ್ದರು. ಇದರಲ್ಲಿ ಮೊದಲನೆಯದು: "ಸರ್ಕಾರಿ ಕ್ಷೇತ್ರದ ಕಾರ್ಯವ್ಯಾಪ್ತಿ ಮತ್ತು ಮಹತ್ವವನ್ನು ಹೆಚ್ಚಿಸುವುದರ ಮೂಲಕ ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ತ್ವರಿತಗತಿಯ ಪ್ರಗತಿ ಸಾಧಿಸಬೇಕು, ಹೀಗೆ ಸಮಾಜವಾದಿ ಮಾದರಿಯ ಸಮಾಜ ಸ್ಥಾಪನೆಯ ನಿಟ್ಟಿನಲ್ಲಿ ಮುನ್ನಡೆಯಬೇಕು." ಎರಡನೆಯದು: "ಆರ್ಥಿಕ ಸ್ವಾತಂತ್ರ್ಯದ ಬುನಾದಿಯನ್ನು ಬಲಗೊಳಿಸಲು ಉತ್ಪಾದಕ ಸಾಮಗ್ರಿಗಳನ್ನು ತಯಾರಿಸುವುದಕ್ಕಾಗಿ ಭಾರಿ ಕೈಗಾರಿಕೆಗಳನ್ನು ಬೆಳೆಸಬೇಕು." ಗ್ರಾಹಕರ ಸರಕು-ಸಾಮಗ್ರಿಗಳ ಉತ್ಪಾದನೆ, ಕೃಷಿ ಉತ್ಪಾದನೆಯಲ್ಲಿ ಏರಿಕೆ, ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸುವುದು ಇವೇ ಮೊದಲಾದವು ಉಳಿದ ಉದ್ದೇಶಗಳಾಗಿದ್ದವು.

ಮೂಲ ವಸ್ತುಗಳ ಉತ್ಪಾದನೆಗೆ ಹೆಚ್ಚಿನ ಮಹತ್ವ ನೀಡಿರುವುದಕ್ಕೆ ಎರಡು ತಾತ್ವಿಕ ಸಮರ್ಥನೆಗಳನ್ನು ಒದಗಿಸಿದ್ದರು. ಮೊದಲನೆಯದಾಗಿ ಇದರಿಂದ ಹಿಂದಿನ ವಸಾಹತುವಾದ ಈ ದೇಶದ ಅರ್ಥವ್ಯವಸ್ಥೆ ಸುರಕ್ಷಿತವಾಗುವುದು. ಇದರಿಂದಾಗಿ ರಾಜಕೀಯ ವ್ಯವಸ್ಥೆ, ಸ್ವಾತಂತ್ರ್ಯಗಳು ಸುರಕ್ಷಿತವಾಗುವುವು. ಎರಡನೆಯದಾಗಿ ಇದು ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸಹಾಯಕವಾಗುತ್ತದೆ. "ಮೂಲವಸ್ತುಗಳ ಅಭಾವದಿಂದಾಗಿ ನಿರುದ್ಯೋಗ ಸಮಸ್ಯೆ ಉಲ್ಬಣಿಸುತ್ತಿದೆ, ಉತ್ಪಾದನಾ ಸಾಧನ ಸಲಕರಣೆಗಳು, ಉತ್ಪಾದನಾ ಕ್ಷೇತ್ರ ಕೆಲಸವಿಲ್ಲದೆ ನಿಷ್ಕ್ರಿಯವಾದಾಗ ಹೀಗಾಗುತ್ತದೆ" ಎನ್ನುವುದು ಮಹಲಾನೋಬಿಸ್ ವಾದವಾಗಿತ್ತು. ಅಣೆಕಟ್ಟುಗಳು ಮತ್ತು ಕಾರ್ಖಾನೆಗಳ ನಿರ್ಮಾಣ ಉದ್ಯೋಗ ಸೃಷ್ಟಿಯ ಸುಲಭ ಮಾರ್ಗ.

ಮಹಲಾನೋಬಿಸ್ ಅವರ ಕರಡು ಯೋಜನೆಯನ್ನು ಆರ್ಥಿಕ ತಜ್ಞರ ತಂಡವೊಂದಕ್ಕೆ ಸಲ್ಲಿಸಲಾಯಿತು. ಒಬ್ಬರು ಹೊರತಾಗಿ, ಉಳಿದೆಲ್ಲ ತಜ್ಞರೂ ಮೂಲವಸ್ತುಗಳ ಉತ್ಪಾದನೆಯ ಮಹತ್ವ ಹಾಗೂ ಸರ್ಕಾರಿ ಕ್ಷೇತ್ರದ ಪಾತ್ರ ಕುರಿತು ಅನುಮೋದನೆ ವ್ಯಕ್ತಪಡಿಸಿದರು. ಖಾತ್ರಿಪಡಿಸಿಕೊಳ್ಳಲು ಕೆಲವೊಂದು ತಕರಾರುಗಳನ್ನೂ ಎತ್ತಿದರು. ಕೃಷಿ ಮತ್ತು ಕೈಗಾರಿಕಾ ಉತ್ಪಾದನೆ ಪರಸ್ಪರ ಪೂರಕವಾಗಿರಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಇನ್ನೂ ಕೆಲವರು ಯೋಜನೆಗೆ ದುಡ್ಡು ಎಲ್ಲಿಂದ ಬರುತ್ತದೆ ಎಂದು ಚಿಂತೆ ಮಾಡಿದರು. ತೆರಿಗೆ ಹೆಚ್ಚಿಸುವಷ್ಟರಿಂದಲೇ ಇಷ್ಟೊಂದು ಹಣ ಸಂಗ್ರಹಿಸಲಾಗದು, ಕೊರತೆ ಆಯವ್ಯಯದಿಂದ ಅತಿಯಾದ ಹಣದುಬ್ಬರಕ್ಕೆ ಕಾರಣವಾಗಬಹುದೆಂದು ಮಂಡೆ ಬಿಸಿ ಮಾಡಿಕೊಂಡರು.

ಕೋಷ್ಟಕ 10.1: ಮೊದಲ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ವಿಭಾಗೀಯ ಬಂಡವಾಳ ಹೂಡಿಕೆ

ವಿಭಾಗ	ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಹೂಡಿಕೆ		ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಹೂಡಿಕೆ	
	ಮೊತ್ತ	%	ಮೊತ್ತ	%
ಕೃಷಿ ಮತ್ತು ಸಮುದಾಯ ಅಭಿವೃದ್ಧಿ	372	16	530	11
ನೀರಾವರಿ	395	17	420	9
ವಿದ್ಯುಚ್ಛಕ್ತಿ	266	11	445	10
ಕೈಗಾರಿಕೆ ಮತ್ತು ಖನಿಜಗಳು	179	7	1075	24
ಸಾರಿಗೆ ಸಂಪರ್ಕ-ಸಂವಹನ	556	24	1300	28
ಸಮಾಜ ಸೇವೆ, ವಸತಿ ಇತ್ಯಾದಿ	547	25	830	18

ಕೋಟಿ ರೂಪಾಯಿಗಳಲ್ಲಿ- ಒಂದು ಕೋಟಿ ಅಂದರೆ 10 ದಶಲಕ್ಷ.

ಮೂಲ: ದಿ ಪ್ರೋಸೆಸ್ ಆಫ್ ಪ್ಲಾನಿಂಗ್, ಎ ಸ್ಟಡೀ ಆಫ್ ಇಂಡಿಯಾಸ್ ಫೈವ್ ಇಯರ್ ಪ್ಲಾನ್ಸ್, 1950-64. (ಲಂಡನ್: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1966) ಕೋಷ್ಟಕ 7 ಪು. 134

ಆದರೆ, ಮೊತ್ತದಲ್ಲಿ ಹೇಳುವುದಾದರೆ, ಭಾರತದ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರು "ಮಹಲಾನೋಬಿಸ್ ಮಾದರಿ ಯೋಜನೆ"ಗಿಂತ ಹಿಂದೆ ಇದ್ದರು.

ಈ ಮಾದರಿ ಒಂದು ರೀತಿಯಲ್ಲಿ ಹಳೆಯ ರಾಷ್ಟ್ರೀಯ ಮಾದರಿಯಾದ 'ಸ್ವದೇಶಿ' ಅಥವಾ 'ಸ್ವಾವಲಂಬನೆ' ರೀತಿಯದಾಗಿತ್ತು. ಒಂದು ಕಾಲಕ್ಕೆ, ಗಾಂಧೀಜಿ ಪರ ಪ್ರತಿಭಟನಕಾರರು ಸ್ವದೇಶಿ ಜವಳಿ ಉದ್ಯಮಕ್ಕೆ ಬೆಂಬಲ ನೀಡಲು ವಿದೇಶಿ ವಸ್ತ್ರಗಳನ್ನು ಸುಟ್ಟು ಹಾಕಿದ್ದರು. ನೆಹರೂ ಯುಗದ ತಂತ್ರಜ್ಞರು ಈಗ ಅನ್ಯರನ್ನು ಅವಲಂಬಿಸುವ ಬದಲು, ಉಕ್ಕು ಯಂತ್ರಗಳಲ್ಲಿ ಸ್ವಸಾಮರ್ಥ್ಯ ಹೊಂದಿದ್ದರು. ಎರಡನೆಯ ಯೋಜನೆ ಪ್ರತಿಪಾದಿಸಿದಂತೆ, ಅನಭಿವೃದ್ಧಿಗೆ ಅಥವಾ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯಾಗದೇ ಇರುವುದಕ್ಕೆ ತಾಂತ್ರಿಕ ಪ್ರಗತಿಯ ಫಲ ಕೆಳಸ್ತರದವರೆಗೆ ಹರಿದು ಬರದೇ ಇದ್ದದ್ದು ಕಾರಣವಾಗಿತ್ತು. ಈ ದೃಷ್ಟಿಯಿಂದ, ಸ್ವಾವಲಂಬನೆ, ಅಭಿವೃದ್ಧಿ ಮತ್ತು ಪ್ರಗತಿಯ ತೋರು ಬೆರಳಾಯಿತು. ಸೋಪಿನಿಂದ ಉಕ್ಕಿನವರೆಗೆ, ಗೋಡಂಬಿಯಿಂದ ಕಾರಿನವರೆಗೆ ಭಾರತೀಯರು ಈಗ ಮೂಲವಸ್ತುಗಳನ್ನು ಪೂರೈಸಲು ಸಮರ್ಥರಾಗಿದ್ದರು. ಭಾರತದ ನೆಲ, ಭಾರತದ ಮಾನವಸಂಪನ್ಮೂಲ, ಭಾರತದ ಭೌತವಸ್ತುಗಳು, ಎಲ್ಲಕ್ಕಿಂತ ಮಿಗಿಲಾಗಿ ಭಾರತೀಯ ತಾಂತ್ರಿಕತೆಯ ಲಭ್ಯತೆಯಿಂದ ಇದು ಸಾಧ್ಯವಾಗಿತ್ತು.

ಒಂದನೇ ಕೋಷ್ಟಕದಲ್ಲಿ ಮೊದಲನೆ ಮತ್ತು ಎರಡನೇ ಯೋಜನೆಗಳಲ್ಲಿನ ಬಂಡವಾಳ ಹೂಡಿಕೆಯ ಒಂದು ತುಲನೆ ಇದೆ. ದಾಮಾಷಾವಾರು, ವಿದ್ಯುಚ್ಛಕ್ತಿ, ಸಾರಿಗೆ ಮತ್ತು ಸಂಪರ್ಕ ಹಾಗೂ ಸಮಾಜ ಸೇವೆ ವಲಯಗಳಲ್ಲಿ ಪ್ರಾಮುಖ್ಯತೆಗೆ ಕುಂದುಂಟಾಗಿಲ್ಲ. ಆದರೆ, ನಿರ್ಣಾಯಕ ಜಿಗಿತ ಉಂಟಾಗಿರುವುದು ಕೃಷಿಯಿಂದ ಕೈಗಾರಿಕಾ ಕ್ಷೇತ್ರದತ್ತ. ಇದರೊಡನೆ ನೀರಾವರಿಯ ಮಹತ್ವವೂ ಇಳಿಮುಖವಾಯಿತು.

ಭಾರಿ ಕೈಗಾರಿಕೆಗಳು ಸರ್ಕಾರದ ಸ್ವಾಮ್ಯದಲ್ಲೇ ಉಳಿಯುವುದಾದರೂ ಖಾಸಗಿ ಉದ್ಯಮಗಳಿಗೆ ಇನ್ನೂ ಸಾಕಷ್ಟು ಅವಕಾಶವಿತ್ತು. ಏಕೆಂದರೆ, ಬೆಳೆಯುವ ಅರ್ಥವ್ಯವಸ್ಥೆಯಲ್ಲಿ ಖಾಸಗಿ ಕ್ಷೇತ್ರಕ್ಕೂ ಖಾತ್ರಿಯಾದ ಮಾರುಕಟ್ಟೆ ಇರಬೇಕು. ಖಾಸಗಿಯವರ ಕೊಡುಗೆ ಬಳಕೆದಾರರ ವಸ್ತುಗಳ ರೂಪದಲ್ಲಿರುತ್ತವೆ. ಈ ಬಳಕೆದಾರರ ಉತ್ಪನ್ನಗಳನ್ನು ಬಹುಮಟ್ಟಿಗೆ ದೊಡ್ಡ ಹಾಗೂ ಸಣ್ಣ ಕೈಗಾರಿಕಾ ಘಟಕಗಳು ತಯಾರಿಸುತ್ತವೆ.

1956ರ ಪ್ರಕಟಣೆಯೊಂದರಲ್ಲಿ ಸರ್ಕಾರ, ಹೊಸ ಕೈಗಾರಿಕೆಗಳನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಿತು. ಮೊದಲನೆ ವರ್ಗ ಸಂಪೂರ್ಣವಾಗಿ ಸರ್ಕಾರದ ಹೊಣೆಗೊಳಪಟ್ಟಿರುತ್ತದೆ. ಈ ಮೊದಲನೆಯ ವರ್ಗದಲ್ಲಿ ಪರಮಾಣು ಶಕ್ತಿ, ರಕ್ಷಣಾ ಇಲಾಖೆ ಕೈಗಾರಿಕೆಗಳು, ವಿಮಾನ, ವಿದ್ಯುದುತ್ಪಾದನೆ, ಟೆಲಿಫೋನ್, ಕಲ್ಲಿದ್ದಲು, ಕಬ್ಬಿಣ ಮತ್ತು ಉಕ್ಕು ಮೊದಲಾದವುಗಳನ್ನೊಳಗೊಂಡಿವೆ. ಎರಡನೆಯ ವರ್ಗದಲ್ಲಿ, ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳೆರಡಕ್ಕೂ ಅವಕಾಶವಿದೆ. ರಾಸಾಯನಿಕಗಳು, ಔಷಧಿಗಳು, ಸಣ್ಣಪುಟ್ಟ ಖನಿಜಗಳು, ಕಾಗದ, ರಸ್ತೆ ಸಾರಿಗೆ ಇವೆಲ್ಲ ಬರುತ್ತವೆ. ಮೂರನೆಯ ವರ್ಗದಲ್ಲಿ ಉಳಿದ ಕೈಗಾರಿಕೆಗಳು ಬರುತ್ತವೆ. ಇದು ಖಾಸಗಿ ಕ್ಷೇತ್ರಕ್ಕೆ ಬಿಟ್ಟದ್ದು; ಖಾಸಗಿ ಉದ್ಯಮಶೀಲತೆಯಿಂದಾಗಿ ನಡೆಯಬೇಕಾದ್ದು.

ಮಹಲಾನೋಬಿಸ್ ಅವರ ಈ ಮಾದರಿ ಕಾರ್ಯತಃ ಯಶಸ್ವಿಯಾದೀತೆ? ಹಾಗೆಂದು ಭಾರತೀಯರನೇಕರು ಭಾವಿಸಿದರು. ವಿಶ್ವದಾದ್ಯಂತ ಭಾರತದ ಅಭಿಮಾನಿಗಳೂ ಹಾಗೆಯೇ ಭಾವಿಸಿದರು. ಇಂಥದೊಂದು ಭಾವನೆಯ ಪ್ರಾತಿನಿಧಿಕ ಎನ್ನಬಹುದಾದ ಜೆ.ಬಿ.ಎಸ್. ಹಾಲ್ಡೇನ್ ಅವರ ಅಭಿಪ್ರಾಯ ಇಲ್ಲಿದೆ. ಬ್ರಿಟನ್ನಿನ ಸಸ್ಯಶಾಸ್ತ್ರಜ್ಞರಾದ ಹಾಲ್ಡೇನ್ ಭಾರತಕ್ಕೆ, ಐಎಸ್‌ಐಗೆ ಬರುವ ಆಲೋಚನೆ ಹೊಂದಿದ್ದರು. ಮಹಲಾನೋಬಿಸ್ ಅವರ ಕರಡು ಯೋಜನೆಯನ್ನು ತೋರಿಸಿದಾಗ ಅವರು ಮಾಡಿದ ಟೀಕೆ:

> *"ತುಂಬಾ ನಿರಾಶಾವಾದಿಯಾಗಿ ಅಂದಾಜು ಮಾಡುವುದಾದರೆ–ಅಮೆರಿಕದ ಹಸ್ತಕ್ಷೇಪದಿಂದ ಶೇ 15ರಷ್ಟು ವೈಫಲ್ಯಕ್ಕೆ, ಸೋವಿಯತ್ ಒಕ್ಕೂಟ ಮತ್ತು ಚೈನಾದ ಹಸ್ತಕ್ಷೇಪದಿಂದ ಶೇ 10 ರಷ್ಟು ವೈಫಲ್ಯಕ್ಕೆ ಹಾಗೂ ಸಿವಿಲ್ ಅಧಿಕಾರಿಗಳು ಮತ್ತು ರಾಜಕೀಯ ಅಡೆತಡೆಗಳಿಂದ ಶೇ 20 ರಷ್ಟು ವೈಫಲ್ಯಕ್ಕೆ ಹಾಗೂ ಹಿಂದೂ ಸನಾತನವಾದಿಗಳ ಹಸ್ತಕ್ಷೇಪದಿಂದ ಶೇ 5ರಷ್ಟು ವೈಫಲ್ಯಕ್ಕೆ ಅವಕಾಶವಿದೆ; ಈ ಎಲ್ಲ ವೈಫಲ್ಯಗಳ ಅಂದಾಜಿನ ಲೆಕ್ಕ ಮಾಡಿದ ನಂತರವೂ ಶೇ 50ರಷ್ಟು ಯಶಸ್ಸಿನ ಸಾಧ್ಯತೆಗಳಿವೆ. ಈ ಯಶಸ್ಸು ಇಡೀ ವಿಶ್ವದ ಚರಿತ್ರೆಯನ್ನು ಉನ್ನತಿಯತ್ತ ದಿಕ್ಕು ಬದಲಾಯಿಸುವಂತೆ ಮಾಡಬಹುದು."*

III

ಮಹಲಾನೋಬಿಸ್ ಭಾರತೀಯ ಯೋಜನೆಯ ಮುಖ್ಯ ತಂತ್ರಜ್ಞರಾಗಿದ್ದರೆ, ನೆಹರೂ ಅದರ ಮುಖ್ಯ ಕಾರ್ಯಸಾಧಕರಾಗಿದ್ದರು. ಭಾರತೀಯ ಸಂದರ್ಭದಲ್ಲಿ ಯೋಜನೆ ತರ್ಕಾಧಾರಿತ ಅರ್ಥವ್ಯವಸ್ಥೆಗಿಂತ ಹೆಚ್ಚು ಅರ್ಥಪೂರ್ಣವಾದ್ದು ಎಂದು ನೆಹರೂ ನಂಬಿದ್ದರು. ಜೊತೆಗೆ ಅದು ಒಳ್ಳೆಯ ರಾಜನೀತಿಯೂ ಆಗಿತ್ತು. ಯೋಜನೆ, ಅರ್ಥಶಾಸ್ತ್ರಜ್ಞರು ಮತ್ತು ಅಂಕಿಅಂಶ ಶಾಸ್ತ್ರಜ್ಞರ ಕಾರ್ಯತಂತ್ರವನ್ನು ಆಧರಿಸಿದ್ದರೂ, ಅದನ್ನು ಗುರಿಮುಟ್ಟಿಸಲು "ಬೃಹತ್ ಉದ್ಯಮವೊಂದರಲ್ಲಿ ತಾವು ಸಹಭಾಗಿಗಳು, ಅವರು ಮತ್ತು ನಾವು ಸೇರಿ ಹಮ್ಮಿಕೊಂಡಿರುವ ಮುಂದಿನ ಗುರಿಯ ಸಾಧನೆಯ ಹಾದಿಯಲ್ಲಿ ನಾವು ಸಹ ಪಯಣಿಗರು" ಎನ್ನುವ ಭಾವನೆ ಜನರಲ್ಲಿರಬೇಕು. ಕಾಗದದ ಮೇಲೆ ಪವಿತ್ರವಾಗಿ ಪ್ರತಿಷ್ಠಾಪನೆಗೊಂಡಿರುವ ಯೋಜನೆ ಮೈದಾಳಬೇಕಾದರೆ, ಜೀವನಾಧಾರವಾಗಬೇಕಾದರೆ, ಸಂಚಲನ ಶಕ್ತಿಯಾಗ ಬೇಕಾದರೆ, ನಮ್ಮ ಜನರ ಕಲ್ಪನೆಯನ್ನು ಸೆರೆಹಿಡಿಯಬೇಕಾದರೆ ಅದರಲ್ಲಿ ಜನಸಮುದಾಯ ಪಾಲ್ಗೊಳ್ಳಬೇಕಾದ್ದು ಅತಿಮುಖ್ಯ.

ಹೀಗೆ, ಯೋಜನೆ ಎನ್ನುವುದು ಸಮಸ್ತ ಭಾರತೀಯರ ಸಹಕಾರದ ಅತಿಮಹತ್ವದ ಪ್ರಯತ್ನ. ಹೊಸ ಯೋಜನೆಗಳು, ಜಾತಿ-ಧರ್ಮ-ಸಮುದಾಯ-ಪ್ರದೇಶಗಳ ನಡುವಣ ಒಡಕು, ಭಿನ್ನತೆ, ಅಡ್ಡಗೋಡೆಗಳನ್ನು ನಿವಾರಿಸುವ ಒಂದು ನಿವಾರಕಶಕ್ತಿಯಾಗಲಿದೆ ಎಂದು ನೆಹರೂ ಆಶಿಸಿದ್ದರು. ಮೊದಲ ಪಂಚವಾರ್ಷಿಕ ಯೋಜನೆಯನ್ನು ಪರಿಚಯಿಸಿ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದರು:

> *"ಭಾರತದ ಒಂದು ಸಮತೋಲದ ಚಿತ್ರ ಹಾಗೂ ಪರಸ್ಪರ ಸಂಬಂಧಿತ ಬಹುಮುಖೀ ಕಾರ್ಯ ಚಟುವಟಿಕೆಗಳ ಬಗ್ಗೆ ನಾವು ಚಿಂತನ ಮಂಥನ ನಡೆಸಿದಾಗ, ಪ್ರಾಂತೀಯತೆ, ಕೋಮುವಾದ, ಜಾತೀಯತೆ ಮತ್ತು ಎಲ್ಲ ಬಗೆಯ ವಿಚ್ಛಿದ್ರಕಾರಿ ವಿಭಜನ ಪ್ರವೃತ್ತಿಗಳತ್ತ ನಮ್ಮ ಮನಸ್ಸುಗಳು ಅಡ್ಡದಾರಿ ಹಿಡಿಯುವ ಸಾಧ್ಯತೆ ಕಮ್ಮಿಯಾಗುತ್ತದೆ."*

ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಅವರು ನಮ್ಮ ಭವಿತವ್ಯವನ್ನು ರೂಪಿಸುವ ಕೆಚ್ಚೆದೆಯ ಪ್ರಯತ್ನವೆಂದು ಕರೆದಿದ್ದರು. "ಇದಕ್ಕೆ ನಮ್ಮೆಲ್ಲ ಶಕ್ತಿ ಸಾಮರ್ಥ್ಯಗಳ ವಿನಿಯೋಗ ಅತ್ಯಗತ್ಯವಾಗಿದೆ." "ಐಕ್ಯರಾಗಿ, ನಾವು ನಿಗ್ರಹಿಸಲೇಬೇಕಾಗಿರುವ ಪ್ರತ್ಯೇಕವಾದ, ಪ್ರಾಂತೀಯತೆ ಮತ್ತು ಅಂಧಾಭಿಮಾನಗಳ ವಿರುದ್ಧ ಹೋರಾಡಲು ಇದೊಂದೇ ಮಾರ್ಗ" ಎಂದು ನೆಹರೂ ನಂಬಿದ್ದರು.

ಅರ್ಥವ್ಯವಸ್ಥೆಯ ಕಡೆಯಿಂದ ನೆಹರೂ ಅವರು ಯೋಜನೆಗೆ ಎರಡು ಬಗೆಯ ಕಾರ್ಯ ಚಟುವಟಿಕೆಗಳನ್ನು ಗುರುತಿಸಿದ್ದರು. 1. ವಿದ್ಯುಚ್ಛಕ್ತಿ ಉತ್ಪಾದನೆ. 2. ಉಕ್ಕಿನ ಉತ್ಪಾದನೆ. ಸ್ವಾತಂತ್ರ್ಯ ಬಂದಾಗ ಭಾರತದಲ್ಲಿ ಎರಡೇ ಎರಡು ಉಕ್ಕಿನ ಕಾರ್ಖಾನೆಗಳಿದ್ದವು. ಎರಡೂ ಖಾಸಗಿ ಒಡೆತನದಲ್ಲಿದ್ದು ವರ್ಷಕ್ಕೆ ಹತ್ತು ಲಕ್ಷ ಟನ್ ಉತ್ಪಾದನಾ ಸಾಮರ್ಥ್ಯ

ಹೊಂದಿದ್ದವು. ಬೆಳೆಯುವ ಅರ್ಥವ್ಯವಸ್ಥೆಗೆ ಇದು ಸಾಲದಾಗಿತ್ತು. ವಿಶೇಷವಾಗಿ ಭಾರಿ ಕೈಗಾರಿಕೆಗಳ ನಿರ್ಮಾಣಕ್ಕೆ ಕಟ್ಟುಬಿದ್ದ ಆರ್ಥಿಕತೆಗೆ ಇದು ಏನೇನೂ ಸಾಲದಾಗಿತ್ತು.

ಉಕ್ಕು ಉತ್ಪಾದನಾ ಕ್ಷೇತ್ರದಲ್ಲಿ ಖಾಸಗಿಯವರ ಪ್ರವೇಶವನ್ನು ಪ್ರತಿಬಂಧಿಸಲಾಯಿತು. ಉಕ್ಕು, ಕಲ್ಲಿದ್ದಲು, ಹಡಗು ನಿರ್ಮಾಣ, ಅಣುಶಕ್ತಿ, ವಿಮಾನ ತಯಾರಿಕೆ ಇವೆಲ್ಲ ತುಂಬ ಮಹತ್ವದ ಲಾಭಕಾರಿ ಉದ್ಯಮಗಳಾಗಿದ್ದವು. ಮಧ್ಯಭಾರತದುದ್ದಕ್ಕೂ ಇದ್ದ ಅರಣ್ಯ ಪ್ರದೇಶ ಕಬ್ಬಿಣ, ಕಲ್ಲಿದ್ದಲುಗಳಿಂದ ಸಂಪದ್ಭರಿತವಾಗಿತ್ತು. ಇಲ್ಲಿ ಹಲವಾರು ನದಿಗಳೂ ಹರಿಯುತ್ತಿದ್ದವು. ಈ ಪ್ರದೇಶದಲ್ಲಿನ ರಾಜ್ಯಗಳ ನಡುವೆ ಸರ್ಕಾರಿ ಕ್ಷೇತ್ರದ ಉಕ್ಕಿನ ಕಾರ್ಖಾನೆಗೆ ಪೈಪೋಟಿ ಆರಂಭವಾಯಿತು. ಮೊದಲ ಸರ್ಕಾರಿ ಉಕ್ಕಿನ ಕಾರ್ಖಾನೆ ತಮ್ಮ ರಾಜ್ಯದಲ್ಲೇ ಸ್ಥಾಪನೆಯಾಗಬೇಕೆಂದು ರಾಜ್ಯಗಳು ಬೇಡಿಕೆ ಮಂಡಿಸಿದವು. ಇದರ ಜೊತೆಗೆ ಪಶ್ಚಿಮ ಕೈಗಾರಿಕಾ ದೇಶಗಳ ನಡುವೆಯೂ ಭಾರತದಲ್ಲಿ ಪ್ರಥಮ ಕಾರ್ಖಾನೆ ನಿರ್ಮಿಸುವ ಗುತ್ತಿಗೆ ಹಿಡಿಯಲು ಪೈಪೋಟಿ ಶುರುವಾಯಿತು.

ಎರಡನೆಯ ಯೋಜನೆ ಆರು ದಶಲಕ್ಷ ಉಕ್ಕು ಉತ್ಪಾದನೆಯ ಗುರಿಯನ್ನು ಹಮ್ಮಿಕೊಂಡಿತ್ತು. ಈ ಉತ್ಪಾದನೆ ಯೋಜನೆಯಲ್ಲಿನ ಉಳಿದ ಕೈಗಾರಿಕೆಗಳಿಗೆ ಸಾಧನ ಸಂಪತ್ತನ್ನು ಪೂರೈಸಬೇಕಾಗಿತ್ತು. ಇದು ಒಂದು ರೀತಿಯಲ್ಲಿ ಬಲವಂತದ ಉಳಿತಾಯ ತಂತ್ರವೂ ಆಗಿತ್ತು. ಅರ್ಥಶಾಸ್ತ್ರಜ್ಞರೊಬ್ಬರು ಹೇಳಿದಂತೆ 'ನಿಮ್ಮಿಂದ ಉಕ್ಕನ್ನು ಭಕ್ಷಿಸಲಾಗದು'. ಎರಡನೆ ಯೋಜನೆಯನ್ನು ಅಂತಿಮವಾಗಿ ಸಿದ್ಧಗೊಳಿಸುತ್ತಿದ್ದ ಹಂತದಲ್ಲೇ ಭಾರತ ಸರ್ಕಾರ ಉಕ್ಕಿನ ಕಾರ್ಖಾನೆಗಳ ನಿರ್ಮಾಣಕ್ಕಾಗಿ ಮೂರು ಪ್ರತ್ಯೇಕ ಒಪ್ಪಂದಗಳನ್ನು ಮಾಡಿಕೊಂಡಿತು. ಇವು, ಜರ್ಮನ್ನರು ಒರಿಸ್ಸಾದ ರೂರ್ಕೆಲಾದಲ್ಲಿ, ರಷ್ಯನ್ನರು ಮಧ್ಯಪ್ರದೇಶದ ಭಿಲಾಯ್‌ನಲ್ಲಿ ಹಾಗೂ ಬ್ರಿಟಿಷರು ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ಉಕ್ಕಿನ ಕಾರ್ಖಾನೆಗಳನ್ನು ನಿರ್ಮಿಸುವ ಒಪ್ಪಂದಗಳಾಗಿದ್ದವು. ಅಮೆರಿಕ ಸ್ಪರ್ಧೆಯಿಂದ ವಿಷಾದಪೂರ್ವಕವಾಗಿ ಹಿಂದೆ ಸರಿಯಬೇಕಾಯಿತು. ಯುರೋಪಿನ ಯುದ್ಧ ಪೀಡಿತ ರಾಷ್ಟ್ರಗಳು ಎರಡು ಗುತ್ತಿಗೆಗಳನ್ನು ಬಾಚಿಕೊಂಡಿದ್ದರೆ, ಇನ್ನೊಂದು ಅವರ ಶೀತಲ ಸಮರದ ಶತ್ರುವಿನ ಪಾಲಾದದ್ದು ಅಮೆರಿಕಕ್ಕೆ ತುಂಬ ಖೇದವನ್ನುಂಟುಮಾಡಿತ್ತು. ಕೆಲವು ವರ್ಷಗಳ ನಂತರ ಅಮೆರಿಕದ ಮಿತ್ರರೊಬ್ಬರು, ಭಿಲಾಯ್ ಉಕ್ಕಿನ ಕಾರ್ಖಾನೆ ನಿರ್ಮಾಣ ಗುತ್ತಿಗೆ ರಷ್ಯನ್ನರ ಪಾಲಾದ ಸುದ್ದಿಯನ್ನು ಪ್ರಸಾರ ತಜ್ಞ ಎಡ್ ಮರ್‍ರೋ ಸ್ಪಷ್ಟವಾದ ವಿಷಾದದ ದನಿಯಲ್ಲಿ ಬಿತ್ತರಿಸಿದ್ದನ್ನು ನೆನಪಿಸಿಕೊಂಡಿದ್ದುಂಟು.

ರಷ್ಯನ್ನರಿಗೆ ಮಹದಾನಂದವಾಗಿತ್ತು. ನಿಕಿಟಾ ಕ್ರುಶ್ಚೇವ್ ಭಿಲಾಯ್‌ಗೆ ಭೇಟಿಕೊಟ್ಟು ಅದನ್ನು 'ಭಾರತದ ಮ್ಯಾಗ್ನಿಟೋಗೋರ್ಸ್ಕ್' (ಸೋವಿಟ್ ಒಕ್ಕೂಟದ ಒಂದು ನಗರ) ಎಂದು ಕರೆದರು. ಭಿಲಾಯನ್ನು ಭಾರತ-ಸೋವಿಯತ್ ಸಹಕಾರದ ದ್ಯೋತಕವೆಂದು ಬಣ್ಣಿಸಿ 'ಪ್ರಾವ್ಡಾ' ಪತ್ರಿಕೆ ಬರೆಯಿತು. ಭಾರತೀಯರಂತೂ ಆನಂದತುಂದಿಲರಾಗಿದ್ದರು. ನಿರ್ಮಾಣ ಅವಧಿಯ ವರ್ಷಗಳ ಅಂತರದಲ್ಲಿ ತನ್ನ ರಷ್ಯನ್ ಬಾಸ್ ಹೇಗೆ ಆಪ್ತಮಿತ್ರರಾದರೆಂಬುದನ್ನು ಬಂಗಾಳದ ಕೆಮಿಸ್ಟ್ ಒಬ್ಬರು ನೆನಪಿಸಿಕೊಂಡಿದ್ದಾರೆ. ಈ ವಿದೇಶಿ ತಜ್ಞ ಭಾರತ ಬಿಡಬೇಕಾದ

ಕಾಲ ಬಂದಾಗ ಭಾರತೀಯನಿಗೆ ಅಗಲಿಕೆಯ ನೋವನ್ನು ತಡೆಯಲಾಗಲಿಲ್ಲವಂತೆ. ಕಣ್ಣೀರು ಉಕ್ಕಿತು. ರಷ್ಯನ್ ತಜ್ಞ ಸಂಯಮದಿಂದ ಭಾವನೆಗಳನ್ನು ಅದುಮಿಕೊಂಡರೆ, ಅವನ ಪತ್ನಿ ಸಹಾನುಭೂತಿಪರಳಾಗಿ ಕಣ್ಣೀರು ಪರಿಸಿದಳಂತೆ. ಅಗಲಿಕೆಯ ನೋವಿನಿಂದ ತಪ್ತನಾಗಿದ್ದ ಬಂಗಾಳಿಗೆ, ಈ ಕಣ್ಣೀರು ಭಾರತದ ಗಂಗಾನದಿಯಲ್ಲಿ ಸಂಗಮಿಸಿದ ವೋಲ್ಗಾ ನದಿಯ ಪ್ರವಾಹವೇ ಆಗಿತ್ತು; ನಮ್ಮ ಸೋದರತ್ವ ಮತ್ತು ಚಿರಮೈತ್ರಿಯನ್ನು ಮುಳುಗಿಸಿದ ಪ್ರವಾಹವೇ ಆಗಿ ಕಂಡಿತು.

ಭಿಲಾಯ್‌ನಲ್ಲಿ ರಷ್ಯ ಮತ್ತು ಭಾರತ ಭುಜಕ್ಕೆ ಭುಜಕೊಟ್ಟು ಕೆಲಸಮಾಡಿದವು. ಭೂಸ್ವಾಧೀನ, ಭೂಮಿ ಮಟ್ಟಸಗೊಳಿಸುವುದು, ರಸ್ತೆ ಹಾಗೂ ವಸತಿಗೃಹಗಳ ನಿರ್ಮಾಣ, ಯಂತ್ರಸ್ಥಾವರಗಳ ಸ್ಥಾಪನೆ ಮೊದಲಾದವುಗಳಲ್ಲಿ ಪರಸ್ಪರ ಒತ್ತಾಸೆಯಿಂದ ದುಡಿದವು. ಈ ಮಹಾನ್ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡವರು ಅದನ್ನು ಹೃತ್ಪೂರ್ವಕ ಪ್ರೀತಿ-ಅಭಿಮಾನಗಳಿಂದ ಜ್ಞಾಪಿಸಿಕೊಂಡಿದ್ದಾರೆ. "ಅದೊಂದು ಭಯಭೀತಿ ಇಲ್ಲದ ರೋಷಾವೇಶವಾಗಿತ್ತು, ಯೋಜಿತ ಗತಿಯಿಂದ ಕೂಡಿತ್ತು. ತಾವು ಜೀವ ಕೊಟ್ಟ ಕಾರ್ಖಾನೆ ಕಾರ್ಯಾರಂಭ ಮಾಡಿದಾಗ ನಿರ್ಮಾಣ ತಂಡ ಹೆಮ್ಮೆ-ತೃಪ್ತಿಗಳಿಂದ ಸಂಭ್ರಮಿಸಿತು. ಕಾರ್ಖಾನೆಯನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಸಲು ತಂಡ ಕಾತುರವಾಗಿತ್ತು. ...ನಾವೆಲ್ಲರೂ ಭವಿಷ್ಯವೊಂದನ್ನು ಕಟ್ಟುವ ಕೆಲಸದಲ್ಲಿ ಪರಸ್ಪರ ಸಹಕರಿಸಿ ದುಡಿಯುತ್ತಿದ್ದೆವು. ಅದು ದೃಗ್ಗೋಚರವಾದ, ಮುಟ್ಟಿ ನೋಡಿ ಅನುಭವಿಸಬಹುದಾದ ಭವಿಷ್ಯವಾಗಿತ್ತು." ಅಂತಿಮವಾಗಿ 1959ರ ಫೆಬ್ರುವರಿಯಲ್ಲಿ ಭಾರತದ ರಾಷ್ಟ್ರಪತಿಗಳ ಪ್ರಸನ್ನ ಕಂಗಳೆದುರು ಭಿಲಾಯ್ ಊದು ಕುಲುಮೆಯಿಂದ ಕರಗಿದ ಕಬ್ಬಿಣ ಹೊರಹೊಮ್ಮಿತು. ನೆರೆದಿದ್ದವರೆಲ್ಲ ಸಂತೋಷದಿಂದ ಕುಣಿದಾಡಿದರು. "ಅದು ತಮ್ಮ ಜೀವನದ ಅತಿ ರೋಮಾಂಚಕ ಕ್ಷಣಗಳಾಗಿದ್ದವೆಂದು" ಉದ್ಘಾಟನಾ ಸಮಾರಂಭದಲ್ಲಿ ಭಾಗಿಯಾಗಿದ್ದವರು ದೀರ್ಘಕಾಲದವರೆಗೆ ಅದನ್ನು ನೆನಪಿಸಿಕೊಂಡರು.

ಹಿರಿಯ ಅಧಿಕಾರಿಯೊಬ್ಬರು ಭಾರತದ ಈ ಉಕ್ಕು ಉದ್ಯಮವನ್ನು "ಇದು ತಾಂತ್ರಿಕ ಶಾಲೆಯೂ ಹೌದು, ಉಳಿದ ಕೈಗಾರಿಕಾ ಚಟುವಟಿಕೆಗಳಿಗೆ ಸ್ಫೂರ್ತಿದಾಯಕ ಚಿಲುಮೆಯೂ ಹೌದು" ಎಂದು ಬಣ್ಣಿಸಿದ್ದರು. ವಾಸ್ತವದಲ್ಲಿ ಅದು ಇವೆರಡಕ್ಕಿಂತಲೂ ಮಿಗಿಲಾಗಿತ್ತು. ಈ ಉಕ್ಕಿನ ಕಾರ್ಖಾನೆ ಭಾರತೀಯರು ಅನುತ್ಪಾದಕರು, ವಿಜ್ಞಾನ ಪೂರ್ವ ಕಾಲದವರು, ಅತಿ ಹಿಂದುಳಿದವರು ಎಂಬ ನಂಬಿಕೆಯನ್ನು ಖಂಡಿಸುವ ಜೀವಂತ ದೃಷ್ಟಾಂತವಾಗಿತ್ತು.

IV

ಭಾರತದ ಅರ್ಥವ್ಯವಸ್ಥೆಯ ಆಧುನೀಕರಣದಲ್ಲಿ ಬೃಹತ್ ಅಣೆಕಟ್ಟುಗಳು ವಿಶೇಷ ಸ್ಥಾನಮಾನವನ್ನು ಗಳಿಸಿದ್ದವು. ಅಣೆಕಟ್ಟುಗಳು ಕೃಷಿಯನ್ನು ಮಳೆ ಮಾರುತಗಳ ಉಪದ್ರವಗಳಿಂದ ಪಾರುಮಾಡುವುದರ ಜೊತೆಗೆ ಪಂಚವಾರ್ಷಿಕ ಯೋಜನೆಗಳನ್ವಯ ಸ್ಥಾಪಿಸುವ ಹೊಸ

ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನೂ ಪೂರೈಸುತ್ತಿದ್ದವು. ಜವಹರಲಾಲ್ ನೆಹರೂ ಈ ಅಣೆಕಟ್ಟುಗಳಿಗೆ ಮಾರುಹೋಗಿದ್ದರು. ಅವರು, ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಾಲಯಗಳೆಂದು ವರ್ಣಿಸಿದ್ದರು. ದೇಶದ ಲಕ್ಷಾಂತರ ಮಂದಿ ನೆಹರೂ ಅವರ ಈ ಭಾವನೆಯನ್ನು ಹಂಚಿಕೊಂಡಿದ್ದರು. ಮಣ್ಣು ಮತ್ತು ಕಾಂಕ್ರೀಟ್‌ನಿಂದ ನಿರ್ಮಿಸಲಾದ ಈ ಶೃಂಗಸದೃಶ ಅದ್ಭುತಗಳನ್ನು ಪೂಜ್ಯಭಾವನೆಯಿಂದ ಕಾಣಲಾರಂಭಿಸಿದರು.

ಫ್ರಾಂಕ್ಲಿನ್ ರೂಸ್‌ವೆಲ್ಟರ, ಹೊಸ ವ್ಯವಸ್ಥೆಯ ಅಡಿಗಲ್ಲು ಎನ್ನಲಾದ ಟೆನ್ನೆಸಿ ಕಣಿವೆ ಪ್ರಾಧಿಕಾರ ಯೋಜನೆಯನ್ನು ಭಾರತದ ಬುದ್ಧಿಜೀವಿಗಳು ಬಹುವಾಗಿ ಪ್ರಶಂಶಿಸಿದ್ದರು. ಹಾಗೆಯೇ ಸೋವಿಯತ್ ಒಕ್ಕೂಟದ ವಿವಿಧೋಪಯೋಗಿ ಬೃಹತ್ ಯೋಜನೆಗಳನ್ನೂ ಮೆಚ್ಚಿಕೊಂಡಿದ್ದರು. 1940ರ ದಶಕದಲ್ಲಿ, ಭಾರತ ಸ್ವಾತಂತ್ರ್ಯದ ನಿರೀಕ್ಷೆಯಲ್ಲಿದ್ದಾಗಲೇ ವಿಜ್ಞಾನಿಗಳು-ಎಂಜಿನಿಯರುಗಳು ಅಮೆರಿಕ-ರಷ್ಯಗಳಿಗೆ ಭೇಟಿಕೊಟ್ಟಿದ್ದರು. ಅಲ್ಲಿ ಅಣೆಕಟ್ಟುಗಳನ್ನು ಹೇಗೆ ನಿರ್ಮಿಸಲಾಗುತ್ತದೆ ಎಂಬುದನ್ನು ಕಣ್ಣಾರೆ ನೋಡಿ ತಿಳಿದುಕೊಳ್ಳುವುದೇ ಈ ಭೇಟಿಯ ಉದ್ದೇಶವಾಗಿತ್ತು. ಈ ಪ್ರತ್ಯಕ್ಷ ಅನುಭವದಿಂದ ಅವರು ಪ್ರಭಾವಿತರಾದರು. ಕಬ್ಬಿಣದ ತೆರೆಯ ಇನ್ನೊಂದು ಪಾರ್ಶ್ವದಲ್ಲಿದ್ದ ಈ ಯೋಜನೆಗಳು ವಿಜ್ಞಾನ, ತಂತ್ರಜ್ಞಾನ ಹಾಗೂ ಅಜ್ಞಾನ, ಮೂಢನಂಬಿಕೆ, ಅಧಿಕಾರ ಮೋಹ ಇವೇ ಮೊದಲಾದ ರಾಜಕೀಯ ಮೀರಿದ ಕೇಂದ್ರಿತ ಸರ್ಕಾರ ದೂರದೃಷ್ಟಿ ಇವೆಲ್ಲದರ ಜಯಭೇರಿಯ ದ್ಯೋತಕಗಳಾಗಿ ಕಂಡವು. ಈ ಯೋಜನೆಗಳು ವಾಸ್ತವವಾಗಿ ವೈಚಾರಿಕತೆ ಮತ್ತು ಶಕ್ತಿಯ ಮೂಲಕ ರಾಷ್ಟ್ರದ ವಿಮುಕ್ತಿಯನ್ನು ಪ್ರತಿನಿಧಿಸುತ್ತಿದ್ದವು.

ಉತ್ತರ ಅಮೆರಿಕ ಮತ್ತು ರಷ್ಯಗಳಂತೆ ಭಾರತದಲ್ಲೂ ಅಸಂಖ್ಯಾತ ನದಿಗಳು ಹರಿಯುತ್ತಿದ್ದವು. ಈ ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸುವುದರಿಂದ, ನದಿಗಳನ್ನು ನಿಯಂತ್ರಿಸುವುದರಿಂದ ಒಂದೇ ಕಲ್ಲಿನಲ್ಲಿ ಮೂರು ಹಕ್ಕಿಗಳನ್ನು ಹೊಡೆದಂತಾಗುತ್ತಿತ್ತು. ವಿದ್ಯುಚ್ಛಕ್ತಿ ಉತ್ಪಾದನೆ, ಕೃಷಿಗೆ ನೀರಾವರಿ ಹಾಗೂ ಪ್ರವಾಹಗಳಿಗೆ ತಡೆ ಮೂರನ್ನೂ ಅಣೆಕಟ್ಟುಗಳಿಂದ ಸಾಧಿಸಬಹುದಿತ್ತು. 1953ರ ಮಳೆಗಾಲದಲ್ಲಿ ಗೋದಾವರಿಯಲ್ಲಿ ಬಂದ ಪ್ರವಾಹ ಮಾರಣಾಂತಿಕವಾಗಿತ್ತು. ಈ ಭೀಕರ ಪ್ರವಾಹ ಕಂಡ ಎಂಜಿನಿಯರ್ ಒಬ್ಬರು ಪ್ರಮುಖ ರಾಜಕೀಯ ನಾಯಕರಿಗೆ ಹೀಗೊಂದು ಪತ್ರ ಬರೆದಿದ್ದರು:

> "ಈ ನದಿಯಲ್ಲಿ ಒಳ್ಳೆಯದನ್ನುಂಟು ಮಾಡುವ ಅಪಾರ ಸಾಮರ್ಥ್ಯವಿದೆ. ನದಿಯ ಪ್ರವಾಹದ ನೀರನ್ನು ಲಾಭದಾಯಕವಾಗಿ ಬಳಸಿಕೊಳ್ಳದೇ ಹೋದಲ್ಲಿ ಅದು ಜನರ ಸ್ವಾಸ್ಥ್ಯಕ್ಕೆ ಕುತ್ತಾಗಿ ಪರಿಣಮಿಸಬಹುದು. ಸೂಕ್ತ ರೀತಿಯಲ್ಲಿ ನದಿ ನೀರನ್ನು ಕಾಪಾಡಿಕೊಂಡಲ್ಲಿ, ಪ್ರವಾಹದ ನೀರು ಗೋದಾವರಿ ತೀರದ ಅಗತ್ಯಗಳನ್ನು ಪೂರೈಸುವುದರ ಜೊತೆಗೆ, ಕೃಷ್ಣೆಯೊಂದಿಗೆ ಇದನ್ನು ಜೊತೆಗೂಡಿಸಿದಲ್ಲಿ ಮದ್ರಾಸ್ ಹಾಗೂ ಇನ್ನೂ ದಕ್ಷಿಣದ ತಳದವರೆಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಉಪಯುಕ್ತವಾಗಿ ಒದಗಿ ಬರುವುದು...ಗೋದಾವರಿ-ಕೃಷ್ಣಾ ನೀರನ್ನು ನಿಯಂತ್ರಿಸಿ ಬಳಸಿಕೊಳ್ಳಲು

ಸಕಲ ಪ್ರಯತ್ನಗಳನ್ನೂ ಮಾಡಬೇಕು. ಇದನ್ನು ಸಾಂಗಗೊಳಿಸುವುದರಲ್ಲಿ ವಿಳಂಬ ಮಾಡಬಾರದು."

ಈ ಮಾತುಗಳು, ಧರ್ಮ ಪ್ರಚಾರಕನೊಬ್ಬನು ಈಗಾಗಲೇ ಮತಾಂತರಗೊಂಡವರಿಗೆ ಮತಾಂತರವನ್ನು ಬೋಧಿಸುವಂತಿತ್ತು. ಈ ವೇಳೆಗಾಗಲೇ, ಗೋದಾವರಿ ಹೊರತಾಗಿ, ಮಹತ್ವದ ನೀರಾವರಿ ಯೋಜನೆಗಳನ್ನು ಕೈಗೊಂಡಾಗಿತ್ತು. ಮಹಾನದಿ, ರಿಹಾಂಡ್, ತುಂಗಭದ್ರಾ, ದಾಮೋದರ್ ಮತ್ತು ಸಟ್ಲೇಜ್ ನದಿಗಳಿಗೆ ಅಣೆಕಟ್ಟು ನಿರ್ಮಿಸುವ ಕಾರ್ಯ ಆರಂಭವಾಗಿತ್ತು.

1950ರ ದಶಕದ ಮಧ್ಯಭಾಗದಲ್ಲಿ ಹೆನ್ರಿ ಹಾರ್ಟ್ ಎಂಬ ರಾಜ್ಯಶಾಸ್ತ್ರಜ್ಞರೊಬ್ಬರು 'ನವಭಾರತದ ನದಿಗಳ' ರೂಪಾಂತರವನ್ನು ಕಾವ್ಯಾತ್ಮಕವಾಗಿ ವರ್ಣಿಸಿ ಪುಸ್ತಕ ಬರೆದಿದ್ದಾರೆ. ಹಾರ್ಟ್ ಅವರ ದೃಷ್ಟಿಯಲ್ಲಿ ಈ ಯೋಜನೆಗಳು 'ಸ್ವತಂತ್ರ ಭಾರತದ ಮಹಾನ್ ಸ್ಮಾರಕಗಳಾಗಿದ್ದವು.' "ಇಲ್ಲಿಗೆ ಜನ ಕಾಲಕಾಲಕ್ಕೆ ಅಣೆಕಟ್ಟು, ಕಾಲುವೆ, ವಿದ್ಯುದುತ್ಪಾದನಾ ಕೇಂದ್ರಗಳನ್ನು ನೋಡಲು ಯಾತ್ರಿಕರಂತೆ ಬರುತ್ತಾರೆ." ಈ ಪುಸ್ತಕದಲ್ಲಿ ತುಂಗಭದ್ರಾ ನಿರ್ಮಾಣದ ಬಗ್ಗೆ ಅತ್ಯುತ್ಕೃಷ್ಟವಾದ ವಿವರಗಳು, ವರ್ಣನೆಗಳು ಇವೆ.

ಪೂರ್ಣಗೊಂಡಾಗ ಈ ಅಣೆಕಟ್ಟು ಮೂವತ್ತೆರಡು ದಶಲಕ್ಷ ಘನ ಅಡಿ ಶಿಲೆಯ ಸಾಕಾರಮೂರ್ತಿಯಾಗಿರುತ್ತದೆ. ಐದು ವರ್ಷಗಳ ಕಾಲ ಪ್ರತಿದಿನ 40 ಸಾವಿರ ಘನ ಅಡಿ ಕಲ್ಲನ್ನು ಹಾಸಿ ಹೊದ್ದಿಕೊಂಡು ದೇಹತಾಳಿದ ಮೂರ್ತಿ ಇದು. ಹೋಲಿಕೆಯಿಂದ ಮಾತ್ರ ಇದರ ಪ್ರಮಾಣವನ್ನು ಹಿಡಿಯುವುದು ಸಾಧ್ಯವಾದೀತು. ತುಂಗಭದ್ರಾ ಅಣೆಕಟ್ಟೆಯಲ್ಲಿನ ಕಲ್ಲಿನ ಕೆಲಸವನ್ನು ಊಹಿಸಿಕೊಳ್ಳಿ, ಒಂದು ಹೆದ್ದಾರಿಯಂತೆ, 20 ಅಡಿ ಅಗಲ 6 ಅಂಗುಲ ದಪ್ಪ ಇರುವ ಹೆದ್ದಾರಿಯೋಪಾದಿಯ ನಿರ್ಮಾಣ. ಈ ಹೆದ್ದಾರಿ ಲಖನೌದಿಂದ ಕಲ್ಕತ್ತೆಯವರೆಗೆ ಅಥವಾ ಮುಂಬಯಿಯಿಂದ ಮದ್ರಾಸಿನವರೆಗೆ ಚಾಚಿಕೊಳ್ಳಬಹುದು ಎನ್ನುವಷ್ಟು ವಿಸ್ತಾರವಾದದ್ದು ಎಂದು ಹಾರ್ಟ್ ಬರೆದಿದ್ದಾರೆ.

ಈ ಎಲ್ಲ ನೀರಾವರಿ ಯೋಜನೆಗಳ ಪೈಕಿ ಉತ್ತರ ಭಾರತದ ಭಕ್ರ-ನಂಗಲ್ ಯೋಜನೆ ಅತಿ ಪ್ರತಿಷ್ಠಿತವಾದದ್ದು ಎನ್ನುವುದು ಪ್ರಶ್ನಾತೀತ. 680 ಅಡಿ ಎತ್ತರದ ಭಕ್ರ ಅಣೆಕಟ್ಟು ವಿಶ್ವದಲ್ಲೇ ಅತಿ ಎತ್ತರದ ಎರಡನೆಯ ಅಣೆಕಟ್ಟು. ಕೊಲರೇಡೊ ನದಿಗೆ ನಿರ್ಮಿಸಲಾಗಿರುವ ಗ್ರಾಂಡ್‌ಕೌಲಿ ವಿಶ್ವದ ಅತಿ ದೊಡ್ಡ ಅಣೆಕಟ್ಟು. ಭಕ್ರಾಗೆ 500 ದಶಲಕ್ಷ ಘನ ಅಡಿ ಕಲ್ಲು ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿತ್ತು. ಈಜಿಪ್ಟಿನ ಏಳು ಪಿರಮಿಡ್ಡುಗಳಿಗಿಂತ ಎರಡು ಪಟ್ಟು ಹೆಚ್ಚಿನ ಕಲ್ಲನ್ನು ಈ ಅಣೆ ನುಂಗಿತ್ತು. ಭಕ್ರಾದಿಂದ ಸುಮಾರು ಹತ್ತುಲಕ್ಷ ಕಿಲೋವಾಟ್ ವಿದ್ಯುದುತ್ಪಾದನೆ ನಿರೀಕ್ಷಿಸಲಾಗಿತ್ತು. ಇದು 7.4 ದಶಲಕ್ಷ ಎಕರೆ ಭೂಮಿಗೆ ನೀರುಣಿಸುವ ಸಾಮರ್ಥ್ಯ ಹೊಂದಿರಲಿದೆ ಎಂದು ಅಂದಾಜು ಮಾಡಲಾಗಿತ್ತು. ಅಣೆಕಟ್ಟೆಯ ನೀರನ್ನು ಹರಿಸಲು ಕಾಲುವೆಗಳನ್ನು ನಿರ್ಮಿಸಬೇಕಾಗಿತ್ತು. ಈ ಕಾಲುವೆಗಳನ್ನು ನಿರ್ಮಾಣ ಮಾಡಲು 30 ದಶಲಕ್ಷ ಘನ ಗಜ ಭೂಮಿಯನ್ನು ತೋಡಬೇಕಾಗಿತ್ತು. ಇಷ್ಟು ಪ್ರಮಾಣದಲ್ಲಿ ಅಗೆದ ಮಣ್ಣುಕಲ್ಲುಗಳನ್ನು ಹೊರಕ್ಕೆ ಸಾಗಿಸಬೇಕಾಗಿತ್ತು.

ಭಕ್ರಾನಂಗಲ್ ಯೋಜನೆ ಪಶ್ಚಿಮ ಪಂಜಾಬಿನ ನಿರಾಶ್ರಿತರಿಗೆ ಪರಿಹಾರೋಪಾದಿಯಾಗಿ ಕೈಗೆತ್ತಿಕೊಂಡ ಯೋಜನೆ. ಇವರು ಗಡಿ ಆಚೆ ಕಡೆ ಬಿಟ್ಟು ಬಂದ ಕಾಲುವೆ ವಸತಿಗಳಿಗೆ ಪ್ರತಿಯಾಗಿ ರೂಪಿಸಿದ ಪರಿಹಾರವಾಗಿತ್ತು. ನಿರಾಶ್ರಿತ ರೈತರಲ್ಲಿ ಬಹುತೇಕ ಮಂದಿ ಸಿಖ್ಖರು. ತಮ್ಮ ಜೀವಿತಕಾಲದಲ್ಲೇ, ತಮ್ಮಿಂದ ಕಸಿದುಕೊಳ್ಳಲಾದ ಸಂಪದಭ್ಯುದಯವನ್ನು ಪುನಃಸೃಷ್ಟಿಸುವ ಹುತಾತ್ಮ ಹಂಬಲ ಇವರದಾಗಿತ್ತು. ಭಕ್ರಾನಂಗಲ್ ಅವರಿಗೆ ತಮ್ಮ ಬದುಕನ್ನು ಪುನರ್‌ರೂಪಿಸಿಕೊಳ್ಳಲು ಅಗತ್ಯವಾದ ಎಲ್ಲ ಸಂಪನ್ಮೂಲಗಳನ್ನೂ ಒದಗಿಸಿತು. ಈ ಯೋಜನೆ ಅವರಿಗೆ ಹಿಂದೆ ಅನುಭವಿಸಿದ್ದಕ್ಕಿಂತ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿತ್ತು. ಭಕ್ರಾ ವಿದ್ಯುತ್ ಉತ್ಪಾದನೆಯಿಂದಾಗಿ ಅವರಿಗೆ ಮೊಟ್ಟ ಮೊದಲ ಬಾರಿಗೆ ಕೈಗಾರಿಕಾ ಭವಿಷ್ಯ ರೂಪಿಸಿಕೊಳ್ಳಲು ಅವಕಾಶ ಉಂಟಾಗಿತ್ತು.

ಇಂಡಿಯನ್ ಜರ್ನಲ್ ಆಫ್ ಪವರ್ ಅಂಡ್ ರಿವರ್ ವ್ಯಾಲಿ ಡೆವಲಪ್‌ಮೆಂಟ್- ನಿಯತಕಾಲಿಕದ ವಿಶೇಷ ಸಂಚಿಕೆಯೊಂದರಲ್ಲಿ ಭಕ್ರಾನಂಗಲ್ ಪೂರ್ಣ ವಿವರಗಳನ್ನು ಪ್ರಕಟಿಸಲಾಗಿದೆ. ಈ ವಿಶೇಷ ಸಂಚಿಕೆಯ ಪುಟಗಳು ತೆರೆದುಕೊಳ್ಳುವುದೇ ನಾಲ್ಕು ಸತ್ಯ ಪ್ರಕಾಶಿಸುವ ಚಿತ್ರಗಳಿಂದ. ಮೊದಲನೆಯದು, ಯೋಜನೆ ಆರಂಭವಾದಾಗ ಇದ್ದ ದಟ್ಟ ಅಡವಿಯ ಚಿತ್ರ. ಅದಕ್ಕೆ, "ಭಕ್ರಾದಲ್ಲಿ ಸಟ್ಲೇಜ್ ನದಿಯ ಪೂರ್ವ ವೈಭವ-ಹಿಂದೆ ಇದ್ದ ಒಂದು ನೋಟ" ಎಂದು ಅಡಿ ಬರಹ ಕೊಡಲಾಗಿತ್ತು. ಎರಡನೆಯದು, ಕಮರಿಯುದ್ದಕ್ಕೂ ನೀರೊಳಗೆ ನಿರ್ಮಿಸಲಾದ ಕ್ರೇನ್ ಯಂತ್ರ ಮಾದರಿಯ ಕಟ್ಟೋಣಗಳ ಚಿತ್ರ. ಇದು ನದಿ ದಂಡೆಯಲ್ಲಿ ತೋಡುತ್ತಿರುವ ಚಿತ್ರವಾಗಿತ್ತು. ಇದು ನದಿ ಮೇಲಿನ ಅಕ್ರಮಣದ ಮೊದಲ ಹಂತವಾಗಿತ್ತು. ಮೂರನೆಯದು, ಬೇಸಿಗೆಯಲ್ಲಿ ತೆಗೆದ ಚಿತ್ರ. ನದಿದಂಡೆಯಲ್ಲಿನ ಟ್ರಕ್ಕುಗಳು ಬುಲ್ ಡೋಜರುಗಳಿಗೆ ಹಿನ್ನೆಲೆ ಒದಗಿಸಿದ ಬೋಳಾದ ಬೆಟ್ಟದ ತಪ್ಪಲನ್ನು ತೋರಿಸುವ ಚಿತ್ರವಾಗಿತ್ತು. ಹೀಗೆ, ಅಣೆಕಟ್ಟೆಯ ಕಾಂಕ್ರೀಟ್ ಕೆಲಸ ಶುರುವಾಯಿತು. ಮನುಷ್ಯ ನಿಸರ್ಗವನ್ನು ಬದಲಾಯಿಸಲು ಅಡಿಪಾಯ ನಿರ್ಮಾಣ ಆರಂಭಿಸಿದ್ದ. ಕೊನೆಯದು ಅಣೆಕಟ್ಟೆ ಮೇಲೇಳುತ್ತಿರುವ ಚಿತ್ರ. ಭಾರತ ಹಿಂದೆಂದೂ ಕಾಣದಿದ್ದಂಥ, ಯಂತ್ರ ನೆರವಿನ ಬೃಹತ್ ಪ್ರಮಾಣದ ನಿರ್ಮಾಣ ಚಿತ್ರ: "ಪ್ರಕೃತಿಯೊಂದಿಗೆ ಹೋರಾಟ: ಬೃಹತ್ ಯಂತ್ರಗಳಿಂದ, ನೀರು ಸಂಗ್ರಹಣೆಯ ಒಡಲು ನಿರ್ಮಿಸಲು ಭೂಮಿ ಬಗೆಯುವ ಕೆಲಸ ಸಾಗಿದೆ" ಎಂದು ಈ ಚಿತ್ರಕ್ಕೆ ಅಡಿ ಬರಹವಿದೆ.

ಭಕ್ರಾನಂಗಲ್‌ನಲ್ಲಿ ಕೆಲಸ ಮಾಡಿದ ಸ್ತ್ರೀ ಪುರುಷರೆಲ್ಲ ಭಾರತೀಯರೇ. ಒಬ್ಬ ಕೆಲಸಗಾರ ಮಾತ್ರ ಇದಕ್ಕೆ ಹೊರತು. ಆತ ಅಮೆರಿಕದ ಹಾರ್ವೆ ಸ್ಲೋಕಮ್. ಅಷ್ಟೇನೂ ವಿದ್ಯಾವಂತನಲ್ಲದ ಹಾರ್ವೆ ಸ್ಲೋಕಮ್ ಉಕ್ಕಿನ ಗಿರಣಿಯೊಂದರಲ್ಲಿ ಕಾರ್ಮಿಕನಾಗಿ ಉದ್ಯೋಗ ಆರಂಭಿಸಿ ಕೌಲಿ ಅಣೆಕಟ್ಟು ನಿರ್ಮಾಣದಲ್ಲಿ ಸುಪರಿನ್‌ಟೆಂಡೆಂಟ್ ಸ್ಥಾನಕ್ಕೇರಿದವನು. ಸ್ಲೋಕಮ್ 1952ರಲ್ಲಿ ಭಕ್ರಾ ನಿರ್ಮಾಣ ತಂಡದ ಚೀಫ್ ಎಂಜಿನಿಯರಾಗಿ ನೇಮಕಗೊಂಡ. ತನ್ನದೇ ಆದ ಕಾರ್ಯಶೈಲಿಯಿಂದ ಇಲ್ಲಿ ತನ್ನ ಛಾಪನ್ನು ಸ್ಪಷ್ಟವಾಗಿ ಮೂಡಿಸಿದ. ಭಕ್ರಾ

ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಅಧಿಕಾರಿಗಳು ಕೂಲಿಕಾರರು ಎಲ್ಲರಿಗೂ ಸಮವಸ್ತ್ರ ಕಡ್ಡಾಯವಾಗಿತ್ತು. ಸ್ಲೋಕಮ್ ಬೆಳಿಗ್ಗೆ 8ಕ್ಕೆ ನಿರ್ಮಾಣ ಸ್ಥಳಕ್ಕೆ ಬಂದರೆ ಸಂಜೆ ಬಹಳ ಹೊತ್ತಿನವರೆಗೆ ಅಲ್ಲೇ ಇರುತ್ತಿದ್ದ. ತನ್ನ ಸುತ್ತ ಇದ್ದ ಸೋಮಾರಿತನ, ಅದಕ್ಷತೆಯನ್ನು ಅವನು ಸಹಿಸುತ್ತಿರಲಿಲ್ಲ. ಒಮ್ಮೆ ಟೆಲಿಫೋನ್ ಸಂಪರ್ಕ ಕಡಿದು ಬಿದ್ದಾಗ ಅವನು ನೇರ ಪ್ರಧಾನಮಂತ್ರಿಗೇ ಈ ರೀತಿ ಪತ್ರ ಬರೆದ: "ಸ್ಲೋಕಮ್‌ನಿಂದಲ್ಲ, ದೇವರಿಂದ ಮಾತ್ರ ಸಕಾಲದಲ್ಲಿ ಭಕ್ರಾ ಅಣೆಕಟ್ಟು ನಿರ್ಮಾಣ ಸಾಧ್ಯವಾದೀತು."

1954ರ ಮೊದಲ ವಾರದಲ್ಲಿ ನೆಹರೂ ಭಕ್ರಾಗೆ ಅದರ ಉದ್ಘಾಟನೆಗಾಗಿ ಆಗಮಿಸಿದ್ದರು. ಅವರು ಭಕ್ರಾದ ವಿದ್ಯುತ್ ಕೇಂದ್ರದ ಸ್ವಿಚ್ ಅದುಮಿದಾಗ ನಭದಲ್ಲಿ ಡಕೋಟಾಗಳು ಪುಷ್ಪವೃಷ್ಟಿ ಕರೆದವು. ಇದರ ನಂತರ ನೆಹರೂ ಅಣೆಕಟ್ಟೆಯ ತೂಬಿನ ಬಾಗಿಲುಗಳನ್ನು ತೆರೆದರು. ನೀರು ಧುಮ್ಮಿಕ್ಕಿ ಹರಿದಂತೆ ಗ್ರಾಮಸ್ಥರು ಪಟಾಕಿ, ಬಾಣ ಬಿರುಸು ಹಾರಿಸಿದರು. 150 ಮೈಲಿ ಉದ್ದಕ್ಕೂ ಹಬ್ಬದ ಸಂಭ್ರಮ ಸಡಗರವಿತ್ತು. ಈ ಮಹಾಕಾಲುವೆ ಮತ್ತು ಅದರ ಉಪಕಾಲುವೆಗಳು ರಾಜಸ್ತಾನದ ಮರುಭೂಮಿಯವರೆಗೆ ಹೊಲಗದ್ದೆಗಳಿಗೆ ನೀರುಣಿಸಲೋಸುಗ ನಿರ್ಮಾಣಗೊಂಡಿದ್ದವು.

V

ಭಾರತವನ್ನು ಕೈಗಾರಿಕಾ ರಾಷ್ಟ್ರವನ್ನಾಗಿಸುವುದರಲ್ಲಿ ತಂತ್ರಜ್ಞಾನ ಮತ್ತು ತಂತ್ರಜ್ಞರು ಮಹತ್ವದ ಪಾತ್ರವನ್ನು ನಿರ್ವಹಿಸಬೇಕಿತ್ತು. ಕೇಂಬ್ರಿಜ್‌ನ ವಿದ್ಯಾರ್ಥಿ ದಿನಗಳಿಂದಲೂ ನೆಹರೂ ಆಧುನಿಕ ವಿಜ್ಞಾನದಿಂದ ಆಕರ್ಷಿತರಾಗಿದ್ದರು. "ವಿಜ್ಞಾನ, ಯುಗಧರ್ಮವಾಗಿದ್ದು ಅದೊಂದು ಅಧುನಿಕ ಪ್ರಪಂಚದ ಪ್ರಬಲಶಕ್ತಿಯಾಗಿದೆ" ಎಂದು ನೆಹರೂ ಬರೆದಿದ್ದರು. ತಾವು ವರ್ಣಿಸಿರುವ ವೈಜ್ಞಾನಿಕ ಮನೋಭಾವ, ರಾಜಕೀಯವೂ ಸೇರಿದಂತೆ ಮಾನವೀಯ ಚಟುವಟಿಕೆಗಳ ಎಲ್ಲ ಕ್ಷೇತ್ರಗಳಲ್ಲೂ ಪಸರಿಸಬೇಕೆಂದು ಅವರು ಇಚ್ಛಿಸಿದ್ದರು. ವಿಶೇಷವಾಗಿ, ಭಾರತದಂಥ ಅನಭಿವೃದ್ಧಿ ರಾಷ್ಟ್ರದಲ್ಲಿ ವಿಜ್ಞಾನ ಆರ್ಥಿಕ ಪ್ರಗತಿಯ ಕೈಪಿಡಿಯಾಗಿ ಕೆಲಸ ಮಾಡಬೇಕು; ವಿಜ್ಞಾನಿಗಳು ಉತ್ಪಾದನೆ, ವರ್ಧನೆ ಮತ್ತು ಬಡತನ ನಿರ್ಮೂಲನೆಗೆ ತಮ್ಮ ಕೆಲಸ ಕಾರ್ಯಗಳನ್ನು ಮುಡುಪಿಡಬೇಕು ಎಂದು ನೆಹರೂ ಬಯಸಿದ್ದರು.

ಸ್ವಾತಂತ್ರ್ಯ ಬಂದ ಕಾಲಕ್ಕೆ, ನಿವ್ವಳ ರಾಷ್ಟ್ರೀಯ ಉತ್ಪನ್ನದ ಶೇ. 0.1ರಷ್ಟನ್ನು ವೈಜ್ಞಾನಿಕ ಸಂಶೋಧನೆಗಾಗಿ ಬಳಸಲಾಗುತ್ತಿತ್ತು. ಒಂದು ದಶಕದೊಳಗೆ ಈ ಅಂಕಿ 0.5ರಷ್ಟು ಹೆಚ್ಚಿತು, ನಂತರ ಶೇ ಒಂದರಷ್ಟನ್ನು ದಾಟಿತು. ನೆಹರೂ ಅವರ ಸಕ್ರಿಯ ಮಾರ್ಗದರ್ಶನದಲ್ಲಿ ಹಲವಾರು ಹೊಸ ಸಂಶೋಧನಾ ಪ್ರಯೋಗಾಲಯಗಳನ್ನು ಪ್ರಾರಂಭಿಸಲಾಯಿತು. ಫ್ರೆಂಚ್ ಮಾದರಿಯನ್ನು ಅನುಸರಿಸಿದ ಈ ಪ್ರಯೋಗಾಲಯಗಳನ್ನು ಹಾಲಿ ಇದ್ದ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಿಂದ ಹೊರಗಿರಿಸಲಾಯಿತು. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಕ್ಷೇತ್ರ ವ್ಯಾಪ್ತಿಯೊಳಗೇ ಇಪ್ಪತ್ತನಾಲ್ಕಕ್ಕೂ ಹೆಚ್ಚು ಸ್ವತಂತ್ರ ಪ್ರಯೋಗಾಲಯಗಳನ್ನು

ಸ್ಥಾಪಿಸಲಾಯಿತು. ವಿದೇಶಿ ಪಂಡಿತ ಪತ್ರಿಕೆಗಳಿಗೆ ಪ್ರಬಂಧಗಳನ್ನು ಸೃಷ್ಟಿಸುವ ಬದಲು ಭಾರತೀಯರಿಗಾಗಿಯೇ ಹೊಸ ಉತ್ಪನ್ನಗಳನ್ನು ರೂಪಿಸಲು, ಅಭಿವೃದ್ಧಿಪಡಿಸಲು ಈ ಪ್ರಯೋಗಾಲಯಗಳಿಗೆ ಉತ್ತೇಜನ ನೀಡಲಾಯಿತು.

ನೆಹರೂ ಪ್ರಾರಂಭದಿಂದಲೂ ಸತತವಾಗಿ ಪ್ರೋತ್ಸಾಹಿಸಿದ ಭಾರತೀಯ ವಿಜ್ಞಾನಿಯೆಂದರೆ ಕೇಂಬ್ರಿಜ್ ವಿದ್ಯಾರ್ಥಿಯಾದ ಭೌತವಿಜ್ಞಾನಿ ಹೋಮಿ ಭಾಭಾ. ಭಾಭಾ ಅವರು ಎರಡು ಪ್ರಮುಖ ವೈಜ್ಞಾನಿಕ ಸಂಸ್ಥೆಗಳಿಗೆ ಹಣಕಾಸು ನೀಡಿ, ಮಾರ್ಗದರ್ಶನ ಮಾಡಿದರು. ಮೊದಲನೆಯದು, ಮುಂಬಯಿಯ ತಾತಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್. ಈ ಸಂಸ್ಥೆಯ ಮುಖ್ಯ ಧ್ಯೇಯ, ಹೆಸರೇ ಸೂಚಿಸುವಂತೆ, ಸಂಶೋಧನೆಯಾಗಿತ್ತು. ಇಲ್ಲಿ ವಿಶ್ವಮಟ್ಟದ ಭೌತವಿಜ್ಞಾನ ಮತ್ತು ಗಣಿತವಿಜ್ಞಾನದ ವಿಭಾಗಗಳಿದ್ದವು. ಜೊತೆಗೆ ಇದು ಭಾರತದಲ್ಲಿ ಮೊಟ್ಟ ಮೊದಲಿಗೆ ಕಂಪ್ಯೂಟರ್ ವ್ಯವಸ್ಥೆಯ ವಿನ್ಯಾಸವನ್ನು ರೂಪಿಸಿತ್ತು. ಎರಡನೆಯದು ಪರಮಾಣುಶಕ್ತಿ ಆಯೋಗ. ಭಾರತದ ಬೈಜಿಕ ವಿದ್ಯುಚ್ಛಕ್ತಿ ಸ್ಥಾವರಗಳನ್ನು ನಿರ್ಮಿಸಿ, ಬೆಳೆಸುವುದು ಇದರ ಕರ್ತವ್ಯವಾಗಿತ್ತು. 1964ರ ವಾರ್ಷಿಕ ಆಯವ್ಯಯ ಮುಂಗಡಪತ್ರದಲ್ಲಿ ಆಯೋಗಕ್ಕೆ ಒಂದು ನೂರು ದಶಲಕ್ಷ ರೂಪಾಯಿಯ ಆರ್ಥಿಕ ಬೆಂಬಲ ನೀಡಲಾಯಿತು.

ಹಲವಾರು ಎಂಜಿನಿಯರಿಂಗ್ ಶಾಲಾ ಕಾಲೇಜುಗಳನ್ನು ಸ್ಥಾಪಿಸಲಾಯಿತು. ಇವುಗಳಲ್ಲಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮುಖ್ಯವಾದದ್ದು. 1954-64ರ ಅವಧಿಯಲ್ಲಿ ಇಂಥ ಐದು ತಾಂತ್ರಿಕ ಬೋಧನಾ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಹೊಸ ಪ್ರಯೋಗಾಲಯಗಳಂತೆ, ಹೊಸ ಕಾಲೇಜುಗಳ ಹೊಣೆಯೂ ಸ್ವದೇಶಿ ತಾಂತ್ರಿಕ ಸಾಮರ್ಥ್ಯವನ್ನು ವೃದ್ಧಿಗೊಳಿಸುವುದೇ ಆಗಿತ್ತು. ವೈಜ್ಞಾನಿಕ-ತಾಂತ್ರಿಕ ಪ್ರಾಯೋಗಿಕ ಪರಿಜ್ಞಾನಗಳಿಗಾಗಿ, ವೈಜ್ಞಾನಿಕ ಸಾಮಗ್ರಿ ಸಲಕರಣೆಗಳಿಗಾಗಿ ಭಾರತದ ವಿದೇಶಿ ಅವಲಂಬನೆಯನ್ನು ಕಡಿಮೆ ಮಾಡುವುದು ನೆಹರೂ-ಭಾಭಾ ಇವರಿಬ್ಬರ ಸಂಕಲ್ಪವಾಗಿತ್ತು. "ವಿದೇಶದಿಂದ ಯಾವುದಾದರೂ ಒಂದು ವಸ್ತುವನ್ನು ಆಮದು ಮಾಡಿಕೊಂಡಲ್ಲಿ ಅವರಿಂದ ದಕ್ಕುತ್ತಿದ್ದುದ್ದು ಒಂದು ನಿರ್ದಿಷ್ಟ ವಸ್ತು ಮಾತ್ರ. ಆದರೆ ಅದೇ ವಸ್ತುವನ್ನು ಭಾರತೀಯರೇ ತಯಾರಿಸಿದಲ್ಲಿ ಅದರ ಎಲ್ಲ ಮುಖ್ಯ ವಿಷಯಗಳೂ, ಪಾಠ-ಪರಿಣತಿಗಳೂ ಅವರಿಗೇ ಲಭ್ಯವಾಗುತ್ತವೆ" ಎಂಬುದನ್ನು ಇವರಿಬ್ಬರೂ ದೃಢವಾಗಿ ನಂಬಿದ್ದರು.

VI

ಭಾರತದ ಯೋಜನೆಗಳು ಕೈಗಾರಿಕಾ ಪಕ್ಷಪಾತಿಯಾಗಿವೆ ಎನ್ನುವ ಟೀಕೆಗಳು ಕೇಳಿಬಂದಿದ್ದವು. ಇಂಥ ಟೀಕೆಟಿಪ್ಪಣಿಗಳ ತೀಕ್ಷ್ಣತೆಯನ್ನು ತಗ್ಗಿಸಲೆಂಬಂತೆ ಕೃಷಿ ಕ್ಷೇತ್ರದ ಉದ್ಧಾರಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. 1952ರ ಅಕ್ಟೋಬರ್ 2ರಂದು, ಮಹಾತ್ಮ ಗಾಂಧೀಜಿಯವರ ಜಯಂತಿಯ ಅಂಗವಾಗಿ ರಾಷ್ಟ್ರವ್ಯಾಪಿ ಸಮುದಾಯ

ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ರಾಷ್ಟ್ರೀಯ ಪ್ರಸಾರದ ಮೂಲಕ ಉದ್ಘಾಟಿಸಲಾದ ಈ ಕಾರ್ಯಕ್ರಮದ ಅನ್ವಯ ಅಂದು ಭಾರತದ ಉದ್ದಗಲ ಐವತ್ತು ಯೋಜನೆಗಳ ಕಾರ್ಯಾರಂಭ ಮಾಡಲಾಯಿತು. ಭಾರತ ಮತ್ತು ಅಮೆರಿಕ ಸರ್ಕಾರಗಳು ಇದಕ್ಕೆ ಜಂಟಿಯಾಗಿ ಹಣ ಒದಗಿಸಿದ್ದವು. ರಸ್ತೆ ನಿರ್ಮಾಣ, ಬಾವಿಗಳನ್ನು ತೋಡುವುದು, ಪಶುಸಂಗೋಪನೆ ಮತ್ತು ಸುಧಾರಿತ ಬೇಸಾಯ ಕ್ರಮಗಳ ಅನುಷ್ಠಾನ–ಸಮುದಾಯ ಅಭಿವೃದ್ಧಿ ಯೋಜನೆಯ ಮುಖ್ಯ ಕಾರ್ಯಕ್ರಮಗಳಾಗಿದ್ದವು.

ಮುಖ್ಯಮಂತ್ರಿಗಳು, ಸಚಿವರುಗಳು, ಕಮಿಷನರುಗಳು, ಮತ್ತಿತರ ಗಣ್ಯವ್ಯಕ್ತಿಗಳು ಖುದ್ದಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ರಸ್ತೆ ನಿರ್ಮಾಣಕ್ಕೆ ಗುದ್ದಲಿ ಪೂಜೆ, ಆಸ್ಪತ್ರೆ-ಶಾಲಾ ಕಟ್ಟಡಗಳಿಗೆ ಶಂಕುಸ್ಥಾಪನೆಗಳನ್ನು ನೆರವೇರಿಸಿದರು. ದೆಹಲಿಗೆ ಹನ್ನೆರಡು ಮೈಲಿ ದೂರದಲ್ಲಿರುವ ಅಲೀಪುರ ಗ್ರಾಮದಲ್ಲಿ ಜವಹರಲಾಲ್ ನೆಹರೂ ಅವರು ಭೂಮಿ ಅಗೆಯುವ ಮೂಲಕ ರಸ್ತೆ ನಿರ್ಮಾಣ ಕಾರ್ಯವನ್ನು ಉದ್ಘಾಟಿಸಿದರು. ನೆಹರೂ ಜಾಕೆಟ್ ತೆಗೆದು ಸ್ವಲ್ಪಕಾಲ ರಸ್ತೆ ನಿರ್ಮಾಣಕಾರ್ಯದಲ್ಲಿ ತುಂಬ ಶಕ್ತಿ ಉತ್ಸಾಹಗಳಿಂದ ಸೇವೆ ಸಲ್ಲಿಸಿದರು. ಅವರೊಂದಿಗೆ ಬಂದಿದ್ದ ಅಮೆರಿಕ ರಾಯಭಾರಿಯೂ ತಲೆಯ ಮೇಲೆ ಮಣ್ಣು ಹೊತ್ತರು. ಉಳಿದ ಅಧಿಕಾರಿಗಳೆಲ್ಲರೂ ಇವರಿಬ್ಬರಷ್ಟು ಸುಟಿಯಾಗಿರಲಿಲ್ಲ. ಅಧಿಕಾರಿಯೊಬ್ಬ ಮಣ್ಣಿನ ಮಂಕರಿಯನ್ನು ಕೈಯ್ಯಲ್ಲಿ ಹೊತ್ತು ನಡೆದಿರುವುದನ್ನು ಕಂಡ ಗ್ರಾಮಸ್ಥರು "ಸರ್‌ಪರ್...ಸರ್‌ಪರ್...ಮೂರ್ಖಾ, ಕೈಯ್ಯಲ್ಲಲ್ಲ, ಮಂಕರಿಯನ್ನು ತಲೆ ಮೇಲೆ ಹೊತ್ತುಕೊ" ಎಂದು ಕೂಗಿ ಹೇಳಿದರು. ಗ್ರಾಮಸ್ಥರನ್ನುದ್ದೇಶಿಸಿ ಮಾತನಾಡಿದ ನೆಹರೂ "ಸಮುದಾಯ ಅಭಿವೃದ್ಧಿ ಯೋಜನೆ ಶಾಂತಿಯುತವಾಗಿ ಗ್ರಾಮೀಣ ಪ್ರದೇಶದಲ್ಲಿ ಕ್ರಾಂತಿಯನ್ನುಂಟು ಮಾಡುವುದು, ಬೇರೆಡೆಯಂತೆ ಅಧಿಕಾರಿಗಳ ತಲೆ ಒಡೆಯುವ ಮೂಲಕವಲ್ಲ" ಎಂದು ತಿಳಿಸಿದರು.

ಕಾರ್ಯತಃ ಈ ಯೋಜನೆ ಎಷ್ಟರ ಮಟ್ಟಿಗೆ ಯಶಸ್ವಿಯಾದವು? ಎರಡು ವರ್ಷಗಳ ನಂತರ ಮಾನವಶಾಸ್ತ್ರಜ್ಞ ಎಸ್.ಸಿ. ಡುಬೆ ಉತ್ತರ ಪ್ರದೇಶದ ಪಶ್ಚಿಮ ಭಾಗದ ಒಂದು ಸಮುದಾಯ ಅಭಿವೃದ್ಧಿ ಕಾರ್ಯದ ಅಧ್ಯಯನ ನಡೆಸಿದರು. ಅವರು, ಗ್ರಾಮೀಣ ಹಂತದ ಕಾರ್ಯಕರ್ತ ಹಾಗೂ ರೈತರಿಗೆ ಹೊಸ ವಿಚಾರಗಳನ್ನು ತಲುಪಿಸುವ ಹೊಣೆಹೊತ್ತ ಸರ್ಕಾರಿ ಅಧಿಕಾರಿಯೊಬ್ಬನ ದೃಷ್ಟಿಕೋನ, ಸ್ವಂತ ಅಭಿಪ್ರಾಯಗಳನ್ನು ತಿಳಿಯುವ ಮೂಲಕ ಈ ಅಧ್ಯಯನ ನಡೆಸಿದರು.

ಡುಬೆ ಅವರ ಪ್ರಕಾರ 'ಪರಿವರ್ತನೆಯ ಕಾರ್ಯಸಾಧಕರಾದ' ಇವರುಗಳು ಶಕ್ತಿಶಾಲಿಗಳೂ ಸಾಹಸಿಗಳೂ ಆಗಿದ್ದರು. ಸೂರ್ಯೋದಯಕ್ಕೆ ಕೆಲಸ ಆರಂಭಿಸುತ್ತಿದ್ದ ಇವರು ಸಂಜೆಯವರೆಗೆ ದಿನವಿಡೀ ದುಡಿಯುತ್ತಿದ್ದರು. ಹೊಸಬಿತ್ತನೆ ಬೀಜಗಳು ಮತ್ತು ರಾಸಾಯನಿಕ ಗೊಬ್ಬರಗಳ ಉಪಯುಕ್ತತೆಯನ್ನು ರೈತರಿಗೆ ತಿಳಿಯಹೇಳುವುದು, ಪ್ರಾತ್ಯಕ್ಷಿಕೆಗಳಿಂದ ತೋರಿಸಿಕೊಡುವುದು ಇವರ ಕೆಲಸಗಳಲ್ಲೊಂದಾಗಿತ್ತು. ಇದಕ್ಕಾಗಿ ರೈತರ ಹೊಲಗದ್ದೆಗಳನ್ನು

ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ಇಲ್ಲಿ ಗ್ರಾಮ ಹಂತದ ಕಾರ್ಯಕರ್ತ ಗುಣಿ ತೋಡುವುದು, ಹೊಸ ಬಿತ್ತನೆ ಬೀಜ ಬಿತ್ತುವುದು, ಗೊಬ್ಬರ ಉಣಿಸುವುದು ಇತ್ಯಾದಿಗಳನ್ನು ರೈತರಿಗೆ ಮಾಡಿ ತೋರಿಸುತ್ತಿದ್ದ. ಆಯ್ದ ಹೊಲಗದ್ದೆ ತೋಟಗಳಲ್ಲಿ ವಿವಿಧ ಬಗೆಯ ಬೆಳೆಗಳನ್ನು ಬಿತ್ತಲಾಯಿತು, ವಿವಿಧ ರಾಸಾಯನಿಕ ಗೊಬ್ಬರಗಳನ್ನು ಬಳಸಲಾಯಿತು. ಗ್ರಾಮಹಂತದ ಕಾರ್ಯಕರ್ತ ರೈತರಿಗೆ ಮುಫತ್ತಾಗಿ ಆಂಗ್ರೇಜಿ ಗೊಬ್ಬರವನ್ನೂ ಹಂಚಿದ.

ಉತ್ತರ ಪ್ರದೇಶದ ರೈತರು ಹೊಸ ಕೃಷಿತಂತ್ರಗಳ ಬಗ್ಗೆ ಡೋಲಾಯಮಾನದಿಂದಿದ್ದರು. ಗ್ರಾಮಹಂತದ ಕಾರ್ಯಕರ್ತ (ವಿಲೇಜ್ ಲೆವೆಲ್ ವರ್ಕರ್-ವಿ.ಎಲ್.ಡಬ್ಲ್ಯು) ಮತ್ತು ರೈತರ ನಡುವೆ ನಡೆದ ಸಂಭಾಷಣೆಯ ಒಂದು ಮಾದರಿ ಇಲ್ಲಿದೆ. ರೈತರನ್ನು ಎಂ.ಎಸ್. ಎಂದು ಹೆಸರಿಸಲಾಗಿದೆ.

ವಿ.ಎಲ್.ಡಬ್ಲ್ಯು: ಹೊಸ ಬಿತ್ತನೆ ಬೀಜದ ಬಗ್ಗೆ ನಿಮಗೇನನ್ನಿಸುತ್ತದೆ?

ಎಂ.ಎಸ್.: ನನಗೇನು ಗೊತ್ತಾಗುತ್ತದೆ. ಅದು ಚೆನ್ನಾಗಿದೆ ಎಂದು ಸರ್ಕಾರ ಭಾವಿಸಿದ್ದಲ್ಲಿ ಅದು ಚೆನ್ನಾಗಿಯೇ ಇರಬೇಕು.

ವಿ.ಎಲ್.ಡಬ್ಲ್ಯು: ಅದು ಸ್ಥಳೀಯ ರಖಂಗಿಂತ ಉತ್ತಮ ಎನ್ನಿಸುತ್ತದೆಯೇ?

ಎಂ.ಎಸ್.: ಹೌದು. ಅದಕ್ಕೆ ಹೆಚ್ಚು ರೋಗ ನಿರೋಧಕ ಶಕ್ತಿ ಇದೆ. ಅದು ಹಿಮಪಾತ ಮತ್ತು ಮಳೆಯನ್ನು ತಡೆದುಕೊಳ್ಳಬಲ್ಲದು. ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ.

ವಿ.ಎಲ್.ಡಬ್ಲ್ಯು: ಇಳುವರಿ ಹೇಗೆ?

ಎಂ.ಎಸ್.: ಆ ಬಗ್ಗೆ ನಾನು ಏನೂ ಹೇಳಲಾರೆ. ಕೆಲವರು ಹೆಚ್ಚು ಇಳುವರಿ ಕೊಡುತ್ತದೆ ಎನ್ನುತ್ತಾರೆ, ಇನ್ನು ಕೆಲವರು ಹಾಗೇನಿಲ್ಲ ಎನ್ನುತ್ತಾರೆ.

ವಿ.ಎಲ್.ಡಬ್ಲ್ಯು: ಅಷ್ಟು ರುಚಿಕರವಾಗಿಲ್ಲ ಎಂದು ಕೆಲವರು ಹೇಳುತ್ತಾರಲ್ಲ...

ಎಂ.ಎಸ್.: ಅವರ ಮಾತು ನಿಜ. ಆದರೆ ಅದು ಪೂರ್ತಿ ಸತ್ಯವಲ್ಲ. ರೊಟ್ಟಿಯನ್ನು ಬಿಸಿಬಿಸಿಯಾಗಿ ಉಣಬಡಿಸಿದಲ್ಲಿ ಅದು ರುಚಿಕರವಾಗಿಯೇ ಇರುತ್ತೆ. ತಣ್ಣಗಾದ ಮೇಲೆ ಚಕ್ಕಳದಂತಾಗುತ್ತದೆ. ಆಗ ಅದು ಬಿಸಿಯಲ್ಲಿದ್ದಂತೆ ರುಚಿಯಾಗಿರುವುದಿಲ್ಲ. ಈ ಗೋಧಿ ತಿಂದರೆ ನಾವು ದುರ್ಬಲರಾಗುತ್ತೇವೆ ಎಂದು ಜನ ಆಡಿಕೋತಾರೆ.

ವಿ.ಎಲ್.ಡಬ್ಲ್ಯು: ನಿನ್ನ ಅನುಭವ ಏನು?

ಎಂ.ಎಸ್.: ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಮಂದಿ ಅಜೀರ್ಣದಿಂದ ಬಳಲುತ್ತಿದ್ದಾರೆ. ನಮ್ಮ ಮಕ್ಕಳಿಗೆ ಕೆಮ್ಮು, ಶೀತ ಬರುತ್ತಿದೆ. ಬಹುಶಃ ಹೊಸಬಿತ್ತನೆ ಬೀಜ ಮತ್ತು ಕಬ್ಬು ಇದಕ್ಕೆ ಕಾರಣವಿರಬಹುದು. ಜೊತೆಗೆ ಯುದ್ಧಗಳು ವಾಯುಮಾಲಿನ್ಯವುಂಟು ಮಾಡಿರುವುದೂ ಕಾರಣವಿದ್ದೀತು.

ವಿ.ಎಲ್.ಡಬ್ಲ್ಯು: ಹೊಸ ರಾಸಾಯನಿಕ ಗೊಬ್ಬರಗಳ ಬಗ್ಗೆ ಏನನ್ನಿಸುತ್ತದೆ.

ಎಂ.ಎಸ್.: ಅದರಿಂದ ಇಳುವರಿ ಹೆಚ್ಚುತ್ತದೆ. ಇದು ಸಂಶಯಾತೀತ. ಆದರೆ ಅದು ಭೂಮಿಯ ಫಲವಂತಿಕೆಯನ್ನೂ ಧಾನ್ಯದ ಸತ್ವವನ್ನೂ ನಾಶಮಾಡುತ್ತದೆ.

ಹೊಸ ಬಿತ್ತನೆ ಬೀಜಗಳು ಮತ್ತು ರಾಸಾಯನಿಕ ಗೊಬ್ಬರಗಳ ಬಗ್ಗೆ ಭಾರತದ ರೈತರಲ್ಲಿ ಮಿಶ್ರ ಭಾವನೆಗಳಿದ್ದವು. ಆದರೆ ಅವರು ನೀರು ಪೂರೈಕೆಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿದರು. ಎಸ್.ಸಿ. ದುಬೆ ಉತ್ತರ ಪ್ರದೇಶದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯ ಅಧ್ಯಯನ ಕೈಗೊಂಡಿದ್ದ ಕಾಲದಲ್ಲೇ ಬ್ರಿಟಿಷ್ ಮಾನವಶಾಸ್ತ್ರಜ್ಞರಾದ ಸ್ಕಾರ್ಲೆಟ್ ಎಪ್‌ಸ್ಟೀನ್ ಎನ್ನುವವರು ದಕ್ಷಿಣ ಮೈಸೂರಿನ ವಾಂಗ್ಲಾ ಎಂಬ ಹಳ್ಳಿಯಲ್ಲಿ ವಾಸಮಾಡುತ್ತಿದ್ದರು. ಈ ಹಳ್ಳಿ ಆಗಷ್ಟೇ ಕಾಲುವೆ ನೀರಾವರಿಯ ಸೌಕರ್ಯವನ್ನು ಪಡೆದಿತ್ತು. ನೀರಾವರಿ ಸೌಲಭ್ಯ ಬರುವವರೆಗೆ ಡೆಕ್ಕನ್ ಪ್ರಸ್ಥ ಭೂಮಿಯ ಇತರೆ ಹಳ್ಳಿಗಳಂತೆ ಈ ಹಳ್ಳಿಯಲ್ಲೂ ರೈತರು ಸ್ವಂತ ಬಳಕೆಗಾಗಿ ರಾಗಿ, ಜೋಳ, ನವಣೆಗಳನ್ನು ಬೆಳೆಯುತ್ತಿದ್ದರು. ನೀರಾವರಿ ಸೌಕರ್ಯ ಒದಗಿದ ನಂತರ ಭತ್ತ, ಕಬ್ಬು ಬೆಳೆಯಲಾರಂಭಿಸಿದರು. ಈ ಬೆಳೆಗಳನ್ನು ಗ್ರಾಮದ ಹೊರಗೆ ಲಾಭಕ್ಕೆ ಮಾರಲಾರಂಭಿಸಿದರು. ಭತ್ತದಿಂದ ಎಕರೆಗೆ 136 ರೂಪಾಯಿ ಲಾಭ ಬಂದರೆ ಕಬ್ಬಿನಿಂದ ಎಕರೆಗೆ 980 ರೂಪಾಯಿ ಲಾಭ ಸಿಗುತ್ತಿತ್ತು. ಇದು ಸ್ಥಳೀಯ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರಿತು. ರೈತರ ಜೀವನ ಶೈಲಿಯಲ್ಲಿ ಬದಲಾವಣೆ ತಂದಿತು. ನೀರಾವರಿ ಬರುವ ಮುನ್ನ ವಾಂಗ್ಲಾ ರೈತರು ಅರೆ ಹೊಟ್ಟೆಯ, ಚಿಂದಿಬಟ್ಟೆಯ ಬಡವರಾಗಿದ್ದರು. ಹಳ್ಳಿಯಿಂದ ಹೊರಕ್ಕೆ ಹೋಗುತ್ತಿರಲಿಲ್ಲ. ಆದರೆ ಈಗ ಇಲ್ಲಿನ ರೈತರು ಹೊಟ್ಟೆ ತುಂಬ ಉಂಡು, ಮೈ ತುಂಬ ಬಟ್ಟೆ ತೊಡುತ್ತಿದ್ದರು. ಮಡದಿ ಮಕ್ಕಳಿಗೂ ವರ್ಣರಂಜಿತ ಉಡುಗೆ ತೊಡುಗೆಗಳನ್ನು ಕೊಡಿಸಿ ಮದುವೆ-ಮುಂಜಿ ಸಮಾರಂಭಗಳಿಗೆ ಕರೆದೊಯ್ಯುತ್ತಿದ್ದರು. ವಾಂಗ್ಲಾ ರೈತರು ಈಗ ಹತ್ತಿರದ ಮಂಡ್ಯ ಪಟ್ಟಣಕ್ಕೆ ಪದೇ ಪದೇ ಹೋಗಿಬರಲಾರಂಭಿಸಿದರು. ಮಂಡ್ಯದ ಹೋಟೆಲುಗಳಿಗೆ, ಹೆಂಡದ ಅಂಗಡಿಗಳಿಗೆ ಭೇಟಿ ಕೊಡಲಾರಂಭಿಸಿದರು. ರಾಗಿಮುದ್ದೆ ಜಾಗಕ್ಕೆ ಅನ್ನ ಬಂತು.

ಇದೆಲ್ಲವೂ ಸಾಧ್ಯವಾದದ್ದು ನೀರಾವರಿ ಸೌಕರ್ಯ ವಿಸ್ತರಣೆಯಿಂದಾಗಿ. ಸ್ಕಾರ್ಲೆಟ್ ಎಪ್‌ಸ್ಟೀನ್ ಸಾಧಾರಪಡಿಸಿರುವಂತೆ ಕಾಲುವೆ ನೀರು ಗ್ರಾಮದ ಇತಿಹಾಸಕ್ಕೆ ಹೊಸ ತಿರುವು ನೀಡಿತು. ಅದೊಂದು ಸಂಧಿಕಾಲವಾಯಿತು. ಹುಟ್ಟು, ಸಾವು, ಮದುವೆ, ನಾಮಕರಣ, ಕೊಲೆ, ಇತ್ಯಾದಿ ಮಹತ್ವದ ಘಟನೆಗಳನ್ನು ಗ್ರಾಮಸ್ಥರು ಇದು ಕಾಲುವೆ ಬರುವುದಕ್ಕೆ ಮುಂಚೆ ಆದದ್ದು, ಬಂದನಂತರ ಆದದ್ದು ಎಂದು ಕಾಲ ಗುರುತಿಸಲಾರಂಭಿಸಿದರು.

VII

ಖಾತ್ರಿಯಾದ ನೀರಾವರಿ ಮತ್ತು ರಾಸಾಯನಿಕ ಗೊಬ್ಬರ ಪೂರೈಕೆಯಿಂದ ಕೃಷಿ ಇಳುವರಿ ಹೆಚ್ಚಿತು. ಆದರೆ ಇದರಿಂದ ಗ್ರಾಮೀಣ ಭಾರತದ ಮೂಲಭೂತ ಸಮಸ್ಯೆಯೊಂದನ್ನು ಇತ್ಯರ್ಥಗೊಳಿಸಲಾಗಲಿಲ್ಲ. ಭೂ ಒಡೆತನದಲ್ಲಿ ಅಸಮತೆ ಆ ಸಮಸ್ಯೆ. ಆದ್ದರಿಂದ ಭೂಹೀನ ರೈತರನ್ನು ಇದುವರೆಗೂ ನೇಗಿಲ ದರ್ಶನ ಕಾಣದ ಅಕ್ಷತ ಜಮೀನುಗಳಲ್ಲಿ ನೆಲಸುವಂತೆ ಪ್ರೋತ್ಸಾಹಿಸಲಾಯಿತು. ಸ್ವಾತಂತ್ರ್ಯ ಬಂದ ಮೊದಲ ದಶಕದಲ್ಲಿ, ಹತ್ತಿರ ಹತ್ತಿರ ಐದು

ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಭೂಹೀನ ರೈತರಿಗೆ ವಸತಿಗಳನ್ನು ಕಲ್ಪಿಸಲಾಯಿತು. ಹೆಚ್ಚಾಗಿ ಈ ಭೂಮಿ ಮಧ್ಯಭಾರತದ ಮಲೇರಿಯಾ ಪೀಡಿತ ಪರ್ವತ ಪ್ರದೇಶವಾಗಿತ್ತು. ಪಶ್ಚಿಮ ಘಟ್ಟದಲ್ಲೂ ಒಂದಷ್ಟು ಜಮೀನಿನಲ್ಲಿ ಭೂಹೀನರಿಗೆ ಅವಕಾಶ ಮಾಡಿಕೊಡಲಾಯಿತು. ಮೊದಲು ಈ ಪ್ರದೇಶಗಳಲ್ಲಿ, ವಂಶಪಾರಂಪರ್ಯವಾಗಿ ಮಲೇರಿಯಾಗೆ ಪ್ರತಿರೋಧ ಬೆಳೆಸಿಕೊಂಡಿದ್ದ ಗುಡ್ಡಗಾಡು ಜನರಿದ್ದರು. ಡಿಡಿಟಿ ಅನ್ವೇಷಣೆಯಿಂದಾಗಿ ಕಾಡುಗಳನ್ನು ಮಲೇರಿಯಾದಿಂದ ಮುಕ್ತಗೊಳಿಸುವುದು ಸರ್ಕಾರಕ್ಕೆ ಸಾಧ್ಯವಾಯಿತು. ಈ ಪ್ರದೇಶದಲ್ಲಿ ಭೂಮಿ ಸಹಜವಾಗಿಯೇ ಫಲವತ್ತಾಗಿತ್ತು. ಸುಣ್ಣ, ಪೊಟಾಸಿಯಂ ಮೊದಲಾದ ಸಾವಯುವಗಳಿಂದ ಸಂಪದ್ಭರಿತವಾಗಿತ್ತು. ಈ ಭೂಮಿಯಲ್ಲಿ ಒಕ್ಕಲುತನ ಮಾಡಲಿಚ್ಛಿಸಿದ ರೈತರಿಗೇನೂ ಕೊರತೆ ಇರಲಿಲ್ಲ.

ಭೂಹೀನತೆಯ ಸಮಸ್ಯೆ ನಿವಾರಣೆಗೆ ಇದ್ದ ಎರಡನೆಯ ಮಾರ್ಗ, ತಮ್ಮ ಸ್ವಾಧೀನದಲ್ಲಿರುವ ಜಮೀನನ್ನು ಸ್ವಯಂಪ್ರೇರಣೆಯಿಂದ ಬಿಟ್ಟುಕೊಡುವಂತೆ ಭಾರಿ ಜಮೀನ್ದಾರರುಗಳ ಮನ ಒಲಿಸುವುದೇ ಆಗಿತ್ತು. ಭೂದಾನ. ಇದು ಮಹಾತ್ಮಗಾಂಧಿಯವರ ಶಿಷ್ಯ ವಿನೋಬಾ ಭಾವೆಯವರು ಕಂಡು ಹಿಡಿದ ಮಾರ್ಗ. 1951ರಲ್ಲಿ ವಿನೋಬಾ ಭಾವೆಯವರು ಭೂದಾನ ಪಾದಯಾತ್ರೆ ಕೈಗೊಂಡರು. ಕಮ್ಯುನಿಸ್ಟ್ ಪ್ರಾಬಲ್ಯದ ತೆಲಂಗಾಣದಿಂದ ಭೂದಾನ ಪಾದಯಾತ್ರೆ ಆರಂಭಿಸಿದರು. ಪೋಚೆಂಪಲ್ಲಿ ಎನ್ನುವ ಗ್ರಾಮದಲ್ಲಿ ವಿನೋಬಾ ನೂರು ಎಕರೆ ಭೂಮಿಯನ್ನು ದಾನ ಮಾಡುವಂತೆ ರಾಮಚಂದ್ರ ರೆಡ್ಡಿ ಎಂಬ ಜಮೀನ್ದಾರನ ಮನ ಒಲಿಸುವುದರಲ್ಲಿ ಯಶಸ್ವಿಯಾದರು. ಈ ಭೂದಾನದಿಂದ ಭಾವೆಯವರ ಹುಮ್ಮಸ್ಸು ಹೆಚ್ಚಿತು. ರಾಷ್ಟ್ರವ್ಯಾಪಿ ಪಾದಯಾತ್ರೆ ನಡೆಸಿದರು. ಇದು ಭೂದಾನ ಚಳವಳಿ ಎಂದೇ ಖ್ಯಾತಿ ಪಡೆಯಿತು. ಭಾವೆಯವರು 50 ಸಾವಿರ ಮೈಲಿ ಪಾದಯಾತ್ರೆ ನಡೆಸಿ ಅಂದಾಜು ನಲವತ್ತು ಲಕ್ಷ ಎಕರೆ ಹೆಚ್ಚುವರಿ ಜಮೀನನ್ನು ದಾನವಾಗಿ ಸ್ವೀಕರಿಸಿದರು. ಶುರುವಿಗೆ, ಸಮುದಾಯ ಅಭಿವೃದ್ಧಿ ಯೋಜನೆಯಂತೆ ವಿನೋಬಾರ ಭೂದಾನ ಪಾದಯಾತ್ರೆಯೂ ಯಶಸ್ಸು ಗಳಿಸಿತು. ಇದು ಹಿಂಸಾಕ್ರಾಂತಿಗೆ ಗಾಂಧೀ ಪರ್ಯಾಯವಾಗಿತ್ತು. ಆದರೆ ಆನಂತರದ ದಿನಗಳಲ್ಲಿ ಭೂದಾನ ಚಳವಳಿ ಮೊದಲಿನ ಕೀರ್ತಿಗೆ ಭಾಜನವಾಗಲಿಲ್ಲ. ಎಲ್ಲ ಸಾಧುಸಂತರಂತೆ ವಿನೋಬಾರೂ ಸಾಧಾರಣ ರೀತಿಯ ಭೂದಾನ ಕಾರ್ಯಕ್ರಮಗಳಿಗೆ ಬದಲು ವೈಭವ ಪ್ರದರ್ಶನ, ಪ್ರಚಾರಗಳನ್ನು ಬಯಸಿದರು. ವಿನೋಬಾ ದಾನವಾಗಿ ಪಡೆದ ಜಮೀನಿನಲ್ಲಿ ಬಹುಪಾಲು ಭೂಹೀನ ರೈತರಿಗೆ ವಿತರಣೆಯಾಗಲೇ ಇಲ್ಲ. ವರ್ಷಗಳ ನಂತರ ಮತ್ತೆ ಅವು ಭಾರಿ ಜಮೀನ್ದಾರರ ಸ್ವತ್ತೇ ಆಗಿ ಉಳಿದವು–ಎನ್ನುತ್ತಾರೆ ವಿಮರ್ಶಕರು. ಅಲ್ಲದೆ ವಿನೋಬಾ ದಾನವಾಗಿ ಪಡೆದ ಜಮೀನಿನಲ್ಲಿ ಹೆಚ್ಚು ಜಮೀನು ಕಲ್ಲು ಬಂಡೆಗಳಾಗಿದ್ದವು, ಮರಳುಗಾಡಾಗಿದ್ದವು; ಕೃಷಿಗೆ ನಿರುಪಯುಕ್ತವಾಗಿದ್ದವು. ಕೆಲವು ಕಡೆ ಫಲಾನುಭವಿಗಳು ತಮಗೆ ದೊರೆತ ಭೂಮಿಯನ್ನು ಕೃಷಿಮಾಡಿ ದಕ್ಕಿಸಿಕೊಂಡರು. ತೂಕ ಮಾಡಿ ನೋಡಿದಾಗ ಭೂದಾನ ಚಳವಳಿ ಒಂದು ವಿಫಲ ಚಳವಳಿ, ಆದರೆ ಒಂದು ವೈಭವೋಪೇತ ಅದ್ಭುತ ಪ್ರದರ್ಶನಕ್ಕೆ ಒಂದು ಕುಂಟು ನೆಪವಾಗಿ ಯಶಸ್ವಿಯಾಗಿತ್ತು.

ಭೂಹೀನತೆಯ ಸಮಸ್ಯೆ ನಿವಾರಣೆಗೆ ಇದ್ದ ಮೂರನೆಯ ಮಾರ್ಗ: ಸರ್ಕಾರದ ಬಲಪ್ರದರ್ಶನ ಮತ್ತು ಬಲದ ಬಳಕೆ. ಭೂ ಸುಧಾರಣೆ ಶಾಸನ ಬಹಳ ಹಿಂದಿನಿಂದ ಕಾಂಗ್ರೆಸ್ ಪಕ್ಷದ ಕಾರ್ಯಸೂಚಿಯಲ್ಲಿತ್ತು. ಸ್ವಾತಂತ್ರ್ಯ ಬಂದ ನಂತರ ವಿವಿಧ ರಾಜ್ಯಗಳು ಭೂ ಸುಧಾರಣೆ ಶಾಸನವನ್ನು ಜಾರಿಗೆ ತಂದವು. ಈ ಶಾಸನ, ಬ್ರಿಟಿಷರ ಕಾಲದಲ್ಲಿ ಪಡೆದ ಅನುಪಸ್ಥಿತಿ ಮಾಲೀಕತ್ವದ ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಿತು. ಜಮೀನ್ದಾರಿ ಪದ್ಧತಿ ರದ್ದುಗೊಳಿಸಿದ್ದರಿಂದ ಮರು ವಿತರಣೆಗೆ ಸಾಕಷ್ಟು ಜಮೀನು ಲಭ್ಯವಾಯಿತು. ಜೊತೆಗೆ ಈ ಶಾಸನದಿಂದ ಗೇಣಿದಾರರಿಗೆ ತೆರಿಗೆ, ಗೇಣಿ ಮೊದಲಾದ ಹಿಂದಿನ ಬಾಧೆಗಳಿಂದ ಮುಕ್ತಿ ದೊರಕಿತು.

ಕೋಷ್ಟಕ 10.2 - ಭಾರತದಲ್ಲಿ ಭೂ ಒಡೆತನ- 1953-1960

ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಶೇಕಡವಾರು ಹಿಡುವಳಿ		ಶೇಕಡವಾರು ಒಟ್ಟು ಪ್ರದೇಶ	
	1953-54	1959-60	1953-54	1959-60
1 ಕ್ಕಿಂತ ಕಡಿಮೆ	56.15	40.70	5.58	6.71
1 ರಿಂದ 2	15.08	22.26	10.02	12.17
2 ರಿಂದ 4	14.19	18.85	18.56	19.95
4 ರಿಂದ 10	10.36	13.45	29.22	30.47
10ಕ್ಕಿಂತ ಹೆಚ್ಚು	4.22	4.74	36.62	30.70

ಮೂಲ: ದಿ ಸ್ಟೋರಿ ಆಫ್ ಲ್ಯಾಂಡ್ ರಿಫಾರಮ್ಸ್ ಇನ್ ಇಂಡಿಯನ್ ಪ್ಲಾನಿಂಗ್
ಲೇ: ನೃಪೇನ್ ಬಂದ್ಯೋಪಾಧ್ಯಾಯ (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ 1988)

ಜಮೀನ್ದಾರಿಯನ್ನು ರದ್ದುಗೊಳಿಸಿದ ನಂತರ ಸರ್ಕಾರ ಭೂಮಿಯ ಮಾಲೀಕತ್ವವನ್ನು ಅದರ ಗೇಣಿದಾರರಿಗೇ ವಹಿಸಿಕೊಟ್ಟಿತು. ಈ ಗೇಣಿದಾರರು ಮಧ್ಯಮತರ ಜಾತಿಗಳಿಗೆ ಸೇರಿದವರಾಗಿದ್ದರು. ಇದರಿಂದ ವಂಚಿತರಾದವರೆಂದರೆ ಕೆಳಜಾತಿಯ ಕೃಷಿ ಕಾರ್ಮಿಕರು ಮತ್ತು ಪಾಲುಗುತ್ತಿಗೆದಾರರು. ಇವರ ಕಲ್ಯಾಣಕ್ಕಾಗಿ ಎರಡನೆ ಹಂತದ ಭೂಸುಧಾರಣೆ ಜಾರಿಗೆ ತರಬೇಕಾಗಿತ್ತು. ಎರಡನೆ ಭೂ ಸುಧಾರಣೆ ಶಾಸನದಲ್ಲಿ ಭೂ ಹಿಡುವಳಿಯ ಮೇಲೆ ಮಿತಿ ಹೇರಬೇಕಾಗಿತ್ತು. ಮಿತಿಮೀರಿದ ಜಮೀನನ್ನು ಭೂಹೀನರಿಗೆ ಹಸ್ತಾಂತರಿಸಬೇಕಾಗಿತ್ತು. ಇದು ಸರ್ಕಾರಕ್ಕೆ ಒಲ್ಲದ ಕ್ರಮವಾಗಿತ್ತು. ಇಂಥ ಶಾಸನ ಮಾಡುವ ಇಚ್ಛೆ ಸರ್ಕಾರಕ್ಕಿರಲಿಲ್ಲ.

ಯೋಜನೆಯ ಒಂದು ದಶಕದ ನಂತರವೂ ಭೂ ಒಡೆತನದ ಅಸಮತೆ ಹಾಗೇ ಉಳಿಯಿತು. 10.2 ಕೋಷ್ಟಕದಲ್ಲಿ ಐದು ವರ್ಗದ ಭೂಹಿಡುವಳಿ ಪ್ರಮಾಣವನ್ನು ಕೊಡಲಾಗಿದೆ.

ನಾಲ್ಕು ಹೆಕ್ಟೇರ್‌ಗಿಂತ ಕಡಿಮೆ ಜಮೀನು ಹೊಂದಿರುವವರನ್ನು ಸಣ್ಣ ಮತ್ತು ಅತಿ ಸಣ್ಣ ರೈತರು ಎಂದು ಅರ್ಥೈಸಿದಲ್ಲಿ ನಾಲ್ಕು ಹೆಕ್ಟೇರ್‌ಗಿಂತ ಜಾಸ್ತಿ ಜಮೀನು ಹೊಂದಿರುವವರನ್ನು ಮಧ್ಯಮ/ದೊಡ್ಡ ರೈತರೆಂದು ಹೇಳಬೇಕಾಗುತ್ತದೆ. ಆಗ 2ನೇ ಕೋಷ್ಟಕವನ್ನು ಮೂರನೆ ಕೋಷ್ಟಕದಲ್ಲಿ ಸಂಕುಚಿತಗೊಳಿಸಬೇಕಾಗುತ್ತದೆ. ಮೂರನೆಯ ಕೋಷ್ಟಕದಲ್ಲಿ ಅಸಮತೆ ಕ್ಷೀಣಿಸಿರುವುದನ್ನು ಗಮನಿಸಬಹುದು. ಸಣ್ಣ ರೈತರ ಸಂಖ್ಯೆ ಶೇ 3.6 ರಷ್ಟು ಕುಸಿದಿದ್ದರೆ ದೊಡ್ಡ ರೈತರ ಸಂಖ್ಯೆಯಲ್ಲಿ ಶೇ 4.6 ರಷ್ಟು ಏರಿಕೆಯಾಗಿದೆ. ಈ ಏರುಪೇರು ಕ್ಷುಲಕ ಎನ್ನಲಾಗುತ್ತದೆ. ಕ್ಷುಲ್ಲಕ ಎಂದರೆ ಬಹುತೇಕ ಕಣ್ಣಿಗೆ ಕಾಣಿಸದಷ್ಟು ಎಂದೇ ಅರ್ಥ. ಸಮಾಜವಾದಿ ಮಾದರಿ ಸಮಾಜಕ್ಕೆ ಬದ್ಧವಾದ ಪ್ರಜಾಸತ್ತೆಯಲ್ಲಿ ಇದು ಅಗ್ರಾಹ್ಯ.

ಕೋಷ್ಟಕ 10.3: ಭಾರತ ಭೂ ಒಡೆತನ ಅಸಮತೆಯಲ್ಲಿ ಬದಲಾವಣೆ 1953–60

	ಶೇಕಡವಾರು ಹಿಡುವಳಿ		ಶೇಕಡವಾರು ಒಟ್ಟು ಪ್ರದೇಶ	
ರೈತ ವರ್ಗ	1953-54	1959-60	1953-54	1959-60
ಸಣ್ಣ-ಅತಿಸಣ್ಣ	85.42	81.81	34.16	38.83
ಮಧ್ಯಮ ಮತ್ತು ದೊಡ್ಡ	14.58	18.19	65.84	61.17

VIII

ನೆಹರೂ-ಮಹಲಾನೋಬಿಸ್ ಮಾದರಿ ಯೋಜನೆ ಭಾರಿ ಪ್ರಮಾಣದ ಔದ್ಯಮೀಕರಣಕ್ಕೆ ಒತ್ತು ಕೊಟ್ಟಿತ್ತು, ಸರ್ಕಾರಿ ಹತೋಟಿಗೆ ಹೆಚ್ಚು ಪ್ರಾಮುಖ್ಯ ನೀಡಿತ್ತು. ಖಾಸಗಿ ಕ್ಷೇತ್ರವೊಂದು ಉಪಾಂಗ, ಅದರದು ಪೂರಕ ಪಾತ್ರ. ಇದಕ್ಕೆ ಬೆಂಬಲವಾಗಿ ವ್ಯಾಪಕವಾದ ಸರ್ವಸಮ್ಮತಿ ಇತ್ತು. ಇದು ಭಾರತದಲ್ಲಿ ಮಾತ್ರವಲ್ಲ, ಸಂಕೀರ್ಣವಾದ ಆಧುನಿಕ ಅರ್ಥವ್ಯವಸ್ಥೆಯಲ್ಲಿ ಸರ್ಕಾರ ದಂಡನಾಯಕನ ಸ್ಥಾನದಲ್ಲಿರಬೇಕು ಎಂಬುದು ಸರ್ವತ್ರ ಅಭಿಪ್ರಾಯವಾಗಿದ್ದು, ವಿಶ್ವದ ಬಹುತೇಕ ಸರ್ಕಾರಗಳು ಇದನ್ನು ಒಪ್ಪಿದ್ದವು. ಸಿದ್ಧಾಂತಿಗಳ ಸಮ್ಮತಿಯೂ ಇತ್ತು.

ಅಮೆರಿಕದಲ್ಲಿ ಸರ್ಕಾರದ ಉದ್ದೇಶಪೂರ್ವಕ ಮಧ್ಯಪ್ರವೇಶದಿಂದಾಗಿ ಆ ದೇಶ ಮಹಾನ್ ಆರ್ಥಿಕ ಹಿಂಜರಿತದ ವಿಪತ್ತಿನ ದವಡೆಯಿಂದ ಪಾರಾಗಿತ್ತು. ಬ್ರಿಟನ್ನಿನಲ್ಲಿ, 1945ರಲ್ಲಿ ಅಧಿಕಾರಕ್ಕೆ ಬಂದ ಲೇಬರ್ ಸರ್ಕಾರ ಕೀನೀಶಿಯನ್ ಅರ್ಥವ್ಯವಸ್ಥೆಯನ್ನು ಶಕ್ತ್ಯುತ್ಸಾಹಗಳಿಂದ ಅನ್ವಯಗೊಳಿಸಿತ್ತು. ಸೋವಿಯತ್ ಒಕ್ಕೂಟದ ಇತ್ತೀಚಿನ ಸಾಧನೆಗಳಿಂದಾಗಿ ಆರ್ಥಿಕ ಬದಲಾವಣೆಯಲ್ಲಿ ಸರ್ಕಾರ ಒಂದು ಇತ್ಯಾತ್ಮಕ ಶಕ್ತಿ ಎನ್ನುವ ಪ್ರಶಂಸೆಯ ಮಾತುಗಳು ಕೇಳಿಬರುತ್ತಿದ್ದವು. ಮೊದಲನೆ ವಿಶ್ವಸಮರದ ಕಾಲದಲ್ಲಿ ರಷ್ಯ ಒಂದು ಹಿಂದುಳಿದ ರೈತಾಪಿ ರಾಷ್ಟ್ರವಾಗಿತ್ತು. ಎರಡನೆ ವಿಶ್ವಸಮರದ ವೇಳೆಗೆ ದೈತ್ಯ ಕೈಗಾರಿಕಾ

ಶಕ್ತಿಯಾಗಿ ಬೆಳೆದಿತ್ತು. ವಿಶೇಷವಾಗಿ ಬಹಳ ಹಿಂದಿನಿಂದಲೇ ಕೈಗಾರಿಕೆ-ತಂತ್ರಜ್ಞಾನಗಳಲ್ಲಿ ಅಭಿವೃದ್ಧಿ ಸಾಧಿಸಿದ್ದ ಜರ್ಮನಿ ಮೇಲಿನ ಅದರ ಮಿಲಿಟರಿ ವಿಜಯ ತುಂಬಾ ಪ್ರಭಾವಶಾಲಿಯಾಗಿತ್ತು. ಪಾಶ್ಚಾತ್ಯ ಪ್ರಜಾಪ್ರಭುತ್ವಗಳಿಗೆ ಸೋವಿಯತ್ ಸಾಧನೆಗಳು, ಆರ್ಥಿಕ ಅಭಿವೃದ್ಧಿಯಲ್ಲಿ ಸರ್ಕಾರದ ಮಾರ್ಗದರ್ಶನದ ಮಹತ್ವವನ್ನು ಎತ್ತಿ ತೋರಿಸಿದ್ದವು.

ಆದರೆ ಇದಕ್ಕೆ ವಿರುದ್ಧವಾದ ಅಭಿಪ್ರಾಯಗಳಿರಲಿಲ್ಲವೆಂದಲ್ಲ. ಭಿನ್ನಮತ ಇತ್ತು. ಪಾಶ್ಚಾತ್ಯ ಜಗತ್ತಿನಲ್ಲಿ ಫ್ರೆಡ್ರಿಕ್ ಹೇಕ್ ಎಂಬಾತನಿದ್ದ. ಸರ್ಕಾರ ಆರ್ಥಿಕ ಚಟುವಟಿಕೆಗಳಿಂದ ಹಿಂದುಳಿಯಬೇಕೆಂಬುದು ಇವನ ಪ್ರತಿಪಾದನೆಯಾಗಿತ್ತು. ಈತನ ವಿಚಾರಗಳನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಕೆಲವೊಮ್ಮೆ ತಿರಸ್ಕಾರ ದೃಷ್ಟಿಯಿಂದ ನೋಡಲಾಗುತ್ತಿತ್ತು. (ಈತನಿಗೆ ಶಿಕಾಗೋ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಉದ್ಯೋಗವನ್ನೂ ನಿರಾಕರಿಸಲಾಗಿತ್ತು. ಸಾಮಾಜಿಕ ಚಿಂತನೆ ಕುರಿತ ಸಮಿತಿಯಲ್ಲಿ ಕೂರಿಸಲಾಗಿತ್ತು.) ಇನ್ನು ಭಾರತದ ಆರ್ಥಿಕ ತಜ್ಞರ ಸಮಿತಿಯಲ್ಲಿ ಬಿ.ಆರ್. ಶೆಣೈ ಇದ್ದರು. ಎರಡನೇ ಪಂಚವಾರ್ಷಿಕ ಯೋಜನೆಯ ಮೂಲಭೂತ ಪ್ರಸ್ತಾವನೆಗಳ ಬಗ್ಗೆಯೇ ವಿರೋಧ ವ್ಯಕ್ತಪಡಿಸಿದ ಏಕಮಾತ್ರ ಅರ್ಥಶಾಸ್ತ್ರಜ್ಞರಿವರು. ವ್ಯಾಖ್ಯಾನಕಾರರೊಬ್ಬರು ಬರೆದಂತೆ ಶೆಣೈ, "ವ್ಯಾಪಾರ ವ್ಯವಹಾರಗಳಲ್ಲಿ, ಕೈಗಾರಿಕೆಗಳಲ್ಲಿ ಸರ್ಕಾರ ಪ್ರವೇಶಿಸಬಾರದು ಎಂಬ ಸಿದ್ಧಾಂತದ ಪ್ರತಿಪಾದಕರಾಗಿದ್ದು," ಇವರ ಟೀಕೆಟಿಪ್ಪಣಿಗಳನ್ನೂ ಯಾರೂ ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ.

ದಿಟವಾಗಿ, ಶೆಣೈ ಅವರ ವಿಚಾರಗಳು ಕೇವಲ ವ್ಯಾಪಾರ ವ್ಯವಹಾರಗಳಲ್ಲಿ ಸರ್ಕಾರ ಪ್ರವೇಶಿಸಬಾರದು ಎನ್ನುವ ಸಿದ್ಧಾಂತ ಪ್ರತಿಪಾದನೆಗಷ್ಟೇ ಸೀಮಿತವಾಗಿರಲಿಲ್ಲ. ಅದನ್ನೂ ಮೀರಿದ ಅವರ ಮುಖ್ಯ ಟೀಕೆ 'ಯೋಜನೆ ಅತಿ ಆಕಾಂಕ್ಷೆಯದು' ಎಂಬುದೇ ಆಗಿತ್ತು. ಭಾರತದ ಅರ್ಥವ್ಯವಸ್ಥೆಯಲ್ಲಿ, ಉಳಿತಾಯ ಕುರಿತ ಅದರ ಅಂದಾಜು ಅತಿಯಾಯಿತೆಂದು ಅವರು ಟೀಕಿಸಿದ್ದರು. ಹಣಕಾಸಿನ ಕೊರತೆಯನ್ನು, ಖೋತಾ ಹಣಕಾಸು ಪೂರೈಕೆಯಿಂದ ತುಂಬಿಕೊಳ್ಳಬೇಕಾಗುವುದೆಂದೂ ಇದರಿಂದ ಹಣದುಬ್ಬರವುಂಟಾಗುವುದೆಂದೂ ಶೆಣೈ ಅವರ ವಾದವಾಗಿತ್ತು.

ಮತ್ತೊಬ್ಬ ಭಿನ್ನಮತೀಯ ಅರ್ಥಶಾಸ್ತ್ರಜ್ಞ, ಶಿಕಾಗೋದ ಮಿಲ್ಟನ್ ಫ್ರೆಡ್ಮ್ಯಾನ್. ಸರ್ಕಾರದ ಅತಿಥಿಯಾಗಿ 1955ರಲ್ಲಿ ಭಾರತಕ್ಕೆ ಭೇಟಿನೀಡಿದ್ದ ಈತ ಮಹಲಾನೋಬಿಸ್ ಅವರ ಮಾದರಿಗೆ ಆಕ್ಷೇಪಗಳನ್ನು ವ್ಯಕ್ತಪಡಿಸಿ ಒಂದು ವರದಿಯನ್ನೇ ತಯಾರಿಸಿದ್ದ. ಮಹಲಾನೋಬಿಸ್ ಯೋಜನಾ ಮಾದರಿ ತುಂಬ ಗಣಿತಶಾಸ್ತ್ರೀಯವಾಗಿದ್ದು, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಬದಲು, ಅದು ಬಂಡವಾಳ-ಉತ್ಪಾದನೆಯ ನಡುವಣ ಪರಿಮಾಣ ಸಂಬಂಧಗಳ ಗೀಳಿನಿಂದ ಕೂಡಿದೆ ಎಂಬುದು ಇವನ ಕಟು ಟೀಕೆಯಾಗಿತ್ತು. ಕೈಗಾರಿಕಾ ನೀತಿಯನ್ನು ಎರಡು ತೀವ್ರಗಾಮಿತ್ವದಿಂದ ಖಂಡಿಸಿದ್ದ. ಬೃಹತ್ ಕೈಗಾರಿಕೆಗಳು ಕಡಿಮೆ ಸಂಖ್ಯೆಯಲ್ಲಿ ಕಾರ್ಮಿಕ ಪಡೆ ಹೊಂದಿದ್ದು ಗುಡಿಕೈಗಾರಿಕೆಗಳಲ್ಲಿ ಕಾರ್ಮಿಕರು ಹೆಚ್ಚಾಗಿದ್ದಾರೆ ಎಂಬುದು ಅತಿಯಾಯಿತೆಂಬ ಕಟುಟೀಕೆಗೆ ಗುರಿಯಾಗಿತ್ತು. ಫ್ರೆಡ್ಮ್ಯಾನ್

ಅಭಿಪ್ರಾಯದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆರ್ಥಿಕ ನೀತಿ ಮೂಲಭೂತ ಅಗತ್ಯಗಳಿಗನುಗುಣವಾಗಿರಬೇಕು:

“ಸ್ಥಿರ ಹಾಗೂ ಸಾಧಾರಣ ವಿಸ್ತರಣಾ ದೃಷ್ಟಿಯುಳ್ಳ ಆರ್ಥಿಕ ಚೌಕಟ್ಟು, ಶಿಕ್ಷಣ ಮತ್ತು ತರಬೇತಿಗೆ ಹೆಚ್ಚಿನ ಅವಕಾಶಗಳು, ಸರಕು ಸಾಗಾಣಿಕೆಯಷ್ಟೇ ಅಲ್ಲದೆ ಜನರ ಪ್ರಯಾಣ, ಸಂವಹನ-ಸಂಪರ್ಕಗಳನ್ನು ವೃದ್ಧಿಗೊಳಿಸುವಂಥ ಸುಧಾರಿತ ಸಾರಿಗೆ ವ್ಯವಸ್ಥೆ, ರೈತರ ಹಾಗೂ ವಾಣಿಜ್ಯೋದ್ಯಮಿಗಳ ಶಕ್ತಿ-ಉತ್ಸಾಹಗಳಿಗೆ ಗರಿಷ್ಠ ಅವಕಾಶಗಳನ್ನು ಕಲ್ಪಿಸುವ ಪರಿಸರ ಇರಬೇಕು.”

ಫ್ರೆಡ್ಮ್ಯಾನ್‌ನಿಂದ ಪ್ರಭಾವಿತನಲ್ಲದ, ಆದರೆ ಅವನ ಟೀಕೆಯ ಒಂದು ಅಂಶವಾದ ಶಿಕ್ಷಣದ ಅವಜ್ಞೆಯತ್ತ ಗಮನ ಹರಿಸಿದ್ದ ಭಾರತೀಯ ತರುಣ ಅರ್ಥಶಾಸ್ತ್ರಜ್ಞರೊಬ್ಬರಿದ್ದರು. ಹದಿನಾಲ್ಕನೆಯ ವರ್ಷದವರೆಗೆ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ ಸೌಕರ್ಯ ಕಲ್ಪಿಸಬೇಕೆಂದು ಸಂವಿಧಾನ ಆದೇಶಿಸಿದೆ. ಆದರೆ ಎರಡನೆ ಯೋಜನೆಯಲ್ಲಿ ಈ ಬಾಬಿಗೆ ಒದಗಿಸಿರುವ ಹಣ ಅಸಂಬದ್ಧವೆನ್ನಿಸುವಷ್ಟು ಕಡಿಮೆ ಎಂದು ಬಿ.ವಿ. ಕೃಷ್ಣಮೂರ್ತಿ ಬರೆದಿದ್ದರು. ಶಿಕ್ಷಣದ ಬಾಬಿಗೆ ಹೆಚ್ಚು ಹಣ ನೀಡುವಂತೆ ಆಗ್ರಹಪಡಿಸಿದ್ದರು. “ಭಾರಿ ಕೈಗಾರಿಕೆಗಳ ಮೇಲಿನ ವೆಚ್ಚವನ್ನು ಕಡಿತಗೊಳಿಸುವ ಮೂಲಕ” ಬಜೆಟ್ಟನ್ನು ಸರಿದೂಗಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಶಿಕ್ಷಣದ ಬಾಬಿನಲ್ಲಿ, ಶಾಲಾ ಉಪಾಧ್ಯಾಯರುಗಳ ಸಾಮಾಜಿಕ ಸ್ಥಾನಮಾನ ಹೆಚ್ಚಿಸುವುದು, ಅವರಿಗೆ ಹೆಚ್ಚಿನ ಸಂಬಳ ಸಾರಿಗೆ ನೀಡುವುದು, ಮಕ್ಕಳಿಗೆ ಒಳ್ಳೆಯ ಶಾಲಾ ಕಟ್ಟಡ, ಆಟದ ಮೈದಾನಗಳ ಸೌಕರ್ಯ ಒದಗಿಸುವುದು ಇತ್ಯಾದಿ ಸಣ್ಣಪುಟ್ಟ ವಿಷಯಗಳತ್ತಲೂ ಸರ್ಕಾರದ ಗಮನ ಸೆಳೆದಿದ್ದರು. ಬಿ.ವಿ. ಕೃಷ್ಣಮೂರ್ತಿಯವರ ವಾದ ಹೀಗಿದೆ:

“ಜನಸಮುದಾಯದ ಶಿಕ್ಷಣಕ್ಕೆ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಜನಸಾಮಾನ್ಯರ ಶಿಕ್ಷಣಕ್ಕೆ ಯೋಜಿತ ಪ್ರಯತ್ನಗಳನ್ನು ನಡೆಸಿದಲ್ಲಿ ನಿಶ್ಚಯವಾಗಿಯೂ ಅದರಿಂದ ಸಂಚಿತ ಆರ್ಥಿಕ ಪ್ರಭಾವಶೀಲವಾದ ವ್ಯಾಪಕ ಲಾಭವಾಗಲಿದೆ; ಪರಿಣಾಮವಾಗಲಿದೆ. ಇದರಿಂದ ತ್ವರಿತ ಆರ್ಥಿಕ ಅಭಿವೃದ್ಧಿ ಸಾಧಿಸುವುದರಲ್ಲಿ ಸರ್ಕಾರದ ಹೊಣೆಭಾರವೂ ಹಗುರವಾಗಲಿದೆ. ಒಂದು ನ್ಯಾಯೋಚಿತ ಕಾಲಾವಧಿಯಲ್ಲಿ ಜನರ ಅಜ್ಞಾನ ಮತ್ತು ಸೋಮಾರಿತನಗಳು ತೊಲಗುವುವು; ಅಭಿವೃದ್ಧಿ ಹೊಂದಲು ಲಭ್ಯವಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳುವ ಮೂಲಕ ಪ್ರಜೆಗಳ ಲೌಕಿಕ ಸ್ಥಿತಿಗತಿಗಳು ಸುಧಾರಿಸುತ್ತವೆ. ಇದು ಸಾಧ್ಯವಾದಲ್ಲಿ ಉದ್ಯೋಗ ಸಮಸ್ಯೆ ತನ್ನಷ್ಟಕ್ಕೆ ನಿವಾರಣೆಯಾಗುವುದು. ದೇಶದ ಜನ, ಗ್ರೇಟ್ ಬ್ರಿಟನ್, ಸ್ವಿಟ್ಜರ್‌ಲ್ಯಾಂಡ್‌ನಂಥ ಅಭ್ಯುದಯ ಹೊಂದಿದ ಪ್ರಜಾಪ್ರಭುತ್ವ ರಾಷ್ಟ್ರಗಳ ಜನತೆ ಸಾಗಿರುವ ಹಾದಿಯಲ್ಲಿ ಹೆಜ್ಜೆ ಹಾಕಲಾರಂಭಿಸುವರು.”

ಬಿ.ವಿ. ಕೃಷ್ಣಮೂರ್ತಿಯವರು ಅಧಿಕಾರಕೇಂದ್ರವಾದ ದೆಹಲಿಯಲ್ಲಿ ಪ್ರೊಫೆಸರಾಗಿದ್ದರೆ ಅವರ ಮಾತುಗಳು ದಿಲ್ಲಿದೊರೆಗಳ ಕಿವಿಮುಟ್ಟುತ್ತಿತ್ತೇನೋ. ಅವರನ್ನು ಕರೆಸಿಕೊಂಡು ಚರ್ಚಿಸುತ್ತಿದ್ದರೇನೋ. ಆದರೆ ಕೃಷ್ಣಮೂರ್ತಿ ಮುಂಬಯಿಯಲ್ಲಿ ಕಡಿಮೆ ಸಂಬಳದ ಒಬ್ಬ ಉಪನ್ಯಾಸಕರಾಗಿದ್ದರು. ಫ್ರೆಡ್ಮ್ಯಾನ್ ಹಾಗಿರಲಿಲ್ಲ. ಈತನ ಉನ್ನತ ಸ್ಥಾನಮಾನ, ವಿದೇಶಿ ಅರ್ಥಶಾಸ್ತ್ರಜ್ಞರ ಸಾಲಿನಲ್ಲಿದ್ದ ವರ್ಚಸ್ಸುಗಳು ಪ್ರಭಾವ ಬೀರಿದ್ದವು. ನಮ್ಮ ಅರ್ಥಶಾಸ್ತ್ರಜ್ಞರಿಗೆ ಬಿ.ಆರ್. ಶೆಣೈ ಹೇಗೋ ಹಾಗೆ ವಿದೇಶಿ ಅರ್ಥಶಾಸ್ತ್ರಜ್ಞರಿಗೆ ಫ್ರೆಡ್ಮ್ಯಾನ್ ಕಂಡಿದ್ದರು. ನಮ್ಮ ಶೆಣೈ ಅವರದು, ಸಮಾಜವಾದಿ ಪ್ರಜಾಪ್ರಭುತ್ವವಾದಿಗಳು ಮತ್ತು ವಾಮಪಂಥೀಯರ ಸ್ವರಮೇಳದಲ್ಲಿ ಮುಳುಗಿ ಹೋದ "ಮುಕ್ತ ಮಾರುಕಟ್ಟೆಪರ ಒಂಟಿ ದನಿಯಾಗಿತ್ತು."

ಇನ್ನು ಮಾರ್ಕ್ಸಿಸ್ಟರ ವಿಮರ್ಶೆ-ವಿಶ್ಲೇಷಣೆಗಳ ಧಾಟಿಯೇ ಬೇರೆ ತೆರನಾಗಿತ್ತು. ಮಹಲಾನೋಬಿಸ್ ಮಾದರಿ ಮಾರುಕಟ್ಟೆಗೆ ಅತಿ ಕಡಿಮೆಯಲ್ಲ ಅತಿ ಹೆಚ್ಚಿನ ಮಹತ್ವ ನೀಡಿದೆ ಎಂಬುದು ಅವರ ಟೀಕೆಯಾಗಿತ್ತು. ಎರಡನೆ ಯೋಜನೆ ಸಂಪೂರ್ಣವಾಗಿ ರಾಷ್ಟ್ರೀಕರಣ ಪ್ರಕ್ರಿಯೆಗೆ ನಾಂದಿ ಹಾಡಬೇಕಿತ್ತು. ಈ ಯೋಜನೆಯಲ್ಲಿ ಸರ್ಕಾರ ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವುದಷ್ಟೇ ಅಲ್ಲದೆ, ಈಗಾಗಲೇ ಕೆಲಸ ಮಾಡುತ್ತಿರುವ ಖಾಸಗಿ ವಲಯದ ಕಾರ್ಖಾನೆಗಳನ್ನೂ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗಿತ್ತು ಎನ್ನುವುದು ಮಾರ್ಕ್ಸಿಸ್ಟರ ಅಭಿಮತವಾಗಿತ್ತು. ಪೂರ್ವ ಯೂರೋಪಿನ ಜನತಾ ಪ್ರಜಾಸತ್ತೆ ಮಾದರಿಯಲ್ಲಿ ಕಾರ್ಮಿಕವರ್ಗವನ್ನೂ ಯೋಜನೆ ರೂಪಿಸಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಾಗಿತ್ತೆಂಬುದು ಅವರ ಇಚ್ಛೆಯಾಗಿತ್ತು.

ಮತ್ತೆ ಗಾಂಧೀವಾದಿಗಳಿದ್ದರು. ಗಾಂಧೀವಾದಿಗಳದು ಆಧುನಿಕ ಅಭಿವೃದ್ಧಿಯನ್ನು ಅಮೂಲ್ಯವಾದ ಪರಿಸರದ ನಿಟ್ಟಿನಿಂದ ನೋಡುವ ವಿಮರ್ಶೆಯಾಗಿತ್ತು. ಜೆ.ಸಿ. ಕುಮಾರಪ್ಪ ಮತ್ತು ಮೀರಾ ಬೆಹನ್ ಆಗ ಮುಂಚೂಣಿಯಲ್ಲಿದ್ದ ಪ್ರಸಿದ್ಧ ಪರಿಸರವಾದಿಗಳು. ಇಬ್ಬರೂ ಗಾಂಧಿ ಶಿಷ್ಯರು. 1950ರ ಕಾಲದಿಂದಲೂ ಇವರಿಬ್ಬರೂ ಕೃಷಿ ನೀತಿ ಕುರಿತಂತೆ ತೀಕ್ಷ್ಣ ವಿರೋಧಿಗಳಾಗಿದ್ದರು. ಬೃಹತ್ ಅಣೆಕಟ್ಟುಗಳ ಬದಲು ಸಣ್ಣ ನೀರಾವರಿ ಯೋಜನೆಗಳು ಹೆಚ್ಚು ಫಲಕಾರಿ. ಸಾವಯವ ಗೊಬ್ಬರ ಅಗ್ಗ ಹಾಗೂ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ. ಆದರೆ ರಾಸಾಯನಿಕ ಗೊಬ್ಬರ ಮಣ್ಣಿನ ಸಾರವನ್ನು ನಾಶಮಾಡುತ್ತದೆ ಮತ್ತು ಅದರಿಂದಾಗಿ ವಿದೇಶಿ ಋಣಭಾರ ಹೆಚ್ಚುತ್ತದೆ. ಅರಣ್ಯಗಳನ್ನು ಲಾಭದ ದೃಷ್ಟಿಯಿಂದ ನೋಡದೆ, ಜಲಸಂರಕ್ಷಣೆಯ ದೃಷ್ಟಿಯಿಂದ ನೋಡಬೇಕು, ನಿಸರ್ಗ ಸಹಜವಾದ ಬಗೆಬಗೆಯ ಪ್ರಾಣಿ ಪಕ್ಷಿ ಸಂಕುಲಗಳಿಂದ ಕೂಡಿದ ಅರಣ್ಯವನ್ನು ರಕ್ಷಿಸಬೇಕು, ಸರ್ಕಾರ ಪ್ರತಿಪಾದಿಸುವ ಏಕಫಸಲಿನ ಗುಣ ಮಾಪನದಿಂದ ಅರಣ್ಯ ಬೆಳೆಸುವುದು ಸರಿಯಲ್ಲ-ಇವು ಇಬ್ಬರು ಪರಿಸರ ವಾದಿಗಳ ನಿಲುವಾಗಿತ್ತು. ನಿರ್ದಿಷ್ಟವಾದ ಗೊತ್ತುಗುರಿ ಉಳ್ಳ ಇವರ ವಿಮರ್ಶೆ. ವಿಶ್ಲೇಷಣೆಗಳು ನಿಸರ್ಗ ಪ್ರಪಂಚವನ್ನು ವ್ಯಾಪಕವಾಗಿ ಅಧ್ಯಯನ ಮಾಡಿದ್ದರ ಫಲವಾಗಿತ್ತು. ಮೀರಾ ಬೆಹನ್ 1949ರಲ್ಲೇ ಈ ಕೆಳಗಿನಂತೆ ಬರೆದಿದ್ದರು:

"ಇವತ್ತಿನ ದುರಂತವೆಂದರೆ, ಸುಶಿಕ್ಷಿತರು ಮತ್ತು ಧನವಂತರು ನಮ್ಮ ಅಸ್ತಿತ್ವದ, ಜೀವನದ ಮೂಲಭೂತ ಅಂಶಗಳನ್ನು ಮರೆತಿರುವುದು. ನಮ್ಮ ಭೂಮಿತಾಯಿ, ಅವಳ ಮಡಿಲ ಪಾಲನೆ ಪೋಷಣೆಯಲ್ಲಿ ಉಳಿದು ಬೆಳೆಯುತ್ತಿರುವ ಪ್ರಾಣಿಗಳು, ಸಸ್ಯಗಳು ಇವುಗಳನ್ನೆಲ್ಲ ಮರೆತಿದ್ದಾರೆ. ನಿಸರ್ಗ ಯೋಜಿತ ಈ ಪ್ರಪಂಚವನ್ನು ಲೂಟಿ ಮಾಡಲಾಗುತ್ತಿದೆ. ಅವಕಾಶ ಸಿಕ್ಕಾಗಲೆಲ್ಲ ಮನುಷ್ಯ ಈ ಪರಿಸರವನ್ನು ಹಾಳು ಮಾಡುತ್ತಿದ್ದಾನೆ, ಅಸ್ತವ್ಯಸ್ತಗೊಳಿಸುತ್ತಿದ್ದಾನೆ. ವಿಜ್ಞಾನ ಮತ್ತು ಯಂತ್ರಗಳಿಂದ ಮಾನವ ಭಾರಿ ಆದಾಯಗಳಿಸುತ್ತಿದ್ದಾನೆ. ಆದರೆ ಇದು ಅಲ್ಪಾವಧಿಯದು. ಆಖೈರಾಗಿ ಎಲ್ಲ ವಿನಾಶ ಹೊಂದುತ್ತದೆ. ನಾವು ಪ್ರಕೃತಿಯ ಸಮತೋಲವನ್ನು ಅಭ್ಯಾಸ ಮಾಡಬೇಕು, ಪ್ರಕೃತಿ ನಿಯಮದಂತೆ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ನಾವು ಆರೋಗ್ಯವಂತರಾಗಿ, ಸಭ್ಯ ಪ್ರಜೆಗಳಾಗಿ ಉಳಿಯುವುದಕ್ಕೆ ಇದು ಅತ್ಯಗತ್ಯ."

ಆಧುನಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಗಾಂಧೀವಾದಿಗಳು, ಬೃಹತ್ ಅಣೆಕಟ್ಟುಗಳ ನಿರ್ಮಾಣದ ವಿಚಾರದಲ್ಲಿ ತಮ್ಮದೇ ಆದ ಅಭಿಪ್ರಾಯಗಳನ್ನು, ತೀವ್ರ ಆಕ್ಷೇಪಗಳನ್ನು, ಉಪಾಧಿಗಳನ್ನು ಹೊಂದಿದ್ದರು. ಬೃಹತ್ ಅಣೆಕಟ್ಟುಗಳು ದುಬಾರಿ ವೆಚ್ಚದ ನಿರ್ಮಾಣಗಳು ಹಾಗೂ ನಿಸರ್ಗಕ್ಕೆ ಮಾರಕವಾದವು ಎಂಬುದು ಗಾಂಧಿವಾದಿಗಳ ಅಭಿಪ್ರಾಯವಾಗಿತ್ತು. ಆದರೆ, ಬಲು ಬೇಗ ಬೃಹತ್ ಅಣೆಕಟ್ಟುಗಳು ಮಾನವ ಸಮುದಾಯಕ್ಕೂ ಮಾರಕವೆಂಬ ಅಂಶ ಬೆಳಕಿಗೆ ಬರಲಾರಂಭಿಸಿತು. 1950ರ ವೇಳೆಗೇ, ಅಣೆಕಟ್ಟುಗಳಿಂದಾಗಿ ಮನೆ ಮಠ ಕಳೆದುಕೊಂಡು ನಿರಾಶ್ರಿತರಾದವರ ಕಷ್ಟನಷ್ಟಗಳು ವರದಿಯಾದವು. 1952ರ ಬೇಸಿಗೆಯಲ್ಲಿ ಹಿರಾಕುಡ್ ಅಣೆಕಟ್ಟೆಯಲ್ಲಿ 150 ಗ್ರಾಮಗಳು ಮುಳುಗಡೆಯಾಗುವುದೆಂದು ಅಧಿಕಾರಿಗಳು ಗ್ರಾಮಸ್ಥರಿಗೆ ಒಕ್ಕಲೆಬ್ಬಿಸುವ ನೋಟೀಸ್ ಜಾರಿಮಾಡಿದಾಗ ಆ ಜನ ತೀವ್ರವಾಗಿ ಪ್ರತಿಭಟಿಸಿದರು. ಆಗ ಸ್ಥಳದಲ್ಲಿದ್ದ ವರದಿಗಾರನೊಬ್ಬ ಈ ರೀತಿ ಬರೆದ: "ಹಿರಾಕುಡ್ ಅಣೆಕಟ್ಟೆಯನ್ನು ಜನರ ತ್ಯಾಗದ ಮೇಲೆ ನಿರ್ಮಿಸಲಾಗುತ್ತಿದೆ. ಒರಿಸ್ಸಾ ಸರ್ಕಾರದಿಂದ ಪರಿಹಾರ-ಪುನರ್ವಸತಿ ಗಳಿಸದ ಗ್ರಾಮಸ್ಥರ ತ್ಯಾಗದ ಮೇಲೆ ಕಟ್ಟಲಾಗುತ್ತಿದೆ. ಸರ್ಕಾರ ಇವರನ್ನು ನಿರ್ಗತಿಕರನ್ನಾಗಿಸಿದೆ." ಮೂರು ವರ್ಷಗಳ ನಂತರ ಇದೇ ರೀತಿಯ ಮತ್ತೊಂದು ವರದಿ ಬಂತು. ಹಿಮಾಚಲ ಪ್ರದೇಶದ ಗ್ರಾಮಸ್ಥರ ಕಣ್ಣೀರಿನ ಕಥೆ ಪ್ರಕಟವಾಯಿತು. ಭಕ್ರಾ ಅಣೆಕಟ್ಟೆಗಾಗಿ ಈ ಗ್ರಾಮಸ್ಥರು ಮನೆ ಮಠ ತ್ಯಾಗಮಾಡಿ ನಿರ್ಗತಿಕರಾಗಿದ್ದರು. ನೆಹರೂ ಅವರು ವಿದ್ಯುದುತ್ಪಾದನಾ ಕೇಂದ್ರ ಉದ್ಘಾಟಿಸಿ ಒಂದು ವರ್ಷ ಪೂರ್ತಿಯಾಗಿತ್ತು. ಆದಾಗ್ಯೂ ಗ್ರಾಮಸ್ಥರಿಗೆ ಪರಿಹಾರ ಸಿಕ್ಕಿರಲಿಲ್ಲ. ಭಕ್ರಾ ನಿಯಂತ್ರಣ ಮಂಡಳಿಯ, ವಿಶೇಷವಾಗಿ ಪುನರ್ವಸತಿ ಸಮಿತಿಯ ದಿವ್ಯ ನಿರ್ಲಕ್ಷ್ಯ, ಉದಾಸೀನತೆಗಳೇ ಇದಕ್ಕೆ ಕಾರಣವಾಗಿದ್ದವು. ಮನೆ ಮಠ ಕಳೆದುಕೊಂಡು ನಿರಾಶ್ರಿತರಾದ ಜನರಿಗೆ ತೃಪ್ತಿಯಾಗುವಂತೆ, ಎಲ್ಲಿ-ಹೇಗೆ-ಎಷ್ಟು ಪರಿಹಾರ ನೀಡಬೇಕು ಎಂಬಂಥ ಮೂಲ ಪ್ರಶ್ನೆಯ ಬಗ್ಗೆ ಇವರು ತಲೆಕೆಡಿಸಿಕೊಂಡಿರಲಿಲ್ಲ. ನಿರಾಳದಿಂದ ಇದ್ದರು.

IX

ಮುಕ್ತ ಮಾರುಕಟ್ಟೆ, ಮಾನವ ಸಂಪನ್ಮೂಲ, ಪರಿಸರ ಇವುಗಳಿಗೆ ಸಂಬಂಧಿಸಿದ ವಿಚಾರ ವಿಮರ್ಶೆಗಳು, ವಿಶ್ಲೇಷಣೆಗಳು ಇಂದು ಓದಲು ಮೋಹಕವಾಗಿವೆ. ಆದರೆ ಆಗ ಇವೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು ಅಥವಾ ಕಸದ ಬುಟ್ಟಿ ಸೇರಿದ್ದವು. ಏಕೆಂದರೆ ಇವುಗಳು ರಾಜಕೀಯವಾಗಿ ದುರ್ಬಲವಾಗಿದ್ದವು. ಆಗ ಭಾರಿ ಕೈಗಾರಿಕೋದ್ಯಮಕ್ಕೆ, ಸರ್ಕಾರಿ ಬೆಂಬಲಿತ ಮಾದರಿಯ ಅಭಿವೃದ್ಧಿಗೆ ಪ್ರಚಂಡ ಸಹಮತ-ಒಮ್ಮತಗಳಿದ್ದವು. ಇದಕ್ಕೆ ಬುದ್ಧಿಜೀವಿಗಳಲ್ಲಿ ಬಹುಮತಾಭಿಪ್ರಾಯವಿತ್ತು. ಸಮ್ಮತಿ ಇತ್ತು. ಮಹಲಾನೋಬಿಸ್ ಯೋಜನೆ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವಂತೆ ದೇಶದ ಇಪ್ಪತ್ತನಾಲ್ಕು ಮಂದಿ ಆರ್ಥಿಕ ತಜ್ಞರನ್ನು ಕೇಳಲಾಗಿತ್ತು. ಇವರ ಪೈಕಿ ಇಪ್ಪತ್ತಮೂರು ಮಂದಿ ಯೋಜನೆಗೆ ತತ್ವಶಃ ಒಪ್ಪಿಗೆ ನೀಡಿದ್ದರು.

ಈ ಸರ್ವಸಮ್ಮತ ಅಭಿಪ್ರಾಯಕ್ಕೆ ಆಳುವ ವರ್ಗದ ಅನುಮೋದನೆಯೂ ಇತ್ತು. ದೇಶದ ಪ್ರಮುಖ ಉದ್ಯಮಿಗಳು ತಮ್ಮ “ಬಾಂಬೆ ಯೋಜನೆ” ಯಲ್ಲಿ “ಸರ್ಕಾರದ ಇತ್ಯಾತ್ಮಕ ಕಾರ್ಯಕ್ಷೇತ್ರವನ್ನು ವಿಸ್ತರಿಸುವಂತೆ” ಮನವಿ ಮಾಡಿದ್ದರು. ಸ್ವಾತಂತ್ರ್ಯ ಮತ್ತು ಯೋಜನೆ ಇವೆರಡರ ನಡುವೆ ಸಾಮರಸ್ಯವಿರಬೇಕು, ಎರಡೂ ಪರಸ್ಪರ ಪೂರಕ ಎಂದ ಕೇಂಬ್ರಿಜ್ ಅರ್ಥಶಾಸ್ತ್ರಜ್ಞ ಎ.ಸಿ. ಪೀಗೋ ಅಭಿಪ್ರಾಯವನ್ನು ಇವರು ಒಪ್ಪಿಕೊಂಡಿದ್ದರು. ಇವನನ್ನು ಉಲ್ಲೇಖಿಸಿದ್ದರೂ ಕೂಡ. ಈ ಬೃಹತ್ ಕೈಗಾರಿಕೋದ್ಯಮಿಗಳು, “ರಾಜಕೀಯ ದೃಷ್ಟಿಕೋನದಿಂದ ನೋಡಿದಲ್ಲಿ ಈಗ ಬಂಡವಾಳಶಾಹಿ ಮತ್ತು ಸಮಾಜವಾದದ ನಡುವಣ ಗುರುತು, ಅನನ್ಯತೆಗಳು ಅಳಿಸಿಯೇ ಹೋಗಿದೆ. ಅನೇಕ ವಿಷಯಗಳಲ್ಲಿ ಇವರಿಬ್ಬರ ನಡುವೆ ಈಗ ಸಮಾನ ನೆಲೆ ರೂಪುಗೊಂಡಿದೆ, ಇಬ್ಬರೂ ಸಮಾನ ನೆಲೆಯಿಂದ ನೋಡುತ್ತಿದ್ದಾರೆ. ಇವರಿಬ್ಬರ ನಡುವಣ ಕಂದರ ಕಡಿಮೆಯಾಗುತ್ತಿದ್ದು ಇಬ್ಬರೂ ಪರಸ್ಪರ ಒಂದೇ ನಿಟ್ಟಿನಿಂದ ನೋಡುತ್ತಿದ್ದಾರೆ. ಇಬ್ಬರ ದೃಷ್ಟಿ ಧೋರಣೆಗಳೂ ಏಕತ್ರಗೊಳ್ಳುತ್ತಿವೆ. ಪ್ರತಿಯೊಂದು ತತ್ವಸಿದ್ಧಾಂತಗಳೊಂದಿಗೆ ನ್ಯಾಯಸಮ್ಮತ ರೀತಿಯಲ್ಲಿ ಸಂಬಂಧವಿಟ್ಟುಕೊಂಡ ಒಂದು ಮೂಲಾಧಾರವನ್ನು ಒಪ್ಪಿಕೊಳ್ಳದೇ ಅರ್ಥವ್ಯವಸ್ಥೆ ದಕ್ಷತೆಯಿಂದ ಕಾರ್ಯ ನಿರ್ವಹಿಸಲಾಗದು, ದೀರ್ಘಾಯುವಾಗದು ಎಂಬುದೇ ನಮ್ಮ ಅಭಿಪ್ರಾಯವಾಗಿದೆ” ಎಂದು ಸ್ಪಷ್ಟವಾಗಿ ತಿಳಿಸಿದ್ದರು.

ಭಾರತೀಯ ಯೋಜನೆಯ ಪ್ರೇಮಾಲಾಪ, ಸಮ್ಮೋಹಕತೆ, ಆಕರ್ಷಣೆಗಳ ಭರತವಾಕ್ಯಕ್ಕಾಗಿ ನಾವು ಈ ಯೋಜನೆಗಳನ್ನು ವರದಿ ಮಾಡಿದ ಅನಾಮಧೇಯ ಪತ್ರಕರ್ತರೊಬ್ಬರತ್ತ ನೋಡಬೇಕಾಗಿದೆ. ಇದು ಬೊಕಾರೋ. ದೇಶದ ಅತಿಮಹತ್ವದ ಉಷ್ಣ-ವಿದ್ಯುತ್ ಉತ್ಪಾದನೆ ಕೇಂದ್ರ ಹಾಗೂ ಬೃಹತ್ತಾದ ಅಣೆಕಟ್ಟಿನ ಸ್ಥಳ. 1949ರ ಸೆಪ್ಟಂಬರಿನಲ್ಲಿ ಈ ಸ್ಥಳಕ್ಕೆ ಭೇಟಿಕೊಟ್ಟ ವರದಿಗಾರ ಕಂಡದ್ದು:

"ಬೊಕಾರೋ ಕಲ್ಲು ಬಂಡೆಗಳಿಂದ ಕೂಡಿದ ಬಂಜರು ಭೂಮಿ, ಎರಡು ಮರಳು ತುಂಬಿದ, ಹಳದಿಗೆಂಪಿನ ನದಿಗಳ ಸಂಗಮಸ್ಥಾನಕ್ಕೆದುರಾಗಿ ಹರಡಿಕೊಂಡಿರುವ ಬಂಜರು ಭೂಮಿ. ಇಲ್ಲಿ ಕಂಡು ಬರುತ್ತಿರುವ ಏಕೈಕ ಮಾನವ ವಸತಿ ಎಂದರೆ ಎಕ್ಸಿಕ್ಯೂಟಿವ್ ಎಂಜಿನಿಯರದು. ಇವರ ಕೈಕೆಳಗೆ ಆರು ಮಂದಿ ಕೆಲಸಗಾರರಿದ್ದಾರೆ. ಇಲ್ಲಿ ಬದುಕಿಗೆ ಅಗತ್ಯವಾದ ಯಾವ ಸೌಲಭ್ಯವೂ ಇಲ್ಲ. ಜೀಪ್‌ನಿಂದ ಬೋಕಾರೋ ತಲುಪಬಹುದು. ಆಹಾರದ ಬುತ್ತಿ ಒಯ್ಯಲೇಬೇಕು."

ಮೂರುವರೆ ವರ್ಷಗಳ ನಂತರ, ಪ್ರಧಾನ ಮಂತ್ರಿಯವರು ವಿದ್ಯುದುತ್ಪಾದನಾ ಕೇಂದ್ರ ಮತ್ತು ಅಣೆಕಟ್ಟು ಉದ್ಘಾಟಿಸುವುದನ್ನು ವರದಿ ಮಾಡಲು ಇದೇ ಪತ್ರಕರ್ತ ಮತ್ತೆ ಬೊಕಾರೋಗೆ ಬಂದಿದ್ದ. ಬೊಕಾರೋ ಕಣಿವೆ ಸಮೀಪಿಸಿದಂತೆ "ನನ್ನ ಕಣ್ಣುಗಳು ಎಂಥ ವ್ಯತ್ಯಾಸ, ಎಂಥ ಅಸಾಮಾನ್ಯ ನೋಟವನ್ನು ಕಾಣುತ್ತಿವೆ" ಎಂದು ಉದ್ಗಾರವೆತ್ತಿದ. "ಪರ್ವತಗಳ ಹಿನ್ನೆಲೆಯಲ್ಲಿ ಅಚಲವಾಗಿ ಬಣವೆಯಂತೆ ನಿಂತ ವೃತ್ತಾಕಾರ ವಿನ್ಯಾಸದ ವಿದ್ಯುದುತ್ಪಾದನಾ ಕೇಂದ್ರ" ಅವನ ಕಣ್ಣನ್ನು ಸೆಳೆಯಿತು. 1949ರಲ್ಲಿ ಬತ್ತಿದ ನದಿಯ ದಂಡೆ ಇಂದು ಬೃಹದಾಕಾರದ ಒಂದು ನಯನ ಮನೋಹರ ಸರೋವರವಾಗಿ ಕಂಗೊಳಿಸುತ್ತಿತ್ತು. ಆಕಡೆ-ಈಕಡೆ ಕಾಂಕ್ರೀಟ್ ಸೇತುವೆಗಳು. ಅಣೆಕಟ್ಟು ಹಾಗೂ ವಿದ್ಯುತ್ ಉತ್ಪಾದನಾ ಕೇಂದ್ರಗಳ ನಿರ್ಮಾಣಕಾರ್ಯದಲ್ಲಿ ದುಡಿದ ಮಂದಿಗೆ ಈಗ "ಡಾಂಬರು ರಸ್ತೆ, ವಿದ್ಯುದ್ದೀಪಗಳು, ಶಾಲೆ, ಆಸ್ಪತ್ರೆ, ಕುಡಿಯಲು ಶುದ್ಧನೀರು ಇವೇ ಮೊದಲಾದ ಆಧುನಿಕ ಸೌಕರ್ಯಗಳಿಂದ ಸುಸಜ್ಜಿತವಾದ ವಸತಿಗಳು ನಿರ್ಮಾಣವಾಗಿದ್ದವು."

ಈ ಬೃಹತ್ ಎಂಜಿನಿಯರಿಂಗ್ ಸ್ಥಾವರಗಳನ್ನು ಕಂಡಾಗಲೆಲ್ಲ "ನನ್ನ ಮನಸ್ಸು ಉಲ್ಲಾಸಗೊಳ್ಳುತ್ತದೆ, ಆನಂದ, ಉತ್ಸಾಹಗಳಿಂದ ಸಂಭ್ರಮ ಪಡುತ್ತೇನೆ. ಇವು ನನ್ನ ದೃಷ್ಟಿಯಲ್ಲಿ ನವಭಾರತ ನಿರ್ಮಾಣದ, ನಮ್ಮ ಜನತೆಗೆ ಬದುಕನ್ನೂ ಜೀವನೋಪಾಯವನ್ನೂ ಕಲ್ಪಿಸಿಕೊಡುವುದರ ಪ್ರತ್ಯಕ್ಷದರ್ಶಿ ಸಂಕೇತಗಳು" ಎಂದು ಜವಹರಲಾಲ್ ನೆಹರೂ ಬರೆದಿದ್ದಾರೆ. ಈ ಸಂತೋಷ, ಉತ್ಸಾಹ, ಉಲ್ಲಾಸ, ಸಂಭ್ರಮಗಳಿಂದ ಭಾರತದ ಸಹಸ್ರಾರು ಮಂದಿ ಪುಳಕಿತರಾಗಿರುವಂತೆಯೂ ತೋರುತ್ತದೆ.

○

11

ಕಾನೂನು ಮತ್ತು ಪ್ರವಾದಿಗಳು

ಈ ಕೆಲವು ಪ್ರಗತಿಶೀಲ ಚಳವಳಿಗಳ ಬಗ್ಗೆ ನೆಹರೂಗೆ ಅತಿಯಾದ ಮೋಹವಿತ್ತು. ಅವರು ಸದಾಕಾಲವೂ ತಾವು ಅತ್ಯಾಧುನಿಕ ಎಂಬ ಭಾವನೆ ಹೊಂದಿದ್ದರು. ರಾಯಲ್ ಅಕಾಡೆಮಿಯಲ್ಲಿನ ಪಿಕಾಸೋ ಚಿತ್ರದಂತೆ ತಾವು ನವನವೋನ್ಮೇಷಶಾಲಿನಿ-ಯಾಗಿ ಕಾಣಿಸಿಕೊಳ್ಳಲು ಇಚ್ಛಿಸುತ್ತಿದ್ದರು. ತಮ್ಮ ಸುತ್ತಮುತ್ತ ಇರುವ ಅಭಿಜಾತ ಪ್ರಭೇದಗಳನ್ನು ತಿರಸ್ಕಾರ ನೋಟದಿಂದ ಕಾಣುತ್ತಲೇ ನವನವೋನ್ಮೇಷಶಾಲಿಯಾಗಿ ಕಾಣಿಸಿಕೊಳ್ಳಲು ಬಯಸುತ್ತಿದ್ದರು.

–ಡಿ.ಎಫ್. ಕಾರ್ಕ, ಪತ್ರಕರ್ತರು, 1953

ಪ್ರತಿಯೊಂದು ದೇಶಕ್ಕೂ, ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ಶೀಲ ಚಾರಿತ್ರ್ಯಗಳಿವೆ ಎಂಬುದು ಈಗಾಗಲೇ ಇತ್ಯರ್ಥವಾಗಿರುವ ಸಂಗತಿ. ಇದೊಂದು ಜನ್ಮಜಾತ ಗುಣ, ಮೂಲ ಪ್ರವೃತ್ತಿ. ಶೇಕ್ಸ್‌ಪಿಯರ್ ಮತ್ತು ಕಾಳಿದಾಸ ಇಬ್ಬರೂ ಮಹಾಕವಿಗಳು, ನಾಟಕಕಾರರು...ಭಾರತಕ್ಕೆ ಒಬ್ಬ ಶೇಕ್ಸ್‌ಪಿಯರನ್ನು ಕೊಡಲಾಗಲಿಲ್ಲ... ಇಂಗ್ಲೆಂಡಿಗೆ ಒಬ್ಬ ಕಾಳಿದಾಸನನ್ನು ಕೊಡಲಾಗಲಿಲ್ಲ. ಸುಧಾರಣೆಯ ಪ್ರಾಯೋಜಕರಿಗೆ ನನ್ನದೊಂದು ಪ್ರಶ್ನೆ, ನನ್ನೆಲ್ಲ ಶಕ್ತಿ, ಆತ್ಮವಿಶ್ವಾಸಗಳನ್ನು ಒಗ್ಗೂಡಿಸಿ ಈ ಪ್ರಶ್ನೆ ಕೇಳುತ್ತಿದ್ದೇನೆ-ಹಿಂದೂ ಕಾಯಿದೆ ಕಾನೂನುಗಳ ಐರೋಪ್ಯೀಕರಣದ ಅಗತ್ಯವಾದರೂ ಏನಿದೆ?...ಅದನ್ನು ಸಂಹಿತೆಯಾಗಿ ಕ್ರೋಢೀಕರಿಸುವುದರಲ್ಲಿ ಲಕ್ಷಾಂತರ ಮಂದಿಯ ಭಕ್ತಿ ಭಾವನೆ, ಧರ್ಮ ನಿಷ್ಠೆ, ಸಂವೇದನೆಗಳನ್ನು ಘಾಸಿಗೊಳಿಸುವ ಅಪಾಯವಿದೆ.

–ಹಿಂದೂ ವಕೀಲ, 1954.

I

ಫ್ರೆಂಚ್ ಲೇಖಕ ಅಂಡ್ರೆ ಮಾಲ್ರೋ ಒಮ್ಮೆ ನೆಹರೂ ಅವರನ್ನು, "ಸ್ವಾತಂತ್ರ್ಯಾನಂತರ ನೀವು ಎದುರಿಸಿದ ಅತಿದೊಡ್ಡ ಸಂಕಷ್ಟ ಯಾವುದು?" ಎಂದು ಕೇಳಿದ್ದರು. ನೆಹರೂ ಉತ್ತರ: "ಇರುವಷ್ಟು ಮಾತ್ರದಲ್ಲೇ, ಇರುವಷ್ಟು ಸಂಪನ್ಮೂಲಗಳಿಂದಲೇ ನ್ಯಾಯಬದ್ಧವಾದ

ರಾಷ್ಟ್ರವೊಂದನ್ನು ಕಟ್ಟುವುದು", ನಂತರ ನೆಹರೂ ನುಡಿದಿದ್ದರು: "ಬಹುಶಃ ಧರ್ಮ ಸಂಸ್ಥಾನದೊಳಗೊಂದು ಜಾತ್ಯತೀತ ರಾಷ್ಟ್ರ ಸೃಷ್ಟಿಸುವುದು."

ನಿಜವಾಗಿಯೂ ಜಾತ್ಯತೀತತೆ ಎನ್ನುವುದು ಸ್ವತಂತ್ರ ಭಾರತದ ಅಡಿಪಾಯವಾದ ವಿಚಾರ, ಆದರ್ಶವೇ ಆಗಿತ್ತು. ಭಾರತದಲ್ಲಿನ ಬಹುಧರ್ಮೀಯರು ಒಂದು ಸ್ವತಂತ್ರ ರಾಷ್ಟ್ರವಾಗಿ ಶಾಂತಿಯುತ ಸಹಬಾಳ್ವೆ ನಡೆಸಬೇಕೆಂಬುದು ಗಾಂಧೀಜಿಯವರ ಆಗ್ರಹವಾಗಿತ್ತು. ಈ ನಂಬಿಕೆ ಗಾಂಧೀಜಿಯವರ ಮುಖ್ಯ ಅನುಯಾಯಿ ನೆಹರೂ ಮತ್ತು ಆಪ್ತ ಸಲಹೆಗಾರ ಗೋಪಾಲಕೃಷ್ಣ ಗೋಖಲೆಯವರ ನಂಬಿಕೆಯೂ ಆಗಿತ್ತು.

ಸ್ವಾತಂತ್ರ್ಯದಿಂದ ಕಾಂಗ್ರೆಸ್ಸಿನ ರಾಷ್ಟ್ರೀಯವಾದಕ್ಕೆ ಒಂದು ದೊಡ್ಡ ಮಾರಣಾಂತಿಕ ಪೆಟ್ಟು ಬಿದ್ದಿತ್ತು. ಗಾಂಧೀಜಿ ಮತ್ತು ಅವರ ಸಹೋದ್ಯೋಗಿಗಳು, ಸಹಚರರು ಬಯಸಿದಂತೆ ಸ್ವಾತಂತ್ರ್ಯ ಒಂದು ರಾಷ್ಟ್ರಕ್ಕೆ ಬಂದಿರಲಿಲ್ಲ, ಎರಡು ರಾಷ್ಟ್ರಗಳಿಗೆ ಬಂದಿತ್ತು. ಜಾತ್ಯತೀತತೆಗೆ ಈಗ ಹೊಸ ಸವಾಲುಗಳು ಎದುರಾಗಿದ್ದವು. ಅವುಗಳಲ್ಲಿ ಒಂದು ವ್ಯಕ್ತಿಗತ ಕಾನೂನಿನ ಪ್ರಪಂಚಕ್ಕೆ ಸೇರಿದ್ದು. ವಸಾಹತುಶಾಹಿಯಲ್ಲಿ ಇಡೀ ಭಾರತಕ್ಕೆ ಒಂದೇ ಅಪರಾಧ ಕಾನೂನು ಇತ್ತು. ಈ ಕಾನೂನನ್ನು 1830ರಲ್ಲಿ ಥಾಮಸ್ ಬಾಬಿಂಗ್ಟನ್ ಮೆಕಾಲೆ ಎಂಬ ಇತಿಹಾಸಕಾರ ರೂಪಿಸಿದ್ದ. ಆದರೆ, ವಿವಿಧ ಜಾತಿ, ಧರ್ಮ, ಪಂಥಗಳ ವ್ಯಕ್ತಿಗತ ನಿಯಮಗಳಿಗೆ ಬದಲಾಗಿ ಸಮಾನವಾದ ನಾಗರಿಕ ಸಂಹಿತೆಯೊಂದನ್ನು ಜಾರಿಗೆ ತರುವ ಕೆಲಸ ಆಗಲಿಲ್ಲ. ವಸಾಹತುಶಾಹಿಯ ಪಾತ್ರ ಏನಿದ್ದರೂ ವಿವಿಧ ಧರ್ಮಗಳ ನೀತಿ ನಿಯಮಗಳ ವಿವಿಧ ಬಗೆಯ ಅರ್ಥವ್ಯಾಖ್ಯಾನಗಳ ಬಗ್ಗೆ ತೀರ್ಪು ನೀಡುವುದಷ್ಟೇ ಎಂದು ಬ್ರಿಟಿಷರು ಭಾವಿಸಿದ್ದರು.

ಸ್ವಾತಂತ್ರ್ಯ ಬಂದ ನಂತರ ಎಲ್ಲರಿಗೂ ಸಮಾನವಾದ ಏಕರೂಪ ನಾಗರಿಕ ಸಂಹಿತೆಯೊಂದು ಅಗತ್ಯವಿದೆ ಎನ್ನಿಸಿತು. ಜವಹರಲಾಲ ನೆಹರೂ ಮತ್ತು ಕಾನೂನು ಸಚಿವ ಡಾ. ಅಂಬೇಡ್ಕರ್ ಅವರಿಗೆ ಏಕರೂಪ ನಾಗರಿಕ ಸಂಹಿತ್ಯ ಅತ್ಯಗತ್ಯವೆನಿಸಿತು. ಇವರಿಬ್ಬರೂ ಆಧುನಿಕ ಮನೋಭಾವದವರಾಗಿದ್ದರು ಹಾಗೂ ಪಾಶ್ಚಾತ್ಯ ಕಾನೂನು ಪರಂಪರೆಯಲ್ಲಿ ಚೆನ್ನಾಗಿ ಶಿಕ್ಷಣ, ತರಬೇತಿ ಪಡೆದವರಾಗಿದ್ದರು. ಇವರಿಬ್ಬರಿಗೂ ವ್ಯಕ್ತಿಗತ ಕಾನೂನಿನಲ್ಲಿ ಸುಧಾರಣೆ ಉಂಟು ಮಾಡುವುದು ಎಂದರೆ ಜಾತ್ಯತೀತತೆ ಮತ್ತು ಆಧುನೀಕರಣಕ್ಕೆ ಭಾರತದ ಬದ್ಧತೆಯ ಅಗ್ನಿಪರೀಕ್ಷೆ ಎಂದೇ ಅನ್ನಿಸಿತು.

II

ಸಂವಿಧಾನದ 44ನೇ ವಿಧಿಯಲ್ಲಿ ಹೀಗೆ ಹೇಳಲಾಗಿದೆ: "ಸರ್ಕಾರ ಪ್ರತಿಯೊಬ್ಬ ಪ್ರಜೆಗೂ ಭಾರತದಾದ್ಯಂತ ಏಕರೂಪದ ನಾಗರಿಕ ಸಂಹಿತೆಯನ್ನು ಕೊಡಮಾಡಲು ಪ್ರಯತ್ನಿಸುತ್ತದೆ."

ಸಂವಿಧಾನ ರಚನಾ ಸಭೆಯಲ್ಲಿ ಈ ವಿಧಿ ಚರ್ಚೆಯಾದಾಗ, ಉದ್ವಿಗ್ನ ಪರಿಸ್ಥಿತಿಯುಂಟಾಗಿತ್ತು. ವಿಶೇಷವಾಗಿ ಮುಸ್ಲಿಂ ಸದಸ್ಯರು ಕೆರಳಿದ್ದರು. ಎರಡು ಶತಮಾನಗಳಷ್ಟು

ಸುದೀರ್ಘ ಆಳ್ವಿಕೆಯಲ್ಲಿ ಬ್ರಿಟಿಷರು ಮುಸ್ಲಿಮರ ವ್ಯಕ್ತಿಗತ ಕಾನೂನಿನಲ್ಲಿ ಮಧ್ಯಪ್ರವೇಶ ಮಾಡಿರಲಿಲ್ಲ. ಅವರ ಉತ್ತರಾಧಿಕಾರಿಗಳಾದ ನೀವೂ ಏಕೆ ಅದನ್ನೇ ಅನುಸರಿಸಬಾರದು? ಎನ್ನುವುದು ಮುಸ್ಲಿಂ ಸದಸ್ಯರ ಪ್ರಶ್ನೆಯಾಗಿತ್ತು. ಒಬ್ಬ ಮುಸ್ಲಿಂ ಸದಸ್ಯರಂತೂ "ಮುಸ್ಲಿಮರ ಬಗ್ಗೆ ಹೇಳುವುದಾದರೆ, ಅವರ ಕೂಡಿಕೆ, ಸೇರ್ಪಡೆ, ಅವರ ಉತ್ತರಾಧಿಕಾರತ್ವ, ವಿವಾಹ, ವಿಚ್ಛೇದನ ಇತ್ಯಾದಿ ಸಕಲವೂ ಅವರ ಧರ್ಮಾಧಾರಿತವಾಗಿವೆ" ಎಂದು ಖಂಡತುಂಡವಾಗಿ ಹೇಳಿದ್ದರು. ಇನ್ನೊಬ್ಬ ಸದಸ್ಯರು, "ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಅಧಿಕಾರವನ್ನು ಸರ್ಕಾರಕ್ಕೆ ನೀಡಿರುವುದು ಕಾಲ ಪಕ್ವವಾಗುವ ಮೊದಲೇ ಕೈಗೊಂಡಿರುವ ಅವಸರದ ಕ್ರಮ" ಎಂದು ಹೇಳಿದರು. ಮೂರನೆಯ ಸದಸ್ಯರೊಬ್ಬರ ಅಂಬೋಣವೆಂದರೆ: "ಈ ವಿಧಿ ತಮ್ಮ ಧರ್ಮದ ಪ್ರಚಾರ, ಆಚರಣೆಗಳಿಗೆ ಅವಕಾಶ ನೀಡುವ ಸಂವಿಧಾನದ ಇನ್ನೊಂದು ವಿಧಿಯ ಮೇಲೆ ಅತಿಕ್ರಮಣ ಎಸಗುತ್ತದೆ."

ಅಂಬೇಡ್ಕರ್ ಅವರು ಈ ವಾದಗಳೆಲ್ಲವನ್ನೂ ಬಲವಾಗಿ ತಳ್ಳಿಹಾಕಿದರು. "ವ್ಯಕ್ತಿಗತ ಕಾನೂನುಗಳನ್ನು ಉಳಿಸಿಕೊಳ್ಳಬೇಕು ಎನ್ನುವುದಾದಲ್ಲಿ ಸಾಮಾಜಿಕ ವಿಷಯಗಳು ಸ್ಥಗಿತಗೊಳ್ಳುತ್ತವೆ" ಎನ್ನುವುದು ಅಂಬೇಡ್ಕರ್ ನಿಲುವಾಗಿತ್ತು. ಸಾಂಪ್ರದಾಯಿಕ ಸಮಾಜಗಳಲ್ಲಿ ಧರ್ಮದ ಹಿಡಿತದ ವ್ಯಾಪ್ತಿ ಬಹಳ ವಿಶಾಲವಾಗಿದ್ದು ಅದು ಇಡೀ ಜೀವಮಾನವನ್ನೇ ಆವರಿಸಿಬಿಡಬಹುದು. ಆದರೆ ಆಧುನಿಕ ಸಮಾಜದಲ್ಲಿ ಈ ಸ್ವೈರ ವೃತ್ತಿಯನ್ನು, ಧರ್ಮದ ಈ ಅನುಜ್ಞೆಯನ್ನು ಮೊಟಕುಗೊಳಿಸಲೇಬೇಕು. "ನಮ್ಮ ಸಾಮಾಜಿಕ ಪದ್ಧತಿಗಳಲ್ಲಿ ಸುಧಾರಣೆ ಉಂಟುಮಾಡಲು, ಅಸಮತೆ, ಅನ್ಯಾಯ, ಪಕ್ಷಪಾತಗಳು ತುಂಬಿರುವ, ನಮ್ಮ ಮೂಲಭೂತ ಹಕ್ಕುಗಳಿಗೆ ತಕರಾರು ತೆಗೆಯುವ ಈ ಸಮಾಜದಲ್ಲಿ ಸುಧಾರಣೆಗಳನ್ನು ಜಾರಿಗೆ ತರಲು ಇದರ ಅಗತ್ಯವಿದೆ" ಎಂದು ಅಂಬೇಡ್ಕರ್ ಪ್ರಬಲವಾಗಿ ಏಕರೂಪ ನಾಗರಿಕ ಸಂಹಿತೆಯ ಅಗತ್ಯವನ್ನು ಸಮರ್ಥಿಸಿಕೊಂಡರು. ಈ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಲೆಂಬಂತೆ ಅವರು, ಸಮ್ಮತಿ ಮೂಲಕ ಏಕರೂಪ ನಾಗರಿಕ ಸಂಹಿತೆಯನ್ನು ಅನ್ವಯಿಸುವ ಮಾರ್ಗವನ್ನು ಸರ್ಕಾರ ಅನುಸರಿಸಬಹುದು, ಅಂದರೆ ಯಾರು ಇದನ್ನು ಸ್ವಯಂಪ್ರೇರಣೆಯಿಂದ ಒಪ್ಪಿಕೊಳ್ಳುತ್ತಾರೋ ಅವರಿಗೆ ಮಾತ್ರ ಅನ್ವಯಿಸಬಹುದು ಎಂದು ಸಲಹೆಮಾಡಿದರು.

ಬ್ರಿಟಿಷರು ತಮ್ಮ ಆಳ್ವಿಕೆಯ ಕೊನೆಗಾಲದಲ್ಲಿ ಹಿಂದೂಗಳಿಗೆ ಏಕರೂಪ ನ್ಯಾಯ ಸಂಹಿತೆಯೊಂದನ್ನು ರೂಪಿಸಲು ಕಾರ್ಯೋನ್ಮುಖರಾದರು. ಕಾನೂನಿನ ಎರಡು ಮುಖ್ಯ ನ್ಯಾಯ ಪಂಥಗಳಾದ ಮಿತಾಕ್ಷರ ಮತ್ತು ದಯಾಭಾಗಗಳು ಹಾಗೂ ಇವುಗಳ ಸ್ಥಳೀಯ ಮಾರ್ಪಾಡುಗಳನ್ನು ಸಮನ್ವಯಗೊಳಿಸುವುದು ಇದರ ಉದ್ದೇಶವಾಗಿತ್ತು. ಇದಕ್ಕಾಗಿ 1941ರಲ್ಲಿ ಸರ್ ಬಿ.ಎನ್. ರಾವ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ರಾವ್ ಅವರು ಭಾರತದ ಸಂವಿಧಾನದ ಕರಡನ್ನು ಸಿದ್ಧಪಡಿಸುವುದರಲ್ಲೂ ಪ್ರಮುಖ ಹೊಣೆಹೊರಬೇಕಾಗಿತ್ತು. ಈ ಸಮಿತಿ ಭಾರತದಾದ್ಯಂತ ಪ್ರವಾಸ ಮಾಡಿ, ತಾನು ತರಲು ಉದ್ದೇಶಿಸಿರುವ ಬದಲಾವಣೆಗಳ ಬಗ್ಗೆ ಹಿಂದೂಗಳ ಅಭಿಪ್ರಾಯವನ್ನು ಸಂಗ್ರಹಿಸಿತು.

ಯುದ್ಧದಿಂದಾಗಿ ಈ ಸಮಿತಿಯ ಕೆಲಸಕ್ಕೆ ಅಡಚಣೆಯುಂಟಾಯಿತು. 1946ರ ವೇಳೆಗೆ ಸಮಿತಿ ಹಿಂದೂಗಳೆಲ್ಲರಿಗೂ ಅನ್ವಯಿಸಬಹುದಾದ ವ್ಯಕ್ತಿಗತ ಕಾನೂನು ಸಂಹಿತೆಯ ಕರಡೊಂದನ್ನು ಸಿದ್ಧಪಡಿಸಿತು.

ಹಿಂದೂಗಳಿಗೇ ಒಂದು ಏಕರೂಪ ನ್ಯಾಯ ಸಂಹಿತೆಯೊಂದನ್ನು ರೂಪಿಸಲು ಏಕೆ ನಿರ್ಧರಿಸಲಾಯಿತು? ಇದಕ್ಕೆ ಒಂದು ಕಾರಣ, ಹಿಂದೂಗಳು ಅತಿದೊಡ್ಡ ಜನಸಮುದಾಯ ವಾಗಿದ್ದುದು, ಮತ್ತೊಂದು, ಹಿಂದೂಗಳಲ್ಲೇ ತೀವ್ರ ಸುಧಾರಣೆಗೆ ಚಳವಳಿಯೊಂದು ಶುರುವಾಗಿದ್ದುದು. ಮಹಾತ್ಮಾ ಗಾಂಧಿಯವರೇ ಜಾತಿ ಮತ್ತು ಲಿಂಗಭೇದ ತಾರತಮ್ಯ ಮತ್ತು ಪಕ್ಷಪಾತಗಳನ್ನು ಪ್ರಶ್ನಿಸಿದ್ದರು. ಇವುಗಳನ್ನು ರದ್ದುಗೊಳಿಸುವ ನಿಟ್ಟಿನಲ್ಲಿ ಮುಂದಾಳತ್ವ ವಹಿಸಿದ್ದರು. ಅಸ್ಪೃಶ್ಯತೆ ತೊಲಗಬೇಕು, ಸಾರ್ವಜನಿಕ ಜೀವನದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ, ಅವಕಾಶಗಳನ್ನು ನೀಡಬೇಕೆಂದು ಅವರು ಪ್ರತಿಪಾದಿಸುತ್ತಿದ್ದರು. ಇದನ್ನೆಲ್ಲ ವಿರೋಧಿಸುವ ಪ್ರಭಾವಿ ಸನಾತನವಾದಿಗಳ ಬಣವೊಂದು ಇತ್ತು. ಆದಾಗ್ಯೂ ಆಧುನಿಕ ಮನೋಭಾವದ ಹಿಂದೂಗಳು ಜಾತಿಯನ್ನು ಅಪ್ರಸ್ತುತಗೊಳಿಸುವ, ಮಹಿಳೆಯರ ಹಕ್ಕು ಬಾಧ್ಯತೆಗಳನ್ನು ಹೆಚ್ಚಿಸುವ ಈ ಕಾನೂನಿನ ಪರವಾಗಿ ಪ್ರಚಾರ ಮಾಡಿದರು, ಅದಕ್ಕೆ ಬೆಂಬಲ ಸಂಘಟಿಸುವ ಪ್ರಯತ್ನ ಮಾಡಿದರು.

1948ರಲ್ಲಿ ಸಂವಿಧಾನ ರಚನಾ ಸಭೆ ಹೊಸ ಹಿಂದೂ ನ್ಯಾಯ ಸಂಹಿತೆಯ ಕರಡನ್ನು ಪರಿಶೀಲಿಸಲು ವರಿಷ್ಠರ ಸಮಿತಿಯೊಂದನ್ನು ರಚಿಸಿತು. ಕಾನೂನು ಸಚಿವ ಡಾ. ಅಂಬೇಡ್ಕರ್ ಈ ಸಮಿತಿಯ ಅಧ್ಯಕ್ಷರಾಗಿದ್ದರು. ರಾವ್ ಸಮಿತಿ ಸಿದ್ಧಗೊಳಿಸಿದ್ದ ಕರಡನ್ನು ಸ್ವತಃ ಅಂಬೇಡ್ಕರ್ ಅವರೇ ಪರಿಶೀಲಿಸಿದರು. ನಂತರ ಇದನ್ನು ವರಿಷ್ಠ ಸಮಿತಿಯ ಗಂಭೀರ ಅಧ್ಯಯನಕ್ಕೆ ಒಪ್ಪಿಸಲಾಯಿತು.

ಹೆಸರಿನಲ್ಲಿ ಹಿಂದೂ ನ್ಯಾಯಸಂಹಿತೆ ಎಂದಿತ್ತಾದರೂ ಸಿಖ್ಖರು, ಬೌದ್ಧರು ಮತ್ತು ಜೈನರಿಗೂ ಹಾಗೂ ಎಲ್ಲ ಹಿಂದೂ ಜಾತಿವರ್ಗಗಳಿಗೂ ಅದು ಅನ್ವಯವಾಗುತ್ತಿತ್ತು. ಹಿಂದೂ ನ್ಯಾಯ ಸಂಹಿತೆಯ ಹೊಸ ಮಸೂದೆಯನ್ನು ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸಿದಾಗ ಅಂಬೇಡ್ಕರ್ ಅವರು ಅದರ ಗುರಿ, ಉದ್ದೇಶಗಳನ್ನು ಹೀಗೆ ವಿವರಿಸಿದ್ದರು:

> *"ಹೈಕೋರ್ಟ್ ಮತ್ತು ಪ್ರೀವಿಕೌನ್ಸಿಲ್‌ಗಳ ಅಸಂಖ್ಯಾತ ನಿರ್ಧಾರ-ನಿರ್ಣಯಗಳಲ್ಲಿ ಹರಿದು ಹಂಚಿಹೋಗಿರುವ ಹಿಂದೂ ನ್ಯಾಯ ಸಂಹಿತೆಯ ನಿಯಮಗಳನ್ನು ಕ್ರೋಢೀಕರಿಸುವುದು. ಈ ಹಂಡಬಂಡ ನಿರ್ಣಯ-ನಿರ್ಧಾರಗಳು ಜನಸಾಮಾನ್ಯರನ್ನು ಕಕ್ಕಾಬಿಕ್ಕಿಗೊಳಿಸಿದ್ದು ನಿರಂತರ ಕಾನೂನು ವ್ಯಾಜ್ಯಗಳಿಗೆ ಕಾರಣವಾಗಿರುವುದನ್ನು ತಪ್ಪಿಸುವುದು."*

ನ್ಯಾಯಸಂಹಿತೆಯಾಗಿ ಕ್ರೋಢೀಕರಣ ಮಾಡಲು ಎರಡು ಮುಖ್ಯ ಉದ್ದೇಶಗಳಿದ್ದವು. ಮೊದಲನೆಯದು, ಹಿಂದೂ ಸ್ತ್ರೀಯರ ಸ್ಥಾನಮಾನ ಮತ್ತು ಹಕ್ಕುಗಳನ್ನು ಮೇಲಕ್ಕೆತ್ತಿ

ಹಿಡಿಯುವುದು. ಎರಡನೆಯದು, ಜಾತಿಯ ಅಸಮಾನತೆಗಳು ಮತ್ತು ವಿಭಜನೆಗಳನ್ನು ರದ್ದುಗೊಳಿಸುವುದು. ಉದ್ದೇಶಿತ ಏಕರೂಪ ಹಿಂದೂ ನ್ಯಾಯ ಸಂಹಿತೆಯ ಮುಖ್ಯ ರೂಪುರೇಷೆ ಹೀಗಿದೆ:

1. ಮರಣದ ಉಯಿಲು ಪತ್ರದಲ್ಲಿನ ಆಸ್ತಿಪಾಸ್ತಿಯಲ್ಲಿ ವಿಧವೆ ಮತ್ತು ಪುತ್ರಿಯರಿಗೂ ಸಮಪಾಲು ನೀಡುವುದು. (ಮೊದಲಿನ ಪದ್ಧತಿಯಂತೆ ಉಯಿಲಿನಲ್ಲಿನ ಆಸ್ತಿಪಾಸ್ತಿಗೆ ಗಂಡು ಮಕ್ಕಳು ಮಾತ್ರ ಹಕ್ಕುದಾರರಾಗಿರುತ್ತಿದ್ದರು). ಇದೇ ರೀತಿ ಹಿಂದೂ ಮಹಿಳೆಯ ಆಸ್ತಿಪಾಸ್ತಿಗಳಿಗೆ ಅವಳೇ ಸಂಪೂರ್ಣ ಹಕ್ಕುದಾರಳಾಗಿದ್ದು ತನಗಿಷ್ಟ ಬಂದಂತೆ ಅದನ್ನು ವಿಲೇವಾರಿ ಮಾಡಬಹುದಿತ್ತು. ಮೊದಲು ಮಹಿಳೆಯರ ಆಸ್ತಿಪಾಸ್ತಿಯ ಮೇಲಿನ ಹಕ್ಕು ಸೀಮಿತವಾಗಿತ್ತು.
2. ಗಂಡ ಅಸಹ್ಯಕರ ರೋಗಪೀಡಿತನಾಗಿದ್ದು ಅವನಿಂದ ಪ್ರತ್ಯೇಕವಾಗಿರಲು ಬಯಸುವ ಹೆಂಡತಿಗೆ ಜೀವನಾಂಶ ನೀಡಬೇಕು. ಅಥವಾ ಗಂಡನಾದವನು ಉಪಪತ್ನಿಯನ್ನು ಹೊಂದಿದ್ದು ಹೆಂಡತಿ ಪ್ರತ್ಯೇಕವಾಗಲು ಬಯಸಿದಾಗ ಅವಳಿಗೆ ಜೀವನಾಂಶ ನೀಡಬೇಕು.
3. ಮದುವೆಗಳಲ್ಲಿ ಜಾತಿ-ಉಪಜಾತಿಯ ಕಟ್ಟುಪಾಡುಗಳನ್ನು ರದ್ದುಗೊಳಿಸುವುದು. ದಂಪತಿಗಳು ಯಾವುದೇ ಜಾತಿಗೆ ಸೇರಿರಲಿ, ಹಿಂದೂಗಳ ನಡುವೆ ನಡೆಯುವ ಎಲ್ಲ ವಿವಾಹಗಳಿಗೆ ಒಂದೇ ರೀತಿಯ ಧಾರ್ಮಿಕ ಸಂಸ್ಕಾರ ಸ್ಥಾನಮಾನಗಳನ್ನೂ ಕಾನೂನಿನ ಸ್ಥಾನಮಾನಗಳನ್ನೂ ನೀಡಬೇಕು. ಅಂತರ್ಜಾತೀಯ ವಿವಾಹಗಳನ್ನು ಉಭಯತ್ರರ ಸಂಪ್ರದಾಯ, ಪದ್ಧತಿಗಳ ಅನುಸಾರ ನಡೆಸಬಹುದು.
4. ಕ್ರೌರ್ಯ, ದಾಂಪತ್ಯ ದ್ರೋಹ, ಗುಣಪಡಿಸಲಾಗದಂಥ ಕಾಯಿಲೆಗಳ ಆಧಾರದ ಮೇಲೆ ಗಂಡ-ಹೆಂಡಿರಲ್ಲಿ ಯಾರೂ ಬೇಕಾದರೂ ವಿವಾಹ ವಿಚ್ಛೇದನ ಪಡೆಯಬಹುದು.
5. ಏಕ ವಿವಾಹವನ್ನು ಕಾನೂನುಬದ್ಧವಾಗಿ ಕಡ್ಡಾಯಗೊಳಿಸುವುದು.
6. ಬೇರೆ ಬೇರೆ ಜಾತಿಯ ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಅವಕಾಶ ಕಲ್ಪಿಸುವುದು.

ಈ ಬದಲಾವಣೆಗಳು ಸ್ತ್ರೀ ಪುರುಷ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ದಾಪುಗಾಲಿನ ಹೆಜ್ಜೆಗಳೇ ಆಗಿದ್ದವು. ಆದರೆ ಸ್ತ್ರೀ ವಿಮೋಚನಾ ಪರ ವಿದ್ವಾಂಸರಿಗೆ ಇದೂ ಸಾಲದೆನ್ನಿಸಿತ್ತು. ಕೃಷಿ ಸಂಪತ್ತಿನ ವಿಷಯದಲ್ಲಿ ಮಹಿಳೆಯರಿಗೂ ಸಮಪಾಲು ದೊರೆಯಬೇಕು. ಆದರೆ ಇವಕ್ಕೆ ಹಿಂದೂ ನ್ಯಾಯಸಂಹಿತೆಯಲ್ಲಿ ಅವಕಾಶ ಕಲ್ಪಿಸಿಲ್ಲ ಎನ್ನುವುದು ಇವರ ವಾದವಾಗಿತ್ತು. ಹೊಸ ಶಾಸನ ಸ್ವಯಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೂ ಪಾಲುಕೊಡಬೇಕೆಂದು ಹೇಳುವಲ್ಲಿ ತೋರಿರುವಷ್ಟು ಔದಾರ್ಯವನ್ನು ಪಿತ್ರಾರ್ಜಿತ ಆಸ್ತಿ ವಿಷಯದಲ್ಲಿ ತೋರಿಲ್ಲ-ಎನ್ನುವುದು ಇವರ ತಕರಾರಾಗಿತ್ತು. ಆದರೆ ಸಂಪ್ರದಾಯಶರಣ ಹಿಂದೂಗಳು ಇದನ್ನು ಒಪ್ಪಿರಲಿಲ್ಲ. ಹೊಸ ಶಾಸನ ಸಾಕಷ್ಟು ಮುಂದಿದೆ. ಹಾಗೂ ಮೂಲ ಹಿಂದೂ ಶಾಸನದಿಂದ ಸಾಕಷ್ಟು

ವ್ಯತ್ಯಾಸಗಳನ್ನು ಮಾಡಲಾಗಿದೆ. ಮೂಲ ಹಿಂದೂ ಶಾಸನದ ಪ್ರಕಾರ ಪುತ್ರನಿಗೆ, ತಂದೆಯ ಆಸ್ತಿಯಲ್ಲಿ ಮಗಳು ಮತ್ತು ಹೆಂಡತಿಗಿಂತ ಹೆಚ್ಚಿನ ಹಕ್ಕು ಪಾಲು ಇತ್ತು; ಮದುವೆ ಪವಿತ್ರ ಸಂಬಂಧ. ಅದರ ವಿಚ್ಛೇದನಕ್ಕೆ ಅವಕಾಶವಿರಲಿಲ್ಲ; ಪುರುಷನಾದವನು ಒಬ್ಬಳಿಗಿಂತ ಹೆಚ್ಚು ಹೆಂಡತಿಯರನ್ನು ಪಡೆಯಬಹುದಿತ್ತು; ಮದುವೆ ಕಡ್ಡಾಯವಾಗಿ ಜಾತಿಯ ಶಾಸ್ತ್ರಗಳಂತೆ ನಡೆಯುತ್ತಿತ್ತು. ಮೂಲ ಹಿಂದೂ ಕಾಯಿದೆಯಲ್ಲಿದ್ದ ಇವೆಲ್ಲವನ್ನೂ ಬದಲಾಯಿಸಲಾಗಿದೆ ಎಂಬುದು ಸಂಪ್ರದಾಯವಾದಿಗಳ ಗೊಣಗಾಟವಾಗಿತ್ತು.

ಇದಕ್ಕೆಲ್ಲ ಉತ್ತರ ಕೊಡುವಾಗ ಅಂಬೇಡ್ಕರ್ ರಕ್ಷಣಾತ್ಮಕವಾಗಿಯೇ ಮಾತಾಡಿರುವುದುಂಟು. ಶಾಸ್ತ್ರಗಳು, ಹಿಂದೂಸ್ಮೃತಿಗಳು ಗಂಡನಾದವನಿಗೆ ಬಹು ಪತ್ನಿತ್ವಕ್ಕೆ ಅನಿರ್ಬಂಧಿತ ಹಕ್ಕನ್ನೇನೂ ಕೊಟ್ಟಿಲ್ಲ. ಕೌಟಿಲ್ಯ ಎರಡನೆಯ ಮದುವೆಯ ಹಕ್ಕನ್ನು ಸೀಮಿತಗೊಳಿಸಿದ್ದಾನೆ. ಹಾಗೆಯೇ ಕೆಳಜಾತಿಯಲ್ಲಿ ಅಥವಾ ಶೂದ್ರರಲ್ಲಿ ಸಂಪ್ರದಾಯದನ್ವಯ ವಿಚ್ಛೇದನಕ್ಕೆ ಅವಕಾಶವಿದೆ. ಆಸ್ತಿಗೆ ಸಂಬಂಧಿಸಿದಂತೆ, ಕೆಲವು ಪಂಥಗಳು ತಂದೆಯ ಆಸ್ತಿಯಲ್ಲಿ ಮಗಳಿಗೆ ನಾಲ್ಕನೆ ಒಂದು ಭಾಗ ಹಿಸ್ಸೆ ನೀಡಬೇಕೆಂದು ಹೇಳುತ್ತವೆ- ಎಂದು ಅಂಬೇಡ್ಕರ್ ವಾದಿಸಿದ್ದರು. ಅಂಬೇಡ್ಕರ್ ಅವರು ಹೊಸ ಶಾಸನದಲ್ಲಿ ಮಗಳಿಗೆ ತಂದೆಯ ಆಸ್ತಿಯಲ್ಲಿ ಮಗನಷ್ಟೇ ಸಮಾನ ಪಾಲು ನೀಡಬೇಕೆಂದು ನಿಯಮ ಮಾಡಿದ್ದರು.

ಅಂಬೇಡ್ಕರ್ ಅವರು ಹೊಸ ಹಿಂದೂ ನ್ಯಾಯ ಸಂಹಿತೆಯಲ್ಲಿ ಹಿಂದೂ ಸ್ಮೃತಿಗಳು ಮತ್ತು ಸಂಪ್ರದಾಯಗಳಿಗಿಂತ ಹೆಚ್ಚು ಉದಾರವಾಗಿದ್ದರು. ಸಂಪ್ರದಾಯವಾದಿಗಳು ಇದನ್ನು ಅಬ್ಬರದಿಂದ ಖಂಡಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಹಿಂದೂ ಸಂಪ್ರದಾಯ, ಪದ್ಧತಿ, ಆಚಾರ-ವಿಚಾರಗಳನ್ನು ಸಂಪೂರ್ಣವಾಗಿ ನಾಶಮಾಡಲಾಗಿದೆಯೆಂದು ಅಭಿಪ್ರಾಯಪಟ್ಟ ಹಿಂದೂ ಸನಾತನವಾದಿಗಳು, ಗಂಡು-ಹೆಣ್ಣುಗಳ ನಡುವಣ ಸಂಬಂಧ ಕುರಿತಂತೆ ಜಾತಿಯ ನಿಯಮಗಳು ಮತ್ತು ಸಂಪ್ರದಾಯಗಳಲ್ಲಿ ಹಸ್ತಕ್ಷೇಪ ಅಂಗೀಕಾರಾರ್ಹವಲ್ಲ ಎಂದು ವಾದಿಸಿದರು.

ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದರೇ ಈ ಮಸೂದೆಯ ಕಟ್ಟಾ ವಿರೋಧಿಯಾಗಿದ್ದರು. 1948ರ ಜುಲೈ ತಿಂಗಳಿನಲ್ಲಿ ವರಿಷ್ಠರ ಸಮಿತಿ ರಚನೆಯಾದ ನಂತರ, ಪ್ರಸಾದರು, ವ್ಯಕ್ತಿಗತ ಕಾನೂನಿನಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡುವುದರಿಂದ ಕೆಲವೇ ಕೆಲವು ಜನರ 'ಪ್ರಗತಿಶೀಲ ಚಿಂತನೆಗಳನ್ನು' ಇಡೀ ಹಿಂದೂ ಸಮುದಾಯದ ಮೇಲೆ ಹೇರಿದಂತಾಗುತ್ತದೆ ಎಂದು ನೆಹರೂ ಅವರಿಗೆ ಎಚ್ಚರಿಸಿದ್ದರು. "ಮಂತ್ರಿಮಂಡಲ ಮಸೂದೆಗೆ ಒಪ್ಪಿಗೆ ನೀಡಿದೆ. ವೈಯಕ್ತಿಕವಾಗಿ ನನಗೂ ಮಸೂದೆ ತತ್ವಶಃ ಇಷ್ಟವಾಗಿದೆ" ಎಂಬುದು ನೆಹರೂ ಉತ್ತರವಾಗಿತ್ತು. ಈ ಹಂತದಲ್ಲಿ ಮಸೂದೆಯನ್ನು ಕೈಬಿಟ್ಟರೆ ಕಾಂಗ್ರೆಸ್ ಪ್ರತಿಗಾಮಿ ಹಾಗೂ ಸಂಪ್ರದಾಯಶರಣ ಪಕ್ಷ ಎಂಬ ಸಂದೇಹಕ್ಕೆ ಆಸ್ಪದವಾಗುತ್ತದೆ. ವಿದೇಶೀಯರ ಮನಸ್ಸಿನಲ್ಲಿ ಭಾರತದ ಬಗ್ಗೆ ಸದಭಿಪ್ರಾಯ ಮೂಡಿಸುವುದಿಲ್ಲ ಎನ್ನುವುದು ನೆಹರೂ ವಾದವಾಗಿತ್ತು. "ವಿದೇಶೀಯರ ಅಭಿಪ್ರಾಯಕ್ಕಿಂತ ಬಹುಸಂಖ್ಯಾತ ಹಿಂದೂಗಳ ಅಭಿಪ್ರಾಯ ಮುಖ್ಯವಾಗುತ್ತದೆ" ಎಂದು ಪ್ರಸಾದ್ ತಿರುಗುಬಾಣ ಬಿಟ್ಟಿದ್ದರು.

ಸಂವಿಧಾನ ರಚನಾ ಸಭೆಯೊಳಗೆ ಇವರಲ್ಲದೇ ಬೇರೆ ವಿರೋಧಿಗಳೂ ಇದ್ದರು. ಇವರು ಮಸೂದೆ ತಡೆಯಲು, ಕಾರ್ಯಕಲಾಪಕ್ಕೆ ಅಡಚಣೆಯುಂಟು ಮಾಡಲು ಪ್ರಯತ್ನಿಸಿದರು. ಈ ಮಸೂದೆಯ ಅಂಗೀಕಾರ ತಮಗೆ ಪ್ರತಿಷ್ಠೆಯ ವಿಷಯವಾಗಿ ಪರಿಣಮಿಸಿದೆಯೆಂದು ನೆಹರೂ ಆವೇಶಭರಿತರಾಗಿ ನುಡಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ರಾಜೇಂದ್ರ ಪ್ರಸಾದರು ನೆಹರೂಗೆ ಪತ್ರವೊಂದನ್ನು ಸಿದ್ಧಪಡಿಸಿ, "ಇದು ಅನ್ಯಾಯ ಮತ್ತು ಪ್ರಜಾಸತ್ತೆಗೆ ವಿರುದ್ಧವಾದದ್ದು, ಇದೊಂದು ಮೂಲಭೂತವಾದ ಹಾಗೂ ವಿವಾದಾತ್ಮಕವಾದ ಶಾಸನವಾಗಿದ್ದು ಈ ಬಗ್ಗೆ ಭಾರತೀಯ ಮತದಾರರನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ" ಎಂದು ಎಚ್ಚರಿಸಿದ್ದರು. ಪ್ರಸಾದರು ಈ ಪತ್ರವನ್ನು ನೆಹರೂಗೆ ಕಳುಹಿಸುವ ಮುನ್ನ ವಲ್ಲಭಭಾಯಿ ಪಟೇಲರೊಂದಿಗೆ ಸಮಾಲೋಚಿಸಿದ್ದರು. ಈ ಪತ್ರ ಬರೆದ ಕಾಲ ತುಂಬ ಸೂಕ್ಷ್ಮವಾಗಿತ್ತು. ಅದು 1949ರ ಡಿಸೆಂಬರ್ ತಿಂಗಳು. ಭಾರತದ ಪ್ರಪ್ರಥಮ ರಾಷ್ಟ್ರಪತಿಯನ್ನು ಆಯ್ಕೆ ಮಾಡಬೇಕಿತ್ತು. ಕಾಂಗ್ರೆಸ್ ಪಕ್ಷ ಈ ಸ್ಥಾನಕ್ಕೆ ರಾಜೇಂದ್ರ ಪ್ರಸಾದ್ ಮತ್ತು ರಾಜಾಜಿಯವರ ಹೆಸರುಗಳನ್ನು ಪರಿಶೀಲಿಸುತ್ತಿತ್ತು. "ಹಿಂದೂ ನ್ಯಾಯಸಂಹಿತೆ ಟೀಕಿಸುವ ಈ ಪತ್ರವನ್ನು ನೀವೀಗ ಪ್ರಧಾನಮಂತ್ರಿಯವರಿಗೆ ಕಳುಹಿಸದೇ ಇರುವುದೇ ಕ್ಷೇಮ. ಇಲ್ಲವಾದ ಪಕ್ಷದಲ್ಲಿ ನಿಮ್ಮ ಸ್ಥಾನಮಾನಕ್ಕೆ ಹಾನಿಯುಂಟಾಗಬಹುದು" ಎಂದು ಪಟೇಲರು ಕಿವಿಮಾತು ಹೇಳಿದರು.

ಹೀಗಾಗಿ ಪ್ರಸಾದರು ಮುಂದೆ ಈ ವಿಷಯದಲ್ಲಿ ತುಟಿ ಎರಡು ಮಾಡಲಿಲ್ಲ. (ಅವರು ಭಾರತದ ಗಣರಾಜ್ಯದ ಪ್ರಪ್ರಥಮ ರಾಷ್ಟ್ರಪತಿಯಾಗಿ ಆಯ್ಕೆ ಹೊಂದಿದರು). ಆದರೆ ಸದನದ ಹೊರಗೆ ಕೂಗಾಟ ಹೆಚ್ಚಿತು. 1949ರ ಮಾರ್ಚಿಯಲ್ಲಿ ಅಖಿಲ ಭಾರತ ಹಿಂದೂ ನ್ಯಾಯಸಂಹಿತೆ ವಿರೋಧಿ ಸಮಿತಿ ರಚಿಸಿಯಾಗಿತ್ತು. ಧರ್ಮಶಾಸ್ತ್ರ ಆಧಾರಿತ ಹಿಂದೂ ವ್ಯಕ್ತಿಗತ ಕಾನೂನಿನಲ್ಲಿ ಹಸ್ತಕ್ಷೇಪ ನಡೆಸುವ ಹಕ್ಕು ಸಂವಿಧಾನ ರಚನಾ ಸಭೆಗೆ ಇಲ್ಲ ಎಂದು ಈ ಸಮಿತಿ ಘೋಷಿಸಿತು. ದೆಹಲಿ ವಕೀಲರ ಸಂಘದ ಅರವತ್ತು ಮಂದಿ (ಎಲ್ಲ ಪುರುಷರು) ಉದ್ದೇಶಿತ ಹಿಂದೂ ನ್ಯಾಯಸಂಹಿತೆಗೆ ಆಕ್ಷೇಪಣೆ ವ್ಯಕ್ತಪಡಿಸಿ ಹೇಳಿಕೆ ನೀಡಿದರು. ಹಿಂದೂ ಸಮುದಾಯ ತಮ್ಮ ವ್ಯಕ್ತಿಗತ ಕಾನೂನುಗಳು ದೈವದತ್ತವಾದವು ಎಂದು ನಂಬಿದೆಯೆಂದು ಈ ಹೇಳಿಕೆಯಲ್ಲಿ ತಿಳಿಸಲಾಗಿತ್ತು.

ಹಿಂದೂ ನ್ಯಾಯಸಂಹಿತೆ ಮಸೂದೆ ವಿರೋಧಿ ಸಮಿತಿಗೆ ಸನಾತನವಾದಿ ವಕೀಲರು ಮತ್ತು ಪುರೋಹಿತ ವರ್ಗದ ಬೆಂಬಲವಿತ್ತು. ಪ್ರಭಾವಶಾಲಿಗಳಾಗಿದ್ದ ದ್ವಾರಕಾಪೀಠದ ಶಂಕರಾಚಾರ್ಯರು ಉದ್ದೇಶಿತ ಹಿಂದೂ ನ್ಯಾಯಸಂಹಿತೆ ವಿರುದ್ಧ ಸುತ್ತೋಲೆಯೊಂದನ್ನು ಹೊರಡಿಸಿದ್ದರು. "ಧರ್ಮ ಒಂದು ಉಜ್ವಲ ಬೆಳಕು, ಸ್ಫೂರ್ತಿ ಮತ್ತು ಮಾನವನ ಆಧಾರ. ಅದನ್ನು ರಕ್ಷಿಸುವುದು ಸರ್ಕಾರದ ಪರಮೋಚ್ಚ ಕರ್ತವ್ಯ" ಎಂದು ಅವರು ಸುತ್ತೋಲೆಯಲ್ಲಿ ತಿಳಿಸಿದ್ದರು.

ಹಿಂದೂ ನ್ಯಾಯಸಂಹಿತೆ ಮಸೂದೆ ವಿರೋಧಿ ಸಮಿತಿ ಭಾರತದಾದ್ಯಂತ ನೂರಾರು ಸಭೆಗಳನ್ನು ನಡೆಸಿತು. ಈ ಸಭೆಗಳಲ್ಲಿ ಸಣ್ಣ ಪುಟ್ಟ ಸ್ವಾಮಿಗಳೂ ಮಠಾಧೀಶರೂ

ಮಸೂದೆಯನ್ನು ಖಂಡಿಸಿದರು. ಈ ಸಭೆಗಳಲ್ಲಿ ಭಾಗವಹಿಸಿದವರು ತಾವು ಧರ್ಮಯುದ್ಧವೊಂದನ್ನು ನಡೆಸುತ್ತಿರುವ ಧರ್ಮವೀರರೆಂದು ಹೇಳಿಕೊಂಡರು. ಈ ಚಳವಳಿಗೆ ರಾಷ್ಟ್ರೀಯ ಸ್ವಯಂ ಸೇವಕ ಬೆಂಬಲ ಘೋಷಿಸಿತು. 1949ರ ಡಿಸೆಂಬರ್ 11ರಂದು ಆರ್.ಎಸ್.ಎಸ್. ದೆಹಲಿಯ ರಾಮಲೀಲಾ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಿತ್ತು. ಈ ಸಭೆಯಲ್ಲಿ ಮಾತನಾಡಿದವರೆಲ್ಲರೂ ಮಸೂದೆಯನ್ನು ಖಂಡಿಸಿದರು. ಒಬ್ಬರು ಮಸೂದೆಯನ್ನು 'ಹಿಂದೂ ಸಮಾಜದ ಮೇಲೆ ಹಾಕಿದ ಪರಮಾಣು ಬಾಂಬ್' ಎಂದರೆ, ಮತ್ತೊಬ್ಬರು ಅದನ್ನು ವಸಾಹತುಶಾಹಿ ಕಾಲದ ಕಠೋರ ರೌಲತ್ ಶಾಸನಕ್ಕೆ ಹೋಲಿಸಿದರು. ಆ ಶಾಸನ ಹೇಗೆ ಬ್ರಿಟಿಷರ ಪದಚ್ಯುತಿಗೆ ಕಾರಣವಾಯಿತೋ ಈ ಮಸೂದೆ ವಿರುದ್ಧ ಹೋರಾಟವೂ ನೆಹರೂ ಸರ್ಕಾರದ ಪತನದ ಸೂಚಿಯಾಗಲಿದೆ ಎಂದರು. ಮರುದಿನ ಆರ್.ಎಸ್.ಎಸ್. ಕಾರ್ಯಕರ್ತರ ಗುಂಪೊಂದು ಸಂವಿಧಾನ ರಚನಾ ಸಭೆ ನಡೆಯುತ್ತಿದ್ದ ಕಟ್ಟಡದವರೆಗೆ ಮೆರವಣಿಗೆ ನಡೆಸಿ "ಹಿಂದೂ ನ್ಯಾಯ ಸಂಹಿತೆ ಮಸೂದೆಗೆ ಧಿಕ್ಕಾರ", "ನೆಹರೂ ಸರ್ಕಾರ ನಾಶವಾಗಲಿ" ಎಂದು ಘೋಷಣೆಗಳನ್ನು ಕೂಗಿದರು. ಡಾ. ಅಂಬೇಡ್ಕರ್ ಮತ್ತು ನೆಹರೂ ಪ್ರತಿಕೃತಿಗಳ ದಹನ ಮಾಡಿದರು. ಶೇಖ್ ಅಬ್ದುಲ್ಲಾ ಕಾರನ್ನು ಧ್ವಂಸಮಾಡಿದರು.

ಮಸೂದೆ ವಿರೋಧಿ ಚಳವಳಿ ನಾಯಕ ಸ್ವಾಮಿ ಕರಪತ್ರಜಿ ಮಹರಾಜ್. ಈ ಸ್ವಾಮೀಜಿಯ ಪೂರ್ವಾಪರ ಹೆಚ್ಚಾಗಿ ತಿಳಿಯದು. ಆತ ಉತ್ತರ ಭಾರತದವನಾಗಿದ್ದ, ಸಂಸ್ಕೃತಜ್ಞಾನ ಉಳ್ಳವನು ಎಂಬುದಷ್ಟೇ ಗೊತ್ತಿರುವ ಹಿನ್ನೆಲೆ. ಮಸೂದೆಗೆ ಅವರ ವಿರೋಧ ರಾಗದ್ವೇಷಗಳಿಂದ ಕೂಡಿತ್ತು. ಈ ಮಸೂದೆ ಮಂಡಿಸಿದವರು ಅಂಬೇಡ್ಕರ್ ಎಂಬ ಕಾರಣಕ್ಕಾಗಿ ಸ್ವಾಮೀಜಿ ಕ್ರೋಧ ಇನ್ನಷ್ಟು ಹೆಚ್ಚಾಗಿತ್ತು. ಸ್ವಾಮೀಜಿ ಭಾಷಣದಲ್ಲಿ ಪದೇ ಪದೇ ಅಂಬೇಡ್ಕರ್ ಅವರ ಜಾತಿ ಪ್ರಸ್ತಾಪಿಸಿ, ಮಾಜಿ ಅಸ್ಪೃಶ್ಯನೊಬ್ಬನಿಗೆ, ಬ್ರಾಹ್ಮಣರ ಪವಿತ್ರ ಕಾರ್ಯಕ್ಷೇತ್ರದಲ್ಲಿ, ಪವಿತ್ರ ವಿಷಯಗಳಲ್ಲಿ ತಲೆತೂರಿಸುವ ಹಕ್ಕಿಲ್ಲವೆಂದು ಹೇಳಿದರು.

ದೆಹಲಿ ಹಾಗೂ ಇತರೆಡೆಗಳಲ್ಲಿ ಮಾಡಿದ ಭಾಷಣಗಳಲ್ಲಿ ಕರಪತ್ರಜಿ ಸ್ವಾಮಿಯವರು ಶಾಸ್ತ್ರಗಳ ಅರ್ಥ ವ್ಯಾಖ್ಯಾನದ ಬಹಿರಂಗ ಚರ್ಚೆಗೆ ಬರುವಂತೆ ಅಂಬೇಡ್ಕರ್‌ಗೆ ಸವಾಲೊಡ್ಡಿದರು. ಶಾಸ್ತ್ರಗಳು ಬಹುಪತ್ನಿತ್ವವನ್ನು ಪ್ರೋತ್ಸಾಹಿಸುವುದಿಲ್ಲ ಎಂದು ಅಂಬೇಡ್ಕರ್ ಹೇಳಿದ್ದಕ್ಕೆ ಪ್ರತಿಯಾಗಿ ಸ್ವಾಮೀಜಿ ಯಜ್ಞ್ಯಾವಲ್ಕರನ್ನು ಉಲ್ಲೇಖಿಸಿದ್ದರು: "ಹೆಂಡತಿ ಮದ್ಯವ್ಯಸನಿಯಾಗಿದ್ದಲ್ಲಿ, ನಿತ್ಯರೋಗಿಯಾಗಿದ್ದಲ್ಲಿ, ವಂಚಕಳಾಗಿದ್ದಲ್ಲಿ, ಬಂಜೆಯಾಗಿದ್ದಲ್ಲಿ, ದುಂದುಗಾರ್ತಿಯಾಗಿದ್ದಲ್ಲಿ, ಜಗಳಗಂಟಿಯಾಗಿದ್ದಲ್ಲಿ, ಅವಳು ಗಂಡು ಮಕ್ಕಳನ್ನು ಪಡೆಯದಿದ್ದಲ್ಲಿ, ಗಂಡನಾದವರು ಮೊದಲ ಪತ್ನಿ ಜೀವಂತವಿದ್ದಾಗಲೇ ಎರಡನೆಯ ಪತ್ನಿಯನ್ನು ಮದುವೆ ಮಾಡಿಕೊಳ್ಳಬಹುದು". ಸ್ವಾಮೀಜಿ, ಯಜ್ಞ್ಯಾವಲ್ಕರ ಸ್ಮೃತಿಯ ಮೂರನೇ ಭಾಗದ ಮೂರನೆಯ ಅಧ್ಯಾಯದಲ್ಲಿರುವ ಮೇಲಿನ ಹುಕುಂನ ಪೂರ್ಣ ಪಾಠವನ್ನು ಮುದ್ರಿಸಿ ಹಂಚಿದ್ದ. ಗಂಡನಾದವನು ಕುಡುಕನಾಗಿದ್ದಲ್ಲಿ, ಜಗಳಗಂಟಿಯಾಗಿದ್ದಲ್ಲಿ, ದುಂದುಗಾರನಾಗಿದ್ದಲ್ಲಿ

ಹೆಂಡತಿ ಬೇರೊಬ್ಬನನ್ನು ಮದುವೆಯಾಗಲು ಯಜ್ಞ್ಯಾವಲ್ಕರ ಹುಕುಂನಲ್ಲಿ ಅನುಮತಿ ಇದೆಯೇ ಎಂಬುದರ ಬಗ್ಗೆ ಕರಪತ್ರಜಿ ಏನೂ ಹೇಳಿಲ್ಲ.

ಸ್ವಾಮಿ ಕರಪತ್ರಜಿ ದೃಷ್ಟಿಯಲ್ಲಿ ಹಿಂದೂ ಸಂಪ್ರದಾಯದಲ್ಲಿ ವಿವಾಹ ವಿಚ್ಛೇದನ ನಿಷಿದ್ಧ. ಹಾಗೆಯೇ ಯಾವುದೇ ಜಾತಿಯ ಹುಡುಗನನ್ನು ದತ್ತು ತೆಗೆದುಕೊಳ್ಳುವುದೆಂದರೆ ಶಾಸ್ತ್ರಗಳನ್ನು, ಜಾತಿಭೇದಗಳನ್ನು ಉಲ್ಲಂಘಿಸಿದಂತೆಯೇ. ತುಂಬಾ ಉದಾರ ಮನೋಭಾವದಿಂದ ವ್ಯಾಖ್ಯಾನಿಸಿದರೂ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣಿಗೆ ಎಂಟನೇ ಒಂದು ಭಾಗ ಮಾತ್ರ ಲಭ್ಯ, ಅಂಬೇಡ್ಕರ್ ಹೇಳಿರುವಂತೆ ಅರ್ಧಭಾಗಕ್ಕೆ ಅವಳು ಅರ್ಹಳಲ್ಲ. ಮೊತ್ತದಲ್ಲಿ ಸ್ವಾಮೀಜಿ ಪ್ರಕಾರ ಈ ಮಸೂದೆ ಹಿಂದೂ ಸ್ಮೃತಿಗಳ ಉಲ್ಲಂಘನೆಯೇ ಆಗಿತ್ತು. "ಮಸೂದೆ ವಿರುದ್ಧ ಈಗಾಗಲೇ ಉಗ್ರ ಪ್ರತಿಭಟನೆ ವ್ಯಕ್ತವಾಗಿದೆ. ಸರ್ಕಾರ ಸ್ವನಾಶಕ್ಕಾಗಿ ಅದನ್ನು ಅಂಗೀಕರಿಸಬಹುದಷ್ಟೇ." ಸ್ವಾಮೀಜಿ ಒಂದು ಘೋರ ಎಚ್ಚರಿಕೆಯನ್ನೂ ನೀಡಿದ್ದ: "ಧರ್ಮಶಾಸ್ತ್ರಗಳಲ್ಲಿ ಸ್ಪಷ್ಟಪಡಿಸಿರುವಂತೆ, ದೇವರು ಮತ್ತು ಧರ್ಮಗಳು ರೂಪಿಸಿರುವ ನಿಯಮಗಳನ್ನು, ದೈವಶಾಸನವನ್ನು ಉಲ್ಲಂಘಿಸಿದಲ್ಲಿ ಸರ್ಕಾರಕ್ಕೆ ಮತ್ತು ದೇಶಕ್ಕೆ ದೊಡ್ಡ ಕುತ್ತು ಖಚಿತ ಹಾಗೂ ಹಠಮಾರಿತನದ ಈ ಮುಟ್ಠಾಳ ಕೃತ್ಯಕ್ಕಾಗಿ ಸರ್ಕಾರ-ದೇಶ ಎರಡೂ ಪಶ್ಚಾತ್ತಾಪಪಡಬೇಕಾಗುತ್ತದೆ."

III

ಡಿಸೆಂಬರ್ 1949ರಂದು ಸಂವಿಧಾನ ರಚನಾಸಭೆ ರಾಷ್ಟ್ರದ ಸಂವಿಧಾನಕ್ಕೆ ಅಂಗೀಕಾರ ನೀಡಿತು. ಇದರೊಂದಿಗೆ, ಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯುವವರೆಗೆ ಹಂಗಾಮಿ ಸಂಸತ್ತಿಗೂ ಅವಕಾಶ ಒದಗಿ ಬಂತು. 1950-51ರಲ್ಲಿ ನೆಹರೂ ಮತ್ತು ಅಂಬೇಡ್ಕರ್ ಹಿಂದೂ ಮಸೂದೆಗೆ ಅಂಗೀಕಾರ ಪಡೆಯಲು ಹಲವಾರು ಪ್ರಯತ್ನಗಳನ್ನು ನಡೆಸಿದರು. ಆದರೆ ಸಂಸತ್ತಿನ ಒಳಗೆ ಮತ್ತು ಹೊರಗೆ ಮಸೂದೆಗೆ ಸಾಕಷ್ಟು ವಿರೋಧವಿತ್ತು. ಈ ಬಗ್ಗೆ ಜೆ.ಡಿ.ಎಂ. ಡೆರೆಟ್ ಅವರ ಮಾತುಗಳಲ್ಲೇ ಹೇಳುವುದಾದರೆ-

> *"ಮಸೂದೆ ವಿರುದ್ಧ ಸಂಘಟಿಸಿದ ಪ್ರತಿಯೊಂದು ವಾದಕ್ಕೊಂದು ಪ್ರತಿವಾದವಿರುತ್ತಿತ್ತು. ಪ್ರತಿಯೊಂದು ವಾದವನ್ನು ಕಟ್ಟಿ ಹಾಕಲಾಗುತ್ತಿತ್ತು. ಹೀಗೆ ಒಂದು ಮತ್ತೊಂದನ್ನು ಹೊಡೆದು ಹಾಕುತ್ತಿತ್ತು. ಶೋಷಿತ ಪತ್ನಿಯರಿಗೆ ವಿವಾಹ ವಿಚ್ಛೇದನದ ಸವಲತ್ತು ಒದಗಿಸುವ ವಿಷಯವಂತೂ ಆಕ್ರಮಣದ ಮುಖ್ಯ ಗುರಿಯಾಗಿತ್ತು. ಧರ್ಮ ಅಪಾಯದಲ್ಲಿದೆ ಎಂದು ಅನೇಕರು ಗದ್ದಲವೆಬ್ಬಿಸಿದರು. ಆದರೆ ಈ ಗದ್ದಲದ ಹಿಂದಿದ್ದ ನಿಜವಾದ ಆಕ್ಷೇಪಣೆ ಮಸೂದೆ ಹೆಣ್ಣು ಮಕ್ಕಳಿಗೆ ಸಮನಾದ ಪಾಲು ನೀಡಬೇಕೆಂದು ಆದೇಶಿಸುವುದರ ವಿರುದ್ಧವೇ ಆಗಿತ್ತು."*

ಹಂಗಾಮಿ ಸಂಸತ್ತಿನೊಳಗೆ ಸಂಪ್ರದಾಯಶರಣ ಸದಸ್ಯರು ಹಿಂದೂ ಕಾನೂನು, ನಿಯಮಗಳು ಅನಾದಿ ಕಾಲದಿಂದ ಬದಲಾವಣೆಗೊಳಪಟ್ಟಿಲ್ಲವೆಂದು ಪ್ರತಿಪಾದಿಸಿದರು.

"ನಮ್ಮ ದೇಶದಲ್ಲಿ ಪುರುಷರ ಕರ್ತವ್ಯ ಮತ್ತು ನೀತಿನಡಾವಳಿ ಸಂಹಿತೆಯನ್ನು ವೇದಗಳು ನಿಷ್ಕರ್ಷೆ ಮಾಡಿವೆ" ಎಂದು ರಾಮನಾರಾಯಣಸಿಂಗ್ ಸಮರ್ಥಿಸಿಕೊಂಡರು. ಬೌದ್ಧಧರ್ಮ, ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳೊಡ್ಡಿದ ಸವಾಲುಗಳ ಎದುರೂ ವೇದ ಧರ್ಮ ನಾಶವಾಗಲಿಲ್ಲ. ವೇದ ಧರ್ಮ ಇನ್ನೂ ಇದೆ. ಆದರೆ ನಾವು ಈಗ ಪಂಡಿತ ನೆಹರೂ ಆಡಳಿತ ಹೊಂದಿದ್ದೇವೆ. ಅವರ ಪ್ರತಿನಿಧಿಯಾದ ಅಂಬೇಡ್ಕರ್ ಅವರು ವಿಶ್ವದ ಆದಿಯಿಂದ ಅಸ್ತಿತ್ವದಲ್ಲಿರುವ ಆ ನಿಯಮಗಳನ್ನು ಒಂದೇ ಏಟಿನಲ್ಲಿ ನಾಶಗೊಳಿಸುವ ಇರಾದೆಯಲ್ಲಿದ್ದಾರೆ" ಎಂದು ರಾಮನಾರಾಯಣ್ ಸಿಂಗ್ ದೂಷಿಸಿದರು.

ನಿರ್ದಿಷ್ಟವಾದಿ ಹಿಂದೂ ನ್ಯಾಯಸಂಹಿತೆ ಬದಲು ಸರ್ಕಾರ ಭಾರತೀಯ ನ್ಯಾಯ ಸಂಹಿತೆಯೊಂದನ್ನು ರೂಪಿಸುವ ಅಗತ್ಯವಿದೆಯೆಂದು ಇನ್ನು ಕೆಲವು ಸದಸ್ಯರು ವಾದಿಸಿದರು. ಕೇವಲ ಹಿಂದೂ ಸ್ತ್ರೀಯರು ಮಾತ್ರ ಶೋಷಣೆ-ದಬ್ಬಾಳಿಕೆಗೆ ಒಳಗಾಗಿದ್ದಾರೆ ಎಂಬುದನ್ನು ನಾನು ನಂಬುವುದಿಲ್ಲ ಎಂದು ನುಡಿದ ಇಂದ್ರಾ ವಿದ್ಯಾ ವಾಚಸ್ಪತಿ ಹೀಗೆ ಅಭಿಪ್ರಾಯಪಟ್ಟರು:

> *"ಈಗಿರುವಂತೆ ಮಸೂದೆಯನ್ನು ಅಂಗೀಕರಿಸುವುದರಿಂದ ಕೋಮುವಾದದ ಕೇಡನ್ನು, ಆಪತ್ತನ್ನು ಪ್ರೋತ್ಸಾಹಿಸಿದಂತಾಗುತ್ತದೆ. ರಾಷ್ಟ್ರದ ಸಮಸ್ತ ಜನತೆಗೂ ಇದನ್ನು ಅನ್ವಯಿಸದೇ ಹೋದಲ್ಲಿ ಕೋಮು ಭಾವನೆ ಜಾಗೃತಗೊಳ್ಳುತ್ತದೆ, ಆಗ ವರವಾಗಬೇಕಾದದ್ದು ಶಾಪವಾಗಿ ಪರಿಣಮಿಸುತ್ತದೆ."*

ಇನ್ನು ಕೆಲವು ಸದಸ್ಯರಿಗೆ ಹಾಲಿ ಇದ್ದಂತೆಯೇ ಮಸೂದೆ ತೃಪ್ತಿಕರವಾಗಿ ಕಂಡಿತ್ತು. ಇಡೀ ಭಾರತಕ್ಕೆ ಒಂದು ನಾಗರಿಕ ಸಂಹಿತೆ ಇರಬೇಕೆಂಬುದು ಹೇಳುವವರನ್ನು ನಾನು ಮೆಚ್ಚುತ್ತೇನೆ ಎಂದ ಠಾಕೂರ್‌ದಾಸ್ ಭಾರ್ಗವ ಈ ರೀತಿ ತಮ್ಮ ವಾದ ಮುಂದುವರಿಸಿದರು:

> *"ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ, ಯೆಹೂದಿಗಳಿಗೆ ಹೀಗೆ ಒಂದೊಂದು ಸಮುದಾಯಕ್ಕೂ ಒಂದೊಂದು ನಾಗರಿಕ ಸಂಹಿತೆ ರೂಪಿಸಬೇಕೆಂಬ ಸಲಹೆ ಕಾರ್ಯಸಾಧುವಾದುದಲ್ಲ, ಮುಸ್ಲಿಂ ಸದಸ್ಯರು ಈಗಾಗಲೇ ತಮ್ಮ ವ್ಯಕ್ತಿಗತ ಕಾನೂನಿನಲ್ಲಿ ಮಾರ್ಪಾಟು ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಅವರ ಪ್ರಕಾರ ಅದು ಸ್ವತಃ ಅಲ್ಲಾ ಬಹಿರಂಗಪಡಿಸಿರುವ ಉಕ್ತಿ. ಆದರೆ ಈ ಹಂತದಲ್ಲಿ ಏಕರೂಪ ಸಂಹಿತೆ ತಡೆಯುವ ತಂತ್ರವಿದೆಯಲ್ಲ, ಅದರಿಂದ ಬಹುಸಂಖ್ಯಾತ ಸಮುದಾಯಕ್ಕೆ ಅತ್ಯಗತ್ಯವಾಗಿರುವ ಸುಧಾರಣೆಯಿಂದ ಗಮನ ತಪ್ಪಿಸಿದಂತಾಗುತ್ತದೆ. ಅಂಬೇಡ್ಕರ್ ಅವರು ಹೇಳಿದಂತೆ ನಿನ್ನೆಯವರೆಗೆ ಯಾರೆಲ್ಲ ಈ ಸಂಹಿತೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರೋ, ಹಾಗೂ ಯಾರೆಲ್ಲ ಈಗಿರುವ ಪ್ರಾಚೀನ ಹಿಂದೂ ಕಾನೂನು ನಿಯಮಗಳನ್ನು ಪ್ರಬಲವಾಗಿ ಸಮರ್ಥಿಸುತ್ತಿರುವರೋ ಅವರೇ ಇಂದು ತಾವು ಅಖಿಲ ಭಾರತ ನಾಗರಿಕ ಸಂಹಿತೆಗೆ ಸಿದ್ಧ ಎಂದು ಹೇಳುತ್ತಿದ್ದಾರೆ. ಏಕೆಂದರೆ, ಹಿಂದೂ ನ್ಯಾಯ ಸಂಹಿತೆ ಕರಡು ಸಿದ್ಧಪಡಿಸಲೇ ನಾಲ್ಕೈದು ವರ್ಷ ಹಿಡಿಯಿತು. ಇನ್ನು ಮತ್ತೊಂದು*

ನಾಗರಿಕ ಸಂಹಿತೆ ಕರಡು ಸಿದ್ಧಪಡಿಸಲು ಹತ್ತು ವರ್ಷಗಳೇ ಬೇಕಾದೀತು ಎಂದು ಅವರು ನಂಬಿದ್ದಾರೆ."

ಪ್ರಗತಿಶೀಲ ಶಾಸನದ ಹಿಂದೆ ಬೆಂಬಲವಾಗಿ ಪ್ರಭಾವಶಾಲಿಗಳಾದ ನೆಹರೂರಂಥವರು ಸಾಕಷ್ಟು ಮಂದಿ ಇದ್ದಾರೆ, ಆದರೆ ಮುಸ್ಲಿಮರಲ್ಲಿ ಇಂಥ ಮಂದಿ ಸಾಕಷ್ಟಿಲ್ಲ ಎಂಬುದನ್ನು ಅಂಬೇಡ್ಕರ್ ಬಲ್ಲವರಾಗಿದ್ದರು. ಎಂದೇ, "ಈ ರಾಷ್ಟ್ರದ ವಿವಿಧ ಸಮುದಾಯಗಳ ಭಾವನೆಗಳನ್ನು ಅರ್ಥಮಾಡಿಕೊಳ್ಳದಂಥ ಹೆಡ್ಡ ಸರ್ಕಾರ ಇದಲ್ಲ"ವೆಂದು ನುಡಿದರು. ಆದ್ದರಿಂದಲೇ ಈ ಸಂಹಿತೆ ಸದ್ಯಕ್ಕೆ ಹಿಂದೂ ಸಮುದಾಯವನ್ನು ಗಣನೆಗೆ ತೆಗೆದುಕೊಂಡಿದೆ ಎಂದು ಸಮರ್ಥಿಸಿಕೊಂಡರು.

ಹಿಂದೂಗಳಲ್ಲೂ ಎಲ್ಲರೂ ಉದಾರ ಮನಸ್ಕರಾಗಿರಲಿಲ್ಲ. ಸಂಸತ್ತಿನಲ್ಲಿ ಸಂಪ್ರದಾಯಶರಣ ಸದಸ್ಯರು ವ್ಯಕ್ತಪಡಿಸಿದ ವಿರೋಧ, ಆಕ್ಷೇಪಗಳನ್ನು ಆರ್.ಎಸ್.ಎಸ್. ಸದಸ್ಯರು ಬೀದಿಗೆ ಒಯ್ದರು. ಹಿಂದೂ ಸಂಹಿತೆ ವಿರುದ್ಧ ಪ್ರತಿಭಟಿಸಿ ಬಂಧನಕ್ಕೊಳಗಾಗಲು ಅವರು ರಾಷ್ಟ್ರದ ವಿವಿಧೆಡೆಗಳಿಂದ ದೆಹಲಿಗೆ ಸ್ವಯಂ ಸೇವಕರನ್ನು ಕರೆತಂದರು. ಪಾಕಿಸ್ತಾನದ ಅಂಗಚ್ಛೇದ, ನೆಹರೂ ಪದಚ್ಯುತಿ ಇವರ ಗುರಿಯಾಗಿತ್ತು. 'ಪಾಕಿಸ್ತಾನ್ ತೋಡ್ದೋ', 'ನೆಹರೂ ಹುಕುಮತ್ ಛೊಡ್ದೋ' ಎಂದು ಘೋಷಣೆಗಳನ್ನು ಕೂಗಿದರು.

ಆರ್.ಎಸ್.ಎಸ್. ವ್ಯವಸ್ಥೆ ಮಾಡುತ್ತಿದ್ದ ಈ ಸಭೆಗಳಲ್ಲಿ ಸ್ವಾಮಿ ಕರಪತ್ರಜಿ ಮಹರಾಜ್ ಪ್ರಧಾನ ಭಾಷಣಕಾರರಾಗಿರುತ್ತಿದ್ದ. 1951ರ ಸೆಪ್ಟಂಬರ್ 16ರಂದು ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಮಾತನಾಡಿದ ಸ್ವಾಮೀಜಿ ಉದ್ದೇಶಿತ ಮಸೂದೆ ಬಗ್ಗೆ ಸಂವಾದವೊಂದನ್ನು ಏರ್ಪಡಿಸುವಂತೆ ನೆಹರೂಗೆ ಸವಾಲು ಹಾಕಿದ.

"ಉದ್ದೇಶಿತ ಹಿಂದೂ ಸಂಹಿತೆಯಲ್ಲಿ ಒಂದೇ ಒಂದು ಭಾಗವಾದರೂ ಶಾಸ್ತ್ರಗಳ ಪ್ರಕಾರವಾಗಿದೆ ಎಂದು ನೆಹರೂ ಮತ್ತು ಅವರ ಸಹೋದ್ಯೋಗಿಗಳು ಸಾಬೀತು ಪಡಿಸಿದಲ್ಲಿ ನಾನು ಇಡೀ ಹಿಂದೂ ಸಂಹಿತೆಯನ್ನು ಒಪ್ಪಿಕೊಳ್ಳುತ್ತೇನೆ."

ಮರುದಿನ ಈ ಸವಾಲನ್ನು ಸಾಧಿಸುವ ಉದ್ದೇಶದಿಂದ ಸ್ವಾಮೀಜಿ ಮತ್ತು ಅವನ ಅನುಯಾಯಿಗಳು ಸಂಸತ್ತಿಗೆ ಮೆರವಣಿಗೆಯಲ್ಲಿ ಹೋದರು. ಪೊಲೀಸರು ಸಂಸತ್ ಭವನದ ಹತ್ತಿರ ಅವರನ್ನು ತಡೆದರು. "ಆಗ ಸಂಭವಿಸಿದ ನೂಕು ನುಗ್ಗಲು ತಳ್ಳಾಟಗಳಲ್ಲಿ ಸ್ವಾಮೀಜಿಯವರ ದಂಡ, ಯಜ್ಞೋಪವೀತದಂತೆ, ಸನ್ಯಾಸಿಗಳ ಧಾರ್ಮಿಕ ಲಾಂಛನವಾದ ದಂಡ ಮುರಿದು ಎರಡು ತುಂಡಾಯಿತು" ಎಂದು ಹಿಂದಿ ಸಾಪ್ತಾಹಿಕವೊಂದು ವರದಿಮಾಡಿತ್ತು.

ಆಕಸ್ಮಿಕವೋ ಎಂಬಂತೆ ಸ್ವಾಮಿ ಕರಪತ್ರಜಿ ಸಂಸತ್ ಚಲೋ ಕಾರ್ಯಕ್ರಮಕ್ಕೆ ಎರಡು ದಿನ ಮುಂಚಿತವಾಗಿ ರಾಷ್ಟ್ರಪತಿಯವರು ಮಸೂದೆ ವಿರೋಧಿಸಿ ಪ್ರಧಾನಮಂತ್ರಿಯವರಿಗೆ ಒಂದು ಸುದೀರ್ಘ ಪತ್ರ ಬರೆದಿದ್ದರು. 1948-49ರಂತೆಯೇ ರಾಜೇಂದ್ರ ಪ್ರಸಾದರು, ತನ್ನ

ಹಿಂದಿನ ವ್ಯವಸ್ಥೆಯಂತೆ ಸೀಮಿತ ಅಧಿಕಾರ ಹೊಂದಿರುವ ಈಗಿನ ಸಂಸತ್ತಿಗೆ ಇಂಥ ಮೂಲಭೂತ ಸ್ವರೂಪದ ಕ್ರಮ ಕೈಗೊಳ್ಳುವ ಅಧಿಕಾರ ಇಲ್ಲವೆಂದು ಬರೆದಿದ್ದರು. ಮಸೂದೆ ಹಿಂದೂಗಳಿಗೆ ಮಾತ್ರ ಅನ್ವಯಿಸುವುದರಿಂದ ತೀವ್ರ ಪಕ್ಷಪಾತದಿಂದ ಕೂಡಿದೆಯೆಂಬುದು ರಾಷ್ಟ್ರಪತಿಯವರ ವಾದವಾಗಿತ್ತು. ವಿವಾಹ, ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದಂತೆ ಕಾನೂನು ಎಲ್ಲ ಭಾರತೀಯರಿಗೂ ಅನ್ವಯವಾಗುವಂತಿರಬೇಕು ಇಲ್ಲವೇ ಈಗಿರುವಂತೆ ವಿವಿಧ ಸಮುದಾಯಗಳು ಅನುಸರಿಸುತ್ತಿರುವ ಸಂಪ್ರದಾಯಗಳೇ ಮುಂದುವರಿಯಬೇಕು ಎಂದು ಅಭಿಪ್ರಾಯಪಟ್ಟಿದ್ದ ಪ್ರಸಾದರು, ಈ ಬಗ್ಗೆ ತಾವು ಸಂಸತ್ತಿನ ದಿನವಹಿ ಕಲಾಪಗಳನ್ನು ಗಮನಿಸಿರುವುದಾಗಿಯೂ ಮಸೂದೆ ಅಂಗೀಕಾರವಾದಲ್ಲಿ, ಅದಕ್ಕೆ ಒಪ್ಪಿಗೆ ನೀಡುವ ಮುನ್ನ ಅದರ ಗುಣಾವಗುಣಗಳನ್ನು ಪರಿಶೀಲಿಸುವ ತಮ್ಮ ಹಕ್ಕನ್ನು ಚಲಾಯಿಸಬೇಕಾಗಬಹುದೆಂದೂ ಅಪಾಯದ ಮುನ್ಸೂಚನೆ ನೀಡಿದ್ದರು.

ತಮ್ಮ ಅಭಿಪ್ರಾಯದಂತೆ ದೇಶದಾದ್ಯಂತ ಮಸೂದೆ ಪರವಾಗಿ ವ್ಯಾಪಕವಾಗಿ ಒಲವು ವ್ಯಕ್ತಗೊಂಡಿದೆ ಎಂದು ನೆಹರೂ ಉತ್ತರಿಸಿದ್ದರು. ಆದರೆ ರಾಷ್ಟ್ರಪತಿಯವರ ವಿರೋಧ ಅವರನ್ನು ಚಿಂತೆಗೀಡು ಮಾಡಿತ್ತು. ಏಕೆಂದರೆ ಇದು ಸರ್ಕಾರ ಮತ್ತು ರಾಷ್ಟ್ರಪತಿ ನಡುವಣ ಭಿನ್ನಾಭಿಪ್ರಾಯದ ಪೂರ್ವಸೂಚನೆಯಾಗಿತ್ತು. ಅವರು ಪ್ರಸಾದರ ಪತ್ರವನ್ನು ಸಂವಿಧಾನ ತಜ್ಞರನೇಕರಿಗೆ ತೋರಿಸಿದರು. "ರಾಷ್ಟ್ರಪತಿಯವರು ಮಂತ್ರಿಮಂಡಲದ ಸಲಹೆ-ಶಿಫಾರಸುಗಳನ್ವಯ ಕ್ರಮಕೈಗೊಳ್ಳಬೇಕೆ ವಿನಃ ಇದನ್ನು ಬದಿಗೊತ್ತಿ ಸ್ವತಂತ್ರವಾಗಿ ವರ್ತಿಸುವಂತಿಲ್ಲ" ಎನ್ನುವುದು ತಜ್ಞರು ನೀಡಿದ ಭರವಸೆಯಾಗಿತ್ತು. ಸಂವಿಧಾನ ತಜ್ಞರ ಅಭಿಪ್ರಾಯದಂತೆ, ಭಾರತದ ರಾಷ್ಟ್ರಪತಿಗಳ ಸ್ಥಾನಮಾನ ಬ್ರಿಟನ್ನಿನ ರಾಣಿಗಿಂತ ದುರ್ಬಲವಾಗಿತ್ತು.

ಆದಾಗ್ಯೂ, ನೆಹರೂ ರಾಷ್ಟ್ರಪತಿಯವರನ್ನು ಎದುರುಹಾಕಿಕೊಳ್ಳಲು, ಅವರನ್ನು ಪ್ರಶ್ನಿಸಲು ಇಷ್ಟಪಡಲಿಲ್ಲ. ಇದೆಲ್ಲದರ ಮಧ್ಯೆ, ಹಂಗಾಮಿ ಸಂಸತ್ತಿನಲ್ಲೆ ಮಸೂದೆ ಮೇಲಿನ ಚರ್ಚೆ ಆಮೆ ನಡಿಗೆಯಲ್ಲಿ ಸಾಗಿತ್ತು. ನೂರೆಂಟು ಆಕ್ಷೇಪಣೆಗಳನ್ನು ಎತ್ತಲಾಗಿತ್ತು. ಹಲವಾರು ತಿದ್ದುಪಡಿಗಳನ್ನು ಸೂಚಿಸಲಾಗಿತ್ತು. ಮಸೂದೆಯ ನಾಲ್ಕು ವಿಧಿಗಳಿಗೆ ಒಪ್ಪಿಗೆ ನೀಡಲೇ ನಾಲ್ಕು ತಿಂಗಳು ಹಿಡಿದಿತ್ತು. ಕೊನೆಗೆ, ಅಧಿವೇಶನ ಮುಕ್ತಾಯಗೊಂಡಿತು, ಮಸೂದೆ ಬಗ್ಗೆ ಚರ್ಚೆಯಾಯಿತಷ್ಟೆ, ಮಸೂದೆ ರದ್ದಾಯಿತು.

ಇದರಿಂದ ತುಂಬ ನೊಂದುಕೊಂಡ ವ್ಯಕ್ತಿಯೆಂದರೆ ಡಾ. ಅಂಬೇಡ್ಕರ್. ಟೀಕೆ, ನಿಂದೆಗಳೆಲ್ಲವನ್ನೂ ದೃಢಚಿತ್ತದಿಂದ ಎದುರಿಸಿದ ಅಂಬೇಡ್ಕರ್ ತಮ್ಮ ಕೀರ್ತಿ ಪ್ರತಿಷ್ಠೆಗಳನ್ನೆ ಇದರಲ್ಲಿ ಪಣಕ್ಕೊಡ್ಡಿದ್ದರು. ಅಂತಿಮವಾಗಿ, ನೆಹರೂ ವಿರೋಧಕ್ಕೆ ಮಣಿದದ್ದು ಅವರಿಗೆ ತೀವ್ರ ನೋವುಂಟುಮಾಡಿತ್ತು. 1951ರ ಅಕ್ಟೋಬರ್‌ನಲ್ಲಿ ಅವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆಯಿತ್ತರು. ಸದನದಲ್ಲೇ ತಮ್ಮ ರಾಜೀನಾಮೆ ಭಾಷಣದ ಪ್ರತಿಯನ್ನು ಮೊದಲೇ ತಮಗೆ ಕಳುಹಿಸಿಕೊಡುವಂತೆ ಸಭೆಯ ಉಪಾಧ್ಯಕ್ಷರು ಆದೇಶಿಸಿದಾಗ ಮುನಿಸಿನಿಂದ ಸಭಾತ್ಯಾಗ ಮಾಡಿದ ಅವರು ಪತ್ರಿಕಾಗೋಷ್ಠಿಯಲ್ಲಿ ರಾಜೀನಾಮೆ ಪ್ರಕಟಿಸಿದರು.

ಅಂಬೇಡ್ಕರ್ ತಮ್ಮ ರಾಜೀನಾಮೆಗೆ ಹಲವಾರು ಕಾರಣಗಳನ್ನು ನೀಡಿದ್ದರು. ಅವರ ಆರೋಗ್ಯವೂ ಕೆಟ್ಟಿತ್ತು. ಇನ್ನೊಂದು ಕಾರಣವೆಂದರೆ, ಪ್ರಧಾನಮಂತ್ರಿಯವರು ಅವರಲ್ಲಿ ಪೂರ್ಣ ನಂಬಿಕೆಯಿರಿಸಿರಲಿಲ್ಲ. ಅಂಬೇಡ್ಕರ್ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಗಳಿಸಿದ್ದರೂ ಯೋಜನೆ ಮತ್ತು ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಅವರನ್ನು ಸೇರಿಸಿಕೊಂಡಿರಲಿಲ್ಲ. ಮೂರನೆಯ ಕಾರಣವೆಂದರೆ, ಸರ್ಕಾರದ ವಿದೇಶಾಂಗ ನೀತಿಯ ಬಗ್ಗೆ ವಿಶೇಷವಾಗಿ ಕಾಶ್ಮೀರದ ಬಗ್ಗೆ ತಮ್ಮದೇ ಆದ ಅಭಿಪ್ರಾಯ, ಕರಾರುಗಳನ್ನು ಹೊಂದಿದ್ದರು. ನಾಲ್ಕನೆಯದು, ಸಂಗಾತಿಗಳಾದ ಪರಿಶಿಷ್ಟ ಜಾತಿಯವರ ಸ್ಥಿತಿಗತಿ ಹೀನಾಯವಾಗೇ ಮುಂದುವರಿದಿತ್ತು. ರಾಜಕೀಯ ಸ್ವಾತಂತ್ರ್ಯ ಬಂದ ನಂತರವೂ, ಹಕ್ಕುಗಳಿಗೆ ಸಂವಿಧಾನಾತ್ಮಕ ರಕ್ಷಣೆ ಇದ್ದಾಗ್ಯೂ ಪರಿಶಿಷ್ಟ ಜಾತಿಯವರಿಗೆ ಹಳೆಯ ಕಿರುಕುಳ, ದಬ್ಬಾಳಿಕೆ, ಪಕ್ಷಪಾತ, ಅನ್ಯಾಯಗಳು ತಪ್ಪಿರಲಿಲ್ಲ.

ಅಂಬೇಡ್ಕರ್ ಅವರು ಕೊನೆಯಲ್ಲಿ ತಮ್ಮನ್ನು ರಾಜೀನಾಮೆಗೆ ಪ್ರೇರೇಪಿಸಿದ ವಿಷಯ ತಿಳಿಸಿದ್ದರು. ಸಂಸತ್ತಿನ ಅಧಿವೇಶನ ಮುಗಿಯುವುದರೊಳಗೆ ಹಿಂದೂ ನ್ಯಾಯ ಸಂಹಿತೆ ಮಸೂದೆಗೆ ಅಂಗೀಕಾರ ಪಡೆಯುವ ಛಲ ತೊಟ್ಟಿದ್ದಾಗಿಯೂ ವಿಷಯದ ಗಹನತೆ ಮತ್ತು ತುರ್ತಿನ ಬಗ್ಗೆ ನೆಹರೂ ಅವರಿಗೆ ಮನವರಿಕೆ ಮಾಡಿಕೊಡಲು ತಾವು ಸಾಕಷ್ಟು ಶ್ರಮಿಸಿದ್ದಾಗಿಯೂ ತಿಳಿಸಿದ್ದರು. ಆದರೆ ನೆಹರೂ ಅವರಿಂದ ತಾವು ನಿರೀಕ್ಷಿಸಿದ್ದ ಬೆಂಬಲ ಸಿಗಲಿಲ್ಲ ಎಂದೂ ಅವರು ತಿಳಿಸಿದ್ದರು. ತಮ್ಮ ಪಕ್ಷದೊಳಗಿನಿಂದಲೇ ತೀವ್ರ ವಿರೋಧ ಎದುರಿಸಿದ ಪ್ರಧಾನಮಂತ್ರಿಯವರು ಈ ವಿರೋಧವನ್ನು ಮೀರಿ ನಿಲ್ಲುವ ಶ್ರದ್ಧೆ ಆಸಕ್ತಿಗಳನ್ನಾಗಲಿ, ಸಂಕಲ್ಪ ಶಕ್ತಿಯನ್ನಾಗಲೀ ತೋರಲಿಲ್ಲ ಎಂದು ಅಂಬೇಡ್ಕರ್ ದೂಷಿಸಿದ್ದರು.

IV

1952ರ ಮೊದಲ ತಿಂಗಳುಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆದಾಗ, ಇತ್ತೀಚೆಗೆ ಸಂಭವಿಸಿದ ಹಿಂದೂ ನ್ಯಾಯ ಸಂಹಿತೆ ಮಸೂದೆಯ ಮೇಲಿನ ಚರ್ಚೆಯ ನೆರಳು ಚಾಚದೇ ಇರಲಿಲ್ಲ. ಕಾಂಗ್ರೆಸ್ ತಮ್ಮನ್ನು ವಂಚಿಸಿತೆಂದು ಭಾವಿಸಿದ ಅಂಬೇಡ್ಕರ್ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್‌ನ ಹೊಸ ಪಕ್ಷ ಕಟ್ಟಿದರು. ಅಲಹಾಬಾದ್ ಕ್ಷೇತ್ರದಲ್ಲಿ ಹಿಂದೂ ಸಂಹಿತೆ ಮಸೂದೆ ವಿರೋಧಿ ಸಮಿತಿಯ ನಾಯಕನೊಬ್ಬ ಪ್ರಧಾನಮಂತ್ರಿ ವಿರುದ್ಧ ಸ್ಪರ್ಧಿಸಿದ್ದ.

ಈತನ ಹೆಸರು ಪ್ರಭುದತ್ತ ಬ್ರಹ್ಮಚಾರಿ. ಈತ ಕಾವಿತೊಟ್ಟ ಬೈರಾಗಿಯಾಗಿದ್ದ. ಹೆಸರಿಗೆ ತಕ್ಕಂತೆ ಬ್ರಹ್ಮಚಾರಿಯೇ ಆಗಿದ್ದ. ಜನಸಂಘ, ಹಿಂದೂ ಮಹಾಸಭಾ ಮತ್ತು ರಾಮರಾಜ್ಯ ಪರಿಷತ್ ಇವನನ್ನು ಬೆಂಬಲಿಸಿದ್ದವು. ಹಿಂದೂ ಸಂಪ್ರದಾಯವನ್ನು ಬದಲಾಯಿಸಬೇಡಿ ಎಂಬುದು ಈತನ ಏಕಾಂಶ ಚುನಾವಣಾ ಪ್ರಚಾರವಾಗಿತ್ತು. ಪ್ರಧಾನಮಂತ್ರಿಯವರು ಹಿಂದೂ ಸಂಪ್ರದಾಯದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಆರೋಪಿಸುವ ಕರಪತ್ರಗಳನ್ನು

ಮುದ್ರಿಸಿ ಹಂಚಿದ್ದ. ಅಲ್ಲದೆ, ಕರಪತ್ರದಲ್ಲಿ, ಈ ಬಗ್ಗೆ ಬಹಿರಂಗ ಚರ್ಚೆಗೆ ಬರುವಂತೆ ಪ್ರಧಾನಿಗೆ ಸವಾಲು ಹಾಕಿದ್ದ.

ನೆಹರೂ ವಿವೇಕಯುತವಾಗಿ ಇದನ್ನು ತಿರಸ್ಕರಿಸಿದ್ದರು. ಅಲಹಾಬಾದ್‌ನಲ್ಲಿ ಭಾರಿ ಬಹುಮತದಿಂದ ಗದ್ದರು. ಕಾಂಗ್ರೆಸ್ ಸಹ ಬಹುಮತದ ನಿರಾಯಾಸ ವಿಜಯಗಳಿಸಿತು. ಇದು ಕೋಮುವಾದದ ವಿರುದ್ಧ ತಾವು ನಡೆಸಿದ ಪ್ರಚಾರಕ್ಕೆ ದೊರೆತ ವಿಜಯವೆಂದು ನೆಹರೂ ಭಾವಿಸಿದರು. ಹೊಸ ಲೋಕಸಭೆ ರಚನೆಯಾಗಿ ಅಧಿವೇಶನ ಶುರುವಾದ ಕೂಡಲೇ ಹಿಂದೂ ನ್ಯಾಯ ಸಂಹಿತೆ ಮಸೂದೆಯನ್ನು ಪುನರುಜ್ಜೀವನಗೊಳಿಸಿದರು.

ಈ ಮೊದಲು ವ್ಯಕ್ತವಾಗಿದ್ದ ಪ್ರತಿಭಟನೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಮಸೂದೆ ಸಿದ್ಧಪಡಿಸಲಾಗಿತ್ತು. ಹಳೆಯ ಮಸೂದೆಯನ್ನು ಹಲವಾರು ಭಾಗಗಳಾಗಿ ವಿಂಗಡಿಸಲಾಗಿತ್ತು. ಹಿಂದೂ ವಿವಾಹ ಮತ್ತು ವಿಚ್ಛೇದನ, ಹಿಂದೂ ಅಪ್ರಾಪ್ತವಯಸ್ಕತೆ ಮತ್ತು ಪಾಲಕತನ, ಹಿಂದೂ ಉತ್ತರಾಧಿಕಾರ, ಹಿಂದೂ ದತ್ತು ಸ್ವೀಕಾರ ಮತ್ತು ಜೀವನಾಂಶ–ಹೀಗೆ ಪ್ರತ್ಯೇಕ-ಪ್ರತ್ಯೇಕ ಮಸೂದೆಗಳನ್ನು ಮಂಡಿಸಲಾಯಿತು. ಈ ಮಸೂದೆಗಳು ಹಿಂದಿನ ಮಸೂದೆಯಲ್ಲಿದ್ದ ಎಲ್ಲ ವಿಚಾರಗಳನ್ನು ಹೊಂದಿದ್ದವು. ಮದುವೆ, ದತ್ತು ಸ್ವೀಕಾರ, ಇವುಗಳಲ್ಲಿ ಜಾತಿಯ ಅಂಶವನ್ನು ಅಪ್ರಸ್ತುತಗೊಳಿಸುವುದು, ಬಹುಪತ್ನಿತ್ವ ರದ್ದು ಗೊಳಿಸುವುದು, ನಿರ್ದಿಷ್ಟ ಕಾರಣಗಳ ಮೇಲೆ ವಿವಾಹ ವಿಚ್ಛೇದನಕ್ಕೆ ಅವಕಾಶ ಮಾಡಿಕೊಡುವುದು ಹಾಗೂ ಗಂಡ ಮತ್ತು ತಂದೆಯ ಆಸ್ತಿಯಲ್ಲಿ ಮಹಿಳೆಗೆ ಪಾಲು ಕೊಡಿಸುವುದು-ಇವು ಹೊಸ ಮಸೂದೆಗಳ ಮುಖ್ಯ ಆಶಯಗಳಾಗಿದ್ದವು.

ಪ್ರಧಾನಮಂತ್ರಿಗಳು ಸುಧಾರಣಾಪರ ವಾದದಲ್ಲಿ ಮುಂಚೂಣಿಯಲ್ಲಿದ್ದರು. ನಿಜವಾದ ಅಭ್ಯುದಯವೆಂದರೆ ರಾಜಕೀಯ ಅಥವಾ ಆರ್ಥಿಕ ಅಭ್ಯುದಯ ಮಾತ್ರವಲ್ಲ. ಸಾಮಾಜಿಕ ಪ್ರಗತಿಯೇ ನಿಜವಾದ ಪ್ರಗತಿ ಎಂದು ಸಂಸತ್ತಿನಲ್ಲಿ ತಿಳಿಸಿದರು. "ಬ್ರಿಟಿಷರು ಕಡು ಸಂಪ್ರದಾಯವಾದಿಗಳೊಂದಿಗೆ ಮೈತ್ರಿ ಸಾಧಿಸಿದ್ದರು. ಸಂಪ್ರದಾಯ ಮತ್ತು ವಸಾಹತುಶಾಹಿಯ ಸಂಯೋಗದ ಮುಖ್ಯ ಉದ್ದೇಶ ನಮ್ಮ ಶಾಸನಗಳು ಮತ್ತು ಸಂಪ್ರದಾಯಗಳ ಮುಖೇನ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಸುವುದೇ ಆಗಿತ್ತು. ಪುರುಷರಿಗೆ ಬಹುಪತ್ನಿತ್ವಕ್ಕೆ ಅವಕಾಶ ಮಾಡಿಕೊಡಲಾಯಿತು. ಅದೇ ಮಹಿಳೆ ವಿಚ್ಛೇದನ ಕೇಳಿದರೂ ಪುರುಷರು ಅದಕ್ಕೆ ತಕರಾರು ಎತ್ತುತ್ತಿದ್ದರು. ಏಕೆಂದರೆ ಸಮಾಜದಲ್ಲಿ ಪುರುಷ ಪ್ರಬಲನಾಗಿದ್ದ. ಆದರೆ ಸದಾಕಾಲವೂ ಅವರು ಪ್ರಬಲ ಸ್ಥಾನಮಾನಗಳಿಂದ ಮುಂದುವರಿಯುವರೆಂಬ ನಂಬಿಕೆ ನನಗಿಲ್ಲ" ಎಂದು ನೆಹರೂ ಭಾಷಣ ಮಾಡಿದ್ದರು.

ಹಿಂದೂ ಶಾಸನಗಳು ಮತ್ತು ಸಂಪ್ರದಾಯಗಳು ಮೋಸದ, ಅನ್ಯಾಯದ ಕ್ರಮಗಳಾಗಿದ್ದವು. ಮಹಿಳೆಯರು ಪುರಾಣದ ದೇವತೆಗಳಂತೆ ಪೂಜ್ಯರೂ, ಪವಿತ್ರರೂ ಆಗಿರಬೇಕೆಂದು– ನಿರೀಕ್ಷಿಸಲಾಗುತ್ತದೆ ಎಂದು ಹೇಳಿದ ತಾವು, ಪುರುಷರಲ್ಲಿ ಶ್ರೀರಾಮನನ್ನಾಗಲೀ, ಸತ್ಯವಾನನನ್ನಾಗಲಿ ಕಂಡಿಲ್ಲವೆಂದು ವ್ಯಂಗ್ಯದಿಂದ ತಿವಿದರು. ಪುರುಷರು ಶ್ರೀರಾಮ

ಚಂದ್ರನಂತೆ, ಸತ್ಯವಾನನಂತಿರಬೇಕೆಂದು ಆಗ್ರಹಪಡಿಸಿದ ಅವರು "ಸ್ತ್ರೀಯರು ಮಾತ್ರ ಸೀತೆ-ಸಾವಿತ್ರಿಯಂತಿರಬೇಕು. ಆದರೆ ಪುರುಷರು ಮನಸೋ ಇಚ್ಛೆ ವರ್ತಿಸಬಹುದಾಗಿದೆ" ಎಂದು ಛೇಡಿಸಿದರು.

ಈ ಸುಧಾರಣೆಗಳ ಮಹತ್ವವನ್ನು ತಮ್ಮ ಸಹೋದ್ಯೋಗಿಗಳಿಗೆ ಮನವರಿಕೆ ಮಾಡಿಕೊಡಲು ನೆಹರೂ ಬಹಳಷ್ಟು ಶ್ರಮಿಸಿದರು. ಸಂಪ್ರದಾಯದತ್ತ ವಾಲಿದ್ದ ಬ್ರಾಹ್ಮಣ ಸಚಿವರೊಬ್ಬರಿಗೆ ಪತ್ರ ಬರೆದು, "ಭಾರತದಲ್ಲಿ ಜಾರಿಯಲ್ಲಿರುವ ಅಂಗೀಕೃತ ಸಾಮಾಜಿಕ ಸಂಹಿತೆಯಲ್ಲಿ ನೈತಿಕ ಭ್ರಷ್ಟತೆಗೆ ಕೊರತೆ ಇಲ್ಲ. ತೀವ್ರ ಅಸಮಾಧಾನ, ಅಸಂತೋಷಗಳು ತಾಂಡವವಾಡುತ್ತಿವೆ" ಎಂದು ತಿಳಿಸಿದ್ದರು. "ಪುರುಷನಿಗೊಂದು, ಸ್ತ್ರೀಗೊಂದು ಎಂದು ಎರಡು ನೀತಿ ಸಂಹಿತೆಗಳಿವೆ. ಯಾವಾಗಲೂ ತೀವ್ರ ಹೊಡೆತ ಬೀಳುವುದು ಮಹಿಳೆಗೇ" ಎನ್ನುವುದನ್ನು ನೆಹರು ಮನಗಂಡಿದ್ದರು. ಲೋಕಸಭೆ ಯುವ ಸದಸ್ಯನೊಬ್ಬನಿಗೆ ಬರೆದ ಪತ್ರದಲ್ಲಿ, "ವಿವಾಹ ಮತ್ತು ವಿವಾಹ ವಿಚ್ಛೇದನೆ, ಹಾಗೂ ಉತ್ತರಾಧಿಕಾರಿ ಮಸೂದೆಗಳನ್ನು ಅಂಗೀಕರಿಸುವ ನಿಟ್ಟಿನಲ್ಲಿ ನಾವು ಗಮನ ಕೇಂದ್ರೀಕರಿಸಬೇಕು. ಇವು ನಿಜಕ್ಕೂ ಮುಖ್ಯವಾದವು. ದತ್ತು ಸ್ವೀಕಾರ ಮತ್ತು ಪಾಲಕತನ ಮಸೂದೆ ಇದರಷ್ಟು ಮಹತ್ವದ್ದಲ್ಲ" ಎಂದು ತಿಳಿಸಿದ್ದರು.

ಕ್ರಮೇಣ ಹಿಂದೂ ಸಂಹಿತೆ ಮಸೂದೆ ವಿರೋಧಿ ಸಮಿತಿಯ ರಭಸ ತಗ್ಗಿತ್ತು. 1952ರ ಚುನಾವಣೆಯ ನಂತರ ಸ್ವಾಮಿ ಕರಪತ್ರಜಿ ಮಹರಾಜ್ ಅಥವಾ ಪ್ರಭುದತ್ತ ಬ್ರಹ್ಮಚಾರಿಯ ಹೆಸರು ಪತ್ರಿಕೆಗಳಲ್ಲಾಗಲೀ, ಪೊಲೀಸ್ ದಾಖಲೆಗಳಲ್ಲಾಗಲೀ ಗೋಚರಿಸಲಿಲ್ಲ. ಬೀದಿಗಳಲ್ಲಿ ಪ್ರತಿಭಟನೆ, ಮೆರವಣಿಗೆಗಳಿರಲಿಲ್ಲ. ಆದರೆ ಸಂಸತ್ತಿನಲ್ಲಿ ಇನ್ನೂ ಸಾಕಷ್ಟು ಟೀಕೆ ಟಿಪ್ಪಣಿಗಳು ಕೇಳಿ ಬರುತ್ತಿದ್ದವು. ಹೊಸ ಮಸೂದೆಗಳು ಹಿಂದೂ ಸಂಸ್ಕೃತಿಯನ್ನು ನಾಶ ಮಾಡಲಿವೆಯೆಂದು ಸಂಪ್ರದಾಯಶರಣ ಸದಸ್ಯರು ಗೊಣಗಾಡಿದರು. ಅವರ ಪ್ರಕಾರ ಮನು ಮತ್ತು ಯಜ್ಞ್ಯಾವಲ್ಕರ ನೀತಿ ಸಂಹಿತೆಗಳು ಕ್ರಿ.ಪೂ. 950ರಷ್ಟೇ 1950ರಲ್ಲೂ ಪ್ರಸ್ತುತ, ಮತ್ತು ಅಪರಿವರ್ತನೀಯ.

ಆದರೆ ಸೂಕ್ಷ್ಮವಾಗಿ ಪರ್ಯಾಲೋಚಿಸಿದ, ಅಸಹ್ಯಕರವಲ್ಲದ ದನಿಗಳೂ ಇದ್ದವು. ಇವರನ್ನು ಹಿಂದೂ ಪ್ರತಿಗಾಮಿಗಳು ಎನ್ನುವುದಕ್ಕಿಂತ ಹಿಂದೂ ಸಂಪ್ರದಾಯಶೀಲರು ಎಂದು ಕರೆಯುವುದು ಉಚಿತವಾದೀತು. ಸುಪ್ರಸಿದ್ಧ ಇತಿಹಾಸಕಾರ ರಾಧಾ ಕುಮುದ ಮುಖರ್ಜಿ ಇಂಥವರಲ್ಲೊಬ್ಬರು. ಹೊಸ ಮಸೂದೆಗಳ ಬಗ್ಗೆ, ವಿಶೇಷವಾಗಿ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಅವರ ಅಭಿಪ್ರಾಯ ಹೀಗಿತ್ತು...

> "ಹಿಂದೂ ನಾಗರಿಕತೆಯ ಆಶಯಕ್ಕೆ ತದ್ವಿರುದ್ಧವಾಗಿದೆ...ಮಸೂದೆ ಪಾಶ್ಚಾತ್ಯ ಜೀವನದೃಷ್ಟಿಯಿಂದ ಸ್ಫೂರ್ತಿ ಪಡೆದಂತಿದೆ. ಪಾಶ್ಚಾತ್ಯರಲ್ಲಿ ವೈವಾಹಿಕ ಜೀವನದಲ್ಲಿ ಮಾತೃತ್ವ-ಪಿತೃತ್ವಗಳಿಗಿಂತ ಗಂಡು ಹೆಣ್ಣಿನ ಕಾಮ ಸಂಬಂಧಗಳಿಗೇ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ವಿವಾಹದ ಫಲಶ್ರುತಿ ಇರುವುದು ಮಾತೃತ್ವ, ಪಿತೃತ್ವದಲ್ಲಿ. ಮಾತೃತ್ವ-ಪಿತೃತ್ವಗಳು ಅಪರಿವರ್ತನೀಯವಾದದ್ದು, ಅನುಲ್ಲಂಘನೀಯವಾದದ್ದು

ಹಾಗೂ ಕಾಯಮಾದದ್ದು. ಮದುವೆ, ಕುಟುಂಬಗಳ ಪಾವಿತ್ರ್ಯ ಕುರಿತು ಜನರ ಮನೋಭಾವವನ್ನು ಬದಲಾಯಿಸಲು, ಸಮಾಜದ ಅಡಿಪಾಯವಾದ ಕೌಟುಂಬಿಕ ಸಂಬಂಧಗಳನ್ನು ಸಡಿಲಗೊಳಿಸಲು ಈ ಮಸೂದೆ ಪ್ರಯತ್ನಿಸುತ್ತಿರುವಂತಿದೆ. ಮಸೂದೆ, ಗಂಡ-ಹೆಂಡರಿಗೇ ಹೆಚ್ಚಿನ ಮಹತ್ವ ನೀಡುತ್ತದೆ. ಈ ಗಂಡ-ಹೆಂಡತಿಯರೇ ತಂದೆ-ತಾಯಿಯರಾಗಿ ಮಗುವಿನ ಸಂರಕ್ಷಕರಾಗುತ್ತಾರೆ. ಮನುಕುಲದ ಭವಿಷ್ಯವನ್ನು ಕಾಪಾಡುತ್ತಾರೆ ಎಂಬುದನ್ನು ಮಸೂದೆ ಲಕ್ಷಿಸುವುದಿಲ್ಲ."

–ಈ ಮಾತುಗಳ ಬಗ್ಗೆಯೂ ಆಕ್ಷೇಪಣೆ, ಸಂದೇಹಗಳು ವ್ಯಕ್ತವಾದವು. ಮಹಿಳಾ ಸದಸ್ಯೆಯೊಬ್ಬರು "ಸಾಮರಸ್ಯವಿಲ್ಲದ ಕುಟುಂಬಕ್ಕಿಂತ ಒಡೆದ ಮನೆ ಪರಿಣಾಮ ಎಷ್ಟೋ ಮೇಲೆಂದು" ಅಭಿಪ್ರಾಯಪಟ್ಟರು. "ಮಕ್ಕಳು ಸೂಕ್ಷ್ಮ ಸ್ವಭಾವದವರು, ತೀವ್ರ ಆಸಕ್ತರು. ತಂದೆ ತಾಯಿಯರ ತಾತ್ಸಾರ, ಜಗಳಗಳು ಅವರ ಮನಸ್ಸಿನ ಮೇಲೆ ಪರಿಣಾಮ ಬೀರದೇ ಇರುವುದಿಲ್ಲ" ಎಂದು ಈಕೆ ತಿಳಿಸಿದರೆ, ಮತ್ತೊಬ್ಬ ಸದಸ್ಯೆ, "ಮನೆಯಲ್ಲಿ ಶಾಂತಿ ಇಲ್ಲ ಎಂದಾದಾಗ, ಗಂಡ-ಹೆಂಡತಿ ಒಟ್ಟೊಟ್ಟಾಗಿ ಬದುಕಬೇಕೆನ್ನುವುದರಲ್ಲಿ ಅರ್ಥವಿಲ್ಲ. ಪ್ರತ್ಯೇಕ ಹೊಂದುವುದು ಗೌರವಾನ್ವಿತ ಕ್ರಮವಾಗುತ್ತದೆ" ಎಂದರು.

ಲೋಕಸಭೆಯಲ್ಲಿ ಹಿಂದೂ ಮಹಾಸಭಾದ ಬುದ್ಧಿವಂತ ವಕೀಲ ಸದಸ್ಯರಾದ ಎನ್.ಸಿ. ಚಟರ್ಜಿ ಸುಧಾರಣೆ ವಿರೋಧದ ನಾಯಕರಾಗಿದ್ದರು. ಇದೊಂದು ಜಾತ್ಯತೀತ ರಾಷ್ಟ್ರವಾದಲ್ಲಿ, ಹಿಂದೂ ವಿವಾಹ ಅಥವಾ ವಿವಾಹ ವಿಚ್ಛೇದನದ ಶಾಸನದ ಅಗತ್ಯವೇನಿದೆ? ಎಲ್ಲರಿಗೂ ಅನ್ವಯವಾಗುವಂಥ ಶಾಸನವೊಂದನ್ನು ಏಕೆ ಮಾಡಬಾರದು? ಎಂಬುದು ಚಟರ್ಜಿಯವರ ವಾದವಾಗಿತ್ತು. ಸರ್ಕಾರಕ್ಕೆ ಏಕಪತ್ನಿತ್ವದ ಗುಣವಿಶೇಷಗಳಲ್ಲಿ ಅಷ್ಟೊಂದು ಪ್ರಾಮಾಣಿಕ ಕಾಳಜಿ ಇರುವುದು ನಿಜವಾದಲ್ಲಿ, ಏಕಪತ್ನಿತ್ವ ಒಂದು ವರ, ಬಹುಪತ್ನಿತ್ವ ಒಂದು ಶಾಪ ಎನ್ನುವುದು ಅದರ ನಿಲುವಾದಲ್ಲಿ, ನಮ್ಮ ಮುಸ್ಲಿಂ ಸೋದರಿಯರನ್ನು ಈ ಶಾಪದಿಂದ ಮುಕ್ತಿಗೊಳಿಸಬಾರದೇಕೆ? ಆದರೆ ನಿಮಗೆ ಅದಷ್ಟು ಧೈರ್ಯವಿಲ್ಲ, ಎಂದು ನುಡಿದ ಚಟರ್ಜಿಯವರು "ತರ್ಕಬದ್ಧವಾಗಿ, ಸಮಂಜಸವಾಗಿರುವ ಧೈರ್ಯ, ತಾಕತ್ತು ನಿಮ್ಮಲ್ಲಿಲ್ಲ" ಎಂದು ಕಾನೂನು ಸಚಿವರನ್ನು ಛೇಡಿಸಿದರು.

ಅದೇ ರೀತಿ ಸಮಾಜವಾದಿ ಜೆ.ಬಿ. ಕೃಪಲಾನಿಯವರು ಹಿಂದೂಗಳಿಗೆ ಮಾತ್ರ ಏಕಪತ್ನಿತ್ವ ವಿಧಿಸುವುದು ಸರ್ಕಾರದ ಕಪಟತನವನ್ನು ತೋರಿಸುತ್ತದೆ ಎಂದರು. "ಮುಸ್ಲಿಂ ಸಮುದಾಯ ಏಕಪತ್ನಿತ್ವ ಒಪ್ಪಿಕೊಳ್ಳಲು ಸಿದ್ಧವಿದೆ, ಆದರೆ ಅದನ್ನು ವಿಧಿಸುವಷ್ಟು ಧೈರ್ಯ, ಎದೆಗಾರಿಕೆ ನಿಮ್ಮಲ್ಲಿಲ್ಲ" ಎಂದು ಅವರು ಚುಚ್ಚಿದರು. ಆದರೆ ಅವರ ಪತ್ನಿ, ಕಾಂಗ್ರೆಸ್ ಎಂಪಿ ಸುಚೇತಾ ಕೃಪಲಾನಿ "ಮುಸ್ಲಿಮರು ಅದಕ್ಕೆ ಇನ್ನೂ ಸಿದ್ಧರಾಗಿಲ್ಲ" ಎಂದರು. ಸುಚೇತಾ ಕೃಪಲಾನಿಯವರ ವಾದ ಹೀಗಿತ್ತು:

"ನಮ್ಮ ರಾಷ್ಟ್ರದ ಇತ್ತೀಚಿನ ಇತಿಹಾಸದ ಅರಿವು ನಮಗಿದೆ. ನಮ್ಮ ಅಲ್ಪಸಂಖ್ಯಾತರ ಸಮಸ್ಯೆಯಿಂದಾಗಿ ನಾವು ಅನುಭವಿಸಿದ ಕಷ್ಟನಷ್ಟಗಳೇನೆಂಬುದು ನಮಗೆ ಗೊತ್ತಿದೆ.

ಆದ್ದರಿಂದಲೇ ಕಾಂಗ್ರೆಸ್ ಸರ್ಕಾರ ಏಕರೂಪ ನಾಗರಿಕ ಸಂಹಿತೆ ತರಲು ತಯಾರಿಲ್ಲ. ಆದರೆ ಇಂಥ ಒಂದು ಏಕರೂಪ ಸಂಹಿತೆ ಹೊಂದುವ ಕಾಲ ಖಂಡಿತವಾಗಿ ಬರುತ್ತದೆ ಎನ್ನುವ ಆಶಾಭಾವನೆ ನನ್ನಲ್ಲಿದೆ."

1952ರ ಸಾರ್ವತ್ರಿಕ ಚುನಾವಣೆ ದಿಟ್ಟತನದಿಂದ, ಅರ್ಥಪೂರ್ಣವಾಗಿ ಮಾತನಾಡುವಂಥ ಕಾಂಗ್ರೆಸ್ ಮಹಿಳಾ ಎಂಪಿಗಳ ಒಂದು ಪಟಾಲಮ್ಮನ್ನೇ ಲೋಕಸಭೆಗೆ ಕಳುಹಿಸಿತ್ತು. ಮಸೂದೆಗೆ ವಿರೋಧ ಪ್ರತಿಗಾಮಿಗಳ ಸಂಚು ಎಂದು ಈ ಮಹಿಳಾಮಣಿಗಳು ಭಾವಿಸಿದ್ದರು. ಹಿಂದಿಯಲ್ಲಿ ಮಾತನಾಡಿದ ಸುಭದ್ರಾ ಜೋಶಿ, ಗೊತ್ತು ಮಾಡಿದ ವಿವಾಹಗಳ ವಿರುದ್ಧ ವಾಗ್ದಾಳಿಯನ್ನೇ ನಡೆಸಿ ಇಂಥ ವಿವಾಹ ಮಹಿಳೆಯ ಬದುಕನ್ನು ಹೀನಾಯಗೊಳಿಸಿದೆ ಎಂದರು. ಪುರುಷ ರಾಜಕಾರಣಿಗಳು ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳ ಬಗ್ಗೆ ಗತ್ತು ಗೈರತ್ತುಗಳಿಂದ ಮಾತನಾಡುತ್ತಾರೆ. ಆದರೆ ಸಾಮಾಜಿಕ ಜೀವನ, ಸಂಪ್ರದಾಯಗಳಲ್ಲಿ, ಪದ್ಧತಿಗಳಲ್ಲಿ ಅವರು ಒಂದೇ ಒಂದು ಸುಧಾರಣೆಯನ್ನೂ ಬಯಸುವುದಿಲ್ಲ. ಹಿಂದೂ ಸಮಾಜದಲ್ಲಿ ಪುರುಷ ಸ್ವತಂತ್ರ, ಸಾರ್ವಭೌಮ, ಆದರೆ ಮಹಿಳೆ ಬಂದಿ, ಪುರುಷನ ಬಂದಿ. ಇವತ್ತಿಗೂ ಗಂಡನಾದವನು ತನ್ನ ಹೆಂಡತಿಯನ್ನು ಯಾವಾಗ ಬೇಕಾದರೂ ಬಿಡಬಹುದಾದ ತನ್ನ ಕಾಲಿನ ಎಕ್ಕಡದಂತೆ ಕಾಣುತ್ತಾನೆ" ಎಂದು ಶಿವ್ರಜವತಿ ನೆಹರೂ ನುಡಿದರು.

ಪರಿಶಿಷ್ಟ ಜಾತಿಯ ಅನೇಕ ಸದಸ್ಯರು ಸುಧಾರಣೆಯ ಪರವಾಗಿದ್ದರು. ಹಿಂದೂ ಪದ್ಧತಿಗಳು ಎಷ್ಟೊಂದು ಪಾಪಪೂರಿತ ಎಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ಪರಿಶಿಷ್ಟ ಜಾತಿಯ ಒಬ್ಬರು–

"ಸಂಪ್ರದಾಯವಾದಿಗಳು ಹಠಹಿಡಿದು ತಮ್ಮ ಮನಸ್ಸಿನಂತೆಯೆ ನಡೆಯುವುದಾದಲ್ಲಿ ನಾವು ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಕಾಂಗ್ರೆಸ್ ಸರ್ಕಾರ ಮಾಡಿರುವ ಎಲ್ಲ ತಪ್ಪುಗಳನ್ನೂ, ಬಾಧೆಗಳನ್ನೂ ಕಿತ್ತೊಗೆಯುತ್ತೇವೆ, ಹೊಸ ಮೂಲಭೂತ ಹಕ್ಕುಗಳನ್ನು ಸೇರಿಸುತ್ತೇವೆ. ಮೊದಲನೆಯದಾಗಿ ಎಲ್ಲ ಹಿಂದೂ ಮಹಿಳೆಯರಿಗೂ ತಮ್ಮ ಪತಿಯರ ಅಂತ್ಯಕ್ರಿಯೆ ಚಿತೆಯ ಮೇಲೆ ಸುಟ್ಟುಕೊಳ್ಳುವ ಮೂಲಭೂತ ಹಕ್ಕನ್ನು ನೀಡಲಾಗುವುದು. ಗೋವನ್ನು ಪವಿತ್ರವೆಂದು ಘೋಷಿಸುವುದು ಎರಡನೆಯ ಮೂಲಭೂತ ಹಕ್ಕಾಗಿರುತ್ತದೆ...ಎಲ್ಲ ಭಾರತೀಯರೂ ಮುಸ್ಲಿಮರು, ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲರೂ ಕಡ್ಡಾಯವಾಗಿ ಗೋವಿನ ಪೂಜೆ ಮಾಡಬೇಕಾಗುತ್ತದೆ."

–ಎಂದು ಆವೇಶಭರಿತವಾಗಿ ಮತನಾಡಿದ್ದರು.

ಹೊಸ ಕಾನೂನು ಸಾಕಷ್ಟು ತೀವ್ರಗಾಮಿಯಾಗಿಲ್ಲ ಎನ್ನುವುದು ಕಮ್ಯುನಿಸ್ಟರ ತಕರಾರಾಗಿತ್ತು. ಲೋಕಸಭೆಯಲ್ಲಿ ಬಿ.ಸಿ. ದಾಸ್ "ಹಿಂಜರಿಕೆ ಮತ್ತು ಅಂಜುಬುರುಕುತನಗಳನ್ನು ಮೈಗೂಡಿಸಿರುವ ಇವು ಸಮಾಜ ಸುಧಾರಣೆಯ ನಿಟ್ಟಿನಲ್ಲಿ ಒಂದು ಸೌಮ್ಯವಾದ, ಸಪ್ಪೆಯಾದ ಪ್ರಯತ್ನಗಳಷ್ಟೆ" ಎಂದು ನುಡಿದು ಈ ಸೌಮ್ಯ ಪ್ರಯತ್ನವನ್ನೂ ವಿರೋಧಿಸುವವರು

ಹದಿನೇಳನೇ ಶತಮಾನದ ಮನೋಭಾವದವರೆಂದು ಟೀಕಿಸಿದರು. ರಾಜ್ಯಸಭೆಯಲ್ಲಿ ಭೂಪೇಶ ಗುಪ್ತರು "ಇಷ್ಟು ತಡವಾಗಿ ಇಂಥದೊಂದು ಮಸೂದೆ ತರುತ್ತಿರುವುದನ್ನು ನೋಡಿದರೆ, ಕಾಂಗ್ರೆಸ್ ಪಕ್ಷ ಅನೇಕ ಸಂದರ್ಭಗಳಲ್ಲಿ ರಿಪ್‌ವ್ಯಾನ್ ವಿಂಕಲ್‌ನಂತೆಯೇ ಕೆಲಸ ಮಾಡುತ್ತಿರುವುದು ವೇದ್ಯವಾಗುತ್ತದೆ" ಎಂದು ಅಭಿಪ್ರಾಯಪಟ್ಟರು.

ಆಶ್ಚರ್ಯರಾಗಿ, ಸರ್ಕಾರಕ್ಕೆ ತುಂಬು ಮನಸ್ಸಿನ ಕೃತಜ್ಞತೆಯನ್ನು ಸಲ್ಲಿಸಿದ ಮುಸ್ಲಿಂ ಸದಸ್ಯರ ಅಭಿಪ್ರಾಯಗಳನ್ನೂ ಲೆಕ್ಕಕ್ಕೆ ಹಿಡಿಯಬೇಕಾಗುತ್ತದೆ. ಹಿಂದೂಸ್ತಾನಿಯಲ್ಲಿ ಮಾತನಾಡಿದ ಒಬ್ಬರು "ತಮ್ಮ ಶಾಸನಗಳಿಗೆ ಕೈಹಾಕದೇ ಇರುವುದಕ್ಕೆ, ಅವುಗಳಲ್ಲಿ ಲೇಶಮಾತ್ರ ಬದಲಾವಣೆಯನ್ನೂ ಮಾಡದೇ ಇರುವುದಕ್ಕಾಗಿ" ಸರ್ಕಾರವನ್ನು ಕೊಂಡಾಡಿದರು. ಮತ್ತೊಬ್ಬರು, "ಮುಸ್ಲಿಂ ಸಮುದಾಯದ ಭಾವನೆಗಳಿಗೆ ಮಹತ್ವ ನೀಡಿದ್ದಕ್ಕೆ, ವಿವಾಹ ಮಸೂದೆಯಿಂದ ಅವರನ್ನು ಹೊರಗಿರಿಸಿದ್ದಕ್ಕೆ" ವಂದನೆಗಳನ್ನು ಅರ್ಪಿಸಿದರು. ಈ ಸದಸ್ಯರ ಅಂಬೋಣದಂತೆ "ಮುಸ್ಲಿಮರಿಗೆ ಅವರದೇ ಆದ ನೀತಿನಿಯಮಗಳಿವೆ. ಅವೆಲ್ಲ ಧರ್ಮಾಧಾರಿತವಾದದ್ದು. ಮುಸ್ಲಿಮರು ತಮ್ಮ ಜೀವಿತದಲ್ಲಿ ಧರ್ಮವನ್ನು ಅತ್ಯಮೂಲ್ಯವೂ ಅತಿ ಪವಿತ್ರವೂ ಆದುದೆಂದು ಪರಿಗಣಿಸಿದ್ದಾರೆ."

V

ಸುಮಾರು ಪತ್ತು ವರ್ಷಗಳಿಗೂ ಹೆಚ್ಚಿನ ಮಲ್ಲಯುದ್ಧದ ನಂತರ ಕೊನೆಗೂ ಅಂಬೇಡ್ಕರ್ ಅವರ ಹಿಂದೂ ನ್ಯಾಯ ಸಂಹಿತೆ ಮಸೂದೆ ಶಾಸನವಾಯಿತು. ಆದರೆ ಅವರು ಭಾವಿಸಿದಂತಲ್ಲ. ಅದೂ ಏಕೈಕ ಶಾಸನವಾಗಿ ಬರಲಿಲ್ಲ. ಹಲವಾರು ಕಂತುಗಳಲ್ಲಿ 1955ರ ಹಿಂದೂ ವಿವಾಹ ಶಾಸನ, ಹಿಂದೂ ಉತ್ತರಾಧಿಕಾರಿ, ಅಪ್ರಾಪ್ತವಯಸ್ಕರ ಪಾಲಕತ್ವ, ದತ್ತು ಸ್ವೀಕಾರ ಮತ್ತು ಜೀವನಾಂಶ (1956) ಹೀಗೆ ಹಲವು ಕಂತುಗಳಲ್ಲಿ, ಹಲವು ಶಾಸನಗಳಾಗಿ ಜಾರಿಗೆ ಬಂತು.

ಹೊಸ ಕಾನೂನು ಮಂತ್ರಿ ಎಚ್.ವಿ. ಪಾಟಸ್ಕರ್ ಈ ಮಸೂದೆಗಳನ್ನು ಮಂಡಿಸಿದರು. ಅವರಿಗೆ ತಮ್ಮ ಪೂರ್ವವರ್ತಿಯ ಉತ್ಕೃಷ್ಟತೆಯಾಗಲೀ ಪಾಂಡಿತ್ಯವಾಗಲೀ ಇರಲಿಲ್ಲ. ಚರ್ಚೆಕಾಲದಲ್ಲಿ ಒಮ್ಮೆ ಅವರು ಹಿಂದೂ ಸಂಸ್ಕಾರದನ್ವಯ ವಿವಾಹವಾದಲ್ಲಿ ವಿಚ್ಛೇದನಕ್ಕೆ ಅವಕಾಶವಿದೆಯೆಂದು ಹೇಳಿದ್ದರು. ಆಗ ಎನ್.ಸಿ. ಚಟರ್ಜಿಯವರು "ನಿಮ್ಮ ಹೇಳಿಕೆಗೆ ಆಧಾರವಿಲ್ಲ. ಯಾವುದೇ ವಿಶ್ವವಿದ್ಯಾನಿಲಯದ ಹಿಂದೂ ಕಾನೂನು ಪರೀಕ್ಷೆಗೆ ಕುಳಿತಲ್ಲಿ ನೀವು ಫೇಲಾಗುವುದು ಖಚಿತ. ನಿಮಗೆ ಸಿಗುವುದು ಸೊನ್ನೆಯೇ" ಎಂದು ಮೂದಲಿಸಿದ್ದರು.

ಇದು ನಿಜವಿರಬಹುದು. ಆದರೆ ಅಪ್ರಸ್ತುತ. ಭಿನ್ನಮತದ ಸದಸ್ಯರೊಬ್ಬರು, ಹೊಸ ಮಸೂದೆಗಳು 'ಹಿಂದೂ ಶಾಸ್ತ್ರ ಮತ್ತು ಸಂಪ್ರದಾಯಗಳ ಮೇಲಿನ ನೇರ ಆಕ್ರಮಣ'ವೆಂದು ವರ್ಣಿಸಿದರು. ಪತಿಯ ಆಯ್ಕೆ ಅಥವಾ ಆಸ್ತಿಯಲ್ಲಿ ಪಾಲುಗಳಿಗೆ ಸಂಬಂಧಿಸಿದ ಮಹಿಳೆಯರ

ಪಕ್ಕು 'ಹಿಂದೂ' ಅಲ್ಲ. ಆದರೆ ಪುರುಷರಿಗೆ ಈಗಾಗಲೇ ಇಂಥ ಪಕ್ಕು ಇರುವುದರಿಂದ ಸ್ತ್ರೀಯರು ಈಗ ಆ ಪಕ್ಕುಗಳನ್ನು ಹೊಂದುವುದು ಅಪ್ರಜಾಸತ್ತಾತ್ಮಕವಾಗುವುದಿಲ್ಲ. ಪಾಟಸ್ಕರ್ ಅವರು ಹೇಳಿದಂತೆ ಹೊಸ ಶಾಸನಗಳು, ಲಿಂಗಭೇದ ಮರೆತು ವ್ಯಕ್ತಿಯ ಘನತೆಯನ್ನು ಮಾನ್ಯ ಮಾಡುವ ಸಂವಿಧಾನಾತ್ಮಕ ಕ್ರಮಗಳಾಗಿವೆ. ಇನ್ನೊಬ್ಬ ಕಾಂಗ್ರೆಸ್ ಸದಸ್ಯರು ಹೊಸ ಶಾಸನಗಳನ್ನು ಅಲಂಕಾರಿಕವಾದ ಮಾತುಗಾರಿಕೆಯಲ್ಲೇ ಸ್ವಾಗತಿಸಿದರು:

> *"ಮಹಿಳೆಯರಿಗೆ ತಮ್ಮ ಪತಿಯನ್ನು ಆಯ್ಕೆ ಮಾಡಿಕೊಳ್ಳುವ, ವಿಚ್ಛೇದನ ಮಾಡುವ ಪಕ್ಕು ಇರಬೇಕು. ಏಕೆಂದರೆ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದೇವೆ. ನಮ್ಮ ರಾಷ್ಟ್ರವನ್ನು, ನಮ್ಮ ತಾಯ್ನಾಡನ್ನು ವಿಮುಕ್ತಗೊಳಿಸಿದ ನಂತರ ನಮ್ಮ ತಾಯಂದಿರು, ಅಕ್ಕ ತಂಗಿಯರು ಮತ್ತು ನಮ್ಮ ಮಡದಿಯರ ವಿಮೋಚನೆ ನಮ್ಮ ಜವಾಬ್ದಾರಿ. ಹೀಗೆ ಮಾಡುವುದರಿಂದ ನಮ್ಮ ಸ್ವಾತಂತ್ರ್ಯವನ್ನು ಪರಾಕಾಷ್ಠೆಗೆ, ಮಹೋನ್ನತ ಶೃಂಗಕ್ಕೆ ಏರಿಸಿದಂತಾಗುತ್ತದೆ."*

ಏನೇ ಇರಲಿ, ಕೊನೆಯದಾಗಿ ಹೇಳುವುದಾದರೆ ಹೊಸಶಾಸನಗಳು ಗಮನಾರ್ಹವಾದ ಕೊಡುಗೆಗಳೇ ಸರಿ. ಅರವತ್ತು ದಶಲಕ್ಷ ಹಿಂದೂಗಳು ಇದರ ಕಕ್ಷೆಗೊಳಪಟ್ಟಿದ್ದರು. ಬದಲಾವಣೆಗಳು ನೈತಿಕವಾಗಿ ಹಾಗೂ ಸಂಖ್ಯಾತ್ಮಕವಾಗಿ ಮಹತ್ವದ್ದಾಗಿವೆ. ಭಾರತದ ಕಾನೂನುಗಳಲ್ಲಿ ಪರಿಣತಿ ಹೊಂದಿರುವ ಅಮೆರಿಕದ ತಜ್ಞರೊಬ್ಬರು ಹೇಳಿರುವಂತೆ "ಹಿಂದೂ ಕಾನೂನುಗಳ ಮೂಲವಾದ ಶಾಸ್ತ್ರಗಳನ್ನು ಪದಚ್ಯುತಿಗೊಳಿಸುವ ಸಾರಾಸಗಟಾದ ಒಂದು ಪ್ರಚಂಡ ಬದಲಾವಣೆ." ಇನ್ನೊಬ್ಬ ಪ್ರಮುಖ ಬ್ರಿಟಿಷ್ ವಿದ್ವಾಂಸರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:

> *"ಇವುಗಳ ವ್ಯಾಪ್ತಿಯ ವಿಶೇಷ ಹರಹು ಹಾಗೂ ನವೀನ ಪರಿವರ್ತನೆಯ ದಿಟ್ಟತನಗಳ ದೃಷ್ಟಿಯಿಂದ ನೋಡಿದಲ್ಲಿ ಇಲ್ಲಿನ ಹಲವಾರು ಕ್ರಮಗಳನ್ನು ನೆಪೋಲಿಯನ್ ಸಂಹಿತೆಗೆ ಹೋಲಿಸಬಹುದು."*

ವಿವಾಹ ಮತ್ತು ಆಸ್ತಿಹಕ್ಕಿಗೆ ಸಂಬಂಧಿಸಿದ ತೀವ್ರ ಸುಧಾರಣೆಗಳು ಮುಖ್ಯವಾಗಿ ಇಬ್ಬರ ಪರಿಶ್ರಮದ ಫಲ. ಅವರು: ನೆಹರೂ ಮತ್ತು ಅಂಬೇಡ್ಕರ್. ವಿಷಾದದ ಸಂಗತಿಯೆಂದರೆ, ಹೋರಾಟದ ಮಹತ್ವದ ಘಟ್ಟದಲ್ಲಿ ಅಂಬೇಡ್ಕರ್ ಪ್ರೇಕ್ಷಕರಾಗಿ ಉಳಿಯಬೇಕಾಗಿ ಬಂದದ್ದು. 1952ರ ಲೋಕಸಭೆ ಚುನಾವಣೆಯಲ್ಲಿ ಸೋತ ಅಂಬೇಡ್ಕರ್ ನಂತರ ಮೇಲ್ಮನೆಗೆ ಆಯ್ಕೆ ಹೊಂದಿದ್ದರು. ಅಲ್ಲಿ, ಅವರು ಮೌನದಿಂದ 1954-56ರ ಅವಧಿಯಲ್ಲಿ ಈ ಮಸೂದೆಗಳ ಚರ್ಚೆ, ಅಂಗೀಕಾರಗಳನ್ನು ವೀಕ್ಷಿಸಿದರು. ಈ ವೇಳೆಗಾಗಲೇ ಮಧುಮೇಹ ಮೊದಲಾದ ಕಾಯಿಲೆಗಳಿಂದ ಪೀಡಿತರಾಗಿದ್ದ ಅವರು ಜರ್ಝರಿತರಾಗಿದ್ದರು. 1956ರ ಡಿಸೆಂಬರ್‌ನಲ್ಲಿ ಅಂಬೇಡ್ಕರ್ ನಿಧನರಾದರು. ಅವರ ಸ್ವಲ್ಪಕಾಲದ ಸಹೋದ್ಯೋಗಿಯಾಗಿದ್ದ ನೆಹರೂ ಸಂಸತ್ತಿನಲ್ಲಿ ಅಂಬೇಡ್ಕರ್ ಅವರ ಗುಣಗಾನ ಮಾಡಿದರು. "ಅಂಬೇಡ್ಕರ್ ಅವರು ಎಲ್ಲಕ್ಕಿಂತ ಮಿಗಿಲಾಗಿ, ಹಿಂದೂ ಸಮಾಜದಲ್ಲಿರುವ ಎಲ್ಲ ಬಗೆಯ

ದಬ್ಬಾಳಿಕೆಗಳ ವಿರುದ್ಧ ಬಂಡಾಯದ ಸಂಕೇತವಾಗಿದ್ದಾರೆ" ಎಂದು ನೆಹರೂ ಕಂಠೋಕ್ತವಾಗಿ ಘೋಷಿಸಿದರು.

> *"ಹಿಂದೂ ಶಾಸನಗಳ ಸುಧಾರಣೆಗಾಗಿ ಅವರು ತೋರಿದ ಆಸಕ್ತಿ, ಪಟ್ಟ ಪರಿಶ್ರಮಗಳಿಂದಾಗಿ ಅಂಬೇಡ್ಕರ್ ಸದಾಸ್ಮರಣೀಯರು. ಬಹುಮಟ್ಟಿಗೆ ಸುಧಾರಣೆಗಳು ಜಾರಿಗೆ ಬಂದುದನ್ನು ಅವರು ಕಂಡರು ಎಂಬುದು ನನಗೆ ಸಂತೋಷದ ಸಂಗತಿ. ಆದರೆ ಇವು ಅವರು ಬಯಸಿದ ರೀತಿ, ಒಂದು ಸ್ಮರಣೀಯ ಶೃಂಗದೋಪಾದಿ ಆಗಲಿಲ್ಲ, ಬಿಡಿಬಿಡಿಯಾಗಿ ಜಾರಿಗೆ ಬಂದವು."*

ಎಂದು ನೆಹರೂ ಹೇಳಿದರು.

1951ರಲ್ಲಿ ಅಂಬೇಡ್ಕರ್ ರಾಜೀನಾಮೆ ಪ್ರಕರಣ ಸೃಷ್ಟಿಸಿದ್ದ ಕಹಿಭಾವನೆಗಳ ಹಿನ್ನೆಲೆಯಲ್ಲಿ ಇದೊಂದು ಉದಾರವಾದ ಶ್ಲಾಘನೆಯೇ ಸರಿ. ನೆಹರೂ, ತಮ್ಮ ಪಕ್ಷದೊಳಗಿನ ಮತ್ತು ಹೊರಗಿನ ವಿರೋಧಗಳನ್ನು ಎದುರಿಸುವಷ್ಟು ಸಶಕ್ತರಲ್ಲ ಎಂದು ಆಗ ಅಂಬೇಡ್ಕರ್ ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ನೆಹರೂ ವಿಳಂಬಗತಿಯಲ್ಲಿ ಸಾಗುತ್ತಿದ್ದರು. ಆದರೆ ಹಿಂದೂ ಸಂಪ್ರದಾಯವಾದಿಗಳ ದೃಷ್ಟಿಯಲ್ಲಿ ನೆಹರೂ ಅತಿ ರಭಸಗತಿಯಲ್ಲಿ ನಡೆದಿದ್ದರು. 1949-50ರಲ್ಲಿ ಮೊದಲ ಬಾರಿ ಮಸೂದೆಯನ್ನು ಮಂಡಿಸಿದಾಗ ನೆಹರೂ ಅವರಿಗೆ ಕಾಂಗ್ರೆಸ್ ಮೇಲೆ ಪರಿಣಾಮಕಾರಿ ನಿಯಂತ್ರಣ ಇರಲಿಲ್ಲ. ವಲ್ಲಭಭಾಯಿ ಪಟೇಲರ ಮರಣದ ನಂತರವೇ ಅವರು ನಿಜವಾಗಿ ಪಕ್ಷವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಕಾಂಗ್ರೆಸ್ಸಿನೊಳಗಿನ ಸಂಪ್ರದಾಯವಾದಿಗಳನ್ನು ನಿವಾರಿಸಿಕೊಳ್ಳುವ ಮೂಲಕ, ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷವನ್ನು ನಿರಾಯಾಸವಾಗಿ ಗೆಲ್ಲಿಸುವುದರ ಮೂಲಕ ನೆಹರೂಗೆ ಇದು ಸಾಧ್ಯವಾಯಿತು. ಈಗ ಪಕ್ಷ ಮತ್ತು ರಾಷ್ಟ್ರ ಅವರ ಬೆಂಬಲಕ್ಕಿತ್ತು. ಹೀಗಾಗಿ, ಅಂಬೇಡ್ಕರ್ ಅವರು ಸೂಚಿಸಿದ ಸುಧಾರಣೆಗಳನ್ನು ಸಂಸತ್ತಿನಲ್ಲಿ ಮಂಡಿಸಿ ಶಾಸನ ಮಾಡುವ ಮೂಲಕ ನೆಹರೂ ಸಾಧನೆಗೈದಿದ್ದರು.

ಹಿಂದೂ ಒಡನಾಡಿಗಳ ನಿಯಮ, ಕಾನೂನುಗಳಲ್ಲಿ ಬದಲಾವಣೆಗಳನ್ನು ಮಾಡಲು ನೆಹರೂ ಸಂಕಲ್ಪ ಮಾಡಿದ್ದರು. ಅದೇ ರೀತಿ ಮುಸ್ಲಿಮರ ಕಾನೂನುಗಳಲ್ಲೂ ಬದಲಾವಣೆ ತರುವ ಉದ್ದೇಶ ಅವರಿಗಿತ್ತು. ಆದರೆ ಇದಕ್ಕಾಗಿ ಕಾಯಲು ಅವರು ಸಿದ್ಧರಿದ್ದರು. ವಿಭಜನೆಯ ಪರಿಣಾಮಗಳು ಭಾರತದಲ್ಲಿ ಉಳಿದುಕೊಂಡ ಮುಸ್ಲಿಮರನ್ನು ಘಾಸಿಗೊಳಿಸಿದ್ದವು, ಅವರನ್ನು ಗೊಂದಲಕ್ಕೀಡು ಮಾಡಿದ್ದವು. ಈ ಹಂತದಲ್ಲಿ ಅವರು ಪವಿತ್ರವೆಂದು ಭಾವಿಸಿದ್ದ, ಅಲ್ಲಾನ ಉಕ್ತಿ, ಅಪ್ಪಣೆ ಎಂದೇ ಭಾವಿಸಿದ್ದ ಸಂಪ್ರದಾಯಗಳಲ್ಲಿ, ಕಾನೂನುಗಳಲ್ಲಿ ಬದಲಾವಣೆ ಮಾಡುವುದರಿಂದ ಮುಸ್ಲಿಮರಲ್ಲಿ ಅಭದ್ರತೆಯ ಭಾವನೆ ಹೆಚ್ಚಾಗಬಹುದು ಎಂಬುದು ನೆಹರೂ ತಿಳುವಳಿಕೆಯಾಗಿತ್ತು. ಎಂದೇ, ಏಕರೂಪ ನಾಗರಿಕ ಸಂಹಿತೆ ಏಕೆ ತರುತ್ತಿಲ್ಲ ಎಂದು

ಸಂಸತ್ತಿನಲ್ಲಿ ಪ್ರಶ್ನಿಸಿದಾಗ ಇಂಥದೊಂದು ಸಂಹಿತೆಗೆ ತಮ್ಮ ತೀವ್ರ ಬೆಂಬಲವಿದೆಯೆಂದು ತಿಳಿಸಿದ ನೆಹರೂ-

"ಇವತ್ತಿನ ಕ್ಷಣದಲ್ಲಿ, ಭಾರತದಲ್ಲಿ ಅದಕ್ಕೆ ಕಾಲ ಪಕ್ವವಾಗಿಲ್ಲ. ಅದಕ್ಕೊಂದು ಭೂಮಿಕೆ ಸಿದ್ಧಪಡಿಸುವುದು ನನ್ನ ಉದ್ದೇಶ. ಇಂಥ ವಿಷಯಗಳಲ್ಲಿ ಭೂಮಿಕೆ ಸಿದ್ಧಪಡಿಸುವುದು ಒಂದು ಮಾರ್ಗ"

ಎಂದು ಉತ್ತರ ಕೊಟ್ಟಿದ್ದರು.

ಆದರೆ ಈ ಎಚ್ಚರವನ್ನು ಉಳಿದವರು ಸಿನಿಕತನದಿಂದ ವ್ಯಾಖ್ಯಾನಿಸಿದರು. ಹಂಗಾಮಿ ಸಂಸತ್ತಿನಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಹೀಗೆ ಪ್ರಶ್ನಿಸಿದ್ದರು.

"ಏಕಪತ್ನಿತ್ವ ಹಿಂದೂಗಳಿಗೆ ಮಾತ್ರ ಒಳ್ಳೆಯದು, ಅಥವಾ ಬೌದ್ಧರಿಗೆ, ಸಿಖ್ಖರಿಗೆ ಮಾತ್ರ ಎಂಬುದನ್ನು ಯಾರೂ ಒಪ್ಪುವುದಿಲ್ಲ. ಹಾಗಿದ್ದಲ್ಲಿ ಎಲ್ಲ ಪ್ರಜೆಗಳಿಗೂ ಏಕಪತ್ನಿತ್ವ ಅನ್ವಯಿಸುವಂತೆ ಹೊಸ ಮಸೂದೆಯೊಂದನ್ನು ಏಕೆ ಮಂಡಿಸಬಾರದು?"

ಈ ಪ್ರಶ್ನೆಗೆ ಉತ್ತರವನ್ನೂ ಅವರೇ ಒದಗಿಸಿದರು:

"ಮಸೂದೆಯನ್ನು ತಂದಿರುವವರ ದೌರ್ಬಲ್ಯ ನನಗೆ ಗೊತ್ತು. ಆದ್ದರಿಂದ ನಾನು ಇದರ ಬಗ್ಗೆ ಕಠಿಣವಾಗಿ ಮಾತನಾಡಲಿಚ್ಛಿಸುವುದಿಲ್ಲ. ಮುಸ್ಲಿಂ ಅಲ್ಪಸಂಖ್ಯಾತರನ್ನು ಮುಟ್ಟುವ ಧೈರ್ಯ ಅವರಿಗಿಲ್ಲ. ಭಾರತದ ಎಲ್ಲ ಮೂಲೆಗಳಿಂದ ಎಷ್ಟೊಂದು ವಿರೋಧ ವ್ಯಕ್ತವಾಗುವುದೆಂದರೆ ಅವರು ಮುಂದುವರಿಯುವ ಧೈರ್ಯ ತೋರಲಾರರು. ಆದರೆ ಹಿಂದೂಗಳ ವಿಷಯದಲ್ಲಿ ಹಾಗಲ್ಲ. ಹಿಂದೂ ಸಮುದಾಯದ ವಿಷಯದಲ್ಲಿ ಏನನ್ನು ಬೇಕಾದರೂ ಮಾಡಬಹುದು, ಪರಿಣಾಮ ಏನೇ ಇರಲಿ..."

–ಈ ಹಂತದಲ್ಲಿ ಸಿ. ರಾಜಗೋಪಾಲಾಚಾರಿಯವರು ಒಂದು ಅಡ್ಡ ಮಾತು ಹೇಳಿದರು:

"ಏಕೆಂದರೆ ನಾವು, ನಾವೇ ಆ ಸಮುದಾಯ. ನಾವು ಕಾಂಗ್ರೆಸ್ಸಿಗರು, ವಿಶೇಷವಾಗಿ ನೆಹರೂ ಪ್ರತಿನಿಧಿಸುವ, ಹಾಗೂ ರಾಜಗೋಪಾಲಾಚಾರಿ ಸಮರ್ಥವಾಗಿ ಪ್ರತಿನಿಧಿಸುವ ಸುಧಾರಣಾವಾದಿ ಬಣಕ್ಕೆ ಸೇರಿದವರು. ತಮ್ಮವರಲ್ಲದ, ಬೇರೆ ಧರ್ಮಗಳಿಗೆ ಸೇರಿದವರ ನೀತಿ-ನಂಬಿಕೆಗಳ ಬಗ್ಗೆ ಕ್ರಮ ಕೈಗೊಳ್ಳುವಾಗ ಹಿಂಜರಿಕೆಯುಂಟಾದರೆ ಅದು ಮೆಚ್ಚತಕ್ಕದ್ದೇ. ಹಿಂದೂ ಸಮುದಾಯದ ವಿಚಾರದಲ್ಲೇ ತಮ್ಮಿಚ್ಛೆಯಂತೆ ಸಾಗಲು ಅವರಿಗೆ ಹತ್ತು ವರ್ಷ ಹಿಡಿದಿದೆ. ಈ ಕ್ರಮ, ಅವರ ನಿಯಮ ಸಂಹಿತೆಗಳನ್ನು, ಶಾಸನಗಳನ್ನು ಸ್ತ್ರೀ-ಪುರುಷರಿಬ್ಬರಿಗೂ ಸಮಾನ ನ್ಯಾಯವಿರಬೇಕೆಂಬ ಆಧುನಿಕ ಭಾವನೆಗಳಿಗೆ ಹತ್ತಿರವಾಗಿಸಲಿದೆ."

○

12

ಸುಭದ್ರ ಕಾಶ್ಮೀರದ ಕಡೆಗೆ

ಎಲ್ಲ ಧರ್ಮಗಳು, ಎಲ್ಲ ಬಗೆಯ ಆಲೋಚನೆ-ಅಭಿಪ್ರಾಯಗಳ ಜನ ಸಮುದಾಯ-ವನ್ನೊಳಗೊಂಡ ಪರಮಸತ್ವದ ಜಾತ್ಯತೀತ ರಾಷ್ಟ್ರದಲ್ಲಿ ನಮಗೆ ನಂಬಿಕೆ ಇದೆಯೇ... ಅಥವಾ ಬೇರೆ ಧರ್ಮಗಳ ಜನರನ್ನು ನಮ್ಮ ಎಲ್ಲೆಕಟ್ಟಿನಾಚೆಯವರು ಎಂದು ಭಾವಿಸುವ ಪುರೋಹಿತಶಾಹಿ ಹಾಗೂ ಧಾರ್ಮಿಕ ಪರಿಕಲ್ಪನೆಗಳ ರಾಷ್ಟ್ರದಲ್ಲಿ ನಂಬಿಕೆ ಇದೆಯೇ? ಇದೊಂದು ವಿಲಕ್ಷಣ ಪ್ರಶ್ನೆ. ಏಕೆಂದರೆ, ಪುರೋಹಿತಶಾಹಿ ಅಥವಾ ಧಾರ್ಮಿಕ ನಿಷ್ಠೆಯ ರಾಷ್ಟ್ರದ ಪರಿಕಲ್ಪನೆಯನ್ನು ಈ ಜಗತ್ತು ಕೆಲವು ಶತಮಾನಗಳ ಹಿಂದೆಯೇ ತಿರಸ್ಕರಿಸಿದೆ. ಆಧುನಿಕ ಮಾನವನ ಬುದ್ಧಿ, ವಿವೇಕಗಳಲ್ಲಿ ಇಂದು ಅದಕ್ಕೆ ಜಾಗವಿಲ್ಲ. ಆದಾಗ್ಯೂ ಇಂದು ಭಾರತದಲ್ಲಿ ಈ ಪ್ರಶ್ನೆಯನ್ನು ಕೇಳಬೇಕಾಗಿ ಬಂದಿದೆ. ಏಕೆಂದರೆ ನಮ್ಮಲ್ಲಿ ಅನೇಕ ಮಂದಿ ಗತಕಾಲಕ್ಕೆ ಹಿನ್ನೆಗೆಯುವ ಪ್ರಯತ್ನ ಮಾಡಿದ್ದೇವೆ.

–ಜವಹರಲಾಲ ನೆಹರೂ

I

ವ್ಯಕ್ತಿಗತ ಕಾನೂನುಗಳಲ್ಲಿ ಸುಧಾರಣೆ ಭಾರತದ ಜಾತ್ಯತೀತ ನೀತಿಗೆ ಒಂದು ಪರೀಕ್ಷೆಯಾಯಿತು. ಅದರ ಇನ್ನೊಂದು ಅಗ್ನಿದಿವ್ಯ ಕಾಶ್ಮೀರದ ಭವಿಷ್ಯಕ್ಕೆ ಸಂಬಂಧಿಸಿದ್ದು. ಮುಸ್ಲಿಂ ಬಹುಮತದ ರಾಜ್ಯವೊಂದು ಅಸ್ತಿತ್ವದಲ್ಲಿರುವುದು ಸಾಧ್ಯವೆ? ವಿಶೇಷವಾಗಿ ಹಿಂದೂಗಳ ಪ್ರಾಬಲ್ಯವಿರುವ, ಆದರೆ ಮೇಲ್ನೋಟಕ್ಕೆ ಜಾತ್ಯತೀತವೆನ್ನಿಸಿಕೊಂಡ ಭಾರತದಲ್ಲಿ ಘರ್ಷಣೆ, ತಿಕ್ಕಾಟ, ಕ್ಲೇಶ-ಕಳವಳಗಳಿಲ್ಲದೆ ಮುಸ್ಲಿಂ ಬಹುಮತದ ರಾಜ್ಯವೊಂದಿರುವುದು ಸಾಧ್ಯವೆ?

ನಾಲ್ಕನೆಯ ಅಧ್ಯಾಯದಲ್ಲಿ ನಾವೀಗಾಗಲೇ ಕಂಡಿರುವಂತೆ 1949ರ ವೇಳೆಗೆ ಶೇಖ್ ಅಬ್ದುಲ್ಲಾ ಜಮ್ಮು ಕಾಶ್ಮೀರದ ಆಡಳಿತದ ಮೇಲೆ ಅಚಲವಾದ ಹತೋಟಿ ಸಾಧಿಸಿದ್ದರು. ಆದರೆ ಈ ಪ್ರದೇಶದ ಸ್ಥಾನಮಾನ ಇನ್ನೂ ವಿವಾದಾತ್ಮಕವಾಗಿತ್ತು. ವಿಶ್ವಸಂಸ್ಥೆ ಜನಮತಗಣನೆಗೆ ಕರೆ ನೀಡಿತ್ತು. ಹಾಗೂ ಜನಮತಗಣನೆ ನಡೆಸುವುದಕ್ಕೆ ಸಂಬಂಧಿಸಿದ ಕರಾರುಗಳಿಗೆ ಭಾರತ-ಪಾಕಿಸ್ತಾನಗಳ ಮನ ಒಲಿಸುವ ಪ್ರಯತ್ನ ನಡೆಸಿತ್ತು.

1950ರ ಫೆಬ್ರುವರಿಯಲ್ಲಿ, ರಾಜ್ಯದಿಂದ ಸೈನ್ಯ ಹಿಂದೆಗೆದುಕೊಳ್ಳುವಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಎರಡು ರಾಷ್ಟ್ರಗಳಿಗೂ ಕರೆ ನೀಡಿತ್ತು. ಹಿಂದಿನಂತೆಯೇ ಎರಡೂ ಕಡೆ ಇದರಲ್ಲಿ ವಿಳಂಬವಾಯಿತು. ಮೊದಲು ಸೈನ್ಯ ವಾಪಸು ಕರೆಸಿಕೊಳ್ಳುವಂತೆ ಭಾರತ ಪಾಕಿಸ್ತಾನಕ್ಕೆ ಆಗ್ರಹಪಡಿಸಿತು. ಮೊದಲು ನ್ಯಾಷನಲ್ ಕಾನ್ಫರೆನ್ಸ್ ಸರ್ಕಾರವನ್ನು ಪದಚ್ಯುತಿಗೊಳಿಸುವಂತೆ ಪಾಕಿಸ್ತಾನ ಪಟ್ಟು ಹಿಡಿಯಿತು. ಭಾರತ, ಮೊದಲನೆಯದಾಗಿ ಈ ವಿಷಯವನ್ನು ವಿಶ್ವಸಂಸ್ಥೆಗೆ ಒಯ್ದಿದ್ದಕ್ಕೆ ವಿಷಾದಪಡಲಾರಂಭಿಸಿತು. 1950ರ ವೇಳೆಗೆ ವಿವಾದಿತ ರಾಜ್ಯದಲ್ಲಿ ತನ್ನ ವಶದಲ್ಲಿರುವ ಪ್ರದೇಶವನ್ನು ತಾನಿಟ್ಟುಕೊಂಡು ದೂರದ ಪ್ರದೇಶವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡುವುದಕ್ಕೆ ಭಾರತ ಸಿದ್ಧವಾಗಿತ್ತು. 1950ರ ಜನವರಿಯಲ್ಲಿ ಜಾರಿಗೆ ಬಂದ ಭಾರತದ ಸಂವಿಧಾನ ಜಮ್ಮು ಕಾಶ್ಮೀರವನ್ನು ಭಾರತ ಒಕ್ಕೂಟದ ಅವಿಭಾಜ್ಯ ಅಂಗವೆಂದು ಪರಿಗಣಿಸಿತ್ತು. ಆದರೆ ಸಂವಿಧಾನ ಈ ರಾಜ್ಯಕ್ಕೆ ನಿರ್ದಿಷ್ಟ ಸ್ವಾಯತ್ತತೆಯ ಭರವಸೆ ನೀಡಿತ್ತು. ಇದರಿಂದಾಗಿ ಸಂವಿಧಾನ 370ನೇ ವಿಧಿಯಲ್ಲಿ, ರಕ್ಷಣೆ, ವಿದೇಶಾಂಗ ವ್ಯವಹಾರ ಮತ್ತು ಸಂಪರ್ಕಗಳು ಹೊರತಾಗಿ ಉಳಿದ ವಿಷಯಗಳಲ್ಲಿ ರಾಷ್ಟ್ರಪತಿಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸತಕ್ಕದ್ದೆಂದು ಸ್ಪಷ್ಟವಾಗಿ ನಮೂದಿಸಲಾಯಿತು.

ಇನ್ನು ಪಾಕಿಸ್ತಾನದ ಬಗ್ಗೆ ಹೇಳುವುದಾದರೆ, ಜನಮತದಿಂದ ತಮ್ಮ ಹಕ್ಕಿಗೆ ಸಮರ್ಥನೆ, ಪ್ರಮಾಣೀಕರಣಗಳ ಅಗತ್ಯವಿಲ್ಲವೆಂಬುದು ಪಾಕಿಸ್ತಾನಿಗಳ ನಿಲುವಾಗಿತ್ತು. 1950ರ ಸೆಪ್ಟಂಬರಿನಲ್ಲಿ ಮಾಜಿ ಪ್ರಧಾನಿಯೊಬ್ಬರು "ಕಾಶ್ಮೀರ ವಿಮೋಚನೆ ಪ್ರತಿಯೊಬ್ಬ ಪಾಕಿಸ್ತಾನಿಯ ಮುಖ್ಯ ಆಲೋಚನೆಯಾಗಿದೆ...ಇಡೀ ಕಾಶ್ಮೀರದ ವಿಮೋಚನೆಯಾಗುವವರೆಗೆ ಪಾಕಿಸ್ತಾನ ಅಪೂರ್ಣವಾಗಿಯೇ ಉಳಿಯುತ್ತದೆ" ಎಂದು ಹೇಳಿಕೆಯೊಂದನ್ನು ಪ್ರಕಟಿಸಿದ್ದರು. ಎರಡು ವಾರಗಳ ನಂತರ ಅಧಿಕಾರದಲ್ಲಿದ್ದ ಪ್ರಧಾನಮಂತ್ರಿ ಹೇಳಿಕೆಯೊಂದನ್ನು ನೀಡಿ "ಕಾಶ್ಮೀರ ಪಾಕಿಸ್ತಾನಕ್ಕೆ ಜೀವನಾಧಾರಕ, ಭಾರತಕ್ಕಾದರೆ ಅದೊಂದು ಸಾಮ್ರಾಜ್ಯಶಾಹಿ ಸಾಹಸವಷ್ಟೇ" ಎಂದು ಘೋಷಿಸಿದರು.

ಗಡಿಯ ಎರಡೂ ಕಡೆ ಪತ್ರಿಕಾ ಮಾಧ್ಯಮಗಳಲ್ಲಿ ಸರ್ಕಾರದ ನಿಲುವುಗಳು ಪ್ರತಿಧ್ವನಿಸಿದವು, ಜೋರಾಗಿ ಪ್ರಚುರಗೊಂಡವು. 1950ರಲ್ಲಿ ಬ್ರಿಟಿಷ್ ಪ್ರಸಾರ ತಜ್ಞ ಲಿಯೊನೆಲ್ ಫೀಲ್ಡೆನ್ ಉಪಖಂಡಕ್ಕೆ ಭೇಟಿಕೊಟ್ಟಿದ್ದ. ಭಾರತದ ಆಕಾಶವಾಣಿಯಲ್ಲಿ ಮುಖ್ಯಸ್ಥನ ಹುದ್ದೆಯಲ್ಲಿದ್ದ ಫೀಲ್ಡೆನ್‌ಗೆ ಭಾರತ-ಪಾಕಿಸ್ತಾನಗಳೆರಡರಲ್ಲೂ ಸ್ನೇಹಿತರಿದ್ದರು.

ಈ ಸ್ನೇಹಿತರನ್ನು ಭೇಟಿಯಾದಾಗ ಅವನಿಗೆ ಮನವರಿಕೆಯಾದದ್ದು ಅಂತರರಾಷ್ಟ್ರೀಯ ಗಡಿಯ ಎರಡೂ ಬದಿಯಲ್ಲಿ ಜನ ಪರಸ್ಪರ ದೋಷಾರೋಪಣೆ ಮಾಡುತ್ತಿದ್ದ ಮುಖ್ಯ ಸಂಗತಿ. "ಅಂತರರಾಷ್ಟ್ರೀಯ ಗಡಿಯ ಎರಡೂ ಕಡೆ ಪ್ರವಾಸಿಗರ ಮೇಲೆ ಸ್ಥಳೀಯರು ವಾಗ್ದಾಳಿ ನಡೆಸುತ್ತಿದ್ದರು. ಇನ್ನೊಂದು ರಾಷ್ಟ್ರ ತಪ್ಪಿತಸ್ಥ ಅಷ್ಟೇ ಅಲ್ಲ, ಅದು ಪೈಶಾಚಿಕ ಪ್ರಮಾದವೆಸಗಿರುವ ರಾಷ್ಟ್ರ, ಕುಚೋದ್ಯದಿಂದ ಲಾಭ ಮಾಡಿಕೊಳ್ಳಲೆತ್ನಿಸುತ್ತಿರುವ ರಾಷ್ಟ್ರ" ಎಂದು ಪ್ರವಾಸಿಗರ ಮುಖಕ್ಕೆ ಪರಸ್ಪರ ದೋಷಾರೋಪಣೆಗಳನ್ನು ರಾಚುತ್ತಿದ್ದರು ಎಂಬುದು ಫಿಲ್ಡಿನ್‌ಗೆ ಸ್ನೇಹಿತರ ಜೊತೆ ಮಾತುಕತೆಯಲ್ಲಿ ಮುಖ್ಯವಾಗಿ ಕಂಡಬಂದಿತ್ತು. "ಭಾರತದ ಪತ್ರಿಕೆಗಳ ದನಿ ಓಲೈಕೆಯದಾಗಿತ್ತು, ಪ್ರೋತ್ಸಾಹದ್ದಾಗಿತ್ತು. ಮಾತಿನಲ್ಲಿ ಸವಿಯಿದ್ದರೂ ಹಠಮಾರಿತನವಿತ್ತು. ಪ್ರಜ್ಞಾಪೂರ್ವಕವಾಗಿ ನ್ಯಾಯಪರವಾಗಿರುತ್ತಿತ್ತು. ಆದರೆ ಪಾಕಿಸ್ತಾನದ ಪತ್ರಿಕೆಗಳು ಮತ್ತು ಪಾಕಿಸ್ತಾನಿ ನಾಯಕರ ದನಿ ಪ್ರತಿಭಟನೆ, ಸಿಟ್ಟು, ಅಹಂಕಾರ-ಅಸಮಾಧಾನಗಳಿಂದ ಕೂಡಿರುತ್ತಿತ್ತು. ಕೆಲವೊಮ್ಮೆ ಆಕ್ರಮಣಕಾರಿಯಾಗಿಯೂ ಇರುತ್ತಿತ್ತು" ಎಂದು ಈತ ಅಭಿಪ್ರಾಯಪಟ್ಟಿದ್ದಾನೆ. ಅಖಂಡ ಭಾರತ-ತಮ್ಮ ನೆಲವನ್ನು ಗೆದ್ದುಕೊಳ್ಳುವ ಮೂಲಕ ಅಖಂಡ ಭಾರತವನ್ನು ಕಟ್ಟಬೇಕೆಂಬ ಭಾರತದ ಕೆಲವು ಪ್ರಭಾವಶಾಲಿ ಶಕ್ತಿಗಳ ಬಗೆಗಿನ ಭೀತಿ ಪಾಕಿಸ್ತಾನದ ಹಗೆತನವನ್ನು ಇಮ್ಮಡಿಗೊಳಿಸಿತ್ತು.

ಫೀಲ್ಡಿನ್ ಉಭಯ ರಾಷ್ಟ್ರಗಳಲ್ಲಿದ್ದ ಅಭಿಪ್ರಾಯವನ್ನು ಹೀಗೆ ಸಂಕ್ಷೇಪಿಸಿದ್ದಾನೆ:

> *"ಕಾಶ್ಮೀರಕ್ಕೆ ಅಂಟಿಕೊಂಡು ವಿಭಜನೆಯನ್ನು ದುರ್ಬಲಗೊಳಿಸುವುದು ಭಾರತದ ಬಯಕೆಯಾದರೆ, ಕಾಶ್ಮೀರದ ಮೇಲೆ ಹಕ್ಕು ಸ್ಥಾಪಿಸುವ ಮೂಲಕ ವಿಭಜನೆಯನ್ನು ಸುರಕ್ಷಿತಗೊಳಿಸಿಕೊಳ್ಳುವುದು ಪಾಕಿಸ್ತಾನದ ಬಯಕೆಯಾಗಿದೆ. ಕಾಶ್ಮೀರ ವಿಷಯದಲ್ಲಿ ಉಭಯರಾಷ್ಟ್ರಗಳೂ ಸಂಪೂರ್ಣವಾಗಿ ಬಿಗಿ ನಿಲುವು ತಾಳಿವೆ. ಹೀಗಾಗಿ, ಕಾಶ್ಮೀರಕ್ಕಾಗಿ ಕೊನೆಯವರೆಗೂ ಹೋರಾಟ ಎನ್ನುವುದು ಪಾಕಿಸ್ತಾನಿಗಳೆಲ್ಲರ ಘೋಷಣೆಯಾಗಿದೆ. ಏನೇ ಬರಲಿ ಬಿಟ್ಟು ಕೊಡುವುದಿಲ್ಲ ಎನ್ನುವ ಭಾರತದ ದೃಢನಿರ್ಧಾರ ತ್ವರಿತಗತಿಯಲ್ಲಿ ಬಲವಾಗಿ ಬೇರೂರುತ್ತಿದೆ."*

ಫೀಲ್ಡಿನ್ ಒಂದು ಎಚ್ಚರಿಕೆಯೊಂದಿಗೆ ಈ ವಿಷಯದ ವಿಶ್ಲೇಷಣೆಯನ್ನು ಸಮಾಪ್ತಿಗೊಳಿಸಿದ್ದಾನೆ. "ದೀರ್ಘಕಾಲೀನ ದೃಷ್ಟಿಯಿಂದ ಹೇಳುವುದಾದಲ್ಲಿ ಒಂದು ಮುಖ್ಯ ಸಂಗತಿಯನ್ನು ಗಮನಿಸಬೇಕಾಗುತ್ತದೆ. ಅದು, ಕಾಶ್ಮೀರ ಘರ್ಷಣೆಗಾಗಿ ಉಭಯ ರಾಷ್ಟ್ರಗಳು ಶಸ್ತ್ರಾಸ್ತ್ರಕ್ಕಾಗಿ ಮಾಡುವ ವೆಚ್ಚಕ್ಕೆ ಸಂಬಂಧಿಸಿದ್ದು. ಇದರಿಂದಾಗಿ ಎರಡೂ ರಾಷ್ಟ್ರಗಳಲ್ಲಿ ಸಾಮಾಜಿಕ ಸೇವೆಗಳಿಗೆ ಬಾಧಕವುಂಟಾಗುತ್ತದೆ. ಸಾಮಾಜಿಕ ಸೇವೆ ಕುಂಠಿತಗೊಳ್ಳುತ್ತದೆ. ಎರಡೂ ರಾಷ್ಟ್ರಗಳಲ್ಲಿ ನಿರಾಶ್ರಿತರಲ್ಲದೆ, ಲಕ್ಷಾಂತರ ಮಂದಿ ಕಡು ಬಡತನದಿಂದ ನರಳಬೇಕಾಗುತ್ತದೆ. ಇವರು ವಿಶ್ವದಲ್ಲೇ ಅತಿ ಕಡುಬಡವರಾಗಿ ಉಳಿದು ಈ ಪರಿಸ್ಥಿತಿ ಅನರ್ಥಕ್ಕೆಡೆಮಾಡಿ ಕೊಡಬಹುದು."

ವಿಶ್ವಸಂಸ್ಥೆ ವಿವಾದ ಬಗೆಹರಿಸಲು ಪ್ರಯತ್ನಿಸಿ ವಿಫಲವಾಯಿತು. ಮೂರನೆಯ ಪಕ್ಷವೊಂದು ಸಫಲವಾಗಬಹುದೆ? 1951ರ ಜನವರಿಯಲ್ಲಿ ಆಸ್ಟ್ರೇಲಿಯಾದ ಪ್ರಧಾನಮಂತ್ರಿ ಸರ್ ರಾಬರ್ಟ್ ಮೆನ್ಜಿಸ್ ಅವರು, ಡೌನಿಂಗ್ ಸ್ಟ್ರೀಟ್‌ನ ಹತ್ತನೆ ನಿವಾಸದಲ್ಲಿ ನಡೆದ ಸಭೆಯೊಂದರಲ್ಲಿ ಕಾಮನ್ವೆಲ್ತ್ ನೇತೃತ್ವದಲ್ಲಿ ಜನಮತಗಣನೆ ನಡೆಸಲು ಸಲಹೆಮಾಡಿದರು. ಬ್ರಿಟಿಷ್ ಪ್ರಧಾನಮಂತ್ರಿ ಕ್ಲೆಮೆಂಟ್ ಅಟ್ಲೆಯವರಿಗೆ ಈ ಸಲಹೆ ಸಮ್ಮತಾರ್ಹವೆನಿಸಿತ್ತು. ಯಾವುದೇ ರೀತಿಯ ಒಪ್ಪಂದಕ್ಕೂ ಶೇಖ್ ಅಬ್ದುಲ್ಲಾ ಸರ್ಕಾರದ ಸಮ್ಮತಿ ಅಗತ್ಯವೆಂದು ನೆಹರೂ ಹೇಳಿದರು. ಪಾಕಿಸ್ತಾನದ ಪ್ರಧಾನಮಂತ್ರಿಗಳು ಶೇಖ್ ಅಬ್ದುಲ್ಲಾ ಸರ್ಕಾರವನ್ನು ನೆಹರೂ ಅವರಿಂದ ನೇಮಕಗೊಂಡಿರುವ ಕೈಗೊಂಬೆ ಸರ್ಕಾರವೆಂದು ಕರೆದರು. "ಪಾಕಿಸ್ತಾನದ ಪತ್ರಿಕೆಗಳ ತುಂಬ ಧರ್ಮ ಯುದ್ಧದ ಕರೆ, ಧಾರ್ಮಿಕ ಮನವಿಗಳೇ ತುಂಬಿರುತ್ತವೆ. ಜನಮತಗಣನೆ ಈ ರೀತಿಯದಾದರೆ, ಜನಮತಗಣನೆ ಕಾಲದಲ್ಲಿ ಇದು ನಡೆದರೆ, ಆಗ ಅದು ಜನಮತಗಣನೆಯಾಗುವುದಿಲ್ಲ, ಯಾದವೀ ಕಲಹವಾಗುತ್ತದೆ, ನಾಗರಿಕ ವಿಪ್ಲವವಾಗುತ್ತದೆ. ಇದು ಕಾಶ್ಮೀರದಲ್ಲಷ್ಟೇ ಅಲ್ಲ, ಭಾರತ-ಪಾಕಿಸ್ತಾನಗಳ ಇತರ ಸ್ಥಳಗಳಲ್ಲೂ ಸಂಭವಿಸುತ್ತದೆ" ಎಂದು ನೆಹರೂ ಪಾಕಿಸ್ತಾನದ ಪ್ರಧಾನಿ ಟೀಕೆಗೆ ಉತ್ತರಿಸಿದ್ದರು.

II

1950ರಲ್ಲಿ, ಭಾರತದ ಭೂಪಟದಲ್ಲಿ ಜಮ್ಮು ಕಾಶ್ಮೀರ ಇಡೀ ರಾಜ್ಯವನ್ನು ತನ್ನ ಗಡಿಯೊಳಗಣ ಪ್ರದೇಶವಾಗಿ ತೋರಿಸಿ ಭಾರತ ಸರ್ಕಾರ ಹಕ್ಕು ಸ್ಥಾಪಿಸಿತ್ತು. 1947ರ ಅಕ್ಟೋಬರಿನಲ್ಲಿ ಮಹಾರಾಜ ಹರಿಸಿಂಗರು ಭಾರತದೊಂದಿಗೆ ಜಮ್ಮು ಕಾಶ್ಮೀರ ವಿಲೀನ ಒಪ್ಪಂದಕ್ಕೆ ಸಹಿ ಹಾಕಿದ್ದಾರೆಂಬುದೇ ಭಾರತದ ಈ ಹಕ್ಕು ಸ್ಥಾಪನೆಗೆ ಆಧಾರವಾಗಿತ್ತು. ಏತನ್ಮಧ್ಯೆ, ಭಾರತದ ಹಕ್ಕು ಸ್ಥಾಪನೆಗೆ, ಭಾಗಶಃ ಶೇಖ್ ಮುಹಮದ್ ಅಬ್ದುಲ್ಲಾ ಅವರ ಜಾತ್ಯತೀತ ಮನೋಭಾವವೂ ಆಧಾರವಾಗಿತ್ತು.

ಶೇಖ್ ಅಬ್ದುಲ್ಲಾ ಪಾಕಿಸ್ತಾನ ವಿರೋಧಿಯಾಗಿದ್ದರು. ಆದರೆ ಅವರು ಭಾರತದ ಪರವಾಗಿದ್ದರೆ? ಈ ಪ್ರಶ್ನೆಗೆ ಸ್ವತಃ ಶೇಖ್ ಅಬ್ದುಲ್ಲಾ ಅವರೇ ನೇರ ಉತ್ತರ ಕೊಡುತ್ತಿರಲಿಲ್ಲ. ನೆಹರೂ ಅವರು ತಮ್ಮ ಸೋದರಿ ವಿಜಯಲಕ್ಷ್ಮಿ ಪಂಡಿತ್ ಅವರಿಗೆ ಬರೆದಿರುವ ಹತಾಶೆಯ ಪತ್ರಗಳಲ್ಲಿ ಶೇಖ್ ಅಬ್ದುಲ್ಲಾ ಅವರ ಚಂಚಲ ಮನಸ್ಕತೆ ಬಿಂಬಿತವಾಗಿದೆ:

> *10 ಮೇ 1950. ಶೇಖ್ ಅಬ್ದುಲ್ಲಾ ಬೇಜವಾಬ್ದಾರಿ ರೀತಿಯಲ್ಲಿ ವರ್ತಿಸುತ್ತಿದ್ದಾರೆಂದು ಹೇಳಲು ನನಗೆ ವಿಷಾದವಾಗುತ್ತದೆ. ಜೀವನದಲ್ಲಿ ತುಂಬ ಕ್ಲಿಷ್ಟವಾದುದೆಂದರೆ ಇಂಥ ಮಿತ್ರರ ಬಗ್ಗೆ ಹೇಗೆ ನಡೆದುಕೊಳ್ಳುವುದು, ಏನು ಮಾಡುವುದು ಎಂಬುದೇ ಆಗಿದೆ.*
>
> *18 ಜುಲೈ 1950. ಏತನ್ಮಧ್ಯೆ ಶೇಖ್ ಅಬ್ದುಲ್ಲಾ ಆಂತರಿಕ ವಿದ್ಯಮಾನಗಳ ಬಗ್ಗೆ ಕಾಶ್ಮೀರದಲ್ಲಿ ತುಂಬ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದಾರೆ. ನಮ್ಮೊಡನೆ ಸಂಘರ್ಷಕ್ಕೆ*

ಅವರು ಸಂಕಲ್ಪ ತೊಟ್ಟಂತಿದೆ. ಅಲ್ಲಿ ಅವರು ದುರ್ಮಾರ್ಗಿಗಳ ವಶಕ್ಕೊಳಗಾದಂತಿದೆ. ಅವರನ್ನು ತಪ್ಪು ದಾರಿಗೆಳೆಯಲಾಗುತ್ತಿದೆ.

10 ಆಗಸ್ಟ್ 1950. ಶೇಖ್ ಅಬ್ದುಲ್ಲಾ ಈಗ ಸ್ವಲ್ಪ ಹಾದಿಗೆ ಬರುತ್ತಿರುವಂತೆ ತೋರುತ್ತಿದೆ. ಅವರೀಗ ಬುದ್ಧಿವಾದ ಕೇಳುವ ಮನಃಸ್ಥಿತಿಯಲ್ಲಿದ್ದಾರೆ. ಎಷ್ಟು ಕಾಲ ಹೀಗಿರುತ್ತಾರೋ ಎಂದು ನನಗೆ ವಿಸ್ಮಯ. ಏಕೆಂದರೆ ಕಾಶ್ಮೀರದಲ್ಲಿ ಹಲವಾರು ಶಕ್ತಿಗಳು ಮೇಲಾಟ ನಡೆಸಿವೆ. ಈ ಶಕ್ತಿಗಳು ಅವರನ್ನು ವಿಭಿನ್ನ ದಿಕ್ಕುಗಳತ್ತ ಸೆಳೆಯುತ್ತಿವೆ.

ಈ ಪತ್ರಗಳಲ್ಲಿನ ನೆಹರೂ ಅವರ ಸಂಶಯದ ದನಿ ಸಮರ್ಥನೀಯವಾದುದೇ. ಏಕೆಂದರೆ, ಅತಿ ಶೀಘ್ರದಲ್ಲೇ ಶೇಖ್ ಅಬ್ದುಲ್ಲಾ ಮತ್ತೊಮ್ಮೆ ತುಂಬಾ ಹೊಣೆಗೇಡಿತನದ ರೀತಿಯಲ್ಲಿ ವರ್ತಿಸಲಾರಂಭಿಸಿದರು. ಅಂದರೆ ಈ ವೇಳೆಗೆ ಅವರು ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸುವ ಮಾರ್ಗೋಪಾಯಗಳನ್ನು ಕುರಿತು ಯೋಚಿಸಲಾರಂಭಿಸಿದ್ದರು. 1950ರ ಸೆಪ್ಟಂಬರ್ 29ರಂದು ಅವರು ಅಮೆರಿಕದ ರಾಯಭಾರಿ ಲಾಯ್ ಹೆಂಡರ್ಸನ್ ಅವರನ್ನು ಭೇಟಿಮಾಡಿದ್ದರು. ಕಾಶ್ಮೀರದ ಭವಿಷ್ಯ ಕುರಿತು ಚರ್ಚಿಸುತ್ತಾ ಅಬ್ದುಲ್ಲಾ ಹೆಂಡರ್ಸನ್‌ಗೆ ಹೀಗೆ ಹೇಳಿದ್ದರು:

"ತಮ್ಮ ಅಭಿಪ್ರಾಯದಂತೆ ಕಾಶ್ಮೀರ ಸ್ವತಂತ್ರವಾಗಿರಬೇಕು. ಜನಸಂಖ್ಯೆಯಲ್ಲಿ ಬಹುತೇಕ ಮಂದಿ ಸ್ವಾತಂತ್ರ್ಯದ ಆಕಾಂಕ್ಷೆ ಹೊಂದಿದ್ದಾರೆ. ಅಜಾದ್ ಕಾಶ್ಮೀರದ ಕೆಲವು ನಾಯಕರು ಸ್ವಾತಂತ್ರ್ಯ ಬಯಸಿದ್ದು ಅವರು ನ್ಯಾಷನಲ್ ಕಾನ್ಫರೆನ್ಸ್ ನಾಯಕರೊಂದಿಗೆ ಸಹಕರಿಸಲು ಸಿದ್ಧರಿದ್ದಾರೆ. ನ್ಯಾಯ ಸಮ್ಮತ ಅವಕಾಶ ದೊರೆತಲ್ಲಿ ಈ ಸಹಕಾರದಿಂದ ಸ್ವಾತಂತ್ರ್ಯ ಲಭಿಸುವುದು. ಸ್ವಾತಂತ್ರ್ಯವೊಂದೇ ಕಾಶ್ಮೀರ ಸಮಸ್ಯೆಗೆ ಪರ್ಯಾಯ ಪರಿಹಾರವೆಂಬುದನ್ನು ವಿಶ್ವಸಂಸ್ಥೆ ಏಕೆ ಸತತವಾಗಿ ಅಲಕ್ಷ್ಯ ಮಾಡುತ್ತಿದೆ ಎಂಬುದು ಕಾಶ್ಮೀರದ ಜನತೆಗೆ ಅರ್ಥವಾಗುತ್ತಿಲ್ಲ. ಕಾಶ್ಮೀರಿಗಳಿಗೆ ತಮ್ಮದೇ ಆದ ಭಾಷೆ, ಸಂಸ್ಕೃತಿಗಳಿವೆ. ಇಲ್ಲಿನ ಹಿಂದೂಗಳು ಆಚಾರ, ವಿಚಾರ, ಸಂಪ್ರದಾಯಗಳಲ್ಲಿ ಭಾರತದ ಹಿಂದೂಗಳಿಗಿಂತ ವಿಭಿನ್ನ. ಹಾಗೂ ಕಾಶ್ಮೀರದಲ್ಲಿನ ಮುಸ್ಲಿಮರ ಹಿನ್ನೆಲೆಯೂ ಪಾಕಿಸ್ತಾನದಲ್ಲಿರುವ ಮುಸ್ಲಿಮರಿಗಿಂತ ವಿಭಿನ್ನವಾಗಿದೆ. ಹಿಂದೂ ಅಲ್ಪಸಂಖ್ಯಾತರಿದ್ದಾಗ್ಯೂ ಕಾಶ್ಮೀರದ ಜನತೆ ಸಮಾನ ಜಾತಿಯವರಾಗಿದ್ದಾರೆ."

ಕಾಶ್ಮೀರದ ಸ್ವಾತಂತ್ರ್ಯಕ್ಕೆ ಅಮೆರಿಕ ಬೆಂಬಲಿಸುವುದೇ ಎಂದು ಶೇಖ್ ಅಬ್ದುಲ್ಲಾ ಅಮೆರಿಕ ರಾಯಭಾರಿಗಳನ್ನು ಮತ್ತೆ ಮತ್ತೆ ಕೇಳಿದ್ದರು. ಅಮೆರಿಕದ ಪ್ರತಿಕ್ರಿಯೆ ಏನಾಗಿತ್ತೆಂಬುದು ದುರದೃಷ್ಟವಶಾತ್ ವಿದೇಶಾಂಗ ಇಲಾಖೆ ದಾಖಲೆಗಳಲ್ಲಿ ನಮೂದಾಗಿಲ್ಲ. ಕಾಶ್ಮೀರವನ್ನು ಆಶ್ರಿತ ರಾಜ್ಯವಾಗಿ ರಕ್ಷಿಸಿ ಬೆಳೆಸುವುದು ಅಮೆರಿಕದ ಉದ್ದೇಶವಾಗಿತ್ತೆ? ಕಾಶ್ಮೀರದ ಭೌಗೋಳಿಕ ಸನ್ನಿವೇಶ, ಆಯಕಟ್ಟು ಕಮ್ಯುನಿಸ್ಟರ ವಿರುದ್ಧ ಹೋರಾಟದಲ್ಲಿ ಅಮೆರಿಕಕ್ಕೆ ಅಮೂಲ್ಯವಾಗಿತ್ತಲ್ಲವೆ?

ಈಗಲೂ ಈ ಬಗ್ಗೆ ನಾವು ಏನನ್ನೂ ಹೇಳಲಾಗದು. ಶೇಖ್ ಅಬ್ದುಲ್ಲಾಗೂ ಕಾಲ ಅನುಕೂಲಕರವಾಗಿರಲಿಲ್ಲ. ಹಾಗೆಂದೇ ಇರಬೇಕು ಅವರು ಕಾಶ್ಮೀರ ಸ್ವಾಯತ್ತತೆಗೆ ಸಂಬಂಧಿಸಿದ ಶರತ್ತುಗಳನ್ನು ಚರ್ಚಿಸಲು ಭಾರತ ಸರ್ಕಾರದ ಮೇಜಿಗೆ ವಾಪಸಾದರು. ಜಮ್ಮು ಕಾಶ್ಮೀರ ರಾಜ್ಯಕ್ಕೆ ತನ್ನದೇ ಆದ ಸಂವಿಧಾನ ರಚನಾ ಸಭೆಯೊಂದನ್ನು ರಚಿಸಬೇಕು. ಇದು, ಭಾರತದೊಡನೆ ಸೇರುವಿಕೆಗೆ ಸಂಬಂಧಿಸಿದ ಕರಾರು-ಶರತ್ತುಗಳನ್ನು ನಿರ್ಧರಿಸುವುದು. 1951ರ ಜನವರಿಯಲ್ಲಿ ಅಬ್ದುಲ್ಲಾ ಅವರು ಸಂಸ್ಥಾನಗಳ ಸಚಿವರಿಗೆ ಪತ್ರವೊಂದನ್ನು ಬರೆದರು. ಪತ್ರದ ಸಾರಾಂಶ:

> *"ತಾವು ಅರ್ಥ ಮಾಡಿಕೊಂಡಂತೆ, ರಾಜ್ಯದ ಸೇರ್ಪಡೆ, ಮಹಾರಾಜರನ್ನು ರಾಜ್ಯದ ಮುಖ್ಯಸ್ಥರನ್ನಾಗಿ ಉಳಿಸಿಕೊಳ್ಳುವುದೇ ಅಥವಾ ರದ್ದುಗೊಳಿಸುವುದೇ ಹಾಗೂ ರಾಜ್ಯಕ್ಕೊಂದು ಸಂವಿಧಾನ ರಚನೆ, ರಾಜ್ಯದ ಮೇಲಣ ಒಕ್ಕೂಟದ ಅಧಿಕಾರ ವ್ಯಾಪ್ತಿ ಇವೆಲ್ಲ ವಿಷಯಗಳನ್ನೂ ಕಾಶ್ಮೀರ ಸಂವಿಧಾನ ರಚನಾ ಸಭೆ ಚರ್ಚಿಸಬೇಕು. ಹಾಗೂ ಈ ಎಲ್ಲ ವಿಷಯಗಳ ಬಗ್ಗೆ ಸಂವಿಧಾನ ರಚನಾ ಸಭೆ ಸೂಕ್ತ ನಿರ್ಧಾರ ಕೈಗೊಳ್ಳುವುದು. ಈ ನಿರ್ಧಾರಗಳನ್ನು ಭಾರತ ಸರ್ಕಾರ "ಸಂಬಂಧಪಟ್ಟವರಿಗೆಲ್ಲರಿಗೂ ಬದ್ಧ" ಎಂದು ಪರಿಗಣಿಸಬೇಕು."*

ಇದರ ಇಂಗಿತವೇನೆಂದರೆ, ಭಾರತದೊಂದಿಗೆ ಕಾಶ್ಮೀರದ ಈಗಿನ ಸೇರ್ಪಡೆ ಅಂತಿಮವಲ್ಲ ಎನ್ನುವುದು. ಎಚ್ಚೆತ್ತ ಸಚಿವರೊಬ್ಬರ ಟಿಪ್ಪಣಿ ಪ್ರಕಾರ ಶೇಖ್ ಅಬ್ದುಲ್ಲಾ ಅವರ ಈ ವ್ಯಾಖ್ಯಾನ "ನಾವು ಹೇಳಿದ್ದನ್ನು ಮೀರುವುದೇ ಆಗಿದೆ, ಅದರ ಆಚೆಗಿನದಾಗಿದೆ."

ಶೇಖ್ ಅಬ್ದುಲ್ಲಾ ತಾವು ಇಡೀ ಜಮ್ಮು-ಕಾಶ್ಮೀರದ ಜನತೆಯ ಪರವಾಗಿ ಮಾತನಾಡುತ್ತಿರುವುದಾಗಿ ಭಾವಿಸಿದ್ದರು. ಆದರೆ ಸತ್ಯ ಬೇರೆಯದೇ ಆಗಿತ್ತು. ಕಾಶ್ಮೀರ ಕಣಿವೆಯಲ್ಲಿ ಜನ ಇನ್ನೂ ಅವರನ್ನು ಪೂಜ್ಯ ಭಾವನೆಯಿಂದಲೇ ಕಾಣುತ್ತಿದ್ದರು. ಆದರೆ ಜಮ್ಮು ಪ್ರದೇಶದ ಹಿಂದೂಗಳಲ್ಲಿ ಇಷ್ಟೊಂದು ಜನಪ್ರಿಯತೆ ಇರಲಿಲ್ಲ. ಜಮ್ಮು ಭಾಗದ ಜನತೆಗೆ ಆದಷ್ಟು ಬೇಗ ತಮ್ಮ ಪ್ರದೇಶ ಭಾರತದೊಂದಿಗೆ ವಿಲೀನಗೊಳ್ಳಬೇಕೆಂಬ ಇರಾದೆ ಇತ್ತು. 1949ರಲ್ಲಿ ಜಮ್ಮುವಿನ ಹಿಂದೂಗಳ ಹಿತಾಸಕ್ತಿ ರಕ್ಷಣೆಗಾಗಿ ಪ್ರಜಾ ಪರಿಷತ್ ಎನ್ನುವ ಪಕ್ಷ ಸ್ಥಾಪಿಸಲಾಯಿತು. ಎಪ್ಪತ್ತು ವರ್ಷದ ಹಿರಿಯರಾದ ಪ್ರೇಮನಾಥ ಡೋಗ್ರಾ ಈ ಹೊಸ ಪಕ್ಷದ ಅಧ್ಯಕ್ಷರಾಗಿದ್ದರು. ಶೇಖ್ ಅಬ್ದುಲ್ಲಾ ಇವರನ್ನು ವಿಧಾನಸಭೆಯಲ್ಲಿ ಪ್ರತಿಗಾಮಿಗಳ ಕೂಟವೆಂದು ತಳ್ಳಿಹಾಕಿದರು.

1951ರ ಅಕ್ಟೋಬರ್‌ನಲ್ಲಿ ಕಾಶ್ಮೀರ ಸಂವಿಧಾನ ರಚನಾ ಸಭೆಗೆ ಚುನಾವಣೆ ನಡೆಯಿತು. ಪ್ರಜಾ ಪರಿಷತ್ ಈ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿತು. ಆದರೆ ಇದರ ಅಭ್ಯರ್ಥಿಗಳು ಸಲ್ಲಿಸಿದ ನಾಮಪತ್ರಗಳು ಕ್ರಮಬದ್ಧವಾಗಿರಲಿಲ್ಲ. ಇದಕ್ಕೆ ಪ್ರತಿಭಟಿಸಿ ಪ್ರಜಾಪರಿಷತ್ ಚುನಾವಣೆಯನ್ನು ಬಹಿಷ್ಕರಿಸಿತು. ಹೀಗಾಗಿ ಶೇಖ್ ಅಬ್ದುಲ್ಲಾ ಅವರ ನ್ಯಾಷನಲ್ ಕಾನ್ಫರೆನ್ಸ್ ಎಲ್ಲ ಎಪ್ಪತ್ತೈದು ಸ್ಥಾನಗಳನ್ನೂ ಗೆದ್ದುಕೊಂಡಿತು. ಮೂವರ ಹೊರತು ಉಳಿದೆಲ್ಲ ಅಭ್ಯರ್ಥಿಗಳೂ ಅವಿರೋಧವಾಗಿ ಆಯ್ಕೆ ಹೊಂದಿದ್ದರು.

ಸಂವಿಧಾನ ರಚನಾ ಸಭೆಯ ಅಧಿವೇಶನದ ಆರಂಭದ ದಿನ ಶೇಖ್ ಅಬ್ದುಲ್ಲಾ 90 ನಿಮಿಷಗಳ ಕಾಲ ಮಾತನಾಡಿದರು. ಇಂಗ್ಲಿಷ್‌ನ ಮುದ್ರಿತ ಭಾಷಣವನ್ನು ಓದಿದ ಅಬ್ದುಲ್ಲಾ ಅವರು ರಾಜ್ಯದ ಜನತೆಯ ಮುಂದಿರುವ ಆಯ್ಕೆಗಳನ್ನು ಒಂದೊಂದಾಗಿ ಓದಿ ಹೇಳಿದರು. ಮೊದಲನೆಯ ಆಯ್ಕೆ ಎಂದರೆ ಜಮೀನ್ದಾರರ ದಬ್ಬಾಳಿಕೆಯ, ಊಳಿಗ ಮಾನ್ಯ ಪುರೋಹಿತಶಾಹಿ ವ್ಯವಸ್ಥೆಯನ್ನುಳ್ಳ ಪಾಕಿಸ್ತಾನದೊಂದಿಗೆ ಸೇರಿಕೊಳ್ಳುವುದು. ಎರಡನೆಯದು ಭಾರತದೊಂದಿಗೆ ಸೇರಿಕೊಳ್ಳುವುದು. ಭಾರತದ ಬಗ್ಗೆ ಕಾಶ್ಮೀರ ಬಂಧುತ್ವ ಭಾವನೆಗಳನ್ನು ಹೊಂದಿದ್ದು, "ಭಾರತ ಸರ್ಕಾರ ನಮ್ಮ ಆಂತರಿಕ ಸ್ವಾಯತ್ತತೆಯಲ್ಲಿ ಎಂದೂ ಹಸ್ತಕ್ಷೇಪ ನಡೆಸಿಲ್ಲ." ಆದರೆ ಭಾರತದಲ್ಲಿ ಕೆಲವೊಂದು ಪ್ರವೃತ್ತಿಗಳು ತಮ್ಮ ಹಕ್ಕುಗಳನ್ನು ಸ್ಥಾಪಿಸುವ ಪ್ರಯತ್ನ ನಡೆಸಿದ್ದು ಭವಿಷ್ಯದಲ್ಲಿ ಭಾರತ ಒಂದು ಧರ್ಮನಿಷ್ಠ ರಾಷ್ಟ್ರವಾಗಿ ಪರಿವರ್ತನೆ ಹೊಂದಿದಲ್ಲಿ ಮುಸ್ಲಿಮರ ಹಿತಾಸಕ್ತಿಗೆ ಗಂಡಾಂತರವುಂಟಾಗಬಹುದು. ಆದರೆ, ಇನ್ನೊಂದು ದೃಷ್ಟಿಯಿಂದ ನೋಡಿದಲ್ಲಿ ಕಾಶ್ಮೀರ ಭಾರತದೊಂದಿಗೆ ಸೇರಿಕೊಳ್ಳುವುದರಿಂದ ಹಿಂದೂ-ಮುಸ್ಲಿಮರಲ್ಲಿ ಸೌಹಾರ್ದತೆಯುಂಟಾಗಿ ಕೋಮುವಾದಿಗಳ ಪ್ರಾಮುಖ್ಯ, ಪ್ರಭಾವಗಳು ತಗ್ಗಬಹುದು. ಕೊನೆಯುಸಿರೆಳೆಯುವ ಮುಂಚೆ ಗಾಂಧೀಜಿ "ಯಾವ ಮೂಲದಿಂದ ಗಂಗೆ ಹರಿದು ಬರುವಳೋ ಆ ಪರ್ವತದತ್ತ ನಾನು ಮೇಲ್ನೋಟ ಬೀರುವೆ" ಎಂದು ಹೇಳಿದ್ದರು. ಈ ಮಾತಿನಲ್ಲಿ ತಪ್ಪೇನಿಲ್ಲ ಎಂದು ಶೇಖ್ ಅಬ್ದುಲ್ಲಾ ವಾದಿಸಿದರು.

ಭಾಷಣದ ಕೊನೆಯಲ್ಲಿ ಶೇಖ್ ಅಬ್ದುಲ್ಲಾ "ಪೂರ್ವದ ಸ್ವಿಟ್ಜರ್ಲೆಂಡ್ ಆಗಿ ಉಳಿಯುವ" ವಿಷಯಕ್ಕೆ ಬಂದರು. ಎರಡೂ ರಾಷ್ಟ್ರಗಳ ಜೊತೆ ಸೇರಿಕೊಳ್ಳದೇ ಪ್ರತ್ಯೇಕವಾಗಿದ್ದುಕೊಂಡು ಭಾರತ-ಪಾಕಿಸ್ತಾನಗಳೊಂದಿಗೆ ಮೈತ್ರಿಯಿಂದಿರುವುದು ಮೂರನೆಯ ಆಯ್ಕೆ. ಆದರೆ ಇದು ಆಕರ್ಷಣೀಯ ಆಯ್ಕೆಯಾದರೂ ವ್ಯಾವಹಾರಿಕವಾಗಿ ಸಾಧ್ಯವಿಲ್ಲ. ಭೂವೇಷ್ಟಿತ ಸಣ್ಣ ರಾಷ್ಟ್ರವೊಂದರಿಂದ ತನ್ನ ಸಾರ್ವಭೌಮತ್ವ ಕಾಪಾಡಿಕೊಳ್ಳುವುದು ಹೇಗೆ ಸಾಧ್ಯವಾಗುತ್ತದೆ? ಈ ಪ್ರಶ್ನೆಯನ್ನು ಮುಂದಿಟ್ಟು ಶೇಖ್ ಅಬ್ದುಲ್ಲಾ ಅವರು ಹಿಂದಿನ ಘಟನೆಯೊಂದನ್ನು ಸ್ಮರಿಸಿಕೊಂಡರು. 1947ರ ಆಗಸ್ಟ್ 15ರಿಂದ 22ರವರೆಗೆ ಕಾಶ್ಮೀರ, ಭಾರತ-ಪಾಕಿಸ್ತಾನಗಳೆರಡರಿಂದಲೂ ಸ್ವತಂತ್ರವಾಗಿತ್ತು. ಆಗ ಗುಡ್ಡಗಾಡು ಜನರ ಆಕ್ರಮಣದಿಂದ ಅದರ ಸ್ವಾತಂತ್ರ್ಯ ಹರಣವಾಗಿತ್ತು. ಇದನ್ನು ನೆನಪಿಸಿದ ಶೇಖರು "ಕಾಶ್ಮೀರದ ಸಾರ್ವಭೌಮತ್ವ ಮತ್ತೊಮ್ಮೆ ಇಂಥ ಆಕ್ರಮಣಕ್ಕೆ ತುತ್ತಾಗುವುದಿಲ್ಲ ಎನ್ನುವುದರ ಭರವಸೆಯಾದರು ಏನಿದೆ?" ಎಂದು ಕೇಳಿದರು.

ಸ್ವತಂತ್ರವಾಗಿ ಉಳಿಯುವುದು ವ್ಯಾವಹಾರಿಕವಾಗಿ ಕಾರ್ಯಸಾಧ್ಯವಲ್ಲ ಎಂಬ ಕಾರಣಕ್ಕಾಗಿ ಅಬ್ದುಲ್ಲಾ ಸ್ವಾತಂತ್ರ್ಯದ ಆಯ್ಕೆಯನ್ನು ತಿರಸ್ಕರಿಸಿದರು. ಪಾಕಿಸ್ತಾನದ ಜೊತೆ ಸೇರಿಕೊಳ್ಳುವುದು ಅನೈತಿಕವಾಗುತ್ತದೆ ಎಂಬ ಕಾರಣಕ್ಕಾಗಿ ಈ ಆಯ್ಕೆಯನ್ನೂ ತಿರಸ್ಕರಿಸಿದರು. ಕಾಶ್ಮೀರಿಗಳು ಭಾರತದೊಂದಿಗೆ ಸೇರಿಕೊಳ್ಳಲು ಅಡ್ಡಿಯಿಲ್ಲ. ಆದರೆ ಈ ಆಯ್ಕೆ ಶರತ್ತುಗಳಿಂದ ಕೂಡಿರಬೇಕು. ಈ ಶರತ್ತುಗಳಲ್ಲಿ ಮುಖ್ಯವಾದದ್ದು: ಜಮ್ಮು-ಕಾಶ್ಮೀರ ರಾಜ್ಯ ಸಂಸ್ಥಾನದ

ಧ್ವಜವನ್ನು ಉಳಿಸಿಕೊಳ್ಳಲು ಅವಕಾಶವಿರಬೇಕು ಹಾಗೂ ಸರ್ಕಾರದ ಮುಖ್ಯಸ್ಥ "ಪ್ರಧಾನಮಂತ್ರಿಯ" ಅಂಕಿತ ಹೊಂದಿರಬೇಕು. ಜಮ್ಮುವಿನ ಪ್ರಜಾ ಪರಿಷತ್ ಈ ಎರಡು ಶರತ್ತುಗಳನ್ನೂ ಒಪ್ಪಿಕೊಳ್ಳಲಿಲ್ಲ. ಕಾಶ್ಮೀರ ಸಂಪೂರ್ಣವಾಗಿ ಭಾರತದೊಂದಿಗೆ ಬೇಷರತ್ತಾಗಿ ವಿಲೀನಗೊಳ್ಳಬೇಕೆಂದು ಆಗ್ರಹಪಡಿಸಿದ ಪ್ರಜಾ ಪರಿಷತ್ "ಏಕ್ ವಿಧಾನ್, ಏಕ್ ಪ್ರಧಾನ್, ಏಕ್ ನಿಶಾನ್" (ಒಂದೇ ಸಂವಿಧಾನ, ಒಬ್ಬರೇ ಪ್ರಧಾನಮಂತ್ರಿ, ಒಂದೇ ಬಾವುಟ) ಎನ್ನುವ ಘೋಷಣೆಯನ್ನು ಅಂಗೀಕರಿಸಿತು.

1952ರ ಜನವರಿಯಲ್ಲಿ ಶೇಖ್ ಅಬ್ದುಲ್ಲಾ ಜಮ್ಮುವಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಬೇಕಿತ್ತು. ಈ ಸಭೆಯ ಸ್ಥಳದಲ್ಲಿ ಭಾರತದ ತ್ರಿವರ್ಣ ಧ್ವಜದ ಜೊತೆಗೆ ನ್ಯಾಷನಲ್ ಕಾನ್ಫರೆನ್ಸ್ ಧ್ವಜವನ್ನೂ ಆರೋಹಣ ಮಾಡಿದ್ದರ ವಿರುದ್ಧ ಹಿಂದೂ ವಿದ್ಯಾರ್ಥಿಗಳು ಪ್ರತಿಭಟಿಸಿದರು. ಪ್ರತಿಭಟಿಸಿದ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ನಂತರ ಇವರುಗಳನ್ನು ಕಾಲೇಜುಗಳಿಂದ ಉಚ್ಚಾಟಿಸಲಾಯಿತು. ಈ ವಿದ್ಯಾರ್ಥಿಗಳನ್ನು ಬೆಂಬಲಿಸಿ ಪ್ರತಿಭಟನಾ ಪ್ರದರ್ಶನಗಳು ನಡೆದವು. ಈ ಪ್ರತಿಭಟನೆ ಸೆಕ್ರೆಟೇರಿಯಟ್‌ಗೆ ಮೆರವಣಿಗೆ ಹೋಗುವುದರಲ್ಲಿ ಪರ್ಯವಸಾನಗೊಂಡಿತು. ಮೆರವಣಿಗೆಕಾರರು ಕಚೇರಿಗಳಿಗೆ ನುಗ್ಗಿ ಪೀಠೋಪಕರಣಗಳನ್ನು ಧ್ವಂಸ ಮಾಡಿದರು. ಪೊಲೀಸರ ಪ್ರವೇಶವಾಯಿತು. 72 ಗಂಟೆ ಕರ್ಫ್ಯೂ ವಿಧಿಸಲಾಯಿತು. ಪ್ರಜಾಪರಿಷತ್‌ನ ನೂರಾರು ಸದಸ್ಯರನ್ನು ಬಂಧಿಸಲಾಯಿತು. ವಯೋವೃದ್ಧ ನಾಯಕ ಪ್ರೇಂನಾಥ ಡೋಗ್ರಾ ಅವರನ್ನು ಅವರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳದಿದ್ದರೂ ಬಂಧಿಸಲಾಯಿತು.

ಇದಕ್ಕೆ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಯಬಹುದೆಂದು ಹೆದರಿದ ದೆಹಲಿ ಸರ್ಕಾರ ಪ್ರಜಾ ಪರಿಷತ್ ನಾಯಕರುಗಳನ್ನು ಬಿಡುಗಡೆ ಮಾಡುವಂತೆ ಕಾಶ್ಮೀರ ಸರ್ಕಾರದ ಮನ ಒಲಿಸಿತು. ಶೇಖ್ ಅಬ್ದುಲ್ಲಾ ಒಲ್ಲದ ಮನಸ್ಸಿನಿಂದ ಇದಕ್ಕೆ ಒಪ್ಪಿಕೊಂಡರು. ಏಪ್ರಿಲ್ 10ರಂದು ಅವರು ಭಾಷಣ ಮಾಡಿ ಭಾರತದ ಸಂವಿಧಾನವನ್ನು ಒಪ್ಪಿಕೊಳ್ಳುವುದಾಗಿ ಘೋಷಿಸಿದರು. "ಈ ಸಂವಿಧಾನ ಆಖೈರಾಗಿ ಕೋಮುವಾದವನ್ನು ಗುಂಡಿ ತೆಗೆದು ಹೂತುಹಾಕಿದೆ. ಇದರಿಂದ ನಮಗೆ ತೃಪ್ತಿಯಾಗಿದೆ" ಎಂದು ಶೇಖ್ ಅಬ್ದುಲ್ಲಾ ನೆಮ್ಮದಿಯಿಂದ ನುಡಿದರು. ಆದರೆ ಈ ನೆಮ್ಮದಿಯ ನಡುವೆಯೇ "ಆದರೆ ಒಂದು ಅಂಶ ನಮಗೆ ಖಾತ್ರಿಯಾಗಿಲ್ಲ. ಉದಾಹರಣೆಗೆ ಪಂಡಿತ್ ನೆಹರೂ ಅವರಿಗೆ ಏನಾದರೂ ಆದರೆ ನಮ್ಮ ಗತಿ ಏನಾಗುವುದೋ ಎನ್ನುವುದು ಕಾಶ್ಮೀರಿಗಳ ಭೀತಿಯಾಗಿದೆ" ಎಂದು ವಿಷಣ್ಣತೆಯಿಂದ ನುಡಿದರು.

ಶೇಖ್ ಅಬ್ದುಲ್ಲಾ ಈ ಮಾತುಗಳನ್ನಾಡಿದ ಸ್ಥಳ ಮತ್ತು ಕಾಲ ಎರಡೂ ಮಹತ್ವದ್ದಾಗಿತ್ತು. ಅವರು ಈ ಭಾಷಣ ಮಾಡಿದ್ದು ಪಾಕಿಸ್ತಾನ ಗಡಿಯಿಂದ ನಾಲ್ಕು ಮೈಲಿ ಅಂತರದಲ್ಲಿರುವ ರಣಬೀರ್ ಸಿಂಗ್‌ಪುರ ಎಂಬ ಪಟ್ಟಣದಲ್ಲಿ. ಆಗ ತಾನೆ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು ಈ ಫಲಿತಾಂಶ ನೆಹರೂ ನಾಯಕತ್ವ

ಮತ್ತು ಅವರ ಸರ್ಕಾರದ ನೀತಿಗಳ ಸಮರ್ಥನೆಯಾಗಿತ್ತು. ಅಬ್ದುಲ್ಲಾರ ಭಾಷಣ ಎಲ್ಲೆಡೆ ವರದಿಯಾಯಿತು ಹಾಗೂ ಸಾಕಷ್ಟು ಆತಂಕವನ್ನೂ ಉಂಟು ಮಾಡಿತು. ಭಾರತದ ಜಾತ್ಯತೀತತೆಯನ್ನು ಕೊಂಡಾಡಿದ, ಜಾತ್ಯತೀತ ನೀತಿಗಾಗಿ ಭಾರತವನ್ನು ಪ್ರಶಂಶಿಸಿದ ಅಬ್ದುಲ್ಲಾ ಅವರು ಧಿಡೀರನೆ ಏಕೆ ಸಂದೇಹಗ್ರಸ್ತರಾದರು?

ಶೇಖ್ ಅಬ್ದುಲ್ಲಾರ ಮನಸ್ಸಿನಲ್ಲಿ ಬದಲಾವಣೆಯಾದ ಸಮಯದಲ್ಲೇ ಬ್ರಿಟನ್ನಿನ ಹಿರಿಯ ಪತ್ರಕರ್ತ ಇಯಾವ್ ಸ್ಟೀಫನ್ಸ್ ಕಾಶ್ಮೀರಕ್ಕೆ ಭೇಟಿಕೊಟ್ಟಿದ್ದರು. 1946-47ರ ಸಂಕಷ್ಟ ಕಾಲದಲ್ಲಿ ಇಯಾನ್ ಸ್ಟೀಫನ್ಸ್ ಕಲ್ಕತ್ತೆಯ "ಸ್ಟೇಟ್ಸ್‌ಮನ್" ಪತ್ರಿಕೆಯ ಸಂಪಾದಕರಾಗಿದ್ದರು. ಇಯಾನ್ ಸ್ಟೀಫನ್ಸ್ ಪಾಕಿಸ್ತಾನದ ಕಟ್ಟಾ ಬೆಂಬಲಿಗರಾಗಿದ್ದರು. ಮುಸ್ಲಿಮರು ಬಹುಸಂಖ್ಯಾತರಾಗಿರುವ ಕಾಶ್ಮೀರ ನ್ಯಾಯೋಚಿತವಾಗಿ ಪಾಕಿಸ್ತಾನಕ್ಕೇ ಸೇರಿದ ಭಾಗವೆಂಬುದು ಈ ಪತ್ರಕರ್ತನ ನಿಲುವಾಗಿತ್ತು. ಕಾಶ್ಮೀರದ ನಾಯಕರ ಉಭಯ ಸಂಕಟದ ಅರಿವು ಇವನಿಗಿತ್ತು. ಸ್ಟೀಫನ್ಸ್ ಶೇಖ್ ಅಬ್ದುಲ್ಲಾ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದರು. "ಶೇಖ್ ಅಬ್ದುಲ್ಲಾ ಧೈರ್ಯವಂತ, ಬುದ್ಧಿವಂತ, ಒಳ್ಳೆಯ ತತ್ವಗಳಿಗೆ ಬದ್ಧರಾದವರು. ನಮ್ಮೆಲ್ಲನೇಕರಂತೆ, 1947ರ ಅಸಾಧಾರಣವಾದ, ವ್ಯಾಪಕವಾದ, ರಭಸಗತಿಯ, ಗೊಂದಲಮಯವಾದ ಬದಲಾವಣೆಗಳಿಗೆ ಬಲಿಪಶುವಾದವರು. ಈಗ ದಾರಿತೋಚದೆ ದಿಗ್ಭ್ರಾಂತರಾಗಿ ನಿಂತಿದ್ದಾರೆ" ಎಂಬುದು ಸ್ಟೀಫನ್ಸ್‌ನ ಭಾವನೆಯಾಗಿತ್ತು. ಅಬ್ದುಲ್ಲಾ ಅವರ ಆಡಳಿತ ಭಾರತದ ಬಯನೆಟ್‌ಗಳಿಂದ ಎತ್ತಿ ಹಿಡಿಯಲ್ಪಟ್ಟ ಆಡಳಿತ, ಈ ಬಯನೆಟ್‌ಗಳು ಮುಖ್ಯವಾಗಿ ಹಿಂದೂ ಬಯನೆಟ್‌ಗಳೆ ಆಗಿವೆ. ಅಬ್ದುಲ್ಲಾರ ಆಡಳಿತ ಅನೇಕ ರೀತಿಯಲ್ಲಿ ಉತ್ತಮ ಆಡಳಿತವೇ ಆಗಿತ್ತು. ಶಕ್ತಿ ಉತ್ಸಾಹ ಆದರ್ಶಗಳಿಂದ ಕೂಡಿತ್ತು, ಕೋಮುವಾದಿಯಾಗಿರಲಿಲ್ಲ, ಕೃಷಿಯಲ್ಲಿ ಸುಧಾರಣೆ ತಂದಿತ್ತು ಎಂದೆಲ್ಲಾ ವಿಶ್ಲೇಷಿಸಿರುವ ಸ್ಟೀಫನ್ಸ್ ತನ್ನ ಲೇಖನವನ್ನು "ಆದರೆ ಇತಿಹಾಸದ ಕಣ್ಣುಗಳಲ್ಲಿ ಇದೊಂದು ಅಸಹಜ ನಿರ್ಧಾರವಾಗಿ ಸಾಬೀತುಗೊಳ್ಳಬಹುದು" ಎನ್ನುವ ಮಾತುಗಳಿಂದ ಮುಕ್ತಾಯಗೊಳಿಸಿದ್ದಾರೆ.

III

ಒಂದು ಕಾಲಕ್ಕೆ, ಕಾಶ್ಮೀರದಲ್ಲಿ ಅಬ್ದುಲ್ಲಾ ನೆಹರೂ ಆಪ್ತಸಖರಾಗಿದ್ದರು. ಆದರೆ 1952ರ ವೇಳೆಗೆ ಭಾರತದಲ್ಲಿ ನೆಹರೂ ಅವರೇ ಅಬ್ದುಲ್ಲಾರ ಆಪ್ತಸಖರಾಗಿದ್ದರು. ತಮ್ಮ ಅಭಿಪ್ರಾಯದಂತೆ, ಭಾರತ ಮತ್ತು ಹಿಂದೂ ಕೋಮುವಾದದ ಅಟ್ಟಹಾಸ ವಿಜಯ ಇವೆರಡರ ನಡುವೆ ಪ್ರಧಾನಮಂತ್ರಿ ಮಾತ್ರ ಅಡ್ಡವಾಗಿದ್ದಾರೆ ಎಂದು ಶೇಖ್ ಅಬ್ದುಲ್ಲಾ ಖಡಾಖಂಡಿತವಾಗಿ ಹೇಳಿದ್ದರು.

ಏತನ್ಮಧ್ಯೆ ಕಾಶ್ಮೀರದ ನಿರ್ದಿಷ್ಟ ಸ್ಥಾನಮಾನ ಕುರಿತು ಚರ್ಚೆ ಮುಂದುವರಿದಿತ್ತು. ಜುಲೈನಲ್ಲಿ ಶೇಖ್ ಅಬ್ದುಲ್ಲಾ ನೆಹರೂರನ್ನು ಹಾಗೂ ಇತರ ಸಚಿವರನ್ನು ಭೇಟಿಮಾಡಿ ಮತ್ತೊಂದು ಸುತ್ತು ಮಾತುಕತೆ ನಡೆಸಿದರು. ಇದರ ಫಲ: ದೆಹಲಿ ಒಪ್ಪಂದ. ಈ

ಒಪ್ಪಂದದನ್ವಯ ಕಾಶ್ಮೀರಿಗಳು ಭಾರತದ ಪೂರ್ಣ ಪೌರರಾಗುವರು. ಪ್ರತಿಯಾಗಿ ಕಾಶ್ಮೀರ, ಒಕ್ಕೂಟದ ಉಳಿದ ರಾಜ್ಯಗಳಿಗಿಂತ ಹೆಚ್ಚಿನ ಸ್ವಾಯತ್ತತೆ ಪಡೆಯುವುದು. ಹೀಗಾಗಿ, ನ್ಯಾಷನಲ್ ಕಾನ್ಫರೆನ್ಸ್ ವಿನ್ಯಾಸಗೊಳಿಸಿರುವ ಹೊಸ ಧ್ವಜ, ರಾಷ್ಟ್ರ ಧ್ವಜದ ಪಕ್ಕದಲ್ಲೇ ಹಾರಾಡುವುದು. ಶ್ರೀನಗರದ ಒಪ್ಪಿಗೆ ಇಲ್ಲದೆ ದೆಹಲಿ, ಆಂತರಿಕ ದೊಂಬಿಗಳನ್ನು ಹತ್ತಿಕ್ಕಲು ತನ್ನ ಸೇನಾಪಡೆಗಳನ್ನು ಕಳುಹಿಸುವಂತಿಲ್ಲ. ಆಸ್ತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೇ ಅಧಿಕಾರ ಬಿಟ್ಟುಕೊಡಲಾಗಿತ್ತು. ಇದರಲ್ಲಿ ಕೇಂದ್ರ ಮಧ್ಯ ಪ್ರವೇಶ ಮಾಡುವಂತಿಲ್ಲ. ಇದರ ಪ್ರಕಾರ ಮಹತ್ವದ ಅಂಶವೆಂದರೆ ಜಮ್ಮು ಕಾಶ್ಮೀರದ ಹೊರಗಿನವರು ಇಲ್ಲಿ ಭೂಮಿ ಖರೀದಿಸುವುದು, ಆಸ್ತಿ ಮಾಡುವುದು ನಿಷಿದ್ಧ. ಬೃಹತ್ ಪ್ರಮಾಣದ ವಲಸೆ ಮೂಲಕ ಕಾಶ್ಮೀರ ಕಣಿವೆಯ ಅಸ್ಮಿತೆಯಲ್ಲಿ ಬದಲಾವಣೆಗಳಾಗದಂತೆ ತಡೆಯುವುದು ಇದರ ಮುಖ್ಯ ಉದ್ದೇಶ.

ಇವು ಕೇಂದ್ರ ಸರ್ಕಾರ ತೋರಿದ ಪ್ರಮುಖ ರಿಯಾಯಿತಿಗಳು. ಆದರೆ ಅಬ್ದುಲ್ಲಾ ಇನ್ನೂ ಹೆಚ್ಚಿನ ಅಧಿಕಾರ ಅಪೇಕ್ಷಿಸಿದ್ದರು. ಕೇಂದ್ರಕ್ಕೆ ಏನೆಲ್ಲ ಅಧಿಕಾರ ಬಿಟ್ಟುಕೊಡಬಹುದು ಹಾಗೂ ಕಾಶ್ಮೀರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿನ ಅಧಿಕಾರವ್ಯಾಪ್ತಿ ಏನು-ಎಷ್ಟು ಎಂಬುದನ್ನು ರಾಜ್ಯವೇ ತೀರ್ಮಾನಿಸತಕ್ಕದ್ದೆಂದು ಅಬ್ದುಲ್ಲಾ ಸಂವಿಧಾನ ರಚನಾ ಸಭೆಯ ಭಾಷಣದಲ್ಲಿ ಹೇಳಿದ್ದರು. ತಾವು ಹೇಳಿದಂತೆ, ಈ ಹಾದಿ ಅನುಸರಿಸುವ ಇಷ್ಟವಿಲ್ಲದಿದ್ದಲ್ಲಿ, ತಂದೆ, ಪದಚ್ಯುತ ಮಹಾರಾಜ ಹರಿಸಿಂಗರ ಗತಿಯೇ ನಿಮ್ಮ ಗತಿಯೂ ಆಗುತ್ತದೆ ಎಂದು ಯುವರಾಜ ಕರಣ್‌ಸಿಂಗರಿಗೆ ಸ್ಪಷ್ಟಪಡಿಸಿದ್ದರು. ಪ್ರತಿಗಾಮಿ ಶಕ್ತಿಗಳನ್ನು ತ್ಯಜಿಸಿ ಜನಸಾಮಾನ್ಯರ ಕಷ್ಟಸುಖಗಳಲ್ಲಿ ಭಾಗಿಯಾಗುವುದು ಉಚಿತವೆಂದು ಕರಣ್‌ಸಿಂಗರಿಗೆ ಅಬ್ದುಲ್ಲಾ ತಿಳಿಸಿದರು. "ಕೆಲವೇ ಮಂದಿ ಬೆಂಗಲಿಗರ ಸಹಾಯದಿಂದ ಅಧಿಕಾರ ಉಳಿಸಿಕೊಳ್ಳಬಹುದೆಂಬ ಭ್ರಮೆಯಲ್ಲಿದ್ದರೆ, ಅದು ಸರಿಯಲ್ಲ, ತಪ್ಪು ಕಲ್ಪನೆ" ಎಂದು ಎಚ್ಚರಿಸಿಯೂ ಇದ್ದರು.

ಇಲ್ಲಿ ಪ್ರತಿಗಾಮಿ ಶಕ್ತಿಗಳು ಎಂಬ ಪ್ರಸ್ತಾಪ ಜಮ್ಮುವಿನ ಹಿಂದೂಗಳನ್ನು ಕುರಿತಾಗಿತ್ತು. ಜಮ್ಮುವಿನ ಹಿಂದೂಗಳು ಮತ್ತೆ ಚಳವಳಿ ಆರಂಭಿಸಿದ್ದರು. ಈ ಚಳವಳಿಯಲ್ಲಿ ಅವರು "ಒಂದೇ ರಾಷ್ಟ್ರದಲ್ಲಿ ಎರಡು ಸಂವಿಧಾನ, ಇಬ್ಬರು ಪ್ರಧಾನಿಗಳು ಮತ್ತು ಎರಡು ಧ್ವಜಗಳಿಗೆ ಖಂಡಿತಾ ಅವಕಾಶವಿಲ್ಲ, ಇದಕ್ಕೆ ನಾವು ಬಿಡುವುದಿಲ್ಲ" ಎಂದು ಮತ್ತೆ ದನಿ ಎತ್ತಿದ್ದರು. ಸಭೆ, ಮೆರವಣಿಗೆ, ಪೊಲೀಸರೊಂದಿಗೆ ಘರ್ಷಣೆ, ದಿನನಿತ್ಯದ ಘಟನೆಗಳಾದವು. ಜಮ್ಮುವಿನ ಬಂದೀಖಾನೆಗಳು ಪ್ರಜಾಪರಿಷತ್ ಚಳವಳಿಗಾರರಿಂದ ತುಂಬಿಹೋಗಿದ್ದವು.

ಜಮ್ಮುವಿನ ಹಿಂದೂಗಳಿಗೂ ರಾಜಮನೆತನಕ್ಕೂ ಗಾಢವಾದ ಆಪ್ತ ನಂಟಿತ್ತು. ಮಹಾರಾಜ ಹರಿಸಿಂಗರ ಬಗ್ಗೆ ಗೌರವಾಭಿಮಾನಗಳು ಇವರಲ್ಲಿ ಹೆಚ್ಚಾಗಿದ್ದವು. ಹರಿಸಿಂಗರ ಪದಚ್ಯುತಿಗೆ ಇವರ ವಿರೋಧವಿತ್ತು. ಕರಣ್‌ಸಿಂಗ್ ತಂದೆಗೆ ನಿಷ್ಠರಾಗಿ ಉಳಿಯದೇ ಅವರ ಸ್ಥಾನಕ್ಕೆ ಬಂದದ್ದು ಜಮ್ಮುವಿನ ಜನರಲ್ಲಿ ತೀವ್ರ ಅಸಮಾಧಾನವುಂಟು ಮಾಡಿತ್ತು. ಜೊತೆಗೆ ಆಸ್ತಿ, ಹಣಕಾಸು ವಿಷಯಗಳಲ್ಲೂ ಜಮ್ಮು ಜನತೆ ಅಧೀರರಾಗಿದ್ದರು. ಕಾಶ್ಮೀರ ಕಣಿವೆಯಲ್ಲಿ

ಈಚೆಗೆ ಜಾರಿಗೆ ತರಲಾದ ಭೂಸುಧಾರಣೆ ಜಮ್ಮುವಿಗೂ ಬರಬಹುದೆಂದು ಅವರು ಹೆದರಿದ್ದರು. ಕಣಿವೆಯಲ್ಲಿ ಮಿತಿಮೀರಿ ಭೂಮಿ ಹೊಂದಿದ್ದ ಜಮೀನ್ದಾರರಿಂದ ಹೆಚ್ಚುವರಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡಿತ್ತು. ಒಂದು ಕುಟುಂಬಕ್ಕೆ 22 ಎಕರೆ ಮಾತ್ರ ಭೂಮಿ ಹೊಂದಿರುವ ಹಕ್ಕಿದೆ ಎಂದು ಮಿತಿ ವಿಧಿಸಿದ್ದರಿಂದ ಅನೇಕ ಮಂದಿ ಭಾರಿ ನಷ್ಟವನ್ನು ಅನುಭವಿಸಬೇಕಾಯಿತು. ಸರ್ಕಾರ ವಶಪಡಿಸಿಕೊಂಡ ಹೆಚ್ಚುವರಿ ಭೂಮಿ ಬಹುತೇಕ ಮಧ್ಯಮ ವರ್ಗದ ರೈತಾಪಿ ಜನರದಾಗಿತ್ತು. ಇದೇ ಪ್ರಮಾಣದಲ್ಲಿ ಭೂರಹಿತ ಕೃಷಿಕಾರ್ಮಿಕರಿಗೆ ಅನುಕೂಲವಾಗಿರಲಿಲ್ಲ. ಆದಾಗ್ಯೂ ಇಲ್ಲಿ, ಭಾರತದ ಇತರೆಡೆಗಳಿಗಿಂತ ಭೂ ಸುಧಾರಣೆ ಯಶಸ್ವಿಯಾಗಿತ್ತು.

ಕಾಶ್ಮೀರ ಕಣಿವೆಯಲ್ಲಿ ಜಮೀನ್ದಾರರಲ್ಲಿ ಹೆಚ್ಚು ಮಂದಿ ಹಿಂದೂಗಳೇ ಆಗಿದ್ದರು. ಇದರಿಂದಾಗಿ, ಸಮಾಜವಾದ ಧ್ಯೇಯದ ಭೂ ಮರುವಿತರಣೆಗೆ ಧಾರ್ಮಿಕ ಬಣ್ಣ ಬಂತು. ಇದು ಬಹುಶಃ ಅನಿವಾರ್ಯವಾಗಿತ್ತೇನೋ. ಶೇಖ್ ಅಬ್ದುಲ್ಲಾ ಅವರೇನೋ ಪ್ರಾಮಾಣಿಕವಾಗಿ ಜಾತ್ಯತೀತರಾಗಿದ್ದರು. ಆದರೆ ಅವರ ಐತಿಹಾಸಿಕ ಪರಂಪರೆಯನ್ನು ಅಳಿಸಿ ಹಾಕುವಂತಿರಲಿಲ್ಲ. ಒಂದು ಕಾಲಕ್ಕೆ ರಾಜ್ಯ ಜಮ್ಮುವಿನ ಡೋಗ್ರಾಗಳ ಹತೋಟಿಯಲ್ಲಿತ್ತು. ಈಗ ಅದು ನ್ಯಾಷನಲ್ ಕಾನ್ಫರೆನ್ಸ್ ಕೈಯ್ಯಲ್ಲಿದೆ. ನ್ಯಾಷನಲ್ ಕಾನ್ಫರೆನ್ಸ್ ನೆಲೆ ಇರುವುದು ಕಣಿವೆಯಲ್ಲಿ; ಅದರ ನಾಯಕ ಹಾಗೂ ಬಹುಮಟ್ಟಿನ ಸದಸ್ಯರು ಮುಸ್ಲಿಮರು.

IV

1950-52ರ ಅವಧಿಯಲ್ಲಿ ಭಾರತ ಹೊಸ ಸಂವಿಧಾನದ ಪರಿಚಯ ಮಾಡಿಕೊಂಡಿತು. ಮೊದಲ ಸಾರ್ವತ್ರಿಕ ಚುನಾವಣೆಯೂ ನಡೆಯಿತು. ಜಮ್ಮು ಕಾಶ್ಮೀರವನ್ನು ಎರಡು ಬಗೆಯ ಅನಿಶ್ಚಿತತೆ ಕಾಡುತ್ತಿತ್ತು. ಒಂದು ಕೇಂದ್ರ ಮತ್ತು ರಾಜ್ಯದ ನಡುವಣ ಸಂಬಂಧ ಇತ್ಯರ್ಥವಾಗಿರಲಿಲ್ಲ. ಹಾಗೂ ಮುಸ್ಲಿಂ ಪ್ರಾಬಲ್ಯದ ಕಣಿವೆಯಲ್ಲಿ ಮತ್ತು ಹಿಂದೂ ಪ್ರಾಬಲ್ಯದ ಜಮ್ಮು ಪ್ರದೇಶದಲ್ಲಿ ಘರ್ಷಣೆಗಳು ಹೆಚ್ಚುತ್ತಿದ್ದವು. ರಾಜಕಾರಣಿಯೊಬ್ಬ ಯಾವುದೋ ಒಂದು ಕಾರಣಕ್ಕಾಗಿ ಹೋರಾಟದ ಕಣಕ್ಕೆ ಧುಮುಕಲು ಪ್ರಚೋದಿಸುವಂಥ ವಾತಾವರಣವೊಂದು ಸೃಷ್ಟಿಯಾಗಿತ್ತು. ಡಾ. ಶ್ಯಾಂಪ್ರಸಾದ್ ಮುಖರ್ಜಿ ಈ ಅವಕಾಶವನ್ನು ಬಾಚಿಕೊಂಡರು. ಜಮ್ಮುವಿನ ಡೋಗ್ರಾಗಳ ಹೋರಾಟದ ಮುಂಚೂಣಿಯಲ್ಲಿ ನಿಂತರು.

ಡಾ. ಶ್ಯಾಂಪ್ರಸಾದ್ ಮುಖರ್ಜಿಯವರು ನೆಹರೂ ಮಂತ್ರಿಮಂಡಲಕ್ಕೆ ರಾಜೀನಾಮೆಯಿತ್ತು ಹೊಸ ಪಕ್ಷವಾದ ಭಾರತೀಯ ಜನಸಂಘದ ಅಧ್ಯಕ್ಷರಾಗಿದ್ದರು. ಅವರ ಹೊಸ ಪಕ್ಷ ಸಾರ್ವತ್ರಿಕ ಚುನಾವಣೆಯಲ್ಲಿ, ಲೋಕಸಭೆಯಲ್ಲಿ ಕೇವಲ ಮೂರು ಸ್ಥಾನಗಳಿಸಿ ದಯನೀಯ ಸೋಲನ್ನು ಅನುಭವಿಸಿತ್ತು. ಡಾ. ಮುಖರ್ಜಿಯವರಿಗೆ ಮತ್ತು ಜನಸಂಘಕ್ಕೆ ಕಾಶ್ಮೀರದ ಪರಿಸ್ಥಿತಿ ವರವಾಗಿ ಪರಿಣಮಿಸಿತ್ತು. ಚುನಾವಣೆಯ ಸೋಲನ್ನು ಮರೆತು ಮತ್ತೆ ಪಕ್ಷದ

ಕಾರ್ಯಕರ್ತರನ್ನು ಹುರಿದುಂಬಿಸಿ ಪಕ್ಷವನ್ನು ರಾಷ್ಟ್ರರಂಗದಲ್ಲಿ ಪ್ರತಿಷ್ಠಾಪಿಸಲು ಇದೊಂದು ಸದವಕಾಶವಾಗಿತ್ತು.

ಡಾ. ಶ್ಯಾಂಪ್ರಸಾದ್ ಮುಖರ್ಜಿಯವರು ಸಂಸತ್ತಿನಲ್ಲಿ ಸರ್ಕಾರದ ಮೇಲೆ ಟೀಕಾ ಪ್ರಹಾರವನ್ನೇ ಮಾಡಿದರು. "ಶೇಖ್ ಅಬ್ದುಲ್ಲಾರನ್ನು ರಾಜಾಧಿರಾಜರನ್ನಾಗಿ ಮಾಡಿದ್ದು ಯಾರು?" ಎಂದು ವ್ಯಂಗ್ಯವಾಡಿದರು. "ರಾಷ್ಟ್ರಧ್ವಜ ಮತ್ತು ಪ್ರಾಂತ್ಯಧ್ವಜವನ್ನು ಸಮಾನ ಗೌರವದಿಂದ ಕಾಣುವುದಾಗಿ ಶೇಖ್ ಅಬ್ದುಲ್ಲಾ ಹೇಳಿದ್ದರು. ಇದು ದ್ವಂದ್ವ ನಿಷ್ಠೆಯನ್ನು ತೋರಿಸುತ್ತದೆ. ಸಾರ್ವಭೌಮ ರಾಷ್ಟ್ರಕ್ಕೆ ಇದು ಅಂಗೀಕಾರಾರ್ಹವಲ್ಲ. ಕಣಿವೆಗೆ ಸೀಮಿತ ಸೇರ್ಪಡೆ ಬೇಕಾಗಿದ್ದರೆ, ಪೂರ್ಣ ಸೇರ್ಪಡೆಯಾಗಲು ಜಮ್ಮು ಮತ್ತು ಲಡಾಖ್‌ಗೆ ಅವಕಾಶ ನೀಡಬೇಕು. ಯಾವುದೇ ವಿಶೇಷ ರಿಯಾಯಿತಿಗಳನ್ನು ನೀಡದೇ ಇಡೀ ರಾಜ್ಯವನ್ನು ವಿಲೀನ ಮಾಡಿಕೊಳ್ಳುವುದೇ ಯೋಗ್ಯ ಪರಿಹಾರ. ಇದರಿಂದಾಗಿ ಜಮ್ಮು ಕಾಶ್ಮೀರ, ಉಳಿದ ಮಹಾರಾಜರುಗಳ ಸಂಸ್ಥಾನಕ್ಕೆ ಸರಿಸಮನಾಗಿ ನಿಲ್ಲುವಂತಾಗುತ್ತದೆ. ಉಳಿದ ಸಂಸ್ಥಾನಗಳು, ಪ್ರಾರಂಭದಲ್ಲಿ ಸ್ವಾಯತ್ತತೆಯ ಭರವಸೆ ಪಡೆದಿದ್ದರೂ ಅಂತಿಮವಾಗಿ ಸಂವಿಧಾನದ ವಿಧಿಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿವೆ. ಅಬ್ದುಲ್ಲಾ ಅವರೇ ಸ್ವತಃ ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದರು. ಆದಾಗ್ಯೂ ಅವರು ವಿಶೇಷ ಸವಲತ್ತುಗಳನ್ನು ಕೇಳುತ್ತಿದ್ದಾರೆ. 497 ಸಂಸ್ಥಾನಗಳೂ ಸೇರಿದಂತೆ ಇಡೀ ಭಾರತದ ಜೊತೆಗೂಡಿ ಅವರು ಸಂವಿಧಾನದ ಅಂಗೀಕಾರಕ್ಕೆ ಒಪ್ಪಿಗೆ ನೀಡಿಲ್ಲವೆ? ಉಳಿದೆಲ್ಲರಿಗೂ ಅದು ಒಳಿತು ಎನ್ನಿಸಿರುವಾಗ ಕಾಶ್ಮೀರಕ್ಕೇಕೆ ಅದು ಒಳಿತು ಎನ್ನಿಸುತ್ತಿಲ್ಲ" ಎಂದು ಮುಖರ್ಜಿ ಅಬ್ದುಲ್ಲಾರನ್ನು ತರಾಟೆಗೆ ತೆಗೆದುಕೊಂಡರು.

1952ರ ಶರತ್ಕಾಲದಲ್ಲಿ ಡಾ. ಮುಖರ್ಜಿ ಜಮ್ಮುವಿಗೆ ಭೇಟಿಕೊಟ್ಟು ಪ್ರಜಾಪರಿಷತ್ತನ್ನು ಬೆಂಬಲಿಸಿ ಅನೇಕ ಸಭೆಗಳಲ್ಲಿ ಮಾತನಾಡಿದರು. ಅವರ ಬೇಡಿಕೆಗಳು ನ್ಯಾಯಯುತವಾಗಿದ್ದು ರಾಷ್ಟ್ರಭಕ್ತಿಯಿಂದ ಕೂಡಿವೆಯೆಂದು ತಿಳಿಸಿದರು. ಭಾರತದ ಸಂವಿಧಾನವನ್ನು ಕೂಡಿಸುವ ಭರವಸೆ ನೀಡಿದರು. ನಂತರ ಶ್ರೀನಗರಕ್ಕೆ ಹೋದರು. ಅಲ್ಲಿ ಶೇಖ್ ಅಬ್ದುಲ್ಲಾ ಅವರೊಂದಿಗೆ ವಾದಗ್ರಸ್ತ ಸಭೆ ನಡೆಸಿದರು.

ರಾಷ್ಟ್ರೀಯ ಪಕ್ಷವೊಂದರ ಹಾಗೂ ರಾಷ್ಟ್ರೀಯ ನಾಯಕರಿಂದ ದೊರೆತ ಬೆಂಬಲದಿಂದಾಗಿ ಡೋಗ್ರಾಗಳ ಗರಿಗೆ ನೀರು ತಟ್ಟಿದಂತಾಗಿತ್ತು. 1952ರ ನವೆಂಬರಿನಲ್ಲಿ ರಾಜ್ಯ ಸರ್ಕಾರ ಚಳಿಗಾಲದ ಸಲುವಾಗಿ ಜಮ್ಮುವಿಗೆ ಮೊಕ್ಕಾಂ ಬದಲಾಯಿಸಿತು. ರಾಜ್ಯದ ಪ್ರಮುಖರಾಗಿ ಕರಣ್‌ಸಿಂಗ್ ಮೊದಲು ಆಗಮಿಸಿದರು. ತಮಗೆ ಪ್ರಜಾ ಪರಿಷತ್ತಿನಿಂದ ದೊರೆತ, ಕಪ್ಪು ಬಾವುಟ ಮತ್ತು ಅಪಹಾಸ್ಯದ ಜಯಘೋಷಗಳ ಸ್ವಾಗತವನ್ನು ಕರಣ್‌ಸಿಂಗ್ ನಂತರ ನೆನಪಿಸಿಕೊಂಡಿರುವುದುಂಟು. ನ್ಯಾಷನಲ್ ಕಾನ್ಫರೆನ್ಸ್ ಸ್ವಾಗತಕ್ಕೆ ವ್ಯವಸ್ಥೆ ಮಾಡಿತ್ತಾದರೂ ಡೋಗ್ರಾಗಳ ಕ್ರೋಧಾವೇಶಗಳು ಅದನ್ನು ಕೊಚ್ಚಿ ಹಾಕಿದ್ದವು. "ಜಮ್ಮು ಪ್ರಾಂತ್ಯದ ಇಡೀ ಜನ ಸಮುದಾಯದ ಬೆಂಬಲ, ಸಹಾನುಭೂತಿ ಚಳವಳಿಗಿರುವಂತೆ ತೋರುತ್ತದೆ. ಇಡೀ

ವಿದ್ಯಮಾನವನ್ನು ಪ್ರತಿಗಾಮಿಗಳ ಕುತಂತ್ರವೆಂದು ತಳ್ಳಿ ಹಾಕುವುದು ಸರಿಯಾದ ಮೌಲ್ಯ ನಿರ್ಣಯವಾಗದು" ಎಂದು ಕರಣ್‌ಸಿಂಗ್ ನಂತರ ಭಾರತ ಸರ್ಕಾರಕ್ಕೆ ಪತ್ರ ಬರೆದಿದ್ದರು.

ಶೇಖ್ ಅಬ್ದುಲ್ಲಾ ಅವರು ಪರಿಸ್ಥಿತಿಯನ್ನು ಬಗೆಹರಿಸಲು ಇದೇ ಹವಣಿಕೆ ನಡೆಸಿದ್ದರು. 1952-53ರ ಚಳಿಗಾಲ ಪೂರ್ತಿ ಪ್ರಜಾ ಪರಿಷತ್ ಮತ್ತು ರಾಜ್ಯ ಸರ್ಕಾರದ ನಡುವೆ ತಿಕ್ಕಾಟ ನಡೆದೇ ಇತ್ತು. ಪ್ರತಿಭಟನಕಾರರು ಸರ್ಕಾರಿ ಕಚೇರಿಗಳ ಮೇಲೆ ಹಾರುತ್ತಿದ್ದ ರಾಜ್ಯದ ಬಾವುಟವನ್ನು ಕಿತ್ತೊಗೆದು ಅದರ ಜಾಗದಲ್ಲಿ ರಾಷ್ಟ್ರಧ್ವಜ ಹಾರಿಸುತ್ತಿದ್ದರು. ಆದರೆ ತಕ್ಷಣ ಬೇರೆಯವರು ಬಂದು ಆ ಜಾಗದಲ್ಲಿ ಮತ್ತೆ ರಾಜ್ಯದ ಬಾವುಟ ಹಾರಿಸುತ್ತಿದ್ದರು. ಪಾಕಿಸ್ತಾನ ಸದಸ್ಯನಾದ ಮೇಲಾರಾಮ್ ಎಂಬುವರ ಮೇಲೆ ಗುಂಡು ಹಾರಿಸಿದಾಗ ಚಳವಳಿಗೆ ಪ್ರಚಂಡ ಬೆಂಬಲ ದೊರೆಯಿತು. ಜಮ್ಮುವಿನಲ್ಲಿ ಶೇಖ್ ಅಬ್ದುಲ್ಲಾರ ಪ್ರತಿಷ್ಠೆ ನುಚ್ಚುನೂರಾಗಿತ್ತು. ನಿರಂಕುಶ ಪ್ರಭುವಿನ ವಿರುದ್ಧ ದಂಗೆ ಎದ್ದು ಖ್ಯಾತನಾಮರಾಗಿದ್ದ ಶೇಖ್ ಅಬ್ದುಲ್ಲಾ ಈಗ ತಾವೇ ಪ್ರಜಾಪೀಡಕ ಆಡಳಿತಗಾರರಾಗಿದ್ದರು.

ಜನವರಿಯಲ್ಲಿ ಡಾ. ಶ್ಯಾಂಪ್ರಸಾದ್ ಮುಖರ್ಜಿಯವರು ನೆಹರೂಗೆ ಪತ್ರವೊಂದನ್ನು ಬರೆದು ಪರಿಷತ್ತಿಗೆ ಬೆಂಬಲ ಘೋಷಿಸಿದ್ದರು. ಪತ್ರದಲ್ಲಿ "ಭಾರತದೊಡನೆ ಸಂಪೂರ್ಣ ಸೇರ್ಪಡೆ"ಗಾಗಿ ಪರಿಷತ್ತು ನಡೆಸಿರುವ ದೇಶಭಕ್ತಿಯಿಂದ ಕೂಡಿದ ಭಾವನಾತ್ಮಕ ಹೋರಾಟದ ಬಗ್ಗೆ ಪತ್ರದಲ್ಲಿ ಪ್ರಶಂಸೆ ವ್ಯಕ್ತಪಡಿಸಿದ್ದರು. ಹಿಂದಿನ ಅವಿಭಕ್ತ ಸಂಸ್ಥಾನದ ಒಂದು ಭಾಗ ಈಗ ಪಾಕಿಸ್ತಾನದ ವಶದಲ್ಲಿದ್ದು ಭಾರತ ಆ ಪ್ರದೇಶವನ್ನು ಹೇಗೆ ಹಿಂದಕ್ಕೆ ಪಡೆಯುವುದು? ಎನ್ನುವುದೇ ಈಗ ದೊಡ್ಡ ಸವಾಲಾಗಿದೆ. ನೀವು ಮೊದಲಿನಿಂದಲೂ ಈ ಪ್ರಶ್ನೆಗೆ ಉತ್ತರ ಕೊಡದೆ ತಪ್ಪಿಸಿಕೊಳ್ಳುತ್ತಿರುವಿರಿ. ಈ ವಿಷಯದಲ್ಲಿ ನೀವು ನಿರ್ದಿಷ್ಟವಾಗಿ ಏನು ಕ್ರಮ ಕೈಗೊಳ್ಳಲಿದ್ದೀರಿ ಎಂದು ತಿಳಿಯುವ ಕಾಲ ಈಗ ಸನ್ನಿಹಿತವಾಗಿದೆ. ನಮ್ಮ ಗಡಿಯೊಳಗಣ ಈ ಪ್ರದೇಶವನ್ನು ಹಿಂದಕ್ಕೆ ಪಡೆಯುವುದರಲ್ಲಿ ನಾವು ವಿಫಲರಾದರೆ ಅದೊಂದು ದೊಡ್ಡ ಕಳಂಕವಾಗುವುದು, ರಾಷ್ಟ್ರೀಯ ಅಪಮಾನವಾಗುವುದು ಎಂದು ಮುಖರ್ಜಿ ಬರೆದಿದ್ದರು.

ನೆಹರೂ, ಮುಖರ್ಜಿಯವರ ಮೂದಲಿಕೆ, ಕಟಕಿಗಳನ್ನು ಉಪೇಕ್ಷಿಸಿದರು. ಪ್ರಜಾ ಪರಿಪರಿಷತ್ತಿನ ಚಳವಳಿಯನ್ನು, "ಜಟಿಲವಾದ, ಕಷ್ಟಕರವಾದ ಸಮಸ್ಯೆಯೊಂದರ ಪರಿಹಾರಕ್ಕೆ ಅವರು ಸಮರೋಪಾಯಗಳಿಂದ ಪ್ರಯತ್ನಿಸುತ್ತಿದ್ದಾರೆ", ಎಂದು ಬಣ್ಣಿಸಿದರು. ಅಬ್ದುಲ್ಲಾ ಇನ್ನೂ ಚುರುಕಾಗಿ ಪ್ರತಿಕ್ರಿಯಿಸಿದ್ದರು (ಮುಖರ್ಜಿ ಅಬ್ದುಲ್ಲಾಗೆ ಪ್ರತ್ಯೇಕ ಪತ್ರ ಬರೆದಿದ್ದರು). "ಪ್ರಜಾಪರಿಷತ್ತು ಇಡೀ ಕಾಶ್ಮೀರದ ಸಮಸ್ಯೆಗೆ ಕೋಮುವಾದದ ದೃಷ್ಟಿಯಿಂದ ಪರಿಹಾರ ರೂಪಿಸಲು ಆಗ್ರಹಪಡಿಸುತ್ತಿದೆ" ಎಂದು ಅಬ್ದುಲ್ಲಾ ತಿರುಗೇಟು ನೀಡಿದ್ದರು.

ಪ್ರಜಾ ಪರಿಷತ್ತಿನ ನಾಯಕರುಗಳನ್ನು ಬಿಡುಗಡೆ ಮಾಡಿ, ಕಾಶ್ಮೀರ ಭವಿಷ್ಯ ಕುರಿತು ಚರ್ಚಿಸಲು ಸಭೆಯೊಂದನ್ನು ಕರೆಯುವಂತೆ ಮುಖರ್ಜಿ, ನೆಹರೂ ಮತ್ತು ಅಬ್ದುಲ್ಲಾರಿಗೆ ಒತ್ತಾಯಪಡಿಸಿದ್ದರು. ಪಾಕಿಸ್ತಾನದ ಮೇಲೆ ಯುದ್ಧಕ್ಕೆ ಹೋಗುವಂತೆ ಮುಖರ್ಜಿ ಮರಳಿ ನೆಹರೂಗೆ ಸವಾಲೆಸೆದರು: "ದಯವಿಟ್ಟು ಸಮಸ್ಯೆಯನ್ನು ಬದಿಗೊತ್ತಬೇಡಿ. ನಮಗೆ

ಪ್ರಿಯವಾದ ಈ ಪ್ರದೇಶವನ್ನು ಎಂದು, ಹೇಗೆ, ಹಿಂದಕ್ಕೆ ಪಡೆದುಕೊಳ್ಳುತ್ತೇವೆ ಎಂಬುದನ್ನು ಭಾರತೀಯರಿಗೆ ತಿಳಿಯಪಡಿಸಿ".

ಆಖೈರಾಗಿ ಈ ವಾಗ್ದಾಳಿ-ಪ್ರತಿ ವಾಗ್ದಾಳಿಗಳೆಲ್ಲ ವೈಯಕ್ತಿಕ ಹಮ್ಮು-ಬಿಮ್ಮುಗಳ ಪ್ರದರ್ಶನವಾಗಿ ನೆಲಕಚ್ಚಿದವು. ಸರ್ಕಾರದ ಜೊತೆ ಮಾತುಕತೆಗೆ ಪೂರ್ವಭಾವಿಯಾಗಿ ಪರಿಷತ್ ಚಳವಳಿಗಳಿಂದ ಹಿಂದೆ ಸರಿಯಬೇಕೆಂದು ನೆಹರೂ ಭಾವಿಸಿದರು. ಹೋರಾಟದಿಂದ ಹಿಂದೆ ಸರಿಯುವ ಮುನ್ನ ಸರ್ಕಾರ ಮಾತುಕತೆಗೆ ಆಮಂತ್ರಣ ನೀಡಬೇಕೆಂಬುದು ಮುಖರ್ಜಿಯವರ ಇಂಗಿತವಾಗಿತ್ತು. ಸರ್ಕಾರ ಮಣಿಯಲಿಲ್ಲ. ಆಗ ಮುಖರ್ಜಿಯವರು ವಿಷಯವನ್ನು ದೆಹಲಿಯ ಬೀದಿಗಳಿಗೆ ಒಯ್ಯಲು ನಿರ್ಧರಿಸಿದರು. ಮಾರ್ಚಿ ತಿಂಗಳ ಮೊದಲ ವಾರದಿಂದ ಜನಸಂಘದ ಕಾರ್ಯಕರ್ತರು ಬೀದಿಗಿಳಿದರು. ಪ್ರಜಾ ಪರಿಷತ್ತಿನ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿ ಬಂಧನಕ್ಕೊಳಗಾದರು. ಪ್ರತಿಭಟನಕಾರರು ಪೊಲೀಸ್ ಠಾಣೆಯ ಎದುರು ಸಭೆ ಸೇರಿ ಪ್ರಧಾನ ಮಂತ್ರಿಗಳು ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ಇದು ಅಪರಾಧ ಸಂಹಿತೆಯ 188ನೇ ವಿಧಿಯ ಉಲ್ಲಂಘನೆಯಾಗಿತ್ತು.

ಡಾ. ಮುಖರ್ಜಿಯವರು ಸಂಸತ್ತಿನ ತಮ್ಮ ಕಚೇರಿಯಲ್ಲಿ ಕುಳಿತುಕೊಂಡೇ ಸತ್ಯಾಗ್ರಹವನ್ನು ಸಂಘಟಿಸುತ್ತಿದ್ದರು. ಈ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದವರು, ಸರ್ಕಾರದ ಪ್ರಕಾರ, ಹಿಂದೂ ಕೋಮುವಾದಿ ಪಕ್ಷಗಳು. ಜನಸಂಘ, ಹಿಂದೂ ಮಹಾಸಭಾ ಮತ್ತು ರಾಮರಾಜ್ಯ ಪರಿಷತ್. 1953ರ ಏಪ್ರಿಲ್ ಅಂತ್ಯದ ವೇಳೆಗೆ ಸತ್ಯಾಗ್ರಹದಲ್ಲಿ 1300 ಮಂದಿ ಬಂಧನಕ್ಕೊಳಗಾಗಿದ್ದರು. ಇವರೆಲ್ಲ ಭಾರತದ ವಿವಿಧ ಭಾಗಗಳಿಂದ ಬಂದಿದ್ದವರೆಂದೂ ಹೆಚ್ಚಾಗಿ ಬ್ರಾಹ್ಮಣರು, ಠಾಕೂರರು ಮತ್ತು ಬನಿಯಾ ಮೇಲ್ಜಾತಿಗಳಿಗೆ ಸೇರಿದವರೆಂದೂ ಗೂಢಚಾರ ಇಲಾಖೆ ಹೇಳುತ್ತದೆ.

ಈಗ ಬೇಸಿಗೆ. ಕಣಿವೆಯಲ್ಲಿ ಪ್ರವಾಸಿ ಕಾಲಾರಂಭ. ಏಪ್ರಿಲ್‌ನಲ್ಲಿ ಮೊದಲು ಕಣಿವೆಗೆ ಭೇಟಿ ಕೊಟ್ಟವರು ಅಮೆರಿಕದ ರಾಜಕಾರಣಿ, ಅಡ್ಲಾಯ್ ಸ್ಟೀವನ್ಸನ್. ಕಾಶ್ಮೀರದ ಡಾಲ್ ಸರೋವರದಲ್ಲಿ ನೌಕಾಯಾನ, ಹಿಮಪಾತದ ವೀಕ್ಷಣೆ ಹಾಗೂ ಶೇಖ್ ಅಬ್ದುಲ್ಲಾರ ಭೇಟಿ ಸ್ಟೀವನ್ಸನ್ನರ ಮುಖ್ಯ ಉದ್ದೇಶವಾಗಿತ್ತು. ಶೇಖ್ ಅಬ್ದುಲ್ಲಾ-ಸ್ಟೀವನ್ಸನ್ ಎರಡು ಸಲ ಭೇಟಿಮಾಡಿ ಮಾತುಕತೆ ನಡೆಸಿದರು. ತಾವು ಏನು ಮಾತುಕತೆ ನಡೆಸಿದ್ದು ಎಂಬ ವಿವರಗಳನ್ನು ಇಬ್ಬರೂ ಬಹಿರಂಗ ಪಡಿಸಲಿಲ್ಲ. ಆದರೆ ಕೆಲವು ಮಂದಿ ಭಾರತೀಯರ ಊಹೆಯಂತೆ ಮಾತುಕತೆ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದಾಗಿತ್ತು. ಸ್ಟೀವನ್ಸನ್ನರು, ಶೇಖ್ ಅಬ್ದುಲ್ಲಾರಿಗೆ ನೈತಿಕ ಬೆಂಬಲಕ್ಕಿಂತ ಹೆಚ್ಚಿನ ಭರವಸೆ ನೀಡಿದ್ದರೆಂದು ಅಮೆರಿಕದ ಬಗ್ಗೆ ಸಹಾನುಭೂತಿಪರವಾಗಿದ್ದ ಮುಂಬಯಿ ನಿಯತಕಾಲಿಕವೊಂದು ಬರೆಯಿತು. ಒಮ್ಮೆ ಕಾಶ್ಮೀರ ಸ್ವತಂತ್ರಗೊಂಡದ್ದೇ ಆದರೆ 15 ದಶಲಕ್ಷ ಡಾಲರು ಸಾಲ ಅದರ ಹೊಸ್ತಿಲಲ್ಲಿರುವುದು. ಇದಲ್ಲದೆ, ಕಣಿವೆಯಲ್ಲಿ 5000 ಅಮೆರಿಕನ್ ಕುಟುಂಬಗಳು ಕಾಯಮ್ಮಾಗಿ ನೆಲಸುವವು; ಕಣಿವೆಯ ಪ್ರತಿಯೊಂದು ಹೋಟೆಲು, ಪ್ರತಿಯೊಂದು ನೌಕೆ ಅಮೆರಿಕನ್ನರಿಂದ

ಭರ್ತಿಯಾಗಿರುವುದು; ಅಮೆರಿಕನ್ನರು ಕಾಶ್ಮೀರದ ಕುಶಲ ಕಲಾವಿದರ ಕಲೋತ್ಪನ್ನಗಳನ್ನು ಖರೀದಿ ಮಾಡುವರು; ಮೂರು ವರ್ಷಗಳೊಳಗೆ, ಕಾಶ್ಮೀರದ ಪ್ರತಿ ಹಳ್ಳಿಯೂ ವಿದ್ಯುದ್ದೀಪಗಳಿಂದ ಝಗಝಗಿಸುವವು ಇತ್ಯಾದಿ ಇತ್ಯಾದಿ.

ಆದರೆ ಸ್ಟೀವನ್ಸನ್ನರು ನಂತರ ತಾವು ಅಬ್ದುಲ್ಲಾರಿಗೆ ಉತ್ತೇಜನ ನೀಡಿದ ವರದಿಗಳನ್ನು ನಿರಾಕರಿಸಿದರು. "ಪರ್ಯಾಯ ಮಾರ್ಗವೆಂದರೆ, ಸ್ವತಂತ್ರ ಸ್ಥಾನಮಾನ" ಎಂದು ಅಬ್ದುಲ್ಲಾ ಹೇಳಿದಾಗ ಸ್ಟೀವನ್ಸನ್ನರು ಮೌನಿಯಾಗಿದ್ದರಂತೆ. ತಾವು ಸ್ವಾತಂತ್ರ್ಯದ ಬಗ್ಗೆ ಅಪ್ರಜ್ಞಾಪೂರ್ವಕವಾಗಿಯೂ ಪ್ರೋತ್ಸಾಹದಾಯಕ ಮಾತುಗಳನ್ನಾಡಲಿಲ್ಲವೆಂದೂ, ಅದೆಲ್ಲ ಅವಾಸ್ತವ ಎಂದು ತಮಗೆ ಅನ್ನಿಸಿದಾಗಿಯೂ, ತಾವೇನಿದ್ದರೂ ಮೌನಿ ಕೇಳುಗರಾಗಿದ್ದುದಾಗಿಯೂ–ನಾನು ಕೇಳಿಸಿಕೊಳ್ಳುತ್ತಿದ್ದೆ–ಮಾತನಾಡುತ್ತಿರಲಿಲ್ಲವೆಂದೂ ಸ್ಟೀವನ್ಸನ್ ನಂತರ ತಿಳಿಸಿದ್ದಾರೆ.

ಅಂದರೆ, ಶೇಖ್ ಅಬ್ದುಲ್ಲಾ ಮತ್ತೆ ಸ್ವಾತಂತ್ರ್ಯದ ವಿಚಾರದಲ್ಲಿ ತಲ್ಲೀನರಾಗಿದ್ದರು. ಆದರೆ ಸ್ವಾತಂತ್ರ್ಯ ಯಾತಕ್ಕಾಗಿ? ಯಾರಿಗಾಗಿ? ಬಹುತೇಕ ಇಡೀ ಜಮ್ಮು ಕಾಶ್ಮೀರ ರಾಜ್ಯಕ್ಕಿರಲಾರದು. ಒಂದು ಭಾಗ (ಉತ್ತರ) ಈಗಾಗಲೇ ಪಾಕಿಸ್ತಾನದ ವಶದಲ್ಲಿದೆ. ಇನ್ನೊಂದು ಭಾಗ(ಜಮ್ಮು) ಚಳವಳಿಗಾರರ ಹಿಡಿತದಲ್ಲಿದೆ. ಇದಕ್ಕೆ ಸಂಬಂಧಿಸಿದ ಅಬ್ದುಲ್ಲಾ ಅವರ ಕಾಗದಪತ್ರದಾಖಲೆಗಳೂ ವಿದ್ವಾಂಸರಿಗೆ ಸಿಕ್ಕಿಲ್ಲ. ಅವರೂ ತಮ್ಮ ಆತ್ಮಚರಿತ್ರೆಯಲ್ಲಿ ಈ ಬಗ್ಗೆ ಏನನ್ನೂ ಬರೆದಿಲ್ಲ. ಆದರೆ ನಾವು ಮೇಲ್ನೋಟಕ್ಕೇ ಸಮಂಜಸವಿದ್ದೀತು ಎಂಬಂತೆ ಊಹಿಸಬಹುದು. ಕಣಿವೆಗೆ, ಕಾಶ್ಮೀರ ಕಣಿವೆಗೆ ಮಾತ್ರ ಅವರು ಸ್ವಾತಂತ್ರ್ಯವನ್ನು ಬಯಸಿದ್ದರು. ಇಲ್ಲಿ ಅವರ ಹತೋಟಿ ಇತ್ತು. ಜನ ಅವರ ಬೆನ್ನ ಹಿಂದೆ ಬೆಂಬಲಕ್ಕಿದ್ದರು. ಹಾಗೆಯೇ, ಪ್ರವಾಸಿಗರೂ. ಪ್ರವಾಸಿಗರು ಇಲ್ಲಿಗೇ ಬರುತ್ತಿದ್ದರು, ಅವರ ಕನಸಿನ "ಪೂರ್ವದ ಸ್ವಿಟ್ಸರ್ಲೆಂಡನ್ನು" ಪೋಷಿಸಲು.

V

ಸ್ಟೀವನ್ಸನ್ನರ ನಂತರ, ಬೆಂದ ಮನೆಯ ಗಳ ಹಿರಿಯಲು ಮತ್ತೊಬ್ಬ ರಾಜಕಾರಣಿ ಬಂದರು. ಮೇ 8ರಂದು ಶ್ಯಾಂ ಪ್ರಸಾದ್ ಮುಖರ್ಜಿ ಶ್ರೀನಗರ ಮಾರ್ಗವಾಗಿ ಜಮ್ಮುವಿನ ರೈಲು ಹತ್ತಿದರು. ಸತ್ಯಾಗ್ರಹಿಗಳನ್ನು ಶತ್ರುವಿನ ಪಾಳೆಯದ ಹೊಸ್ತಿಲಿಗೇ ಕರೆದೊಯ್ಯುವುದು ಅವರ ಕಾರ್ಯತಂತ್ರವಾಗಿತ್ತು. ತೊಂದರೆಯನ್ನು ನಿರೀಕ್ಷಿಸಿದ್ದ ರಾಜ್ಯ ಸರ್ಕಾರ ನಿಷೇಧಾಜ್ಞೆ ಹೊರಡಿಸಿತು. ಮುಖರ್ಜಿಯವರು ನಿಷೇಧಾಜ್ಞೆಯನ್ನು ಲೆಕ್ಕಿಸದೇ 11ರಂದು ಬೆಳಿಗ್ಗೆ ಗಡಿದಾಟಿದರು. ವಾಪಸಾಗುವಂತೆ ಪೊಲೀಸರು ಮನವಿ ಮಾಡಿದರು. ಮನವಿಗೆ ಓಗೊಡದ ಮುಖರ್ಜಿಯವರನ್ನು ಪೊಲೀಸರು ಬಂಧಿಸಿ ಶ್ರೀನಗರದ ಜೈಲಿಗೆ ಕರೆದೊಯ್ದರು.

ಪ್ರಜಾ ಪರಿಷತ್ ಚಳವಳಿಗೆ ಪೂರ್ವದಲ್ಲಿ ಡಾ. ಮುಖರ್ಜಿಯವರು ಸಂವಿಧಾನ ತಜ್ಞರಾಗಿದ್ದರು. ಹಳೆಕಾಲದ ಬಂಗಾಳಿ 'ಭದ್ರಲೋಕದ' ಆಸಾಮಿಯಾಗಿದ್ದ ಮುಖರ್ಜಿಯವರು ಸೂಟು, ಬೂಟು, ಟೈ, ವಿಸ್ಕಿಗಳಲ್ಲಿ ಸುಖಜೀವನ ನಡೆಸಿದವರು. ಸ್ವಾತಂತ್ರ್ಯ ಹೋರಾಟ

ಕಾಲದಲ್ಲಿ ಅವರು ಯಾವತ್ತೂ ಸತ್ಯಾಗ್ರಹದಲ್ಲಿ ಪಾಲ್ಗೊಂಡಿರಲಿಲ್ಲ. ಒಂದು ರಾತ್ರಿಯನ್ನೂ ಜೈಲಿನಲ್ಲಿ ಕಳೆದಿರಲಿಲ್ಲ. "ಶಾಸನ ಸಭೆ, ಸರ್ಕಾರದ ನೀತಿಗಳ ಬಗ್ಗೆ ವಿವಿಧ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಒಂದು ವೇದಿಕೆ ಮಾತ್ರ" ಎಂಬುದು ಡಾ. ಮುಖರ್ಜಿಯವರ ಅಭಿಪ್ರಾಯವಾಗಿತ್ತೆಂದು ಅವರ ಜೀವನ ಚರಿತ್ರೆಕಾರ ಬಲರಾಜ್ ಮಧೋಕ್ ಹೇಳಿದ್ದಾರೆ. ಈ ನಂಬಿಕೆಯ ಡಾ. ಮುಖರ್ಜಿ ಪ್ರಜಾ ಪರಿಷತ್ತಿನ ಪ್ರತಿಭಟನಾ ಚಳವಳಿಗೆ ಬೆಂಬಲ ನೀಡಿದ್ದು ವಿಚಿತ್ರವಾಗಿಯೇ ಕಾಣುತ್ತದೆ. ಈಗ ಅವರೇ ಬೀದಿಗಿಳಿದು ಹೋರಾಟ ನಡೆಸಲು ಮುಂದಾಗಿದ್ದರು.

ತಮಗೆ ಅಪರಿಚಿತವಾಗಿದ್ದ ಇಂಥ ಮಾರ್ಗಗಳಿಂದ ಅವರು ಆಕರ್ಷಿತರಾದದ್ದು ಯಾವಾಗ? ಪ್ರಧಾನ ಮಂತ್ರಿಗೆ ಅರ್ಥವಾಗುವುದು ಚಳವಳಿಯ ಭಾಷೆಯೊಂದೇ ಎಂದು ಡಾ. ಮುಖರ್ಜಿಯವರು ಬಲರಾಜ್ ಮಧೋಕ್‌ಗೆ ತಿಳಿಸಿದ್ದರಂತೆ: "ಜೀವನಮಾನವಿಡೀ ಚಳವಳಿಗಾರನಾಗಿಯೆ ಬೆಳೆದ ವ್ಯಕ್ತಿ ಪಂಡಿತ ನೆಹರೂ. ಅವರಲ್ಲಿ ಚಳವಳಿ ಮಾರ್ಗದ ಮನೋಭಾವ ರೂಪುಗೊಂಡಿತ್ತು. ಅವರು ಈಗ ಏನಿದ್ದರೂ ಚಳವಳಿಗೆ ತಲೆ ಬಾಗುವವರೇ ವಿನಃ ಸರಿ-ತಪ್ಪು-ಕಾರಣ-ತರ್ಕಗಳಲ್ಲ. ಇವೆಲ್ಲದರ ಹಿಂದೆ ಬಲಪ್ರದರ್ಶನವಿರಬೇಕು, ಆಗ ಮಾತ್ರ ಮಣಿಯುತ್ತಾರೆ."

ಶ್ರೀನಗರ ಜೈಲಿನಲ್ಲಿ ಮುಖರ್ಜಿಯವರು ಹೆಚ್ಚು ಸಮಯವನ್ನು ಓದು ಬರಹಗಳಲ್ಲಿ ಕಳೆಯುತ್ತಿದ್ದರು. ಹಿಂದೂ ತತ್ವ ಸಿದ್ಧಾಂತಗಳನ್ನು ಓದುವುದು, ಸ್ನೇಹಿತರಿಗೆ ಪತ್ರ ಬರೆಯುವುದು, ಹೀಗೆ. ಜೂನ್ ತಿಂಗಳಲ್ಲಿ ಅವರು ಕಾಯಿಲೆ ಬಿದ್ದರು. ಕಾಲು ನೋವು, ಜ್ವರ ಬಂತು. ವೈದ್ಯರು ಉರಿಯೂತದ ವ್ಯಾಧಿಯೆಂದರು. ಜೂನ್ 22ರಂದು ಮುಖರ್ಜಿಯವರಿಗೆ ಹೃದಯಾಘಾತವಾಯಿತು, ಮರುದಿನ ಮರಣ ಹೊಂದಿದರು.

ಜೂನ್ 24ರಂದು ಮುಖರ್ಜಿಯವರ ಪಾರ್ಥಿವ ಶರೀರವನ್ನು ವಿಮಾನದಲ್ಲಿ ಕಲ್ಕತ್ತೆಗೆ ಕೊಂಡೊಯ್ಯಲಾಯಿತು. ಶೇಖ್ ಅಬ್ದುಲ್ಲಾ ಪಾರ್ಥಿವ ಶರೀರದ ಮೇಲೆ ಶಾಲು ಹೊದಿಸಿದರು. ಅವರ ಸಹೋದ್ಯೋಗಿ ಬಕ್ಷಿ ಗುಲಾಂ ಮೊಹಮದ್ ವಿಮಾನದವರೆಗೆ ಸ್ಟ್ರೆಚರ್‌ಗೆ ಹೆಗಲು ಕೊಟ್ಟರು. ಕಲ್ಕತ್ತೆಯಲ್ಲಿ ಡಂ ಡಂ ವಿಮಾನ ನಿಲ್ದಾಣದಿಂದ ಭವಾನಿಪುರದಲ್ಲಿನ ಅವರ ನಿವಾಸದವರೆಗೆ ಮೂರು ಮೈಲಿ ಮಾರ್ಗದುದ್ದಕ್ಕೂ ಜನ ಗುಂಪು ಗುಂಪಾಗಿ ನಿಂತು ಮುಖರ್ಜಿಯವರಿಗೆ ಅಂತಿಮ ಗೌರವ ಸಲ್ಲಿಸಿದರು. ನೆಹರೂ ಮದ್ರಾಸಿನಲ್ಲಿರುವ ಮಿತ್ರರೊಬ್ಬರಿಗೆ ಪತ್ರ ಬರೆದು, "ಡಾ. ಮುಖರ್ಜಿಯವರ ನಿಧನದ ಪರಿಣಾಮವಾಗಿ ನಾವು ತುಂಬ ತೊಂದರೆಯನ್ನು ಎದುರಿಸುತ್ತಿದ್ದೇವೆ. ದೆಹಲಿಯಲ್ಲಿ ವಾತಾವರಣ ಚೆನ್ನಾಗಿಲ್ಲ, ಕಲ್ಕತ್ತೆಯಲ್ಲಿ ಪರಿಸ್ಥಿತಿ ಹದಗೆಟ್ಟಿದೆ" ಎಂದು ತಿಳಿಸಿದ್ದರು.

ಜಮ್ಮುವಿನಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಸುದ್ದಿ ತಿಳಿದದ್ದೇ ಕೋಪೋದ್ರಿಕ್ತರಾದ ಜನರು ಸರ್ಕಾರದ ಕಲಾ ಮಳಿಗೆ ಮೇಲೆ ದಾಳಿ ನಡೆಸಿ ಲೂಟಿ ಮಾಡಿದರು. ಸರ್ಕಾರಿ ಕಚೇರಿಗಳಿಗೆ ಬೆಂಕಿ ಹಚ್ಚಿದರು. ಏತನ್ಮಧ್ಯೆ ದೆಹಲಿಯಲ್ಲಿ, ಅಜ್ಮೇರಿ ಗೇಟ್‌ನಲ್ಲಿ ಕಪ್ಪು

ಪಟ್ಟಿ-ಬ್ಯಾಡ್ಜ್ ಧರಿಸಿ, ಕಪ್ಪುಧ್ವಜ ಹಿಡಿದು ಜನ ಪ್ರದರ್ಶನ ನಡೆಸಿದರು. "ರಕ್ತಕ್ಕೆ ರಕ್ತದಿಂದಲೇ ಪ್ರತೀಕಾರ" ಎಂದು ಘೋಷಣೆ ಕೂಗಿದರು. ಕೆಲವು ದಿನಗಳ ಕಾಲ ಈ ಕೋಪತಾಪಗಳ ಪ್ರದರ್ಶನ ನಡೆಯಿತು. ಜುಲೈ 5ರಂದು ಮುಖರ್ಜಿಯವರ ಚಿತಾ ಭಸ್ಮವನ್ನು ರಾಜಧಾನಿಗೆ ತರಲಾಯಿತು. ಜನಸಂಘದವರು ಹಳೆ ದೆಹಲಿಯ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಚಿತಾಭಸ್ಮ ತಂದರು. ಮೆರವಣಿಗೆಕಾರರು ಪ್ರತೀಕಾರದ ಘೋಷಣೆಗಳನ್ನು, "ಕಾಶ್ಮೀರ ಸಮ್ಮಾದು" ಎನ್ನುವ ಘೋಷಣೆಯನ್ನು ಕೂಗುತ್ತಿದ್ದರು.

ಜೂನ್ ತಿಂಗಳ ಕೊನೆಯ ದಿನಗಳಲ್ಲಿ ರಾಜಧಾನಿಗೆ ಬಂದರೆ ಕೊಲೆ ಮಾಡುವುದಾಗಿ ಶೇಖ್ ಅಬ್ದುಲ್ಲಾರಿಗೆ ಎಚ್ಚರಿಕೆ ನೀಡುವ ಭಿತ್ತಿ ಪತ್ರಗಳು ದೆಹಲಿಯಲ್ಲಿ ಕಾಣಿಸಿಕೊಂಡವು. ಇದನ್ನು ಹಗುರವಾಗಿ ತೆಗೆದುಕೊಳ್ಳುವಂತಿರಲಿಲ್ಲ. ಏಕೆಂದರೆ ಇಂಥದೇ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯಾಗಿತ್ತು. ಈಗ ದೆಹಲಿಯ ಮಧ್ಯಮ ವರ್ಗದ ಜನರು ಪೂರ್ತಿಯಾಗಿ ಕೋಮುವಾದಿಗಳ (ಹಿಂದೂ) ವಶದಲ್ಲಿರುವಂತೆ ತೋರುತ್ತಿತ್ತು. ಶೇಖ್ ಅಬ್ದುಲ್ಲಾ ಮಾತ್ರವಲ್ಲ ನೆಹರೂ ಅವರಿಗೂ ಇದೇ ಗತಿಯೊದಗಬಹುದೆಂಬ ಭೀತಿ ತಲೆದೋರಿತ್ತು. "ನೆಹರೂಗೂ ಕೋಮುವಾದಿಗಳ ತೀವ್ರ ಪ್ರಚಾರದಿಂದಾಗಿ ಗಾಂಧೀಜಿ ಅವರಿಗೆ ಒದಗಿದ ದುರ್ಗತಿಯೇ ಪ್ರಾಪ್ತವಾದೀತು" ಎನ್ನುವ ಹೆದರಿಕೆ ಬಾಧಿಸಲಾರಂಭಿಸಿತು. "ಯಾವುದೇ ಗುಂಪು ಅಥವಾ ಪಕ್ಷಗಳು ಪ್ರಧಾನಮಂತ್ರಿ ವಿರುದ್ಧ ತೀವ್ರ ಸ್ವರೂಪದ ಪ್ರಚಾರ, ಪಿತೂರಿ, ಹುನ್ನಾರಗಳನ್ನು ನಡೆಸುತ್ತಿವೆಯೇ ಎಂಬುದರ ಬಗ್ಗೆ ತೀವ್ರ ಗಮನಹರಿಸುವಂತೆ, ತೀವ್ರ ನಿಗಾ ವಹಿಸುವಂತೆ" ಪೊಲೀಸರಿಗೆ ಆದೇಶ ನೀಡಲಾಗಿತ್ತು.

VI

ಡಾ. ಶ್ಯಾಂಪ್ರಸಾದ್ ಮುಖರ್ಜಿ ನಾಯಕತ್ವದ ಜನಾಂದೋಲನ ಶೇಖ್ ಅಬ್ದುಲ್ಲಾರ ಮನದಾಳದಲ್ಲಿ ಸ್ವಾತಂತ್ರ್ಯದ ಬೀಜವನ್ನು ಬಿತ್ತಿತ್ತು. ಮುಖರ್ಜಿ ಮರಣದ ನಂತರ ಉಂಟಾದ ಸಾರ್ವಜನಿಕ ಬೊಬ್ಬೆ-ಹುಯಿಲುಗಳು ಈ ಬಯಕೆಯನ್ನು ಪೋಷಿಸಿದವು. ಈ ಸೂಕ್ಷ್ಮ ಅರಿತ ನೆಹರೂ ಶೇಖ್ ಅಬ್ದುಲ್ಲಾರಿಗೆ ಎರಡು ಸುದೀರ್ಘ ಪತ್ರಗಳನ್ನು ಬರೆದರು. ಪತ್ರದಲ್ಲಿ ತಮ್ಮ ನಡುವಣ ಹಳೆಯ ಸ್ನೇಹವನ್ನು, ಕಾಶ್ಮೀರದೊಂದಿಗೆ ಭಾರತದ ನಂಟನ್ನು ಸ್ಮರಿಸಿ, ದೆಹಲಿಗೆ ಬಂದು ತಮ್ಮನ್ನು ಕಾಣುವಂತೆ ಆಮಂತ್ರಣವಿತ್ತಿದ್ದರು. ಶೇಖ್ ಅಬ್ದುಲ್ಲಾ ಇದಕ್ಕೆ ಓಗೊಡಲಿಲ್ಲ. ನೆಹರೂ, ಮಂತ್ರಿಮಂಡಲದಲ್ಲಿ ಹಿರಿಯರಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರನ್ನು ಶ್ರೀನಗರಕ್ಕೆ ಕಳುಹಿಸಿಕೊಟ್ಟರು. ಕಲಾಂ ಅವರ ದೂತ ಕಾರ್ಯದಿಂದ ಏನೂ ಸಹಾಯವಾಗಲಿಲ್ಲ. ಶೇಖ್ ಅಬ್ದುಲ್ಲಾ ಅವರಿಗೆ ಈಗ ಎರಡು ಅಂಶ ಸ್ಪಷ್ಟವಾಗಿ ಮನವರಿಕೆಯಾದಂತಿತ್ತು. ಒಂದು: ತಮಗೆ ಅಮೆರಿಕದ ಬೆಂಬಲವಿದೆ. ಎರಡು: ನೆಹರೂ ಅವರಿಂದ ಭಾರತದಲ್ಲಿ ಹಿಂದೂ ಕೋಮುವಾದಿ ಶಕ್ತಿಗಳನ್ನು ನಿಗ್ರಹಿಸಲಾಗದು. ಜುಲೈ

10ರಂದು ಅವರು ನ್ಯಾಷನಲ್ ಕಾನ್ಫರೆನ್ಸ್‌ನ ಕೇಂದ್ರ ಕಚೇರಿ ಇದ್ದ "ಮುಜಾಹಿದ್ ಮನ್‌ಜಿಲ್"ನಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು. ಭಾರತ ಸರ್ಕಾರದ ವಿರುದ್ಧ ಕಾಶ್ಮೀರದ ಹಾಗೂ ತಮ್ಮ ಅತೃಪ್ತಿ-ಅಸಮಾಧಾನಗಳನ್ನು ವಿವರಿಸಿದ ಅಬ್ದುಲ್ಲಾ "ನಾನು ಅವರಿಗೆ ವಿದಾಯ ಹೇಳಬೇಕಾದ ಕಾಲ ಬರಲಿದೆ" ಎಂದು ನುಡಿದಿದ್ದರು.

ಶೇಖ್ ಅಬ್ದುಲ್ಲಾ ಅವರಲ್ಲಿ ಆದ ಈ ಅನಿರೀಕ್ಷಿತ ಬದಲಾವಣೆ ಪ್ರಧಾನಮಂತ್ರಿಗೆ ಅಪಾಯದ ಮುನ್ಸೂಚನೆ ನೀಡಿತ್ತು, ಅವರು ಎಚ್ಚರ ವಹಿಸುವಂತೆ ಮಾಡಿತ್ತು. "ಕಾಶ್ಮೀರದಲ್ಲಿನ ವಿದ್ಯಮಾನಗಳು ತುಂಬಾ ದುರದೃಷ್ಟಕರವಾದುವೆಂದೂ, ಅಲ್ಲಿ ಏನೇ ಆದರೂ ಅದರ ಪರಿಣಾಮ ವ್ಯಾಪಕವಾಗಿರುವುದೆಂದೂ" ನೆಹರೂ ಹೇಳಿದ್ದರು. "ಏಕೆಂದರೆ ಕಾಶ್ಮೀರ ಸಮಸ್ಯೆ, ಭಾರತದ ಜಾತ್ಯತೀತ ನೀತಿಯೂ ಒಳಗೊಂಡಂತೆ ಅನೇಕ ವಿಷಯಗಳ ಸಂಕೇತವಾಗಿತ್ತು."

ಇದೇ ವೇಳೆಗೆ ಕಾಶ್ಮೀರ ಸರ್ಕಾರದಲ್ಲೇ ಒಡಕುಂಟಾಗಿತ್ತು. ನೆಹರೂ ಅವರೇ ಹೇಳಿರುವಂತೆ, "ಕಾಶ್ಮೀರ ಸರ್ಕಾರದ ಸಚಿವರುಗಳು ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹೋಗುತ್ತಾ ವಿಭಿನ್ನವಾದ ನೀತಿಗಳನ್ನು ಘೋಷಿಸಲಾರಂಭಿಸಿದ್ದರು". ಈ ಸುಳಿವು, ಭಾರತ ಸರ್ಕಾರದ ಗೂಢಚಾರ ಇಲಾಖೆಯ ದಕ್ಷತೆಯ ಫಲವಾಗಿತ್ತು. ಗೂಢಚಾರ ಇಲಾಖೆಯ ಅಧಿಕಾರಿಗಳು ನ್ಯಾಷನಲ್ ಕಾನ್ಫರೆನ್ಸ್ ಒಳಗೆ ಸೇರಿಕೊಂಡು ಪಕ್ಷದ ನಾಯಕತ್ವದಲ್ಲಿ ಹಾಗೂ ಕಾರ್ಯಕರ್ತರಲ್ಲಿ ಒಡಕು, ಭಿನ್ನಮತಗಳನ್ನು, ಗೊಂದಲಗಳನ್ನು ಉಂಟುಮಾಡುತ್ತಿದ್ದರು. ಜಿ.ಎಂ. ಸಾದಿಕ್‌ರಂಥ ಕೆಲವು ನಾಯಕರು ಅಮೆರಿಕ ವಿರೋಧಿ ಎಡಪಂಥೀಯರಾಗಿದ್ದರು. ಇವರು ಶೇಖ್ ಅಬ್ದುಲ್ಲಾ ಸ್ಟೀವನ್ಸನ್ನರ ಜೊತೆ ಮಾತುಕತೆ ನಡೆಸಿದ್ದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಇನ್ನು ಬಕ್ಷಿ ಗುಲಾಂ ಮೊಹಮದ್‌ರಂಥವರು ತಾವೇ ಕಾಶ್ಮೀರದ ಪ್ರಭುಗಳಾಗುವ ಕನಸು ಕಾಣುತ್ತಿದ್ದರು.

ನ್ಯಾಷನಲ್ ಕಾನ್ಫರೆನ್ಸ್ ಪಕ್ಷದೊಳಗೆ ಭಾರತದ ಪರ ಹಾಗೂ ಸ್ವಾತಂತ್ರ್ಯ ಪರವಾದ ಎರಡು ಬಣಗಳಿದ್ದವು. ಸ್ವಾತಂತ್ರ್ಯದ ಪರವಾಗಿದ್ದ ಬಣಕ್ಕೆ ಶೇಖ್‌ರ ನಿಕಟವರ್ತಿಯಾದ ಮಿರ್ಜಾ ಅಫ್ಜಲ್ ಬೇಗ್ ನಾಯಕರಾಗಿದ್ದರು. ಭಾರತದ ಪರವಾಗಿದ್ದ ಬಣ "ಸದರ್-ಇ-ರಿಯಾಸತ್" ಕರಣ್ ಸಿಂಗರೊಡನೆ ನಿಕಟ ಸಂಪರ್ಕ ಹೊಂದಿತ್ತು. ಈದ್ ಹಬ್ಬದ ದಿವಸ, ಅಂದರೆ ಆಗಸ್ಟ್ 21ರಂದು, ಶೇಖ್ ಅಬ್ದುಲ್ಲಾ ಸ್ವಾತಂತ್ರ್ಯ ಘೋಷಿಸುವರೆಂದು ವದಂತಿಗಳಿದ್ದವು. ಸ್ವಾತಂತ್ರ್ಯ ಘೋಷಿಸಿ ನಂತರ ಭಾರತದ ಅತಿಕ್ರಮಣದ ವಿರುದ್ಧ ರಕ್ಷಣೆಗಾಗಿ ವಿಶ್ವಸಂಸ್ಥೆಗೆ ಮೊರೆ ಹೋಗುವುದು ಅಬ್ದುಲ್ಲಾರ ಹಂಚಿಕೆಯಾಗಿತ್ತು. ಇದಕ್ಕೆ ಎರಡು ವಾರ ಮುಂಚಿತವಾಗಿ ಅಬ್ದುಲ್ಲಾ ಸಚಿವರೊಬ್ಬರನ್ನು ಮಂತ್ರಿ ಮಂಡಲದಿಂದ ವಜಾ ಮಾಡಿದರು. ಇದು ಮಂತ್ರಿಮಂಡಲದಲ್ಲಿದ್ದ ಭಾರತಪರ ಬಣಕ್ಕೆ ಅಬ್ದುಲ್ಲಾ ವಿರುದ್ಧ ಸಿಡಿದೇಳಲು ಒಂದು ನೆಪವಾಗಿ ಒದಗಿ ಬಂತು. ಬಕ್ಷಿ ಗುಲಾಂ ಮೊಹಮದ್ ನಾಯಕತ್ವದ ಈ ಬಣದ ಸಚಿವರು "ಅಂಧಾಭಿಮಾನ, ಪಂಥಾಭಿಮಾನ ಮತ್ತು ಭ್ರಷ್ಟಾಚಾರಗಳಿಗೆ

ಬೆಂಬಲ ನೀಡುತ್ತಿದ್ದೀರಿ, ಪ್ರೋತ್ಸಾಹ ನೀಡುತ್ತಿದ್ದೀರಿ" ಎಂದು ಆಪಾದಿಸಿ ಶೇಖ್ ಅಬ್ದುಲ್ಲಾರಿಗೆ ಪತ್ರ ಬರೆದರು. ಈ ಪತ್ರದ ಪ್ರತಿಯೊಂದನ್ನು ಕರಣ್‌ಸಿಂಗರಿಗೆ ಕಳುಹಿಸಿಕೊಟ್ಟರು. ಕರಣ್ ಸಿಂಗರು ಅಬ್ದುಲ್ಲಾ ಅವರನ್ನು ವಜಾ ಮಾಡಿ ಹೊಸ ಸರ್ಕಾರ ರಚಿಸಲು ಬಕ್ಷಿಗುಲಾಂ ಮೊಹಮದ್ ಅವರಿಗೆ ಆಮಂತ್ರಣವಿತ್ತರು.

ಮುಂಜಾನೆ ಶೇಖ್ ಅಬ್ದುಲ್ಲಾ ಅವರಿಗೆ ವಜಾ ಆಜ್ಞೆಯನ್ನು ನೀಡಲಾಯಿತು. ಮಲಗಿದ್ದ ಅವರನ್ನು ಎಬ್ಬಿಸಿ ವಜಾ ಆಜ್ಞೆ ಜಾರಿ ಮಾಡಿದಾಗ ಅಬ್ದುಲ್ಲಾ ಕೆರಳಿದ ಸಿಂಹವಾದರು. "ನನ್ನನ್ನು ವಜಾ ಮಾಡಲು ಈ "ಸದರ್-ಇ-ರಿಯಾಸತ್" ಯಾರು? ನಾನು ಈ ಅಣುಗನನ್ನು 'ಸದರ್-ಇ-ರಿಯಾಸತ್' ಆಗಿ ಮಾಡಿದೆ" ಎಂದೆಲ್ಲ ಕೂಗಾಡಿದರು. ಆಗ ಪೊಲೀಸರು "ನಿಮ್ಮನ್ನು ವಜಾ ಮಾಡಿರುವುದಷ್ಟೇ ಅಲ್ಲ, ನಿಮ್ಮನ್ನು ಬಂಧನದಲ್ಲಿಡಲಾಗಿದೆ" ಎಂದು ತಿಳಿಸಿದರು. ಎರಡು ಗಂಟೆ ಕಾಲಾವಕಾಶ ನೀಡಲಾಗುವುದೆಂದೂ ಅಷ್ಟರೊಳಗೆ ಪ್ರಾರ್ಥನೆ ಮುಗಿಸಿ ಜೈಲಿಗೆ ಕರೆದೊಯ್ಯಲು ಸಿದ್ಧರಾಗಬೇಕೆಂದೂ ಪೊಲೀಸರು ಹೇಳಿದರು.

ಶೇಖ್ ಅಬ್ದುಲ್ಲಾರನ್ನು ಹೀಗೇಕೆ ಅವಮಾನಗೊಳಿಸಲಾಯಿತು? ಮಧ್ಯರಾತ್ರಿ ಅವರನ್ನು ವಜಾ ಮಾಡಿ ಸ್ಥಾನ ಬದ್ಧತೆಯಲ್ಲಿಡುವಷ್ಟು ಜರೂರಿತ್ತೆ? ಶೇಖ್ ಅಬ್ದುಲ್ಲಾ ಅವರನ್ನು ಸ್ವತಂತ್ರವಾಗಿರಲು ಬಿಟ್ಟು, ಅವರು ತಮ್ಮ ಅಭಿಪ್ರಾಯಗಳನ್ನು ಪ್ರಚುರಪಡಿಸಲು ಅವಕಾಶ ಮಾಡಿಕೊಟ್ಟಲ್ಲಿ ತಮ್ಮಿಂದ ಸರ್ಕಾರ ನಡೆಸುವ ಹೊಣೆ ಹೊರಲಾಗದೆಂದು ಬಕ್ಷಿ ಗುಲಾಂ ಮೊಹಮ್ಮದ್ ಖಂಡತುಂಡವಾಗಿ ತಿಳಿಸಿದ್ದರಿಂದ ಹೀಗೆ ಮಾಡಬೇಕಾಯಿತೆಂದು ಕರಣ್ ಸಿಂಗ್ ನಂತರ ನೆನಪಿಸಿಕೊಂಡಿರುವುದುಂಟು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಶೇಖ್ ಅಬ್ದುಲ್ಲಾರನ್ನು ಜೈಲಿಗೆ ಕಳುಹಿಸಿದಲ್ಲಿ ಅಲ್ಲಿ ಅವರೂ ಸುರಕ್ಷಿತವಾಗಿ ಶಾಂತವಾಗಿರಬಲ್ಲರು. ಆದರೆ ಅಧಿಕಾರದಿಂದ ಹೊರದಬ್ಬಿ ಸ್ವತಂತ್ರವಾಗಿರಲು ಬಿಟ್ಟಲ್ಲಿ ಅಬ್ದುಲ್ಲಾರಿಗೆ ತಮ್ಮ ಪರವಾಗಿ ಜನಾಭಿಪ್ರಾಯ ಸಂಘಟಿಸುವುದು ಸಾಧ್ಯವಾಗುತ್ತಿತ್ತು.

ಶೇಖ್ ಅಬ್ದುಲ್ಲಾ ಅವರ ಬಂಧನ ತಂತ್ರದ ರೂವಾರಿ ರಫಿ ಅಹ್ಮದ್ ಕಿದ್ವಾಯಿ ಎಂದು ನಂತರದ ದಿನಗಳಲ್ಲಿ ಕೇಳಿ ಬಂತು. ಕಿದ್ವಾಯಿ, ಅಬ್ದುಲ್ಲಾ ಮಂತ್ರಿಮಂಡಲದಲ್ಲಿ ಎಡಪಂಥೀಯರಾಗಿದ್ದು ನೆಹರೂ ಅವರ ಆಪ್ತ ಮಿತ್ರರಾಗಿದ್ದರು. ಶೇಖರನ್ನು ಅಪಮಾನ ಗೊಳಿಸಬೇಕೆಂಬ ಕಿದ್ವಾಯಿಯವರ ಆಸೆ ಅಪೇಕ್ಷೆಯ ಬೇರುಗಳು ಅಬ್ದುಲ್ಲಾ ಅವರು ಬೆಂಬಲಕ್ಕಾಗಿ ಅಮೆರಿಕದ ಮೊರೆಹೊಕ್ಕಿದ್ದರಲ್ಲಿದ್ದವು. ಆದರೆ ಕಾಶ್ಮೀರದೊಳಗೆ ಇದೊಂದು ಸೇಡಿನ, ಪ್ರತಿಕಾರದ ಕ್ರಮವೆಂದೂ ತಪ್ಪಿನ ಕ್ರಮವೆಂದೂ ಭಾವಿಸಲಾಗಿತ್ತು. 1947ರಷ್ಟು ಹಿಂದೆಯೇ ಮುಸ್ಸೋರಿಯಲ್ಲಿ ಕಿದ್ವಾಯಿ ಅವರ ಸಹೋದರನನ್ನು ಕಾಶ್ಮೀರಿಯೊಬ್ಬ ಕೊಲೆ ಮಾಡಿದ್ದ. ಶೇಖರ ಪದಚ್ಯುತಿಯೂ ಈ ಹಳೆಯ ಸೇಡು ತೀರಿಸಿಕೊಳ್ಳುವ ಕ್ರಮವಾಗಿತ್ತು.

ತಮ್ಮ ಮಿತ್ರ ಶೇಖ್ ಅಬ್ದುಲ್ಲಾರ ಬಂಧನಕ್ಕೆ ಜವಹರಲಾಲ ನೆಹರೂ ಅನುಮತಿ ನೀಡಿದ್ದರೆ? ಬಂಧನದ ವಿಷಯವೇ ಮುಂಚಿತವಾಗಿ ನೆಹರೂ ಅವರಿಗೆ ತಿಳಿದಿರಲಿಲ್ಲವೆಂದು ಅವರ ಜೀವನ ಚರಿತ್ರಕಾರರ ಎಣಿಕೆ. ಗೂಢಚಾರ ಇಲಾಖೆ ಮುಖ್ಯಸ್ಥರ ಪ್ರಕಾರ ನೆಹರೂಗೆ

ಇದು ತಿಳಿದಿತ್ತು. ಆದರೆ ಒಂದಂತೂ ಸ್ಪಷ್ಟ: ಬಂಧನದ ಸುದ್ದಿ ತಿಳಿದ ನಂತರವೂ ಅದನ್ನು ರದ್ದುಗೊಳಿಸಲು ಅವರು ಏನೂ ಮಾಡಲಿಲ್ಲ.

ತಮ್ಮ ಪೂರ್ವಾಧಿಕಾರಿಯಂತೆ ಕಾಶ್ಮೀರದ ಹೊಸ ಪ್ರಧಾನಮಂತ್ರಿಯೂ ಮಹಾನ್ ವ್ಯಕ್ತಿತ್ವದ ಭಾರಿ ಆಸಾಮಿಯೇ ಆಗಿದ್ದರು. ಅವರು ಬಕ್ಷಿ ಎಂದೇ ಜನಪ್ರಿಯರಾಗಿದ್ದರು. 1907ರಲ್ಲಿ ಸಾಧಾರಣ ಕುಟುಂಬವೊಂದರಲ್ಲಿ ಜನಿಸಿದ ಬಕ್ಷಿ ಗುಲಾಂ ಮೊಹಮದ್ ಶ್ರೀನಗರದಲ್ಲಿ ವಾಹನ ಚಾಲಕರನ್ನು ಸಂಘಟಿಸುವುದರೊಂದಿಗೆ ರಾಜಕೀಯ ಪ್ರವೇಶಿಸಿದರು. ಈ ಸಂಘದ ನಾಯಕತ್ವ ಹಾಗೂ ಹರಿಸಿಂಗರ ಕಾಲದಲ್ಲಿ ನಾಲ್ಕು ಅವಧಿ ಅನುಭವಿಸಿದ ಸೆರೆಮನೆ ವಾಸ ಅವರ ರಾಷ್ಟ್ರೀಯ ನಾಯಕತ್ವದ ಋಜುವಾತುಗಳಾಗಿದ್ದವು. ಆದರೆ ಸ್ವಭಾವ ಹಾಗೂ ಮನೋಭಾವಗಳಲ್ಲಿ ಅವರು ಶೇಖ್ ಅಬ್ದುಲ್ಲಾರಿಗಿಂತ ತೀರಾ ಭಿನ್ನವಾಗಿದ್ದರು. ಒಬ್ಬರು ವಿಚಾರವಾದಿ, ಆದರ್ಶವಾದಿಯಾಗಿದ್ದರೆ ಮತ್ತೊಬ್ಬರು ಸಂಘಟನಕಾರರೂ ಕ್ರಿಯಾಶೀಲ ಕರ್ಮಯೋಗಿಯೂ ಆಗಿದ್ದರು. 1947ರ ಅಕ್ಟೋಬರಿನಲ್ಲಿ ದಾಳಿಕಾರರು ಆಕ್ರಮಣವೆಸಗಿದಾಗ ಶೇಖ್ ಅಬ್ದುಲ್ಲಾ ಭಾವೋದ್ರೇಕದಿಂದ ಭಾಷಣಗಳನ್ನು ಮಾಡಿದರೆ ಬಕ್ಷಿ ಹೋರಾಡಲು ಸ್ವಯಂಸೇವಕರನ್ನು ಸಂಘಟಿಸಿದರು, ಬುಡಮೇಲು ಕೃತ್ಯಕ್ಕಾಗಿ ಪಂಚಮ ದಳ ಕಟ್ಟುವ ಯತ್ನ ಮಾಡಿದರು. 1947ರ ನಂತರ ಶೇಖ್ ಅಬ್ದುಲ್ಲಾ ದೆಹಲಿಯಲ್ಲಿ ನೆಹರೂ ಅವರೊಂದಿಗೆ ವ್ಯವಹರಿಸಿದರೆ ಬಕ್ಷಿಯವರು ರಾಜ್ಯದೊಳಗಿನ ವ್ಯವಹಾರ ನೋಡಿಕೊಂಡರು. ಅದೂ ಇಡೀ ಸರ್ಕಾರ ಅಸ್ತಿತ್ವದಲ್ಲೇ ಇಲ್ಲ, ಸರ್ಕಾರ ಬಿದ್ದು ಹೋಗಿದೆ ಎನ್ನುವಂಥ ಸ್ಥಿತಿಯಲ್ಲಿ ರಾಜ್ಯಭಾರ ನೋಡಿಕೊಂಡರು. ಕಾಶ್ಮೀರದ ಇಬ್ಬರು ಪಂಡಿತರು ಬರೆದಿರುವಂತೆ (1950), "ಬಕ್ಷಿ ತುಂಬ ಶಿಸ್ತಿನ ಸಿಪಾಯಿಯಾಗಿದ್ದರು. ಅಶಿಸ್ತನ್ನು, ಸತಾಯಿಸುವ ಪ್ರವೃತ್ತಿಯನ್ನು ಸಹಿಸುತ್ತಿರಲಿಲ್ಲ. ಸರ್ಕಾರದಲ್ಲಿನ ಔಪಚಾರಿಕ ನಡಾವಳಿ, ನಿಧಾನ ಪ್ರವೃತ್ತಿಗಳನ್ನು ಇಷ್ಟಪಡುತ್ತಿರಲಿಲ್ಲ. ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಬಯಸುತ್ತಿದ್ದರು. ಆ ಕಾಲದಲ್ಲಿನ ಭಾರತಕ್ಕೆ ಹೋಲಿಸಿದಾಗ, "ನೆಹರೂಗೆ ಸರ್ದಾರ್ ಪಟೇಲ್ ಹೇಗಿದ್ದರೋ ಅಲ್ಲಿ ಶೇಖ್ ಅಬ್ದುಲ್ಲಾರಿಗೆ ಬಕ್ಷಿ ಹಾಗಿದ್ದರು" " ಎಂದು ತೀರ್ಮಾನಕ್ಕೆ ಬರುವುದು ಅಸಹಜವೇನಲ್ಲ.

ಈ ಹೋಲಿಕೆ ಆಕರ್ಷಕವಾಗಿದೆ, ಆದರೆ ಕರಾರುವಾಕ್ಕಾಗಿಲ್ಲ. ಪಟೇಲರೂ, ಪ್ರಧಾನಿ ಹುದ್ದೆಗೆ ಆಸೆ ಪಡಲಿಲ್ಲ. ಆದರೆ ಬಕ್ಷಿಯವರು ತಮ್ಮ ಪಾಲಿಗೆ ಬಂದದ್ದನ್ನು ಉಳಿಸಿಕೊಳ್ಳುವ ಉದ್ದೇಶ ಹೊಂದಿದ್ದರು. ಇದರ ಅರ್ಥ ದೆಹಲಿಯನ್ನು ಓಲೈಸಿಟ್ಟುಕೊಳ್ಳುವುದಾಗಿತ್ತು. ಅಧಿಕಾರವಹಿಸಿಕೊಂಡ ಹತ್ತು ದಿನಗಳೊಳಗೆ ಜಮ್ಮುವಿಗೆ ಭೇಟಿಕೊಟ್ಟರು. ಅಲ್ಲಿ ಸಭೆಯೊಂದರಲ್ಲಿ ಮಾತನಾಡುತ್ತ, "ಕಾಶ್ಮೀರ ಮತ್ತು ಭಾರತದ ನಡುವೆ ನಂಟು ಅಪ್ರತಿಹವಾಗಿದ್ದು, ಭೂಮಿಯ ಮೇಲಿನ ಯಾವ ಶಕ್ತಿಯಿಂದಲೂ ಅವೆರಡನ್ನು ಪ್ರತ್ಯೇಕಿಸುವುದು ಅಸಾಧ್ಯವೆಂದು" ಭರವಸೆಯ ನುಡಿಗಳನ್ನಾಡಿದರು. ಶ್ರೀನಗರದಲ್ಲಿ ನ್ಯಾಷನಲ್ ಕಾನ್ಫರೆನ್ಸ್‌ನ ಕಾರ್ಯಕರ್ತರ ಸಭೆಯೊಂದರಲ್ಲಿ ಮಾತನಾಡುತ್ತ, "ಶೇಖ್ ಅಬ್ದುಲ್ಲಾ ಅವರು ಸ್ವತಂತ್ರ ಕಾಶ್ಮೀರದ ಆಲೋಚನೆ ಮಾಡಿ ನೇರವಾಗಿ ವಿದೇಶಿ ಆಕ್ರಮಣಕಾರರ ಬಲೆಗೆ ಬಿದ್ದರೆಂದು"

ಪ್ರತಿಪಾದಿಸಿದರು. "ಅದೊಂದು ಅಪಾಯಕಾರಿ ಆಟವಾಗಿತ್ತು, ಕಾಶ್ಮೀರಕ್ಕೆ ವಿಪತ್ಕಾರಿ ಪರಿಣಾಮಗಳನ್ನುಂಟು ಮಾಡುವಂಥದ್ದಾಗಿತ್ತು" ಎಂದು ಹೇಳಿದರು. ಮುಂದುವರಿದು, "ಕಾಶ್ಮೀರಕ್ಕೆ ತನ್ನನ್ನು ರಕ್ಷಿಸಿಕೊಳ್ಳುವಷ್ಟು ಸಂಪನ್ಮೂಲಗಳು ಇಲ್ಲವಾದ್ದರಿಂದ ಸ್ವಾತಂತ್ರ್ಯ ಎನ್ನುವುದು ಒಂದು 'ತಲೆಕೆಟ್ಟ ಆಲೋಚನೆ', ರಾಜ್ಯವನ್ನು ಶಕ್ತಿಶಾಲಿ ರಾಷ್ಟ್ರವೊಂದರ ಆಸಕ್ತಿಯ ಕೇಂದ್ರವಾಗಿಸುವುದಷ್ಟೇ ಇಂಥ ಆಲೋಚನೆಯ ಹಿಂದಿನ ಲೆಕ್ಕಾಚಾರವಾಗಿತ್ತು. ಅದು ರಾಜ್ಯದ ಜನತೆಯನ್ನು ವಿನಾಶಕ್ಕೆ ತಳ್ಳುವ ಆಲೋಚನೆ" ಎಂದು ಬಿಚ್ಚುನುಡಿಗಳಲ್ಲಿ ಶೇಖರನ್ನು ತರಾಟೆಗೆ ತೆಗೆದುಕೊಂಡಿದ್ದರು.

ಬಕ್ಷಿ ಗುಲಾಂ ಮೊಹಮದ್ ಜನಪ್ರಿಯವಾದ ಆಡಳಿತ ಶೈಲಿಯನ್ನು ರೂಢಿಸಿಕೊಂಡರು. ಪ್ರತಿ ಶುಕ್ರವಾರ ಜನತಾ ದರ್ಬಾರ್ ನಡೆಸಿದರು. ಈ ಜನತಾ ಸಭೆಯಲ್ಲಿ ಜನರ ಕುಂದುಕೊರತೆಗಳಿಗೆ ಕಿವಿಗೊಟ್ಟರು. ಭತ್ತದ ಸಂಗ್ರಹ ಬೆಲೆ ಏರಿಕೆ ಪ್ರಾರಂಭಿಕ ಕ್ರಮ. ಮುಂದಿನದು ಉಚಿತ ಶಿಕ್ಷಣ. ಹೊಸ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಮಂಜೂರು ಮಾಡಿದರು. ಜಮ್ಮು-ಕಾಶ್ಮೀರ ಮತ್ತು ಭಾರತದ ನಡುವಣ ಸುಂಕದ ಅಡೆತಡೆಗಳನ್ನು ರದ್ದುಗೊಳಿಸಿದರು.

1954ರ ಅಕ್ಟೋಬರ್‌ನಲ್ಲಿ ಶ್ರೀನಗರದಲ್ಲಿ ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನ ಜರುಗಿತು. ರಾಜ್ಯ ಸರ್ಕಾರ ಸರ್ವರೀತಿಯಲ್ಲಿ ಇದಕ್ಕೆ ಸಹಕಾರ ನೀಡಿತು. ಅತಿಥಿಗಳಿಗೆ ವಸತಿ ಸೌಕರ್ಯ, ಭೋಜನ, ಮೇಜುವಾನಿ ಇತ್ಯಾದಿ ವ್ಯವಸ್ಥೆ ಮಾಡಿತು. ವಿಲಾಸಿ ವಸತಿ, ವಿಲಾಸಿ ಭೋಜನದ ಸತ್ಕಾರ ನೀಡಿತು. ಉಪಕೃತರಾದ ಸಂಪಾದಕರೊಬ್ಬರು ಬರೆದಂತೆ, "ಹೊಸ ಸರ್ಕಾರ ಬಂದು ಇನ್ನೂ ಒಂದು ವರ್ಷವಾಗಿಲ್ಲ, ಆದರೂ ಬಕ್ಷಿ ಸರ್ಕಾರ ಕೆಲವು ಕ್ಷೇತ್ರಗಳಲ್ಲಿ ಶೇಖ್ ಅಬ್ದುಲ್ಲಾ ಸರ್ಕಾರ ಆರು ವರ್ಷಗಳಲ್ಲಿ ಮಾಡಲಾಗದ ಸುಧಾರಣೆಗಳನ್ನು ಜಾರಿಗೆ ತಂದಿದೆ" ಎಂದು ಪ್ರಶಂಶಿಸಿದ್ದರು. ಸಾರ್ವಜನಿಕರು, ಮಾಧ್ಯಮಗಳ ನಂತರ ಈಗ ರಾಷ್ಟ್ರಪತಿಗಳ ಸರದಿಯಾಗಿತ್ತು. 1955ರ ಅಕ್ಟೋಬರ್‌ನಲ್ಲಿ ಡಾ. ರಾಜೇಂದ್ರ ಪ್ರಸಾದರು ಶ್ರೀನಗರಕ್ಕೆ ಭೇಟಿಕೊಟ್ಟರು. ವಿಮಾನ ನಿಲ್ದಾಣದಿಂದಲೇ ಜನ ಅದ್ದೂರಿಯ ಸ್ವಾಗತ ನೀಡಿದರು. ಝೀಲಂನದಿಯಲ್ಲಿ ನೌಕಾ ಮೆರವಣಿಗೆ ನಡೆಯಿತು. ಜಲವಿದ್ಯುತ್ ಯೋಜನೆ ಹಾಗೂ ಹೊಸ ಸರ್ಕಾರದ ಇನ್ನೂ ಅನೇಕ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲು ರಾಷ್ಟ್ರಪತಿಗಳು ಬಂದಿದ್ದರು.

ಇದೇ ಕಾಲಕ್ಕೆ ಶೇಖ್ ಅಬ್ದುಲ್ಲಾ ಸ್ಥಾನಬದ್ಧತೆಯಲ್ಲಿದ್ದರು. ಮೊದಲಿಗೆ ಅವರನ್ನು ಉಧಾಂಪುರದ ಹಳೆಯ ಅರಮನೆಯೊಂದರಲ್ಲಿ ಇರಿಸಲಾಯಿತು. ನಂತರ ಕೋಟಾದ ತಂಪು ಬಂಗ್ಲೆಯೊಂದರಲ್ಲಿರಿಸಲಾಯಿತು. ಅವರು 'ಭಾರತದ ಉಗ್ರ ವಿರೋಧಿ'ಯಾಗಿ ಗುರುಗುಟ್ಟುತ್ತಿದ್ದರು.

ಕಾಶ್ಮೀರದೊಳಗೆ ಹಾಗೂ ಹೊರ ಪ್ರಪಂಚದಲ್ಲಿ ಬಕ್ಷಿಯವರನ್ನು ದುರಾಕ್ರಮಿ ಎಂದೇ ಭಾವಿಸಲಾಗಿತ್ತು. ದೆಹಲಿಯ ಜಮ್ಮಾ ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನಾ ಸಭೆಗಳ

ಎರಡು ಪೊಲೀಸ್ ವರದಿಗಳು ಇಲ್ಲಿ ತುಂಬ ಪ್ರಸ್ತುತ, ಸುಸಂಗತವಾಗಿ ತೋರುತ್ತವೆ. 1953ರ ಅಕ್ಟೋಬರ್ 2ರಂದು ಇಲ್ಲಿ ನಡೆದ ಪ್ರಾರ್ಥನಾ ಸಭೆಯಲ್ಲಿ ಕಾಶ್ಮೀರದಿಂದ ಆಯ್ಕೆಯಾಗಿದ್ದ ಇಬ್ಬರು ಸಂಸತ್ ಸದಸ್ಯರು ಭಾಗವಹಿಸಿದ್ದರು. ಕಾಶ್ಮೀರ ಪರಿಸ್ಥಿತಿಗೆ ಸಂಬಂಧಿಸಿದಂತೆ ಚರ್ಚಿಸಲು ಸಭೆಯೊಂದನ್ನು ಏರ್ಪಡಿಸುವಂತೆ ಮೌಲ್ವಿಯೊಬ್ಬರು ಸಲಹೆ ಮಾಡಿದಾಗ, ಈ ಸದಸ್ಯರು "ಅಂಥ ಸಭೆಗೆ ಕಾಲ ಪಕ್ವವಾಗಿಲ್ಲವೆಂದೂ ತಾವು ಶೇಖ್ ಅಬ್ದುಲ್ಲಾರ ಬಿಡುಗಡೆಗೆ ತೆರೆಮರೆಯಲ್ಲಿ ಸಂಧಾನ ಪ್ರಯತ್ನಗಳನ್ನು ನಡೆಸಿರುವುದಾಗಿಯೂ" ತಿಳಿಸಿದರು. "ಕಾಶ್ಮೀರಿಗಳೆಲ್ಲರೂ ಭಾರತದೊಳಗೇ ಇರುತ್ತಾರೆ, ಭಾರತಕ್ಕಾಗಿ ಜೀವ ಕೊಡುತ್ತಾರೆ" ಎಂದು ಇವರಿಬ್ಬರು ತಿಳಿಸಿದ್ದರು. ಆದರೆ, ಶೇಖರ ಸ್ಥಾನಬದ್ಧತೆ ಮುಂದುವರಿದಲ್ಲಿ, ರಾಜ್ಯ ಸಿಟ್ಟಿನಿಂದ ಪಾಕಿಸ್ತಾನದತ್ತ ಮುಖ ಮಾಡಬಹುದು, ಹಾಗಾದಲ್ಲಿ ನಾವು ಅದಕ್ಕೆ ಹೊಣೆಗಾರರಲ್ಲ ಎಂದು ಇವರು ಎಚ್ಚರಿಸಿದ್ದರು.

ಮೂರು ತಿಂಗಳ ನಂತರ ಜಮ್ಮಾ ಮಸೀದಿಯ ಪ್ರಾರ್ಥನಾ ಸಭೆಯಲ್ಲಿ ಬಕ್ಷಿ ಗುಲಾಂ ಮೊಹಮ್ಮದ್ದರೇ ಭಾಗವಹಿಸಿದ್ದರು. ಇದೊಂದು ರೀತಿಯಲ್ಲಿ ಶಹಜಹಾನ್ ಹದಿನೇಳನೇ ಶತಮಾನದಲ್ಲಿ ಕಟ್ಟಿದ ಮಸೀದಿಯ ಮೇಲಿನ ವಾರಸುದಾರಿಕೆಯುನ್ನು ಸ್ಥಾಪಿಸುವಂಥಾದ್ದಾಗಿತ್ತು. ಮಸೀದಿಯ ಮೇಲ್ವಿಚಾರಕರಿಗೆ ಬಕ್ಷಿ ಮತ್ತು ದೆಹಲಿ ಸಂಬಂಧದ ಅರಿವಿತ್ತು. ಸಂಪೂರ್ಣ ಗೌರವಾದರಗಳೊಂದಿಗೆ ಬಕ್ಷಿಯವರನ್ನು ಸ್ವಾಗತಿಸಿದರು. ಆದರೆ, ಪೊಲೀಸರ ವರದಿ ಪ್ರಕಾರ, "ಅಲ್ಲಿ ನೆರೆದಿದ್ದ, ಕೆಲವು ಕಾಶ್ಮೀರಿಗಳೂ ಒಳಗೊಂಡಂತೆ, ಮುಸ್ಲಿಮರು ಬಕ್ಷಿ ಗುಲಾಂ ಮೊಹಮದ್ ವಿರುದ್ಧ ಗುಸುಗುಸು ಮಾತುಗಳನ್ನಾಡುತ್ತಿದ್ದರು. 'ಗುರು' ಶೇಖ್ ಅಬ್ದುಲ್ಲಾರನ್ನು ಜೈಲಿಗೆ ತಳ್ಳಿ ತಾನು ಕಾಶ್ಮೀರದ ಪ್ರಧಾನಿ ಗದ್ದುಗೆ ಏರಿದ್ದಾನೆ ಎಂದು ಅವರು ಮಾತನಾಡಿಕೊಳ್ಳುತ್ತಿದ್ದರು."

VII

1950ರ ದಶಕದಲ್ಲಿ ಕಾಶ್ಮೀರ ಕಣಿವೆ 1940ರ ದಶಕವಂತೆಯೇ ಕಷ್ಟಕ್ಲೇಶಗಳನ್ನು ಎದುರಿಸುತ್ತಾ ಡೋಲಾಯಮಾನ ಸ್ಥಿತಿಯಲ್ಲಿತ್ತು. 1940ರ ದಶಕದ ಕಷ್ಟವೆಂದರೆ ಮಹಾರಾಜರ ಅನಿಶ್ಚಿತ ಮನಸ್ಸು, ಚಂಚಲ ಮನಸ್ಕತೆ. ಪಾಕಿಸ್ತಾನದ ಜೊತೆ ಸೇರುವುದೆ? ಭಾರತದ ಜೊತೆ ಸೇರುವುದೆ? ಇದು ಪ್ರಶ್ನೆ. ಎರಡು ರಾಷ್ಟ್ರಗಳ ಜೊತೆ ಸೇರದಿರಲು ಅಂತಿಮವಾಗಿ ಮಹಾರಾಜರು ನಿರ್ಧರಿಸಿದ್ದರು. ಜೊತೆಗೆ ಗುಡ್ಡಗಾಡು ಜನರ ಆಕ್ರಮಣದ ಭೀತಿ ಬೇರೆ ಇತ್ತು. ಆದರೆ 1950ರ ದಶಕದ ತೊಂದರೆಗಳಿಗೆ ಹಿನ್ನೆಲೆಯಾಗಿ ಶೇಖ್ ಅಬ್ದುಲ್ಲಾ ಮತ್ತು ಶ್ಯಾಂಪ್ರಸಾದ್ ಮುಖರ್ಜಿಯವರ ಮಹತ್ವಾಕಾಂಕ್ಷೆಗಳಿದ್ದವು. ಇಬ್ಬರೂ ಸಂವಿಧಾನಾತ್ಮಕ ಪ್ರಜಾಸತ್ತೆಯ ಚೌಕಟ್ಟಿನೊಳಗೆ ತಮ್ಮ ಪಾತ್ರ ನಿರ್ವಹಿಸಲು ಸಿದ್ಧರಿರಲಿಲ್ಲ. ಇಬ್ಬರೂ ತಮ್ಮ ರಾಜಕೀಯ ಮಹತ್ವಾಕಾಂಕ್ಷೆಗಳನ್ನು ಪಣಕ್ಕೊಡ್ಡಿದ್ದರು. ಇಬ್ಬರೂ ಅದಕ್ಕೆ ತಕ್ಕ ಬೆಲೆ ತೆತ್ತರು.

ಕಾಶ್ಮೀರದೊಳಗಿನ ಬೆಳವಣಿಗೆಗಳು ಮತ್ತು ವಿದ್ಯಮಾನಗಳು ಭಾರತಕ್ಕೆ ಮಾತ್ರ ತಲೆನೋವಾಗಿ ಪರಿಣಮಿಸಿರಲಿಲ್ಲ. 1947ರ ಭಾರತದ ಸಶಸ್ತ್ರ ಪಡೆಗಳ ದಂಡನಾಯಕರಾಗಿದ್ದ ಬ್ರಿಟಿಷ್ ಜನರಲ್ ಈ ಬೆಳವಣಿಗೆಗಳಿಂದ ಭಾರತ-ಪಾಕಿಸ್ತಾನದ ನಡುವಣ ಬಾಂಧವ್ಯ ಹದಗೆಡಬಹುದೆಂದು ಭಾವಿಸಿದ್ದರು. ಕಾಶ್ಮೀರ ರಕ್ಷಣೆ ವಿಷಯದಲ್ಲಿ ಇವರಿಗೆ ಶೇಖ್ ಅಬ್ದುಲ್ಲಾ ಮತ್ತು ಬಕ್ಷಿಯವರ ಮನಸ್ಸಿನಲ್ಲಿ ಏನಿದೆ ಎಂಬುದು ತಿಳಿದಿತ್ತು. ಶೇಖ್ ಅಬ್ದುಲ್ಲಾ ಎಂದಿಗೂ ದೊಡ್ಡ ಮನುಷ್ಯನಾಗಿರಲಿಲ್ಲವಾದರೂ "ತನ್ನ ರಾಷ್ಟ್ರಪ್ರೇಮ, ಭಕ್ತಿಗಳಲ್ಲಿ ಪ್ರಾಮಾಣಿಕನಾಗಿದ್ದರು." ಬಕ್ಷಿಯವರು ಪ್ರಾಮಾಣಿಕ ವ್ಯಕ್ತಿಯೇ, ಆದರೆ ಅವರಿಗೆ ತಮ್ಮದೇ ಆದ ವರ್ಚಸ್ಸು, ಯೋಗ್ಯತೆಗಳಿರಲಿಲ್ಲ.

ಆದರೆ ಬಕ್ಷಿಯವರಿಗೆ ಸಂಘಟನಾ ಚಾತುರ್ಯ ಮತ್ತು ಸಂಸ್ಥೆ ನಿರ್ವಹಿಸುವ ಪ್ರತಿಭೆ ಇತ್ತು. ತನ್ನ ಗೂಡು ಕಟ್ಟಿಕೊಳ್ಳುವ, ಓರಣದಿಂದಿರಿಸಿಕೊಳ್ಳುವ ಸಾಮರ್ಥ್ಯವಿತ್ತು. ದೆಹಲಿಯಲ್ಲಿನ ತಮ್ಮ ನಿಕಟ ಸಂಪರ್ಕ ಬಳಸಿಕೊಂಡು ರಾಜ್ಯಕ್ಕೆ ಹೆಚ್ಚು ಹಣ ಹರಿದು ಬರುವಂತೆ ಮಾಡಿದರು. ರಸ್ತೆ, ಅಣೆಕಟ್ಟು, ಆಸ್ಪತ್ರೆ, ಹೋಟೆಲುಗಳು, ಸುರಂಗಗಳು ಇವೇ ಮೊದಲಾದ ನಿರ್ಮಾಣ ಯೋಜನೆಗಳಿಗೆ ದೆಹಲಿಯಿಂದ ಹಣ ತಂದರು. ಶ್ರೀನಗರದಲ್ಲಿ, ಹೊಸ ಸಚಿವಾಲಯವೂ ಸೇರಿದಂತೆ ಅನೇಕ ಭವ್ಯ ಕಟ್ಟಡಗಳ ನಿರ್ಮಾಣವಾಯಿತು. ಹೊಸ ಕ್ರೀಡಾಂಗಣ, ಹೊಸ ಪ್ರವಾಸಿ ಸಮುಚ್ಚಯಗಳು ನಿರ್ಮಾಣಗೊಂಡವು. ಆದರೆ ಬಕ್ಷಿಯವರ ಸರ್ಕಾರ ಕೈಗೊಂಡ ಅಭಿವೃದ್ಧಿ ಯೋಜನೆಗಳಲ್ಲಿ, ಶೇಕಡ ಇಂತಿಷ್ಟು ಪಾಲು ಅವರ ಕುಟುಂಬ ವರ್ಗದವರಿಗೆ ಮತ್ತು ಮಿತ್ರರಿಗೇ ಮೀಸಲಾಗಿರುತ್ತಿತ್ತು. ಅತ್ಯಲ್ಪ ಕಾಲಾವಧಿಯಲ್ಲೇ ಬಕ್ಷಿಯವರ ಆಡಳಿತ ಬಿಬಿಸಿ ಎಂದು ಕುಖ್ಯಾತವಾಯಿತು. ಬಿಬಿಸಿ-ಬಕ್ಷಿ ಬ್ರದರ್ಸ್ ಕಾರ್ಪೊರೇಶನ್.

1952-53ರ ಅವಧಿಯಲ್ಲಿ ಆದ ಅಭಿವೃದ್ಧಿ ಕಾರ್ಯಗಳಿಂದಾಗಿ ಕಣಿವೆ ಮೇಲಿನ ಭಾರತದ ಹಕ್ಕು ಬಾಧ್ಯತೆಗಳ ಬಗ್ಗೆ ಅನೇಕ ನೈತಿಕ ಪ್ರಶ್ನೆಗಳು ಉದ್ಭವಿಸಿದವು. 1947ರ ಆಕ್ರಮಣ ನಡೆದು ಆರು ವರ್ಷಗಳು ಉರುಳಿದ್ದವು. ಕಣಿವೆಯನ್ನು ಮರೆಯಲಿಕ್ಕೆ ಇಷ್ಟು ಕಾಲ ಸಾಕಾಗಿತ್ತು. ಆದರೆ ಕಣಿವೆ ಬಗ್ಗೆ ಮರೆಯದೇ ಸದಾ ಜಾಗೃತರಾಗಿದ್ದವರು ಮುಸ್ಲಿಮರು ಮತ್ತು ಪಾಕಿಸ್ತಾನ. ಜೊತೆಗೆ ಖಾಸಾ ಭಾರತದ ಪರ ವ್ಯಕ್ತಿ ಎಂದು ಮೆರೆಸಲಾಗಿದ್ದ ಶೇಖ್ ಅಬ್ದುಲ್ಲಾರನ್ನು ಭಾರತ ಸರ್ಕಾರವೇ ಈಗ ಜೈಲಿನಲ್ಲಿಟ್ಟಿತ್ತು.

ಕಾಶ್ಮೀರದಲ್ಲಿ ಪರಿಸ್ಥಿತಿ ಬೇರೆ ಯಾವ ರೀತಿಯಲ್ಲಾದರೂ ಬದಲಾವಣೆ ಹೊಂದಲು ಸಾಧ್ಯವಿತ್ತೆ? ಶೇಖ್ ಅಬ್ದುಲ್ಲಾ ಮತ್ತು ಶ್ಯಾಂಪ್ರಸಾದ್ ಮುಖರ್ಜಿ ಜವಾಬ್ದಾರಿತನದಿಂದ ವರ್ತಿಸಿದ್ದಿದ್ದರೆ ಪರಿಸ್ಥಿತಿ ಬೇರೆಯದೇ ಆಗಬಹುದಿತ್ತೇನೋ. ಹಾಗೆಯೇ ಬಹುಶಃ ಭಾರತ ಸರ್ಕಾರ ಮತ್ತು ಜವಹರಲಾಲ್ ನೆಹರೂ ಅವರೂ, ಆಗ ಬೆಂಗಳೂರಿನಿಂದ ಸಾಪ್ತಾಹಿಕ ವೊಂದನ್ನು ಸಂಪಾದಿಸುತ್ತಿದ್ದ ಅನಾಮಧೇಯ ಆಂಗ್ಲ ಭಾಷಾ ಪತ್ರಕರ್ತನೊಬ್ಬನ ಕಿವಿಮಾತು ಕೇಳಿಸಿಕೊಂಡಿದ್ದಿದ್ದರೆ ಪರಿಸ್ಥಿತಿ ಭಿನ್ನವಾಗಿರುತ್ತಿತ್ತೇನೋ.

1952-53ರಲ್ಲಿ ನೆಹರೂ ಅವರು ಪಾಕಿಸ್ತಾನದ ಮೇಲೆ ಆಕ್ರಮಣ ನಡೆಸಬೇಕೆಂದೂ, ತನ್ಮೂಲಕ ಉತ್ತರ ಕಾಶ್ಮೀರವನ್ನು ಭಾರತ ಹಿಂದಕ್ಕೆ ಪಡೆಯಬೇಕೆಂದೂ ಡಾ. ಮುಖರ್ಜಿಯವರು ಒತ್ತಡ ಹೇರುತ್ತಿದ್ದ ಕಾಲ. ಆ ದಿನಗಳಲ್ಲಿ ಫಿಲಿಪ್ ಸ್ಪ್ರಾಟ್ ವಿಭಿನ್ನವಾದ, ತೀವ್ರಗಾಮಿಯಾದ ಪರಿಹಾರವೊಂದನ್ನು ಸೂಚಿಸಿದ್ದರು. "ಭಾರತ ಕಾಶ್ಮೀರ ಕಣಿವೆ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಡಬೇಕು ಹಾಗೂ ಶೇಖ್ ಅಬ್ದುಲ್ಲಾರ ಸ್ವಾತಂತ್ರ್ಯದ ಕನಸು ನನಸಾಗಲು ಅವಕಾಶ ಮಾಡಿಕೊಡಬೇಕು. ಭಾರತ ತನ್ನ ಸೈನ್ಯ ವಾಪಸು ಕರೆಸಿಕೊಳ್ಳಬೇಕು ಹಾಗೂ ಜಮ್ಮು ಕಾಶ್ಮೀರ ಸರ್ಕಾರಕ್ಕೆ ನೀಡಿರುವ ಸಾಲವನ್ನು ಮನ್ನಾ ಮಾಡಬೇಕು. ಜಾತ್ಯತೀತ ರಾಷ್ಟ್ರವೊಂದರ ಸೃಷ್ಟಿ ಸಾಧ್ಯತೆಗಳ ಬಗ್ಗೆ ಕಾಶ್ಮೀರ ಏಕಾಂಗಿಯಾಗಿ ತನ್ನ ಸಾಹಸಗಳನ್ನು ಮುಂದುವರಿಸಲಿ, ನಾವು ದೂರ ನಿಂತು, ಸಹಾನುಭೂತಿಪರರಾಗಿ ನಂಬಿಕಸ್ಥನ ಕಾರ್ಯವನ್ನು ಗಮನಿಸೋಣ. ನಮ್ಮ ಸಂಪನ್ಮೂಲಗಳು ಮತ್ತು ನಮ್ಮ ಭವಿಷ್ಯವನ್ನು, ನಮ್ಮ ಆತ್ಮದಲ್ಲಿ ಸುಳ್ಳನ್ನು ದಾಖಲಿಸುವ, ನಮ್ಮನ್ನು ನೈತಿಕವಾಗಿ ನಿತ್ರಾಣಗೊಳಿಸುವ ತಂಟೆ ತಕರಾರುಗಳಿಂದ ಮುಕ್ತಗೊಳಿಸೋಣ" ಎಂದು ಫಿಲಿಪ್ ಸ್ಪ್ರಾಟ್ ಬರೆದಿದ್ದರು.

ಸ್ಪ್ರಾಟ್ ಅವರ ಸಲಹೆಯಲ್ಲಿ ನೈತಿಕತೆಯ ಛಾಯೆ ಇತ್ತು. ಇದಕ್ಕೂ ಮಿಗಿಲಾಗಿ ಆರ್ಥಿಕ ವ್ಯವಹಾರ ಜ್ಞಾನ, ವಿವೇಚನೆಗಳಿದ್ದವು. ಭಾರತದ ನೀತಿ ತಪ್ಪು ಕಲ್ಪನೆಯಿಂದ ಆಧಾರಿತವಾಗಿದೆ. ಒಂದೇ ರಾಷ್ಟ್ರದ ಸಿದ್ಧಾಂತದಲ್ಲಿನ ನಂಬಿಕೆ ಹಾಗೂ ಆಯಕಟ್ಟಿನಲ್ಲಿರುವ ಸುಂದರ ಶ್ರೀನಗರ ಕಣಿವೆ ಮೇಲಿನ ದುರಾಸೆಗಳಿಂದ ಕೂಡಿದೆ. ಈ ನೀತಿಗೆ, ವರ್ತಮಾನದಲ್ಲಿ ಹಾಗೂ ಭವಿಷ್ಯದಲ್ಲಿ ತೆರಬೇಕಾದ ಬೆಲೆ ಅಪಾರವಾದದ್ದು. ಲೆಕ್ಕ ಮಾಡಲಿಕ್ಕಾಗದಷ್ಟು ಬೆಲೆ ತೆರಬೇಕಾದೀತು. ಕಾಶ್ಮೀರಕ್ಕೆ ವಿಶೇಷ ಹಕ್ಕು ಬಾಧ್ಯತೆಗಳನ್ನು ಕೊಟ್ಟು, ಭಾರತದ ಬೇರೆ ಭಾಗಗಳಲ್ಲಿ ಪ್ರತಿರೋಧ ಸೃಷ್ಟಿಸುವ ಬದಲು ಆ ರಾಜ್ಯವನ್ನು ಬಿಟ್ಟು ಕೊಡುವುದೇ ಉತ್ತಮ ಮಾರ್ಗವಾದೀತು-ಎನ್ನುವುದು ಸ್ಪ್ರಾಟ್ ಅವರ ಪರಿಹಾರವಾಗಿತ್ತು.

ಆದರೆ ವಸ್ತುಸ್ಥಿತಿ ಬೇರೆಯದೇ ಆಗಿತ್ತು. ಕಾಶ್ಮೀರ, ಎದುರುಬದುರು ನಿಂತು ಪರಸ್ಪರ ಎವೆಯಿಕ್ಕಿ ನೋಡುತ್ತಿದ್ದ ಎರಡು ತಟಸ್ಥ ಸೇನೆಗಳ ಕಪಿಮುಷ್ಟಿಯಲ್ಲಿ ಸಿಕ್ಕಿಬಿದ್ದಿತ್ತು. ಈ ಘೋರ ಪರಿಸ್ಥಿತಿ ಅನಿರ್ದಿಷ್ಟಕಾಲ ಮುಂದುವರಿಯುವುದರಿಂದ ಕೆಲವರಿಗೆ ಅನುಕೂಲವಾಗುತ್ತಿತ್ತೇನೋ. ಆದರೆ ಭಾರತದ ತೆರಿಗೆದಾರ ಕಾಶ್ಮೀರದ ಮೇಲಿನ ಹಕ್ಕು ಸ್ಥಾಪನೆಗಾಗಿ ತನ್ನೆಲ್ಲ ವರಮಾನವನ್ನೂ ತೆರುತ್ತಿದ್ದ. ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಹಕ್ಕು ಸ್ಥಾಪಿಸಲು ಎಲ್ಲವನ್ನೂ ತೆರುತ್ತಿದ್ದ. ಇದರಲ್ಲಿ ಲಾಭವೆಲ್ಲ ಪಾಕಿಸ್ತಾನಕ್ಕೆ, ನಷ್ಟವೆಲ್ಲ ಭಾರತಕ್ಕೆ.

ಲೌಕಿಕ ಆಸಕ್ತಿಗಳು ಸೈದ್ಧಾಂತಿಕ ಆಕರ್ಷಣೆಗಳನ್ನು ಮೀರಿ ನಿಲ್ಲಬೇಕು ಎನ್ನುವ ತರ್ಕ ಮಾಜಿ ಮಾರ್ಕ್ಸ್‌ವಾದಿಗೆ (ಸ್ಪ್ರಾಟ್) ಅನುಕೂಲಕರವಾಗಿ ಸಹಾಯಕ್ಕೆ ಒದಗಿ ಬಂದಿತ್ತು. ಆದರೆ 1950ರ ಭಾರತದಲ್ಲಿ ಈ ತರ್ಕ ಮೆಚ್ಚಿಕೊಳ್ಳುವ ಮಂದಿ ಬಹಳ ಇರಲಿಲ್ಲ.

○

13

ಗುಡ್ಡಗಾಡಿನಲ್ಲಿ ಗುಡುಗು ಸಿಡಿಲು

ಈ ಬುಡಕಟ್ಟಿನ ಜನರು ಪಟ್ಟು ಬಿಡದೆ, ಮೊಂಡುತನದಿಂದ, ಸಂಕಲ್ಪ ಬಲದಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ಆದರೆ ನಿರ್ಭೀತರಾಗಿ ಎದೆಗಾರಿಕೆಯಿಂದ ಶತ್ರುಗಳ ಮೇಲೆ ಎರಗುತ್ತಾರೆ. ಅವರಲ್ಲಿ ಅಪಾಯದ ಅರಿವು ಅಥವಾ ಮರಣಭೀತಿಗೆ ಮಿಗಿಲಾದ ಕಷ್ಟ ಸಹಿಷ್ಣುತೆ ಇದೆ.

–ನಾಗಾಗಳ ಬಗ್ಗೆ ವ್ಯಾಖ್ಯಾನ ಮಾಡಿರುವ ಬ್ರಿಟಿಷ್ ಅಧಿಕಾರಿ.

ಕಾಲ ಸುಮಾರು 1840.

I

1950ರ ದಶಕದಲ್ಲಿ ಭಾರತ ಸರ್ಕಾರ ಕಾಶ್ಮೀರ ಕಣಿವೆಯ ಮೇಲಿನ ತನ್ನ ಹಕ್ಕನ್ನು ಸ್ಥಾಪಿಸುವುದರಲ್ಲಿ, ಅದರ ನಿರ್ವಹಣೆಯಲ್ಲಿ ಹೆಣಗಾಡುತ್ತಿತ್ತಾದರೂ ಹಿಮಾಲಯದ ಇನ್ನೊಂದು ತುದಿಯಲ್ಲಿ ಅದರ ಅಧಿಕಾರ ಮತ್ತು ವಾರಸುದಾರಿಕೆಯನ್ನು ಪ್ರಶ್ನಿಸಲಾಗುತ್ತಿತ್ತು. ಇದು, ನವದೆಹಲಿಯ 'ನಾಗಾ ಸಮಸ್ಯೆ'ಯಾಗಿತ್ತು. ಇದೊಂದು ಅತಿ ಪುರಾತನ ಸಮಸ್ಯೆಯಾದರೂ ಕಾಶ್ಮೀರ ಸಮಸ್ಯೆಗಿಂತ ಹೆಚ್ಚು ಪರಿಚಿತವಾದುದಾಗಿರಲಿಲ್ಲ. ಹಾಗೆಯೇ ಇದಕ್ಕೆ ಸುಲಭ ಪರಿಹಾರವೂ ಇರಲಿಲ್ಲ.

ನಾಗಾಗಳು ಪೂರ್ವ ಹಿಮಾಲಯದಲ್ಲಿ, ಬರ್ಮಾ ಗಡಿಯುದ್ದಕ್ಕೂ ವಾಸಿಸುತ್ತಿದ್ದ ಒಂದು ಅವ್ಯವಸ್ಥಿತ ಸಮುದಾಯ. ಪರ್ವತದ ಮಡಿಲಲ್ಲಿ ಭದ್ರತೆ ಕಂಡುಕೊಂಡಿದ್ದ ಈ ಜನ ಭಾರತದ ಇತರ ಭಾಗಗಳಿಂದ ಪ್ರತ್ಯೇಕಿತರಾಗಿದ್ದರು. ಭಾರತದ ಇತರ ಭಾಗಗಳಲ್ಲಿ ನಡೆದಿದ್ದ ರಾಜಕೀಯ-ಸಾಮಾಜಿಕ ಬೆಳವಣಿಗೆಗಳು ಇವರ ಗಮನಕ್ಕೆ ಬಂದಿರಲಿಲ್ಲ. ಬ್ರಿಟಿಷರೂ ಈ ಸಮುದಾಯವನ್ನು ಲಘುವಾಗಿ ಪರಿಗಣಿಸಿದ್ದರು. ತಲೆಶಿಕಾರಿ* ಹೊರತಾಗಿ, ಈ ಜನರ ಆಚಾರ-ವಿಚಾರ, ಸಂಪ್ರದಾಯಗಳಲ್ಲಿ ತಲೆಹಾಕಲಿಲ್ಲ. ಬಯಲು ಸೀಮೆಯವರನ್ನು

---

* ತಲೆಶಿಕಾರಿ= ಜಯದ ಗುರುತಾಗಿ ಸತ್ತ ಶತ್ರುಗಳ ತಲೆಬುರುಡೆಗಳನ್ನು ಸಂಗ್ರಹಿಸಿಡುವ ಗುಡ್ಡಗಾಡು ಜನರಲ್ಲಿದ್ದ ಆಚರಣೆ.

ಇವರಿಂದ ದೂರವಿರಿಸಿದ್ದರು. ಆದರೆ ಹತ್ತೊಂಬತ್ತನೇ ಶತಮಾನದಿಂದ ಕ್ರಿಯಾಶೀಲರಾಗಿದ್ದ ಅಮೆರಿಕದ ಕ್ರಿಶ್ಚಿಯನ್ ಧರ್ಮಾಧಿಕಾರಿಗಳು, ಬುಡಕಟ್ಟಿನ ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸುವುದರಲ್ಲಿ ಯಶಸ್ವಿಯಾಗಿದ್ದರು.

ಈ ಕಾಲಕ್ಕೆ, ನಾಗಾ ಗುಡ್ಡಗಾಡು ಪ್ರದೇಶಗಳು ಅಸ್ಸಾಮಿನ ಭಾಗವಾಗಿದ್ದುವು. ಅಸ್ಸಾಂ, ಭಾರತದ ಗುಣ ಮೌಲ್ಯಗಳ ದೃಷ್ಟಿಯಿಂದ ಭಿನ್ನವಾಗಿತ್ತು. ಚೀನಾ, ಬರ್ಮಾ ಮತ್ತು ಪೂರ್ವ ಪಾಕಿಸ್ತಾನದೊಂದಿಗೆ ಗಡಿಯನ್ನು ಹೊಂದಿತ್ತು. ಇಲ್ಲಿ ವಿವಿಧ ಧರ್ಮೀಯರು ವಾಸ ಮಾಡುತ್ತಿದ್ದರು. ಅಸ್ಸಾಮಿನ ಬಯಲು ಸೀಮೆಯಲ್ಲಿ, ಅಸ್ಸಾಮಿ ಮಾತನಾಡುವ ಹಿಂದೂಗಳು ಹಾಗೂ ವಿವಿಧ ಭಾರತೀಯ ಸಂಸ್ಕೃತಿಯ ಜನರು ವಾಸವಾಗಿದ್ದರು. ಇವರಲ್ಲಿ ಅತಿಮುಖ್ಯವಾದ ಪಂಗಡಗಳೆಂದರೆ, ಮಿಜೋಗಳು, ಖಾಸಿಗಳು, ಗಾರೋಗಳು ಮತ್ತು ಜಯಂತಿಯಾಗಳು. ಈ ಜನರ ಹೆಸರುಗಳು ಅವರ ವಾಸಮಾಡುತ್ತಿರುವ ಗುಡ್ಡಗಾಡು ಪ್ರದೇಶದ ಹೆಸರುಗಳ ಅನ್ವರ್ಥನಾಮವಾಗಿದ್ದವು. ಇದಲ್ಲದೆ ಈ ಭಾಗದಲ್ಲಿ ತ್ರಿಪುರಾ ಮತ್ತು ಮಣಿಪುರ ಪ್ರದೇಶಗಳಿದ್ದವು. ಇಲ್ಲಿ ಜನಸಂಖ್ಯೆ ಭಾಗಶಃ ಹಿಂದೂಗಳು ಮತ್ತು ಭಾಗಶಃ ಬುಡಕಟ್ಟಿನ ಜನರ ಸಮ್ಮಿಶ್ರಣವಾಗಿತ್ತು.

ಈಶಾನ್ಯ ಭಾರತದ ಬುಡಕಟ್ಟು ಜನಾಂಗದಲ್ಲಿ, ಬಹುಶಃ ನಾಗಾಗಳೇ ಹೆಚ್ಚು ಸ್ವಯಮಾಧಿಕಾರ ಹೊಂದಿದ್ದರು. ನಾಗಾಗಳ ವಾಸ ಪ್ರದೇಶ ಭಾರತ-ಬರ್ಮಾ ಗಡಿಯಲ್ಲಿತ್ತು. ವಾಸ್ತವವಾಗಿ ಭಾರತ ಹಾಗೂ ಬರ್ಮಾಗಳಲ್ಲಿ ನಾಗಾಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು. ನಾಗಾಗಳು ಅಸ್ಸಾಮಿನ ಹಿಂದೂ ಗ್ರಾಮಗಳೊಂದಿಗೆ ಸಂಪರ್ಕ ಹೊಂದಿದ್ದರು. ಈ ಗ್ರಾಮಗಳಿಗೆ ಅವರು ಉಪ್ಪು ಮಾರಾಟ ಮಾಡುತ್ತಿದ್ದರು. ಇದೊಂದು ಬಗೆಯ ವಿನಿಮಯ ಮಾರಾಟವಾಗಿದ್ದು, ಉಪ್ಪು ಕೊಟ್ಟು ಅದಕ್ಕೆ ಬದಲು ಅಕ್ಕಿ ಪಡೆಯುತ್ತಿದ್ದರು. ಆದಾಗ್ಯೂ ನಾಗಾಗಳು ಕಾಂಗ್ರೆಸ್ ನಾಯಕತ್ವದ ಸ್ವಾತಂತ್ರ್ಯ ಚಳವಳಿಯಿಂದ ಹೊರಗೇ ಉಳಿದಿದ್ದರು. ಇಲ್ಲಿ ಸತ್ಯಾಗ್ರಹವಾಗಲಿ, ನಾಗರಿಕ ಅಸಹಕಾರ ಚಳವಳಿಯಾಗಲೀ ನಡೆದಿರಲಿಲ್ಲ. ಬಿಳಿ ಖದ್ದರ್ ಟೋಪಿ ಧರಿಸಿದ ಗಾಂಧಿವಾದಿ ನಾಯಕರು ಯಾರೂ ಈ ಗುಡ್ಡಗಾಡು ಪ್ರದೇಶಕ್ಕೆ ಭೇಟಿಯಿತ್ತಿರಲಿಲ್ಲ. ಗುಡ್ಡಗಾಡಿನ ಕೆಲವು ಬುಡಕಟ್ಟುಗಳು ಬ್ರಿಟಿಷರ ವಿರುದ್ಧ ಉಗ್ರ ಹೋರಾಟ ನಡೆಸಿದ್ದುಂಟು. ಆದರೆ ಕಾಲಕ್ರಮೇಣ ಪರಸ್ಪರ ಗೌರವಿಸುವ ಒಪ್ಪಂದ ಮಾಡಿಕೊಂಡರು. ಬ್ರಿಟಿಷರಿಂದ ತಮ್ಮ ಪಿತೃಪ್ರಾಯತೆಗೆ ಧಕ್ಕೆಯುಂಟಾಗಿದೆಯೆಂದು ಅವರು ಭಾವಿಸಿದ್ದರು. ಆಧುನಿಕ ಪ್ರಪಂಚದ ಭ್ರಷ್ಟ ಪ್ರಭಾವಗಳಿಂದ ತಮ್ಮ ಬುಡಕಟ್ಟು ಜೀವನ ಶೈಲಿಯನ್ನು ರಕ್ಷಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು.

ನಾಗಾ ಸಮಸ್ಯೆ 1946ರಷ್ಟು ಹಳೆಯದು. ಆ ವರ್ಷ ಸಾಮ್ರಾಜ್ಯಶಾಹಿಗಳ ನವದೆಹಲಿ, ಸಿಮ್ಲಾ ಶೃಂಗಸಭೆಗಳಲ್ಲಿ ಬ್ರಿಟಿಷ್ ಭಾರತದ ಹಣೆಯ ಬರಹದ ಚರ್ಚೆ ನಡೆದಿತ್ತು. ಭಾರತದಲ್ಲಿ ಚುನಾವಣೆಗಳು ನಡೆದಂತೆ ಬ್ರಿಟನ್ ಮಂತ್ರಿಮಂಡಲ ಆಯೋಗ ಭಾರತಕ್ಕೆ ಬಂದು ಹೋಯಿತು. ವೈಸರಾಯ್ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಾಯಕರುಗಳೊಂದಿಗೆ

ಮಾತುಕತೆ ನಡೆಸಿದ್ದರು. ಇಷ್ಟೆಲ್ಲ ನಡೆದಿದ್ದಾಗ ಉಪಖಂಡದ ಕತ್ತಲೆ ಕವಿದ ಮೂಲೆಯೊಂದರಲ್ಲಿ ನಾಗಾಗಳು ತಮ್ಮ ಭವಿಷ್ಯ ಕುರಿತು ಚಿಂತಾಕ್ರಾಂತರಾಗಿದ್ದರು. 1946ರ ಜನವರಿಯಲ್ಲಿ ವಿದ್ಯಾವಂತರಾದ, ಇಂಗ್ಲಿಷ್ ಮಾತನಾಡುವ ಸಾಮರ್ಥ್ಯ ಹೊಂದಿದ್ದ ಕೆಲವರು ಒಟ್ಟುಗೂಡಿ ನಾಗಾ ನ್ಯಾಷನಲ್ ಕೌನ್ಸಿಲ್ ಸ್ಥಾಪಿಸಿದರು. ಭ್ರೂಣಾವಸ್ಥೆಯಲ್ಲೇ ಇದು ಸ್ವಾತಂತ್ರ್ಯ ಚಳವಳಿಯ ಅಂದಚಂದದ ಆಕರ್ಷಣೆಗೆ ಒಳಗಾಗಿತ್ತು. ಈ ಬುದ್ಧಿಜೀವಿಗಳು, ತಮ್ಮ ಧ್ಯೇಯ-ಆದರ್ಶಗಳನ್ನು ಪ್ರಚುರ ಪಡಿಸಲು 'ದಿ ನಾಗಾನೇಷನ್' ಎನ್ನುವ ನಿಯತಕಾಲಿಕದ ಪ್ರಕಟಣೆ ಆರಂಭಿಸಿದರು. ಈ ಪತ್ರಿಕೆಯ 250 ನಕಲು ಪ್ರತಿಗಳನ್ನು ನಾಗಾ ದೇಶದಾದ್ಯಂತ ಹಂಚಲಾಯಿತು.

ನಾಗಾಗಳ ಏಕತೆ ಮತ್ತು ನಾಗಾಗಳ 'ಸ್ವಯಂ ನಿರ್ಧಾರ'ದ ಹಕ್ಕು ನಾಗಾ ನ್ಯಾಷನಲ್ ಕೌನ್ಸಿಲ್‌ನ ಮುಖ್ಯ ಕಾರ್ಯಸೂಚಿಯಾಗಿತ್ತು. ಈ 'ಸ್ವಯಂ ನಿರ್ಧಾರದ ಹಕ್ಕು' ಪದ ಪ್ರಯೋಗಕ್ಕೆ ಬೇರೆ ಬೇರೆ ಅರ್ಥ ವಿವರಣೆಗಳನ್ನು ಕೊಡಲಾಗಿತ್ತು. ತದ್ವಿರುದ್ಧವಾದ ಅರ್ಥ ವಿವರಣೆಗಳೂ ಇದ್ದವು. ಅಂಗಾಮಿ ನಾಗಾಗಳು, ಬ್ರಿಟಿಷರು ಸೇರಿದಂತೆ ಹೊರಗಿನವರೆಲ್ಲರ ವಿರುದ್ಧ ಹೋರಾಡಿದ ಸಮರ ವೀರ ಪರಂಪರೆಗೆ ಸೇರಿದವರು. ಇವರ ಅರ್ಥದಲ್ಲಿ ಸ್ವಯಂ ನಿರ್ಧಾರದ ಹಕ್ಕು ಎಂದರೆ ಸಂಪೂರ್ಣ ಸ್ವತಂತ್ರ ರಾಷ್ಟ್ರವಾಗಬೇಕೆಂದು. ನಾಗಾಗಳಿಂದ, ನಾಗಾಗಳಿಗೆ, ನಾಗಾಗಳ ಸರ್ಕಾರ ಬೇಕೆಂಬುದು ಅಂಗಾಮಿಗಳ ನಿಲುವು. ಇವರಲ್ಲೇ ಇನ್ನೊಂದು ಬುಡಕಟ್ಟು ಅವೋಸ್. ಇವರು ಸೌಮ್ಯವಾದಿಗಳು. ಭಾರತದೊಂದಿಗೆ ಘನತೆ-ಗೌರವಗಳಿಂದ ಬದುಕುವುದು ಸಾಧ್ಯ ಎಂದು ಇವರ ನಂಬಿಕೆಯಾಗಿತ್ತು. ಭಾರತದ ಜೊತೆಗಿದ್ದುಕೊಂಡೇ ತಮ್ಮ ಭೂಮಿ, ಪರಂಪರೆ ಸಂಪ್ರದಾಯಗಳನ್ನು ಉಳಿಸಿಕೊಂಡು, ಸ್ವಯಮಾಧಿಕಾರದಿಂದ ತಮ್ಮ ಕಾನೂನು ರಚಿಸಿಕೊಂಡು, ಈ ಕಾನೂನುಗಳನ್ನು ತಾವೇ ಪಾಲಿಸಿಕೊಂಡು ಬದುಕುವಂಥ ಸ್ವಾಯತ್ತ ವ್ಯವಸ್ಥೆ ಬೇಕೆಂಬುದು ಅವೋಸ್‌ಗಳ ನಿಲುವಾಗಿತ್ತು.

ಪ್ರಾರಂಭದಲ್ಲಿ ನಾಗಾ ನ್ಯಾಷನಲ್ ಕೌನ್ಸಿಲ್ ಸಭೆಗಳಲ್ಲಿ ಈ ಎರಡು ಬಣಗಳ ನಡುವೆ ಉಗ್ರ ಚರ್ಚೆ, ವಾದ-ವಿವಾದ-ತರ್ಕಗಳು ನಡೆದವು. 'ದಿ ನಾಗಾನೇಷನ್' ಇದನ್ನೆಲ್ಲ ಪ್ರಕಟಿಸಿತು. ಯುವಕ ಅಂಗಾಮಿಯೊಬ್ಬ 'ದಿ ನಾಗಾನೇಷನ್'ನಲ್ಲಿ ಹೀಗೆ ಬರೆದಿದ್ದ:

> *"ನಾಗಾಗಳದೇ ಒಂದು ಪ್ರತ್ಯೇಕ ರಾಷ್ಟ್ರ. ಏಕೆಂದರೆ ನಾವು ಒಂದು ರಾಷ್ಟ್ರ ಎಂಬುದು ನಮ್ಮ ಭಾವನೆಯಾಗಿದೆ. ಆದರೆ ನಾವೇ ಒಂದು ರಾಷ್ಟ್ರವಾಗಿರುವಾಗ ನಾವೇ ನಮ್ಮ ಸಾರ್ವಭೌಮತ್ವವನ್ನು ಆಯ್ಕೆ ಮಾಡಿಕೊಳ್ಳುವ ಅಗತ್ಯವಾದರೂ ಏನಿದೆ? ನಮಗೆ ಬೇಕಾಗಿರುವುದು ಸ್ವಾತಂತ್ರ್ಯ. ಸ್ವತಂತ್ರವಾಗಿ ಬದುಕುವ ಹಕ್ಕು. ನಮ್ಮ ಪಾಡಿಗೆ ನಾವು ನಮ್ಮ ಬದುಕನ್ನು ಸಾಗಿಸುವುದಷ್ಟೆ ನಮ್ಮಿಚ್ಛೆ. ಬೇರೆಯವರು ನಮ್ಮೊಡನೆ ಬದುಕುವುದು ನಮಗೆ ಬೇಕಾಗಿಲ್ಲ."*

–ಇದಕ್ಕೆ ಅವೋಸ್ ಬುಡಕಟ್ಟಿನ ವೈದ್ಯರೊಬ್ಬರು ಈ ರೀತಿ ಪ್ರತಿಕ್ರಿಯಿಸಿದ್ದರು:

"ನಾಗಾಗಳಲ್ಲಿ ಹಣಕಾಸು ಇಲ್ಲ. ದುಡ್ಡಿನ ಅಭಾವವಿದೆ. ದುಡ್ಡು, ಜನ ಹಾಗೂ ಒಂದು ರಾಷ್ಟ್ರವಾಗಲು ಅಗತ್ಯವಿರುವ ಮೂಲಭೂತ ಸೌಕರ್ಯಗಳ ಕೊರತೆ ನಮ್ಮಲ್ಲಿದೆ. ನನಗನ್ನಿಸುತ್ತದೆ, ಸದ್ಯದ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯವೆನ್ನುವುದು ನಾಗಾಗಳಿಂದ ಬಹಳ ದೂರದಲ್ಲಿದೆ. ಅದೊಂದು ದೂರದ ಕನಸು. ಈಗಿನ ಪರಿಸ್ಥಿತಿಯಲ್ಲಿ ಸ್ವತಂತ್ರ ಸರ್ಕಾರವೊಂದನ್ನು ನಡೆಸುವುದು ನಮ್ಮಿಂದ ಹೇಗೆ ತಾನೆ ಸಾಧ್ಯವಾದೀತು?"

ಈ ಮಧ್ಯೆ ಸೌಮ್ಯವಾದಿಗಳ ಬಣ ಕಾಂಗ್ರೆಸ್ ನಾಯಕತ್ವದೊಂದಿಗೆ ಸಂಧಾನ ಶುರುಮಾಡಿತ್ತು. 1946ರ ಜುಲೈನಲ್ಲಿ ನಾಗಾ ನ್ಯಾಷನಲ್ ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿ, ಟಿ. ಸಖಾರೆ ಜವಹರಲಾಲ ನೆಹರೂಗೆ ಪತ್ರ ಬರೆದಿದ್ದರು. ಇದಕ್ಕೆ ಬರೆದ ಉತ್ತರದಲ್ಲಿ ನೆಹರೂ ಅವರು, "ನಾಗಾಗಳಿಗೆ ಸಂಪೂರ್ಣ ಸ್ವಾಯತ್ತತೆ ಇರುವುದೆಂದೂ ಆದರೆ ಅವರು ಭಾರತದ ಅವಿಭಾಜ್ಯ ಅಂಗವಾಗಿರುವರೆಂದೂ" ತಿಳಿಸಿದ್ದರು. ನಾಗಾಗಳು ತಮ್ಮದೇ ಆದ ನ್ಯಾಯಾಂಗ ವ್ಯವಸ್ಥೆ ಹೊಂದಿರಬಹುದೆಂದೂ ಅವರು ಭರವಸೆ ನೀಡಿದ್ದರು. ದೇಶದ ವಿವಿಧ ಭಾಗಗಳಿಂದ ಜನ ಬಂದು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಅಳಿಸಿಹಾಕಿಬಿಡಬಹುದೆಂಬ ನಾಗಾಗಳ ಭೀತಿಯನ್ನು ನಿವಾರಿಸಲು ನೆಹರೂ ಸ್ವಾಯತ್ತತೆಯ ಮಾತನ್ನಾಡಿದ್ದರು. "ನಾಗಾಗಳು ಭಾರತದೊಂದಿಗೆ ತಮ್ಮ ಸಂಬಂಧವನ್ನು ಮುಂದುವರಿಸುವುದಾಗಿಯೂ ಆದರೆ, 'ನಾವು ನಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುತ್ತೇವೆ ಹಾಗೂ ನಮ್ಮ ಬುದ್ಧಿಮತ್ತೆ ಹಾಗೂ ಅಭಿರುಚಿಗನುಗುಣವಾಗಿ ಅಭಿವೃದ್ಧಿ ಹೊಂದುತ್ತೇವೆ'. ನಾವು ನಮ್ಮ ರಾಷ್ಟ್ರದಲ್ಲಿ ನಮ್ಮದೇ ಆದ ಸ್ವಯಮಾಧಿಕಾರ ಹೊಂದಿರುತ್ತೇವೆ, ಗಡಿ ವಿಷಯಗಳಲ್ಲಿ ಮಾತ್ರ ಭಾರತದೊಂದಿಗೆ ಸಂಬಂಧವಿರುತ್ತದೆ" ಎಂದು ಸಖ್ರಾಯಿ ಘೋಷಿಸಿದರು.

ಆದರೆ, ತೀವ್ರಗಾಮಿಗಳು ಸಂಪೂರ್ಣ ಸ್ವಾತಂತ್ರ್ಯದ ಪಟ್ಟು ಬಿಟ್ಟುಕೊಟ್ಟಿರಲಿಲ್ಲ. ಈ ವಿಷಯದಲ್ಲಿ ಕೆಲವರು ಬ್ರಿಟಿಷ್ ಅಧಿಕಾರಿಗಳು ಅವರ ಬೆಂಬಲಕ್ಕೆ ನಿಂತಿದ್ದರು. ಈ ಅಧಿಕಾರಿಗಳಿಗೆ ನಾಗಾಗಳು ಹಿಂದೂ ಪ್ರಭಾವಕ್ಕೊಳಪಡುವುದು ಬೇಡವಾಗಿತ್ತು. ಒಬ್ಬ ಅಧಿಕಾರಿಯಂತೂ, ಈಶಾನ್ಯದ ಗುಡ್ಡಗಾಡು ಪ್ರದೇಶಗಳು, "ರಾಣಿಯ ವಸಾಹತಾಗಿ ನೇರವಾಗಿ ಲಂಡನ್ನಿನ ಆಳ್ವಿಕೆಯಲ್ಲಿರಲಿ, ಇದನ್ನು ಯಾವುದೇ ರೀತಿಯಲ್ಲೂ ಕ್ಷಿಪ್ರದಲ್ಲೆ ಸ್ವಾತಂತ್ರ್ಯ ಪಡೆಯಲಿರುವ ಭಾರತದೊಂದಿಗೆ ಗಂಟು ಹಾಕುವುದು ಬೇಡ" ಎಂದು ಶಿಫಾರಸು ಮಾಡಿದ್ದ. ಉಳಿದವರು, ಭಾರತ ಸ್ವತಂತ್ರಗೊಳ್ಳಲಿರುವುದರಿಂದ ನೀವೂ ಸ್ವತಂತ್ರರಾಗಿ ಎಂದು ನಾಗಾಗಳಿಗೆ ಬೋಧಿಸಿದ್ದರು. ಲುಶಾಯಿ ಪರ್ವತ ಪ್ರದೇಶದ ಸೂಪರಿನ್‌ಟೆಂಡೆಂಟ್ ಬರೆದಿರುವಂತೆ:

"ಭವಿಷ್ಯದಲ್ಲಿ ಭಾರತದೊಂದಿಗೆ ಸಂಬಂಧ ಕುರಿತಂತೆ ಚಿಂತಿಸಬೇಡಿ ಎಂಬುದೇ ಯುದ್ಧದ ನಂತರ ಪ್ರಾರಂಭವಾದ ಲುಶಾಯಿ ರಾಜಕೀಯದ ದಿನಗಳಿಂದಲೂ ಲುಶಾಯಿ ಜನರಿಗೆ ನಾನು ನೀಡಿದ ಸಲಹೆಯಾಗಿತ್ತು. ಇವತ್ತಿನಿಂದ ಇನ್ನು ಎರಡು ವರ್ಷಗಳ ನಂತರ ಭಾರತ ಹೇಗಿರುತ್ತೆ, ಏನಾಗಿರುತ್ತೆ ಅಥವಾ ರಾಜಕೀಯವಾಗಿ

> ಏಕೀಕೃತವಾಗಿರುತ್ತದೆಯೇ ಎಂಬುದರ ಬಗ್ಗೆ ಭವಿಷ್ಯ ನುಡಿಯಲು ಯಾರಿಂದಲೂ ಸಾಧ್ಯವಿಲ್ಲ. ಜೀವಮಾನವಿಡೀ ಅವಿವಾಹಿತೆಯಾಗಿಯೇ ಇರು ಎಂದು ನಾನು ನನ್ನ ಕಿರಿಯ ಮಗಳಿಗೆ ಹೇಳಲಾರೆ. ಹಾಗೆಂದು ಇನ್ನೂ ಅಪ್ರಾಪ್ತ ವಯಸ್ಕನಾದ ಅಣುಗನೊಬ್ಬನಿಗೆ ಆಕೆಯನ್ನು ವಿವಾಹ ಮಾಡಿಕೊಡುವುದು ಇನ್ನೂ ಘೋರ ಅಪರಾಧವಾಗುತ್ತದೆ ಎಂದೇ ನನ್ನ ಎಣಿಕೆ."

1947ರ ಜೂನ್‌ನಲ್ಲಿ ನಾಗಾ ನ್ಯಾಶನಲ್ ಕೌನ್ಸಿಲ್‌ನ ನಿಯೋಗವೊಂದು ಅಸ್ಸಾಮಿನ ರಾಜ್ಯಪಾಲ ಅಕ್ಬರ್ ಹೈದರಿ ಅವರನ್ನು ಭೇಟಿ ಮಾಡಿತ್ತು. ನಾಗಾಗಳು ಭಾರತದೊಂದಿಗೆ ಸೇರ್ಪಡೆಯಾಗುವುದಕ್ಕೆ ಸಂಬಂಧಿಸಿದ ಕರಾರುಗಳನ್ನು ಚರ್ಚಿಸುವುದೇ ಈ ಭೇಟಿಯ ಉದ್ದೇಶವಾಗಿತ್ತು. ಗುಡ್ಡಗಾಡು ಪ್ರದೇಶವನ್ನು ಹೊರಗಿನವರಿಗೆ ಪರಭಾರೆ ಮಾಡುವುದಿಲ್ಲ, ನಾಗಾಗಳ ಧಾರ್ಮಿಕ ಆಚರಣೆಗಳಿಗೆ ಭಂಗವುಂಟು ಮಾಡುವುದಿಲ್ಲ ಹಾಗೂ ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿ ನೇಮಕದಲ್ಲಿ ನಾಗಾ ನ್ಯಾಶನಲ್ ಕೌನ್ಸಿಲ್‌ನ ಜೊತೆ ಮಾತುಕತೆ ನಡೆಸಲಾಗುವುದು-ಈ ಮೂರು ವಿಷಯಗಳಲ್ಲಿ ಉಭಯ ಪಕ್ಷಗಳೂ ಒಪ್ಪಂದಕ್ಕೆ ಬಂದಿದ್ದವು. ಇದಾದ ನಂತರ ನಾಗಾ ನ್ಯಾಶನಲ್ ಕೌನ್ಸಿಲ್ ನಿಯೋಗ ದೆಹಲಿಗೆ ತೆರಳಿ ನೆಹರೂ ಅವರನ್ನು ಭೇಟಿ ಮಾಡಿತು. ನಾಗಾಗಳಿಗೆ ಸ್ವಾತಂತ್ರ್ಯವನ್ನಲ್ಲ, ಸ್ವಾಯತ್ತತೆಯನ್ನು ನೀಡಲಾಗುವುದೆಂದು ನೆಹರೂ ಮತ್ತೊಮ್ಮೆ ಭರವಸೆ ನೀಡಿದರು. ಅಲ್ಲದೆ ಈ ನಿಯೋಗ ಮಹಾತ್ಮಾ ಗಾಂಧಿಯವರನ್ನೂ ಭೇಟಿ ಮಾಡಿತ್ತು. ಈ ಭೇಟಿ ಕುರಿತು ಎರಡು ರೀತಿಯ ವರದಿಗಳಿವೆ. ಒಂದು ವರದಿ ಪ್ರಕಾರ, ತಮಗಿಷ್ಟವಾಗಿದ್ದಲ್ಲಿ ನಾಗಾಗಳು ಸ್ವಾತಂತ್ರ್ಯ ಘೋಷಿಸಿಕೊಳ್ಳಬಹುದೆಂದು ಗಾಂಧೀಜಿಯವರು ನಿಯೋಗಕ್ಕೆ ತಿಳಿಸಿದ್ದರಂತೆ. ಭಾರತದ ಜೊತೆ ಸೇರ್ಪಡೆಯಾಗುವಂತೆ ಯಾರೂ ಬಲವಂತ ಮಾಡಲಾಗದು. ನವದೆಹಲಿ ಸೇನೆ ಕಳುಹಿಸಿದಲ್ಲಿ ಅದನ್ನು ಪ್ರತಿಭಟಿಸಲು ತಾವೇ ನಾಗಾ ಗುಡ್ಡಗಾಡು ಪ್ರದೇಶಕ್ಕೆ ಬರುವುದಾಗಿ ಗಾಂಧೀಜಿ ಹೇಳಿದ್ದರೆಂಬುದು ಈ ವರದಿಯ ಸಾರಾಂಶ- "ನಾಗಾಗಳಿಗೆ ಗುಂಡಿಡುವ ಮೊದಲು ನನಗೆ ಗುಂಡಿಕ್ಕಿ" ಎಂದು ಅವರಿಗೆ ಹೇಳುವುದಾಗಿ ಗಾಂಧೀಜಿ ತಿಳಿಸಿದ್ದರಂತೆ. ಆದರೆ "ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ" ಗ್ರಂಥದಲ್ಲಿ ಪ್ರಕಟವಾಗಿರುವ ವರದಿ ಇಷ್ಟೊಂದು ಘಂಟಾಘೋಷವಾಗಿಲ್ಲ. "ಖಾಸಗಿಯಾಗಿ ಹೇಳುವುದಾದರೆ ನೀವೆಲ್ಲ ಭಾರತಕ್ಕೆ ಸೇರಿದವರೆಂದು ನನ್ನ ನಂಬಿಕೆ. ಆದರೆ ಹಾಗಲ್ಲ ಎಂದು ನೀವು ಹೇಳುವುದಾದಲ್ಲಿ ಯಾರಿಂದಲೂ ನಿಮಗೆ ಬಲವಂತ ಮಾಡಲಾಗದು" ಎಂದು ಈ ಗ್ರಂಥದಲ್ಲಿ ಪ್ರಕಟವಾಗಿದೆ. "ಆರ್ಥಿಕ ಸ್ವಾವಲಂಬನೆಯೇ ಸ್ವಾತಂತ್ರ್ಯದ ಉತ್ತಮ ಕುರುಹು. ನೀವೆಲ್ಲ ನಿಮ್ಮ ಆಹಾರವನ್ನು ನೀವೇ ಬೆಳೆದುಕೊಳ್ಳಬೇಕು, ನಿಮ್ಮ ಬಟ್ಟೆಯನ್ನು ನೀವೇ ನೇಯಬೇಕು. ಕರಕುಶಲ ಕಲೆಗಳನ್ನು ಕಲಿತುಕೊಳ್ಳಿ. ಇದು ಶಾಂತಿಯುತ ಸ್ವಾತಂತ್ರ್ಯದ ಮಾರ್ಗ. ಅದು ಬಿಟ್ಟು ನೀವು ಬಂದೂಕು, ಟ್ಯಾಂಕುಗಳನ್ನು ಬಳಸುವುದು ಮೂರ್ಖತನವಾಗುತ್ತದೆ" ಎಂದು ಗಾಂಧೀಜಿಯವರು ನಾಗಾ ನಿಯೋಗಕ್ಕೆ ತಿಳಿಸಿದ್ದರೆಂಬುದು ಈ ಎರಡನೆಯ ವರದಿಯ ಸಾರಾಂಶವಾಗಿದೆ.

ಸ್ವಾತಂತ್ರ್ಯ ಬೇಕೆಂದು ಜೋರಾಗಿ ಮಾತನಾಡುತ್ತಿದ್ದವರೆಂದರೆ ಖೋನೋಮಾ ಗ್ರಾಮದ ಅಂಗಾಮಿಗಳು. ಇವರು 1879-80ರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ಬ್ರಿಟಿಷ್ ಸೇನೆಯನ್ನು ನಿಷ್ಕ್ರಿಯರನ್ನಾಗಿ ನಿಲ್ಲಿಸಿದ್ದರು. ಈ ಗ್ರಾಮದ ಜನರು ನಾಗಾ ಪರ್ವತ ಪ್ರದೇಶದಲ್ಲಿ ಚಿರಪರಿಚಿತರಾಗಿದ್ದರು, ಇಲ್ಲಿನ ಜನ ಈ ಅಂಗಾಮಿಗಳಿಗೆ ಹೆದರುತ್ತಿದ್ದರು. ತಮಗೆ ಸಂಪೂರ್ಣ ಸ್ವಾತಂತ್ರ್ಯ ಬೇಕೆಂದು ಒತ್ತಾಯಪಡಿಸುವ ಭಿತ್ತಿಪತ್ರಗಳನ್ನು 'ಪೀಪಲ್ಸ್ ಇಂಡಿಪೆಂಡೆನ್ಸ್ ಲೀಗ್' ಎಂಬ ಹೆಸರಿನ ರಾಜಕೀಯ ಬಣವೊಂದು ಅಂಟಿಸಿತ್ತು. ಸಂಪೂರ್ಣ ಸ್ವಾತಂತ್ರ್ಯ ಎನ್ನುವ ಪದಪುಂಜ ಅಮೆರಿಕದಿಂದ ಎರವಲು ಪಡೆದದ್ದು: "ಅದು ನನ್ನ ಜೀವಂತ ಭಾವನೆ, ದೇವರ ಕೃಪೆಯಿಂದ ನನ್ನ ಮರಣೋಕ್ತಿಯೂ ಅದೇ ಆಗಬಹುದು. ಸ್ವಾತಂತ್ರ್ಯ ಈಗ ಮತ್ತು ಶಾಶ್ವತವಾಗಿ ಸ್ವಾತಂತ್ರ್ಯ" (ಜಾನ್ ಆಡಮ್ಸ್). "ಈ ರಾಷ್ಟ್ರ, ದೇವರ ದಯೆಯಿಂದ ಸ್ವಾತಂತ್ರ್ಯದ ಹೊಸ ಹುಟ್ಟನ್ನು ಪಡೆಯುತ್ತದೆ (ಅಬ್ರಹಾಂ ಲಿಂಕನ್). "ಸ್ವಾತಂತ್ರ್ಯ ಇಲ್ಲವೇ ಸಾವನ್ನು ಕೊಡಿ" (ಪ್ಯಾಟ್ರಿಕ್ ಹೆನ್ರಿ).

ಏತನ್ಮಧ್ಯೆ, ಬ್ರಿಟಿಷರು ಭಾರತ ತ್ಯಜಿಸಿದ್ದರು. ಸ್ವತಂತ್ರ ಭಾರತ ಸಂಘಟಿತವಾಗುತ್ತಿತ್ತು. 300 ದಶಲಕ್ಷ ಜನಸಂಖ್ಯೆಯುಳ್ಳ ರಾಷ್ಟ್ರವೊಂದರ ವಿರುದ್ಧ ದಂಗೆ ಏಳಲು ನಿಮ್ಮಿಂದ ಸಾಧ್ಯವಿಲ್ಲ. ನೀವು ಕೆಲವೇ ಮಂದಿ ಇದ್ದೀರಿ, ನಿಮಗೆ ಯಶಸ್ಸು ಸಿಗುವುದಿಲ್ಲ ಎಂದು ಅಸ್ಸಾಮಿನ ರಾಜ್ಯಪಾಲರ ಕಾರ್ಯದರ್ಶಿ ನಾಗಾಗಳಿಗೆ ಖಚಿತವಾಗಿ ತಿಳಿಯ ಹೇಳಿದ್ದರು. 'ನಾಗಾ ನೇಶನ್'ನಲ್ಲಿ ಅವರು ನಾಗಾಗಳಿಗೆ ನೀತಿಕಥೆಯೊಂದನ್ನು ಹೇಳಿದ್ದರು. "ಬಾಯಲ್ಲಿ ಮೂಳೆ ಕಚ್ಚಿಕೊಂಡಿದ್ದ ನಾಯಿಯೊಂದು ನೀರಿನಲ್ಲಿ ಮುಖನೋಡಿಕೊಂಡಿತಂತೆ. ಆಗ ನೀರಿನಲ್ಲಿ ದೊಡ್ಡ ಮೂಳೆ ಕಚ್ಚಿಕೊಂಡಿದ್ದ ನಾಯಿಯೊಂದು ತನ್ನನ್ನೇ ದುರುಗುಟ್ಟಿ ನೋಡುತ್ತಿರುವುದು ಕಾಣಿಸಿತಂತೆ. ನಾಯಿ ಮರೀಚಿಕೆಯ ಬೆನ್ನಟ್ಟಿ ತನ್ನ ಬಾಯಲ್ಲಿ ಕಚ್ಚಿ ಹಿಡಿದಿದ್ದ ಮೂಳೆಯನ್ನೂ ಕಳೆದುಕೊಂಡಿತ್ತು. ಕೈಗೆಟುಕದ ಸ್ವಾತಂತ್ರ್ಯವೆಂಬ ಮೂಳೆಯ ಸಲುವಾಗಿ ಸ್ವಯಮಾಧಿಕಾರದ ಮೂಳೆಯನ್ನೇಕೆ ಕಳೆದುಕೊಳ್ಳುವಿರಿ"–ಇದು ಅಧಿಕಾರಿ ಹೇಳಿದ ನೀತಿ ಪಾಠವಾಗಿತ್ತು.

ಈ ನೀತಿಕಥೆ ವಿದ್ಯಾವಂತ ನಾಗಾಗಳಿಗೆ ಹಿಡಿಸಲಿಲ್ಲ. "ಮೂಳೆ...ಮೂಳೆ" ಎಂದು ನಾಗಾ ನ್ಯಾಶನಲ್ ಕೌನ್ಸಿಲ್ ಸದಸ್ಯನೊಬ್ಬ ಆರ್ಭಟಿಸಿದ: "ನಮ್ಮನ್ನೇನು ನಾಯಿಗಳೆಂದು ತಿಳಿದಿದ್ದಾನೆಯೇ?". ನಾಗಾಗಳಿಗೆ ವಿದಾಯ ಹೇಳಲಿದ್ದ ಜಿಲ್ಲಾಧಿಕಾರಿ, ನಾಗಾಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಿದ್ದ ಜಿಲ್ಲಾಧಿಕಾರಿ ಚಾರ್ಲ್ಸ್ ಪಾಸೇ ಇದೇ ಎಚ್ಚರಿಕೆಯನ್ನು ಹಿತವೆನ್ನಿಸುವ ರೀತಿಯಲ್ಲಿ ನೀಡಿದ್ದ. ಅಲ್ಲದೇ 'ನಾಗಾನೇಶನ್'ನಲ್ಲಿ ಲೇಖನವೊಂದನ್ನು ಬರೆದಿದ್ದ ಚಾರ್ಲ್ಸ್ ಪಾಸೇ, "ಭಾರತ ಒಕ್ಕೂಟದೊಂದಿಗೆ ಸ್ವಾಯತ್ತತೆ ವಿವೇಕದ ಮಾರ್ಗವಾದೀತು. ಏಕೆಂದರೆ, ಸ್ವಾತಂತ್ರ್ಯ ಎಂದರೆ ಗುಡ್ಡಗಾಡಿನಲ್ಲಿ ಸಮರವೇ ಸರಿ, ಆಸ್ಪತ್ರೆ ಇಲ್ಲ, ಶಾಲೆ ಇಲ್ಲ, ಉಪ್ಪಿಲ್ಲ, ಬಯಲು ಸೀಮೆ ಜನರೊಂದಿಗೆ ವಾಣಿಜ್ಯ ವ್ಯವಹಾರ ಇಲ್ಲ, ಎಲ್ಲೆಲ್ಲೂ ಅಸಂತೋಷದ ತಾಂಡವ."

II

ಅತ್ತ, ನಾಗಾಬುದ್ಧಿಜೀವಿಗಳು ಸ್ವಾತಂತ್ರ್ಯದ ಅರ್ಥವ್ಯಾಖ್ಯಾನದಲ್ಲಿ ತೊಡಗಿದ್ದಾಗ, ಇತ್ತ ನವದೆಹಲಿಯಲ್ಲಿ ಸಂವಿಧಾನ ರಚನಾ ಸಭೆಯ ಅಧಿವೇಶನ ನಡೆದಿತ್ತು. ಈ ಅಧಿವೇಶನದ ಕಾರ್ಯಸೂಚಿಯಲ್ಲಿ ಅತಿಮುಖ್ಯವಾದ ವಿಷಯ, ಸ್ವತಂತ್ರ ಭಾರತದಲ್ಲಿ ನಾಗಾಗಳ ಸ್ಥಾನಮಾನ ಏನು ಎಂಬುದೇ ಆಗಿತ್ತು. 1947ರ ಜುಲೈ 30ರಂದು, ಜೈಪಾಲ್ ಸಿಂಗ್ ಸಂವಿಧಾನ ರಚನಾ ಸಭೆಗೆ ಅರುಹಿದ್ದರು: "ನಾಗಾ ಪರ್ವತಾವಳಿಯಲ್ಲಿ ಕೆಲವೊಂದು ಅಹಿತಕರ ಬೆಳವಣಿಗೆಗಳಾಗುತ್ತಿವೆ." ಜೈಪಾಲ್ ಸಿಂಗರಿಗೆ ದಿನಕ್ಕೊಂದು ಟೆಲಿಗ್ರಾಂ ಬರುತ್ತಿತ್ತು. ಇವತ್ತಿನ ಟೆಲಿಗ್ರಾಂ ನಿನ್ನೆಯದಕ್ಕಿಂತ ಹೆಚ್ಚು ಗಾಬರಿಹುಟ್ಟಿಸುವ ರೀತಿಯಲ್ಲಿರುತ್ತಿತ್ತು. ಪ್ರತಿಯೊಂದೂ ಗೊತ್ತುಗುರಿ ಇಲ್ಲದ ಕಾಡುಮೇಡಿನತ್ತ ಇಟ್ಟ ಮತ್ತೊಂದು ಹೆಜ್ಜೆ ಎಂಬಂಥ ಅನ್ನಿಸಿಕೆ ಉಂಟುಮಾಡುತ್ತಿತ್ತು. ಅರಣ್ಯರೋದನದಂತೆ ಕೇಳಿಸುತ್ತಿತ್ತು. ನಾಗಾಗಳು ತಪ್ಪು ಹಾದಿಗೆಳೆಯಲ್ಪಟ್ಟಿದ್ದಾರೆ ಎಂಬಂತೆ ಜೈಪಾಲ್ ಸಿಂಗರಿಗೆ ತೋರಿತು. "ನಾಗಾಗಳ ಸ್ಥಾನಮಾನ ರಾಜಮಹಾರಾಜರುಗಳ ಸ್ಥಾನಮಾನಕ್ಕೆ ಸಮನಾದದ್ದು. ಬ್ರಿಟಿಷರು ತ್ಯಜಿಸಿದ ನಂತರ ಸಂಸ್ಥಾನಗಳ ಮಹಾರಾಜರುಗಳಂತೆ ನಾಗಾಗಳೂ ತಮ್ಮ ಸಾರ್ವಭೌಮತ್ವ ಸ್ಥಾಪಿಸಬಹುದೆಂದು" ಅವರಲ್ಲಿ ತಪ್ಪು ಕಲ್ಪನೆ ಮೂಡಿಸಲಾಗಿತ್ತು. ನೆಹರೂ ಅವರನ್ನು ಭೇಟಿ ಮಾಡಲು ನಾಗಾ ನಿಯೋಗ ದೆಹಲಿಗೆ ಬಂದಿದ್ದಾಗ ಜೈಪಾಲ್‌ಸಿಂಗರನ್ನು ಭೇಟಿಮಾಡಿತ್ತು. ಆಗ ಜೈಪಾಲ್ ಸಿಂಗರು, "ಹಿಂದಿನಿಂದಲೂ ನಾಗಾ ಗುಡ್ಡಗಾಡು ಪ್ರದೇಶ ಭಾರತದ ಅಂಗವಾಗಿದೆ. ಆದ್ದರಿಂದ ಪ್ರತ್ಯೇಕಗೊಳ್ಳುವ ಪ್ರಶ್ನೆಯೇ ಉದ್ಭವಿಸದೆಂಬ" ಕಟು ವಾಸ್ತವವನ್ನು ನಾಗಾಗಳಿಗೆ ನಿರ್ದಾಕ್ಷಿಣ್ಯವಾಗಿ ತಿಳಿಸಿದ್ದರು.

ಜೈಪಾಲ್ ಸಿಂಗರು ಸ್ವತಃ ಗುಡ್ಡಗಾಡು ಪ್ರದೇಶದವರಾಗಿದ್ದರು. ಭಾರತ ಪರ್ಯಾಯ ದ್ವೀಪದ ಮಧ್ಯಭಾಗದಲ್ಲಿ ಉದ್ದಗಲ ಹರಡಿಕೊಂಡಿದ್ದ ಬೆಟ್ಟ ಗುಡ್ಡ ಅರಣ್ಯಪ್ರದೇಶಗಳಲ್ಲಿ ವಾಸವಾಗಿದ್ದ ಲಕ್ಷಾಂತರ ಜನರಲ್ಲಿ ಅವರೂ ಒಬ್ಬರಾಗಿದ್ದರು. ಆದಿವಾಸಿಗಳೆಂದೇ ಹೆಸರಾಗಿದ್ದ ಈ ಜನರು ಈಶಾನ್ಯ ಪ್ರದೇಶದ ಗುಡ್ಡಗಾಡು ಜನರಿಗಿಂತ ಭಿನ್ನರಾಗಿದ್ದರು. ಇವರೂ ಮುಖ್ಯವಾಗಿ ಕೃಷಿಕರೇ ಆಗಿದ್ದು ಜೀವನೋಪಾಯಕ್ಕೆ ಅರಣ್ಯವನ್ನೇ ಅವಲಂಬಿಸಿದ್ದರು. ಇವರಲ್ಲೂ ಜಾತಿಪದ್ಧತಿ ಇರಲಿಲ್ಲ, ಕುಲಪದ್ಧತಿ ಇತ್ತು. ಪ್ರಗತಿ ಸಾಧಿಸಿರುವ ದೇಶಗಳಲ್ಲಿ ಕಂಡು ಬರುವಂಥ ಸ್ತ್ರೀ-ಪುರುಷರ ನಡುವಣ ಅಸಮಾನತೆ ಹೆಚ್ಚಾಗಿರಲಿಲ್ಲ. ಆದರೆ ಮಧ್ಯಭಾರತದ ಗುಡ್ಡಗಾಡು ಜನರು ಹಿಂದೂ ರೈತ ಸಮುದಾಯದೊಂದಿಗೆ ದೀರ್ಘಕಾಲದಿಂದ ಸಂಬಂಧವಿಟ್ಟುಕೊಂಡಿದ್ದರು. ನಾಗಾಗಳು ಮತ್ತು ಅವರ ನೆರೆಯ ಗುಡ್ಡಗಾಡು ಜನರು ಇಂಥ ಸಂಬಂಧ ಇಟ್ಟುಕೊಂಡಿರಲಿಲ್ಲ. ಮಧ್ಯಭಾರತದ ಗುಡ್ಡಗಾಡು ಜನರು ಹಿಂದೂ ರೈತರೊಂದಿಗೆ ಸಾಮಾನು ಸರಂಜಾಮು ವಿನಿಮಯ ಮಾಡಿಕೊಳ್ಳುತ್ತಿದ್ದರು, ಹಿಂದೂಗಳ ದೇವರುಗಳನ್ನೇ ಪೂಜಿಸುತ್ತಿದ್ದರು ಹಾಗೂ ಐತಿಹಾಸಿಕವಾಗಿ ಈ ಮಹಾರಾಜರುಗಳ ಸಂಸ್ಥಾನಗಳ ಭಾಗವೇ ಆಗಿದ್ದರು.

ಈ ಸಂಬಂಧಗಳು ನಿರ್ವಿವಾದುದೇನಾಗಿರಲಿಲ್ಲ. ಬ್ರಿಟಿಷರ ಆಳ್ವಿಕೆಯ ಪ್ರಾರಂಭದೊಂದಿಗೆ ಗುಡ್ಡಗಾಡು ಜನರು ವಾಸವಿದ್ದ ಪ್ರದೇಶಗಳು ವಸಾಹತುಶಾಹಿಗೆ ಮತ್ತು ವಾಣಿಜ್ಯ ವ್ಯಾಪಾರಗಳಿಗೆ ತೆರೆದುಕೊಂಡವು. ಅವರು ವಾಸಮಾಡುತ್ತಿದ್ದ ಅರಣ್ಯಗಳಿಗೆ ಏಕಾಏಕಿ ವಾಣಿಜ್ಯ ಮೌಲ್ಯ ಪ್ರಾಪ್ತವಾಯಿತು. ಅಂತೆಯೇ ಅಲ್ಲಿನ ಹರಿವ ನದಿಗಳಿಗೆ, ಅಲ್ಲಿದ್ದ ಖನಿಜ ಸಂಪತ್ತಿಗೆ ವಾಣಿಜ್ಯ ಮೌಲ್ಯ ಬಂತು. ಕೆಲವು ಪ್ರದೇಶಗಳು ಮಾತ್ರ ಅಕ್ಷತವಾಗಿಯೇ ಉಳಿದುಕೊಂಡವು. ಬಾಕಿಯಂತೆ ವಾಣಿಜ್ಯ ಶಕ್ತಿಗಳ ಪ್ರವೇಶದಿಂದಾಗಿ, ವಸಾಹತು ಶಾಹಿಯಿಂದಾಗಿ ಗುಡ್ಡಗಾಡು ಜನರಿಗೆ ಕ್ರಮೇಣ ಅರಣ್ಯದೊಂದಿಗೆ ಸಂಪರ್ಕ ತಪ್ಪಿ ಅವರು ಭೂಮಿ ಕಾಣಿ ಕಳೆದುಕೊಳ್ಳುವಂತಾಯಿತು. ಅವರೆಲ್ಲ ಲೇವಾದೇವಿದಾರರ ಸಾಲಗಾರರಾದರು. ಹೊರಗಿನವರನ್ನು, ಆದಿವಾಸಿಗಳ ಸಂಪತ್ತನ್ನು ಲೂಟಿ ಹೊಡೆಯಲು ಬಂದವರೆಂದೇ ಹೆಚ್ಚಾಗಿ ಪರಿಗಣಿಸಲಾಗಿತ್ತು. ಛೋಟಾ ನಾಗ್ಪುರ್ ಪ್ರಸ್ಥ ಭೂಮಿಯಲ್ಲಿ ಗುಡ್ಡಗಾಡೇತರ ಜನರನ್ನು 'ಡಿಕು' ಎಂದೇ ಭಾವಿಸಲಾಗುತ್ತಿತ್ತು. 'ಡಿಕು' ಭೀತಿ ಮತ್ತು ಪ್ರತಿಭಟನೆ ಹುಟ್ಟಿಸುವ ಒಂದು ಪದ ಪ್ರಯೋಗ.

ಸಂವಿಧಾನ ರಚನಾ ಸಭೆ ಗುಡ್ಡಗಾಡು ಜನರು ಸುಲಭವಾಗಿ ತೊಂದರೆಗೆ ಪಕ್ಕಾಗುವ ಈ ಸೂಕ್ಷ್ಮತೆಯನ್ನು ಮಾನ್ಯ ಮಾಡಿತ್ತು. ಇದರ ಬಗ್ಗೆ ಸುದೀರ್ಘ ಚರ್ಚೆ ನಡೆಸಿತ್ತು. ಆಖೈರಾಗಿ 400 ಸಮುದಾಯಗಳನ್ನು ಪರಿಶಿಷ್ಟ ವರ್ಗವೆಂದು ಕರಾರುವಾಕ್ಕಾಗಿ ಸೂಚಿಸಲು ನಿರ್ಧರಿಸಿತು. ಇವರು ಗುಡ್ಡಗಾಡಿನ ಒಟ್ಟು ಜನಸಂಖ್ಯೆಯಲ್ಲಿ ಶೇ ಏಳರಷ್ಟಿದ್ದು ಇವರುಗಳಿಗೆ ಶಾಸನಸಭೆಗಳಲ್ಲಿ ಮತ್ತು ಸರ್ಕಾರಿ ಕಚೇರಿಗಳಲ್ಲಿ ಮೀಸಲಾತಿ ಸೌಲಭ್ಯ ಕಲ್ಪಿಸಲು ನಿರ್ಧರಿಸಲಾಯಿತು. ಸಂವಿಧಾನದ ಐದನೇ ಪರಿಶಿಷ್ಟ ಮಧ್ಯಭಾರತದ ಗುಡ್ಡಗಾಡಿನ ಜನರಿಗೆ ಸಂಬಂಧಿಸಿದೆ. ಈ ಪರಿಶಿಷ್ಟದಲ್ಲಿ ಗುಡ್ಡಗಾಡು ಜನರನ್ನು ಲೇವಾದೇವಿದಾರರಿಂದ ಋಣಮುಕ್ತರನ್ನಾಗಿಸಲು ಹಾಗೂ ಹೊರಗಿನವರು ಅವರ ಭೂಮಿ ಕಬಳಿಸುವುದನ್ನು ತಪ್ಪಿಸಲು ಗುಡ್ಡಗಾಡು ಸಲಹಾಮಂಡಳಿಗಳ ರಚನೆಗೆ ಅವಕಾಶ ಮಾಡಿಕೊಡಲಾಗಿದೆ. ಸಂವಿಧಾನದ ಆರನೆಯ ಪರಿಶಿಷ್ಟ ಈಶಾನ್ಯ ಪ್ರದೇಶದ ಗುಡ್ಡಗಾಡು ಜನರಿಗೆ ಸಂಬಂಧಿಸಿದ್ದಾಗಿದೆ. ಈ ಪರಿಶಿಷ್ಟದಲ್ಲಿ ಈ ಪ್ರದೇಶಕ್ಕೆ ಸ್ವಾಯತ್ತತೆ ನೀಡುವುದು, ಜಿಲ್ಲೆಗಳನ್ನು ವಿಂಗಡಿಸುವುದು, ಪ್ರಾದೇಶಿಕ ಮಂಡಳಿಗಳನ್ನು ರಚಿಸುವುದು, ಸ್ಥಳೀಯರ ಭೂಮಿ ಹಕ್ಕನ್ನು ರಕ್ಷಿಸುವುದು, ಜಲಸಂಪನ್ಮೂಲ ಹಾಗೂ ಅರಣ್ಯ ಸಂಪನ್ಮೂಲಗಳ ಮೇಲಿನ ಸ್ಥಳೀಯರ ಹಕ್ಕನ್ನು ರಕ್ಷಿಸುವುದು, ಖನಿಜ ಸಂಪತ್ತಿನಿಂದ ಬರುವ ಆದಾಯವನ್ನು ಸ್ಥಳೀಯ ಮಂಡಳಿಗಳೊಂದಿಗೆ ಹಂಚಿಕೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ಆದೇಶ ನೀಡುವುದು ಇವೆಲ್ಲ ಆರನೆಯ ಪರಿಶಿಷ್ಟದಲ್ಲಿ ಅಡಕವಾಗಿದೆ. ಭಾರತದಲ್ಲಿ ಬೇರೆ ಯಾವ ಪ್ರದೇಶದಲ್ಲೂ ನೀಡದಿರುವಂಥ ರಿಯಾಯಿತಿಗಳನ್ನು ಈಶಾನ್ಯದ ಗುಡ್ಡಗಾಡು ಜನರಿಗೆ ಈ ಪರಿಶಿಷ್ಟದಲ್ಲಿ ನೀಡಲಾಗಿದೆ.

ಗುಡ್ಡಗಾಡು ಜನರು ಕೇಂದ್ರದ ಒಕ್ಕೂಟದೊಳಗೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ಪಡೆದಲ್ಲಿ ಮಾತ್ರ ಈ ಎಲ್ಲ ಸೌಲಭ್ಯ-ಸವಲತ್ತುಗಳು ನಿಜವಾಗಿ ಪರಿಣಾಮಕಾರಿಯಾಗಿ

ಜಾರಿಗೆ ಬರಲು ಸಾಧ್ಯ ಎಂದು ಜೈಪಾಲ್ ಸಿಂಗ್ ಭಾವಿಸಿದ್ದರು. ಇದನ್ನು ಅವರು ಜನ ಭಾವಿಸಿದಂತೆ ಜಾರ್ಖಂಡ್ ರಾಜ್ಯವೆಂದು ಕರೆದರು. ಅವರ ದೃಷ್ಟಿಯಲ್ಲಿ ಜಾರ್ಖಂಡ್ ರಾಜ್ಯ ಛೋಟಾನಾಗ್ಪುರದ ಪ್ರಸ್ಥಭೂಮಿ, ಬಿಹಾರ್ ಹಾಗೂ ಬಂಗಾಳ ಮತ್ತು ಒರಿಸ್ಸಾಗಳಲ್ಲಿನ ಗುಡ್ಡಗಾಡು ಪ್ರದೇಶಗಳನ್ನೂ ಒಳಗೊಂಡಿರಬೇಕು. ಉದ್ದೇಶಿತ ರಾಜ್ಯದ ವಿಸ್ತೀರ್ಣ 48 ಸಾವಿರ ಚದರ ಮೈಲಿ ಹಾಗೂ ಜನಸಂಖ್ಯೆ ಹನ್ನೆರಡು ದಶಲಕ್ಷ. ಹೊಸರಾಜ್ಯದ ಈ ಕಲ್ಪನೆ ಛೋಟಾನಾಗ್ಪುರದ ಯುವ ಜನತೆಗೆ ಆಕರ್ಷಣೀಯವಾಗಿ ಕಂಡಿತು. ಹೀಗಾಗಿ, 1947ರ ಮೇ ತಿಂಗಳಿನಲ್ಲಿ ಜಮ್‌ಶೆಡ್ಪುರದ ಆದಿವಾಸಿ ಸಭಾ, ಗುಡ್ಡಗಾಡು ಪ್ರದೇಶಗಳನ್ನು ಬಿಹಾರದಿಂದ ಪ್ರತ್ಯೇಕಿಸಿ ಜಾರ್ಖಂಡ್ ರಾಜ್ಯವನ್ನು ರಚಿಸುವಂತೆ ಆಗ್ರಹಪಡಿಸಿ ನೆಹರೂ, ಗಾಂಧಿಯವರಿಗೆ ಪತ್ರ ಬರೆಯಿತು. ಸಂವಿಧಾನ ರಚನಾ ಸಭೆಗೂ ಇಂಥದೇ ಪತ್ರ ಬರೆಯಿತು. "ಆದಿವಾಸಿ ಸಂಸ್ಕೃತಿ ಮತ್ತು ಭಾಷೆಯನ್ನು ಸಂರಕ್ಷಿಸಲು ಹಾಗೂ ಅಭಿವೃದ್ಧಿಪಡಿಸಲು ನಮಗೆ ಪ್ರತ್ಯೇಕ ಜಾರ್ಖಂಡ್ ಪ್ರಾಂತ್ಯರಚನೆ ಅತ್ಯಗತ್ಯವೆನಿಸಿದೆ" ಎಂಬುದು ಈ ಪತ್ರದ ಸಾರಾಂಶವಾಗಿತ್ತು. "ನಮ್ಮ ಪದ್ಧತಿ, ಸಂಪ್ರದಾಯಗಳಲ್ಲಿನ ನೀತಿನಿಯಮಗಳೇ ಸರ್ವೋಚ್ಚ ಎಂದು ಸಾರಲು, ನಮ್ಮ ಜಮೀನನ್ನು ಪರಭಾರೆ ಮುಕ್ತಗೊಳಿಸಲು, ಎಲ್ಲಕ್ಕಿಂತ ಮಿಗಿಲಾಗಿ ನಾವು ಶೋಷಣೆಯಿಂದ ಮುಕ್ತಿ ಪಡೆಯಲು ಪ್ರತ್ಯೇಕ ರಾಜ್ಯದ ಅವಶ್ಯಕತೆ ಇದೆ" ಎಂದು ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿತ್ತು.

1948ರ ಫೆಬ್ರುವರಿಯಲ್ಲಿ ಜೈಪಾಲ್ ಸಿಂಗ್ ಅವರು ಅಖಿಲ ಭಾರತ ಆದಿವಾಸಿ ಮಹಾಸಭಾದ ಸಮಾವೇಶದ ಅಧ್ಯಕ್ಷತೆ ವಹಿಸಿ ಭಾಷಣ ಮಾಡಿದರು. ಜೈಪಾಲ್ ಸಿಂಗ್, ಆಗ್ಗೆ ಒಂದು ದಶಕದ ಹಿಂದೆ ಸ್ಥಾಪಿಸಲಾದ ಅಖಿಲ ಭಾರತ ಆದಿವಾಸಿ ಮಹಾಸಭಾದ ನೇತಾರರಾಗಿದ್ದರು. ಸ್ವಾತಂತ್ರ್ಯ ಬಂದ ನಂತರ, ಬ್ರಿಟಿಷ್ ಸಾಮ್ರಾಜ್ಯಶಾಹಿ ತೊಲಗಿ ಬಿಹಾರಿ ಸಾಮ್ರಾಜ್ಯಶಾಹಿ ಹೇಗೆ ತಲೆಎತ್ತಿದೆ ಎಂಬುದನ್ನು ಅವರು ಅಧ್ಯಕ್ಷ ಭಾಷಣದಲ್ಲಿ ವಿವರವಾಗಿ ತಿಳಿಸಿದ್ದರು. ಕೃಷಿ ಭೂಮಿಯೇ ಮುಖ್ಯಪ್ರಶ್ನೆಯಾಗಿದ್ದು ಆದಷ್ಟು ಬೇಗ ಜಾರ್ಖಂಡ್ ರಾಜ್ಯ ರಚಿಸುವಂತೆ ಅವರು ಆಗ್ರಹಪಡಿಸಿದ್ದರು. ಇದೇ ಭಾಷಣದಲ್ಲಿ ಜೈಪಾಲ್ ಸಿಂಗರು, ಮಹಾತ್ಮಾ ಗಾಂಧಿಯವರ ಹತ್ಯೆ ಬಗ್ಗೆ ಭಾವಪೂರಿತರಾಗಿ ಮಾತನಾಡುವ ಮೂಲಕ ಭಾರತ ಒಕ್ಕೂಟದೊಂದಿಗಿನ ತಮ್ಮ ಬದ್ಧತೆಯನ್ನು ಸ್ಪಷ್ಟಪಡಿಸಿದ್ದರು. "ಜೈ ಜಾರ್ಖಂಡ್, ಜೈ ಆದಿವಾಸಿ, ಜೈ ಹಿಂದ್" ಎನ್ನುವ ಸಂಯುಕ್ತ ಘೋಷಣೆಯನ್ನು ಕೂಗುವ ಮೂಲಕ ಅವರು ಭಾರತೀಯತೆಯ ವ್ಯಾಪಕ ದೇಶಪ್ರೇಮದೊಂದಿಗೆ ಸ್ಥಳೀಯ ಪ್ರತಿಷ್ಠೆಯನ್ನೂ ಮೇಳವಿಸಿದ್ದರು.

ಆದಿವಾಸಿ ಮಹಾಸಭಾಗೆ ನಂತರ ಜಾರ್ಖಂಡ್ ಪಕ್ಷವೆಂದು ನಾಮಕರಣ ಮಾಡಲಾಯಿತು. 1952ರ ಪ್ರಥಮ ಚುನಾವಣೆಯಲ್ಲಿ ಈ ಪಕ್ಷ ಸ್ಪರ್ಧಿಸಿತು. ಹೋರಾಡುವ ಹುಂಜ ಈ ಪಕ್ಷದ ಚುನಾವಣಾ ಸಂಕೇತವಾಗಿತ್ತು. ಲೋಕಸಭೆಯ ಮೂರು ಸ್ಥಾನಗಳನ್ನೂ ವಿಧಾನ ಸಭೆಯ ಮೂವತ್ಮೂರು ಸ್ಥಾನಗಳನ್ನು ಗೆಲ್ಲುವ ಮೂಲಕ ನಿರೀಕ್ಷೆಗೆ ಮೀರಿದ ಯಶಸ್ಸನ್ನು ಸಾಧಿಸಿತ್ತು. ಈ ವಿಜಯ ಬಿಹಾರದ ಗುಡ್ಡಗಾಡು ಪ್ರದೇಶಗಳಿಂದ ಬಂದ

ವಿಜಯವಾಗಿತ್ತು. ಇಲ್ಲಿ ಜಾರ್ಖಂಡ್ ಪಕ್ಷ ಕಾಂಗ್ರೆಸ್ ಪಕ್ಷಕ್ಕೆ ಹೀನಾಯ ಸೋಲುಂಟು ಮಾಡಿತ್ತು. ಹೀಗೆ ಚುನಾವಣೆ ಜಾರ್ಖಂಡ್ ರಾಜ್ಯ ರಚನೆ ಬೇಡಿಕೆಯನ್ನು ಸಾಬೀತುಗೊಳಿಸಿತು.

III

ಜೈಪಾಲ್ ಸಿಂಗ್ ಮತ್ತು ಅವರ ಜಾರ್ಖಂಡ್ ಪಕ್ಷ ಗುಡ್ಡಗಾಡಿನ ಜನರಿಗೆ ಭವಿಷ್ಯದ ಒಂದು ಮಾರ್ಗವನ್ನು ತೋರಿಸಿತ್ತು. ಅದೆಂದರೆ ಭಾರತ ಒಕ್ಕೂಟದೊಂದಿಗೆ ಸ್ವಾಯತ್ತತೆ ಪಡೆದ ರಾಜ್ಯ ರಚನೆ. ಗುಡ್ಡಗಾಡು ಜನರು ಹೆಚ್ಚಾಗಿರುವ ಪ್ರದೇಶಗಳನ್ನೊಳಗೊಂಡ, ಅವರ ಸಂಸ್ಕೃತಿ, ಸಂಪ್ರದಾಯ, ಭೂಮಿಕಾಣೆಗಳನ್ನು ರಕ್ಷಿಸುವಂಥ ಒಂದು ಪ್ರತ್ಯೇಕ ರಾಜ್ಯ ರಚನೆ ಅವರು ತೋರಿದ ಭವಿಷ್ಯದ ಮಾರ್ಗವಾಗಿತ್ತು. ಆದರೆ ನಾಗಾ ತೀವ್ರಗಾಮಿಗಳು ಮುಂದಿಟ್ಟ ಮಾರ್ಗ ಬೇರೆಯದೇ ಆಗಿತ್ತು. ಭಾರತದಿಂದ ಪ್ರತ್ಯೇಕವಾಗಿ ಸ್ವತಂತ್ರ ಸಾರ್ವಭೌಮ ರಾಜ್ಯವಾಗಿ ತಮ್ಮ ಅಸ್ಮಿತೆಯನ್ನು ಸಾರುವುದು ನಾಗಾಗಳ ಅಪೇಕ್ಷೆಯಾಗಿತ್ತು. ಈ ಮಹತ್ವಾಕಾಂಕ್ಷೆ ಅಂಗಾಮಿಗಳದಾಗಿತ್ತು. ಈ ಮಹಾತ್ವಾಕಾಂಕ್ಷೆಯ ಪ್ರತಿಪಾದಕ ಖೋನೋಮ್ಹಾ ಎಂಬ ಹಳ್ಳಿಯವನು. ಭಾರತೀಯ ಚರಿತ್ರೆಯ ನಿರ್ಮಾಪಕರಲ್ಲಿ ಒಬ್ಬನಾದ ಇವನ ಜೀವನ ಚರಿತ್ರೆಯನ್ನು ಬರೆಯುವವರು ಇನ್ನೂ ಹುಟ್ಟಿ ಬರಬೇಕಾಗಿದೆ.

ಇವನೇ ಅಂಗಾಮಿ ಜಪು ಫಿಜೋ. ಸುಮಾರು ಅರ್ಧಶತಮಾನಕ್ಕೂ ಹೆಚ್ಚು ಕಾಲ ನಾಗಾಗಳ ಚಳವಳಿಯೆಂದರೆ ಫಿಜೋನೇ ಎನ್ನುವಷ್ಟರ ಮಟ್ಟಿಗೆ ಚಳವಳಿಯೊಂದಿಗೆ ಇವನ ಅವಿನಾಭಾವ ಸಂಬಂಧವಿತ್ತು. 1913ರಲ್ಲಿ ಜನಿಸಿದ ಫಿಜೋ ಸಣಕಲು ವ್ಯಕ್ತಿ. ಬಾಲ್ಯದಲ್ಲಿ ಲಕ್ವಾ ಹೊಡೆದ ಪರಿಣಾಮವಾಗಿ ಮುಖ ಸೊಟ್ಟಗಾಗಿತ್ತು. ಕ್ರೈಸ್ತ ಮಠಗಳಲ್ಲಿ ಶಿಕ್ಷಣ ಪಡೆದ ಫಿಜೋ ಕವಿಯೂ ಹೌದು. ಇವನು ನಾಗಾ ರಾಷ್ಟ್ರಗೀತೆಯೊಂದನ್ನು ರಚಿಸಿದ್ದ. ಬರ್ಮಾಗೆ ವಲಸೆ ಹೋಗುವ ಮುನ್ನ ಉದರಂಭರಣಕ್ಕಾಗಿ ವಿಮಾ ಏಜೆಂಟನಾಗಿದ್ದ. ಜಪಾನೀಯರು ಆಕ್ರಮಣ ನಡೆಸಿದಾಗ ಫಿಜೋ ರಂಗೂನಿನ ಹಡಗು ಕಟ್ಟೆಯಲ್ಲಿ ಕಾರ್ಮಿಕನಾಗಿ ದುಡಿಯುತ್ತಿದ್ದ. ಇಲ್ಲಿ ಫಿಜೋ ಜಪಾನಿಯರ ಭಾರತ ದಂಡಯಾತ್ರೆ ಜೊತೆ ಸೇರಿಕೊಂಡ. ಬ್ರಿಟಿಷರ ವಿರುದ್ಧ ತಾವು ಜಯಶೀಲರಾದಲ್ಲಿ ನಾಗಾಗಳಿಗೆ ಸ್ವಾತಂತ್ರ್ಯ ನೀಡುವುದಾಗಿ ಜಪಾನಿಗಳು ಇವನಿಗೆ ಭರವಸೆ ಕೊಟ್ಟಿದ್ದರು.

ಯುದ್ಧ ಮುಗಿದ ನಂತರ ಫಿಜೋ ಭಾರತಕ್ಕೆ ವಾಪಸಾಗಿ ನಾಗಾ ನ್ಯಾಷನಲ್ ಕೌನ್ಸಿಲ್ ಸೇರಿಕೊಂಡ. ಸಾರ್ವಭೌಮತ್ವ ಪ್ರತಿಪಾದಿಸುವ ಭಾವೋದ್ರಿಕ್ತ ಭಾಷಣಗಳಿಂದ ಬಲುಬೇಗ ಖ್ಯಾತನಾದ. 1947ರ ಜುಲೈನಲ್ಲಿ ದೆಹಲಿಯಲ್ಲಿ ಮಹಾತ್ಮಗಾಂಧಿಯವರನ್ನು ಭೇಟಿಮಾಡಿದ ನಾಗಾ ನ್ಯಾಷನಲ್ ಕೌನ್ಸಿಲ್ ನಿಯೋಗದಲ್ಲಿ ಈತನಿದ್ದ. ಮೂರು ವರ್ಷಗಳ ನಂತರ ನಾಗಾ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷನಾಗಿ ಚುನಾಯಿತನಾಗಿ ನಾಗಾಗಳನ್ನು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಕಟಿಬದ್ಧರನ್ನಾಗಿಸಿದ. ಅನುಮಾನಗಳನ್ನು ಪರಿಹರಿಸಿದ, ನಕಾರಾತ್ಮಕವಾದಿಗಳ ಹಾಗೂ ಭಾರತದ ಜೊತೆ ಹೋಗೋಣ ಎನ್ನುವವರ ಸೊಲ್ಲಡಗಿಸಿದ. ಯುವಕರು ಫಿಜೋ

ಜೊತೆಗಿದ್ದರು. 1950ರ ಡಿಸೆಂಬರ್‌ನಲ್ಲಿ ನಾಗಾ ಗುಡ್ಡಗಾಡು ಪ್ರದೇಶದಲ್ಲಿ ಪ್ರವಾಸಮಾಡಿದ ಕ್ವಾಕರ್ ರೇಸ್ ಅಲೆಕ್ಸಾಂಡರ್ ನಾಗಾ ನ್ಯಾಶನಲ್ ಕೌನ್ಸಿಲ್‌ನ ಇಬ್ಬರು ಸದಸ್ಯರನ್ನು ಸಂದರ್ಶಿಸಿದ್ದರು. ಇವರಿಗೆ 'ಸ್ವಾತಂತ್ರ್ಯ' ಎನ್ನುವ ಪದದ ಗೀಳು ಹಿಡಿದಿತ್ತಂತೆ. "ಭಾರತದ ಪರವಾಗಿ, ಭಾರತದ ಸಂವಿಧಾನದ ಬಗ್ಗೆ ಏನು ಹೇಳಿದರೂ ಅವರು ಕೇಳಲು ಸಿದ್ಧವಿಲ್ಲ, ನಿಮಗೆ ಯಾವುದೇ ರೀತಿಯ ಬೆದರಿಕೆ ತಲೆದೋರಬಹುದು ಎಂದರೂ ಅವರು ಜಗ್ಗುವುದಿಲ್ಲ" ಎಂದು ಅಲೆಕ್ಸಾಂಡರ್ ಬರೆದಿದ್ದಾರೆ.

ಫಿಜೋ ಮಹಾನ್ ಶಕ್ತಶಾಲಿಯಾಗಿದ್ದ ಹಾಗೂ ಪ್ರವರ್ತಕ ಶಕ್ತಿಯಾಗಿದ್ದ. 1951ರಲ್ಲಿ ಫಿಜೋ ಮತ್ತು ಅವನ ಸಂಗಾತಿಗಳು ನಾಗಾ ಗುಡ್ಡಗಾಡು ಪ್ರದೇಶದಾದ್ಯಂತ ಪ್ರವಾಸ ಮಾಡಿ, ಜನರಿಂದ ನಾಗಾ ಸ್ವತಂತ್ರ ರಾಷ್ಟ್ರಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸುವ ಅರ್ಜಿಗೆ ಸಹಿ–ಹೆಬ್ಬೆಟ್ಟು ಒತ್ತಿಸಿಕೊಂಡರು. ಈ ಅರ್ಜಿಗೆ ಸಹಿ ಹಾಕಿದವರ-ಹೆಬ್ಬೆಟ್ಟೊತ್ತಿದವರ ಸಂಖ್ಯೆ ಒಟ್ಟು ನಾಗಾ ಜನಸಂಖ್ಯೆಯಲ್ಲಿ ಶೇ.99.99ರಷ್ಟಿತ್ತು. ಇವರೆಲ್ಲ ಸ್ವಾತಂತ್ರ್ಯದ ಪರವಾಗಿದ್ದರು. ಈ ಅಂಕಿ ಅಂಶ ನಿರಂಕುಶ ಪ್ರಭುತ್ವ ರಾಷ್ಟ್ರಗಳು ನಡೆಸಿದ ಇದೇ ರೀತಿಯ ಕಸರತ್ತನ್ನು ನೆನಪಿಗೆ ತರುತ್ತವೆ. ಉದಾಹರಣೆಗೆ ಹೇಳುವುದಾದರೆ, ರಷ್ಯದಲ್ಲಿ ಶೇ.99.99ರಷ್ಟು ಜನರು ಸ್ಟ್ಯಾಲಿನ್ ಸರ್ವೋಚ್ಚ ನಾಯಕನೆಂದು ಒಪ್ಪಿಕೊಂಡಿದ್ದರಂತೆ. ಆದಾಗ್ಯೂ ಫಿಜೋಗೆ ಸ್ವಾತಂತ್ರ್ಯ ಹೊರತು ಬೇರೇನೂ ಬೇಕಾಗಿರಲಿಲ್ಲ. ಅವನ ಅಸಂಖ್ಯಾತ ಅನುಯಾಯಿಗಳಿಗೂ ಅಷ್ಟೇ.

ಈ ವೇಳೆಗೆ, ಭಾರತಕ್ಕೇ ಸ್ವಾತಂತ್ರ್ಯ ಬಂದು ನಾಲ್ಕು ವರ್ಷವಾಗಿತ್ತು. ಬ್ರಿಟಿಷ್ ಅಧಿಕಾರಿಗಳ ಜಾಗಕ್ಕೆ ಭಾರತೀಯರು ಬಂದಿದ್ದರು. ಇಷ್ಟು ಹೊರತು ನಾಗಾಗಳಿಗೆ ಹೊಸ ರಾಷ್ಟ್ರದಲ್ಲಿ ಬೇರೇನೂ ವ್ಯತ್ಯಾಸ ಕಾಣಿಸಲಿಲ್ಲ. ವಿಭಜನೆಯ ನೋವನ್ನು ಉಪಶಮನ ಗೊಳಿಸುವುದು, ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವುದು, ರಾಜಮಹಾರಾಜರ ಸಂಸ್ಥಾನಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು, ಸಂವಿಧಾನ ರಚಿಸುವುದು–ಇವೇ ಮೊದಲಾದ ಕೆಲಸ ಕಾರ್ಯಗಳಲ್ಲಿ ನಿರತವಾಗಿದ್ದ ನವದೆಹಲಿಯ ರಾಜಕೀಯ ವರಿಷ್ಠರಿಗೆ ಗುಡ್ಡಗಾಡು ಜನರ ಬಗ್ಗೆ ಯೋಚಿಸಲು ಸಮಯವಿರಲಿಲ್ಲ. ಆದರೆ, 1951ರ ಕೊನೆಯ ವಾರದಲ್ಲಿ ನೆಹರೂ ಅಸ್ಸಾಮಿನ ತೇಜ್ಪುರದಲ್ಲಿದ್ದರು. ಚುನಾವಣಾ ಪ್ರಚಾರಕ್ಕಾಗಿ ಬಂದಿದ್ದರು. ಫಿಜೋ ಮೂವರು ದೇಶ ಬಾಂಧವರೊಂದಿಗೆ ನೆಹರೂ ಅವರನ್ನು ಭೇಟಿ ಮಾಡಿದ್ದ. ನಾಗಾಗಳು ಸ್ವತಂತ್ರ ರಾಷ್ಟ್ರವಾಗಿರಲು ಇಚ್ಛಿಸುತ್ತಾರೆಂದು ಫಿಜೋ ತಿಳಿಸಿದಾಗ, ನೆಹರೂ ಅದನ್ನು ಅಸಂಬದ್ಧ ಬೇಡಿಕೆ ಎಂದು ತಿರಸ್ಕರಿಸಿದರು. ಈ ಬೇಡಿಕೆ, ಇತಿಹಾಸದ ಚಕ್ರವನ್ನು ತಿರುಗು ಮುರುಗು ಮಾಡುವ ಪ್ರಯತ್ನವಾಗಿದೆಯೆಂದು ಬಣ್ಣಿಸಿದರು. "ನಾಗಾಗಳೂ ಎಲ್ಲ ಭಾರತೀಯರಂತೆ ಸ್ವತಂತ್ರರಿದ್ದಾರೆ. ಸಂವಿಧಾನದನ್ವಯ ಅವರಿಗೆ ತಮ್ಮ ವ್ಯವಹಾರಗಳನ್ನು ನಿರ್ವಹಿಸುವ ಅಧಿಕಾರವಿದೆ" ಎಂದು ನೆಹರೂ ಫಿಜೋ ಮತ್ತು ಸಂಗಡಿಗರಿಗೆ ತಿಳಿಸಿದರು. ಸಾಂಸ್ಕೃತಿಕ, ಆಡಳಿತಾತ್ಮಕ ಹಾಗೂ ಆರ್ಥಿಕ ಸ್ವಾಯತ್ತತೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಸಲ್ಲಿಸುವಂತೆ

ನೆಹರೂ ಫಿಜೋಗೆ ಆಹ್ವಾನವಿತ್ತರು. ನಿಮ್ಮ ಸಲಹೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದು. ಅಗತ್ಯ ಬಿದ್ದರೆ ಸಂವಿಧಾನದಲ್ಲೂ ಬದಲಾವಣೆ ಮಾಡಬಹುದು. ಆದರೆ ನಾಗಾಗಳಿಗೆ ಸ್ವಾತಂತ್ರ್ಯ ಕೊಡುವ ಪ್ರಶ್ನೆ ಇಲ್ಲವೇ ಇಲ್ಲ ಎಂದು ನೆಹರೂ ಖಡಾಖಂಡಿತವಾಗಿ ಹೇಳಿದ್ದರು.

ಇದಕ್ಕೆ ನಾಗಾ ನ್ಯಾಶನಲ್ ಕೌನ್ಸಿಲ್ ಪ್ರತಿಕ್ರಿಯೆ ಎಂದರೆ, ಸಾರ್ವತ್ರಿಕ ಚುನಾವಣೆಗೆ ಬಹಿಷ್ಕಾರ. ಕಾಂಗ್ರೆಸ್‌ನ ಚುನಾಯಿತ ಸರ್ಕಾರ ಬಂದ ಮೇಲೆ ಫಿಜೋ ನವದೆಹಲಿಯಲ್ಲಿ ಮತ್ತೊಮ್ಮೆ ನೆಹರೂ ಅವರನ್ನು ಭೇಟಿಯಾಗಲಿಚ್ಛಿಸಿದ. 1952ರ ಫೆಬ್ರುವರಿ ಎರಡನೆಯ ವಾರದಲ್ಲಿ ಫಿಜೋ, ಇನ್ನಿಬ್ಬರು ನಾಗಾ ನ್ಯಾಶನಲ್ ಕೌನ್ಸಿಲ್ ನಾಯಕರುಗಳ ಜೊತೆ ದೆಹಲಿಯಲ್ಲಿ ನೆಹರೂ ಅವರನ್ನು ಭೇಟಿಯಾದ. ನೆಹರೂ ಮತ್ತೊಮ್ಮೆ ಖಂಡತುಂಡವಾಗಿ ಇವರಿಗೆ ತಿಳಿಯ ಹೇಳಿದರು: ಸ್ವಾತಂತ್ರ್ಯದ ಆಯ್ಕೆ ಇಲ್ಲವೇ ಇಲ್ಲ, ಹೆಚ್ಚಿನ ಸ್ವಾಯತ್ತತೆ ನೀಡಬಹುದು. ಆದರೆ ಫಿಜೋ ಬಗ್ಗಲಿಲ್ಲ. "ಸ್ವಾತಂತ್ರ್ಯಕ್ಕಾಗಿ ನಾವು ನಮ್ಮ ಹೋರಾಟ ಮುಂದುವರಿಸುತ್ತೇವೆ. ಮೈತ್ರಿಯುತ ಇತ್ಯರ್ಥಕ್ಕಾಗಿ ನಾವು ಮತ್ತೊಮ್ಮೆ ನೆಹರೂ ಅವರನ್ನು ಭೇಟಿಯಾಗಲಿದ್ದೇವೆ" ಎಂದು ಫಿಜೋ ನಂತರ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ. ಫಿಜೋ ಕಲ್ಪನೆಯಲ್ಲಿ, ಸ್ವತಂತ್ರ ನಾಗಾರಾಷ್ಟ್ರವೆಂದರೆ, ಭಾರತದಲ್ಲಿನ 200,000 ನಾಗಾಗಳು, ಬೇರೆ ಎಲ್ಲೆಲ್ಲೋ ಇರುವ 200,000 ನಾಗಾಗಳು ಹಾಗೂ ಬರ್ಮಾದಲ್ಲಿರುವ 400,000 ನಾಗಾಗಳನ್ನು ಒಂದುಗೂಡಿಸುವುದೇ ಆಗಿತ್ತು.

ಇದಾದ ನಂತರ ಜಾರ್ಖಂಡ್ ನಾಯಕ ಜೈಪಾಲ್ ಸಿಂಗ್ ಫಿಜೋ ಮತ್ತು ಅವರ ತಂಡದವರಿಗೆ ಒಂದು ಔತಣಕೂಟ ಏರ್ಪಡಿಸಿದ್ದರು. ಈ ಔತಣಕೂಟದಲ್ಲಿ ಭಾಗವಹಿಸಿದ್ದ ಪತ್ರಕರ್ತರೊಬ್ಬರಿಗೆ ನಾಗಾ ನ್ಯಾಶನಲ್ ಕೌನ್ಸಿಲ್ ಅಧ್ಯಕ್ಷರು ಗೋಚರಿಸಿದ್ದು ಹೀಗೆ: "ಮಂಗೋಲಿಯನ್ ಚಹರೆಯ, ಕಿಡಿಕಾರುವ ಕಣ್ಣುಗಳನ್ನು ಅಡಗಿಸಿಟ್ಟ ಕನ್ನಡಕಧಾರಿ ಸಣಕಲು ಆಸಾಮಿಯಾಗಿ". ನಾಗಾಗಳ ಬಗ್ಗೆ ತಮಗೆ ಸಹಾನುಭೂತಿ ಇರುವುದಾಗಿಯೂ ಆದರೆ ಭಾರತವನ್ನು, ಹೊಸ ಪಾಕಿಸ್ತಾನದ ರೂಪದಲ್ಲಿ ಮತ್ತಷ್ಟು ಛಿದ್ರಛಿದ್ರವಾಗಿಸುವುದು ತಮಗಿಷ್ಟವಿಲ್ಲವೆಂದೂ ಜೈಪಾಲ್ ಸಿಂಗ್ ತಿಳಿಸಿದ್ದರು. ಪ್ರತ್ಯೇಕ ಸ್ವತಂತ್ರ ಸಾರ್ವಭೌಮ ರಾಷ್ಟ್ರದ ಬೇಡಿಕೆ ಕೈಬಿಟ್ಟು, ಈಶಾನ್ಯದಲ್ಲಿ, ಜಾರ್ಖಂಡ್‌ಗೆ ಪ್ರತಿಯಾಗಿ ಹೊಸ ಗುಡ್ಡಗಾಡು ರಾಜ್ಯವೊಂದರ ರಚನೆಗೆ ಆಗ್ರಹಪಡಿಸುವಂತೆಯೂ ಜೈಪಾಲ್ ಸಿಂಗ್ ಸಲಹೆ ಮಾಡಿದ್ದರು. ಅದಕ್ಕೆ ಫಿಜೋ ಉತ್ತರ ಹೀಗಿತ್ತು: "ನಾಗಾಗಳು ಮಂಗೋಲಿಯನ್ ಸಂಜಾತರು. ಅವರಿಗೆ ಭಾರತೀಯರೊಂದಿಗೆ ಜನಾಂಗೀಯ ಹೋಲಿಕೆಯಾಗಲೀ ನೆಂಟಸ್ಥನವಾಗಲೀ ಇಲ್ಲ". ಇಲ್ಲಿನ ನಾಗಾಗಳು ಹಾಗೂ ಬರ್ಮಾದ ಕಡೆ ಇರುವ ನಾಗಾಗಳು ಇಬ್ಬರನ್ನೂ ಒಂದುಗೂಡಿಸಿ ನಾಗಾರಾಷ್ಟ್ರವೊಂದನ್ನು ರಚಿಸುವ ಭರವಸೆಯನ್ನು ಫಿಜೋ ವ್ಯಕ್ತಪಡಿಸಿದ್ದ. ಆದರೆ, ಆಗ ಪ್ರತ್ಯಕ್ಷದರ್ಶಿಯಾಗಿದ್ದ ಪತ್ರಕರ್ತರೊಬ್ಬರು ಅಭಿಪ್ರಾಯಪಟ್ಟಿರುವಂತೆ–

"ದೆಹಲಿಯ ಅಧಿಕೃತ ನಿಲುವಿನ ಪ್ರಕಾರ ಇಂಥ ಪ್ರತ್ಯೇಕ ರಾಷ್ಟ್ರ ಕಾರ್ಯಸಾಧ್ಯವಾದುದಲ್ಲ. ರಾಷ್ಟ್ರಗಳ ನಡುವೆ ಆಯಕಟ್ಟಿನ ಪ್ರದೇಶವಾಗಿರುವ ಪರ್ವತ ಪ್ರದೇಶ, ನಾಗಾಗಳನ್ನು ಲಂಗುಲಗಾಮಿಲ್ಲದೆ ಸ್ವತಂತ್ರವಾಗಿರಲು ಬಿಡಲು ತುಂಬ ಅಪಾಯಕಾರಿಯಾದವದ್ದು."

IV

1952ರ ಅಕ್ಟೋಬರ್‌ನಲ್ಲಿ ಪ್ರಧಾನಮಂತ್ರಿಗಳು ಒಂದು ವಾರ ಕಾಲ ನೇಫಾದಲ್ಲಿ (NEFA–North East Frontier Agency) ಪ್ರವಾಸ ಕೈಗೊಂಡಿದ್ದರು. ಈ ವೇಳೆಗಾಗಲೇ ಈ ಗುಡ್ಡಗಾಡು ಪ್ರದೇಶದ ಜನರ ಜೀವನದ ಪರಿಚಯ ಹೊಂದಿದ್ದರು. ಈ ಜನರ ಕಲೆ, ಕುಶಲಕಲೆ, ಸಂಪ್ರದಾಯಗಳು ಹಾಗೂ ಜೀವನೋತ್ಸಾಹವನ್ನು ಅವರು ಮೆಚ್ಚಿಕೊಂಡಿದ್ದರು. ಹಿಂದಿನ ಜೂನ್ ತಿಂಗಳಲ್ಲಿ ನವದೆಹಲಿಯ ಸಮಾಜ ಸೇವಕರ ಸಭೆಯೊಂದರಲ್ಲಿ ಮಾತನಾಡುತ್ತ, ನೆಹರು ಗುಡ್ಡಗಾಡು ಜನರನ್ನು "ತಮ್ಮ ಎರಡನೇ ನಕಲಾಗಿಸುವ" ಕೆಲವರ ಅಪೇಕ್ಷೆಯನ್ನು ಖಂಡಿಸಿದ್ದರು. ನಾಗರಿಕ ಜಗತ್ತು ಆದಿವಾಸಿಗಳಿಂದ ಕಲಿಯಬೇಕಾದ್ದು ಬಹಳಷ್ಟಿದೆ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಆದಿವಾಸಿಗಳು ತುಂಬ ಶಿಸ್ತಿನ ಜನರಾಗಿದ್ದು ಭಾರತದಲ್ಲಿನ ಅನೇಕಾನೇಕ ಜನರಿಗಿಂತ ಹೆಚ್ಚು ಪ್ರಜಾಸತ್ತಾತ್ಮಕವಾಗಿದ್ದಾರೆಂಬುದು ನೆಹರೂ ಅಭಿಪ್ರಾಯವಾಗಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಆದಿವಾಸಿಗಳು ಹಾಡಿ, ಕುಣಿದು ಬದುಕನ್ನು ಆನಂದೋಲ್ಲಾಸಗಳಿಂದ ಕಳೆಯಲಿಚ್ಛಿಸುವ ಜನ; ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಕುಳಿತು ಒಬ್ಬರ ಮೇಲೊಬ್ಬರು ಕಿರುಚಾಡುತ್ತಾ, ಬೊಬ್ಬೆ ಹಾಕುತ್ತಾ ತಾವು ನಾಗರಿಕರೆಂದು ಭಾವಿಸುವ ಮಂದಿಯಂತಲ್ಲ ಎಂದು ನೆಹರೂ ಭಾವಿಸಿದ್ದರು.

ಒಂದು ವಾರಕಾಲ ಈಶಾನ್ಯ ಪ್ರದೇಶದಲ್ಲಿ ಕೈಗೊಂಡ ಪ್ರವಾಸದಿಂದಾಗಿ ನೆಹರೂ ಅವರು ಮೆಚ್ಚುಗೆ, ಪ್ರಶಂಸೆಗಳನ್ನು ಪುನರುಚ್ಚರಿಸುವಂತಾಯಿತು. ತಮ್ಮ ಈ ಭೇಟಿ ನವಚೈತನ್ಯದಾಯಕವಾಗಿತ್ತೆಂದು ಅವರು ಮಿತ್ರರೊಬ್ಬರಿಗೆ ಬರೆದಿದ್ದರು. ಭಾರತದ ಇತರೆಡೆ ಇರುವ ಜನರು ಈ ಪ್ರದೇಶಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಳ್ಳಬೇಕೆಂದು ತಾವು ಬಯಸುವುದಾಗಿ ಅವರು ತಿಳಿಸಿದ್ದರು. ಇಂಥ ಸ್ನೇಹ-ಸಂಪರ್ಕ ಹೆಚ್ಚು ಲಾಭದಾಯಕವಾಗಲಿದೆ ಎಂದು ಅವರು ನಂಬಿದ್ದರು. ಗುಡ್ಡಗಾಡು ಜನರ ಕಲೆಗಾರಿಕೆ ಕಂಡು ನೆಹರೂ ಪರಮಾಶ್ಚರ್ಯ ಭರಿತರಾಗಿದ್ದರು. ಅವರ ನಯನ-ಮನೋಹರ ಕೈಮಗ್ಗದ ಬಟ್ಟೆಗಳು ನೆಹರೂ ಅವರ ಮನಸೂರೆಗೊಂಡಿದ್ದವು. ಆದರೆ ಗುಡ್ಡಗಾಡು ಜನರ ಈ ಕರಕುಶಲ ಕಲೆ ಮತ್ತು ಕೈಮಗ್ಗದ ಕಸುಬಿಗೆ ಬಯಲು ಪ್ರದೇಶದ ಕಾರ್ಖಾನೆಗಳ ಅಗ್ಗದ ವಸ್ತುಗಳ ಪೈಪೋಟಿಯಿಂದ ಧಕ್ಕೆಯುಂಟಾಗಬಹುದೆಂದು, ಅಪಾಯ ಒದಗಬಹುದೆಂದು ನೆಹರೂಗೆ ಅನ್ನಿಸಿತ್ತು. ಈ ವಿಷಯದಲ್ಲಿ ಗುಡ್ಡಗಾಡು ಜನರಿಗೆ ನಮ್ಮಿಂದಾಗುವ ಎಲ್ಲ ನೆರವನ್ನೂ ನೀಡಬೇಕು ಎಂಬ ನಿಶ್ಚಿತ ಅಭಿಪ್ರಾಯದಿಂದ ಅವರು ದೆಹಲಿಗೆ ವಾಪಸಾಗಿದ್ದರು.

ಪ್ರಧಾನ ಮಂತ್ರಿಗಳು ತಮ್ಮ ಈಶಾನ್ಯ ಪ್ರವಾಸದ ಬಗ್ಗೆ ಒಂದು ಸುದೀರ್ಘ ಪತ್ರ ಬರೆದು ಅದನ್ನು ಎಲ್ಲ ಮುಖ್ಯಮಂತ್ರಿಗಳಿಗೂ ಕಳುಹಿಸಿಕೊಟ್ಟರು. "ಅಲ್ಲೊಂದು ಚಳವಳಿ ನಡೆದಿದೆ...ಗುಡ್ಡಗಾಡಿನ ಜನರನ್ನು ಅಸ್ಸಾಮಿಯೊಳಗೆ ವಿಲೀನಗೊಳಿಸುವ ಬಗ್ಗೆ...ಆದರೆ ಗುಡ್ಡಗಾಡು ಜನರ ಸಂಸ್ಕೃತಿಯನ್ನು ಕಾಪಾಡುವ ಪ್ರಯತ್ನಗಳಾಗಬೇಕು...ತಮ್ಮ ಬದುಕನ್ನು ತಾವು ಸ್ವತಂತ್ರವಾಗಿ ನಡೆಸಲು ಸಾಧ್ಯವಾಗುವಂಥ, ತಮ್ಮ ಇಷ್ಟಾನುಸಾರದ ಅಭಿವೃದ್ಧಿಗೆ ಸಹಾಯಕವಾಗುವಂಥ ಸ್ವಾತಂತ್ರ್ಯ ಅವರಿಗಿರಬೇಕು. ಅವರ ದೃಷ್ಟಿಯಲ್ಲಿ ಭಾರತ ತಮ್ಮನ್ನು ರಕ್ಷಿಸುವ ಶಕ್ತಿಯಷ್ಟೇ ಅಲ್ಲದೆ ವಿಮೋಚನಾ ಶಕ್ತಿಯಾಗಿಯೂ ಆಗಿ ಕಾಣಿಸಿಕೊಳ್ಳಬೇಕು" ಎಂದು ನೆಹರೂ ಈ ಪತ್ರದಲ್ಲಿ ಕಳಕಳಿ ವ್ಯಕ್ತಪಡಿಸಿದ್ದರು.

ನಾಗಾ ಜಿಲ್ಲೆಗೆ ಹೊಂದಿಕೊಂಡಿದ್ದ ನೇಫಾದಲ್ಲಿ ನಾಗಾಗಳಿದ್ದರು. ಸ್ವತಂತ್ರ ನಾಗಾ ರಾಷ್ಟ್ರದ ಬೇಡಿಕೆಯನ್ನು ಅಸಂಬದ್ಧ ಎಂದು ನೆಹರೂ ತಳ್ಳಿಹಾಕಿದ್ದರು. "ಸ್ಥಳೀಯ ಅಧಿಕಾರಿಗಳು ಇನ್ನಷ್ಟು ದಕ್ಷತೆ-ಸಾಮರ್ಥ್ಯಗಳಿಂದ ಪರಿಸ್ಥಿತಿಯನ್ನು ನಿಭಾಯಿಸಿದ್ದಲ್ಲಿ, ಕೆಲವು ಕುಖ್ಯಾತ ಅಧಿಕಾರಿಗಳನ್ನು ಅಲ್ಲಿಂದ ವರ್ಗಾಯಿಸಿದ್ದಲ್ಲಿ ನಾಗಾ ಜಿಲ್ಲೆಯಲ್ಲಿ ಪರಿಸ್ಥಿತಿ ಇಷ್ಟೊಂದು ಹದಗೆಡುತ್ತಿರಲಿಲ್ಲ. ಅಲ್ಲದೇ, ನಾಗಾಗಳ ಮೇಲೆ ಹೊಸ ವಿಧಾನಗಳನ್ನು, ಹೊಸ ಪದ್ಧತಿಗಳನ್ನು ಹೇರುವ ಪ್ರಯತ್ನ ಅವರಲ್ಲಿ ಕಿರಿಕಿರಿಯುಂಟು ಮಾಡಿ ತೊಂದರೆಗಳನ್ನು ಸೃಷ್ಟಿಸುತ್ತದೆ" ಎಂಬುದು ನೆಹರೂ ಅವರ ಭಾವನೆಯಾಗಿತ್ತು.

ನಾಗಾಗಳ ಬಗ್ಗೆ ಹೆಚ್ಚು ಸಹಾನುಭೂತಿಯಿಂದ ವರ್ತಿಸುವಂತೆ ನೆಹರೂ ಅವರು ಅಧಿಕಾರಿಗಳಿಗೆ ತಾಕೀತು ಮಾಡುತ್ತಿರುವಾಗಲೇ, ಅಂತಿಮ ಬೇಡಿಕೆಯ ಪತ್ರವೊಂದು ನೆಹರೂ ಅವರಿಗೆ ನಾಗಾ ನ್ಯಾಶನಲ್ ಕೌನ್ಸಿಲ್‌ನಿಂದ ರವಾನೆಯಾಗಿತ್ತು, ಅದೂ ನೆಹರೂ ಇನ್ನೂ ನೇಫಾದಲ್ಲಿದ್ದಾಗಲೇ. ಈ ಪತ್ರದಲ್ಲಿ ಫಿಜೋ ಮತ್ತು ಅವನ ಸಂಗಾತಿಗಳು, "ಭಾರತೀಯರು ಮತ್ತು ನಾಗಾಗಳ ನಡುವೆ ಸಮಾನವಾದುದು ಏನೂ ಇಲ್ಲ...ಭಾರತೀಯರನ್ನು ಕಂಡಾಕ್ಷಣ ವಿಷಣ್ಣತೆಯ ಮ್ಲಾನತೆ ನಮ್ಮ ಮನಸ್ಸನ್ನು ಆವರಿಸುತ್ತದೆ" ಎಂದು ಈ ಪತ್ರದಲ್ಲಿ ಪ್ರಮುಖವಾಗಿ ಹೇಳಲಾಗಿತ್ತು.

ಇದಾದ ಆರು ತಿಂಗಳ ನಂತರ, ನೆಹರೂ ಬರ್ಮಾದ ಪ್ರಧಾನಮಂತ್ರಿ ಊನು ಅವರೊಂದಿಗೆ ನಾಗಾ ರಾಜಧಾನಿ ಕೋಹಿಮಾಗ ಭೇಟಿಕೊಟ್ಟಿದ್ದರು. ಈ ಭೇಟಿ ಕಾಲದಲ್ಲಿ ನಾಗಾಗಳ ನಿಯೋಗವೊಂದು ನೆಹರೂ ಅವರನ್ನು ಭೇಟಿಮಾಡಿ ಮನವಿ ಪತ್ರವೊಂದನ್ನು ಅರ್ಪಿಸುವ ಇರಾದೆ ಹೊಂದಿತ್ತು. ಆದರೆ ಇದಕ್ಕೆ ಅನುಮತಿ ನಿರಾಕರಿಸಲಾಯಿತು. ನಾಗಾಗಳು ಇದನ್ನು ಮುಖಭಂಗವೆಂದೇ ಭಾವಿಸಿದರು. ಈ ಮುಖಭಂಗದ ಸುದ್ದಿ ಹರಡಿತು. ಪ್ರಧಾನಮಂತ್ರಿ ನೆಹರೂ ಮತ್ತು ಬರ್ಮಾದ ಅತಿಥಿಯ ಗೌರವಾರ್ಥ ಏರ್ಪಡಿಸಲಾಗಿದ್ದ ಬಹಿರಂಗ ಸಭೆಗೆ ಈ ಇಬ್ಬರು ಗೌರವಾನ್ವಿತರು ಆಗಮಿಸಿದಾಗ ಸಭಿಕರು ಕಾಲ್ತೆಗೆಯಲಾರಂಭಿಸಿದರು. ಕೆಲವರು ಪೃಷ್ಠ ತೋರಿ ಸಭಾತ್ಯಾಗ ಮಾಡಿದ್ದರು. ಇದನ್ನು ಗಮನಿಸಿದ ಇಂದಿರಾ ಗಾಂಧಿಯವರು, "ಅಪ್ಪಾಜಿ, ಜನ ಸಭಾತ್ಯಾಗ ಮಾಡುತ್ತಿದ್ದಾರೆ"

ಎಂದು ತಂದೆಗೆ ತಿಳಿಸಿದರು. ನೆಹರೂ ಶುಷ್ಕ ದನಿಯಲ್ಲಿ, "ಹೌದು ಮಗು, ಅವರು ಸಭಾತ್ಯಾಗ ಮಾಡುತ್ತಿರುವುದು ನನಗೂ ಕಾಣಿಸುತ್ತಿದೆ" ಎಂದು ಉತ್ತರಿಸಿದರು.

ಕೋಹಿಮಾ ಸಭಾತ್ಯಾಗ, ನಾಗಾಗಳ ವಿರುದ್ಧ ನೆಹರೂ ಅವರ ಹೃದಯವನ್ನು ಕಲ್ಲಾಗಿಸಿತು. ವಾಸ್ತವದಲ್ಲಿ, ಫಿಜೋ ಮತ್ತು ನಾಗಾ ನ್ಯಾಶನಲ್ ಕೌನ್ಸಿಲ್, ಏನಕೇನ ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿದ್ದುವು. ಹಳ್ಳಿಗಳಲ್ಲಿ 'ಗೃಹರಕ್ಷಕ ದಳದ' ಹೆಸರಿನಲ್ಲಿ ಜನರನ್ನು ಸಂಘಟಿಸುತ್ತಿದ್ದರು. ಇನ್ನು ಸರ್ಕಾರವೂ ಕೈಕಟ್ಟಿ ಕುಳಿತಿರಲಿಲ್ಲ. ಸರ್ಕಾರ ಅಸ್ಸಾಂ ಫಿರಂಗಿ ಪಡೆಯ ಅರೆಸೈನಿಕ ದಳವನ್ನು ಕಳುಹಿಸಲಾರಂಭಿಸಿತ್ತು.

1953ರ ಬೇಸಿಗೆಯ ಸಮಯಕ್ಕೆ ನಾಗಾ ನ್ಯಾಶನಲ್ ಕೌನ್ಸಿಲ್ ವರಿಷ್ಠರೆಲ್ಲ ಭೂಗತರಾಗಿದ್ದರು. ಪೊಲೀಸರು ಅಂಗಾಮಿಗಳ ನೆಲೆಗಳ ಮೇಲೆ ದಾಳಿ ನಡೆಸಿದರು. ಇದರಿಂದಾಗಿ ಗ್ರಾಮಸ್ಥರು ಮತ್ತಷ್ಟು ಪ್ರತ್ಯೇಕಿತರಾದರು. ಸ್ಥಳೀಯ ಪ್ರಭಾವ, ಸ್ಥಳೀಯ ತಿಳುವಳಿಕೆಗಳ ಜೊತೆಗೆ ಬಂಡುಕೋರರಿಗೆ ಭೌಗೋಳಿಕ ಜ್ಞಾನವೂ ವರವಾಗಿ ಪರಿಣಮಿಸಿತ್ತು. ಬ್ರಿಟಿಷ್ ಪ್ರವಾಸಿಗನೊಬ್ಬ ಇಲ್ಲಿಯ ದೃಶ್ಯವನ್ನು "ಸುಂದರ-ಮನಮೋಹಕ" ಎಂದು ವರ್ಣಿಸಿದ್ದಾನೆ.

ಇದೊಂದು ಶೀತಲ ಸಮರವಾಗಿತ್ತು. ಹೊರಗಿನವರು ಯಾರಿಗೂ, ಪತ್ರಕರ್ತರೂ ಸೇರಿದಂತೆ ಯಾರಿಗೂ ನಾಗಾ ಪ್ರದೇಶದೊಳಕ್ಕೆ ಪ್ರವೇಶಾವಕಾಶವಿರಲಿಲ್ಲ. ನಾಗಾ ಗುಡ್ಡಗಾಡು ಪ್ರದೇಶದ ಚರಿತ್ರೆಯ ಪುನರ್‌ಸೃಷ್ಟಿಯೇ ಕಷ್ಟತಮವಾದ ಕೆಲಸ. ಇದಕ್ಕೆ ಹೆಚ್ಚಾಗಿ ವಿದ್ವಾಂಸರು, ವರದಿಗಾರರು ಸಂಗ್ರಹಿಸಿದ 'ಹೇಳು ಕೇಳು' ಮಾತುಗಳನ್ನೇ ಅವಲಂಬಿಸಬೇಕಾಗಿದೆ. ಇವುಗಳನ್ನು ಆಧರಿಸಿ ಹೇಳುವುದಾದರೆ, 1954ರ ನಂತರ ಈಶಾನ್ಯದ ನಾಗಾ ಪ್ರಧಾನ ಪ್ರದೇಶದಲ್ಲಿ ಪರಿಸ್ಥಿತಿ ನಿರ್ಣಾಯಕವಾಗಿ ಉಲ್ಬಣಗೊಂಡಿತು. ಆ ವರ್ಷದ ವಸಂತ ಕಾಲದಲ್ಲಿ ಕೋಹಿಮಾದಲ್ಲಿ, ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದ ಸೇನಾಧಿಕಾರಿಯೊಬ್ಬ ಆಕಸ್ಮಿಕವಾಗಿ ದಾರಿಹೋಕನೊಬ್ಬನ ಮೇಲೆ ಹಾಯ್ದಿದ್ದ. ಸರಿ, ಜನ ಪ್ರತಿಭಟಿಸಲು ಜಮಾಯಿಸಿದರು. ಗಾಬರಿಗೊಂಡ ಪೊಲೀಸರು ಗುಂಡು ಹಾರಿಸಿದರು. ಗುಂಡೇಟಿನಿಂದ ಗೌರವಾನ್ವಿತ ನ್ಯಾಯಾಧೀಶರೊಬ್ಬರು ಹಾಗೂ ನಾಗಾ ನ್ಯಾಶನಲ್ ಕೌನ್ಸಿಲ್‌ನ ಸದಸ್ಯರೊಬ್ಬರು ಹತರಾದರು.

ಈ ಘಟನೆ ನಾಗಾಗಳಲ್ಲಿ ತೀವ್ರವಾದ ಪ್ರತಿಭಟನೆಗೆ ಕಾರಣವಾಯಿತು. ಇದು "ಅನಪೇಕ್ಷಿತ ಭಾರತೀಯರ" ಬಗೆಗಿನ ದ್ವೇಷ-ಹಗೆತನಗಳನ್ನು ಇಮ್ಮಡಿಗೊಳಿಸಿತು. ಹಾಗೂ ದಂಗೆಗೆ ಅಕಾಲಿಕ ಚಾಲನೆ ನೀಡಿತು. ಉಗ್ರಗಾಮಿಗಳು ನಾಗಾ ನ್ಯಾಶನಲಿಸ್ಟ್ ಕೌನ್ಸಿಲನ್ನು ಹತೋಟಿಗೆ ತೆಗೆದುಕೊಂಡರು. ಅರ್ಜಿ ಸಲ್ಲಿಕೆ, ಪ್ರದರ್ಶನಗಳನ್ನು ನಿಷೇಧಿಸಲಾಯಿತು. ದಂಗೆಕೋರರು ಸುರಕ್ಷಿತ ತಾಣವಾದ ಟ್ಯೂಯೆನ್‌ಸಾಂಗ್ ಪ್ರದೇಶಕ್ಕೆ ಶಸ್ತ್ರಾಸ್ತ್ರಗಳನ್ನು ರವಾನಿಸಲಾರಂಭಿಸಿದರು. 1954ರ ಜೂನ್ ತಿಂಗಳಲ್ಲಿ ಅಸ್ಸಾಂ ಫಿರಂಗಿ ಪಡೆ, ಗೆರಿಲ್ಲಾಗಳ ಬಗ್ಗೆ ಸಹಾನುಭೂತಿ ಹೊಂದಿರುವ ಗ್ರಾಮವೊಂದರ ಮೇಲೆ ದಾಳಿ ಮಾಡಿತು.

ಸೆಪ್ಟಂಬರ್‌ನಲ್ಲಿ ದಂಗೆಕೋರರು ಕೆಲವರು "ನಾಗಾಲ್ಯಾಂಡ್ ಫೆಡರಲ್ ಸರ್ಕಾರದ ರಚನೆಯನ್ನು" ಘೋಷಿಸಿದರು.

ಈಗ ನಾಗಾ ಗುಡ್ಡಗಾಡು ಪ್ರದೇಶದಲ್ಲಿ ಹತ್ಯೆ ಮತ್ತು ಪ್ರತಿಹತ್ಯೆಗಳು ವ್ಯವಸ್ಥಿತ ರೀತಿಯಲ್ಲಿ ಎಂಬಂತೆ ನಡೆಯುತ್ತಿತ್ತು. ಸರ್ಕಾರಕ್ಕೆ ನಿಷ್ಠೆ ತೋರಿದ್ದ ಹಳ್ಳಿಗಳಿದ್ದವು. ಇಂಥ ಹಳ್ಳಿಗಳ ಮೇಲೆ ದಂಗೆಕೋರರು ದಾಳಿ ನಡೆಸುತ್ತಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಸಹಾನುಭೂತಿಪರವಾಗಿದ್ದ ಹಳ್ಳಿಗಳೂ ಇದ್ದವು. ಇಂಥ ಹಳ್ಳಿಗಳ ಮೇಲೆ ಸರ್ಕಾರದ ಅಧಿಕಾರಿಗಳು-ಪಡೆಗಳು ದಾಳಿ ನಡೆಸುತ್ತಿದ್ದವು. ದಂಗೆಯನ್ನು ಹತ್ತಿಕ್ಕಲು ಭಾರತೀಯ ಸೇನೆಯ ಒಂದು ತುಕಡಿಯನ್ನು ಕರೆಸಲಾಯಿತು. ಇದರಿಂದಾಗಿ ಈಗಾಗಲೇ ಕಾರ್ಯಾಚರಣೆ ನಡೆಸಿದ್ದ ಅಸ್ಸಾಂ ರೈಫಲ್ಸ್‌ನ ಮುವತ್ತೈದು ಪಟಾಲಂನ ಬಲವೃದ್ಧಿಯಾಯಿತು. 1955ರ ಮಾರ್ಚಿಯಲ್ಲಿ ತ್ಯುಯೆನ್‌ಸ್ಯಾಂಗ್‌ನಲ್ಲಿ ಭೀಕರ ಯುದ್ಧ ಶುರುವಾಯಿತು. ಗುಂಡಿನ ದಾಳಿಯ ಶಬ್ದ ನಿಂತು, ಹೊಗೆಯೆಲ್ಲ ಹೋದಾಗ ಅರವತ್ತು ಮನೆಗಳು ಸುಟ್ಟು ಭಸ್ಮವಾದದ್ದು ಗೋಚರಿಸಿತು. ಹಲವಾರು ಕಣಜಗಳನ್ನು ಉಗ್ರಾಣಗಳನ್ನು ಸುಟ್ಟುಹಾಕಲಾಗಿತ್ತು.

ಅಂತರ್ಯುದ್ಧ ನಡೆದಿದ್ದಾಗ್ಯೂ ಸಂವಹನ-ಸಂಪರ್ಕ ಮಾಧ್ಯಮಗಳು ಕ್ರಿಯಾಶೀಲ ವಾಗಿದ್ದವು. 1955ರ ಸೆಪ್ಟಂಬರ್‌ನಲ್ಲಿ ಸ್ವತಃ ಫಿಜೋ ಅವರು ತಮ್ಮ ಇಬ್ಬರು ಸಹೋದ್ಯೋಗಿಗಳೊಂದಿಗೆ ಅಸ್ಸಾಂ ಮುಖ್ಯಮಂತ್ರಿಗಳನ್ನು ಭೇಟಿಮಾಡಿದ್ದರು. ಈ ಮಾತುಕತೆಯ ವಿವರಗಳು ಲಭ್ಯವಾಗಲಿಲ್ಲ. ಮಾತುಕತೆ ನಂತರ ನಾಗಾ ನಾಯಕರು ಅರಣ್ಯಕ್ಕೆ ವಾಪಸಾದರು. ಎಂದೆಂದಿಗೂ ನಾಗಾಗಳು, ಭಾರತದ ಸೇನೆಯನ್ನು ಪರಾಜಯಗೊಳಿಸುವ ಆಸೆ-ಭರವಸೆಗಳನ್ನಿಟ್ಟುಕೊಳ್ಳಲಾಗದು-ನಾಗಾಗಳ ಮುಖ್ಯ ಸಹಾಯಕರಾಗಿದ್ದ ಟಿ. ಸಖಾರೆ ಈ ವೇಳೆಗೆ ಇಂಥ ಅಭಿಪ್ರಾಯಕ್ಕೆ ಬಂದಿದ್ದರು. ನಾಗಾ ನ್ಯಾಶನಲ್ ಕೌನ್ಸಿಲ್‌ನ ಗೆರಿಲ್ಲಾಗಳು ತಮ್ಮ ಆಶಯಗಳನ್ನು, ಬೇಡಿಕೆಗಳನ್ನು, ಅಭಿಪ್ರಾಯಗಳನ್ನು ತಿಳಿಸಿಯಾಗಿದೆ. ಇನ್ನು ಶಸ್ತ್ರಾಸ್ತ್ರ ತ್ಯಜಿಸಬೇಕು. ಇವರ ನಾಯಕರುಗಳು ನವದೆಹಲಿಯ ಸರ್ಕಾರದೊಂದಿಗೆ ಗೌರವಯುತವಾದ ಒಪ್ಪಂದ ಮಾಡಿಕೊಳ್ಳಲು ಮುಂದಾಗಬೇಕು ಎನ್ನುವುದು ಸಖಾರೆ ಅವರ ಅಭಿಪ್ರಾಯವಾಗಿತ್ತು.

ಆದರೆ ಫಿಜೋ "ರಾಜಿ ಒಪ್ಪಂದಗಳಿಲ್ಲದ, ಹಿಂದೆಗೆಯದ" ಯುದ್ಧದ ಪ್ರತಿಜ್ಞೆ ಸ್ವೀಕರಿಸಿದ್ದರು. ಸಂಧಾನದ ಸಲಹೆ ಅವರನ್ನು ಕುಪಿತರನ್ನಾಗಿಸಿತ್ತು. ಅದರಲ್ಲೂ ತಮ್ಮಂತೆ ಖೋನೋಮಾ ಅಂಗಾಮಿಯೇ ಆಗಿದ್ದ, ಮೆರ್‌ಹುಮಾ ಕುಲದವರಾದ ಸಖಾರೆ ಅವರಿಂದ ಸಂಧಾನದ ಸಲಹೆ ಬಂದದ್ದು ಅವರನ್ನು ಹೆಚ್ಚಾಗಿ ಘಾಸಿಗೊಳಿಸಿತ್ತು. ಫಿಜೋ, ಸಖಾರೆ ಅವರ ಮೃದು ಧೋರಣೆಯಿಂದಾಗಿ ಕೋಪದಿಂದ ಕೆಂಡಾಮಂಡಲವಾಗಿದ್ದ. ತರುಣರು ತಂಡೋಪತಂಡವಾಗಿ ದಂಗೆಗೆ ತಮ್ಮನ್ನು ಸಮರ್ಪಿಸಿಕೊಳ್ಳುತ್ತಿದ್ದಂಥ ಸಂದರ್ಭದಲ್ಲಿ, ಗೆರಿಲ್ಲಾ ಸೈನ್ಯದ ಸಂಖ್ಯೆ ಹದಿನೈದು ಸಾವಿರದ ಬಲಮುಟ್ಟಿದ್ದ ಸಂದರ್ಭದಲ್ಲಿ, ಸಂಧಾನದ ಸಲಹೆ ಬಂದಿತ್ತು. ಆದರೆ ಭಾರತದ ಶಕ್ತಿಯ ಮುಂದೆ ದಂಗೆಕೋರರಿಗೆ ಗೆಲ್ಲುವ ಅವಕಾಶ, ಅದೃಷ್ಟಗಳು ಇಲ್ಲವೇ ಇಲ್ಲ ಎಂಬುದು ಸಖಾರೆ ಅವರಿಗೆ ಮನವರಿಕೆಯಾಗಿತ್ತು. ಅವರು

ಹಳ್ಳಿಗಳಲ್ಲಿ ಪ್ರವಾಸ ಕೈಗೊಂಡು ಫಿಜೋ ಅವರ ಉಗ್ರಗಾಮಿತ್ವ ತರವಲ್ಲವೆಂದು ಉಪದೇಶ ಮಾಡತೊಡಗಿದರು. ಹಿಂಸೆಯಿಂದ ಮತ್ತಷ್ಟು ಹಿಂಸೆ ಹುಟ್ಟಬಲ್ಲದೇ ವಿನಃ ಬೇರೇನೂ ಸಾಧ್ಯವಿಲ್ಲವೆಂದು ಜನರಿಗೆ ಬುದ್ಧಿ ಮಾತು ಹೇಳಲಾರಂಭಿಸಿದರು.

1956ರ ಜನವರಿಯಲ್ಲಿ ಮಲಗಿದ್ದ ಸಖಾರೆ ಅವರನ್ನು ಹಾಸಿಗೆಯಿಂದ ಎಳೆದುಕೊಂಡು ಹೋಗಿ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ಫಿಜೋ ಸಖಾರೆ ಕೊಲೆಗೆ ಆದೇಶ ನೀಡಿದ್ದನೆಂಬ ನಂಬಿಕೆ ವ್ಯಾಪಕವಾಗಿತ್ತು. ಆದರೆ ಫಿಜೋ ಇದನ್ನು ನಿರಾಕರಿಸಿದ್ದರು. ಆದರೆ ಇದರಿಂದ ಒಂದು ಸಂದೇಶ ಸ್ಪಷ್ಟವಾಗಿ ಜನತೆಗೆ ರವಾನೆಯಾಗಿತ್ತು. ಸ್ವಾತಂತ್ರ್ಯದ ದ್ರೋಹಿಗಳನ್ನು ಈ ರೀತಿ ನೋಡಿಕೊಳ್ಳಲಾಗುವುದು ಎಂಬುದೇ ಆ ಸಂದೇಶವಾಗಿತ್ತು. ಮಾರ್ಚಿಯಲ್ಲಿ ಮತ್ತೊಮ್ಮೆ ನಾಗಾಲ್ಯಾಂಡ್ ಫೆಡರಲ್ ಸರ್ಕಾರ ರಚನೆಯ ಘೋಷಣೆ ಹೊರಡಿಸಲಾಯಿತು. ನಾಗಾ ರಾಷ್ಟ್ರಧ್ವಜವೊಂದನ್ನು ವಿನ್ಯಾಸಗೊಳಿಸಲಾಯಿತು. ತಾಯ್ನಾಡಿನ ವಿವಿಧ ಪ್ರದೇಶಗಳಿಗೆ ದಂಡನಾಯಕರುಗಳು, ದಳಪತಿಗಳನ್ನು ನೇಮಿಸಲಾಯಿತು. ಆನಂತರ ಜುಲೈನಲ್ಲಿ ಒಂದು ಹತ್ಯೆ ಸಂಭವಿಸಿತು. ಈ ಹತ್ಯೆ ಭಾರತದ ವರ್ಚಸ್ಸಿಗೆ ಧಕ್ಕೆಯುಂಟು ಮಾಡಿತು. ಭಾರತದ ಭಾವನೆಗಳಿಗೆ ತೀವ್ರ ನೋವನ್ನುಂಟು ಮಾಡಿತ್ತು. ಇದು ಸಖಾರೆ ಹತ್ಯೆ ಹೇಗೆ ನಾಗಾ ನ್ಯಾಶನಲ್ ಕೌನ್ಸಿಲ್‌ನ ಭಾವನೆಗಳಿಗೆ ನೋವುಂಟು ಮಾಡಿತ್ತೋ ಅದೇ ರೀತಿಯದಾಗಿತ್ತು. ಅಂದು, ದಂಗೆಕೋರರನ್ನು ಅಡಗಿಸಿದ ನಂತರ ಭಾರತದ ಸೈನಿಕರು ಕೊಹಿಮಾಗೆ ವಾಪಸಾಗುತ್ತಿದ್ದರು. ಕೊಹಿಮಾದಲ್ಲಿ ಕರ್ಫ್ಯೂ ಜಾರಿಯಲ್ಲಿದ್ದು ಯಾರೂ ಬೀದಿಗಳಲ್ಲಿ ಓಡಾಡುವಂತಿರಲಿಲ್ಲ. ಏಕಾಂಗಿಯಾಗಿ ವೃದ್ಧನೊಬ್ಬ ರಸ್ತೆಯಲ್ಲಿ ನಡೆದು ಬರುತ್ತಿದ್ದುದನ್ನು ಕಂಡ ಸೈನಿಕರು ಆತನನ್ನು ರಸ್ತೆಯಿಂದಾಚೆಗೆ ಕಳುಹಿಸುವ ಪ್ರಯತ್ನ ಮಾಡಿದರು. ವೃದ್ಧ ಪ್ರತಿಭಟಿಸಿದ. ಜವಾನರು ಬಂದೂಕಿನ ತುದಿಯಿಂದ ಹೊಡೆದು ವೃದ್ಧನನ್ನು ಕೋಡುಗಲ್ಲಿನ ತುದಿಯಿಂದ ಕೆಳಗಿನ ಪ್ರಪಾತಕ್ಕೆ ತಳ್ಳಿದರು.

ಸೈನಿಕರು ನಿರ್ದಯವಾಗಿ ಕೊಂದ ವ್ಯಕ್ತಿ ಟಿ. ಹರಾಳು ಎಂಬಾತನಾಗಿದ್ದು ವೃತ್ತಿಯಿಂದ ಈತ ವೈದ್ಯನಾಗಿದ್ದ. ನಾಗಾ ಗುಡ್ಡಗಾಡಿನಲ್ಲಿ ಅಲೋಪತಿ ಡಾಕ್ಟರಾಗಿದ್ದ ಹರಾಳು ತುಂಬಾ ಜನಾನುರಾಗಿಯಾಗಿದ್ದು ಕೊಹಿಮಾ ಸುತ್ತಮುತ್ತಣ ಜನರು ಅವನನ್ನು ಪೂಜ್ಯ ಭಾವನೆಯಿಂದ ನೋಡುತ್ತಿದ್ದರು. ಹರಾಳು ಹತ್ಯೆಯಿಂದ ಭಾರತದ ಪರವಾಗಿದ್ದ ಜನಾಭಿಪ್ರಾಯ ಮಾಯವಾಯಿತು. ವಿಶೇಷವಾಗಿ ಸಖಾರೆ ಅವರ ಕೊಲೆಯ ನಂತರ ಭಾರತದ ಪರ ಮೂಡಿದ್ದ ಅನುಕೂಲಕರ ವಾತಾವರಣ ಮಾಯವಾಯಿತು. ಸಖಾರೆ ಹತ್ಯೆಯ ನಂತರ ನಾಗಾ ನ್ಯಾಶನಲ್ ಕೌನ್ಸಿಲ್‌ನಿಂದ ನವದೆಹಲಿಗೆ ಪಕ್ಷಾಂತರ ಶುರುವಾಗಿತ್ತು. ಆದರೆ ಈಗ ಡಾ. ಹರಾಳು ಹತ್ಯೆಯಿಂದ ಇದು ತಿರುಗುಮುರುಗಾಯಿತು.

ಏತನ್ಮಧ್ಯೆ ನಾಗಾ ಪ್ರದೇಶದಲ್ಲಿ ಭಾರತ ಸರ್ಕಾರದ ಸೈನ್ಯದ ಜಮಾವಣೆ ಭರದಿಂದ ಸಾಗಿತ್ತು. ಸೈನ್ಯದ ಸಂಖ್ಯೆ ಗಮನಾರ್ಹವಾಗಿ ಏರಿತ್ತು. ನಾಗಾ ಗುಡ್ಡಗಾಡು ಪಡೆ ಎಂಬ ನಾಮಾಂಕಿತದ ಹೊಸ ಫಿರಂಗಿ ದಳವೊಂದನ್ನು ಸೃಷ್ಟಿಸಲಾಯಿತು. ಇದಲ್ಲದೆ ಹದಿನೇಳು

ತುಕಡಿ ಪದಾತಿ ಸೈನ್ಯ ಹಾಗೂ ಅಸ್ಸಾಂ ರೈಫಲ್ಸ್‌ನ ಐವತ್ತು ಪಟಲಾಂ ಸೈನ್ಯ ಬೀಡು ಬಿಟ್ಟಿತ್ತು. ದಂಗೆಕೋರರೂ ತಮ್ಮದೇ ಆದ ಸೈನ್ಯ ವ್ಯೂಹ ರಚಿಸಿಕೊಂಡಿದ್ದರು. ಬುದ್ಧಿವಂತ ತಂತ್ರಗಾರನೆನ್ನಿಸಿದ್ದ ಕೈಟೋ ಎಂಬುವನು ದಂಗೆಕೋರರ ಸೇನೆಯ ಮಹಾದಂಡನಾಯಕನಾಗಿದ್ದ. ಇವನ ಕೈಕೆಳಗೆ ನಾಲ್ವರು ದಂಡನಾಯಕರುಗಳಿದ್ದರು. ಇವರುಗಳ ನಾಯಕತ್ವದಲ್ಲಿ ಸೈನ್ಯವನ್ನು ತುಕಡಿಗಳು ಮತ್ತು ಕಂಪನಿಗಳಾಗಿ ವಿಂಗಡಿಸಲಾಗಿತ್ತು. ನಾಗಾ ದಂಗೆಕೋರರ ಸೈನ್ಯ ಬ್ರಿಟಿಷ್ ಮತ್ತು ಜಪಾನಿ ರೈಫಲುಗಳಿಂದ, ಸ್ಟೆನ್‌ಗನ್ ಮತ್ತು ಮೆಷಿನ್‌ಗನ್ನುಗಳಿಂದ ಸಜ್ಜಿತವಾಗಿತ್ತು. ಇವೆಲ್ಲವೂ ಎರಡನೆ ಮಹಾಯುದ್ಧದ ನಂತರ ಭಗ್ನಾವಶೇಷಗಳಲ್ಲಿ ಬಿಟ್ಟು ಹೋದ ಶಸ್ತ್ರಾಸ್ತ್ರಗಳಾಗಿದ್ದವು. ಇದಲ್ಲದೆ ದಂಗೆಕೋರರು ಕೈ ಕೈ ಮಿಲಾಯಿಸಿದ ಘರ್ಷಣೆಗಳಲ್ಲಿ ಸ್ಥಳೀಯ ಕೋವಿಗಳನ್ನೂ ಬಳಸುತ್ತಿದ್ದರು. ಸಾಂಪ್ರದಾಯಿಕ ನಾಗಾ ಖಡ್ಗಗಳನ್ನೂ ಬಳಸುತ್ತಿದ್ದರು.

ನಾಗಾ ದಂಗೆಕೋರರ ನಿಯಮಿತ ಸೇನಾಪಡೆಗಳ ಜೊತೆಗೆ ಸಂಸ್ಥೆಗಳು, ತುರ್ತುಚಾರರ ತಂಡಗಳು ಯುದ್ಧದಲ್ಲಿ ತೊಡಗಿಕೊಂಡಿದ್ದವು. ಮಹಿಳಾ ಸ್ವಯಂ ಸೇವಕಿಯರಲ್ಲಿ ದಾದಿಯರೇ ಹೆಚ್ಚಾಗಿದ್ದು ಕರೆ ಬಂದಾಗ ರಣರಂಗಕ್ಕೆ ಧುಮುಕುತ್ತಿದ್ದರು. ಇದಲ್ಲದೆ ದಂಗೆಕೋರರಿಗೆ ಹಳ್ಳಿಗರ ಮೌನ ಬೆಂಬಲವಿತ್ತು. ದಂಗೆಕೋರರ ಕಾರ್ಯಾಚರಣೆ ಎದುರಿಸಲು ಭಾರತದ ಸೇನೆ, ಒಂಟಿಗಾಡುಗಳಾಗಿದ್ದ ಹಳ್ಳಿಗಳನ್ನು ಒಂದು ಗ್ರಾಮ ಸಮುದಾಯವಾಗಿ ಸಂಘಟಿಸಿತು. ಗ್ರಾಮ ಸಮುದಾಯದ ನಿವಾಸಿಗಳು ರಾತ್ರಿ ಹೊತ್ತು ಒಂಟಿಗಾಡು ಹಳ್ಳಿಗಳಲ್ಲಿ ಮಲಗಬೇಕು, ಬೆಳಿಗ್ಗೆ ಹೊಲಗದ್ದೆ ಕೆಲಸಗಳಿಗೆ ಹೋಗಬೇಕು ಎಂದು ನಿಯಮ ಮಾಡಿತ್ತು. ರೈತರಿಂದ ದಂಗೆಕೋರರಿಗೆ ಸುದ್ದಿ ಸಮಾಚಾರ ಮುಟ್ಟಿಸುವ ಜಾಲವನ್ನು ಭೇದಿಸುವುದೂ ಗ್ರಾಮ ಸಮುದಾಯ ರಚನೆಯ ಹಿಂದಿನ ಹುನ್ನಾರವಾಗಿತ್ತು. ಇದರಿಂದ ನಾಗಾಗಳಲ್ಲಿ ಭಾರತದ ಸೈನ್ಯದ ಬಗ್ಗೆ ಅಸಮಾಧಾನ ಹೆಚ್ಚಿತು.

1956ರ ಮಧ್ಯಭಾಗದ ವೇಳೆಗೆ ನಾಗಾ ಗುಡ್ಡಗಾಡಿನಲ್ಲಿ ಪೂರ್ಣಪ್ರಮಾಣದಲ್ಲಿ ಸಮರ ನಡೆದಿತ್ತು. ಜುಲೈ ಕೊನೆಯ ವಾರದಲ್ಲಿ ಗೃಹ ಸಚಿವ ಗೋವಿಂದ ವಲ್ಲಭ ಪಂತ್ ಅವರು ಸಂಸತ್ತಿಗೆ ನೀಡಿದ ಹೇಳಿಕೆಯಲ್ಲಿ ಈ ಸಮರದಲ್ಲಿ ಭಾರತ 370 ಮಂದಿ ನಾಗಾದಾಳಿಕೋರರನ್ನು ಹತ್ಯೆ ಮಾಡಿದೆಯೆಂದೂ ಭಾರತದ ಕಡೆ 68 ಸೈನಿಕರು ಹತ್ಯೆಯಾಗಿದ್ದಾರೆಂದೂ ತಿಳಿಸಿದರು. ಫಿಜೋ, ಪ್ರಜ್ಞಾವಂತ ನಾಯಕನಾದ, ದೇಶಭಕ್ತರ ನೇತಾರ ಸಖಾರೆ ಅವರನ್ನು ಕೊಲೆಗೈದನೆಂದೂ ಪಂತ್ ಆರೋಪಿಸಿದರು. ಫಿಜೋ ನಾಗಾಗಳನ್ನು ವಿನಾಶದಂಚಿಕೆ ಒಯ್ಯುತ್ತಿದ್ದಾನೆಂದೂ ಹೇಳಿದರು. ನಾಗಾಗಳ ಸ್ವಾತಂತ್ರ್ಯದ ಮಾತು ಕೇವಲ ಭ್ರಾಂತಿ ಎಂದು ನುಡಿದ ಪಂತ್ "ನಾಗಾಗಳಲ್ಲಿ ವಿವೇಕೋದಯವಾಗುತ್ತದೆ ಹಾಗೂ ನಾವೆಲ್ಲ ಭಾರತೀಯರು" ಎಂಬುದು ಅವರಿಗೆ ಮನವರಿಕೆಯಾಗಲಿದೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

ಭಾರತ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳು ನಾಗಾ ಗುಡ್ಡಗಾಡಿನಲ್ಲಿ ನಡೆದಿದ್ದ ಯುದ್ಧದ ಸುದ್ದಿಗಳನ್ನು ವರದಿ ಮಾಡುತ್ತಿರಲಿಲ್ಲ. ಆದರೆ ನಾಗಾ ಗುಡ್ಡಗಾಡು ಪ್ರದೇಶದ ವೈದ್ಯರೊಬ್ಬರು, ಅಲ್ಲಿನ ಬ್ರಿಟಿಷ್ ಜಿಲ್ಲಾಧಿಕಾರಿ, ಚಾರ್ಲ್ಸ್ ಪಾಸೆ ಅವರಿಗೆ ಬರೆದಿರುವ

ಪತ್ರಗಳಿಂದ ಅಲ್ಲಿನ ವಿದ್ಯಮಾನಗಳ ಬಗ್ಗೆ, ಸ್ಥಿತಿಗತಿಗಳ ಬಗ್ಗೆ ಕೆಲವೊಂದು ಅಂಶಗಳನ್ನು ಗ್ರಹಿಸಬಹುದಾಗಿದೆ. 1956ರ ಜೂನ್ ತಿಂಗಳಲ್ಲಿ ನಾಗಾ ಒಳನಾಡಿನಲ್ಲಿ ಪ್ರವಾಸ ಮಾಡಿ ಬರೆದ ಪತ್ರವೊಂದರ ಒಕ್ಕಣಿಕೆ ಹೀಗಿದೆ:

"ಪ್ರತಿರಾತ್ರಿ ಹಳ್ಳಿಗಳಲ್ಲಿ ಪಂಜುಗಳು ಉರಿಯುವುದು ನಮಗೆ ಕಾಣಿಸಿತು. ಈ ಪಂಜುಗಳನ್ನು ಹೊತ್ತಿಸಿದವರು ದಂಗೆಕೋರರೋ ಅಥವಾ ಸೇನೆಯವರೋ, ಯಾರಿಗೂ ತಿಳಿಯದು."

–ಇನ್ನು ದಂಗೆಕೋರರ ನಾಯಕನ ಬಗ್ಗೆ ಪತ್ರದಲ್ಲಿ ಹೀಗೆ ಬರೆದಿದ್ದಾರೆ:

"ಫಿಜೋ ಎಂದರೆ ಭಯಂಕರ. ಅವನ ಕೈಗೆ ಸಿಕ್ಕಿಬಿದ್ದ ನಾಗಾ ಸರ್ಕಾರಿ ನೌಕರನಿಗೆ ಅವನು ಭಯಂಕರ, ಇದಕ್ಕಿಂತ ಹೆಚ್ಚಾಗಿ ನಾಗಾ ನ್ಯಾಶನಲ್ ಕೌನ್ಸಿಲ್‌ನಲ್ಲಿ ಸಕ್ರಿಯನಾಗಿದ್ದು ನಂತರ ಅದರ ಜೊತೆ ಸಂಬಂಧ ಕಡಿದುಕೊಂಡ ನಾಗಾಗಳಿಗಂತೂ ಅತಿಭಯಂಕರ. ಇವರಲ್ಲಿ ಅನೇಕ ಮಂದಿ ಫಿಜೋನ ಅತಿ ತೀವ್ರಗಾಮಿತ್ವದಿಂದಾಗಿ ಅವನಿಂದ ದೂರ ಸರಿದವರು. ಅನೇಕ ಮುಖಂಡರು ನಾಪತ್ತೆಯಾಗಿದ್ದಾರೆ. ಅವರು ತಲೆಮರೆಸಿಕೊಂಡಿದ್ದಾರೋ ಅಥವಾ ಫಿಜೋ ಅವರನ್ನು ಮುಗಿಸಿದ್ದಾನೋ ಯಾರಿಗೂ ತಿಳಿಯದು. ನಾಗಾಗಳ ಪರಿಸ್ಥಿತಿ ಉಭಯ ಸಂಕಟದ್ದಾಗಿದೆ. ತುಂಬಾ ಕಷ್ಟ. ಸರ್ಕಾರದ ಜೊತೆ ಹೋದರೆ ಫಿಜೋ ಅವರನ್ನು ಮುಗಿಸಿಬಿಡುತ್ತಾನೆ; ಫಿಜೋ ಜೊತೆ ಹೋದರೆ ಸರ್ಕಾರ ಅವರನ್ನು ಮುಗಿಸಿಬಿಡುತ್ತದೆ."

–ಎರಡು ತಿಂಗಳ ನಂತರ, ನಾಗಾ ವೈದ್ಯ ಪಾಸೆ ಅವರಿಗೆ ಈ ರೀತಿ ಒಂದು ಪತ್ರ ಬರೆದಿದ್ದ:

"ನನಗೆ ಕಾಣುತ್ತಿರುವಂತೆ, ಶೇ. 0.5ರಷ್ಟು ನಾಗಾಗಳು ಫಿಜೋ ಜೊತೆಗಿದ್ದಾರೆ. ಶೇ.1ರಷ್ಟು ನಾಗಾಗಳು ಸೌಮ್ಯವಾದಿಗಳು, ಇವರಿಗೆ ಅಸ್ಸಾಮಿನಿಂದ ಬಿಡುಗಡೆ ಹೊಂದಿ ದೆಹಲಿಯೊಂದಿಗೆ ನಂಟು ಬೆಳೆಸುವ ಇಷ್ಟವಿದೆ. ಇನ್ನು ಶೇ. 98.5 ರಷ್ಟು ನಾಗಾಗಳಿಗೆ ತಮ್ಮನ್ನು ತಮ್ಮ ಪಾಡಿಗಿರಲು ಬಿಟ್ಟು ಬಿಡಲಿ ಎನ್ನುವ ಮನೋಭಾವವಿದೆ... ಸೈನ್ಯ ಯಾವ ರೀತಿ ವರ್ತಿಸಿತು, ಈಗ ಯಾವ ರೀತಿ ನಡೆದುಕೊಳ್ಳುತ್ತಿದೆ ಎಂಬುದನ್ನು ಗಮನಿಸಿದಾಗ, ನಾಗಾಗಳು ಮತ್ತು ಸರ್ಕಾರದ ನಡುವೆ ಸ್ವಯಂಪ್ರೇರಿತ ಸಹಕಾರದ ಆಸೆ ಇಲ್ಲವೇ ಇಲ್ಲ."

ಸೈನ್ಯದ ಕಾರ್ಯಾಚರಣೆ ರೀತಿಯಿಂದ ಖಂಡಿತವಾಗಿಯೂ ಭಾರತ-ನಾಗಾಗಳ ನಡುವಣ ಬಾಂಧವ್ಯಕ್ಕೆ ಧಕ್ಕೆಯಾಗಲಿದೆ, ಹಾಗೂ ಈ ದುಷ್ಪರಿಣಾಮ ಮುಂದಿನ 50-100 ವರ್ಷಗಳವರೆಗೂ ಇರುತ್ತದೆ ಎಂದು ಈತ ಅಭಿಪ್ರಾಯಪಟ್ಟಿದ್ದ.

1956ರ ಆಗಸ್ಟ್‌ನಲ್ಲಿ ಲೋಕಸಭೆಯಲ್ಲಿ ನಾಗಾ ಗುಡ್ಡಗಾಡು ಪ್ರದೇಶಗಳ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ಇತ್ತೀಚಿಗೆ ತಾವು ನಾಗಾ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದಾಗ ದಾರಿಯುದ್ದಕ್ಕೂ ದಂಗೆಕೋರರು ಹೇಗೆ ತಮ್ಮ ಮೇಲೆ ಆಕ್ರಮಣ ನಡೆಸಿದರೆಂಬುದನ್ನು ಮಣಿಪುರದ ಎ. ಮೈಟಿ ಸಭೆಗೆ ತಿಳಿಸಿದ್ದರು. ಮೈಟಿ ಅವರು ಅಲ್ಲಿನ ಜನರೊಡನೆ ಮಾತುಕತೆ ನಡೆಸಿದಾಗ ತಿಳಿದು ಬಂದದ್ದು ಇಷ್ಟು:

> "ಅವರನ್ನು ನಮ್ಮ ಜೀವನ ಶೈಲಿಗೆ ಸೆಳೆದುಕೊಳ್ಳುವುದು ಬಹಳ ಕಷ್ಟ. ವಿಶೇಷವಾಗಿ ಫಿಜೋ ಒಬ್ಬ ದುರ್ದಮ್ಯ."

–ನಾಗಾಗಳಿಗೆ ಪ್ರತ್ಯೇಕ ಸ್ವತಂತ್ರ ರಾಷ್ಟ್ರದ ಅಗತ್ಯವಿಲ್ಲ ಎನ್ನುವುದನ್ನು ಮೈಟಿಯವರೂ ಒಪ್ಪಿಕೊಂಡಿದ್ದರು. ಆದರೆ ತತ್‌ಕ್ಷಣ ನಾಗಾಗಳಿಗೆ ಭಾರತದ ಒಕ್ಕೂಟದೊಳಗೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ನೀಡಬೇಕೆಂಬುದು ಅವರ ಅನ್ನಿಸಿಕೆಯಾಗಿತ್ತು.

ಇವರ ನಂತರ ಮಾತನಾಡಿದವರು ಸಮಾಜವಾದಿ ರಿಷಾಂಗ್ ಕೈಶಿಂಗ್ ಅವರು. ಕೈಶಿಂಗ್ ಅವರು ಮಣಿಪುರದ ಥಾಂಗ್‌ಕುಲ್ ನಾಗಾ ಕುಲಕ್ಕೆ ಸೇರಿದವರಾಗಿದ್ದರು. ಸೈನ್ಯ ಬೆಂಕಿ ಹಚ್ಚಿ ಅಮಾಯಕರನ್ನು ಕೊಂದು ಹಾಕಿದ್ದನ್ನು ಅವರು ಕಟುವಾಗಿ ಟೀಕಿಸಿದರು. "ಸೈನಿಕರು ಮತ್ತು ಸೈನ್ಯದ ಸಿಬ್ಬಂದಿ ಸ್ಥಳೀಯ ನಾಗಾಗಳ ಭಾವನೆಗಳ ಬಗ್ಗೆ ತೀವ್ರವಾದ ಅಗೌರವ ತೋರಿದ್ದಾರೆ. ತಮ್ಮಿಂದ ಹತರಾದ ನಾಗಾಗಳ ಮೃತದೇಹಗಳ ನಗ್ನ ಮೆರವಣಿಗೆ ಮಾಡಿ ನಾಗಾಗಳನ್ನು ಭಯಭೀತರನ್ನಾಗಿಸುವ ಪ್ರಯತ್ನ ಮಾಡಿದ್ದಾರೆ" ಎಂದು ಕೈಶಿಂಗ್ ತೀವ್ರ ವಾಗ್ದಾಳಿ ನಡೆಸಿದರು.

1951 ಮತ್ತು 1952ರಲ್ಲಿ ಫಿಜೋ, ನೆಹರೂರನ್ನು ಭೇಟಿ ಮಾಡಿದಾಗ, ಉಭಯ ಪಕ್ಷಗಳೂ ಪರಸ್ಪರ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ನಂತರ ವಾತಾವರಣ ಮತ್ತಷ್ಟು ಕಲುಷಿತಗೊಂಡಿತು. ಸಹನೆ-ಶಾಂತಿಗಳು ಮುಗಿದು ಕೋಪತಾಪಗಳ ಮೇಲಾಟ ನಡೆಯಿತು ಎಂದು ತಿಳಿಸಿದ ಕೈಶಿಂಗ್, "ನೆಹರೂ ಅವರು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ತೋರುವ ಸಹನೆ, ಅಂತರ್‌ದೃಷ್ಟಿ ಮತ್ತು ರಾಜತಾಂತ್ರಿಕತೆಯನ್ನು ನಾಗಾಗಳ ವಿಷಯದಲ್ಲೂ ತೋರಬಹುದಿತ್ತು" ಎಂದು ತಮ್ಮ ಮನದಿಂಗಿತವನ್ನು ತೋಡಿಕೊಂಡರು. ಈಚಿನ ವರ್ಷಗಳಲ್ಲಿ ಎರಡೂ ಕಡೆ ಕ್ರೌರ್ಯ, ಹಿಂಸೆಗಳು ತಾಂಡವವಾಡಿವೆ. "ನಾವು ನಿಷ್ಕಳಂಕರು? ಎಂದು ಹೇಳಿಕೊಳ್ಳುವವರು ಯಾರಾದರೂ ಇದ್ದಾರೆಯೇ? ಮೊದಲು ಕಲ್ಲೆಸೆದ ನಾವು ಪಾಪಿಗಳಲ್ಲ ಎಂದು ಎದೆತಟ್ಟಿ ಹೇಳುವವರು ಯಾರಾದರೂ ಇದ್ದಾರೆಯೇ? ನಾನು ಉಗ್ರಗಾಮಿ ನಾಗಾಗಳು ಮತ್ತು ಸರ್ಕಾರ ಇವರಿಬ್ಬರಿಗೂ ಈ ಪ್ರಶ್ನೆ ಕೇಳುತ್ತಿದ್ದೇನೆ" ಎಂದು ಕೈಶಿಂಗ್ ಸವಾಲೊಡ್ಡಿದರು. ತತ್‌ಕ್ಷಣ, ಸಾರ್ವತ್ರಿಕ ಕ್ಷಮಾದಾನ ಘೋಷಿಸಿ, ಗಲಭೆಪೀಡಿತ ಪ್ರದೇಶಗಳಿಗೆ ಸಂಸತ್ತಿನ ಸರ್ವಪಕ್ಷ ನಿಯೋಗ ಕಳುಹಿಸಿ, ಸರ್ಕಾರ ಮತ್ತು ನಾಗಾ ನ್ಯಾಶನಲ್ ಕೌನ್ಸಿಲ್ ನಡುವೆ ಸಭೆ ಏರ್ಪಡಿಸಿ ಎಂದು ಅವರು ಮನವಿ ಮಾಡಿದರು. ಶಾಂತಿ ಒಪ್ಪಂದಕ್ಕೆ,

ಕದನ ವಿರಾಮಕ್ಕೆ ಒಪ್ಪಿಕೊಳ್ಳುವಂತೆ ಅವರು ಫಿಜೋಗೂ ಮನವಿ ಮಾಡಿದರು. "ಏಕೆಂದರೆ, ಕದನ ಕಾಳಗಗಳಿಂದ ಮುಗ್ಧ ಜನರು, ಅಮಾಯಕ ಪ್ರಜೆಗಳು ನಾಶವಾಗುತ್ತಾರೆ" ಎಂದು ಅವರು ಕಳಕಳಿಯಿಂದ ನುಡಿದಿದ್ದರು.

ಇದಕ್ಕೆ ಉತ್ತರ ನೀಡಿದ ಪ್ರಧಾನಮಂತ್ರಿಗಳು "ಡಾ. ಹರಾಳು ಸೇರಿದಂತೆ ಹಲವರ ಹತ್ಯೆಯಾಗಿರುವುದು ನಿಜ. ಹರಾಳು ಅವರ ಹತ್ಯೆಯಿಂದ ನಮಗೆ ತೀವ್ರವಾದ ವ್ಯಥೆಯಾಗಿದೆ. ಆದರೆ ಬೆಂಕಿ ಹಚ್ಚಿದ ಪ್ರಕರಣಗಳು ಹೆಚ್ಚಾಗಿ ನಡೆದಿರುವುದು ನಾಗಾ ದಾಳಿಕೋರರಿಂದ" ಎಂದು ನುಡಿದರು. "ಸರ್ಕಾರ ನಾಗಾಗಳಿಂದ ಸಹಕಾರವನ್ನು ಬಯಸುತ್ತಿದೆ. ತಮ್ಮ ಭೂಮಿ ಮತ್ತು ಇತರ ಸಂಪನ್ಮೂಲ ನಿರ್ವಹಣೆಯಲ್ಲಿ ಗುಡ್ಡಗಾಡಿನ ಜನರಿಗೆ ಸ್ವಾಯತ್ತತೆ ನೀಡುವ ಆರನೆ ಪರಿಶಿಷ್ಟವನ್ನು ಸುಧಾರಿಸಲು ಯಾವುದೇ ರೀತಿಯ ಸಲಹೆಯನ್ನೂ ಪರಿಶೀಲಿಸಲು ಸರ್ಕಾರ ಸಿದ್ಧವಿದೆ ಎಂದು ನಾನೇ ಫಿಜೋ ಅವರಿಗೆ ತಿಳಿಸಿದ್ದೇನೆ" ಎಂದು ನೆಹರೂ ತಿಳಿಸಿದರು. "ಆದರೆ ನಾಗಾ ಗುಡ್ಡಗಾಡು ಪ್ರದೇಶಕ್ಕೆ ಸಂಸದೀಯ ನಿಯೋಗ ಕಳುಹಿಸಲು ಕಾಲ ಇನ್ನೂ ಪಕ್ವವಾಗಿಲ್ಲ" ಎಂದು ಹೇಳಿದರು. "ನಾಗಾಗಳಿಗೆ ಸ್ವಾತಂತ್ರ್ಯ ಕೊಡಿ ಎಂದು ನನ್ನನ್ನು ಕೇಳುವುದರಲ್ಲಿ ಒಳ್ಳೆಯದೇನೂ ಇಲ್ಲ. ಚೀನ-ಬರ್ಮಾ-ಭಾರತಗಳ ನಡುವಣ ಒಂದು ಸಣ್ಣ ಮೂಲೆಯನ್ನು ಸ್ವತಂತ್ರರಾಷ್ಟ್ರ ಎಂದು ಕರೆಯುವುದೇ ಒಂದು ಅತಿರೇಕ, ಒಂದು ವಿಲಕ್ಷಣ" ಎಂದು ನೆಹರೂ ಒತ್ತಿ ಹೇಳಿದರು.

1956ರ ಡಿಸೆಂಬರಿನಲ್ಲಿ ಲಂಡನ್ನಿನಲ್ಲಿರುವ ಭಾರತದ ಹೈಕಮಿಷನ್ ಹೊರಡಿಸಿದ ಪ್ರಕಟಣೆಯೊಂದರಲ್ಲಿ ನಾಗಾ ಗುಡ್ಡಗಾಡು ಪ್ರದೇಶಗಳಲ್ಲಿನ ಕಾರ್ಯಾಚರಣೆ ಯಶಸ್ವಿಯಾಗಿದೆ ಯೆಂದು ವರದಿ ಮಾಡಲಾಯಿತು. ಮಿಲಿಟರಿ ದಂಗೆಕೋರರ ಪ್ರತಿಭಟನೆಯ ಬೆನ್ನು ಮೂಳೆಯನ್ನು ಮುರಿದಿದ್ದು ಈಗ ನೊಂದವರ ಕಣ್ಣೀರು ಒರೆಸುವ ಪರಿಹಾರ ಕಾರ್ಯ ಅಲ್ಲಿ ಆರಂಭವಾಗಿದೆಯೆಂದು ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಮಾಧ್ಯಮಗಳು ಈ ಸುದ್ದಿಯನ್ನು ಸಂಪೂರ್ಣವಾಗಿ ನಂಬಿದವು. ಕೆಲವು ವಾರಗಳ ನಂತರ "ಮ್ಯಾಂಚೆಸ್ಟರ್ ಗಾರ್ಡಿಯನ್" "ನಾಗಾ ಬಂಡಾಯ ವಸ್ತುತಃ ಮುಕ್ತಾಯ" ಎಂಬ ಶೀರ್ಷಿಕೆಯಲ್ಲಿ ವರದಿಯೊಂದನ್ನು ಪ್ರಕಟಿಸಿತು. "ದಿನೇ ದಿನೇ ಹೆಚ್ಚುತ್ತಿರುವ ನಾಗಾ ಸೌಮ್ಯವಾದಿಗಳೊಂದಿಗೆ ಒಪ್ಪಂದಕ್ಕೆ ಬರಲು ಭಾರತ ಸರ್ಕಾರ ಕ್ರಮಗಳನ್ನು ಕೈಗೊಳ್ಳುತ್ತಿದೆ" ಎಂದು ಈ ಪತ್ರಿಕೆಯ ವರದಿ ತಿಳಿಸಿತ್ತು. ಆದರೆ ಈ ನವ ಅರುಣೋದಯವನ್ನು ದೃಢೀಕರಿಸುವ ಸಾಕ್ಷಿ ಪುರಾವೆಗಳೇನೂ ಕಂಡುಬಂದಿರಲಿಲ್ಲ.

V

1950ರ ಜಾರ್ಖಂಡ್ ಚಳವಳಿ ಭಾರತದೊಳಗೇ ಆದಿವಾಸಿಗಳಿಗಾಗಿ ಆದಿವಾಸಿಗಳೇ ಆಡಳಿತ ನಡೆಸುವ ಪ್ರತ್ಯೇಕ ಪ್ರಾಂತ್ಯವೊಂದನ್ನು ರಚಿಸಬೇಕೆಂಬುದು ತನ್ನ ಬೇಡಿಕೆಯೆಂದು ಪ್ರಚುರಪಡಿಸಿತ್ತು. 1955ರ ಜನವರಿಯಲ್ಲಿ ರಾಜ್ಯ ಪುನರ್ವಿಂಗಡಣಾ ಆಯೋಗ ಈ

ಪ್ರದೇಶಕ್ಕೆ ಭೇಟಿಯಿತ್ತಾಗ, ಆಯೋಗಕ್ಕೆ ಹೋದಲ್ಲೆಲ್ಲ ಎದುರಾದದ್ದು "ಜಾರ್ಖಂಡ್ ಅಲಗ್ ಪ್ರಾಂತ್-ಜಾರ್ಖಂಡ್ ಪ್ರತ್ಯೇಕ ರಾಜ್ಯವಾಗಬೇಕು" ಎನ್ನುವ ಘೋಷಣೆಗಳು. ಮೆರವಣಿಗೆಕಾರರು ಈ ಘೋಷಣೆಯಿಂದಲೇ ಆಯೋಗವನ್ನು ಸ್ವಾಗತಿಸಿದ್ದರು. ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದವರೊಬ್ಬರು ಹೇಳಿರುವಂತೆ ಪ್ರತಿಯೊಬ್ಬ ಆದಿವಾಸಿಯ ಮುಖದ ಮೇಲೆ ಜಾರ್ಖಂಡ್ ರಾಜ್ಯ ರಚನೆಯ ಬೇಡಿಕೆ ಅಚ್ಚೊತ್ತಿದಂತಿತ್ತು.

ಅತ್ತ ಮಣಿಪುರದಲ್ಲಿ ಹಿಂದಿನ ರಾಜತ್ವದ ಈ ಪ್ರದೇಶವನ್ನು ಭಾರತ ಒಕ್ಕೂಟದೊಳಗೆ ಪೂರ್ಣಪ್ರಮಾಣದ ರಾಜ್ಯವಾಗಿ ಘೋಷಿಸಬೇಕೆಂದು ಒತ್ತಾಯಿಸುವ ಚಳವಳಿ ಶುರುವಾಗಿತ್ತು. 1949ರಷ್ಟು ಹಿಂದೆಯೇ ಮಣಿಪುರದ ಮಹಾರಾಜರನ್ನು, ವಯಸ್ಕ ಮತದಾನದಿಂದ ಚುನಾಯಿತವಾದ ಶಾಸನಸಭೆ ರಚಿಸಲು ಒತ್ತಾಯಿಸುವ ಜನತಾ ಆಂದೋಲನವೊಂದು ನಡೆದಿತ್ತು. ಹೀಗೆ ಅಸ್ತಿತ್ವಕ್ಕೆ ಬಂದ ಶಾಸನಸಭೆ ಮಣಿಪುರ ಭಾರತ ಒಕ್ಕೂಟದೊಂದಿಗೆ ಸೇರ್ಪಡೆಯಾದಾಗ ವಿಸರ್ಜನೆಗೊಂಡಿತ್ತು. ಮಣಿಪುರದ ಪ್ರದೇಶವನ್ನು ಈಗ 'ಪಾರ್ಟ್-ಸಿ ಸ್ಟೇಟ್' ಎಂದು ಗುರುತಿಸಲಾಗಿತ್ತು. ಇದರ ಅರ್ಥ, ಚುನಾಯಿತ ಆಡಳಿತ ಇರುವುದಿಲ್ಲ, ನೇರವಾಗಿ ನವದೆಹಲಿಗೆ ಉತ್ತರದಾಯಿಯಾಗಿರುವ ಚೀಫ್ ಕಮಿಷನರ್ ಒಬ್ಬರು ಮಣಿಪುರದ ಆಡಳಿತ ನೋಡಿಕೊಳ್ಳುವರು ಎಂದು.

ಮಣಿಪುರದ ವಿಸ್ತೀರ್ಣ 8600 ಚದರ ಮೈಲಿಗಳಷ್ಟಿತ್ತು. ಅಲ್ಲಿ 700 ಚದರ ಮೈಲಿಯ ಕಣಿವೆ ಪ್ರದೇಶವೊಂದಿದ್ದು ಈ ಪ್ರದೇಶದಲ್ಲಿ 380000 ಮಂದಿ ನಿವಾಸಿಗಳಿದ್ದರು. ಇವರು ಮೈಟಿ ಕುಲಕ್ಕೆ ಸೇರಿದವರಾಗಿದ್ದು ಹಿಂದೂ ಧರ್ಮದ ವೈಷ್ಣವ ಸಂಪ್ರದಾಯಕ್ಕೆ ನಿಷ್ಠಾವಂತರಾಗಿದ್ದರು. ಮಣಿಪುರದ ಬಹುತೇಕ ಗುಡ್ಡಗಾಡು ಪ್ರದೇಶದಲ್ಲಿ ನಾಗಾ ಮತ್ತು ಕುಕಿ ಬುಡಕಟ್ಟಿನ ಜನರು ವಾಸಿಸುತ್ತಿದ್ದರು. ಇವರ ಸಂಖ್ಯೆ 180,000. ಈ ಮೊದಲು ಪ್ರಸ್ತಾಪಿಸಲಾಗಿರುವ ರಿಶಾಂಗ್ ಕೈಶಿಂಗ್ ಇಲ್ಲಿನ ಬುಡಕಟ್ಟಿಗೆ ಸೇರಿದವರಾಗಿದ್ದು 1954ರಲ್ಲಿ ಮಣಿಪುರಕ್ಕೆ ಜನತಾ ಪ್ರಾತಿನಿಧ್ಯದ ಸರ್ಕಾರಕ್ಕೆ ಬೇಕೆಂದು ಚಳವಳಿ ಶುರುಮಾಡಿದ್ದರು. ಕೈಶಿಂಗ್ ಮತ್ತು ಸಹಚರರಾದ ಸಮಾಜವಾದಿಗಳು ಪ್ರತಿದಿನ ಇಂಫಾಲ್‌ನಲ್ಲಿನ ಚೀಫ್ ಕಮಿಷನರ್ ಕಚೇರಿ ಎದುರು ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾಗುತ್ತಿದ್ದರು. ಸತ್ಯಾಗ್ರಹಗಳಲ್ಲಿ ಮಹಿಳೆಯರೂ ಇದ್ದರು. ಆದರೆ ಸರ್ಕಾರ ಈ ಚಳವಳಿಗೆ ಮಣಿದಿರಲಿಲ್ಲ. ಮಣಿಪುರ, ತ್ರಿಪುರಾಗಳಂಥ "ಪಾರ್ಟ್-ಸಿ" ರಾಜ್ಯಗಳಲ್ಲಿ ಶಾಸನ ಸಭೆಗಳನ್ನು ಅಸ್ತಿತ್ವಕ್ಕೆ ತರಲು ಕಾಲ ಇನ್ನೂ ಪಕ್ವವಾಗಿಲ್ಲವೆಂದು ಗೃಹಸಚಿವರು ಸಂಸತ್ತಿನಲ್ಲಿ ಹೇಳಿಕೆ ನೀಡಿದ್ದರು. "ಈ ರಾಜ್ಯಗಳು ಭಾರತದ ಗಡಿಗಳಲ್ಲಿ ಆಯಕಟ್ಟಿನ ಸ್ಥಳಗಳಲ್ಲಿವೆ. ಇಲ್ಲಿನ ಜನ ರಾಜಕೀಯವಾಗಿ ಹಿಂದುಳಿದವರಾಗಿದ್ದು ರಾಜ್ಯದಲ್ಲಿನ ಆಡಳಿತ ಯಂತ್ರ ಇನ್ನೂ ದುರ್ಬಲವಾಗಿದೆ" ಎಂಬುದು ಗೃಹಸಚಿವರ ಅಂಬೋಣವಾಗಿತ್ತು.

ಜಾರ್ಖಂಡ್ ಮತ್ತು ಮಣಿಪುರಗಳಲ್ಲಿ ನಡೆದ ಹೋರಾಟ-ಚಳವಳಿಗಳನ್ನು ಮತ್ತು ಇವಕ್ಕೆ ಮಣಿಯದಿರುವ ಸರ್ಕಾರದ ನಿಲುವನ್ನು ನಾಗಾ ನ್ಯಾಶನಲ್ ಕೌನ್ಸಿಲ್ ಗಮನಕ್ಕೆ ತೆಗೆದುಕೊಂಡಿತ್ತೋ ಇಲ್ಲವೋ ತಿಳಿಯದು. ಏನೇ ಇರಲಿ, ಫಿಜೋ ಮತ್ತು ಅವನ ಸಹಚರರು

ಇನ್ನೂ ಹೆಚ್ಚಿನ ಮಹತ್ವಾಕಾಂಕ್ಷೆಯ ಗುರಿ ಹಮ್ಮಿಕೊಂಡಿದ್ದರು. ಅವರಿಗೆ ಭಾರತದೊಳಗೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ಬೇಕಿರಲಿಲ್ಲ. ಭಾರತದಾಚೆಗಿನ ಸ್ವತಂತ್ರ ರಾಷ್ಟ್ರ ಅವರ ಬೇಡಿಕೆಯಾಗಿತ್ತು. ಈ ಬೇಡಿಕೆ 'ಅಸಂಬದ್ಧ'ವಾಗಿದ್ದಿರಬಹುದು, ಆದಾಗ್ಯೂ ಇದು, ತಮ್ಮ ಗ್ರಾಮಗಳನ್ನು ತೊರೆದು ಗೆರಿಲ್ಲಾ ಚಳವಳಿಗೆ ಸೇರಿಕೊಳ್ಳಲು ಅಸಂಖ್ಯಾತ ನಾಗಾಗಳಿಗೆ ಸ್ಫೂರ್ತಿ ನೀಡಿತ್ತು, ಪ್ರೇರಣೆ ನೀಡಿತ್ತು.

1950ರ ಮಧ್ಯಭಾಗದ ವೇಳೆಗೆ ನಾಗಾ ಜಿಲ್ಲೆಯಲ್ಲಿ 200,000 ನಾಗಾಗಳಿದ್ದರು. ನೇಫಾ ಜಿಲ್ಲೆಯಲ್ಲೂ ಇಷ್ಟೇ ಸಂಖ್ಯೆಯ ನಾಗಾಗಳಿದ್ದರು. ಮಣಿಪುರದಲ್ಲಿ 80000 ನಾಗಾಗಳಿದ್ದರು. ಎಲ್ಲ ಸೇರಿ ನಾಗಾಗಳ ಜನಸಂಖ್ಯೆ ಐದುಲಕ್ಷ. ಇವರಲ್ಲಿ ಹತ್ತುಸಾವಿರ ಮಂದಿ ಪೂರ್ಣ ಪ್ರಮಾಣದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಸಂಖ್ಯೆಯ ಬಲ ಕಡಿಮೆ ಇದ್ದರೂ ಸಂಕಲ್ಪ ಬಲ ಭೀಮಕಾಯದ್ದಾಗಿತ್ತು. ದಂಗೆಕೋರರ ಒಂದು ಸಣ್ಣ ಸಮುದಾಯ, ದಂಗೆಯನ್ನು ಹತ್ತಿಕ್ಕಲು ಸೈನ್ಯವನ್ನು ಕಳುಹಿಸಲೇಬೇಕಾದಂಥ ಅನಿವಾರ್ಯ ಸ್ಥಿತಿಗೆ ಭಾರತವನ್ನು ದೂಡಿತ್ತು.

ಈಶಾನ್ಯ ಪ್ರದೇಶ ಹೊರತಾಗಿ ಕೆಲವು ಮಂದಿ ಭಾರತೀಯರಿಗೆ ಮಾತ್ರ ನಾಗಾಗಳ ಘರ್ಷಣೆಯ ವಿಚಾರ ತಿಳಿದಿತ್ತು. ವಿದೇಶೀಯರಿಗಂತೂ ವಸ್ತುತಃ ಏನೇನೂ ತಿಳಿದಿರಲಿಲ್ಲ. ಆದಾಗ್ಯೂ ಈ ಘರ್ಷಣೆ ಭಾರತದ ಒಗ್ಗಟ್ಟಿಗೆ ಬಾಧಕವಾಗಿತ್ತು. ದೇಶದ ಏಕತೆಯ ಮೇಲೆ ತೀವ್ರ ಪರಿಣಾಮಗಳನ್ನುಂಟು ಮಾಡಲಿತ್ತು. ಪ್ರಜಾಸತ್ತೆಯ ಉಳಿವು ಮತ್ತು ಸರ್ಕಾರದ ನ್ಯಾಯಯುತ ಔಚಿತ್ಯಗಳ ಮೇಲೆ ಇದರ ಪರಿಣಾಮವಾಗಲಿತ್ತು. ರಾಷ್ಟ್ರದ ಬೇರೆ ಯಾವ ಪ್ರದೇಶಕ್ಕೂ, ಕಾಶ್ಮೀರಕ್ಕೂ, ದಂಗೆಯನ್ನು ಅಡಗಿಸಲು, ಭಾರತೀಯ ಪ್ರಜೆಗಳ ದಂಗೆಯನ್ನು ಅಡಗಿಸಲು ಸೇನೆ ಕಳುಹಿಸಿದ ದೃಷ್ಟಾಂತಗಳಿಲ್ಲ.

ಸ್ವಾತಂತ್ರ್ಯದ ಮೊದಲ ದಶಕದಲ್ಲಿ ಸರ್ಕಾರ ಹೇರಳ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಮುಖ್ಯವಾದದ್ದು ವಿರೋಧ ಪಕ್ಷಗಳು ಸಂಘಟಿಸಿದ ವರ್ಗ, ಭಾಷೆ, ಧರ್ಮಾಧರಿತ ಚಳವಳಿಗಳು. ಈ ಚಳವಳಿಗಳನ್ನು ಚರ್ಚೆ ಮೂಲಕ, ಕಾರ್ಯ ಕಾರಣಗಳ ಮೂಲಕ ಸರ್ಕಾರ ನಿಭಾಯಿಸಿತು. ಕೆಲವೇ ಕೆಲವು ವಿರಳವಾದ ಪ್ರಕರಣಗಳಲ್ಲಿ ಪೊಲೀಸ್ ಪಡೆಯನ್ನು ಬಳಸಲಾಯಿತು. ಆದರೆ ನಾಗಾ ಗುಡ್ಡಗಾಡಿನ ಚಳವಳಿ ಇಂಥ ಪರಿಹಾರವನ್ನು ಒಪ್ಪಿಕೊಳ್ಳಲು ಸಿದ್ಧವಾಗಿರಲಿಲ್ಲ. ನಾಗಾ ನ್ಯಾಶನಲ್ ಕೌನ್ಸಿಲ್ ಬೇಡಿಕೆ ಹಾಗೂ ಭಾರತ ಸರ್ಕಾರ ಅವರಿಗೆ ನೀಡಬಯಸಿದ್ದ ಪರಿಹಾರ ಇವುಗಳ ನಡುವೆ ಮೂಲಭೂತವಾಗಿ ಅಪ್ರಮೇಯ ಎನ್ನಬಹುದಾದ, ಹೋಲಿಸಲಾಗದಂಥ ಲಕ್ಷಣದ ಕಂದರವಿತ್ತು. ಈ ಒಂದು ತರ್ಕದಿಂದಾಗಿ ಒಂದು ಪಕ್ಷ ಇನ್ನೊಂದರ ಮೇಲೆ ಮಿಲಿಟರಿ ಶಕ್ತಿಯನ್ನು ಬಳಸಬೇಕಾಯಿತು.

ನಾಗಾ ಪರಿಸ್ಥಿತಿಯ ಅನನ್ಯತೆಯನ್ನು ಜವಹರಲಾಲ್ ನೆಹರೂ ಅರ್ಥ ಮಾಡಿಕೊಂಡಿದ್ದರು. 1955ರ ಮಾರ್ಚಿಯಲ್ಲಿ ಸಂಪುಟದ ಸಹೋದ್ಯೋಗಿಗಳಿಗೆ ಬರೆದ ಪತ್ರದಲ್ಲಿ "ಈಶಾನ್ಯದ ಗುಡ್ಡಗಾಡು ಪ್ರದೇಶದಲ್ಲಿ ನಾವು ಕಷ್ಟಕರವಾದ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಈ

ಪ್ರದೇಶದ ಜನರ ಮನ ಗೆಲ್ಲುವುದರಲ್ಲಿ ನಾವು ಯಶಸ್ವಿಯಾಗಿಲ್ಲ. ವಾಸ್ತವವಾಗಿ ಅವರು ನಮ್ಮಿಂದ ದೂರ ಸರಿಯುತ್ತಿದ್ದಾರೆ. ಕಳೆದ ಮೂರೂವರೆ ವರ್ಷಗಳಿಂದ ನಾಗಾ ಗುಡ್ಡಗಾಡು ಜಿಲ್ಲೆಯಲ್ಲಿ ಜನ ಸರ್ಕಾರದೊಂದಿಗೆ ಸಹಕರಿಸುತ್ತಿಲ್ಲ. ತುಂಬ ಶಿಸ್ತಿನಿಂದ ಕೂಡಿದ ಈ ಅಸಹಕಾರದಲ್ಲಿ ಯಶಸ್ಸನ್ನು ಸಾಧಿಸಿದ್ದಾರೆ" ಎಂದು ಎಚ್ಚರಿಸಿದ್ದರು.

ಒಂದು ವರ್ಷದ ನಂತರ ನೆಹರೂ ಅಸ್ಸಾಂ ಮುಖ್ಯಮಂತ್ರಿಗೆ ಪತ್ರ ಬರೆದು, "ದಂಗೆಕೋರರು ಶಸ್ತ್ರಾಸ್ತ್ರಗಳನ್ನು ಹೊಂದಿದ್ದು ಅದನ್ನು ಬಳಸುವ ಇರಾದೆ ಉಳ್ಳವರಾಗಿದ್ದಾರೆ. ಆದ್ದರಿಂದ ಸೇನೆಯನ್ನು ಕಳುಹಿಸಲಾಗುವುದು" ಎಂದು ತಿಳಿಸಿದ್ದರು. "ಈ ಮಿಲಿಟರಿ ಕ್ರಮಕ್ಕಿಂತ ಮಿಗಿಲಾದದ್ದು ಇನ್ನೂ ಇದೆ. ಸಶಸ್ತ್ರ ದಂಗೆಯನ್ನು ಶಸ್ತ್ರ ಬಲದಿಂದಲೇ ಎದುರಿಸಬೇಕು ಎನ್ನುವುದು ಸಂದೇಹಾತೀತ. ಬಲಪ್ರಯೋಗ, ಶಕ್ತಿಯ ಬಳಕೆಯೊಂದೇ ಸಮಸ್ಯೆಗೆ ಪರಿಹಾರವಲ್ಲ ಎಂಬುದು ಹಿಂದಿನಿಂದಲೂ ನಮ್ಮ ನಿಲುವಾಗಿದೆ. ಈಗಲೂ ನಮ್ಮ ನಿಲುವು ಅದೇ. ವಿಶ್ವದ ಅನೇಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಾವು ನಮ್ಮ ಈ ನಿಲುವನ್ನು ಪದೇ ಪದೇ ಹೇಳಿದ್ದೇವೆ. ನಮ್ಮ ದೇಶದ ಜನರೊಂದಿಗೆ ವ್ಯವಹರಿಸಬೇಕಾದಾಗ, ಅಡಗಿಸುವ ಬದಲು ಅವರ ಮನಸ್ಸನ್ನು ಗೆಲ್ಲಬೇಕಾದಾಗ, ಇದನ್ನು ನಾವು ಹೆಚ್ಚು ಹೆಚ್ಚು ನೆನಪಿನಲ್ಲಿಡಬೇಕಾಗುತ್ತದೆ."

ಪ್ರಪಂಚದ ಕಣ್ಣಿಗೆ ಅಷ್ಟಾಗಿ ಗೋಚರಿಸದೇ ಹೋದ, ಬಹುತೇಕ ಭಾರತೀಯರ ಅರಿವಿಗೆ ಬಾರದೇ ಹೋದ ನಾಗಾ ದಂಗೆ ಭಾರತ ಸರ್ಕಾರಕ್ಕೆ ಭಾರಿ ತಲೆನೋವಾಗಿತ್ತು. ಇದೊಂದನ್ನು ಹೊರತುಪಡಿಸಿ ನೆಹರೂ ಆಳ್ವಿಕೆ ಸುಭದ್ರವೂ ಸುಸ್ಥಿರವೂ ಆಗಿದ್ದಿತು. ನೆಹರೂ ಸರ್ಕಾರ ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸರ್ಕಾರವಾಗಿತ್ತು. ಅದಕ್ಕೆ ನಿರಾತಂಕ ಬಹುಮತವಿತ್ತು. ಅದರ ಆಂತರಿಕ ನೀತಿ ಹಾಗೂ ವಿದೇಶಾಂಗ ನೀತಿಗಳ ಪರವಾಗಿ ರಾಷ್ಟ್ರಾದ್ಯಂತ ಒಟ್ಟು ಅಭಿಪ್ರಾಯವಿತ್ತು. ಇವು ರಾಷ್ಟ್ರವ್ಯಾಪಿಯಾಗಿ ಅಂಗೀಕೃತವಾಗಿದ್ದವು. ಆದರೆ ಕ್ಷಿಪ್ರದಲ್ಲೇ ಬೇರೆ ಸವಾಲುಗಳು ಕಾಣಿಸಿಕೊಂಡವು. ಈ ಸವಾಲುಗಳು ತಲೆ ಎತ್ತಿದ್ದು ಹೊರವಲಯದಲ್ಲಲ್ಲ. ಭಾರತದ ಘನ ಅಂಗವೆಂದು ಪರಿಗಣಿಸಲಾದ ಪ್ರದೇಶಗಳಲ್ಲಿ ಸಮಸ್ಯೆ-ಸವಾಲುಗಳು ಉದ್ಭವಿಸಲಾರಂಭಿಸಿದ್ದವು.

○

ಭಾಗ 3

ಕೇಂದ್ರದಲ್ಲಿ ಕಂಪನ

14

ದಕ್ಷಿಣದ ಸವಾಲು

ಜವಹರಲಾಲ್ ನೆಹರೂ ಅವರ ಶಕ್ತಿಯ ಮೂಲ ಜನಸಾಮಾನ್ಯರು. ಅವರಿಗೆ ಜನಸ್ತೋಮವೆಂದರೆ ಬಲುಪ್ರಿಯ. ಈ ವೈಯಕ್ತಿಕ ಜನಪ್ರಿಯತೆಯೇ ಅವರಲ್ಲಿ, ಜನ ತಮ್ಮ ಆಡಳಿತದ ಬಗ್ಗೆ ತೃಪ್ತರಾಗಿದ್ದಾರೆ ಎಂಬ ಭಾವನೆಯನ್ನು ಮೂಡಿಸಿದೆ. ಆದರೆ, ಈ ತೀರ್ಮಾನ ಯಾವಾಗಲೂ ಸಮರ್ಥನೀಯವಲ್ಲ.

–ನರೇಂದ್ರದೇವ, ಸಮಾಜವಾದಿ, 1949.

ವರ್ಷಗಳು ಉರುಳಿದಂತೆ, ನೆಹರೂ ಅವರ ಕೀರ್ತಿ, ಪ್ರತಿಷ್ಠೆಗಳಿಗೆ ಆಧಾರವಾಗಿದ್ದ ಅಸ್ತಿವಾರ ಅವರ ಭಾರಕ್ಕೇ ಕುಸಿಯತೊಡಗಿತು. ಒಂದು ಕಾಲದಲ್ಲಿ ಪ್ರತಿಸಮಸ್ಯೆಗೂ ಅವರಲ್ಲಿ ಪರಿಹಾರವಿತ್ತು; ಆದರೆ ಇಂದು, ಪ್ರತಿ ಪರಿಹಾರದಲ್ಲೂ ಅವರಿಗೆ ಕಷ್ಟ ಎದುರಾಗುತ್ತಿದೆ.

–ಆರ್.ಕೆ. ಲಕ್ಷ್ಮಣ್, ವ್ಯಂಗ್ಯ ಚಿತ್ರಕಾರ, 1959.

I

1757 ಮತ್ತು 1857 ಭಾರತದ ಇತಿಹಾಸಕ್ಕೆ ಸ್ಮರಣೀಯ ವರ್ಷಗಳು. ಶುರುವಿಗೆ, ಈಸ್ಟ್ ಇಂಡಿಯಾ ಕಂಪೆನಿ, ಪ್ಲಾಸಿ ಕದನದಲ್ಲಿ ಬಂಗಾಳದ ಆಳರಸರನ್ನು ಪರಾಜಯಗೊಳಿಸಿತು. ಹೀಗೆ ಉಪಖಂಡಕ್ಕೆ ಬ್ರಿಟಿಷರಿಗೆ ಇದುವೇ ಸೇತುವಾಯಿತು. ಎರಡನೆಯ ಘಟ್ಟದಲ್ಲಿ ಬ್ರಿಟಿಷರು 'ಸಿಪಾಯಿದಂಗೆ' ಎಂದೇ ಪ್ರಖ್ಯಾತವಾದ ಜನತಾ ಬಂಡಾಯವನ್ನು ಎದುರಿಸಬೇಕಾಯಿತು. ಈ ಸಿಪಾಯಿ ದಂಗೆ, ಉಳಿದ ಜಗತ್ತಿನ ದೃಷ್ಟಿಯಲ್ಲಿ: "ಭಾರತದ ಸ್ವಾತಂತ್ರ್ಯ ಹೋರಾಟದ ನಾಂದಿ".

1757 ಮತ್ತು 1857ರಂತೆ, 1957 ಸಹ ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ವರ್ಷ. ಏಕೆಂದರೆ ಭಾರತದಲ್ಲಿ ಎರಡನೆಯ ಸಾರ್ವತ್ರಿಕ ಚುನಾವಣೆ ನಡೆದದ್ದು ಈ ವರ್ಷದಲ್ಲೇ. ಎರಡನೆಯ ಮಹಾ ಯುದ್ಧದ ನಂತರ ಡಜನ್‌ಗಟ್ಟಳೆ ಆಫ್ರಿಕಾ ಮತ್ತು ಏಷ್ಯಾ ರಾಷ್ಟ್ರಗಳು ಐರೋಪ್ಯ ವಸಾಹತು ರಾಷ್ಟ್ರಗಳಿಂದ ಸ್ವಾತಂತ್ರ್ಯ ಪಡೆದವು. ಸ್ವಾತಂತ್ರ್ಯ ಪಡೆದ ಕೂಡಲೇ ಅಥವಾ ಸ್ವಲ್ಪಕಾಲಾನಂತರ ಇವುಗಳಲ್ಲಿ ಅನೇಕ ರಾಷ್ಟ್ರಗಳು ಕಮ್ಯುನಿಸ್ಟರ ಇಲ್ಲವೇ ಮಿಲಿಟರಿಯ ಅಥವಾ ಸರ್ವಾಧಿಕಾರಿಗಳ ಆಡಳಿತದ ನಿರಂಕುಶ ಪ್ರಭುತ್ವಕ್ಕೊಳಪಟ್ಟವು. ಇದಕ್ಕೆ ಹೊರತಾಗಿ ಉಳಿದ ಕೆಲವೇ ಅಪವಾದಗಳಲ್ಲಿ ಭಾರತವೂ ಒಂದು. ಮುಖ್ಯವಾಗಿ ವಿಸ್ತೀರ್ಣ ಹಾಗೂ ಸಾಮಾಜಿಕ ಸಂಕೀರ್ಣತೆಯ ಕಾರಣಗಳಿಂದಾಗಿ ಭಾರತ ನಿರಂಕುಶ ಪ್ರಭುತ್ವಕ್ಕೆ ಅಪವಾದವಾಗಿ ಉಳಿಯಿತು. ಇದೊಂದು ಅದ್ಭುತವೇ ಸರಿ. 1952ಕ್ಕೆ ಮುಂಚೆ, ಹಾಗೂ 1952ರ ಮಹಾ ಚುನಾವಣೆಯ ನಂತರ ಹಲವಾರು ರಾಜ್ಯಗಳಲ್ಲಿ ವಿಧಾನಸಭೆಗೆ ಚುನಾವಣೆಗಳು ನಡೆದವು. ಈ ಚುನಾವಣೆಗಳಲ್ಲೆಲ್ಲ ಮತದಾರರ ತೀರ್ಪನ್ನು ಮಾನ್ಯ ಮಾಡಲಾಯಿತು. ಆದಾಗ್ಯೂ, ಪ್ರಜಾಸತ್ತಾತ್ಮಕ ರಾಷ್ಟ್ರಗಳ ಕೂಟ ಸೇರಲು ಭಾರತ ಎರಡನೆಯ ಸಾರ್ವತ್ರಿಕ ಚುನಾವಣಾ ವಿಜಯದ ಅರ್ಹತೆ ಗಳಿಸಬೇಕಾಗಿತ್ತು. 1957ರ ವಸಂತ ಋತುವಿನಲ್ಲಿ, ಮೂರು ವಾರಗಳ ಕಾಲಾವಧಿಯಲ್ಲಿ ಎರಡನೆಯ ಸಾರ್ವತ್ರಿಕ ಚುನಾವಣೆ ನಡೆಸಲಾಯಿತು.

ಸುಕುಮಾರ ಸೇನ್ ಅವರೇ ಮುಖ್ಯ ಚುನಾವಣಾ ಆಯುಕ್ತರಾಗಿ ಅಧಿಕಾರದಲ್ಲಿ ಮುಂದುವರಿದಿದ್ದರು. ಇದು ಆಕಸ್ಮಿಕವಾದರೂ ಇವರ ಮುಂದುವರಿಕೆ ಮುಖ್ಯವಾಗಿತ್ತು. ಏಕೆಂದರೆ ತಾವು ರೂಪಿಸಿದ ವ್ಯವಸ್ಥೆ ಹೇಗೆ ಕೆಲಸ ಮಾಡಲಿದೆ ಎಂಬುದನ್ನು ಮತ್ತೊಮ್ಮೆ ಪರೀಕ್ಷಿಸಿ ನೋಡಲು ಸೇನ್ ಅವರಿಗೆ ಇದೊಂದು ಅವಕಾಶವಾಗಿತ್ತು. ವ್ಯವಸ್ಥೆ ಚೆನ್ನಾಗಿಯೇ ಇದೆ ಎಂಬುದಕ್ಕೆ ಸಾಕ್ಷಿ ಪುರಾವೆಗಳು ಈ ಚುನಾವಣೆಯಲ್ಲಿ ದೊರೆತವು. ಈ ಚುನಾವಣೆಯ ವೆಚ್ಚ 45 ದಶಲಕ್ಷ ರೂ.ಗಳಾಗಿತ್ತು. ಇದು ಮೊದಲ ಸಾರ್ವತ್ರಿಕ ಚುನಾವಣೆಯ ವೆಚ್ಚಕ್ಕಿಂತ ಕಡಿಮೆಯಾಗಿತ್ತು. ಸೇನ್ ಅವರು ಮೊದಲ ಚುನಾವಣೆಗೆ ಮಾಡಿಸಿದ್ದ 3.5 ದಶಲಕ್ಷದ ಮತಪೆಟ್ಟಿಗೆಗಳನ್ನು ಸುರಕ್ಷಿತವಾಗಿರಿಸಲು ವ್ಯವಸ್ಥೆ ಮಾಡಿದ್ದರಿಂದ ಈ ಚುನಾವಣೆಗೆ ಹೊಸದಾಗಿ ಐದುಲಕ್ಷ ಮತ ಪೆಟ್ಟಿಗೆಗಳನ್ನು ಮಾಡಿಸಬೇಕಾಯಿತು.

ಚುನಾವಣೆಗೆ ಪೂರ್ವಭಾವಿಯಾಗಿ ಕೇಂದ್ರ ವಾರ್ತೆ ಮತ್ತು ಪ್ರಸಾರ ಸಚಿವಾಲಯ "ಇದು ನಿಮ್ಮ ಮತ" ಎನ್ನುವ ಸಾಕ್ಷ್ಯ ಚಿತ್ರವೊಂದನ್ನು ಬಿಡುಗಡೆ ಮಾಡಿತು. 'ಯಾವುದೇ ಒಂದು ರಾಜಕೀಯ ಪಕ್ಷದ ಪರ ಪ್ರಚಾರ ಮಾಡುವ ಚಿತ್ರ ಎಂಬಂಥ ಆಕ್ಷೇಪಣೆಗೆ ಅವಕಾಶವಿಲ್ಲದಂತೆ' ವಿಶೇಷ ಎಚ್ಚರಿಕೆವಹಿಸಿ ತಯಾರಿಸಲಾದ ಈ ಚಿತ್ರವನ್ನು ರಾಷ್ಟ್ರಾದ್ಯಂತ 74 ಸಾವಿರ ಸಿನಿಮಾ ಮಂದಿರಗಳಲ್ಲಿ ಪ್ರದರ್ಶಿಸಲಾಯಿತು. ಈ ಚಿತ್ರ ವೀಕ್ಷಿಸಿದ ಮಹಿಳೆಯರಲ್ಲಿ ಹೆಚ್ಚು ಮಂದಿಗೆ ಮತದಾನದ ಮೌಲ್ಯದ ಅರಿವು ಉಂಟಾಗಿತ್ತು. ಈ ಚುನಾವಣೆಯಲ್ಲಿ ದೇಶದ ಮಹಿಳೆಯರಲ್ಲಿ ಶೇ 94ರಷ್ಟು ಮಹಿಳೆಯರು ನೋಂದಾಯಿತ ಮತದಾರರಾಗಿದ್ದರು.

ಈ ಚುನಾವಣೆಯಲ್ಲಿ 193 ದಶಲಕ್ಷ ಭಾರತೀಯರು ನೋಂದಾಯಿತ ಮತದಾರರಾಗಿದ್ದು ಇವರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಮತ ಚಲಾಯಿಸಿದ್ದರು. ಇವರು ಬಳಸಿದ ಮತಪತ್ರಗಳ ಮುದ್ರಣಕ್ಕಾಗಿ 197 ಟನ್ ಕಾಗದದ ಬಳಕೆಯಾಗಿತ್ತು. 273,762 ಮಂದಿ ಪೊಲೀಸರು 168,721 ಮಂದಿ ಹಳ್ಳಿಯ ಚೌಕೀದಾರರ ನೆರವಿನಿಂದ ಚುನಾವಣೆಯ ಉಸ್ತುವಾರಿ ನೋಡಿಕೊಂಡಿದ್ದರು.

ದುಷ್ಟಶಕ್ತಿಗಳಿಗೆ ಹೆಂಡ-ಸಾರಾಯಿ ಸಿಗದಂತೆ ನೋಡಿಕೊಳ್ಳಲು ಮತದಾನದ ದಿನ ಎಲ್ಲ ಮದ್ಯದ ಅಂಗಡಿಗಳನ್ನೂ ಮುಚ್ಚುವಂತೆ ಚುನಾವಣಾ ಆಯೋಗ ಶಿಫಾರಸು ಮಾಡಿತ್ತು. ಆದಾಗ್ಯೂ ಚುನಾವಣೆ ವರ್ಣರಂಜಿತವಾಗಿತ್ತು. ನವದೆಹಲಿಯಲ್ಲಿ ಅಭ್ಯರ್ಥಿಯೊಬ್ಬರು ಏಸುಕ್ರಿಸ್ತನ ಹೆಸರಿನಲ್ಲಿ ನಾಮಪತ್ರ ಸಲ್ಲಿಸುವುದಾಗಿ ಹಟ ಹಿಡಿದಿದ್ದರು. ಮದ್ರಾಸಿನಲ್ಲಿ ಮತದಾರನೊಬ್ಬ ಚುನಾವಣಾ ಆಯುಕ್ತರಾದ ಶ್ರೀ ಸುಕುಮಾರ ಸೆನ್ ಹೊರತು ತಾನು ಬೇರಾರಿಗೂ ಮತ ಹಾಕುವುದಿಲ್ಲವೆಂದು ಪಟ್ಟುಹಿಡಿದಿದ್ದ. ಒರಿಸ್ಸಾದಲ್ಲಿ ಎರಡೂವರೆ ಅಡಿ ಎತ್ತರದ ಕುಬ್ಜ ಮತದಾರನೊಬ್ಬ ಮತ ಹಾಕಲು ಸ್ಟೂಲ್ ಒಂದನ್ನು ತಂದಿದ್ದನಂತೆ. ಪ್ರತಿಯೊಂದು ಮತ ಪೆಟ್ಟಿಗೆಯಲ್ಲೂ ಮತಪತ್ರಗಳ ಜೊತೆ ಬೇರೆ ವಸ್ತುಗಳೂ ಇದ್ದವು. ಮತಪೆಟ್ಟಿಗೆಗಳಲ್ಲಿ ಅಭ್ಯರ್ಥಿಗಳನ್ನು ನಿಂದಿಸುವ ಬರಹದ ಚೀಟಿಗಳು, ಚಿತ್ರ ತಾರೆಯರ ಭಾವಚಿತ್ರಗಳು ಇದ್ದವು. ಕೆಲವು ಪೆಟ್ಟಿಗೆಗಳಲ್ಲಿ ಹಣವನ್ನೂ ಹಾಕಲಾಗಿತ್ತು. ಈ ಹಣವನ್ನು ಸರ್ಕಾರದ ಖಜಾನೆಗೆ ತುಂಬಲಾಯಿತು.

II

1952ರಂತೆ 1957ರ ಚುನಾವಣೆಯೂ ಫಲಿತದಲ್ಲಿ ಪ್ರಧಾನಮಂತ್ರಿ ಹಾಗೂ ಅಧಿಕಾರಾರೂಢ ಪಕ್ಷದ ಪರ ಜನಮತ ಸಂಗ್ರಹವೇ ಆಗಿತ್ತು. ಈ ಚುನಾವಣೆಯಲ್ಲಿ ನೆಹರೂ ಅವರೇ ಕಾಂಗ್ರೆಸ್ಸಿನ ಮುಖ್ಯ ಸಿದ್ಧಾಂತವಾದಿ, ಪ್ರಚಾರಕ ಹಾಗೂ ಮತದಾರರನ್ನು ಸೆಳೆಯುವ ಸಮ್ಮೋಹಕ ಶಕ್ತಿ ಎಲ್ಲವೂ ಆಗಿದ್ದರು. ಇವರಿಗೆ ಹಿನ್ನೆಲೆಯಲ್ಲಿ ಬೆಂಬಲವಾಗಿ ನಿಂತವರು ಮಗಳು ಇಂದಿರಾಗಾಂಧಿ. ಗಂಡನಿಂದ ಬೇರೆಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಇಬ್ಬರು ಮಕ್ಕಳೊಂದಿಗೆ ವಿಧುರ ತಂದೆಯ ಅಧಿಕೃತ ನಿವಾಸವಾದ ತೀನ್ ಮೂರ್ತಿ ಭವನದಲ್ಲಿ ವಾಸವಾಗಿದ್ದರು. ನೆಹರೂ ಅವರು ಪ್ರತಿದಿನ ಮುಂಜಾನೆ ಮೊದಲು ಭೇಟಿ ಯಾಗುತ್ತಿದ್ದದ್ದು ಇಂದಿರಾ ಗಾಂಧಿಯವರನ್ನು. ದಿನದ ಕೊನೆಯಲ್ಲಿ ಭೇಟಿಯಾಗುತ್ತಿದ್ದದ್ದೂ ಇವರನ್ನೇ. ತಂದೆಯ ಅಧಿಕೃತ ಅತಿಥೇಯಳಾಗಿ ಇಂದಿರಾಗಾಂಧಿಯವರಿಗೆ ದೇಶ ಹಾಗೂ ವಿದೇಶಗಳ ಗಣ್ಯರೊಂದಿಗೆ ಬೆರೆಯುವ ಅವಕಾಶವಿತ್ತು. ಈ ಮೊದಲು ಕ್ಷೀಣಿಸಿದ್ದ ಆಕೆಯ ಆರೋಗ್ಯ ಈಗ ಸುಧಾರಿಸಿತ್ತು. ಸುಧಾರಣೆ ಆರೋಗ್ಯದಲ್ಲಿ ಮಾತ್ರವಲ್ಲ ಅವರ ವರ್ತನೆ, ನಡಾವಳಿಗಳಲ್ಲೂ ಕಂಡು ಬಂದಿತ್ತು. ಇಂದಿರಾಗಾಂಧಿಯವರ ಆರೋಗ್ಯ ಸುಧಾರಣೆ ಹೊಸದಾಗಿ ಮಾರುಕಟ್ಟೆಗೆ ಬಂದಿದ್ದ ಪ್ರತಿಜೀವಾಣು ಔಷಧಿಗಳೂ ಕಾರಣವೆಂದು ಅವರ

ಜೀವನ ಚರಿತ್ರೆಕಾರರ ಅಂಬೋಣ. ಹೊಸ ಔಷಧಿಗಳಿಂದ ಅವರಿಗಿತ್ತೆನ್ನಲಾದ ಕ್ಷಯರೋಗ ವಾಸಿಯಾಯಿತೆಂಬ ಅಭಿಪ್ರಾಯವೂ ಇದೆ.

ಶ್ರೀಮತಿ ಇಂದಿರಾಗಾಂಧಿಯವರ ಆರೋಗ್ಯ ಸ್ಥಿತಿ ಕುರಿತಂತೆ ನಮ್ಮ ತಿಳುವಳಿಕೆ ಹೆಚ್ಚಾಗಿ ಊಹಾಪೋಹಗಳನ್ನು ಆಧರಿಸಿದ್ದು. ಆದರೆ, ಮೊದಲನೆ ಮತ್ತು ಎರಡನೆ ಸಾರ್ವತ್ರಿಕ ಚುನಾವಣೆಗಳ ನಡುವಣ ಅವಧಿಯಲ್ಲಿ ಆಕೆಯ ವ್ಯಕ್ತಿತ್ವ ಸ್ಫುಟವಾಗಿ ರೂಪುಗೊಂಡಿತ್ತು, ಸ್ವಯಂಸಿದ್ಧ ಹಕ್ಕಿನಿಂದಲೇ ಅವರು ಪ್ರಸಿದ್ಧ ವ್ಯಕ್ತಿಯಾಗಿ ಬೆಳೆದಿದ್ದರು ಎಂಬುದಕ್ಕೆ ದೃಢ ಸಾಕ್ಷ್ಯವಿದೆ. 1955ರ ಮಾರ್ಚಿಯಲ್ಲಿ ಇಂದಿರಾಗಾಂಧಿಯವರನ್ನು ಮಹಿಳೆಯರ ಹಿತಾಸಕ್ತಿಗಳ ಪ್ರತಿನಿಧಿಯಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನೇಮಿಸಲಾಯಿತು. ಈ ನೇಮಕದ ನಂತರ ಅವರು ಸ್ತ್ರೀಯರ ಹಕ್ಕು ಬಾಧ್ಯತೆ ಮತ್ತು ಹೊಣೆಗಾರಿಕೆಗಳ ಬಗ್ಗೆ ಮಹಿಳಾ ಮಂಡಲದ ಜೊತೆ ಸಂವಾದ ನಡೆಸಲು ದೇಶದಾದ್ಯಂತ ಪ್ರವಾಸ ಪ್ರಾರಂಭಿಸಿದರು. ಆದರೆ ಆಕೆಯ ಆಸಕ್ತಿ ಮಹಿಳೆಯರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಮುಂಬಯಿಯಲ್ಲಿ ನಡೆದ ಗೋವಾ ವಿಮೋಚನಾ ಹೋರಾಟ ಸಭೆಗಳ ಅಧ್ಯಕ್ಷತೆ ವಹಿಸಿದ್ದರು.

ಅವರನ್ನು ರಾಜಕೀಯಪೂರ್ವದ ದಿನಗಳಿಂದ ನೋಡಿದವರ ಪ್ರಕಾರ ಶ್ರೀಮತಿ ಇಂದಿರಾಗಾಂಧಿಯವರಿಗೆ ತಮ್ಮ ಹೊಸ ಪಾತ್ರದ ಬಗ್ಗೆ ಒಂದು ಬಗೆಯ ತಿರಸ್ಕಾರವಿತ್ತು, ಅದು ತಮ್ಮ ಯೋಗ್ಯತೆಗೆ ಕಡಿಮೆಯಾದುದೆಂಬ ಭಾವನೆ ಇತ್ತು. ನನ್ನೆಲ್ಲ ಸಮಯವೂ ಸಣ್ಣಪುಟ್ಟ ಸಭೆಗಳಂಥವುಗಳಲ್ಲಿ ವ್ಯಯವಾಗುತ್ತಿದೆ ಎಂದು ಆಕೆ ಸ್ನೇಹಿತರೊಬ್ಬರ ಹತ್ತಿರ ಅಲವತ್ತುಕೊಂಡಿದ್ದರಂತೆ. ಆದರೆ ಉಳಿದ ಸಾಕ್ಷ್ಯಾಧಾರಗಳಂತೆ ಶ್ರೀಮತಿ ಗಾಂಧಿಯವರಿಗೆ ಹೊಸ ಕೆಲಸ ಕಾರ್ಯಗಳಲ್ಲಿ, ಹೊಣೆಗಾರಿಕೆಯಲ್ಲಿ ಆಸಕ್ತಿ ಇತ್ತು. ಆಕೆಗೆ ಇಷ್ಟವಾಗಿತ್ತು. ಶ್ರೀಮತಿ ಇಂದಿರಾಗಾಂಧಿಯವರನ್ನು ಎಲ್ಲರಿಗಿಂತ ಚೆನ್ನಾಗಿ ಬಲ್ಲವರಾಗಿದ್ದ ವ್ಯಕ್ತಿಯೊಬ್ಬರು 1957ರ ಚುನಾವಣೆಯಲ್ಲಿ ಆಕೆ ತುಂಬ ಚೈತನ್ಯಶಾಲಿಯಾಗಿ ಪ್ರಚಾರದಲ್ಲಿ ಭಾಗವಹಿಸಿದ್ದರೆಂದು ಬರೆದಿದ್ದಾರೆ:

> *"ಇವತ್ತು ಮತದಾನ ಮುಗಿದ ನಂತರ ಅನೇಕ ಮಂದಿ ಮಹಿಳೆಯರೂ ಸೇರಿದಂತೆ ಬಹಳಷ್ಟು ಜನ ಕಾಂಗ್ರೆಸ್ ಕಾರ್ಯಕರ್ತರು ಆನಂದ ಭವನದಲ್ಲಿ ಜಮಾಯಿಸಿದ್ದರು. ಇಂದು, ವಿಶೇಷವಾಗಿ ಮಹಿಳೆಯರಲ್ಲಿ ಜಾಗೃತಿ ಉಂಟುಮಾಡಿದ್ದರು. ಮುಸ್ಲಿಂ ಮಹಿಳೆಯರೂ ಈಗ ಮನೆಯಿಂದ ಹೊರಕ್ಕೆ ಬರಲಾಂಭಿಸಿದ್ದರು. ಇಂದು ಬೆಳೆದಿದ್ದರು, ಬಹಳ ಪ್ರಬುದ್ಧೆಯಾಗಿ ಬೆಳೆದಿದ್ದರು. ಕಳೆದ ಒಂದು ವರ್ಷದಲ್ಲಿ, ವಿಶೇಷವಾಗಿ ಈ ಚುನಾವಣೆಗಳ ಕಾಲದಲ್ಲಿ ಅವರು ಪ್ರೌಢೆಯಾಗಿ ಬೆಳೆದಿದ್ದರು. ಭಾರತದಾದ್ಯಂತ ಆಕೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಅಲಹಾಬಾದ್ ನಗರ ಮತ್ತು ಜಿಲ್ಲೆ ಆಕೆಯ ವಿಶೇಷ ಕಾರ್ಯ ಕ್ಷೇತ್ರವಾಗಿತ್ತು. ಇಲ್ಲಿ ಇಂದಿರಾಗಾಂಧಿಯವರು ಸೇನೆಯ ದಂಡನಾಯಕನೊಬ್ಬ ಯುದ್ಧಕ್ಕೆ ಸಿದ್ಧತೆ ನಡೆಸುವಂತೆ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲಹಾಬಾದಿನಲ್ಲೇ ಆಕೆ ಈಗ ನಿಜವಾದ ನಾಯಕಿ, ವಿಶೇಷವಾಗಿ ಮಹಿಳೆಯರ ಕಣ್ಮಣಿ."*

III

1952ರಷ್ಟು ಹಿಂದೆಯೇ ನೆಹರೂ ಮತ್ತು ಕಾಂಗ್ರೆಸ್ ಸೈದ್ಧಾಂತಿಕವಾಗಿ ಪ್ರಬಲವಾದ ಎರಡು ಸವಾಲುಗಳನ್ನು ಎದುರಿಸಬೇಕಾಗಿ ಬಂದಿತ್ತು. ಒಂದು: ಬಲಪಂಥೀಯ ಜನಸಂಘ. ಎರಡು: ಎಡಪಂಥೀಯ ಸಮಾಜವಾದಿಗಳು. ಈಗ ಈ ಎರಡೂ ಬಣಗಳೂ ದಿಕ್ಕುಗಾಣದೆ ವಿಚಲಿತವಾಗಿದ್ದವು. ಶ್ಯಾಂಪ್ರಸಾದ್ ಮುಖರ್ಜಿಯವರ ನಿಧನದಿಂದ ಜನಸಂಘ ನಾಯಕತ್ವ ಹೀನವಾಗಿ ದಿಕ್ಕೆಟ್ಟಿದ್ದರೆ, ಜಯಪ್ರಕಾಶ ನಾರಾಯಣ್ ಅವರು ಸಮಾಜ ಸೇವೆಗಾಗಿ ರಾಜಕೀಯ ತೊರೆದದ್ದು ಸಮಾಜವಾದಿಗಳಿಗೆ ಒಂದು ದೊಡ್ಡ ಹೊಡೆತವಾಗಿತ್ತು. ಉತ್ತರ ಭಾರತದುದ್ದಕ್ಕೂ ಕಾಂಗ್ರೆಸ್ಸಿಗೆ ಸಡ್ಡು ಹೊಡೆಯುವವರೇ ಇರಲಿಲ್ಲ. ಉತ್ತರದಲ್ಲಿ ಸ್ಪರ್ಧಿಸಿದ್ದ 226 ಸ್ಥಾನಗಳ ಪೈಕಿ ಕಾಂಗ್ರೆಸ್ 195 ಸ್ಥಾನಗಳನ್ನು ಗೆದ್ದಿತ್ತು. ಲೋಕಸಭೆಯ 371 ಸ್ಥಾನಗಳಲ್ಲಿ ಇಷ್ಟೊಂದು ಸ್ಥಾನಗಳನ್ನು ಗೆದ್ದದ್ದು ಕಾಂಗ್ರೆಸ್ಸಿನ ಪ್ರಾಬಲ್ಯವನ್ನು ಹೆಚ್ಚಿಸಿತ್ತು.

ಈ ಜಯಭೇರಿಯ ಮಧ್ಯೆಯೂ ಕಾಂಗ್ರೆಸ್ ಪಕ್ಷ ಆತಂಕಮುಕ್ತವಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದ ನಾಯಕತ್ವ, ನಂತರ ಭಾರತ ಸರ್ಕಾರ ನಾಯಕತ್ವ ವಹಿಸಿದ ಕಾಂಗ್ರೆಸ್ ಪಕ್ಷಕ್ಕೆ ಅನೇಕ ಸಮಸ್ಯೆಗಳು ಎದುರಾಗಿದ್ದವು. ಸಿಂಧೂ ಗಂಗಾನದಿಯ ಬಯಲು ಸೀಮೆಯ ಆಚೆ ಕಾಂಗ್ರೆಸ್‌ಗೆ ಹಲವಾರು ಸವಾಲುಗಳನ್ನೊಡ್ಡುವಂಥ ಬೆಳವಣಿಗೆಗಳಾಗುತ್ತಿದ್ದವು. ಒರಿಸ್ಸಾದಲ್ಲಿ ಕಾಂಗ್ರೆಸ್ಸಿಗೆ ಎದುರಾಳಿ ಪಕ್ಷವಾಗಿ ಗಣತಂತ್ರ ಪರಿಷತ್ ಹುಟ್ಟಿಕೊಂಡಿತ್ತು. ಸ್ಥಳೀಯ ಜಮೀನ್ದಾರರ ಪಕ್ಷವಾಗಿದ್ದ ಗಣತಂತ್ರ ಪರಿಷತ್ ಮತ್ತು ಎಡಪಕ್ಷಗಳ ವಿರೋಧದಿಂದಾಗಿ ಒರಿಸ್ಸಾದಲ್ಲಿ ಕಾಂಗ್ರೆಸ್‌ಗೆ ಇಪ್ಪತ್ತು ಲೋಕಸಭಾಕ್ಷೇತ್ರಗಳಲ್ಲಿ ಕೇವಲ 7 ಸ್ಥಾನಗಳನ್ನು ಗೆಲ್ಲುವುದು ಸಾಧ್ಯವಾಗಿತ್ತು. ಸ್ವಾತಂತ್ರ್ಯ ಹೋರಾಟದ ಕೇಂದ್ರವಾಗಿದ್ದ ಮುಂಬಯಿ ಪ್ರಾಂತ್ಯದಲ್ಲಿ ಕಾಂಗ್ರೆಸ್ 66 ಸ್ಥಾನಗಳಲ್ಲಿ 38ಕ್ಕೇ ತೃಪ್ತಿಪಡಬೇಕಾಯಿತು. ಉಳಿದ ಸ್ಥಾನಗಳು, ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ನಡೆಸಿದ್ದ ಸಂಯುಕ್ತ ಮಹಾರಾಷ್ಟ್ರ ಸಮಿತಿ ಹಾಗೂ ಮಹಾಗುಜರಾತ್ ಪರಿಷತ್ ಪಾಲಾಗಿದ್ದವು. (ಮುಂಬಯಿಯನ್ನು ರಾಜಧಾನಿಯನ್ನಾಗಿ ಮಾಡಿ ಪ್ರತ್ಯೇಕ ಮಹಾರಾಷ್ಟ್ರ ರಾಜ್ಯ ಸ್ಥಾಪಿಸಬೇಕೆಂಬ ಬೇಡಿಕೆಗೆ ಈ ಚುನಾವಣೆ ಒಂದು ರೀತಿಯಲ್ಲಿ ಜನಾಭಿಪ್ರಾಯ ಸಂಗ್ರಹಣೆಯ ಪರಿಣಾಮವನ್ನೇ ಬೀರಿತ್ತು. ಸಂಯುಕ್ತ ಮಹಾರಾಷ್ಟ್ರ ಸಮಿತಿಗೆ 5.5 ದಶಲಕ್ಷ ಮತಗಳು ಬಂದಿದ್ದರೆ ಕಾಂಗ್ರೆಸ್ ಪಡೆದದ್ದು 5.3 ದಶಲಕ್ಷ ಮತಗಳನ್ನು). ಇದಾದ ನಂತರ ನಡೆದ ಸ್ಥಳೀಯ ಚುನಾವಣೆಗಳಲ್ಲೂ ಕಾಂಗ್ರೆಸ್‌ಗೆ ಈ ನಷ್ಟ ಪುನರಾವರ್ತನೆಗೊಂಡಿತು. ಪುಣೆ ಮತ್ತು ಮುಂಬಯಿ ಮುನಿಸಿಪಾಲಿಟಿಗಳಲ್ಲಿ ಸಮಿತಿ ಅಧಿಕಾರ ಗ್ರಹಣ ಮಾಡಿತು.

ದಕ್ಷಿಣದಲ್ಲೂ ಕಾಂಗ್ರೆಸ್ಸಿಗೆ ಪ್ರಾದೇಶಿಕ ಸವಾಲೊಂದು ಮೊಳಕೆಯೊಡೆಯುತ್ತಿತ್ತು. ಇದು ನಂತರ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷವಾಗಿ ರೂಪುಗೊಂಡಿತು. ಡಿಎಂಕೆ, ಇ.ವಿ. ರಾಮಸ್ವಾಮಿ ನಾಯ್ಕರ್ ಅವರು ಹುಟ್ಟು ಹಾಕಿದ ದ್ರಾವಿಡ ಚಳವಳಿ ಮೂಲದ್ದು. ಪೆರಿಯಾರ್ ಎಂದೇ ಪ್ರಸಿದ್ಧರಾಗಿದ್ದ ರಾಮಸ್ವಾಮಿ ನಾಯ್ಕರ್ ಭಾರತದ ಧರ್ಮ, ಸಂಸ್ಕೃತಿ

ಮತ್ತು ರಾಜಕಾರಣದಲ್ಲಿ ಉತ್ತರದ ಪ್ರಾಬಲ್ಯದ ಕಟ್ಟಾ ವಿರೋಧಿಯಾಗಿದ್ದರು. ದಕ್ಷಿಣ ಭಾರತ, ದ್ರಾವಿಡ ನಾಡು ಎಂಬ ಪ್ರತ್ಯೇಕ ರಾಷ್ಟ್ರವಾಗಬೇಕೆಂಬುದು ಅವರ ನಿಲುವಾಗಿತ್ತು. ತಮ್ಮ ಪ್ರತ್ಯೇಕತಾ ಬೇಡಿಕೆಗೆ ಸಂಸದೀಯ ರಾಜಕಾರಣವನ್ನು ವೇದಿಕೆಯನ್ನಾಗಿ ಮಾಡಿಕೊಳ್ಳುವ ಇಚ್ಛೆಯಿಂದ ಪೆರಿಯಾರ್ ಅವರು ಹಾಗೂ ಅವರ ಹಿಂದಿನ ಅನುಯಾಯಿಗಳು ಕೆಲವರು ಸೇರಿಕೊಂಡು ಡಿಎಂಕೆ ಪಕ್ಷ ಸ್ಥಾಪಿಸಿದರು. ಡಿಎಂಕೆ ಪ್ರಪ್ರಥಮವಾಗಿ 1957ರ ಚುನಾವಣೆಯಲ್ಲಿ ಸ್ಪರ್ಧಿಸಿತು. ಈ ಚುನಾವಣೆಯಲ್ಲಿ ಡಿಎಂಕೆ ಗೆದ್ದದ್ದು (ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚು ಗೆಲವು ಸಾಧಿಸಿತ್ತು) ಕೆಲವೇ ಸ್ಥಾನಗಳನ್ನಾದರೂ ಅದರ ಅಂಬೆಗಾಲಿನ ವಿಜಯ ಕಾಂಗ್ರೆಸ್ಸಿಗೆ ದೊಡ್ಡ ತಲೆನೋವನ್ನೇ ತಂದಿತ್ತು. ಏಕೆಂದರೆ, ಡಿಎಂಕೆ ಭಾಷೆ ಅಥವಾ ಜನಾಂಗೀಯತೆ ಆಧಾರದ ಮೇಲೆ ಪ್ರತ್ಯೇಕ ಪ್ರಾಂತ್ಯದ ಬೇಡಿಕೆಯನ್ನಿಟ್ಟಿರಲಿಲ್ಲ, ಪ್ರತ್ಯೇಕ ರಾಷ್ಟ್ರ ಅದರ ಬೇಡಿಕೆಯಾಗಿತ್ತು.

ದಕ್ಷಿಣದ ತುತ್ತ ತುದಿಯ ಇನ್ನೊಂದು ರಾಜ್ಯದಲ್ಲಿನ ರಾಜಕೀಯ ಬೆಳವಣಿಗೆಗಳಿಂದಾಗಿ, ಕಾಂಗ್ರೆಸ್ ಪಕ್ಷದ, ಅಖಿಲ ಭಾರತ ಪ್ರತಿನಿಧಿ ತಾನೆಂಬ ಹೆಗ್ಗಳಿಕೆಗೆ ಕುಂದುಂಟಾಗಿತ್ತು. ಈ ಇನ್ನೊಂದು ರಾಜ್ಯ ಕೇರಳ. ಇಲ್ಲಿ ಅಧಿಕಾರಾರೂಢ ಕಾಂಗ್ರೆಸ್ಸಿನ ಪ್ರಬಲ ವಿರೋಧ ಪಕ್ಷವಾಗಿ ಭಾರತದ ಕಮ್ಯುನಿಸ್ಟ್ ಪಕ್ಷ ಬೆಳೆದು ನಿಂತಿತ್ತು. ಲೋಕಸಭೆ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷ 18 ಸ್ಥಾನಗಳಲ್ಲಿ 9 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಕಾಂಗ್ರೆಸ್‌ಗೆ ದಕ್ಕಿದ್ದು ಕೇವಲ ಆರು ಸ್ಥಾನಗಳು. ಏಕ ಕಾಲದಲ್ಲಿ ನಡೆದ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ 126 ಸ್ಥಾನಗಳ ಪೈಕಿ ಕಮ್ಯುನಿಸ್ಟರು 60 ಸ್ಥಾನಗಳಲ್ಲಿ ಗೆದ್ದಿದ್ದರು. ಐವರು ಪಕ್ಷೇತರರ ಬೆಂಬಲದೊಂದಿಗೆ ಕಮ್ಯುನಿಸ್ಟ್ ಪಕ್ಷಕ್ಕೆ ತೆಳುವಾದ ಬಹುಮತವೂ ಪ್ರಾಪ್ತವಾಗಿತ್ತು.

ಕೇರಳ ವಿಧಾನಸಭೆ ಚುನಾವಣೆಯಲ್ಲಿ ಕಮ್ಯುನಿಸ್ಟರ ಅದ್ಭುತ ವಿಜಯ, ಒಂದು ಕಾಲಕ್ಕೆ ಲೆನಿನ್ "ಸಂಸದೀಯ ದಡ್ಡತನ" ಎಂದು ತಳ್ಳಿಹಾಕಿದ್ದ ವ್ಯವಸ್ಥೆಯ ಸ್ಥಿರೀಕರಣವೇ ಆಗಿತ್ತು. ಇದೇ ಸಮಯದಲ್ಲಿ ಇಟಲಿಯ ಒಂದು ನಗರಸಭೆಗೆ ಕಮ್ಯುನಿಸ್ಟ್ ಮೇಯರ್ ಆಯ್ಕೆ ಹೊಂದಿದ್ದ. ಆದರೆ ಇಲ್ಲಿ, ಕೇರಳದಲ್ಲಿ ಮೊಟ್ಟಮೊದಲ ಬಾರಿಗೆ ಕಮ್ಯುನಿಸ್ಟ್ ಪಕ್ಷಕ್ಕೆ ದೊಡ್ಡ ರಾಷ್ಟ್ರವೊಂದರ ರಾಜ್ಯದಲ್ಲಿ ಸರ್ಕಾರ ರಚಿಸುವ, ಆಡಳಿತ ನಡೆಸುವ ಅದೃಷ್ಟ ಒಲಿದಿತ್ತು. ಶೀತಲ ಸಮರ ಬಹಿರಂಗ ಯುದ್ಧವಾಗಿ ಪರಿಣಮಿಸುವ ಆತಂಕ ಹೆಚ್ಚುತ್ತಿದ್ದ ಆ ದಿನಗಳಲ್ಲಿ ಕೇರಳದ ಬೆಳವಣಿಗೆ ವಿಶ್ವವ್ಯಾಪಿ ಆಸಕ್ತಿ ಕೆರಳಿಸಿದ್ದವು. ಜೊತೆಗೆ ಭಾರತದ ಒಕ್ಕೂಟ ವ್ಯವಸ್ಥೆ ಭವಿಷ್ಯಕ್ಕೂ ಈ ಬೆಳವಣಿಗೆಗಳು ಹಲವು ತೀವ್ರ ಸ್ವರೂಪದ ಸವಾಲುಗಳನ್ನೊಡ್ಡಿದ್ದವು. ಹಿಂದೆ ಕಾಂಗ್ರೆಸ್ಸಿನ ಭಿನ್ನಮತೀಯರು ಅಥವಾ ವಿರೋಧ ಪಕ್ಷಗಳ ನಾಯಕತ್ವದ ಕೆಲವು ರಾಜ್ಯ ಸರ್ಕಾರಗಳಿದ್ದವು. ಆದರೆ ನವದೆಹಲಿ ಈಗ ಎದುರಿಸಬೇಕಾದ ಪರಿಸ್ಥಿತಿ ಭಿನ್ನವಾಗಿತ್ತು. ನಿನ್ನೆಯವರೆಗೆ ಭೂಗತವಾಗಿದ್ದ ಪಕ್ಷವೊಂದು ಈಗ ಏಕಾಏಕಿ ಅಧಿಕಾರದ ಗದ್ದುಗೆಯನ್ನೇರಿತ್ತು. ಅದೂ ಇನ್ನೂ ಸಶಸ್ತ್ರ ಕ್ರಾಂತಿ ಸಿದ್ಧಾಂತಗಳನ್ನು ಬೋಧಿಸುತ್ತಿರುವ ಪಕ್ಷವೊಂದು ಅಧಿಕಾರಕ್ಕೆ ಬಂದಿತ್ತು. ಈ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಕೆಲವೊಮ್ಮೆ ಮಾಸ್ಕೋದಿಂದ ಆಣತಿ ಪಡೆಯುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿತ್ತು.

IV

ಭಾರತದ ನೈಋತ್ಯದ ತುದಿಯಲ್ಲಿರುವ ಕೇರಳ ಒಂದು ನಯನ ಮನೋಹರ ರಾಜ್ಯ. ಸಮುದ್ರತೀರ, ಬೆಟ್ಟಗುಡ್ಡಗಳಿಂದ ಕೂಡಿದ ಸೀಮೆ. ಇಲ್ಲಿ ಮಳೆ ಮಾರುತ ಬೇಗಲೇ ಬರುತ್ತದೆ ಮತ್ತು ಸಮೃದ್ಧವಾಗಿಯೂ ಇರುತ್ತದೆ. ಇಲ್ಲಿನ ಸಸ್ಯ ಸಂಪತ್ತು, ವೈವಿಧ್ಯತೆಯಂತೂ ಭಾರತದ ಇತರ ಯಾವುದೇ ಪ್ರದೇಶದೊಂದಿಗೂ ಹೋಲಿಸಲು ಅಸದಳವಾದದ್ದು. ಹಾಗೆಯೇ ಭಾರತದ ಇತರೆ ಯಾವ ಪ್ರದೇಶವೂ ಇದರಷ್ಟು ಭಿನ್ನವೂ ವೈವಿಧ್ಯಮಯವೂ ಆಗಿಲ್ಲ. ಇಲ್ಲಿನ ಜನಸಂಖ್ಯೆಯಲ್ಲಿ ಶೇ.60ರಷ್ಟು ಹಿಂದೂಗಳಿದ್ದರೆ, ಉಳಿದ ಶೇ 40ರಷ್ಟು ಜನ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈ ಅಲ್ಪಸಂಖ್ಯಾತ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರಿಗೆ ಸುದೀರ್ಘ ಇತಿಹಾಸವಿದೆ. ಕೇರಳದ ಸಿರಿಯನ್ ಕ್ರಿಶ್ಚಿಯನ್ನರನ್ನು ಕ್ರಿಸ್ತಶಕದ ಮೊದಲನೆಯ ಶತಮಾನದಲ್ಲೇ ಸೇಂಟ್ ಥಾಮಸ್ ಎಂಬಾತ ಮತಾಂತರಗೊಳಿಸಿದನಂತೆ.

ಕೋಷ್ಟಕ 14.1 ಕೇರಳದ ಧಾರ್ಮಿಕ ಸಂಯೋಜನೆ ಹಾಗೂ ಇಡೀ ಭಾರತದೊಳಗಿನ ಧಾರ್ಮಿಕ ಸಂಯೋಜನೆ.

	ಜನಸಂಖ್ಯೆಯ ಶೇಕಡವಾರು		
	ಹಿಂದೂಗಳು	ಕ್ರಿಶ್ಚಿಯನ್ನರು	ಮುಸ್ಲಿಮರು
ಕೇರಳ	60.83	21.22	17.91
ಭಾರತ	83.51	2.44	10.69

ಮೂಲ: ಕೆ.ಜಿ. ಕೃಷ್ಣಮೂರ್ತಿ ಮತ್ತು ಜಿ. ಲಕ್ಷ್ಮಣ ರಾವ್, ಪೊಲಿಟಿಕಲ್ ಪ್ರಿಫರೆನ್ಸಸ್ ಇನ್ ಕೇರಳ (ನವದೆಹಲಿ: ರಾಧಾಕೃಷ್ಣ 1968) ಪುಟ: 10.

ಇತ್ತೀಚಿನ ದಿನಗಳಲ್ಲಿ ಪ್ರಾಟೆಸ್ಟಂಟ್ ಮತ್ತು ಕ್ಯಾಥೊಲಿಕ್ ಪಾದ್ರಿಗಳೂ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಯಶಸ್ವಿಯಾಗಿದ್ದರು. ಮುಸ್ಲಿಮರು ಪ್ರಪ್ರಥಮವಾಗಿ ಈ ಸೀಮೆಯೊಳಗೆ ಕಾಲಿಟ್ಟದ್ದು ಅರಬ್ಬರ ವಾಣಿಜ್ಯ ವ್ಯವಹಾರಗಳಿಂದಾಗಿ; ಎಂಟನೇ ಶತಮಾನದಲ್ಲಿ. ಇವರು ಉಪಖಂಡದಲ್ಲಿನ ಅತಿ ಪುರಾತನ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳು. ಕೇರಳದ ಹಿಂದೂಗಳಂತೆಯೇ ಇವರು ಸ್ಥಳೀಯ ಆಡು ಭಾಷೆಯಾದ ಮಲೆಯಾಳಂ ಮಾತನಾಡುತ್ತಿದ್ದರು. ಆದರೆ ನಾವು ಕೋಷ್ಟಕದಲ್ಲಿ ಕಾಣುವಂತೆ ಜನಸಂಖ್ಯೆಯ ದೃಷ್ಟಿಯಿಂದ ಇವರಿಗೆ ವಿಶೇಷವಾದ ಅಸ್ಮಿತೆಯೊಂದು ದೊರೆತಂತೆ ಕಾಣುತ್ತದೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ದಿನಗಳಿಂದ ಕೇರಳದಲ್ಲಿ ಒಂದು ಬಗೆಯ ಸಾಮಾಜಿಕ ತಳಮಳ ಶುರುವಾಯಿತು. ಇಲ್ಲಿ ಬದಲಾವಣೆಯ ಗಾಳಿ ಬೀಸಲಾರಂಭಿಸಿತ್ತು.

ಈ ಬದಲಾವಣೆಯ ಹರಿಕಾರರಾಗಿದ್ದವರು ನಾಲ್ವರು. ಮೊದಲನೆಯದಾಗಿ ಧರ್ಮ ಬೋಧಕರು. ಕ್ರಿಶ್ಚಿಯನ್ ಪ್ರಭಾವದಿಂದಾಗಿ ಇಲ್ಲಿ ಇವರಿಗೆ ಕೆಲಸ ಮಾಡುವುದು ಬ್ರಿಟಿಷ್ ಭಾರತದ ಇತರೆಡೆಗಳಿಗಿಂತ ಸುಲಭವಾಗಿತ್ತು. ಶಾಲಾ-ಕಾಲೇಜುಗಳ ಅಂತರ್ಜಾಲ ನಿರ್ಮಿಸುವ ಮೂಲಕ ಇಲ್ಲಿ ಕ್ರಿಶ್ಚಿಯನ್ ಧರ್ಮ ಬೋಧಕರು ಆಧುನಿಕ ಶಿಕ್ಷಣ ಸೌಕರ್ಯ ಕಲ್ಪಿಸುವ ಕಾರ್ಯ ಕೈಗೊಂಡರು. ಎರಡನೆಯವರು ಕೊಚ್ಚಿನ್ ಮತ್ತು ತಿರುವಾಂಕೂರಿನ ಮಹಾರಾಜರು. ಇವರು ದೇಶದ ಉಳಿದ ರಾಜಮಹಾರಾಜರುಗಳಿಗಿಂತ ಹೆಚ್ಚು ಪ್ರಗತಿಶೀಲರಾಗಿದ್ದರು. ಹಾಗೂ ಕ್ರಿಶ್ಚಿಯನ್ ಧರ್ಮ ಬೋಧಕರು ಇವರಿಗೆ ನಿಮ್ಮದೇ ಉತ್ತಮ ಶಾಲೆಗಳನ್ನೇಕೆ ಸ್ಥಾಪಿಸಬಾರದು ಎಂದು ಸವಾಲೊಡ್ಡಿದ್ದರು. ರಾಜಮಹಾರಾಜರು ಈ ಸವಾಲಿಗೆ ಸ್ಪಂದಿಸಿ ಶಿಕ್ಷಣಸಂಸ್ಥೆಗಳನ್ನು ತೆರೆದಿದ್ದರು. ಮೂರನೆಯದು, ನಾಯರ್ ಸರ್ವಿಸ್ ಸೊಸೈಟಿಯಂಥ ಶಕ್ತಿಶಾಲಿ ಮತೀಯ ಸಂಸ್ಥೆಗಳು. ನಾಯರ್ ಸೊಸೈಟಿ ಪ್ರಭಾವಿ ಜಮೀನ್ದಾರರ ಸಂಸ್ಥೆಯಾಗಿತ್ತು. ಅಲ್ಲದೆ ಈಡಿಗರ ಕೋಮಿನ ನಾಯಕರಾಗಿದ್ದ ನಾರಾಯಣಗುರು ಅವರ ಹೆಸರಿನಲ್ಲಿ ಸ್ಥಾಪಿಸಲಾಗಿದ್ದ ಶ್ರೀ ನಾರಾಯಣ ಧರ್ಮ ಪರಿಪಾಲನಾ ಸಂಸ್ಥೆಯಿತ್ತು. ಈ ಸಂಸ್ಥೆಗಳೂ ಶಾಲೆಗಳನ್ನು ನಡೆಸುತ್ತಿದ್ದವು. ಇವುಗಳ ಜೊತೆಗೆ ಸಮಾಜ ಕಲ್ಯಾಣ ಹಾಗೂ ಪರೋಪಕಾರ ಕಾರ್ಯಗಳನ್ನು ನಡೆಸುತ್ತಿದ್ದ ಸಂಘ ಸಂಸ್ಥೆಗಳಿದ್ದವು. ಮೇಲಾಗಿ, ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳಂಥ ರಾಜಕೀಯ ಪಕ್ಷಗಳಿದ್ದವು.

ಬಲ ಕಮ್ಯುನಿಸ್ಟ್ ಪಕ್ಷದ ಕೇರಳ ಶಾಖೆ ಗ್ರಾಮೀಣ ಪ್ರದೇಶಗಳಲ್ಲಿ ಬಲವಾಗಿ ಬೇರು ಬಿಟ್ಟಿತ್ತು. ಕಮ್ಯುನಿಸ್ಟ್ ಪ್ರಭಾವಿ ನಾಯಕರಲ್ಲಿ ಬಹುತೇಕ ಮಂದಿ ಕಾಂಗ್ರೆಸ್‌ನಲ್ಲಿ ರಾಜಕೀಯ ಜೀವನ ಆರಂಭಿಸಿ ನಂತರ ಎಡಪಂಥದತ್ತ ವಾಲಿದವರು. ಗೇಣಿದಾರರಿಗೆ ಭದ್ರತೆ, ಭೂರಹಿತರಿಗೆ ಉದ್ಯೋಗ ಮತ್ತು ಉತ್ತಮ ವೇತನ ಇವುಗಳಿಗಾಗಿ ಹೋರಾಟ ನಡೆಸಲು ಈ ನಾಯಕರುಗಳು ರೈತ ಸಂಘಗಳು ಮತ್ತು ಕಾರ್ಮಿಕ ಸಂಘಗಳನ್ನು ಸ್ಥಾಪಿಸಿದರು. ವಾಚನಾಲಯಗಳನ್ನು ಸ್ಥಾಪಿಸಿದರು. ವಾಚನಾಲಯಗಳಲ್ಲಿ ಬುದ್ಧಿಜೀವಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸಿ ಜನಸಾಮಾನ್ಯರಲ್ಲಿ ಸುಧಾರಣೆಯ ಬೀಜಗಳನ್ನು ಬಿತ್ತಿದರು. ವಾಮಪಂಥೀಯ ವಿಚಾರಧಾರೆಯ ಪ್ರಚಾರಕ್ಕೆ ನಾಟಕ, ನೃತ್ಯಕಲೆಗಳನ್ನು ಬಳಸಿಕೊಳ್ಳಲಾಯಿತು. 1930ರ ದಶಕದುದ್ದಕ್ಕೂ ಹಾಗೂ ಆನಂತರವೂ ಕಮ್ಯುನಿಸ್ಟರು ಕೇರಳದಲ್ಲಿ ಭದ್ರವಾಗಿ ನೆಲೆಯೂರಲಾರಂಭಿಸಿದರು. ತಮ್ಮ ವಿಚಾರಧಾರೆ, ಆದರ್ಶ ಮತ್ತು ಪ್ರಣಾಳಿಕೆಗಳಿಂದ ಜನರನ್ನು ಆಕರ್ಷಿಸಿದರು. ಮೊದಲೇ ಒಡೆದುಹೋಗಿದ್ದ, ಯುದ್ಧ ಮತ್ತು ಆರ್ಥಿಕ ಹಿಂಜರಿತಗಳಿಂದ ಬೇಸತ್ತಿದ್ದ ಜನತೆಯನ್ನು ತಮ್ಮತ್ತ ಸೆಳೆದುಕೊಂಡರು.

ರಾಷ್ಟ್ರ ಅಸಮತೆಯಿಂದ ಒಡೆದು ಹೋಳಾಗಿತ್ತು. ಕೇರಳದಲ್ಲಂತೂ ಜಾತಿ ಪದ್ಧತಿಯ ಪಿಡುಗಿನಿಂದ ಸಮಾಜ ತತ್ತರಿಸಿ ಹೋಗಿತ್ತು. ಇಲ್ಲಿ ಸಮಾಜದ ಕೆಳಜಾತಿಯ ಜನರು ಅಸ್ಪೃಶ್ಯರಷ್ಟೇ ಅಲ್ಲ, ಅವರು ಮೇಲ್ಜಾತಿಯವರ ಕಣ್ಣಿಗೂ ಬೀಳುವಂತಿರಲಿಲ್ಲ. ನಂಬೂದರಿ ಬ್ರಾಹ್ಮಣರು ಬರುತ್ತಿದ್ದಾರೆಂದು ತಿಳಿದಾಕ್ಷಣ ಶೂದ್ರ ಕಾರ್ಮಿಕರು, ಕೆಲಸದಾಳುಗಳು ಜಾಗದಿಂದ ನಿರ್ಗಮಿಸಬೇಕಾಗಿತ್ತು. ಶೂದ್ರರ ದರ್ಶನ ಮಾತ್ರದಿಂದ ತಮಗೆ

ಮೈಲಿಗೆಯಾಯಿತೆಂದೂ ಪರಿಸರ ಮಲಿನಗೊಂಡಿತೆಂದೂ ಬ್ರಾಹ್ಮಣರು ಭಾವಿಸುತ್ತಿದ್ದರು. ಆದಾಗ್ಯೂ ಕ್ರಿಶ್ಚಿಯನ್ ಧರ್ಮಪ್ರಚಾರಕರು, ರಾಜಸಂತತಿ, ಕೆಳ ಜಾತಿಯ ಜನರು ಹಾಗೂ ಕಮ್ಯುನಿಸ್ಟರು ಸಂಘಟಿತವಾಗಿ ಸಾಂಪ್ರದಾಯಿಕ ಕಟ್ಟು ಕಟ್ಟಳೆಗಳನ್ನು, ಮೇಲ್ಜಾತಿಯ ಅಧಿಕಾರ ದರ್ಪವನ್ನು ಪ್ರಶ್ನಿಸುತ್ತ ಬಂದರು. ಇದರಿಂದಾಗಿ, ಸನಾತನ ಕಟ್ಟುಗಳು ಸಡಿಲಗೊಳ್ಳಲಾರಂಭ ವಾಗಿತ್ತು. 1900-1950ರಲ್ಲಿ, ಅರ್ಧ ಶತಮಾನದಲ್ಲಿ ಕೇರಳದ ಗ್ರಾಮೀಣ ಭಾಗಗಳಲ್ಲಿ ಮೇಲ್ಜಾತಿಯವರನ್ನು ಗೌರವಿಸುವ, ಅವರಿಗೆ ತಲೆ ಬಾಗುವ ಪ್ರವೃತ್ತಿ ಹಿಮ್ಮೆಟ್ಟಿ ಸನಾತನ ಕಟ್ಟುಕಟ್ಟಳೆ ಜಾತಿಯ ಕಟ್ಟುಪಾಡುಗಳನ್ನು ಉಲ್ಲಂಘಿಸುವುದೇ ಸಾಮಾಜಿಕ ಬದಲಾವಣೆಯ ಮಾಧ್ಯಮವಾಯಿತು.

1947ರಲ್ಲಿ ವಯಸ್ಕರ ಮತದಾನ ಜಾರಿಗೆ ಬಂದಾಗ ಕಮ್ಯುನಿಸ್ಟರು ಇದರ ಪೂರ್ಣಲಾಭ ಪಡೆದುಕೊಳ್ಳುವಷ್ಟು ಸುಸ್ಥಿತಿಯಲ್ಲಿದ್ದರು. ಆದರೆ ಅವರು ಹಾಗೆ ಮಾಡದೇ ಮಾಸ್ಕೋ ಆಣತಿಯಂತೆ ಭೂಗತರಾದರು. 1952ರ ಚುನಾವಣೆಯಲ್ಲಿ ಪ್ರತ್ಯಕ್ಷರಾದರು. ಅಷ್ಟೇ ಅಲ್ಲ ಚುನಾವಣೆಯಲ್ಲಿ ಒಳ್ಳೆಯ ಸಾಧನೆಯನ್ನು ತೋರಿದರು. 1950ರಿಂದಲೇ ಕಮ್ಯುನಿಸ್ಟರು ಜನರನ್ನು ಸಂಘಟಿಸುತ್ತ ಪ್ರಭಾವ ಬೆಳೆಸಿಕೊಂಡಿದ್ದರು. ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗೆ ಒಂದು ವರ್ಷ ಮುಂಚೆ, 1956ರ ಫೆಬ್ರುವರಿಯಲ್ಲಿ ಸೋವಿಯತ್ ಒಕ್ಕೂಟದಲ್ಲಿ ಕಮ್ಯುನಿಸ್ಟ್ ಪಕ್ಷದ ಇಪ್ಪತ್ತನೇ ಮಹಾಧಿವೇಶನ ನಡೆಯಿತು. ಈ ಮಹಾಧಿವೇಶನದಲ್ಲಿ ಕ್ರುಶ್ಚೇವ್, ಸ್ಟಾಲಿನ್ನರನ್ನು ಉಗ್ರವಾಗಿ ಖಂಡಿಸಿದ್ದರು. ಹಾಗೂ ಶಾಂತಿಯುತವಾಗಿ ಸಮಾಜವಾದಕ್ಕೆ ಪರಿವರ್ತನೆ ಹೊಂದುವ ಸಾಧ್ಯತೆಯನ್ನು ಸೂಚಿಸಿದ್ದರು. ಮಹಾಧಿವೇಶನದಲ್ಲಿ ಪಕ್ಷದ ಕಾರ್ಯದರ್ಶಿಗಳು ಮಂಡಿಸಿದ ವರದಿಯಲ್ಲಿ ಹೀಗೊಂದು ಅಭಿಪ್ರಾಯ ಮೂಡಿ ಬಂದಿತ್ತು:

> *"ಶ್ರಮಜೀವಿಗಳು ಮತ್ತು ಕಾರ್ಮಿಕರ ಸಮೂಹ ಕ್ರಾಂತಿ ಚಳವಳಿ ಬೆಂಬಲದಿಂದ, ಸಂಸದೀಯ ಚುನಾವಣೆಯಲ್ಲಿ ಬಹುಮತದ ಜಯಗಳಿಸುವುದರಿಂದ, ಅನೇಕ ಮಾಜಿ ವಸಾಹತು ರಾಷ್ಟ್ರಗಳಲ್ಲಿ ಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮೂಲಭೂತ ಸಾಮಾಜಿಕ ಬದಲಾವಣೆ ಉಂಟುಮಾಡಲು ದುಡಿಯುವ ವರ್ಗದ ಜನರಿಗೆ ಅನುಕೂಲಕರ ವಾತಾವರಣ ಸೃಷ್ಟಿಯಾಗಬಹುದು."*

ಆದರೆ ಸೋವಿಯತ್ ರಷ್ಯದಲ್ಲಿ ಮಾತ್ರ ಚುನಾವಣೆಯಿಲ್ಲ, ಹಾಗೆಂದು ಬೇರೆಡೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಚುನಾವಣೆಯನ್ನು ಬಹಿಷ್ಕರಿಸಬೇಕೆಂದೇನೂ ಇರಲಿಲ್ಲ. ಬೇರೆಡೆ ಕಮ್ಯುನಿಸ್ಟರು ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಹಿರಿಯಣ್ಣನ ಅನುಮತಿ ಇತ್ತು. (ಈ ಬದಲಾವಣೆಗೆ ಮುಖ್ಯ ಕಾರಣ, ಮಿತ್ರ ರಾಷ್ಟ್ರಗಳನ್ನು ಹೊಂದಲು ಶಕ್ತಿಶಾಲಿ ರಾಷ್ಟ್ರಗಳೊಡನೆ ಪೈಪೋಟಿಯಾಗಿ ಒಕ್ಕೂಟದ ವಿದೇಶಾಂಗ ನೀತಿಯಲ್ಲಿ ಆದ ಮಾರ್ಪಾಟು. ಸೋವಿಯತ್ ಒಕ್ಕೂಟ, ಕೆಲವೊಮ್ಮೆ ಕ್ರಾಂತಿಕಾರಿ ಕಮ್ಯುನಿಸ್ಟ್ ಸಿದ್ಧಾಂತದ ಬಗ್ಗೆ ಸಹಾನುಭೂತಿ ಇಲ್ಲದ

ಮಾಜಿ ವಸಾಹತುಶಾಹಿ ರಾಷ್ಟ್ರಗಳೊಂದಿಗೆ ಬಾಂಧವ್ಯ ಬೆಳಸಬೇಕಾಗಿ ಬಂದಿದ್ದರಿಂದ ಈ ಮಾರ್ಪಾಟು ಅಗತ್ಯವಾಗಿತ್ತು). ಹೀಗಾಗಿ ಕೇರಳದ ಕಮ್ಯುನಿಸ್ಟರು ಹೆಚ್ಚಿನ ಶಕ್ತಿ ಉತ್ಸಾಹಗಳಿಂದ ಚುನಾವಣಾ ಕಣಕ್ಕೆ ಧುಮುಕಿದ್ದರು. ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ, ಆಹಾರ ಉತ್ಪಾದನೆ ಹೆಚ್ಚಿಸುವ ಮೂಲಕ, ಟೀ, ರಬ್ಬರು ಇತ್ಯಾದಿ ತೋಟಗಳ ರಾಷ್ಟ್ರೀಕರಣದಿಂದ, ಕಾರ್ಮಿಕರ ಜೀವನ ಸ್ಥಿತಿ ಸುಧಾರಿಸುವುದರಿಂದ ರಾಜ್ಯವನ್ನು ಸಂಪದಭ್ಯುದಯದ ದಿಕ್ಕಿನಲ್ಲಿ ನಡೆಸುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದರು. ಹೀಗೆ ಪ್ರತಿಭಟನೆಯ ಪಕ್ಷ ಆಳುವ ಪಕ್ಷವಾಗಿ ಪರಿವರ್ತನೆ ಹೊಂದಿತ್ತು. ಕಮ್ಯುನಿಸ್ಟರು ಚುನಾವಣಾ ಪ್ರಣಾಳಿಕೆಯಲ್ಲಿ ಹೀಗೆ ಘೋಷಿಸಿದ್ದರು:

> *"ಅನೇಕ ಮುನಿಸಿಪಾಲಿಟಿಗಳು ಹಾಗೂ ಮಲಬಾರ್ ಜಿಲ್ಲಾ ಬೋರ್ಡಿನ ಆಡಳಿತ ಕಮ್ಯುನಿಸ್ಟರ ನಾಯಕತ್ವದಲ್ಲಿ ಯಾವ ರೀತಿ ಹಿಂದಿಗಿಂತ ಅತ್ಯುತ್ತಮವಾಗಿ ನಡೆದಿದೆ ಎಂಬುದು ಜನಕ್ಕೆ ಗೊತ್ತಿದೆ. ಉತ್ತಮ ಆಡಳಿತಕ್ಕಾಗಿ ಪ್ರಧಾನಮಂತ್ರಿ ಜವಹರಲಾಲ್ ನೆಹರೂ ಅವರಿಂದ ಪ್ರಶಸ್ತಿಗಳನ್ನು ಪಡೆದಿರುವ ಪಂಚಾಯಿತಿಗಳೂ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲೇ ಕೆಲಸ ಮಾಡುತ್ತಿವೆ. ಕಮ್ಯುನಿಸ್ಟ್ ಪಕ್ಷ ಚಳವಳಿಗಾಗಿ ಜನರನ್ನು ಸಂಘಟಿಸುವುದರಲ್ಲಿ ಮಾತ್ರವಲ್ಲ ಯಶಸ್ವಿಯಾಗಿ ಆಡಳಿತ ನಡೆಸುವುದರಲ್ಲೂ ಸಮರ್ಥವಾಗಿದೆ ಎಂಬುದನ್ನು ಇದು ಸಾಬೀತುಗೊಳಿಸುತ್ತದೆ."*

V

ಇ.ಎಂ.ಎಸ್. ನಂಬೂದಿರಿ ಪಾಡ್ ಕೇರಳದ ನೂತನ ಚುನಾಯಿತ ಮುಖ್ಯಮಂತ್ರಿ. ಇವರು ಮಿತ್ರ-ಶತ್ರು ವರ್ಗಗಳೆರಡರಲ್ಲೂ ಇ.ಎಂ.ಎಸ್. ಎಂದೇ ಸುಪರಿಚಿತರು. ಐದು ಅಡಿ ಎತ್ತರದ ಮನುಷ್ಯ. ಆದರೆ ತಾನು ನಂಬಿದ ತತ್ವಗಳಿಗೆ ದೃಢವಾಗಿ ಬದ್ಧನಾದ, ತನ್ನ ನಿಶ್ಚಿತ ಅಭಿಪ್ರಾಯಗಳಿಗೆ ಬದ್ಧನಾದ ವ್ಯಕ್ತಿ. ಅಸಾಧಾರಣ ಬುದ್ಧಿಶಕ್ತಿಯ ಮನುಷ್ಯ. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಇ.ಎಂ.ಎಸ್. ಪೂರ್ವಿಕರು ಬಿಟ್ಟು ಹೋದ ಆಸ್ತಿಯನ್ನು ಪಕ್ಷಕ್ಕೆ ಕೊಟ್ಟುಬಿಟ್ಟಿದ್ದರು. ಇ.ಎಂ.ಎಸ್. ಓದು-ಬರಹಗಳೆರಡರಲ್ಲೂ ತೀವ್ರವಾಗಿ ತೊಡಗಿಸಿಕೊಂಡವರು. ಅವರು ರಚಿಸಿರುವ ಗ್ರಂಥಗಳಲ್ಲಿ ಕೇರಳದ ಇತಿಹಾಸ ಪ್ರಮಾಣಿತ ಇತಿಹಾಸವೆಂದು ವಿದ್ವಾಂಸರಿಂದ ಪರಿಗಣಿಸಲ್ಪಟ್ಟಿದೆ. ಈ ಮಹಾನ್ ರಾಷ್ಟ್ರದ, ಶೇಖ್ ಅಬ್ದುಲ್ಲಾ, ಮಾಸ್ಟರ್ ತಾರಾಸಿಂಗ್ ಮತ್ತು ಎ.ಜೆಡ್. ಫಿಜೊರಂತೆ ಇ.ಎಂ.ಎಸ್. ಅವರೂ 'ಪ್ರಾಂತೀಯ' ನಾಯಕರೆಂದೇ ಖ್ಯಾತರಾದವರು. ಆದರೆ, ಅವರ ರಾಜ್ಯ ಹಾಗೂ ಅವರ ರಾಜಕಾರಣದ ಅನನ್ಯತೆಯಿಂದಾಗಿ ಇ.ಎಂ.ಎಸ್. ಐತಿಹಾಸಿಕ ಮಹತ್ವದ ಪ್ರಮುಖ ವ್ಯಕ್ತಿಯಾಗಿದ್ದಾರೆ.

ಕೇರಳದಲ್ಲಿ ಹೊಸ ಸರ್ಕಾರ ಕೈಗೊಂಡ ಮೊದಲ ನಿರ್ಧಾರವೆಂದರೆ ಮರಣದಂಡನೆಗೆ ಗುರಿಯಾಗಿದ್ದವರ ಮರಣ ಶಿಕ್ಷೆಯನ್ನು ರದ್ದುಗೊಳಿಸಿದ್ದು. ಎರಡನೆಯದಾಗಿ 'ರಾಜಕೀಯ

ಹೋರಾಟಗಳಲ್ಲಿ', ಕಾರ್ಮಿಕ ವಿವಾದಗಳಲ್ಲಿ ಒಳಗಾಗಿದ್ದವರ ವಿರುದ್ಧ ಹೂಡಲಾಗಿದ್ದ ಕಾನೂನು ಖಟ್ಲೆಗಳನ್ನು ಹಿಂದೆಗೆದುಕೊಂಡದ್ದು. ಆಹಾರ ಕೊರತೆ ಇದ್ದ ಸ್ಥಳಗಳಲ್ಲಿ ಸಾವಿರಾರು ನ್ಯಾಯಬೆಲೆ ಅಂಗಡಿಗಳನ್ನು ತೆರೆದದ್ದು, ಮತ್ತೊಂದು ಪ್ರಮುಖ ನಿರ್ಧಾರ.

ಕಮ್ಯುನಿಸ್ಟ್ ಸಚಿವರು ಕೆಲಸದಲ್ಲಿ ದಕ್ಷತೆಯ ಛಾಪನ್ನು ಮೂಡಿಸಿ ಕಾಂಗ್ರೆಸ್ ಸಚಿವರುಗಳಿಗಿಂತ ಭಿನ್ನವಾಗಿ ಎದ್ದು ಕಂಡರು. ಉದಾರಶೀಲವಾದ ಮಾಸಪತ್ರಿಕೆಯೊಂದು, ಅಸೂಯೆ ಪಡಬಹುದಾದಂಥ ಸಾರ್ವಜನಿಕ ಸೇವೆಗಾಗಿ ಹಾಗೂ ತಮ್ಮ ಸಂಪುಟಕ್ಕೆ ಜಾಗರೂಕ ಮನಸ್ಸಿನ, ವಿವೇಚನಾ ಶಕ್ತಿಯ, ಕಾರ್ಯದಕ್ಷತೆಯ ಗುಣಗಳನ್ನುಳ್ಳ, ಸಾಂಘಿಕ ತೀರ್ಮಾನಕ್ಕೆ ಬದ್ಧರಾಗುವಂಥ, ಮಂದಿಯ ಕಷ್ಟಕಾಲದಲ್ಲಷ್ಟೇ ಸೇವಾತನ ಮೆರೆಸದೆ ಸದಾ ಕಾರ್ಯಮಗ್ನರಾಗಿರುವಂಥ ಸಚಿವರುಗಳನ್ನು ನೇಮಿಸಿಕೊಂಡಿದ್ದಕ್ಕಾಗಿ ಇ.ಎಂ.ಎಸ್. ಅವರನ್ನು ಶ್ಲಾಘಿಸಿತ್ತು. ರಾಜ್ಯದ ಮೂಲೆಯೊಂದರಲ್ಲಿ ಕೆರೆದಂಡೆ ಒಡೆದಾಗ ಕೇಳಿ ಬಂದ ಆರ್ತನಾದಕ್ಕೆ ವಿ.ಆರ್. ಕೃಷ್ಣಯ್ಯರ್ ತುರ್ತು ಗಮನ ಹರಿಸಿದ್ದರು. ಕರೆ ಬಂದ ತಕ್ಷಣ ತಮ್ಮ ಪ್ರವಾಸ ಕಾರ್ಯಕ್ರಮ ರದ್ದುಗೊಳಿಸಿ ಆ ಹಳ್ಳಿಗೆ ಧಾವಿಸಿದ್ದರು. ತಕ್ಷಣ ರಿಪೇರಿ ಕೆಲಸಗಳಿಗೆ ಆಜ್ಞೆ ಮಾಡಿದ್ದರು, ಸ್ಥಳದಲ್ಲೇ ನಿಂತು ರಿಪೇರಿ ಕೆಲಸದ ಉಸ್ತುವಾರಿ ವಹಿಸಿದ್ದರು. ಅಲ್ಲದೆ ಭತ್ತದ ಬೆಳೆಯ ಹಾನಿಗೆ ಕಾರಣವಾದ, ಕೆರೆ ದುರಸ್ತಿಗೆ ಗಮನ ಹರಿಸಿದ ಅಧಿಕಾರಿಯ ವರ್ತನೆ ಬಗ್ಗೆ ತನಿಖೆಗೆ ಆದೇಶ ನೀಡಿದ್ದರು.

ಅಧಿಕಾರ ವಹಿಸಿಕೊಂಡ ಕಮ್ಯುನಿಸ್ಟರು ಸಂವಿಧಾನದ ಚೌಕಟ್ಟಿನೊಳಗೆ, ಕೇಂದ್ರದ ಹಣಕಾಸು ನೆರವನ್ನು ಪಡೆದುಕೊಂಡು ಯೋಜನಾ ಆಯೋಗದ ಶಿಫಾರಸುಗಳನ್ವಯ ಕೆಲಸ ಮಾಡುವುದಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಆದರೆ ಈ ಮಿತಿಗಳೊಳಗೆ ಅವರು ಮಾಡಬಹುದಾದ ಕೆಲಸಗಳು ಸಾಕಷ್ಟಿದ್ದವು. ಅವುಗಳಲ್ಲಿ ಪ್ರಮುಖವಾದ್ದು ಭೂ ಹಿಡುವಳಿಗೆ ಸಂಬಂಧಿಸಿದ್ದು. ಪುರಾತನವಾದ, ಅದಕ್ಷವಾದ ಹಾಗೂ ಅಸಮತೆಯಿಂದ ಕೂಡಿದ ಭೂಹಿಡುವಳಿ ಪದ್ಧತಿಯಲ್ಲಿ ಸುಧಾರಣೆ ಅತ್ಯಗತ್ಯವಾಗಿತ್ತು. ಇದು ಭೂಸುಧಾರಣೆಗೆ ಸರ್ಕಾರವನ್ನು ಬದ್ಧವಾಗಿಸಿತ್ತು. ಈ ಬದ್ಧತೆ ಹೇಗಿತ್ತೆಂದರೆ, ರೋನಾಲ್ಡ್ ಹೆರ್ರಿಂಗ್ ಬರೆದಿರುವಂತೆ, ಇದು ಕಾಂಗ್ರೆಸ್ ಆಡಳಿತ ಕಾಲದಲ್ಲಿ ಸಾಧಿಸಲಾಗದಿದ್ದ, ಆದರೆ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಮಾತ್ರ ಸಾಧ್ಯವಾದ ಸುಧಾರಣೆಯಾಗಿತ್ತು.

ಇ.ಎಂ.ಎಸ್. ನಂಬೂದಿರಿ ಪಾಡ್ ಅವರು ತಂದ ಭೂಸಾಗುವಳಿ ಸಂಬಂಧಿತ ಮಸೂದೆ ತುಂಬ ವಿನಮ್ರತೆ-ಗಾಂಭೀರ್ಯತೆಗಳಿಂದ ಕೂಡಿತ್ತು. ಇದರಲ್ಲಿ ಭೂಮಿಯ ಸಮಾಜೀಕರಣ ಅಥವಾ ಸಮಷ್ಟೀಕರಣವಿರಲಿಲ್ಲ. ಇದು, ಭೂಹೀನರಿಗೆ ಭೂಮಿ ಮಾಲಿಕತ್ವ ಅನುಗ್ರಹಿಸುವ ಕ್ರಮವಷ್ಟೇ ಆಗಿರಲಿಲ್ಲ. ಜಮೀನ್ದಾರರ ಅನುಪಸ್ಥಿತಿಯಲ್ಲಿ, ಅನುಪಸ್ಥಿತಿ ಮಾಲೀಕತ್ವದ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದ ಗೇಣಿದಾರ ಸಣ್ಣ ರೈತರ ಬದುಕಿಗೊಂದು ಭದ್ರತೆಯನ್ನು ಕಲ್ಪಿಸುವುದು ಈ ಮಸೂದೆಯ ಮುಖ್ಯ ಉದ್ದೇಶವಾಗಿತ್ತು. ಮನಸೋ ಇಚ್ಛೆ ರೈತರ ಒಕ್ಕಲನ್ನೆಬ್ಬಿಸುವ ಜಮೀನ್ದಾರಿ ಪ್ರವೃತ್ತಿಗೆ ಹೊಸ ಮಸೂದೆ ಕಡಿವಾಣ

ಹಾಕಿತ್ತು. ಗೇಣಿದರವನ್ನು ಕಡಿಮೆ ಮಾಡಿದ್ದು, ಗೇಣಿದಾರರ ಬಾಕಿಯನ್ನು ಮನ್ನಾ ಮಾಡಿದ್ದು, ಭೂಮಾಲೀಕತ್ವದ ಮೇಲೆ ಮಿತಿ ಹೇರಿದ್ದು, ಹೀಗೆ ಪಡೆಯಲಾದ ಭೂಮಿಯನ್ನು ಮರುಹಂಚಿಕೆ ಮಾಡಿದ್ದು ಇ.ಎಂ.ಎಸ್. ಅವರು ಕೈಗೊಂಡ ಪ್ರಮುಖ ಭೂಸುಧಾರಣಾ ಕ್ರಮಗಳಾಗಿದ್ದವು. ಈ ಕ್ರಮಗಳಿಂದ ಸಾವಿರಾರು ಮಂದಿ ಬಡ ಕೃಷಿಕರಿಗೆ, ಕೃಷಿ ಕಾರ್ಮಿಕರಿಗೆ ಹಾಗೂ ಇತರ ರೈತಾಪಿ ಜನರಿಗೆ ಸಹಾಯವಾಯಿತು. ಆದಾಗ್ಯೂ, ಇವೆಲ್ಲವೂ "ಕೆಂಪು ಪುಸ್ತಕ"ದ ನಿಗದಿತ ಕಾರ್ಯಕ್ರಮಗಳಿಗೆ ಅನುಗುಣವಾಗಿರಲಿಲ್ಲ. ಶಾಸ್ತ್ರೀಯ ಮಾರ್ಕ್ಸ್‌ವಾದಿ ಸಿದ್ಧಾಂತಗಳನ್ನು ಹಂತಹಂತವಾಗಿ ಜಾರಿಗೆ ತರುವ ಉಪಾಯ ಮಾರ್ಗದ ತಂತ್ರ ಹಿಡಿದು ವೈರುಧ್ಯಗಳನ್ನು ನಿವಾರಿಸುವ ಪ್ರಯತ್ನ ಮಾಡಲಾಯಿತು. ಗ್ರಾಮೀಣ ಭಾರತ ಇನ್ನೂ ಅರೆ ಊಳಿಗಮಾನ್ಯವಾಗಿದೆ ಎಂಬ ವಾದ ಮುಂದಿಡಲಾಯಿತು. ಊಳಿಗಮಾನ್ಯೇತರ ವರ್ಗವನ್ನು ಉದ್ದೇಶಿತ ಸುಧಾರಣೆಗಳ ಅಡಿಯಲ್ಲಿ ತರಲಾಗುವುದು. ಇದರಿಂದ ಭೂ ಬಂಡವಾಳಶಾಹಿ ತೊಲಗಿ ಸಮಾಜವಾದಿ ಕಾರ್ಯಕ್ರಮದ ಹೆದ್ದಾರಿಯಲ್ಲಿನ ಮುಂದಿನ ನಿಲ್ದಾಣಕ್ಕೆ ಹಾದಿ ಸುಗಮವಾಗುವುದೆಂದು ಕಮ್ಯುನಿಸ್ಟ್ ಸರ್ಕಾರದ ತರ್ಕವಾಗಿತ್ತು.

ಕೇರಳದ ಕಮ್ಯುನಿಸಂನ ಪ್ರಮಾಣಬದ್ಧ ಇತಿಹಾಸಕ್ಕೊಂದು ಉಪಶೀರ್ಷಿಕೆ ಇದೆ: "ರಾಜಕೀಯ ಅಡವಳಿಕೆಯ ಅಧ್ಯಯನ", (ಬೂರ್ಶ್ವಾ ಪ್ರಜಾಸತ್ತೆಗೆ ಅಳವಡಿಕೆ). ಕೃಷಿ ಸುಧಾರಣೆ ಬೂರ್ಶ್ವಾ ಪ್ರಜಾಸತ್ತೆಯಲ್ಲಿ ಕಮ್ಯುನಿಸ್ಟ್ ಸಿದ್ಧಾಂತ ಇಂಥ ಅಳವಡಿಕೆಯ ಒಂದು ಸ್ಪಷ್ಟ ಪುರಾವೆ. ಎರಡನೆಯದು, ಖಾಸಗಿ ಉದ್ಯಮಿಗಳಿಗೆ ಪ್ರೋತ್ಸಾಹ. ಇದು ನಿಶ್ಚಯವಾಗಿಯೂ ಕಾರ್ಯಕರ್ತರಲ್ಲಿ ಗೊಂದಲವುಂಟು ಮಾಡಿರಲಿಕ್ಕೆ ಸಾಕು. ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ವಿದೇಶೀಯರ ಮಾಲೀಕತ್ವದ ಟೀ, ರಬ್ಬರ್ ತೋಟಗಳನ್ನು ರಾಷ್ಟ್ರೀಕರಣಗೊಳಿಸುವ 'ಗುಮ್ಮ' ಇತ್ತು. ಚುನಾವಣೆಯ ನಂತರ ಇದನ್ನು ಸದ್ದುಗದ್ದಲವಿಲ್ಲದೆ ಕೈ ಬಿಡಲಾಯಿತು. ಕಮ್ಯುನಿಸ್ಟರು ಅಧಿಕಾರಕ್ಕೆ ಬಂದ ಕೆಲವೇ ತಿಂಗಳುಗಳಲ್ಲಿ ಕೇರಳ ಸರ್ಕಾರ ಭಾರತದ ಬೃಹತ್ ಬಂಡವಾಳಶಾಹಿಯಾದ ಬಿರ್ಲಾಗಳನ್ನು ಮಾವೂರಿನಲ್ಲಿ ರೇಯಾನ್ ಕಾರ್ಖಾನೆ ಸ್ಥಾಪಿಸಲು ಆಮಂತ್ರಿಸಿತು. ಬಿರ್ಲಾಗಳಿಗೆ ಸಹಾಯಧನದ ರೂಪದಲ್ಲಿ ಬೊಂಬು ಒದಗಿಸುವುದಾಗಿ ಸರ್ಕಾರ ಭರವಸೆ ನೀಡಿತು. ಟನ್ನಿಗೆ ಒಂದು ರೂಪಾಯಿ ದರದಲ್ಲಿ ಬೊಂಬು ಸರಬರಾಜು ಮಾಡಲು ಒಪ್ಪಿಕೊಂಡಿತು. ಮಾರುಕಟ್ಟೆಯಲ್ಲಿ ಬೊಂಬಿನ ದರ ಇದರ ಸಾವಿರಪಟ್ಟು ಹೆಚ್ಚಾಗಿತ್ತು. ಈ ಯೋಜನೆ ಬಂಡವಾಳಶಾಹಿಯ ಪರವಾಗಿಯೇ ಇತ್ತು. ಕಮ್ಯುನಿಸ್ಟರೆಂದರೆ ಹೇಸಿಗೆ ಪಡುತ್ತಿದ್ದ ಬಂಡವಾಳಿಗರೊಂದಿಗೆ ಬಾಂಧವ್ಯ ಸ್ಥಾಪಿಸುವ ಒಂದು ರಾಜಿ ಕ್ರಮವೇ ಆಗಿತ್ತು. ಇಂಥ ಕ್ರಮದಿಂದ ಕೇಂದ್ರ ಸರ್ಕಾರವೂ ಪ್ರಭಾವಿತವಾಗುವುದೆಂದು ಕೇರಳದ ಕಮ್ಯುನಿಸ್ಟ್ ನಾಯಕರ ಆಶಾಭಾವನೆಯಾಗಿತ್ತು. "ಆದರೆ ನವದೆಹಲಿಯಲ್ಲಿ ಗೃಹಸಚಿವ ಪಂತ್ ಸ್ಥಳೀಯ ಕಾಂಗ್ರೆಸ್ಸಿಗರೊಡನೆ ಸೇರಿಕೊಂಡು ಇದನ್ನು ತೀವ್ರವಾಗಿ ಖಂಡಿಸಿದರು, ಅಧಿಕಾರದಿಂದ ಹೊರಕ್ಕೆ ದಬ್ಬಿದರು." ಆದರೆ ವ್ಯವಹಾರ ದೃಷ್ಟಿಯ ಬಿರ್ಲಾಗಳ ಲೆಕ್ಕಾಚಾರವೇ ಬೇರೆಯಾಗಿತ್ತು. ಕೇರಳದ ಹೊರಗಿರುವ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ

ಕಾರ್ಮಿಕ ಸಂಘಗಳು ಸಿಪಿಐನ ಹತೋಟಿಯಲ್ಲಿದ್ದವು. ಕೇರಳದಲ್ಲಿ ಕಾರ್ಖಾನೆಯೊಂದನ್ನು ಸ್ಥಾಪಿಸುವುದರಿಂದ ಉಳಿದೆಡೆ ಕೈಗಾರಿಕಾ ಶಾಂತಿಗೆ ಸಹಾಯವಾಗಬಹುದೆಂದು ಬಿರ್ಲಾಗಳ ಆಲೋಚನೆಯಾಗಿತ್ತು. ಬಿರ್ಲಾ ಉದ್ಯಮ ಭವನದ ಪಿತಾಮಹ ಘನಶ್ಯಾಂ ದಾಸ್ ಬಿರ್ಲಾ, ಮುಖ್ಯಮಂತ್ರಿ ನಂಬೂದಿರಿ ಪಾಡರ ಅತಿಶಯವಾದ ಮೋಡಿಗೊಳಗಾದದ್ದು ನಂಬಲಸಾಧ್ಯವಾದ ಸಂಗತಿ ಎಂದು ಅಂಕಣಕಾರರೊಬ್ಬರು ಆಗ ಬರೆದಿದ್ದರು. "ಬಹುಶಃ ಅವರು, ತಮ್ಮ ಹಿತಾಸಕ್ತಿ ಕೇಂದ್ರಿತವಾಗಿರುವ ಬಂಗಾಳದಲ್ಲಿ ಕಮ್ಯುನಿಸ್ಟರ ಜಯಭೇರಿ ಎದುರಿಸಲು ಸಿದ್ಧರಾಗುತ್ತಿದ್ದರೇನೋ" ಎಂಬುದು ಈ ಅಂಕಣಕಾರನ ವ್ಯಾಖ್ಯಾನ.

ಕಮ್ಯುನಿಸ್ಟರು ಅಧಿಕಾರದಲ್ಲಿರಲಿ, ವಿರೋಧ ಪಕ್ಷದಲ್ಲಿರಲಿ ವ್ಯಾಪಕ ಆಸಕ್ತಿಯನ್ನು ಕೆರಳಿಸುತ್ತಿದ್ದರು, ಟೀಕೆ-ಟಿಪ್ಪಣಿಗಳಿಗೆ ಗ್ರಾಸವಾಗುತ್ತಿದ್ದರು. ಈ ಟೀಕೆ, ಟಿಪ್ಪಣಿಗಳು ಅತಿಯಾದ ಪ್ರಶಂಸೆಯಿಂದ ಹಿಡಿದು ಕಟು ವಿಮರ್ಶೆಯವರೆಗೂ ವ್ಯಾಪಿಸಿರುತ್ತಿದ್ದವು. ಜಾರ್ಜ್ ಆರ್ವೆಲ್‌ನ "ಹೋಮೇಜ್ ಟು ಕ್ಯಾಟಲೋನಿಯಾ" ಕಾದಂಬರಿಯಂತೆ ನವ ಅರುಣೋದಯವಾಗುತ್ತಿದೆಯೆಂದು ಬರೆದವರೂ ಉಂಟು. ಸಮಾಜವಾದಿ ಪುರುಷನಿಗೆ ಪ್ರಾಮಾಣಿಕವಾಗಿ ಪ್ರಣಾಮಗಳನ್ನು ಘೋಷಿಸುವ ಈ ಕಾದಂಬರಿಯನ್ನು ಕಮ್ಯುನಿಸ್ಟರ ಕಾರ್ಯ ಚಟುವಟಿಕೆಗಳು ನೆನಪಿಗೆ ತರುತ್ತಿವೆಯೆಂದು ಅತಿಯಾಗಿ ಅಟ್ಟಕ್ಕೇರಿಸಿದವರೂ ಇದ್ದರು. ಇ.ಎಂ.ಎಸ್. ಸರ್ಕಾರ ಅಧಿಕಾರ ಬಂದ ಮೊದಲ ವಾರ್ಷಿಕೋತ್ಸವದ ದಿನ ಪತ್ರಕರ್ತನೊಬ್ಬ ಚಹಾ ಹೋಟೆಲ್ ಒಂದಕ್ಕೆ ಹೋದಾಗ ತಾನು ಕಂಡ ಚಿತ್ರವನ್ನು ಈ ರೀತಿ ವರ್ಣಿಸಿದ್ದಾನೆ:

> *"ಚಹಾ ತಂದುಕೊಡುವ ಮಾಣಿ ಕೇಂದ್ರ ಬಿಂದು. ಅಲ್ಲಿ ನಡೆದಿದ್ದ ಬಹುಪಾಲು ಚರ್ಚೆಗೆ ವದಂತಿಗಳೇ ಆಧಾರವಾಗಿದ್ದವು. ಆದರೆ ಈ ಮಾಣಿ ನಂಬುತ್ತಿದ್ದದ್ದು ಕಮ್ಯುನಿಸ್ಟ್ ದಿನಪತ್ರಿಕೆಯಾದ 'ಜನಯುಗಂ'ನ ಕಥನಗಳನ್ನೇ. ಹದಿನಾರು ವರ್ಷದ ಮಾಣಿ ಶಾಲಾ ಮಾಸ್ತರನೊಬ್ಬನ ಜೊತೆ ವಾದಮಾಡುತ್ತಿದ್ದುದನ್ನು ನೋಡುವುದೇ ಒಂದು ಸಂತೋಷದಾಯಕ ಸಂಗತಿಯಾಗಿತ್ತು. ಶಾಲಾ ಮಾಸ್ತರ, ಇಪ್ಪತ್ತರ ವಯಸ್ಸಿನ ಒಬ್ಬ ಸರ್ಕಾರಿ ನೌಕರ, ಇವರೆಲ್ಲರ ಜೊತೆ ತನ್ನ ಧಣಿಯ ಸಮ್ಮುಖದಲ್ಲೇ ಮಾಣಿ ತನ್ನ ಕೆಲಸ ಮಾಡುತ್ತಲೇ ಚರ್ಚೆಯಲ್ಲಿ ತೊಡಗಿದ್ದ. ಇದು ಕೇರಳದಲ್ಲಿ ಮಾತ್ರ ಸಾಧ್ಯ."*

ಇದು ಒಂದು ನೋಟವಾದರೆ, ಇನ್ನೊಂದು "ಕೆಂಪು ಭಯೋತ್ಪಾದಕ" ನೋಟ. ಕೇರಳದಲ್ಲಿ, ಭವಿಷ್ಯದಲ್ಲಿ ವರ್ಗ ಸಮರ ಶುರುವಾಗಲಿದ್ದು ಪ್ರಳಯವೇ ಆಗಲಿದೆ ಎಂದು ಪತ್ರಿಕೆಯೊಂದು ಬರೆದಿತ್ತು. ಈ ಪತ್ರಿಕೆ ಪ್ರಕಾರ ವರ್ಗ ಸಮರ ಸನ್ನದ್ಧತೆಯಲ್ಲಿ ಸರ್ಕಾರ ಕೆಳವರ್ಗದ ಜೊತೆ ಶಾಮೀಲಾಗಿತ್ತು. ಲೇಖನದ ಕೆಲವು ತುಣುಕುಗಳು:

"ಕಾರ್ಮಿಕರು ಮತ್ತು ಕಂಪನಿಯ ಆಡಳಿತ ವರ್ಗದ ನಡುವೆ ಘರ್ಷಣೆ-ತಿಕ್ಕಾಟ ಸಂಭವಿಸಿದಲ್ಲಿ ಅದು ಉದ್ಯಮಗಳ ಮಾಲೀಕರಿಗೆ ಅಪಶಕುನವಿದ್ದಂತೆ, ಪೊಲೀಸರು ಕಾರ್ಮಿಕರ ಪರ ನಿಲ್ಲುತ್ತಾರೆ."

"ಜಮೀನ್ದಾರನೊಬ್ಬ ಅವರಿವರ ಕಿವಿಮಾತು ಕೇಳಿಸಿಕೊಂಡು ಕೃಷಿ ಕಾರ್ಮಿಕರ ಜೊತೆ ಜಗಳ ತೆಗೆದಲ್ಲಿ ಅದು ಜಮೀನ್ದಾರನ ಪಾಲಿಗೆ ಸಂಕಷ್ಟಗಳ ಸರಮಾಲೆಯೇ. ಇಂಥ ಸಂದರ್ಭಗಳಲ್ಲಿ ಪೊಲೀಸರಿಗೆ ಏನು ಮಾಡಬೇಕೆಂಬುದು ಗೊತ್ತು."

"ಊಳಿಡುವ ದೊಂಬಿಕಾರರು ಕಾಲೇಜ್ ಒಂದಕ್ಕೆ ಅಥವಾ ಬಿಷಪ್ ಒಬ್ಬರ ಅರಮನೆಗೆ ಮುತ್ತಿಗೆ ಹಾಕಿದಲ್ಲಿ ಅದನ್ನು ಜನಾಂದೋಲನವೆಂದು ಕರೆಯಲಾಗುವುದು. ನೊಂದ ವಿದ್ಯಾರ್ಥಿಗಳ ಸಂವಿಧಾನಾತ್ಮಕವಾದ ಶಾಂತಿಯುತ ಹೋರಾಟವೆಂದು ವಿಶ್ಲೇಷಿಸಲಾಗುವುದು."

VI

1957-58ರ ಚಳಿಗಾಲದಲ್ಲಿ ಹಂಗರಿಯ ಸಾಹಿತಿ ಜಾರ್ಜ್ ಮೈಕ್ಸ್ ಭಾರತಯಾತ್ರೆ ಕೈಗೊಂಡಿದ್ದ. ಇವನು ಕಮ್ಯುನಿಸ್ಟ್ ಬಣದಿಂದ ಹೊರಬಂದ ನಿರಾಶ್ರಿತ. ಹೊರಬಂದು ಲಂಡನ್ನಿನಲ್ಲಿ ಸುಖವಾಗಿ ನೆಲೆಸಿದ್ದ. ಕೇರಳ ವಿದ್ಯಮಾನ ಇವನಲ್ಲಿ ಆಸಕ್ತಿ ಕೆರಳಿಸಿತ್ತು. "ಪ್ರಜಾಸತ್ತಾತ್ಮಕ ಕೇಂದ್ರ ಸರ್ಕಾರಕ್ಕೂ ಕಮ್ಯುನಿಸ್ಟ್ ಸರ್ಕಾರಕ್ಕೂ ಎತ್ತಣಿಂದೆತ್ತಣ ಸಂಬಂಧ?" - ಇದು ಜಾರ್ಜ್ ಮೈಕ್ಸ್ ಪ್ರಶ್ನೆ. "ಕ್ಯಾಲಿಫೋರ್ನಿಯಾ ಅಥವಾ ವಿಸ್ಕಾನ್ಸಿನ್ ಧಿಡೀರನೆ ಕಮ್ಯುನಿಸ್ಟ್ ಆಗಿ ಪರಿವರ್ತನೆ ಹೊಂದಿದರೆ ಅಮೆರಿಕ ಆಡಳಿತ ಏನು ಮಾಡುತ್ತದೆ?" ಅದೇ ರೀತಿ, ತನ್ನ ಕುತ್ತಿಗೆಯ ಮೇಲೆ ಕುಳಿತಿರುವ ಪ್ರಜಾಸತ್ತಾತ್ಮಕ ಆಧಿಪತಿಗಳ ಬಗ್ಗೆ ಕಮ್ಯುನಿಸ್ಟ್ ಸರ್ಕಾರ ಹೇಗೆ ವರ್ತಿಸುತ್ತದೆ?

ಅಮೆರಿಕದ ಅಧ್ಯಕ್ಷರು ಇಂಥ ಪರಿಸ್ಥಿತಿಯಲ್ಲಿ ಹೇಗೆ ವರ್ತಿಸುತ್ತಿದ್ದರೆಂಬುದನ್ನು ಹೇಳಲಿಕ್ಕಾಗದು? ಅವರು ನೌಕಾ ಸೇನೆಯನ್ನು ಕಳುಹಿಸುತ್ತಿದ್ದರೆ? ಆದರೆ ಭಾರತದಲ್ಲಿ, ಆಗಿನ ಪ್ರಧಾನಮಂತ್ರಿ ಕಾದು ನೋಡುವ ನಿಲುವನ್ನು ತಾಳಿದ್ದರು. ಏಕೆಂದರೆ ಇ.ಎಂ.ಎಸ್. ಸರ್ಕಾರ ತಂದಿದ್ದ ಭೂಸುಧಾರಣೆ ಕಾಂಗ್ರೆಸ್ ಪಕ್ಷ ಮತದಾರರಿಗೆ ನೀಡಿದ್ದ ಭರವಸೆಯೇ ಆಗಿತ್ತು. ಹಾಗೆಯೇ ಕೇರಳ ಸಚಿವರುಗಳ ದೃಢತೆ, ಋಜುತ್ವ, ಪ್ರಾಮಾಣಿಕತೆಗಳು ಜವಹರಲಾಲ್ ನೆಹರೂ ಮೊದಲಾದ ಕಾಂಗ್ರೆಸ್ಸಿಗರಿಗೆ ಉತ್ತಮಾಂಶವಾಗಿಯೇ ಕಂಡುಬಂದಿದ್ದವು.

ಹೆಚ್ಚು ವಿವಾದಾತ್ಮಕವಾದದ್ದು ಕೇರಳ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತರಲು ಮುಂದಾದ ಕ್ರಮಗಳು. ಕೇರಳದಲ್ಲಿ ಖಾಸಗಿ ಶಾಲಾ ಕಾಲೇಜುಗಳಲ್ಲಿನ ದುರಾಚಾರಗಳನ್ನು ತಡೆಗಟ್ಟಲು 1957ರಲ್ಲಿ ಶಿಕ್ಷಣ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಕೇರಳದಲ್ಲಿ ಚರ್ಚ್, ನಾಯರ್ ಸೊಸೈಟಿ ಹಾಗೂ ಶ್ರೀ ನಾರಾಯಣ ಧರ್ಮ ಪರಿಪಾಲನಾ ಸಂಸ್ಥೆ, ಶಾಲಾ-ಕಾಲೇಜುಗಳನ್ನು ನಡೆಸುತ್ತಿದ್ದವು. ಆಡಳಿತವರ್ಗ ಮನಸೋ ಇಚ್ಛೆ ನೇಮಕ ಮಾಡುವ, ವಜಾಮಾಡುವ ಚಾಳಿ ಹೊಂದಿದ್ದವು. ಈ ಚಾಳಿಯನ್ನು ತಪ್ಪಿಸಲು ನೇಮಕಾತಿ ನಿಯಮಗಳನ್ನು ಮಸೂದೆಯಲ್ಲಿ ಗೊತ್ತುಪಡಿಸಲಾಗಿತ್ತು. ಜೊತೆಗೆ ವೇತನ ನಿಗದಿಪಡಿಸಲಾಗಿತ್ತು. ಇನ್ನೂ ಕೆಲವು ಸೇವಾ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಈ ಎಲ್ಲ ಕ್ರಮಗಳ ಮೂಲಕ ಶಿಕ್ಷಕರ ಸ್ಥಾನಮಾನ ಹೆಚ್ಚಿಸುವುದು ಮಸೂದೆಯ ಮುಖ್ಯ ಉದ್ದೇಶವಾಗಿತ್ತು. ಈ ಮಸೂದೆ ಗೊತ್ತುಪಡಿಸಿರುವ ನಿಯಮಗಳನ್ನು ಪಾಲಿಸದ ಶಾಲಾ ಕಾಲೇಜುಗಳನ್ನು ವಶಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನೂ ಸರ್ಕಾರಕ್ಕೆ ನೀಡಲಾಗಿತ್ತು.

ಈ ಮಸೂದೆ ವಿರೋಧಿಸುವವರ ನಾಯಕತ್ವವನ್ನು ಚರ್ಚ್ ವಹಿಸಿಕೊಂಡಿತ್ತು. ಚರ್ಚ್‌ನ ಲೌಕಿಕ ಹಾಗೂ ನೈತಿಕ ಬಲ, ಹೆಚ್ಚಾಗಿ ಅದು ಶಿಕ್ಷಣ ಸಂಸ್ಥೆಗಳ ಮೇಲೆ ಹೊಂದಿದ್ದ ಹತೋಟಿಯನ್ನೇ ಅವಲಂಬಿಸಿತ್ತು. ಕ್ರೈಸ್ತ ಪಾದ್ರಿಗಳು ಕಮ್ಯುನಿಸ್ಟ್ ವಿರೋಧಿಗಳಾಗಿದ್ದರು. ಈ ಕಮ್ಯುನಿಸ್ಟ್ ವಿರೋಧೀ ಭಾವನೆಯನ್ನು ತಮ್ಮ ಅನುಯಾಯಿಗಳ ತಲೆಯಲ್ಲಿ ತುಂಬುವುದರಲ್ಲಿ ಅವರು ಯಶಸ್ವಿಯಾಗಿದ್ದರು. ಉದಾಹರಣೆಗೆ ಹೇಳುವುದಾದರೆ, 1957ರ ಚುನಾವಣೆಯಲ್ಲಿ, ಕಮ್ಯುನಿಸ್ಟರು, ಸಿರಿಯನ್ ಕ್ರಿಶ್ಚಿಯನ್ ಸಮುದಾಯದ ಹೃದಯಭಾಗವಾದ ಕೊಟ್ಟಾಯಂ ಜಿಲ್ಲೆಯಲ್ಲಿ, 18 ಸ್ಥಾನಗಳ ಪೈಕಿ ಕೇವಲ ಮೂರು ಕ್ಷೇತ್ರಗಳಲ್ಲಿ ವಿಜಯಿಗಳಾಗಿದ್ದರು.

ಜೋಸೆಫ್ ಮುಂಡಸೇರಿ, ಆಗಿನ ಶಿಕ್ಷಣ ಸಚಿವರು. ಈತ ತ್ರಿಚೂರಿನ ಕಾಲೇಜೊಂದರಲ್ಲಿ ದಶಕಗಳ ಕಾಲ ಪ್ರಾಧ್ಯಾಪಕರಾಗಿದ್ದರು. ಶಿಕ್ಷಣ ವ್ಯವಸ್ಥೆಯೊಳಗಿನ ಭ್ರಷ್ಟಾಚಾರವನ್ನು ಬಲ್ಲವರಾಗಿದ್ದರು. ಈ ಭ್ರಷ್ಟಾಚಾರಗಳನ್ನು ಸರಿಪಡಿಸುವ ದಿಟ್ಟ ಕ್ರಮವಾಗಿತ್ತು ಅವರು ಮಂಡಿಸಿದ್ದ ಮಸೂದೆ. ಆದರೆ ಶಿಕ್ಷಣ ಸಂಸ್ಥೆಗಳನ್ನು ಕೇವಲ ಆಧುನೀಕರಣಗೊಳಿಸುವುದಷ್ಟೇ ಸರ್ಕಾರದ ಆಸಕ್ತಿಯಾಗಿರಲಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಿಕ್ಷಣ ಕ್ರಮ ಹಾಗೂ ಪಠ್ಯಕ್ರಮಗಳಲ್ಲಿ ಕ್ರಾಂತಿಕಾರಕ ಬದಲಾವಣೆ ತರುವುದು ಸರ್ಕಾರದ ಉದ್ದೇಶವಾಗಿತ್ತು. ಹೊಸ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸಲಾಯಿತು. ಈ ಪಠ್ಯ ಪುಸ್ತಕಗಳಲ್ಲಿ ಇತಿಹಾಸವನ್ನು ಕಮ್ಯುನಿಸ್ಟ್ ಕಣ್ಣುಗಳಿಂದ ನೋಡಲಾಗಿತ್ತು. ಇದನ್ನು ಸೂಕ್ಷ್ಮವಾಗಿ ಮಾಡಲಾಗಿತ್ತಾದರೂ ಅದೇನೂ ಅತಿ ಸೂಕ್ಷ್ಮವಾಗಿರಲಿಲ್ಲ. ಆದರೆ ಕ್ರಿಶ್ಚಿಯನ್ ಅಧ್ಯಾಪಕರ ದೃಷ್ಟಿ ಭಿನ್ನವಾಗಿತ್ತು. ಅವರ ನಿಲುವು ಬೇರೆಯದೇ ಆಗಿತ್ತು. ಆ ಕಾಲದಲ್ಲಿ ಕೇರಳದ ಶಾಲಾ ಕಾಲೇಜುಗಳಲ್ಲಿ ರಷ್ಯನ್ ಕ್ರಾಂತಿಯ ಎರಡು ಬಗೆಯ ಪಠ್ಯಗಳು ಚಾಲ್ತಿಯಲ್ಲಿದ್ದವು.

> *ಹೊಸ ಪಾಠಾಂತರ: ರಾಜಮನೆತನಕ್ಕೆ ಸೇರಿದ ಜಾರ್ಜ್ ಲಾವೋಫ್ ಎಂಬುವರ ನೇತೃತ್ವದಲ್ಲಿ ಗಣರಾಜ್ಯ ಸರ್ಕಾರವೊಂದನ್ನು ಸ್ಥಾಪಿಸಲಾಯಿತು. ಈ ಸರ್ಕಾರ ಜನಬೆಂಬಲ ಗಳಿಸಲಿಲ್ಲ. ಯುದ್ಧವನ್ನು ಕೊನೆಗಾಣಿಸುವುದರಲ್ಲಿ, ಸಾಮಾಜಿಕ-ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವುದರಲ್ಲಿ ಈ ಸರ್ಕಾರ ವಿಫಲವಾಯಿತು. ಈ ಕಾಲದಲ್ಲಿ ಲೆನಿನ್ ರಷ್ಯಕ್ಕೆ ಆಗಮಿಸಿದರು. ಇದು ಜನತೆಗೆ ಸ್ಫೂರ್ತಿ, ಪ್ರೇರಣೆಗಳನ್ನು*

ನೀಡಿತು. ಲೆನಿನ್ ಅಧ್ಯಕ್ಷತೆಯಲ್ಲಿ ಹೊಸ ಸರ್ಕಾರವೊಂದನ್ನು ರಚಿಸಲಾಯಿತು. ಮೊದಲಿಗೆ ಲೆನಿನ್ ಜರ್ಮನಿ ಸರ್ಕಾರದೊಂದಿಗೆ ಬ್ರೆಸ್ಟ್-ಲಿಟೊವೆಸ್ಕ್ ಒಪ್ಪಂದ ಮಾಡಿಕೊಂಡರು. ಆನಂತರ ಸಾಗುವಳಿ ಭೂಮಿಯನ್ನು ಹಾಗೂ ಮೂಲವಸ್ತುಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಜಮೀನ್ದಾರರ ಮಾಲಿಕತ್ವದಲ್ಲಿದ್ದ ಎಲ್ಲ ಕೃಷಿ ಭೂಮಿಯನ್ನು ವಶಪಡಿಸಿಕೊಂಡು ರೈತರಿಗೆ ಹಂಚಲಾಯಿತು. ಕಾರ್ಖಾನೆಗಳೆಲ್ಲ ಸರ್ಕಾರದ ಸ್ವತ್ತಾದವು. ಕ್ರೈಸ್ತ ಪಾದ್ರಿಗಳ ಹಕ್ಕುಬಾಧ್ಯತೆಗಳನ್ನು, ಅಂತಸ್ತುಗಳನ್ನು ರದ್ದುಗೊಳಿಸಲಾಯಿತು. ಗಣಿಗಳು, ರೈಲ್ವೆ ಮತ್ತು ಬ್ಯಾಂಕುಗಳನ್ನು ಸರ್ಕಾರ ವಶಪಡಿಸಿಕೊಂಡಿತು. ಹೀಗೆ, ಎಲ್ಲರಿಗೂ ಸೋಜಿಗವುಂಟುಮಾಡುವ ರೀತಿಯಲ್ಲಿ ಸಮಾಜವಾದ ಆಧರಿಸಿದ ಹೊಸ ಪ್ರಪಂಚದ ಅವತಾರವಾಗಿತ್ತು. ರಷ್ಯದಲ್ಲಿ ಸಮಾಜವಾದವನ್ನು ಹೀಗೆ ಬೆಳೆಸಲಾಯಿತು, ಕಾರ್ಲ್ ಮಾರ್ಕ್ಸ್‌ನ ಕನಸುಗಳನ್ನು ನನಸುಗೊಳಿಸಲಾಯಿತು.

ಹಳೆಯ ಪಾಠಾಂತರ:

ಲೆನಿನ್ ಕಾರ್ಮಿಕರ ಸರ್ಕಾರವನ್ನು ಸ್ಥಾಪಿಸಿದರು. ಆದರೆ ಮೊದಲನೆಯ ಚುನಾವಣೆಯಲ್ಲಿ ಬೋಲ್‌ಶೆವಿಕ್ಕರಿಗೆ ಬಹುಮತ ಬರಲಿಲ್ಲ. ಆದಾಗ್ಯೂ ಅಧಿಕಾರದಲ್ಲೇ ಉಳಿಯುವ ಸಲುವಾಗಿ ರಷ್ಯಾದ ಶಾಸನಸಭೆಯನ್ನು, ಅದು ಪ್ರತಿಗಾಮಿ ಎಂಬ ಕಾರಣದ ಸಲುವಾಗಿ ವಿಸರ್ಜಿಸಿದರು. ಬೋಲ್‌ಶೆವಿಕ್ಕರನ್ನು ಬೆಂಬಲಿಸದ ಸ್ಥಳೀಯ ಸಭೆಗಳನ್ನು ರದ್ದುಗೊಳಿಸಲಾಯಿತು. ಖಾಸಗಿ ಶಾಲಾ ಶಿಕ್ಷಣವನ್ನು ರದ್ದುಗೊಳಿಸಲಾಯಿತು. ಶಿಕ್ಷಣವನ್ನು ಸರ್ಕಾರ ವಹಿಸಿಕೊಂಡಿತು. ಕ್ರೈಸ್ತ ಪಾದ್ರಿಗಳಿಗೆ ಹಾಗೂ ಶ್ರೀಮಂತ ವರ್ಗದವರಿಗೆ ಮತದಾನದ ಹಕ್ಕನ್ನು ನಿರಾಕರಿಸಲಾಯಿತು. ಕಮ್ಯುನಿಸ್ಟ್ ಸಿದ್ಧಾಂತ ಹಿಂಸೆಯನ್ನು ಉತ್ತೇಜಿಸುತ್ತದೆ ಹಾಗೂ ಸರ್ವಶಕ್ತನಾದ ಭಗವಂತನನ್ನು ನಂಬುವುದಿಲ್ಲ. ಮನುಷ್ಯನಿಗೆ ಆತ್ಮವಿದೆ ಎಂಬುದನ್ನು ಕಮ್ಯುನಿಸ್ಟರು ಮರೆತಿದ್ದಾರೆ. ಕಮ್ಯುನಿಸ್ಟ್ ರಷ್ಯಾದಲ್ಲಿರುವುದು ಏಕ ಪಕ್ಷ ವ್ಯವಸ್ಥೆಯ ಸರ್ಕಾರ. ಅಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಾಗಲೀ ಧಾರ್ಮಿಕ ಸ್ವಾತಂತ್ರ್ಯವಾಗಲೀ ಇಲ್ಲ. ಇಂಥ ಇನ್ನೂ ಅನೇಕ ಲೋಪದೋಷಗಳು ಕಣ್ಣಲ್ಲಿ ಕಣ್ಣಿಟ್ಟು ನೋಡುವ ವಿಮರ್ಶಕರಿಗೆ ಕಾಣಸಿಗಬಹುದು.

ಕೇರಳ ಸಮಾಜ ಯಾವ ರೀತಿಯದಾಗಬೇಕು ಎಂಬುದಕ್ಕೆ ಇಲ್ಲಿ ಎರಡು ಪರ್ಯಾಯ ದೃಷ್ಟಿಕೋನಗಳಿದ್ದವು. ರಷ್ಯಕ್ರಾಂತಿಯ ಎರಡು ನಕಲಿ ನೋಟಗಳನ್ನು ಇಲ್ಲಿ ಕೊಡಲಾಗಿತ್ತು. ಕ್ರಿಶ್ಚಿಯನ್ನರ ಪಾಠಾಂತರ ಹೇಗೆ ಕಮ್ಯುನಿಸ್ಟರನ್ನು ಕೆರಳಿಸುತ್ತದೆ ಹಾಗೂ ಕಮ್ಯುನಿಸ್ಟರ ಪಾಠಾಂತರ ಹೇಗೆ ಕ್ರಿಶ್ಚಿಯನ್ನರನ್ನು ಕೆರಳಿಸುತ್ತದೆ ಎನ್ನುವುದು ಯಾರಿಗಾದರೂ ಅರ್ಥವಾಗುವಂಥಾದ್ದೇ. ಪಠ್ಯಪುಸ್ತಕ ರಾದ್ಧಾಂತ ಈಗಾಗಲೇ ಹೊತ್ತಿ ಉರಿಯುತ್ತಿದ್ದ ಬೆಂಕಿಗೆ ತುಪ್ಪವನ್ನು ಸುರಿಯಿತು. ಕೇರಳದ ಅರ್ಥವ್ಯವಸ್ಥೆಯಲ್ಲಿ ಮುಖ್ಯವಾಗಿದ್ದ ನಾಯರ್

ಸಮುದಾಯ ಪಠ್ಯಪುಸ್ತಕ ವಿವಾದದಲ್ಲಿ ವಿರೋಧಿ ಕ್ರಿಶ್ಚಿಯನ್ನರ ಜೊತೆ ಸೇರಿಕೊಂಡಿತು. ಕ್ರಿಶ್ಚಿಯನ್ನರು ಮೊದಲಿನಿಂದಲೂ ಕಾಂಗ್ರೆಸ್ಸನ್ನು ಬೆಂಬಲಿಸುತ್ತಿದ್ದರು. ನಾಯರುಗಳಲ್ಲಿ ಅರ್ಧದಷ್ಟು ಮಂದಿ ಕಾಂಗ್ರೆಸ್ ಬೆಂಬಲಿಗರಾದರೆ ಇನ್ನರ್ಧದಷ್ಟು ಮಂದಿ ಕಮ್ಯುನಿಸ್ಟರಿಗೆ ಮತಹಾಕಿದ್ದರು. ಆದರೆ ನಾಯರ್ ಸಮಾಜ ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದುದರಿಂದ ಹೊಸ ಮಸೂದೆಯಿಂದಾಗಿ ಅವರು ಕಮ್ಯುನಿಸ್ಟರ ವಿರುದ್ಧ ತಿರುಗಿಬಿದ್ದರು. ಕ್ರಿಶ್ಚಿಯನ್ನರ ಜೊತೆ ಒಂದು ರೀತಿಯ ಅನುಕೂಲ ಸಿಂಧು ಮೈತ್ರಿ ಮಾಡಿಕೊಂಡರು.

ಸ್ಥಳೀಯ ಕಾಂಗ್ರೆಸ್ ಪಕ್ಷ ಇನ್ನೂ ಹೆಚ್ಚು ಸಮಯ ಸಾಧಕತನ ತೋರಿತ್ತು. ಚುನಾವಣೆಯಲ್ಲಿ ಸೋತಿದ್ದ ಕಾಂಗ್ರೆಸ್ಸಿಗೆ ಶಿಕ್ಷಣ ವಿರೋಧಿಸುವುದು ಅಧಿಕಾರಕ್ಕೆ ರಹದಾರಿಯಾಗಿ ಕಂಡಿತು. ಕಾಂಗ್ರೆಸ್ ನಾಯಕರು ಕಮ್ಯುನಿಸ್ಟ್ ವಿರೋಧಿ ಜನಪ್ರಿಯ ರಂಗವೊಂದನ್ನು ಕಟ್ಟುವ ಆಲೋಚನೆ ಮಾಡಿದರು. ಇದು ಪ್ರತಿಗಾಮಿ ಕ್ಯಾಥೋಲಿಕ್ ಚರ್ಚ್, ಜಮೀನ್ದಾರರು ಹಾಗೂ ತೋಟಗಳ ಮಾಲೀಕರ ಬೆಂಬಲಗಳಿಸುವ ತಂತ್ರವಾಗಿತ್ತು. ಆದರೆ ಕೇಂದ್ರ ಸರ್ಕಾರದಲ್ಲಿನ ನಾಯಕರ ಸಮಾಜವಾದಿ ಚಿಂತನೆಗೆ ವಿರುದ್ಧವಾಗಿತ್ತು. 1958ರ ಉತ್ತರಾರ್ಧದಲ್ಲಿ ಕೇರಳದಲ್ಲಿ ಮುಷ್ಕರಗಳು, ಪ್ರತಿಭಟನಾ ಮೆರವಣಿಗೆಗಳು ಸರಣಿಯಂತೆ ನಡೆದವು. ತ್ರಿಚೂರಿನಲ್ಲಿ ಇಂಥ ಘಟನೆಯೊಂದರಲ್ಲಿ ಪೊಲೀಸರು ಕಾಂಗ್ರೆಸ್ ಪಕ್ಷದ ಸದಸ್ಯರಿದ್ದ ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸಿದಾಗ ಆರು ಮಂದಿ ಸತ್ತಿದ್ದರು.

ವಿರೋಧಗಳಿಂದ ಕೈಕಟ್ಟಿದಂತಾದ ಇ.ಎಂ.ಎಸ್. ನಂಬೂದಿರಿ ಪಾಡರು ತಮ್ಮ ವಾದ ಸಮರ್ಥನೆಗೆ ರಾಷ್ಟ್ರದ ಪ್ರಮುಖ ಆಂಗ್ಲ ಸಾಪ್ತಾಹಿಕವನ್ನು ಬಳಸಿಕೊಂಡರು. ತಮ್ಮ ಸರ್ಕಾರ ಜಮೀನ್ದಾರರ ವಿರುದ್ಧಕ್ರಮ ಕೈಗೊಂಡ ಕಾರಣ ವಿರೋಧಿಗಳು ಕಳಂಕ ತರುವಂಥ ಅಪಪ್ರಚಾರ ನಡೆಸುತ್ತಿದ್ದರೆಂದೂ ಸಂವಿಧಾನದ ಚೌಕಟ್ಟಿನೊಳಗೇ ಕ್ರಮಗಳನ್ನು ಕೈಗೊಂಡಿದ್ದಾಗ್ಯೂ ಅಪಪ್ರಚಾರ ಮುಂದುವರಿದಿದೆಯೆಂದೂ ಪತ್ರಿಕೆ ಮೂಲಕ ಜನತೆಗೆ ತಿಳಿಸುವ ಪ್ರಯತ್ನ ಮಾಡಿದರು. ಕಾಂಗ್ರೆಸ್ ನಾಯಕರೊಬ್ಬರು ಇದೇ ಪತ್ರಿಕೆಯ ಅಂಕಣದಲ್ಲಿ ಕೇರಳದಲ್ಲಿ ಕಾಯಿದೆ ಸುವ್ಯವಸ್ಥೆ ಹದಗೆಟ್ಟಿದ್ದು ಅಭದ್ರತೆ ತಲೆದೋರಿದೆಯೆಂದು ಕಟುವಾಗಿ ಟೀಕಿಸಿ ಬರೆದರು. ತಮ್ಮ ದೃಷ್ಟಿ-ಧೋರಣೆಗಳನ್ನು ಒಪ್ಪದಿರುವವರ ವಿರುದ್ಧ ಸೇಡಿನ ಕ್ರಮ ಕೈಗೊಳ್ಳಲಾಗುತ್ತಿದ್ದು ಇದರಿಂದ ಅಭದ್ರತೆಯ ಭೀತಿ ಮೂಡಿದೆಯೆಂಬುದು ಕಾಂಗ್ರೆಸ್ ನಾಯಕರ ವಾದವಾಗಿತ್ತು. 1959ರ ಫೆಬ್ರುವರಿಯಲ್ಲಿ ಸರ್ವೋಚ್ಚ ನ್ಯಾಯಾಲಯ ಈ ಸಂಬಂಧಿತ ಮನವಿ ಅರ್ಜಿಯೊಂದನ್ನು ತಿರಸ್ಕರಿಸಿತು. ನಂತರ ರಾಷ್ಟ್ರಪತಿಗಳು ಕೇರಳ ಶಿಕ್ಷಣ ಮಸೂದೆಗೆ ಅಂಗೀಕಾರ ನೀಡಿದರು. ಅದೇ ತಿಂಗಳು ಶ್ರೀಮತಿ ಇಂದಿರಾ ಗಾಂಧಿಯವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಚುನಾಯಿತರಾದರು. 1933ರಲ್ಲಿ ನೆಲ್ಲಿ ಸೇನ್‌ಗುಪ್ತ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರ ನಂತರ ಅಧ್ಯಕ್ಷ ಗಾದಿಗೇರಿದ ಪ್ರಥಮ ಮಹಿಳೆ ಶ್ರೀಮತಿ ಇಂದಿರಾಗಾಂಧಿಯವರು. ಇದರಿಂದ ನಿಮ್ಮ ಮನೆವಾರ್ತೆಗೆ ತೊಂದರೆ

ಯಾಗುವುದಿಲ್ಲವೇ ಎಂದು ಪ್ರಶ್ನಿಸಿದಾಗ ಶ್ರೀಮತಿ ಗಾಂಧಿಯವರು "ನನ್ನ ಮನೆಗೆಲಸಕ್ಕೆ ಹತ್ತು ನಿಮಿಷ ಮಾತ್ರ ಹಿಡಿಯುತ್ತದೆ" ಎಂದು ಉತ್ತರಿಸಿದ್ದರು.

ಈ ಸಮಯದಲ್ಲಿ ಕಾಂಗ್ರೆಸ್ ಮೂರು ವಿಭಿನ್ನ ದನಿಗಳಲ್ಲಿ ಮಾತಾಡುತ್ತಿತ್ತು. ಕೇರಳದಲ್ಲಿ ಕಾಂಗ್ರೆಸ್ ಸದಸ್ಯರು ಉಗ್ರ ಚಳವಳಿಗಳಲ್ಲಿ ನಿರತರಾಗಿದ್ದರು. ಕೇಂದ್ರ ನಾಯಕತ್ವ ಸಮ್ಮತಿ ಇಲ್ಲದಿದ್ದರೂ ಇಂಥ ಚಳುವಳಿಯನ್ನು ಅನುಮೋದಿಸಿತ್ತು. ನೆಹರೂ ಚಳವಳಿಗೆ ಸಮ್ಮತಿ ನೀಡಿರಲಿಲ್ಲವಾದರೂ ಚಳವಳಿ ತಡೆಯಲು ಏನೊಂದು ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಏತನ್ಮಧ್ಯೆ ನಾಯರ್ ಸಮುದಾಯದ ಅಗ್ರಗಣ್ಯ ನಾಯಕರಾದ ಮನ್ನಾತ್ ಪದ್ಮನಾಭನ್ ಪ್ರವೇಶದೊಂದಿಗೆ ಚಳವಳಿ ತೀವ್ರಗೊಂಡಿತು. ನಾಯರ್ ಸೊಸೈಟಿಯ ಸಂಸ್ಥಾಪಕರಾಗಿದ್ದ ಪದ್ಮನಾಭನ್ ಸೊಸೈಟಿ ನಡೆಸುತ್ತಿದ್ದ ಶಾಲಾಕಾಲೇಜುಗಳ ಆಡಳಿತದಲ್ಲಿ ಸಕ್ರಿಯರಾಗಿದ್ದರು. ನಿರಾಡಂಬರ ವ್ಯಕ್ತಿಯಾಗಿದ್ದ ಮನ್ನಾತ್ ಪಂಚೆ ಮಾತ್ರ ಉಡುತ್ತಿದ್ದು ಮಲೆಯಾಳಂ ಭಾಷೆ ಮಾತ್ರ ಮಾತನಾಡುತ್ತಿದ್ದರು. ಪಾಲ್ಘಾಟ್‌ನಲ್ಲಿ ಎಂಜಿನಿಯರಿಂಗ್ ಕಾಲೇಜೊಂದನ್ನು ತೆರೆಯಲು ಕಮ್ಯುನಿಸ್ಟ್ ಸರ್ಕಾರ ಅನುಮತಿ ನಿರಾಕರಿಸಿದಾಗ ಪದ್ಮನಾಭನ್ ಕಮ್ಯುನಿಸ್ಟ್‌ರ ವಿರುದ್ಧ ಸಡ್ಡು ಹೊಡೆದು ನಿಂತರೆಂದು ಹೇಳಲಾಗಿತ್ತು. ಈಗ ಅವರು ಕಮ್ಯುನಿಸ್ಟರನ್ನು ಗಂಟುಮೂಟೆ ಸಮೇತ ಕೇರಳದಿಂದ ಮಾತ್ರವಲ್ಲ ಭಾರತದಿಂದಲೇ ತೊಲಗಿಸಲು, ಅವರ ಪಿತೃಭೂಮಿಯಾದ ರಷ್ಯಕ್ಕೆ ಹೊಡೆದಟ್ಟುವ ಪಣತೊಟ್ಟರು. ಆಗ ಪದ್ಮನಾಭನ್‌ಗೆ ಎಂಭತ್ತರ ಪ್ರಾಯ. ಈ ಇಳಿವಯಸ್ಸಿನಲ್ಲಿ ಇದು ಸಾಧ್ಯವೇ ಎಂದು ಸಂದರ್ಶಕನೊಬ್ಬ ಪ್ರಶ್ನಿಸಿದಾಗ ಅವರು ಪಾಂಡವರನ್ನು ಧರ್ಮ ಯುದ್ಧದಲ್ಲಿ ತೊಡಗಿಸಿದ ಭೀಷ್ಮ ಪಿತಾಮಹನನ್ನು ನೆನಪು ಮಾಡಿಕೊಟ್ಟರು.

ಕೇರಳದ ಘರ್ಷಣೆಯನ್ನು, ರಾಜಕೀಯ ಸಿದ್ಧಾಂತಿ ಡಬ್ಲ್ಯು.ಎಸ್. ಮಾರಿಸ್ ಜೋನ್ಸ್ ಮೂರು ನುಡಿಗಟ್ಟುಗಳಲ್ಲಿ ಭಾರತದ ರಾಜಕಾರಣದ ಗುಣಸ್ವಭಾವಗಳನ್ನು ಗುರುತಿಸುವ ಮುಖೇನ ಚೆನ್ನಾಗಿ ಅರ್ಥೈಸಿದ್ದಾರೆ. ಮೊದಲನೆಯದು, ಆಧುನಿಕ. ಈ ಆಧುನಿಕತೆ ಶಾಂತಿ ಮತ್ತು ನ್ಯಾಯ ಕುರಿತ ವಿಶ್ವದ ಕಲ್ಪನೆಯನ್ನು ಆಧರಿಸಿದ್ದು ಸಂಸತ್ತಿನಲ್ಲಿ, ನ್ಯಾಯಾಲಯದಲ್ಲಿ ಹಾಗೂ ಆಂಗ್ಲ ಪತ್ರಿಕೆಗಳಲ್ಲಿ ಇದು ಅಭಿವ್ಯಕ್ತಿಗೊಳ್ಳುತ್ತಿತ್ತು. ಎರಡನೆಯದು, ಸಾಂಪ್ರದಾಯಿಕ. ಇದು ಆದಿಕಾಲದಿಂದ ಇರುವ ನಿಷ್ಠೆಯನ್ನು ಆಧರಿಸಿದ್ದು, ಒಬ್ಬನ ಜಾತಿ ಅಥವಾ ಧರ್ಮಕ್ಕೆ ಸಂಬಂಧಿಸಿದ ನಿಷ್ಠೆ.

ಮೊದಲ ಘಟ್ಟದಲ್ಲಿ ಶಿಕ್ಷಣ ಮಸೂದೆ ವಿವಾದ, ಆಧುನಿಕ ಭಾರತದಲ್ಲಿ ಎಲ್ಲೆಡೆ ಕಂಡುಬರುತ್ತಿದ್ದ ಸಾಂಪ್ರದಾಯಿಕ ರಾಜಕಾರಣ ಮತ್ತು ಆಧುನಿಕ ರಾಜಕಾರಣ ನಡುವಣ ಘರ್ಷಣೆಯಾಗಿತ್ತು. ಪದ್ಮನಾಭನ್ ತಮ್ಮೊಡನೆ ಮೂರನೆಯ ನುಡಿಗಟ್ಟೊಂದನ್ನು ತಂದಿದ್ದರು. ಅದು, ಸಂತತನದ ಪಾವಿತ್ರ್ಯ. ಇದು ಭಾರತದ ರಾಜಕಾರಣದಲ್ಲಿ ಸ್ವಲ್ಪಮಟ್ಟಿಗೆ ಪ್ರಭಾವ ಬೀರಿತ್ತು. ವಿನೋಬಾ ಭಾವೆಯವರ ಸಮಾಜ ಸೇವೆಯನ್ನು ನಿದರ್ಶನವಾಗಿ ನೋಡಬಹುದು. ಮನ್ನಾತ್ ಈ ಸಂತ ಪಾವಿತ್ರ್ಯತೆಯನ್ನು ನೇರವಾಗಿ ಇನ್ನೆರಡು ಗುಣಸ್ವಭಾವಗಳ

ಜೊತೆಗೂಡಿಸಿದರು. ಇದು ಗಾಂಧೀಜಿಯವರಿಗಿಂತ ಹೆಚ್ಚಿನ ಪರಿಣಾಮ ಉಂಟುಮಾಡಿತು. ಗಾಂಧೀಜಿಯವರು ರಾಜಕೀಯದಿಂದ ಸ್ವಾರ್ಥಕ್ಕಾಗಿ ಏನನ್ನೂ ಅಪೇಕ್ಷಿಸದ ಸಂತನಂತೆ ನಡೆದುಕೊಂಡಿದ್ದರಿಂದ ಜನ ಅವರಿಂದ ಪ್ರಭಾವಿತರಾದರು. ಅವರು ತೋರಿದ ಮಾರ್ಗದಲ್ಲಿ ನಡೆದಿದ್ದರು. ಮನ್ನಾತ್ ಇದೇ ದಾಳ ಬೀಸಿದ್ದರು.

ಮನ್ನಾತ್ ಅವರ ಪ್ರವೇಶ ಚಳವಳಿಗೆ ಆನೆಬಲವನ್ನು ತಂದುಕೊಟ್ಟಿತು. ಈ ಪಿತಾಮಹನ ಮಾತಿನಲ್ಲೇ ಹೇಳುವುದಾದರೆ ಕೇರಳದಲ್ಲಿ ಕಮ್ಯುನಿಸ್ಟರಲ್ಲದವರೆಲ್ಲರೂ ಈ ಚಳವಳಿಯಲ್ಲಿ ಪಾಲ್ಗೊಂಡಿದ್ದರು. 1959ರ ಮೆ 1ರಂದು ಚಂಗನಚೇರಿಯಲ್ಲಿ ಸಮುದಾಯಗಳ ಸಂಘ ಸಂಸ್ಥೆಗಳ ಸಮಾವೇಶ ನಡೆಯಿತು. ಈ ಸಮಾವೇಶದಲ್ಲಿ ಮನ್ನಾತ್ ನಾಯಕತ್ವದಲ್ಲಿ ವಿಮೋಚನಾ ಸಮರ ಸಮಿತಿಯನ್ನು ರಚಿಸಲಾಯಿತು. ಮುಂದಿನ ದಿನಗಳಲ್ಲಿ ವಿಮೋಚನಾ ಸಮಿತಿ ಸದಸ್ಯರು ಶಾಲೆ-ಕಾಲೇಜುಗಳಿಗೆ, ಚರ್ಚು-ಮಸೀದಿ-ದೇವಾಲಯಗಳಿಗೆ, ರೈತರು, ಕಾರ್ಮಿಕರು, ವರ್ತಕರ ಮನೆಗಳಿಗೆ ವಿಮೋಚನಾ ಸಮರದ ಸಂದೇಶ ಮುಟ್ಟಿಸಿದರು.

ಜೂನ್ ತಿಂಗಳ ಶುರುವಿಗೇ ಚಳವಳಿ ಬಿರುಸುಗೊಂಡು ಸಾವಿರಾರು ಮಂದಿ ಸ್ವಯಂ ಸೇವಕರು ಬಂಧನಕ್ಕೆ ಸಿದ್ಧರಾಗಿ ನಿಂತರು. ಹರತಾಳ, ಬಂದ್, ಇತ್ಯಾದಿ ನಾನಾ ಬಗೆಯಲ್ಲಿ ಚಳವಳಿ ತೀವ್ರಗೊಂಡಿತು. ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ಸರ್ಕಾರಿ ಕಚೇರಿಗಳು, ಕಾರ್ಖಾನೆಗಳನ್ನು ಮುಚ್ಚಬೇಕಾದಂಥ ಪರಿಸ್ಥಿತಿ ಉಂಟಾಯಿತು. ಅನೇಕ ಸಲ ಮನ್ನಾತ್ ಅವರೇ ಸ್ವತಃ ಪ್ರತಿಭಟನಾ ಮೆರವಣಿಗೆಗೆ ನಾಯಕತ್ವ ವಹಿಸುತ್ತಿದ್ದರು. ಮನ್ನಾತ್ ಬಿಳಿ ಕುದುರೆಯ ಮೇಲೆ ಕುಳಿತು ಮೆರವಣಿಗೆಯ ಮುಂಚೂಣಿಯಲ್ಲಿರುತ್ತಿದ್ದರು. ತಲೆಯ ಮೇಲೆ ರೇಶಿಮೆ ಛತ್ರಿಯ ನೆರಳಿರುತ್ತಿತ್ತು. ನಾಯರ್ ಯುವಕರು ಅವರ ಮುಂದೆ ಕತ್ತಿ ಝಳಪಿಸಿ ಹೆಜ್ಜೆ ಹಾಕುತ್ತಿದ್ದರು.

ಕಮ್ಯುನಿಸ್ಟರು ಸಂಘಟಿತ ಕ್ರೌರ್ಯದಿಂದ ಇದಕ್ಕೆ ಪ್ರತ್ಯುತ್ತರ ನೀಡಿದರು. ಒಂದು ಅಂದಾಜಿನಂತೆ ಈ ಚಳವಳಿ ಕಾಲದಲ್ಲಿ ಪೊಲೀಸರು 248 ಬಾರಿ ಲಾಠಿ ಪ್ರಹಾರ ನಡೆಸಿದ್ದರು. ಗೋಲಿಬಾರ್‌ಗೆ ಲೆಕ್ಕವಿಲ್ಲ. ಪೊಲೀಸರ ಗೋಲಿಬಾರ್‌ನಲ್ಲಿ ಕನಿಷ್ಠ ಇಪ್ಪತ್ತು ಮಂದಿ ಸತ್ತು ನೂರಾರು ಮಂದಿ ಗಾಯಗೊಂಡಿದ್ದರು. ಇವರಲ್ಲಿ ಮಹಿಳೆಯರೂ ಮಕ್ಕಳೂ ಸೇರಿದ್ದರು. ಪೊಲೀಸರು ಲಾಠಿ ಪ್ರಹಾರ ನಡೆಸಿದಾಗಲೆಲ್ಲ ಪ್ರತಿಭಟನಾಕಾರರ ಸಂಖ್ಯೆ ಹೆಚ್ಚುತ್ತಿತ್ತು. ಹದಿನೈದು ಸಾವಿರಕ್ಕೂ ಹೆಚ್ಚು ಮಂದಿ ಪ್ರತಿಭಟನಾಕಾರರನ್ನು ಪೊಲೀಸರು ಜೈಲಿಗೆ ದೂಡಿದ್ದರು. ಇವರಲ್ಲಿ ಕಾಲು ಭಾಗ ಮಹಿಳೆಯರು.

VII

ಇಂಥ ಒಂದು ಅಪ್ರಿಯವಾದ ಪರಿಸ್ಥಿತಿ ಉಂಟಾಗಲು ಯಾರು ಕಾರಣ? ಜನತಾ ಸರ್ಕಾರದ ಮುಖ್ಯ ನೇತಾರರಾಗಿ ಪ್ರತಿದಿವಸ ನೂರಾರು-ಸಾವಿರಾರು ಜನರನ್ನು ನೋವಿನ

ಕೂಪಕ್ಕೆ ತಳ್ಳಿದ ಇ.ಎಂ.ಎಸ್. ನಂಬೂದಿರಿ ಪಾಡರೇ? ಅಥವಾ ತಮ್ಮ ಪಕ್ಷ ನ್ಯಾಯೋಚಿತವಾಗಿ ಗೆದ್ದ ಸರ್ಕಾರವೊಂದನ್ನು ಪದಚ್ಯುತಿಗೊಳಿಸಲು ನಿರತವಾದುದನ್ನು ಗಮನಿಸುತ್ತಲೇ ಇದ್ದ ಸಂವಿಧಾನಬದ್ಧ ಪ್ರಜಾಸತ್ತಾತ್ಮಕವಾದಿ ಜವಹರಲಾಲ್ ನೆಹರೂ ಅವರೆ? ನೆಹರೂ ಅವರಿಗೆ ಎರಡೂ ನಿಟ್ಟಿನಿಂದ ಕಂಬನಿಯ ಕುಯಿಲು ತುಂಬಿ ಬಂದಿತ್ತು. ಏಕೆಂದರೆ ಕೇರಳ ಸರ್ಕಾರ ಕೈಗೊಂಡ ಭೂಸುಧಾರಣೆ ಮತ್ತು ಶೈಕ್ಷಣಿಕ ನೀತಿ ಸುಧಾರಣೆಗಳು ಅವರಿಗೆ ಅಂಗೀಕಾರಾರ್ಹವಾಗಿದ್ದವು.

ಚಳವಳಿಯ ಯಶಸ್ಸಿನಿಂದ ಉತ್ತೇಜಿತರಾದ ಕೇರಳ ಕಾಂಗ್ರೆಸ್ ನಾಯಕರು ಸಂವಿಧಾನದ 356ನೇ ವಿಧಿಯನ್ನು ಜಾರಿಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾರಂಭಿಸಿದರು. ಈ ವಿಧಿಯನ್ವಯ ರಾಷ್ಟ್ರಪತಿಗಳು, ಕಾಯಿದೆ ಸುವ್ಯವಸ್ಥೆ ಕುಸಿದು ಬಿದ್ದಿದೆಯೆಂಬ ಕಾರಣ ಕೊಟ್ಟು ಸರ್ಕಾರವನ್ನು ವಜಾ ಮಾಡಬಹುದಿತ್ತು. ಹಿಂದೆ ಈ ವಿಧಿಯನ್ನು ನಾಲ್ಕು ಸಲ ಬಳಸಲಾಗಿತ್ತು. ಅದೂ ಅಧಿಕಾರಾರೂಢ ಪಕ್ಷ, ಒಡಕು ಅಥವಾ ಪಕ್ಷಾಂತರದಿಂದಾಗಿ ಬಹುಮತ ಕಳೆದುಕೊಂಡಾಗ.

ಪರಿಸ್ಥಿತಿಯ ಪ್ರತ್ಯಕ್ಷ ಅವಲೋಕನಕ್ಕಾಗಿ ನೆಹರೂ ಅವರು 1959ರ ಜೂನ್‌ನಲ್ಲಿ ಕೇರಳಕ್ಕೆ ಭೇಟಿಕೊಟ್ಟರು. ಅಲ್ಲಿ ಎರಡು ಬಣಗಳ ನಡುವೆ ದ್ವೇಷದ ಗೋಡೆಗಳು ಎದ್ದಿರುವುದನ್ನು ಕಂಡು, ಎರಡು ಬಣಗಳೂ ಎರಡು ಯುದ್ಧೋನ್ಮತ್ತ ರಾಷ್ಟ್ರಗಳೆಂಬಂತೆ ಅನ್ನಿಸಿಕೆ ಉಂಟಾಯಿತು ಅವರಲ್ಲಿ. ನೆಹರೂ ತುಂಬ ಜಾಗ್ರತರಾದರು. ಆದರೆ ಇ.ಎಂ.ಎಸ್. ಸರ್ಕಾರವನ್ನು ವಜಾ ಮಾಡುವಂತೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡುವ ಆತುರವನ್ನು ಅವರು ತೋರಲಿಲ್ಲ. ಆದರೆ ಮಗಳು ಇಂದಿರಾಗಾಂಧಿಗೆ ಇಂಥಾ ಸಾವಧಾನ ಪ್ರವೃತ್ತಿ ಇರಲಿಲ್ಲ. ಕೇರಳದಲ್ಲಿ ಎಂದೋ ರಾಷ್ಟ್ರಪತಿ ಆಳ್ವಿಕೆ ಬರಬೇಕಾಗಿತ್ತು ಎಂಬುದು ಆಕೆಯ ಅಭಿಪ್ರಾಯವಾಗಿತ್ತು. ದೆಹಲಿಯಲ್ಲಿ ಮಾಡಿದ ಭಾಷಣವೊಂದರಲ್ಲಿ ಇಂದಿರಾಗಾಂಧಿ ಹೇಳಿದ್ದರು:

> *"ಕೇರಳ ಅಗ್ನಿಕುಂಡದಲ್ಲಿ ಬೇಯುತ್ತಿರುವಾಗ ಅಲ್ಲಿನ ಜನತೆಯ ಸಹಾಯಕ್ಕೆ ಧಾವಿಸುವುದು ಕೇಂದ್ರದ ಕರ್ತವ್ಯವಾಗುತ್ತದೆ. ಕಮ್ಯುನಿಸ್ಟರ ಆಳ್ವಿಕೆಯ ದುರಾಡಳಿತ ನಮ್ಮ ದೇಶದ ಇತಿಹಾಸದಲ್ಲೇ ಕಂಡು ಕೇಳಿದ ರೀತಿಯದಾಗಿದೆ. ಇಂಥದೊಂದು ಕ್ರಮಕ್ಕೆ ಕಾನೂನಿನ ಆಕ್ಷೇಪಣೆಗಳಿಗೆ ಹೆದರಿ ಕೂರಲಾಗದು."*

ಮನ್ನಾತ್ ಮತ್ತು ಅವರ ಹೋರಾಟಗಾರರು ಅಂತಿಮ ಬಲಾಬಲ ಪ್ರದರ್ಶನಕ್ಕೆ ಸಿದ್ಧತೆ ನಡೆಸಿದ್ದರು. ಈಗ ಮುಸ್ಲಿಂ ಲೀಗ್ ಸಹ ಹೋರಾಟದಲ್ಲಿ ಸೇರಿಕೊಂಡಿತು. ಇದರಿಂದ ಚಳವಳಿ ಇನ್ನಷ್ಟು ಔಚಿತ್ಯಪೂರ್ಣವೆನ್ನಿಸಿಕೊಂಡಿತು. ಜುಲೈ ತಿಂಗಳು ಪೂರ್ತಿ ಪ್ರತಿಭಟನಾ ಮೆರವಣಿಗೆಗಳು ನಡೆದವು. ಪ್ರತಿಭಟನಾಕಾರರು ಪೊಲೀಸರನ್ನು ಹಿಂಸಾಚಾರಕ್ಕೆ ಪ್ರಚೋದಿಸುತ್ತಿದ್ದರು. ಒಂದು ಬೀಭತ್ಸಕರ ಘಟನೆಯಲ್ಲಿ ಪೊಲೀಸರು ಬೆಸ್ತರ ಗ್ರಾಮವೊಂದರ ಮೇಲೆ

ದಾಳಿ ನಡೆಸಿ ಹಾದಿಹೋಕರ ಮೇಲೆ ಯದ್ವಾತದ್ವಾ ಗುಂಡು ಹಾರಿಸಿದರು. ಇಲ್ಲಿ ಗರ್ಭಿಣಿ ಮಹಿಳೆ ಮತ್ತು ಆಕೆಯ ಇಬ್ಬರು ಬಂಧುಗಳು ಪೊಲೀಸರ ಗುಂಡಿಗೆ ಬಲಿಯಾಗಿದ್ದರು.

ವಿಮೋಚನಾ ಸಮರ ಸಮಿತಿ ಆಗಸ್ಟ್ 9ರಂದು ಶೂನ್ಯ ದಿನಾಚರಣೆಯನ್ನು ಘೋಷಿಸಿತು. ಅಂದು ಎಲ್ಲ ವರ್ಗ ಮತ್ತು ಸಮುದಾಯಗಳನ್ನು ಪ್ರತಿನಿಧಿಸುವ 50 ಸಾವಿರ ಸ್ವಯಂ ಸೇವಕರು ತಿರುವನಂತಪುರಕ್ಕೆ ಮುತ್ತಿಗೆ ಹಾಕಿ ಆಡಳಿತವನ್ನು ಸ್ಥಗಿತಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜುಲೈ 26ರಂದು ರಾಜ್ಯದ ವಿವಿಧ ಭಾಗಗಳಿಂದ ತಿರುವನಂತಪುರಕ್ಕೆ ಜನ ಬರಲಾರಂಭಿಸಿದರು. "ಕಮ್ಯುನಿಸ್ಟರು, ಕಗ್ಗೊಲೆ ಅಥವಾ ಸೋಲು ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಕಾಲ ಸನ್ನಿಹಿತವಾಗುತ್ತಿತ್ತು." ರಾಜ್ಯಪಾಲರು, ಮಧ್ಯಪ್ರವೇಶಿಸುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದರು. ಇದು ಕಾಂಗ್ರೆಸ್ ಅಧ್ಯಕ್ಷೆ ಇಂದಿರಾಗಾಂಧಿಯವರ ಕೈಯ್ಯನ್ನು ಬಲಗೊಳಿಸಿತ್ತು. ಅವರ ತಂದೆ ಪ್ರಧಾನಮಂತ್ರಿಯವರು ಆಖೈರಾಗಿ ಮಗಳ ಒತ್ತಡಕ್ಕೆ ಮಣಿದರು. ಮಂತ್ರಿಮಂಡಲದ ವಜಾ ಸನ್ನಿಹಿತವಾಗಿದೆಯೆಂದು ನೆಹರೂ ಅವರು ನಂಬೂದಿರಿ ಪಾಡರಿಗೆ ಪತ್ರ ಬರೆದರು. "ಪರಿಸ್ಥಿತಿ ಮತ್ತಷ್ಟು ಕ್ಷೀಣಿಸಲು ಇನ್ನು ಬಿಡಲಾಗದು. ಸತತ ಘರ್ಷಣೆ ಮತ್ತು ಜನರನ್ನು ಕಷ್ಟನಷ್ಟಗಳಿಗೆ ದೂಡುತ್ತಿರುವ ಪರಿಸ್ಥಿತಿಯನ್ನು ಹೀಗೆ ಬಿಡಲಾಗದು. ನಿಮ್ಮ ಸರ್ಕಾರದ ಹಿತದೃಷ್ಟಿಯಿಂದಲೂ ಕೇಂದ್ರ ಈಗ ಮಧ್ಯ ಪ್ರವೇಶ ಮಾಡುವುದು ಉಚಿತವೆಂದು ನಮಗನ್ನಿಸುತ್ತಿದೆ" ಎಂದು ನೆಹರೂ ಪತ್ರದಲ್ಲಿ ವಿಶದಪಡಿಸಿದ್ದರು.

ಆರು ತಿಂಗಳ ನಂತರ ಕೇರಳದಲ್ಲಿ ಮತ್ತೆ ಚುನಾವಣೆ ನಡೆಯಿತು. ಸಮಾಜವಾದಿ ಪಕ್ಷ ಮತ್ತು ಮುಸ್ಲಿಂ ಲೀಗ್‌ನೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡ ಕಾಂಗ್ರೆಸ್ "ಪ್ರಜಾಪ್ರಭುತ್ವ ಮತ್ತು ಕಮ್ಯುನಿಸ್ಟ್ ಸಿದ್ಧಾಂತ" ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡುವಂತೆ ಮತದಾರರಿಗೆ ಮನವಿ ಮಾಡಿತು. ನೆಹರೂ ಹಲವಾರು ಪ್ರಮುಖರನ್ನೊಳಗೊಂಡ ಪ್ರಚಾರದ ನಾಯಕತ್ವ ವಹಿಸಿದ್ದರು. 'ವಿಮೋಚನಾ ಹೋರಾಟದಲ್ಲಿ' ಪೊಲೀಸರ ಗುಂಡಿಗೆ ಬಲಿಯಾದ ಗರ್ಭಿಣಿ ಮಹಿಳೆ ಫ್ಲೋರಿಮಾತಾಳ ಭಾವಚಿತ್ರವನ್ನು ಪ್ರಚಾರದಲ್ಲಿ ಧಾರಾಳವಾಗಿ ಬಳಸಲಾಯಿತು. ಚುನಾವಣೆಯಲ್ಲಿ ಶೇ 84ರಷ್ಟು ದಾಖಲೆ ಮತದಾನವಾಯಿತು. ಕಾಂಗ್ರೆಸ್ 60 ಸ್ಥಾನಗಳನ್ನು ಗೆದ್ದರೆ 31 ಕ್ಷೇತ್ರಗಳಲ್ಲಿ ಮಿತ್ರಪಕ್ಷಗಳು ಜಯಗಳಿಸಿದ್ದವು. 127 ಸದಸ್ಯಬಲದ ವಿಧಾನ ಸಭೆಯಲ್ಲಿ ಕಮ್ಯುನಿಸ್ಟರ ಬಲ 26ಕ್ಕೆ ಕುಸಿಯಿತು. ಚುನಾವಣಾ ಫಲಿತಾಂಶ ನಂಬೂದಿರಿ ಪಾಡ್ ಸರ್ಕಾರದ ವಜಾವನ್ನು ಸಮರ್ಥಿಸುವಂತಿತ್ತು. ಆದರೆ ಸರ್ವೆಪಲ್ಲಿ ಗೋಪಾಲ್ ಅವರು ಬೆರಳು ಮಾಡಿ ಹೇಳಿರುವಂತೆ–

> "ವಜಾ ನಿರ್ಧಾರ, ರಾಜಕಾರಣದಲ್ಲಿ ನ್ಯಾಯನೀತಿಬದ್ಧ ನಡವಳಿಕೆಗೆ ಹೆಸರಾಗಿದ್ದ ನೆಹರೂ ಅವರ ಕೀರ್ತಿ ಪ್ರತಿಷ್ಠೆಗಳಿಗೆ ಅಂಟಿದ ಕಳಂಕವಾಯಿತು. ದೀರ್ಘಾವಧಿ ದೃಷ್ಟಿಯಿಂದ ಅವರ ಸ್ಥಾನ ದುರ್ಬಲಗೊಂಡಿತ್ತು."

VIII

ಸ್ವಾತಂತ್ರ್ಯ ಬಂದ ಹೊಸತರ ಆ ದಿನಗಳನ್ನು ನೆನಪಿಸಿಕೊಳ್ಳಿ. ಸರಿಸುಮಾರು 1947-49ರ ಅವಧಿಯ ದಿನಗಳು. ಕಾಂಗ್ರೆಸ್, ಎಡ ಹಾಗೂ ಬಲಪಂಥೀಯರ ಉಗ್ರಗಾಮಿತ್ವದ ಸವಾಲುಗಳನ್ನು ಎದುರಿಸುತ್ತಿದ್ದ ಕಾಲ ಅದು. ಇದು ಮಿಥ್ಯಾ ಸ್ವಾತಂತ್ರ್ಯ ಎಂದು ಬೊಬ್ಬೆ ಹೊಡೆಯುತ್ತ, ಉದಯೋನ್ಮುಖ ಭಾರತ ಸರ್ಕಾರದ ವಿರುದ್ಧ ಕಮ್ಯುನಿಸ್ಟರು ರಕ್ತ ಕ್ರಾಂತಿಯನ್ನು ಸಾರಿದ್ದರು. ಇನ್ನೊಂದೆಡೆ ಆರ್.ಎಸ್.ಎಸ್. ಹಿಂದೂ ಪಾಕಿಸ್ತಾನವೊಂದನ್ನು ಸೃಷ್ಟಿಸಲು ಪ್ರತಿಗಾಮಿ ಶಕ್ತಿಗಳನ್ನು ಸಂಘಟಿಸುತ್ತಿತ್ತು. ಪ್ರಜಾಸತ್ತಾತ್ಮಕ ಸಂವಿಧಾನವೊಂದನ್ನು ರಚಿಸುವ ಮೂಲಕ, ಚುನಾವಣೆ ಗೆಲ್ಲುವ ಮೂಲಕ ಹಾಗೂ ಆಧುನಿಕ ಬಹು ಸಂಸ್ಕೃತಿಯ ಮೂಲ ತತ್ವಗಳನ್ನು ಜಾರಿಗೊಳಿಸುವ ಮೂಲಕ ಈ ಬೆದರಿಕೆಗಳನ್ನು ಯಶಸ್ವಿಯಾಗಿ ಮಣಿಸಲಾಗಿದೆಯೆಂದು ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ ಕೊಚ್ಚಿಕೊಳ್ಳುತ್ತಿದ್ದವು.

ಈಗ, ಒಂದು ದಶಕದ ನಂತರ ಕಾಂಗ್ರೆಸ್ ಮತ್ತೊಮ್ಮೆ ರಾಜಕೀಯ ದಿಗಂತದ ದೂರತೀರದ ಶಕ್ತಿಗಳಿಂದ ಆಕ್ರಮಣಕ್ಕೊಳಗಾಗಿತ್ತು. ಈ ಬಾರಿ ಎಡಪಂಥೀಯರ ಸಡ್ಡು-ಸವಾಲುಗಳು ಪ್ರಜಾಸತ್ತಾತ್ಮಕವಾಗಿದ್ದು ಹೆಚ್ಚು ಅಪಾಯವುಂಟುಮಾಡುವಷ್ಟು ಸಮರ್ಥವಾಗಿದ್ದವು. ಬಡವರಿಗೆ ಜಮೀನು ಮರುಹಂಚಿಕೆ ಮಾಡುವುದು, ಶಿಕ್ಷಣ ಸೌಲಭ್ಯ ಒದಗಿಸುವುದು ಇವೇ ಮೊದಲಾದ ಕ್ರಮಗಳ ಮೂಲಕ ಯಶಸ್ವೀ ಸಮಾಜ ಸುಧಾರಣೆ ಇ.ಎಂ.ಎಸ್. ಸರ್ಕಾರದ ಗುರಿಯಾಗಿತ್ತು. ಇದು ರಾಷ್ಟ್ರ ರಾಜಕಾರಣದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇತ್ತು. ಅಂದರೆ ಬೇರೆ ರಾಜ್ಯಗಳ ಚುನಾವಣೆಯ ಮೇಲೆ ಪ್ರಭಾವ ಬೀರಿ ಕಾಂಗ್ರೆಸ್ಸೇತರ ಪಕ್ಷಗಳ ವಿಜಯಕ್ಕೆ ಹಾದಿ ಸುಗಮವಾಗಬಹುದಿತ್ತು.

ಹಾಗೆಯೇ ಬಲಪಂಥೀಯರಿಂದಲೂ ಹೊಸ ಸವಾಲುಗಳು ಉದ್ಭವಿಸಿದ್ದವು. ಈ ಹೊಸ ಸವಾಲು ಹಿರಿಯ ಕಾಂಗ್ರೆಸ್ ರಾಜಕಾರಣಿ ಚಕ್ರವರ್ತಿ ರಾಜಗೋಪಾಲಾಚಾರಿ-ರಾಜಾಜಿಯವರಿಂದ ಒದಗಿ ಬಂದಿತ್ತು. ಬಂಗಾಳದ ಗೌರ್ನರ್, ಗೌರ್ನರ್ ಜನರಲ್ ಆಗಿದ್ದ, ಕೇಂದ್ರದ ಮಾಜಿ ಸಚಿವ ರಾಜಾಜಿಯವರಿಗೆ ಮದ್ರಾಸ್ ಪ್ರಾಂತ್ಯದ ಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. 1954ರ ಏಪ್ರಿಲ್‌ವರೆಗೆ ರಾಜಾಜಿ ಈ ಸ್ಥಾನದಲ್ಲಿದ್ದರು. ಆಗ ಪ್ರಭಾವಶಾಲಿ ಹಿಂದುಳಿದ ವರ್ಗಗಳ ನಾಯಕ ಕೆ. ಕಾಮರಾಜ್ ಮುಖ್ಯಮಂತ್ರಿಯ ಸ್ಥಾನ ವಹಿಸಿಕೊಳ್ಳುವುದು ಸೂಕ್ತವೆಂದು ಕಾಂಗ್ರೆಸ್ ಪಕ್ಷಕ್ಕೆ ಅನ್ನಿಸಿತು. ಹೀಗೆ ಮಾಜಿ ಮುಖ್ಯಮಂತ್ರಿಯೂ ಆದ ರಾಜಾಜಿಯವರು ಸಣ್ಣ ಮನೆಯೊಂದರಲ್ಲಿ ವಾಸ್ತವ್ಯ ಹೂಡಿ ಓದು-ಬರಹಗಳಲ್ಲಿ ತೊಡಗಿಕೊಂಡಿದ್ದರು. ರಾಜಾಜಿ ತಮಿಳಿನಲ್ಲಿ ಸಣ್ಣ ಕತೆಗಳನ್ನು ಬರೆಯುತ್ತಿದ್ದರು ಹಾಗೂ ರಾಮಾಯಣ-ಮಹಾಭಾರತಗಳಿಗೆ ಅರ್ಥಪೂರ್ಣ ಪಾಠಾಂತರಗಳನ್ನು ಬರೆದಿದ್ದರು.

ಆದರೆ ಸಾಹಿತ್ಯ ಮತ್ತು ತತ್ವಶಾಸ್ತ್ರಗಳು ಸಾರ್ವಜನಿಕ ಜೀವನದ ವಿದ್ಯಮಾನಗಳಿಗೆ ಸಾಟಿಯಲ್ಲ ಎನ್ನಿಸಿರಬೇಕು. ರಾಜಾಜಿ ಆಗಿಂದಾಗ್ಗೆ ರಾಜಕೀಯ ವ್ಯಾಖ್ಯಾನಗಳನ್ನು

ಬರೆಯಲಾರಂಭಿಸಿದರು. ಅಮೆರಿಕ-ರಷ್ಯಗಳ ನಡುವಣ ಶಸ್ತ್ರಾಸ್ತ್ರ ಪೈಪೋಟಿ ಬಗ್ಗೆ ಬರೆಯಲಾರಂಭಿಸಿದರು. ಈ ವಿಷಯಗಳಲ್ಲಿ ಅವರು ನೆಹರೂ ನಿಲುವನ್ನೇ ಅನುಸರಿಸಿದ್ದರು. ಆನಂತರ ಎರಡನೆ ಪಂಚವಾರ್ಷಿಕ ಯೋಜನೆ ಬಂತು. ಈ ಯೋಜನೆಯಲ್ಲಿ ಭಾರತ ಸರ್ಕಾರ ಸಮಾಜವಾದಿ ಅರ್ಥವ್ಯವಸ್ಥೆಗೆ ಬದ್ಧವಾಗಿತ್ತು. ಈ ವೇಳೆಗೆ ರಾಜಾಜಿ ದೇಶದ ಆಗುಹೋಗುಗಳ ಬಗ್ಗೆಯೂ ಬರೆಯಲಾರಂಭಿಸಿದ್ದರು. ಈ ಬರವಣಿಗೆಗಳಲ್ಲಿ ರಾಜಾಜಿ ಪ್ರಧಾನ ಮಂತ್ರಿಯವರಿಗೆ ವಿಲಕ್ಷಣವಾಗಿ ಕಂಡರು. ಭಿನ್ನಮತ ಕಾಣಲಾರಂಭಿಸಿದರು.

ಭಿನ್ನಮತ ಹೆಚ್ಚಾಗಿ ರಾಜಕೀಯದ್ದಾಗಿತ್ತು. ಬಲವಾದ ವಿರೋಧ ಪಕ್ಷದ ಗೈರು ಹಾಜರಿಯಲ್ಲಿ ಕಾಂಗ್ರೆಸ್ ಸಂತೃಪ್ತ ಮನೋಭಾವ ಬೆಳೆಸಿಕೊಳ್ಳುತ್ತಿದೆ ಎಂಬುದು ರಾಜಾಜಿಯವರ ಅಭಿಪ್ರಾಯವಾಗಿತ್ತು. 1956ರ ಅಕ್ಟೋಬರ್‌ನಲ್ಲಿ ಅವರು ಕಾಂಗ್ರೆಸ್ಸಿನೊಳಗೇ ಒಂದು ವಿರೋಧಿ ಬಣದ ಅಗತ್ಯವಿದೆ ಎಂಬ ತಮ್ಮ ಎಣಿಕೆಯನ್ನು ಬಹಿರಂಗಪಡಿಸಿದರು. ಇಂಥದೊಂದು ಬಣ ಇಲ್ಲದಿದ್ದಲ್ಲಿ ಕಾಂಗ್ರೆಸ್ ಎಲ್ಲ ಬಗೆಯ ಸ್ವಾರ್ಥಿಗಳಿಗೆ, ಮಹತ್ವಾಕಾಂಕ್ಷಿಗಳಿಗೆ ಒಂದು ಬೇಟೆಯ ತಾಣವಾಗಿಬಿಡಬಹುದು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಕಾಂಗ್ರೆಸ್ ಈ ಸಲಹೆಯನ್ನು ತಳ್ಳಿಹಾಕಿತು. ಹೀಗಾಗಿ ರಾಜಾಜಿ ಹೊರಗಿನಿಂದಲೇ ಕಾಂಗ್ರೆಸ್ ವಿರೋಧಕ್ಕೆ ನೀರೆರೆಯಲಾರಂಭಿಸಿದರು. 1958ರ ಮೇ ತಿಂಗಳಲ್ಲಿ ಅವರೊಂದು ಲೇಖನ ಪ್ರಕಟಿಸಿದರು. ಅದರ ಶೀರ್ಷಿಕೆ ಹೀಗಿತ್ತು: "ಸ್ವತಂತ್ರ ಆಲೋಚನೆ ಬೇಕಾಗಿದೆ". "ಭಾರತದಲ್ಲಿ ಸ್ವತಂತ್ರ ಚಿಂತನೆ, ಆಲೋಚನೆಗಳೇ ಇಲ್ಲವಾಗಿದ್ದು ಇದಕ್ಕೆ ಗಮನಾರ್ಹ ವಿರೋಧವಿಲ್ಲದ ಜನಪ್ರಿಯ ನಾಯಕರ ದೀರ್ಘಕಾಲದ ಆಡಳಿತವೇ ಕಾರಣವಿದ್ದೀತು" ಎಂದು ರಾಜಾಜಿ ಬರೆದಿದ್ದರು. ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ, ವಿಭಿನ್ನವಾಗಿ ಯೋಚಿಸುವ, ಜನಸಾಮಾನ್ಯರ ಕ್ಷೇಮಕಲ್ಯಾಣಗಳ ಉದ್ದೇಶವುಳ್ಳ ವಿರೋಧ ಪಕ್ಷದ ಅಗತ್ಯವಿದೆ. ಈ ವಿರೋಧ ಪಕ್ಷದ ಗುರಿ ಬಡಬಗ್ಗರನ್ನು ಹುಸಿ ಆಶ್ವಾಸನೆಗಳಿಂದ ನಂಬಿಸಿ ಓಟುಗಳಿಸುವುದಷ್ಟೇ ಆಗಬಾರದು, ಅಧಿಕಾರದಲ್ಲಿರುವ ಪಕ್ಷಕ್ಕಿಂತ ಹೆಚ್ಚಿನದನ್ನು ಅದು ಜನತೆಗೆ ಕೊಡಬೇಕು. ಅದು ನ್ಯಾಯನೀತಿ ತರ್ಕಗಳಿಗೆ ಸ್ಪಂದಿಸಬೇಕು. ಅಂಥದೊಂದು ವಿರೋಧ ಪಕ್ಷದ ಅಗತ್ಯವಿದೆ ಎನ್ನುವುದು ರಾಜಾಜಿಯವರ ಅಭಿಮತವಾಗಿತ್ತು.

ನೆಹರೂ ಮತ್ತು ರಾಜಾಜಿ ನಡುವೆ ಆರ್ಥಿಕ ಭಿನ್ನಾಭಿಪ್ರಾಯಗಳೂ ಇದ್ದವು. ಎರಡನೆ ಪಂಚವಾರ್ಷಿಕ ಯೋಜನೆ ಸರ್ಕಾರದ ಕೈಯ್ಯಲ್ಲೇ ಹೆಚ್ಚು ಅಧಿಕಾರ ಕೇಂದ್ರೀಕೃತವಾಗಲು ಹಾದಿ ಮಾಡಿಕೊಡುತ್ತದೆ ಎನ್ನುವುದು ರಾಜಾಜಿಯವರ ಚಿಂತೆಯಾಗಿತ್ತು. ಸರ್ಕಾರಿ ಕ್ಷೇತ್ರದ ಹಿತರಕ್ಷಣೆಗಾಗಿ ತೆರಿಗೆಗಳನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದ್ದರಿಂದ ಅವರು ವಿಚಲಿತರಾಗಿದ್ದರು. ಇದು ಜನರಲ್ಲಿ ನಿರುತ್ಸಾಹ-ನಿರಾಶೆ ಉಂಟುಮಾಡಬಹುದು ಹಾಗೂ ಇದರಿಂದ ಖಾಸಗಿ ಕ್ಷೇತ್ರ ಬಡವಾಗಬಹುದು ಎಂದು ರಾಜಾಜಿ ಭಾವಿಸಿದ್ದರು. ಯೋಜನೆ ಮಾರುಕಟ್ಟೆ ಅರ್ಥವ್ಯವಸ್ಥೆಗೆ ಪೂರಕವಾಗಿರಬೇಕು, ಬದಲಿ ವ್ಯವಸ್ಥೆಯಾಗಬಾರದು. ಯೋಜನೆಯ ಪರಿಕಲ್ಪನೆ ಹೀಗಿರಬೇಕೆನ್ನುವುದು ರಾಜಾಜಿ ಅಭಿಪ್ರಾಯವಾಗಿತ್ತು.

1959ರ ಮೇ ತಿಂಗಳಲ್ಲಿ ರಾಜಾಜಿ ಸ್ವತಂತ್ರ ಪಕ್ಷ ಎನ್ನುವ ಹೆಸರಿನ ಹೊಸ ರಾಜಕೀಯ ಪಕ್ಷವೊಂದನ್ನು ಸ್ಥಾಪಿಸಿದರು. ಹೊಸ ಪಕ್ಷ ಪ್ರಧಾನಿ ಸುತ್ತ ಇದ್ದ, ವ್ಯಕ್ತಿ ಪೂಜೆಯಲ್ಲಿ ನಿಷ್ಠವಾಗಿದ್ದ ವಲಯವನ್ನು ಟೀಕಿಸಿತು. ಆಡಳಿತ ಕಾಂಗ್ರೆಸ್ಸಿನ ಆರ್ಥಿಕ ನೀತಿಗಳಿಗೆ ತೀವ್ರ ವಿರೋಧ ವ್ಯಕ್ತಪಡಿಸಿತು. ಸ್ಪರ್ಧಾತ್ಮಕ ಉದ್ಯಮಗಳನ್ನು ಪೋಷಿಸುವ ಮೂಲಕ ಕೈಗಾರಿಕೆಗಳ ವಿಕೇಂದ್ರೀಕರಣವಾಗಬೇಕೆಂದು ಸ್ವತಂತ್ರ ಪಕ್ಷದ ಸ್ಥಾಪನಾ ಹೇಳಿಕೆಯಲ್ಲಿ ತಿಳಿಸಲಾಗಿತ್ತು. ಕೃಷಿ ಕ್ಷೇತ್ರದಲ್ಲೂ ಸ್ವಯಂಕೃಷಿಯಲ್ಲಿ ತೊಡಗುವ ಭೂಮಾಲೀಕರಿಗೆ ಪ್ರೋತ್ಸಾಹ ನೀಡಬೇಕು ಎನ್ನುವುದು ಈ ಹೇಳಿಕೆಯ ಮತ್ತೊಂದು ಮಹತ್ವದ ಅಂಶವಾಗಿತ್ತು. ಸ್ವತಂತ್ರ ಪಕ್ಷ "ಸಮಾಜವಾದಿ ಎಂದು ಕರೆಯಲಾದ ತಂತ್ರ ಹುನ್ನಾರಗಳನ್ನು" ತಿರಸ್ಕರಿಸಿತ್ತು. ಇದು ಸರ್ಕಾರಿ ನಿಯಂತ್ರಣದ ಮೊದಲ ಹೆಜ್ಜೆ ಎಂಬುದು ಸ್ವತಂತ್ರ ಪಕ್ಷದ ಟೀಕೆಯಾಗಿತ್ತು.

ಏಕ ಪಕ್ಷದ ಪ್ರಜಾಪ್ರಭುತ್ವ ತಾನೇ ತಾನಾಗಿ ನಿರಂಕುಶ ಪ್ರಭುತ್ವವಾಗಿಬಿಡುತ್ತದೆ ಎನ್ನುವ ವಿಚಾರಧಾರೆಯೇ ರಾಜಾಜಿ ಸ್ವತಂತ್ರ ಪಕ್ಷ ಸ್ಥಾಪಿಸಲು ಪ್ರೇರಣೆ. "ಏಕೆಂದರೆ ಇಲ್ಲಿಯವರೆಗೆ ಕಾಂಗ್ರೆಸ್ ವಿರೋಧ ಪಕ್ಷವಿಲ್ಲದೇ ನಡೆದು ಬಂದಿದೆ. ಕಾಂಗ್ರೆಸ್ಸಿಗೆ ವೇಗವರ್ಧಕವೂ ಇಲ್ಲ ಬ್ರೇಕೂ ಇಲ್ಲ". ರಾಜಾಜಿಯವರ ಚಿಂತನೆಯ ಮುಖ್ಯ ಎಳೆ ಇದು. ರಾಜಾಜಿಯವರ ಸ್ವತಂತ್ರ ಪಕ್ಷ ಬಲುಬೇಗ ಚಲನಶೀಲ ಶಕ್ತಿಯನ್ನು ಪಡೆದುಕೊಂಡು ಬೆಳೆಯಲಾರಂಭಿಸಿತು. ಕೈಗಾರಿಕೋದ್ಯಮಿಗಳು, ಬಂಡವಾಳಶಾಹಿಗಳು ಮಾತ್ರವಲ್ಲದೆ ಕಾಂಗ್ರೆಸ್ ತರಲುದ್ದೇಶಿಸಿದ್ದ 'ಸಹಕಾರಿ ಬೇಸಾಯ'ದ ಬೆದರಿಕೆಗಳಿಗೆ ಹೆದರಿದ್ದ ರೈತ ನಾಯಕರುಗಳೂ ಸ್ವತಂತ್ರ ಪಕ್ಷಕ್ಕೆ ಸೇರಿಕೊಂಡರು. ಸಂಪ್ರದಾಯ ನಿಷ್ಠ ಎಂಬ ಹಣೆ ಚೀಟಿಯನ್ನು ಸ್ವತಂತ್ರ ಪಕ್ಷಕ್ಕೆ ಹಚ್ಚಲಾಗಿತ್ತಾದರೂ, ಅದು ಮುಕ್ತ ಮಾರುಕಟ್ಟೆಯ ಪ್ರತಿಪಾದಕರು ಹಾಗೂ ಕಾಂಗ್ರೆಸ್ಸಿಗೆ ಪರ್ಯಾಯವೊಂದನ್ನು ಬಯಸುತ್ತಿದ್ದ ಜಮೀನ್ದಾರಿ ನಾಯಕರುಗಳ ಒಂದು ವಿಚಿತ್ರ ಮಿಶ್ರಣವಾಗಿತ್ತು.

ಕಾಂಗ್ರೆಸ್ಸಿನ ಜೈ ಜೈ ನೇತಾಗಳು ಸ್ವತಂತ್ರ ಪಕ್ಷವನ್ನು ಬಲಪಂಥೀಯ ಪ್ರತಿಗಾಮಿ ಎಂದು ತಳ್ಳಿ ಹಾಕಿದರು. ಪ್ರಧಾನ ಮಂತ್ರಿಗಳೇ ಸ್ವತಃ ಸ್ವತಂತ್ರ ಪಕ್ಷವನ್ನು ನಿರ್ಲಕ್ಷಿಸಿದ್ದರು. ಪತ್ರಿಕಾಗೋಷ್ಠಿಯೊಂದರಲ್ಲಿ ರಾಜಾಜಿಯವರ ಹೊಸ ಪಕ್ಷದ ಬಗ್ಗೆ ಕೇಳಿದಾಗ ನೆಹರೂ ಅವರು "ಅವರು (ರಾಜಾಜಿ) ಹಳೆ ಒಡಂಬಡಿಕೆಯನ್ನು ಇಷ್ಟಪಡುತ್ತಾರೆ, ನಾನು ಹೊಸ ಒಡಂಬಡಿಕೆಯನ್ನು ಇಷ್ಟಪಡುತ್ತೇನೆ" ಎಂದು ತಮಾಷೆ ಮಾಡಿದ್ದರು.

IX

ಎಡದಲ್ಲಿ ಕಮ್ಯುನಿಸ್ಟರು ಒಡ್ಡಿದ ಸವಾಲುಗಳು, ಬಲದಲ್ಲಿ ಸ್ವತಂತ್ರ ಪಕ್ಷ ಒಡ್ಡಿದ ಸವಾಲು, ಜೊತೆಗೆ ದೆಹಲಿಯ ಸರ್ಕಾರದ ವಿರುದ್ಧ ಕೇಳಿಬಂದ ತೀವ್ರ ಸ್ವರೂಪದ ಅಕೃತ್ಯಗಳ ಆಪಾದನೆಗಳು ಎಲ್ಲ ಸೇರಿಕೊಂಡವು. 1957ರ ಸೆಪ್ಟಂಬರಿನಲ್ಲಿ ಸಂಸತ್ತಿನಲ್ಲಿ ಪ್ರಶ್ನೆಗಳು

ಎದ್ದವು. ಕಾನ್ಪುರದ ಕೈಗಾರಿಕೋದ್ಯಮಿ ಹರಿದಾಸ್ ಮುಂಧ್ರಾ ಅವರ ಮಾಲೀಕತ್ವದ ಖಾಸಗಿ ಕಂಪನಿಯಲ್ಲಿ ಸರ್ಕಾರಿ ಸ್ವಾಮ್ಯದ ಜೀವ ವಿಮಾ ಕಾರ್ಪೊರೇಷನ್ ಭಾರಿ ಮೊತ್ತದ ಬಂಡವಾಳ ಹೂಡಿದ್ದರ ಔಚಿತ್ಯ ಕುರಿತು ಕೇಳಿದ್ದು ಇಂಥ ಪ್ರಶ್ನೆಗಳಲ್ಲಿ ಒಂದು. ಅರ್ಥಸಚಿವ ಟಿ.ಟಿ. ಕೃಷ್ಣಮಾಚಾರಿಯವರು ಸಂದಿಗ್ಧಾರ್ಥದ ಉತ್ತರ ನೀಡಿದಾಗ ಭಿನ್ನಮತೀಯ ಕಾಂಗ್ರೆಸ್ ಎಂಪಿಗಳು ಮೊನಚಿನ ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ಈ ಚರ್ಚೆಯಲ್ಲಿ ಪ್ರಮುಖವಾಗಿ ಪಾಲ್ಗೊಂಡವರು ಪ್ರಧಾನಮಂತ್ರಿಯ ದೂರವಾಗಿದ್ದ ಅಳಿಯ ಫಿರೋಜ್ ಗಾಂಧಿಯವರು. ಮುಂಧ್ರಾ ಶೇರುಗಳ ಬೆಲೆಯನ್ನು ಮಾರುಕಟ್ಟೆಯ ನಿಜವಾದ ಮೌಲ್ಯಕ್ಕಿಂತ ಮೇಲಕ್ಕೆ ಏರಿಸುವ ಉದ್ದೇಶದಿಂದ ಈ ಕಂಪನಿಯಲ್ಲಿ ಬಂಡವಾಳ ತೊಡಗಿಸಲಾಗಿದೆ. ಭಾರತದ ಭೂಗತ ವಾಣಿಜ್ಯ ಲೋಕದ ನಿಗೂಢ ವ್ಯಕ್ತಿಯೊಂದಿಗಿನ ಈ ಪ್ರಶ್ನಾರ್ಹ ವ್ಯವಹಾರದಲ್ಲಿ ಎಲ್.ಐ.ಸಿ. ಭಾಗಿಯಾಗಲು ಹೇಗೆ ಸಮ್ಮತಿಸಿತು ಎಂದು ಫಿರೋಜ್ ಗಾಂಧಿ ವಿಸ್ಮಯ ವ್ಯಕ್ತಪಡಿಸಿದರು. "ಇದೊಂದು ಸರ್ಕಾರಿ ಸ್ವಾಮ್ಯದ ಎಲ್.ಐ.ಸಿ.ಯನ್ನು ವಂಚಿಸುವ ಪಿತೂರಿ" ಎನ್ನುವ ತೀರ್ಮಾನಕ್ಕೆ ಬಂದಿದ್ದರು ಫಿರೋಜ್ ಗಾಂಧಿ.

ಟೀಕೆಗಳಿಗೆ ತಲೆಬಾಗಿದ ಸರ್ಕಾರ ಈ ವ್ಯವಹಾರ ತನಿಖೆ ನಡೆಸಲು ಆಯೋಗವೊಂದನ್ನು ರಚಿಸುವುದಾಗಿ ಪ್ರಕಟಿಸಿತು. ಈ ವ್ಯವಹಾರದ ಬಗ್ಗೆ ದಕ್ಷ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ಎರಡು ಆಯೋಗಗಳು ತನಿಖೆ ನಡೆಸಿದವು. ಈ ತನಿಖಾ ಆಯೋಗಗಳ ವರದಿ ಕಾಂಗ್ರೆಸ್ ಪಕ್ಷಕ್ಕೆ ಶಹಭಾಸ್‌ಗಿರಿ ಕೊಡುವ ರೀತಿಯದಾಗಿರಲಿಲ್ಲ. ದಕ್ಷ ಆಡಳಿತ ಮತ್ತು ಕೀರ್ತಿಗೌರವಗಳನ್ನುಳ್ಳಂಥ ಖ್ಯಾತ ಸಂಸ್ಥೆಗಳಲ್ಲಿ ಬಂಡವಾಳ ಹೂಡುವುದು ತನ್ನ ಷೇರು ಬಂಡವಾಳ ನೀತಿಯಾಗಿದೆಯೆಂದು ಎಲ್.ಐ.ಸಿ. ಬಹಿರಂಗವಾಗಿ ಘೋಷಿಸಿತ್ತು. ಆದಾಗ್ಯೂ ಎಲ್.ಐ.ಸಿ. ಭಾರಿ ಮೊತ್ತವನ್ನು ಮುಂಧ್ರಾ ಕಂಪನಿಯ ಷೇರುಗಳಲ್ಲಿ ತೊಡಗಿಸಿತ್ತು. ಹೀಗೇಕೆ ಮಾಡಿದಿರಿ ಎಂದು ತನಿಖಾ ಆಯೋಗದ ಅಧ್ಯಕ್ಷರು ಪ್ರಶ್ನಿಸಿದಾಗ ಎಲ್.ಐ.ಸಿ. ಅಧಿಕಾರಿಗಳಿಂದ ತೃಪ್ತಿಕರ ಉತ್ತರ ಬಂದಿರಲಿಲ್ಲ. ಅಥವಾ ಸಚಿವರಿಂದಲೂ ತೃಪ್ತಿಕರವಾದ ಉತ್ತರ ಕೊಡಲು ಸಾಧ್ಯವಾಗಿರಲಿಲ್ಲ.

ಈ ತನಿಖಾ ಆಯೋಗಗಳು ದೆಹಲಿ ಮತ್ತು ಮುಂಬಯಿಗಳಲ್ಲಿ ವಿಚಾರಣಾ ಕಾರ್ಯಕಲಾಪಗಳನ್ನು ನಡೆಸಿದ್ದವು. ಈ ಕಲಾಪಗಳನ್ನು ಸಾರ್ವಜನಿಕರೂ ವೀಕ್ಷಿಸಬಹುದಿತ್ತು. ಹೀಗಾಗಿ ಇದು ಸಾರ್ವಜನಿಕರಲ್ಲಿ ಕುತೂಹಲ ಕೆರಳಿಸಿತ್ತು. ತೀವ್ರತರವಾದ ಟೀಕೆ ವಿಮರ್ಶೆಗಳಿಗೂ ಎಡೆಮಾಡಿಕೊಟ್ಟಿತ್ತು. ವಿಚಾರಣೆ ವೀಕ್ಷಿಸಲು ಸಾರ್ವಜನಿಕರು ತಂಡೋಪತಂಡವಾಗಿ ಬಂದಿದ್ದರು. ವಿಚಾರಣೆ ಕಾಲದಲ್ಲಿ ಸಚಿವರು ಮತ್ತು ಅಧಿಕಾರಿಗಳು ತದ್ವಿರುದ್ಧವಾದ ಉತ್ತರಗಳನ್ನು ಕೊಡುತ್ತಿದ್ದುದನ್ನು, ಅಥವಾ ಉತ್ತರಿಸಲಾಗದೆ ತಡವರಿಸುತ್ತಿದ್ದುದನ್ನು ಕಂಡು ಬೆಕ್ಕಸಬೆರಗಾದರು. ನ್ಯಾಯಾಧೀಶರು ನೀಡಿದ ತನಿಖಾ ವರದಿಗಳು ನಿಂದನೀಯವಾಗಿದ್ದವು. ಪರಿಣಾಮವಾಗಿ ಸಚಿವರು ಮತ್ತು ಅವರ ಕಾರ್ಯದರ್ಶಿ ರಾಜೀನಾಮೆ ಕೊಡಬೇಕಾಯಿತು.

ಮುಂಧ್ರಾ ಕಂಪನಿಗಳಲ್ಲಿ ಎಲ್.ಐ.ಸಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದ ನ್ಯಾಯಾಂಗ ತನಿಖೆ ಬಗ್ಗೆ "ಹಿಂದೂಸ್ತಾನ್ ಟೈಮ್ಸ್" ಪತ್ರಿಕೆ ಹೀಗೆ ಬರೆದಿತ್ತು:

"ಇದು ಒಟ್ಟಾರೆಯಾಗಿ ರಾಜಕೀಯ ಪುನರ್ವ್ಯವಸ್ಥೆಗೆ ಕಾರಣವಾಯಿತು. ಸ್ವಾತಂತ್ರ್ಯಾನಂತರ ಇಂಥದೊಂದು ಆಮೂಲಾಗ್ರ ಬದಲಾವಣೆ ಅನುಭವಕ್ಕೆ ಬಂದಿರಲಿಲ್ಲ. ಸಂಸತ್ತಿನಲ್ಲಿ ಪ್ರಶ್ನೆ ಎತ್ತಿದಾಗ ಒಂದು ಇಲಿ ಬಿಲದಂತೆ ಕಂಡು ಬಂದದ್ದು ಈಗ ಬೆಟ್ಟವಾಗಿ ಬೆಳೆದಿತ್ತು."

ಶುರುವಿಗೆ ಮುಂಧ್ರಾ ವ್ಯವಹಾರವಾಗಿ ಕೇಳಿಬಂದದ್ದು ಕೊನೆಕೊನೆಗೆ ಮುಂಧ್ರಾ ಹಗರಣವೆನ್ನಿಸಿಕೊಂಡಿತು. ಈ ಹಗರಣ ಆಗುವವರೆಗೆ, ನೆಹರೂ ಮಂತ್ರಿಮಂಡಲದ ಸಚಿವರ ಬಗ್ಗೆ ಅಧಿಕಾರವ್ಯಾಮೋಹಿಗಳು ಎನ್ನುವ ಟೀಕೆಗಳಷ್ಟೆ ಕೇಳಿ ಬಂದಿದ್ದವು. ಹಣಕಾಸು ದುರುಪಯೋಗದ ಆಪಾದನೆಗಳು ಕೇಳಿ ಬಂದಿರಲಿಲ್ಲ. ಗಾಂಧೀಜಿಯವರ ವಿರಕ್ತಿ-ನಿರಾಡಂಬರತೆಗಳ ವರ್ಚಸ್ಸಿನ ಪ್ರಭಾವಳಿ ಇನ್ನೂ ಈ ಸಚಿವರನ್ನು ಸುತ್ತುವರಿದಿತ್ತು. ಆದರೆ ಮುಂಧ್ರಾ ಹಗರಣದಿಂದ ಮೊಟ್ಟ ಮೊದಲ ಬಾರಿಗೆ ಈ ವರ್ಚಸ್ಸಿಗೆ ಭಾರಿ ಧಕ್ಕೆಯಾಯಿತು. ಬಲ ಹಾಗೂ ಎಡಪಂಥೀಯ ರಾಜಕಾರಣಿಗಳು ಹೇಳಿದಂತೆ ಇದು ಹಾನಿಕಾರಕ ಪರಿಣಾಮ ಉಂಟುಮಾಡಿತ್ತು.

○

15

ಅಪಜಯದ ಅನುಭವ

ಭಾರತ ಒಡೆದ ಮನೆಯಾದಲ್ಲಿ, ಅದು ಭಾರತೀಯರಿಗಷ್ಟೇ ಅಲ್ಲ ಏಷ್ಯಾಕ್ಕೆ ಮತ್ತು ವಿಶ್ವಶಾಂತಿಗೇ ಅಪಶಕುನವಿದ್ದಂತೆ.

–ಆಂಗ್‌ಸ್ಯಾನ್, ಬರ್ಮಾ ಸ್ವಾತಂತ್ರ್ಯ ಹೋರಾಟಗಾರ, ಜೂನ್ 1947.

I

1959ರ ಮಾರ್ಚಿ ತಿಂಗಳ ಕೊನೆಯದಿನ ದಲಾಯಿಲಾಮ ಮೆಕ್‌ಮಹೋನ್ ರೇಖೆ ದಾಟಿ ಭಾರತ ಗಣರಾಜ್ಯದ ಗಡಿಯೊಳಕ್ಕೆ ಪದಾರ್ಪಣ ಮಾಡಿದರು. ತನ್ನ ದೇಶದ ಮೇಲೆ ಚೀನಿಯರು ತಮ್ಮ ಹಿಡಿತವನ್ನು ವರ್ಷಗಟ್ಟಳೆಯಿಂದ ಬಿಗಿಗೊಳಿಸುತ್ತಿದ್ದಂತೆ ಟಿಬೇಟಿನ ಧರ್ಮಗುರುಗಳು ತಮ್ಮ ಲ್ಹಾಸಾದ ಪೋಟಾಲ ಅರಮನೆಯಲ್ಲಿ ಚಡಪಡಿಸುತ್ತಿದ್ದರು. ಆಗ ಟಿಬೆಟ್‌ನಲ್ಲಿ ಐದುಲಕ್ಷ ಚೀನಿ ಸೈನಿಕರಿದ್ದರೆಂದು ಒಂದು ಮೂಲ ತಿಳಿಸಿದ್ದುಂಟು. ಇವರ ಬೆನ್ನಿಗೇ ಪೂರ್ವ ಚೈನಾದ ಹ್ಯಾನ್ ನಗರಗಳ ವಲಸಿಗರೂ ಬಂದಿರಬಹುದು.

ಆದರೆ ನಿಶ್ಚಿತವಾಗಿಯೂ ಇದು ಅತಿಯಾದ ಅಂದಾಜು. ಆದಾಗ್ಯೂ ಟಿಬೇಟಿಯನ್ನರ ಇಚ್ಛೆಗೆ ಮೀರಿದಷ್ಟು ಚೀನಿಯರು ಇದ್ದಿರಲಿಕ್ಕೆ ಸಾಕು. 1958ರಲ್ಲೇ ಪೂರ್ವ ಟಿಬೆಟ್ಟಿನ ಖಂಪಾಗಳು ಚೀನಿ ಆಕ್ರಮಣಕಾರರ ವಿರುದ್ಧ ಬಂಡೆದ್ದಿದ್ದರು. ಶುರುವಿಗೆ ಸ್ವಲ್ಪ ಯಶಸ್ಸನ್ನು ಸಾಧಿಸಿದ್ದರು. ಆದರೆ ಚೀನೀಯರು ಬಂಡಾಯವನ್ನು ಹತ್ತಿಕ್ಕಿದ್ದರು. ಸೇಡಿನ ಕಾರ್ಯಾಚರಣೆ ದಲಾಯಿಲಾಮಾ ಅವರ ಮೇಲೆ ಎರಗುವ ಜೆವರಿಕೆ ತಲೆದೋರಿತು. ಆಗ ನವದೆಹಲಿ ದಲಾಯಿಲಾಮಾ ಅವರಿಗೆ ರಾಜಕೀಯ ಆಶ್ರಯ ನೀಡಿತು. ಗಾಢಾಂಧಕಾರದ ಮರೆಯಲ್ಲಿ ಅವರು, ಅತಿ ಎಚ್ಚರದಿಂದ ಆಯ್ಕೆ ಮಾಡಲಾದ ಕೆಲವೇ ಮಂದಿ ಅಂಗರಕ್ಷಕರೊಂದಿಗೆ ಲ್ಹಾಸಾದಿಂದ ಪಲಾಯನ ಮಾಡಿದರು.

ದಲಾಯಿಲಾಮ ಅವರು ಭಾರತದ ನೆಲದಲ್ಲಿ, ತಾವಾಂಗ್‌ನ ಬೌದ್ಧ ಮಂದಿರದಲ್ಲಿ ಮೊದಲ ರಾತ್ರಿ ಕಳೆದರು. ನಂತರ ಅಸ್ಸಾಮಿನ ತೇಜ್ಪುರಕ್ಕೆ ಬಂದರು. ಅಲ್ಲಿ ಭಾರತದ

ಅಧಿಕಾರಿಗಳು ಅವರಿಂದ ನಿಯೋಜಿತ ಕಾರ್ಯದ ವಿವರಗಳನ್ನು ಪಡೆದುಕೊಂಡರು. ಮೂರು ವಾರಗಳ ನಂತರ, ಪ್ರಧಾನಿ ಜೊತೆ ಭೇಟಿಗಾಗಿ ಅವರನ್ನು ದೆಹಲಿಗೆ ಕರೆತರಲಾಯಿತು.

ದಲಾಯಿ ಲಾಮಾ ಅವರು ನೆಹರೂಗೆ ಖಂಪಾಗಳ ಬಂಡಾಯದ ಸುದ್ದಿ ತಿಳಿಸುವುದರೊಂದಿಗೆ ಮಾತುಕತೆ ಶುರುವಾಯಿತು. ಬಂಡಾಯಗಾರರು ಮತ್ತು ಚೀನೀಯರ ನಡುವೆ ಉಗ್ರ ಕಾಳಗ ನಡೆದಿತ್ತು. ಎರಡೂ ಕಡೆ ಸಾಕಷ್ಟು ಹಾನಿಯಾಗಿತ್ತು. ಕಮ್ಯುನಿಸ್ಟರ ಧರ್ಮ ವಿರೋಧಿ ಪ್ರಚಾರದ ಬಗ್ಗೆ ಟಿಬೆಟ್‌ನ ಉದ್ದಗಲ ತೀವ್ರ ಪ್ರತಿಭಟನೆ ವ್ಯಕ್ತವಾಗಿತ್ತು. ಚೀನೀಯರು ದಲಾಯಿಲಾಮಾ ಅವರನ್ನು ಪೀಕಿಂಗ್ ಸಾಂಸ್ಕೃತಿಕ ಸಮಾರಂಭವೊಂದಕ್ಕೆ ಆಹ್ವಾನಿಸಿದಾಗ, ಅವರ ಸಲಹೆಗಾರರು "ಇದೊಂದು ಬಂಧಿಸಿ ಸ್ಥಾನಬದ್ಧತೆಯಲ್ಲಿಡುವ ತಂತ್ರವೆಂದು" ಎಚ್ಚರಿಸಿದ್ದರು. ದಲಾಯಿಲಾಮ ಈ ಆಮಂತ್ರಣವನ್ನು ತಿರಸ್ಕರಿಸಿದಾಗ ಚೀನಾ ಬೆದರಿಕೆಗಳನ್ನೊಡ್ಡಲು ಶುರುಮಾಡಿತು. ಆಗ ದಲಾಯಿಲಾಮ ಭಾರತಕ್ಕೆ ಹೋಗಲು ನಿರ್ಧರಿಸಿದರು.

ಟಿಬೆಟ್‌ನಲ್ಲಿ ಯಾವುದೇ ಸುಧಾರಣೆಯನ್ನೂ ಟಿಬೇಟಿಯನ್ನರೇ, ತಮ್ಮ ಧರ್ಮ, ಸಂಪ್ರದಾಯಗಳಿಗನುಸಾರವಾಗಿ ಜಾರಿಗೆ ತರಬೇಕೆಂದು ದಲಾಯಿಲಾಮಾ ನೆಹರೂಗೆ ತಿಳಿಸಿದರು. ಚೀನೀಯರ ಮಾದರಿಯ ಸುಧಾರಣೆ ಟಿಬೇಟಿಯನ್ನರನ್ನು ಆತ್ಮಹೀನ ಜನರನ್ನಾಗಿಸುತ್ತದೆ ಎಂದು ಅವರು ತಿಳಿಸಿದ್ದರು. ಭಾರತದ ನೆರವಿನಿಂದ ಟಿಬೆಟ್‌ಗೆ ಸ್ವಾತಂತ್ರ್ಯ ಪಡೆಯುವುದು ದಲಾಯಿಲಾಮ ಅವರ ಆಶಯವಾಗಿತ್ತು. ಅವರ ಹಳೆಯ ಮಾಸ್ತರರಾದ ಹೈನ್‌ರಿಚ್ ಹ್ಯಾರರ್ (ಸೆವನ್ ಇಯರ್ಸ್ ಇನ್ ಟಿಬೆಟ್ ಗ್ರಂಥದ ಕರ್ತೃ) ಪಾಶ್ಚಾತ್ಯ ರಾಷ್ಟ್ರದ ಬೆಂಬಲ ಗಳಿಸಲು ಪ್ರಯತ್ನಿಸುವಂತೆ ಸಲಹೆ ಮಾಡಿದ್ದರು.

ಟಿಬೆಟ್ಟಿನ ಸ್ವಾತಂತ್ರ್ಯಕ್ಕಾಗಿ ಭಾರತ ಚೈನಾದೊಂದಿಗೆ ಯುದ್ಧ ನಡೆಸಲು ಸಾಧ್ಯವಿಲ್ಲವೆಂದು ನೆಹರೂ ದಲಾಯಿಲಾಮಾಗೆ ತಿಳಿಸಿದ್ದರು. "ಚೈನಾವನ್ನು ಪೂರ್ತಿಯಾಗಿ ನಾಶಮಾಡಿಯೇ ಇಡೀ ಟಿಬೆಟ್ಟಿಗೆ ಸ್ವಾತಂತ್ರ್ಯ ತಂದುಕೊಡುವುದು ವಿಶ್ವದಿಂದಲೂ ಸಾಧ್ಯವಿಲ್ಲವೆಂದು" ನೆಹರೂ ಅವರಿಗೆ ತಿಳಿಸಿದ್ದರು. ಜೊತೆಗೆ ಪಾಶ್ಚಾತ್ಯ ರಾಷ್ಟ್ರಗಳ ಬೆಂಬಲಕ್ಕೆ ಧಾವಿಸಿದಲ್ಲಿ ಆ ರಾಷ್ಟ್ರಗಳು ಅವರನ್ನು ಒಂದು ಮಾರಾಟದ ಸರಕಿನಂತೆ ಕಾಣುವರೆಂದೂ ನೆಹರೂ ದಲಾಯಿಲಾಮಾಗೆ ತಿಳಿಸಿದ್ದರು. ಅಮೆರಿಕನ್ನರಿಗಾಗಲೀ ಯೂರೋಪಿಯನ್ನರಿಗಾಗಲೀ, ಟಿಬೇಟಿಯನ್ನರ ಬಗ್ಗೆ ನಿಜವಾದ ಸಾಹನುಭೂತಿ ಇರಲಿಲ್ಲ. ಅವರಿಗೆ ಬೇಕಾಗಿದ್ದುದೆಲ್ಲ ರಷ್ಯದೊಂದಿಗೆ ಶೀತಲ ಸಮರದಲ್ಲಿ ಟಿಬೆಟ್ಟನ್ನು ಒಂದು ಸಾಧನವಾಗಿ ಬಳಸಿಕೊಳ್ಳುವುದಷ್ಟೇ.

ಸ್ವಾತಂತ್ರ್ಯ ಹೊರತು ಅನ್ಯ ಮಾರ್ಗವಿಲ್ಲ ಎಂಬಂಥ ಧೋರಣೆಯಿಂದ ಟಿಬೇಟಿಯನ್ನರಿಂದ ಏನನ್ನೂ ಸಾಧಿಸಲಾಗದು. ಅವರು ಚೀನಿಯರೊಂದಿಗೆ ಮಾತುಕತೆಗೆ ಬಾಗಿಲು ತೆರೆದು ಸಿದ್ಧವಾಗಿರಬೇಕು ಎನ್ನುವುದು ನೆಹರೂ ಅಭಿಪ್ರಾಯವಾಗಿತ್ತು. ಭಾರತ ಸಹಾಯ ಮಾಡಬಹುದು, ಆದರೆ ಅದು ಪೀಕಿಂಗ್ ಜೊತೆ ತನ್ನ ಮುರಿದ ಬಾಂಧವ್ಯವನ್ನು ಸರಿಪಡಿಸಿಕೊಂಡ ನಂತರವೇ

ಸಾಧ್ಯವಾದೀತು. ನೆಹರೂ ಹೇಳಿದಂತೆ: "ಈ ಕ್ಷಣ ಚೈನಾದೊಂದಿಗಿನ ನಮ್ಮ ಬಾಂಧವ್ಯ ಕೆಟ್ಟದಾಗಿದೆ. ನಾವು ಕಳೆದುಕೊಂಡಿರುವ ನಮ್ಮ ನೆಲೆಯನ್ನು ಮರಳಿ ಪಡೆಯಬೇಕಾಗಿದೆ. ಚೈನಾಕ್ಕೆ ಬೆದರಿಕೆ ಹಾಕುವುದರಿಂದ ಅಥವಾ ಅದನ್ನು ಖಂಡಿಸುವುದರಿಂದ ನಮ್ಮ ನೆಲೆಯನ್ನು ಮರಳಿ ಪಡೆಯಲಾಗದು".

II

ದಲಾಯಿಲಾಮಾ ಆಶ್ರಯ ಪಡೆದಾಗ ಚೈನಾದೊಂದಿಗೆ ಭಾರತದ ನಂಟು ತುಂಬ ಕೆಟ್ಟದಾಗಿತ್ತು. 1957ರ ಬೇಸಿಗೆಯಲ್ಲಿ ಲಡಾಖಿನ ಲಾಮಾ ಮತ್ತು ಸಂಸತ್ ಸದಸ್ಯ ಕೌಶಕ್ ಬಕುಳಾ ಟಿಬೆಟ್ಟಿಗೆ ಭೇಟಿಯಿತ್ತಾಗಲೇ ಸಿಂಕಿಯಾಂಗ್ ದಿಕ್ಕಿನಲ್ಲಿ ರಸ್ತೆ ನಿರ್ಮಾಣ ಕಾರ್ಯ ನಡೆದಿರುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಗಮನಕ್ಕೆ ಬಂದಿದ್ದವು. ನಂತರ 1958ರ ಜುಲೈನಲ್ಲಿ ಚೀನಾದ ಸರ್ಕಾರಿ ಪ್ರಕಟಣೆಯಾದ "ಚೀನಾ ಪಿಕ್ಟೋರಿಯಲ್" ಎಂಬ ನಿಯತಕಾಲಿಕದಲ್ಲಿ ಭೂಪಟವೊಂದನ್ನು ಪ್ರಕಟಿಸಲಾಗಿದ್ದು ಅದರಲ್ಲಿ ನೇಫಾ ಮತ್ತು ಲಡಾಖಿನ ಬಹುತೇಕ ಪ್ರದೇಶಗಳನ್ನು ಚೀನಾದ ಗಡಿಯೊಳಗೆ ತೋರಿಸಲಾಗಿತ್ತು. ಆಗಸ್ಟ್ 21ರಂದು ಚೀನದ ರಾಯಭಾರಿಯನ್ನು ಭಾರತದ ವಿದೇಶಾಂಗ ಕಚೇರಿಗೆ ಕರೆಸಿಕೊಂಡು ಇದರ ವಿರುದ್ಧ ಪ್ರತಿಭಟನೆ ಸಲ್ಲಿಸಲಾಯಿತು. ಅಕ್ಟೋಬರ್ 18ರಂದು ವಿದೇಶಾಂಗ ಕಾರ್ಯದರ್ಶಿಗಳು ಸಿಂಕಿಯಾಂಗ್ ಟಿಬೆಟ್ ಹೆದ್ದಾರಿಯಲ್ಲಿರುವ ಜಮ್ಮು ಕಾಶ್ಮೀರದ ಲಡಾಖ್ ಪ್ರದೇಶದ ಪೂರ್ವಭಾಗದ ಬಗ್ಗೆ ಚೀನಾದ ರಾಯಭಾರಿಗೆ ಪ್ರತಿಭಟನಾ ಪತ್ರ ಬರೆದರು. ಈ ಪ್ರದೇಶ ಭಾರತದ ಭಾಗವಾಗಿತ್ತು. 1958ರ ಕೊನೆಯಲ್ಲಿ ಈ ಬಗ್ಗೆ ಪ್ರಧಾನಮಂತ್ರಿ ನೆಹರೂ ಮತ್ತು ಚೈನಾದ ಪ್ರಧಾನಮಂತ್ರಿ ಚೌ ಎನ್ ಲಾಯ್ ನಡುವೆ ಪತ್ರ ವ್ಯವಹಾರ ಶುರುವಾಯಿತು. ಈ ಪತ್ರವ್ಯವಹಾರ ಕೆಲವು ವರ್ಷಗಳವರೆಗೆ ನಡೆಯಿತು. ಈ ಪತ್ರವ್ಯವಹಾರ ಶುರುವಿಗೆ ನೋವು, ಬೇಸರಗಳಾಗಿ ಕೊನೆಗೆ ಕೋಪತಾಪ-ಪ್ರತಿಭಟನೆಗಳ ಹಂತ ಮುಟ್ಟಿತು.

ನೆಹರೂ ಮತ್ತು ಚೌ ಎನ್ ಲಾಯ್ ನಡುವಣ ಪತ್ರಗಳು ಗಡಿ ವಿವಾದ ಅರ್ಥಮಾಡಿಕೊಳ್ಳಲು ಮುಖ್ಯವಾದ ಮೂಲ ಆಕರಗಳಾಗಿವೆ. ಈ ಪತ್ರಗಳ ಕರಡನ್ನು ಅಧಿಕಾರಿಗಳು ಸಿದ್ಧಪಡಿಸಿರಬಹುದು. ಆದರೆ ಪತ್ರಗಳ ವಿಷಯ, ಧಾಟಿ, ಧೋರಣೆ, ಧ್ವನಿ, ಸಾರಾಂಶಗಳನ್ನು ಕೂಲಂಕಷವಾಗಿ ಇಬ್ಬರೂ ಪರಿಶೀಲಿಸಿಯೇ ಸಹಿ ಹಾಕಿರುತ್ತಾರೆ ಎಂಬುದರಲ್ಲಿ ಸಂಶಯವಿರಲಾರದು. ಈ ಇಬ್ಬರು ರಾಜಕಾರಣಿಗಳೂ ಇತಿಹಾಸದಲ್ಲಿ ಗಾಢವಾದ ಆಸಕ್ತಿಯುಳ್ಳವರಾಗಿದ್ದರು. ಇವರಿಬ್ಬರಿಗೂ ತಮ್ಮ ರಾಷ್ಟ್ರಗಳನ್ನು ಆಧುನಿಕ ವಿಶ್ವದ ಪ್ರಥಮ ಪಂಕ್ತಿಯಲ್ಲಿ ಪ್ರತಿಷ್ಠಾಪಿಸಬೇಕೆಂಬ ಮಹತ್ವಾಕಾಂಕ್ಷೆಯಿತ್ತು.

ಚೈನಾದ ರಾಷ್ಟ್ರೀಯ ನಾಯಕತ್ವದ ಶ್ರೇಣಿಯಲ್ಲಿ ಚೌ ಎನ್ ಲಾಯ್ ಅವರದು ಮಾವೋತ್ಸೆ ತುಂಗರ ನಂತರದ ಎರಡನೆಯ ಸ್ಥಾನವಾಗಿತ್ತು. ಬಹುತೇಕ ವಿಷಯಗಳಲ್ಲಿ ಚೌ ಎನ್ ಲಾಯ್ ಇತರ 800 ದಶಲಕ್ಷ ಚೀನಿಯರಂತೆ ಮಹಾನ್ ನಾಯಕನ ಮಾತಿಗೆ

ಮಣಿಯುತ್ತಿದ್ದರು. ಆದರೆ ವಿದೇಶಾಂಗ ವಿಷಯದಲ್ಲಿ ಅವರಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು. ಚೀನಿ ವರಿಷ್ಠ ನಾಯಕರಲ್ಲಿ ಚೌ ಎನ್ ಲಾಯ್ ಒಬ್ಬರೇ ಪಾಶ್ಚಾತ್ಯ ರಾಷ್ಟ್ರದಲ್ಲಿದ್ದು ವ್ಯಾಸಂಗ ಮಾಡಿದವರಾಗಿದ್ದರು. ಚೌ ಎನ್ ಲಾಯ್ ನಿರರ್ಗಳವಾಗಿ ಫ್ರೆಂಚ್ ಭಾಷೆ ಮಾತಾಡುತ್ತಿದ್ದರು. ಇಂಗ್ಲಿಷ್‌ನಲ್ಲಿ ಮಾತನಾಡುವ ಸಾಮರ್ಥ್ಯ ಹೊಂದಿದ್ದರು. ನಡತೆಯಲ್ಲೂ ರಾಜನೀತಿ ಮೈಗೂಡಿಸಿಕೊಂಡಿದ್ದರು. ಫ್ರೆಂಚ್ ಕ್ರಾಂತಿಯ ಪರಿಣಾಮ ಏನಾಗಬಹುದು ಎಂದು ಕೇಳಿದಾಗ "ಇಷ್ಟು ಬೇಗ ಏನನ್ನೂ ಹೇಳಲಾಗದು" ಎನ್ನುವ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು.

ಸ್ಟುವರ್ಟ್ ಸ್ಕ್ರ್ಯಾಂ ಬರೆದಿರುವಂತೆ 1955ರಲ್ಲಿ ನಡೆದ ಬಾಂಡುಂಗ್ ಸಮ್ಮೇಳನದಲ್ಲಿ ಚೌ ಎನ್ ಲಾಯ್ ತಮ್ಮ ನವನಾಗರಿಕತೆಯ ಹಾಗೂ ರಾಜ ತಾಂತ್ರಿಕ ನೈಪುಣ್ಯತೆಯ ಛಾಪನ್ನು ಮೂಡಿಸಿದ್ದರು. ಈ ಸಮ್ಮೇಳನದಲ್ಲಿ ನೆಹರೂ ಮತ್ತು ಚೌ ಎನ್ ಲಾಯ್ ಪಕ್ಕ ಪಕ್ಕದಲ್ಲಿ ಐರೋಪ್ಯೇತರ ಜಗತ್ತಿನ ಪ್ರತಿನಿಧಿಗಳಾಗಿ ಕುಳಿತಿದ್ದರು. ಸೈದ್ಧಾಂತಿಕವಾಗಿ ಇಬ್ಬರ ನಡುವೆ ಅಜಗಜಾಂತರ. ಆದರೆ ಏಷ್ಯನ್ನರಾಗಿ ಇಬ್ಬರೂ ಒಂದಾಗಿ ಕುಳಿತಿದ್ದರು.

1955ರಲ್ಲಿ ನೆಹರೂ ಮತ್ತು ಚೌ ಎನ್ ಲಾಯ್ ಸೈದ್ಧಾಂತಿಕವಾಗಿ ದೂರವಾಗಿದ್ದರು, ಭಿನ್ನಾಭಿಪ್ರಾಯ ಹೊಂದಿದ್ದರು. 1958ರ ವೇಳೆಗೆ ರಾಷ್ಟ್ರದ ಹಿತಾಸಕ್ತಿಯಿಂದಾಗಿಯೂ ಇವರ ನಡುವೆ ಭಿನ್ನಮತ ತಲೆದೋರಿತ್ತು. ಆ ವರ್ಷದ ಡಿಸೆಂಬರ್‌ನಲ್ಲಿ ನೆಹರೂ ಚೌ ಎನ್ ಲಾಯ್ ಅವರಿಗೆ ಸರಣಿ ಪತ್ರವ್ಯವಹಾರದ ಮೊದಲ ಪತ್ರ ಬರೆದಿದ್ದರು. ಗಡಿ ಪ್ರಶ್ನೆಯನ್ನು ಪ್ರಸ್ತಾಪಿಸುವ ಮುನ್ನ ನೆಹರೂ ಪತ್ರದ ಶುರುವಿನಲ್ಲಿ ಚೀನದ ಆರ್ಥಿಕ ಪ್ರಗತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. 1956ರಲ್ಲಿ ಭೇಟಿಯಾದಾಗ, ಮೆಕ್‌ಮಹೋನ್ ರೇಖೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಳುವಳಿ ಎಂದು ಚೀನಾದ ನಾಯಕರು ಹೇಳಿದ್ದನ್ನು ನೆಹರೂ ನೆನಪಿಸಿದ್ದರು. ಆದರೆ ಚೀನ ಮತ್ತು ಭಾರತದ ನಡುವೆ ಮಧುರ ಸ್ನೇಹ ಬಾಂಧವ್ಯಗಳ ದೃಷ್ಟಿಯಿಂದ ಸ್ಥಳೀಯ ಟಿಬೆಟ್ ಅಧಿಕಾರಿಗಳೊಂದಿಗೆ ಸಮಾಲೋಚಿಸಿದ ನಂತರ ಅದಕ್ಕೆ ಮಾನ್ಯತೆ ನೀಡಿದ್ದಾಗಿ ತಿಳಿಸಿದ್ದರು. ಆಗ ಚೌ, ಚೀನ ಮತ್ತು ಭಾರತದ ನಡುವೆ ಪ್ರಧಾನವಾದ ಗಡಿ ವಿವಾದ ಇಲ್ಲ ಎಂದ ನೆಹರೂ ಅಭಿಪ್ರಾಯವನ್ನು ದೃಢೀಕರಿಸಿದ್ದರು. ಅದರೆ ಈಗ 'ಚೀನ ಪಿಕ್ಟೋರಿಯಲ್' ನಿಯತ ಕಾಲಿಕದ ಭೂಪಟದಲ್ಲಿ ಚೀನವ ಗಡಿರೇಖೆ ಭಾರತವ ಪ್ರದೇಶದೊಳಕ್ಕೂ ಉದ್ದಗಲ ಹರಿದು ಬಂದಿತ್ತು.

ಒಂದು ತಿಂಗಳ ನಂತರ ಚೌ ಎನ್ ಲಾಯ್, ನೆಹರೂ ಪತ್ರಕ್ಕೆ ಉತ್ತರ ಬರೆದರು. ಉತ್ತರ ಹೀಗಿತ್ತು: "ಐತಿಹಾಸಿಕವಾಗಿ ಭಾರತ-ಚೀನ ಗಡಿ ಬಗ್ಗೆ ಯಾವುದೇ ಒಪ್ಪಂದ ಅಥವಾ ಕರಾರು ಹಿಂದೆ ಯಾವತ್ತೂ ಆಗಿಲ್ಲ. ಮೆಕ್‌ಮಹೋನ್ ರೇಖೆ ಚೀನಾದ ಟಿಬೆಟ್ ಪ್ರದೇಶದ ಮೇಲೆ ಆಕ್ರಮಣ ನಡೆಸುವ ಬ್ರಿಟನ್ನಿನ ನೀತಿಯ ಫಲ. ನ್ಯಾಯಸಮ್ಮತವಾಗಿ ಹೇಳುವುದಾದಲ್ಲಿ, ಇದನ್ನು ಕಾನೂನುಬದ್ಧವೆಂದು ಪರಿಗಣಿಸಲಾಗದು. ಭಾರತ ರಸ್ತೆ ಒಂದರ ಬಗ್ಗೆ ಪ್ರತಿಭಟಿಸಿದೆ. ಚೈನಾದ ದೃಷ್ಟಿಯಲ್ಲಿ ಈ ರಸ್ತೆಯ ಪ್ರದೇಶ ಯಾವತ್ತಿನಿಂದಲೂ ಚೈನಾದ

ಆಡಳಿತ ವ್ಯಾಪ್ತಿಯೊಳಗಿದೆ. ಇವೆಲ್ಲವೂ ಚೈನಾ ಮತ್ತು ಭಾರತದ ನಡುವೆ ಗಡಿ ವಿವಾದಗಳಿವೆ ಎಂಬುದನ್ನು ತೋರಿಸುತ್ತದೆ (ನೆಹರೂ ಪ್ರತಿಪಾದನೆಗೆ ತದ್ವಿರುದ್ಧ) ಈ ಹಿನ್ನೆಲೆಯಲ್ಲಿ 'ಚೀನಾ ಪಿಕ್ಟೋರಿಯಲ್'ನಲ್ಲಿ ಪ್ರಕಟವಾದ ಭೂಪಟವನ್ನು ನೋಡಬೇಕು. ಸದ್ಯಕ್ಕೆ ಉಭಯ ರಾಷ್ಟ್ರಗಳು ಯಥಾಸ್ಥಿತಿ ಮುಂದುವರಿಸಿಕೊಂಡು ಹೋಗಬೇಕು, ಗಡಿ ಪ್ರಶ್ನೆ ಬಗ್ಗೆ ಆಖೈರಾಗಿ ಸ್ನೇಹಯುತ ಒಪ್ಪಂದ ಆಗುವವರೆಗೆ ಯಥಾಸ್ಥಿತಿ ಮುಂದುವರಿಯಬೇಕು" ಎಂದು ಚೌ ಎನ್ ಲಾಯ್ ಸಲಹೆ ಮಾಡಿದ್ದರು.

1959ರ ಮಾರ್ಚಿ 22ರಂದು ಮರಳಿ ಪತ್ರ ಬರೆದರು. ಭಾರತ ಮತ್ತು 'ಚೀನಾದ ಟಿಬೆಟ್ ಪ್ರದೇಶ' ನಡುವಣ ಗಡಿಯನ್ನು ಪೀಕಿಂಗ್ ಒಪ್ಪಿಕೊಳ್ಳುತ್ತಿಲ್ಲ ಎಂಬುದನ್ನು ತಿಳಿದು ತಮಗೆ ಆಶ್ಚರ್ಯವಾಗಿದೆಯೆಂದು ಬರೆದಿದ್ದ ನೆಹರೂ ಇದಕ್ಕೆ ಕೆಲವೊಂದು ನಿರ್ದಿಷ್ಟ ಒಪ್ಪಂದಗಳಲ್ಲಿ ಅಂಗೀಕಾರದ ಮುದ್ರೆ ಬಿದ್ದಿದೆಯೆಂದು ತಿಳಿಸಿದ್ದರು. ಇವುಗಳಲ್ಲಿ, 1842ರಲ್ಲಿ ಕಾಶ್ಮೀರ ಮತ್ತು ಲ್ಹಾಸಾ ನಡುವಣ ಒಪ್ಪಂದ ಮುಖ್ಯವಾದದ್ದು. 1913-14ರಲ್ಲಿ ಪೂರ್ವದಲ್ಲಿ ಮೆಕ್‌ಮಹೋನ್ ರೇಖೆಯನ್ನು ಗಡಿರೇಖೆಯೆಂದು ಒಪ್ಪಿಕೊಳ್ಳಲಾಗಿದೆ. ಇದೆಲ್ಲದರ ಜೊತೆಗೆ ಉಭಯ ರಾಷ್ಟ್ರಗಳ ನಡುವಣ ಗಡಿಯನ್ನು ವಿಶದಪಡಿಸುವ ಜಲಾನಯನ ಪ್ರದೇಶಗಳ ವಿಭಜನೆ ರೇಖೆಗಳು, ಪರ್ವತ ಶಿಖರಗಳು ಮೊದಲಾದ ನೈಸರ್ಗಿಕ ರೂಪಗಳು, ಲಕ್ಷಣಗಳು ಇವೆ. ಅಲ್ಲಿ ಇಲ್ಲಿ ಅಲ್ಪ ಸ್ವಲ್ಪ ಅಂತರಗಳಿರಬಹುದು. ಆದರೆ ಚೀನದೊಂದಿಗಿನ ನಮ್ಮ ಬಹುಪಾಲು ಗಡಿ ಪ್ರದೇಶಕ್ಕೆ ಭೌಗೋಳಿಕವಾದ ಆಧಾರಗಳಿವೆ. ಸಾಂಪ್ರದಾಯಿಕ-ಪಾರಂಪರಿಕ ಆಧಾರಗಳಿವೆ. ಹಾಗೂ ನಾವು ಪ್ರಕಟಿಸಿರುವ ಭೂಪಟಗಳಲ್ಲಿ ತೋರಿಸಿರುವ ನಮ್ಮ ಗಡಿ ಪ್ರದೇಶ ಹಲವಾರು ಕರಾರುಗಳನ್ನು ಆಧರಿಸಿದೆ ಎಂದು ನೆಹರೂ ಸ್ಪಷ್ಟಪಡಿಸಿದ್ದರು. ಹಾಗೂ ಈ ವಿಷಯದಲ್ಲಿ ಶೀಘ್ರದಲ್ಲಿ ಒಮ್ಮತಕ್ಕೆ ಬರಬಹುದೆಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದರು.

ನೆಹರೂ ಪತ್ರಕ್ಕೆ ಚೌ ಎನ್ ಲಾಯ್ ಉತ್ತರಿಸುವ ಮುನ್ನವೇ ದಲಾಯಿಲಾಮ ಭಾರತಕ್ಕೆ ಪಲಾಯನ ಮಾಡಿದ್ದರು. ಇದು ವಿಷಯವನ್ನು ಹೆಚ್ಚಾಗಿ ಜಟಿಲಗೊಳಿಸಿತು. ಭಾರತದಲ್ಲಿ ಜನಸಾಮಾನ್ಯರು ದಲಾಯಿಲಾಮ ಅವರಿಗೆ ನೀಡಿದ ಆದರದ ಸ್ವಾಗತ ಕಂಡು ಚೈನಾದ ಕಣ್ಣು ಕೆಂಪಗಾಗಿತ್ತು. ತೀವ್ರ ಅಸಮಾಧಾನಗೊಂಡಿದ್ದ ಚೈನಾ ಇದಕ್ಕೆಲ್ಲ ನವದೆಹಲಿಯೇ ಕಾರಣವೆಂದು ದೂಷಿಸಿತ್ತು. ನೆಹರೂ ಅವರು ದಲಾಯಿಲಾಮ ಅವರನ್ನು ಭೇಟಿಗೆ ಆಹ್ವಾನಿಸಿ ಮಾತುಕತೆ ನಡೆಸಿದ್ದರಿಂದ ಟಿಬೆಟಿಯನ್ ನಾಯಕರಿಗೆ ಕಾನೂನುಬದ್ಧ ಮಾನ್ಯತೆ ನೀಡಿದಂತಾಗಲಿಲ್ಲವೆ? ಟಿಬೆಟ್‌ನಲ್ಲಿ ನಡೆದಿದ್ದ ಬಂಡಾಯ, ಚೈನಾದ ಪ್ರಕಾರ ಜನತಾ ಬಂಡಾಯವಾಗಿರಲಿಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿಗಳು ಮತ್ತು ಚಿಯಾಂಗ್-ಕೈ-ಶೇಕರ ಕೂಟದ ಬೆಂಬಲ ಪಡೆದ ತಲೆಮರೆಸಿಕೊಂಡಿರುವ ಮೇಲ್ವರ್ಗದ ಪ್ರತಿಗಾಮಿಗಳ ಕೃತ್ಯವದು ಎಂದು ಚೈನಾದ ವಾದವಾಗಿತ್ತು. ಚೈನಾದ ಮಾಧ್ಯಮಗಳಲ್ಲಿ ಭಾರತದ ಕಾಲಿಂಪಾಂಗ್ ಪಟ್ಟಣವನ್ನು ಬಂಡಾಯ ನಿರ್ದೇಶಿಸುವ ಕೇಂದ್ರವೆಂದು ಬಿಂಬಿಸಲಾಗಿತ್ತು. ಅಲ್ಲದೆ, ನವದೆಹಲಿ ಸರ್ಕಾರ ಸಾಮ್ರಾಜ್ಯಶಾಹಿಗಳ ಪ್ರಚಾರ ಮತ್ತು ಒಳಸಂಚುಗಳಿಂದ ಪ್ರಭಾವಿತವಾಗಿದ್ದು

ಭಾರತ-ಚೈನಾ ನಡುವಣ ಮೈತ್ರಿಯನ್ನು ಭಾರತವೇ ಹಾಳುಗೆಡುವುತ್ತಿದೆಯೆಂದು ಚೈನಾದ ಪತ್ರಿಕೆಗಳು ಬರೆದಿದ್ದವು.

ಕಾಲಿಂಪಾಂಗ್‌ನಲ್ಲಿ ಟಿಬೆಟ್ ನಿರಾಶ್ರಿತರು ಕೆಲವೊಂದು ಪ್ರಚಾರ ಚಟುವಟಿಕೆಗಳನ್ನು ಕೈಗೊಂಡಿದ್ದು ನಿಜ. ಅದನ್ನು ಚೈನಾ ಅತಿಯಾಗಿ ಉತ್ಪ್ರೇಕ್ಷೆಮಾಡಿ ಅರ್ಥಮಾಡಿಕೊಂಡಿತ್ತು. ಅತಿ ಉತ್ಪ್ರೇಕ್ಷೆಯಿಂದ ಬಳಸಿಕೊಳ್ಳುತ್ತಿತ್ತು. ಆದರೆ ಇದಕ್ಕೂ ಹೆಚ್ಚಿನ, ದೊಡ್ಡ ಧ್ವನಿಯ ಪ್ರತಿಭಟನೆ ಭಾರತದೊಳಗಿನಿಂದಲೇ ವ್ಯಕ್ತವಾಗಿತ್ತು. ಸಮಾಜ ಸೇವಕರಾಗಿ ಪರಿವರ್ತನೆ ಹೊಂದಿದ್ದ ರಾಜಕಾರಣಿ ಜಯಪ್ರಕಾಶ್ ನಾರಾಯಣ್ ಟಿಬೇಟ್ ಸ್ವಾತಂತ್ರ್ಯದ ಉಗ್ರ ಪ್ರತಿಪಾದಕರಾಗಿದ್ದರು. ಇದಕ್ಕೆ ಜನಸಂಘದಂಥವರ ಬೆಂಬಲವೂ ಇತ್ತು. ಭಾರತ, ಶೀತಲ ಸಮರದಲ್ಲಿ ಅಮೆರಿಕದ ಪರವಹಿಸಿ, ಮೈತ್ರಿ ಮಾಡಿಕೊಂಡು, ಟಿಬೇಟ್‌ನ ವಿಮೋಚನೆಗೆ ಅಮೆರಿಕದ ನೆರವು ಪಡೆದುಕೊಳ್ಳಬೇಕೆಂದು ಜನಸಂಘ ಸಲಹೆಮಾಡಿತ್ತು. ಆದರೆ, ದಲಾಯಿಲಾಮಾ ಟಿಬೇಟ್ ಬಿಟ್ಟು ಬಂದ ಒಂದು ತಿಂಗಳ ನಂತರ ಭಾರತದ ವಿದೇಶಾಂಗ ಕಾರ್ಯದರ್ಶಿಗಳು ಚೀನ ರಾಯಭಾರಿಯನ್ನು ತಮ್ಮ ಕಚೇರಿಗೆ ಕರೆಸಿಕೊಂಡರು. "ಟಿಬೆಟ್ಟಿನೊಳಗೆ ನಡೆದಿರುವ ಆಂತರಿಕ ಆಗುಹೋಗುಗಳಲ್ಲಿ ಮಧ್ಯ ಪ್ರವೇಶ ಮಾಡುವ ಇರಾದೆ ಭಾರತಕ್ಕಿಲ್ಲವೆಂದು" ವಿದೇಶಾಂಗ ಕಾರ್ಯದರ್ಶಿಗಳು ಚೀನಕ್ಕೆ ಭರವಸೆ ನೀಡಿದರು. "ದಲಾಯಿಲಾಮಾ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳಲಾಗುವುದು. ಆದರೆ ಈ ದೇಶದೊಳಗಿದ್ದುಕೊಂಡು ಅವರು ಯಾವುದೇ ರೀತಿಯ ರಾಜಕೀಯ ಚಟುವಟಿಕೆಗಳನ್ನು ನಡೆಸುವಂತಿಲ್ಲ" ಎಂದೂ ಚೀನಾ ರಾಯಭಾರಿಗೆ ತಿಳಿಸಲಾಯಿತು. ಇದು ಸರ್ಕಾರದ ನಿಲುವಾಗಿತ್ತು. ಸಹಜವಾಗಿಯೇ ಈ ನಿಲುವಿಗೆ ಕೆಲವರ ವಿರೋಧವಿತ್ತು. ವಿದೇಶಾಂಗ ಸಚಿವರು ಸ್ಪಷ್ಟೀಕರಿಸಿದಂತೆ, "ಕಾನೂನು ಮತ್ತು ಸಂವಿಧಾನದನ್ವಯ ಸಂಸತ್ತಿನಲ್ಲಿ, ಮಾಧ್ಯಮಗಳಲ್ಲಿ ಮತ್ತು ಭಾರತದ ಯಾವುದೇ ಪ್ರದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಅನೇಕ ವೇಳೆ ವ್ಯಕ್ತಪಡಿಸಲಾದ ಅಭಿಪ್ರಾಯಗಳು ಭಾರತ ಸರ್ಕಾರದ ನೀತಿಯ ಕಟು ಟೀಕೆಯೇ ಆಗಿರುತ್ತವೆ."

ಈ ಸೂಕ್ಷ್ಮತೆಗಳೆಲ್ಲ ಪೀಕಿಂಗ್‌ಗೆ ಸುಲಭವಾಗಿ ಅರ್ಥವಾಗುತ್ತಿರಲಿಲ್ಲ. ಏಕೆಂದರೆ ಚೀನದಲ್ಲಿ, ಕನಿಷ್ಠ ಬಹಿರಂಗವಾಗಿ ಯಾರೂ ಸರ್ಕಾರದ ನೀತಿಗಳನ್ನು ಟೀಕಿಸುವಂತಿರಲಿಲ್ಲ. ಎರಡೂ ರಾಷ್ಟ್ರಗಳಲ್ಲಿನ ರಾಜಕೀಯ ವ್ಯವಸ್ಥೆ-ಸರ್ವಾಧಿಕಾರ ಪ್ರಭುತ್ವ ಮತ್ತು ಪ್ರಜಾಪ್ರಭುತ್ವ-ಯಲ್ಲಿನ ಭಿನ್ನತೆ ಏಪ್ರಿಲ್ 20ರಂದು ಮುಂಬಯಿಯಲ್ಲಿ ನಡೆದ ಘಟನೆ ಬಗ್ಗೆ ಆದ ಪತ್ರವ್ಯವಹಾರದಲ್ಲಿ ಎದ್ದು ಕಾಣುತ್ತಿತ್ತು. ಮುಂಬಯಿಯಲ್ಲಿ ಪ್ರತಿಭಟನಾಕಾರರ ಗುಂಪೊಂದು ಚೈನಾ ವಿರುದ್ಧ ಘೋಷಣೆಗಳನ್ನು ಕೂಗಿ, ಭಾಷಣಗಳನ್ನು ಮಾಡಿತೆಂದು ಚೀನದ ಅಂಬೋಣವಾಗಿತ್ತು. ಏಪ್ರಿಲ್ 27ರಂದು ಪೀಕಿಂಗ್ ನವದೆಹಲಿಗೆ ಬರೆದ ಪತ್ರದಲ್ಲಿ–

"ಘೋಷಣೆಗಳು, ಭಾಷಣಗಳಲ್ಲಿ ಚೈನಾ ತನ್ನದೇ ಆದ ಟಿಬೆಟ್ ಪ್ರದೇಶದಲ್ಲಿ ಬಂಡಾಯ ಅಡಗಿಸಿದ್ದನ್ನು ಸಾಮ್ರಾಜ್ಯಶಾಹಿ ಕ್ರಮ ಎಂದು ಬಣ್ಣಕಟ್ಟಿ ಹೇಳಲಾಗಿದೆ ಹಾಗೂ ಚೈನಾದ ವಿರುದ್ಧ ಎಲ್ಲ ಬಗೆಯ ಮಿಥ್ಯಾರೋಪಗಳನ್ನು ಮಾಡಲಾಗಿದೆ. ಇನ್ನೂ ಹೆಚ್ಚು ಗಂಭೀರವಾದುದೆಂದರೆ, ಚೀನಿ ರಾಯಭಾರ ಕಚೇರಿ ಗೋಡೆಯ ಮೇಲೆ ಚೈನಾ ಗಣರಾಜ್ಯದ ಅಧ್ಯಕ್ಷ ಮಾವೋತ್ಸೆ ತುಂಗರ ಭಾವಚಿತ್ರ ಅಂಟಿಸಿ ಅದಕ್ಕೆ ಟೊಮೆಟೊ, ಕೊಳೆತ ಮೊಟ್ಟೆಗಳನ್ನು ಎಸೆದದ್ದು. ಈ ಗೂಂಡಾಗಳು ಭಾವಚಿತ್ರಕ್ಕೆ ಈ ರೀತಿ ಅಗೌರವ ತೋರುತ್ತಿದ್ದಾಗ ಭಾರತದ ಪೊಲೀಸರು ಮಧ್ಯ ಪ್ರವೇಶಿಸದೆ ಸುಮ್ಮನೆ ನಿಂತಿದ್ದರು. ಹಾಗೂ ಪತ್ರಕರ್ತರಿಗೆ ಇದರ ಛಾಯಾ ಚಿತ್ರ ತೆಗೆದುಕೊಳ್ಳಲು ಅನುಕೂಲವಾಗುವಂತೆ ಸುತ್ತುವರಿದ ಜನರನ್ನು ಪೊಲೀಸರು ದೂರಸರಿಸುತ್ತಿದ್ದರು..."

ಮುಂಬಯಿಯ ಈ ಘಟನೆ ಪೀಕಿಂಗ್ ದೃಷ್ಟಿಯಲ್ಲಿ ಚೈನಾ ಜನತಾಗಣರಾಜ್ಯದ ಅಧ್ಯಕ್ಷರ, ಚೀನೀಯರ ಪ್ರೀತಿ ಪಾತ್ರ ನಾಯಕನಿಗೆ ಮಾಡಿದ ಭಾರಿ ಅಪಮಾನವಾಗಿತ್ತು. ಇದು 650 ದಶಲಕ್ಷ ಚೀನೀಯರು ಸಹಿಸಲಾಗದ ಅಪಮಾನವಾಗಿತ್ತು. ಇದಕ್ಕೆ ಭಾರತದಿಂದ ತೃಪ್ತಿಕರವಾದ ಉತ್ತರ ಬಾರದೇ ಹೋದಲ್ಲಿ, ಚೈನಾ ಕೈಕಟ್ಟಿ ಕೂರುವುದಿಲ್ಲ, ನೂರು ವರ್ಷವಾದರೂ ಸರಿ ಈ ಬಗ್ಗೆ ತೃಪ್ತಿಕರವಾದ ಇತ್ಯರ್ಥವೊಂದಾಗಬೇಕು ಎಂದು ಚೈನಾ ಪತ್ರದಲ್ಲಿ ಖಂಡತುಂಡವಾಗಿ ತಿಳಿಸಿತ್ತು.

ಭಾರತ ಸ್ನೇಹ ಸಂಬಂಧ ಹೊಂದಿರುವ ರಾಷ್ಟ್ರವೊಂದರ ಗೌರವಾನ್ವಿತ ಅಧ್ಯಕ್ಷರಾದ ಮಾವೋತ್ಸೆ ತುಂಗರ ಭಾವಚಿತ್ರಕ್ಕೆ ತೋರಲಾದ ಅಗೌರವ-ಅಸೌಜನ್ಯದ ಬಗ್ಗೆ ಭಾರತ ಸರ್ಕಾರ ತೀವ್ರ ವಿಷಾದ ವ್ಯಕ್ತಪಡಿಸುತ್ತದೆ ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ಪತ್ರ ಬರೆದರು. ಕರ್ತವ್ಯ ನಿರತ ಪೊಲೀಸರು ಪ್ರತಿಭಟನಾಕರರಿಗೆ ನೆರವು ನೀಡಿದ್ದರೆಂಬುದನ್ನು ಪತ್ರದಲ್ಲಿ ಅಲ್ಲಗಳೆಯಲಾಗಿತ್ತು. ಪ್ರತಿಯಾಗಿ ಪೊಲೀಸರು ಅಡ್ಡ ನಿಂತು ಮಾವೋ ಭಾವಚಿತ್ರವನ್ನು ಮತ್ತಷ್ಟು ಅವಹೇಳನಕಾರಿ ಕೃತ್ಯಗಳಿಂದ ಪಾರು ಮಾಡಿದರೆಂದು ತಿಳಿಸಲಾಗಿತ್ತು. ಪ್ರತಿಭಟನಾಕಾರರ ನಡತೆ ಖಂಡನೀಯವಾದುದೆಂದು ಒಪ್ಪಿಕೊಂಡ ನವದೆಹಲಿ ಪತ್ರದಲ್ಲಿ, ಆದರೆ,

"ಭಾರತದಲ್ಲಿರುವ ಕಾನೂನಿನ ಪ್ರಕಾರ ಶಾಂತಿಯುತ ಪ್ರತಿಭಟನೆ, ಮೆರವಣಿಗೆಗಳನ್ನು ನಿಷೇಧಿಸಲಾಗದು ಎಂಬುದು ಚೈನಾ ಸರ್ಕಾರಕ್ಕೆ ನಿಸ್ಸಂದೇಹವಾಗಿ ಗೊತ್ತಿರುವ ವಿಷಯವೇ ಆಗಿದೆ...ಆಗಿಂದಾಗ್ಗೆ, ಸಂಸತ್ ಭವನದ ಸಮೀಪವೇ ಪ್ರತಿಭಟನೆ, ಮೆರವಣಿಗೆಗಳು ನಡೆಯುತ್ತವೆ. ಪ್ರತಿಭಟನಾಕಾರರು ಭಾರತದ ವರಿಷ್ಠರ ವಿರುದ್ಧವೂ ಘೋಷಣೆಗಳನ್ನು ಕೂಗುತ್ತಿರುತ್ತಾರೆ. ಬೇಜವಾಬ್ದಾರಿ ಜನರು, ಮಹಾತ್ಮಗಾಂಧೀ ಮತ್ತು ಪ್ರಧಾನ ಮಂತ್ರಿಗಳ ಭಾವಚಿತ್ರಗಳಿಗೆ ಅಗೌರವ ತೋರಿದ ಘಟನೆಗಳೂ ನಡೆದಿವೆ. ಕಾನೂನು ಹಾಗೂ ಭಾರತದ ಸಂವಿಧಾನ ಜನತೆಯ ಬಗ್ಗೆ ಉದಾರವಾಗಿದೆ,

ಎಲ್ಲಿಯವರೆಗೆ ಅವರು ಹಿಂಸಾಚಾರದಲ್ಲಿ ತೊಡಗುವುದಿಲ್ಲವೋ ಅಲ್ಲಿಯವರೆಗೆ ಅವರನ್ನು ಔದಾರ್ಯದಿಂದಲೇ ನಡೆಸಿಕೊಳ್ಳಲಾಗುತ್ತದೆ."

III

1959ರ ಸೆಪ್ಟಂಬರಿನಲ್ಲಿ ಭಾರತ ಸರ್ಕಾರ ಚೈನಾ ಸರ್ಕಾರದೊಂದಿಗೆ ಕಳೆದ ಐದು ವರ್ಷಗಳಲ್ಲಿ ನಡೆಸಿದ ಪತ್ರ ವ್ಯವಹಾರಕ್ಕೆ ಸಂಬಂಧಿಸಿದಂತೆ ಶ್ವೇತಪತ್ರ ಪ್ರಕಟಿಸಿತು. ಈ ಪತ್ರ ವ್ಯವಹಾರ, ಆಗಿಂದಾಗ್ಗೆ ತನ್ನ ಪ್ರದೇಶವೆಂದು ಹೇಳಿಕೊಂಡು ಚೀನಿ ಸೈನಿಕರು ನುಸುಳಿ ಬರುತ್ತಿದ್ದಂಥ ಸಣ್ಣಪುಟ್ಟ ತಕರಾರುಗಳಿಂದ ಹಿಡಿದು ಪಶ್ಚಿಮ ಮತ್ತು ಪೂರ್ವದ ಗಡಿಗಳ ಸ್ಥಾನಮಾನ, ಟಿಬೆಟ್‌ನಲ್ಲಿ ನಡೆದ ದಂಗೆಯ ಬಗೆಗಿನ ಭಿನ್ನಾಭಿಪ್ರಾಯಗಳಂಥ ಗಹನವಾದ ಪ್ರಶ್ನೆಗಳಿಗೆ ಸಂಬಂಧಿಸಿದ್ದಾಗಿತ್ತು.

ಚೈನಾ ಸರ್ಕಾರದ ಜೊತೆ ನಡೆಸಿದ ಪತ್ರ ವ್ಯವಹಾರವನ್ನು ಸಂಸತ್ತಿನಲ್ಲಿ ಮಂಡಿಸುವಂತೆ ಜನಸಂಘದ ಯುವ ನಾಯಕ ಅಟಲ ಬಿಹಾರಿ ವಾಜಪೇಯಿ ಸೇರಿದಂತೆ ವಿರೋಧ ಪಕ್ಷದ ಕೆಲವರು ಎಂಪಿಗಳು ಒತ್ತಾಯಪಡಿಸುತ್ತಿದ್ದರು. ಆಗಸ್ಟ್ ತಿಂಗಳಲ್ಲಿ ಗಡಿಯಲ್ಲಿ ಹಲವಾರು ಘಟನೆಗಳು ಸಂಭವಿಸಿದ್ದೇ ಸರ್ಕಾರ ತ್ವರಿತವಾಗಿ ಶ್ವೇತ ಪತ್ರ ಹೊರಡಿಸಲು ಕಾರಣವಾಯಿತು. ನೇಫಾದ ಕೆಲವು ಸ್ಥಳಗಳಲ್ಲಿ ಭಾರತ ಮತ್ತು ಚೀನಿ ಪಹರೆ ಪಡೆಗಳ ಸೈನಿಕರ ನಡುವೆ ಘರ್ಷಣೆ ಸಂಭವಿಸಿತ್ತು. ಲೋಂಗ್ಜುನಲ್ಲಿನ ಭಾರತೀಯ ಸಿಪಾಯಿ ಠಾಣ್ಯದ ಮೇಲೆ ಚೀನೀಯರು ಉಗ್ರಸ್ವರೂಪದ ದಾಳಿ ನಡೆಸಿದ್ದರು. ದಾಳಿಯನ್ನು ಹಿಮ್ಮೆಟ್ಟಿಸಲಾಗಿತ್ತು.

ಸರ್ಕಾರದ ದುರಾದೃಷ್ಟವೆಂಬಂತೆ ಶ್ವೇತಪತ್ರ ಪ್ರಕಟಣೆ ಸಮಯದಲ್ಲೇ ರಕ್ಷಣಾ ಸಚಿವರು ಮತ್ತು ಭೂಸೇನೆಯ ಪ್ರಧಾನ ದಂಡನಾಯಕರ ನಡುವೆ ಕ್ಷುದ್ರ ವೈಮನಸ್ಯ ತಲೆದೋರಿತು. ಆಗ ರಕ್ಷಣಾ ಮಂತ್ರಿಯಾಗಿದ್ದವರು ನೆಹರೂ ಅವರ ಹಳೆಯ ಮಿತ್ರ ವಿ.ಕೆ. ಕೃಷ್ಣ ಮೆನನ್. ರಾಜತಾಂತ್ರಿಕ ಸೇವೆ ಬಿಡಿಸಿ ಕರೆತಂದಿದ್ದ ಮೆನನ್ನರಿಗೆ ರಕ್ಷಣಾಮಂತ್ರಿ ಸ್ಥಾನ ನೀಡಲಾಗಿತ್ತು. ಶುರುವಿಗೆ ಸೇನೆ ಈ ನೇಮಕವನ್ನು ಸ್ವಾಗತಿಸಿತು. ಏಕೆಂದರೆ ಹಿಂದಿನ ರಕ್ಷಣಾಮಂತ್ರಿ ನಿಸ್ತೇಜರಾಗಿದ್ದರು. ಆದರೆ ಹೊಸ ಸಚಿವರು ತೀಕ್ಷ್ಣಮತಿಗಳೂ ಚುರುಕಿನವರೂ ಆಗಿದ್ದುದಷ್ಟೇ ಅಲ್ಲದೆ ನೆಹರೂ ನಿಕಟವರ್ತಿಯಾಗಿದ್ದರು. ರಕ್ಷಣಾ ಸಚಿವ ಗಾದಿಯಲ್ಲಿ ಸ್ಥಿರವಾಗಿ ನೆಲೆಯೂರಿದರು ಎನ್ನುವಷ್ಟರಲ್ಲೇ ಮೆನನ್ ಪ್ರಧಾನ ದಂಡನಾಯಕ ಜನರಲ್ ಕೆ.ಎಸ್. ತಿಮ್ಮಯ್ಯನವರ ಜೊತೆ ಜಗಳ ಶುರುಮಾಡಿದ್ದರು. ಜನರಲ್ ತಿಮ್ಮಯ್ಯ ತುಂಬ ಶಕ್ತಿವಂತರಾಗಿದ್ದರು.

ಕೊಡಗಿನ ಕಾಫಿ ಪ್ಲಾಂಟರ್ ಒಬ್ಬರ ಪುತ್ರನಾದ ಕೆ.ಎಸ್. ತಿಮ್ಮಯ್ಯ ಆರೂ ಕಾಲು ಅಡಿ ಎತ್ತರದ ಆಜಾನುಬಾಹು. ಆಕರ್ಷಕ ವ್ಯಕ್ತಿತ್ವದ ತಿಮ್ಮಯ್ಯ ಮಿಲಿಟರಿಯಲ್ಲಿ ದಕ್ಷ ಸೇನಾನಿಯಾಗಿ ಹೆಸರು ಪಡೆದಿದ್ದರು. ಅಲಹಾಬಾದಿನ ಸಿನಿಮಾ ಮಂದಿರದಲ್ಲಿ ಮಿಲಿಟರಿ ಸಮವಸ್ತ್ರದಲ್ಲಿದ್ದ ಯುವಕ ಅಧಿಕಾರಿಯೊಬ್ಬನನ್ನು ಹಿರಿಯರೊಬ್ಬರು, "ಒಬ್ಬ ಭಾರತೀಯನಾಗಿ

ಬ್ರಿಟಿಷ್ ಸೇನೆಯ ಸಮವಸ್ತ್ರ ಧರಿಸುವುದು ಹೇಗಿರುತ್ತದೆ?" ಎಂದು ಕೇಳಿದಾಗ ಯುವ ಅಧಿಕಾರಿ ಥಟ್ಟನೆ ಉತ್ತರಿಸಿದ್ದರು: "ಬಿಸಿ"ಯಾಗಿರುತ್ತೆ. ಕೇಳಿದವರು ಜವಹರಲಾಲ್ ನೆಹರೂ ಅವರ ತಂದೆ, ಸ್ವಾತಂತ್ರ್ಯ ಹೋರಾಟಗಾರ ಮೋತಿಲಾಲ್ ನೆಹರೂ. ಯುವ ಅಧಿಕಾರಿ 'ಟಿಮ್ಮಿ' ಎಂದೇ ಖ್ಯಾತರಾಗಿದ್ದ ತಿಮ್ಮಯ್ಯ. ಹೀಗೆ ಹಿರಿಕಿರಿಯರಿಬ್ಬರೂ ಮಿತ್ರರಾದರು. "ಕೆಲಸಕ್ಕೆ ರಾಜೀನಾಮೆ ಕೊಟ್ಟು ಸ್ವಾತಂತ್ರ್ಯ ಸಮರಕ್ಕೆ ಧುಮುಕಲೆ" ಎಂದು ತಿಮ್ಮಯ್ಯ ಮೋತಿಲಾಲ್ ನೆಹರೂ ಅವರನ್ನು ಕೇಳಿದರು. "ಬೇಡ-ಸ್ವಾತಂತ್ರ್ಯ ಬಂದಾಗ ಭಾರತಕ್ಕೆ ನಿಮ್ಮಂಥ ಅಧಿಕಾರಿಗಳ ಅಗತ್ಯವಿರುತ್ತೆ" ಎಂದಿದ್ದರು ನೆಹರೂ.

ತಿಮ್ಮಯ್ಯ ಎರಡನೆ ಮಹಾಯುದ್ಧದಲ್ಲಿ ಅಪ್ರತಿಮ ಶೌರ್ಯ ಸಾಹಸಗಳನ್ನು ಮೆರೆದಿದ್ದರು. ಭಾರತದ ಸ್ವಾತಂತ್ರ್ಯಕ್ಕೆ ಮುಂಚೆ ಇದು. ಸ್ವಾತಂತ್ರ್ಯ ಬಂದ ಭಾರತ ಸೇನೆಯಲ್ಲಿ ಸೇನಾಧಿಕಾರಿಯಾದ ಅವರು ಪಂಜಾಬಿನಲ್ಲಿ ವಿಭಜನೆಯ ನಿರಾಶ್ರಿತರ ಪುನರ್ವಸತಿ ಕಾರ್ಯ ನೋಡಿಕೊಂಡರು. ನಂತರ ಅವರನ್ನು ಕಾಶ್ಮೀರಕ್ಕೆ ಕಳುಹಿಸಲಾಯಿತು. ಅಲ್ಲಿ ತಿಮ್ಮಯ್ಯನವರ ನಾಯಕತ್ವದಲ್ಲಿ ಸೇನೆ ಕಣಿವೆಯನ್ನು ದಾಳಿಕೋರರಿಂದ ಮುಕ್ತಗೊಳಿಸಿತು. ಅನಂತರ ತಿಮ್ಮಯ್ಯ ಕೊರಿಯಾದಲ್ಲಿ ವಿಶ್ವಸಂಸ್ಥೆ ಕದನ ವಿರಾಮ ಪಡೆಯ ದಂಡನಾಯಕರಾಗಿ ಸೇವೆ ಸಲ್ಲಿಸಿದರು. ಇಲ್ಲಿ ಇವರು 22 ಸಾವಿರ ಕಮ್ಯುನಿಸ್ಟ್ ಯುದ್ಧ ಕೈದಿಗಳನ್ನು ಪುನರ್‌ವ್ಯವಸ್ಥೆಗೊಳಿಸುವ ಕಾರ್ಯದ ಮೇಲುಸ್ತುವಾರಿ ನೋಡಿಕೊಂಡಿದ್ದರು. ಚೈನಾ ಮತ್ತು ಅಮೆರಿಕ ಸೈದ್ಧಾಂತಿಕವಾಗಿ ತದ್ವಿರುದ್ಧವಾಗಿದ್ದರೂ ಇಲ್ಲಿ ತಿಮ್ಮಯ್ಯನವರ ದಕ್ಷ ಸೇವೆಯನ್ನು ಕೊಂಡಾಡುವುದರಲ್ಲಿ ಒಂದಾಗಿದ್ದವು.

ತಿಮ್ಮಯ್ಯ ಭಾರತದ ಸೇನೆಯಲ್ಲಿ ಆಧುನಿಕ ಹೀರೋ ಎನ್ನಿಸಿಕೊಂಡಿದ್ದರು. ನಿಜವಾದ ಅರ್ಥದಲ್ಲಿ ಅವರು ಆಧುನಿಕ ಮನೋಭಾವದವರಾಗಿದ್ದರು. ಆದರೆ ರಕ್ಷಣಾ ಸಚಿವರ ಜೊತೆ ಅವರಿಗೆ ಸಾಮರಸ್ಯ ಉಂಟಾಗಲಿಲ್ಲ. ಅಭಿಪ್ರಾಯ ಭೇದವೇ ಹೆಚ್ಚಾಗಿತ್ತು. ಚೀನವನ್ನು ಎದುರಿಸಲು ಸೇನೆ ಸಜ್ಜಾಗಿರಬೇಕೆಂಬುದು ತಿಮ್ಮಯ್ಯನವರ ನಿಲುವಾಗಿತ್ತು. ಆದರೆ ನಿಜವಾದ ಬೆದರಿಕೆ ಇರುವುದು ಪಾಕಿಸ್ತಾನದಿಂದ ಎಂದು ಭಾವಿಸಿದ್ದ ಕೃಷ್ಣ ಮೆನನ್ನರು ಭಾರತ-ಪಾಕ್ ಗಡಿಯಲ್ಲಿ ಸೈನ್ಯ ಜಮಾವಣೆಗೆ ಆದೇಶವಿತ್ತಿದ್ದರು. ಭಾರತ ಸೇನಾ ಪಡೆಯಲ್ಲಿದ್ದ ಶಸ್ತ್ರಾಸ್ತ್ರಗಳು ತುಂಬ ಹಳೆಯ ಕಾಲದವಾಗಿದ್ದವು. ನಮ್ಮ ಸೈನಿಕರಿಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಬೇಕೆಂಬುದು ತಿಮ್ಮಯ್ಯನವರ ಕಾಳಜಿಯಾಗಿತ್ತು. ಈಗಿರುವ 303 ಎನ್‌ಫೀಲ್ಡ್ ರೈಫಲ್ ಮೊದಲನೆ ಮಹಾಯುದ್ಧದ ಕಾಲದ್ದು. ಅದರ ಬದಲು ಭಾರತ ಬೆಲ್ಜಿಯಂನ ಎಫ್‌ಎನ್‌4 ಸ್ವಯಂಚಾಲಿತ ರೈಫಲುಗಳನ್ನು ತಯಾರಿಸಬೇಕೆಂದು ತಿಮ್ಮಯ್ಯ ಸಲಹೆ ಮಾಡಿದ್ದರು. "ತಾವು ದೇಶದಲ್ಲಿ ನ್ಯಾಟೋ ಶಸ್ತ್ರಾಸ್ತ್ರ ತಯಾರಿಕೆಗೆ ಆಸ್ಪದ ನೀಡುವುದಿಲ್ಲವೆಂದು" ಕೃಷ್ಣ ಮೆನನ್ ಕೋಪಾವಿಷ್ಟರಾಗಿ ಹೇಳಿದ್ದರು.

1959ರ ಆಗಸ್ಟ್ ಕೊನೆಯ ವಾರದಲ್ಲಿ, ತಿಮ್ಮಯ್ಯ ಮತ್ತು ಕೃಷ್ಣ ಮೆನನ್ ನಡುವಣ ಜಗಳ ತಾರಕಕ್ಕೇರಿತು. ಹನ್ನೆರಡು ಸೇನಾಧಿಕಾರಿಗಳ ಸೇವಾಹಿರಿತನವನ್ನು ಕಡೆಗಣಿಸಿ

ಬಿ.ಎಂ. ಕೌಲ್ ಎಂಬುವರಿಗೆ ಲೆಫ್ಟಿನೆಂಟ್ ಜನರಲ್ ಹುದ್ದೆಗೆ ಬಡ್ತಿ ನೀಡುವ ವಿಚಾರದಲ್ಲಿ ಇಬ್ಬರ ನಡುವಣ ಭಿನ್ನಾಭಿಪ್ರಾಯ ಸ್ಫೋಟಗೊಂಡಿತು. ಕೌಲ್ ಅವರು ಪ್ರಚಾರಪ್ರಿಯರಾಗಿದ್ದರು. ಜೊತೆಗೆ ನಾಟಕದಲ್ಲಿ ಅಭಿನಯಿಸುವ ಗೀಳೂ ಇತ್ತು. ಕೌಲ್, ಹೊಸ ವಸತಿ ಕಾಲೋನಿಯೊಂದರ ನಿರ್ಮಾಣದ ಮೇಲುಸ್ತುವಾರಿ ನಡೆಸಿದ್ದರು. ಇಲ್ಲಿ ಕೌಲ್ ಅವರ ಕಾರ್ಯನಿರ್ವಹಣೆ ಮೆನನ್ನರ ಮೆಚ್ಚುಗೆಗೆ ಪಾತ್ರವಾಗಿತ್ತು. ಸಮವಸ್ತ್ರದ ಸೇನಾಧಿಕಾರಿಗಳೂ ನಾಗರಿಕರ ಒಳಿತಿಗೆ, ಹಿತರಕ್ಷಣೆಗೆ ಹೇಗೆ ಸೇವೆಸಲ್ಲಿಸಬಹುದೆಂಬುದಕ್ಕೆ ಕೌಲ್ ಉತ್ತಮ ಉದಾಹರಣೆಯೆಂದು ಮೆನನ್ ಭಾವಿಸಿದ್ದರು. ಇದರ ಜೊತೆಗೆ, ನೆಹರೂ ಕೌಲ್ ಅವರನ್ನು ಬಲ್ಲವರಾಗಿದ್ದರು. ಕೌಲ್, ಸಂದರ್ಭ ಬಂದಾಗಲೆಲ್ಲ ತಮ್ಮ ನೆಹರೂ ಸಾಮೀಪ್ಯವನ್ನು ಪ್ರಚುರಗೊಳಿಸುತ್ತಿದ್ದರು.

ಕೌಲ್ ಅವರಿಗೆ ಅವರದೇ ಆದ ಗುಣವಿಶೇಷಗಳೂ ಇದ್ದವು. ಸಹೋದ್ಯೋಗಿಯೊಬ್ಬರು ಬಣ್ಣಿಸಿರುವಂತೆ, ಕೌಲ್ 'ಒಂದು ಜೀವ ತಂತು, ತೀಕ್ಷ್ಣಮತಿ, ಸಾಹಸಿ ಮತ್ತು ಶಕ್ತಿಶಾಲಿ' ವ್ಯಕ್ತಿಯಾಗಿದ್ದರು. ಆದರೆ ಅವರು, ಆತ್ಮನಿಷ್ಠರೂ ಭಾವುಕರೂ ಆದ ತಿಕ್ಕಲು ವ್ಯಕ್ತಿಯಾಗಿದ್ದರು. ಕೌಲ್ ಅವರಿಗೆ ಶತ್ರು ದಮನ ಹೋರಾಟದಲ್ಲಿ ಹೆಚ್ಚಿನ ಅನುಭವವಿಲ್ಲ ಎನ್ನುವುದು ತಿಮ್ಮಯ್ಯನವರ ಅಭಿಪ್ರಾಯವಾಗಿತ್ತು. ಏಕೆಂದರೆ ಅವರು ತಮ್ಮ ವೃತ್ತಿ ಜೀವನದ ಬಹುಪಾಲನ್ನು ಆರ್ಮಿ ಸರ್ವಿಸ್ ಕೋರ್‌ನಲ್ಲಿ ಸವೆಸಿದ್ದರು. ಇಲ್ಲಿನ ಅನುಭವ ಸೇನಾಪಡೆಗಳ ಕೇಂದ್ರ ಕಚೇರಿಯ ಕೆಲಸಕಾರ್ಯಗಳಿಗೆ ಅನಗತ್ಯವಾಗಿತ್ತು. ಹೀಗಾಗಿ ಕೌಲ್ ಈ ಹುದ್ದೆಗೆ ಅರ್ಹರಲ್ಲ ಎಂದು ತಿಮ್ಮಯ್ಯ ಪರಿಗಣಿಸಿದ್ದರು. ಆದರೆ ಕೌಲ್ ಈ ಹುದ್ದೆಗೆ ಬಡ್ತಿ ಪಡೆದಿದ್ದರು. ಕೌಲ್ ಅವರ ಬಡ್ತಿ, ಹಾಗೂ ಸಚಿವರಿಂದ ಅನುಭವಿಸಿದ ಅಪಮಾನಗಳಿಂದ ಬೇಸತ್ತಿದ್ದ ತಿಮ್ಮಯ್ಯ ರಾಜೀನಾಮೆ ಕೊಡಲು ಮುಂದಾದರು. 1959ರ ಆಗಸ್ಟ್ 31ರಂದು ಜನರಲ್ ತಿಮ್ಮಯ್ಯ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು "ಈಗಿನ ರಕ್ಷಣಾ ಸಚಿವರ ಅಧೀನರಾಗಿ ಕೆಲಸ ಮಾಡುವುದು, ಹೊಣೆಗಾರಿಕೆ ನಿರ್ವಹಿಸುವುದು ತಮಗೆ ಮತ್ತು ಇನ್ನಿಬ್ಬರು ಪ್ರಧಾನ ದಂಡನಾಯಕರಿಗೆ ಅಸಾಧ್ಯವಾಗಿದೆ" ಎಂದು ತಿಳಿಸಿದರು. "ಸಂದರ್ಭ-ಸನ್ನಿವೇಶಗಳು ಈ ಹುದ್ದೆಯಲ್ಲಿ ಮುಂದುವರಿಯಲು ನನಗೆ ಆಸ್ಪದ ನೀಡುತ್ತಿಲ್ಲ" ಎಂದು ಅವರು ಪತ್ರದಲ್ಲಿ ಖಚಿತವಾಗಿ ಹೇಳಿದ್ದರು.

ಭೂಸೇನೆಯ ಪ್ರಧಾನ ದಂಡನಾಯಕರ ರಾಜೀನಾಮೆ ಸುದ್ದಿ ಬಹಿರಂಗವಾಯಿತು. ಸಂಸತ್ತಿನಲ್ಲಿ ಇದರ ಚರ್ಚೆಯಾಯಿತು. ಪತ್ರಿಕೆಗಳ ಅಂಕಣಗಳಲ್ಲೂ ಚರ್ಚೆಯಾಯಿತು. ತಿಮ್ಮಯ್ಯನವರನ್ನು ವಿರೋಧಿಸಿದವರು ಇ.ಎಂ.ಎಸ್. ನಂಬೂದಿರಿ ಪಾಡರಂಥ ಕಮ್ಯುನಿಸ್ಟ್ ನಾಯಕರು. ತಿಮ್ಮಯ್ಯನವರನ್ನು ಮಿಲಿಟರಿ ನ್ಯಾಯಾಲಯದ ವಿಚಾರಣೆಗೆ ಗುರಿಪಡಿಸಬೇಕೆಂದು ನಂಬೂದಿರಿ ಪಾಡ್ ಹೇಳಿದರು. ತಿಮ್ಮಯ್ಯ ಅಮೆರಿಕ ಲಾಬಿಗೆ ಬಲಿಯಾಗಿದ್ದಾರೆಂದು ಮುಂಬಯಿಯ 'ಬ್ಲಿಟ್ಜ್' ಪತ್ರಿಕೆ ಬರೆಯಿತು. ತಿಮ್ಮಯ್ಯನವರ ಪರ ನಿಂತದ್ದು, 'ಬ್ಲಿಟ್ಜ್' ಪ್ರತಿಸ್ಪರ್ಧಿಯಾದ 'ಕರೆಂಟ್' ನಿಯತಕಾಲಿಕ. ಅಲ್ಲದೇ ಸೈದ್ಧಾಂತಿಕ ಬದ್ಧತೆಯಿಲ್ಲದ ಅನೇಕ

ಪತ್ರಿಕೆಗಳು ತಿಮ್ಮಯ್ಯನವರ ಪರ ನಿಂತವು. ಸಾಮಾನ್ಯವಾಗಿ ಸರ್ಕಾರಿಪರ ಎಂದು ಭಾವಿಸಲಾದ "ಹಿಂದೂಸ್ತಾನ್ ಟೈಮ್ಸ್" "ಕೃಷ್ಣ ಮೆನನ್ ತೊಲಗಲಿ" ಎಂದು ಬರೆಯಿತು. ಸಚಿವರು ಸಶಸ್ತ್ರ ಪಡೆಗಳ ನೈತಿಕ ಸ್ಥೈರ್ಯವನ್ನು ಕುಗ್ಗಿಸಿದ್ದಾರೆಂದು ಈ ಪತ್ರಿಕೆ ಆರೋಪಿಸಿತು. ತಮಗೆ ನಿಷ್ಠರಾದ ಅಧಿಕಾರಿಗಳ ಕೂಟವೊಂದನ್ನು ಸೇನೆಯ ಉನ್ನತಸ್ಥಾನದಲ್ಲಿ ಸೃಷ್ಟಿಸುವ ಮೂಲಕ ಸಚಿವರು ಸೇನೆಯ ನೈತಿಕ ಸ್ಥೈರ್ಯ ಕುಂದಿಸುವ ಕೆಲಸಮಾಡಿದ್ದಾರೆಂದು ಪತ್ರಿಕೆ ನೇರವಾಗಿ ಆಪಾದಿಸಿತ್ತು.

ತಿಮ್ಮಯ್ಯ ಅವರ ರಾಜೀನಾಮೆ ಗದ್ದಲದಿಂದಾಗಿ ಕೃಷ್ಣ ಮೆನನ್ ಸಚಿವ ಸ್ಥಾನ ತ್ಯಜಿಸಬೇಕಾಗಿ ಬರಬಹುದೆಂದು ಕೆಲವರು ಭಾವಿಸಿದ್ದರು. ಸುಪ್ರಸಿದ್ಧ ವಕೀಲರೊಬ್ಬರು ತಿಮ್ಮಯ್ಯನವರಿಗೆ ಪತ್ರ ಬರೆದು ಕೃಷ್ಣ ಮೆನನ್‌ರನ್ನು "ಭಾರತೀಯ ರಾಜಕಾರಣದಲ್ಲಿ ಕೇಡಿಗ ಬುದ್ಧಿಜೀವಿ" ಎಂದು ಕರೆದಿದ್ದರು. "ನಿಮ್ಮ ಕ್ರಮದಿಂದಾಗಿ ಮೆನನ್ ರಾಜೀನಾಮೆ ಅನಿವಾರ್ಯವಾದಲ್ಲಿ ಭಾರತ ಹಾಯ್ ಎಂದು ನಿಟ್ಟುಸಿರುಬಿಡುವುದು. ನಿಮಗೆ ಭಾರತ ಹೃತ್ಪೂರ್ವಕವಾಗಿ ಕೃತಜ್ಞವಾಗಿರುವುದು" ಎಂದು ಈ ವಕೀಲರು ಬರೆದಿದ್ದರು. ನೆಹರೂ, ತಿಮ್ಮಯ್ಯನವರನ್ನು ತಮ್ಮ ಕಚೇರಿಗೆ ಕರೆಸಿಕೊಂಡು ಎರಡು ಸಲ ಸುದೀರ್ಘ ಮಾತುಕತೆ ನಡೆಸಿ ರಾಜೀನಾಮೆ ಹಿಂದೆಗೆದುಕೊಳ್ಳುವಂತೆ ಅವರ ಮನ ಒಲಿಸಿದರು. ಬಡ್ತಿಗೆ ಸಂಬಂಧಿಸಿದ ಎಲ್ಲ ಮುಖ್ಯ ವಿಷಯಗಳಲ್ಲೂ ಅವರ ಜೊತೆ ಸಮಾಲೋಚಿಸುವುದಾಗಿ ನೆಹರೂ ಭರವಸೆ ನೀಡಿದರು. ಈಗ ಡೆಹ್ರಾಡೂನ್‌ನಲ್ಲಿ ವಿಶ್ರಾಂತ ಜೀವನ ನಡೆಸುತ್ತಿರುವ ಟಿಮ್ಮಿಯ ಹಳೆಯ ಮಿತ್ರರು "ನೀವು ರಾಜೀನಾಮೆಗೆ ಪಟ್ಟುಹಿಡಿಯಬೇಕಾಗಿತ್ತು. ಏಕೆಂದರೆ ಈಗ ಯಾರನ್ನೂ ತೆಗೆಯಲಿಲ್ಲ, ಅಥವಾ ಬಿಡಲಿಲ್ಲ. ಈ ಮಧುಚಂದ್ರ ಹೆಚ್ಚು ದಿನ ನಡೆಯುವುದಿಲ್ಲ, ನೀವೇ ಅದನ್ನು ಕಾಣುವಿರಿ" ಎಂದು ಅಭಿಪ್ರಾಯಪಟ್ಟಿದ್ದರು.

ಚೈನಾ ಕುರಿತ ಶ್ವೇತ ಪತ್ರ ಪ್ರಕಟಣೆ, ಜನರಲ್ ತಿಮ್ಮಯ್ಯನವರ ರಾಜೀನಾಮೆ ಪ್ರಕರಣದ ಹಿನ್ನೆಲೆಯಲ್ಲಿ ರಕ್ಷಣಾ ಸಚಿವರ ವಿರುದ್ಧ ತೀವ್ರ ಭಾವನೆಗಳನ್ನು ಎಬ್ಬಿಸಿತು. ಏಕೆಂದರೆ ಸಂಸತ್ ಸದಸ್ಯರಿಗೇ ಚೈನಾ ಭಾರತದ ಪ್ರದೇಶದ ಮೇಲೆ ಇಷ್ಟೊಂದು ಹಕ್ಕು ಸಾಧಿಸುತ್ತಿರುವ ವಿಷಯ ತಿಳಿದಿರಲಿಲ್ಲ. ಚೈನಾ ಭಾರತದ ಗಡಿಪ್ರದೇಶದಲ್ಲಿ ಠಾಣ್ಯಗಳನ್ನು ಸ್ಥಾಪಿಸಿತ್ತು. ಏನಿಲ್ಲವಾದರೂ ಭೂಪಟದ ಮೇಲೆ ರಸ್ತೆಗಳನ್ನು ನಿರ್ಮಿಸಿತ್ತು. ಇದು ಗಡಿಯ ರಕ್ಷಣೆ ಹೊತ್ತವರ ಅಮಿತ ಕರ್ತವ್ಯಲೋಪವಾಗಿತ್ತು. ವಿರೋಧ ಪಕ್ಷದ ಸದಸ್ಯರು ಚೀನ ಭಾರತದ ವಿರುದ್ಧ ಭೂಪಟದಲ್ಲಿ ನಡೆಸಿದ್ದ ಅತಿಕ್ರಮಣವನ್ನು ಪೇಟೆಗಳ ಬೀದಿಯಲ್ಲಿ ಸಾರಿದರು. 'ಹಿಂದು-ಚೀನಿ ಭಾಯಿ ಭಾಯಿ' ಎಂದು ನವದೆಹಲಿ ಇನ್ನೂ ನಂಬಿರಬಹುದು, ಆದರೆ ಪೀಕಿಂಗ್, 'ವಚನ ಕೊಡುವುದೇ ಭಂಗಮಾಡಲು' ಎನ್ನುವ ಲೆನಿನ್ ನುಡಿಯನ್ನು ಈಗಾಗಲೇ ಪಾಲಿಸಿದೆ ಎಂದು ಸಮಾಜವಾದಿ ಸಂಸದರೊಬ್ಬರು ಪ್ರತಿಕ್ರಿಯಿಸಿದ್ದರು.

ಬಹುಶಃ ಇದಕ್ಕೆಲ್ಲ ಪ್ರಧಾನ ಮಂತ್ರಿಯವರನ್ನೇ ಹೊಣೆಗಾರರನ್ನಾಗಿಸಬೇಕಿತ್ತು. ಆದರೆ ಅವರ ಆಪ್ತ ಕೃಷ್ಣ ಮೆನನ್ ವಿರುದ್ಧ ಬೆರಳು ತೋರಲಾಯಿತು. ಚೈನಾದ ಆಕ್ರಮಣ

ಎದುರಿಸಲು ದೇಶ ಪೂರ್ವಸಿದ್ಧತೆ ನಡೆಸಿಲ್ಲ ಎನ್ನುವಂಥ ಶೋಚನೀಯ ಸ್ಥಿತಿಗೆ ಭಾರತದ ರಕ್ಷಣಾ ಪಡೆಗಳ ಚುಕ್ಕಾಣಿ ಹಿಡಿದಿರುವ ವ್ಯಕ್ತಿಯನ್ನೇ, ಅಂದರೆ ರಕ್ಷಣಾ ಸಚಿವರನ್ನೇ ದೂಷಿಸಬೇಕಾಗುತ್ತದೆ ಎಂದು 'ಕರೆಂಟ್' ಪತ್ರಿಕೆ ಕಟುವಾಗಿ ಟೀಕಿಸಿತು. ಕಾಂಗ್ರೆಸ್ ಸದಸ್ಯರೂ ಕೃಷ್ಣ ಮೆನನ್ನರ ತಲೆದಂಡಕ್ಕೆ ಒತ್ತಾಯಪಡಿಸಲಾರಂಭಿಸಿದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ನೆಹರೂ ಅವರ ದೀರ್ಘಕಾಲೀನ ಒಡನಾಡಿಯೂ ಆಗಿದ್ದ ಗೃಹ ಸಚಿವ ಗೋವಿಂದ ವಲ್ಲಭ ಪಂತ್ ಅವರು, ಮೆನನ್ ಅವರ ಖಾತೆ ಬದಲಾಯಿಸಿ ಸಂಪುಟದಲ್ಲೇ ಉಳಿಸಿಕೊಳ್ಳುವಂತೆ ಸಲಹೆ ಮಾಡಿದರು. ಆಗ ಸಂಸತ್ ಸದಸ್ಯರಾಗಿದ್ದ ಗೌರವಾನ್ವಿತ ಪತ್ರಕರ್ತ ಬಿ. ಶಿವರಾವ್ ಅವರು "ಕೃಷ್ಣ ಮೆನನ್ ಅವರನ್ನು ಸಂಪುಟದಲ್ಲಿ ಉಳಿಸಿಕೊಳ್ಳುವ ನಿಮ್ಮ ಪಟ್ಟಿನಿಂದಾಗಿ ನನಗೆ ತುಂಬ ಕಳವಳವುಂಟಾಗಿದೆ" ಎಂದು ನೆಹರೂಗೆ ಪತ್ರ ಬರೆದರು. "ಕಮ್ಯುನಿಸ್ಟ್ ಶಕ್ತಿಯಿಂದ ನಾವು ಭೀಕರ ಅಪಾಯವನ್ನು ಎದುರಿಸುತ್ತಿದ್ದೇವೆ. ನಿಮಗೆ ತಿಳಿದಿರುವಂತೆ ಅವರು ಕಮ್ಯುನಿಸ್ಟ್ ಸಹಾನುಭೂತಿಪರರು ಎಂಬ ಶಂಕೆ ದಟ್ಟವಾಗಿದೆ. ಈ ಪತ್ರ ಬರೆಯುವುದು ನನಗೆ ಸಂತಸದ ವಿಷಯವೇನಲ್ಲ. ನಿಮಗೆ ಇದೊಂದು ಕಷ್ಟಕರ ನಿರ್ಧಾರವಾಗಲಿದೆ ಎನ್ನೂವುದೂ ನನಗೆ ಗೊತ್ತು. ಆದರೆ ತುರ್ತು ಪರಿಸ್ಥಿತಿ ತಲೆದೋರಿ ಅದು ಹೇಗೆ ಪರ್ಯವಸಾನ ಹೊಂದುವುದೋ ಯಾರಿಂದಲೂ ಭವಿಷ್ಯ ನುಡಿಯಲಾಗದು". ಇದು ಶಿವರಾವ್ ಅವರ ಪತ್ರದ ಒಕ್ಕಣೆಯಾಗಿತ್ತು.

ನೆಹರೂ ತಮ್ಮ ಪಟ್ಟು ಬಿಡಲಿಲ್ಲ. ಕೃಷ್ಣ ಮೆನನ್ನರನ್ನು ಬಿಡಲಿಲ್ಲ. ಏತನ್ಮಧ್ಯೆ ಚೈನಾದ ಜೊತೆ 'ರಾಜತಾಂತ್ರಿಕ' ವ್ಯವಹಾರಗಳು ಮುಂದುವರಿದಿದ್ದವು. 1959ರ ಸೆಪ್ಟಂಬರ್ 8ರಂದು ಕೊನೆಗೂ ಚೌ ಎನ್ ಲಾಯ್ ನೆಹರೂ ಅವರ ಮಾರ್ಚ್ 22ರ ಭಾರತದ ನಿಲುವು ಸ್ಪಷ್ಟಪಡಿಸಿದ್ದ ಪತ್ರಕ್ಕೆ ಉತ್ತರ ಕಳುಹಿಸಿದರು. ಚೈನಾದ ಟಿಬೆಟ್ ಪ್ರದೇಶದ ಮೇಲಿನ ಬ್ರಿಟನ್ ಆಕ್ರಮಣ ನೀತಿಯನ್ವಯ ಸೃಷ್ಟಿಯಾಗಿರುವ ಪರಿಸ್ಥಿತಿಗೆ ಚೈನಾ ವಿಧ್ಯುಕ್ತ ಮಾನ್ಯತೆ ನೀಡಬೇಕೆಂಬ ಭಾರತದ ಅಪೇಕ್ಷೆಗೆ ಚೈನಾ ಅಚ್ಚರಿ ವ್ಯಕ್ತಪಡಿಸಿತ್ತು. ಮೆಕ್‌ಮಹೋನ್ ರೇಖೆಯನ್ನು ಚೈನಾ ಸರ್ಕಾರ ಸಂಪೂರ್ಣವಾಗಿ ಮಾನ್ಯ ಮಾಡುವುದಿಲ್ಲವೆಂದು ಪತ್ರದಲ್ಲಿ ಘೋಷಿಸಲಾಗಿತ್ತು. ಇಡೀ ಚೈನಾ-ಭಾರತ ಗಡಿಯನ್ನು ಗುರುತಿಸಿಯೇ ಇಲ್ಲ ಎಂಬ ಬಿಗಿ ನಿಲುವು ತಾಳಿದ್ದ ಚೀನ "ಉಭಯತ್ರರಿಗೂ ನ್ಯಾಯೋಚಿತವೂ ತರ್ಕಬದ್ಧವೂ ಆಗುವ ರೀತಿಯಲ್ಲಿ ಹೊಸ ಒಪ್ಪಂದ ಮಾಡಿಕೊಳ್ಳೋಣ" ಎಂದು ಚೈನಾ ಆಗ್ರಹಪಡಿಸಿತ್ತು. ಟಿಬೆಟ್ ದಂಗೆಯ ನಂತರ ಬಿಕ್ಕಟ್ಟು ಹೆಚ್ಚಿದೆ ಎಂದು ಪತ್ರದಲ್ಲಿ ಪ್ರಸ್ತಾಪಿಸಲಾಗಿತ್ತು. ದಂಗೆಯ ನಂತರ ಭಾರತದ ಪಡೆಗಳು ಟಿಬೆಟ್ಟಿನ ಸಶಸ್ತ್ರ ದಂಗೆಕೋರರಿಗೆ ನೆರವು ನೀಡುತ್ತಿದ್ದು, ಪೂರ್ವ ವಲಯದ ಭಾರತ ಚೀನ ಗಡಿಯಲ್ಲಿ ಕ್ರಮೇಣ ಮುನ್ನುಗ್ಗುತ್ತಿದ್ದಾರೆ ಎಂದು ಚೌ ಎನ್ ಲಾಯ್ ಪತ್ರಕ್ಕೆ ಮಂಗಳ ಹಾಡಿದ್ದರು.

ನೆಹರೂ ಅವರು ಕೂಡಲೇ ಇದಕ್ಕೆ ಪ್ರತ್ಯುತ್ತರ ಬರೆದು "ಸ್ವತಂತ್ರ ಭಾರತ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಫಲವನ್ನು ಅನುಭೋಗಿಸಲು ಪ್ರಯತ್ನಿಸುತ್ತಿದೆ" ಎನ್ನುವ ಆಪಾದನೆಗೆ

ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದ್ದರು. 1914ರಿಂದ 1947ರವರೆಗೆ ಚೀನದಲ್ಲಿ ಅಧಿಕಾರದಲ್ಲಿದ್ದ ಯಾವ ಸರ್ಕಾರವೂ ಮೆಕ್‌ಮಹೋನ್ ರೇಖೆಗೆ ಆಕ್ಷೇಪಣೆ ವ್ಯಕ್ತಪಡಿಸಿರಲಿಲ್ಲ ಎನ್ನುವ ಅಂಶವನ್ನು ನೆಹರು ಎತ್ತಿ ತೋರಿಸಿದ್ದರು. ಭಾರತ ಸಶಸ್ತ್ರ ಟಿಬೆಟಿಯನ್ನರಿಗೆ ನೆರವು ನೀಡುತ್ತಿದೆ ಎಂಬುದನ್ನು ನಿರಾಕರಿಸಿದ್ದರು. ಚೌ ಎನ್ ಲಾಯ್ ಅವರ ಪತ್ರದ ದನಿ, ಧಾಟಿಗಳ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದ ನೆಹರೂ ಚೀನದ ಜನತಾ ಗಣರಾಜ್ಯ ಮಾನ್ಯತೆ ನೀಡಿದ ಮೊದಲ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದ್ದು ಅಂದಿನಿಂದ ಸತತವಾಗಿ ಚೀನದೊಂದಿಗೆ ಸ್ನೇಹ ವಿಶ್ವಾಸಗಳನ್ನು ಬಯಸುತ್ತಿದೆ ಎಂಬುದನ್ನು ಜ್ಞಾಪಿಸಿದ್ದರು.

ಈ ವೇಳೆಗೆ ಭಾರತ ಚೈನಾ ನಡುವೆ ಪತ್ರ ವಿನಿಮಯ, ಗುಂಡಿನ ವಿನಿಮಯ ಎರಡೂ ನಡೆದಿದ್ದವು. 1959ರ ಆಗಸ್ಟ್ ತಿಂಗಳಲ್ಲಿ ಪೂರ್ವ ವಲಯದಲ್ಲಿ ಮೆಕ್‌ಮಹೋನ್ ರೇಖೆಯಲ್ಲಿರುವ ಲೊಂಗ್‌ಜುನಲ್ಲಿ ಗುಂಡಿನ ಕಾಳಗ ನಡೆದಿತ್ತು. ಅನಂತರ 59ರ ಅಕ್ಟೋಬರಿನಲ್ಲಿ ಲಡಾಖ್‌ನ ಕೊಂಗ್‌ಕಾ ಕಣಿವೆ ಪ್ರದೇಶದಲ್ಲಿ ಚೀನದ ಸೈನಿಕರು ಭಾರತದ ಕಾವಲು ಪಡೆ ಮೇಲೆ ದಾಳಿ ನಡೆಸಿದರು. ಇದರಲ್ಲಿ ಭಾರತದ ಒಂಭತ್ತು ಮಂದಿ ಸೈನಿಕರು ಹತರಾಗಿದ್ದರು. ಇಷ್ಟೇ ಸಂಖ್ಯೆಯ ಸಿಪಾಯಿಗಳನ್ನು ಸೆರೆಹಿಡಿಯಲಾಗಿತ್ತು. ಭಾರತದ ಸಿಪಾಯಿಗಳು ಉದ್ದೇಶಪೂರ್ವಕವಾಗಿ ತಮ್ಮ ಪ್ರದೇಶದೊಳಕ್ಕೆ ಅತಿಕ್ರಮವಾಗಿ ಪ್ರವೇಶಿಸಿದರೆಂದು ಚೀನ ವಾದಿಸಿತು. ತಮ್ಮ ಸಿಪಾಯಿಗಳು ತಮ್ಮ ಗಡಿಪ್ರದೇಶದೊಳಗೇ ಕಾವಲು ಕೆಲಸದಲ್ಲಿ ನಿರತರಾಗಿದ್ದರೆಂಬುದು ಭಾರತದ ಪ್ರತಿವಾದವಾಗಿತ್ತು.

ಈ ಘರ್ಷಣೆಗಳಿಂದಾಗಿ ನವದೆಹಲಿ ತನ್ನ ಗಡಿ ನೀತಿಯನ್ನು ಪುನರ್‌ಪರಿಶೀಲಿಸುವುದು ಅನಿವಾರ್ಯವಾಯಿತು. ಅಸಾಧಾರಣವೆನ್ನಬಹುದಾದ ಅಂಶವೆಂದರೆ ಇಲ್ಲಿಯವರೆಗೆ ಚೀನಾದೊಂದಿಗೆ ಗಡಿಯ ಹೊಣೆ ಸೈನ್ಯಕ್ಕೆ ಸೇರದೆ ಬೇಹುಗಾರಿಕೆ ಇಲಾಖೆಗೆ ಸೇರಿದ್ದಾಗಿತ್ತು. ಗಡಿಯ ಠಾಣ್ಯಗಳನ್ನು ಅರೆ ಸೈನಿಕ ಪಡೆಯ ತುಕಡಿಗಳು ನೋಡಿಕೊಳ್ಳುತ್ತಿದ್ದವು. ಪೂರ್ವದಲ್ಲಿ ಅಸ್ಸಾಂ ರೈಫಲ್ಸ್ ಹಾಗೂ ಪಶ್ಚಿಮದ ಗಡಿಯಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆ ಕಾವಲು ಕಾಯುವ ಕೆಲಸ ನಿರ್ವಹಿಸುತ್ತಿದ್ದವು. ಸೇನಾ ಪಡೆಗಳನ್ನು ಪಾಕಿಸ್ತಾನದ ಗಡಿಯಲ್ಲಿ ತೊಡಗಿಸಲಾಗಿತ್ತು. ಪಾಕಿಸ್ತಾನ ಭಾರತದ ಮುಖ್ಯ ಆತಂಕವಾಗಿದ್ದು ತನಗಿರುವ ಏಕೈಕ ಮಿಲಿಟರಿ ಬೆದರಿಕೆ ಪಾಕಿಸ್ತಾನದಿಂದ ಮಾತ್ರ ಎಂಬ ಭಾವನೆ ಇತ್ತು. ಲೋಂಗ್‌ಜು ಮತ್ತು ಕೊಂಗ್ ಕಾ ಕಣಿವೆ ಘಟನೆಗಳ ನಂತರ ಸೇನೆಯ ನಾಲ್ಕನೆ ತುಕಡಿಯನ್ನು ಪಂಜಾಬಿನಿಂದ ನೇಫಾಕ್ಕೆ ವರ್ಗಾಯಿಸಲಾಯಿತು. ಇದೊಂದು ಗಮನಾರ್ಹವಾದ ಬದಲಾವಣೆಯಾಗಿತ್ತು. ನಾಲ್ಕನೆ ತುಕಡಿ ಬಯಲು ಸೀಮೆಯ ಟ್ಯಾಂಕ್ ಸಮರದಲ್ಲಿ ಹೋರಾಟದ ತರಬೇತಿ ಪಡೆದಿತ್ತು. ಅದು ಈಗ ವಿಭಿನ್ನವಾದ ಭೂಪ್ರದೇಶದಲ್ಲಿ ಕೆಲಸ ಮಾಡಬೇಕಾಗಿ ಬಂತು.

ಹೀಗೆ ಗಡಿ ನೀತಿಯನ್ನು ಪರಿಷ್ಕರಿಸಿದ ಭಾರತ ಸರ್ಕಾರ ಗಡಿ ಸಮೀಪದ ನಿರ್ಜನ ಪ್ರದೇಶದಲ್ಲಿ ಸಣ್ಣಸಣ್ಣ ಠಾಣ್ಯಗಳನ್ನು ಸ್ಥಾಪಿಸಿ ಸೇನೆಯನ್ನು ಅಲ್ಲಿರಿಸಿತು. ದೆಹಲಿಯಿಂದ ಈ ಸೇನೆಯ ಕಾರ್ಯ ಚಟುವಟಿಕೆಗಳ ಮೇಲೆ ನಿಗಾ ಇಡಲಾಯಿತು. ಯಾವ ಯಾವ

ಪ್ರದೇಶಗಳಲ್ಲಿ ಸೇನಾ ಠಾಣ್ಯಗಳನ್ನು ಸ್ಥಾಪಿಸಲಾಗಿದೆ ಎಂಬುದನ್ನು ಗುರುತಿಸಿದ ಭೂಪಟಗಳು ರಕ್ಷಣಾ ಸಚಿವಾಲಯದಲ್ಲಿ ಕಾಣಿಸಿಕೊಂಡವು. ಆದರೆ ಚೈನಾ ತನ್ನ ಕಡೆಯಿಂದ ಸದ್ದಿಲ್ಲದೇ ಆಕ್ರಮಿಸಿದ್ದ ಖಾಲಿ ಸ್ಥಳಗಳು ಈ ಭೂಪಟಗಳಲ್ಲಿರಲಿಲ್ಲ. ಈಗ ಇವೆಲ್ಲ ಗಡಿ ವಿವಾದಗಳಾಗಿ ಪರಿಣಮಿಸಿವೆ.

IV

1959ರ ವೇಳೆಗೆ ಒಂದು ಅಂಶ ಸ್ಪಷ್ಟವಾಗಿತ್ತು. ಅದು: ಭಾರತ ಮತ್ತು ಚೈನಾ ನಡುವಣ ಗಡಿ ಪ್ರಶ್ನೆ ಅಸಂಗತ. ಗಡಿ ಎನ್ನುವುದಿತ್ತು, ಕರಾರು, ಒಪ್ಪಂದ, ಸಂಪ್ರದಾಯಗಳನ್ವಯ ಈ ಗಡಿಗಳನ್ನು ಮಾನ್ಯ ಮಾಡಲಾಗಿತ್ತು ಎನ್ನುವುದು ಭಾರತದ ಆಗ್ರಹಪೂರ್ವಕ ನಿಲುವಾಗಿತ್ತು. ಆದರೆ, ಗಡಿಯನ್ನು ಯಾವತ್ತೂ ಗುರುತಿಸಿಯೇ ಇಲ್ಲ ಎನ್ನುವುದು ಚೀನಾದ ನಿಲುವಾಗಿತ್ತು. ಈ ಎರಡೂ ರಾಷ್ಟ್ರಗಳ ಹಕ್ಕೊತ್ತಾಯಗಳಿಗೆ ಆಧಾರವಾಗಿದ್ದದ್ದು ಬ್ರಿಟಿಷ್ ಸಾಮ್ರಾಜ್ಯಶಾಹಿ ಹಾಗೂ ಟಿಬೆಟ್ ಮೇಲಿನ ಚೀನಾ ಸಾಮ್ರಾಜ್ಯಶಾಹಿ ಬಳುವಳಿಗಳೇ ಆಗಿದ್ದವು. ಈ ಅರ್ಥದಲ್ಲಿ ಎರಡೂ ರಾಷ್ಟ್ರಗಳು, ನ್ಯಾಯೋಚಿತವಲ್ಲದ ರೀತಿಯಲ್ಲಿ ಸ್ವಾಧೀನಪಡಿಸಿಕೊಂಡ ಪ್ರದೇಶಗಳ ಮೇಲೆ ಸಾರ್ವಭೌಮತ್ವ ಸ್ಥಾಪಿಸಲು ಹೆಣಗಾಡುತ್ತಿದ್ದವು.

ಒಮ್ಮೆ ಹಿಂದಿರುಗಿ ನೋಡಿದಾಗ, ಕಂಡು ಬರುವುದು ಏನೆಂದರೆ: ಪಾಶ್ಚಾತ್ಯ ಸಾಮ್ರಾಜ್ಯಶಾಹಿ ವಿರುದ್ಧ ಚೀನೀಯರ ವಿರೋಧ, ಪ್ರತಿಭಟನೆಗಳನ್ನು ಭಾರತ ಕೀಳಂದಾಜು ಮಾಡಿತ್ತು. ಇಪ್ಪತ್ತನೆ ಶತಮಾನದ ಮೊದಲ ಅರ್ಧದಲ್ಲಿ, ತಾನು ದುರ್ಬಲವಾಗಿದ್ದಾಗ, ಚೀನಾ ಐರೋಪ್ಯ ರಾಷ್ಟ್ರಗಳ ಎಲ್ಲ ಬಗೆಯ ಅಪಮಾನ ಅನ್ಯಾಯಗಳಿಗೆ ಗುರಿಯಾಗಿತ್ತು. ಇವುಗಳಲ್ಲಿ ಮೆಕ್‌ಮಹೋನ್ ರೇಖೆಯೂ ಒಂದು. ಈಗ ಕಮ್ಯುನಿಸ್ಟರ ಆಡಳಿತದಲ್ಲಿ ಚೀನ ಸಶಕ್ತವಾಗಿದೆ. ಹಿಂದಿನ ಅನ್ಯಾಯಗಳನ್ನು ಸರಿಪಡಿಸಿಕೊಳ್ಳಲು ಅದು ಸಂಕಲ್ಪಬದ್ಧವಾಗಿದೆ. 1959ರ ನವೆಂಬರಿನಲ್ಲಿ ಪೀಕಿಂಗಿಗೆ ಭೇಟಿಕೊಟ್ಟಿದ್ದ ಭಾರತದ ವಕೀಲ, ಡ್ಯಾನಿಯಲ್ ಲತೀಫ್ ಅವರಿಗೆ ಚೀನಾದ ವೃತ್ತಿ ಬಾಂಧವರು "ಮೆಕ್‌ಮಹೋನ್ ರೇಖೆಗೆ" ನ್ಯಾಯ ಸಮ್ಮತವಾದ ಆಧಾರಗಳಿಲ್ಲವೆಂದು ತಿಳಿಸಿದ್ದರು. ಚೈನಾದಲ್ಲಿ ಗಡಿವಿವಾದದ ಬಗ್ಗೆ ಸಾರ್ವಜನಿಕ ಅಭಿಪ್ರಾಯದಲ್ಲೂ ಕೊಂಚ ಕಾವು ಏರಿತ್ತು. ಜವಹರಲಾಲ್ ನೆಹರೂ ಜೊತೆಗಿನ ತಮ್ಮ ಮಾತುಕತೆಯನ್ನು ವರದಿ ಮಾಡುವ ಸಂದರ್ಭದಲ್ಲಿ ಲತೀಫರು ಹೀಗೆ ಹೇಳಿದ್ದರು: "ಬಹುಶಃ ನಿಮಗೆಲ್ಲ ಚೆನ್ನಾಗಿ ತಿಳಿದಿರುವಂತೆ, ಯಾವುದೇ ರಾಷ್ಟ್ರದಲ್ಲಿ ಇದೆಲ್ಲವೂ ರಾಷ್ಟ್ರದ ಅವಿಭಾಜ್ಯ ಅಂಗವಾದ ಪ್ರದೇಶವೆಂದು ಹೇಳಿದ ನಂತರ, ರಿಯಾಯಿತಿ ಮಾತಾಡುವುದಾಗಲೀ, ಕೊಸರಾಟ ನಡೆಸುವುದಾಗಲೀ ತುಂಬಾ ಕಷ್ಟದ ಕೆಲಸ."

ಟಿಬೆಟ್ಟಿನ ವಿಫಲ ಕ್ರಾಂತಿಯ ನಂತರ ಭಾರತ ಸರ್ಕಾರ ಈ ಕೆಳಗಿನವುಗಳಲ್ಲಿ, ಒಂದಲ್ಲ ಒಂದನ್ನು ಕಾರ್ಯಗತಗೊಳಿಸಬಹುದಿತ್ತು ಎಂದು ನಿರೀಕ್ಷಿಸುವುದು ಸಹಜ.

1. ಚೈನಾದ ಗಡಿಯಲ್ಲಿ ತನ್ನ ರಕ್ಷಣಾ ಬಲವನ್ನು ಸಂವರ್ಧಿಸುವುದು. ಅಗತ್ಯವಾದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಂದ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವುದು ಇವೇ ಮೊದಲಾದ ಕ್ರಮಗಳಿಂದ ಸೈನ್ಯದ ಶಕ್ತಿ ಸಂವರ್ಧನೆ
2. ಚೈನಾದೊಂದಿಗೆ ಗಡಿವಿವಾದ ಇತ್ಯರ್ಥಕ್ಕೆ ಹೊಸ ಒಪ್ಪಂದಕ್ಕೆ ಶ್ರದ್ಧಾಪೂರ್ವಕವಾಗಿ ಪ್ರಯತ್ನಿಸುವುದು.

ಆದರೆ ನೆಹರೂ ಅವರ ಅಲಿಪ್ತ ನೀತಿ ಹಾಗೂ ಸಾರ್ವಜನಿಕ ಅಭಿಪ್ರಾಯ ಇವೆರಡಕ್ಕೂ ನಿರ್ಬಂಧಕಗಳಾಗಿದ್ದವು. 1959ರ ಅಕ್ಟೋಬರ್‌ನಲ್ಲಿ "ಟೈಮ್ಸ್ ಆಫ್ ಇಂಡಿಯಾ", "ನೆಹರೂ ಅವರು, ಚೀನೀಯರ ಪ್ರಭಾವದ ಬಗ್ಗೆ ಹಾಗೂ ತುಲನಾತ್ಮಕವಾಗಿ ಭಾರತೀಯರು ವ್ಯಕ್ತಪಡಿಸಿರುವ ಪ್ರತಿಕ್ರಿಯೆ ಬಗ್ಗೆ ವಿಪರೀತವಾದ ಅಳುಕಿನ ಭಾವನೆ ಹೊಂದಿದ್ದಾರೆಂದು" ವರದಿ ಮಾಡಿತ್ತು. ಇನ್ನೊಂದು ಪತ್ರಿಕೆ "ಚೀನದ ವಿರುದ್ಧ ರಾಷ್ಟ್ರಾದ್ಯಂತ ಮೊಳಗಿರುವ ಪ್ರತಿಭಟನೆಯ ಸ್ವರಮೇಳದಲ್ಲಿ ನೆಹರೂ ಏಕಾಂಗಿಯಾಗಿ ನಿಂತಿದ್ದಾರೆಂದು" ಬರೆದಿತ್ತು.

ಸ್ಟೀವನ್ ಹಾಫ್ಮನ್ ಅಭಿಪ್ರಾಯಪಟ್ಟಿರುವಂತೆ ಶ್ವೇತಪತ್ರದ ಬಿಡುಗಡೆ ನೆಹರೂ ಅವರ ಕೈ ಕಟ್ಟಿ ಹಾಕಿತ್ತು. ಅವರ ಆಯ್ಕೆಗಳನ್ನು ಮಿತಗೊಳಿಸಿತ್ತು. ಗಡಿವಿವಾದ ರಹಸ್ಯವಾಗಿಯೇ ಉಳಿದಿದ್ದರೆ ನೆಹರೂ ಅವರು ಹಿಂಬಾಗಿಲ ಸಂಧಾನದ ಮೂಲಕ ರಾಜತಾಂತ್ರಿಕವಾಗಿ ರಾಜಿ ಮಾಡಿಕೊಳ್ಳಲು ಅವಕಾಶವಿತ್ತು. ಆದರೆ ವಿಷಯ ಈಗ ಬಹಿರಂಗಗೊಂಡಿದ್ದು, ಕೋಪೋದ್ರಿಕ್ತ ಟೀಕೆಗಳ ಕಿಡಿಗಳನ್ನು ಹೊತ್ತಿಸಿತ್ತು. ಭಾವಾವೇಶದಿಂದ ವರ್ತಿಸುತ್ತಿರುವ ಸಂಸತ್ ಹಾಗೂ ಪತ್ರಿಕೆಗಳಿಗೆ ಸಮ್ಮತಾರ್ಹವೆನಿಸುವಂಥ ನೀತಿಗಳನ್ನೇ ಅವರೀಗ ಅನುಸರಿಸಬೇಕಾಗಿತ್ತು. ಶ್ವೇತಪತ್ರ ನೀತಿಯಿಂದಾಗಿ ಕೊಟ್ಟು-ತೆಗೆದುಕೊಳ್ಳುವ ಮನೋಭಾವ ತೋರುವುದು ಈಗ ಅಸಾಧ್ಯವಾಗಿತ್ತು. ಶ್ವೇತಪತ್ರ ರಾಷ್ಟ್ರಾಭಿಮಾನ ಭಾವನೆಗಳನ್ನು ಕೆದರಿತ್ತು. ಕೊಂಗ್ ಕಾ ಕಣಿವೆ ಘಟನೆ, ಸೇಡು ತೀರಿಸಿಕೊಳ್ಳುವಂತೆ ಭಾರತದ ರಾಜಕೀಯ ಪಕ್ಷಗಳು ಬೊಬ್ಬೆ ಹಾಕುವುದಕ್ಕೆ ಪ್ರಚೋದನೆ ನೀಡಿತ್ತು.

1959ರ ಸೆಪ್ಟಂಬರ್ ಮತ್ತು ಅಕ್ಟೋಬರ್ ಘರ್ಷಣೆಗಳ ನಂತರ ಚೌ ಎನ್ ಲಾಯ್ ಮತ್ತೊಂದು ಪತ್ರ ಬರೆದರು. ಎರಡೂ ಕಡೆ, ಪೂರ್ವದಲ್ಲಿ ಮೆಕ್‌ಮಹೋನ್ ರೇಖೆಯಿಂದ ಹಾಗೂ ಪಶ್ಚಿಮದಲ್ಲಿ ವಾಸ್ತವ ಹತೋಟಿ ರೇಖೆಯಿಂದ ಸೈನ್ಯ ಇಪ್ಪತ್ತು ಕಿಲೋಮೀಟರಿನಷ್ಟು ಹಿಂದಕ್ಕೆ ಸರಿಯುವುದು ಒಳಿತೆಂದು ಚೌ ಎನ್ ಲಾಯ್ ಈ ಪತ್ರದಲ್ಲಿ ಸಲಹೆ ಮಾಡಿದ್ದರು. "ಇದು, ಪಶ್ಚಿಮವಲಯದಲ್ಲಿ ಚೀನಿ ಅತಿಕ್ರಮಣವನ್ನು ನ್ಯಾಯಬದ್ಧಗೊಳಿಸುವ, ಹಾಗೂ ಬಲ ಉಪಯೋಗಿಸಿ ಸ್ವಾಧೀನಪಡಿಸಿಕೊಂಡಿರುವ ಪ್ರದೇಶವನ್ನು ನಿಮ್ಮ ಹಿಡಿತದಲ್ಲೇ ಇರಿಸಿಕೊಳ್ಳುವ ಒಂದು ಹುನ್ನಾರವಷ್ಟೇ" ಎಂದು ನೆಹರೂ ಈ ಸಲಹೆಯನ್ನು ತಳ್ಳಿಹಾಕಿದರು. ಇತ್ತೀಚಿನ ತೊಂದರೆಗಳಿಗೆಲ್ಲ ನಿಮ್ಮ ಕಡೆಯ ಗಡಿ ಪ್ರದೇಶದಲ್ಲಿ ಕೈಗೊಂಡ ಕಾರ್ಯಾಚರಣೆ ಕ್ರಮಗಳೇ ಕಾರಣವೆಂದು ನೆಹರೂ ಚೀನಾಕ್ಕೆ ಸ್ಪಷ್ಟಪಡಿಸಿದ್ದರು.

ಮೆಕ್‌ಮಹೋನ್ ರೇಖೆ ಅಕ್ರಮವಾದದ್ದು ಎಂದು ಚೈನಾದ ನಂಬಿಕೆ. ಆದಾಗ್ಯೂ, ಗಡಿ ವಿವಾದದಲ್ಲಿ ಸ್ನೇಹಯುತ ಒಪ್ಪಂದ ಸಾಧ್ಯವಾದೀತೆಂಬ ನಿರೀಕ್ಷೆಯಲ್ಲಿ ಈ ರೇಖೆ ದಾಟಲು ನಾವು ನಮ್ಮ ಸೈನ್ಯಕ್ಕೆ ಅನುಮತಿ ನೀಡಿಲ್ಲ ಎಂದು ಚೌ ಎನ್ ಲಾಯ್ ಸೂಚಿಸಿದರು.

> *"ಹೀಗಾಗಿ ಮೆಕ್‌ಮಹೋನ್ ರೇಖೆಯ ದಕ್ಷಿಣಕ್ಕಿರುವ ಪ್ರದೇಶದ ಮೇಲೆ ಚೈನಾ ಇದುವರೆಗೆ ತನ್ನ ಹಕ್ಕನ್ನು ಮಂಡಿಸಿಲ್ಲ. ಇದನ್ನು ಎಂದೂ ಹೇಳಿಲ್ಲ. ಪೂರ್ವ ಶರತ್ತು ಅಥವಾ ಹಂಗಾಮಿ ಕ್ರಮಗಳನ್ನೂ ವಿಧಿಸಿಲ್ಲ. ಹೀಗಿರುವಾಗ, ಭಾರತ ಸರ್ಕಾರ ಚೈನಾ ಮಾತ್ರ ಏಕಪಕ್ಷೀಯವಾಗಿ ಪಶ್ಚಿಮ ವಲಯದಿಂದ ಸೈನ್ಯವನ್ನು ಹಿಂದೆಗೆದುಕೊಳ್ಳಬೇಕು ಎಂದು ಹೇಳುತ್ತಿರುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತಿದೆ."*

–ಎಂದು ಪತ್ರದಲ್ಲಿ ತಿಳಿಸಿದ್ದರು.

ಚೌ ಎನ್ ಲಾಯ್ ಅವರ ಈ ಪತ್ರದಲ್ಲಿ ಒಂದು ರಹಸ್ಯ ಸಲಹೆ ಅಡಗಿದೆ. ರಾಜತಾಂತ್ರಿಕ ಪರಿವೇಶಗಳನ್ನು ಕಿತ್ತೊಗೆದು ಓದಿದಾಗ, ಪತ್ರದಲ್ಲಿ ಅಂತರ್ಗತವಾಗಿರುವ ಸಲಹೆ ಹೀಗಿದೆ: "ಪೂರ್ವ ವಲಯದಲ್ಲಿ ನೀವು ನಿಮ್ಮ ಗಡಿ ಪ್ರದೇಶವನ್ನು ಇಟ್ಟುಕೊಳ್ಳಿ. ಪಶ್ಚಿಮ ವಲಯದಲ್ಲಿ ನಾವು ನಮ್ಮ ಗಡಿ ಪ್ರದೇಶವನ್ನೂ ಇಟ್ಟುಕೊಳ್ಳುತ್ತೇವೆ". (ಬಹುಶಃ ಈ ಎರಡೂ ಪ್ರದೇಶಗಳೂ ವಂಚನೆಯ ಮಾರ್ಗದಿಂದ ಸ್ವಾಧೀನ ಪಡಿಸಿಕೊಂಡ ವಾಗಿರಬಹುದು).

ಚೀನಾ ತಜ್ಞ ಓವೆನ್ ಲ್ಯಾಟಿಮೋರ್ ಅವರು 1960ರ ಜನವರಿಯಲ್ಲಿ "ಎಕನಾಮಿಕ್ಸ್ ವೀಕ್ಲಿ"ಗೆ ಬರೆದ ಲೇಖನದಲ್ಲಿ ಭಾರತದ ಉಭಯ ಸಂಕಟವನ್ನು ಬಲು ಜಾಣ್ಮೆಯಿಂದ ಸಂಕ್ಷೇಪಿಸಿ ಬರೆದಿದ್ದಾರೆ. "ಚೀನದೊಂದಿಗಿನ ಗಡಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪರಂಪರಾನುಗತ ಕೊಡುಗೆ ಎಂಬುದು ಸ್ವಯಂಸಿದ್ಧವಾದುದು. ಆದ್ದರಿಂದ ವಿವಾದಾತ್ಮಕ ಪ್ರದೇಶದ ಬಹುಭಾಗವನ್ನು ಬಿಟ್ಟುಕೊಡುವುದು...ಭಾರತಕ್ಕೆ ರಾಷ್ಟ್ರಪ್ರತಿಷ್ಠೆಯ ಪ್ರಶ್ನೆಯಾಗ ಬೇಕಿರಲಿಲ್ಲ... ಸಂಧಾನ ಮಾತುಕತೆ ನಡೆಸದೇ ಚೈನಾ ಬಲಪ್ರಯೋಗದ ಮೂಲಕ ಗಡಿ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿದ್ದರಿಂದಾಗಿ ಭಾರತಕ್ಕೆ ಇದೊಂದು ರಾಷ್ಟ್ರಪ್ರತಿಷ್ಠೆ, ರಾಷ್ಟ್ರಾಭಿಮಾನದ ವಿಷಯವಾಯಿತು. ಏಕೆಂದರೆ, ನೆಹರೂ ಅವರು ಇಬ್ಬರು ಸಮಾನರ ನಡುವಣ ನ್ಯಾಯಯುತ ಸಂಧಾನದಲ್ಲಿ ಯಾವುದನ್ನು ಬಿಟ್ಟುಕೊಡಲು ಸಾಧ್ಯವಿತ್ತೋ ಈಗ ಅದನ್ನು ಶರಣಾಗತಿಯ ದೈನ್ಯದಿಂದ ಬಿಟ್ಟುಕೊಡಲಾರರು".

ಇದೇ ಸಂಚಿಕೆಯಲ್ಲಿ 'ಫಲಪ್ರಮಾಣವಾದಿ' ಎನ್ನುವ ಹೆಸರಿನಲ್ಲಿ ಒಬ್ಬರು ರಕ್ಷಣಾಸಿದ್ಧತೆಗೆ ಅಗತ್ಯವಾದ ಸಶಕ್ತ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ಮಾಡಿದ್ದರು. "ಸ್ಟಾಲಿನ್ ವ್ಯಾಟಿಕನ್ ಬಗ್ಗೆ ಹೊಂದಿದ್ದ ತಿರಸ್ಕಾರ ಭಾವನೆಯಂತೆಯೇ ಪೀಕಿಂಗ್ ನಾಯಕತ್ವವೂ ಭಾರತದ ಸಶಸ್ತ್ರ ಪಡೆಗಳ ಬಗ್ಗೆ ಘನವಾದ ಭಾವನೆಗಳನ್ನು ಹೊಂದಿರಲಿಕ್ಕಿಲ್ಲ"

ಎಂದು ಈ ವ್ಯಕ್ತಿ ಕಟುವಾಗಿಯೇ ಬರೆದಿದ್ದರು. ಚೈನಾ ಭಾರತಕ್ಕಿಂತ ಐದು ಪಟ್ಟು ಹೆಚ್ಚಿ ಸೇನಾ ಬಲ ಹೊಂದಿತ್ತು ಹಾಗೂ ಸೋವಿಯತ್ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿತ್ತು. ಇಲ್ಲಿಯವರೆಗೆ ಭಾರತದ ಸೇನಾವ್ಯೂಹ, ತಂತ್ರಗಳೆಲ್ಲ ಪಾಕಿಸ್ತಾನ ಕೇಂದ್ರಿತವಾಗಿತ್ತು. ಈಗ ಭಾರತ ಚೀನದ ಬೆದರಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿ ಬಂತು. ಏಕೆಂದರೆ ಎರಡೂ ರಾಷ್ಟ್ರಗಳ ನಡುವಣ ಸ್ನೇಹ ನಿಶ್ಚಯವಾಗಿ ಕೊನೆ ಮುಟ್ಟಿತ್ತು. ಈಗ "ನಮ್ಮ ರಕ್ಷಣಾ ಯೋಜನೆಯಲ್ಲಿ ಪ್ರಥಮ ಆದ್ಯತೆ, ಗಡಿಯ ಉತ್ತರ ಪ್ರದೇಶವನ್ನು ಚೀನಿ ಸೈನಿಕರಿಂದ ರಕ್ಷಿಸುವುದು ಆಗಿದೆ". ಭಾರತ ಪರ್ವತ ಪ್ರದೇಶದಲ್ಲಿ ಯುದ್ಧ ಮಾಡುವ ಸೇನಾಪಡೆಯನ್ನು ತರಬೇತುಗೊಳಿಸಬೇಕು, ಅವರಿಗೆ ಹಗುರವಾದ ಮತ್ತು ಸಂಚಾರಯೋಗ್ಯವಾದ ಶಸ್ತ್ರಾಸ್ತ್ರಗಳನ್ನು ಪೂರೈಸಬೇಕು. ಈ ಪಡೆಗಳ ನೆರವಿಗೆ ನಿಲ್ಲುವಂಥ ಹೆಲಿಕಾಪ್ಟರ್ ಮತ್ತು ಬಾಂಬ್ ಸಮರ ಸಾಮರ್ಥ್ಯದ ವಿಮಾನ ಪಡೆಯನ್ನು ಹೊಂದಬೇಕಾದ್ದು ಅತ್ಯಗತ್ಯ. ಈ ಎಲ್ಲ ರಕ್ಷಣಾ ಸನ್ನದ್ಧತೆಗಳನ್ನು ತನ್ನ ಪತ್ರದಲ್ಲಿ ಸಲಹೆ ಮಾಡಿದ್ದ 'ಫಲ ಪ್ರಮಾಣವಾದಿ' ಇನ್ನೊಂದು ಮಹತ್ವದ ಅಂಶವನ್ನೂ ಸೂಚಿಸಿದ್ದ. ಇನ್ನೊಂದು ಮುಖ್ಯ ವಿಷಯವೆಂದರೆ, ಮುಂದಿನ ಎರಡು ಅಥವಾ ನಾಲ್ಕು ವರ್ಷಗಳ ಅವಧಿಯಲ್ಲಿ, ಹಿಮಾಲಯದ ಗಡಿಗಳಲ್ಲಿ ಸಂಭವಿಸಬಹುದಾದಂಥ ಮಿಂಚಿನ ಆಕ್ರಮಣವನ್ನು ಎದುರಿಸಲು ಸಮರ್ಥವಾದಂಥ ಸೈನ್ಯವನ್ನು ಕಟ್ಟಬೇಕಾದ್ದು.

ಆದರೆ ರಾಜಕೀಯ ವಿರೋಧಿಗಳು ಇಷ್ಟು ದೀರ್ಘಾವಧಿ ಕಾಯಲು ಸಿದ್ಧರಿರಲಿಲ್ಲ. "ರಾಷ್ಟ್ರದ ಸ್ವಾಭಿಮಾನ, ಗೌರವ ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ದೃಷ್ಟಿಯಿಂದ ಈಗಿಂದೀಗಲೇ ಭಾರತದ ನೆಲವನ್ನು ಚೀನೀಯರ ಆಕ್ರಮಣದಿಂದ ಮುಕ್ತಗೊಳಿಸಬೇಕೆಂದು" ಜನಸಂಘದ ಅಧ್ಯಕ್ಷರು 1960ರ ಜನವರಿ ಕೊನೆಯ ವಾರದಲ್ಲಿ ಗುಡುಗಿದರು. "ಆಡಳಿತಾರೂಢ ಸರ್ಕಾರ ಆಕ್ರಮಣದ ವಿಚಾರದಲ್ಲಿ ಜನತೆಯನ್ನು ಮತ್ತು ಸಂಸತ್ತನ್ನು ಸಂಪೂರ್ಣವಾಗಿ ಅಜ್ಞಾನದಲ್ಲಿಟ್ಟಿದೆ. ಶತ್ರು ತಾನು ಆಕ್ರಮಿಸಿಕೊಂಡಿರುವ ಪ್ರದೇಶದಲ್ಲಿ ತ್ವರಿತಗತಿಯಲ್ಲಿ ಗಟ್ಟಿಯಾಗಿ ನೆಲೆಯೂರುತ್ತಿರುವಾಗ ಸರ್ಕಾರ ಅಸಹಾಯಕನಂತೆ ಕಣ್ಣು ಬಾಯಿ ಬಿಡುತ್ತಾ ನಿಂತಿದೆ" ಎಂದು ಜನಸಂಘದ ಅಧ್ಯಕ್ಷರು ತರಾಟೆಗೆ ತೆಗೆದುಕೊಂಡಿದ್ದರು.

ಚೈನಾದ ಬಗೆಗಿನ ಸಂಶಯ ಬಲಪಂಥೀಯ ಪಕ್ಷಗಳಿಗೆ ಮಾತ್ರ ಸೀಮಿತಗೊಂಡಿರಲಿಲ್ಲ. 1960ರ ಫೆಬ್ರುವರಿಯಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ತಮ್ಮ ತೌರೂರಾದ ಬಿಹಾರ್ ರಾಜ್ಯದ ವಿದ್ಯಾರ್ಥಿಗಳಲ್ಲಿ ಕಂಡು ಕೋಪ-ಪ್ರತಿಭಟನೆಗಳ ಬಗ್ಗೆ ಮಾತನಾಡಿದ್ದರು. ಚೀನದ ಆಕ್ರಮಣವನ್ನು ಭಾರತ ತೆರವುಗೊಳಿಸಬೇಕೆಂಬುದು ಈ ಯುವಜನರ ಅಪೇಕ್ಷೆಯಾಗಿದೆ. ನಮ್ಮ ನೆಲದ ಒಂದೊಂದು ಅಂಗುಲ ಪ್ರದೇಶದಿಂದಲೂ ಚೀನೀಯರನ್ನು ಹೊರಗಟ್ಟಬೇಕು. ಸರ್ಕಾರದ ಯಾವುದೇ ದುರ್ಬಲ ಕ್ರಮವನ್ನು ನಾವು ಸಹಿಸುವುದಿಲ್ಲ ಎಂದು ಈ ಯುವಕರು ಎಚ್ಚರಿಸಿದ್ದಾರೆಂದು ರಾಷ್ಟ್ರಪತಿಗಳು ತಿಳಿಸಿದ್ದರು.

ಹೀಗೆ ಪರಿಸ್ಥಿತಿ ಬಿಗಡಾಯಿಸಿದಂತೆ, ನವದೆಹಲಿ ಗಡಿವಿವಾದ ಕುರಿತು ಶೃಂಗಸಭೆಯೊಂದಕ್ಕೆ ಚೌ ಎನ್ ಲಾಯ್ ಅವರಿಗೆ ಆಮಂತ್ರಣ ನೀಡಿತು. ಏಪ್ರಿಲ್ ಕೊನೆಯ

ವಾರದಲ್ಲಿ ಶೃಂಗಸಭೆ ನಡೆಸಲು ತೀರ್ಮಾನವಾಯಿತು. ಶೃಂಗಸಭೆಗೆ ಕೆಲವು ವಾರ ಮುಂಚಿತವಾಗಿಯೇ ಈ ಸಭೆಯ ಭೂಮಿಕೆಯನ್ನು ಹಾಳುಗೆಡಹುವ ಪ್ರಯತ್ನಗಳು ಶುರುವಾದವು. ಮಾರ್ಚಿ 9ರಂದು ದಲಾಯಿಲಾಮಾ ಅವರು ಹೇಳಿಕೆಯೊಂದನ್ನು ನೀಡಿ "ಅಂಥ ವಿಸ್ತರಣಾಕಾಂಕ್ಷಿ ಶಕ್ತಿಯ ಸೈನಿಕ ಪಡೆಗಳು ಆಕ್ರಮಿಸಿರುವ ಸಣ್ಣ ಸ್ವತಂತ್ರ ರಾಷ್ಟ್ರವಾದ ಟಿಬೆಟಿನ ಹೋರಾಟವನ್ನು ಮರೆಯದಿರಿ" ಎಂದು ವಿಶ್ವಕ್ಕೆ ಮನವಿ ಮಾಡಿದ್ದರು. ಮೂರು ದಿನಗಳ ನಂತರ ಜನಸಂಘದ ಹಿರಿಯ ನಾಯಕರೊಬ್ಬರು "ಲಕ್ಷಾಂತರ ಮಂದಿ ಭಾರತೀಯರ ಭಾವನೆಗಳ ವಿಷಯದಲ್ಲಿ ರಾಜಿಮಾಡಿಕೊಳ್ಳಬೇಡಿ" ಎಂದು ಪ್ರಧಾನ ಮಂತ್ರಿಗೆ ಆಗ್ರಹಪಡಿಸಿದ್ದರು. ಚೀನಿಯರಿಂದ ಹೊಸ ಆಕ್ರಮಣ ತಡೆಗಟ್ಟಲು ಅಗತ್ಯವಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳುವಂತೆ ಈ ನಾಯಕರು ಒತ್ತಾಯಪಡಿಸಿದ್ದರು. ಅನಿರೀಕ್ಷಿತವಾದ ಇಂಥದೇ ಒಂದು ಆಗ್ರಹ ಕಾಂಗ್ರೆಸ್ ಸಂಸದೀಯ ಪಕ್ಷದ ಹಿಮಾಲಯ ಅಧ್ಯಯನ ತಂಡದಿಂದ ಬಂದಿತ್ತು. ಗಡಿ ವಿಷಯದಲ್ಲಿ ದೃಢನಿಲುವು ತಾಳುವಂತೆ ಈ ತಂಡದ ಎಂಪಿಗಳು ಪ್ರಧಾನಿಗೆ ಒತ್ತಾಯಪಡಿಸಿದ್ದರು.

ಏಪ್ರಿಲ್ ಮೊದಲ ವಾರದಲ್ಲಿ ಕಮ್ಯುನಿಸ್ಟೇತರ ವಿರೋಧ ಪಕ್ಷಗಳ ನಾಯಕರುಗಳು ಚೈನಾ ಬಗ್ಗೆ ಜನರ ಭಾವನೆಗಳನ್ನು ನೆನಪಿಸುವ ಪತ್ರವೊಂದನ್ನು ಪ್ರಧಾನಿಗೆ ರವಾನಿಸಿದ್ದರು. ಚೌ ಎನ್ ಲಾಯ್ ಜೊತೆ ಮಾತುಕತೆಯಲ್ಲಿ "ಭಾರತದ ಗಡಿ ಪ್ರದೇಶವನ್ನು ಬಿಟ್ಟು ಕೊಡುವಂಥ ಯಾವುದೇ ಕ್ರಮಕ್ಕೂ ಮುಂದಾಗುವುದಿಲ್ಲವೆಂದು" ಪ್ರಧಾನಮಂತ್ರಿಯವರು ಭರವಸೆ ನೀಡಬೇಕೆಂದು ಈ ಪತ್ರದಲ್ಲಿ ಒತ್ತಾಯಪಡಿಸಲಾಗಿತ್ತು. ಹೀಗೆ ಎಲ್ಲ ಕಡೆಯಿಂದಲೂ ಒತ್ತಡಕ್ಕೊಳಗಾದ ಪ್ರಧಾನಮಂತ್ರಿಯವರು ಗಾಂಧೀವಾದಿ ಸಂತ ವಿನೋಬಾ ಭಾವೆಯವರ ಬೆಂಬಲಕ್ಕೆ ಮೊರೆ ಹೋದರು. ವಿನೋಬಾ ಭಾವೆ ಪಂಜಾಬ್ ಗ್ರಾಮೀಣ ಪ್ರದೇಶದಲ್ಲಿ ಭೂದಾನ ಪಾದಯಾತ್ರೆ ನಡೆಸಿದ್ದಾಗ ನೆಹರೂ ಅವರನ್ನು ಭೇಟಿಮಾಡಿದ್ದರು. ಮಾತುಕತೆಯ ವರದಿ ಪ್ರಕಟವಾಗಲಿಲ್ಲ. ಆದರೆ ನಂತರ ವಿನೋಬಾ ಭಾಷಣಗಳಲ್ಲಿ ಇದು ಸ್ಪಷ್ಟವಾಯಿತು. ಏಪ್ರಿಲ್ 5ರಂದು ಕುರುಕ್ಷೇತ್ರದಲ್ಲಿ ಸಭೆಯೊಂದರಲ್ಲಿ ಮಾತನಾಡುತ್ತಾ ವಿನೋಬಾ ಭಾವೆಯವರು, ಪಾಂಡವ-ಕೌರವರ ಯುದ್ಧದಿಂದ ರಕ್ತಸಿಕ್ತವಾಗಿದ್ದ ನೆಲದಲ್ಲಿ ನಿಂತು, ನೆಹರೂ-ಚೌ ಎನ್ ಲಾಯ್ ಮಾತುಕತೆ ಯಶಸ್ಸಿಗೆ ಪ್ರಾರ್ಥನೆ ಸಲ್ಲಿಸಿದರು. "ಅಪನಂಬಿಕೆ ಗತಿಸುತ್ತಿರುವ ರಾಜಕೀಯ ಕಾಲದ್ದಾಯಿತು" ಎಂದು ನುಡಿದ ವಿನೋಬಾ "ನಂಬಿಕೆ, ಸ್ನೇಹ-ಸೌಹಾರ್ದತೆಗಳ ಅಡಿಪಾಯದ ಮೇಲೆ ನವಯುಗದ ನಿರ್ಮಾಣವಾಗುತ್ತಿದೆ" ಎಂದು ಹೇಳಿದ್ದರು. ಚೈನಾ ನಾಯಕರ ನಡುವಣ ಮಾತುಕತೆ ಕೋಪ-ಸಂಶಯ-ಕಹಿ ಭಾವನೆಗಳಿಂದ ಮುಕ್ತವಾಗಿರುವುದೆಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದರು.

ಆದರೆ ಭಾವೆಯವರ ಸಂದೇಶ ಸರಿಯಾಗಿ ರವಾನೆಯಾದಂತೆ ಕಾಣಲಿಲ್ಲ. ಚೌ ಎನ್ ಲಾಯ್ ಭೇಟಿಗೆ ಐದು ದಿನ ಮುಂಚೆ ಜನಸಂಘ ಪ್ರಧಾನಿ ನಿವಾಸದೆದುರು ಬೃಹತ್ ಪ್ರದರ್ಶನ ನಡೆಸಿತು. ಪ್ರದರ್ಶನಕಾರರು, "ಲಡಾಖಿನ ಹುತಾತ್ಮರನ್ನು ಮರೆಯದಿರಿ",

"ಭಾರತದ ನೆಲವನ್ನು ಬಿಟ್ಟುಕೊಡದಿರಿ" ಎಂದು ನೆಹರೂಗೆ ನೆನಪಿಸುವ ಭಿತ್ತಿ ಪತ್ರಗಳನ್ನು ಹಿಡಿದಿದ್ದರು. ಮರುದಿನ ಕಮ್ಯುನಿಸ್ಟೇತರ ವಿರೋಧ ಪಕ್ಷಗಳು ದೆಹಲಿಯಲ್ಲಿ ಒಂದು ಬೃಹತ್ ಸಭೆ ನಡೆಸಿದರು. ಚೀನಾದೊಂದಿಗೆ ಏನಾದರೂ ಒಪ್ಪಂದ ಮಾಡಿಕೊಂಡಲ್ಲಿ "ಕಮ್ಯುನಿಸ್ಟರು ಮತ್ತು ಕಮ್ಯುನಿಸಂ ಪಕ್ಷಪಾತಿಗಳು ಮಾತ್ರ ನಿಮ್ಮ ಮಿತ್ರರಾಗಿರುತ್ತಾರೆ" ಎಂದು ಈ ಸಭೆಯಲ್ಲಿ ಪ್ರಧಾನಿಗೆ ಎಚ್ಚರಿಕೆ ನೀಡಲಾಯಿತು. ಇಂಥ ವಾತಾವರಣದಲ್ಲಿ ಮಾತುಕತೆ ವಿಫಲವಾಗುವುದು ಶತಃಸಿದ್ಧ ಎಂದು ಗೌರವಾನ್ವಿತ ಸಂಪಾದಕ ಫ್ರಾಂಕ್ ಮೊರೇಸ್ ಬರೆದರು. "ಚೌ ಎನ್ ಲಾಯ್ ಅವರು ಹಳೆಯ ಒಲವು-ನಿಲುವುಗಳಿಗೇ ಅಂಟಿಕೊಂಡಲ್ಲಿ, ಪೀಕಿಂಗ್‌ಗೆ ಹಿಂದಿರುಗಿ ಮತ್ತೊಮ್ಮೆ ಯೋಚಿಸಿ ಎಂದು ನೆಹರೂ ನಾಜೂಕಾಗಿ ಹೇಳಬೇಕಾದೀತು" ಎಂದೂ ಅವರು ಬರೆದಿದ್ದರು.

ಈ ದೇಶದ ಸಂಪ್ರದಾಯಕ್ಕನುಗುಣವಾಗಿ ಚೌ ಎನ್ ಲಾಯ್ ಅವರಿಗೆ ಸ್ವಾಗತ ನೀಡಲಾಗುವುದೆಂದು ಖಚಿತವಾಗಿ ನುಡಿದಿದ್ದರು. ಆಗ ಚೌ ಎನ್ ಲಾಯ್ ಬರ್ಮಾದಲ್ಲಿದ್ದರು. ಭಾರತದ ವಿಮಾನವೊಂದು ಚೌ ಎನ್ ಲಾಯ್ ಅವರನ್ನು ಅಲ್ಲಿಂದ ದೆಹಲಿಗೆ ಕರೆತಂದಿತು. 1956ರಲ್ಲಿ ಬಂದ ಚೌ ಎನ್ ಲಾಯ್‌ಗೆ ಅದ್ದೂರಿಯ ಸಾರ್ವಜನಿಕ ಸ್ವಾಗತ ನೀಡಲಾಗಿತ್ತು. ಆದರೆ ಈ ಬಾರಿ ಪ್ರಧಾನಿಯ ಆಶಯ ಏನೇ ಇದ್ದರೂ ಹಿಂದೆಂದೂ ಕಾಣದಂಥ ಬಿಗಿ ಭದ್ರತಾ ವ್ಯವಸ್ಥೆಯ ಮಧ್ಯೆಯೇ ಚೌ ಎನ್ ಲಾಯ್ ಅವರನ್ನು ಬರಮಾಡಿಕೊಳ್ಳಲಾಯಿತು. ಹಿಂದೂ ಮಹಾಸಭಾ ಕಪ್ಪು ಬಾವುಟ ಪ್ರದರ್ಶನ ನಡೆಸಿತು. ಉಳಿದ ಪ್ರಮುಖ ಪಕ್ಷಗಳೂ ಚೌ ಎನ್ ಲಾಯ್ ಭೇಟಿಗೆ ವಿರೋಧ ವ್ಯಕ್ತಪಡಿಸಿದ್ದವು. ಆಗ ಚಾಲ್ತಿಯಲ್ಲಿದ್ದ ಎರಡು ಹಾಸ್ಯೋಕ್ತಿಗಳು ನವದೆಹಲಿಯ ಆಗಿನ ಮನೋಭಾವವನ್ನು ಸ್ಪಷ್ಟವಾಗಿಸುವಂತಿದ್ದವು. ಹಿಂದಿ ಚೀನಿ ಭಾಯಿ ಭಾಯಿ ಬದಲು ಹಿಂದಿ ಚೀನಿ ಬೈ ಬೈ ಎನ್ನುವುದು ಒಂದು ಕುಚೋದ್ಯವಾದರೆ, ಮತ್ತೊಂದು: "ಭಾರತದ ನಿಯೋಗದಲ್ಲಿ ಕೃಷ್ಣ ಮೆನನ್ ಏಕಿಲ್ಲ?" "ಏಕೆಂದರೆ ಅವರು ಚೌ ಎನ್ ಲಾಯ್ ಪಕ್ಷದಲ್ಲಿದ್ದಾರೆ".

ಚೌ ಎನ್ ಲಾಯ್ ಒಂದು ವಾರ ದೆಹಲಿಯಲ್ಲಿದ್ದರು. ಪ್ರತಿದಿನ ನೆಹರೂ ಅವರನ್ನು ಭೇಟಿ ಮಾಡುತ್ತಿದ್ದರು. ಕೆಲವೊಮ್ಮೆ ಸಹಾಯಕರೊಂದಿಗೆ, ಇನ್ನು ಕೆಲವೊಮ್ಮೆ ಅವರಿಲ್ಲದೆಯೇ. ಮಾತುಕತೆಯ ಎರಡನೆಯ ದಿನ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾದ ಛಾಯಾಚಿತ್ರಗಳು 'ಎಲ್ಲವೂ ಸರಿಯಾಗಿಲ್ಲ' ಎನ್ನುವುದನ್ನು ಬಿಂಬಿಸುತ್ತಿದ್ದವು. ಚೌ ಎನ್ ಲಾಯ್ ಅವರು, ಭಾರತ-ಚೀನಾ ಮೈತ್ರಿಗೆ ಸ್ವಸ್ತಿಪಾನ ಹೇಳುವಾಗ, ಶ್ರೀಮತಿ ಇಂದಿರಾಗಾಂಧಿಯವರ ಗಾಜಿನ ಲೋಟದೊಂದಿಗೆ ತಮ್ಮ ಗಾಜಿನ ಲೋಟವನ್ನು ಟಿಂಟಿಣಿಸಿದ್ದರು. ಶ್ರೀಮತಿ ಇಂದಿರಾಗಾಂಧಿಯವರು ಅಂದಚೆಂದದ ಸೀರೆಯ ಪೋಷಾಕಿನಲ್ಲಿ ಚೌ ಎನ್ ಲಾಯ್ ಜೊತೆ ನಿಂತಿದ್ದರು. ಆದರೆ ಅವರ ನೋಟ ವಿಲಕ್ಷಣಕಾರಿಯಾಗಿ ತಂದೆಯತ್ತ ಹರಿದಿತ್ತು. ಮೇಜಿನ ಮತ್ತೊಂದು ತುದಿಯಲ್ಲಿ ನೆಹರೂ ಅವರು ದ್ರಾಕ್ಷಾರಸದ ಲೋಟವನ್ನು ಸೀಪುತ್ತ ಚೌ ಎನ್ ಲಾಯ್ ಅವರ ನೇರ ನೋಟವನ್ನು ತಪ್ಪಿಸಿಕೊಳ್ಳುವಂತೆ

ನಿಂತಿದ್ದರು. ಈ ಚಿತ್ರದಲ್ಲಿ, ಏನಾದರೂ ಆಸಕ್ತಿಯನ್ನು ತೋರುತ್ತಿದ್ದ ವ್ಯಕ್ತಿಯೆಂದರೆ, ಉಪರಾಷ್ಟ್ರಪತಿ ಡಾ।। ಎಸ್. ರಾಧಾಕೃಷ್ಣನ್. ಅವರು ಚೌ ಎನ್ ಲಾಯ್ ಅವರಿಗೆ ಸ್ವಸ್ತಿಪಾನ ಹೇಳುವ ಕಾತುರದಲ್ಲಿದ್ದಂತೆ ಚಿತ್ರ ತೋರಿಸುತ್ತಿತ್ತು.

ಚೌ ಎನ್ ಲಾಯ್ ಮತ್ತು ನೆಹರೂ ದಿನದಲ್ಲಿ ಇಪ್ಪತ್ತು ತಾಸು ಮಾತುಕತೆ ನಡೆಸಿದರು. ಇವರಿಬ್ಬರ ಮಾತುಕತೆಯ ಪಠ್ಯದ ಪ್ರತಿಗಳು ಇನ್ನೂ ರಹಸ್ಯ ದಾಖಲೆಗಳಾಗಿಯೇ ಉಳಿದಿವೆ. ಆದರೆ ಇದರ ಪ್ರತಿಯೊಂದನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡಿದ್ದ ಅಧಿಕಾರಿಯೊಬ್ಬರ ಜೊತೆ ಈ ಲೇಖಕ ಸಮಾಲೋಚನೆ ನಡೆಸಿದ್ದಾನೆ. ಮಾತುಕತೆಯಲ್ಲಿ ಉಂಟಾದ ಚಕಮಕಿ, ಚಿಂತೆ, ನೋವುಗಳೆಲ್ಲ ಇಲ್ಲಿ ದಾಖಲಾಗಿವೆ. ಭಾರತ, ಚೀನಾಕ್ಕೆ ಏನೆಲ್ಲ ಸಹಾಯ ಮಾಡಿತು ಎನ್ನುವುದರ ಪ್ರಸ್ತಾಪದೊಂದಿಗೆ ನೆಹರೂ ಮಾತುಕತೆ ಆರಂಭಿಸಿದ್ದರು. ಆಫ್ರೇಶ್ಯ ಬಾಂಡುಂಗ್ ಸಮ್ಮೇಳನದಲ್ಲಿ ಚೀನದ ನಾಯಕರನ್ನು ಪರಿಚಯ ಮಾಡಿಕೊಟ್ಟದ್ದು, ವಿಶ್ವಸಂಸ್ಥೆಯಲ್ಲಿ ಚೀನದ ಪರ ವಕಾಲತ್ತು ವಹಿಸಿದ್ದು ಇವೆಲ್ಲವನ್ನೂ ನೆಹರೂ ನೆನಪಿಸಿದ್ದರು. ಈ ಎಲ್ಲ ಹಿನ್ನೆಲೆಯಲ್ಲಿ ಚೀನದಿಂದ ಭಾರತದ ಗಡಿ ಉಲ್ಲಂಘನೆ ತೀವ್ರ ಆಘಾತಕಾರಿಯಾಗಿದೆಯೆಂದು ನೆಹರೂ ತಿಳಿಸಿದ್ದರು. ಚೌ ಎನ್ ಲಾಯ್ ದೋಷಾರೋಪದ ಮೂಲಕವೇ ಇದಕ್ಕೆ ಉತ್ತರಿಸಿದ್ದರು. ಭಾರತ ಮತ್ತು ಚೀನಾ ನಡುವಣ ಪ್ರಾಚೀನ-ಅರ್ವಾಚೀನ ಸ್ನೇಹ ಸಂಬಂಧದ ಹಿನ್ನೆಲೆಯಲ್ಲಿ ನೋಡಿದಾಗ, ದಲಾಯಿಲಾಮ ಮತ್ತು ಅವರ ಅನುಯಾಯಿಗಳ ಚಟುವಟಿಕೆಗಳು ರಾಜಕೀಯ ಆಶ್ರಯವನ್ನು ಮೀರಿದ್ದಾಗಿವೆಯೆಂದು ಚೌ ಎನ್ ಲಾಯ್ ವಾದಿಸಿದ್ದರು.

ಎರಡು ದಿನ ನೆಹರೂ ಮತ್ತು ಚೌ ಎನ್ ಲಾಯ್ ಆರೋಪ-ಪ್ರತ್ಯಾರೋಪಗಳಲ್ಲಿ ಕಾಲ ಕಳೆದರು. ಹಿಮಾಲಯ ತನ್ನ ರಾಷ್ಟ್ರದ ನೈಸರ್ಗಿಕವಾದ ಹಾಗೂ ಜನಸಂಖ್ಯಾಶಾಸ್ತ್ರದನ್ವಯದ ಗಡಿ ಎಂದು ಭಾರತ ಪರಿಗಣಿಸಿದಲ್ಲಿ ಚೀನ, ಮೆಕ್‌ಮಹೋನ್ ರೇಖೆಯನ್ನು ಸಾಮ್ರಾಜ್ಯಶಾಹಿಯ ಮಾರಕ ಪರಂಪರಾನುಗತ ಕೊಡುಗೆ ಎಂದು ತಳ್ಳಿಹಾಕುವುದೆಂದು ಚೌ ಎನ್ ಲಾಯ್ ತಿಳಿಸಿದ್ದರು. ಇಬ್ಬರು ಪ್ರಧಾನಮಂತ್ರಿಗಳೂ ತಮ್ಮ ವಾದವನ್ನು ವಿವರಗಳ ಮೂಲಕ, ಅಂಕಿ ಅಂಶಗಳ ಮೂಲಕ ಸಮರ್ಥಿಸಿಕೊಂಡಿದ್ದರು. ನದಿಗಳು, ಬೆಟ್ಟಗುಡ್ಡಗಳು, ಹಳ್ಳಿಗಳು, ಠಾಣ್ಯಗಳು ಹೀಗೆ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನೂ ಸಾಕ್ಷ್ಯಾಧಾರಗಳನ್ನೂ ಮಂಡಿಸಿದ್ದರು. ಅಂತಿಮವಾಗಿ, ಚೌ ಎನ್ ಲಾಯ್ ಅವರು ಅದೇ ವಾದಗಳನ್ನು, ತರ್ಕಗಳನ್ನು ಮತ್ತೆ ಮತ್ತೆ ಪುನರುಚ್ಚರಿಸುವ ಬದಲು, ಏನಾದರೊಂದು ಪರಿಹಾರ ಹುಡುಕುವುದು ಉತ್ತಮ ಎಂದು ಸಲಹೆ ಮಾಡಿದ್ದರು. ತಮ್ಮ ಆಡಳಿತಾತ್ಮಕ ಹತೋಟಿಯಲ್ಲಿಲ್ಲದ ಪ್ರದೇಶದ ಮೇಲೆ ಎರಡೂ ರಾಷ್ಟ್ರಗಳು ಹಕ್ಕನ್ನು ಮಂಡಿಸಬಾರದು ಎನ್ನುವುದು ಚೌ ಎನ್ ಲಾಯ್ ಸೂಚಿಸಿದ ಸೂಕ್ತ ಪರಿಹಾರವಾಗಿತ್ತು. ಒಂದೆರಡು ಗಂಟೆಗಳ ನಂತರ ಅವರು ತಮ್ಮ ನಿಲುವನ್ನು ಹೀಗೆ ಸ್ಪಷ್ಟೀಕರಿಸಿದ್ದರು: "ಪೂರ್ವವಲಯದಲ್ಲಿನ ಗಡಿ ತನ್ನ ಆಡಳಿತಾತ್ಮಕ ಹತೋಟಿಯಲ್ಲಿದೆ ಎನ್ನುವ ಭಾರತದ ಭಾವನೆಯನ್ನು ನಾವು ಒಪ್ಪುತ್ತೇವೆ. ಅದೇ ರೀತಿ, ಪಶ್ಚಿಮ ವಲಯದಲ್ಲಿ ಭಾರತ ತನ್ನ ಗಡಿ ಪ್ರದೇಶವೆಂದು ಪರಿಗಣಿಸಿರುವ ಪ್ರದೇಶದ ಮೇಲೆ ಚೀನಾದ ಆಡಳಿತಗಾರರು ಪದಾರ್ಪಣ ಮಾಡಿರುವುದನ್ನು ಭಾರತ ಒಪ್ಪಿಕೊಳ್ಳಬೇಕು".

ಈ ಮಾತುಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಅದರ ಹಿಂದಿನ ಧ್ವನಿಯನ್ನು ಗಮನಿಸಿದಾಗ ಸ್ಪಷ್ಟವಾದದ್ದು: ಪಶ್ಚಿಮದಲ್ಲಿ ನಿಮ್ಮ ವಾದ ಬಲವಾಗಿದೆ. ಆದರೆ ಅಲ್ಲಿ ನಮ್ಮ ಅಗತ್ಯಗಳು ಅವಶ್ಯಕತೆಗಳು ಹೆಚ್ಚಾಗಿವೆ ಮತ್ತು ಪೂರ್ವವಲಯದಲ್ಲಿ ನಮ್ಮ ವಾದ ಪ್ರಬಲವಾಗಿದೆ. ಆದರೆ ಅಲ್ಲಿ ನಿಮ್ಮ ಹಿತಾಸಕ್ತಿಗಳು ಹೆಚ್ಚಾಗಿ ಈಡಾಗಿವೆ. ದಯವಿಟ್ಟು ತವಾಂಗ್ ಮತ್ತು ಸುತ್ತಮುತ್ತಣ ಪ್ರದೇಶವನ್ನು ನೀವಿಟ್ಟುಕೊಳ್ಳಿ. ನಮಗೆ ಬೇಕಾಗಿರುವುದು ಅಕ್ಸಾಯಿ ಚಿನ್ ಮತ್ತು ಸಿಂಕಿಯಾಂಗ್-ಟಿಬೆಟ್‌ಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ. ಇದನ್ನು ಬಿಟ್ಟುಕೊಡಿ ಎನ್ನುವುದು ಚೌ ಎನ್ ಲಾಯ್ ಸೂಚಿಸಿದ ಪರಿಹಾರದ ತಿರುಳಾಗಿತ್ತು.

ಯಥಾಸ್ಥಿತಿ ಮುಂದುವರಿಕೆ ಹಾಗೂ ಯಥಾಸ್ಥಿತಿಯನ್ನು ಮಾನ್ಯ ಮಾಡುವುದು ಚೌ ಎನ್ ಲಾಯ್ ಪ್ರತಿಪಾದನೆಯಾಗಿತ್ತು. ಈ ಯಥಾಸ್ಥಿತಿ ಎನ್ನುವವೇ ವಿವಾದಾತ್ಮಕ ನುಡಿಗಟ್ಟಾಗಿದೆ ಎಂದು ನೆಹರೂ ಆಕ್ಷೇಪಿಸಿದ್ದರು. ಯಥಾಸ್ಥಿತಿ ಎಂದರೇನು? ಇದು ನೆಹರೂ ಎತ್ತಿದ ಪ್ರಶ್ನೆ. ಇವತ್ತಿನ ಯಥಾಸ್ಥಿತಿ, ಎರಡು ಮೂರು ವರ್ಷಗಳ ಹಿಂದಿನ ಯಥಾಸ್ಥಿತಿಗಿಂತ ಭಿನ್ನವಾಗಿರಬಹುದು. ಹಿಂದಿನ ಯಥಾಸ್ಥಿತಿಗಿಂತ ಭಿನ್ನವಾಗಿರುವ ಇಂದಿನ ಯಥಾಸ್ಥಿತಿಯನ್ನು ಪಾಲಿಸುವುದು ಕಷ್ಟವಾಗುತ್ತದೆ. ಈ ಯಥಾಸ್ಥಿತಿ ಮಾನದಂಡ ಅನ್ವಯಿಸಿದಲ್ಲಿ ಚೈನಾ ಅಕ್ರಮವಾಗಿ, ರಹಸ್ಯವಾಗಿ ಮಾಡಿಕೊಂಡಿರುವ ಲಾಭಗಳೆಲ್ಲ ಕ್ರಮಬದ್ಧ ಎಂದು ಚೌ ಎನ್ ಲಾಯ್ ಸಮರ್ಥಿಸಿಕೊಳ್ಳಬಹುದೆಂಬುದು ನೆಹರೂ ಅವರ ಅಭಿಪ್ರಾಯವಾಗಿತ್ತು.

ಚೌ ಎನ್ ಲಾಯ್ ಅವರು ಗೃಹಸಚಿವ ಜಿ.ಬಿ. ಪಂತ್ ಮತ್ತು ಉಪರಾಷ್ಟ್ರಪತಿ ಡಾ.ಎಸ್. ರಾಧಾಕೃಷ್ಣನ್ ಅವರನ್ನೂ ಭೇಟಿ ಮಾಡಿದ್ದರು. ಪ್ರಪಂಚದ ಕಣ್ಣಿನಲ್ಲಿ ಕಮ್ಯುನಿಸ್ಟ್ ಸರ್ಕಾರವೊಂದಕ್ಕೆ ತರ್ಕ ಸಮ್ಮತ ಮಾನ್ಯತೆಯನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಭಾರತ ಏನೆಲ್ಲ ಮಾಡಿತು ಎಂಬುದರ ಬಗ್ಗೆ ಚೀನ ಮೆಚ್ಚುಗೆಯ ಮನೋಭಾವ ಹೊಂದಿಲ್ಲ, ಕೃತಜ್ಞತೆ ಅದಕ್ಕಿಲ್ಲ ಎಂಬುದನ್ನು ಇವರಿಬ್ಬರೂ ವಿವಾದದಿಂದ ಮನವರಿಕೆ ಮಾಡಿಕೊಟ್ಟಿದ್ದರು. ಮುರಾರಜಿ ದೇಸಾಯಿ ಚೌ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಟಿಬೆಟ್ಟಿನ ಭಿನ್ನಮತೀಯರು ಭಾರತದ ನೆಲವನ್ನು ಬಳಸಿಕೊಳ್ಳಲು ಹೇಗೆ ಅವಕಾಶ ಮಾಡಿಕೊಡಲಾಯಿತು? ಇದು ಸರಿಯೆ? ಎನ್ನುವ ಚೌ ಪ್ರಶ್ನೆಗೆ "ನಮ್ಮ ರಾಷ್ಟ್ರದಲ್ಲಿ ಪ್ರತಿಯೊಬ್ಬರೂ ಸಭೆ-ಸಮಾರಂಭಗಳನ್ನು ನಡೆಸುತ್ತಾರೆ. ಅಲ್ಜೀರಿಯಾದವರೂ ನಡೆಸುತ್ತಾರೆ, ಭಾರತೀಯರೂ ನಡೆಸುತ್ತಾರೆ. ಕೆಲವೊಮ್ಮೆ ತಮ್ಮ ಸರ್ಕಾರದ ವಿರುದ್ಧವೇ" ಎಂದು ಮುರಾರಜಿ ದಬಾಯಿಸಿದ್ದರು. ನಂತರ ಮುರಾರಜಿ ದೇಸಾಯಿ ಉಪಾಯವಾಗಿ ಅಥವಾ ತುಂಟತನದಿಂದಲೇ ಚೌಗೆ ತಿರುಗೇಟು ಕೊಟ್ಟಿದ್ದರು. "ಲೆನಿನ್ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಆಶ್ರಯ ಕೋರಿದ್ದು ಚೀನದ ಪ್ರಧಾನಮಂತ್ರಿಗಳಿಗೆ ಗೊತ್ತಿರುವ ವಿಷಯವೇ ಆಗಿದೆ. ಆದರೆ ಯಾರೂ ಅವರ ರಾಜಕೀಯ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರಲಿಲ್ಲ. ನಾವು, ಭಾರತದಲ್ಲಿ ಚೀನದ ವಿರುದ್ಧ ಪಿತೂರಿ ನಡೆಸಲು ಯಾರೊಬ್ಬರಿಗೂ ಪ್ರೋತ್ಸಾಹ ನೀಡುವುದಿಲ್ಲ. ಆದರೆ ಜನ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದನ್ನು ನಮ್ಮಿಂದ ತಪ್ಪಿಸಲಾಗದು. ವಾಕ್ ಸ್ವಾತಂತ್ರ್ಯ ನಮ್ಮ ಪ್ರಜಾಪ್ರಭುತ್ವದ ಆಧಾರವಾಗಿದೆ".

ಚೌ ಎನ್ ಲಾಯ್ ಜೊತೆಗಿನ ತಮ್ಮ ಮಾತುಕತೆಯನ್ನು ಸಂಸತ್ತಿಗೆ ವರದಿ ಮಾಡಿದ ನೆಹರೂ, ಸಂಯುಕ್ತ ಪ್ರಕಟಣೆಯಲ್ಲಿನ ಗಮನಾರ್ಹವಾದ ವಾಕ್ಯವೊಂದನ್ನು ಅರುಹಿದರು: "ಇಷ್ಟೆಲ್ಲ ಪ್ರಯತ್ನ ಮಾಡಿದಾಗ್ಯೂ ಪರಿಹಾರ ಕಾಣಲಾಗಲಿಲ್ಲ". ಫ್ರಾಂಕ್ ಮೊರೇಸ್ ಅವರು ಚೌ ಎನ್ ಲಾಯ್ ಭೇಟಿ ಕುರಿತ ಮರಣ ಶಾಸನವನ್ನು ಸರಿಯಾಗಿಯೇ ಬರೆದಿದ್ದರು: "ಎರಡನೆಯ ಚಾರ್ಲ್ಸ್ ದೊರೆಯಂತೆ ಭಾರತ-ಚೀನ ಮಾತುಕತೆಯೂ ಜಪ್ಪಯ್ಯ ಎಂದರೂ ಸಾಯುವುದಿಲ್ಲ, ಇದು ನಿಧಾನ ಮೃತ್ಯು". ಶೃಂಗಸಭೆ ವಿಫಲಗೊಂಡ ನಂತರ, ಅಧೀನ, ಕೆಳದರ್ಜೆಯ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ಶುರುವಾಯಿತು. ಇಂಥ ಮಾತುಕತೆ, 1960ರ ಜೂನ್-ಜುಲೈನಲ್ಲಿ ಪೀಕಿಂಗ್‌ನಲ್ಲಿ, ಆಗಸ್ಟ್-ಅಕ್ಟೋಬರಿನಲ್ಲಿ ನವದೆಹಲಿಯಲ್ಲಿ, ಆಖೈರಾಗಿ ನವೆಂಬರ್-ಡಿಸೆಂಬರ್‌ನಲ್ಲಿ ಬರ್ಮಾದ ರಾಜಧಾನಿ ರಂಗೂನಿನಲ್ಲಿ ನಡೆಯಿತು. ಈ ಮಾತುಕತೆ ಕಾಲದಲ್ಲಿ ಉಭಯತ್ರರೂ ತಮ್ಮ ನಿಲುವು-ವಾದ ಸಮರ್ಥನೆಗಾಗಿ ಭೂಪಟಗಳು, ಲಿಖಿತ ಮಾಹಿತಿಗಳು ಮೊದಲಾದ ಸಾಕ್ಷ್ಯಾಧಾರಗಳನ್ನು ಮುಂದಿಟ್ಟರು. ಸಮಕಾಲೀನ ವ್ಯಾಖ್ಯಾನಕಾರರೊಬ್ಬರು ಹೇಳಿರುವಂತೆ, ಸಾಕ್ಷ್ಯಾಧಾರಗಳೆಲ್ಲವೂ ಭಾರತ ಸರ್ಕಾರದ ಪರವಾಗಿದ್ದವು. 1920ಕ್ಕೂ ಮುಂಚಿತವಾಗಿ ಅಕ್ಸಾಯಿ ಚಿನ್ ಚೀನದ ಅವಿಭಾಜ್ಯ ಅಂಗವಾಗಿತ್ತೆಂದು ತೋರಿಸುವ ಅಧಿಕೃತ ಭೂಪಟ ಯಾವುದೂ ಇರಲಿಲ್ಲ. 1930ರ ಸಿಂಕಿಯಾಂಗ್ ಭೂಪಟದಲ್ಲಿ ಕರಾಕೋರಂ ಬದಲು ಕುನ್ಲುನ್ ಅನ್ನು ಪರಂಪರಾನುಗತ ಗಡಿಯಾಗಿ ಇದರಲ್ಲಿ ತೋರಿಸಲಾಗಿತ್ತು. ಭಾರತದ ಹಕ್ಕೊತ್ತಾಯವೂ ಇದೇ ಆಗಿತ್ತು. ಉದ್ದಕ್ಕೂ ಭಾರತ ಕೇಳುತ್ತಿದ್ದುದು ಇದನ್ನೇ. ಚೈನಾ ಅತಿಕ್ರಮಣ ನಡೆಸಿದ್ದ ಪಶ್ಚಿಮವಲಯದಲ್ಲಿ ಭಾರತದ ವಾದ ಪ್ರಬಲವಾಗಿರುವಂತಿತ್ತು. ತಮ್ಮ ವಾದ ಮಂಡನೆಯಲ್ಲಿ ಭಾರತ ಸರ್ಕಾರ ಸಕಲ ಸಿದ್ಧತೆಯನ್ನೂ ಚೆನ್ನಾಗಿ ಮಾಡಿಕೊಂಡಿತ್ತು. ಆದರೆ, ಚೀನದ ವಾದ ಅಸಮರ್ಪಕವಾಗಿತ್ತು. ಚೀನ ಮಂಡಿಸಿದ ವಾದ ಒಂದಕ್ಕೊಂದು ಸಾಮರಸ್ಯವಿಲ್ಲದ ಸಂಗತಿಗಳು, ಆಂತರಿಕ ಗೊಂದಲಗಳಿಂದ ದಿಗ್ಭ್ರಮೆ ಉಂಟುಮಾಡುವಂತಿತ್ತು. ಸಂದರ್ಭೋಚಿತವಲ್ಲದ ಉಲ್ಲೇಖಗಳು, ಎದ್ದು ಕಾಣುವಂಥ ಹಸಿ ಸುಳ್ಳುಗಳಿಂದ ಚೀನದ ವಾದ ತುಂಬಿಹೋಗಿತ್ತು.

ಭಾರತದಿಂದ ವಿಷಯ ಮಂಡನೆ ಉತ್ತಮ ರೀತಿಯದಾಗಿತ್ತಾದರೂ ಮೂಲಭೂತವಾಗಿ ಪ್ರತಿಪಾದನೆಯಲ್ಲಿ ವಿರೋಧಾಭಾಸಗಳಿದ್ದವು. ಪಾಶ್ಚಾತ್ಯ ಮೂಲಗಳಿಂದ ಒದಗಿ ಬಂದ ಸಾಕ್ಷ್ಯಗಳನ್ನು-ಯಾವುದೇ ಸಂಬಂಧವಿಲ್ಲದ ಪ್ರವಾಸಿಗರು, ಜಂಗಮ ಕ್ರೈಸ್ತ ಪಾದ್ರಿಗಳು ಮೊದಲಾದವರಿಂದ ಬಂದ ಸಾಕ್ಷಿ ಪುರಾವೆಗಳು-ಸಾಮ್ರಾಜ್ಯಶಾಹಿ ಲೇಪಿತ ಎಂದು ತಳ್ಳಿಹಾಕಿಬಿಡಲಾಗಿತ್ತು. ಒಂದು ಹಂತದವರೆಗೆ ಚೀನೀಯರು ಪ್ರತಿಸಾಕ್ಷಿ-ಪುರಾವೆಗಳನ್ನು ಮಂಡಿಸುತ್ತಿದ್ದರು. "ಎರಡು ರಾಷ್ಟ್ರಗಳ ನಡುವೆ, ಸಾರ್ವಭೌಮ ರಾಷ್ಟ್ರಗಳಾಗಿ ಗಡಿ ಗುರುತಿಸುವ ಕಾರ್ಯ ನಡೆದೇ ಇಲ್ಲ ಹಾಗೂ ಭಾರತ ಬ್ರಿಟಿಷ್ ಭಾರತದ ಪರಂಪರೆಯನ್ನೇ ತನ್ನ ಹಕ್ಕೆಂದು ಸಾಧಿಸಲಾಗದು. 1949ರ ಕ್ರಾಂತಿಯ ಪೂರ್ವದಲ್ಲಿ ಟಿಬೆಟ್ ಅಥವಾ ಚೀನಾದ ಪ್ರತಿನಿಧಿಯೆಂದು ಹೇಳಿಕೊಂಡು ಯಾರಾದರೂ ಮಾಡಿಕೊಂಡಿರಬಹುದಾದ ಕರಾರುಗಳಿಗೆ

ತಾನು ಬದ್ಧವಲ್ಲ ಎಂಬುದು ಕಮ್ಯುನಿಸ್ಟ್ ಚೀನಾದ ನಿಲುವಾಗಿದೆ" ಎಂಬುದು ಅಂತಿಮವಾಗಿ ಚೀನಾದ ಪ್ರತಿಪಾದನೆಯಾಗಿತ್ತು.

ಐತಿಹಾಸಿಕವಾಗಿ ತಾನು ದುರ್ಬಲವಾಗಿದ್ದ ಪಶ್ಚಿಮ ವಲಯದಲ್ಲಿ ಆಕ್ರಮಿಸಿಕೊಂಡಿರುವ ಪ್ರದೇಶವನ್ನು ಉಳಿಸಿಕೊಳ್ಳುವುದು ಚೀನದ ಮುಖ್ಯ ಉದ್ದೇಶ ಎಂಬುದು ಗಮನಾರ್ಹವಾದ ಸಂಗತಿ. ಇದಕ್ಕೆ ಪ್ರತಿಯಾಗಿ ಪೂರ್ವ ವಲಯದಲ್ಲಿನ ತನ್ನ ಬೇಡಿಕೆಗಳನ್ನು ಬಿಟ್ಟುಕೊಡಲು ಚೀನಾ ಸಿದ್ಧವಾಗಿತ್ತು. ಟಿಬೆಟ್‌ನೊಂದಿಗೆ ತ್ವರಿತವಾಗಿ ಸಂಪರ್ಕ ವ್ಯವಸ್ಥೆ ಹೊಂದುವುದು ಚೀನದ ಜರೂರು ಅವಶ್ಯಕತೆಯಾಗಿತ್ತು. ಎಂದೇ ಅದು ಪೂರ್ವ ವಲಯದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಂಡಿರಲಿಲ್ಲ. 1960ರ ಅಕ್ಟೋಬರಿನಲ್ಲಿ ಸ್ವತಃ ತಾವು ನೆಹರೂ ಅವರೊಂದಿಗೆ ನಡೆಸಿದ ಶೃಂಗಸಭೆ ವಿಫಲವಾದದ್ದರಿಂದ ಹಾಗೂ ಅಧಿಕಾರಿಗಳ ಮಟ್ಟದ ಸಭೆಯಿಂದ ಏನೂ ಪ್ರಯೋಜನವಾಗಿರಲಿಲ್ಲವಾದ್ದರಿಂದ ಚೌ ಎನ್ ಲಾಯ್ ಹತಾಶರಾಗಿದ್ದಂತೆ ಕಂಡು ಬಂದಿತು. ಅಮೆರಿಕನ್ ಪತ್ರಕರ್ತ ಎಡ್ಗರ್ ಸ್ನೋ ಅವರಿಗೆ ನೀಡಿದ ಸಂದರ್ಶನದಲ್ಲಿ ಚೌ ಹತಾಶೆಯನ್ನು ವ್ಯಕ್ತಪಡಿಸಿದ್ದಾರೆ. "ದಲಾಯಿಲಾಮಾ ಅವರು ಪಲಾಯನ ಮಾಡಿದ ನಂತರ ಹಾಗೂ ಟಿಬೆಟಿನಲ್ಲಿ ಪ್ರಜಾಸತ್ತಾತ್ಮಕ ಸುಧಾರಣಾ ಪ್ರಕ್ರಿಯೆ ಆರಂಭವಾದ ನಂತರವೇ ಗಡಿವಿವಾದ ಮುಂಚೂಣಿಗೆ ಬಂತು" ಎಂದು ಅವರು ಅಭಿಪ್ರಾಯಪಟ್ಟಿದ್ದರು. "ಚೀನಾದ ಟಿಬೆಟ್ ಪ್ರದೇಶವನ್ನು ಉಭಯರಕ್ಷಾವಲಯವಾಗಿ ಪರಿವರ್ತಿಸುವುದು ಭಾರತ ಅಪೇಕ್ಷೆಯಾಗಿದೆ" ಎಂದು ಸಂದರ್ಶನದಲ್ಲಿ ಭಾರತದ ವಿರುದ್ಧ ಆಪಾದಿಸಿದ್ದರು. ಜೊತೆಗೆ ಚೀನದ ಇತರ ಭಾಗಗಳಂತೆ ಟಿಬೆಟ್ ಸಹ ಸಮಾಜವಾದಿ ಟಿಬೆಟ್ ಆಗುವುದು ಭಾರತಕ್ಕೆ ಬೇಕಾಗಿಲ್ಲ ಎಂದು ದೂಷಿಸಿದ್ದರು. ಸಂದರ್ಶನದ ಕೊನೆಯಲ್ಲಿ ಅವರು ಅತಿಲಂಬಿತವಾದ, ಅಸಹಜವಾದ ತೀರ್ಮಾನಕ್ಕೆ ಬಂದಿದ್ದರು. ಅದು: "ಭಾರತ, ಚೀನ-ಭಾರತ ನಡುವಣ ಗಡಿ ವಿವಾದವನ್ನು ದೇಶದೊಳಗಿನ ಪ್ರಗತಿಶೀಲ ಶಕ್ತಿಗಳ ವಿರುದ್ಧ ಒಂದು ಸಾಧನವಾಗಿ ಬಳಸಿಕೊಳ್ಳುತ್ತಿದೆ ಹಾಗೂ ವಿದೇಶಿ ನೆರವು ಪಡೆಯಲು ಇದನ್ನು ಬಂಡವಾಳವಾಗಿಸಿಕೊಳ್ಳುತ್ತಿದೆ".

V

ಬಾಹ್ಯ ಪ್ರಪಂಚದಲ್ಲಿ ಚೈನಾ ಭಾರತದ ಗಡಿ ಭೂಪಟವನ್ನು ಪ್ರಶ್ನಿಸಿದಂತೆ ದೇಶದೊಳಗೂ ಗಡಿಗಳ ಪುನರ್‌ರಚನೆ ಬಗ್ಗೆ ಒತ್ತಡ ಶುರುವಾಗಿತ್ತು. 1956ರ ರಾಜ್ಯ ಪುನರ್ವಿಂಗಡಣಾ ಆಯೋಗದ ಶಿಫಾರಸುಗಳು ಅನೇಕ ಭಾಷಾವಾರು ಬಣಗಳಿಗೆ ತೃಪ್ತಿಯುಂಟು ಮಾಡಿರಲಿಲ್ಲ. ಮುಂಬಯಿ ನಗರವನ್ನು ತನಗೆ ಬಿಟ್ಟುಕೊಡಬೇಕೆಂದು ಮಹಾರಾಷ್ಟ್ರ ಕೇಂದ್ರದ ಮೇಲೆ ಒತ್ತಡ ಹೇರಲಾರಂಭಿಸಿತ್ತು. ಮಹಾರಾಷ್ಟ್ರದ ಚೈತನ್ಯಶಾಲಿ ಯುವ ಮುಖ್ಯಮಂತ್ರಿ ವೈ.ಬಿ. ಚವ್ಹಾಣರು ತುಂಬ ಸಮರ್ಥವಾಗಿ ತಮ್ಮ ಹಕ್ಕನ್ನು ಮಂಡಿಸಿದ್ದರು. ಮುಂಬಯಿಯನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವ ಮೂಲಕ ಮಾತ್ರ 1957ರ ಚುನಾವಣೆಯ ನಷ್ಟವನ್ನು ಕಾಂಗ್ರೆಸ್ ಸರಿದೂಗಿಸಿಕೊಳ್ಳಬಹುದು ಎಂಬುದು ಚವ್ಹಾಣರ

ವಾದವಾಗಿತ್ತು. ಆಗ ಸಂಯುಕ್ತ ಮಹಾರಾಷ್ಟ್ರ ಸಮಿತಿ ಕಾಂಗ್ರೆಸ್ ಪ್ರಭಾವ ತಗ್ಗಿಸಿ ಅದರ ಓಟುಗಳನ್ನು ಕಸಿದುಕೊಂಡಿತ್ತು. ಕೊನೆಗೆ, 1960ರ ಮೇ 1ರಂದು ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಮುಂಬಯಿ ಮಹಾರಾಷ್ಟ್ರದ ಉಡಿಗೆ ಬಿದ್ದಿತ್ತು.

ಮಹಾರಾಷ್ಟ್ರ ರಾಜ್ಯ ರಚನೆಯಿಂದ ಪಶ್ಚಿಮ ಭಾರತದಲ್ಲಿ ಪ್ರತಿಭಟನೆ ಅಡಗಿತ್ತು. ಜೊತೆಗೆ ಇದು ಉತ್ತರದ ಈಡೇರದ ನಿರೀಕ್ಷೆಗಳಿಗೆ ಪುಟಕೊಟ್ಟಿತು. ಏಕೆಂದರೆ, ರಾಜ್ಯಮಟ್ಟದ ಸ್ಥಾನಮಾನ ಪಡೆದ ಇನ್ನೂ ಒಂದು ಪ್ರಮುಖ ಭಾಷಿಕ ಸಮುದಾಯ ಬಾಕಿ ಉಳಿದಿತ್ತು. ಅದು: ಪಂಜಾಬಿ. ಪಂಜಾಬಿ ಭಾಷೆ ಧರ್ಮದೊಂದಿಗೆ ಆತಂಕ ಹುಟ್ಟಿಸುವಷ್ಟು ಅವಿನಾಭಾವ ಸಂಬಂಧ ಹೊಂದಿರುವ ಕಾರಣ ಪಂಜಾಬಿ ಸಮುದಾಯಕ್ಕೆ ಭಾಷೆಯ ಆಧಾರದ ಮೇಲೆ ಪ್ರತ್ಯೇಕ ರಾಜ್ಯವನ್ನು ನಿರಾಕರಿಸಲಾಗಿತ್ತು. "ಪಂಜಾಬಿ ಸುಭಾ" ಎಂಬುದು ವಾಸ್ತವಿಕವಾಗಿ 'ಸಿಖ್ ಸುಭಾ' ಆಗಿತ್ತು. ಇದು ಪ್ರತ್ಯೇಕ ಸಿಖ್ ರಾಷ್ಟ್ರದ ಬೇಡಿಕೆಗೆ ನಿಮಿತ್ತವಾಗಬಹುದೆಂಬ ಭೀತಿ ಇತ್ತು. 1960-61ರಲ್ಲೂ ಮಾಸ್ಟರ್ ತಾರಾಸಿಂಗ್ ಪಂಜಾಬಿ ಮಾತನಾಡುವವರಿಗೆ ಪ್ರತ್ಯೇಕ ರಾಜ್ಯ ಬೇಕೆಂದು ಸರಣಿ ಚಳವಳಿಗಳನ್ನು ನಡೆಸಿದ್ದರು. ಇವರ ಜೊತೆಗಿದ್ದವರು ಮತ್ತೊಬ್ಬ ಸಾಧುಪುರುಷ ಸಂತ ಫತೇಸಿಂಗ್. ನಂತರ ಫತೇಸಿಂಗರು ಮಾಸ್ಟರ್ ಅವರ ಎದುರಾಳಿಯಾದರು. ಇವರಿಬ್ಬರ ನಾಯಕತ್ವದಲ್ಲಿ ಅಕಾಲಿ ದಳ ಸ್ವಯಂ ಸೇವಕರು ಚಳವಳಿ ನಡೆಸಿ ಬಂಧನಕ್ಕೊಳಗಾದರು. ಏತನ್ಮಧ್ಯೆ ಮಾಸ್ಟರ್ ತಾರಾಸಿಂಗ್ ಹಲವಾರು ಬಾರಿ ಉಪವಾಸ ಸತ್ಯಾಗ್ರಹಗಳನ್ನು ನಡೆಸಿದ್ದರು. ಪ್ರತಿ ಸಾರಿಯೂ ಆಮರಣಾಂತ ನಿರಶನವೆಂದು ಸತ್ಯಾಗ್ರಹ ಆರಂಭಿಸುತ್ತಿದ್ದರಾದರೂ ಅದು ಅಂಥ ಪರಮತ್ಯಾಗದಲ್ಲಿ ಪರ್ಯವಸಾನಗೊಂಡಿರಲಿಲ್ಲ.

ಅಕಾಲಿಗಳ ಬಗ್ಗೆ ನೆಹರೂ ಶಿಲೆಯಂತೆ ಸದೃಢ ನಿಲುವು ತಾಳಿದ್ದರು. ಪ್ರತಾಪ್‌ಸಿಂಗ್ ಕೈರಾನ್ ಮತ್ತಷ್ಟು ಬಿಗಿಯಾದರು. ಅಕಾಲಿ ಚಳವಳಿಗಾರರನ್ನು ಜೈಲಿಗೆ ತಳ್ಳಿದರು. ಅಮೆರಿಕದಲ್ಲಿ ಶಿಕ್ಷಣ ಪಡೆದಿದ್ದ ಕೈರಾನ್ ಮಹತ್ವಾಕಾಂಕ್ಷೆಯ ಮಹಾನ್ ಚಾಲೂಕಿನ ವ್ಯಕ್ತಿಯಾಗಿದ್ದರು. ಇವತ್ತಿನ ಮುಖ್ಯಮಂತ್ರಿಗಳಲ್ಲಿ ಅಪರೂಪ ಎನ್ನಬಹುದಾದ ಗುಣಗಳು ಅವರಲ್ಲಿದ್ದವು. ಇದು ಜನಪ್ರಿಯತೆ ಗಳಿಸಿಕೊಡುವ ಸಾಧನವಾಗಬಲ್ಲದೆಂದು ನೆಹರೂ ಭಾವಿಸಿದ್ದರು. "ಪಂಜಾಬಿನಲ್ಲಿ ಸರ್ದಾರ ಪ್ರತಾಪ್‌ಸಿಂಗ್ ಕೈರಾನರು ಗ್ರಾಮೀಣ ಜನರನ್ನು ಪ್ರತಿನಿಧಿಸುತ್ತಾರೆ ಹಾಗೂ ಈ ಗ್ರಾಮೀಣ ಜನತೆಗೆ ಅವರಲ್ಲಿ ನಂಬಿಕೆ ವಿಶ್ವಾಸಗಳಿವೆ. ಇದೇ ಕೈರಾನರ ಶಕ್ತಿಯ ಗುಟ್ಟು" ಎಂದು ನೆಹರೂ ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಸಿಖ್ ಅಥವಾ ಹಿಂದೂ ಎಂಬ ಭೇದಭಾವವಿಲ್ಲದೆ ಅವರನ್ನು ಟೀಕಿಸುತ್ತಿದ್ದವರು ಹೆಚ್ಚಾಗಿ ನಗರವಾಸಿಗಳಾಗಿದ್ದರು. ಮಾಸ್ಟರ್ ತಾರಾಸಿಂಗರ ಈಚಿನ ಉಪವಾಸ ಮುಷ್ಕರಗಳ ಬಿಸಿ ಗ್ರಾಮೀಣ ಪ್ರದೇಶಗಳಿಗೆ ತಟ್ಟಲೇ ಇಲ್ಲ. ಅವರು ಪಂಚಾಯಿತಿ ಚುನಾವಣೆ ಮತ್ತಿತರ ಚಟುವಟಿಕೆಗಳಲ್ಲಿ ಮಗ್ನರಾಗಿದ್ದರು.

ಪ್ರತಾಪ್‌ಸಿಂಗ್ ಕೈರಾನರು ಪಂಜಾಬಿನ ಅಸಭಿಷಿಕ್ತ ದೊರೆಯಾಗಿ ಎಂಟು ವರ್ಷಕಾಲ ಅಧಿಕಾರ ನಡೆಸಿದರು. ಅವರಿಗೆ ಮುನ್ನುಗ್ಗುವ ಧೈರ್ಯ-ಛಲಗಳಿದ್ದವು,

ಮುಂಗಾಣ್ಕೆ ಇತ್ತು. ಪಂಜಾಬಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸಿದರು, ಕೊಳವೆ ಬಾವಿ ಕ್ರಾಂತಿಯ ಹರಿಕಾರರಾದರು, ಕೋಳಿ ಸಾಕಣೆ, ಕುಕ್ಕಟೋದ್ಯಮದಂಥ ಲಾಭದಾಯಕ ಕೆಲಸಗಳಲ್ಲಿ ತೊಡಗಿಕೊಳ್ಳುವಂತೆ ರೈತ ಸಮುದಾಯದ ಮನಃಪರಿವರ್ತಿಸಿದರು. ಪಂಜಾಬಿ ಮಹಿಳೆಯರಿಗೆ ಹೊಸ್ತಿಲಾಚೆ ಬರುವಂತೆ ಹುರಿದುಂಬಿಸಿದರು. ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಕ್ರೀಡಾ ಕ್ಷೇತ್ರದಲ್ಲೂ ಮುನ್ನುಗ್ಗುವಂತೆ ಮಹಿಳೆಯರನ್ನು ಪ್ರೋತ್ಸಾಹಿಸಿದರು. ಕಾಯಿದೆ ಸುವ್ಯವಸ್ಥೆ ಪಾಲನೆ, ನ್ಯಾಯ-ನೀತಿ ವಿಚಾರಗಳಲ್ಲಿ ಅವರು ಕಟ್ಟುನಿಟ್ಟಿನವರಾಗಿದ್ದರು; ಕ್ರಮಾಶೀಲರೂ ಆಗಿದ್ದರು. ಪ್ರತಿಭಟನೆ, ಚಳವಳಿಗಳಲ್ಲಿ ಭಾಗವಹಿಸುವ ರೈತರನ್ನು ಜೈಲಿಗೆ ದೂಡಬೇಡಿ, ಅವರಿಗೆ ಜುಲ್ಮಾನೆ ವಿಧಿಸಿ ಎಂದು ಪೊಲೀಸ್ ಇಲಾಖೆಗೆ ಆದೇಶ ನೀಡಿದ್ದರು. ಇದರಿಂದಾಗಿ ರೈತರಿಗೆ ಸುಲಭವಾಗಿ 'ಹುತಾತ್ಮ'ರಾಗುವ ಅವಕಾಶ ತಪ್ಪಿತು. ಅಲ್ಲದೆ ಶ್ರಮದ ದುಡಿಮೆಯ ಗಳಿಕೆಯನ್ನು ಜುಲ್ಮಾನೆಯಾಗಿ ತೆರುವ ಶಕ್ತಿಯೂ ರೈತರಲ್ಲಿರಲಿಲ್ಲ. ಆದರೆ ನಗರವಾಸಿ ಮುಷ್ಕರನಿರತರನ್ನು ಜೈಲಿಗೆ ಹಾಕಬೇಕೆಂಬುದು ಕೈರಾನರ ನೀತಿಯಾಗಿತ್ತು. "ಏಕೆಂದರೆ ನಗರದ ಮಂದಿ ಸಂಸಾರ ಸುಖ ವಂಚಿತರಾಗಿ ಇರಲಾರರು".

ಈ ಸಂಸಾರ ಸುಖದಿಂದ ಬಿಡಿಸಿಕೊಳ್ಳುವುದು ಪ್ರತಾಪಸಿಂಗ್ ಕೈರಾನರಿಗೂ ಸಾಧ್ಯವಾಗಿರಲಿಲ್ಲ. ಅವರಿಗೆ ಹದ್ದುಮೀರಿ ವರ್ತಿಸುತ್ತಿದ್ದ ಇಬ್ಬರು ಪುತ್ರರಿದ್ದರು. ಈ ಇಬ್ಬರು ಪುತ್ರರು ತಂದೆಯ ಅಧಿಕಾರಾವಧಿಯಲ್ಲಿ ಕುಬೇರರಾಗುವ ದಂಧೆಯಲ್ಲಿ ತೊಡಗಿದ್ದರು. ಸರ್ಕಾರಿಯಂತ್ರದ ಸಹಾಯದಿಂದ ವಾಣಿಜ್ಯೋದ್ಯಮ ಕಟ್ಟಿ ಬೆಳೆಸಿದರು. ತಂದೆ ವಾಣಿಜ್ಯ ವ್ಯಾಪಾರಗಳಿಗಾಗಿ ಸರ್ಕಾರದ ಕಾನೂನುಗಳನ್ನು ಉಲ್ಲಂಘಿಸಿದರು. ಆಸ್ತಿಪಾಸ್ತಿ, ಕಟ್ಟಡ ನಿರ್ಮಾಣ ಕಾಯಿದೆಗಳನ್ನು ಮೀರಿದರು. "ಕಳೆದ ಕೆಲವು ವರ್ಷಗಳಲ್ಲಿ ಕೋಟ್ಯಂತರ ರೂಪಾಯಿ ಗಳಿಸಿರುವ ತಮ್ಮ ಮಕ್ಕಳ ವಾಣಿಜ್ಯೋದ್ಯಮ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳು ತಮ್ಮ ಅಧಿಕಾರ ದುರುಪಯೋಗಮಾಡುತ್ತಿದ್ದಾರೆಂದು" ಕೈರಾನ್ ವಿರುದ್ಧ ಆಪಾದನೆಗಳ ಕೂಗಿದ್ದಿತು. ಮಕ್ಕಳ ಕಾನೂನು ಉಲ್ಲಂಘನೆ, ಲೋಪಗಳ ಬಗ್ಗೆ ಕಣ್ಣುಮುಚ್ಚಿಕೊಳ್ಳುವಂತೆ ಐ.ಎ.ಎಸ್. ಅಧಿಕಾರಿಗಳಿಗೆ ತಾಕೀತು ಮಾಡಲಾಗಿತ್ತು. ಸಂಸತ್ತಿನಲ್ಲಿ ಕೈರಾನರ ಬಗ್ಗೆ ಕಟುವಾದ ಪ್ರಶ್ನೆಗಳೆದ್ದವು. ಶ್ರೀಮತಿ ಇಂದಿರಾಗಾಂಧಿಯವರೂ ಸೇರಿದಂತೆ ಹಲವಾರು ಮಂದಿ ಕಾಂಗ್ರೆಸ್ ನಾಯಕರು ಕೈರಾನರನ್ನು ಕೆಳಕ್ಕಿಳಿಸುವಂತೆ ಪ್ರಧಾನಮಂತ್ರಿಗೆ ಆಗ್ರಹಪಡಿಸಿದರು. ಆದರೆ ನೆಹರೂಗೆ, ಪಂಜಾಬಿ ಸುಭಾ ವಿರುದ್ಧ ಬಂಡೆಯಂತೆ ನಿಂತ ಕೈರಾನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಮೆಚ್ಚುಗೆ ಇತ್ತು. ನೆಹರೂ ಅವರ ಪರ ನಿಂತರು. ಆದರೆ, ಕೈರಾನರ ವಿರುದ್ಧ ಮಾಡಲಾಗಿರುವ ಆರೋಪಗಳ ತನಿಖೆಗೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲು ಒಪ್ಪಿಕೊಂಡರು.

ಇತಿಹಾಸಕಾರ ಎ.ಜಿ. ನೂರಾನಿಯವರು ಬರೆದಿರುವಂತೆ ಅನೇಕ ವಿಷಯಗಳಲ್ಲಿ ಪ್ರತಾಪ್‌ಸಿಂಗ್ ಕೈರಾನ್ ಮತ್ತು ಕಾಶ್ಮೀರದ ಬಕ್ಷಿ ಗುಲಾಂ ಮೊಹಮದರ ನಡುವೆ ಸಾಮ್ಯ ಇತ್ತು. ಇಬ್ಬರೂ ಖಡಾಖಂಡಿತವಾಗಿ, ತೀಕ್ಷ್ಣವಾಗಿ ಮಾತನಾಡುತ್ತಿದ್ದರು. ನೇರ ಮಾರ್ಗದಲ್ಲಿ

ಕಾರ್ಯಪ್ರವೃತ್ತರಾಗಿರುತ್ತಿದ್ದರು. ಅಧಿಕಾರಶಾಹಿ ವಿಳಂಬ ನೀತಿಯನ್ನು ಸಹಿಸುತ್ತಿರಲಿಲ್ಲ ಹಾಗೂ ಸಾರ್ವಜನಿಕ ಜೀವನದಲ್ಲಿ ಔಚಿತ್ಯ, ಮರ್ಯಾದೆಗಳ ಎಲ್ಲೆ ಮೀರುವುದನ್ನು ಸಹಿಸುತ್ತಿರಲಿಲ್ಲ. ಇಬ್ಬರೂ ದಕ್ಷ ಆಡಳಿತಗಾರರಾಗಿದ್ದರು. ಹಾಗೆಯೇ ಇವರಿಬ್ಬರೂ ಪ್ರಧಾನ ಮಂತ್ರಿ ನೆಹರೂ ಅವರ ಪ್ರೋತ್ಸಾಹ-ಪೋಷಣೆಗಳಿಗೂ ಪಾತ್ರರಾಗಿದ್ದರು.

ಅಕಾಲಿಕ ಚಳವಳಿಯಿಂದಾಗಿ ಪಂಜಾಬಿನಲ್ಲಿ ಪ್ರಧಾನ ಮಂತ್ರಿಯವರ ಬಗ್ಗೆ ಅಪಪ್ರಚಾರ ನಡೆದಿತ್ತು. ರಾಜ್ಯದ ಆಡಳಿತದಲ್ಲಿ ಪ್ರಧಾನಿಗೆ ಹಾನಿಯುಂಟುಮಾಡುವ ಪ್ರವೃತ್ತಿಯೂ ಇತ್ತು. ಇನ್ನೊಂದು ಗಡಿ ಪ್ರದೇಶವಾದ ನಾಗಾ ಪರ್ವತ ಪ್ರದೇಶದಲ್ಲಿ ನೆಹರೂ ಬಗ್ಗೆ ಇನ್ನೂ ಕೆಟ್ಟ ರೀತಿಯ ಪ್ರಚಾರದ ಅಲೆ ಎದ್ದಿತ್ತು. ಇದು, ದಂಗೆಕೋರ ನಾಯಕ ಎ.ಎಸ್. ಫಿಜೋ ಲಂಡನ್ನಿನಲ್ಲಿ ನಾಟಕೀಯವಾಗಿ ಕಾಣಿಸಿಕೊಂಡಿದ್ದರ ಪರಿಣಾಮವಾಗಿತ್ತು. 1956ರಲ್ಲಿ ಫಿಜೋ, ಬರ್ಮಾ ಮತ್ತು ಪೂರ್ವ ಪಾಕಿಸ್ತಾನಗಳಿಗೆ ಪಲಾಯನ ಮಾಡಿ ಅಲ್ಲಿಂದ ನಾಗಾ ಚಳವಳಿಗೆ ಮಾರ್ಗದರ್ಶನ ನೀಡುತ್ತಿದ್ದ. ಮೂರು ವರ್ಷಗಳು ದೂರ ಇದ್ದುಕೊಂಡೇ ಬಂಡಾಯ ಮುಂದುವರಿಸಿದ್ದ ಫಿಜೋಗೆ ಪಶ್ಚಿಮ ರಾಷ್ಟ್ರಗಳ ಬೆಂಬಲ ಅಗತ್ಯವೆನ್ನಿಸಿತು. ಎಲ್ ಸಲ್ವಡಾರ್ ರಹದಾರಿ ಪತ್ರ ಹಿಡಿದುಕೊಂಡು ಫಿಜೋ ಸ್ವಿಟ್ಜರ್ಲೆಂಡ್ ತಲುಪಿದ. ಸ್ವಿಟ್ಜರ್ಲೆಂಡಿನಲ್ಲಿ ತೀವ್ರಗಾಮಿ ಪಾದ್ರಿಯಾಗಿದ್ದ, ಹಿಂದೊಮ್ಮೆ ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ವಿರುದ್ಧ ಕೆಲಸ ಮಾಡಿದ್ದ ರೆವರೆಂಡ್ ಮೈಕೆಲ್ ಸ್ಕಾಟ್‌ನ ಸ್ನೇಹ ಸಂಪಾದಿಸಿದ. ಸ್ಕಾಟ್ ಸಹಾಯದಿಂದ ಯುನೈಟೆಡ್ ಕಿಂಗ್‌ಡಮ್ ತಲುಪಿದ್ದ.

ಲಂಡನ್ನಿನಲ್ಲಿ ಫಿಜೋ ಹಲವಾರು ಪತ್ರಿಕಾಗೋಷ್ಠಿಗಳನ್ನು ನಡೆಸಿದ. ಮೈಕೆಲ್ ಸ್ಕಾಟ್ ಜೊತೆಗೂಡಿ ನಡೆಸಿದ ಪತ್ರಿಕಾಗೋಷ್ಠಿಗಳಲ್ಲಿ ಫಿಜೋ, ಭಾರತದ ಸೇನೆ ನಾಗಾ ಜನರ ನರಮೇಧ ನಡೆಸಿದೆಯೆಂದು ಆಪಾದನೆ ಮಾಡಿದ. ಇಷ್ಟೇ ಸಾಲದೆಂಬಂತೆ ಫಿಜೋ, ಸ್ಕಾಟ್ ನೆರವಿನಿಂದ ಒಂದು ಕರಪತ್ರವನ್ನು ಪ್ರಕಟಿಸಿದ. "ತಾತ ಮುತ್ತಾತರ ಕಾಲದಿಂದ ಬಂದಿದ್ದ ಪ್ರಾಚೀನ ಸ್ವಾತಂತ್ರ್ಯವನ್ನು ಭಾರತದ ಸೇನೆ ಹೇಗೆ ವ್ಯವಸ್ಥಿತವಾಗಿ ನಾಶಗೊಳಿಸುತ್ತಿದೆ...ಅವರು ನಮ್ಮ ರಾಷ್ಟ್ರವನ್ನು ತಮ್ಮ ದಾಸ್ಯಕ್ಕೊಳಪಡಿಸಿಕೊಂಡು ನಾಶಮಾಡಲೆತ್ತಿಸುತ್ತಿದ್ದಾರೆ" ಎಂದೆಲ್ಲವನ್ನೂ ಕರಪತ್ರದಲ್ಲಿ ನಿರೂಪಿಸಲಾಗಿತ್ತು. ಭಾರತದ ಸೇನೆಯ ಪ್ರಚಾರ ಕಾರ್ಯವನ್ನು, ಐರೋಪ್ಯ ಫ್ಯಾಸಿಸ್ಟ್ ಮಾದರಿಯ ಜನಾಂಗೀಯ ಹತ್ಯೆಯೆಂದು ಕರಪತ್ರದಲ್ಲಿ ವರ್ಣಿಸಲಾಗಿತ್ತು. ಭಾರತದ ಸೈನಿಕರು, ಕ್ರೈಸ್ತ ಪಾದ್ರಿಗಳನ್ನು ಕ್ರೈಸ್ತ ನಾಯಕರನ್ನು, ಚರ್ಚುಗಳನ್ನು, ಮಹಿಳೆಯರು, ಮಕ್ಕಳನ್ನು ಜೀವಂತ ಸುಟ್ಟುಹಾಕುತ್ತಿದ್ದಾರೆಂದು ಫಿಜೋ ಹೇಳಿದ್ದ. ಕೊನೆಯದಾಗಿ ಅವನ ಕರಪತ್ರದಲ್ಲಿ ಹತ್ಯಾಕಾಂಡ ನಿಲ್ಲಿಸುವಂತೆ ಹಾಗೂ ನಾಗಾಲ್ಯಾಂಡನ್ನು ಸ್ವತಂತ್ರ ಸಾರ್ವಭೌಮ ರಾಷ್ಟ್ರವೆಂದು ಮಾನ್ಯ ಮಾಡುವಂತೆ ಭಾರತ ಸರ್ಕಾರಕ್ಕೆ ಒತ್ತಾಯ ಪಡಿಸಲಾಗಿತ್ತು. "ಸ್ವತಂತ್ರ ನಾಗಾಲ್ಯಾಂಡ್, ಕ್ರಿಶ್ಚಿಯನ್ ದೇಶಗಳ ಸಮುದಾಯದೊಳಗೆ, ಕಾಮನ್ವೆಲ್ತ್‌ನೊಳಗೆ ಇರಲು ಇಚ್ಛಿಸುತ್ತದೆ" ಎಂದೂ ಫಿಜೋ ಘೋಷಿಸಿದ್ದ. "ನಾಗಾಲ್ಯಾಂಡ್, ಏಸುಕ್ರಿಸ್ತನ ಅನುಯಾಯಿಯಾಗಿರಲು ಬಯಸುತ್ತದೆ, ಏಸುಕ್ರಿಸ್ತನನ್ನು ನಾವು ನಮ್ಮ ಉದ್ಧಾರಕ್ಕಾಗಿ

ಅವತಾರವೆತ್ತಿದವನು ಎಂದೇ ಪರಿಗಣಿಸುತ್ತೇವೆ" ಎನ್ನುವುದು ಕರಪತ್ರದಲ್ಲಿ ಫಿಜೋನ ಕೊನೆಯ ಮಾತಾಗಿತ್ತು.

ಫಿಜೋ, ಏಕಕಾಲದಲ್ಲಿ ದೀನದಲಿತರ ಬಗೆಗಿನ ಬ್ರಿಟಿಷ್ ಕರುಣೆ, ಫ್ಯಾಸಿಸಂ ವಿರುದ್ಧ ನಡೆದ ಇನ್ನೂ ಹಸಿರಾಗಿರುವ ಯುದ್ಧದ ನೆನಪುಗಳು ಹಾಗೂ ತನ್ನ ಜನರೊಳಗಿನ ಕ್ರಿಶ್ಚಿಯನ್ ಪರ ಭಾವನೆಗಳು ಇವೆಲ್ಲದಕ್ಕೂ ಗುರಿ ಇಟ್ಟಿದ್ದ. ಇದೊಂದು ನಯ-ನಾಜೂಕಿಲ್ಲದ ಕ್ಲೀಷೆ, ಭಾಷೆಯಾಗಿರಬಹುದು. ಆದಾಗ್ಯೂ ಫಿಜೋನ ಈ ಕ್ಲೀಷೆ ಯಶಸ್ವಿಯಾಗಿತ್ತು. 'ಅಬ್ಸರ್ವರ್' ಪತ್ರಿಕೆಯ ಮಾಲೀಕನಾದ ಡೇವಿಡ್ ಆಸ್ಟರ್‌ರ್ ಫಿಜೋ ನೆರವಿಗೆ ಬಂದರು. ನಾಟ್ಸಿಗಳ ವಿರುದ್ಧ ಹೋರಾಟದಲ್ಲಿ 'ಅಬ್ಸರ್ವರ್' ಪತ್ರಿಕೆಗೆ ತುಂಬ ಗೌರವಯುತವಾದ ಸ್ಥಾನವಿತ್ತು. ಈ ಪತ್ರಿಕೆ, ಹಾಗೂ ಇನ್ನೂ ಕೆಲವು ನಿಯತಕಾಲಿಕಗಳು ಫಿಜೋ ಆಪಾದನೆಗಳಿಗೆ ವ್ಯಾಪಕವಾದ ಪ್ರಚಾರ ಕೊಟ್ಟವು.

ಬ್ರಿಟಿಷ್ ಪತ್ರಿಕೆಗಳ ಬಗ್ಗೆ ಯಾವತ್ತಿಗೂ ತುಂಬ ಸಂವೇದನಾಶೀಲವಾಗಿದ್ದ ಭಾರತ ಸರ್ಕಾರ, ತನ್ನದೇ ಆದ ಪ್ರಚಾರಕನ ಧಾಟಿಯಲ್ಲಿ ಆಪಾದನೆಗಳಿಗೆ ಉತ್ತರ ನೀಡಿತು. 'ಫಿಜೋ ನಾಯಕತ್ವದಲ್ಲಿ ಗರಿಷ್ಠ ಸ್ವಯಮಾಧಿಕಾರ ನೀಡುವುದಾಗಿ ನಾಗಾಗಳಿಗೆ ಪ್ರಧಾನ ಮಂತ್ರಿಯವರು ಆಶ್ವಾಸನೆ ನೀಡಿದ ನಂತರವೂ ನಾಗಾ ಚಳವಳಿ ಹಿಂಸಾತ್ಮಕ ಸ್ವರೂಪ ಪಡೆಯಿತೆಂದು' ಉತ್ತರದಲ್ಲಿ ಪ್ರಚುರ ಪಡಿಸಲಾಗಿತ್ತು. ಈ ಹಿಂಸಾಚಾರದಿಂದ ನಾಗರಿಕರಿಗೆ ಆದ ತೊಂದರೆಗಳನ್ನು, ನಷ್ಟಗಳನ್ನು ಅಲ್ಲಗಳೆಯಲಿಲ್ಲ-ಆದರೆ ಇದೆಲ್ಲದಕ್ಕೂ ದಂಗೆಕೋರರೇ ಕಾರಣವೆಂದು ಸ್ಪಷ್ಟಪಡಿಸಲಾಗಿತ್ತು. "ಭಾರತೀಯ ಪೌರತ್ವದ ಎಲ್ಲ ಹಕ್ಕು ಬಾಧ್ಯತೆಗಳ ಜೊತೆಗೆ, ಆಂತರಿಕ ವ್ಯವಹಾರದಲ್ಲಿ ನಾಗಾಗಳಿಗೆ ಸಾಧ್ಯವಾದಷ್ಟೂ ಸ್ವಯಮಾಧಿಕಾರ ನೀಡಲು ಭಾರತ ಸರ್ಕಾರ ಸಿದ್ಧವಿದೆಯೆಂದು" ಈ ಉತ್ತರದಲ್ಲಿ ಮನವರಿಕೆ ಮಾಡಿಕೊಡುವ ಪ್ರಯತ್ನವಿತ್ತು. ಆದರೆ, ಸ್ವತಂತ್ರ ನಾಗಾ ರಾಷ್ಟ್ರದ ಬೇಡಿಕೆಗೆ ಬಿಲ್‌ಕುಲ್ ಒಪ್ಪಲು ಸಾಧ್ಯವಿಲ್ಲವೆಂದು ಖಂಡತುಂಡವಾಗಿ ತಿಳಿಸಲಾಗಿತ್ತು.

ಇದೊಂದು ನ್ಯಾಯಸಮ್ಮತವಾದ, ತರ್ಕಬದ್ಧವಾದ ನಿಲುವಾಗಿತ್ತು. ಆದರೆ ಇದಕ್ಕೆ ಲಗತ್ತಿಸಿದ್ದ ಪರಿಶಿಷ್ಟದಲ್ಲಿ ಫಿಜೋನನ್ನು, ಪರಾಜಯ ಹಾಗೂ ಹತಾಶೆಗಳಿಂದ ಪ್ರೇರಿತನಾದ ಖಳನಾಯಕನಂತೆ ಬಿಂಬಿಸಲಾಗಿತ್ತು. ಇದು ಪ್ರತಿಕೂಲಕರ ಪರಿಣಾಮಕ್ಕೆಡೆ ಮಾಡಿಕೊಟ್ಟಿತು:

> "ಫಿಜೋ ಅವರ ಮನಃಸ್ಥಿತಿ ಮತ್ತು ಧೋರಣೆಗಳು ಹಲವಾರು ಹತಾಶೆ ಮತ್ತು ಹಿನ್ನಡೆಗಳ ಉಪಾಧಿಗೊಳಪಟ್ಟಿವೆ. ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರು. ಮೋಟಾರ್ ಬಿಡಿಭಾಗಗಳ ವ್ಯಾಪಾರದಲ್ಲಿ ಹಾಗೂ ವಿಮಾ ಕ್ಷೇತ್ರದಲ್ಲಿ ನೆಲೆಯೂರುವ ಅವರ ಪ್ರಯತ್ನಗಳು ಯಶಸ್ವಿಯಾಗಿರಲಿಲ್ಲ. ಅವರಿಗೆ ಪಾರ್ಶ್ವವಾಯು ತಗುಲಿ ಅವರ ಮುಖ ವಿರೂಪಗೊಂಡಿತ್ತು. ಇದರ ಪರಿಣಾಮವಾಗಿ ಅವರಲ್ಲಿ ಮಾನಸಿಕ ಸಂಕೀರ್ಣತೆ, ತೊಡಕು ಉಂಟಾಗಿತ್ತು... ಹಲವರ ಸಾವು ನೋವಿಗೆ ಹಾಗೂ ಸಂಕಷ್ಟಗಳಿಗೆ ಕಾರಣವಾದಂಥ ಹಿಂಸಾಮಾರ್ಗಕ್ಕೆ ತನ್ನ

ಕುಲಬಾಂಧವರನ್ನು ದೂಡಿ ತಾನು ಅವರನ್ನು ಅಪಮಾರ್ಗಕ್ಕಿಳಿಸಿದೆ ಎನ್ನುವ ಅಪರಾಧ ಪ್ರಜ್ಞೆ ಅವರನ್ನು ಕಾಡುತ್ತಿತ್ತು."

ಆದರೆ ಭಾರತ ಸರ್ಕಾರ ಮತ್ತು ನಾಗಾ ರಾಷ್ಟ್ರೀಯ ಮಂಡಳಿ ನಾಯಕನ ಮಧ್ಯೆ ಹಲವಾರು ಮಂದಿ ಸೌಮ್ಯವಾದಿ ನಾಗಾಗಳಿದ್ದರು. ಈ ಸೌಮ್ಯವಾದಿಗಳು ಒಟ್ಟುಗೂಡಿ ನಾಗಾ ಜನತಾ ಸಮಾವೇಶ ಎಂಬ ಸಂಘಟನೆಯೊಂದನ್ನು ಹುಟ್ಟುಹಾಕಿದರು. ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ ಕಂಡುಕೊಳ್ಳುವುದು ಈ ಸಂಘಟನೆಯ ಅಪೇಕ್ಷೆಯಾಗಿತ್ತು. ಶಾಂತಿಯುತ ಪರಿಹಾರದ ಪರ ಇದ್ದವರಲ್ಲಿ ಆವೋಗಳು ಪ್ರಮುಖರಾಗಿದ್ದರು. ಇದಲ್ಲದೆ ಬೇರೆ ಬುಡಕಟ್ಟಿನವರೂ ಶಾಂತಿಯುತ ಪರಿಹಾರ ಬಯಸಿದ್ದರು. 1960ರ ಜುಲೈ 30ರಂದು ನಾಗಾ ಜನತಾ ಸಮಾವೇಶ, ಭಾರತ ಒಕ್ಕೂಟದೊಳಗೆ ಪ್ರತ್ಯೇಕ ನಾಗಾಲ್ಯಾಂಡ್ ರಾಜ್ಯ ರಚಿಸುವಂತೆ ಒತ್ತಾಯ ಪಡಿಸುವ ಮನವಿ ಪತ್ರವೊಂದನ್ನು ಪ್ರಧಾನಮಂತ್ರಿಗೆ ಸಲ್ಲಿಸಿತು. ಪ್ರತ್ಯೇಕ ನಾಗಾರಾಜ್ಯ ಮುಖ್ಯಮಂತ್ರಿ, ಮಂತ್ರಿಮಂಡಲ ಹಾಗೂ ವಿಧಾನ ಮಂಡಲಗಳನ್ನು ಹೊಂದಿರುವುದು. ನಾಗಾಗಳ ಧರ್ಮ ಮತ್ತು ಸಾಮಾಜಿಕ ಪದ್ಧತಿ, ನಡಾವಳಿಗಳಲ್ಲಿ ಸಂಸತ್ ಹಸ್ತಕ್ಷೇಪ ನಡೆಸಬಾರದು ಎನ್ನುವುದು ಇವರ ಬೇಡಿಕೆಯಾಗಿತ್ತು.

ಪ್ರತ್ಯೇಕ ನಾಗಾರಾಜ್ಯ ರಚನೆಗೆ ಅಸ್ಸಾಮಿನ ಗಣ್ಯರ ವಿರೋಧವಿತ್ತು. ತಮ್ಮ ಪ್ರಾಂತ್ಯದ ಪ್ರದೇಶಗಳನ್ನು ಕಳೆದುಕೊಳ್ಳುವುದು ಇವರಿಗಿಷ್ಟವಿರಲಿಲ್ಲ. ಆದರೆ ಈಗ ನಾಗಾ ಸಮಸ್ಯೆ ಅಂತರರಾಷ್ಟ್ರೀಕರಣಗೊಂಡಿದ್ದರಿಂದ ನಾಗಾಗಳಿಗೆ ಏನಾದರೊಂದಿಷ್ಟು ರಿಯಾಯಿತಿ ತೋರುವುದು, ಪರಿಹಾರ ಒದಗಿಸುವುದು ವಿವೇಕಯುತವೆಂದು ನೆಹರೊ ಭಾವಿಸಿದ್ದರು. ಅಸ್ಸಾಂನಿಂದ ಪ್ರತ್ಯೇಕಿಸಲಾದ ನಾಗಾ ಪ್ರದೇಶಗಳನ್ನೊಳಗೊಂಡಂತೆ ಪ್ರತ್ಯೇಕ ನಾಗಾ ರಾಜ್ಯವೊಂದನ್ನು ರಚಿಸಲಾಗುವುದೆಂದು ನೆಹರೂ ಅವರು 1960ರ ಆಗಸ್ಟ್ ಮೊದಲ ವಾರದಲ್ಲಿ ಸಂಸತ್ತಿನಲ್ಲಿ ಪ್ರಕಟಿಸಿದರು. ಇಂಥ ಸಣ್ಣದೊಂದು ಹೊಸ ರಾಜ್ಯರಚನೆ ವಿಚಾರ ತೀವ್ರ ಆಸಕ್ತಿ-ಕುತೂಹಲಗಳನ್ನು ಕೆರಳಿಸಿತು. ನಾಗಾಲ್ಯಾಂಡ್ ರಾಜ್ಯರಚನೆ ಸ್ಫೋಟಕ ಸಾಧ್ಯತೆಗಳನ್ನೊಳಗೊಂಡ ಕಳವಳಕಾರಿ ಕ್ರಮವೆಂದು ಜನಸಂಘ ಭಾವಿಸಿತು. ಇದರಿಂದ ಭಯೋತ್ಪಾದನೆಗೆ, ದಂಗೆ-ಹಿಂಸಾಚಾರಗಳಿಗೆ ರಿಯಾಯಿತಿ ತೋರಿದಂತಾಗಿದೆ, ಪ್ರಾದೇಶಿಕತೆ ಮತ್ತು ಸಂಕುಚಿತ ಪ್ರವೃತ್ತಿಯನ್ನು ಪ್ರೋತ್ಸಾಹಿಸಿದಂತಾಗಿದೆ. ಇದರಿಂದ ರಾಷ್ಟ್ರದ ಏಕತೆ ಮತ್ತು ಸಮಗ್ರತೆಗೆ ಧಕ್ಕೆಯುಂಟಾಗುವುದೆಂದು ಜನಸಂಘ ಅಭಿಪ್ರಾಯಪಟ್ಟಿತ್ತು. ಅಸ್ಸಾಮಿನ ಇತರ ಬುಡಕಟ್ಟುಗಳಾದ ಖಾಸಿ, ಗಾರೋ ಮತ್ತು ಜಯಂತಿಯಾಗಳು "ಪೂರ್ವಗಡಿ ಪ್ರಾಂತ್ಯ" ಎಂಬ ಹೆಸರಿನಲ್ಲಿ ಪ್ರತ್ಯೇಕ ರಾಜ್ಯಕ್ಕೆ ಆಗ್ರಹಪಡಿಸುವ ನಿರ್ಣಯ ಕೈಗೊಂಡರು.

ಮತ್ತೊಂದು ನಿರೀಕ್ಷಿತ ಪ್ರತಿಕ್ರಿಯೆ ವ್ಯಕ್ತವಾದದ್ದು ಫಿಜೋ ವಲಯದಿಂದ. ಪ್ರತ್ಯೇಕ ರಾಜ್ಯ ರಚನೆಯಷ್ಟೇ ತಮ್ಮ ಆಶೋತ್ತರವಲ್ಲ. ನಾಗಾಗಳು ತಮ್ಮ ಸಾಮಾಜಿಕ ಮತ್ತು ರಾಜಕೀಯ ಅಸ್ಮಿತೆಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯವಾಗಿದೆ ಎಂಬುದು ನಾಗಾ ಬುದ್ಧಿಜೀವಿಗಳ ಪ್ರತಿಕ್ರಿಯೆಯಾಗಿತ್ತು. ಆದರೆ ಹಳ್ಳಿಗಾಡಿನ ಜನಸಾಮಾನ್ಯರಿಗೆ ಇದನ್ನು

ಮನವರಿಕೆ ಮಾಡಿಕೊಡುವುದು ಹೇಗೆ? ಒಂದು ಪತ್ರಿಕೆಯಂತೂ, "ಪ್ರತ್ಯೇಕ ರಾಜ್ಯದ ಸ್ಥಾನಮಾನ ಬಯಸುತ್ತಿರುವವರು ಶತ್ರುಮಿತ್ರರು, ತಮ್ಮ ಅಭಿಪ್ರಾಯ ಒಪ್ಪದವರನ್ನು ಗುಂಡು-ಬಯೊನೆಟ್ಟುಗಳಿಂದ ನಿಗ್ರಹಿಸಬಹುದೆಂದು ನಂಬಿರುವವರು ಎಂದು ಅರಚುತ್ತಾ ರಾತ್ರೋರಾತ್ರಿ ನಾಗಾ ದಂಗೆಕೋರರು ಅರಣ್ಯಗಳ ಮಧ್ಯದಿಂದ ಎದ್ದು ಬರಬಹುದೆಂದು" ಅಭಿಪ್ರಾಯಪಟ್ಟಿತ್ತು.

VI

ಒಂದು ದಶಕದ ನಂತರ ಸಂಪೂರ್ಣ ಹತೋಟಿಯ ವಿಶ್ವಾಸ ಹೊಂದಿದ್ದ ನೆಹರೂ ಸರ್ಕಾರ ಇದ್ದಕ್ಕಿದ್ದಂತೆ ಕಂಪಿಸಲಾರಂಭಿಸಿತು. ದಕ್ಷಿಣದ ಕೇರಳ ಮತ್ತು ತಮಿಳ್ನಾಡು ರಾಜ್ಯಗಳಲ್ಲಿ ಭಿನ್ನಮತ ಭುಗಿಲೆದ್ದಿತು. ಅದೇ ರೀತಿ ಗಡಿ ವಲಯವಾದ ಪಂಜಾಬ್ ಮತ್ತು ನಾಗಾ ಪ್ರದೇಶಗಳಲ್ಲೂ ಭಿನ್ನಮತ ಹೊಗೆಯಾಡಲಾರಂಭಿಸಿತು. ಏತನ್ಮಧ್ಯೆ, ಫೋರ್ಡ್ ಪ್ರತಿಷ್ಠಾನ, ಕೃಷಿಕ್ಷೇತ್ರದಲ್ಲಿ ಅನಿಷ್ಟಕರ ಆಪತ್ತಿನ ಅಪಾಯ ತಲೆದೋರಲಿದೆ ಎಂಬ ಎಚ್ಚರಿಕೆ ನೀಡಿತ್ತು. ಮುಂದಿನ ದಶಕದಲ್ಲಿ ಆಹಾರ ಉತ್ಪಾದನೆ ಮೂರು ಪಟ್ಟು ಹೆಚ್ಚದಿದ್ದಲ್ಲಿ ಭಾರತದಲ್ಲಿ ಕ್ಷಾಮ ಉಂಟಾಗಲಿದೆ, ಜನಸಮುದಾಯ ಹೊಟ್ಟೆಗಿಲ್ಲದೆ ಹಾಹಾಕಾರ ಪಡುವಂತಾಗುತ್ತದೆ ಎಂದು ಪ್ರತಿಷ್ಠಾನದ ವರದಿ ತಿಳಿಸಿತ್ತು.

ಆದರೆ, ಇನ್ನೂ ದೊಡ್ಡ ತಲೆನೋವು ನೆಹರೂ ಅವರಿಗೆ ಎದುರಾಗಿತ್ತು. ಅದು: ಸುಮಾರು ಒಂದು ದಶಕದ ಕಾಲದಲ್ಲಿ ಉಂಟಾಗಿದ್ದ ಸ್ವಲ್ಪಮಟ್ಟಿನ ಸಾಮಾಜಿಕ ಶಾಂತಿಯನ್ನು ಕದಡುವಂಥ ಬೆಳವಣಿಗೆ. ಈಗ ಮತ್ತೆ ಕೋಮು ಘರ್ಷಣೆ ಸಂಭವಿಸುವ ಸಾಧ್ಯತೆಗಳು ತಲೆದೋರಿದ್ದು ಇದು ನೆಹರೂ ಅವರನ್ನು ಚಿಂತಾಕ್ರಾಂತರನ್ನಾಗಿಸಿತ್ತು. 1960ರ ಜೂನ್‌ನಲ್ಲಿ, ಅಸ್ಸಾಮಿನಲ್ಲಿ ಉಗ್ರ ಸ್ವರೂಪದ ಬಂಗಾಳಿ ವಿರೋಧಿ ಗಲಭೆಗಳು ಶುರುವಾದವು. ಪೂರ್ವ ಬಂಗಾಳದಿಂದ ಅಸ್ಸಾಮಿಗೆ ಬಂದಿದ್ದ ವಿಭಜನೋತ್ತರ ನಿರಾಶ್ರಿತರು ಈ ಗಲಭೆಗಳಿಗೆ ಗುರಿಯಾಗಿದ್ದರು. ತಮ್ಮ ಭಾಷೆಯನ್ನು ಮಾತನಾಡದ ಈ ಜನ ತಮ್ಮ ಹುದ್ದೆಗಳನ್ನು ಕಸಿಯುತ್ತಿದ್ದಾರೆ ಎಂಬುದೇ ಬಂಗಾಳಿಗಳ ವಿರುದ್ಧ ಆಕ್ರೋಶಕ್ಕೆ ಕಾರಣ. ಸಾವಿರಾರು ಮನೆಗಳನ್ನು ನಾಶಪಡಿಸಲಾಗಿತ್ತು. ಹಲವಾರು ಮಂದಿ ಬಂಗಾಳಿಗಳ ಹತ್ಯೆಯಾಗಿತ್ತು. ಉಳಿದ ಬಂಗಾಳಿಗಳು ಪಶ್ಚಿಮ ಬಂಗಾಳದ ನಿರಾಶ್ರಿತರ ಶಿಬಿರಗಳಿಗೆ ಪಲಾಯನ ಮಾಡಿದ್ದರು. ಗೃಹಸಚಿವ ಲಾಲ್ ಬಹಾದುರ್ ಶಾಸ್ತ್ರಿಯವರು ಅಸ್ಸಾಮಿಗೆ ಧಾವಿಸಿ ರಾಜಿ ಸಂಧಾನ ಮಾಡಿಸಿದರು. ಅಸ್ಸಾಮಿ ರಾಜ್ಯದ ಅಧಿಕೃತ ಭಾಷೆಯಾಗಿರುವುದೆಂದು ಘೋಷಿಸಲಾಯಿತು. ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಯಲ್ಲಿ ಬಂಗಾಳಿ ಭಾಷೆ ಬಳಸಲು ಅನುಮತಿ ನೀಡಲಾಯಿತು. ಆದರೆ ಈ ಒಪ್ಪಂದ ಮುಜುಗರ-ತಲ್ಲಣಗಳನ್ನು ಉಂಟುಮಾಡಿದ ಶಾಂತಿ ಒಪ್ಪಂದವಾಗಿತ್ತು.

1961ರ ಜನವರಿಯಲ್ಲಿ ಮಧ್ಯಭಾರತದ ನಗರವಾದ ಜಬಲ್ಪುರದಲ್ಲಿ ಧಾರ್ಮಿಕ ಗಲಭೆಯೊಂದು ಸಂಭವಿಸಿತು. ಹಿಂದೂ ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಳು. ಮುಸ್ಲಿಂ ಪುರುಷರಿಬ್ಬರು ಈಕೆಯ ಮೇಲೆ ಹಲ್ಲೆ ನಡೆಸಿದ್ದರು. ಆದ್ದರಿಂದಲೇ ಯುವತಿ ಆತ್ಮಹತ್ಯೆ ಮಾಡಿಕೊಂಡಳೆಂದು ಆರೋಪಿಸಲಾಗಿತ್ತು. ಜನಸಂಘದ ಸ್ಥಳೀಯ ಪತ್ರಿಕೆ ಈ ಘಟನೆಗೆ ಭಯಂಕರ ಪ್ರಚಾರ ನೀಡಿತು. ನಂತರ ಹಿಂದೂ ವಿದ್ಯಾರ್ಥಿಗಳು ಬೀದಿಗಿಳಿದು ನಗರದಲ್ಲಿನ ಮುಸ್ಲಿಂ ಮನೆಗಳಿಗೆ, ಅಂಗಡಿಗಳಿಗೆ ಬೆಂಕಿಹಚ್ಚಿದರು. ಪ್ರತೀಕಾರವಾಗಿ ಮುಸ್ಲಿಮರು ನೆರೆಹೊರೆಯ ಹಿಂದೂಗಳ ಮನೆಗಳಿಗೆ ಬೆಂಕಿ ಹಚ್ಚಿದರು. ಗಲಭೆ ಕೆಲವು ದಿನಗಳ ಕಾಲ ನಡೆಯಿತು, ಗ್ರಾಮೀಣ ಪ್ರದೇಶಗಳಿಗೂ ಹಬ್ಬಿತು. ವಿಭಜನೆಯ ನಂತರದ ಘೋರ ಘಟನೆ ಇದಾಗಿತ್ತು. ಈ ಗಲಭೆಗಳಲ್ಲಿ ಹಾನಿಗೀಡಾದವರು ಮುಖ್ಯವಾಗಿ ಬಡ ಮುಸ್ಲಿಮರು. ಅದೂ ಹೆಚ್ಚಾಗಿ ನೇಕಾರರು ಮತ್ತು ಬೀಡಿ ಹೊಸೆಯುವವರು.

ಚೀನದೊಂದಿಗಿನ ಗಡಿಯಲ್ಲಿ ಉಂಟಾದ ತೊಂದರೆ, ಕಷ್ಟನಷ್ಟಗಳು ಹಾಗೂ ಸಾಮಾಜಿಕ ಸಂಘರ್ಷ ಉಲ್ಬಣಗೊಂಡದ್ದು–ಇವೆರಡೂ ಪ್ರಜಾಸತ್ತಾತ್ಮಕ ಭಾರತದ ಭವಿಷ್ಯದ ಬಗ್ಗೆ ಆತಂಕ ಹುಟ್ಟಿಸಿದ್ದವು. 1960ರಲ್ಲಿ ಅಮೆರಿಕದ ವಿದ್ವಾಂಸನೊಬ್ಬ ಒಂದು ಅಭ್ಯಾಸಪೂರ್ಣವಾದ ಗ್ರಂಥ ಪ್ರಕಟಿಸಿದ್ದ. ಪುಸ್ತಕದ ಹೆಸರು: ಭಾರತ. ಹೆಸರೇನೋ ಸರಳ, ಸುಂದರ; ಆದರೆ ಉಪಶೀರ್ಷಿಕೆ ಅಶುಭ ಸೂಚಕವಾಗಿತ್ತು: ತೀವ್ರ ಅಪಾಯಕಾರಿ ದಶಕಗಳು ಎನ್ನುವುದೇ ಉಪಶೀರ್ಷಿಕೆ. ಗ್ರಂಥದ ಅಧ್ಯಾಯಗಳು ಹಾಗೂ ಪರಿಚ್ಛೇದಗಳ ಶೀರ್ಷಿಕೆಗಳೂ ಗುಟ್ಟುರಟ್ಟಾಗಿಸುವಂತಿದ್ದವು. "ಒಕ್ಕೂಟ ಉಳಿಯುವುದೇ?", "ಏಕ ಪಕ್ಷದ ಸಮತೋಲ" ಹೀಗಿದ್ದವು ಈ ಶೀರ್ಷಿಕೆಗಳು. ಜಾತಿ-ಮತ-ಧರ್ಮ-ಭಾಷೆಗಳ ನಡುವಣ ಅಂತರ, ಒಡಕುಗಳನ್ನು ಕಂಡು ಗ್ರಂಥಕರ್ತೃ ವಿಚಲಿತನಾಗಿದ್ದ; ಭಾರತದಲ್ಲಿ ಕೋಮುವಾದ ತಲೆ ಎತ್ತುತ್ತಿರುವುದನ್ನು ಕಂಡು ಕಳವಳಗೊಂಡಿದ್ದ. ಹಾಗೆಯೇ, "ಭಾರತ ಒಕ್ಕೂಟದೊಳಗೆ ಒಂದಲ್ಲ ಒಂದು ಬಗೆಯ ಏಕಪಕ್ಷ ಆಡಳಿತ ಪ್ರಯೋಗಗಳು ಅನಿವಾರ್ಯವೆಂಬಂತೆ ಕಂಡುಬರುತ್ತಿದೆ" ಎಂದೂ ಈತ ಅಭಿಪ್ರಾಯಪಟ್ಟಿದ್ದ.

ಇದರ ನಂತರ, 1961ರಲ್ಲಿ ಪ್ರಸಿದ್ಧ ಲೇಖಕ ಆಲ್ಡಸ್ ಹಕ್ಸ್‌ಲೀ ಭಾರತಕ್ಕೆ ಭೇಟಿಕೊಟ್ಟಿದ್ದ. ಇದು ಮೂವತ್ತೈದು ವರ್ಷಗಳ ನಂತರ ಹಕ್ಸಲಿಯ ಎರಡನೆಯ ಭೇಟಿಯಾಗಿತ್ತು. "ವಿಪರೀತವಾಗಿ ಹೆಚ್ಚುತ್ತಿರುವ ಜನಸಂಖ್ಯೆ, ನಿರುದ್ಯೋಗ, ಹೆಚ್ಚುತ್ತಿರುವ ಅಶಾಂತಿ" ಇವುಗಳನ್ನು ಕಂಡು ಹಕ್ಸ್‌ಲೀ ಮೂಕನಾಗಿದ್ದ. "ಭಾರತ ಬಹುತೇಕ ಕೊನೆಯಿಲ್ಲದ ಗ್ಲಾನಿಯಂತೆ ಕಾಣುತ್ತದೆ" ಎಂದು ಹಕ್ಸ್‌ಲೀ ಮಿತ್ರನೊಬ್ಬನಿಗೆ ಬರೆದ ಪತ್ರದಲ್ಲಿ ತಿಳಿಸಿದ್ದ. "ಏಕೆಂದರೆ ಅದರ ಸಮಸ್ಯೆಗಳಿಗೆ ಪರಿಹಾರವೇ ಇಲ್ಲ ಎನ್ನಿಸುತ್ತಿದೆ. ಪಶ್ಚಿಮದಲ್ಲಿ ನಾವು ಒಪ್ಪಿಕೊಳ್ಳುವಂಥ ಯಾವ ಪರಿಹಾರವೂ ಇಲ್ಲಿನ ಸಮಸ್ಯೆಗಳಿಗೆ ಕಾಣಿಸುತ್ತಿಲ್ಲ" ಎಂದು ಕಾರಣ ಕೊಟ್ಟಿದ್ದ. ಆಲ್ಡಸ್ ಹಕ್ಸ್‌ಲೀ ತನ್ನ ಸಹೋದರ ಜುಲಿಯನ್‌ಗೆ ಬರೆದ ಪತ್ರದಲ್ಲಿ "ನೆಹರೂ ನಂತರ ಮಿಲಿಟರಿ ಸರ್ವಾಧಿಕಾರದ ಸರ್ಕಾರ ಬರುತ್ತದೆ. ಹೊಸದಾಗಿ ಸ್ವಾತಂತ್ರ್ಯ ಗಳಿಸಿರುವ

ರಾಷ್ಟ್ರಗಳಲ್ಲಿ ಮಿಲಿಟರಿಯೇ ಸುವ್ಯವಸ್ಥಿತ ಅಧಿಕಾರ ಕೇಂದ್ರವಾಗಿ ತೋರುತ್ತದೆ" ಎಂದು ಅಭಿಪ್ರಾಯಪಟ್ಟಿದ್ದ.

ಈ ಬ್ರಿಟಿಷ್ ಬುದ್ಧಿಜೀವಿಯ ತೀರ್ಪಿಗೆ ನಂತರ ಭಾರತಕ್ಕೆ ಭೇಟಿಕೊಟ್ಟಿದ್ದ ಪತ್ರಕರ್ತನೂ ದನಿಗೂಡಿಸಿದ್ದ. ಹಕ್ಸ್‌ಲೀ ಭೇಟಿಯ ನಂತರ, ಕ್ಷಿಪ್ರದಲ್ಲೇ ಲಂಡನ್ನಿನ 'ಡೈಲಿ ಮೈಲ್' ವರದಿಗಾರ ಭಾರತಕ್ಕೆ ಆಗಮಿಸಿದ್ದ. ಈ ವರದಿಗಾರನ ಪ್ರಕಾರ, "ಇಲ್ಲಿಯವರೆಗೆ ನೆಹರೂ ಒಬ್ಬರೇ ಭಾರತ ಸರ್ಕಾರದ ಹಿಂದಿನ, ಅದರ ವಿದೇಶಾಂಗ ನೀತಿಯ ಹಿಂದಿನ ಒಂದುಗೂಡಿಸುವ ಶಕ್ತಿಯಾಗಿದ್ದರು, ಆಕರ್ಷಕ ಶಕ್ತಿಯಾಗಿದ್ದರು. ಆದರೆ ಅವರ ನಂತರ, ಜಾತಿಧರ್ಮಗಳ ಶಕ್ತಿ, ಬಲ-ಎಡಪಂಥೀಯರ ಶಕ್ತಿಗಳು ಈ ರಾಷ್ಟ್ರವನ್ನು ಅಡಿಯಿಂದ ಮುಡಿಯವರೆಗೆ ಛಿದ್ರ ಛಿದ್ರಗೊಳಿಸುತ್ತವೆ. ಅದನ್ನು ಒಂದು ಶತಮಾನದಷ್ಟು ಹಿಂದಕ್ಕೆ ತಳ್ಳುತ್ತವೆ".

VII

1960-61ರಲ್ಲಿ ಕೆಲವರು ಭಾರತೀಯರು ಗಲಭೆ, ದೊಂಬಿ, ಪ್ರತಿಭಟನೆಗಳಲ್ಲಿ ತೊಡಗಿದ್ದಂತೆ ಅತ್ತ ಸರ್ಕಾರ ಚೈನಾದೊಂದಿಗೆ ಪತ್ರವ್ಯವಹಾರ ಮುಂದುವರಿಸಿತ್ತು. ಆದರೆ ಇದೆಲ್ಲ ಮುತ್ಸದ್ದಿತನದಿಂದ ಕೂಡಿದ್ದಾಗಿರಲಿಲ್ಲ ಅಥವಾ ಮುತ್ಸದ್ದಿಗಳೂ ಪತ್ರವ್ಯವಹಾರ ನಡೆಸುತ್ತಿರಲಿಲ್ಲ. ಅನಾಮಧೇಯ ಸಿಬ್ಬಂದಿ ನಡುವಣ ಪತ್ರ-ಟಿಪ್ಪಣಿಗಳ ವಿನಿಮಯವಷ್ಟೇ ಇದಾಗಿತ್ತು. ಈ ಪತ್ರ ಟಿಪ್ಪಣಿಗಳಲ್ಲಿ ಒಬ್ಬರು ಇನ್ನೊಬ್ಬರ ವಿರುದ್ಧ ಮಾಡಿದ ಗಡಿ ಉಲ್ಲಂಘನೆಯಂಥ ಆಪಾದನೆಗಳಿರುತ್ತಿದ್ದವು. ಭಾರತದ ವಿಮಾನಗಳು ಹದಿನೈದು ಬಾರಿ ತನ್ನ ವಾಯುಗಡಿಯನ್ನು ಉಲ್ಲಂಘಿಸಿದೆಯೆಂದು ಚೈನಾ ಒಂದು ಪತ್ರದಲ್ಲಿ ಆಪಾದಿಸಿತ್ತು. ಟಿಬೆಟ್‌ನಲ್ಲಿರುವ ಭಾರತೀಯ ಪ್ರಜೆಗಳಿಗೆ ಕಿರುಕುಳ ನೀಡಲಾಗುತ್ತಿದೆಯೆಂದು ಭಾರತ ಆಪಾದಿಸಿತ್ತು.

ಈ ಪತ್ರ ವ್ಯವಹಾರವನ್ನು ಶ್ವೇತಪತ್ರದಲ್ಲಿ ಪ್ರಕಟಿಸಿದಂತೆಲ್ಲ ಕೃಷ್ಣ ಮೆನನ್ನರ ತಲೆದಂಡಕ್ಕೆ ಮತ್ತೆ ಒತ್ತಾಯ ಶುರುವಾಯಿತು. ಈ ಬಾರಿ ಇಂಥ ಒತ್ತಾಯದ ನಾಯಕತ್ವ ವಹಿಸಿದ್ದವರು ಬಿಹಾರದ ಸೀತಾಮರಿಯಿಂದ ಲೋಕಸಭೆಗೆ ಆಯ್ಕೆಯಾಗಿದ್ದ ಸಮಾಜವಾದಿ ಪಕ್ಷದ ಜೆ.ಬಿ. ಕೃಪಲಾನಿಯಾವರು. ಶಿಕ್ಷಕ, ವಿದ್ವಾಂಸರಾಗಿದ್ದ ಖಾದಿ ವ್ರತಧಾರಿ ಕೃಪಲಾನಿ ಭಾರತ ಸ್ವಾತಂತ್ರ್ಯ ಹೋರಾಟದ ಅಸಲಿ ನಾಯಕರಾಗಿದ್ದರು. 1917ರಲ್ಲಿ, ಚಂಪಾರಣ್ಯ ಸತ್ಯಾಗ್ರಹ ಕಾಲದಲ್ಲಿ ಕೃಪಲಾನಿ ಗಾಂಧೀಜಿಯವರ ನಿಕಟವರ್ತಿಯಾದರು. ಕೃಪಲಾನಿಯವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆ ವಾಸವನ್ನೂ ಅನುಭವಿಸಿದ್ದರು.

1961ರ ಏಪ್ರಿಲ್ 11ರಂದು ಕೃಪಲಾನಿಯವರು ಸಂಸತ್ತಿನಲ್ಲಿ ಭಾಷಣ ಮಾಡಿದರು. ಈ ಭಾಷಣವನ್ನು ಸ್ವಾತಂತ್ರ್ಯ ನಂತರ ಲೋಕಸಭೆಯಲ್ಲಿ ಮಾಡಲಾದ ಅಸಾಧಾರಣವಾದ

ಭಾಷಣ ಎಂದು ಕರೆಯಲಾಗಿದೆ. ಈ ಭಾಷಣದಲ್ಲಿ ಕೃಪಲಾನಿ ರಕ್ಷಣಾ ಸಚಿವರ ಮೇಲೆ ಉಗ್ರವಾಗಿ ಹರಿಹಾಯ್ದಿದ್ದರು. ಕೃಷ್ಣ ಮೆನನ್ನರ ಪಾರುಪತ್ಯದಲ್ಲಿ 'ನಾವು ಒಂದು ಏಟನ್ನೂ ಹಾಕದೆ ನಮ್ಮ ಗಡಿಯ 12 ಸಾವಿರ ಚದರ ಮೈಲಿ ಪ್ರದೇಶವನ್ನು ಕಳೆದುಕೊಂಡೆವು' ಎಂದು ಕೃಪಲಾನಿ ಗುಡುಗಿದ್ದರು. "ಸೇನೆಯಲ್ಲಿ ಬಡ್ತಿಗಳಿಗೆ ಅರ್ಹತೆ ಆಧಾರವಾಗಿಲ್ಲ. ರಕ್ಷಣಾ ಸಚಿವರ ಖಯಾಲಿಗನುಗುಣವಾಗಿ, ಅವರ ರಾಜಕೀಯ ಸೈದ್ಧಾಂತಿಕ ಬೇಕು ಬೇಡಗಳಿಗನುಗುಣವಾಗಿ ಬಡ್ತಿಗಳನ್ನು ನೀಡಲಾಗುತ್ತಿದೆ. ಮೆನನ್ ತಮ್ಮ ಕೂಟ-ಬಣಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇದರಿಂದಾಗ ನಮ್ಮ ಸಶಸ್ತ್ರ ಪಡೆಗಳ ನೈತಿಕಸ್ಥೈರ್ಯ ಕುಂದಿದೆ" ಎಂಬುದು ಕೃಪಲಾನಿ ಆಪಾದನೆಯಾಗಿತ್ತು. ಸಚಿವರು ರಾಷ್ಟ್ರದ ರಕ್ಷಣೆಯನ್ನು ಉಪೇಕ್ಷಿಸಿ ಈ ಬಡತನದ, ಹಸಿದ ರಾಷ್ಟ್ರದ ಹಣವನ್ನು ಪೋಲು ಮಾಡುತ್ತಿದ್ದಾರೆ ಎಂದು ಕುಟುಕಿದ್ದರು. ಹಾಗೂ ಜನತೆಯ ಸ್ವಾತಂತ್ರ್ಯದ ಅಪೇಕ್ಷೆಗೆ ತದ್ವಿರುದ್ಧವಾಗಿರುವ ಏಕಪಕ್ಷದ ಸರ್ವಾಧಿಕಾರಿ ಆಡಳಿತಕ್ಕೆ ಬೆಂಬಲ ನೀಡುತ್ತಿದ್ದಾರೆ ಎಂದು ಕೃಪಲಾನಿ ಕಟುವಾಗಿ ನುಡಿದಿದ್ದರು.

ಕೃಪಲಾನಿಯವರು ಆಡಳಿತ ಪಕ್ಷದ ಸದಸ್ಯರ ಆತ್ಮಸಾಕ್ಷಿಗೆ ಮನವಿ ಮಾಡುವ ಮೂಲಕ ತಮ್ಮ ಭಾಷಣ ಮುಕ್ತಾಯಗೊಳಿಸಿದ್ದರು. 1940ರಷ್ಟು ಹಿಂದೆ, ಬ್ರಿಟಿಷ್ ಪಾರ್ಲಿಮೆಂಟಿನ ಕನ್ಸರ್ವೆಟಿವ್ ಪಕ್ಷದ ಸದಸ್ಯರು, ರಾಜೀನಾಮೆ ಕೊಡುವಂತೆ ಹೇಗೆ ತಮ್ಮ ಪಕ್ಷದ ಪ್ರಧಾನಿ ನೆವಿಲ್ಲೆ ಚೇಂಬರ್ಲಿನ್ ಮೇಲೆ ಒತ್ತಡ ಹೇರಿದರೆಂಬುದನ್ನು ನೆನಪಿಸಿದ ಕೃಪಲಾನಿ, ಕಾಂಗ್ರೆಸ್ಸಿಗರಿಗೆ ಹೀಗೆ ಮನವಿ ಮಾಡಿದರು: "ಬ್ರಿಟಿಷರ ಗುಂಡು, ಬಯೋನೆಟ್ಟುಗಳಿಗೆ ಹೆದರದಿದ್ದ ನೀವು, ಪಕ್ಷದ ಹಿತಕ್ಕಿಂತ ದೇಶದ ಹಿತರಕ್ಷಣೆಗೆ ಆದ್ಯತೆ ನೀಡಬೇಕು." ಇಂಥದೊಂದು ಮನವಿಯೊಂದಿಗೆ ಕೃಪಲಾನಿ ಮಾತು ಮುಗಿಸಿದಾಗ ವಿರೋಧ ಪಕ್ಷಗಳ ಸದಸ್ಯರು ಕಿವಿಗಡಚಿಕ್ಕುವಂತೆ ದೀರ್ಘ ಕರತಾಡನ ಮಾಡಿದ್ದರು.

1961ರ ದ್ವಿತೀಯಾರ್ಧ ಪೂರ್ತಿ ಭಾರತದ ಸಂಸತ್ತಿನಲ್ಲಿ ಚೀನದೊಂದಿಗಿನ ಗಡಿವಿವಾದ ಪದೇ ಪದೇ ಚರ್ಚೆಗೊಳಪಟ್ಟಿತು. ತುದಿಗಾಲ ಮೇಲೆ ನಿಂತಿರುತ್ತಿದ್ದ ತೀಕ್ಷ್ಣಮತಿ ಸದಸ್ಯರು ಕೆಲವರು ಅವಕಾಶ ಸಿಕ್ಕಾಗಲೆಲ್ಲ ಪ್ರಧಾನ ಮಂತ್ರಿಯನ್ನು ಬೇಟೆಯಾಡಿದ್ದರು, ಘಾಸಿಗೊಳಿಸಿದ್ದರು. ವಿಶೇಷವಾಗಿ, ಜನಸಂಘದ ಅಟಲಬಿಹಾರಿ ವಾಜಪೇಯಿ, ಪ್ರಜಾ ಸಮಾಜವಾದಿ ಪಕ್ಷದ ಹೇಮ್ ಬರೂವ ಮತ್ತು ಸ್ವತಂತ್ರ ಪಕ್ಷದ ಎನ್.ಜಿ. ರಂಗಾ ತಮ್ಮ ಕುಟುಕು ವ್ಯಂಗ್ಯೋಕ್ತಿಗಳಿಂದ ಪ್ರಧಾನಿಯನ್ನು ಘಾಸಿಗೊಳಿಸಿದ್ದರು. ನೆಹರೂ ಅವರು, ಭಾರತದ ಗಡಿ ಪ್ರದೇಶವನ್ನು ಚೀನಾ ಆಕ್ರಮಿಸಿಕೊಂಡಿದ್ದರೂ ಕಣ್ಣುಮುಚ್ಚಿ ಕುಳಿತಿದ್ದಾರೆ, ಈ ತಿಕ್ಕಾಟ ತಮ್ಮ ಘನತೆಗೆ ತಕ್ಕುದಲ್ಲ ಎನ್ನುವ ಜಬರದಸ್ತಿನಿಂದ ವರ್ತಿಸುತ್ತಿದ್ದಾರೆಂದು ದೂಷಿಸಲಾಯಿತು. "ಗಡಿ ವಿವಾದಗಳಿಗೆ ಸಂಬಂಧಿಸಿದಂತೆ ಪ್ರಧಾನಮಂತ್ರಿಗಳು ತಮ್ಮ ಹಿತಾಸಕ್ತಿ ಮರೆತು ಕ್ರಿಕೆಟ್ ಪಂದ್ಯದ ಅಂಪೈರ್‌ನಂತೆ ವರ್ತಿಸುವ ಧೋರಣೆ ತಾಳಿದ್ದಾರೆ" ಎಂದು ಸದಸ್ಯರೊಬ್ಬರು ಹೇಳಿದರು. ಈ ಎಲ್ಲ ಟೀಕೆಗಳಲ್ಲಿ ವೈಯಕ್ತಿಕ ಖಂಡನೆಯ ಮೊನಚಿತ್ತು. ವಿದೇಶಾಂಗ ವ್ಯವಹಾರ ಸಚಿವ ಶಾಖೆಯನ್ನೂ ನೆಹರೂ ಅವರೇ

ನಿರ್ವಹಿಸುತ್ತಿದ್ದರು. ಚೈನಾ ಜೊತೆ ಮೈತ್ರಿ ಹೊಂದುವುದು ಅವರ ವಿಶೇಷ ಕಾರ್ಯ ಯೋಜನೆಯಾಗಿತ್ತು. ಇಂಥ ಟೀಕೆ, ವಾಗ್ದಾಳಿಗಳಿಗೆ ಒಗ್ಗಿಲ್ಲದ ಪ್ರಧಾನಮಂತ್ರಿ ಸಿಡಿಮಿಡಿಗೊಳ್ಳುತ್ತಿದ್ದರು. ಪದೇ ಪದೇ ಕೆರಳುತ್ತಿದ್ದರು. ತಮ್ಮ ಟೀಕಾಕಾರರನ್ನು 'ಬಾಲಿಶ, ಶೈಶವಾವಸ್ಥೆ' ಎಂದು ಮೂದಲಿಸುವ ಹಂತ ತಲುಪಿತ್ತು ಅವರ ಕಿರಿಕಿರಿ.

ಇದೇ ವೇಳೆಗೆ, ಚೈನಾದ ಬಗ್ಗೆ ಕಠಿಣ ನಿಲುವು ತಾಳುವಂತೆ ಅವರ ಪಕ್ಷದೊಳಗಿನ ಶಕ್ತಿಗಳಿಂದಲೇ ಒತ್ತಡ ಶುರುವಾಗಿತ್ತು. ಅಕ್ಸಾಯಿ ಚಿನ್ ಬಂಜರು ಭೂಮಿ, ಅಲ್ಲಿ ಹುಲ್ಲು ಸಹ ಬೆಳೆಯುವುದಿಲ್ಲ ಎಂದು ನೆಹರೂ ಯಾವಾಗಲೋ ಹೇಳಿದ ಮಾತನ್ನು ವಿರೋಧಿ ಸದಸ್ಯರೊಬ್ಬರು ಲೋಕಸಭೆಯಲ್ಲಿ ಹಂಗಿಸಿದ್ದರು. ಆಗ ಕಾಂಗ್ರೆಸ್ ಸದಸ್ಯರೊಬ್ಬರು, "ನನ್ನ ತಲೆಯ ಮೇಲೆ ಕೂದಲು ಬೆಳೆಯುವುದಿಲ್ಲ, ಹಾಗೆಂದ ಮಾತ್ರಕ್ಕೆ ತಲೆಗೆ ಮೌಲ್ಯವಿಲ್ಲ ಎಂದರ್ಥವೇ?" ಎಂದು ಒಗ್ಗರಣೆ ಹಾಕಿದ್ದರು. ಕಾಂಗ್ರೆಸ್ ಸದಸ್ಯನ ಈ ಮಾತು ನೆಹರೂ ಅವರನ್ನು ಕುರಿತದ್ದೇ ಆಗಿತ್ತು ಎಂದು ಆಗ ಎಲ್ಲರ ಅಭಿಪ್ರಾಯವಾಗಿತ್ತು. ಏಕೆಂದರೆ ನೆಹರೂ ತಲೆ ಸಂಪೂರ್ಣ ಬೋಳಾಗಿತ್ತು.

VIII

1961ರ ಡಿಸೆಂಬರ್ ಮೂರನೆಯ ವಾರದಲ್ಲಿ ಭಾರತದ ಸೇನೆಯ ವಿಶೇಷ ದಳವೊಂದು ಪೋರ್ಚುಗೀಸ್ ವಸಾಹತುವಾಗಿದ್ದ ಗೋವೆಯತ್ತ ಚಲಿಸಿತು. ನವದೆಹಲಿ ಒಂದು ದಶಕದಿಂದ ಗೋವೆಯನ್ನು ಬಿಟ್ಟು ಹೋಗುವಂತೆ ಅಹಿಂಸಾ ಮಾರ್ಗಗಳ ಮೂಲಕ ಪೋರ್ಚುಗೀಸರ ಮನ ಒಲಿಸುವ ಪ್ರಯತ್ನ ನಡೆಸಿತ್ತು. ಈ ಎಲ್ಲ ಪ್ರಯತ್ನಗಳೂ ವಿಫಲವಾದಾಗ ನೆಹರೂ ಸರ್ಕಾರ ಬಲ ಉಪಯೋಗಿಸಿ ಗೋವೆಯನ್ನು ವಿಮುಕ್ತಗೊಳಿಸಲು ನಿರ್ಧರಿಸಿತು.

ಉತ್ತರದ ಸಾವಂತವಾಡಿ, ದಕ್ಷಿಣದ ಕಾರವಾರ ಮತ್ತು ಪೂರ್ವದ ಬೆಳಗಾವಿ- ಈ ಮೂರು ದಿಕ್ಕುಗಳಿಂದ ಡಿಸೆಂಬರ್ 18ರಂದು ಬೆಳಿಗ್ಗೆ ಭಾರತದ ಪಡೆಗಳು ಗೋವೆಯನ್ನು ಪ್ರವೇಶಿಸಿದವು. ಏತನ್ಮಧ್ಯೆ, "ಶಾಂತವಾಗಿರಿ, ಧೈರ್ಯದಿಂದಿರಿ, ಸ್ವಾತಂತ್ರ್ಯಕ್ಕೆ ಸಂಭ್ರಮ ಪಡಿ, ಸ್ವಾತಂತ್ರ್ಯವನ್ನು ಬಲಗೊಳಿಸಿ" ಎಂದು ಗೋವೆಯ ಜನರನ್ನು ಹುರಿದುಂಬಿಸುವ ಕರಪತ್ರಗಳನ್ನು ವಿಮಾನಗಳು ನೆಲಕ್ಕೆ ತೂರಿದವು. ಸೈನ್ಯಕ್ಕೆ ಸ್ಥಳೀಯರ ಸಂಪೂರ್ಣ ನೆರವು ದೊರೆಯಿತು. ಪೋರ್ಚುಗೀಸರು ಎಲ್ಲೆಲ್ಲಿ ನೆಲಬಾಂಬುಗಳನ್ನು ಹುದುಗಿಸಿದ್ದಾರೆಂಬುದನ್ನು ಸ್ಥಳೀಯರು ತೋರಿಸಿದರು. ಕಾಲ್ತೆಗೆಯುವ ಮುನ್ನ ವಸಾಹತುಶಾಹಿಗಳು ಒಂದಷ್ಟು ಗುಂಡಿನ ಕಾಳಗ ನಡೆಸಿದರು. ದಮನ್ ಮತ್ತು ದೀವ್‌ನಂಥ ಸಣ್ಣಪುಟ್ಟ ಏಕಾಂತ ಸ್ಥಳಗಳಲ್ಲಿ ಪೋರ್ಚುಗೀಸರ ಪ್ರತಿಭಟನೆ, ವಿರೋಧ ಸ್ವಲ್ಪ ಜೋರಾಗಿತ್ತು. ಈ ಕಾರ್ಯಾಚರಣೆಯಲ್ಲಿ ಭಾರತದ ಕಡೆ ಹದಿನೈದು ಮಂದಿ ಸೈನಿಕರು ಹತರಾಗಿದ್ದರು. ಇದರ ದುಪ್ಪಟ್ಟು ಸಂಖ್ಯೆಯಲ್ಲಿ

ಪೋರ್ಚುಗೀಸ್ ಸೈನಿಕರು ಸತ್ತಿದ್ದರು. ದಾಳಿ ಆರಂಭವಾದ ಮುವತ್ತಾರು ಗಂಟೆಯೊಳಗೆ ಪೋರ್ಚುಗೀಸ್ ಗೌರ್ನರ್ ಬೇಷರತ್ ಶರಣಾಗತಿ ಪತ್ರಕ್ಕೆ ಸಹಿಹಾಕಿದ್ದರು.

'ಭಾರತದ ಕುಟಿಲ ವ್ಯೂಹ' ಎಂದು ವರ್ಣಿಸುವ ಮೂಲಕ ಪಾಶ್ಚಾತ್ಯ ಪತ್ರಿಕೆಗಳು ಈ ವಿಜಯೋತ್ಸವವನ್ನು ಆಚರಿಸಿದವು. ನೆಹರೂ ಮತ್ತು ಕೃಷ್ಣ ಮೆನನ್ನರ ಉಪದೇಶಗಳಿಗೆ ಪಕ್ಕಾಗಿದ್ದ ಪತ್ರಿಕೆಗಳು ಈಗ ಅಹಿಂಸೆ ಬೋಧಿಸುವ ರಾಷ್ಟ್ರ ಮಿಲಿಟರಿ ಬಲ ಬಳಸಿದೆ ಎಂದು ಭಾರತವನ್ನು ಜರಿದವು. ಭಾರತದಿಂದ ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆಯೆಂದು ಕೆಲವು ಪತ್ರಿಕೆಗಳು ಟೀಕಿಸಿದರೆ ಇನ್ನು ಕೆಲವು ಗೋವೆಯಲ್ಲಿನ ಕ್ರಿಶ್ಚಿಯನ್ನರಿಗೆ ಗಂಡಾಂತರವುಂಟಾಗಿದೆ ಎಂದು ಅಸಂಬದ್ಧವಾಗಿ ಬರೆದಿದ್ದವು. ಗೋವೆಯಲ್ಲಿ ಜನಸಂಖ್ಯೆಯಲ್ಲಿ ಶೇ 61ರಷ್ಟು ಹಿಂದೂಗಳಿದ್ದರು. ಗೋವೆಯ ಗಣ್ಯ ಕ್ರಿಶ್ಚಿಯನ್ನರಾದ ಪತ್ರಕರ್ತ ಫ್ರಾಂಕ್ ಮೊರೇಸ್, ಆರ್ಚ್ ಬಿಷಪ್ ಕಾರ್ಡಿನಲ್ ಗ್ರೇಷಿಯಸ್ ಭಾರತದ ಸಾರ್ವಜನಿಕ ಜೀವನದಲ್ಲಿ ಗೌರವಾನ್ವಿತ ಸ್ಥಾನಮಾನಗಳನ್ನು ಹೊಂದಿದ್ದರು. ಗೋವೆಯೊಳಗೇ ಬಹಳ ವರ್ಷಗಳಿಂದ ಸ್ವಾತಂತ್ರ್ಯದ ತುಡಿತವಿತ್ತು. ಹೀಗಾಗಿ ಗೋವನ್ನರು ಭಾರತದ ಕಾರ್ಯಾಚರಣೆಯನ್ನು ಸ್ವಾಗತಿಸಿದರು. ಏನೇ ಆಗಲಿ, ಈಗ ಗೋವನ್ನರು ತಮ್ಮ ನಾಯಕರುಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಹೊಂದಿದ್ದರು. ಪೋರ್ಚುಗೀಸರ ಕಾಲದಲ್ಲಿ ಅವರಿಗೆ ಈ ಸ್ವಾತಂತ್ರ್ಯ ಇರಲಿಲ್ಲ.

ಗೋವೆ ಭಾರತದ ಅಂಗ ಎಂಬುದರಲ್ಲಿ ಯಾವುದೇ ಪರಂಪರಾನುಗತ ವಿವಾದ ಇರಲಿಲ್ಲ. ಮಿಲಿಟರಿ ಕಾರ್ಯಾಚರಣೆ ಆರಂಭಿಸುವ ಮುನ್ನ ಭಾರತ ಸುದೀರ್ಘ ಕಾಲದಿಂದ ಕಾದಿತ್ತು ಎಂಬುದೂ ಸ್ಪಷ್ಟ. ಆದಾಗ್ಯೂ 'ವಿಜಯ ಕಾರ್ಯಾಚರಣೆ'ಗೆ ಆರಿಸಿಕೊಂಡ ಕಾಲ ಮಾತ್ರ ಪ್ರಶ್ನಾರ್ಹವಾಗಿತ್ತು. ಈ ವಿಜಯ ಕಾರ್ಯಾಚರಣೆ 1961ರ ಡಿಸೆಂಬರಿನಲ್ಲೆ ಏಕಾಯಿತು? 1960ರ ಡಿಸೆಂಬರ್ ಅಥವಾ 1962ರ ಡಿಸೆಂಬರ್ ಇದಕ್ಕೆ ಪ್ರಶಸ್ತವಾಗಿರಲಿಲ್ಲವೆ? ಪೋರ್ಚುಗೀಸರು ತಾವಾಗಿ ಕಾಲ್ತೆರೆದು ಹೋದಾರೆಂದು ಹದಿನಾಲ್ಕು ವರ್ಷಗಳಷ್ಟು ಸುದೀರ್ಘ ಕಾಲದಿಂದ ಕಾದು ನೋಡಿದ್ದು ಸಾಕು ಎಂದು ನೆಹರೂ ಭಾವಿಸಿರಬಹುದು. ಜೊತೆಗೆ ಅವರ ಮೇಲೆ ಜನಸಂಘ ಮತ್ತು ಕಮ್ಯುನಿಸ್ಟರ ಒತ್ತಡವೂ ಹೆಚ್ಚಾಗಿತ್ತು. ಗೋವೆಯ ವಿಷಯದಲ್ಲಿ ಅಪೂರ್ವ ಮಿತ್ರರಾಗಿದ್ದ ಜನಸಂಘ ಮತ್ತು ಕಮ್ಯುನಿಸ್ಟ್ ಪಕ್ಷಗಳು ಮಿಲಿಟರಿ ಬಳಸಿ ವಸಾಹತುವನ್ನು ಮುಕ್ತಗೊಳಿಸುವಂತೆ ಒತ್ತಾಯ ಪಡಿಸುತ್ತಿದ್ದವು. ಆದಾಗ್ಯೂ, ತಮ್ಮ ಸಹೋದ್ಯೋಗಿ ಕೃಷ್ಣ ಮೆನನ್ನರ ಚುನಾವಣೆಯ ಅಗತ್ಯಗಳಿಗನುಸಾರವಾಗಿ ಈ ಕಾಲ ನಿಗದಿಗೊಳಿಸಲಾಯಿತೆಂಬ ಅನುಮಾನಗಳಿದ್ದವು. ವಿಶೇಷ ದಳ ಗೋವೆಯತ್ತ ಸಂಚಲನ ಆರಂಭಿಸುವ ಮುನ್ನ ಗಡಿಯಲ್ಲಿ ಕೃಷ್ಣ ಮೆನನ್ನರು ಸೈನ್ಯ ಸಿದ್ಧತೆಯ ಪರಿಶೀಲನೆ ನಡೆಸಿದ್ದರು. 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದಂತೆ, ಕೃಷ್ಣ ಮೆನನ್ನರು "ಎರಡು ಪ್ರಚಾರ" ಪ್ರಾರಂಭಿಸಿದ್ದರು. "ಒಂದು ಯುದ್ಧದ್ದಾದರೆ ಮತ್ತೊಂದು 1962ರ ಫೆಬ್ರುವರಿಯಲ್ಲಿ ನಡೆಯಲಿದ್ದ ಚುನಾವಣೆಯದು."

ಆ ಚುನಾವಣೆಯಲ್ಲಿ ಕೃಷ್ಣ ಮೆನನ್ನರು ಸಂಸತ್ತಿನಲ್ಲಿ ತಮ್ಮ ಹೆಗಲೇರಿದ ಶನಿ ಆಚಾರ್ಯ ಕೃಪಲಾನಿಯವರನ್ನು ಎದುರಿಸಬೇಕಾಗಿತ್ತು. ಸುರಕ್ಷಿತ ಕ್ಷೇತ್ರವಾದ ಸೀತಾಮರಿಯನ್ನು ಬಿಟ್ಟು ತಾವು ಉತ್ತರ ಮುಂಬಯಿಯಲ್ಲಿ ಕೃಷ್ಣ ಮೆನನ್ ವಿರುದ್ಧ ಸ್ಪರ್ಧಿಸುವುದಾಗಿ ಕೃಪಲಾನಿ ಸಡ್ಡು ಹೊಡೆದಿದ್ದರು. ಎಲ್ಲ ವಿರೋಧ ಪಕ್ಷಗಳೂ (ಕಮ್ಯೂನಿಸ್ಟರ ಹೊರತು) ಕೃಪಲಾನಿಯವರಿಗೆ ಬೆಂಬಲ ಘೋಷಿಸಿದ್ದವು. ಪ್ರತಿಷ್ಠಿತ ಹೋರಾಟವೊಂದಕ್ಕೆ ಕಣ ಸಿದ್ಧವಾಗುತ್ತಿತ್ತು. ಪ್ರಧಾನಮಂತ್ರಿಗಳು ಮೆನನ್ ಅವರನ್ನು ಸಂಪುಟದಿಂದ ಕೈಬಿಡಲು ನಿರಾಕರಿಸಿದ್ದರು. ಈಗ ಮತಪೆಟ್ಟಿಗೆ ಮೂಲಕ ಕೃಷ್ಣ ಮೆನನ್ ಅವರನ್ನು ಉಚ್ಚಾಟಿಸಲಾಗುವುದೆಂಬುದು ವಿರೋಧ ಪಕ್ಷಗಳ ಆಶಯವಾಗಿತ್ತು.

ಸೈನ್ಯದ ವಿಶೇಷ ದಳ ಗೋವೆಯನ್ನು ಪ್ರವೇಶಿಸಿದ ಎರಡು ತಿಂಗಳೊಳಗೇ ಕೃಷ್ಣ ಮೆನನ್ ಮುಂಬಯಿಯಲ್ಲಿದ್ದರು. 1962ರ ಮಹತ್ವದ ಸಾರ್ವತ್ರಿಕ ಚುನಾವಣೆ ಸಿದ್ಧತೆಗಾಗಿ ಬಂದಿದ್ದರು. ಅವರಿಗೆ ಬೆಂಬಲವಾಗಿ ನಿಂತಿದ್ದವರು ಮಹಾರಾಷ್ಟ್ರದ ಪ್ರಭಾವಶಾಲಿ ಮುಖ್ಯಮಂತ್ರಿ ವೈ.ಬಿ. ಚವ್ಹಾಣ್ ಮತ್ತು ಕೇಂದ್ರ ಸಂಪುಟದ ಹಿರಿಯ ಸಚಿವರುಗಳು. ಸರ್ಕಾರದಲ್ಲಿ ಮೆನನ್ ಅವರ ಕಟು ಟೀಕಾಕಾರರಾಗಿದ್ದ ಮುರಾರಜಿ ದೇಸಾಯಿ ಮತ್ತು ಜಗಜೀವನರಾಮ್, ಅವರ ಪರ ಚುನಾವಣಾ ಪ್ರಚಾರ ನಡೆಸಬೇಕಾಯಿತು. ಕೃಪಲಾನಿಗೆ ಬೆಂಬಲವಾಗಿ ನಿಂತಿದ್ದವರು ಸಿ. ರಾಜಗೋಪಾಲಾಚಾರಿಯವರು ಮತ್ತು ಪಕ್ಷೇತರರಾದ ಕೈಗಾರಿಕೋದ್ಯಮಿಗಳು, ವಕೀಲರು ಹಾಗೂ ಬುದ್ಧಿಜೀವಿಗಳು.

ಈ ಚುನಾವಣೆಯಿಂದಾಗಿ ಉತ್ತರ ಮುಂಬಯಿ ಕ್ಷೇತ್ರಕ್ಕೆ ಒಂದು ಬಗೆಯ ವಿಶ್ವಬಂಧುತ್ವದ ಬಣ್ಣವೂ ಬಂದಿತ್ತು. ಅಭ್ಯರ್ಥಿಗಳಲ್ಲಿ ಒಬ್ಬರು ಮಲೆಯಾಳಿಯಾದರೆ, ಮತ್ತೊಬ್ಬರು ಸಿಂಧಿ, ಇಬ್ಬರೂ ತಮ್ಮ ತೌರು ರಾಜ್ಯಗಳನ್ನು ಬಿಟ್ಟು ಇಲ್ಲಿನ ಜನರ ಪ್ರೀತ್ಯಾದರಗಳಿಗಾಗಿ ಪೈಪೋಟಿ ನಡೆಸಿದ್ದರು. ಈ ಕ್ಷೇತ್ರವಾದರೋ ಭಿನ್ನ ಭಿನ್ನ ಸಮುದಾಯಗಳ ನೆಲೆಯಾಗಿತ್ತು. ಮರಾಠಿಗಳು, ಸಿಂಧಿಗಳು, ತಮಿಳರು ಹೀಗೆ ವಿಭಿನ್ನ ಭಾಷೆ-ಸಂಸ್ಕೃತಿಗಳ ಜನರು ಇಲ್ಲಿನ ನಿವಾಸಿಗಳಾಗಿದ್ದರು. ಇವರೆಲ್ಲರ ಮನ ಒಲಿಸಿಕೊಳ್ಳಲು ಮೆನನ್ ಮತ್ತು ಕೃಪಲಾನಿ ಬಿರುಸಿನ ಪ್ರಚಾರ ನಡೆಸಿದ್ದರು. ವಾದ-ವಿವಾದಗಳ ಮೇಲಾಟ ನಡೆದವು. ವಿವಾದಗಳಷ್ಟೇ ವಾದ ಪ್ರತಿವಾದ ಮಾಡುವವರ ವರ್ಚಸ್ಸೂ ಢಾಳವಾಗಿ ಕಾಣುತ್ತಿತ್ತು.

ಭಾರತದ ಚುನಾವಣೆಗಳ ಇತಿಹಾಸದಲ್ಲೇ ಉತ್ತರ ಮುಂಬಯಿನ ಈ ಅಬ್ಬರದ ಪ್ರಚಾರದ ಮತ್ತೊಂದು ಚುನಾವಣೆ ಇರಲಿಕ್ಕಿಲ್ಲ. ಮೆನನ್ ಪರ ಸಹಾನುಭೂತಿ ಹೊಂದಿದ್ದ 'ಲಿಂಕ್' ನಿಯತಕಾಲಿಕ ಈ ಚುನಾವಣೆಯನ್ನು "ನಮ್ಮ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಅತಿ ಮಹತ್ವದ ಚುನಾವಣೆಯೆಂದು" ವರ್ಣಿಸಿತ್ತು. ಕೃಪಲಾನಿಯವರ ಸ್ನೇಹಿತರಾದ, ಸಮಾಜ ಸೇವಕ ಜಯಪ್ರಕಾಶ್ ನಾರಾಯಣ್ "ಈ ಚುನಾವಣೆ ಭಾರತದ ಪ್ರಜಾಪ್ರಭುತ್ವ ಮತ್ತು ನಮ್ಮ ಆಧ್ಯಾತ್ಮಿಕ ಮೌಲ್ಯಗಳ ಪಣವಾಗಿದೆ" ಎಂದು ಹೇಳಿದ್ದರು.

ಪ್ರಚಾರ ವರ್ಣರಂಜಿತವಾಗಿತ್ತು. ಎಲ್ಲೆಲ್ಲೂ ಭಿತ್ತಿ ಪತ್ರಗಳು, ಘೋಷಣೆಗಳು ರಾರಾಜಿಸುತ್ತಿದ್ದವು. ಬ್ಲಿಟ್ಜ್ ಪತ್ರಿಕೆ ಒಬ್ಬ ಅಭ್ಯರ್ಥಿ ವಿರುದ್ಧ "ಹೆಳವ-ಹುಚ್ಚ" ಎಂದು ಪ್ರಚಾರ

ನಡೆಸಿತು. ಮೆನನ್ ಅವರನ್ನು ಹಲವಾರು ಭಾಷೆಗಳಲ್ಲಿ ನಿಂದಿಸಲಾಯಿತು, ಲೇವಡಿ ಮಾಡಲಾಯಿತು. ಪ್ರಚಾರದ ಒಂದು ಹಿಂದಿ ಹಾಡಿನ ಮಾದರಿ ಇಲ್ಲಿದೆ:

ಚೀನ ಮುಂದೆ ಮುಂದೆ ಬಂದು ಆಕ್ರಮಿಸಿದಂತೆ
ಮೆನನ್ ನಿದ್ದೆ ಮಾಡುತ್ತಾರೆ–
ಬೇಕಿದ್ದಲ್ಲಿ ಅವರು ನಿದ್ದೆ ಮಾಡಲಿ ಬಿಡಿ
ಆದರೆ ನಮ್ಮ ನೆರವಿಗೆ ಕೃಪಲಾನಿಯನ್ನು ಕರೆ ತನ್ನಿ.

ಇನ್ನೊಂದು ಇಂಗ್ಲಿಷ್ ಹಾಡಿನ ಮಾದರಿ:

ಮೆನನ್ನರ ಮುಖಕ್ಕೆ ನಾವು ಈ
ಕರ್ಕಶ ಅಪಹಾಸ ಅಣಕವಾಡುಗಳ ರಾಡಿ ಎರಚುವುದಿಲ್ಲ.
ಅವರ ಗುಣಗಳೇ ನಮ್ಮ ಸಾಧನ ಸಂಪತ್ತು.
ಅವರ ಲಡಕಲು ಶಸ್ತ್ರಾಸ್ತ್ರಗಳೇ ಸಾಲದೆ?
ಚೀನಾವನ್ನು ಎಷ್ಟು ಪ್ರೀತಿವಾತ್ಸಲ್ಯದಿಂದ ಸಂಭಾಳಿಸುತ್ತಾರೆ
ಇದಕ್ಕಿಂತ ಮಿಗಿಲಾದುದೇನಿದೆ?

ಪ್ರಧಾನ ಮಂತ್ರಿಗಳು ಕೃಷ್ಣ ಮೆನನ್‌ಗೆ ಒಡ್ಡಲಾದ ಸವಾಲನ್ನು ತಮಗೊಡ್ಡಿದ ಸವಾಲು ಎಂದೇ ಭಾವಿಸಿದ್ದರು. ನೆಹರೂ ಮುಂಬಯಿಯಲ್ಲಿ ಮೆನನ್ ಪ್ರಚಾರ ಉದ್ಘಾಟಿಸಿದರು. ಬೇರೆ ಸ್ಥಳಗಳಲ್ಲೂ ಮೆನನ್ ಬೆಂಬಲಿಸಿ ಮಾತಾಡಿದರು. ಸಾಂಗ್ಲಿ, ಪುಣೆ, ಬರೋಡಾಗಳಲ್ಲಿ, ಮೆನನ್ ಸೋತಲ್ಲಿ, ಅದು ತಮ್ಮ ರಾಷ್ಟ್ರ ನೀತಿಗಳಾದ ಸಮಾಜವಾದ ಮತ್ತು ಅಲಿಪ್ತ ನೀತಿಗಳ ಸೋಲೇ ಆಗುತ್ತದೆ ಎಂದು ಹೇಳಿದರು. ತಮ್ಮ ಆಪ್ತ ಸಲಹೆಗಾರನ ಪ್ರಚಾರದಿಂದ ಮೆನನ್‌ಗೆ ಅಗಣಿತ ಸಹಾಯವಾಯಿತು. ಜೊತೆಗೆ ಗೋವಾ ವಿಮೋಚನೆಯೂ ನೆರವಿಗೆ ಬಂತು. ಗೋವೆಯ ಜಯಭೇರಿ ಗೋವೆಯಲ್ಲಿ ಮಾತ್ರವಲ್ಲ ಉತ್ತರ ಮುಂಬಯಿಯ ಮತದಾರರ ಕಿವಿಗಳಲ್ಲೂ ಅನುರಣನಗೊಂಡಿತ್ತು.

ಗೋವಾ ಕಾರ್ಯಾಚರಣೆ ಮತ್ತು ಕಾಂಗ್ರೆಸ್ ಪಕ್ಷದ ಸುಸಜ್ಜಿತ ಪ್ರಚಾರಗಳ ಅಬ್ಬರ-ಆವುಟಗಳಲ್ಲಿ, ನೆಹರೂ ಭಾಷಣಗಳಲ್ಲಿ ಕೃಪಲಾನಿ ಸೊಲ್ಲಡಗಿತ್ತು. ಅವರು 100,000ಕ್ಕೂ ಹೆಚ್ಚು ಮತಗಳಿಂದ ಚುನಾವಣೆಯಲ್ಲಿ ಪರಾಜಿತರಾಗಿದ್ದರು.

IX

1952 ಮತ್ತು 1957ರ ಚುನಾವಣೆಗಳಲ್ಲಿ ಕಾಂಗ್ರೆಸ್ ತನ್ನನ್ನು ಸ್ವಾತಂತ್ರ್ಯ ಹೋರಾಟದ ಪಕ್ಷವಾಗಿ ಬಿಂಬಿಸಿಕೊಂಡಿತ್ತು. 1962ರಲ್ಲಿ ಅದರ ಪ್ರಚಾರ ಸ್ವಾತಂತ್ರ್ಯಾ ನಂತರದ ತನ್ನ ಸಾಧನೆಗಳಲ್ಲಿ ಕೇಂದ್ರೀಕೃತವಾಗಿತ್ತು. ಕಾಂಗ್ರೆಸ್‌ನ ನೀತಿಗಳಿಂದಾಗಿ ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಗಳು ಹೆಚ್ಚಿದವೆಂದೂ, ಶಿಕ್ಷಣಮಟ್ಟ, ಜೀವನ ಮಟ್ಟ ಸುಧಾರಿಸಿತೆಂದೂ,

ರಾಷ್ಟ್ರದಲ್ಲಿ ಒಗ್ಗಟ್ಟು ಹೆಚ್ಚಿತೆಂದೂ ಪ್ರಚಾರಮಾಡಿತು. ಯಾವತ್ತೂ ಅಧಿಕಾರದಲ್ಲಿರದಿದ್ದ ವಿರೋಧಪಕ್ಷಗಳಿಗೆ ಕಾಂಗ್ರೆಸ್ಸಿನ ಈ ಸಾಧನೆಗಳಿಗೆ ಪ್ರತಿಯಾಗಿ ಹೇಳಿಕೊಳ್ಳುವಂಥಾದ್ದೇನಿರಲಿಲ್ಲ. ಚುನಾವಣೆಯಲ್ಲಿ ಕಾಂಗ್ರೆಸ್, ಒಟ್ಟು 494 ಸ್ಥಾನಗಳಲ್ಲಿ 361 ಸ್ಥಾನಗಳನ್ನು ಜಯಿಸಿತು. ಕಮ್ಯುನಿಸ್ಟರು 29 ಸ್ಥಾನಗಳನ್ನು ಗೆದ್ದರು. ನೂತನ ಪಕ್ಷವಾದ ಸ್ವತಂತ್ರಪಕ್ಷ 18 ಸ್ಥಾನಗಳನ್ನು ಗೆಲ್ಲುವ ಮೂಲಕ ಯೋಗ್ಯ ಸಾಧನೆ ಮಾಡಿತ್ತು. ಮದ್ರಾಸಿನಲ್ಲಿ, ಮೇಲ್ನೋಟಕ್ಕೆ ಪ್ರತ್ಯೇಕ ರಾಷ್ಟ್ರದ ಮಾತಾಡುತ್ತಿದ್ದ ಡಿ.ಎಂ.ಕೆ. ಲೋಕಸಭೆಯ ಏಳುಸ್ಥಾನಗಳನ್ನೂ ವಿಧಾನಸಭೆಯ ಐವತ್ತು ಸ್ಥಾನಗಳನ್ನೂ ಗೆದ್ದಿತ್ತು. ಆದರೆ, ಒಟ್ಟಾರೆಯಾಗಿ ಕಾಂಗ್ರೆಸ್ ತನ್ನ ಸರ್ವೋಚ್ಚತೆಯನ್ನು ಮತ್ತೊಮ್ಮೆ ದೃಢಪಡಿಸಿತ್ತು. ಜವಹರಲಾಲ್ ನೆಹರೂ ಅವರು ನಾಲ್ಕನೆ ಅವಧಿಗೆ ರಾಷ್ಟ್ರದ ಪ್ರಧಾನ ಮಂತ್ರಿಯಾದರು.

ಚುನಾವಣೆ ವಿರೋಧ ಪಕ್ಷಗಳಿಗೆ ಅವುಗಳ ಸ್ಥಾನವನ್ನು ತೋರಿಸಿತ್ತು. ಆದರೆ ಪ್ರಬಲವಾದ, ಪರ್ಯಾಯವಾದ ವಿರೋಧ ಪಕ್ಷ ಇಲ್ಲವಾಯಿತು. 1962ರ ಬೇಸಿಗೆಯುದ್ದಕ್ಕೂ ಗಡಿಯಲ್ಲಿ ಚಕಮಕಿ ನಡೆದೇ ಇತ್ತು. ಜುಲೈ ತಿಂಗಳಿನಲ್ಲಿ, ದೆಹಲಿಯ ನಿಯತಕಾಲಿಕವಾದ 'ಸೆಮಿನಾರ್' ರಕ್ಷಣಾ ನೀತಿ ಕುರಿತು ಒಂದು ವಿಚಾರ ಸಂಕಿರಣ ಏರ್ಪಡಿಸಿತ್ತು. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಮಹನೀಯರೊಬ್ಬರು "ಚೀನದಿಂದ ನಮಗೆ ಯಾವುದೇ ರೀತಿಯ ಮಿಲಿಟರಿ ಬೆದರಿಕೆ ಇಲ್ಲ" ಎಂದು ಖಡಾಖಂಡಿತವಾಗಿ ಹೇಳಿದರು. ಆದರೆ ಭಾಗವಹಿಸಿದ್ದ ಮತ್ತೊಬ್ಬ ಮಹನೀಯರಿಗೆ ಇದು ಸರಿ ಎನಿಸಲಿಲ್ಲ. ಈ ಮಹನೀಯರು, ಜನರಲ್ ತಿಮ್ಮಯ್ಯನವರು. ತಿಮ್ಮಯ್ಯ ಈ ವೇಳೆಗೆ ನಿವೃತ್ತರಾಗಿದ್ದರು. ಪಾಕಿಸ್ತಾನ ಮತ್ತು ಚೈನಾಗಳೆರಡರಿಂದಲೂ ಭಾರತಕ್ಕೆ ಮಿಲಿಟರಿ ಬೆದರಿಕೆ ಇದೆ ಎಂದು ಪ್ರತಿಪಾದಿಸಿದರು. ಪಾಕಿಸ್ತಾನದ ಮಿಲಿಟರಿ ಬೆದರಿಕೆ ಎದುರಿಸಲು ದೇಶ ಸನ್ನದ್ಧವಾಗಿದೆಯಾದರೂ ಇದೇ ಮಾತನ್ನು ಚೈನಾ ಬೆದರಿಕೆ ವಿಷಯದಲ್ಲಿ ಹೇಳಲಾಗದೆಂದು ತಿಮ್ಮಯ್ಯ ನುಡಿದಿದ್ದರು. ಒಬ್ಬ ಸಿಪಾಯಿಯಾಗಿ ಅವರು, ಬಹಿರಂಗ ಸಮರದಲ್ಲಿ ಭಾರತದಿಂದ ಚೈನಾವನ್ನು ರಣಾರಂಗದಲ್ಲಿ ಎದುರಿಸಲಾಗದು ಎಂಬ ಭಾವನೆ ಹೊಂದಿದ್ದರು. ಮಾನವಶಕ್ತಿ, ಶಸ್ತ್ರಾಸ್ತ್ರಗಳು ಹಾಗೂ ವೈಮಾನಿಕ ಬಲ ಎಲ್ಲದರಲ್ಲೂ ಚೈನಾದ ಈಗಿನ ಶಕ್ತಿ ಸಾಮರ್ಥ್ಯ ಭಾರತದ ಶಕ್ತಿ ಸಾಮರ್ಥ್ಯಕ್ಕಿಂತ ನೂರು ಪಟ್ಟು ಮೀರಿದೆ. ಜೊತೆಗೆ ರಷ್ಯದ ಪೂರ್ಣ ಬೆಂಬಲವಿದೆ. ಆದ್ದರಿಂದ ಸದ್ಯದಲ್ಲಿ ನಾವು ಚೈನಾಕ್ಕೆ ಮಿಲಿಟರಿಯಲ್ಲಿ ಸರಿಸಮವಾಗಲಾರೆವು. ನಮ್ಮ ಭದ್ರತೆಯನ್ನು ನಾವು ರಾಜಕಾರಣಿಗಳು ಮತ್ತು ರಾಜತಂತ್ರಜ್ಞರ ಕೈಗೊಪ್ಪಿಸಬೇಕಾಗಿದೆ. ಭೂಸೇನೆ ಮತ್ತು ವಾಯು ಸೇನೆಗಳಲ್ಲಿ ಭಾರತದ ಈಗಿನ ಬಲದಿಂದ ಜನತೆಗೆ ಕನಿಷ್ಠ ಪರಿಹಾರವನ್ನೂ ಒದಗಿಸಲಾಗದು ಎಂದು ತಿಮ್ಮಯ್ಯ ನಿರ್ದಾಕ್ಷಿಣ್ಯವಾಗಿ ನುಡಿದಿದ್ದರು.

ಈ ನುಡಿಗಳ ಅಂತರಾರ್ಥ ಸ್ಪಷ್ಟವಾಗಿತ್ತು. ರಾಜತಂತ್ರಜ್ಞರು ಚೀನದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಬೇಕು ಇಲ್ಲವೇ ರಾಜಕಾರಣಿಗಳು ಪಾಶ್ಚಾತ್ಯ ಬಣದಿಂದ ಮಿಲಿಟರಿ ಸಹಾಯ ಪಡೆದುಕೊಳ್ಳಲು ಪ್ರಯತ್ನಿಸಬೇಕು. ಆದರೆ ರಾಷ್ಟ್ರಭಕ್ತಿ, ರಾಷ್ಟ್ರಪ್ರೇಮದ

ನಿಟ್ಟಿನಿಂದ ನೋಡಿದಲ್ಲಿ ಒಪ್ಪಂದ ದೇಶದ ಮರ್ಯಾದೆಗೆ ಕುಂದು ತರುವ ಮಾತಾಗಿತ್ತು. ಇನ್ನು ಅಮೆರಿಕ ವಿರೋಧಿ ರಕ್ಷಣಾ ಸಚಿ ಗು ಹಾಗೂ ನೆಹರೂ ಅವರ ಅಲಿಪ್ತನೀತಿಗಳಿಂದಾಗಿ ಪಾಶ್ಚಾತ್ಯ ಬಣಗಳಿಂದ ಮಿಲಿಟರಿ ಸಹಾಯ ಕೋರುವುದು ಅಸಾಧ್ಯದ ಮಾತಾಗಿತ್ತು.

1962ರ ಜುಲೈ ಮೂರನೇ ವಾರದಲ್ಲಿ ಲಡಾಖಿನ ಗಾಲ್ವಾನ್ ಕಣಿವೆಯಲ್ಲಿ ಭಾರತ-ಚೈನಾ ಸೈನಿಕರ ನಡುವೆ ಘರ್ಷಣೆಯುಂಟಾಯಿತು. ಅನಂತರ, ಸೆಪ್ಟಂಬರಿನಲ್ಲಿ, ನಾಮ್ಕಾಚು ನದಿ ಕಣಿವೆಯ ಧೋಲಾ-ಥಾಗ್ಲಾ ದಿಬ್ಬದಲ್ಲಿ ಘರ್ಷಣೆ ಸಂಭವಿಸಿತು. ಈ ಜಾಗ ತವಾಂಗ್‌ನಿಂದ ಪಶ್ಚಿಮಕ್ಕೆ 60 ಮೈಲಿ ದೂರದಲ್ಲಿತ್ತು. ಈ ಪ್ರದೇಶ ಭಾರತ-ಟಿಬೆಟ್-ಭೂತಾನ್‌ಗಳ ಗಡಿಗಳ ಸಂಗಮಬಿಂದುವಾಗಿತ್ತು. ಇಲ್ಲಿ ಮೆಕ್‌ಮಹೋನ್ ರೇಖೆಯ ಸಾಲುಗೂಡಿಕೆ ವಿವಾದಾತ್ಮಕವಾಗಿತ್ತು. ರೇಖೆಯಲ್ಲಿ ಹೊಂದಾಣಿಕೆ ಇರಲಿಲ್ಲ. ಧೋಲಾ-ಥಾಗ್ಲಾ ಬೆಟ್ಟ ಸಾಲಿನ ದಿಬ್ಬ ಮೆಕ್ ಮಹೋನ್ ರೇಖೆಯ ದಕ್ಷಿಣಕ್ಕಿದೆಯೆಂಬುದು ಭಾರತದ ನಿಲುವಾಗಿತ್ತು. ದಿಬ್ಬ ತಮ್ಮ ಕಡೆಗಿದೆ ಎಂದು ಚೀನದ ವಾದವಾಗಿತ್ತು.

ಜೂನ್ ತಿಂಗಳಲ್ಲಿ ಆಗಿನ್ನೂ ಮುಂದುವರಿದಿದ್ದ ಸೇನಾ ಮುಂಚೂಣಿ ನೀತಿಯನ್ವಯ ಅಸ್ಸಾಂ ರೈಫಲ್ಸ್ ಪಡೆ ಧೋಲಾದಲ್ಲಿ ಠಾಣ್ಯವೊಂದನ್ನು ಸ್ಥಾಪಿಸಿತ್ತು. ಸೆಪ್ಟಂಬರ್ 8ರಂದು ಚೀನಾ, ಧೋಲಾಕ್ಕೆ ಎದುರುಬದುರಾಗಿರುವ ಥಾಗ್‌ಲಾದಲ್ಲಿ ಒಂದು ಸೇನಾ ಠಾಣ್ಯ ಸ್ಥಾಪಿಸಿತು. ಇದರಿಂದ ಧೋಲಾಕ್ಕೆ ಬೆದರಿಕೆ ತಲೆದೋರಿತ್ತು. ಪೀಕಿಂಗ್ ಮತ್ತು ನವದೆಹಲಿ ನಡುವೆ ಕೋಪಾವೇಶದ ಪತ್ರಗಳ ವಿನಿಮಯ ನಡೆಯಿತು. ವಾಸ್ತವ ನೆಲೆಯಲ್ಲಿ ಏನು ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಭಾರತದ ದಂಡನಾಯಕರುಗಳಲ್ಲಿ ಅಭಿಪ್ರಾಯ ಭೇದವಿತ್ತು. ಚೀನೀಯರನ್ನು ಥಗ್‌ಲಾದಿಂದ ತೆರವುಗೊಳಿಸಬೇಕೆಂದು ಕೆಲವು ಸೇನಾಧಿಕಾರಿಗಳು ಹೇಳಿದ್ದರು. ಈ ಪ್ರದೇಶ ಭಾರತದ ಪಾಲಿಗೆ ಅನನುಕೂಲಕರವಾಗಿರುವುದರಿಂದ ತೆರವುಗೊಳಿಸುವುದು ಅಸಾಧ್ಯವಾದ ಕೆಲಸ ಎಂಬುದು ಇನ್ನು ಕೆಲವರ ಅಭಿಪ್ರಾಯವಾಗಿತ್ತು. (ಥಾಗ್‌ಲಾ, ಧೋಲಾಕ್ಕಿಂತ 2000 ಅಡಿ ಎತ್ತರದಲ್ಲಿತ್ತು). ಏತನ್ಮಧ್ಯೆ, ಚೀನಾದ ಸೈನಿಕರು, ಮೈಕ್ರೊಫೋನ್ ಹಿಡಿದು ಹಿಂದಿಯಲ್ಲಿ ಭಾರತಕ್ಕೆ ಉಪದೇಶ ಶುರು ಮಾಡಿದ್ದರು. ಹಿಂದೀ ಚೀನಿ ಭಾಯಿ ಭಾಯಿ, ಆದರೆ ಈ ಪ್ರದೇಶ ನಮ್ಮದು, ದಯವಿಟ್ಟು ಈ ಜಾಗ ಖಾಲಿ ಮಾಡಿ ಎಂಬುದು ಚೀನಾ ಉಪದೇಶದ ಸಾರಾಂಶ.

ಈ ಬಿಕ್ಕಟ್ಟು ಮೂರು ವಾರಗಳಾದರೂ ಬಗೆಹರಿಯಲಿಲ್ಲ. ಎರಡೂ ರಾಷ್ಟ್ರಗಳ ಸೈನಿಕರು ಈ ಪ್ರದೇಶದ ನದಿ ದಂಡೆಯಲ್ಲಿ ಮುಖಾಮುಖಿಯಾಗಿ ನಿಂತಿದ್ದರು. ಯುದ್ಧ ಮಾಡಬೇಕೇ ಅಥವಾ ತಮ್ಮ ನಾಯಕರು ಶಾಂತಿ ಮಾತುಕತೆ ನಡೆಸಿದ್ದಾರೆಯೇ ಎನ್ನುವುದಾದರೂ ಇವರಿಗೆ ಗೊತ್ತಿರಲಿಲ್ಲ. ಆಖೈರಾಗಿ, ಅಕ್ಟೋಬರ್ 3ರಂದು, ಯುಕ್ತಾಯುಕ್ತ ವಿವೇಚನೆಯ ಮಾತುಗಳನ್ನಾಡಿದ್ದ ಲೆಫ್ಟಿನೆಂಟ್ ಜನರಲ್ ಉಮ್ರಾವ್ ಸಿಂಗ್ ಅವರನ್ನು ಬದಲಾಯಿಸಿ ದಳಪತಿ ಬಿ.ಎಂ. ಕೌಲ್ ಅವರನ್ನು ನೇಮಿಸಲಾಯಿತು. ದೆಹಲಿಯಿಂದ ಧಾವಿಸಿದ ಕೌಲ್ ಅವರು ನೇಫಾದ ದಂಡನಾಯಕರಾಗಿ ಅಧಿಕಾರ ಸ್ವೀಕರಿಸಿದರು.

ಎಚ್ಚರಿಕೆಯಿಂದ ವರ್ತಿಸುವುದು ಅಗತ್ಯವೆಂಬ ಸಲಹೆ ನೀಡಿದವರನ್ನು ಉಪೇಕ್ಷಿಸಲಾಯಿತು. ಕೌಲ್ ಅವರು ಎಲ್ಲ ಆಕ್ಷೇಪಣೆಗಳನ್ನೂ ತಳ್ಳಿಹಾಕಿದರು. ತಾವು ಕೈಗೊಳ್ಳಲಿರುವ ಜೂಜಿನಲ್ಲಿ ತಮಗೆ ದೆಹಲಿಯಿಂದ ಸೈನ್ಯ ವ್ಯವಸ್ಥಾಪನಾ ತಂತ್ರದ ಬೆಂಬಲ ಸಿಗುವುದೆಂದು ಕೌಲ್ ಭಾವಿಸಿದ್ದರು. ಥಾಗ್‌ಲಾದಿಂದ ಚೀನಿ ಸೈನಿಕರನ್ನು ಹಿಮ್ಮೆಟ್ಟಿಸಲು ಅವರು ಬಯಲು ಸೀಮೆಯಿಂದ ಎರಡು ತುಕಡಿ ಸೇನೆ ರವಾನಿಸಿದರು. ಈ ತುಕಡಿಯ ಸಿಪಾಯಿಗಳ ಬಳಿ ಹಗುರ ಶಸ್ತ್ರಾಸ್ತ್ರಗಳಿದ್ದವು ಹಾಗೂ ಮೂರು ದಿನಗಳಿಗಾಗುವಷ್ಟು ಮಾತ್ರ ಆಹಾರ ಸಾಮಗ್ರಿ ಇತ್ತು. ಸಣ್ಣ ಫಿರಂಗಿಗಳಾಗಲೀ ರಾಕೆಟ್ ಉಡಾವಣಾ ಸಾಧನಗಳಾಗಲಿ ಇದರ ಬಳಿ ಇರಲಿಲ್ಲ. ಇವೆಲ್ಲವೂ ಅವರನ್ನು ಹಿಂಬಾಲಿಸಿ ಬರುತ್ತವೆಂದು ಭರವಸೆ ನೀಡಲಾಗಿತ್ತು.

ಗುಡ್ಡಬೆಟ್ಟ ಕಲ್ಲು ಮುಳ್ಳುಗಳ ಹಾದಿ ಸವೆಸಿ ಭಾರತದ ಸೈನಿಕರು ಸೆಪ್ಟಂಬರ್ 9ರಂದು ನಾಮ್ಕಾಚು ನದಿ ಕಣಿವೆಯನ್ನು ತಲುಪಿದರು. ಪ್ರತಿಕೂಲ ಹವಾಮಾನ, ಎಡೆಬಿಡದ ನಡಿಗೆಯಿಂದ ಬಸವಳಿದಿದ್ದ ಸೈನಿಕರಿಗೆ ಕೊಂಚ ವಿಶ್ರಾಂತಿ ಬೇಕಿತ್ತು ಹಾಗೂ ಯುದ್ಧ ಮಾಡಲು ಶಸ್ತ್ರಾಸ್ತ್ರಗಳು ಬೇಕಾಗಿತ್ತು. ಆ ಸಂಜೆ ಅವರು ಅಲ್ಲಿ ಕುರುಬನೊಬ್ಬನ ಗುಡಿಸಿಲಿನಲ್ಲಿ ಠಾಣ್ಯ ಸ್ಥಾಪಿಸಿದರು. ಹೆಚ್ಚಿನ ಸೈನಿಕರು ಹಾಗೂ ಶಸ್ತ್ರಾಸ್ತ್ರ ಬಂದ ಕೂಡಲೇ ಶತ್ರುಗಳನ್ನು ಬುಡಮೇಲುಗೊಳಿಸುವುದು ಇವರ ತಂತ್ರವಾಗಿತ್ತು. ಆದರೆ ಆ ಅವಕಾಶ ಒದಗಿ ಬರಲಿಲ್ಲ. 10ರಂದು ಬೆಳಿಗ್ಗೆ ಚೀನೀಯರು ದಾಳಿ ನಡೆಸಿದರು. ನಮ್ಮ ಸೈನಿಕರು ವೀರಾವೇಶದಿಂದ ಹೋರಾಡಿದರು. ಆದರೆ ಪರ್ವತಾರೋಹಣದಿಂದಾಗಿ ಅವರು ಹಿಂಡಿ ಹಿಪ್ಪೆಯಾಗಿದ್ದರು. ಜೊತೆಗೆ ಶತ್ರು ಪಾಳೆಯದಲ್ಲಿ ಇವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರಿದ್ದರು. ಅವರ ಬಳಿ ಮದ್ದುಗುಂಡು ಫಿರಂಗಿಗಳೂ ಹೆಚ್ಚಾಗಿದ್ದವು. ಚೀನೀಯರು ಬಳಸಿದ ಭಾರಿ ಫಿರಂಗಿಗಳ ಎದುರು ಇವರ ಬಳಿ ಇದ್ದ ಲಘು ಶಸ್ತ್ರಾಸ್ತ್ರಗಳು ಪ್ರಯೋಜನಕ್ಕೆ ಬರಲಿಲ್ಲ.

1959ರಿಂದ ಲಡಾಖ್ ಮತ್ತು ನೇಫಾಗಳಲ್ಲಿ ಭಾರತ ಮತ್ತು ಚೀನೀ ಸೈನಿಕರು ಇಲಿ-ಬೆಕ್ಕಿನ ಆಟ ಆಡಿದ್ದರು. ಸೈನಿಕರನ್ನು ಅಲ್ಲಿ ಇಲ್ಲಿಗೆ ರವಾನಿಸುತ್ತಾ, ಅಲ್ಲಿ ಇಲ್ಲಿ ಕಾದಾಟ ನಡೆಸಿದ್ದರು. ಅವರ ನಾಯಕರುಗಳು ಪತ್ರ ವ್ಯವಹಾರದಲ್ಲಿ ಮಗ್ನರಾಗಿದ್ದರು. ಕೆಲವೊಮ್ಮೆ ಭೇಟಿಯಾದದ್ದೂ ಉಂಟು. ಆದರೆ ಈಗ ಪರಿಸ್ಥಿತಿ ಮೈ ಮೇಲೆ ಬಂದಿತ್ತು. ಅದೂ ಹಿಂದೆಂದೂ ಕಾಣದಂಥ ದೊಡ್ಡ ಪ್ರಮಾಣದಲ್ಲಿ ಪರಿಸ್ಥಿತಿ ಉಲ್ಬಣಿಸಿತ್ತು. ಧೋಲಾದಲ್ಲಿದ್ದ ಭಾರತದ ಪಡೆಗಳ ಮೇಲೆ ಥಾಗ್‌ಲಾಗೆ ಬರುತ್ತಿದ್ದ ಚೀನೀಯರು ಶಸ್ತ್ರಾಸ್ತ್ರ ಪ್ರಯೋಗಿಸ-ಲಾರಂಭಿಸಿದ್ದರು. ಇದರಿಂದ ಪ್ರಚೋದಿತರಾದ ಭಾರತದ ಸೈನಿಕರು ಥಗ್‌ಲಾನಿಂದ ಚೀನೀಯರನ್ನು ಓಡಿಸುವ ಪ್ರಯತ್ನ ಮಾಡಿದರು. ಇದು ವಿಫಲವಾದಾಗ, ಮತ್ತೊಮ್ಮೆ ಪ್ರಯತ್ನಿಸಿ ಶತ್ರುವನ್ನು ಹಿಮ್ಮೆಟ್ಟಿಸುವಂತೆ ಸೇನೆಗೆ ಆದೇಶ ನೀಡಲಾಗಿದೆಯೆಂದು ನೆಹರೂ ದೆಹಲಿಯಲ್ಲಿ ಪ್ರಕಟಿಸಿದ್ದರು.

ಆದರೆ ಕಾರ್ಯತಃ ಮೊದಲು ಚುರುಕಾದದ್ದು ಶತ್ರುಗಳು. ಸುಮಾರು ಮೂರು ವರ್ಷಗಳ ಕಾಲ ನಡೆದ ಮುಸಿಕಿನೊಳಗಿನ ಹೋರಾಟ ಕೊನೆಗೊಮ್ಮೆ, ಅಕ್ಟೋಬರ್

19-20ರ ರಾತ್ರಿ ಪೂರ್ಣ ಪ್ರಮಾಣದ ಬಹಿರಂಗ ಸಮರವಾಗಿತ್ತು. ಚೀನೀಯರು ಪೂರ್ವ ಮತ್ತು ಪಶ್ಚಿಮ ವಲಯಗಳೆರಡರಲ್ಲೂ ಏಕಕಾಲದಲ್ಲಿ ಆಕ್ರಮಣ ನಡೆಸಿದ್ದರು. ಫಲಪ್ರಮಾಣ ವಾದಿಗಳು ಭವಿಷ್ಯ ನುಡಿದಂತೆ ಮಿಂಚಿನ ದಾಳಿ ಆರಂಭವಾಗಿತ್ತು. ಆದರೆ, ಇದನ್ನು ಎದುರಿಸಲು ಭಾರತ ಸಿದ್ಧವಾಗಿರಲಿಲ್ಲ. ಆ ರಾತ್ರಿ, "ನ್ಯೂಯಾರ್ಕ್ ಟೈಮ್ಸ್" ವರದಿಗಾರ ಬರೆದಂತೆ, "ಹೊಗೆಯಾಡುತ್ತಿದ್ದ ಪರಿಸ್ಥಿತಿ ಜ್ವಾಲಾಮುಖಿಯಾಗಿ ಸ್ಫೋಟಗೊಂಡಿತ್ತು. ವಿವಾದಿತ ಪ್ರದೇಶಗಳಲ್ಲಿ ಎರಡೂ ಕಡೆ ಭೀಕರ ಕಾಳಗ ಶುರುವಾಗಿತ್ತು. ಸಿಡಿಯುವ ಫಿರಂಗಿಗಳಿಂದ ಸಜ್ಜಿತರಾಗಿದ್ದ ಚೀನೀಯರು, ಪ್ರತಿಯೊಂದು ಹೋರಾಟದಲ್ಲೂ ಭಾರತದ ಸೈನಿಕರನ್ನು ಬಗ್ಗು ಬಡಿಯುತ್ತಿದ್ದರು, ಹಿಮ್ಮೆಟ್ಟಿಸುತ್ತಿದ್ದರು. ಉಭಯರಾಷ್ಟ್ರಗಳೂ ಗಡಿಯಲ್ಲಿ ಸೈನ್ಯವನ್ನು ಜಮಾಯಿಸಿದ್ದವು. ಆದರೆ ಭಾರತದ ವೀಕ್ಷಕರು, ಚೈನಾ ದೇಶವೇ ಆಕ್ರಮಣಕಾರಿ ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಮಧ್ಯಮ ಪ್ರಮಾಣದ ಮೆಷಿನ್‌ಗನ್ನುಗಳಿಂದ ಸಜ್ಜಿತರಾಗಿದ್ದ ಚೀನೀಯರು ಭಾರಿ ಫಿರಂಗಿ ಪಡೆಗಳ ಬೆಂಬಲದಿಂದ ಅಲೆಯೋಪಾದಿಯಲ್ಲಿ ಮುನ್ನುಗ್ಗಿದ್ದರು. ಹೋರಾಟದಲ್ಲಿ ಚೀನಾದ ಎರಡು ತುಕಡಿಗಳು ಒಳಗೊಂಡಿದ್ದವು. ಈ ಎರಡು ತುಕಡಿಗಳು ಭಾರತದ ಸೇನೆಗೆ ಐದು ಪಟ್ಟು ಹೆಚ್ಚು ಸಶಕ್ತವಾಗಿದ್ದವು."

ಚೀನೀಯರು ಮಿಂಚಿನ ವೇಗದಲ್ಲಿ ಭಾರತದ ಠಾಣ್ಯಗಳ ಮೇಲೆ ದಂಡು ನುಗ್ಗಿಸಿ ದಾಳಿ ನಡೆಸಿದ್ದರು. ಈ ಹಠಾತ್ ಆಕ್ರಮಣ ಭಾರತದ ಪಡೆಗಳನ್ನು ಸ್ತಂಭೀಭೂತರನ್ನಾಗಿಸಿತ್ತು. ಚೀನಿ ಪಡೆಗಳು ನಾಮ್‌ಕಾಚು ಕಣಿವೆ ದಾಟಿ ತವಾಂಗ್‌ನ ಬುದ್ಧ ದೇವಾಲಯವನ್ನು ವಶಪಡಿಸಿಕೊಂಡಿದ್ದುವು. ಇನ್ನೊಂದು ತುಕಡಿ ನೇಫಾದ ಪೂರ್ವ ವಲಯದತ್ತ ನುಗ್ಗಿತ್ತು. ಚೀನಾದ ಪಡೆಗಳು ಭಾರತದ ಗಡಿ ಪ್ರದೇಶವನ್ನು ಹೆಚ್ಚು ಹೆಚ್ಚಾಗಿ ಆಕ್ರಮಿಸಲಾರಂಭಿಸಿದ್ದುವು. ಲಡಾಖ್‌ನಲ್ಲಿ ಎಂಟು ಠಾಣ್ಯಗಳು ಚೀನೀಯರ ವಶವಾಗಿದ್ದವು. ನೇಫಾದಲ್ಲಿ ಸರಿಸುಮಾರು ಇಪ್ಪತ್ತು ಠಾಣ್ಯಗಳು ಶತ್ರುಪಡೆಗಳ ವಶವಾಗಿದ್ದವು. ತಾವಾಂಗ್‌ನ್ನು ಹತೋಟಿಗೆ ತೆಗೆದುಕೊಂಡಿದ್ದರು.

ಚೈನಾದ ಪಡೆಗಳು ನೀರು ಕುಡಿದಷ್ಟು ಸುಲಭವಾಗಿ ಭಾರತದ ಠಾಣ್ಯಗಳನ್ನು ವಶಪಡಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. 1950ರ ಮಧ್ಯಭಾಗದಿಂದಲೇ ಅವರ ಪಡೆಗಳು ಟಿಬೆಟ್ ಪ್ರಸ್ಥ ಭೂಮಿಯಲ್ಲಿ ಬೀಡುಬಿಟ್ಟು, ಖಾಂಪಾ ಬಂಡುಕೋರರ ವಿರುದ್ಧ ಹೋರಾಡುತ್ತ ಬಲಸಂವರ್ಧನೆ ಮಾಡಿಕೊಳ್ಳಲಾರಂಭಿಸಿದ್ದವು. ಚೀನೀಯರಿಗೆ ಎತ್ತರದ ಪರ್ವತ ಪ್ರದೇಶದಲ್ಲಿ ಯುದ್ಧ ಮಾಡುವುದು ಕರಗತವಾಗಿತ್ತು. ಆದರೆ ಭಾರತದ ಪಡೆಗಳಿಗೆ ಪರ್ವತ ಪ್ರದೇಶಗಳಲ್ಲಿ ಯುದ್ಧಮಾಡಿದ ಅನುಭವ ಇರಲಿಲ್ಲ. ಜೊತೆಗೆ ಟಿಬೆಟ್ ಕಡೆಯಿಂದ ಅವರಿಗೆ ಸಾರಿಗೆ ಸಂಪರ್ಕವೂ ಅನುಕೂಲಕರವಾಗಿತ್ತು. ಸಮತಟ್ಟಿನ ಆ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಕಾರ್ಯ, ಸೈನ್ಯದ ಚಲನವಲನ ಸುಲಭವಾಗಿತ್ತು. ಹೀಗೆ ಭೌಗೋಳಿಕವಾಗಿ ಚೀನೀಯರಿಗೆ ಹೆಚ್ಚಿನ ಅನುಕೂಲಗಳಿದ್ದವು. ಅಸ್ಸಾಮಿನಿಂದ ಮೆಕ್‌ಮಹೋನ್ ರೇಖೆವರೆಗೆ ಆರೋಹಣ ಸುಲಭವಾಗಿರಲಿಲ್ಲ. ಅದು ಕಡಿದಾದ ಗುಡ್ಡದ ಹಾದಿಯಾಗಿತ್ತು. ಜೊತೆಗೆ

ಸಸ್ಯಗಳಿಂದಾವೃತಗೊಂಡಿತ್ತು. ಹವೆಯೂ ತುಂಬ ತೀವ, ಶೀತಲವಾಗಿತ್ತು. ಮುಂಚೂಣಿ ಪ್ರದೇಶಗಳಲ್ಲಿದ್ದ ಭಾರತದ ಠಾಣ್ಯಗಳಲ್ಲಿ ಏನೇನೂ ಸೌಕರ್ಯಗಳಿರಲಿಲ್ಲ. ರಸ್ತೆಗಳಿರಲಿಲ್ಲ. ವಿಮಾನಗಳು ಕೆಳಕ್ಕೆಸೆಯುವುದನ್ನೇ ಎದುರುನೋಡುತ್ತಾ ಇರಬೇಕಾಗಿತ್ತು. ಎಲ್ಲದಕ್ಕೂ ಹೆಲಿಕಾಪ್ಟರುಗಳನ್ನು ನೆಚ್ಚಿಕೊಂಡು ಕೂತಿರಬೇಕಾದಂಥ ಪರಿಸ್ಥಿತಿ.

ನಾಯಕತ್ವದ ಶೂನ್ಯತೆಯಿಂದ ಭಾರತದ ಸಮಸ್ಯೆಗಳು ಅಧಿಕಗೊಂಡವು. ಜನರಲ್ ಕೌಲ್ ಅವರು ತೀವ್ರ ಎದೆ ನೋವಿನಿಂದಾಗಿ ಅಕ್ಟೋಬರ್ 18ರಂದು ವಾಪಸಾಗಿದ್ದರು. ಅವರನ್ನು ದೆಹಲಿಗೆ ಸ್ಥಳಾಂತರಿಸಲಾಗಿತ್ತು. ಅವರ ಪಡೆಗಳು ಐದು ದಿನ ಅನಾಯಕತ್ವದಿಂದ ಸೊರಗಿದ್ದವು. ಈ ವೇಳೆಗಾಗಲೇ ತವಾಂಗ್ ಪತನವಾಗಿತ್ತು.

ಅಕ್ಟೋಬರ್ 24ರ ವೇಳೆಗೆ ಚೀನಿ ಸೈನ್ಯದ ಮುನ್ನಡೆ ಒಂದು ನಿಲುಗಡೆಗೆ ಬಂದಿತ್ತು. ಗಡಿ ಘರ್ಷಣೆಗಳನ್ನು ನಿಲ್ಲಿಸುವುದಕ್ಕೆ ಮಾರ್ಗೋಪಾಯ ಕಂಡುಹಿಡಿಯಲು, ಹಾಗೂ ಗಡಿ ಸಂಧಾನ ಪುನರಾರಂಭಿಸಲು ಸೂಚಿಸಿ ಚೌ ಎನ್ ಲಾಯ್ ನೆಹರೂಗೆ ಪತ್ರ ಬರೆದಿದ್ದರು. ನಂತರದ ಹದಿನೈದು ದಿನಗಳಲ್ಲಿ ಈ ಇಬ್ಬರು ಪ್ರಧಾನಿಗಳ ನಡುವೆ ಎರಡು ಪತ್ರಗಳ ವಿನಿಮಯವಾಯಿತು. ಆದರೆ ಅದರಿಂದ ಗಮನಾರ್ಹವಾದ ಸಾಧನೆ ಏನೂ ಆಗಲಿಲ್ಲ. ಚೀನ ಮತ್ತು ಭಾರತಕ್ಕೆ ಸಾಮ್ರಾಜ್ಯಶಾಹಿಯೇ ಸಮಾನ ಶತ್ರುವೆಂದು ಚೌ ಎನ್ ಲಾಯ್ ಹೇಳಿದ್ದರು. ಪ್ರಸಕ್ತ ಘರ್ಷಣೆಗಳೇನೆ ಇದ್ದರೂ, ಹಿಂದಿನ ದಿನಗಳ ಮಾದರಿಯಲ್ಲಿ ಭಾರತ ಚೀನ ನಡುವೆ ಸ್ನೇಹ ಸಂಬಂಧ ಸುಧಾರಿಸಲು ಉಭಯ ರಾಷ್ಟ್ರಗಳಿಗೂ ಅವಕಾಶಗಳಿವೆ ಎಂದು ಚೌ ಎನ್ ಲಾಯ್ ಅಭಿಪ್ರಾಯಪಟ್ಟಿದ್ದರು. ವಾಸ್ತವ ಹತೋಟಿ ರೇಖೆಯಿಂದ ಉಭಯರಾಷ್ಟಗಳೂ ಇಪ್ಪತ್ತು ಕಿಲೋಮೀಟರಿನಷ್ಟು ಹಿಂದಕ್ಕೆ ಸರಿಯವುದು ಮತ್ತು ಅಲ್ಲಿಂದ ಸೈನ್ಯವನ್ನು ವರ್ಗಾಯಿಸುವುದು ಚೌ ಎನ್ ಲಾಯ್ ಸೂಚಿಸಿದ ಪರಿಹಾರವಾಗಿತ್ತು.

ನೆಹರೂ ಅವರ ಉತ್ತರ, ಅವರ ಯಾತನೆಯನ್ನು ಸರ್ವವೇದ್ಯವಾಗುವಂತೆ ಅಭಿವ್ಯಕ್ತಗೊಳಿಸಿತ್ತು. "ನನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ಇದಕ್ಕಿಂತ ಹೆಚ್ಚಾಗಿ ಯಾತನೆಯನ್ನುಂಟು ಮಾಡಿದ, ದುಃಖವುಂಟು ಮಾಡಿದ ಮತ್ತೊಂದು ಘಟನೆ ಇಲ್ಲ" ಎಂದು ನೆಹರೂ ತಮ್ಮ ನೋವು, ನಿರಾಶೆಗಳನ್ನು ತೋಡಿಕೊಂಡಿದ್ದರು. ಭಾರತ-ಚೀನ ಬಾಂಧವ್ಯವನ್ನು ವಿರೂಪಗೊಳಿಸಿದ ಮೈತ್ರಿಭಾವವಿಲ್ಲದ ಹಗೆತನದ ವಿಕೃತಿ ಭಾರತದ ವಿರುದ್ಧ ಚೀನದ ಆಕ್ರಮಣದಲ್ಲಿ ಪರ್ಯವಸಾನಗೊಂಡಿತು. ಇದು, ಶಾಂತಿಯುತವಾಗಿ ಗಡಿವಿವಾದ ಬಗೆಹರಿಸಿಕೊಳ್ಳಲು ಚೀನ ಬಯಸುತ್ತದೆ ಎನ್ನುವ ಹೇಳಿಕೆಗೆ ತದ್ವಿರುದ್ಧವಾಗಿದೆ. ಇದು ಕಣ್ಣಿಗೆ ರಾಚುವಂಥ ತದ್ವಿರುದ್ಧ ಕೃತ್ಯವಾಗಿದೆ ಎಂದು ನೆಹರೂ ಕಟುವಾಗಿ ಬರೆದಿದ್ದರು. "ಭಾರತದ ಮೇಲೆ ಮಿಲಿಟರಿ ಆಕ್ರಮಣ ನಡೆಸುವ ಮೂಲಕ ತಮ್ಮ ಆರೋಪಿತ ಗಡಿ ಹಕ್ಕೊತ್ತಾಯಗಳನ್ನು ಬಲವಂತವಾಗಿ ನಮ್ಮ ಮೇಲೆ ಹೇರಲು ಪೀಕಿಂಗ್ ಈ ಕ್ರೂರ ನಿರ್ಧಾರ ಕೈಗೊಂಡಿದೆ" ಎಂದು ಖಂಡತುಂಡವಾಗಿ ಹೇಳಿದ್ದರು. ಚೌ ಎನ್ ಲಾಯ್ ಅವರು ಈಗ ಸೂಚಿಸಿರುವ ಸಂಧಾನದ ಸಲಹೆ, ಆಕ್ರಮಣದ ಮುಖೇನ ಸ್ವಾಧೀನ ಪಡಿಸಿಕೊಂಡಿರುವುದನ್ನು

ಭದ್ರಪಡಿಸಿಕೊಂಡು ತನ್ನ ವಶದಲ್ಲೇ ಉಳಿಸಿಕೊಳ್ಳುವ ಹುನ್ನಾರವಾಗಿದೆ-ಎಂದು ನೇರವಾಗಿ ಬರೆದಿದ್ದರು. ಚೌ ಎನ್ ಲಾಯ್ ಸೂಚಿಸಿರುವ ಪರಿಹಾರದಂತೆ ಚೈನಾದ ಪಡೆಗಳು ಪೂರ್ವದಲ್ಲಿ ಮೆಕ್ ಮಹೋನ್ ರೇಖೆಯಿಂದ ಹಿಂದಕ್ಕೆ ಸರಿಯಬೇಕು. ಪಶ್ಚಿಮ ವಲಯದಲ್ಲಿ 1959ರ ನವೆಂಬರ್ 7ರ ನೆಲೆಗೆ ಹಿಂದಿರುಗಬೇಕು. ತನ್ಮೂಲಕ ಕಳೆದ ಮೂರು ವರ್ಷಗಳಿಂದ ವಿವಾದಿತ ಪ್ರದೇಶಗಳಲ್ಲಿ ಆಕ್ರಮಣ ತೆರವುಗೊಳಿಸಬೇಕೆಂದು, ಆಗಿರುವ ತಪ್ಪನ್ನು ಸರಿಪಡಿಸಬೇಕೆಂದು ನೆಹರೂ ಬರೆದಿದ್ದರು.

ಏತನ್ಮಧ್ಯೆ, ಗಡಿಯಲ್ಲಿ ಅನುಭವಿಸಿದ ಕಷ್ಟನಷ್ಟಗಳ ಯಾದಿಗೆ ದೆಹಲಿಯಲ್ಲಿ ಮತ್ತೊಂದು ಸೇರಿಕೊಂಡಿತು. ಭಾರತದ ದೌರ್ಬಲ್ಯಗಳ ನಗ್ನ ಪ್ರದರ್ಶನದ ನಂತರ ಆಖೈರಾಗಿ ವಿ.ಕೆ. ಕೃಷ್ಣ ಮೆನನ್ ಅವರನ್ನು ರಕ್ಷಣಾ ಸಚಿವ ಸ್ಥಾನದಿಂದ ತೆಗೆಯಲಾಯಿತು. (ಮೊದಲಿಗೆ ಅವರನ್ನು ರಕ್ಷಣಾ ಉತ್ಪಾದನಾ ಸಚಿವಾಲಯಕ್ಕೆ ವರ್ಗಾಯಿಸಲಾಯಿತಾದರೂ ನಂತರ ಸಂಪೂರ್ಣವಾಗಿ ಮಂತ್ರಿಮಂಡಲದಿಂದ ಕೈ ಬಿಡಲಾಯಿತು). ಮೆನನ್ನರ ನಿರ್ಗಮನದೊಂದಿಗೆ ಪಾಶ್ಚಾತ್ಯ ರಾಷ್ಟ್ರಗಳಿಂದ ಶಸ್ತ್ರಾಸ್ತ್ರ ಆಮದು ಮಾಡಿಕೊಳ್ಳಬೇಕೆಂಬ ಬೇಡಿಕೆ ಶುರುವಾಯಿತು. ಅಕ್ಟೋಬರ್ 28ರಂದು ಅಮೆರಿಕದ ರಾಯಭಾರಿ ಪ್ರಧಾನಮಂತ್ರಿಯವರನ್ನು ಭೇಟಿಯಾದರು. ನೆಹರೂ ದುರ್ಬಲರಾಗಿದ್ದರು, ಭಂಗುರತೆ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಕುಬ್ಜರಾದಂತೆ, ವಯಸ್ಸಾದವರಂತೆ ಕಂಡರು. ಅವರಿಗೆ ವಿಪರೀತ ಆಯಾಸವಾಗಿತ್ತು. ಭಾರತಕ್ಕೆ ಪಾಶ್ಚಾತ್ಯ ರಾಷ್ಟ್ರಗಳಿಂದ ಶಸ್ತ್ರಾಸ್ತ್ರ ಅತ್ಯಗತ್ಯವಾಗಿದೆ ಎಂದು ಅವರು ತಿಳಿಸಿದರು. ಅತಿ ಕ್ಷಿಪ್ರಕಾಲದಲ್ಲೇ ಬ್ರಿಟನ್ ಮತ್ತು ಅಮೆರಿಕ ಶಸ್ತ್ರಾಸ್ತ್ರ, ಮದ್ದುಗುಂಡುಗಳ ಜೊತೆಗೆ ಸಾರಿಗೆ ವಿಮಾನಗಳನ್ನೂ ಭಾರತಕ್ಕೆ ಪೂರೈಸಿದವು. ಫ್ರಾನ್ಸ್ ಮತ್ತು ಕೆನಡಾ ಸಹ ಶಸ್ತ್ರಾಸ್ತ್ರ ಸರಬರಾಜು ಮಾಡಲು ಸಮ್ಮತಿಸಿದವು.

ನವೆಂಬರ್ 8ರಂದು ಪ್ರಧಾನಮಂತ್ರಿಗಳು ಚೀನವನ್ನು ಖಂಡಿಸುವ ನಿರ್ಣಯವೊಂದನ್ನು ಸಂಸತ್ತಿನಲ್ಲಿ ಮಂಡಿಸಿದರು. ಚೀನ ಪಂಚಶೀಲದ ಆದರ್ಶಗಳಿಗೆ ದ್ರೋಹ ಬಗೆದಿದೆ, ಭಾರಿ ಆಕ್ರಮಣದ ಮೂಲಕ ಭಾರತದ ಏಕ ಪ್ರಕಾರವಾದ ಸ್ನೇಹ-ಸೌಹಾರ್ದತೆಗಳ ಇಂಗಿತಕ್ಕೆ ವಿಶ್ವಾಸದ್ರೋಹ ಬಗೆದಿದೆ ಎಂದು ನಿರ್ಣಯದಲ್ಲಿ ಕಟುವಾಗಿ ಭರ್ತ್ಸನೆ ಮಾಡಲಾಗಿತ್ತು. ನಿರ್ಣಯದಲ್ಲಿ ಭಾರತದ ನೋವು-ಅವಮಾನಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು. "ನಾವು ಭಾರತೀಯರು, ಸ್ನೇಹವನ್ನು ಬಯಸಿ ಚೀನಕ್ಕೆ ಸ್ನೇಹ ಹಸ್ತ ಚಾಚಿದೆವು...ವಿಶ್ವದ ಮಂಡಳಿಗಳು ಮತ್ತು ವೇದಿಕೆಗಳಲ್ಲಿ ಅವರ ಪರ ವಕಾಲತ್ತು ವಹಿಸಿದೆವು...ಆದರೆ ನಾವೇ ಈಗ, ತಾನು ಸಾಮ್ರಾಜ್ಯಶಾಹಿ ವಿರೋಧಿ ಎಂದು ಬಡಾಯಿಕೊಚ್ಚಿಕೊಳ್ಳುವ ರಾಷ್ಟ್ರವೊಂದರ ನವಸಾಮ್ರಾಜ್ಯ ಶಾಹಿಗೆ ಹಾಗೂ ವಿಸ್ತರಣಾಕಾಂಕ್ಷೆಗೆ ಬಲಿಪಶುಗಳಾಗಿದ್ದೇವೆ" ಎಂದು ನಿರ್ಣಯದಲ್ಲಿ ಹೇಳಲಾಗಿತ್ತು. "ಚೀನ ತಾನು ಕಮ್ಯುನಿಸ್ಟ್ ಎಂದು ಹೇಳಿಕೊಳ್ಳಬಹುದು, ಆದರೆ, ತಾನು ವಿಸ್ತರಣಾಕಾಂಕ್ಷಿ, ಉದ್ದೇಶಪೂರ್ವಕವಾಗಿ ಬೇರೊಂದು ರಾಷ್ಟ್ರದ ಮೇಲೆ ಆಕ್ರಮಣ ನಡೆಸುವ ಉದ್ಧಟತನದ ರಾಷ್ಟ್ರ ಎಂಬುದನ್ನು ಈಗ ಜಗಜ್ಜಾಹೀರುಗೊಳಿಸಿದೆ, ತನ್ನ

ನಿಜರೂಪದಲ್ಲಿ ಬೆತ್ತಲಾಗಿ ನಿಂತಿದೆ" ಎಂದು ನೆಹರೂ ನಿರ್ಣಯ ಮಂಡಿಸಿ ಮಾತನಾಡುತ್ತ ನುಡಿದಿದ್ದರು.

ವಲ್ಲಭಭಾಯಿ ಪಟೇಲರು 1950ರಲ್ಲಿ ನೀಡಿದ್ದ ಎಚ್ಚರಿಕೆಯನ್ನು ನೆಹರೂ ತಮ್ಮ ಭಾಷಣದಲ್ಲಿ ತಡವಾಗಿಯಾದರೂ ಒಪ್ಪಿಕೊಂಡಿದ್ದರು. ಚೀನದಲ್ಲಿ ಕಮ್ಯುನಿಸ್ಟ್ ಸಿದ್ಧಾಂತ ರಾಷ್ಟ್ರೀಯತೆಯನ್ನು ನಿರರ್ಥಕಗೊಳಿಸುವುದಿಲ್ಲ, ಪ್ರತಿಯಾಗಿ ಅದು ಉಗ್ರ ರಾಷ್ಟ್ರೀಯತೆಯೇ ಆಗಿದೆ ಎಂದು ಪಟೇಲರು ಎಚ್ಚರಿಸಿದ್ದರು. ಈ ಖಂಡನಾ ನಿರ್ಣಯದ ಮೇಲೆ ಪೂರ್ಣ ಚರ್ಚೆ ನಡೆಯಿತು. 165 ಮಂದಿ ಸದಸ್ಯರು ಮಾತನಾಡಿದ್ದರು. ಇದೊಂದು ದಾಖಲೆ.

ನವೆಂಬರ್ 15ರಂದು ಎರಡನೆಯ ಬಾರಿ ಚೈನಾ ಆಕ್ರಮಣ ನಡೆಸುವುದರೊಂದಿಗೆ ಗಡಿಯಲ್ಲಿ ಪೂರ್ಣ ಪ್ರಮಾಣದ ಯುದ್ಧ ಶುರುವಾಯಿತು. ನೇಫಾದಲ್ಲಿ 500 ಅಡಿ ಉದ್ದದ ಗಡಿ ಪ್ರದೇಶದ ಮೇಲೆ ಚೈನಾ ದಾಳಿ ನಡೆಸಿತ್ತು. ವಾಲಾಂಗ್‌ನಲ್ಲಿ ಭೀಕರ ಕದನ ನಡೆಯಿತು. ಇಲ್ಲಿ, ಗುಡ್ಡಗಾಡು ಬುಡಕಟ್ಟಿಗೆ ಸೇರದ ಡೋಗ್ರಾ ಮತ್ತು ಕುಮಾನ್ ರೆಜಿಮೆಂಟ್‌ನ ಸೈನಿಕರು ಶೌರ್ಯ, ಪರಾಕ್ರಮಗಳಿಂದ ಹೋರಾಡಿ, ಚೀನೀಯರು ವಶಪಡಿಸಿಕೊಂಡಿದ್ದ ಬೆಟ್ಟಸಾಲು ಪ್ರದೇಶವನ್ನು ಮರಳಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಲಡಾಖಿನಲ್ಲೂ ನಮ್ಮ ಸೈನಿಕರು ತೀವ್ರ ಪ್ರತಿರೋಧ ವ್ಯಕ್ತಪಡಿಸಿದ್ದರು. ಈ ಕ್ಷೇತ್ರದ ದಂಡನಾಯಕನಿಗೆ ದೆಹಲಿಯಿಂದ ವಿರೋಧಾಭಾಸಗಳ ಸಂದೇಶಗಳು ಹೋಗಿರಲಿಲ್ಲ. ಇಲ್ಲಿ ಭಾರತದ ಸೈನಿಕರ ಉಗ್ರ ಹೋರಾಟದಿಂದಾಗಿ ಚೀನೀಯರು ತೀವ್ರ ಹಾನಿಯನ್ನು ಎದುರಿಸಬೇಕಾಯಿತು. ತಾವು ವಶಪಡಿಸಿಕೊಂಡ ಪ್ರದೇಶಕ್ಕಾಗಿ ಬಹಳ ಬವಣೆ ಪಡಬೇಕಾಯಿತು.

ಆದರೆ ನೇಫಾದ ಉದ್ದಗಲ ನಮ್ಮ ಸೇನೆಯ ಕಾರ್ಯಾಚರಣೆ ಹೇಳಿಕೊಳ್ಳು ವಂಥದ್ದಾಗಿರಲಿಲ್ಲ. ಇಲ್ಲಿ ಭಾರತದ ಪಡೆಗಳು ಪ್ರತ್ಯೇಕ ಭಾಗಗಳಾಗಿ ಒಡೆದುಹೋಗಿದ್ದವು. ಇಡೀ ರೆಜಿಮೆಂಟ್ ಚೆಲ್ಲಾಪಿಲ್ಲಿಯಾಗಿ ಹಿಮ್ಮೆಟ್ಟಿತ್ತು. ಚೀನೀಯರು ಅಡೆತಡೆ ಇಲ್ಲದೆ ಚಂಡಮಾರುತದಂತೆ ನುಗ್ಗಿ ಬಂದಾಗ ಭಾರತದ ದಳಪತಿಗಳು ದಿಗ್ಮೂಢರಾಗಿದ್ದರು. ಎಲ್ಲಿ ನುಗ್ಗಬೇಕು, ಎಲ್ಲಿ ಮೊದಲು ಹೆಜ್ಜೆ ಇಡಬೇಕು, ಎಲ್ಲಿ ನಿಲ್ಲಬೇಕು ಎನ್ನುವುದೂ ತಿಳಿಯದೇ ಕಕ್ಕಾಬಿಕ್ಕಿಯಾಗಿದ್ದರು. ತವಾಂಗ್‌ನತ್ತ ನುಗ್ಗುವುದೇ ಎಂಬ ಯೋಚನೆಯನ್ನೂ ಕೈಬಿಡಲಾಯಿತು. ದಕ್ಷಿಣ ದಿಕ್ಕಿಗೆ ಅರವತ್ತು ಮೈಲಿ ದೂರದಲ್ಲಿ ಬೊಮ್ಡಿ ಲಾಲ್‌ನತ್ತ ಸೈನ್ಯ ನುಗ್ಗಬೇಕೆಂದು ಜನರಲ್ ಒಬ್ಬರು ಅಭಿಪ್ರಾಯಪಟ್ಟಿದ್ದರು. ಇಲ್ಲಿಗೆ ಬಯಲು ಸೀಮೆಯಿಂದ ಶಸ್ತ್ರಾಸ್ತ್ರ ಇತ್ಯಾದಿ ಪೂರೈಕೆ ಸುಲಭ ಸಾಧ್ಯವಾಗಿತ್ತು. ಆಖೈರಾಗಿ, ತವಾಂಗ್‌ನಿಂದ ಹದಿನೈದು ಮೈಲಿ ದೂರದಲ್ಲಿನ ಸೆ ಲಾದಲ್ಲಿ ಚೀನೀ ಸೇನೆಯನ್ನು ಎದುರಿಸಿ ಹಿಮ್ಮೆಟ್ಟಿಸುವ ನಿರ್ಧಾರಕ್ಕೆ ಬರಲಾಯಿತು.

ಸೆ ಲಾದಲ್ಲಿ ಶತ್ರುಪಡೆ ಎದುರಿಸಿ ನಿಲ್ಲುವ ನಿರ್ಧಾರ ಕೌಲ್ ಅವರದಾಗಿತ್ತು. ಕೌಲ್ ಅವರಿಗೆ ಅನಾರೋಗ್ಯವಾಗಿದ್ದಾಗ ಲೆಫ್ಟಿನೆಂಟ್ ಜನರಲ್ ಹರಭಕ್ಷಸಿಂಗ್ ಅವರ ಸ್ಥಾನಕ್ಕೆ ಬಂದಿದ್ದರು. ಹರಭಕ್ಷ ಸಿಂಗ್ ಅವರಿಗೆ ರಣರಂಗ ಅನುಭವ ಚೆನ್ನಾಗಿತ್ತು. ಆದರೆ ಹರಭಕ್ಷ ಸಿಂಗ್ ಅವರು ಆಕ್ರಮಣ ನಿರೋಧ ಕಾರ್ಯಾಚರಣೆಯನ್ನು ಪುನರ್‌ವ್ಯವಸ್ಥೆಗೊಳಿಸುವಷ್ಟರಲ್ಲೇ, ಮತ್ತೆ ನಾಯಕತ್ವ ವಹಿಸಿಕೊಳ್ಳಲು ಕೌಲ್ ದೆಹಲಿಯಿಂದ ವಾಪಸಾಗಿದ್ದರು.

ಚೀನೀಯರು ಅಕ್ಟೋಬರ್ 25ರಂದು ತವಾಂಗನ್ನು ವಶಪಡಿಸಿಕೊಂಡಿದ್ದರು. ಚೀನೀಯರು ತವಾಂಗ್‌ನಲ್ಲೇ ಮೊಕ್ಕಾಂ ಹೂಡಿದಾಗ ಭಾರತದ ಪಡೆಗಳ ಕಾರ್ಯಭಂಗವಾಗಿತ್ತು. ಚೀನೀಯರ ಠಕ್ಕುಗಾರಿಕೆಯಿಂದ ಅವರು ಮೋಸಹೋಗಿದ್ದರು. ಚೀನೀಯರು ಸೆ ಲಾಗೆ ರಸ್ತೆ ನಿರ್ಮಾಣದಲ್ಲಿ ನಿರತರಾಗಿದ್ದರು. ನವೆಂಬರ್ 14ರಂದು ಭಾರತದ ಪಡೆಗಳು ಪ್ರತಿದಾಳಿ ಶುರುಮಾಡಿದ್ದವು. ವಾಲಾಂಗ್ ಸಮೀಪದ ಶತ್ರು ಠಾಣ್ಯ ಅವರ ಗುರಿಯಾಗಿತ್ತು. ಈ ಮಧ್ಯೆ ಸೆ ಲಾದ ಉತ್ತರದಲ್ಲಿ ಯುದ್ಧ ಶುರುವಾಯಿತು. ಇಲ್ಲಿ ಪರಿಸ್ಥಿತಿ ಮತ್ತೆ ಚೀನೀಯರಿಗೆ ಅನುಕೂಲಕರವಾಗಿತ್ತು. ಕಾವಲು ಪಡೆಯ ದಳಪತಿ ಹೆದರಿದ್ದರು. ಅವರು ಹಿಂದಕ್ಕೆ ಬರುವಂತೆ ತಮ್ಮ ದಳಕ್ಕೆ ಆಜ್ಞಾಪಿಸಿದರು. ಸೇನೆ ಬೊಮ್ಡಿ ಲಾನತ್ತ ಹಿಮ್ಮೆಟ್ಟಲಾರಂಭಿಸಿತು. ಅಲ್ಲಿಗೆ ಬರುವ ವೇಳೆಗೆ ಚೀನೀಯರು ತಮಗೆ ಮೊದಲೇ ಸೆ ಲಾ ಪ್ರದೇಶವನ್ನು ಸುತ್ತುವರಿದಿದ್ದು ರಸ್ತೆ ಸಂಪರ್ಕಗಳೆಲ್ಲವನ್ನೂ ಕಡಿದು ಹಾಕಿದ್ದರು. ಇಲ್ಲಿ ನಡೆದ ಭೀಕರ ಹೋರಾಟದಲ್ಲಿ ಭಾರತದ ಸೈನಿಕರನ್ನು ಕೊಚ್ಚಿ ಕೊಲ್ಲಲಾಯಿತು. ಉಳಿದವರು ಶಸ್ತ್ರಾಸ್ತ್ರ ತ್ಯಜಿಸಿ ಒಬ್ಬೊಬ್ಬರೇ ಅಥವಾ ಗುಂಪಾಗಿ ರಣರಂಗದಿಂದ ಪಲಾಯನ ಮಾಡಿದರು. ಸೆ ಲಾ ಸುಲಭವಾಗಿ ಚೀನೀಯರ ಕೈವಶವಾಯಿತು. ನಂತರ ಬೊಮ್ಡಿಲಾ ಪತನವಾಯಿತು.

ಬೊಮ್ಡಿಲಾ ಚೀನೀಯರ ವಶವಾದದ್ದು ಅಸ್ಸಾಮಿನಲ್ಲಿ ಭೀತಿ ಮೂಡಿಸಿತು. ನವೆಂಬರ್ 20ರಂದು ತೇಜ್ಪುರ ತಲುಪಿದ ಭಾರತದ ವರದಿಗಾರನೊಬ್ಬನಿಗೆ ಅದು ಪ್ರೇತನಗರದಂತೆ ಕಾಣಿಸಿತು. ಆಡಳಿತ ಗೌಹಾಟಿಗೆ ಹಿಂದಿರುಗಿತ್ತು. ತೇಜ್ಪುರ ಕಲೆಕ್ಟರ್ ಕಚೇರಿಯಲ್ಲಿ ಕಾಗದ ಪತ್ರಗಳನ್ನು, ಸ್ಥಳೀಯ ಬ್ಯಾಂಕ್ ಒಂದರಲ್ಲಿ ನೋಟುಗಳನ್ನು ಸುಟ್ಟ ಪ್ರಕರಣದ ನಂತರ ಆಡಳಿತ ಇಲ್ಲಿಂದ ಕಾಲ್ತೆಗೆದಿತ್ತು. ನಿರ್ಗಮಿಸುವ ಮುನ್ನ ದಿಗ್ಭ್ರಾಂತ ಒಳರೋಗಿಗಳನ್ನು ಹೊರಕ್ಕಟ್ಟಲು ಹುಚ್ಚಾಸ್ಪತ್ರೆಯ ಬಾಗಿಲುಗಳನ್ನು ತೆರೆಯಲಾಗಿತ್ತು.

ದೆಹಲಿ, ಮುಂಬಯಿಗಳಲ್ಲಿ ಯುವಕರು ಸೇನೆ ಸೇರಲು ಸಾಲುಗಟ್ಟಿ ನಿಂತಿದ್ದರು. ವಾರದಲ್ಲಿ ಒಂದೆರಡು ದಿನ ಮಾತ್ರ ಈ ನೇಮಕಾತಿ ಕೇಂದ್ರಗಳನ್ನು ತೆರೆಯಲಾಗುತ್ತಿತ್ತು. ಸೇನೆಯಲ್ಲಿ ಉದ್ಯೋಗ ಬಯಸಿ ಇಲ್ಲಿಗೆ ಬರುತ್ತಿದ್ದವರಲ್ಲಿ ಶೇ 75ರಷ್ಟು ಮಂದಿ ಮೊದಲ ಪರೀಕ್ಷೆಯಲ್ಲೇ ನಪಾಸಾಗುತ್ತಿದ್ದರು. ಈಗ ನೇಮಕಾತಿ ಕೇಂದ್ರಗಳಿಗೆ ಉದ್ಯೋಗಾಕಾಂಕ್ಷಿಗಳು ಮುತ್ತಿಗೆ ಹಾಕಿದ್ದರು. ಇವರಲ್ಲಿ ಕೆಲವರು ಕೂಲಿ-ಕಾರ್ಮಿಕರಾಗಿದ್ದರು. ಉಳಿದವರು ನಿರುದ್ಯೋಗಿ ಪದವೀಧರರಾಗಿದ್ದರು. ಈಗಿನ ತುರ್ತುಪರಿಸ್ಥಿತಿಯಲ್ಲಿ, ಸೇನೆ ದೇಹದಾರ್ಢ್ಯತೆ ಮಟ್ಟವನ್ನು ತಗ್ಗಿಸಿ ತಮಗೆ ಉದ್ಯೋಗ ನೀಡುವುದೆಂದೂ, ಬದುಕಿಗೊಂದು ಗುರಿ, ಉದ್ದೇಶಗಳನ್ನು ತೋರುವುದೆಂದೂ ಇವರೆಲ್ಲ ಕನಸು ಕಂಡಿದ್ದರು.

ಇವರೆಲ್ಲ ಸೈನ್ಯಕ್ಕೆ ಭರ್ತಿಯಾದಲ್ಲಿ ಈಗಾಗಲೇ ಯುದ್ಧ ಮಾಡಿ ಸೋತಿದ್ದವರಿಗಿಂತ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾರೆಂಬುದು ಅಸಂಭವವಾಗಿ ತೋರುತ್ತಿತ್ತು. ಏನೇ ಇರಲಿ, ಬಂದಿದ್ದವರಿಗೆಲ್ಲ ಸೇನೆಯಲ್ಲಿ ಉದ್ಯೋಗ ಸಿಗಲಿಲ್ಲ.

ಅಸ್ಸಾಂ ಬಯಲುಸೀಮೆ ಪ್ರವೇಶಿಸಲು ಚೀನಿ ಸೈನ್ಯ ಸನ್ನದ್ಧವಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ನವೆಂಬರ್ 22ರಂದು ಏಕಪಕ್ಷೀಯವಾಗಿ ಕದನವಿರಾಮ ಘೋಷಿಸಿತು.

ನೇಫಾದಲ್ಲಿ ಮೆಕ್ ಮಹೋನ್ ರೇಖೆಯಿಂದ ಹಿಂದಕ್ಕೆ ಸರಿದರು. ಲಡಾಖ್ ವಿಭಾಗದಲ್ಲಿ, ಪ್ರಸಕ್ತ ದಾಳಿಗೆ ಪೂರ್ವದಲ್ಲಿ ತಾವು ವಶಪಡಿಸಿಕೊಂಡಿದ್ದ ನೆಲೆಗಳಿಗೆ ಹಿಂದಿರುಗಿದರು.

ಚೀನೀಯರು ಏಕೆ ಗಂಟುಮೂಟೆ ಕಟ್ಟಿಕೊಂಡು ವಾಪಸಾದರು? ಕಮ್ಯುನಿಸ್ಟರೂ ಸೇರಿದಂತೆ ಎಲ್ಲ ಪಕ್ಷಗಳೂ ಸರ್ಕಾರದ ಬೆಂಬಲಕ್ಕೆ ನಿಂತಿದ್ದರ ಅಪಾಯ ಮನಗಂಡು ಚೈನಾ ಹಿಮ್ಮೆಟ್ಟಿತೆಂದು ಕೆಲವರು ಭಾವಿಸಿದ್ದರು. ಪಾಶ್ಚಾತ್ಯ ರಾಷ್ಟ್ರಗಳು ಭಾರತಕ್ಕೆ ಬೆಂಬಲ ಘೋಷಿಸಿದ್ದವು ಹಾಗೂ ಆಗಲೇ ಶಸ್ತ್ರಾಸ್ತ್ರ ಪೂರೈಕೆ ಆರಂಭಿಸಿದ್ದವು. ಇದರ ಫಲವಾದ ರಾಜಕೀಯ ಲೆಕ್ಕಾಚಾರಗಳಷ್ಟೇ ಮಹತ್ವವಾಗಿದ್ದದ್ದು ನೈಸರ್ಗಿಕ ಸಂಗತಿಗಳು. ಏಕೆಂದರೆ ಚಳಿಗಾಲ ಪದಾರ್ಪಣ ಮಾಡುತ್ತಿತ್ತು. ಹಿಮಾಲಯ ಹಿಮಾಚ್ಛಾದಿತವಾಗುತ್ತಿತ್ತು. ಭಾರತದ ಒಳಕ್ಕೆ ನುಗ್ಗಿದಂತೆಲ್ಲ ಚೀನೀಯರ ಸರಬರಾಜು ಮಾರ್ಗ ಬಲುದೂರವಾಗುತ್ತಿತ್ತು; ಸೈನ್ಯ ಪಾಲನೆ-ಪೋಷಣೆ ಕಷ್ಟಕರವಾಗುತ್ತಿತ್ತು.

ಯುದ್ಧದ ಅಂತ್ಯಕ್ಕೆ ಇವೇ ಮೊದಲಾದ ಕಾರಣಗಳನ್ನು ಕೊಡಬಹುದು. ಆದರೆ ಯುದ್ಧ ಆರಂಭವಾದುದಕ್ಕೆ ಕಾರಣ ಹುಡುಕುವುದು ಕಷ್ಟ. ಚೈನಾ ಶ್ವೇತಪತ್ರಗಳೇನನ್ನೂ ಹೊರಡಿಸಿರಲಿಲ್ಲ. ಅಥವಾ ಅವರ ದಾಖಲೆ-ದಸ್ತಾವೇಜುಗಳು ಬಹಿರಂಗವಾಗಿರಲಿಲ್ಲ. ಅವು ಯಾವತ್ತೂ ಬಹಿರಂಗಗೊಳ್ಳುವುದಿಲ್ಲ. ಅತಿಯಾದ ಎಚ್ಚರಿಕೆಯಿಂದ ಸಂಘಟಿಸಲಾದ ಆಕ್ರಮಣಕ್ಕೆ ಹಲವಾರು ವರ್ಷಗಳ ಸಿದ್ಧತೆ ನಡೆಸಿರಲಿಕ್ಕೆ ಸಾಕು ಎಂದಷ್ಟೇ ಹೇಳಬಹುದೇನೋ. ಆದರೆ ಯುದ್ಧ ಆರಂಭಿಸಿದ ನಿರ್ದಿಷ್ಟ ಕಾಲಾವಧಿ ಬಗ್ಗೆ ಒಂದು ಕಾರಣವನ್ನು ಊಹಿಸಲಾಗಿದೆ. ಅದು ಮೇಲು ನೋಟಕ್ಕೆ ಸಮಂಜಸವೆಂದೂ ತೋರುತ್ತದೆ. ಈ ಕಾಲಘಟ್ಟದಲ್ಲಿ, ಎರಡು ಮಹಾನ್ ಶಕ್ತಿಗಳಾದ ಅಮೆರಿಕ ಮತ್ತು ಸೋವಿಯತ್ ಒಕ್ಕೂಟ ಕ್ಯೂಬಾ ಕ್ಷಿಪಣಿ ಬಿಕ್ಕಟ್ಟಿನಲ್ಲಿ ಮಗ್ನವಾಗಿದ್ದವು. ಇದರಿಂದಾಗಿ ಪ್ರತೀಕಾರದ ಭಯವಿಲ್ಲದೆ ಒಂದು ಪುಟ್ಟ ಸಾಹಸ ನಡೆಸಲು ಪೀಕಿಂಗ್‌ಗೆ ಅವಕಾಶ ಕಲ್ಪಿಸಿಕೊಟ್ಟಂತಾಗಿತ್ತು.

ಗಡಿಯುದ್ಧದಿಂದ, ಶಸ್ತ್ರಾಸ್ತ್ರ, ಸಂಪರ್ಕ-ಸಂವಹನ ವ್ಯವಸ್ಥೆ, ಯುದ್ಧವ್ಯೂಹ, ಸೈನ್ಯ ವ್ಯವಸ್ಥಾಪನಾ ತಂತ್ರ ಹಾಗೂ ಯೋಜನೆಗಳಲ್ಲಿ ಚೀನದ ಮೇಲ್ಮೆ, ಶ್ರೇಷ್ಠತೆಗಳು ಸಾಬೀತಾಗಿದ್ದವು. ರಕ್ಷಣಾ ಸಚಿವಾಲಯದ ಅಂಕಿಅಂಶಗಳ ಪ್ರಕಾರ ಈ ಯುದ್ಧದಲ್ಲಿ 1383 ಭಾರತೀಯ ಸೈನಿಕರು ಹತರಾಗಿದ್ದರು. 3968 ಮಂದಿಯನ್ನು ಸೆರೆಹಿಡಿಯಲಾಗಿತ್ತು. 1696 ಮಂದಿ ಸೈನಿಕರು ನಾಪತ್ತೆಯಾಗಿದ್ದರು. ಆಧುನಿಕ ಸಮರಕ್ಕೆ ಹೋಲಿಸಿದರೆ ಈ ನಷ್ಟ ದೊಡ್ಡದೇನಲ್ಲ. ಆದಾಗ್ಯೂ ಭಾರತದ ಕಲ್ಪನೆಯಲ್ಲಿ ಇದೊಂದು ದೊಡ್ಡ ಪರಾಜಯವೇ ಆಗಿತ್ತು. ಇದಕ್ಕೆಲ್ಲ ಯಾರು ಹೊಣೆ? ಸಹಜವಾಗಿಯೇ ಬಲಿಪಶುಗಳಿಗೆ ಹುಡುಕಾಟ ಶುರುವಾಯಿತು. ವರ್ಷಗಳುರುಳಿದಂತೆ ಸ್ವಯಂ ನಿರ್ದೋಷೀಕರಣ ಪ್ರಕ್ರಿಯೆ ಶುರುವಾಗುತ್ತದೆ. ಸೇನಾಧಿಕಾರಿಗಳು ಜೀವನ ಚರಿತ್ರೆಗಳನ್ನು ಅಥವಾ ವೃತ್ತಾಂತಗಳನ್ನು ಪ್ರಕಟಿಸಿದಾಗ ಅದರಲ್ಲಿ ಸ್ವಯಂ ನಿರ್ದೋಷೀಕರಣ ಪ್ರವೃತ್ತಿ ಬಹಿರಂಗವಾಗುತ್ತದೆ. ಪ್ರತಿಯೊಬ್ಬ ಅಧಿಕಾರಿಯೂ ತಪ್ಪನ್ನು ಇನ್ನೊಬ್ಬ ಅಧಿಕಾರಿಯ ಅಥವಾ ರಾಜಕಾರಣಿಯ ಹೆಗಲಿಗೆ ವರ್ಗಾಯಿಸುತ್ತಾನೆ.

ರಾಜಕಾರಣಿಗಳು ತಮ್ಮ ಎಚ್ಚರಿಕೆಯನ್ನು ನಿರ್ಲಕ್ಷಿಸಿ, ಕಾರ್ಯಗತ ಮಾಡಲು ಸಾಧ್ಯವಾಗದಂಥ ಆದೇಶಗಳನ್ನು ಹೊರಡಿಸಿದರೆಂದು ತಮ್ಮ ಹೊಣೆಯಿಂದ ಜಾರಿಕೊಳ್ಳುತ್ತಾರೆ. ಚೀನದೊಂದಿಗೆ ಯುದ್ಧ ಆರಂಭವಾದಾಗ ಮಿಲಿಟರಿ ಕಾರ್ಯಾಚರಣೆಯ ಡೈರೆಕ್ಟರ್ ಜನರಲ್ ಆಗಿದ್ದ ಮೇಜರ್ ಜನರಲ್ ಡಿ.ಕೆ. ಪಾಲಿತ್ ಈ ಪ್ರಕಾರಕ್ಕೆ ಕೊಡುಗೆ ಸಲ್ಲಿಸಿರುವುದುಂಟು. ಡಿ.ಕೆ. ಪಾಲಿತ್ ದಾಖಲಿಸಿರುವ ವೃತ್ತಾಂತಗಳಲ್ಲಿ, ಸಾಮರಸ್ಯದ ಕೊರತೆ ಇತ್ತೆಂದೂ ಪ್ರತಿಯೊಬ್ಬರೂ ಸ್ವರಕ್ಷಣೆಯಲ್ಲಿ ತೊಡಗಿದ್ದರೆಂದೂ ದಾಖಲಿಸಿದ್ದಾರೆ. ಮುಗ್ಧತೆಯ ತರ್ಕ ಅಥವಾ ತಾರ್ಕಿಕ ಅನುಕ್ರಮಗಳಿಗೂ, ಘಟನೆಗಳಿಗೂ ಆನಂತರ ಮೂಡುವ ತಿಳಿವಳಿಕೆ ವೈಚಾರಿಕ ಸ್ವರೂಪವನ್ನು ತಂದುಕೊಡುತ್ತದೆ ಎಂದೂ ಅವರು ಬರೆದಿದ್ದಾರೆ.

ಯುದ್ಧದ ಬಗ್ಗೆ ಭಾರತೀಯರಲ್ಲಿ ಸಾರ್ವತ್ರಿಕವಾಗಿ ಮೂಡಿದ್ದ ಭಾವನೆಯೆಂದರೆ-ವಿಶ್ವಾಸದ್ರೋಹ. ಮುಗ್ಧತೆಯಿಂದ ನಂಬಿ, ಬೆಂಬಲಿಸಿದ ನೀತಿಗೆಟ್ಟ ನೆರೆ ರಾಷ್ಟ್ರದಿಂದ ವಿಶ್ವಾಸದ್ರೋಹವಾಗಿದೆ ಎಂಬುದು ಜನಸಾಮಾನ್ಯರ ಭಾವನೆಯಾಗಿತ್ತು. ನೆಹರೂ ಅವರೂ ಚೌ ಎನ್ ಲಾಯ್ ಅವರಿಗೆ ಬರೆದ ಪತ್ರದಲ್ಲಿ ಎಲ್ಲರಂತೆ ಇದೇ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ವಿವಾದವನ್ನು ಆಮೂಲಾಗ್ರವಾಗಿ ಅರ್ಥಮಾಡಿಕೊಳ್ಳಲು ನೆಹರೂ ಅವರ ಹಿಂದಿನ ಬರಹಗಳನ್ನು ಅಭ್ಯಾಸಮಾಡಬೇಕಾಗುತ್ತದೆ. ವಿಶೇಷವಾಗಿ, ಭಾರತದ ನಾಯಕರಾಗಿ ಅಲ್ಲ, ವಿಶ್ವ ಇತಿಹಾಸ ವಿದ್ಯಾರ್ಥಿಯಾಗಿ ನೆಹರೂ ಅವರು ಸಂದರ್ಶನವೊಂದರಲ್ಲಿ ಆಡಿರುವ ಮಾತುಗಳನ್ನು ಗಮನಿಸಲೇಬೇಕು. 1959ರಷ್ಟು ಹಿಂದೆಯೇ ನೆಹರೂ ಎಡ್ಗರ್ ಸ್ನೋಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದ್ದರು: "ಭಾರತ-ಚೈನಾ ನಡುವಣ ವಿವಾದಕ್ಕೆ ಮೂಲಭೂತ ಕಾರಣವೆಂದರೆ ಎರಡೂ ಹೊಸರಾಷ್ಟ್ರಗಳೆಂಬುದು. ಈ ಎರಡೂ ರಾಷ್ಟ್ರಗಳು ಹೊಸದಾಗಿ ಸ್ವಾತಂತ್ರ್ಯಗಳಿಸಿದ್ದವು. ಚೈತನ್ಯಶೀಲವಾದ, ಪ್ರೇರಕಶಕ್ತಿಯಾದ ರಾಷ್ಟ್ರೀಯ ನಾಯಕತ್ವದಲ್ಲಿ ಎರಡೂ ರಾಷ್ಟ್ರಗಳು ಇತಿಹಾಸದಲ್ಲೇ ಪ್ರಪ್ರಥಮವಾಗಿ ಒಂದು ಅರ್ಥದಲ್ಲಿ ತಮ್ಮ ಗಡಿ ಪ್ರದೇಶದಲ್ಲಿ "ಭೇಟಿಯಾಗಿದ್ದವು". ಹಿಂದೆ, ಎರಡು ರಾಷ್ಟ್ರಗಳ ನಡುವೆ ಪ್ರತಿರೋಧಕ ವಲಯಗಳಿದ್ದವು, ಹಾಗೂ ಉಭಯತ್ರರೂ ಗಡಿಗಳಿಂದ ದೂರದಲ್ಲಿದ್ದರು. ಆದರೆ ಈಗ ಇಬ್ಬರೂ ಆಧುನಿಕ ರಾಷ್ಟ್ರಗಳಾಗಿ ಗಡಿಯಲ್ಲಿ ಸಂಧಿಸುತ್ತಿದ್ದಾರೆ. ಹೀಗಾಗಿ ತಮ್ಮ ಗಡಿಗಳನ್ನು ಸುಭದ್ರಗೊಳಿಸುವ ಮುನ್ನ ಸ್ವಲ್ಪ ಮಟ್ಟಿನ ಘರ್ಷಣೆ ಉಂಟಾಗುವುದು ಸಹಜವಾದದ್ದು" ಎಂದು ನೆಹರೂ ಸಂದರ್ಶನದಲ್ಲಿ ತಿಳಿಸಿದ್ದರು.

ಭಾರತ-ಚೈನಾ ಘರ್ಷಣೆ ಉಭಯ ರಾಷ್ಟ್ರಗಳ ನಡುವಣ ಒಂದು ಮಿಥ್ಯಾ ಕಲ್ಪನೆಯಾಗಿತ್ತೆ? ಮಿಥ್ಯಾ ಕಲ್ಪನೆಗಳು ನಿಗೂಢವೆ? ಅಥವಾ ಎರಡು ರಾಷ್ಟ್ರಗಳ ನಡುವಣ ಅಹಂನ ಅಭಿವ್ಯಕ್ತಿಯಾಗಿತ್ತೆ? ಅಹಂ-ಅಭದ್ರತೆಗಳ ನಡುವಣ ಘರ್ಷಣೆಯಾಗಿತ್ತೆ? ಆದರೆ ಈ ಘರ್ಷಣೆಗಳು ಎಷ್ಟೇ ಅಸದೃಶವಾಗಿರಲಿ, ಎಷ್ಟೇ ಅಸಾಧಾರಣವಾಗಿರಲಿ (ಸಾಟಿಯಿಲ್ಲದ ಕ್ಷೋಭೆ ಎಂಬುದಂತೂ ದಿಟ), ಅದು ಪ್ರಾತಿನಿಧಿಕವಾಗಿತ್ತೆ? ಭಾರತೀಯರಿಗಂತೂ ಜನಸಮುದಾಯದ ಭಾವನೆಗಳನ್ನು ಬಡಿದೆಬ್ಬಿಸುವಷ್ಟರ ಮಟ್ಟಿಗೆ ಪ್ರಾತಿನಿಧಿಕವಾಗಿ ತೋರಿತ್ತು.

ಏಕೆಂದರೆ ಈಗೀಗ, ಗಡಿ ಪ್ರದೇಶಗಳ ಮೇಲಿನ ಹಕ್ಕೊತ್ತಾಯಗಳು, ಸೆಣಸಾಟಗಳು, ಸಂಘರ್ಷದ ಮೂಲಕಾರಣವಾಗುತ್ತಿವೆ. ಇದಿಷ್ಟು ಎಡ್ಗರ್ ಸ್ನೋ ಅವರ ಪ್ರಶ್ನೆಗಳಿಗೆ ನೆಹರೂ ಪ್ರತಿಕ್ರಿಯೆ. ಇದರಲ್ಲಿ ಯಾವುದು ಸರಿ? ಆಖೈರಾಗಿ ತೀರ್ಮಾನವನ್ನು ಕವಿ ಅಲೆನ್ ಗಿನ್ಸ್‌ಬರ್ಗ್‌ಗೆ ಬಿಡೋಣ. ಗಿನ್ಸ್‌ಬರ್ಗ್ ನಿರ್ವಾಣದ ಹುಡುಕಾಟದಲ್ಲಿ ಉಪಖಂಡದುದ್ದಕ್ಕೂ ಅಲೆದಾಡಿದವನು. ಆಗಸ್ಟ್ ತಿಂಗಳಲ್ಲಿ ಭಾರತ-ಚೈನಾ ಗಡಿಯಲ್ಲಿ ಘರ್ಷಣೆ ತೀವ್ರವಾದಂತೆ ಜಿನ್ಸ್‌ಬರ್ಗ್ ತನ್ನ ದಿನಚರಿಯಲ್ಲಿ ಕೆಲವೊಂದು ಸಂಗತಿಗಳನ್ನು ನಮೂದು ಮಾಡಿದ್ದಾನೆ. ಇದು, ಭಾರತ-ಚೀನ ನಡುವಣ ಘರ್ಷಣೆಯನ್ನು ಸರಿಯಾದ ದೃಷ್ಟಿಕೋನದಲ್ಲಿ ಬಿಂಬಿಸುವ ಪ್ರಯತ್ನವಾಗಿದೆ.

1962ರ ಹೋರಾಟಗಳು

ಅಮೆರಿಕ-ರಷ್ಯ/ಚೀನಾ-ಫಾರ್ಮೋಸಾ/ಭಾರತ-ಚೀನಾ/ಕಾಶ್ಮೀರಕ್ಕೆ ಸಂಬಂಧಿಸಿದಂತೆ ಭಾರತ-ಪಾಕಿಸ್ತಾನ; ಗೋವಾಕ್ಕೆ ಸಂಬಂಧಿಸಿದಂತೆ ಭಾರತ-ಪೋರ್ಚುಗಲ್ ಸಂಘರ್ಷ;-ಭಾರತ-ನಾಗಾಗಳ ನಡುವಣ ಹೋರಾಟ, ಗಡಿ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಈಜಿಪ್ಟ್ ಮತ್ತು ಇಸ್ರೇಲ್ ನಡುವಣ ಸಂಘರ್ಷ; ಸಾರ್ವಭೌಮತ್ವ ಕುರಿತು ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿ ನಡುವಣ ಸಂಘರ್ಷ; ಕ್ಯೂಬಾ ಮತ್ತು ಅಮೆರಿಕ ನಡುವಣ ಸಂಘರ್ಷ, ಇಂಡೊನೇಷಿಯಾ-ಹಾಲೆಂಡ್ ಗಡಿ ಸಂಘರ್ಷ; ಫ್ರಾನ್ಸ್-ಆಲ್ಜೀರಿಯಾ ಗಡಿ ವಿವಾದ; ಅಮೆರಿಕದಲ್ಲಿ ಬಿಳಿಯರು-ನೀಗ್ರೋಗಳ ಹೋರಾಟ! ರಷ್ಯದಲ್ಲಿ ಸ್ಟಾಲಿನ್‌ವಾದಿಗಳು ಮತ್ತು ಕ್ರುಶ್ಚೇವ್‌ವಾದಿಗಳ ನಡುವಣ ಹೋರಾಟ, ಕಟಾಂಗ್-ಲಿಯೋ ಪಾಲ್ಟ್ ಹೋರಾಟ, ಪಶ್ಚಿಮ ಇರಾನ್‌ನಲ್ಲಿ ಗಡಿ ಮತ್ತು ತ್ರಿಪುರಾ ಬಗ್ಗೆ ಘರ್ಷಣೆ; ಪೆರು ಅಪ್ರಾ-ಪೆರು ಮಿಲಿಟರಿ ಹೋರಾಟ; ಅರ್ಜೆಂಟೈನಾ ಮಿಲಿಟರಿ-ಅರ್ಜೆಂಟೈನಾ ಬೂರ್ಷ್ವಾಗಳ ನಡುವಣ ಹೋರಾಟ; ನವಾಜೊ ಪಿಯೋಟಿಸ್ಟರು-ಗುಡ್ಡಗಾಡು ಜನರ ನಡುವಣ ಹೋರಾಟ; ಕುಡ್‌ಡಿರಾಕ್ ಹೋರಾಟ; ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು-ನೀಗ್ರೋಗಳ ನಡುವಣ ಹೋರಾಟ; ಅಮೆರಿಕ ಸೆನಗಲ್-ರೆಡ್ ಮಾಲಿ ಗಡಿ ಹೋರಾಟ; ಘಾನ-ಟೋಂಗೊ ಗಡಿ ಹೋರಾಟ; ಕಾಂಡಾ ವಟ್ಲೂಯಿ-ಕಾಂಡ ಬಹೂಟು ಗುಡ್ಡಗಾಡು ಜನರ ಹೋರಾಟ; ಕೀನ್ಯಾ ಕಡು-ಕೀನ್ಯಾ ಕಾನಾಗಳ ಹೋರಾಟ; ಸೊಮಾಲಿ-ಇಥಿಯೋಪಿಯಾ ಕೀನ್ಯಾ-ಫ್ರೆಂಚ್ ಸೊಮಾಲಿ ಹೋರಾಟ; ಲಾಮಾಗಳು ಮತ್ತು ಚೀನಾ ಜಾತ್ಯತೀತ ಟಿಬೇಟಿಯನ್ನರ ಹೋರಾಟ; ಭಾರತ-ಬಂಗಾಳ-ತ್ರಿಪುರಾ ಗಡಿ ಘರ್ಷಣೆಗಳು; ಸಹಾರ ಬಗ್ಗೆ ಆಲ್ಜೀರಿಯಾ-ಮೊರಾಕೊ ನಡುವಣ ಹೋರಾಟ.

○

16

ನಮ್ಮ ಕಾಲದ ಶಾಂತಿ ಸಮಾಚಾರ

ನಾವಿಲ್ಲಿ ದುರ್ಭರ ಕಾಲವನ್ನು ಎದುರಿಸುತ್ತಿದ್ದೇವೆ. ಮನಸ್ಸಿಗೆ ಸಮಾಧಾನವಿಲ್ಲ. ವಾತಾವರಣದೊಂದಿಗೆ ಸಮಸ್ಯೆಗಳೂ ಉದ್ಭವಿಸುತ್ತಿವೆ; ವಿಶೇಷವಾಗಿ, ಕಾಶ್ಮೀರ, ನಮಗೆ ಭಾರಿ ತಲೆನೋವಾಗಿದೆ.

–ವಲ್ಲಭಭಾಯಿ ಪಟೇಲ್

ಜಿ.ಡಿ. ಬಿರ್ಲಾ ಅವರಿಗೆ, ಮೇ 1949.

I

ಚೈನಾ ಯುದ್ಧದಲ್ಲಿ ಸಾವಿರಾರು ಮಂದಿ ಭಾರತೀಯ ಸೈನಿಕರು ಮೃತರಾದರು ಅಥವಾ ಗಾಯಗೊಂಡರು. ಈ ಹಾನಿ, ನಷ್ಟಗಳ ಪಟ್ಟಿಯಲ್ಲಿ ಭಾರತೀಯ ಸೇನಾಪಡೆಯ ಮಹಾದಂಡನಾಯಕ ಜನರಲ್ ಪಿ.ಎನ್. ಥಾಪರ್ (ಅನಾರೋಗ್ಯದ ಕಾರಣಕೊಟ್ಟು ರಾಜೀನಾಮೆಯಿತ್ತರು); ವಿಫಲ ವ್ಯೂಹ ರಚನಾಕಾರ, ಚಿಂತಕ ಲೆಫ್ಟಿನೆಂಟ್ ಜನರಲ್ ಬಿ.ಎಂ. ಕೌಲ್ (ಅವಧಿಗೆ ಮುನ್ನ ನಿವೃತ್ತಿ); ಮತ್ತು ರಕ್ಷಣಾ ಸಚಿವ ವಿ.ಕೆ. ಕೃಷ್ಣ ಮೆನನ್ (ಸಂಪುಟದಿಂದ ವಜಾ) ಇವರುಗಳೂ ಸೇರುತ್ತಾರೆ. ಆದರೆ ತೀವ್ರ ಹಾನಿಯಾದದ್ದು ಜವಹರಲಾಲ್ ನೆಹರೂ ಅವರ ಕೀರ್ತಿ-ಪ್ರತಿಷ್ಠೆಗಳಿಗೆ. ನೆಹರೂ ಅವರ ಹದಿನೈದು ವರ್ಷಗಳ ಆಡಳಿತಾವಧಿಯ ಅತಿದೊಡ್ಡ ಪರಾಜಯ ಗಡಿ ಸಮರ. ತೀವ್ರಗಾಮಿ ಭೂಸುಧಾರಣೆ ಜಾರಿಗೆ ತರಲಾಗದ ಅಸಾಮರ್ಥ್ಯದಿಂದ ಗ್ರಾಮೀಣ ಬಡಜನತೆಗೆ ಹಾನಿಯಾಯಿತು; ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರದ ವಜಾದಿಂದ ಆ ರಾಜ್ಯದ ಜನರಲ್ಲಿ ಕೋಪತಾಪ ಉಂಟಾಯಿತು. ಇದೇ ರೀತಿ ಉಳಿದ ಜನಸಮುದಾಯಕ್ಕೂ ಸರ್ಕಾರದ ವಿರುದ್ಧ ಒಂದಲ್ಲ ಒಂದು ಕೋಪತಾಪ, ಕುಂದುಕೊರತೆಗಳಿದ್ದವು. ಆದರೆ ರಾಷ್ಟ್ರದ ಗಡಿ ರಕ್ಷಣೆಯಲ್ಲಿ

ಆದ ವೈಫಲ್ಯ ಇವೆಲ್ಲಕ್ಕಿಂತ ಮಿಗಿಲಾದದ್ದು, ಸಂಪೂರ್ಣವಾಗಿ ಭಿನ್ನವಾದ ವಿಷಯ. ಅಪರಿವರ್ತನೀಯವಾದ ಮಿಲಿಟರಿ ಪರಾಭವಗಳಂತೆ ಇದರಿಂದ ಇಡೀ ರಾಷ್ಟ್ರದ ತೇಜೋಭಂಗವಾಗಿತ್ತು.

ಕೃಷ್ಣ ಮೆನನ್ ಮತ್ತು ಸೇನೆಯ ಮೇಲಧಿಕಾರಿಗಳನ್ನು ಬಲಿಕೊಟ್ಟಾಗಿತ್ತು. ಆದಾಗ್ಯೂ, ಆಖೈರಾಗಿ ಇದಕ್ಕೆ ತಾವೇ ಹೊಣೆ ಎಂಬ ಪರಿತಾಪ ಆಳದಲ್ಲಿ ಪ್ರಧಾನಮಂತ್ರಿ ನೆಹರೂ ಅವರನ್ನು ಕಾಡುತ್ತಿತ್ತು. ಸಾಮಾನ್ಯ ಅರ್ಥದಲ್ಲಿ, ಒಂದು ಸರ್ಕಾರದ ಮುಖ್ಯಸ್ಥರಾಗಿ ಪ್ರಧಾನಿಯೇ ಹೊಣೆ ಎಂಬುದು ಸರಿಯೇ. ಆದರೆ ಒಂದು ನಿರ್ದಿಷ್ಟ ಅರ್ಥ, ವಿವೇಕ ಮತ್ತು ಸಂವೇದನಾಶೀಲತೆಗಳಲ್ಲಿ, ಚೀನದ ಬಗ್ಗೆ ನೀತಿ ಮತ್ತು ಧೋರಣೆಗಳನ್ನು ರೂಪಿಸಿ, ನಿರ್ದೇಶಿಸಿದ ಪ್ರಧಾನಮಂತ್ರಿಯಾಗಿ ನೆಹರೂ ಅವರ ಹೊಣೆ ಇನ್ನೂ ಹೆಚ್ಚಾಗಿತ್ತು.

ಆ ನೀತಿ-ಧೋರಣೆಗಳ ಬಗ್ಗೆ ಈಗ ಪುನರಾಲೋಚಿಸುವುದು ಅಗತ್ಯವಾಗಿತ್ತು. ಬಹಳ ಹಿಂದೆಯೇ ವಲ್ಲಭಭಾಯಿ ಪಟೇಲರು ಹೇಳಿದ್ದು ನಿಜ ಎಂಬುದು ನೆಹರೂ ಅವರಿಗೆ ಈಗ ಮನವರಿಕೆಯಾಗಿತ್ತು. ಚೀನದಲ್ಲಿ ಕಮ್ಯುನಿಸಂ ಎನ್ನುವುದು ಉಗ್ರರಾಷ್ಟ್ರೀಯತೆಯ ಸಮರ ರೂಪಿ ಮುಖವಾಗಿತ್ತು. ಗಡಿಯಿಂದಾಗಿ ಭಾರತ ಒಲ್ಲದ ಮನಸ್ಸಿನಿಂದಲೇ ಈಗ ಅಮೆರಿಕದತ್ತ ವಾಲಬೇಕಾಯಿತು. ರಷ್ಯ ತಟಸ್ಥವಾಗಿ ಉಳಿಯಿತು. ಅಮೆರಿಕ ಶಸ್ತ್ರಾಸ್ತ್ರ ಸರಬರಾಜು ಮಾಡಲು ಮುಂದೆ ಬಂದಿತ್ತು. ಇದರಲ್ಲಿ ಮುಖ್ಯ ಪಾತ್ರಧಾರಿ, ನವದೆಹಲಿಯಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಜಾನ್ ಕೆನೆಥ್ ಗಾಲ್‌ಬ್ರಿತ್ ಅವರು. ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಗಾಲಿಬ್ರಿತ್ ಮುಕ್ತ ಮಾರುಕಟ್ಟೆ ನೀತಿ ಬಗ್ಗೆ ಸಂಶಯ ಮನೋವೃತ್ತಿಯುಳ್ಳವರಾಗಿದ್ದರು. ಕಲಾ ಇತಿಹಾಸದ ವಿದ್ವಾಂಸರಾಗಿದ್ದ, ಭೋಜನಪ್ರಿಯರಾಗಿದ್ದ ಗಾಲ್‌ಬ್ರಿತ್ ಭಾರತೀಯರ ಕಣ್ಣಲ್ಲಿ ಅಮೆರಿಕದ ಒಬ್ಬ ವಿಶಿಷ್ಟ ಮಾದರಿಯ ವ್ಯಕ್ತಿಯಾಗಿದ್ದರು. (ಹುಟ್ಟಿನಿಂದ ಗಾಲ್‌ಬ್ರಿತ್ ಕೆನಡಾದವರು). ಪರಿಸ್ಥಿತಿ ಬದಲಾಗುತ್ತಿತ್ತು. ವಾಷಿಂಗ್ಟನ್ನಿನಲ್ಲಿ ಯುವಕ ಜಾನ್ ಎಫ್. ಕೆನೆಡಿ ಅಮೆರಿಕದ ಹೊಸ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದರು. ಮನೆಗೆ ಮಾರಿ ಪರರಿಗೆ ಉಪಕಾರಿ ಎನ್ನುವಂತೆ, ಅಮೆರಿಕ ಕುಟುಂಬ ಕ್ಷೇಮ ಅಲಕ್ಷಿಸಿ ಪ್ರಪಂಚದ ಗೌಡಿಕೆಯ ಅಹಂಕಾರ ಬೆಳೆಸಿಕೊಂಡಿದೆ ಎನ್ನುವ ಆರೋಪ ಹೊತ್ತ ಸರ್ಕಾರದ ವರ್ಚಸ್ಸನ್ನು ಆಮೂಲಾಗ್ರವಾಗಿ ಸುಧಾರಿಸುವುದು ಕೆನೆಡಿಯವರ ಅಪೇಕ್ಷೆಯಾಗಿತ್ತು. ಈ ಉದಾರ ರಾಜನೀತಿಯ ಗಾಳಿ ಗಾಲ್‌ಬ್ರಿತ್ ಅವರನ್ನು ದೆಹಲಿಗೆ ಹಾರಿಸಿಕೊಂಡು ಬಂದಿತ್ತು.

1961ರ ಏಪ್ರಿಲ್‌ನಲ್ಲಿ ಅಧಿಕಾರ ವಹಿಸಿಕೊಂಡ ಮುಹೂರ್ತದಿಂದಲೇ ಗಾಲ್‌ಬ್ರಿತ್ ಅವರು ನೆಹರೂ ಅವರೊಂದಿಗೆ ಸುವಿಖ್ಯಾತವಾಗಿ ಸಾಮರಸ್ಯ ಸಾಧಿಸಿದ್ದರು. ಅವರಿಬ್ಬರೂ ಸಾಹಿತ್ಯ, ಕಲೆ, ಸಂಗೀತ ಕುರಿತು ಚರ್ಚಿಸಿದರು. ಇದು ಒಂದು ರೀತಿಯಲ್ಲಿ, ಭಾರತದ ಪಾಲಿಗೆ ನಿತ್ಯದ ಜಂಜಾಟಗಳಿಂದ ವಿಮುಖಗೊಳಿಸಿದ ಚೇತೋಹಾರಿ ವಿಷಯಾಂತರವಾಯಿತು. ಅದೇ ರೀತಿ ಅಮೆರಿಕಕ್ಕೆ ತನ್ನ ಬಗ್ಗೆ ಇದ್ದ ಪೂರ್ವಾಗ್ರಹಗಳನ್ನು ಮೃದುಗೊಳಿಸಲು ದೊರೆತ

ಅವಕಾಶವಾಗಿತ್ತು ಈ ವಿಷಯಾಂತರ. 1962ರ ಮಾರ್ಚಿಯಲ್ಲಿ ಅಮೆರಿಕದ ಪ್ರಥಮ ಮಹಿಳೆ ಜಾಕ್ವೆಲಿನ್ ಕೆನಡಿ ಭಾರತದಾದ್ಯಂತ ಪ್ರವಾಸ ಕೈಗೊಂಡರು. ಜಾಕ್ವೆಲಿನ್, ತಾಜಮಹಲ್ ರಜಪೂತ ಕೋಟೆಗಳನ್ನು ನೋಡಿದರು, ಜೊತೆಗೆ ನೆಹರೂ ಜೊತೆ ವಿಸ್ತ್ರತ ಸಂಭಾಷಣೆಗಳನ್ನು ನಡೆಸಿದರು.

ನೆಹರೂ, ಜಾಕ್ವೆಲಿನ್‌ರ ಸೌಂದರ್ಯಕ್ಕೆ ಮರುಳಾಗಿದ್ದರು, ಅಂತೆಯೇ ರಾಯಭಾರ ಪ್ರತಿನಿಧಿಯ ಬುದ್ಧಿಶಕ್ತಿಯಿಂದಲೂ ಆಕರ್ಷಿತರಾಗಿದ್ದರು. ಚೈನಾದೊಂದಿಗೆ ಯುದ್ಧ ಸಂಭವಿಸದೇ ಇದ್ದಲ್ಲಿ ಅಮೆರಿಕದ ಬಗೆಗಿನ ಅನಾದರ ಒಲವಾಗಿ ರೂಪಾಂತರ ಹೊಂದುತ್ತಿರಲಿಲ್ಲ. ಚೈನಾದ ಮೊದಲ ಕಂತಿನ ದಾಳಿಯ ಅಲೆಗಳ ನಂತರ ಗಾಲ್‌ಬ್ರಿತ್ ನವೆಂಬರ್ 9ರಂದು ನೆಹರೂ ಅವರನ್ನು ಭೇಟಿಮಾಡಿದ್ದರು. ಆಗ ಅವರಿಗೆ ನೆಹರೂ "ಅತಿಯಾದ ಆಯಾಸದಿಂದ ಬಳಲಿದವರಂತೆ, ಸೋತು ದಣಿದವರಂತೆ" ಕಂಡರು. (ಈ ಭೇಟಿಯ ದಿನ ಅದಕ್ಕೆ ಮುಂಚೆ ನೆಹರೂ ಲೋಕಸಭೆಯಲ್ಲಿ ಚರ್ಚಿಲರಿಗಿಂತ ಭರ್ಜರಿಯಾದ ಭಾಷಣ ಮಾಡಿದ್ದರು.) ಶಸ್ತ್ರಾಸ್ತ್ರಕ್ಕಾಗಿ ಅಮೆರಿಕಕ್ಕೆ ಮನವಿ ಮಾಡಲಾಯಿತು. ಇದರ ಹಿಂದಿನ ಮಾನದ ಕಿಮ್ಮತ್ತನ್ನು ಹಣದಿಂದ ಅಳೆಯಲಾಗದು. ಏಕೆಂದರೆ, ಗಾಲ್‌ಬ್ರಿತ್ ಅವರು ಅಧ್ಯಕ್ಷ ಕೆನಡಿ ಅವರಿಗೆ ಬರೆದಂತೆ–

> *"ನೆಹರೂ ಅಮೆರಿಕ ಅಥವಾ ಯುನೈಟೆಡ್ ಕಿಂಗ್‌ಡಮ್‌ಗಳ ಅವಲಂಬನೆಯಿಂದ ದೂರವಿರಲು ಬಯಸುತ್ತಿದ್ದರು. ನೆರವು ಕೇಳಲು ಅವರಿಗೆ ವೈಯಕ್ತಿಕವಾಗಿ ಇಷ್ಟವಿರಲಿಲ್ಲ. ಇದಕ್ಕೆ ಈ ಪ್ರತಿಷ್ಠೆಯೇ ಕಾರಣ... ಆದರೆ ಈಗ ಅವರಿಗೆ ವೈಯಕ್ತಿಕವಾಗಿಯಾಗಲೀ, ರಾಜಕೀಯವಾಗಿಯಾಗಲೀ ಸ್ವಾತಂತ್ರ್ಯ ಕಾಪಾಡಿಕೊಳ್ಳುವುದಕ್ಕಿಂತ ಮುಖ್ಯವಾದದ್ದು, ಸೌಮ್ಯವಾದದ್ದು, ಹೆಚ್ಚಿನದು, ಮಿಗಿಲಾದದ್ದು ಬೇರಾವುದೂ ಇರಲಿಲ್ಲ. ಪುನರ್ ಹೊಂದಾಣಿಕೆಗೆ ಅವರ ವಯಸ್ಸು ಅಡ್ಡಿಯಾಗಿದೆ. ಪ್ರಕೃತ, ಈ ಹಂತದಲ್ಲಿ ನಾವು ಈ ವಿಷಯದಲ್ಲಿ ಉದಾರವಾಗಿರಬಹುದೆಂದು ನನಗನ್ನಿಸುತ್ತದೆ."*

ನವೆಂಬರ್ ಕೊನೆಯ ವೇಳೆಗೆ ಅಮೆರಿಕದಿಂದ ಶಸ್ತ್ರಾಸ್ತ್ರ ಬರಲು ಶುರುವಾಯಿತು. ವಿಮಾನಗಳಲ್ಲಿ ಶಸ್ತ್ರಾಸ್ತ್ರಗಳ ಸಮೇತ ಸಮವಸ್ತ್ರಧಾರಿ ಸೈನಿಕರೂ ಬಂದಿಳಿದರು. ಅಮೆರಿಕದ ಪತ್ರಕರ್ತನೊಬ್ಬ ಬರೆದಂತೆ, ಇದು "ನೆಹರೂ ಅವರ ಅಲಿಪ್ತ ನೀತಿಯ ಪತನದ" ಮುನ್ಸೂಚಿಯಾಗಿತ್ತು. ಅನೇಕರಿಗೆ, ಆ ಕಡುನೀಲಿ ಸಮವಸ್ತ್ರಗಳು ವಿಶೇಷ ಅರ್ಥದ ವಾಹಕಗಳಾಗಿದ್ದವು. ಅದು, ಒಂದೇ ಮಾತಿನಲ್ಲಿ ಹೇಳಬಹುದಾದರೆ "ವೈಫಲ್ಯ". ಆದರೆ ಅಮೆರಿಕ ರಾಯಭಾರಿಗೆ ಆ ಸಮವಸ್ತ್ರಗಳು "ಅವಕಾಶ" ಎಂಬ ಅರ್ಥವನ್ನೂ ಸೂಚಿಸುತ್ತಿದ್ದವು. ಇದು, ಸೋವಿಯತ್ ರಷ್ಯಕ್ಕಿಂತ ಹೆಚ್ಚಿನ ಬೆದರಿಕೆಗೆ ಕಾರಣವಾಗಬಹುದಾದ ಕಮ್ಯುನಿಸ್ಟ್ ಶಕ್ತಿಯೊಂದನ್ನು ನಿಗ್ರಹಿಸುವ ನಿಟ್ಟಿನಲ್ಲಿ ಪರಸ್ಪರ ಮೈತ್ರಿಯ ಪ್ರಾರಂಭಿಕ ಶಕುನವಾಗಿಯೂ ಕಂಡಿರಬಹುದು. ಗಾಲ್‌ಬ್ರಿತ್ ಅವರು ಅಧ್ಯಕ್ಷ ಕೆನೆಡಿಯವರಿಗೆ ಬರೆದಂತೆ:

"ಚೀನೀಯರು ರಷ್ಯದೊಂದಿಗೆ ಸೈದ್ಧಾಂತಿಕ ವಿಷಯಗಳ ಬಗ್ಗೆ ಪಾಂಡಿತ್ಯಪೂರ್ಣ ಚರ್ಚೆಯಲ್ಲಿ ತೊಡಗಿಲ್ಲ; ಅಥವಾ ಸೈದ್ಧಾಂತಿಕ ವಿಷಯಗಳಲ್ಲಿ ಜಗಳವಾಡುತ್ತಿಲ್ಲ. ಅವರಿಗೆ ತಮ್ಮ ಕ್ರಾಂತಿಯದೇ ದೊಡ್ಡ ಚಿಂತೆಯಾಗಿದೆ. ಅವರ ಸಹಜ ಅಪೇಕ್ಷೆಯೆಂದರೆ ತಮ್ಮ ಪ್ರಪಂಚದಲ್ಲೇ ವಿಸ್ತರಣೆ ಹೊಂದುವುದು. ಅವರ ಮಾರ್ಗದಲ್ಲಿ ಅಡ್ಡವಾಗಿರುವ ಏಕೈಕ ಏಷ್ಯಾ ರಾಷ್ಟ್ರವೆಂದರೆ ಭಾರತ. ಇದಕ್ಕೆ ಸರಿಸಮನಾಗಿ ಹೊಣೆಯಾಗಬಹುದಾದ ಏಕೈಕ ಪಾಶ್ಚಾತ್ಯ ರಾಷ್ಟ್ರವೆಂದರೆ ಅಮೆರಿಕ. ಎರಡು ರಾಷ್ಟ್ರಗಳ ನಡುವೆ ಒಂದು ಒಮ್ಮತ ಇರಬೇಕಾದ್ದು ಅತ್ಯಗತ್ಯವೆಂದು ನನ್ನ ಮನಸ್ಸಿಗೆ ಸ್ಪಷ್ಟವಾಗಿ ಕಾಣುತ್ತಿದೆ. ನಾವು ಭಾರತದ ರಾಜಕೀಯ ಪರಿಸ್ಥಿತಿಯನ್ನು, ಭೌಗೋಳಿಕ ಸ್ಥಾನವನ್ನು, ರಾಜಕೀಯ ಶಕ್ತಿ, ಮಾನವಶಕ್ತಿಗಳನ್ನು ಉಪಯೋಗ ಮಾಡಿಕೊಳ್ಳಬೇಕು ಅಥವಾ ಯಾವುದೇ ಸಂದರ್ಭದಲ್ಲಾದರೂ ಇದನ್ನು ನಾವು ಕೋರಿ ಪಡೆದುಕೊಳ್ಳಬೇಕು."

II

ಭಾರತದ ಮನವಿ ಮೇರೆ ಅಧ್ಯಕ್ಷ ಕೆನೆಡಿ, ಮೆಷಿನ್‌ಗನ್ನುಗಳಿಗೆ ಹತ್ತು ಲಕ್ಷ ಸುತ್ತು ಮದ್ದುಗುಂಡುಗಳನ್ನು, 40 ಸಾವಿರ ನೆಲಬಾಂಬುಗಳನ್ನು, 100,000 ಸಣ್ಣ ಫಿರಂಗಿಗಳನ್ನು ಮಂಜೂರು ಮಾಡಿದ್ದರು. ಆದರೆ, ಇದು ರಾಯಭಾರಿಗಳು ಶಿಫಾರಸು ಮಾಡಿದ್ದ ಮಹಾ ಮೈತ್ರಿಗೆ ಸರಿಸಾಟಿಯಾಗಿರಲಿಲ್ಲ. ಆದರೆ ಅಮೆರಿಕನ್ನರ ದೃಷ್ಟಿಯಲ್ಲಿ ನವದೆಹಲಿಯ ಯೋಗ್ಯತೆಗೆ ಮೀರಿದ ಕೊಡುಗೆ ಇದಾಗಿತ್ತು. ಸೆನೆಟ್ ಸಶಸ್ತ್ರ ಪಡೆಗಳ ಸಮಿತಿಯ ದೀರ್ಘಾವಧಿ ಅಧ್ಯಕ್ಷರಾಗಿದ್ದ ಜಾರ್ಜಿಯಾದ ಸೆನೆಟರ್ ರಿಚರ್ಡ್ ಬಿ. ರಸೆಲ್ ಭಾರತಕ್ಕೆ ಶಸ್ತ್ರಾಸ್ತ್ರ ಸರಬರಾಜಿಗೆ ಉಗ್ರ ವಿರೋಧಿಯಾಗಿದ್ದರು. ರಸೆಲ್, ಹಿಂದೊಮ್ಮೆ ಭಾರತವನ್ನು ನಂಬಿಕಸ್ಥ ಮಿತ್ರನಲ್ಲ ಎಂದು ಬಣ್ಣಿಸಿದ್ದರು ಹಾಗೂ ನೆಹರೂ ಅವರನ್ನು "ಒಬ್ಬ ಪುಡಾರಿ, ವಂಚಕ" ಎಂದು ಕರೆದಿದ್ದರು. ಈಗ ರಸೆಲ್ ಅವರು ಅಸೋಸಿಯೇಟೆಡ್ ಪ್ರೆಸ್‌ಗೆ ನೀಡಿದ ಸಂದರ್ಶನದಲ್ಲಿ, "ಭಾರತಕ್ಕೆ ಪೂರೈಸುವ ನಮ್ಮ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ವಾಸ್ತವಿಕವಾಗಿ ಚೀನಾದ ಕಮ್ಯುನಿಸ್ಟರಿಗೆ ನೀಡಿದಂತೆ ಆಗುತ್ತದೆ" ಎನ್ನುವ ಕಾರಣದಿಂದ ತಾವು ಇದನ್ನು ವಿರೋಧಿಸುತ್ತಿರುವುದಾಗಿ ತಿಳಿಸಿದ್ದರು.

"ಗಡಿಯ ಪರ್ವತ ಪ್ರದೇಶಗಳ ಮೇಲಿನ ತಮ್ಮ ಅಭೇದ್ಯ-ಅಜೇಯ ನಿಯಂತ್ರಣವನ್ನು ಬಿಟ್ಟುಕೊಟ್ಟು ಅಲ್ಲಿಂದ ಹೊರದೂಡಲ್ಪಟ್ಟಿರುವ, ತಲೆತಗ್ಗಿಸುವಂಥ ಸ್ಥಿತಿಯಲ್ಲಿರುವ ಭಾರತೀಯರು ಹೋರಾಡಲು ಅಸಮರ್ಥರಾಗಿರುವಂತೆಯೇ ಕಾಣುತ್ತಿದೆ. ಅವರಿಗೆ ನಾವು ಶಸ್ತ್ರಾಸ್ತ್ರ ಸರಬರಾಜು ಮಾಡಿದರೆ ಈ ಶಸ್ತ್ರಾಸ್ತ್ರಗಳು ಚೀನೀಯರ ಕೈ ಸೇರುತ್ತವೆ."

–ಎಂದು ರಸೆಲ್ ಖಂಡ ತುಂಡವಾಗಿ ಹೇಳಿದ್ದರು. ಭಾರತಕ್ಕೆ ಈಗ ಡಾಲರಿನ ಹತ್ತನೇ

ಒಂದು ಭಾಗದಷ್ಟು ಶಸ್ತ್ರಾಸ್ತ್ರ ಪೂರೈಸುವುದಕ್ಕೆ ಬದಲಾಗಿ, ಒಂದು ಕಾಲದ ಆಡಳಿತಗಾರರಾಗಿದ್ದ ಬ್ರಿಟಿಷರೇ ಮತ್ತೆ ಆ ರಾಷ್ಟ್ರದ ಮಿಲಿಟರಿ ಪಡೆಗಳ ತರಬೇತಿ ಮತ್ತು ಪುನರ್‌ವ್ಯವಸ್ಥೆಯ ಹೊಣೆ ಹೊತ್ತುಕೊಳ್ಳುವುದು ಉಚಿತವೆಂದು ತಾವು ಭಾವಿಸಿರುವುದಾಗಿ ರಸೆಲ್ ಅಭಿಪ್ರಾಯಪಟ್ಟಿದ್ದರು. 'ಬ್ರಿಟಿಷರು ಸಿದ್ಧವಿದ್ದರೆ' ಎನ್ನುವ ಒಂದು 'ರೆ' ಅಂಶವನ್ನೂ ಅವರು ಸೇರಿಸಿದ್ದರು.

ರಸೆಲ್ ಅವರ ಅಭಿಪ್ರಾಯಗಳನ್ನು ಭಾರತ ಮತ್ತು ಅಮೆರಿಕಗಳಲ್ಲಿ ವ್ಯಾಪಕವಾಗಿ ಪ್ರಚುರ ಪಡಿಸಲಾಯಿತು. ಈ ಪ್ರಚಾರದ, ಪತ್ರ ವ್ಯವಹಾರದ ಬಿರುಗಾಳಿ, ಭಾರತ-ಅಮೆರಿಕ ನಡುವಣ ಬಾಂಧವ್ಯಗಳನ್ನು ನೋಡಲು ಹೊಸದೊಂದು ದೃಷ್ಟಿಕೋನವನ್ನೇ ರೂಪಿಸಿತ್ತು. ಭಾರತ-ಅಮೆರಿಕ ಎರಡೂ ವಿಶಾಲವಾದ ರಾಷ್ಟ್ರಗಳು, ವೈವಿಧ್ಯಮಯ ಸಂಸ್ಕೃತಿಯನ್ನುಳ್ಳ ಪ್ರಜಾಪ್ರಭುತ್ವಗಳು. ಆದ್ದರಿಂದ ಈ ಎರಡು ರಾಷ್ಟಗಳ ನಡುವಣ ಮೈತ್ರಿ ನಿರೀಕ್ಷಿತವೇ ಎಂಬುದು ಒಂದು ದೃಷ್ಟಿಕೋನವಾಗಿತ್ತು. ಆದರೆ ಪರಸ್ಪರ ಅಪನಂಬಿಕೆಯ ಮೋಡಗಳು ಈ ಎರಡು ರಾಷ್ಟ್ರಗಳ ನಡುವಣ ಬಾಂಧವ್ಯವನ್ನು ಕವಿದಿದ್ದವು. ಈ ಅಪನಂಬಿಕೆಗೆ ಒಂದು ನಿಟ್ಟಿನಿಂದ ಭಾರತದ ಅಲಿಪ್ತ ನೀತಿ ಕಾರಣವಾದರೆ, ಅಮೆರಿಕ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು, ಮಿಲಿಟರಿ ನೆರವು ನೀಡುತ್ತಿದ್ದುದು ಮತ್ತೊಂದು ಕಾರಣವಾಗಿತ್ತು. ಈ ಎರಡೂ ರಾಷ್ಟ್ರಗಳು ಉಪದೇಶ ಕೊಡುವ ರಾಷ್ಟ್ರಗಳಾಗಿದ್ದವು. ಇವರ ವಿದೇಶಾಂಗ ನೀತಿ ಮತ್ತು ರಾಜತಾಂತ್ರಿಕತೆ ನಯನಾಜೂಕು, ಭಟ್ಟಂಗಿತನಗಳಿಂದ, ಮಿತಿಮೀರಿದ ಭಾವನೆಗಳಿಂದ ಕೂಡಿದ್ದವು. ಇಂಥದೊಂದು ಸನ್ನಿವೇಶದಲ್ಲಿ ಪ್ರಜಾಸತ್ತಾತ್ಮಕ ಆದರ್ಶಗಳು ಎರಡೂ ರಾಷ್ಟ್ರಗಳನ್ನು ಹತ್ತಿರಕ್ಕೆ ತಂದರೆ, ಒಣಪ್ರತಿಷ್ಠೆ ಮತ್ತು ದೇಶಭಕ್ತಿ, ರಾಷ್ಟ್ರಾಭಿಮಾನಗಳು ಎರಡನ್ನೂ ಮತ್ತಷ್ಟು ದೂರ ಸರಿಸುತ್ತಿದ್ದವು.

ಕೆನೆಡಿ ಮತ್ತು ಗಾಲ್‌ಬ್ರಿತ್ ರಸೆಲ್ಲರ ನಿಲುವನ್ನು ಖಂಡಿಸಿರಬಹುದು. ಮಧ್ಯೆ ಅಮೆರಿಕದ ಉದ್ದಗಲ ಅವರನ್ನು ಬೆಂಬಲಿಸಲಾಗಿತ್ತು. ಕಾನ್ಸಾನ್ ವಿಚಿಟಾದಿಂದ ಬಾತ್ಮೀದಾರನೊಬ್ಬ ರಾಷ್ಟ್ರವನ್ನು ಎಚ್ಚರಿಸಿದ್ದಕ್ಕಾಗಿ ಸೆನೆಟರ್ ರಸೆಲ್ಲರಿಗೆ ವಂದನೆ ಸಲ್ಲಿಸಿ ಈ ರೀತಿ ಬರೆದಿದ್ದ: "ನಮ್ಮ ಹಣ, ನಮ್ಮ ನೆರವು ಪಡೆದುಕೊಂಡು ನಂತರ ಪ್ರತಿ ಹಂತ-ತಿರುವುಗಳಲ್ಲೂ ನಮ್ಮನ್ನು ತೆಗಳುವ, ಅಮೆರಿಕದ ಬಗ್ಗೆ ಏನೇನೂ ಆಸಕ್ತಿ ತೋರದ ದೇಶದ ಕಾಲುಕಸ ಆಗುವುದು ಬಹಳ ಅಪಾಯಕಾರಿ". ಕ್ಯಾಲಿಫೋರ್ನಿಯಾದ ಲೂಮಿಸ್‌ನ ಮಹಿಳೆಯೊಬ್ಬಳು, "ಕಮ್ಯುನಿಸ್ಟ್‌ಪರ ವಂಚಕರಾದ, ರಾಜಕೀಯ ನಟ ನೆಹರೂ ಮತ್ತು ಅವನ ಕಮ್ಯುನಿಸ್ಟ್ ಮಂತ್ರಿ ಮಂಡಲವಿರುವ ಆದೇಶಕ್ಕೆ ಏನನ್ನೂ ಕಳುಹಿಸಬಾರದು" ಎಂದು ಅಭಿಪ್ರಾಯಪಟ್ಟಿದ್ದಳು. ಫ್ಲಾರಿಡಾದ ಪ್ಲಾಂಟೇಶನ್‌ನ ಒಬ್ಬ ವ್ಯಕ್ತಿಯ ಪ್ರಕಾರ, "ಭಾರತದ ತೊಂದರೆ-ತಾಪತ್ರಯಗಳೆಲ್ಲವೂ ಸ್ವಯಂಕೃತ ಅಪರಾಧವಾಗಿತ್ತು"-ಹಾಗೂ ವಿಶ್ವದಾದ್ಯಂತ ಕಮ್ಯುನಿಸ್ಟರು ಲಕ್ಷಾಂತರ ಜನರನ್ನು ನುಂಗಿ ನೊಣೆದಿದ್ದರೂ ಅದು ಅನುಸರಿಸುತ್ತಿರುವ ಅಲಿಪ್ತ ನೀತಿಯ ಫಲವಾಗಿತ್ತು. ಸೌತ್ ಸ್ಯಾನ್ ಗೇಬ್ರಿಯಲ್‌ನ ಎಂಬತ್ತು ವರ್ಷದ ವಯೋವೃದ್ಧ

ಡೆಮೊಕ್ರಾಟ್ ಸದಸ್ಯನೊಬ್ಬ ರಸೆಲ್ಲರ ನಿಲುವನ್ನು ಸಮರ್ಥಿಸಿ ಹೀಗೆ ಅಭಿಪ್ರಾಯಪಟ್ಟಿದ್ದ: "ಅಜ್ಞಾನಿಗಳೂ ಹಸಿದವರೂ ಆದ ನಾಲ್ಕು ನೂರು ದಶಲಕ್ಷ ಭಾರತೀಯರ ಉದ್ಧಾರಕ್ಕಾಗಿ ತೆರಿಗೆದಾರರ ಮೇಲೆ ಹೊರೆ ಹೇರುತ್ತಿರುವುದು ಆಕ್ಷೇಪಾರ್ಹವಾದದ್ದು. ನೆಹರೂ ಸೇರಿದಂತೆ ಇತರ ನಾಯಕರು ಕಮ್ಯುನಿಸ್ಟರ ಪರ ಇದ್ದು ನಮ್ಮ ರೀತಿಯ ಸರ್ಕಾರದ ವಿರೋಧಿಗಳಾಗಿದ್ದಾರೆ. ಇನ್ನೂ ನೆಹರೂ ಆ ಅಲಿಪ್ತ ನೀತಿ...ಭಾರತ ತನ್ನ ಮೂಢನಂಬಿಕೆಗಳ ಮತ್ತು ಅಜ್ಞಾನದ ಫಲವನ್ನು ಉಣ್ಣಲು ಬಿಡುವಂತೆ ಆ ರಾಷ್ಟ್ರಕ್ಕೆ ಬುದ್ಧಿ ಕಲಿಸಬೇಕು".

ತಮ್ಮ ದೇಶ ಬಾಂಧವರಿಂದ ಡಜನ್‌ಗಟ್ಟಳೆ ಅಭಿನಂದನೆಗಳನ್ನು ಗಳಿಸಿದ ಸೆನೆಟರ್ ರಸೆಲ್ ಅವರಿಗೆ ಭಿನ್ನಮತ ವ್ಯಕ್ತವಾದದ್ದು ಒಬ್ಬರೇ ಒಬ್ಬರಿಂದ. ಅದು ಮದ್ರಾಸಿನಲ್ಲಿ ನೆಲೆಸಿದ್ದ ಫುಲ್‌ಬ್ರೈಟ್ ವಿದ್ವಾಂಸನೊಬ್ಬ ಬರೆದ ಪತ್ರವಾಗಿತ್ತು. "ಭಾರತಕ್ಕೆ ಶಸ್ತ್ರಾಸ್ತ್ರ ನಿರಾಕರಿಸಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಸುವ ನೀತಿಯನ್ನು ಅಮೆರಿಕ ತ್ಯಜಿಸಲು ಇದು ಸಕಾಲ. ಭಾರತದಲ್ಲಿ ಜನಸಮುದಾಯದ ಪ್ರಜಾಪ್ರಭುತ್ವ ಇದೆ. ಪಾಕಿಸ್ತಾನದಲ್ಲಿ ನಿರಂಕುಶ ಸರ್ವಾಧಿಕಾರವಿದೆ. ಭಾರತ ವಿರೋಧಿ ಭಾವನೆಯ ಏಕೈಕ ಕಾರಣದಿಂದ ಈ ನಿರಂಕುಶ ಪ್ರಭುತ್ವ ಅಲ್ಲಿ ಉಳಿದು ಬಂದಿದೆ. ಅಲ್ಲದೆ, ಭಾರತದ ಪಡೆಗಳು ಶತ್ರುವನ್ನು ಎದುರಿಸಲಾಗದೆ ಕಾಲಿಗೆ ಬುದ್ಧಿ ಹೇಳಿದವು ಎನ್ನುವುದು ಸತ್ಯವಲ್ಲ. ಅವರು ವೀರಾವೇಶದಿಂದ ಹೋರಾಡಿದ್ದಾರೆ. ಇನ್ನೂ ಉತ್ತಮ ಶಸ್ತ್ರಾಸ್ತ್ರಗಳಿದ್ದಲ್ಲಿ ಅವರು ತಮ್ಮ ನೆಲೆಗಳನ್ನು ರಕ್ಷಿಸಿಕೊಳ್ಳುತ್ತಿದ್ದರು. ಈಗ ಭಾರತದಲ್ಲಿ ಸೈನ್ಯಕ್ಕೆ ಭರ್ತಿಯಾಗುತ್ತಿದೆ. ಸೈನ್ಯ ಪಡೆಗಳ ಬಲವರ್ಧನೆಯಾಗಲಿದೆ. ನಮ್ಮ ಹಿತದೃಷ್ಟಿಯಿಂದಲೇ ಭಾರತಕ್ಕೆ ಸೂಕ್ತ ಶಸ್ತ್ರಾಸ್ತ್ರ ನೀಡುವುದು ಒಳ್ಳೆಯದಾಗುತ್ತದೆ".

ಇವಲ್ಲದೆ ಭಾರತೀಯರೂ ಸೆನೆಟರ್ ರಸೆಲ್‌ಗೆ ಪತ್ರಗಳನ್ನು ಬರೆದಿದ್ದರು. ಸಹಜವಾಗಿಯೇ ಈ ಪತ್ರಗಳು ಕೋಪ ತಾಪಗಳ, ಪ್ರತಿಭಟನೆಗಳ ಪತ್ರಗಳಾಗಿದ್ದವು. ಮುಂಬಯಿಯ ಪತ್ರಕರ್ತನೊಬ್ಬನ ಪ್ರಕಾರ ನೆಹರೂಗೆ ಚೀನೀಯರ ಉದ್ದೇಶಗಳ ಬಗ್ಗೆ ಸ್ಪಷ್ಟ ಕಲ್ಪನೆ ಇರಲಿಲ್ಲ. ಅವರ ಆಲೋಚನೆಗಳು ಗೊಂದಲಮಯವಾಗಿದ್ದವು. ಈ ಅಭಿಪ್ರಾಯ ಹೊಂದಿದ್ದೂ ಈ ಪತ್ರಕರ್ತ, "ಧೈರ್ಯ ಮತ್ತು ಉಲ್ಲಂಘನೆಗಳು ಬಿಳಿಯರ ಏಕಸ್ವಾಮ್ಯ ಗುಣಗಳು" ಎನ್ನುವ ರಸೆಲ್ಲರ ಹೀನಾಯ ನುಡಿಗಳನ್ನು ಖಂಡಿಸಿದ್ದ. "ಕೆಚ್ಚೆದೆ ಮತ್ತು ಧೈರ್ಯಶೌರ್ಯಗಳಲ್ಲಿ ಭಾರತದ ಸೈನಿಕರು ಅಮೆರಿಕದ ಸಶಸ್ತ್ರ ಪಡೆಗಳ ಸೈನಿಕರಿಗಿಂತ ಯಾವ ರೀತಿಯಲ್ಲೂ ಕಡಿಮೆಯಲ್ಲ, ಅವರಿಗೆ ಸರಿಸಮ ನಿಲ್ಲುತ್ತಾರೆ. ಎರಡು ವಿಶ್ವಸಮರಗಳಲ್ಲಿ ಭಾರತೀಯ ಯೋಧರ ಕೆಚ್ಚೆದೆ-ಧೈರ್ಯಸಾಹಸಗಳು ಪ್ರಕಟಗೊಂಡಿವೆ. ಆದರೆ ಈ ಸರ್ತಿ ಯುದ್ಧ ಯಂತ್ರ ಸುವ್ಯವಸ್ಥಿತವಾಗಿರಲಿಲ್ಲ (ಮೆನನ್ನರಿಗೆ ಧನ್ಯವಾದ), ವಿಮಾನ ಪಡೆಯ ಬೆಂಬಲವಿಲ್ಲದೆಯೂ, ಸ್ವಯಂ ಚಾಲಿತ ರೈಫಲ್‌ಗಳಿಲ್ಲದೆಯೂ, ಹೊಟ್ಟೆಗೆ ಅನ್ನವಿಲ್ಲದೆಯೂ, 'ಬಾಬ್ ಹೋಪನ' ಉಲ್ಲಾಸ ಮನರಂಜನೆಗಳಿಲ್ಲದೆಯೂ ನಮ್ಮ ವೀರಯೋಧರು ಹೋರಾಡಿದ್ದಾರೆ" ಎಂಬುದು ಪತ್ರಕರ್ತನ ವಿಶ್ಲೇಷಣೆಯಾಗಿತ್ತು.

ರಸೆಲ್‌ನ ಪಿತ್ತವಿಕಾರಕ್ಕೆ ಕಾದಂಬರಿಕಾರರೂ, ಚಲನಚಿತ್ರ ಸಾಹಿತಿಗಳೂ ಆದ ಖ್ವಾಜ ಅಹಮದ್ ಅಬ್ಬಾಸ್ ಅವರು ಸರಿಯಾಗಿ ತಿರುಗೇಟು ನೀಡಿದ್ದರು. ಭಾರತದ ಬಗ್ಗೆ

ಪಾಶ್ಚಾತ್ಯರ ಮೂರ್ಖತನದ ಟೀಕೆ ಟಿಪ್ಪಣಿಗಳಿಗೆ ಸುದೀರ್ಘ ಇತಿಹಾಸವಿದೆ ಎಂದು ಬರೆದ ಅಬ್ಬಾಸರು, ರಸೆಲ್ಲರು ಸಂದರ್ಶನದಲ್ಲಿ "ಅನಗತ್ಯವಾದ ಸುಳ್ಳು ಮಾತುಗಳನ್ನಾಡಿ, ಮಿಥ್ಯಾಪವಾದ ಹೊರಿಸಿ ಶುದ್ಧಾಂಗವಾದ ಕೇಡಿಗತನದಿಂದ ಸಂಭ್ರಮಿಸಿದ್ದಾರೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಅವರ ಸಂದರ್ಶನದ ಸಂತೋಷ-ಮೆರೆತಗಳನ್ನು ಎತ್ತಿ ಹೇಳುತ್ತಲೇ ಅಬ್ಬಾಸ್ "ರಸೆಲ್ ಮಹಾಶಯರೆ, ಮಿಲಿಟರಿ ಪರಾಜಯಗಳ ತಲೆ ತಗ್ಗಿಸುವಂಥ ನಿದರ್ಶನಗಳ ಪ್ರದರ್ಶನಕ್ಕೆ ನಿಮ್ಮಲ್ಲೇ ಸಾಕಷ್ಟು ಉದಾಹರಣೆಗಳಿಲ್ಲವೆ? ಕೊರಿಯಾ ಯುದ್ಧದಲ್ಲಿ ಪರ್ಲ್ ಹಾರ್ಬರ್‌ನಲ್ಲಿ ನಿಮ್ಮ ಪಡೆಗಳ ಪ್ರಾರಂಭಿಕ ಹಿನ್ನೆಡೆ ಇನ್ನೇನು ಹೇಳಿ?" ಎಂದು ಚುಚ್ಚಿದ್ದರು. ಅಬ್ಬಾಸರು ತಮ್ಮ ಪ್ರತ್ಯುತ್ತರ ಲೇಖನದಲ್ಲಿ, ಜನರಲ್ ಐಸೆನ್ ಹೋವರ್ ಅವರು ಭಾರತೀಯ ಸೈನಿಕರ ಶೌರ್ಯ ಸಾಹಸಗಳನ್ನು ಮೆಚ್ಚಿಕೊಂಡಿದ್ದನ್ನು ನೆನಪಿಸಿದ್ದರು. ಭಾರತೀಯ ಸೈನಿಕರು ಎಲ್ ಅಲಮಿನ್‌ನಲ್ಲಿ ರೊಮೆಲ್ಲರನ್ನು* ಭಂಗಗೊಳಿಸಿದ್ದನ್ನು, ಯುರೋಪ್ ಮತ್ತು ಆಫ್ರಿಕಾಗಳಲ್ಲಿ ಹೋರಾಟ ಮಾಡಿದ್ದನ್ನು, ಸೆನೆಟರ್ ರಸೆಲ್ ಮತ್ತು ಅವರ "ಮುಕ್ತ ಪ್ರಪಂಚವನ್ನು" ಹಿಟ್ಲರ್ ಪಿಡುಗಿನಿಂದ ಪಾರು ಮಾಡಿದ್ದನ್ನು ಜ್ಞಾಪಿಸಿದ್ದರು.

ಸೆನೆಟರ್ ರಸೆಲ್ಲರ ಟೀಕೆಗಳು 1962ರವರೆಗಿನ ಮತ್ತು ಅನಂತರದ ಭಾರತ-ಅಮೆರಿಕ ನಡುವಣ ಪರಸ್ಪರ ತಪ್ಪು ಕಲ್ಪನೆಗಳೆಲ್ಲವೂ ಬಹಿರಂಗಗೊಳ್ಳಲು ಮೀಟುಗೋಲಾದವು. ಈ ತಪ್ಪು ಕಲ್ಪನೆಗಳ ಹಿಂದೆ, ತಪ್ಪು ಅಭಿಪ್ರಾಯಗಳ ಹಿಂದೆ ವಿದೇಶಾಂಗ ನೀತಿ ಮತ್ತು ರಾಷ್ಟ್ರೀಯ ಹಿತಾಸ್ತಕಿಗಳ ಬಗೆಗಿನ ವಿಭಿನ್ನ ಪರಿಕಲ್ಪನೆಗಳಿದ್ದವು. ಜೊತೆಗೆ ಸಾಂಸ್ಕೃತಿಕ ಅನ್ಯೋನ್ಯತೆಯ ಅಭಾವವೂ ತಪ್ಪು ಕಲ್ಪನೆಗಳಿಗೆ ಕಾರಣವಾಗಿತ್ತು. ಎರಡೂ ರಾಷ್ಟ್ರಗಳ ಜನತೆ ಊಟ ತಿಂಡಿ, ವೇಷಭೂಷಣ, ಸಂಗೀತ, ಇತ್ಯಾದಿ ಎಲ್ಲದರಲ್ಲೂ ವಿಭಿನ್ನರಾಗಿದ್ದರು. ಇಬ್ಬರ ಜೀವನ ಶೈಲಿ ವಿಭಿನ್ನವಾಗಿತ್ತು. ಜಾಕ್ಸನ್ ವಿಲ್ಲೆಯ ಅಭಿಮಾನಿಯೊಬ್ಬ ಸೆನೆಟರ್ ರಸೆಲ್ಲರಿಗೆ ಬರೆದಂತೆ-

> *"ಈ ನೆಹರೂ ತಾಂತ್ರಿಕವಾಗಿ ನೋಡಿದರೆ ಕಕೇಶಿಯನ್ನರಂತೆ, ಆದರೆ ರಾಜಕೀಯವಾಗಿ ಹಾಗಲ್ಲ. ತಲೆ ಕೆಳಗು ಮಾಡಿ ನಿಂತ ವ್ಯಕ್ತಿಯೊಬ್ಬನ ಜೊತೆ 'ಮನಸ್ಸುಗಳ ಸಮಾಗಮ' ಹೇಗೆ ಸಾಧ್ಯವಾದೀತು?"*

ಇಲ್ಲಿ 'ತಲೆ ಕೆಳಗು' ಧ್ವನಿಸುತ್ತಿರುವುದು ನೆಹರೂ ಅವರ ಶೀರ್ಷಾಸನವನ್ನು. ಯೋಗದ ಬಗ್ಗೆ ನೆಹರೂ ಅವರಿಗಿದ್ದ ಪ್ರೀತಿಯನ್ನು ಈ ಅಭಿಮಾನಿ ಪ್ರಸ್ತಾಪಿಸಿದ್ದ. ಈ ಯೋಗ ಚಿಕಿತ್ಸೆ ಅಮೆರಿಕದ ಜೀವನಶೈಲಿಗೆ ಸಂಪೂರ್ಣವಾಗಿ ಅಪರಿಚಿತವಾದದ್ದು.

III

ಚೀನಾದಿಂದ ಆದ ಪರಾಭವದಿಂದಾಗಿ ಪ್ರಧಾನಮಂತ್ರಿಯವರಿಗೆ ಅಂತರರಾಷ್ಟ್ರೀಯ ರಂಗದಲ್ಲೂ ಸ್ವಲ್ಪ ಮುಖಭಂಗವಾಗಿತ್ತು. ಸ್ವದೇಶದಲ್ಲೂ ಅವರ ಸ್ಥಾನಮಾನಕ್ಕೆ ಮುಕ್ಕಾಗಿತ್ತು.

---

* ಎಲ್ ಅಲಮಿನ್ - ಈಜಿಪ್ಟ್‌ನಿಂದ ಉತ್ತರ ಕರಾವಳಿಯ ನಗರ. ರೊಮೆಲ್-ಎರಡನೆ ಮಹಾಯುದ್ಧದ ಜರ್ಮನ್ ದಂಡನಾಯಕ

ನೆಹರೂ ನಾಯಕತ್ವದ ಬಗ್ಗೆ ಕರ್ಣಕಠೋರವಾದ ಟೀಕೆಗಳು ಕೇಳಿ ಬಂದವು. 1963ರಲ್ಲಿ ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಸರಣಿ ಸೋಲುಗಳನ್ನು ಅನುಭವಿಸಿತು. ಈ ಮಹತ್ವದ ಉಪಚುನಾವಣೆಗಳಲ್ಲಿ ವಿರೋಧ ಪಕ್ಷಗಳ ಕಟ್ಟಾಳುಗಳಾದ ಮೀನೂ ಮಸಾನಿ, ಜೆ.ಬಿ. ಕೃಪಲಾನಿ ಮತ್ತು ರಾಮ ಮನೋಹರ ಲೋಹಿಯಾ ಲೋಕಸಭೆಗೆ ಆಯ್ಕೆ ಹೊಂದಿದರು.

1963ರ ಜೂನ್ ತಿಂಗಳಲ್ಲಿ ನೆಹರೂ ಅನೇಕ ತಿಂಗಳುಗಳ ನಂತರ ಪತ್ರಿಕಾಗೋಷ್ಠಿ ನಡೆಸಿದರು. ಪತ್ರಿಕಾಗೋಷ್ಠಿ ಸುಮಾರು ತೊಂಬತ್ತು ನಿಮಿಷಗಳ ಕಾಲ ನಡೆಯಿತು. ಚೀನಾ ಬಗ್ಗೆ ನೆಹರೂ ಕೋಪತಾಪಗಳು ಸ್ಪಷ್ಟವಾಗಿ ವ್ಯಕ್ತಗೊಂಡದ್ದು ಈ ಪತ್ರಿಕಾಗೋಷ್ಠಿಯ ವಿಶೇಷವಾಗಿತ್ತು. ಪೀಕಿಂಗ್‌ನಿಂದ ಸುಳ್ಳಿನ ಕರಾಳ ಪ್ರವಾಹ ಹರಿದಿದೆಯೆಂದೂ ವಿಷಕಾರುವುದರಲ್ಲಿ ಚೀನೀಯರು ವಿಕ್ರಮ ಸ್ಥಾಪಿಸಿದ್ದಾರೆಂದೂ ನೆಹರೂ ಆಕ್ರೋಶ ವ್ಯಕ್ತಪಡಿಸಿದ್ದರು. ಯುದ್ಧ ಮತ್ತು ಭಾರತದ ಪರಾಜಯವನ್ನು ವಿವರಿಸಿದ ನೆಹರೂ "ಚೀನೀಯರು ಸರ್ವದಾ ಮಿಲಿಟರಿ ಪ್ರಜ್ಞಾವಂತ ರಾಷ್ಟ್ರವಾಗಿದ್ದು ಯಾವಾಗಲೂ ಮಿಲಿಟರಿ ರಸ್ತೆ ಮೊದಲಾದ ಸಿದ್ಧತೆಯಲ್ಲೇ ತೊಡಗಿರುತ್ತಾರೆ. ಅಲ್ಲಿ ಈಗಿರುವ ಆಡಳಿತ ತನ್ನ ಅಧಿಕಾರಾವಧಿಯ ಪ್ರಾರಂಭದಿಂದಲೂ ಮಿಲಿಟರಿ ವ್ಯವಸ್ಥೆಯನ್ನು ಬಲಗೊಳಿಸುವುದರಲ್ಲೇ ಮಗ್ನವಾಗಿತ್ತು. ನಿಜವಾಗಿ ಹೇಳುವುದಾದರೆ ಅದು ಪೂರ್ವಕಾಲದ ಅಂತರ್ಯುದ್ಧಗಳ ಮುಂದುವರಿಕೆಯೇ ಆಗಿದೆ. ಎಂದೇ ಅವರು ಸಹಜವಾಗಿಯೇ ಸಬಲರಾಗಿದ್ದಾರೆ" ಎಂದು ನುಡಿದಿದ್ದರು.

ವೈಯಕ್ತಿಕವಾಗಿ ತಮ್ಮ ಮೇಲೆ ವಾಗ್ದಾಳಿ ನಡೆಸುವುದರಲ್ಲಿ ಚೈನಾ ನಮ್ಮ ವಿರೋಧಿ ನಾಯಕರುಗಳೊಂದಿಗೆ ಕೆಲವು ಸಮಾನ ಗುಣಗಳನ್ನು ಹೊಂದಿರುವಂತಿದೆ ಎಂದೂ ನೆಹರೂ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದ್ದರು. ಜೊತೆಗೆ, "ನಮ್ಮ ವಿರೋಧ ಪಕ್ಷಗಳ ನಾಯಕರುಗಳ ಬಗ್ಗೆ ಹೇಳುವುದಾದರೆ, ಯಾವುದೇ ತತ್ವ ಆದರ್ಶಗಳನ್ನೂ ಲೆಕ್ಕಿಸದೆ ಯಾವಾಗ ಯಾರ ಜೊತೆ ಬೇಕಾದರೂ ಸೇರಿಕೊಳ್ಳುವುದು ಅವರಿಗೆ ರೂಢಿಯಾಗಿಬಿಟ್ಟಿದೆ. ಕೆಲವರು ಟೀಕಿಸುವ ಉದ್ದೇಶಕ್ಕಾಗಿಯೇ ಚೀನೀಯರ ಜೊತೆ ಸೇರಿಕೊಳ್ಳುವ ಕಾಲವೂ ಬರಬಹುದು" ಎಂಬ ಅನಪೇಕ್ಷಿತ ನುಡಿಗಳನ್ನೂ ಆಡಿದ್ದರು.

ಕೆಲವೇ ದಿನಗಳಲ್ಲಿ ವಿರೋಧಪಕ್ಷಗಳವರು ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಲು ವಿಧ್ಯುಕ್ತವಾಗಿ ಒಂದುಗೂಡಿದರು. 1947ರಿಂದ 1962ರ ನವೆಂಬರ್‌ವರೆಗಿನ ಅವಧಿಯಲ್ಲಿ ಅನೂಹ್ಯವಾಗಿದ್ದ ಕ್ರಮ ಇದಾಗಿತ್ತು. ಅವಿಶ್ವಾಸ ನಿರ್ಣಯ ಸೋಲಿಸಲು ಅಗತ್ಯವಾದ ಸಂಖ್ಯಾ ಬಲ ಕಾಂಗ್ರೆಸ್ ಪಕ್ಷಕ್ಕಿತ್ತು. ಅವಿಶ್ವಾಸ ನಿರ್ಣಯದ ಮೇಲೆ ನಾಲ್ಕು ದಿನ ಚರ್ಚೆ ನಡೆಯಿತು. ಚರ್ಚೆಯಲ್ಲಿ ಪ್ರಧಾನಮಂತ್ರಿ, ಅವರ ಪಕ್ಷ ಹಾಗೂ ಸರ್ಕಾರದ ವಿರುದ್ಧ ಮಹತ್ತರವಾದ ಟೀಕೆಗಳನ್ನು ಮಾಡಲಾಯಿತು. ಪ್ರಬಲವಾದ ಮಾತಿನ ಪೆಟ್ಟುಗಳು ಬಿದ್ದವು.

ಸಂಸತ್ತಿನ ಒಳಗೆ ಮತ್ತು ಹೊರಗೆ ಕೇಳಿಬಂದ ಕಟುಟೀಕೆ, ವಿಮರ್ಶೆಗಳು ಕಾಂಗ್ರೆಸ್ ಪಕ್ಷದೊಳಗೆ ಗಂಭೀರವಾದ ಪುನರಾಲೋಚನೆಗೆ ಎಡೆಮಾಡಿಕೊಟ್ಟವು. ಹದಿನೈದು ವರ್ಷಗಳ ಅಧಿಕಾರ ಪಕ್ಷದಲ್ಲಿ ಸಂತೃಪ್ತ ಮನೋಭಾವವನ್ನುಂಟು ಮಾಡಿತ್ತು, ಪಕ್ಷ ವಾಸ್ತವ ನೆಲಗಟ್ಟಿನ, ತಳಮಟ್ಟದ ಆಗು-ಹೋಗುಗಳಿಂದ ಸ್ವಲ್ಪ ಮಟ್ಟಿಗೆ ದೂರವಾಗಿತ್ತು. ಸಂಪರ್ಕ ಕಳೆದುಕೊಳ್ಳಲಾರಂಭಿಸಿತ್ತು. ಇದು ಇತ್ತೀಚಿನ ಉಪಚುನಾವಣೆಗಳಿಂದ ಹಾಗೂ ಡಿಎಂಕೆ ಯಂಥ ಪ್ರದೇಶ ಪಕ್ಷಗಳ ಬಲವರ್ಧನೆಯಿಂದ ಸಾಬೀತಾಗಿತ್ತು. ಮದರಾಸಿನ ಮುಖ್ಯಮಂತ್ರಿ ಕೆ. ಕಾಮರಾಜರಿಗೆ ಡಿಎಂಕೆ ಬೆದರಿಕೆಯಾಗಿ ಪರಿಣಮಿಸಿತ್ತು. ಡಿಎಂಕೆ ಪ್ರಾಬಲ್ಯವನ್ನು ಪ್ರತಿಬಂಧಿಸಲು ಹಾಗೂ ಪಕ್ಷದೊಳಗಿನ ಕೊಳೆ ತೊಳೆಯಲು ಅವರು ಪಕ್ಷದ ಕಾಯಕಲ್ಪಕ್ಕಾಗಿ ಹಿರಿಯ ಕಾಂಗ್ರೆಸ್ ಸಚಿವರುಗಳನ್ನು ಅಧಿಕಾರ ತ್ಯಾಗ ಮಾಡಬೇಕೆಂದು ಶಿಫಾರಸು ಮಾಡಿದರು. ಕಾಮರಾಜ್ ಯೋಜನೆಯನ್ವಯ, ಪಕ್ಷಕ್ಕಾಗಿ ದುಡಿಯಲು ಆರು ಮಂದಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟರು. ಅವರಲ್ಲಿ ಸ್ವತಃ ಕಾಮರಾಜ್ ಮತ್ತು ಕಾಶ್ಮೀರದ ಬಕ್ಷಿಗುಲಾಂ ಮೊಹಮ್ಮದ್ ಅವರುಗಳೂ ಸೇರಿದ್ದರು. ಜಗಜೀವನರಾಮ್, ಮೊರಾರ್ಜಿ ದೇಸಾಯಿ, ಲಾಲ್ ಬಹಾದುರ್ ಶಾಸ್ತ್ರಿಯವರು ಸೇರಿದಂತೆ ಕೇಂದ್ರದ ಆರು ಮಂದಿ ಹಿರಿಯ ಸಚಿವರೂ ಕಾಮರಾಜ್ ಯೋಜನೆಯನ್ವಯ ಅಧಿಕಾರ ತ್ಯಜಿಸಿದ್ದರು.

ಪ್ರಧಾನಮಂತ್ರಿ ಅಧಿಕಾರದಲ್ಲಿ ಉಳಿದುಕೊಂಡರು. ಆದರೆ ಅವರು ಕಾಯಾಮನಸಾ ದುರ್ಬಲರಾಗಿದ್ದುದು ವ್ಯಕ್ತವಾಗುತ್ತಿತ್ತು. 1963ರ ಸೆಪ್ಟಂಬರಿನಲ್ಲಿ ಸಮಾಜವಾದಿ ನಾಯಕ ಎಚ್.ವಿ. ಕಾಮತರಿಗೆ, ನೆಹರೂ ಲೋಕಸಭೆಯಲ್ಲಿನ ತಮ್ಮ ಪೀಠಕ್ಕೆ ನಡೆದು ಬರುತ್ತಿದ್ದ ರೀತಿ ಹೀಗೆ ಕಂಡಿತ್ತು:

> *"ದುರ್ಬಲನಾದ, ದಣಿದ ವೃದ್ಧನೊಬ್ಬ ಪೀಠಸಾಲಿನ ಓಣಿಯೊಂದರಲ್ಲಿ ಬೆನ್ನು ಬಗ್ಗಿಸಿ, ಎಡವುತ್ತ, ಮುಗ್ಗರಿಸುತ್ತ, ಆಸರೆಗೆ ಪಕ್ಕದ ಪೀಠಗಳ ಬೆನ್ನಾಧಾರಗಳನ್ನು ಆಶ್ರಯಿಸುತ್ತ ಕೆಳಗಿಳಿಯುತ್ತಿರುವಂತಿದೆ..."*

ಕಾಮತರು ಇಷ್ಟಕ್ಕೆ ನಿಲ್ಲಲಿಲ್ಲ. ಒಂದು ಕಾಲಕ್ಕೆ ತಾವು ಪೂಜ್ಯ ಭಾವನೆಯಿಂದ ಕಾಣುತ್ತಿದ್ದ ಆ ದಿನಗಳ ನೆಹರೂವನ್ನು ಕಣ್ಮುಂದೆ ತಂದುಕೊಂಡಿದ್ದರು. ಆ ನೆನಪಿನ ನೆಹರೂ ಹೀಗಿದ್ದರು:

> *"ಮದ್ರಾಸಿನ ಕಾಂಗ್ರೆಸ್ ಮಹಾಧಿವೇಶನ. ಅಲ್ಲಿ ನೆಹರೂ ಲವಲವಿಕೆಯಿಂದ ನಳನಳಿಸುತ್ತ, ತೆಳ್ಳಗೆ, ಬೆಳ್ಳಗೆ, ನೀಳ ಸಪೂರಕಾಯರಾಗಿ ನಿಂತಿದ್ದರು. ಅದೇ ನೆಹರೂ ಅಲಹಾಬಾದಿನ ಮನೆಯಲ್ಲಿ ಏಕಕಾಲಕ್ಕೆ ಎರಡೆರಡು ಹೆಜ್ಜೆ ದಾಪುಗಾಲು ಹಾಕುತ್ತ, ನನ್ನ ಜೊತೆ ಸ್ಪರ್ಧಿಸುತ್ತಿರುವಂತೆ ನಡೆದಿದ್ದರು. ನಾನು ಅವರನ್ನು ಹಿಂಬಾಲಿಸಿದ್ದೆ ಉಪ್ಪರಿಗೆಗೆ..."*

ನೆಹರೂ ಅವರ ಕಾಲ ಮುಗಿಯುತ್ತಾ ಬಂದಿದೆ ಎನ್ನುವುದರ ಬಗ್ಗೆ ಭಾರತದಲ್ಲಿ ಬಹಿರಂಗವಾಗಿ ಯಾರೂ ಊಹಾಪೋಹದ ಮಾತುಗಳನ್ನೂ ಆಡುವಂತಿರಲಿಲ್ಲ. ಆದರೆ ಪಾಶ್ಚಾತ್ಯ ದೇಶಗಳ ವೀಕ್ಷಕರಿಗೆ ಇಂಥ ನಿಷೇಧಗಳಿರಲಿಲ್ಲ. 1963ರಲ್ಲಿ ಅಮೆರಿಕದ ಪತ್ರಕರ್ತ ವೆಲ್ಸ್ ಹ್ಯಾಂಗೆನ್ 'ನೆಹರೂ ನಂತರ ಯಾರು?' ಎನ್ನುವ ಶೀರ್ಷಿಕೆಯ ಪುಸ್ತಕವೊಂದನ್ನು ಪ್ರಕಟಿಸಿದ್ದ. ಈ ಪುಸ್ತಕದಲ್ಲಿ ನೆಹರೂ ಅವರ ಸಂಭವನೀಯ ಉತ್ತರಾಧಿಕಾರಿಯಾಗಿ ಎಂಟು ಮಂದಿಯನ್ನು ಹೆಸರಿಸಲಾಗಿತ್ತು. ಈ ಎಂಟೂ ಜನರ ಬಗ್ಗೆ ಪ್ರತ್ಯೇಕವಾಗಿ ಒಂದೊಂದು ಅಧ್ಯಾಯ ಬರೆದಿದ್ದ. ಆ ಎಂಟು ಮಂದಿಯ ಪೈಕಿ ಆರು ಮಂದಿ ಕಾಂಗ್ರೆಸ್ ಪಕ್ಷದವರಾಗಿದ್ದರು. ಮೊರಾರ್ಜಿ ದೇಸಾಯಿ, ವಿ.ಕೆ. ಕೃಷ್ಣ ಮೆನನ್, ವೈ.ಬಿ. ಚವ್ಹಾಣ್, ಲಾಲ್ ಬಹಾದೂರ್ ಶಾಸ್ತ್ರಿ, ಎಸ್.ಕೆ. ಪಾಟೀಲ್ ಮತ್ತು ಏಕೈಕ ಮಹಿಳೆ ಇಂದಿರಾ ಗಾಂಧಿ. ಏಳನೆಯ ಸಂಭವನೀಯ ಉತ್ತರಾಧಿಕಾರಿ ಸಮಾಜ ಸೇವಕ, ಒಂದು ಕಾಲದ ಸಾಮಾಜಿಕ ಕ್ರಾಂತಿ ಪುರುಷ ಜಯಪ್ರಕಾಶ್ ನಾರಾಯಣ್. ಕೊನೆಯವರು ಜನರಲ್ ಬಿ.ಎಂ. ಕೌಲ್.

ಈಗ ಪ್ರಶ್ನೆ ನೆಹರೂ ನಂತರ ಯಾರು? ಎಂಬುದಷ್ಟೇ ಆಗಿರಲಿಲ್ಲ. ನೆಹರೂ ನಂತರ ಮುಂದೇನು? ಎಂಬ ಪ್ರಶ್ನೆಯೂ ಉದ್ಭವಿಸಿತ್ತು. ವೆಲ್ಸ್ ಹ್ಯಾಂಗೆನ್ ಪುಸ್ತಕ ಪ್ರಕಟಣೆಯ ನಂತರ ಲಂಡನ್ನಿನ "ಸಂಡೆ ಟೈಮ್ಸ್"ನ ವರದಿಗಾರನೊಬ್ಬ ಕೆಲವು ವಾರಗಳ ಕಾಲ ಭಾರತ ಯಾತ್ರೆ ಕೈಗೊಂಡಿದ್ದ. ಈ ವರದಿಗಾರ ಪ್ರಧಾನಮಂತ್ರಿಯವರನ್ನು ಭೇಟಿಯಾದಾಗ ಕಂಡದ್ದು: "ವೃದ್ಧ ನೆಹರೂ, ಇಷ್ಟು ಬೇಗ ಇಳಿಜಾರಿಗೆ ಸರಿದಿದ್ದ ನೆಹರೂ." ವ್ಯಕ್ತಿಯ ಶಿಥಿಲತೆ ಅವನ ರಾಷ್ಟ್ರದ ಶಿಥಿಲತೆಯನ್ನೂ ಪ್ರತಿಬಿಂಬಿಸುತ್ತಿತ್ತು. ತೀವ್ರವಾದ, ಅಗಾಧವಾದ ಅದಮ್ಯ ಆಕಾಂಕ್ಷೆಯ ಪ್ರಚಂಡ ಯುವ ಚೀನಾಕ್ಕೆ ತದ್ವಿರುದ್ಧವಾಗಿತ್ತು ಭಾರತ. ಅವರ್ಣನೀಯವಾದ ಅಸದಳವಾದ ಬಡತನದ, ಸಂಕಲ್ಪ ರಹಿತ ಸರ್ಕಾರದ ಭಾರತ ನೆಹರೂ ಗತಿಸಿದ ನಂತರ ಏನಾಗಬಹುದು? ಕಮ್ಯುನಿಸ್ಟರು ಹಾಗೂ ರಾಜ್ಯಗಳಲ್ಲಿ ತಲೆ ಎತ್ತುತ್ತಿರುವ ನ್ಯಾಯಭ್ರಷ್ಟ ಹೊಸ ತಲೆಮಾರಿನ ಡಕಾಯಿತ ರಾಜಕಾರಣಿಗಳ ನಡುವೆ ಯುದ್ಧ ನಡೆಯಲಿದೆ ಎಂಬುದು ವರದಿಗಾರನ ಎಣಿಕೆಯಾಗಿತ್ತು. ಇವರಿಬ್ಬರ ನಡುವೆ ಮೂರನೆಯ ಸ್ಪರ್ಧಿಯಾಗಿ ಸೇನೆ ಇತ್ತು. ಇಲ್ಲಿಯವರೆಗೆ ಸೇನೆಯ ಜನರಲ್‌ಗಳು ರಾಜಕೀಯದಿಂದ ದೂರ ಇದ್ದರು. ಆದರೆ ಭಾರತ ಅವ್ಯವಸ್ಥೆಯಿಂದ, ಅರಾಜಕತೆಯಿಂದ ಕುಸಿದುಬಿದ್ದರೆ ಅಥವಾ ಕಮ್ಯುನಿಸ್ಟರ ಉಡಿಗೆ ಬಿದ್ದರೆ ಈ ಜನರಲ್‌ಗಳು ತೆಪ್ಪಗೆ ಕುಳಿತಿರುವರೆ? ಭವಿಷ್ಯದ ಸಾಧ್ಯತೆಗಳು ಹೀಗಿದ್ದವು. ಏತನ್ಮಧ್ಯೆ, ಮುಕ್ತ ಪ್ರಪಂಚ, ಸುಸಂಗತ ನಾಯಕತ್ವ ಇಲ್ಲದ ಜನಭರಿತ ಸದಸ್ಯ ರಾಷ್ಟ್ರವೊಂದಕ್ಕೆ ಹೊಂದಿಕೊಳ್ಳಬೇಕು. ಯಾವುದೇ ಗಮನಾರ್ಹ ಪರಿಣಾಮವಿಲ್ಲದೆ ನೆರವು ಮತ್ತು ಶಸ್ತ್ರಾಸ್ತ್ರಗಳನ್ನು ನುಂಗುತ್ತ ಕುಳಿತ ರಾಷ್ಟ್ರವೊಂದಕ್ಕೆ, ಲೂಟಿಕಾರರಿಗೆ, ಪರಭಕ್ಷಕರಿಗೆ ಹರಕೆಯ ಕುರಿಯಾಗಲಿರುವ ರಾಷ್ಟ್ರಕ್ಕೆ ಹೊಂದಿಕೊಳ್ಳಬೇಕು. ಆಫ್ರೋ-ಏಷ್ಯಾ ಕಣ್ಣುಗಳಿಗೆ ಸ್ವತಂತ್ರ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮುನ್ನಡೆ ಬಯಸುವುದೇ ಒಂದು ಅಪರಾಧ ಎನ್ನಿಸುವಂಥ

ಪರಿಸ್ಥಿತಿ ಇದ್ದು ಪ್ರಬುದ್ಧ ನಾಯಕತ್ವ ಇಲ್ಲಿನ ಜರೂರು ಅಗತ್ಯವಾಗಿದೆ ಎಂದು ವರದಿಗಾರ ಉಪಖಂಡದ ಸ್ಥಿತಿಗತಿಯನ್ನು ವಿಶ್ಲೇಷಿಸಿದ್ದ.

ನೆಹರೂ ಕೃಶರಾಗುತ್ತಿರುವುದನ್ನು ಆ ಕಾಲದ ಛಾಯಾಚಿತ್ರಗಳು ಬಿಂಬಿಸಿದ್ದವು. ಕುಸಿದ ಭುಜಗಳು, ದಣಿದ ದೇಹ, ಕಾಂತಿಹೀನವಾದ ಮುಖ, ಸೊಂಟದ ಸುತ್ತ ಬೊಜ್ಜು...ಎಲ್ಲ ಕಪ್ಪು-ಬಿಳುಪಿನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ತಮ್ಮ ತಂದೆ ಈಗ ವಾರಕ್ಕೊಮ್ಮೆ ಮೂತ್ರ, ರಕ್ತದೊತ್ತಡ ಮತ್ತು ತೂಕಗಳ ಪರೀಕ್ಷೆ ಮಾಡಿಸಿಕೊಳ್ಳಬೇಕಾಗಿ ಬಂದಿದೆಯೆಂದು 1963ರ ಸೆಪ್ಟಂಬರಿನ ಮೊದಲ ವಾರದಲ್ಲಿ ಇಂದಿರಾಗಾಂಧಿಯವರು ಮಿತ್ರರೊಬ್ಬರಿಗೆ ಬರೆದಿದ್ದರು. “ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಬಳಲಿಕೆ ಭಯಂಕರವಾಗಿದ್ದು, ಅವರು ದಣಿದವರಂತೆ ಕಾಣುವುದರಲ್ಲಿ ಆಶ್ಚರ್ಯವೇನಿಲ್ಲ. ಸುಧಾರಣೆಗೆ ನೆರವಾಗಬಲ್ಲ ಏಕೈಕ ಔಷಧಿ ಎಂದರೆ ಬಿಡುವು ಮತ್ತು ವಿಶ್ರಾಂತಿ” ಎಂದು ಶ್ರೀಮತಿ ಗಾಂಧಿ ಪತ್ರದಲ್ಲಿ ಅಭಿಪ್ರಾಯಪಟ್ಟಿದ್ದರು.

ನೆಹರೂಗೆ ಇವೆರಡೂ ಸಿಗಲಿಲ್ಲ. ಅವರು ಪ್ರಧಾನ ಮಂತ್ರಿ ಕೆಲಸ, ವಿದೇಶಾಂಗ ಸಚಿವರ ಕೆಲಸ ಎರಡನ್ನೂ ನಿರ್ವಹಿಸಬೇಕಾಗಿತ್ತು. ಜೊತೆಗೆ ಕಾಂಗ್ರೆಸ್ ಕಾಯಕಲ್ಪದ ಕೆಲಸವನ್ನೂ ನೋಡಿಕೊಳ್ಳಬೇಕಾಗಿತ್ತು. ಸರ್ಕಾರ ಹಾಗೂ ಪಕ್ಷದ ಏಕೈಕ ಮಾನ್ಯ ನಾಯಕರಾಗಿ ನೆಹರೂ ದಂಡನೀಯ ಕಾರ್ಯಕ್ರಮಕ್ಕೆ ಅಂಟಿಕೊಂಡಿದ್ದರು. ಸಾರ್ವಜನಿಕ ಸಭೆಗಳು, ಶಾಲೆ-ಆಸ್ಪತ್ರೆಗಳ ಉದ್ಘಾಟನೆಗಳು, ಪಕ್ಷದ ಕಾರ್ಯಕರ್ತರ ಸಭೆಗಳು ಇವೇ ಮೊದಲಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಾಷ್ಟ್ರದ ನಾಲ್ಕೂ ಮೂಲೆಗಳಲ್ಲೂ ಪ್ರಯಾಣ ಮಾಡುತ್ತಿದ್ದರು. ಉದಾಹರಣೆಗೆ ನೋಡುವುದಾದರೆ 1963ರ ಡಿಸೆಂಬರಿನಲ್ಲಿ ಅವರು ಮದ್ರಾಸ್, ಮಧುರೆ, ಚಂಡೀಗಢ, ಬಿಹಾರ್, ಮುಂಬಯಿಗಳಲ್ಲಿ (ಎರಡು ಸಲ)ಪ್ರವಾಸ ಮಾಡಿದ್ದರು.

ಪ್ರಧಾನ ಮಂತ್ರಿಯವರು ಆ ತಿಂಗಳಲ್ಲಿ ಹೋಗಬೇಕಾಗಿದ್ದ, ಆದರೆ ಹೋಗಲಾಗದ ಪ್ರದೇಶವೆಂದರೆ ನಾಗಾಲ್ಯಾಂಡ್. ಏಕೆಂದರೆ 1963ರ ಡಿಸೆಂಬರ್ 1ರಿಂದ ನಾಗಾಲ್ಯಾಂಡ್ ಪ್ರತ್ಯೇಕ ರಾಜ್ಯವಾಗಿತ್ತು. ಮಾಮೂಲು ಪರಿಸ್ಥಿತಿಯಲ್ಲಾಗಿದ್ದರೆ ನೆಹರೂ ತಾವೇ ಪ್ರತ್ಯೇಕ ರಾಜ್ಯ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ತೀವ್ರ ಆಸಕ್ತಿ ತೋರುತ್ತಿದ್ದುದು ಖಚಿತ. ಉದ್ಘಾಟನಾ ಸಮಾರಂಭ ಕೊಹಿಮಾದಲ್ಲಿ ನಡೆಯಲಿತ್ತು. ಕೊಹಿಮಾ ಪ್ರಯಾಣ ಪ್ರಯಾಸಕರವಾಗಿತ್ತು. ಜೊತೆಗೆ 1953ರಲ್ಲಿ ಅಲ್ಲಿಗೆ ಹೋದಾಗ ತಮಗೆ ದೊರೆತ ದ್ವೇಷಪೂರಿತ ಸ್ವಾಗತದ ಕಹಿ ಘಟನೆ ನೆನಪಾಗಿರಬೇಕು. ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ನೂತನ ರಾಜ್ಯದ ಉದ್ಘಾಟನೆ ನೆರವೇರಿಸಿದರು. ಆದರೆ ಭೂಗತ ನಾಗಾಗಳು ಹೊಸಮುಖ್ಯಮಂತ್ರಿಗಳು ಮತ್ತು ಅವರ ಸಂಪುಟವನ್ನು ‘ದೇಶದ್ರೋಹಿ’ಗಳೆಂದು ವಜಾಮಾಡಿದ್ದರು. ಆಗ ಇನ್ನೂ ನಾಗಾಲ್ಯಾಂಡಿನಲ್ಲಿ ಭೂಗತರ ಪ್ರಭಾವ, ದರ್ಪಗಳು ನಡೆಯುತ್ತಿದ್ದವು.

1964ರ ಜನವರಿಯಲ್ಲಿ ನೆಹರೂ ಮತ್ತೊಮ್ಮೆ ಪ್ರವಾಸಮಾಡಿದ್ದರು. ಒರಿಸ್ಸಾ ರಾಜಧಾನಿ ಭುವನೇಶ್ವರದಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಅಲ್ಲಿ ವೇದಿಕೆಯ ಮೇಲೆ ಕುಸಿದುಬಿದ್ದ ನೆಹರೂ ಅವರನ್ನು ತಕ್ಷಣವೇ ದೆಹಲಿಗೆ ವಾಪಸು ಕರೆದುಕೊಂಡು ಬರಲಾಯಿತು. ಪರೀಕ್ಷಿಸಿದ ವೈದ್ಯರು ಲಘು ಪಾರ್ಶ್ವವಾಯು ಹೊಡೆದಿದೆಯೆಂದು ತಿಳಿಸಿದ್ದರು. ಆಗ ಪತ್ರಿಕೆಯೊಂದರ ಅಗ್ರ ಶೀರ್ಷಿಕೆ ಹೀಗಿತ್ತು: "ಭುವನೇಶ್ವರ ಅಧಿವೇಶನಕ್ಕೆ ಅಂಧಕಾರ ಕವಿಸಿದ ನೆಹರೂ ಅಸ್ವಸ್ಥತೆ."

IV

ಚೀನಾಯುದ್ಧ ಭಾರತದೊಳಗೆ ಅಥವಾ ಪ್ರಪಂಚದಲ್ಲಿ ಮಾತ್ರವಲ್ಲ ಕಾಂಗ್ರೆಸ್ ಪಕ್ಷದೊಳಗೇ ನೆಹರೂ ಅವರ ಸ್ಥಾನವನ್ನು ದುರ್ಬಲಗೊಳಿಸಿತ್ತು. ತೀರ್ಮಾನಗಳನ್ನು ಕೈಗೊಳ್ಳುವ ಕೇಂದ್ರಬಿಂದು ಈಗ ಪ್ರಧಾನಮಂತ್ರಿಯವರ ನಿವಾಸದಿಂದ ಕಾಂಗ್ರೆಸ್ ಸಂಸದೀಯ ಪಕ್ಷದ ಕಚೇರಿಗೆ ಸ್ಥಳಾಂತರಗೊಂಡಿತ್ತು. ಈಗ, ವಿಷಯ ದೊಡ್ಡದಿರಲಿ, ಸಣ್ಣದಿರಲಿ, ತಾನು ಹೇಳಿದಂತೆ ಮಾಡು ಎನ್ನುವ ಸ್ಥಿತಿಯಲ್ಲಿರಲಿಲ್ಲ ನೆಹರೂ. ಉದಾಹರಣೆಗೆ ಹೇಳುವುದಾದರೆ ಕಾಮರಾಜ್ ಯೋಜನೆಗೆ ಅವರ ಸಮ್ಮತಿ ಇರಲಿಲ್ಲ. ಅದರಿಂದ ತಮ್ಮ ಸರ್ಕಾರ ಪ್ರತಿಭೆ ಮತ್ತು ಅನುಭವಗಳಿಂದ ವಂಚಿತವಾಗುವುದೆಂದು ಅವರ ಅಭಿಪ್ರಾಯವಾಗಿತ್ತು.

ಅನಾರೋಗ್ಯದ ನಂತರ, ನೆಹರೂ ಅವರು ಲಾಲ್ ಬಹಾದೂರ್ ಶಾಸ್ತ್ರಿಯವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳುವ ವಿಷಯದಲ್ಲಿ ಪಕ್ಷಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು. ಶಾಸ್ತ್ರಿಯವರನ್ನು ಖಾತೆರಹಿತ ಸಚಿವ ಎಂದು ನೇಮಕ ಮಾಡಲಾಗಿತ್ತು. ಆದರೆ, ಕಾರ್ಯತಃ ಅವರು ಪ್ರಧಾನಮಂತ್ರಿಗೆ ಸಹಾಯಕರಾಗಿದ್ದರು. ನೆಹರೂ ಮತ್ತು ಶಾಸ್ತ್ರಿ ಇವರಿಬ್ಬರೂ ಒಂದೇ ಭಾಷೆ ಮಾತನಾಡುವವರಾಗಿದ್ದರು, ಒಂದೇ ರಾಜ್ಯದವರಾಗಿದ್ದರು. ಇಬ್ಬರೂ ಒಟ್ಟಿಗೆ ಏಕಕಾಲದಲ್ಲಿ ಸೆರೆಮನೆವಾಸ ಅನುಭವಿಸಿದ್ದರು. ನೆಹರೂ ಶಾಸ್ತ್ರಿಯವರನ್ನು ನಂಬಿದ್ದರು, ಇಷ್ಟಪಟ್ಟಿದ್ದರು. ತನಗೆ ತದ್ವಿರುದ್ಧವಾದ ವ್ಯಕ್ತಿತ್ವವೊಂದನ್ನು ಅರ್ಥಮಾಡಿಕೊಂಡಿದ್ದರು.

ಶಾಸ್ತ್ರಿಯವರಿಗೆ ಮೊದಲು ವಹಿಸಲಾದ ಹೊಣೆ ಜಮ್ಮು-ಕಾಶ್ಮೀರದ್ದು. 1963ರ ಡಿಸೆಂಬರ್ 27ರಂದು, ಶ್ರೀನಗರದ ಹಜರತ್‌ಬಲ್ ಮಸೀದಿಯಿಂದ ಪ್ರವಾದಿ ಮೊಹಮದರ ಪವಿತ್ರ ಕೇಶ ಕಳುವಾದ ಘಟನೆ ಆ ರಾಜ್ಯವನ್ನು ನಡುಗಿಸಿತ್ತು. ಕಣ್ಮರೆಯಾದ ಒಂದು ವಾರದಲ್ಲೇ ಪವಿತ್ರ ಕೇಶ ಮಸೀದಿಯಲ್ಲಿ ಧಿಡೀರನೆ ಪ್ರತ್ಯಕ್ಷವಾಗಿತ್ತು. ಮೊದಲಿಗೆ ಪವಿತ್ರ ಕೇಶ ಹೇಗೆ ಕಣ್ಮರೆಯಾಯಿತೆಂದು ಗೊತ್ತಿರಲಿಲ್ಲವೋ ಅಷ್ಟೇ ನಿಗೂಢ ರೀತಿಯಲ್ಲಿ ಮತ್ತೆ ಪ್ರತ್ಯಕ್ಷವಾಗಿತ್ತು. ಈಗ ಅಲ್ಲಿರುವ ಪವಿತ್ರ ವಸ್ತು ಅಸಲಿಯೇ-ನಕಲಿಯೇ ಎಂಬುದೂ ಯಾರಿಗೂ ತಿಳಿಯದು.

ಜನವರಿ ಪೂರ್ತಿ ಕಣಿವೆಯಲ್ಲಿ ಪ್ರತಿಭಟನೆಗಳು, ಪ್ರದರ್ಶನಗಳು ನಡೆದವು. ಮುಸ್ಲಿಂ ಪ್ರಪಂಚದಲ್ಲಿ ಇದರ ಕಂಪನವುಂಟಾಯಿತು. ಪೂರ್ವ ಪಾಕಿಸ್ತಾನದಲ್ಲಿ, ಹಿಂದೂ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಲಾಯಿತು. ನೂರಾರು-ಸಾವಿರಾರು ಮಂದಿ ಹಿಂದೂ ಅಲ್ಪಸಂಖ್ಯಾತರು

ಅಲ್ಲಿಂದ ಭಾರತಕ್ಕೆ ಓಡಿಬಂದರು. ಇದರಿಂದಾಗಿ, ಭಾರತದಲ್ಲಿ ಮುಸ್ಲಿಮರ ಮೇಲೆ ಪ್ರತೀಕಾರ ಗಲಭೆಗಳ ಬೆದರಿಕೆ ತಲೆದೋರಿತ್ತು.

ಜನವರಿ ಕೊನೆಯ ವಾರದಲ್ಲಿ ನೆಹರೂ, ಶಾಸ್ತ್ರಿಯವರನ್ನು ಕಾಶ್ಮೀರಕ್ಕೆ ಕಳುಹಿಸಿಕೊಟ್ಟರು. ಅಧಿಕಾರಿಗಳು ಮತ್ತು ಸ್ಥಳೀಯ ನಾಯಕರುಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಶಾಸ್ತ್ರಿಯವರು ವಾಪಸು ಬಂದಿರುವ ಪವಿತ್ರ ಕೇಶ ಅಸಲಿಯೇ-ನಕಲಿಯೇ ಎಂದು ತೀರ್ಮಾನಿಸಲು ಅದನ್ನು ಸಾರ್ವಜನಿಕವಾಗಿ ಪ್ರದರ್ಶಿಸಿ ಪರೀಕ್ಷಿಸುವ ಪ್ರಯೋಗ ನಡೆಸಿದರು. ಈ ಪರೀಕ್ಷೆಗೆ ಹಿರಿಯ ಮೌಲ್ವಿಗಳ ಒಂದು ತಂಡವನ್ನು ರಚಿಸಲಾಗಿತ್ತು. ಫೆಬ್ರುವರಿ 3ರಂದು ಇದು ನಡೆಯಿತು. ವಾಪಸು ಬಂದಿರುವುದು ಅಸಲಿ ಪವಿತ್ರ ಕೇಶವೇ ಎಂದು ಈ ಸಭೆಯಲ್ಲಿ ತೀರ್ಮಾನವಾಗಿ ಎಲ್ಲರಿಗೂ ಸಮಾಧಾನವಾಯಿತು. ಕಣಿವೆಯಲ್ಲಿ ಶಾಂತಿ ನೆಲೆಸಿತು. ಶಾಂತಿ ಪಾಲನೆಗಾಗಿ ಕೇಂದ್ರ ಸರ್ಕಾರ ಜಿ.ಎಂ. ಸಾದಿಕ್ ಅವರನ್ನು ರಾಜ್ಯದ ಮುಖ್ಯಮಂತ್ರಿಯಾಗಿ ನೇಮಿಸಿತು. ವಾಮಪಂಥೀಯ ಧೋರಣೆಯ ಸಾದಿಕ್ ಅವರು ಪ್ರಾಮಾಣಿಕ ವ್ಯಕ್ತಿಯೆಂದು ಖ್ಯಾತರಾಗಿದ್ದರು.

ಕಾಶ್ಮೀರದಲ್ಲಿ ಏನೇ ತೊಂದರೆ ಸಂಭವಿಸಿದರೂ ಇಡೀ ಉಪಖಂಡದ ಜೀವನದ ಮೇಲೆ ಅದರ ಪರಿಣಾಮ ಉಂಟಾಗುವುದೆಂಬುದು ಹಜರತ್ ಬಲ್ ಘಟನೆಯಿಂದ ಮತ್ತೊಮ್ಮೆ ಋಜುವಾತಾಗಿತ್ತು. ಚೀನದ ಅಧ್ವಾನದ ನಂತರ ನೆಹರೂ ಅವರು ಕಾಶ್ಮೀರ ವಿವಾದಕ್ಕೆ ಒಂದು ಆಖೈರು ಪರಿಹಾರ ಕಂಡುಹಿಡಿಯಲು ಹೆಚ್ಚು ಕಾತುರರಾಗಿದ್ದರು. ಏಕೆಂದರೆ ಎರಡು ತಂಟೆಕೋರ ಗಡಿಗಳ ಜೊತೆ ಹೆಣಗಾಡುವುದು ಭಾರತದಿಂದ ಸಾಧ್ಯವಿರಲಿಲ್ಲ. ಹಳೆಯ ಮಿತ್ರ ಲಾರ್ಡ್ ಮೌಂಟ್ ಬ್ಯಾಟನ್ ಅವರು ನೆಹರೂಗೆ ಈ ರೀತಿಯ ಆಲೋಚನೆಯಲ್ಲಿ ಉತ್ತೇಜನ ನೀಡಿದ್ದರು. "ಒಂದು ಕಾಲದ ವೈಭವ ಭಾರತಕ್ಕೆ ಕೀರ್ತಿ ತಂದಿತು. ವಿಶ್ವದಲ್ಲಿ, ದೇಶದೊಳಗೆ ಅದರ ಕೀರ್ತಿ ಪತಾಕೆ ಹಾರಿತು. ಆದರೆ ಈಗ ಭಾರತದ ವರ್ಚಸ್ಸಿಗೆ, ಕೀರ್ತಿಗೆ ಕಳಂಕ ತಗುಲಿದೆ. ಇದಕ್ಕೆ ಮುಖ್ಯ ಕಾರಣ ಕಾಶ್ಮೀರ ವಿವಾದ ಇತ್ಯರ್ಥದಲ್ಲಿ ವಿಫಲವಾಗಿರುವುದು" ಎಂದು ಮೌಂಟ್ ಬ್ಯಾಟನ್ ನೆಹರೂಗೆ ಕಿವಿಮಾತು ಹೇಳಿದ್ದರು. "ಪಾಕಿಸ್ತಾನದ ಧೋರಣೆ ಏನೇ ಇರಲಿ ಅದನ್ನು ಲೆಕ್ಕಿಸದೆ ಕಾಶ್ಮೀರ ಕಣಿವೆಗೆ ಸ್ವಾತಂತ್ರ್ಯ ನೀಡುವ ಮೂಲಕ, ಭಾರತ ಇಂಥಾ ಒಂದು ಧೀರೋದಾತ್ತ ವರ್ತನೆ ಮೂಲಕ ತನಗಂಟಿರುವ ಕಳಂಕವನ್ನು ತೊಡೆದುಕೊಳ್ಳಬಹುದೆಂಬುದು" ಮೌಂಟ್ ಬ್ಯಾಟನ್ನರ ಅಭಿಪ್ರಾಯವಾಗಿತ್ತು.

1962-63ರಲ್ಲಿ ಉಭಯ ರಾಷ್ಟ್ರಗಳ ವಿಭಜನೆಗೆ ಕಾರಣವಾದ ವಿಷಯಗಳ ಬಗ್ಗೆ ಭಾರತ ಮತ್ತು ಪಾಕಿಸ್ತಾನದ ನಡುವೆ ಹಲವು ಸುತ್ತಿನ ಮಾತುಕತೆಗಳಾಗಿದ್ದವು. ಈ ಮಾತುಕತೆಯಲ್ಲಿ ಭಾರತದ ಪರವಾಗಿ ಅನುಭವಿ ರಾಜಕಾರಣಿ ಸರ್ದಾರ್ ಸ್ವರಣ್ ಸಿಂಗರು ಹಾಗೂ ಪಾಕಿಸ್ತಾನದ ಪರವಾಗಿ ಮಹತ್ವಾಕಾಂಕ್ಷಿ ಯುವಕ ಜುಲ್‌ಫಿಕರ್ ಅಲೀ ಭುಟ್ಟೋ ಭಾಗವಹಿಸಿದ್ದರು. ಆದರೆ ಜನರ ಭಾವನೆಗಳನ್ನು ವಿವಾದ ಕೇಂದ್ರದಿಂದ ಅಲಕ್ಷಿಸುವುದು

ವಿವೇಕವಲ್ಲ ಎಂಬುದು ಹಜರತ್ ಬಲ್ ಘಟನೆಯಿಂದ ಸಾಬೀತಾಗಿತ್ತು. ಜನರ ಭಾವನೆಗಳನ್ನು ಶೇಖ್ ಅಬ್ದುಲ್ಲಾ ಅವರಿಗಿಂತ ಚೆನ್ನಾಗಿ ಬಲ್ಲವರು ಯಾರಿದ್ದಾರೆ? ಜನರ ನಾಡಿಮಿಡಿತ ಅವರಿಗೆ ಗೊತ್ತು. 1963ರ ಕೊನೆಯ ವೇಳೆಗೆ ಶೇಖ್ ಅಬ್ದುಲ್ಲಾ ಅವರ ಬಂಧನ ಮುಕ್ತಿ ಬಗ್ಗೆ ನೆಹರೂ ಆಲೋಚಿಸಿದ್ದರು. ಆ ವೇಳೆಗಾಗಲೇ ಶೇಖರು ಜೈಲು ಸೇರಿ ಹತ್ತು ವರ್ಷಗಳಾಗಿದ್ದವು. ಭುವನೇಶ್ವರದಲ್ಲಿ ಪಾರ್ಶ್ವವಾಯು ಹೊಡೆದ ನಂತರ, ಅದರ ಅಪಾಯದ ಸೂಚನೆ ನೆಹರೂ ಅವರಲ್ಲಿ ಈ ಬಗ್ಗೆ ಮರುಚಿಂತನೆಗೆಡೆ ಮಾಡಿಕೊಟ್ಟಿತ್ತು. ಶೇಖ್ ಅಬ್ದುಲ್ಲಾ ಅವರನ್ನು ಬಿಡುಗಡೆ ಮಾಡಿ, ಕಾಲನ ಕರೆ ಬರುವ ಮುನ್ನ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಬಾರದೇಕೆ?

V

ಶೇಖ್ ಅಬ್ದುಲ್ಲಾರನ್ನು 1953ರಲ್ಲಿ ಕೇಂದ್ರ ಸರ್ಕಾರ ಬಂಧಿಸಿದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಅವರ ವಿರುದ್ಧ ಏನೂ ಆರೋಪಗಳಿರಲಿಲ್ಲ. 1958ರ ಜನವರಿಯಲ್ಲಿ ಹಠಾತ್ತನೆ ಅವರನ್ನು ಬಿಡುಗಡೆ ಮಾಡಲಾಯಿತು. ಬಿಡುಗಡೆ ಹೊಂದಿದ್ದ ಶೇಖ್ ಅಬ್ದುಲ್ಲಾ ಕಾಶ್ಮೀರಕ್ಕೆ ತೆರಳಿದರು. ಅಲ್ಲಿ ಅವರಿಗೆ ವೈಭವದ ಸ್ವಾಗತ ಕಾದಿತ್ತು. ಶ್ರೀನಗರದಲ್ಲಿ ಹಾಗೂ ಹಜರತ್ ಬಲ್ ಮಸೀದಿಯಲ್ಲಿ ಶೇಖ್ ಅಬ್ದುಲ್ಲಾ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಇದು ಆಡಳಿತದಲ್ಲಿನ ಅವರ ಶತ್ರುಗಳ ಚಿತ್ತ ಸ್ಥೈರ್ಯ ಕೆಡಿಸಿತು. ಏಪ್ರಿಲ್ ಅಂತ್ಯದ ವೇಳೆಗೆ ಶೇಖ್ ಅಬ್ದುಲ್ಲಾರನ್ನು ಮತ್ತೆ ಬಂಧಿಸಲಾಯಿತು. ಈ ಸಲ ಅವರನ್ನು ಪಾಕಿಸ್ತಾನದೊಂದಿಗೆ ಭಾರತ ಒಡೆಯುವ ಒಳಸಂಚು ನಡೆಸಿದ್ದಾರೆಂಬ ಆಪಾದನೆ ಮೇಲೆ ಬಂಧಿಸಿ ಜಮ್ಮುವಿನ ಸೆರೆಮನೆಗೆ ತಳ್ಳಲಾಗಿತ್ತು. ರಾಷ್ಟ್ರದ ಗಡಿಗಳನ್ನು ಅಕ್ರಮವಾಗಿ ಪಾಕಿಸ್ತಾನಕ್ಕೆ ಸೇರಿಸಲು ಅನುಕೂಲ ಮಾಡಿಕೊಡುತ್ತಿದ್ದಾರೆ ಹಾಗೂ ರಾಜ್ಯದಲ್ಲಿ ಕೋಮು ದ್ವೇಷ ಬಿತ್ತುತ್ತಿದ್ದಾರೆ, ಪಾಕಿಸ್ತಾನದಿಂದ ರಹಸ್ಯವಾಗಿ ಹಣ ಮತ್ತು ಬಾಂಬುಗಳ ರೂಪದಲ್ಲಿ ನೆರವು ಪಡೆಯುತ್ತಿದ್ದಾರೆ ಇತ್ಯಾದಿ ಆಪಾದನೆಗಳನ್ನೂ ಅವರ ಮೇಲೆ ಹೊರಿಸಲಾಗಿತ್ತು.

ಕೊಂಚ ಮರ್ಯಾದೆಯಿಂದ ಹೇಳುವುದಾದರೆ ಈ ಆಪಾದನೆಗಳೆಲ್ಲ ಸುಳ್ಳು ಸೃಷ್ಟಿಗಳಾಗಿದ್ದವು. ಶೇಖರು ಸ್ವಾತಂತ್ರ್ಯ ಬಯಸಿದ್ದರು, ಆದರೆ ಪಾಕಿಸ್ತಾನದ ಜೊತೆ ಸೇರುವ ಉದ್ದೇಶ ಅವರಿಗಿರಲಿಲ್ಲ. ಸ್ವತಂತ್ರ ಕಾಶ್ಮೀರದ ಆಡಳಿತ ಸೂತ್ರ ಹಿಡಿಯುವುದು ಅವರಿಗೆ ಆಪ್ಯಾಯಮಾನವಾಗಿತ್ತು. ಅವರು, ಯಾರ ಧರ್ಮ ಏನೇ ಇರಲಿ ಎಲ್ಲರೂ ರಾಜ್ಯದ ಪ್ರಜೆಗಳೆಂಬ ಭಾವನೆ ತಳೆದಿದ್ದರು. ಶೇಖ್‌ರ ಶರೀರದಲ್ಲಿ ಕೋಮು ಭಾವನೆಯ ಎಲುಬು ಇರಲಿಲ್ಲವೆಂಬುದನ್ನು ಅವರ ರಾಜಕೀಯ ಹಗೆಗಳೂ ಒಪ್ಪಿಕೊಂಡಿದ್ದುಂಟು.

ಜಮ್ಮು ಕಾಶ್ಮೀರದ ಜನತೆಗೆ ಸ್ವಯಂ ನಿರ್ಧಾರದ ಹಕ್ಕನ್ನು ನೀಡಬೇಕೆಂಬುದು ತಮ್ಮ ಏಕೈಕ ಧ್ಯೇಯವಾಗಿದ್ದು ತಾವು ಅದಕ್ಕೆ ಬದ್ಧರಾಗಿರುವುದಾಗಿ ಶೇಖ್ ಅಬ್ದುಲ್ಲಾ ವಿಚಾರಣೆ

ಕಾಲದಲ್ಲಿ ತಿಳಿಸಿದ್ದರು. ಯಾವುದೇ ಒಂದು ದಿಕ್ಕಿನತ್ತ ಬಲಾತ್ಕಾರದಿಂದ ಓಡಿಸಿಕೊಂಡು ಹೋಗಲು ತಾವೇನು ಕುರಿ ಮಂದೆಯಲ್ಲ ಎಂದು ಶೇಖರು ವಾದಿಸಿದ್ದರು. ಇಷ್ಟು ಹೇಳಿದ ಬಳಿಕವೂ ಅವರು ಜಾತ್ಯತೀತತೆಗೆ ತಮ್ಮ ಬದ್ಧತೆಯನ್ನು ಪದೇ ಪದೇ ಒತ್ತಿ ಒತ್ತಿ ಹೇಳಿದ್ದರು ಹಾಗೂ ಮಹಾತ್ಮಗಾಂಧಿ ಮತ್ತು ಒಂದು ಕಾಲದ ಗೆಳೆಯ ಜವಹರಲಾಲ್ ನೆಹರೂ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. "ಆಖೈರಾಗಿ ರಾಜ್ಯದ ಜನತೆಯೇ ತಮ್ಮ ಹಣೆಬರಹವನ್ನು ನಿರ್ಧರಿಸಿಕೊಳ್ಳುವರು" ಎಂಬುದನ್ನು ನೆಹರೂ ಅವರೇ ಸ್ವತಃ ಒಪ್ಪಿಕೊಂಡಿದ್ದರು ಎಂದು ಹೇಳಿದ ಶೇಖ್ ಅಬ್ದುಲ್ಲಾ "ಈಗ ಅವರು ನಮಗೆ ಆ ಹಕ್ಕನ್ನು ನಿರಾಕರಿಸುವರೆಂದು ತಾವು ಭಾವಿಸುವುದಿಲ್ಲವೆಂದು" ಕೊನೆಯ ಮಹತ್ವದ ಮಾತನ್ನಾಡಿದ್ದರು.

1953ರಲ್ಲಿ ಮೊದಲ ಸಲ ಶೇಖ್ ಅಬ್ದುಲ್ಲಾ ಅವರ ಬಂಧನವಾದ ಎರಡು ತಿಂಗಳ ನಂತರ ನೆಹರೂ ಅವರು "ಅವರ ಸ್ಥಾನಬದ್ಧತೆ ನನಗೊಂದು ದೊಡ್ಡ ಚಿಂತೆಯಾಗಿದೆ" ಎಂದು ಬರೆದಿದ್ದರು. ತಿಂಗಳುಗಳು ಕಳೆದು ವರ್ಷಗಳೂ ಉರುಳಿದವು. ಅಪರಾಧಪ್ರಜ್ಞೆ ತೀವ್ರಗೊಂಡಿತ್ತು. ಮಿತ್ರನ ಮಕ್ಕಳ ಶಿಕ್ಷಣದಲ್ಲಿ ನಿಕಟ ಆಸಕ್ತಿವಹಿಸುವುದು ಈ ಅಪರಾಧ ಪ್ರಜ್ಞೆಯ ಉದಾತ್ತೀಕರಣವಾಗಿತ್ತು. (ಕೆಲವೊಂದು ಖಾತೆಗಳಿಂದ ಹಣವನ್ನೂ ಕೊಟ್ಟಿದ್ದರು). 1955ರ ಜುಲೈನಲ್ಲಿ ನೆಹರೂ ಜೈಪುರದ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ಶೇಖ್‌ರ ದೊಡ್ಡ ಮಗ ಫಾರೂಕ್ ಅಬ್ದುಲ್ಲಾರನ್ನು ಭೇಟಿ ಮಾಡಿದ್ದರು. ಸಹಪಾಠಿಗಳು ತನ್ನ ತಂದೆಯನ್ನು ದೇಶದ್ರೋಹಿ ಎಂದು ಕರೆಯುತ್ತಾರೆಂದು ಆಗ ಫಾರೂಕ್ ಅಬ್ದುಲ್ಲಾ ಪ್ರಧಾನಮಂತ್ರಿ ಮುಂದೆ ತೋಡಿಕೊಂಡಿದ್ದರು. ಇದನ್ನು ಕೇಳಿದ ನೆಹರೂ ಅವರು, ಹುಡುಗನಿಗೆ ಸೂಕ್ತ ವಸತಿ ಸೌಲಭ್ಯ ಮತ್ತು ಸ್ನೇಹಿತರ ಸತ್ಸಂಗ ಏರ್ಪಡಿಸುವಂತೆ ರಾಜಸ್ತಾನದ ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಹುಡುಗ ಇಂಥ ಮಾತುಗಳಿಂದ ಮಾನಸಿಕ ಅಸ್ವಸ್ಥತೆ ಬೆಳಸಿಕೊಳ್ಳದಿರಲಿ ಎಂಬುದು ನೆಹರೂ ಉದ್ದೇಶವಾಗಿತ್ತು. "ಶೇಖ್ ಅಬ್ದುಲ್ಲಾ ಅವರ ಜೊತೆ ನಮಗೆ ಭಿನ್ನಾಭಿಪ್ರಾಯವಿದೆಯೆಂಬ ಕಾರಣದಿಂದಾಗಿ ನಾವು ಅವರ ಮಕ್ಕಳು ಮತ್ತು ಕುಟುಂಬದ ಬಗ್ಗೆ ಅನಾದರದಿಂದ, ನಿರ್ದಯೆಯಿಂದ ನಡೆದುಕೊಳ್ಳಲಾಗುತ್ತಿದೆ ಎನ್ನುವುದು ಕೆಲವರು ಮೂರ್ಖರ ಕಲ್ಪನೆ. ಇದೊಂದು ಅಸಂಬದ್ಧ, ಅಷ್ಟೇ, ನಮ್ಮ ಭಾವನೆಗೆ ವ್ಯತಿರಿಕ್ತವಾದದ್ದು. ಶೇಖ್ ಅಬ್ದುಲ್ಲಾ ಅವರು ಜೈಲಿನಲ್ಲಿರುವುದರಿಂದ ಅವರ ಮಕ್ಕಳಿಗೆ ಮತ್ತು ಕುಟುಂಬಕ್ಕೆ ಸಹಾಯ ಮಾಡುವುದು ನಮ್ಮ ವಿಶೇಷ ಹೊಣೆಗಾರಿಕೆಯಾಗಿದೆಯೆಂದು ನಾನು ಭಾವಿಸುತ್ತೇನೆ" ಎಂದು ನೆಹರೂ ಬರೆದಿದ್ದಾರೆ.

1964ರಲ್ಲಿ ಚೈನಾದ ಯುದ್ಧದಿಂದ ಹಾಗೂ ತಮ್ಮ ಕ್ಷೀಣಿಸುತ್ತಿರುವ ಆರೋಗ್ಯದಿಂದ ಎಚ್ಚೆತ್ತುಕೊಂಡ ನೆಹರೂ ಈ ವಿಷಯಕ್ಕೆ ಮಂಗಳ ಹಾಡಲು ನಿರ್ಧರಿಸಿದರು. ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಜೊತೆ ಮಾತನಾಡಿ ಅವರ ಒಪ್ಪಿಗೆ ಪಡೆದ ನಂತರ ಶೇಖ್ ಅಬ್ದುಲ್ಲಾರನ್ನು ಬಂಧನ ಮುಕ್ತಗೊಳಿಸಲು ನಿರ್ಧರಿಸಿದರು. ನೆಹರೂ ಅವರ ವಿಶ್ವಾಸಿ ಲಾಲ್ ಬಹಾದೂರ್ ಶಾಸ್ತ್ರಿಯವರು ಈ ಸುದ್ದಿಯನ್ನು ಪ್ರಪಂಚಕ್ಕೆ ಮುಟ್ಟಿಸಿದರು. "ಶೇಖ್ ಅಬ್ದುಲ್ಲಾ

ಅವರ ಸ್ಥಾನಬದ್ಧತೆ, ಸರ್ಕಾರಕ್ಕೆ ವಿಶೇಷವಾಗಿ ಪ್ರಧಾನಮಂತ್ರಿಯವರಿಗೆ ನೋವಿನ ಸಂಗತಿಯಾಗಿತ್ತೆಂದು" ಶಾಸ್ತ್ರಿ ಹೇಳಿದ್ದರು.

ಏಪ್ರಿಲ್ 8ರಂದು ಶೇಖ್ ಅಬ್ದುಲ್ಲಾ ಜೈಲಿನಿಂದ ಹೊರಬಂದು ಸ್ವತಂತ್ರರಾದರು. ತೆರೆದ ಕಾರಿನಲ್ಲಿ ನಗರದ ರಸ್ತೆಗಳಲ್ಲಿ ಸಂಚರಿಸಿದರು. ಜನರಿಂದ ಹೂವಿನಹಾರ, ಪುಷ್ಪಗುಚ್ಛಗಳನ್ನು ಸ್ವೀಕರಿಸಿದರು. ಮರುದಿನ ಸಾರ್ವಜನಿಕ ಸಭೆಯಲ್ಲಿ ಪ್ರಥಮ ಬಂಧನಮುಕ್ತ ಭಾಷಣ ಮಾಡಿದರು. ಈ ಭಾಷಣದಲ್ಲಿ ವೃತ್ತಪತ್ರಿಕೆಯೊಂದರ ವರದಿ ಪ್ರಕಾರ ಶೇಖ್ ಅಬ್ದುಲ್ಲಾ ಅವರು ಉಪಖಂಡವನ್ನು ಕಾಡುತ್ತಿರುವ ಎರಡು ಸಮಸ್ಯೆಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದರು. ಕೋಮು ದ್ವೇಷ ಹಾಗೂ ಕಾಶ್ಮೀರ ಆ ಎರಡು ಸಮಸ್ಯೆಗಳಾಗಿದ್ದವು. ನೆಹರೂ ಅವರು ತಮ್ಮ ಜೀವಿತಾವಧಿಯಲ್ಲಿ ಈ ಎರಡು ಸಮಸ್ಯೆಗಳನ್ನು ಪರಿಹರಿಸಬೇಕೆಂದು ಶೇಖ್ ಅಬ್ದುಲ್ಲಾ ಮನವಿ ಮಾಡಿದ್ದರು. ನೆಹರೂ ಅವರು ಗಾಂಧೀಜಿಯವರ ಜೊತೆ ಕೆಲಸ ಮಾಡಿದ ಕಟ್ಟಾಳುಗಳಲ್ಲಿ ಕೊನೆಯವರು. ಅವರ ನಂತರ ಈ ಸಮಸ್ಯೆಗಳಿಗೆ ಪರಿಹಾರ ಕಾಣುವುದು ಕಷ್ಟವಾಗುತ್ತದೆ ಎಂದು ಶೇಖ್‌ರು ಅಂದಿನ ಸಭೆಯಲ್ಲಿ ಹೇಳಿದ್ದರು.

ತಮ್ಮೊಡನೆ ಬಂದಿರುವಂತೆ ನೆಹರೂ ಶೇಖ್ ಅಬ್ದುಲ್ಲಾರಿಗೆ ಆಮಂತ್ರಣವಿತ್ತಿದ್ದರು. "ನಾನು ಮೊದಲು ಕಣಿವೆಗೆ ಹೋಗುತ್ತೇನೆ. ನನ್ನ ಮಿತ್ರರು ಮತ್ತು ಬೆಂಬಲಿಗರೊಂದಿಗೆ ಸಮಾಲೋಚಿಸುತ್ತೇನೆ" ಎಂದು ತಿಳಿಸಿದ ಶೇಖ್ ಅಬ್ದುಲ್ಲಾ ಈದ್ ನಂತರ (ಏ.23) ಪ್ರಧಾನಮಂತ್ರಿಯವರನ್ನು ಭೇಟಿ ಮಾಡುವ ಅಪೇಕ್ಷೆ ವ್ಯಕ್ತಪಡಿಸಿದ್ದರು. 11ರಂದು ಅವರು ಕಾರಿನಲ್ಲಿ ಶ್ರೀನಗರಕ್ಕೆ ಪಯಣಿಸಿದರು. ಇದು ಸುಮಾರು ಕೆಲವೇ ಕೆಲವು ಗಂಟೆಗಳ ಪಯಣದ ದೂರ. ಆದರೆ ಶೇಖ್ ಅಬ್ದುಲ್ಲಾ ಸಾವಧಾನದಿಂದ ಇದ್ದರು. ಮಾರ್ಗದುದ್ದಕ್ಕೂ ಹಳ್ಳಿ, ಪಟ್ಟಣಗಳಲ್ಲಿ ಕಾರು ನಿಲ್ಲಿಸಿ ಜನರ ಯೋಗಕ್ಷೇಮ ವಿಚಾರಿಸಿದರು. ನಿಂತಲ್ಲೆಲ್ಲ ಭಾಷಣ ಮಾಡಿದರು. ಸಾವಿರಾರು ಜನ ಈ ಸಭೆಗಳಿಗೆ ಬಂದಿದ್ದರು. ಅವರಲ್ಲಿ ಮಹಿಳೆಯರೇ ಹೆಚ್ಚಾಗಿದ್ದರು.

ತಮ್ಮ ಭಾಷಣಗಳಲ್ಲಿ ಶೇಖ್ ಅಬ್ದುಲ್ಲಾ ಅವರು ತಮ್ಮ ರಾಜ್ಯವನ್ನು ಪುರುಷರಿಬ್ಬರ (ಭಾರತ ಮತ್ತು ಪಾಕಿಸ್ತಾನ) ಮೋಹಿತ ಕನ್ಯೆಯೆಂದು ಬಣ್ಣಿಸಿದ್ದರು. ಆದರೆ, "ಇವರಿಬ್ಬರಿಗೂ ಕಾಶ್ಮೀರಿಗಳ ಬೇಕು-ಬೇಡಗಳೇನೆಂಬುದು ಅರ್ಥವಾಗಿಲ್ಲ, ಅರ್ಥಮಾಡಿಕೊಳ್ಳುವ ಕಾಳಜಿಯೂ ಇಲ್ಲ" ಎಂದು ಹೇಳಿದ್ದರು. ತಾವು ಜವಹರಲಾಲ್ ನೆಹರೂ ಅವರನ್ನು ಭೇಟಿ ಮಾಡಲಿರುವುದಾಗಿಯೂ, ಅದಕ್ಕೆ ಮುನ್ನ ಭಾರತೀಯರು ಯಾವುದೇ ನಿರ್ಧಾರಕ್ಕೆ ಬರಬಾರದೆಂದೂ" ಆಗ್ರಹಪಡಿಸಿದ್ದರು. ಶೇಖ್ ಅಬ್ದುಲ್ಲಾ ಅವರನ್ನು ಆಗ ಸಂದರ್ಶಿಸಿದ ಪತ್ರಕರ್ತರೊಬ್ಬರ ಪ್ರಕಾರ, ಶೇಖ್ ಅಬ್ದುಲ್ಲಾ ಅವರಲ್ಲಿ "ವೈಯಕ್ತಿಕ ಕಹಿ ಭಾವನೆಗಳೇನೂ ಇರಲಿಲ್ಲ. ನಿಜವಾದ ಅರ್ಥದಲ್ಲಿ ಅವರೊಬ್ಬ ಉಪದೇಶ ಮಾಡುವ ಸಂತರಂತಿದ್ದರು. ಕಾಶ್ಮೀರಕ್ಕೊಂದು ಪರಿಹಾರ ಅವರ ಹೊಕ್ಕಳುಬಳ್ಳಿಯ ಆರ್ತನಾದವಾಗಿತ್ತು." ಒಂದು ಸಭೆಯಲ್ಲಿ, ಸಭಿಕರೊಬ್ಬರು, "ನೆಹರೂ ಬಗ್ಗೆ ಈಗ ನಿಮಗೇನನ್ನಿಸುತ್ತದೆ" ಎಂದು ಕೇಳಿದರು.

ಅಬ್ದುಲ್ಲಾ ಹೇಳಿದರು: "ನನಗೇನೂ ಕೋಪತಾಪವಿಲ್ಲ. ಏಕೆಂದರೆ ಒಡಹುಟ್ಟಿದ ಸಹೋದರರಲ್ಲೂ ಭಿನ್ನಾಭಿಪ್ರಾಯವಿರುತ್ತದೆ. ಹಿಂದೆ ನೆಹರೂ ನನ್ನಲ್ಲಿ ಮಳೆಗರೆದ ಪ್ರೀತಿ ವಾತ್ಸಲ್ಯಗಳನ್ನು ನಾನು ಮರೆಯಲಾರೆ...ಹಳೆಯ ಸ್ನೇಹಿತನಾಗಿ, ಸಂಗಾತಿಯಾಗಿ ನಾನು ಅವರನ್ನು ಭೇಟಿಮಾಡಲಿದ್ದೇನೆ".

ಏಪ್ರಿಲ್ 18ರಂದು, ಜಮ್ಮು ಬಿಟ್ಟು ಬಂದ ಒಂದು ವಾರದ ಬಳಿಕ ಶೇಖ್ ಅಬ್ದುಲ್ಲಾ ಅನಂತನಾಗ್‌ನಿಂದ ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ತೆರೆದ ಜೀಪಿನಲ್ಲಿ ಪಯಣಿಸಿದ್ದರು. ಇದೊಂದು ಮೂವತ್ತು ಮೈಲಿಗಳ ಉದ್ದದ ಪಯಣ. ದಾರಿಯುದ್ದಕ್ಕೂ ಹುಚ್ಚೆದ್ದು ಜಯಘೋಷ ಮಾಡುತ್ತಿದ್ದ ಜನ ಸಮುದಾಯ. ಎಲ್ಲೆಲ್ಲೂ ಮಾವಿನ-ಬಾಳೆಯ ತಳಿರು ತೋರಣಗಳ ಕಮಾನುಗಳು, ಮಂಟಪಗಳು. ಆಖೈರಾಗಿ ಶೇಖ್ ಅಬ್ದುಲ್ಲಾ ಶ್ರೀನಗರವನ್ನು ಪ್ರವೇಶಿಸಿದಾಗ ಬೀದಿ ಬೀದಿಗಳೆಲ್ಲವೂ ಕಾಶ್ಮೀರದ ಜನತೆಯಿಂದ, ಅವರ ಶಾಲು ಸುಗಂಧ ದ್ರವ್ಯಗಳು ಮೊದಲಾದವುಗಳಿಂದ ತುಂಬಿತುಳುಕುತ್ತಿದ್ದು ಸೂರ್ಯರಶ್ಮಿಗೂ ಅಲ್ಲಿ ಜಾಗವಿರಲಿಲ್ಲ.

ಈ ಮಧ್ಯೆ ದೆಹಲಿಯಲ್ಲಿ, ನೆಹರೂ ಮತ್ತು ಶೇಖ್ ಅಬ್ದುಲ್ಲಾ ನಡುವಣ ಮಾತುಕತೆ ಆಡಳಿತಾರೂಢ ಕಾಂಗ್ರೆಸ್ಸಿನೊಳಗೇ ಅನೇಕ ಮಂದಿಯ ನಿದ್ದೆಗೆಡಿಸಿತ್ತು. ಕಾಶ್ಮೀರ ಮುಗಿದ ಅಧ್ಯಾಯವೆಂದು ಮಂತ್ರಿಮಂಡಲದ ಹಿರಿಯ ಸಚಿವರುಗಳು ಹೇಳಿಕೆ ನೀಡಿದರು. ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಹೇಳಿದರು. ಜನಸಂಘದವರಂತೂ ಇನ್ನೂ ಯುದ್ಧೋನ್ಮತ್ತರಾಗಿದ್ದರು. ಜನಸಂಘದ ಪ್ರಧಾನ ಕಾರ್ಯದರ್ಶಿ ದೀನ್ ದಯಾಳು ಉಪಾಧ್ಯಾಯರು ಶೇಖರ ಇತ್ತೀಚಿನ ಭಾಷಣಗಳನ್ನು ಖಂಡಿಸಿ ಹೇಳಿಕೆ ನೀಡಿದ್ದರು. ಕಾಶ್ಮೀರದ ಬಗ್ಗೆ ಸ್ವಯಂವೇದ್ಯವಾದ ಸಂಗತಿಗಳ ಬಗ್ಗೆಯೂ ಶೇಖ್‌ರು ತಕರಾರು ಎತ್ತಿದ್ದಾರೆಂದು ಉಪಾಧ್ಯಾಯರು ಹೇಳಿದ್ದರು. (ಉದಾಹರಣೆಗೆ, ಭಾರತದೊಂದಿಗೆ ಅದರ ಸೇರ್ಪಡೆ). ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿಯನ್ನು ತಹಬಂದಿಗೆ ತರುವ ಬದಲು ಶೇಖ್ ಅಬ್ದುಲ್ಲಾ ಅವರು ಎಲ್ಲವನ್ನೂ ಅಲುಗಾಡಿಸಲು, ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದ್ದಾರೆಂದು ಉಪಾಧ್ಯಾಯ ಆಪಾದಿಸಿದ್ದರು.

ಹಿಂದೂ ಬಲಪಂಥೀಯರ ವಿರೋಧ ನಿರೀಕ್ಷಿತವೇ. ಎಡಪಂಥೀಯರೂ ಶೇಖ್ ಅಬ್ದುಲ್ಲಾ ಅವರ ಬಗ್ಗೆ, ಅವರ ಉದ್ದೇಶಗಳ ಸಂಶಯದೃಷ್ಟಿ ತಾಳಿದ್ದರು. ಶೇಖ್ ಅಬ್ದುಲ್ಲಾ ಸಾಮ್ರಾಜ್ಯಶಾಹಿಯ ಬಲೆಯೊಳಗೆ ಬೀಳುವ ಅಪಾಯದಲ್ಲಿದ್ದಾರೆಂದೂ ಇದು ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸುವ ಹುನ್ನಾರವೆಂದೂ ಕಮ್ಯುನಿಸ್ಟ್ ಪಕ್ಷ ಭಾವಿಸಿತ್ತು. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ನೆಹರೂ ಒಬ್ಬರು ಮಾತ್ರ ಮುಕ್ತ ಮನಸ್ಸಿನವರಾಗಿದ್ದರು. ಅವರಿಗೆ, ಮಹಾತ್ಮಾ ಗಾಂಧಿಯವರ ಜೊತೆ ಕೆಲಸ ಮಾಡಿದ ಇಬ್ಬರು ನಿಷ್ಠಾವಂತ ಕಟ್ಟಾಳುಗಳಿಂದ ಅನಿರೀಕ್ಷಿತ ಬೆಂಬಲ ಸಿಕ್ಕಿತ್ತು. ಒಬ್ಬರು ಜಯಪ್ರಕಾಶ ನಾರಾಯಣ್, ಜೆ.ಪಿ. ಎಂದೇ ಪ್ರಖ್ಯಾತರಾಗಿದ್ದ ಮಾಜಿ ತೀವ್ರಗಾಮಿ ಸಮಾಜವಾದಿಗಳು. ಕಳೆದ ಒಂದು ದಶಕದಿಂದ ಸರ್ವೋದಯ ಚಳವಳಿಯ ಹಂಜುಧಾರಿಯಾಗಿದ್ದವರು. ಜೆ.ಪಿ. ಶೇಖ್ ಅಬ್ದುಲ್ಲಾರ ಹಳೆಯ ಗೆಳೆಯ. ಪಾಕಿಸ್ತಾನದೊಂದಿಗೆ ಉತ್ತಮ ಬಾಂಧವ್ಯದ ಅಗತ್ಯ ಕುರಿತು ಮಾತನಾಡುತ್ತಿದ್ದವರು.

1962ರಲ್ಲಿ ಜೆ.ಪಿ.ಯವರು ಭಾರತ ಪಾಕಿಸ್ತಾನ ರಾಜಿಸಂಧಾನ ಗುಂಪೊಂದನ್ನು ಕಟ್ಟಿದ್ದರು. ಉಭಯ ರಾಷ್ಟ್ರಗಳ ನಡುವಣ ಉಳಿದ ಸಮಸ್ಯೆಗಳ ಜೊತೆ ಕಾಶ್ಮೀರ ಸಮಸ್ಯೆಗೂ ಒಂದು ನ್ಯಾಯಸಮ್ಮತವಾದ ಗೌರವಯುತವಾದ ಪರಿಹಾರ ಹುಡುಕುವುದು ಈ ಗುಂಪಿನ ಉದ್ದೇಶವಾಗಿತ್ತು.

ಶೇಖ್ ಅಬ್ದುಲ್ಲಾ ಅವರ ಬಿಡುಗಡೆಯನ್ನು ಸ್ವಾಗತಿಸಿ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಗೆ ಬರೆದ ಸ್ವದಸ್ತೂರ ಸಹಿಯ ಲೇಖಕರೊಬ್ಬರು, ಕಾಂಗ್ರೆಸ್ಸಿನೊಳಗೆ ಮತ್ತು ಹೊರಗಿರುವ ಕೆಲವು ರಾಜಕಾರಣಿಗಳು ಶೇಖ್ ಅಬ್ದುಲ್ಲಾರ ಬಗೆಗೆ ಆಡಿರುವ ಕುಯುಕ್ತಿಯ, ಹೀನಾಯದ ಮಾತುಗಳನ್ನು ಖಂಡಿಸಿದ್ದರು. ವಿಪರೀತವಾಗಿ ವರ್ತಿಸಿದರೆ ಮತ್ತೆ ಜೈಲಿಗೆ ದೂಡಲಾಗುವುದೆಂದು ಈ ರಾಜಕಾರಣಿಗಳು ಶೇಖರಿಗೆ ಬೆದರಿಸಿದ್ದರು. "ನಿನ್ನೆಯ ಸ್ವಾತಂತ್ರ್ಯ ಹೋರಾಟಗಾರರು ಸಾಮ್ರಾಜ್ಯಶಾಹಿಗಳ ಭಾಷೆಯನ್ನು ಇಷ್ಟು ಸುಲಭವಾಗಿ ಅನುಕರಿಸುತ್ತಿದ್ದಾರೆ, ಎಂಥ ಅಸಾಧಾರಣಾ ಬೆಳವಣಿಗೆ ನೋಡಿ" ಎಂದು ಜಯಪ್ರಕಾಶರು ಕಟುವಾಗಿ ಜರಿದಿದ್ದರು.

ಕಾಶ್ಮೀರಿಗಳ ಆಶೋತ್ತರಗಳೇನೆಂಬುದನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳುವಂತೆ ಶೇಖ್ ಅಬ್ದುಲ್ಲಾ ಮಾತನಾಡಲಾರಂಭಿಸಿದ್ದು ದೆಹಲಿ ರಾಜಕಾರಣಿಗಳಲ್ಲಿ ಎಚ್ಚರಿಕೆಯ ಗಂಟೆ ಬಾರಿಸಿತ್ತು. ಶೇಖರ ಮಾತು ಸಂಪೂರ್ಣವಾಗಿ ನ್ಯಾಯಸಮ್ಮತವಾದುದೆಂದು ಜಯಪ್ರಕಾಶ್ ನಾರಾಯಣ್ ಭಾವಿಸಿದ್ದರು. ಏಕೆಂದರೆ 1957 ಮತ್ತು 1962 ರಲ್ಲಿ ಜಮ್ಮು ಕಾಶ್ಮೀರದಲ್ಲಿ ನಡೆದ ಚುನಾವಣೆಗಳು ಮುಕ್ತವೂ ನ್ಯಾಯಸಮ್ಮತವೂ ಆಗಿರಲಿಲ್ಲ. ಏನೇ ಅಗಲಿ, ಜನತೆಯ ತೀರ್ಪು ಏನೆಂಬುದು ಭಾರತಕ್ಕೆ ಖಚಿತವಾಗಿ ತಿಳಿದಿದ್ದಲ್ಲಿ ಅದನ್ನು ಪುನರುಚ್ಚರಿಸಲು ಅವಕಾಶ ಕಲ್ಪಿಸುವುದಕ್ಕೆ ವಿರೋಧ ಏಕೆ? ಎನ್ನುವುದು ಜೆ.ಪಿ ನಿಲುವಾಗಿತ್ತು. ಕಾಶ್ಮೀರ ಪ್ರಶ್ನೆಯನ್ನು ತೃಪ್ತಿಕರವಾಗಿ ಇತ್ಯರ್ಥಗೊಳಿಸುವುದರಿಂದ ಭಾರತ-ಪಾಕಿಸ್ತಾನ ನಡುವಣ ಬಾಂಧವ್ಯ ಸುಧಾರಣೆಗೆ ಸಹಾಯವಾದೀತಲ್ಲವೆ? ಭಾರತದ ನಾಯಕರು ಈ ಐತಿಹಾಸಿಕ ಮೂಹೂರ್ತ ಆಗ್ರಹಪಡಿಸುತ್ತಿರುವಂಥ ದೂರದೃಷ್ಟಿ ಮತ್ತು ಮುತ್ಸದ್ದಿತನವನ್ನು ಮೆರೆಯುವರೆಂಬ ಆಶಾಭಾವನೆಯನ್ನು ಜೆ.ಪಿ. ಈ ಲೇಖನದಲ್ಲಿ ವ್ಯಕ್ತಪಡಿಸಿದ್ದರು. ಸಂತೋಷದಾಯಕ ವಿಷಯವೆಂದರೆ ಆಡಳಿತ ಪಕ್ಷದಲ್ಲಿ ಸ್ವತಃ ಪ್ರಧಾನಮಂತ್ರಿಯವರೇ ವಿವೇಕದ ಸೊಲ್ಲಾಗಿರುವುದು ಎಂದು ಜೆ.ಪಿ. ಲೇಖನ ಮುಕ್ತಾಯಗೊಳಿಸಿದ್ದರು.

ನೆಹರೂ ಅವರಿಗೆ ದೊರೆತ ಇನ್ನೊಂದು ಅನಿರೀಕ್ಷಿತ ಬೆಂಬಲ ಸಿ. ರಾಜಗೋಪಾಲಾಚಾರಿಯವರದಾಗಿತ್ತು. ಒಂದು ಕಾಲಕ್ಕೆ ಆಪ್ತ ಮಿತ್ರರಾಗಿದ್ದ ರಾಜಾಜಿ ಈಗ ನೆಹರೂ ಅವರ ರಾಜಕೀಯ ವಿರೋಧಿಯಾಗಿದ್ದರು. ಸ್ವತಂತ್ರ ಪಕ್ಷದ ಸಂಸ್ಥಾಪಕರಾಗಿದ್ದ ರಾಜಾಜಿ ನೆಹರೂ ಅವರ ಆರ್ಥಿಕ ನೀತಿಗಳನ್ನು ತಮ್ಮ ಟೀಕಾಸ್ತ್ರಗಳಿಂದ ಛಿದ್ರ-ಛಿದ್ರಗೊಳಿಸಿದ್ದರು. ಇವರ ಟೀಕೆಗಳಲ್ಲಿ ಕೆಲವೊಮ್ಮೆ ವೈಯಕ್ತಿಕ ಹರಿಹಾಯುವಿಕೆಯೂ ಇರುತ್ತಿತ್ತು. ಈಗ ತಮ್ಮ ಅನುಯಾಯಿಗಳನ್ನೇ ಅಚ್ಚರಿಗೊಳಿಸುವಂತೆ ರಾಜಾಜಿಯವರು ಶೇಖರ ಬಿಡುಗಡೆಗೆ ನೆಹರೂ

ಮುಂದಾಗಿರುವುದನ್ನು ಬೆಂಬಲಿಸಿದ್ದರು. ಶೇಖರನ್ನು ಮತ್ತೆ ಜೈಲಿಗೆ ಹಾಕುವ ಬೆದರಿಕೆಗಳನ್ನು ಜೆ.ಪಿ.ಯವರಂತೆ ರಾಜಾಜಿಯವರೂ ಖಂಡಿಸಿದ್ದರು. ಶೇಖರನ್ನು ಮತ್ತೆ ಜೈಲಿಗೆ ದೂಡಿ "ಬಾಯಿ ಮುಚ್ಚಿಸಿ ಮಣಿಸುವ" ಬೆದರಿಕೆಯನ್ನು ಖಂಡಿಸಿದ್ದ ರಾಜಾಜಿಯವರು "ಪ್ರಧಾನಮಂತ್ರಿಯವರು ಅಸ್ವಸ್ಥರಾಗಿರಬಹುದು, ಆದರೆ ಅವರು ಮಾನಸಿಕ ಸಮತೋಲ ಕಾಪಾಡಿಕೊಳ್ಳಬಲ್ಲರು ಹಾಗೂ ಮೂರ್ಖತನದ ಕ್ರಮಕೈಗೊಂಡು ಭಾರತದ ತಲೆ ತಗ್ಗಿಸುವಂತೆ ಮಾಡಲು ಅವರು ನಿರಾಕರಿಸಿರುವುದು ಸುಸ್ಪಷ್ಟವಾಗಿದೆ" ಎಂದು ಪ್ರಶಂಶಿಸಿದ್ದರು.

ಶೇಖ್ ಅಬ್ದುಲ್ಲಾ ಅವರ ಬಿಡುಗಡೆ, ತಮ್ಮನ್ನು ತಾವೇ ಆಳಿಕೊಳ್ಳುವ ಕಾಶ್ಮೀರಿಗಳ ಮಾನವ ಹಕ್ಕು ಚಲಾವಣೆಗೆ ಒಂದು ಪೂರ್ವ ಪೀಠಿಕೆಯಾಗಬೇಕು. ಕಾಶ್ಮೀರ ಸಮಸ್ಯೆ ಇತ್ಯರ್ಥದಿಂದ ಭಾರತ-ಪಾಕಿಸ್ತಾನಗಳ ನಡುವಣ ವಿವಾದಗಳನ್ನು ಬಗೆಹರಿಸಲು ಹಾದಿ ಸುಗಮವಾಗುತ್ತದೆ ಎಂಬುದು ರಾಜಾಜಿಯವರ ಅಭಿಪ್ರಾಯವಾಗಿತ್ತು.

ರಾಜಾಜಿಯವರು ಹೀಗೆ ಬರೆದಿದ್ದರು:

> *"ಪ್ರಸ್ತುತ ಬಿಕ್ಕಟ್ಟಿನ ಬಗ್ಗೆ ಮೂಲಭೂತವಾಗಿ ಯೋಚಿಸಿ, ಪರೀಕ್ಷಿಸಿ ನೋಡಿ. ನಮ್ಮಲ್ಲಿನ ಪಾಕ್ ವಿರೋಧಿ ಬಣಗಳ ಕುರುಡು ಭಾವೋನ್ಮಾದಗಳಿಗೆ ನಾವು ಮಣಿಯಬೇಕೆ? ಪರಸ್ಪರ ಸಂಶಯಿಸುತ್ತಾ, ಪರಸ್ಪರ ದ್ವೇಷಿಸುತ್ತಾ ಹೋದಲ್ಲಿ ಭಾರತ-ಪಾಕಿಸ್ತಾನಗಳಿಗೆ ಭವಿಷ್ಯವಿದೆಯೆ? ಶಸ್ತ್ರಾಸ್ತ್ರ ಸಂಗ್ರಹಿಸಿ ಪರಸ್ಪರ ಸೇನಾ ಬಲ ವೃದ್ಧಿ ಮಾಡಿಕೊಳ್ಳುವ ಮೂಲಕ, ನಾವಿಬ್ಬರೂ ವಿದೇಶಿ ನೆರವಿನ ಉಸುಕಿನಲ್ಲಿ ನಮ್ಮ ಸೌಧಗಳನ್ನು ನಿರ್ಮಿಸುತ್ತ ಮತ್ತೊಂದು ಕುರುಕ್ಷೇತ್ರಕ್ಕೆ ಸಿದ್ಧತೆ ನಡೆಸಿದ್ದೇವೆಯೆ? ನಾವು ಇದನ್ನೇ ಮಾಡುತ್ತಾ ಮುಂದುವರಿದಲ್ಲಿ ಖಂಡಿತವಾಗಿಯೂ ನಮ್ಮನ್ನು ನಾವೇ ನಾಶಮಾಡಿಕೊಳ್ಳಲಿದ್ದೇವೆ...ಗತಕಾಲದ ಹಗೆತನ ಮತ್ತು ಅದರಿಂದ ಹುಟ್ಟಿರುವ ಸಂಶಯ, ಹೆದರಿಕೆಗಳ ಆಧಾರದಿಂದ ಶಸ್ತ್ರಾಸ್ತ್ರ ಪೈಪೋಟಿ ಮುಂದುವರಿಸಿದಲ್ಲಿ ಭವಿಷ್ಯದ ಅಭ್ಯುದಯಕಾರಿ ಆಸೆಗಳೆಲ್ಲ ಕೇವಲ ಮರೀಚಿಕೆಯಾಗುತ್ತವೆ ಅಷ್ಟೇ".*

VI

ಏತನ್ಮಧ್ಯೆ, ಕಾಶ್ಮೀರದಲ್ಲಿ ಶೇಖ್ ಅಬ್ದುಲ್ಲಾ ತಮ್ಮ ಸಹೋದ್ಯೋಗಿಗಳು ಮತ್ತು ಸಹವರ್ತಿಗಳ ಜೊತೆ ಮಾತುಕತೆ ನಡೆಸಿದ್ದರು. ತಾವು ಜೈಲಿನಲ್ಲಿದ್ದಾಗ ತಮ್ಮನ್ನು ಪಾಕಿಸ್ತಾನದ ಒಡನಾಡಿ ಎಂದು ಪಾಕ್ ಜೊತೆ ತಮ್ಮ ಸಂಬಂಧ ಕಲ್ಪಿಸಿದ್ದು ಅವರಿಗೆ ತಿಳಿಯಿತು. ಕಾಶ್ಮೀರ ಪಾಕಿಸ್ತಾನದೊಂದಿಗೆ ಸೇರಬೇಕೆಂಬ ಅಪೇಕ್ಷೆಯನ್ನು ತಾವು ಎಂದೂ ವ್ಯಕ್ತಪಡಿಸಿಲ್ಲ ಎಂದು ಶೇಖ್ ಅಬ್ದುಲ್ಲಾ ವಿಚಾರಣೆ ಕಾಲದಲ್ಲಿ ಖಂಡತುಂಡವಾಗಿ ಹೇಳಿದ್ದರು. ಭಾರತ ಅಥವಾ ಸ್ವಾತಂತ್ರ್ಯ ಇವೆರಡೇ ತಾವು ಬೆಂಬಲಿಸಿದ್ದ ಆಯ್ಕೆಗಳು ಎಂದು ಅವರು ಸ್ಪಷ್ಟಪಡಿಸಿದ್ದರು. ಅವರ ವಿಚಾರಣೆಯ ವಿವರವಾದ ವರದಿಗಳು ಕಣಿವೆಯ ಜನರಿಗೆ ಮುಟ್ಟಲೇ ಇಲ್ಲ.

ಭಾರತದ ವಿರುದ್ಧ ಒಳಸಂಚು ನಡೆಸಿದ್ದಕ್ಕಾಗಿ ಶೇಖ್ ಅಬ್ದುಲ್ಲಾರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ ಎಂಬುದಷ್ಟೇ ಅವರಿಗೆ ಗೊತ್ತಿದ್ದದ್ದು. ಇಷ್ಟು ಸಾಲದೆ, ಅವರು ಪಾಕಿಸ್ತಾನದ ಮಿತ್ರರೆಂದು ಗೈರುಹಾಜರಿ ತೀರ್ಮಾನಕ್ಕೆ ಬರಲು?

ಶೇಖ್ ಅಬ್ದುಲ್ಲಾ ಅವರು ಜನಮತ ಗಣನೆಗೆ ಚಳವಳಿ ನಡೆಸಿದ್ದಾರೆ, ಆದ್ದರಿಂದ ಅವರು ಭಾರತದ ಶತ್ರು ಎನ್ನುವಂತೆ ಬಕ್ಷಿ ಗುಲಾಂ ಅಹ್ಮದ್ ಅವರ ಸರ್ಕಾರವೂ ಬಣ್ಣಕೊಟ್ಟಿತ್ತು. ಬಕ್ಷಿಯವರ ಸರ್ಕಾರದ ಇಂಥ ಪ್ರಚಾರ ಜನರ ನಂಬಿಕೆಯನ್ನು ದೃಢಗೊಳಿಸಿತ್ತು. ಜೊತೆಗೆ ಬಕ್ಷಿ ಆಡಳಿತದ ಕಾಯಿದೆ ಕುತಂತ್ರ ಮತ್ತು ಭ್ರಷ್ಟಾಚಾರಗಳು ಕಾಶ್ಮೀರಿಗಳ ಕಣ್ಣುಗಳಲ್ಲಿ ಭಾರತದ ವರ್ಚಸ್ಸನ್ನು ಕಳಂಕಮಯವಾಗಿಸಿದ್ದವು. ಕಾಶ್ಮೀರದಲ್ಲಿ ಈಗ ಪಾಕಿಸ್ತಾನ ಪರವಾಗಿರುವವರೇ ಹೆಚ್ಚಾಗಿದ್ದಾರೆ ಎಂಬುದು ಶೇಖ್ ಅಬ್ದುಲ್ಲಾ ಅರಿವಿಗೆ ಬಂದಿತ್ತು. ಇದರಿಂದ ಅವರಿಗೆ ಬೇಸರವಾಗಿತ್ತು. ಆದರೆ ಮಣ್ಣಿನ ವಾಸನೆಯನ್ನು, ಜನರ ವಾಸ್ತವ ಭಾವನೆಗಳನ್ನು ಗ್ರಹಿಸಿದ ಅವರು ಕ್ರಮೇಣ ಜನರನ್ನು ತಮ್ಮ ಅಭಿಪ್ರಾಯಗಳತ್ತ ಒಲಿಸಿಕೊಳ್ಳುವ ಪ್ರಯತ್ನ ಮಾಡಿದರು. ಪ್ರಭಾವಶಾಲಿ ಪುರೋಹಿತರಾಗಿದ್ದ ಮೌಲ್ವಿ ಫಾರೂಕಿ ಅವರನ್ನು ಭೇಟಿ ಮಾಡಿ, ಎರಡು ರಾಷ್ಟ್ರಗಳ ಸಿದ್ಧಾಂತದ ಮುಂದುವರಿಕೆಯಾಗಿ ಕಾಶ್ಮೀರ ಪಾಕಿಸ್ತಾನದೊಂದಿಗೆ ಸೇರ್ಪಡೆಯಾಗಬೇಕು ಎನ್ನುವ ಆಗ್ರಹಕ್ಕೆ ಬದಲು ವಾಸ್ತವಿಕ ಪರಿಹಾರಕ್ಕೆ ಬೆಂಬಲ ಸೂಚಿಸುವಂತೆ ಒತ್ತಾಯಪಡಿಸಿದರು.

ಜೈಲಿನಿಂದ ಹೊರಬಂದ ಎರಡು ವಾರಗಳ ನಂತರ, ಏಪ್ರಿಲ್ 23ರಂದು ಶೇಖ್ ಅಬ್ದುಲ್ಲಾ ಶ್ರೀನಗರದ ಪ್ರಾರ್ಥನಾ ಸಭೆಯೊಂದರಲ್ಲಿ ಭಾಷಣ ಮಾಡಿದರು. ಕಾಶ್ಮೀರ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಾಗ, ಅದರಿಂದ ಭಾರತದಲ್ಲಿರುವ 50 ದಶಲಕ್ಷ ಮುಸ್ಲಿಮರು ಹಾಗೂ ಪೂರ್ವ ಪಾಕಿಸ್ತಾನದಲ್ಲಿರುವ 10 ದಶಲಕ್ಷ ಹಿಂದೂಗಳ ಮೇಲೆ ಆಗಬಹುದಾದ ಪರಿಣಾಮಗಳನ್ನೂ ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು. ಮೂರು ದಿನಗಳ ನಂತರ, ದೆಹಲಿಗೆ ತೆರಳುವ ಮುನ್ನ ಮಾಡಿದ ಕೊನೆಯ ಭಾಷಣದಲ್ಲಿ, ಕೋಮು ಶಾಂತಿಯನ್ನು ಪಾಲಿಸಿ ಭಾರತ ಮತ್ತು ಪಾಕಿಸ್ತಾನಗಳೆರಡಕ್ಕೂ ಆದರ್ಶಪ್ರಾಯವಾಗುವಂತೆ ಕಾಶ್ಮೀರಿಗಳಿಗೆ ಒತ್ತಾಯಪೂರ್ವಕವಾಗಿ ಹೇಳಿದ್ದರು. "ಕಾಶ್ಮೀರಿ ಮುಸ್ಲಿಮರು ಯಾರೂ ಎಂದೆಂದಿಗೂ ಅಲ್ಪಸಂಖ್ಯಾತರ ವಿರುದ್ಧ ಕೈ ಎತ್ತುವುದಿಲ್ಲ" ಎಂದು ಅವರು ಸಾರಿದ್ದರು.

ಶೇಖ್ ಅಬ್ದುಲ್ಲಾ ಅವರ ಆಗಮನಕ್ಕೆ ಒಂದು ದಿನ ಮುಂಚೆ, ಏಪ್ರಿಲ್ 28ರಂದು ದೆಹಲಿಯಲ್ಲಿ ಜನಸಂಘ ಬೃಹತ್ ಮೆರವಣಿಗೆಯೊಂದನ್ನು ನಡೆಸಿತ್ತು. ಮೆರವಣಿಗೆಕಾರರು ಶೇಖ್ ಅಬ್ದುಲ್ಲಾ ಮತ್ತು ನೆಹರೂ ವಿರುದ್ಧ ಘೋಷಣೆಗಳನ್ನು ಕೂಗಿದ್ದರು. 370ನೇ ವಿಧಿಯನ್ನು ರದ್ದುಗೊಳಿಸಿ ಕಾಶ್ಮೀರವನ್ನು ಭಾರತದ ಅಂತರ್ಗತ ಅವಿಭಾಜ್ಯ ಅಂಗವೆಂದು ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಪಡಿಸಿದ್ದರು. ಅದೇ ದಿನ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಎ.ಬಿ. ವಾಜಪೇಯಿಯವರು, "ಜಮ್ಮು ಮತ್ತು ಕಾಶ್ಮೀರ ಈಗಾಗಲೇ

ಭಾರತ ಒಕ್ಕೂಟದೊಂದಿಗೆ ಸೇರಿಯಾಗಿದ್ದು ಈ ವಿಷಯದಲ್ಲಿ ಚರ್ಚೆಗೆ ಆಸ್ಪದ ಇಲ್ಲವೆಂದು ಶೇಖ್ ಅಬ್ದುಲ್ಲಾರಿಗೆ ತಿಳಿಸುವಂತೆ" ಪ್ರಧಾನಮಂತ್ರಿಗೆ ಆಗ್ರಹಪಡಿಸಿದ್ದರು.

ಏಪ್ರಿಲ್ 29ರಂದು ಶೇಖ್ ಅಬ್ದುಲ್ಲಾ ತಮ್ಮ ಪ್ರಮುಖ ಸಂಗಾತಿಗಳೊಂದಿಗೆ ದೆಹಲಿಯಲ್ಲಿ ಬಂದಿಳಿದರು. ವಿಮಾನ ನಿಲ್ದಾಣದಿಂದ ನೇರವಾಗಿ ತೀನ್‌ಮೂರ್ತಿ ಭವನಕ್ಕೆ ತೆರಳಿದರು. ಅಲ್ಲಿ ಅಬ್ದುಲ್ಲಾ ಅವರನ್ನು ಸ್ವಾಗತಿಸಲು ಪ್ರಧಾನಮಂತ್ರಿ ಕಾದು ನಿಂತಿದ್ದರು. 1953ರ ಆಗಸ್ಟ್‌ನಲ್ಲಿ ಶೇಖರನ್ನು ಜೈಲಿಗೆ ದೂಡಲಾಗಿತ್ತು. ನಂತರ ಶೇಖ್-ನೆಹರೂ ಅವರ ಮೊದಲ ಸಮಾಗಮ ಇದಾಗಿತ್ತು. ಆಗ ಅಲ್ಲಿದ್ದ ಪ್ರತ್ಯಕ್ಷದರ್ಶಿಯೊಬ್ಬರು ಬರೆದಿರುವಂತೆ "ಇಬ್ಬರೂ ಸ್ನೇಹದಿಂದ ಪರಸ್ಪರ ಬಾಚಿ ತಬ್ಬಿಕೊಂಡರು. ಹನ್ನೊಂದು ವರ್ಷಗಳ ನಂತರ ಅವರು ಭೇಟಿಯಾಗುತ್ತಿದ್ದರು. ಅವರಿಬ್ಬರು ಉಭಯಕುಶಲೋಪರಿ ಮಾತನಾಡಲಾರಂಭಿಸಿದಂತೆ ಅವರ ಮಾತುಗಳಲ್ಲಿ ಮುಜುಗರ ಲೇಶಾಂಶವೂ ಇರಲಿಲ್ಲ. ಈ ಅವಧಿಯಲ್ಲಿ ಏನೆಲ್ಲ ಆಗಿಹೋಯಿತು ಎನ್ನುವುದರ ಬಗ್ಗೆ ಕಹಿ ಭಾವನೆಯೂ ಕಾಣಿಸಿಕೊಳ್ಳಲಿಲ್ಲ". ಒಳಕ್ಕೆ ಹೋಗುವ ಮುನ್ನ ಇಬ್ಬರೂ ಛಾಯಾಗ್ರಾಹಕರಿಂದ ವಿವಿಧ ಭಂಗಿಗಳಲ್ಲಿ ಫೋಟೊ ತೆಗೆಸಿಕೊಂಡಿದ್ದರು.

ರಾಷ್ಟ್ರವೊಂದರ ನಾಯಕ ಮತ್ತು ಇತ್ತೀಚಿನವರೆಗೆ ದ್ರೋಹಿ ಎಂದೇ ಭಾವಿಸಲಾಗಿದ್ದ ವ್ಯಕ್ತಿ ಇವರಿಬ್ಬರ ನಡುವಣ ರಾಜಿ ಸಾಮರಸ್ಯ ಇದಾಗಿತ್ತು. ಇದು, ಮುಂದೆ ಮೂವತ್ತು ವರ್ಷಗಳಲ್ಲಿ ದಕ್ಷಿಣ ಆಫ್ರಿಕಾದ ಅಧ್ಯಕ್ಷರು ಮತ್ತು ಅವರ ಹೆಸರಾಂತ ರಾಜಕೀಯ ಬಂದಿ ನಡುವಣ ವಿಸ್ಮಯಕಾರಿ ರಾಜಿಸಂಧಾನದ ಮುಂಗಾಣ್ಕೆಯಾಗಿತ್ತು. ಆದರೆ ಎಫ್.ಡಬ್ಲ್ಯು. ಕ್ಲರ್ಕ್ ಅವರು ತಮ್ಮೊಂದಿಗಿರುವಂತೆ ನೆಲ್ಸನ್ ಮಂಡೇಲಾ ಅವರಿಗೆ ಆಮಂತ್ರಣ ನೀಡುವ ಸೌಜನ್ಯವನ್ನೂ ತೋರಲಿಲ್ಲ ಎನ್ನುವುದೊಂದೇ ಅಪವಾದ.

ಶೇಖ್ ಅಬ್ದುಲ್ಲಾ ಅವರು ತೀನ್ ಮೂರ್ತಿ ಭವನದಲ್ಲಿ ನೆಹರೂ ಜೊತೆ ಮೂರು ದಿವಸ ಇದ್ದರು. ಅವರು ಪ್ರತಿದಿನ ಒಂದು ಅಥವಾ ಎರಡು ಸಲ ಸಹಾಯಕರಿಲ್ಲದೆಯೇ ಭೇಟಿಯಾಗುತ್ತಿದ್ದರು. ಪ್ರಧಾನಮಂತ್ರಿ ತಮ್ಮ ಪೂರ್ವ ನಿಯೋಜಿತ ಕೆಲಸಗಳಲ್ಲಿ ಮಗ್ನರಾಗಿದ್ದಾಗ ಶೇಖ್ ಅಬ್ದುಲ್ಲಾ ಅವರು ವಿವಿಧ ನಾಯಕರುಗಳೊಂದಿಗೆ ಚರ್ಚಿಸಿ ಭಾರತದಲ್ಲಿನ ಬಗೆ ಬಗೆಯ ಅಭಿಪ್ರಾಯಗಳನ್ನು ಗ್ರಹಿಸಿದರು. ಅವರು ಕಾಂಗ್ರೆಸ್ ಮಂತ್ರಿಗಳೊಂದಿಗೆ, ವಿರೋಧಪಕ್ಷದ ನಾಯಕರುಗಳೊಂದಿಗೆ, ಜಯಪ್ರಕಾಶ ನಾರಾಯಣರಂಥ ರಾಜಕೀಯೇತರ ಗಣ್ಯರೊಂದಿಗೆ ಮಾತುಕತೆ ನಡೆಸಿದರು. ರಾಜ್‌ಘಾಟ್‌ಗೆ ತೆರಳಿ ಗಾಂಧಿ ಸಮಾಧಿಯ ಮೇಲೆ ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು. ದೆಹಲಿಯ ದೊಡ್ಡ ಮಸೀದಿಯಾದ ಜಾಮಾ ಮಸೀದಿಯ ಪ್ರಾರ್ಥನಾ ಸಭೆಯನ್ನುದ್ದೇಶಿಸಿ ಮಾತನಾಡಿದರು.

ನೆಹರೂ ಅವರು ಶೇಖ್ ಅಬ್ದುಲ್ಲಾರೊಂದಿಗೆ ಮಾತುಕತೆ ನಡೆಸಿರುವುದು ಜನಸಂಘಕ್ಕೆ ಅಪ್ರಿಯವಾದ ಸಂಗತಿಯಾಗಿತ್ತು. ಜೊತೆಗೆ ನೆಹರೂ ಮಂತ್ರಿಮಂಡಲದಲ್ಲೇ ಕೆಲವರಿಗೆ ಇದು ಇಷ್ಟವಾಗಿರಲಿಲ್ಲ. ಇದರಿಂದ ಮತ್ತೆ ಕಾಶ್ಮೀರ ವಿವಾದ ತಲೆ ಎತ್ತಲಿದೆ

ಎನ್ನುವುದು ಅವರ ಚಿಂತೆಯಾಗಿತ್ತು. ಇದನ್ನು ತಡೆಯುವ ಪೂರ್ವಭಾವಿ ಕ್ರಮ ಎಂಬಂತೆ ಸಚಿವರೊಬ್ಬರು "ಉಪಖಂಡದ ಹಿತದೃಷ್ಟಿಯಿಂದ ಕಾಶ್ಮೀರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದು ಕ್ಷೇಮಕರವೆಂದು" ಸಂಸತ್ತಿಗೆ ತಿಳಿಸಿದ್ದರು. ಅಲ್ಲದೆ, "ಮುಂಬಯಿ ಅಥವಾ ಬಿಹಾರಗಳಂತೆ ಕಾಶ್ಮೀರದ ವಿಷಯದಲ್ಲೂ ಸ್ವಯಂ ನಿರ್ಧಾರದ ಮಾತುಕತೆಗೆ ಅವಕಾಶವಿಲ್ಲ" ಎಂದು 27 ಮಂದಿ ಕಾಂಗ್ರೆಸ್ ಎಂ.ಪಿ. ಗಳು ಹೇಳಿಕೆಯೊಂದನ್ನು ನೀಡಿದ್ದರು.

ಕಾಂಗ್ರೆಸ್ ಪಕ್ಷದೊಳಗೆ ನೆಹರೂ ಪ್ರಯತ್ನಗಳ ಬಗ್ಗೆ ಸದ್ಭಾವನೆ-ಸಹಾನುಭೂತಿಗಳನ್ನು ಹೊಂದಿದ್ದ ಏಕೈಕ ವ್ಯಕ್ತಿಯೆಂದರೆ ಲಾಲ್ ಬಹದ್ದೂರ್ ಶಾಸ್ತ್ರಿಯವರು. ನೆಹರೂ ಅವರು ಶೇಖ್ ಅಬ್ದುಲ್ಲಾ ಜೊತೆ ಗಂಭೀರ ಚರ್ಚೆ ನಡೆಸುವುದರಲ್ಲಿ ಅರ್ಥವಿದೆಯೆಂದು ವಿರೋಧಿ ನಾಯಕರಲ್ಲಿ ಕೆಲವರ ಭಾವನೆಯಾಗಿತ್ತು. ಸ್ವತಂತ್ರ ಪಕ್ಷದ ನಾಯಕ ಮೀನೂ ಮಸಾನಿಯವರು ರಾಜಾಜಿಯವರಿಗೆ ಹೀಗೊಂದು ತಂತಿ ಕಳುಹಿಸಿದ್ದರು:

> *"ನೆಹರೂ ಮತ್ತು ಲಾಲ್ ಬಹದೂರ್ ಶಾಸ್ತ್ರಿಯವರು ಪರಿಹಾರವೊಂದನ್ನು ಕಂಡುಹಿಡಿಯಲು ಶೇಖ್ ಅಬ್ದುಲ್ಲಾರೊಂದಿಗೆ ನಡೆಸಿರುವ ಪ್ರಯತ್ನದ ಬಗ್ಗೆ ಕಾಂಗ್ರೆಸ್ಸಿನೊಳಗೇ ಗೊಂದಲವುಂಟಾಗಿರುವುದು, ಜನಸಂಘ ಮತ್ತು ಕಮ್ಯುನಿಸ್ಟರ ಆಲೋಚನೆಗಳಲ್ಲೂ ಗೊಂದಲವಿರುವುದು ಅರ್ಥವಾಗುವಂಥಾದ್ದೇ. ಸೂಕ್ತ ಕ್ರಮ ಕೈಗೊಳ್ಳುವಂತೆ ಅವರನ್ನು ಪ್ರೋತ್ಸಾಹಿಸಿ, ಅಂಥಕ್ರಮಕ್ಕೆ ನಿಮ್ಮ ವೈಯಕ್ತಿಕ ಬೆಂಬಲ ಸೂಚಿಸುವಂಥ ತಂತಿಯೊಂದನ್ನು-ಪತ್ರವೊಂದನ್ನು ನೆಹರೂಗೆ ನೀವು ಬರೆದಲ್ಲಿ ಅದರಿಂದ ಮಾತುಕತೆಯ ಪ್ರಗತಿಗೆ ಸಹಾಯವಾಗುತ್ತದೆ".*

ರಾಜಾಜಿಯವರು ನೆಹರೂಗೆ ಪತ್ರ ಬರೆಯಲಿಲ್ಲ. ಜಂಬವೋ, ತಿರಸ್ಕಾರದ ಭೀತಿಯೋ, ನೆಹರೂಗೆ ಬರೆಯಲಿಲ್ಲ. ಕಾಶ್ಮೀರಕ್ಕೆ ಒಂದು ರೀತಿಯ ಸ್ವಯಮಾಧಿಕಾರ ಕೊಡುವಂತೆ ಒತ್ತಾಯಪಡಿಸಿ ಲಾಲ್ ಬಹಾದೂರ್ ಶಾಸ್ತ್ರಿಯವರಿಗೆ ರಾಜಾಜಿ ಪತ್ರ ಬರೆದರು. "ಕಾಶ್ಮೀರಕ್ಕೆ ಸ್ವಯಂ ನಿರ್ಧಾದ ಹಕ್ಕು ನೀಡಿಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಭಾರತ-ಪಾಕಿಸ್ತಾನದ ನಡುವಣ ದ್ವೇಷ ಅಸೂಯೆಗಳನ್ನು ತಗ್ಗಿಸುವ ಗುರಿಗಿಂತ ಅದು ಅಮುಖ್ಯವಾದದ್ದು" ಎಂಬುದು ರಾಜಾಜಿ ವಾದವಾಗಿತ್ತು. ಕಾಶ್ಮೀರ ಬಿಟ್ಟುಕೊಟ್ಟರೆ, ಬೇರೆಡೆಗಳಲ್ಲಿ ನಾವು ಪ್ರತ್ಯೇಕತೆಯನ್ನು ಪ್ರೋತ್ಸಾಹಿಸಿದಂತಾಗುತ್ತದೆ ಎನ್ನುವ ಆಲೋಚನೆ ನಿರಾಧಾರಿತವೆಂದು ರಾಜಾಜಿ ಭಾವಿಸಿದ್ದರು. "ನೀವು ಮತ್ತು ಜವಹರಲಾಲ್‌ಜೀ ಅವರು, ದೂರದೃಷ್ಟಿಯ ನೆರವು-ಪ್ರೇರಣೆಗಳಿಂದ ಈ ಮಹಾನ್ ಅವಕಾಶವನ್ನು ಫಲಪ್ರದವನ್ನಾಗಿಸುವಿರಿ ಎಂದು ನಾನು ಆಶಿಸುತ್ತೇನೆ" ಎಂದು ರಾಜಾಜಿಯವರು ಶಾಸ್ತ್ರಿಯವರಿಗೆ ಬರೆದಿದ್ದರು.

ಬಿಡುಗಡೆಯಾದ ತರುವಾಯದಲ್ಲೇ ಶೇಖ್ ಅಬ್ದುಲ್ಲಾ ಅವರು ರಾಜಾಜಿಯವರಿಗೆ ಖುದ್ದಾಗಿ ಗೌರವ ಸಲ್ಲಿಸಿ ಅವರ ಪ್ರಬುದ್ಧ ಬುದ್ಧಿವಾದದ ಲಾಭ ಪಡೆದುಕೊಳ್ಳುವ ಆಸೆ ವ್ಯಕ್ತಪಡಿಸಿದ್ದರು. ನೆಹರೂ ಜೊತೆ ಮಾತುಕತೆಯ ನಂತರ ಅವರು ರಾಜಾಜಿಯವರನ್ನು

ಭೇಟಿ ಮಾಡಲು ದಕ್ಷಿಣದತ್ತ ಮುಖಮಾಡಿದರು. ಮಾರ್ಗ ಮಧ್ಯೆ ವಾರ್ಧಾದಲ್ಲಿ ಗಾಂಧಿ ಅನುಯಾಯಿ ನಾಯಕರಾದ ವಿನೋಬಾ ಭಾವೆಯವರನ್ನು ಭೇಟಿ ಮಾಡಿ ಗೌರವಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಂಡರು. ಪತ್ರಕರ್ತರೊಬ್ಬರ ಜೊತೆ ಮಾತನಾಡುತ್ತಾ ಶೇಖ್‌ರು ತಾವು ವಿನೋಬಾರೊಂದಿಗೆ "ಆಧ್ಯಾತ್ಮವನ್ನೂ" ರಾಜಾಜಿಯವರೊಂದಿಗೆ "ಕಾರ್ಯಸಾಧ್ಯ ರಾಜಕಾರಣವನ್ನೂ" ಚರ್ಚಿಸಲಿರುವುದಾಗಿ ತಮಾಷೆ ಮಾಡಿದ್ದರು.

ಮೇ 4ರಂದು ಲಾಲ್ ಬಹಾದೂರ್ ಶಾಸ್ತ್ರಿಯವರು ರಾಜಾಜಿಯವರಿಗೊಂದು ಪತ್ರ ಬರೆದರು. ಅದರ ಸಾರಾಂಶ, ವಿಪರೀತವಾದ ಮಾರ್ಗಗಳ ಬಗ್ಗೆ ಯೋಚಿಸಬೇಡಿ ಎಂದು ಶೇಖ್ ಅಬ್ದುಲ್ಲಾರವರಿಗೆ ಸೂಚಿಸಬೇಕೆಂಬ ಮನವಿಯೇ ಆಗಿತ್ತು.

> *"ಶೇಖ್ ಸಾಹೇಬರು ಈಗ ತಾನೇ ಜೈಲಿನಿಂದ ಹೊರಗಡೆ ಬಂದಿದ್ದಾರೆ. ಕಾಶ್ಮೀರ ವಿವಾದದ ಬಗ್ಗೆ ಇರುವ ವಿಭಿನ್ನ ಚಿಂತನೆ-ಆಲೋಚನೆಗಳ ಬಗ್ಗೆ ಅವರು ಗಮನಹರಿಸುವುದು ಒಳ್ಳೆಯದು. ಗಮನ ಹರಿಸಿದ ನಂತರ, ಚರ್ಚೆ-ಸಮಾಲೋಚನೆಗಳ ನಂತರ, ಆತ್ಮಾವಲೋಕನದ ನಂತರ ಒಂದು ತೀರ್ಮಾನಕ್ಕೆ ಬರುವುದು ಉಚಿತವಾದೀತು. ಆತುರಾತುರದಿಂದ ನಿರ್ಧಾರಕ್ಕೆ ಬಂದರೆ, ಧಾವಂತ ಮಾಡಿದರೆ, ದುಡುಕಿದರೆ ಅದು ದುರದೃಷ್ಟಕರ..."*

ಇದು ಏರ್‌ಮೈಲ್‌ನಲ್ಲಿ ಕಳುಹಿಸಿದ ಪತ್ರವಾಗಿತ್ತು. ಈ ಪತ್ರ, ಶೇಖ್ ಅಬ್ದುಲ್ಲಾ ಅವರು ಮೇ 5ರಂದು ರಾಜಾಜಿಯವರನ್ನು ಭೇಟಿ ಮಾಡುವುದಕ್ಕೆ ಮುನ್ನ ಅವರನ್ನು ತಲುಪಿತ್ತೋ ಇಲ್ಲವೋ ತಿಳಿಯದು. ರಾಜಾಜಿ ಮತ್ತು ಶೇಖ್ ಅಬ್ದುಲ್ಲಾ ಮೂರು ಗಂಟೆಗೂ ಸುದೀರ್ಘವಾದ ಮಾತುಕತೆ ನಡೆಸಿದ್ದರು. ಸಹಜವಾಗಿಯೇ ಇದು 'ಹಿಂದೂಸ್ತಾನ್ ಟೈಮ್ಸ್'ನ ಮುಖಪುಟದ ವರದಿಗೆ ಗ್ರಾಸವಾಗಿತ್ತು. "ಅಬ್ದುಲ್ಲಾ-ಸಿ ಆರ್ ಕಾಶ್ಮೀರ ಸೂತ್ರ ಸಿದ್ಧ"–ಇದು ಪತ್ರಿಕೆಯ ಶೀರ್ಷಿಕೆ. ಈ ಸೂತ್ರವನ್ನು ಪ್ರಧಾನಮಂತ್ರಿಯವರ ಜೊತೆ ಚರ್ಚಿಸುವುದೊಂದೇ ಬಾಕಿ ಉಳಿದಿತ್ತು. ರಾಜಾಜಿಯವರು ಮಾತುಕತೆಯ ನಂತರ ಪತ್ರಕರ್ತರ ಜೊತೆ ಮಾತನಾಡಲಿಲ್ಲ. ಆದರೆ ಅಬ್ದುಲ್ಲಾ ಅವರು ಸ್ವಲ್ಪ ಹಿಂಜರಿಕೆ ಬಿಟ್ಟು ಮಾತನಾಡಿದ್ದರು. "ವಯೋವೃದ್ಧರೊಂದಿಗೆ ಮಾತನಾಡಿದ್ದರಿಂದ, ಭಾರತ-ಪಾಕಿಸ್ತಾನಗಳ ಕಾಯದೊಳಗಿನ ಕ್ಯಾನ್ಸರನ್ನು ಚಿವುಟಿ ಹಾಕಲು ಚಿಕಿತ್ಸೆ-ಪರಿಹಾರ ಏನು ಎನ್ನುವ ವಿಷಯದಲ್ಲಿ ನನ್ನ ಮನಸ್ಸು ತಿಳಿಯಾಗಿದೆ" ಎಂದು ಪತ್ರಿಕೆಗಳಿಗೆ ತಿಳಿಸಿದರು. ವರದಿಗಾರರು ವಿವರಗಳಿಗೆ ಒತ್ತಾಯಿಸಿದಾಗ, "ಇದಕ್ಕೆ, ಪ್ರಧಾನಮಂತ್ರಿಯವರ ಜೊತೆ ಮಾತುಕತೆ ನಡೆಸುವವರೆಗೆ ಕಾಯಬೇಕು" ಎಂದು ಉತ್ತರಿಸಿದ್ದರು. ಭಾರತಕ್ಕಾಗಲೀ, ಪಾಕಿಸ್ತಾನಕ್ಕಾಗಲೀ ವಿಜಯ ದುಂದುಭಿಯ ಅಹಂಭಾವ ಮೆರೆಸಲು ಅವಕಾಶ ನೀಡದಂಥ, ಆದರೆ ಇದೇ ವೇಳೆ ಕಾಶ್ಮೀರದ ಜನತೆಗೆ ಗೌರವಯುತವಾದ ಸ್ಥಾನಮಾನ ನೀಡುವಂಥ ಪರಿಹಾರ ಸೂತ್ರವೊಂದನ್ನು ತಾವು ರೂಪಿಸಿರುವ ಇಂಗಿತವನ್ನು ಶೇಖರು ನೀಡಿದ್ದರು.

ಶೇಖ್ ಅಬ್ದುಲ್ಲಾ ಅವರು ಮದ್ರಾಸಿನಲ್ಲಿದ್ದಾಗಲೇ ಅವರಿಗೆ ಪಾಕಿಸ್ತಾನದ ಅಧ್ಯಕ್ಷ ಆಯೂಬ್ ಖಾನರಿಂದ ಸಂದೇಶವೊಂದು ಬಂದಿತ್ತು. "ತಕ್ಷಣ ಪಾಕಿಸ್ತಾನಕ್ಕೆ ಬನ್ನಿ, ಭೇಟಿ ಮಾಡೋಣ" ಎಂಬುದೇ ಆ ಸಂದೇಶವಾಗಿತ್ತು. ಮೇ 6ರಂದು ದೆಹಲಿಗೆ ವಾಪಸಾದದ್ದೇ ಶೇಖ್ ಅಬ್ದುಲ್ಲಾ ನೇರವಾಗಿ ತೀನ್ ಮೂರ್ತಿ ಭವನಕ್ಕೆ ಹೋದರು. ನೆಹರೂ ಜೊತೆ 90 ನಿಮಿಷ ಕಳೆದರು. 'ರಾಜಾಜಿ ಸೂತ್ರ'ವನ್ನು ಅವರಿಗೆ ಅರುಹಿದರು. ನಂತರ ಪ್ರಧಾನಮಂತ್ರಿಗಳು, ಸಲಹೆಗಾರರ ಸಮಿತಿಯೊಂದಿಗೆ ಅನೌಪಚಾರಿಕ ಮಾತುಕತೆ ನಡೆಸುವಂತೆ ಶೇಖ್ ಅಬ್ದುಲ್ಲಾರಿಗೆ ಸೂಚಿಸಿದರು. ಈ ಸಮಿತಿಯಲ್ಲಿ ವಿದೇಶಾಂಗ ಕಾರ್ಯದರ್ಶಿ ವೈ.ಡಿ. ಗುಣದೇವಿಯಾ, ಪಾಕಿಸ್ತಾನದಲ್ಲಿನ ಭಾರತದ ಹೈಕಮೀಷನರ್ ಜಿ. ಪಾರ್ಥಸಾರಥಿ ಮತ್ತು ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದ ಉಪಕುಲಪತಿ ಬದ್ರುದ್ದೀನ್ ತ್ಯಾಬ್ಜಿ ಇದ್ದರು.

ಎರಡು ದಿನಗಳ ಕಾಲ ಶೇಖ್ ಅಬ್ದುಲ್ಲಾ ಮತ್ತು ಪ್ರಧಾನ ಮಂತ್ರಿಯವರ ಸಲಹೆಗಾರರು ಕಾಶ್ಮೀರ ವಿವಾದವನ್ನು ಕೂಲಂಕಷವಾಗಿ ಚರ್ಚಿಸಿದರು. ಹಲವಾರು ಪರಿಹಾರಗಳನ್ನೂ ಪರ್ಯಾಯ ಪರಿಹಾರಗಳನ್ನೂ ಪರಿಶೀಲಿಸಲಾಯಿತು. ಜನಮತಗಣನೆ; 1947ರ ಪೂರ್ವದ ಅವಿಭಜಿತ ಜಮ್ಮು ಕಾಶ್ಮೀರ; ಯಥಾಸ್ಥಿತಿ ಮುಂದುವರಿಕೆ; ಹೊಸದಾಗಿ ರಾಜ್ಯ ವಿಭಜನೆ, ಜಮ್ಮು-ಲಡಖ್ ಪ್ರದೇಶಗಳು ಭಾರತಕ್ಕೆ ಹೋಗಬೇಕು, ಅಜಾದ್ ಅಥವಾ ಉತ್ತರ ಕಾಶ್ಮೀರ ಪಾಕಿಸ್ತಾನಕ್ಕೆ ಹೋಗಬೇಕು; ತನ್ನ ಭವಿಷ್ಯ ನಿರ್ಧರಿಸಲು ಕಣಿವೆಯಲ್ಲಿ ಜನಮತಗಣನೆ ನಡೆಸುವುದೊಂದೇ ಏಕೈಕ ಪರಿಹಾರ ಮಾರ್ಗ–ಹೀಗೆ ಹಲವಾರು ಪರಿಹಾರ ಮಾರ್ಗಗಳನ್ನು ಚರ್ಚಿಸಲಾಯಿತು. ಅಬ್ದುಲ್ಲಾ ಅವರು ಸಲಹೆಗಾರರಿಗೆ ಪರಿಹಾರ ಸೂತ್ರದ ನಿರ್ದಿಷ್ಟ ವಿವರಗಳನ್ನು ನೀವು ರೂಪಿಸಬಹುದು ಆದರೆ ಅದು–

1. ಭಾರತ-ಪಾಕಿಸ್ತಾನ ಮೈತ್ರಿ ವರ್ಧಕವಾಗಿರಬೇಕು.

2. ಭಾರತದ ಸಂವಿಧಾನದ ಜಾತ್ಯತೀತತೆಯ ಆದರ್ಶವನ್ನು ದುರ್ಬಲಗೊಳಿಸಬಾರದು.

3. ಉಭಯ ರಾಷ್ಟ್ರಗಳಲ್ಲಿರುವ ಅಲ್ಪಸಂಖ್ಯಾತರನ್ನು ದುರ್ಬಲಗೊಳಿಸಬಾರದು.

ಎಂದು ಸ್ಪಷ್ಟವಾಗಿ ಸೂಚಿಸಿದರು. ಒಂದಕ್ಕಿಂತ ಹೆಚ್ಚು ಪರಿಹಾರ ಸೂತ್ರಗಳನ್ನು ಸಲಹೆಮಾಡಿ, ಅದನ್ನು ನಾನು ಪಾಕಿಸ್ತಾನಕ್ಕೆ ಕೊಂಡೊಯ್ಯಬಹುದು ಎಂದೂ ಅವರು ಹೇಳಿದ್ದರು.

ಶೇಖ್ ಅಬ್ದುಲ್ಲಾ ಅವರ ಶರತ್ತುಗಳಿಂದಾಗಿ ಜನಮತಗಣನೆಗೆ ಒಪ್ಪುವುದು ಅಸಾಧ್ಯವಾಗಿತ್ತು. ಜನಮತಗಣನೆಯ ಫಲಿತಾಂಶ ಏನೇ ಆದರೂ ಯಾವುದಾದರೂ ಒಂದು ರಾಷ್ಟ್ರಕ್ಕೆ ಅತೃಪ್ತಿಯಾಗುವುದು ಖಚಿತವಾಗಿತ್ತು ಹಾಗೂ ಅಲ್ಪಸಂಖ್ಯಾತರು ಘಾಸಿಗೊಳಗಾಗುತ್ತಿದ್ದರು. ಆದರೆ ರಾಜಾಜಿ ಸೂತ್ರ ಹೇಗೆ? ಕಾಶ್ಮೀರ ಮೇಲೆ ಭಾರತ ಮತ್ತು ಪಾಕಿಸ್ತಾನಗಳೆರಡರ ಸಹಾಧಿಪತ್ಯಕ್ಕೊಳಪಡಬೇಕು, ರಕ್ಷಣೆ ಮತ್ತು ವಿದೇಶಾಂಗ ವ್ಯವಹಾರ ಉಭಯ ರಾಷ್ಟ್ರಗಳ ಸರ್ಕಾರಗಳ ಜಂಟಿ ಹೊಣೆಗಾರಿಕೆಯಾಗಿರಬೇಕು ಎನ್ನುವುದು ರಾಜಾಜಿ ಸೂತ್ರವಾಗಿದ್ದಂತೆ ಕಂಡುಬಂದಿತು. (ಇದಕ್ಕೆ ಅಂಡೋರಾನೆ ಆದರ್ಶ. ಈ ಸಣ್ಣ ಪ್ರದೇಶ ಸ್ವಯಮಾಧಿಕಾರದ ಪುಟ್ಟ ರಾಷ್ಟ್ರವಾಗಿತ್ತು. ಇದರ ಭದ್ರತೆಯ ಹೊಣೆಗಾರಿಕೆ ನೆರೆಯ ದೊಡ್ಡ

ರಾಷ್ಟ್ರಗಳಾದ ಫ್ರಾನ್ಸ್ ಮತ್ತು ಸ್ಪೈನ್‌ದಾಗಿತ್ತು.) ಇನ್ನೊಂದು ಸಾಧ್ಯತೆಯೆಂದರೆ ಭಾರತ-ಪಾಕಿಸ್ತಾನ-ಕಾಶ್ಮೀರ ಒಳಗೊಂಡ ಒಕ್ಕೂಟ ರಚನೆ.

ನೆಹರೂ ಅವರ ಸಲಹೆಗಾರರಾಗಿದ್ದ ತ್ರಿಮೂರ್ತಿಗಳನ್ನು ಅವರ ಜ್ಞಾನ, ಬುದ್ಧಿವಂತಿಕೆ ಮತ್ತು ಸಾಮರ್ಥ್ಯಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿತ್ತು. ಅಲ್ಲದೇ ಈ ಮೂವರು ಭಿನ್ನ ಸಂಪ್ರದಾಯ-ಪರಂಪರೆಗಳ ಮೂಲದವರಾಗಿದ್ದರು ಎಂಬುದು ಗಮನಾರ್ಹವಾದ ಸಂಗತಿ. ಮತ್ತೆ ಇವರೆಲ್ಲರೂ ಅಧಿಕಾರಿಗಳೇ ಆಗಿದ್ದರು. ಚೀನಾದೊಂದಿಗೆ ವಿವಾದ ಬಗೆಹರಿಸಿಕೊಳ್ಳುವ ಅವಕಾಶ ಒದಗಿ ಬಂದಿದ್ದಾಗ ರಾಜಕಾರಣಿಗಳ ರಾಷ್ಟ್ರ ಪ್ರೇಮದ ಅತಿರೇಕದಿಂದಾಗಿ ನೆಹರೂ ಮಾಮೂಲಿಗಿಂತ ಕಠಿಣ ನಿಲುವನ್ನು ತಾಳಬೇಕಾಯಿತು ಎಂಬುದು ಇಲ್ಲಿ ಸ್ಮರಣಾರ್ಹ. ಈಗ ನೆಹರೂ ಅವರು ಪಾಕಿಸ್ತಾನದೊಂದಿಗೆ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳುವ ಈ ಸಂದರ್ಭದಲ್ಲಿ ಅಧಿಕಾರಿಗಳನ್ನೇ ಸಲಹೆಗಾರರಾಗಿ ಮಾಡಿಕೊಳ್ಳಲು ಬಯಸಿದ್ದರು. ಸಾಹಿತಿ ಹಾಗೂ ಸಂಸದೀಯ ಪಟು ಬಿ. ಶಿವರಾವ್ ಅವರು ರಾಜಾಜಿಯವರಿಗೆ ಬರೆದಿರುವ ಪತ್ರವೊಂದರಲ್ಲಿ ನೆಹರೂ ಸಲಹೆಗಾರರ ಆಯ್ಕೆಯಲ್ಲಿ ತೋರಿರುವ ವಿವೇಕ ಸ್ಪಷ್ಟವಾಗಿದೆ.

> *"ಸೇರ್ಪಡೆಯ ವಿಷಯವನ್ನು ಪುನರುಜ್ಜೀವಗೊಳಿಸುವುದೇ ಶೇಖ್ ಅಬ್ದುಲ್ಲಾ ಜೊತೆ ನೆಹರೂ ಮಾತುಕತೆಯ ಉದ್ದೇಶವಾಗಿದ್ದಲ್ಲಿ ಪ್ರಧಾನಮಂತ್ರಿ ಒಪ್ಪಂದಕ್ಕೆ ಬರದಂತೆ ತಪ್ಪಿಸಲು ಮಂತ್ರಿಮಂಡಲದೊಳಗೆ ಮತ್ತು ಸಂಸತ್ತಿನಲ್ಲಿ ಎರಡೂ ಕಡೆ ಸ್ಪಷ್ಟ ಪ್ರಯತ್ನಗಳು ನಡೆದಿದ್ದವು. ಇವರಿಬ್ಬರ ನಡುವೆ ಮಾತುಕತೆ ನಡೆಯುತ್ತಿದ್ದಾಗಲೇ ಸಚಿವರುಗಳು ಈ ಬಗ್ಗೆ ಬಹಿರಂಗ ಹೇಳಿಕೆಗಳನ್ನು ನೀಡಿದ್ದಾರೆ. ಅವರು ಇಂಥ ಸ್ವಾತಂತ್ರ್ಯ ವಹಿಸಬಹುದೆನ್ನುವುದು ಪ್ರಧಾನಮಂತ್ರಿಯ ಪ್ರತಿಷ್ಠೆ ಪ್ರಭಾವಗಳನ್ನು ಕುಂಠಿತಗೊಳಿಸಿದಂತೆ".*

ಇದೊಂದು ಕುತೂಹಲಕರ ಸಂಗತಿ. ಇದಕ್ಕೆ ಬಂದ ಉತ್ತರವೂ ಇನ್ನಷ್ಟು ಕುತೂಹಲಕರ, ಆಸಕ್ತಿದಾಯಕ. ಇದು, ನೆಹರೂ ಅವರ ಉಭಯ ಸಂಕಟ ಪರಿಸ್ಥಿತಿಯನ್ನು ಸೂಕ್ತ ದೃಷ್ಟಿಕೋನದಿಂದ ನೋಡುವ ಪ್ರಯತ್ನದಲ್ಲಿ ರಾಜಾಜಿ ಸೂತ್ರಕ್ಕೆ ಹೆಚ್ಚು ಪುಷ್ಟಿ ತಂದುಕೊಟ್ಟಿತು. ರಾಜಾಜಿ ಉತ್ತರ ಹೀಗಿತ್ತು:

> *"ಆಜಾದ್ ಕಾಶ್ಮೀರದ ಬಗ್ಗೆ ವಚನಬದ್ಧರಾಗುವಂತೆ ಅಯೂಬ್ ಖಾನರನ್ನು ಈಗ ಕೇಳಬೇಕು. ಇದರಿಂದ ಇಡೀ ಹುನ್ನಾರ ಛಿದ್ರವಾಗುತ್ತದೆ. ಅಯೂಬರು ಅಂಥ ವಚನಬದ್ಧತೆ ಕೊಡಲಾರರು, ಕೊಡುವುದಿಲ್ಲ. ಸಾರ್ವಜನಿಕ ಒತ್ತಡ ಮತ್ತು ಭಾವನಾತ್ಮಕ ನಂಟಿನ ವಿಷಯದಲ್ಲಿ ಅವರು ನೆಹರೂಗಿಂತ ಶೋಚನೀಯ ಸ್ಥಿತಿಯಲ್ಲಿದ್ದಾರೆ... ಆದ್ದರಿಂದ ಯಾವುದೇ ಹುನ್ನಾರ, ಯೋಜನೆಗಳು ಯುದ್ಧದ ಪಾರಿತೋಷಕಗಳನ್ನು ಮುಟ್ಟುವ ಗೊಡವೆಗೆ ಹೋಗಬಾರದು...ಈ ಸನ್ನಿವೇಶದಲ್ಲಿ ಜಮ್ಮುವನ್ನು ಆಜಾದ್ ಕಾಶ್ಮೀರಕ್ಕೆ ಸರಿಸಮಾನವಾಗಿ ಬಿಟ್ಟುಕೊಟ್ಟು ಕಣಿವೆಯಲ್ಲಿ*

ತಾವು ಕೇಂದ್ರೀಕರಿಸಿರುವುದು ಶೇಖ್ ಅಬ್ದುಲ್ಲಾ ಅವರ ಅತ್ಯುತ್ತಮ ಆಯ್ಕೆಯಾದೀತು. ಅಂದರೆ ಕಣಿವೆ ಭಾರತದೊಂದಿಗೆ ಸಮಗ್ರವಾಗಿ ಸೇರ್ಪಡೆಯಾಗಬೇಕೆಂದೇ ಇದರ ಅರ್ಥವೆಂದು ಭಾವಿಸತಕ್ಕದ್ದು.

ಸಮಸ್ಯೆ ಕಡಿಮೆಯಾಗುವುದರಿಂದ ಒಳಿತೇ ಆಗುತ್ತದೆ. ನಮ್ಮಿಚ್ಛೆಯಂತೆ ಸಮಸ್ಯೆ ಪರಿಹಾರವಾದಲ್ಲಿ ಭಾರತ-ಪಾಕಿಸ್ತಾನದ ನಡುವಣ ಬಾಂಧವ್ಯ ಸುಧಾರಿಸುವುದು. ಸಮಸ್ಯೆಯ ಗಾತ್ರ ಹ್ರಸ್ವಗೊಂಡ ನಂತರ ವಿಶ್ವಸಂಸ್ಥೆಯ ಭಾಗಶಃ ಅಥವಾ ಸಂಪೂರ್ಣ ಧರ್ಮದರ್ಶಿತ್ವಕ್ಕೆ ಯೋಗ್ಯವಾಗುತ್ತದೆ".

ಭಾರತದ ಪರವಾಗಿ ಜವಹರಲಾಲ್ ನೆಹರೂ ಶಾಂತಿಯ ಭರವಸೆಯಾಗಿದ್ದರು. ಅವರಿಂದ ಮಾತ್ರ ಉಪಖಂಡದಲ್ಲಿ ಶಾಂತಿ ಸಾಧ್ಯ ಎಂಬ ಆಶಾಭಾವನೆ ಜನರಲ್ಲಿತ್ತು. ಶೇಖ್ ಅವರಿಗೂ ನೆಹರೂ ಅವರೇ ಕೊನೆಯ ಆಶಾಕಿರಣವಾಗಿ ಕಂಡಿದ್ದರು. ಮೇ 11ರಂದು ಶೇಖ್ ಅಬ್ದುಲ್ಲಾ ವರದಿಗಾರರೊಂದಿಗೆ ಮಾತನಾಡುತ್ತ ಹೀಗೆ ಹೇಳಿದ್ದರು:

"ನಾನು ನೆಹರೂ ಅವರನ್ನು ವಹಿಸಿಕೊಂಡು ಮಾತನಾಡುತ್ತಿಲ್ಲ. ಅವರ ಪಕ್ಷ ಹಿಡಿದು ವಾದಿಸುವುದು ನನಗೆ ಬೇಕಿಲ್ಲ. ಆದರೆ, ದೌರ್ಬಲ್ಯಗಳೇನೇ ಇದ್ದಾಗ್ಯೂ ಅವರು ಭಾರತದ ಸಂಕೇತ. ಅವರಂಥ ಇನ್ನೊಬ್ಬ ಮನುಷ್ಯ ನಿಮಗೆ ಸಿಗಲಾರರು... ಕೊನೆಯಲ್ಲಿ ಶೇಖ್ ಈ ಮಾತನ್ನೂ ಸೇರಿಸಿದ್ದರು: ನೆಹರೂ ನಂತರ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಅವರಷ್ಟೇ ವಿಶಾಲದೃಷ್ಟಿಯ ಇನ್ನೊಬ್ಬ ವ್ಯಕ್ತಿ ನನಗೆ ಕಾಣಿಸುತ್ತಿಲ್ಲ."

ನೆಹರೂ ಸಹ ತಮ್ಮ ಹಳೆಯ ಸಂಗಾತಿ ಹಾಗೂ ಸ್ವಲ್ಪಕಾಲ ಪ್ರತಿಕೂಲವಾಗಿದ್ದ ಶೇಖ್ ಅಬ್ದುಲ್ಲಾ ಅವರಿಗೆ ಒಂದು ಚೊಕ್ಕ ಯೋಗ್ಯತಾ ಪತ್ರ ನೀಡಲು ಸಿದ್ಧರಿದ್ದರು. 16ರಂದು ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಮಾತನಾಡುತ್ತ, "ಶೇಖ್ ಅಬ್ದುಲ್ಲಾ ಜಾತ್ಯತೀತ ತತ್ವಗಳಿಗೆ ಕಂಕಣಬದ್ಧರಾಗಿದ್ದಾರೆ" ಎಂದು ನೆಹರೂ ನುಡಿದಿದ್ದರು. ಅಥವಾ ಅವರಿಗೆ ಎರಡು ರಾಷ್ಟ್ರ ಸಿದ್ಧಾಂತದಲ್ಲಿ ನಂಬಿಕೆ ಇರಲಿಲ್ಲ ಎಂದೂ ನೆಹರೂ ತಿಳಿಸಿದ್ದರು. ನೆಹರೂ ಮತ್ತು ಶೇಖ್ ಅಬ್ದುಲ್ಲಾ ಇಬ್ಬರ ಭಾವನೆಯೂ ಹೀಗಿತ್ತು:

"ತನ್ನ ತತ್ವಗಳಿಗೆ ಬದ್ಧವಾಗಿದ್ದುಕೊಂಡು ಪಾಕಿಸ್ತಾನದ ಜೊತೆ ಶಾಂತಿ ಸಹಬಾಳ್ವೆ ನಡೆಸುವುದು ಭಾರತಕ್ಕೆ ಸಾಧ್ಯವಾದರೆ, ತನ್ಮೂಲಕ ಇದರ ಅನುಗತವಾಗಿ ಕಾಶ್ಮೀರ ಸಮಸ್ಯೆಗೆ ಇತಿಶ್ರೀ ಹಾಡುವುದು ಸಾಧ್ಯವಾಗಬಹುದು".

"ಇದರಲ್ಲಿ ನಾವು ಯಶಸ್ವಿಯಾಗುತ್ತೇವೆ ಎಂದು ನಾನು ಖಚಿತವಾಗಿ ಹೇಳಲಾರೆ. ಆದರೆ ಒಂದು ಮಾತಂತೂ ಸ್ಪಷ್ಟ: ನಾವು ಯಶಸ್ವಿಯಾಗದಿದ್ದಲ್ಲಿ ಭಾರತ ಪಾಕಿಸ್ತಾನದೊಂದಿಗೆ ಸಂಘರ್ಷದ ಹೊರೆಯನ್ನು, ಅದರೆಲ್ಲ ಪರಿಣಾಮಗಳ ಸಹಿತ ಹೊರಬೇಕಾಗುತ್ತದೆ" ಎಂದು ನೆಹರೂ ಕಾಂಗ್ರೆಸ್ ಸಮಿತಿಗೆ ತಿಳಿಸಿದ್ದರು.

VII

ಶೇಖ್ ಅಬ್ದುಲ್ಲಾ ಅವರು ಮೇ 20ರಂದು ನವದೆಹಲಿಗೆ ವಾಪಸಾದರು. ತೀನ್ ಮೂರ್ತಿ ಭವನದಲ್ಲಿ ತಂಗಿದ್ದು, ಪಾಕಿಸ್ತಾನಕ್ಕೆ ಹೋಗುವ ಮೊದಲು ನೆಹರೂ ಜತೆ ಆಪ್ತೆರು ಸುತ್ತಿನ ಮಾತುಕತೆ ನಡೆಸುವುದು ಅವರ ಕಾರ್ಯಕ್ರಮವಾಗಿತ್ತು. 22ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ನೆಹರೂ ಅವರು ಶೇಖ್‌ರ ಜೊತೆಗಿನ ತಮ್ಮ ಮಾತುಕತೆಯ ವಿವರಗಳನ್ನು ಬಹಿರಂಗಪಡಿಸಲು ನಿರಾಕರಿಸಿದರು. ಶೇಖರ ರಾಯಭಾರಕ್ಕೆ ಹಾನಿಯುಂಟು ಮಾಡುವ ಇರಾದೆ ತಮಗಿಲ್ಲವೆಂದು ನುಡಿದರು. "ಆದರೆ ಅವರು ಆಕ್ರಮಿಸಿಕೊಂಡಿರುವ ಕಾಶ್ಮೀರದ ಮೇಲಿನ ಅವರ ಹಿಡಿತವನ್ನು ಆಧರಿಸಿಯೇ ಪಾಕಿಸ್ತಾನದೊಂದಿಗೆ ಮಾತುಕತೆಗೆ ಭಾರತ ಸಿದ್ಧವಿದೆಯೆಂದು" ನೆಹರೂ ಇಂಗಿತ ನೀಡಿದ್ದರು.

ಈ ಬಗೆಗಿನ ನೆಹರೂ ಅವರ ಕಾಗದ ಪತ್ರಗಳನ್ನು ರಹಸ್ಯವಾಗಿಡಲಾಗಿದೆ. ಅವು ವಿದ್ವಾಂಸರಿಗೆ ಸಿಕ್ಕಿಲ್ಲ. ಆದರೆ ಅವರ ವಿದೇಶಾಂಗ ಕಾರ್ಯದರ್ಶಿಯವರು ಬರೆದಿರುವ ಪತ್ರವೊಂದರಲ್ಲಿ ನೆಹರೂ ಚಿಂತನೆಯ ಎಳೆಗಳು ಕಾಣಸಿಗುತ್ತವೆ. ಈಗಿನ ಸಮಸ್ಯೆಗಳಿಗೆ ಸಂಭವನೀಯ ಪರಿಹಾರವಾಗಿ, ಭಾರತ-ಪಾಕಿಸ್ತಾನ ಮತ್ತು ಕಾಶ್ಮೀರ ಒಕ್ಕೂಟದ ಸಾಧಕ ಬಾಧಕಗಳನ್ನು ಶೋಧಿಸಿ ನೋಡುವಂತೆ ಅವರು ಕಾನೂನು ತಜ್ಞರನ್ನು ಕೇಳಿಕೊಂಡಿದ್ದರು. ಇಂಥದೊಂದು ವ್ಯವಸ್ಥೆಯಿಂದ ವಿಭಜನೆ ರದ್ದಾಗಬಾರದು, ನಿರರ್ಥಕವಾಗಬಾರದು. ಭಾರತ ಮತ್ತು ಪಾಕಿಸ್ತಾನ ಪ್ರತ್ಯೇಕ ಸಾರ್ವಭೌಮ ರಾಷ್ಟ್ರಗಳಾಗಿರುತ್ತವೆ. ಕಾಶ್ಮೀರ ಒಕ್ಕೂಟದ ಒಂದು ಅಂಗವಾಗಿರುತ್ತೆ. ಅದರ ಸ್ಥಾನಮಾನವನ್ನು ಮಾತುಕತೆ ಮೂಲಕ ನಿರ್ಧರಿಸಬಹುದು. ಮೂರೂ ಘಟಕಗಳಲ್ಲಿ ಸುಂಕದ ವ್ಯವಸ್ಥೆಯೊಂದಿರಬೇಕಾಗಬಹುದು. ಯಾವುದಾದರೂ ಒಂದು ಬಗೆಯ ಹಣಕಾಸು ವ್ಯವಹಾರಗಳ ಸಮನ್ವಯ-ಸಂಘಟನೆ ಬೇಕಾಗುತ್ತದೆ. ಹಾಗೂ ಅಲ್ಪಸಂಖ್ಯಾತರ ರಕ್ಷಣೆಗೆ ವಿಶೇಷ ವಿಧಿ ನಿಯಮಗಳನ್ನು ಕಲ್ಪಿಸುವುದು ಅತ್ಯವಶ್ಯ. ಇವು ನೆಹರೂ ಚಿಂತನೆಯಿದ್ದಂತೆ ತೋರುತ್ತದೆ.

1947-48ರ ಯುದ್ಧದಲ್ಲಿ ಕಳೆದುಕೊಂಡ ಗಿಲ್ಗಿಟ್ ಮತ್ತು ಅಜಾದ್ ಕಾಶ್ಮೀರದ ಮೇಲಿನ ಪಾಕಿಸ್ತಾನದ ಹತೋಟಿಯನ್ನು ಮಾನ್ಯ ಮಾಡಲು ಭಾರತ ಸಿದ್ಧವಿತ್ತು. ಮಾತುಕತೆ ಮುಂದುವರಿಸುವ ದೃಷ್ಟಿಯಿಂದ ಇದು ಅಗತ್ಯವಾಗಿತ್ತು. ಪ್ರತಿಯಾಗಿ ಪಾಕಿಸ್ತಾನ ಭಾರತಕ್ಕೆ ಏನಾದರೂ ರಿಯಾಯಿತಿ ತೋರುವುದೆ? ಎನ್ನುವ ಪ್ರಶ್ನೆಯೂ ಎದ್ದಿತ್ತು. ಅಬ್ದುಲ್ಲಾ ರಾವಲ್ಪಿಂಡಿಗೆ ತೆರಳಲು ಸಿದ್ಧತೆ ನಡೆಸಿದಂತೆ ಮಿನೂ ಮಸಾನಿಯವರು ಸ್ವಲ್ಪಕಾಲ ಭಾರತದಲ್ಲಿ ಪಾಕಿಸ್ತಾನದ ಹೈ ಕಮೀಷನರಾಗಿದ್ದ ಎ.ಕೆ. ಬ್ರೋಹಿ ಅವರಿಗೆ ಒಂದು ಪತ್ರ ಬರೆದರು. ಬ್ರೋಹಿ ಕರಾಚಿಯ ಸುಪ್ರಸಿದ್ಧ ವಕೀಲರಾಗಿದ್ದು, ಪಾಕಿಸ್ತಾನದ ವ್ಯವಸ್ಥೆ ಮಾನ್ಯ ಮಾಡಿದ ಗಣ್ಯ ವ್ಯಕ್ತಿಯಾಗಿದ್ದರು. ಅಧ್ಯಕ್ಷ ಅಯೂಬ್ ಖಾನರು ಬ್ರೋಹಿ ಅವರ ಮಾತಿಗೆ ಕಿವಿಗೊಡುತ್ತಿದ್ದರು. "ಶೇಖ್ ಅಬ್ದುಲ್ಲಾ ಅವರ ಮಾತುಗಳಿಗೆ ಅಯೂಬ್ ಖಾನರು

ವ್ಯಕ್ತಪಡಿಸುವ ಪ್ರತಿಕ್ರಿಯೆ, ಭಾರತ-ಪಾಕಿಸ್ತಾನಗಳ ನಡುವೆ ಮಧುರ ಬಾಂಧವ್ಯ ಬಯಸುವ ಇಲ್ಲಿನ ವರಿಷ್ಠರ ಕೈಗಳನ್ನು ಬಲಪಡಿಸುವುದರಲ್ಲಿ ಅಥವಾ ದುರ್ಬಲಗೊಳಿಸುವುದರಲ್ಲಿ ನಿರ್ಣಾಯಕ ಪ್ರಭಾವವನ್ನು ಬೀರಲಿದೆ" ಎಂದು ಮಸಾನಿಯವರು ಬ್ರೋಹಿಯವರಿಗೆ ತಿಳಿಸಿದ್ದರು. ನೆಹರೂ ಅವರು ಪಾಕಿಸ್ತಾನದ ಜೊತೆ ಮಾತುಕತೆಗೆ ಉಪಕ್ರಮಿಸಿದ್ದು ಅವರ ಪಕ್ಷದೊಳಗೆ ಮತ್ತು ಹೊರಗೆ ಟೀಕೆಗೆ ಗುರಿಯಾಗಿತ್ತು. ಮಾತುಕತೆ ನಡೆಸುವ ನಿಟ್ಟಿನಲ್ಲಿ ಪ್ರಗತಿ ಏನಾದರೂ ಸಾಧ್ಯವಾಗಬೇಕಾದಲ್ಲಿ ಪ್ರಧಾನಮಂತ್ರಿ ನೆಹರೂ ಮತ್ತು ಅಧ್ಯಕ್ಷ ಅಯೂಬ್ ಖಾನರ ಜೊತೆ ಶೃಂಗ ಸಭೆಯೊಂದು ನಡೆಯಬೇಕಿತ್ತು. ಇಲ್ಲವೇ ಮಾತುಕತೆಗಳಿಗೆ ಆಧಾರ ಏನಾಗಬೇಕು ಎನ್ನುವುದರ ಬಗ್ಗೆ ಶೇಖ್ ಅಬ್ದುಲ್ಲಾ ಅವರು ಅಯೂಬ್ ಖಾನರಿಂದ ಏನಾದರೊಂದು ಸುಳಿವು-ಸೂಚನೆಯನ್ನು ಪಡೆದು ಬರಬೇಕಾಗಿತ್ತು ಎಂದೇ ಬ್ರೋಹಿಯವರಿಗೆ ಮಸಾನಿ ಪತ್ರ. ಅಯೂಬ್ ಖಾನ್ ಮತ್ತಿತರ ನಾಯಕರುಗಳ ಜೊತೆ ಶೇಖ್ ಅಬ್ದುಲ್ಲಾ ಅವರು ನಡೆಸಬಹುದಾದ ಮಾತುಕತೆ, ಉಭಯ ರಾಷ್ಟ್ರಗಳ ಹಿತದೃಷ್ಟಿಯಿಂದ ಫಲಪ್ರದವಾಗುವಂತೆ ನೀವು ಪ್ರಭಾವ ಬೀರಬೇಕು ಎಂದು ಮಸಾನಿಯವರು ಬ್ರೋಹಿಯವರಿಗೆ ಆಗ್ರಹಪಡಿಸಿದ್ದರು.

ಏತನ್ಮಧ್ಯೆ ಶೇಖ್ ಅಬ್ದುಲ್ಲಾ ಪಾಕಿಸ್ತಾನಕ್ಕೆ ಪ್ರಯಾಣ ಬೆಳೆಸಿದರು. ಪಾಕಿಸ್ತಾನದಲ್ಲಿ ಎರಡು ವಾರಗಳ ಕಾರ್ಯಕ್ರಮವನ್ನು ಅವರು ಹಮ್ಮಿಕೊಂಡಿದ್ದರು. ರಾಜಧಾನಿ ರಾವಲ್ಪಿಂಡಿಯಿಂದ ಪ್ರಾರಂಭವಾಗಿ, ಅಜಾದ್ ಕಾಶ್ಮೀರ ಭೇಟಿ, ನಂತರ ಪೂರ್ವ ಪಾಕಿಸ್ತಾನದಲ್ಲಿ ಶೇಖರ ಪಾಕ್ ಪ್ರವಾಸ ಅಂತ್ಯಗೊಳ್ಳಲಿತ್ತು. ಹಿಂದೂ ಅಲ್ಪಸಂಖ್ಯಾತರ ಭಾವನೆಗಳನ್ನು ಗ್ರಹಿಸುವುದು ಶೇಖರ ಪೂರ್ವ ಪಾಕಿಸ್ತಾನ ಭೇಟಿಯ ಉದ್ದೇಶವಾಗಿತ್ತು. ಮೇ 24ರಂದು ಶೇಖ್ ಅಬ್ದುಲ್ಲಾ ರಾವಲ್ಪಿಂಡಿಯಲ್ಲಿ ಬಂದಿಳಿದಾಗ ಸದ್ದುಗದ್ದಲಗಳ ಗಲಾಟೆಯ ಸ್ವಾಗತ ಅವರನ್ನು ಬರಮಾಡಿಕೊಂಡಿತ್ತು. ಅವರು ತೆರೆದ ಕಾರಿನಲ್ಲಿ ವಿಮಾನ ನಿಲ್ದಾಣದಿಂದ ನಗರದೊಳಕ್ಕೆ ಯಾನ ಮಾಡಿದರು. ಮಾರ್ಗದುದ್ದಕ್ಕೂ ನೆರೆದು ನಿಂತಿದ್ದ ಸಾವಿರಾರು ಮಂದಿ ಪಾಕಿಸ್ತಾನಿ ಪ್ರಜೆಗಳು ಹರ್ಷೋದ್ಗಾರ ಮಾಡಿದ್ದರು. ಶೇಖ್ ಅಬ್ದುಲ್ಲಾರಿಗೆ ದೊರೆತ ಸ್ವಾಗತ, ಭಾವತೀವ್ರತೆಯಲ್ಲಿ ಫೆಬ್ರುವರಿಯಲ್ಲಿ ಭೇಟಿ ಕೊಟ್ಟಿದ್ದ ಚೌ ಎನ್ ಲಾಯ್ ಅವರಿಗೆ ದೊರೆತ ಸ್ವಾಗತವನ್ನು ಮೀರಿಸಿತ್ತೆಂದು ಒಬ್ಬ ವರದಿಗಾರ ಅಭಿಪ್ರಾಯಪಟ್ಟಿದ್ದಾನೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶೇಖ್ ಅಬ್ದುಲ್ಲಾ ಅವರು ತಮ್ಮ ಭೇಟಿಯನ್ನು "ಪರಿಶೋಧನಾತ್ಮಕವಾದ ಶಾಂತಿ ರಾಯಭಾರ"ವೆಂದು ಕರೆದಿದ್ದರು. ಭಾರತ-ಪಾಕಿಸ್ತಾನಗಳ ನಡುವೆ ಮಧುರ ಮೈತ್ರಿ ಬೆಳೆಸುವ ನಿಟ್ಟಿನಲ್ಲಿ ಸಹಾಯಮಾಡಿ ಎಂದು ಅವರು ಪತ್ರಿಕೆಗಳಿಗೆ ಮನವಿ ಮಾಡಿಕೊಂಡಿದ್ದರು. "ಕದನ ವಿರಾಮ ರೇಖೆಯಲ್ಲಿ ಉಭಯ ರಾಷ್ಟ್ರಗಳ ಸೇನೆ ಮುಖಾಮುಖಿಯಾಗಿ ನಿಂತಿರುವ ಪರಿಸ್ಥಿತಿ ಕೊನೆಗೊಳ್ಳಬೇಕು. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಯಂ ಮೈತ್ರಿಯ ಬುನಾದಿಯ ಮೇಲೆ ಶಾಂತಿ ಸಮೃದ್ಧಿಯ ಭವ್ಯ ಕಾಶ್ಮೀರ ಸೌಧ

ನಿರ್ಮಾಣ ಸಾಧ್ಯ" ಎಂಬ ದೃಢ ತೀರ್ಮಾನದಿಂದ ತಾವು ಬಂದಿರುವುದಾಗಿ ಶೇಖರು ಪತ್ರಕರ್ತರೆಮರು ನಿವೇದನೆ ಮಾಡಿಕೊಂಡಿದ್ದರು. ನವದೆಹಲಿಯಲ್ಲಿ ಹೇಳಿದಂತೆ ಇಲ್ಲೂ ಸಹ, ಯಾವುದೇ ಪರಿಹಾರವೂ ಭಾರತ-ಪಾಕಿಸ್ತಾನಗಳ ಮನಸ್ಸಿನಲ್ಲಿ ಪರಾಜಯದ ಪ್ರಜ್ಞೆಯನ್ನು ಮೂಡಿಸಬಾರದು ಎಂಬುದನ್ನು ಒತ್ತಿ ಹೇಳಿದರು. ಪರಿಹಾರ, ಭಾರತದ ಜಾತ್ಯತೀತ ನೀತಿಯನ್ನು ಅಥವಾ 60 ದಶಲಕ್ಷ ಮುಸ್ಲಿಮರನ್ನು ದುರ್ಬಲಗೊಳಿಸಬಾರದು ಹಾಗೂ ಕಾಶ್ಮೀರದ ಆಶೋತ್ತರಗಳನ್ನು ಈಡೇರಿಸುವಂತಿರಬೇಕು ಎಂದು ಶೇಖ್ ಹೇಳಿದ್ದರು.

ಮರುದಿನ, ಮೇ 25ರಂದು ಶೇಖ್ ಅಬ್ದುಲ್ಲಾ ಅಯೂಬ್ ಖಾನರ ಜೊತೆ ಮೂರು ಗಂಟೆಕಾಲ ಮಾತುಕತೆ ನಡೆಸಿದರು. ಶೇಖರು ವಿವರಗಳನ್ನು ತಿಳಿಸಲಿಲ್ಲ. ದೆಹಲಿಯಂತೆ ರಾವಲ್ಪಿಂಡಿಯಲ್ಲೂ ಪ್ರತಿಕ್ರಿಯೆ ಪ್ರೋತ್ಸಾಹದಾಯವಾಗಿರುವುದು ತಮಗೆ ಕಂಡುಬಂದಿದೆಯೆಂದಷ್ಟೆ ವರದಿಗಾರರಿಗೆ ತಿಳಿಸಿದರು. ನಿಜವಾಗಿ ಒಂದು ಒಮ್ಮತಕ್ಕೆ, ಸೌಹಾರ್ದಯುತ ತೀರ್ಮಾನಕ್ಕೆ ಬರಲು ಉಭಯ ಪಕ್ಷಗಳಲ್ಲೂ ಸಮಾನ ಆಸಕ್ತಿ, ತೀವ್ರ ಆಸಕ್ತಿ ಇದೆ ಎಂದು ಅವರು ಹೇಳಿದರು.

ಅದೇ ದಿನ ಸಂಜೆ ಶೇಖ್ ಅಬ್ದುಲ್ಲಾ ರಾವಲ್ಪಿಂಡಿಯಲ್ಲಿ ಬೃಹತ್ ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಮಾತನಾಡಿದರು. ಎರಡೂ ರಾಷ್ಟ್ರಗಳಲ್ಲೂ ಅಲ್ಪಸಂಖ್ಯಾತರ ಜೀವ-ಜೀವನೋಪಾಯಗಳಿಗೆ ಅಪಾಯವುಂಟುಮಾಡುವಂಥ ಪ್ರಮಾದಗಳನ್ನು ಎಸಗದಿರಿ ಎಂದು ಅವರು ಭಾರತ-ಪಾಕಿಸ್ತಾನಗಳಿಗೆ ಎಚ್ಚರಿಕೆ ನೀಡಿದಾಗ ಸಭಿಕರು ಹರ್ಷೋದ್ಗಾರ ಮಾಡಿದರು. ಭಾರತ-ಪಾಕಿಸ್ತಾನಗಳು ಕೋಪ-ತಾಪ-ವೈಮನಸ್ಯ ಮರೆಯಬೇಕಾದ ಕಾಲ ಈಗ ಸನ್ನಿಹಿತವಾಗಿದೆ ಎಂದು ಅವರು ತಿಳಿಸಿದರು. ಇದೇ ಬಿಕ್ಕಟ್ಟು, ಇದೇ ಸಂಘರ್ಷ, ಇದೇ ಅಪನಂಬಿಕೆಗಳು ಮುಂದುವರಿದಲ್ಲಿ ಎರಡು ರಾಷ್ಟ್ರಗಳೂ ಅಪಾರ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ ಹಾಗೂ ಅವರ ಸ್ವಾತಂತ್ರ್ಯ ಗಂಡಾಂತರ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದೂ ಅವರು ಎಚ್ಚರಿಸಿದ್ದರು.

26ರಂದು ಶೇಖ್ ಅಬ್ದುಲ್ಲಾ ಅವರು ಮತ್ತೊಮ್ಮೆ ಅಯೂಬ್ ಖಾನರನ್ನು ಭೇಟಿ ಮಾಡಿದ್ದರು. ಈ ಸಭೆ ನಾಲ್ಕು ಗಂಟೆಗಳ ಕಾಲ ನಡೆಯಿತು. ಸಭೆ ಮುಗಿಸಿ ಶೇಖರು ಉಲ್ಲಾಸಭರಿತರಾಗಿ ಹೊರಗೆ ಬಂದಿದ್ದರು. ಜೂನ್ ತಿಂಗಳ ಮಧ್ಯ ಭಾಗದಲ್ಲಿ ಜವಹರಲಾಲ್ ನೆಹರೂ ಅವರನ್ನು ಭೇಟಿಮಾಡಲು ಪಾಕಿಸ್ತಾನದ ಅಧ್ಯಕ್ಷರು ಸಮ್ಮತಿಸಿದ್ದಾರೆಂದು ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ಅಬ್ದುಲ್ಲಾ ಪ್ರಕಟಿಸಿದರು. ಇಬ್ಬರು ವರಿಷ್ಠರ ಸಭೆ ದೆಹಲಿಯಲ್ಲಿ ಜರುಗಲಿದೆ. ಆಗ ಸಮಾಲೋಚನೆಗಾಗಿ ಶೇಖ್ ಅಬ್ದುಲ್ಲಾ ಅವರೂ ಅಲ್ಲಿರುವರು. ಭಾರತ-ಪಾಕಿಸ್ತಾನಗಳ ನಡುವಣ ಘರ್ಷಣೆಯಲ್ಲಿ ತುಂಬಾ ಕಿರಿಕಿರಿಯುಂಟು ಮಾಡುತ್ತಿರುವುದು ಕಾಶ್ಮೀರ ವಿವಾದ. ಕಾಶ್ಮೀರ ತುಂಬ ಮಹತ್ವದ್ದು. ಒಮ್ಮೆ ಈ ಕಿರಿಕಿರಿ ನಿವಾರಣೆಯಾದರೆ ಉಳಿದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದು ಕಷ್ಟವಲ್ಲ ಎಂದು ಶೇಖರು ಪತ್ರಕರ್ತರಿಗೆ ತಿಳಿಸಿದ್ದರು.

ಇಷ್ಟರಲ್ಲೇ ಪಾಕಿಸ್ತಾನದ ಗಣ್ಯರಲ್ಲಿ ಮತ್ತು ಮೇಲ್ವರ್ಗದ ಜನತೆಯಲ್ಲಿ ಶೇಖ್ ಅಬ್ದುಲ್ಲಾರ ಆಕರ್ಷಣೆ ಅಳಿಯಲಾರಂಭಿಸಿತ್ತು. 'ಡಾನ್' ಪಾಕಿಸ್ತಾನದ ಜನದನಿ; ಪ್ರಾತಿನಿಧಿಕ ಪತ್ರಿಕೆ. ಶೇಖ್ ಅಬ್ದುಲ್ಲಾ ಅವರು ಭಾರತ ಕೊಚ್ಚಿಕೊಳ್ಳುವ ಅದರ ಜಾತ್ಯತೀತ ನೀತಿ ಕುರಿತು ಆಡಿರುವ ಮಾತುಗಳು ಸಾರ್ವತ್ರಿಕವಾಗಿ ಜನತೆಯಲ್ಲಿ ನಿರಾಶೆಯುಂಟುಮಾಡಿವೆ; ವಿಶೇಷವಾಗಿ ಬುದ್ಧಿಜೀವಿಗಳಲ್ಲಿ ಹೆಚ್ಚಿನ ನಿರಾಶೆಯುಂಟು ಮಾಡಿವೆ–ಎಂದು ಈ ಪತ್ರಿಕೆ ವ್ಯಾಖ್ಯಾನ ಮಾಡಿತ್ತು. ಶೇಖ್ ಅಬ್ದುಲ್ಲಾ ಅವರು, ಭಾರತದ ಜಾತ್ಯತೀತತೆಯ ಬಹಿರಂಗ ಪ್ರದರ್ಶನ, ಆಡಂಬರಗಳ ಆಮಿಷಕ್ಕೊಳಗಾಗಿದ್ದಾರೆ. ಜಾತ್ಯತೀತ ರಾಷ್ಟ್ರವೆಂದು ಹೇಳಿಕೊಳ್ಳುವ ಭಾರತದಲ್ಲಿ 60 ದಶಲಕ್ಷ ಮುಸ್ಲಿಮರನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಿರುವುದನ್ನು ಅವರು ಮರೆತುಬಿಟ್ಟಿದ್ದಾರೆ ಎಂದು 'ಡಾನ್' ಬರೆದಿತ್ತು. ಈ ಪತ್ರಿಕೆ ಇವೆಲ್ಲಕ್ಕಿಂತ ಮಿಗಿಲಾಗಿ ಮೂಲಭೂತ ಪ್ರಶ್ನೆಯೊಂದನ್ನು ಎತ್ತಿತ್ತು. "ಶೇಖ್ ಅಬ್ದುಲ್ಲಾ ಅವರ ಮುಖ್ಯ ಧ್ಯೇಯ, ಗುರಿಗಳು ಕಾಶ್ಮೀರದ ಜನತೆಯನ್ನು ಭಾರತದ ಗುಲಾಮಗಿರಿಯಿಂದ ವಿಮುಕ್ತರನ್ನಾಗಿಸುವುದಾಗಬೇಕು. ಆದರೆ ಶೇಖರು ತಮ್ಮ ಈ ಕರ್ತವ್ಯ ಮರೆತು ಭಾರತ-ಪಾಕಿಸ್ತಾನಗಳ ನಡುವೆ ಶಾಂತಿ-ಮೈತ್ರಿಗಳನ್ನುಂಟುಮಾಡುವ ನಾಯಕನ ಪಾತ್ರವನ್ನು ವಹಿಸಿದ್ದಾರೆ" ಎಂದು 'ಡಾನ್' ಕೆಣಕಿತ್ತು.

27ರಂದು ಅಬ್ದುಲ್ಲಾ ಅವರು ಮುಜಫರಾಬಾದ್‌ಗೆ ಪ್ರಯಾಣ ಬೆಳೆಸಿದರು. 1947ರಲ್ಲಿ ಕಾಶ್ಮೀರ ವಿಭಜನೆಯ ನಂತರ ಅವರು ಈ ನಗರಕ್ಕೆ ಭೇಟಿ ಕೊಟ್ಟಿರಲಿಲ್ಲ. ಕದನ ವಿರಾಮ ರೇಖೆಯ ಈ ಕಡೆಯ ಕಾಶ್ಮೀರಿಗಳು ತಮ್ಮ ಪರಿಹಾರ ಸೂತ್ರಕ್ಕೆ ಯಾವ ರೀತಿ ಪ್ರತಿಕ್ರಿಯಿಸುವರೆಂಬ ಕಲ್ಪನೆ ಅವರಿಗಿರಲಿಲ್ಲ. ಅದನ್ನು ತಿಳಿಯುವ ಕುತೂಹಲ ಅವರಿಗಿತ್ತು. ಆದರೆ ಇದನ್ನು ತಿಳಿದುಕೊಳ್ಳುವುದಕ್ಕೂ ಮೊದಲೇ ನವದೆಹಲಿಯಿಂದ ನೆಹರೂ ಅವರ ಮರಣದ ಸುದ್ದಿ ಅವರ ಕಿವಿಗಳಿಗೆ ಅಪ್ಪಳಿಸಿತ್ತು. ಅಬ್ದುಲ್ಲಾ ಕಣ್ಣಲ್ಲಿ ನೀರು ಹರಿಯಿತು, ಬಿಕ್ಕಿ ಬಿಕ್ಕಿ ಅತ್ತರು. "ಅವರು ನಿಧನರಾದರು. ಅವರನ್ನು ನಾನಿನ್ನು ಭೇಟಿ ಮಾಡಲಾಗದು" ಎಂದು ಶೇಖ್ ಅಬ್ದುಲ್ಲಾ ಗದ್ಗದಿತರಾಗಿ ವರದಿಗಾರರಿಗೆ ತಿಳಿಸಿದರು. ವರದಿಗಾರರು ಹೆಚ್ಚಿನ ಪ್ರತಿಕ್ರಿಯೆ ಬಯಸಿದಾಗ ಅವರು ತಮ್ಮ ಕೊಠಡಿಗೆ ತೆರಳಿದರು, ಅಲ್ಲಿ ಏಕಾಂಗಿಯಾಗಿ ದುಃಖದ ಮಡುವಿನಲ್ಲಿ ಮುಳುಗಿಹೋದರು.

ಅಬ್ದುಲ್ಲಾ ಅವರು ರಾವಲ್ಪಿಂಡಿಗೆ ವಾಪಸಾಗಿ ತತ್‌ಕ್ಷಣವೇ ಮೊದಲ ವಿಮಾನ ಯಾನದಲ್ಲೇ ದೆಹಲಿಗೆ ಧಾವಿಸಿ ಬಂದರು. ತೀನ್ ಮೂರ್ತಿ ಭವನದಲ್ಲಿ ನೆಹರೂ ಅವರ ಪಾರ್ಥಿವ ಶರೀರವನ್ನು ಕಂಡು ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು. ದುಃಖತಪ್ತ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡು ಹಳೆಯ ಮಿತ್ರನಾದ ಸಂಗಾತಿಯ ಪಾರ್ಥಿವ ಶರೀರದ ಮೇಲೆ ಪುಷ್ಪಗುಚ್ಛವಿರಿಸಿ ಅಂತಿಮ ಗೌರವ ಸಲ್ಲಿಸಲು ಅಬ್ದುಲ್ಲಾರಿಗೆ ಸ್ವಲ್ಪ ಸಮಯ ಬೇಕಾಯಿತು. ಅಗ್ನಿ ತನ್ನ ಕೆನ್ನಾಲಿಗೆಗಳನ್ನು ಚಾಚಿ ನೆಹರೂ ಅವರ ಶರೀರವನ್ನು ದಹಿಸಲಾರಂಭಿಸಿದಂತೆ ಕಹಳೆಕಾರರು ಅಂತಿಮ ಕಹಳೆ ಊದಿದರು: ಇದು ನೆಹರೂ ಅವರ ಬದುಕಿನಲ್ಲಿ ಭಾರತ

ಮತ್ತು ಇಂಗ್ಲೆಂಡುಗಳು ಬಿಡಿಸಲಾಗದ ಅವಿನಾಭಾವ ನಂಟಾಗಿದ್ದುದರ ಸಂಕೇತವಾಗಿತ್ತು. ಚಿತಾಗ್ನಿ ಶಾಂತವಾಗುವ ಮುನ್ನ, ಶೋಕತಪ್ತರಾಗಿ, ಅಳು ತಡೆಯಲಾರದೆ ರೋದಿಸುತ್ತಿದ್ದ ಶೇಖ್ ಅಬ್ದುಲ್ಲಾರವರು ಅಂತ್ಯ ಸಂಸ್ಕಾರದ ವೇದಿಕೆಗೆ ಜಿಗಿದು ಬೊಗಸೆ ಭರ್ತಿ ಹೂವನ್ನು ಉರಿಯುತ್ತಿದ್ದ ಅಗ್ನಿಯತ್ತ ತೂರಿದರು. ಮುಸ್ಲಿಂ ಪ್ರಪಂಚ ಮತ್ತು ನೆಹರೂ ಜೀವನದ ನಡುವಣ ಅವಿನಾಭಾವ ಸಂಬಂಧ ಹಾಗೂ ಕಾಶ್ಮೀರದ ವಿದ್ಯಮಾನಗಳ ಶೋಕ ಕಾರುಣ್ಯಗಳ ಪ್ರತೀಕದಂತಿತ್ತು ಅಬ್ದುಲ್ಲಾರ ಈ ಅಂತಿಮ ಗೌರವ.

VIII

1964ರ ಏಪ್ರಿಲ್-ಮೇ ತಿಂಗಳುಗಳ ಘಟನಾವಳಿಗಳನ್ನು, ವಿದ್ಯಮಾನಗಳನ್ನು ವಿದ್ವಾಂಸರು ದುರದೃಷ್ಟವಶಾತ್ ಅಲಕ್ಷಿಸಿದ್ದಾರೆ. ನೆಹರೂ ಅವರ ಜೀವನ ಚರಿತ್ರೆಕಾರರಿರಲಿ ಅಥವಾ ಕಾಶ್ಮೀರ ವಿವಾದಗಳ ವಿಶ್ಲೇಷಣಾಕಾರರಿರಲಿ ಎಲ್ಲ ವಿದ್ವಾಂಸರೂ ಈ ಅವಧಿಯ ಪ್ರಸಂಗಗಳನ್ನು, ಘಟನೆಗಳನ್ನು ಕಡೆಗಣಿಸಿದ್ದಾರೆ. ಇಲ್ಲಿ ನಾನು ಅವುಗಳನ್ನು ಪುನರ್ ನಿರೂಪಿಸುತ್ತಿರುವುದೇಕೆಂದರೆ, ಅವು ಈ ಪರಿಹರಿಸಲಾಗದ ರಾಜಕೀಯ ಸಮಸ್ಯೆಗಳ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತವೆ ಎನ್ನುವ ಕಾರಣಕ್ಕಾಗಿ. ವಲ್ಲಭಭಾಯಿ ಪಟೇಲರು ಹೇಳಿದಂತೆ ಈ ಭಯಂಕರ ತಲೆನೋವು ಆದ, ಶೇಖ್ ಅಬ್ದುಲ್ಲಾ ಅವರು ವರ್ಣಿಸಿದಂತೆ ಭಾರತ-ಪಾಕಿಸ್ತಾನಗಳ ರಾಜಕೀಯ ವ್ಯವಸ್ಥೆಗೆ ಅಂಟಿದ ಕ್ಯಾನ್ಸರ್ ಆದ ಈ ಸಮಸ್ಯೆಗಳ ಮೇಲೆ ಅಲಕ್ಷಿಸಲಾದ ಈ ಘಟನೆಗಳು, ಸಂಗತಿಗಳು, ಪ್ರಸಂಗಗಳು ಹೊಸ ಬೆಳಕನ್ನು ಚೆಲ್ಲುತ್ತವೆ.

ಮುಖ್ಯ ಪ್ರಶ್ನೆ: 1964ರ ಏಪ್ರಿಲ್-ಮೇ ತಿಂಗಳುಗಳಲ್ಲಿ ಶಾಂತಿ ಯಾತ್ರೆ ಕೈಗೊಂಡ ಮೂವರು ತಮ್ಮ ಶಾಂತಿ ಪ್ರಯತ್ನಗಳಲ್ಲಿ ಎಷ್ಟರ ಮಟ್ಟಿಗೆ ಶ್ರದ್ಧಾವಂತರಾಗಿದ್ದರು? ಎಂಥ ಗಂಭೀರತೆ, ಗಹನೆ, ತೀವ್ರತೆಗಳಿಂದ ಪ್ರಯತ್ನಿಸಿದ್ದರು? ಶಾಂತಿ ಸ್ಥಾಪಿಸುವ ವಿಷಯದಲ್ಲಿ ಸಾರ್ವಜನಿಕರೆದುರು ತಮ್ಮ ಮನಸ್ಸನ್ನು ಬಿಚ್ಚಿಡದೇ ಇದ್ದವರೆಂದರೆ ಫೀಲ್ಡ್ ಮಾರ್ಷಲ್ ಅಯೂಬ್ ಖಾನ್. ಆಗ ಶಾಂತಿಸ್ಥಾಪನೆ ಬಗ್ಗೆ ನಿಜವಾಗಿ ಅವರ ಮನಸ್ಸಿನಲ್ಲೇನಿತ್ತು ಎನ್ನುವುದು ನಮಗೆ ಏನೇನೂ ಗೊತ್ತಾಗುವುದಿಲ್ಲ. ನಿಜವಾಗಿಯೂ ಅವರಿಗೆ ಕಾಶ್ಮೀರದ ಬಗ್ಗೆ ಮರುಸಂಧಾನ ನಡೆಸಿ, ಸಮಸ್ಯೆಗೆ ಪರಿಹಾರ ಕಾಣಿಸುವ ಮನಸ್ಸಿತ್ತೆ? ಇದರಲ್ಲಿ ಅವರಿಗೆ ಶ್ರದ್ಧೆ, ತೀವ್ರಾಸಕ್ತಿಗಳಿದ್ದವೆ? ಭಾರತದೊಡನೆ ಇಂಥದೊಂದು ಒಪ್ಪಂದಕ್ಕೆ ಪಾಕಿಸ್ತಾನಿಯರ ಮನ ಒಲಿಸುವುದು ಅವರಿಂದ ಸಾಧ್ಯವಿತ್ತೆ? ಅಯೂಬ್ ಖಾನರ ನಿಜವಾದ ನಿಲುವೇನಾಗಿತ್ತು? ಈ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ. ಯಾರಿಗೂ ಈ ಬಗ್ಗೆ ಮಾಹಿತಿ ಇಲ್ಲ. ಆದರೆ ಇನ್ನೊಂದು ಕಡೆಯಿಂದ ಶೇಖ್ ಅಬ್ದುಲ್ಲಾ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಪತ್ರಿಕಾಗೋಷ್ಠಿಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ತಮ್ಮ ಅನ್ನಿಸಿಕೆ, ಅಭಿಪ್ರಾಯಗಳನ್ನು ಹೇಳುತ್ತಿದ್ದರು. ಕೆಲವರು ಅಬ್ದುಲ್ಲಾರ ಮಾತುಗಳನ್ನು ಅವರ ವೈಯಕ್ತಿಕ ಮಹತ್ವಾಕಾಂಕ್ಷೆಯ

ಮುಖವಾಡವೆಂದು ಭಾವಿಸಿದ್ದರು. ಎಕನಾಮಿಕ್ ವೀಕ್ಲಿಯಲ್ಲಿ ವ್ಯಾಖ್ಯಾನಕಾರನೊಬ್ಬ ಈ ರೀತಿ ಬರೆದಿದ್ದಾರೆ:

> "ಭಾರತ ಪಾಕಿಸ್ತಾನ ಬಾಂಧವ್ಯದ ಬೆನ್ನಿಗಿರುವ ದ್ವೇಷ-ಅಸೂಯೆಗಳು, ಪೂರ್ವಾಗ್ರಹಗಳು, ಪ್ರಜ್ಞಾಪೂರ್ವಕವಾದ-ಅಪ್ರಜ್ಞಾಪೂರ್ವಕವಾದ ಪ್ರತಿಕೂಲ ಭಾವನೆಗಳು, ಅಧಿಕಾರ ರಾಜಕೀಯದ ಜಟಿಲತೆಗಳು, ಕಗ್ಗಂಟುಗಳು ಇವೆಲ್ಲದರ ಪ್ರಯೋಜನ ಪಡೆದುಕೊಂಡು, ಚಾತುರ್ಯದಿಂದ ಇವುಗಳನ್ನು ಬಳಸಿಕೊಂಡು ಸ್ವತಂತ್ರ ರಾಷ್ಟ್ರದ ಸ್ಥಾನಮಾನ ಗಳಿಸುವುದೇ ಶೇಖ್ ಅಬ್ದುಲ್ಲಾ ಅವರ ಹುನ್ನಾರವೆಂಬುದು ಅವರ ರಾಜಕೀಯ ವರ್ತನೆ, ನಡತೆಗಳ ಮೇಲ್ನೋಟದ ಅಧ್ಯಯನದಿಂದಲೇ ಮನವರಿಕೆಯಾಗುತ್ತದೆ".

ಮೇಲಿನ ಮಾತುಗಳು ನನ್ನ ಮಟ್ಟಿಗೆ ಇಲ್ಲಿಯವರೆಗೆ ಸಿನಿಕತನದ ಪರಮಾವಧಿಯಂತೆಯೇ ತೋರುತ್ತದೆ. ಅಬ್ದುಲ್ಲಾ ಅವರ ಮಾತುಗಳು ಮತ್ತು ಕೃತಿಗಳೆರಡರಲ್ಲೂ ಜಾತ್ಯತೀತತೆ ಬಗ್ಗೆ ಅವರಿಗಿದ್ದ ಬದ್ಧತೆ ಹಾಗೂ ಕಾಳಜಿಗಳು ಸ್ಪಷ್ಟವಾಗಿ ಪ್ರಕಟಗೊಂಡಿವೆ. ಆದರೆ ಅವರು ಖಂಡಿತವಾಗಿಯೂ ಮಹತ್ವಾಕಾಂಕ್ಷಿಗಳಾಗಿದ್ದರು. 1953ರಲ್ಲಿ ಸ್ವಲ್ಪಕಾಲ ತಾವು ಕಾಶ್ಮೀರದ ಅನಭಿಷಿಕ್ತ ದೊರೆ ಎಂದೇ ಭಾವಿಸಿದ್ದರು. 1964ರಲ್ಲಿ ಅವರು, ಬಡಜನತೆ ಹಾಗೂ ವಿಭಜಿತ ಉಪಖಂಡದಲ್ಲಿ ಶಾಂತಿ, ಸಮಾಧಾನ, ನೆಮ್ಮದಿಗಳನ್ನು ಸ್ಥಾಪಿಸುವ ಸಾಮರ್ಥ್ಯವುಳ್ಳ ಏಕೈಕ ವ್ಯಕ್ತಿ ತಾವೆಂದೂ, ಶ್ಲಾಘನೀಯ ಶಾಂತಿದೂತ ತಾವೆಂದೂ ಭಾವಿಸಿಕೊಂಡಿದ್ದರು.

ಜವಹರಲಾಲ್ ನೆಹರೂ ಅವರ ಉದ್ದೇಶ, ಪ್ರೇರಣೆಗಳ ಬಗ್ಗೆ ಸಂಶಯ ಇರಲೇಬಾರದು. ಅಬ್ದುಲ್ಲಾ ಅವರನ್ನು ದೀರ್ಘಕಾಲ ಸೆರೆಮನೆಯಲ್ಲಿರಿಸಿದ್ದಕ್ಕೆ ಅವರಲ್ಲಿ ಅಪರಾಧಿ ಮನೋಭಾವ ಉಂಟಾಗಿತ್ತು. ಕಾಶ್ಮೀರದಲ್ಲಿನ ನಿಷ್ಠಾರಾಹಿತ್ಯತೆ, ರಾಜಕೀಯ ಅವಿಶ್ವಾಸಗಳ ಬಗ್ಗೆ ಅವರು ಚಿಂತಾಕ್ರಾಂತರಾಗಿದ್ದರು. ಭಾರತ ಮತ್ತು ಪಾಕಿಸ್ತಾನಗಳ ನಡುವಣ ವಿವಾದದಿಂದ ದೀರ್ಘಕಾಲೀನ ಪರಿಣಾಮಗಳೇನಾಗಬಹುದು? ದೀರ್ಘಕಾಲದ ವಿವಾದಗಳು ದೀರ್ಘಕಾಲ ಮುಂದುವರಿದಲ್ಲಿ ಏನೆಲ್ಲ ಬೆಲೆ ತೆರಬೇಕಾದೀತು ಎಂಬುದರ ಬಗ್ಗೆ ವಿವೇಚನಾಶೀಲರಾಗಿದ್ದರು, ಯುಕ್ತಾಯುಕ್ತ ಪರಿಜ್ಞಾನವುಳ್ಳವರಾಗಿದ್ದರು. ಪ್ರಶ್ನೆ ಏಳುವುದು ನೆಹರೂ ಅವರ ಉದ್ದೇಶಗಳ ಬಗ್ಗೆಯಲ್ಲ, ಪ್ರೇರಣೆಗಳ ಬಗ್ಗೆಯಲ್ಲ, ಅವರ ಪ್ರಭಾವದ ಬಗ್ಗೆ. ಸಹೋದ್ಯೋಗಿಗಳು ಅವರ ಮಾತನ್ನು ಕೇಳುತ್ತಿದ್ದರೆ? ಶೇಖ್ ಅಬ್ದುಲ್ಲಾ ಅವರ ಅಲ್ಪಸ್ವಲ್ಪ ಸಹಾಯದಿಂದ ಅವರು ಮತ್ತು ಅಯೂಬ್ ಖಾನರು ಇತ್ಯರ್ಥ ರೂಪಿಸಿದ್ದಲ್ಲಿ, ಪರಿಹಾರ ಸೂತ್ರ ರೂಪಿಸಿದ್ದಲ್ಲಿ ಅದಕ್ಕೆ ಕಾಂಗ್ರೆಸ್ ಪಕ್ಷದೊಳಗೆ ಮತ್ತು ಸಂಸತ್ತಿನಲ್ಲಿ ಅನುಮೋದನೆ ಸಿಗುತ್ತಿತ್ತೆ?

ಬಹುಶಃ ಇಲ್ಲ. ಒಂದು ವೇಳೆ ಅನುಮೋದನೆ ದೊರೆತಿದ್ದರೂ ಪರಿಹಾರ ಮುಂದೆ, ದೀರ್ಘ ಕಾಲ ಕಾರ್ಯರೂಪದಲ್ಲಿ ಉಳಿಯುತ್ತಿತ್ತೆ? ಒಕ್ಕೂಟ ವ್ಯವಸ್ಥೆ ಬಗ್ಗೆ ನೆಹರೂ ಅವರು ಕಾನೂನು ತಜ್ಞರ ಸಲಹೆ ಕೇಳಿದಾಗ, "ಐತಿಹಾಸಿಕವಾಗಿ ನೋಡಿದರೆ ಒಕ್ಕೂಟ ವ್ಯವಸ್ಥೆ

ಯಾವತ್ತೂ ಒಬ್ಬರ ಪ್ರಾಬಲ್ಯಕ್ಕೆ ಒಳಪಟ್ಟಿರುವುದನ್ನು ಅಥವಾ ಹೆದರಿಕೆ ಬೆದರಿಕೆ ಒತ್ತಡಗಳಿಂದಾಗಿ ಒಂದಾಗಿ ಬಾಳುತ್ತಿರುವುದನ್ನು ನಾವು ಕಾಣುತ್ತೇವೆ" ಎಂದು ತಜ್ಞರು ಸೂಕ್ಷ್ಮವಾಗಿ ಅರುಹಿದ್ದರು. ವಿಸ್ತೀರ್ಣ ಮಾತ್ರದಿಂದಲೆ ಭಾರತ, ಪಾಕಿಸ್ತಾನ-ಕಾಶ್ಮೀರ ಗಳೆರಡನ್ನೂ ನುಂಗಿ ನೀರು ಕುಡಿಯುವಷ್ಟು ದೊಡ್ಡದು. ಭಾರತ-ಪಾಕಿಸ್ತಾನ ಒಕ್ಕೂಟ ಆಗಿದ್ದಲ್ಲಿ ಭಾರತ ದೊಡ್ಡಣ್ಣನಂತೆ ವರ್ತಿಸುತ್ತಿತ್ತೆ? ರಾಜೇಂದ್ರ ಪುರಿಯವರು ಹಿಂದೂಸ್ತಾನ್ ಟೈಮ್ಸ್‌ನಲ್ಲಿ ಪ್ರಕಟಿಸಿದ ವ್ಯಂಗ್ಯ ಚಿತ್ರವೊಂದನ್ನು ಉಲ್ಲೇಖಿಸುವುದು ಇಲ್ಲಿ ಸುಸಂಗತವಾದೀತು. ಅಬ್ದುಲ್ಲಾ ಅವರು ಅಯೂಬ್ ಖಾನರನ್ನು ಭೇಟಿ ಮಾಡಿದ ಸಂದರ್ಭವನ್ನು ಪುರಿ ಹೀಗೆ ರೇಖಿಸಿದ್ದರು: "ಫೀಲ್ಡ್ ಮಾರ್ಷಲ್ ಅಯೂಬ್ ಖಾನ್ ಗದ್ದದ ಮೇಲೆ ಬೆರಳಿಟ್ಟು ಧ್ಯಾನಮಗ್ನರಾಗಿ ನಿಂತಿದ್ದಾರೆ; ಶೇಖ್ ಅಬ್ದುಲ್ಲಾ ಭಾವಾಭಿನಯ, ಆಂಗಿಕಾಭಿನಯಗಳಿಂದ ಹೇಳುತ್ತಿದ್ದಾರೆ: ದೆಹಲಿ ಪಿಂಡಿಯ ಮೇಲೆ ಪ್ರಾಬಲ್ಯ ಮೆರೆಯುವುದೆಂದು ನಿಮಗೆ ಹೆದರಿಕೆ ಅಲ್ಲವೆ? ಪ್ರಿಯ ಹೈದಾ, ಕೇಳಿಸಿಕೋ, ಲಖನೌ ಅಥವಾ ಚಂಡೀಗಢಗಳ ಮೇಲೆ ದರ್ಪ-ಪ್ರಾಬಲ್ಯಗಳನ್ನು ತೋರಲಾಗದ ದೆಹಲಿ..."

ಇಲ್ಲೂ ಕೂಡ ಅಂದಾಜು ಮಾಡಲಾಗದ ಅಪರಿಮೇಯವಾದ ಹಲವಾರು ಸಂಗತಿಗಳಿವೆ. ಅಯೂಬ್ ಖಾನರ ಉದ್ದೇಶಗಳು, ಶೇಖ್ ಅಬ್ದುಲ್ಲಾರ ನಂಬಿಕೆಗಳು, ನೆಹರೂ ಅವರ ಬಲಾಬಲಗಳು, ಒಕ್ಕೂಟ ಅಥವಾ ಸಹಾಧಿಪತ್ಯದ ತಾಳಿಕೆ ಬಾಳಿಕೆಗಳು, ಇವೇ ಮೊದಲಾದವು. ಇವೆಲ್ಲ ಅಳೆಯಲಾಗದವು, ಅನೂಹ್ಯವಾದವು. ಕೊನೆಯಲ್ಲಿ, ನೆಹರೂ ಶಕ್ತಿ ಅಕ್ಷರಶಃ ಕುಸಿಯಿತು. ಪಾಕಿಸ್ತಾನದ ಪತ್ರಿಕೆಯೊಂದು ಬರೆದಂತೆ, ನೆಹರೂ ನಿಧನದಿಂದ "ಸಂಧಾನ ಮೂಲಕ ಕಾಶ್ಮೀರ ವಿವಾದ ಇತ್ಯರ್ಥ ಪ್ರಯತ್ನದ ಇತಿಶ್ರೀ" ಆಗಿತ್ತು. ಏಕೆಂದರೆ, ಉತ್ತರಾಧಿಕಾರಿ ಯಾರೇ ಬರಲಿ ನೆಹರೂ ವರ್ಚಸ್ಸು, ಧೈರ್ಯ ಮತ್ತು ರಾಜಕೀಯ ಬೆಂಬಲ ಅವರಲ್ಲಿರುವುದಿಲ್ಲ. ಸಾರ್ವಜನಿಕರ ಭಾವನಾತ್ಮಕ ಪ್ರವಾಹದ ವಿರುದ್ಧ ನಿಂತು ಕಾಶ್ಮೀರದಲ್ಲಿ ಯಥಾಸ್ಥಿತಿ ಮುಂದುವರಿಸಲು ಪಡೆದ ರಾಜಕೀಯ ಬೆಂಬಲ ಇವಾವುದೂ ಉತ್ತರಾಧಿಕಾರಿಯಾದವರಲ್ಲಿ ಇರುವುದಿಲ್ಲ.

○

17

ಅಲ್ಪಸಂಖ್ಯಾತರ ಬಗ್ಗೆ ಅಕ್ಕರಾಸ್ಥೆ

ಸಭ್ಯತೆ, ಮರ್ಯಾದೆಗಳ ಮೊದಲ ನಿಯಮವೆಂದರೆ ಮತ್ತೊಬ್ಬರ ಸ್ವಾತಂತ್ರ್ಯವನ್ನು ರಕ್ಷಿಸುವುದು.

–ಫ್ರೆಡ್ರಿಕ್ ಷಿಲ್ಲರ್

I

1964ರ ಮೇ 27ರಂದು ಮಧ್ಯಾಹ್ನ ಜವಹರಲಾಲ್ ನೆಹರೂ ಅವರ ನಿಧನದ ವಾರ್ತೆ ದೆಹಲಿಗುಂಟ ಹಬ್ಬಿ ಹರಿದಾಡಿ ಗ್ರಾನ್ ವಿಲೆ ಆಸ್ಟಿನ್ ಎಂಬ ಹೆಸರಿನ ಅಮೆರಿಕನ್ ವಿದ್ಯಾರ್ಥಿಯನ್ನೂ ಮುಟ್ಟಿತ್ತು. ಆಸ್ಟಿನ್, ಭಾರತ ಸಂವಿಧಾನ ರಚನೆ ಕುರಿತು ಸಂಪ್ರಬಂಧ ಬರೆಯುತ್ತಿದ್ದ, ಎಂದೇ ನೆಹರೂ ಅವರ ಬದ್ಧತೆಗಳ ಬಗ್ಗೆ ಸಾಮಾನ್ಯಕ್ಕಿಂತ ಹೆಚ್ಚಿನ ಆಸಕ್ತಿ ಆತನಿಗಿತ್ತು. ಆಸ್ಟಿನ್ ತೀನ್‌ಮೂರ್ತಿ ಭವನದತ್ತ ಹೆಜ್ಜೆ ಹಾಕಿದ್ದ. ಅಲ್ಲಿ ಸೇರಿದ್ದ ಶೋಕತಪ್ತ ಜನಸಾಗರದಲ್ಲಿ ಸೇರಿಕೊಂಡ. ಆಸ್ಟಿನ್ ಮರುದಿನ ತನ್ನ ದಿನಚರಿಯಲ್ಲಿ ಹೀಗೆ ಬರೆದಿದ್ದ: "ಎಲ್ಲರಿಗೂ ಒಳಗೆ ಹೋಗುವ ಕಾತುರ. ಆದರೆ ಅವರು ಕಾಯಲು ಸಿದ್ಧರಿದ್ದರು". ಜನ ಜಂಗುಳಿ ಶಿಸ್ತಿನಿಂದಿತ್ತು, ಸಭ್ಯತೆಯಿಂದಿತ್ತು. ಪ್ರಧಾನಮಂತ್ರಿಯವರ ಸಿಬ್ಬಂದಿ ಸಚಿವರನ್ನು, ರಾಜತಾಂತ್ರಜ್ಞರನ್ನು ಒಳಕ್ಕೆ ಬಿಟ್ಟಂತೆ ಜನ ಗಲಾಟೆ ಮಾಡಲಿಲ್ಲ, ದೊಂಬಿ ಏಳಲಿಲ್ಲ. ಅಂತಿಮ ನಮನ ಸಲ್ಲಿಸಲು ಬಂದ ಅತಿಗಣ್ಯ ವ್ಯಕ್ತಿಗಳಲ್ಲಿ ಡಾ. ಸಯದ್ ಮೆಹಮೂದ್ ಅವರು ಇದ್ದರು. ಡಾ. ಸಯದ್ ಮೆಹಮೂದ್ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ನೆಹರೂ ಜೊತೆ ಕೇಂಬ್ರಿಜ್‌ನಲ್ಲಿದ್ದರು, ಜೈಲಿನಲ್ಲೂ ಇದ್ದರು. ಎಲ್ಲರಂತೆ ಅವರೂ ಕಾರಿನಿಂದಿಳಿದು ನೆಹರೂ ನಿವಾಸದ ಮುಂದಿನ ಕಡಿದಾದ ಹುಲ್ಲು ದಿಬ್ಬದ ಮೇಲೆ ನಿಧಾನವಾಗಿ ನಡೆದು ಒಳಕ್ಕೆ ಹೋದರು. ಅಳುತ್ತಿದ್ದ ಮೆಹಮೂದರನ್ನು, ಜಗಜೀವನರಾಂ, ಹಿರಿಯ ಸಚಿವರೂ ಮತ್ತು ಹುಟ್ಟಿನಿಂದ ಕೆಳಜಾತಿಯವರೂ ಆದ ಜಗಜೀವನರಾಂ, ಕೈಹಿಡಿದು ಒಳಕ್ಕೆ ಕರೆದುಕೊಂಡು ಹೋದದ್ದನ್ನು ಆಸ್ಟಿನ್ ಕಂಡಿದ್ದ. ಇದು ನಿಜವಾಗಿ "ನೆಹರೂ

ಭಾರತದ ಸಾಂಕೇತಿಕ ನೋಟವಾಗಿತ್ತು. ಮುಸ್ಲಿಂ ಒಬ್ಬರು ಅಸ್ಪೃಶ್ಯನೊಬ್ಬನ ನೆರವಿನಿಂದ ಹಿಂದೂ ಒಬ್ಬರ ಮನೆಯೊಳಕ್ಕೆ ಪ್ರವೇಶಿಸುತ್ತಿರುವುದು". ಎಂಥಾ ನೋಟ!

ಭಾರತದ ಒಟ್ಟು ಜನಸಂಖ್ಯೆಯಲ್ಲಿ ನಾಲ್ಕನೇ ಒಂದು ಭಾಗದಷ್ಟು ಜನರು ಮುಸ್ಲಿಮರು ಮತ್ತು ಅಸ್ಪೃಶ್ಯರು. 1947ರ ಮುಂಚೆ ಈ ಎರಡೂ ಸಮುದಾಯಗಳ ನಾಯಕರುಗಳು ತಾನು ಮಾತ್ರ ಭಾರತೀಯರೆಲ್ಲರ ಏಕೈಕ ಪ್ರತಿನಿಧಿ ಎಂಬ ಕಾಂಗ್ರೆಸ್ಸಿನ ಹಕ್ಕೊತ್ತಾಯಕ್ಕೆ ಸವಾಲೊಡ್ಡಿದ್ದರು. ಈ ನಾಯಕರುಗಳಲ್ಲಿ ಒಬ್ಬರು ಎಂ.ಎ. ಜಿನ್ನಾ. ಗಾಂಧಿ-ನೆಹರೂಗಳ ಪಕ್ಷ ಹಿಂದೂಗಳನ್ನು ಮಾತ್ರ ಪ್ರತಿನಿಧಿಸುವುದೆಂಬುದು ಜಿನ್ನಾ ಅವರ ತರ್ಕವಾಗಿತ್ತು. ಮತ್ತೊಬ್ಬ ನಾಯಕ ಮಾಜಿ ಅಸ್ಪೃಶ್ಯ ಡಾ ಬಿ.ಆರ್. ಅಂಬೇಡ್ಕರ್. ಕಾಂಗ್ರೆಸ್ ಎಲ್ಲ ಹಿಂದೂಗಳನ್ನು ಪ್ರತಿನಿಧಿಸುವುದಿಲ್ಲ, ಹಿಂದೂಗಳಲ್ಲಿ ಮೇಲ್ಜಾತಿಯವರನ್ನು ಮಾತ್ರ ಪ್ರತಿನಿಧಿಸುತ್ತದೆ ಎಂಬ ಹಾನಿಕಾರಕ ವಾದ ಅಂಬೇಡ್ಕರ್ ಅವರದಾಗಿತ್ತು.

ಈ ಎರಡೂ ವಾದಗಳನ್ನು ತೀವ್ರವಾಗಿ ವಿರೋಧಿಸಲಾಗಿತ್ತು. ಅಂಬೇಡ್ಕರ್ ಅವರು ರಾಜಕೀಯ ಪ್ರವೇಶಿಸುವುದಕ್ಕೂ ಮುಂಚಿನಿಂದ ಗಾಂಧೀಜಿ ಅಸ್ಪೃಶ್ಯತೆ ವಿರುದ್ಧ ಹೋರಾಟ ನಡೆಸಿದ್ದರು. ಹಾಗೂ ಹಿಂದೂ-ಮುಸ್ಲಿಮರ ನಡುವಣ ಸ್ನೇಹ-ಸೌಹಾರ್ದತೆ-ಸಾಮರಸ್ಯಗಳಿಗಾಗಿ ಗಾಂಧೀಜಿ ತಮ್ಮ ಜೀವವನ್ನೇ ಬಲಿಕೊಟ್ಟಿದ್ದರು. ಜಾತಿ-ಮತ-ಬಣ-ಲಿಂಗ ಈ ಎಲ್ಲ ಭೇದಗಳನ್ನು ಮರೆತು ಎಲ್ಲ ಭಾರತೀಯರಿಗೂ ಸ್ವಾತಂತ್ರ್ಯ ಬಂದಾಗಲೇ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥಬರುವುದೆಂದು ಗಾಂಧೀಜಿ ನಂಬಿದ್ದರು.

ಜವಹರಲಾಲ್ ನೆಹರೂ ಅವರೂ ಇವುಗಳಿಗೆ ಬದ್ಧವಾಗಿದ್ದರು. ಗಾಂಧೀಜಿ ಯವರೊಂದಿಗೆ ಈ ಬದ್ಧತೆಗಳನ್ನು ಹಂಚಿಕೊಂಡಿದ್ದರು. ಉಳಿದ ವಿಷಯಗಳಲ್ಲಿ ನೆಹರೂ ಸ್ವಲ್ಪ ಮಟ್ಟಿಗೆ ಹಠಮಾರಿಯಾದ, ಮನಬಂದಂತೆ ವರ್ತಿಸಿದ ಶಿಷ್ಯರಾಗಿದ್ದರು. ತಮ್ಮ ಸಹಬುದ್ಧಿಜೀವಿಗಳೊಂದಿಗೆ ಭಾರತವನ್ನು ಆಧುನಿಕ ಕೈಗಾರಿಕೆಯ ಮಾರ್ಗಕ್ಕೆ ಹಚ್ಚುವುದು ಅವರು ಆಯ್ಕೆ ಮಾಡಿಕೊಂಡ ಮಾರ್ಗವಾಗಿತ್ತು. ಗಾಂಧೀಜಿ ಬಯಸಿದ ಗ್ರಾಮಕೇಂದ್ರಿತ ಅರ್ಥವ್ಯವಸ್ಥೆಗಿಂತ ನೆಹರೂ ಅವರಿಗೆ ಆಧುನಿಕ ಕೈಗಾರಿಕಾಕೇಂದ್ರಿತ ಅರ್ಥವ್ಯವಸ್ಥೆ ಪ್ರಿಯವಾಗಿತ್ತು. ಆದರೆ, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ವಿಷಯದಲ್ಲಿ ನೆಹರೂ ಗಾಂಧೀಜಿಯವರಿಗೆ ಹೆಗಲೆಣೆಯಾಗಿ ನಿಂತರು. ಭುಜಕ್ಕೆ ಭುಜ ಕೊಟ್ಟು ದುಡಿದರು. ನೆಹರೂ ಅವರದು ಸಮಾನತೆಯಿಂದ ಕೂಡಿದ ಸಂಯುಕ್ತ ರಾಷ್ಟ್ರೀಯ ಮನೋಭಾವವಾಗಿತ್ತು.

ಗಾಂಧೀಜೀಯವರ ಸ್ಫೂರ್ತಿ ಮತ್ತು ನೆಹರೂ ಮಾರ್ಗದರ್ಶನ ಪಡೆದ ಸಂವಿಧಾನ ಅಸ್ಪೃಶ್ಯತೆಯನ್ನು ನಿಷೇಧಿಸಿತು. ಧಾರ್ಮಿಕ ವಿಚಾರಗಳಲ್ಲಿ ಸರ್ಕಾರ ತಟಸ್ಥವೆಂದು ಘೋಷಿಸಿತು. ಇದು ಶಾಸನ, ಇದು ಕಾನೂನು. ಆದರೆ ಇದು ಎಷ್ಟರ ಮಟ್ಟಿಗೆ ಕಾರ್ಯಗತವಾಗುತ್ತಿದೆ? ಜಾರಿಯಲ್ಲಿದೆ? ಹೊಸ ಸರ್ಕಾರ ಎದುರಿಸಿದ ಎಲ್ಲ ಪರೀಕ್ಷೆಗಳಲ್ಲಿ ಇದೊಂದು ಅಗ್ನಿದಿವ್ಯವಾಗಿತ್ತು. ಹಿಂದೂಗಳು ಬಹುಸಂಖ್ಯಾತರಾಗಿದ್ದರು. ರಾಜಕೀಯ ಪ್ರಾಬಲ್ಯ ಹೊಂದಿದ್ದರು; ಸರ್ವೋಚ್ಚರಾಗಿದ್ದರು. ಆದ್ದರಿಂದ, ಹಿಂದೂಗಳು ತಮಗಿಂತ

ಭಿನ್ನವಾದ ಇತರ ಭಾರತೀಯರ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಗೌರವಿಸುವುದರಲ್ಲೇ ಆದರ್ಶ ಭಾರತದ, ಕಲ್ಪನೆಯ ಸತ್ವಪರೀಕ್ಷೆ ಅಡಗಿತ್ತು.

II

ಅಲ್ಪಸಂಖ್ಯಾತರು ಹಿಂದೂಗಳ ಪ್ರಾಬಲ್ಯದ ಹೆದರಿಕೆಯಿಂದ ಮುಕ್ತರಾಗಬೇಕೆಂಬುದರಲ್ಲೇ ಪಾಕಿಸ್ತಾನದ ಪರಿಕಲ್ಪನೆಯ ಸಮರ್ಥನೆ ಇದೆ. ವಿರೋಧಾಭಾಸವೆಂದರೆ ಮುಸ್ಲಿಮರು ಬಹುಸಂಖ್ಯಾತರಾಗಿರುವ ಪ್ರದೇಶಗಳನ್ನೊಳಗೊಂಡೇ ಪಾಕಿಸ್ತಾನದ ಸೃಷ್ಟಿಯಾಯಿತು. ಆದ್ದರಿಂದ ಇಲ್ಲಿ ಅಂಥ ಸಮಸ್ಯೆ ಇಲ್ಲ.

1947ರ ನಂತರ ಭಾರತದ ವಿವಿಧೆಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರು ವಾಸವಿದ್ದರು. ಇವರೆಲ್ಲ ಸ್ವಾತಂತ್ರ್ಯಪೂರ್ವದಿಂದಲೂ ಭಾರತದ ವಿವಿಧೆಡೆಗಳಲ್ಲಿ ವಾಸವಾಗಿದ್ದವರೇ. ಸ್ವಾತಂತ್ರ್ಯಾ ನಂತರ ಅಲ್ಲಲ್ಲೆ ಮುಂದುವರಿದಿದ್ದರು. ಗಡಿ ಪ್ರದೇಶಗಳಲ್ಲಿ ಲಕ್ಷಾಂತರ ಮಂದಿ ಮುಸ್ಲಿಮರು ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಿಗೆ ವಲಸೆ ಹೋದರು. ಆದರೆ ಇದಕ್ಕೂ ಹೆಚ್ಚಿನ ಸಂಖ್ಯೆಯ ಮುಸ್ಲಿಮರು ಭಾರತದಲ್ಲೇ ಉಳಿದುಕೊಂಡರು. ಭಾರತವನ್ನೇ ತಮ್ಮ ತೌರುಮನೆಯಾಗಿ ಆಯ್ಕೆ ಮಾಡಿಕೊಂಡರು. ಪಾಕಿಸ್ತಾನದ ಸೃಷ್ಟಿಯಿಂದಾಗಿ ಇವರ ಸ್ಥಾನಮಾನಕ್ಕೆ ಘಾಸಿಯಾಗಿತ್ತು. ಈ ಮಂದಿ ಟೀಕೆ-ಖಂಡನೆಗಳಿಗೆ ಪಕ್ಕಾಗಿದ್ದರು. ಇದು, ಪಾಕಿಸ್ತಾನ ಸೃಷ್ಟಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಇಬ್ಬರು ಮಹನೀಯರು ವ್ಯಕ್ತಪಡಿಸಿರುವ ಅಭಿಪ್ರಾಯ. ಬಂಗಾಳಿ ಮುಸ್ಲಿಂ ಲೀಗ್ ನಾಯಕ ಎಚ್.ಎಸ್. ಸುಹ್ರವಾರ್ದಿ ಮತ್ತು ಯುನೈಟೆಡ್ ಪ್ರಾವಿನ್ಸ್‌ನ ಲೀಗ್ ನಾಯಕ ಚೌಧುರಿ ಖಲೀಕ್ ಉಜ್ಮಾನ್ ಅವರೇ ಆ ಇಬ್ಬರು ಮಹನೀಯರು. ಸ್ವಾತಂತ್ರ್ಯ ಬಂದು, ದೇಶವಿಭಜನೆ ಆಗಿ ಇನ್ನೂ ಒಂದು ತಿಂಗಳೂ ಕಳೆದಿರಲಿಲ್ಲ. ಅಷ್ಟರಲ್ಲಿ, 1947ರ ಸೆಪ್ಟಂಬರ್ 10ರಂದು ಸುಹ್ರವಾರ್ದಿಯವರು, ಭಾರತದಲ್ಲಿ ಮುಸ್ಲಿಮರು ಅಸಹಾಯಕರಾಗಿದ್ದಾರೆಂದು, ಏಕಾಂಗಿಗಳಾಗಿದ್ದಾರೆಂದು ಗಾಬರಿಯಿಂದ ಖಲೀಕ್ ಉಜ್ಮಾನ್ ಅವರಿಗೆ ಪತ್ರ ಬರೆದರು. ಪಾಕಿಸ್ತಾನ ಸೃಷ್ಟಿಯಿಂದ ಉದ್ಭವಿಸಿದ ವಿರೋಧ-ವೈರ-ವೈಷಮ್ಯಗಳಿಂದಾಗಿ ಹಿಂದೂಗಳು ಮತ್ತು ಸಿಖ್ ನಿರಾಶ್ರಿತರು ಭಾರತಕ್ಕೆ ಓಡಿಬಂದಿದ್ದರು. ಇದರಿಂದಾಗಿ ದಳ್ಳುರಿ ಉಂಟಾಗಿ ಭಾರತ ಒಕ್ಕೂಟದಲ್ಲಿನ ಅಲ್ಪಸಂಖ್ಯಾತ ಮುಸ್ಲಿಮರ ನಾಶವಾಗಬಹುದೆಂದು ಸುಹ್ರವಾರ್ದಿಯವರ ಆತಂಕವಾಗಿತ್ತು. ಅತ್ತ ಖಲೀಕ್ ಉಜ್ಮಾನರು, "ಭಾರತದ ವಿಭಜನೆಯಿಂದ ಭಾರತದೊಳಗಿರುವ ಮುಸ್ಲಿಮರಿಗೂ ಹಾಗೂ ದೀರ್ಘಾವಧಿಯಲ್ಲಿ ಬೇರೆಡೆಗಳಲ್ಲಿನ ಮುಸ್ಲಿಮರಿಗೂ ಹಾನಿಯಾಗುವುದು" ಎಂಬ ಖೇದಕರ ತೀರ್ಮಾನಕ್ಕೆ ಬಂದಿದ್ದರು.

ಅಲ್ಪಸಂಖ್ಯಾತರ ಪ್ರಾಣರಕ್ಷಣೆಗೆ, ಆಸ್ತಿರಕ್ಷಣೆಗೆ ಸುಹ್ರವಾರ್ದಿಯವರು ಒಂದು ಒಡಂಬಡಿಕೆ ರೂಪಿಸಿದರು. ಎರಡು ರಾಷ್ಟ್ರಗಳ ನಡುವೆ ಈ ನಿಟ್ಟಿನಲ್ಲಿ ಪರಸ್ಪರ ನೆರವು, ಸಹಕಾರಗಳು ಇರಬೇಕೆಂಬುದು ಈ ಒಡಂಬಡಿಕೆಯ ತಿರುಳಾಗಿತ್ತು. ಎರಡು ರಾಷ್ಟ್ರಗಳೂ

ಅಲ್ಪಸಂಖ್ಯಾತರ ರಕ್ಷಣೆಗೆ ಬದ್ಧವಾಗಿರಬೇಕು ಹಾಗೂ ಪರಸ್ಪರ ಪ್ರಚೋದನಕಾರಿ ಹೇಳಿಕೆಗಳನ್ನು ನೀಡಬಾರದೆಂದು ಸುಹ್ರವಾರ್ದಿ ಕರೆನೀಡಿದ್ದರು. ಈ ಒಡಂಬಡಿಕೆಗೆ ಗಾಂಧೀಜಿಯವರಿಂದ 'ಅಸ್ತು' ಎನ್ನಿಸುವುದರಲ್ಲಿ ಸುಹ್ರವಾರ್ದಿ ಯಶಸ್ವಿಯಾದರೂ ಜಿನ್ನಾ ಅವರ ಒಪ್ಪಿಗೆ ಪಡೆಯುವುದರಲ್ಲಿ ವಿಫಲರಾದರು. "ಭಾರತ ಒಕ್ಕೂಟದ ಅಸಹಾಯಕ, ದುರ್ದೈವಿ ಮುಸ್ಲಿಮರ ಸಲುವಾಗಿ ಇದಕ್ಕೆ ಒಪ್ಪಿ ಎಂದು ಸುಹ್ರವಾರ್ದಿ ಸೆರಗೊಡ್ಡಿ ಬೇಡಿದರೂ ಜಿನ್ನ ಇದಕ್ಕೆ ಸಮ್ಮತಿಸಲಿಲ್ಲ."

ಪಾಕಿಸ್ತಾನದ ಸೃಷ್ಟಿ, ಹಿಂದೂ ಕೋಮು ಶಕ್ತಿಗಳಿಗೆ ಪ್ರೇರಣೆ, ಪ್ರಚೋದನೆಗಳನ್ನೊದಗಿಸಿತ್ತು. ಮುಸ್ಲಿಮರು ದ್ರೋಹಿಗಳು, ಅವರೇ ದೇಶ ಒಡೆದವರು ಎಂದು ಆರ್.ಎಸ್.ಎಸ್. ಈಗ ವಾದಿಸುವುದು ಸಾಧ್ಯವಾಗಿತ್ತು. ಹಿಂದೂ ತೀವ್ರಗಾಮಿಗಳ ಪ್ರಕಾರ ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಬೇಕು ಇಲ್ಲವೇ ಇಲ್ಲಿಯೇ ಇದ್ದು ಪರಿಣಾಮಗಳನ್ನು ಎದುರಿಸಬೇಕಾಗಿತ್ತು. ವಿಭಜನೆಯ ನಂತರ ಆರ್.ಎಸ್.ಎಸ್. ಬಲ ವರ್ಧಿಸಿತ್ತು. 1948ರ ಜನವರಿಯಲ್ಲಿ ಗಾಂಧೀಜಿ ಹತ್ಯೆ ಅದರ ಬೆಳವಣಿಗೆಗೆ ಮುಳುವಾಯಿತಾದರೂ ಉತ್ತರ ಮತ್ತು ಪಶ್ಚಿಮ ಭಾರತಗಳಲ್ಲಿ ಅದು ಪ್ರಭಾವಶಾಲಿಯಾಗಿತ್ತು.

ಸತ್ಯ ಹೇಳಬೇಕೆಂದರೆ, ಕಾಂಗ್ರೆಸ್ಸಿನಲ್ಲೂ ಕಟ್ಟಾ ದೇಶಾಭಿಮಾನಿಗಳಿದ್ದರು. ಇವರಿಗೆ, ಹೊಸರಾಷ್ಟ್ರಕ್ಕೆ ಮುಸ್ಲಿಮರ ನಿಷ್ಠೆ ಬಗ್ಗೆ ಸಂಶಯವಿತ್ತು. ಇವರಲ್ಲಿ ಕೆಲವರು ಉನ್ನತ ಹುದ್ದೆಗಳಲ್ಲಿದ್ದರು. ಜೆಮ್‌ಶೆಡ್ಪುರದ ಉಕ್ಕಿನ ಕಾರ್ಖಾನೆಯಲ್ಲಿರುವ ಮುಸ್ಲಿಮ್ ಕಾರ್ಮಿಕರು ಪಾಕಿಸ್ತಾನಕ್ಕೆ ಹೋಗಬಹುದೆಂದು ಬಿಹಾರ್ ರಾಜ್ಯಪಾಲರು ಕಾರ್ಖಾನೆಯ ಮಾಲೀಕರಿಗೆ ಎಚ್ಚರಿಕೆ ನೀಡಿದ್ದರು. ಹೋಗುವ ಮುನ್ನ ಯಂತ್ರೋಪಕರಣಗಳನ್ನು ಹಾಳುಮಾಡಬಹುದೆಂದೂ ಅವರು ಆತಂಕ ವ್ಯಕ್ತಪಡಿಸಿದ್ದರು. ಆದರೆ ಕಾರ್ಖಾನೆಗಳ ಮಾಲೀಕರು ಸ್ಥಿರವಾಗಿದ್ದರು. ಮುಸ್ಲಿಂ ಕಾರ್ಮಿಕರನ್ನು ವಜಾಮಾಡುವ ಉದ್ದೇಶ ತಮಗಿಲ್ಲವೆಂದೂ ಕಾರ್ಮಿಕರಲ್ಲಿ ಕೋಮು ವಿರಸ ಉಂಟುಮಾಡುವ ಉದ್ದೇಶ ತಮಗಿಲ್ಲವೆಂದೂ ಮಾಲೀಕರು ಸ್ಪಷ್ಟಪಡಿಸಿದ್ದರು.

ಭಾರತದಲ್ಲಿನ ಮುಸ್ಲಿಮರ ಎದೆಯಾಂತರಾಳದಲ್ಲಿ ಹುದುಗಿದ್ದ ಅಭದ್ರತೆಯ ಭಾವನೆ ಹೊರಬಂದದ್ದು, 1950ರಲ್ಲಿ ಅಮೆರಿಕದ ಮನಶ್ಶಾಸ್ತ್ರಜ್ಞನೊಬ್ಬ ಸಮೀಕ್ಷೆ ನಡೆಸಿದಾಗ. ಈತ ಹೆಚ್ಚಾಗಿ ಸಂದರ್ಶಿಸಿದ್ದು ಉತ್ತರ ಮತ್ತು ಪಶ್ಚಿಮ ಭಾರತದಲ್ಲಿನ ಮುಸ್ಲಿಮರನ್ನು. ಇವರೆಲ್ಲರೂ ಹೆದರಿಕೆ, ಸಂಶಯಗಳಿಂದ ನಲುಗಿದ್ದರು. "ನಮ್ಮನ್ನು ಪಾಕಿಸ್ತಾನದ ಗೂಢಚಾರರೆಂದು ಪರಿಗಣಿಸಲಾಗಿದೆ" ಎಂದು ಒಬ್ಬಾತ ಸಮೀಕ್ಷೆಯಲ್ಲಿ ತಿಳಿಸಿದ್ದ. "ಹಿಂದೂಗಳ ಬಡಾವಣೆಯಲ್ಲಿ ಬದುಕುವುದು ಅಪಾಯಕಾರಿ. ಅವರು ನಮ್ಮ ಹೆಂಗಸರನ್ನು ಅಪಹರಿಸಿ ಶೀಲಭಂಗ ಮಾಡಬಹುದು" ಎನ್ನುವುದು ಇನ್ನೊಬ್ಬನ ಅಭಿಪ್ರಾಯವಾಗಿತ್ತು. "ಹಿಂದೂಗಳು ಮುಸ್ಲಿಮರಿಗೆ ಮಾರಾಟ ಮಾಡುವ ವಸ್ತುಗಳಿಗೆ ಕಾಳಸಂತೆಗಿಂತ ಹೆಚ್ಚಿನ ಬೆಲೆಯನ್ನು ಕಸಿಯುತ್ತಾರೆ" ಎಂದು ಮೂರನೆಯವನು ಹೇಳಿದ್ದ.

III

ಮುಸ್ಲಿಮರನ್ನು ಸಂಪೂರ್ಣವಾಗಿ ನಂಬದೇ ಇದ್ದವರಲ್ಲಿ ಗೃಹಸಚಿವ ವಲ್ಲಭಭಾಯಿ ಪಟೇಲರೂ ಒಬ್ಬರಾಗಿದ್ದರು. 1946ರಲ್ಲಿ, ಪಾಕಿಸ್ತಾನಕ್ಕೆ ಸೇರುವ ಸಾಧ್ಯತೆ ಇಲ್ಲದಂಥ ಪ್ರದೇಶಗಳಲ್ಲೂ ಬಹುತೇಕ ಮುಸ್ಲಿಮರು ಲೀಗ್ ಪರ ಮತ ನೀಡಿದ್ದರೆಂಬುದನ್ನು ಪಟೇಲರು ಮರೆತಿರಲಿಲ್ಲ. ಎರಡು ರಾಷ್ಟ್ರಗಳ ಸೃಷ್ಟಿಯ ನಂತರ ಭಾರತದಲ್ಲೇ ಉಳಿದುಕೊಂಡ ಮುಸ್ಲಿಮರ ಬಗ್ಗೆ ಅವರ ಸಂಶಯ ಭಾವನೆ ಮುಂದುವರಿದಿತ್ತು. 1948ರ ಜನವರಿಯಲ್ಲಿ ಲಖನೌದಲ್ಲಿ ಭಾಷಣ ಮಾಡಿದ ವಲ್ಲಭಭಾಯಿ ಪಟೇಲರು, "ಇಲ್ಲೇ, ಈ ನಗರದಲ್ಲೇ ಎರಡು ರಾಷ್ಟ್ರದ ಸಿದ್ಧಾಂತಕ್ಕೆ ಬುನಾದಿ ಹಾಕಿದ್ದು" ಎಂಬುದನ್ನು ನೆನಪಿಸಿದ್ದರು. ಏಕೆಂದರೆ, "ಮುಸ್ಲಿಮರದೇ ಪ್ರತ್ಯೇಕ ರಾಷ್ಟ್ರವೆಂದು" ಹೇಳಿದವರು ಉತ್ತರ ಪ್ರದೇಶದ ಬುದ್ಧಿಜೀವಿಗಳು. ಆದರೆ ಈಗ, ಪಾಕಿಸ್ತಾನಕ್ಕೆ ಹೋಗಲಿಚ್ಛಿಸದ ಮುಸ್ಲಿಮರು, "ತಾವು ಭಾರತ ಒಕ್ಕೂಟಕ್ಕೆ ನಿಷ್ಠರು" ಎಂದು ಒಂದು ಪ್ರಮಾಣ ಪತ್ರ ನೀಡಿದರಷ್ಟೇ ಸಾಲದಾಗಿತ್ತು. ಅಂಥವರು ತಮ್ಮ ಘೋಷಣೆಗೆ ವ್ಯಾವಹಾರಿಕವಾದ ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾಗಿತ್ತು.

ಆ ವರ್ಷ ಉತ್ತರಾರ್ಧದಲ್ಲಿ ಪಟೇಲರ ಗೃಹಸಚಿವಾಲಯದ ಕಾರ್ಯದರ್ಶಿಗಳು, ಬೇರೆ ಇಲಾಖೆಗಳ ಕಾರ್ಯದರ್ಶಿಗಳಿಗೆ ಒಂದು ಗಮನ ಸೆಳೆಯುವ ಪತ್ರ ಬರೆದಿದ್ದರು. ಆ ಪತ್ರ ಹೀಗಿತ್ತು:

> *"ಪಾಕಿಸ್ತಾನದ ಜೊತೆಗಿನ ಬಾಂಧವ್ಯದ ಹಿನ್ನೆಲೆಯಲ್ಲಿ ಭದ್ರತೆಯ ಒಂದು ಮುಖ ಇಂದು ಮಹತ್ವ ಗಳಿಸಿದ್ದು ಆ ಬಗ್ಗೆ ತುರ್ತುಗಮನ ಹರಿಸಬೇಕಾಗಿದೆ. ಭಾರತದಲ್ಲಿರುವ ಮುಸ್ಲಿಮ್ ಸಮುದಾಯದಲ್ಲಿ, ಕಾಶ್ಮೀರ ಮತ್ತು ಹೈದರಾಬಾದ್‌ಗೆ ಸಂಬಂಧಿಸಿದ ನೀತಿಯಿಂದಾಗಿ ಭಾರತ ಸರ್ಕಾರದ ಬಗ್ಗೆ ಅಸಮಾಧಾನ ಇದೆ ಎಂಬುದಕ್ಕೆ ಸ್ಪಷ್ಟ ಸಾಕ್ಷ್ಯಾಧಾರಗಳು ದೊರೆಯುತ್ತಿವೆ. ಮುಸ್ಲಿಮ್ ಸಮುದಾಯದಲ್ಲಿ ಕೆಲವರು ಪಾಕಿಸ್ತಾನದ ಪರ ಸಕ್ರಿಯ ಸಹಾನುಭೂತಿ ಉಳ್ಳವರಾಗಿದ್ದಾರೆಂಬುದೂ ಸ್ಪಷ್ಟವಾಗುತ್ತಿದೆ. ಇಂಥ ಸರ್ಕಾರಿ ನೌಕರರು ಮಾಹಿತಿ ರವಾನಕರಾಗಿ ಬಳಕೆಯಾಗುವ ಸಾಧ್ಯತೆ ಇದ್ದು ಇವರುಗಳು ಉಳಿದ ಬಂಧು-ಬಾಂಧವರ ಪ್ರಭಾವಕ್ಕೆ ಪಕ್ಕಾಗುವ ಸಾಧ್ಯ ಇದೆ.*
>
> *ಸರ್ಕಾರದ ಸೇವೆಯಲ್ಲಿರುವ ಮುಸ್ಲಿಂ ನೌಕರರಲ್ಲಿ ಈ ವರ್ಗಕ್ಕೆ ಸೇರಿದವರು ಇರುವುದು ಸಾಧ್ಯ. ಇಂಥ ಮಂದಿ ಆಡಳಿತ ವ್ಯವಸ್ಥೆಗೆ ಅಪಾಯಕಾರಿ ಎಂಬುದು ಸ್ಪಷ್ಟ. ಆದ್ದರಿಂದ ಇಂಥವರಿಗೆ ಗೋಪ್ಯ ಕೆಲಸ ಕಾರ್ಯಗಳನ್ನಾಗಲೀ ಉನ್ನತ ಹುದ್ದೆಗಳನ್ನಾಗಲೀ ವಹಿಸದಂತೆ ನೋಡಿಕೊಳ್ಳುವುದು ಅತ್ಯಗತ್ಯ. ಈ ಉದ್ದೇಶಕ್ಕಾಗಿ, ನೀವು ನಿಮ್ಮ ಸಚಿವಾಲಯದಲ್ಲಿನ ಹಾಗೂ ನಿಮ್ಮ ಹತೋಟಿಯಲ್ಲಿನ ಸರ್ಕಾರಿ ಕಚೇರಿಗಳಲ್ಲಿರುವ, ಭಾರತದ ಬಗ್ಗೆ ಸಂಶಯಾತ್ಮಕ ನಿಷ್ಠೆ ಉಳ್ಳ, ಭದ್ರತೆಗೆ ಅಪಾಯ ಎನ್ನಬಹುದಾದ ಮುಸ್ಲಿಂ ನೌಕರರ ಯಾದಿಯನ್ನು ತಯಾರಿಸಬೇಕೆಂದು ನನ್ನ*

ಇರಾದೆ. ಇಂಥ ಯಾದಿಯನ್ನು ತುಂಬ ಎಚ್ಚರಿಕೆಯಿಂದ ತಯಾರಿಸಬೇಕು ಹಾಗೂ ಇಲಾಖೆಯ ಮುಖ್ಯಸ್ಥರು ತುಂಬಾ ನಿಗಾವಹಿಸಿ ಅದನ್ನು ಪರೀಕ್ಷಿಸಬೇಕು. ಈ ಯಾದಿಯನ್ನು ಜವಾಬ್ದಾರಿಯ ಮುಖ್ಯ ಹುದ್ದೆಗಳಿಗೆ ನೇಮಕ ಮಾಡುವಾಗ ಮತ್ತು ರಹಸ್ಯ ಕೆಲಸಗಳಿಗೆ ಗೊತ್ತು ಮಾಡುವಾಗ ಸಂಶಯಾಸ್ಪದ ವ್ಯಕ್ತಿಗಳನ್ನು ದೂರ ಇಡಲು ಬಳಸಬೇಕು.

ಸೇಡು ತೀರಿಸಿಕೊಳ್ಳಲು ಇದನ್ನು ಬಳಸಬಾರದು ಹಾಗೂ ಅಸಲಿ ಸಂಶಯಾಸ್ಪದ ವ್ಯಕ್ತಿಗಳನ್ನು ಮಾತ್ರ ಈ ಯಾದಿಯಲ್ಲಿ ಸೇರಿಸಬೇಕು. ಮುಸ್ಲಿಂ ಸಮುದಾಯದ ನೌಕರರಲ್ಲಿ ಯಾರು ನಿಷ್ಠರಾಗಿರುತ್ತಾರೋ, ಯಾರ ಕೆಲಸ ತೃಪ್ತಿಕರವಾಗಿರುತ್ತದೋ ಅಂಥವರಲ್ಲಿ, ಅವರ ಹಕ್ಕುಗಳನ್ನು ಬಹುಸಂಖ್ಯಾತ ಸಮುದಾಯದವರಿಗೆ ಕಡಿಮೆ ಇಲ್ಲದಂತೆ ಮಾನ್ಯ ಮಾಡಲಾಗುವುದು ಎನ್ನುವಂಥ ಭಾವನೆ ಮೂಡಿಸಬೇಕು."

ಇದೊಂದು ಅಸಾಧಾರಣ ಪತ್ರವಾಗಿತ್ತು. ಈ ಪತ್ರವನ್ನು ಬೇಡದವರ ತಲೆ ಬೇಟೆಯಾಡಲು ಬಳಸಲಿಲ್ಲವಾದರೂ ಭಾರತ ಸರ್ಕಾರದ ಸೇವೆಯಲ್ಲಿರುವ ಮುಸ್ಲಿಮ್ ನೌಕರರಲ್ಲಿ ಯಾರು ನಿಷ್ಠರು, ಯಾರು ವಿಶ್ವಾಸ ದ್ರೋಹಿಗಳು ಎಂದು ಪತ್ತೆ ಮಾಡುವ ಪ್ರಯತ್ನಗಳಿಗೆ ಇದು ಪ್ರೋತ್ಸಾಹದಾಯಕವಾಯಿತು. ನಿದರ್ಶನವಾಗಿ ಪುರಾತತ್ವ ಸರ್ವೆ ಇಲಾಖೆಯನ್ನು ನೋಡಬಹುದು. ಮಧ್ಯಯುಗೀನ ಭಾರತದ ಮಹಾನ್ ಕಟ್ಟಡಗಳ/ ನಿರ್ಮಾಣಗಳ ದುರಸ್ತಿ, ಸಂರಕ್ಷಣೆ ಈ ಇಲಾಖೆಯ ಕೆಲಸ. ಮೇಲಿನ ಪತ್ರವನ್ನು ಶಿಕ್ಷಣ ಸಚಿವಾಲಯ ಪುರಾತತ್ವ ಸರ್ವೆ ಇಲಾಖೆ ಡೈರೆಕ್ಟರ್ ಜನರಲ್ ಅವರಿಗೆ ರವಾನಿಸಿತು. ಇಲಾಖೆಯಲ್ಲಿರುವ ಮುಸ್ಲಿಂ ನೌಕರರಲ್ಲಿ ಯಾರೆಲ್ಲ ಭಾರತಕ್ಕೆ ನಿಷ್ಠರಾಗಿದ್ದಾರೋ, ಯಾರೆಲ್ಲ ಭದ್ರತೆಗೆ ಅಪಾಯಕಾರಿಯಾಗಿದ್ದಾರೋ ಅಂಥವರ ಯಾದಿಯನ್ನು ಕಳುಹಿಸಿಕೊಡುವಂತೆ ಡೈರೆಕ್ಟರ್ ಜನರಲ್ ವಲಯ ಕಚೇರಿಗಳ ಮುಖ್ಯಸ್ಥರಿಗೆ ಪತ್ರ ಬರೆದರು. ವಲಯ ಮುಖ್ಯಸ್ಥರು ತಮ್ಮ ಕೈಕೆಳಗಿನ ಮುಸ್ಲಿಂ ಸಿಬ್ಬಂದಿಯ ನಿಷ್ಠೆ ಮತ್ತು ವಿಶ್ವಾಸದ್ರೋಹ, ಅಪಾಯಗಳನ್ನು ತಿಳಿಯಲು ರಹಸ್ಯ ತನಿಖೆ ಆರಂಭಿಸಿದರು. ಈ ತನಿಖೆಯ ಫಲಿತಾಂಶದ ವರದಿಯನ್ನು ನಂತರ ಕೇಂದ್ರ ಕಚೇರಿಗೆ ಕಳುಹಿಸಿಕೊಡಲಾಯಿತು. ಅರ್ಧಶತಮಾನದ ನಂತರ ಈ ವರದಿಗಳನ್ನು ಓದಿದಾಗ, ಕುತೂಹಲ, ಆಸಕ್ತಿಗಳ ಜೊತೆ ಮನಸ್ಸು ವಿಷಣ್ಣತೆಯಿಂದ ಮುದುಡಿ ಹೋಗುತ್ತದೆ.

ತಮ್ಮ ಕೈಕೆಳಗಿನ ಮುಸ್ಲಿಂ ನೌಕರರಲ್ಲಿ ವೈಯಕ್ತಿಕವಾಗಿ ತಮಗೆ ಯಾರ ಬಗ್ಗೆಯೂ ಸಂಶಯ ಅಪನಂಬಿಕೆಗಳಿಲ್ಲವೆಂದೂ ಆದಾಗ್ಯೂ ಒತ್ತಡಗಳಿಂದಾಗಿ ಅವರನ್ನು ಸುಲಭವಾಗಿ ಅಪಾಯಕ್ಕೀಡಾಗಬಹುದಾದಂಥ ಮುಖ್ಯ ಹುದ್ದೆಗಳಿಂದ ವರ್ಗ ಮಾಡಬೇಕಾಯಿತೆಂದೂ ಅನೇಕ ಮಂದಿ ಇಲಾಖಾ ಮುಖ್ಯಸ್ಥರು ವರದಿ ಕಳುಹಿಸಿದ್ದರು. ಬಿಜಾಪುರದ ಗೋಲ್ ಗುಂಬಜ್‌ನ ಸಂರಕ್ಷಣೆಯ ಹೊಣೆ ಹೊತ್ತಿರುವ ಅಧಿಕಾರಿ ನಂಬಿಕೆಗೆ ಅರ್ಹನಲ್ಲವೆಂದು

ಅಲ್ಲಿನ ಸೇನೆಯ ಪದಾತಿ ದಳದ ಮೇಜರ್ ಒಬ್ಬರು ಸರ್ವೆ ಇಲಾಖೆಗೆ ವರದಿ ಮಾಡಿದ್ದುಂಟು. ಸಂಶಯಾಸ್ಪದ ಅಧಿಕಾರಿಗೆ ಹೈದರಾಬಾದಿನಲ್ಲಿ ನೆಂಟರಿದ್ದರು. ಹೈದರಾಬಾದ್ ಸಂಸ್ಥಾನ ಆಗ ತಾನು ಭಾರತ ಒಕ್ಕೂಟ ಸೇರುವುದಿಲ್ಲವೆಂದು ತಕರಾರು ತೆಗೆದಿತ್ತು. ನಂತರ ಈ ಸಂರಕ್ಷಣಾಧಿಕಾರಿಯನ್ನು ಒಳನಾಡಿನ ಕನ್ಹೇರಿ ಗುಹೆಗಳಿಗೆ ವರ್ಗಾಯಿಸಲಾಯಿತು.

ಆಗ್ರಾದಲ್ಲಿನ ಉತ್ತರವಲಯದ ಸರ್ವೆ ಸೂಪರಿನ್‌ಟೆಂಡೆಂಟರು ಸುದೀರ್ಘವಾದ ವರದಿಯೊಂದನ್ನು ಕಳುಹಿಸಿದ್ದರು. ತಾಜ್‌ಮಹಲ್ ಮತ್ತು ಫತೇಪುರ್ ಸಿಖ್ರಿ ಸಂರಕ್ಷಣೆ ಉತ್ತರ ವಲಯದ ಹೊಣೆಯಾಗಿತ್ತು. ಈ ಅಧಿಕಾರಿ ವರದಿಯೊಂದಿಗೆ, ಪಾಕಿಸ್ತಾನಕ್ಕೆ ವಲಸೆ ಹೋದವರ ಬಂಧುಗಳಾಗಿದ್ದ ಇಪ್ಪತ್ತೆಂಟು ಮಂದಿ ಮುಸ್ಲಿಂ ನೌಕರರ ಯಾದಿಯನ್ನು ಕಳುಹಿಸಿದ್ದ. ಈ ಅಧಿಕಾರಿಯ ಪ್ರಕಾರ ಐವರ ಭಾರತ ನಿಷ್ಠೆ ಪ್ರಶ್ನಾತೀತವಾಗಿರಲಿಲ್ಲ. "ಅನುಕೂಲಕರ ಅವಕಾಶ ಒದಗಿದಾಗ ಇವರು ಭದ್ರತೆಗೆ ಅಪಾಯಕಾರಿಯಾಗಬಹುದು". ಈ ಐವರಲ್ಲಿ ಒಬ್ಬ ಆಗ್ರಾ ಕೋಟೆಯಲ್ಲಿ ಬುಕಿಂಗ್ ಗುಮಾಸ್ತೆಯಾಗಿದ್ದ. ಇವನ ಮಗ, ಸೋದರ ಮತ್ತು ತಾಯಿ ಸಿಂಧ್ ಪ್ರಾಂತ್ಯದ ಹೈದರಾಬಾದಿನಲ್ಲಿದ್ದರು. ಇನ್ನೊಬ್ಬ ತಾಜ್‌ಮಹಲ್‌ನ ಕಾವಲುಗಾರನಾಗಿದ್ದು ಇವನ ಪತ್ನಿ ಕರಾಚಿಯಲ್ಲಿದ್ದಳು. ಸೂಪರಿನ್‌ಟೆಂಡೆಂಟ್ ಪ್ರಕಾರ ಇನ್ನು ಏಳು ಮಂದಿ ಮುಸ್ಲಿಂ ನೌಕರರು ಸ್ವಭಾವತಃ ತಂಟೆಕೋರರಲ್ಲವಾದರೂ ಪಾಕಿಸ್ತಾನದಲ್ಲಿರುವ ತಮ್ಮ ಬಂಧುಗಳ ಪ್ರಭಾವದಿಂದಾಗಿ ಮಾಹಿತಿ ರವಾನಿಸಬಹುದಾಗಿತ್ತು.

ಅಕ್ಟೋಬರ್ 28ರಂದು ಗೃಹ ಕಾರ್ಯದರ್ಶಿಗಳು ಮರು ಓಲೆಯೊಂದನ್ನು ಬರೆದರು. ಈ ಬಾರಿ, ಪಾಕಿಸ್ತಾನದಲ್ಲಿ ಹತ್ತಿರದ ಬಂಧುಬಾಂಧವರನ್ನು ಹೊಂದಿರುವ ಅಧಿಕಾರಿಗಳು ಅವರ ಗುರಿಯಾಗಿದ್ದರು. ವಿಭಜನೆಯಾಗಿ ಹಲವಾರು ತಿಂಗಳುಗಳು ಕಳೆದಿವೆ. ಸರ್ಕಾರಿ ನೌಕರರು ಇನ್ನೂ ತಮ್ಮ ಕುಟುಂಬಗಳನ್ನು ಪಾಕಿಸ್ತಾನದಲ್ಲೆ ಬಿಟ್ಟಿರುವುದಕ್ಕೆ ಕಾರಣಗಳೇನೂ ಇರಲಾರದು. ಈಗ ಎರಡು ರಾಷ್ಟ್ರಗಳ ನಡುವಣ ಬಾಂಧವ್ಯ ಹದಗೆಟ್ಟಿರುವುದರಿಂದ ಕುಟುಂಬವನ್ನು ಪಾಕಿಸ್ತಾನದಲ್ಲೆ ಬಿಟ್ಟಿರುವುದು ಅಂಥವರ ಭಾರತನಿಷ್ಠೆ ಬಗ್ಗೆ ಸಂಶಯ ತಾಳಲು ಮೇಲ್ನೋಟದ ಸಾಕ್ಷ್ಯವಾಗಬಲ್ಲದು. ಆದ್ದರಿಂದ ಪಾಕಿಸ್ತಾನದಲ್ಲಿ ತಮ್ಮ ಹೆಂಡಿರು ಮಕ್ಕಳನ್ನು ಬಿಟ್ಟಿರುವ ಸರ್ಕಾರಿ ನೌಕರರು ಇನ್ನೊಂದು ತಿಂಗಳೊಳಗೆ ಅವರನ್ನು ಕರೆಸಿಕೊಳ್ಳಬೇಕು ಎಂದು ಪತ್ರದಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿತ್ತು. ತಿಂಗಳೊಳಗೆ ಕುಟುಂಬ ಕರೆಸಿಕೊಳ್ಳದೆ ಕರ್ತವ್ಯ ಲೋಪವೆಸಗಿದ ಅಧಿಕಾರಿಗಳ ಪಟ್ಟಿಯನ್ನು ಕಳುಹಿಸಿಕೊಡುವಂತೆ ಗೃಹ ಸಚಿವಾಲಯ ತಾಕೀತು ಮಾಡಿತ್ತು. ದೇಶದ ಹಿತದೃಷ್ಟಿಯಿಂದ ಇಂಥವರ ವಿರುದ್ಧ, ಒಂದೊಂದು ಪ್ರಕರಣವನ್ನು ಪರಿಶೀಲಿಸಿ, ಶಿಸ್ತಿನ ಕ್ರಮ ಕೈಗೊಳ್ಳುವುದು ಇದರ ಉದ್ದೇಶವಾಗಿತ್ತು.

ಮತ್ತೊಮ್ಮೆ ಪುರಾತತ್ವ ಸರ್ವೆ ಇಲಾಖೆಯ ಡೈರೆಕ್ಟರ್ ಜನರಲ್ ಅವರು ಈ ಪತ್ರವನ್ನು ವಲಯ ಕಚೇರಿಗಳ ಮುಖ್ಯಸ್ಥರಿಗೆ ರವಾನಿಸಿದ್ದರು. ಮತ್ತೆ ಆಗ್ರಾ ಕಚೇರಿಯ ಸೂಪರಿನ್‌ಟೆಂಡೆಂಟರಿಂದ ಸುದೀರ್ಘ ವರದಿ ಬಂದಿತ್ತು. ಈ ಅಧಿಕಾರಿ ಕೊಂಚ ಸೇಡಿನಿಂದ ವರ್ತಿಸಿದ್ದ ಎಂದು ಗುಮಾನಿಸಲು ಆಸ್ಪದವಿತ್ತು. ಈ ಸಲ ತಾಜಮಹಲ್‌ನ ಹದಿನೆಂಟು

ಮಂದಿ ಕಾವಲುಗಾರರ ಮೇಲೆ ಅವರ ವಕ್ರದೃಷ್ಟಿ ಬಿದ್ದಿತ್ತು. ಇವರಿಗೆ ಈ ಕಾವಲು ಕಾಯುವ ಕೆಲಸ ವಂಶ ಪಾರಂಪರ್ಯವಾಗಿ ಬಂದಿದ್ದಾಗಿತ್ತು. ಇವರನ್ನು ಖಾದಿಮ್ಸ್ ಎಂದು ಕರೆಯಲಾಗುತ್ತಿತ್ತು. ಈ ಹುದ್ದೆಗಳೆಲ್ಲ ಹದಿನೇಳನೇ ಶತಮಾನದಲ್ಲಿ ಷಹಜಹಾನ್ ಚಕ್ರವರ್ತಿ ಸೃಷ್ಟಿಸಿದ ಹುದ್ದೆಗಳಾಗಿದ್ದವು. ನಂತರ ಬ್ರಿಟಿಷರು ಈ ಹುದ್ದೆಗಳನ್ನು ಕಾಯಂಗೊಳಿಸಿದ್ದರು. ಸೂಪರಿನ್‌ಟೆಂಡೆಂಟರ ಕಣ್ಣಲ್ಲಿ ಈ "ತಮ್ಮ ಸ್ವಂತದ ಬಗ್ಗೆ ಪೂರ್ಣ ನಿಜಾಂಶ ತಿಳಿಸಲು ನಿರಾಕರಿಸಿದ" ಈ ಹದಿನೆಂಟು ಮಂದಿಯೂ ಶತ್ರುವಿನ ಏಜೆಂಟರಂತೆಯೇ ಕಂಡಿದ್ದರು. ಇವರಲ್ಲಿ ಆರು ಮಂದಿಯ ಕುಟುಂಬ ಇನ್ನೂ ಪಾಕಿಸ್ತಾನದಲ್ಲೇ ಇತ್ತು. ಒಬ್ಬ ಕಾವಲುಗಾರನಂತೂ ಗಡಿಯಾಚೆಯ ನೆಂಟರ ಮನೆಗೆ ಹೋದವನು ಹೆಚ್ಚು ಕಾಲದಿಂದ ಅಲ್ಲೇ ಉಳಿದಿದ್ದ. ಅವನನ್ನು ಸೇವೆಯಿಂದ ಅಮಾನತ್ತಿನಲ್ಲಿಡಲಾಗಿತ್ತು. ಚಳಿಗಾಲ-ಬೇಸಿಗೆ ಕಾಲಗಳ ಸಮವಸ್ತ್ರಗಳನ್ನೂ ಸರ್ಕಾರದ ಎಲ್ಲ ವಸ್ತುಗಳನ್ನೂ ಹಿಂದಿರುಗಿಸುವಂತೆ ಇವನಿಗೆ ತಾಕೀತು ಮಾಡಲಾಗಿತ್ತು. ಸೂಪರಿನ್‌ಟೆಂಡೆಂಟರು ಇನ್ನೊಬ್ಬ ಕಾವಲುಗಾರರನ್ನು ಅಮಾನತ್ತಿಲ್ಲಿಡುವ ಇರಾದೆ ಹೊಂದಿದ್ದರು. ಆಗ್ರಾದಲ್ಲಿನ ಆಸ್ತಿ ಮಾರಿ ಪಾಕಿಸ್ತಾನಕ್ಕೆ ಗುಟ್ಟಾಗಿ ಓಡಿಹೋಗುವವನೆಂಬ ಗುಮಾನಿ ಇವನ ಮೇಲಿತ್ತು. ಇನ್ನೊಬ್ಬನ ಮೇಲೂ ಇವರ ದೃಷ್ಟಿ ಬಿದ್ದಿತ್ತು. ಈ ಇನ್ನೊಬ್ಬ ಕಾವಲುಗಾರ ಪಾಕಿಸ್ತಾನದಲ್ಲಿನ ಕುಟುಂಬವನ್ನು ಭಾರತಕ್ಕೆ ಕರೆಸಿಕೊಳ್ಳಲು ಪ್ರಯತ್ನ ಮಾಡಿರುವಂತೆ ಕಂಡು ಬಂದರೂ ಅದು ಸಂಕಲ್ಪ ಬಲಹೀನ ಪ್ರಯತ್ನವೆಂದು ಅಧಿಕಾರಿಗೆ ಅನ್ನಿಸಿತ್ತು.

ಆಗ್ರಾ ಯುನೈಟೆಡ್ ಪ್ರಾಂತ್ಯದಲ್ಲಿದ್ದು ಅಲ್ಲಿನ ಮುಸ್ಲಿಮರು ಒಡೆದು ಹೋಳಾಗಿದ್ದರು. ಪಂಜಾಬಿನ ಮುಸ್ಲಿಮರೆಲ್ಲರೂ ಪಾಕಿಸ್ತಾನಕ್ಕೆ ಒಟ್ಟಾಗಿ ವಲಸೆ ಹೋಗಿದ್ದರು. ಮುಂಬಯಿ ಮತ್ತು ದಕ್ಷಿಣದಿಂದ ಅನೇಕ ಮಂದಿ ಬುದ್ಧಿಜೀವಿಗಳು ಸ್ವಯಂಪ್ರೇರಿತರಾಗಿ ಪಾಕಿಸ್ತಾನಕ್ಕೆ ವಲಸೆ ಹೋಗಿದ್ದರು. ಆದರೆ ಕೂಲಿಕಾರ್ಮಿಕ ದುಡಿಯುವ ವರ್ಗದ ಮುಸ್ಲಿಮರು ಭಾರತದಲ್ಲೇ ಉಳಿದುಕೊಂಡರು. ಇವರ ಪಾಲಿಗೆ ಪಾಕಿಸ್ತಾನ ದೂರದ ಅಪರಿಚಿತ ಪ್ರದೇಶವಾಗಿತ್ತು. ಅಲ್ಲಿ ಹೊಸದಾಗಿ ಜೀವನ ಪ್ರಾರಂಭಿಸುವುದು ಅಸಾಧ್ಯವೆನ್ನಿಸುವಷ್ಟು 'ಅನ್ಯ'ವಾಗಿತ್ತು. ಆದರೆ ಉತ್ತರ ಪ್ರದೇಶದ ಮುಸ್ಲಿಮರ ಪರಿಸ್ಥಿತಿ ಹೀಗಿರಲಿಲ್ಲ. ಇವರಿಗೆ ಪಾಕಿಸ್ತಾನದ ಅಧಿಕೃತ ಭಾಷೆಯಾದ ಉರ್ದು ಚೆನ್ನಾಗಿ ಗೊತ್ತಿತ್ತು. ಅಂತೆಯೇ ರೈಲು ಹತ್ತಿ ಅಲ್ಲಿಗೆ ಹೋಗುವಷ್ಟು ಗಡಿಯ ಹತ್ತಿರದಲ್ಲಿದ್ದರು ಅವರುಗಳು. ಉತ್ತರ ಪ್ರದೇಶದ ಅನೇಕ ಮುಸ್ಲಿಂ ಕುಟುಂಬಗಳು ಪಾಕಿಸ್ತಾನಕ್ಕೆ ವಲಸೆ ಹೋದವು. ಹಾಗೆಯೇ ಅನೇಕ ಕುಟುಂಬಗಳು ಭಾರತದಲ್ಲೇ ಉಳಿದುಕೊಂಡವು.

ಉತ್ತರ ಪ್ರದೇಶದಲ್ಲಿ ಪ್ರತಿಯೊಂದು ಮುಸ್ಲಿಂ ಕುಟುಂಬವೂ ಒಡೆದ ಮನೆಯಾಗಿತ್ತು. ಪುರಾತತ್ವ ಸರ್ವೆ ಇಲಾಖೆಯ ನೌಕರರೂ ಇದಕ್ಕೆ ಹೊರತಾಗಿರಲಿಲ್ಲ. ಆಗ್ರಾ ವಲಯದ ಸೂಪರಿನ್‌ಟೆಂಡೆಂಟರಿಗೆ, ಅವರ ದೃಷ್ಟಿಯಲ್ಲಿ 'ಶತ್ರು'ವಲಯವಾಗಿದ್ದ ಪಾಕಿಸ್ತಾನದಲ್ಲಿ ಕುಟುಂಬಗಳನ್ನು ಬಿಟ್ಟಿದ್ದ ನೌಕರರ ಬಗ್ಗೆ ಸಹಾನುಭೂತಿ ಇರಲಿಲ್ಲ. "ನಿಮ್ಮ ಮನೆಯವರನ್ನು ಕರೆಸಿಕೊಳ್ಳಿ, ಇಲ್ಲವೇ ಪರಿಣಾಮ ಎದುರಿಸಿ" ಎಂದು ಅವರು ಅಧೀನ ನೌಕರರಿಗೆ ಆಜ್ಞೆ

ಮಾಡಿದ್ದರು. ಶಂಸುದ್ದೀನ್ ಎಂಬ ಕಾವಲುಗಾರ. ಇವನ ಮನೆಯವರೆಲ್ಲ ಪಾಕಿಸ್ತಾನದಲ್ಲಿದ್ದರು. ಹೀಗಿರುವಾಗ ಶಂಸುದ್ದೀನ್ ಮನೆ ಮಾರಿದ್ದು ಸೂಪರಿನ್‌ಟೆಂಡೆಂಟರ ಸಂಶಯವನ್ನು ಕೆರಳಿಸಿತ್ತು. 1948ರ ಡಿಸೆಂಬರ್ 8ರಂದು ಬರೆದ ಶೋಚನೀಯವಾದ ಪತ್ರದಲ್ಲಿ ಶಂಸುದ್ದೀನ್ "ಪಾಕಿಸ್ತಾನಕ್ಕೆ ಹೋಗುವ ಕಲ್ಪನೆ ಎಳ್ಳಷ್ಟೂ ಇಲ್ಲ" ಎಂದು ದಯನೀಯವಾಗಿ ನಿವೇದಿಸಿಕೊಂಡಿದ್ದ. ಅವನು ಮನೆ ಮಾರಿದ್ದಕ್ಕೆ ನಾಲ್ಕು ಕಾರಣಗಳಿದ್ದವು. 1. ನೆಂಟರಿಗೆ ಕೊಡಬೇಕಾದ ಸಾಲವನ್ನು ಹಿಂದಿರುಗಿಸುವುದು. 2. ಹೆಣ್ಣುಮಕ್ಕಳ ಮದುವೆ ಮಾಡಬೇಕು ಹಾಗೂ "ನನ್ನ ಜವಾಸನ ಕರ್ತವ್ಯದಲ್ಲಿ ಹಣ ತೊಡಗಿಸಬೇಕು". 3. ಮನೆಯನ್ನು ಬಾಡಿಗೆಗೆ ಪಡೆದಿದ್ದ ನಿರಾಶ್ರಿತರು ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಪರಿಸ್ಥಿತಿ ಕೈ ಮೀರುವ ಮೊದಲೇ ಮನೆ ಮಾರುವುದೇ ಲೇಸೆನ್ನಿಸಿತ್ತು. 4. ಗಂಡು ಮಕ್ಕಳು ನನ್ನನ್ನು ತೊರೆದು ಹೋಗಿರುವುದರಿಂದ ನನ್ನ ಅಂತ್ಯ ಸಂಸ್ಕಾರಕ್ಕೆ ವ್ಯವಸ್ಥೆ ಮಾಡಬೇಕಿತ್ತು.

ಸೂಪರಿನ್‌ಟೆಂಡೆಂಟರಿಗೆ ಈ ಸಮಜಾಯಿಷಿಗಳಿಂದ ತೃಪ್ತಿಯಾಗಲಿಲ್ಲ. ಭಾರತ ನಿಷ್ಠೆ ಬಗ್ಗೆ ಮತ್ತಷ್ಟು ಇತ್ಯಾತ್ಮಕವಾದ, ಸ್ಪಷ್ಟವಾದ ಸಾಕ್ಷ್ಯಾಧಾರ ಕೊಡುವಂತೆ ಶಂಸುದ್ದೀನನ್ನು ಕೇಳಿದರು. 1949ರ ಜೂನ್ 13ರಲ್ಲಿ ಬರೆದಿರುವ ಒಂದು ಟಿಪ್ಪಣಿ ಪ್ರಕಾರ ಈ ಕಾವಲುಗಾರ ಪಾಕಿಸ್ತಾನಕ್ಕೆ ಹೋಗಿ ತನ್ನಿಬ್ಬರು ಅವಿವಾಹಿತ ಪುತ್ರಿಯರನ್ನು, ನಿಧನಳಾಗಿದ್ದ ಮಗಳ ಇಬ್ಬರು ಮಕ್ಕಳನ್ನೂ ಭಾರತಕ್ಕೆ ಕರೆತಂದಿದ್ದ. ಇವರ ಮೇಲೆ ಅವನು ಅಧಿಕಾರ ಚಲಾಯಿಸಬಹುದಿತ್ತು.

ಆ ಕಾಲದ ಸರ್ಕಾರಿ ದಾಖಲೆಗಳನ್ನು ಬಹಿರಂಗಗೊಳಿಸಿದರೆ, ಹಿರಿಯ ಅಧಿಕಾರಿಗಳು ಒತ್ತಡ, ಬಲಾತ್ಕಾರಗಳಿಂದ ನಿಷ್ಠೆಯನ್ನು ಪ್ರಮಾಣೀಕರಿಸುವ ಪತ್ರಗಳನ್ನು ಪಡೆದುಕೊಳ್ಳುವುದು ಆಗ ಸರ್ವವ್ಯಾಪಿಯಾಗಿತ್ತೆಂಬುದು ಗೊತ್ತಾಗುತ್ತದೆ. ಗುಜರಾತಿನ ಕಛ್ ಪ್ರದೇಶದ ಮುಸ್ಲಿಂ ಕುರುಬರು, "ನಾವು ಭಾರತ ಸರ್ಕಾರಕ್ಕೆ ನಿಷ್ಠರಾಗಿರುತ್ತೇವೆ. ಪಾಕಿಸ್ತಾನ ಭಾರತ ಸರ್ಕಾರದ ಮೇಲೆ ಆಕ್ರಮಣ ನಡೆಸಿದರೆ ಭಾರತದ ಭದ್ರತೆಗಾಗಿ ಪ್ರಾಣತ್ಯಾಗಮಾಡಲು ನಾವು ಸಿದ್ಧರಿದ್ದೇವೆ" ಎಂದು 1951ರಲ್ಲಿ ಬರೆದುಕೊಟ್ಟ ಮುಚ್ಚಳಿಕೆಯೊಂದು ಇತ್ತೀಚೆಗೆ ವಿದ್ವಾಂಸರೊಬ್ಬರ ಕಣ್ಣಿಗೆ ಬಿದ್ದಿದೆ.

IV

ಭಾರತ ಸರ್ಕಾರದ ಕೆಲವೊಂದು ಆಯ್ದ ನೌಕರರಿಂದ 'ನಿಷ್ಠೆ'ಯ ಮುಚ್ಚಳಿಕೆ ಪಡೆಯುವ ಪ್ರಯತ್ನಕ್ಕೆ ಪ್ರಧಾನಮಂತ್ರಿ ಒಪ್ಪಿಗೆ ನೀಡಿದ್ದರೋ ಇಲ್ಲವೋ ಎಂಬುದು ಸ್ಪಷ್ಟವಿಲ್ಲ. ಆದರೆ ಮುಸ್ಲಿಮರ ಬಗ್ಗೆ ಅವರ ಡೆಪ್ಯೂಟಿ ಆಗಿದ್ದ ವಲ್ಲಭಭಾಯಿ ಪಟೇಲರಿಗಿಂತ ಭಿನ್ನವಾದ ದೃಷ್ಟಿ ನೆಹರೂ ಅವರಿಗಿತ್ತು ಎನ್ನುವುದು ನಮಗೆ ಚೆನ್ನಾಗಿ ಗೊತ್ತಿದೆ. "ಭಾರತದಲ್ಲಿನ ಮುಸ್ಲಿಮರ ಮೇಲೆ ಪ್ರತೀಕಾರಕ್ಕೆ ಬೊಬ್ಬೆ ಹಾಕುವುದನ್ನು, ಅವರನ್ನು ಶಿಕ್ಷೆಗೊಳಪಡಿಸುವುದನ್ನು ಖಂಡಿಸಿ" ನೆಹರೂ ಪಟೇಲರಿಗೆ ಪತ್ರ ಬರೆದಿದ್ದರು. ಪಾಕಿಸ್ತಾನಿಗಳು ಹಿಂದೂಗಳನ್ನು ದಂಡಿಸುತ್ತಾರೆ

ಎನ್ನುವ ಕಾರಣಕ್ಕಾಗಿ ಭಾರತದಲ್ಲಿನ ಮುಸ್ಲಿಮರನ್ನು ದಂಡಿಸುವುದು ಸರಿಯಲ್ಲ. ಈ ಪ್ರತೀಕಾರ ಮತ್ತು ಪ್ರತಿರಕ್ಷೆ ನೀತಿ ಭಾರತ ಮತ್ತು ಪಾಕಿಸ್ತಾನಗಳೆರಡನ್ನೂ ಹಾಳು ಮಾಡುತ್ತವೆ ಎಂಬುದರಲ್ಲಿ ನನಗೆ ಅನುಮಾನವಿಲ್ಲ ಎಂದು ನೆಹರೂ ಪತ್ರದಲ್ಲಿ ಖಚಿತ ಅಭಿಪ್ರಾಯ ವ್ಯಕ್ತಪಡಿಸಿದ್ದರು. ವಲ್ಲಭಭಾಯಿ ಪಟೇಲರು ಭಾರತಕ್ಕೆ ನಿಷ್ಠೆ ಘೋಷಿಸುವಂತೆ ಮುಸ್ಲಿಮರನ್ನು ಕೇಳಿದ್ದರು. ಆದರೆ ಪ್ರಧಾನಮಂತ್ರಿಗಳು ಆ ಹೊಣೆಯನ್ನು ಭಾರತದ ಸರ್ಕಾರದ ಕೊರಳಿಗೇ ಕಟ್ಟಿದ್ದರು. ಎಲ್ಲ ಪ್ರಜೆಗಳಿಗೂ ಭದ್ರತೆಯೊದಗಿಸುವುದು, ವಿಶೇಷವಾಗಿ ಮುಸ್ಲಿಮರಲ್ಲಿ ಭದ್ರತೆಯ ಭಾವನೆ ಮೂಡಿಸುವುದು ಸರ್ಕಾರದ ಸಂವಿಧಾನಾತ್ಮಕ ಹೊಣೆಯಾಗಿದೆ ಎಂಬುದನ್ನು ನೆಹರೂ ನೆನಪಿಸಿದ್ದರು.

ನೆಹರೂ ಅವರು ವಲ್ಲಭಭಾಯಿ ಪಟೇಲರಿಗೆ ಹಾಗೂ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಬರೆದ ಪತ್ರಗಳಲ್ಲಿ ತಮ್ಮೀ ಅಭಿಪ್ರಾಯಗಳನ್ನು ಖಚಿತವಾಗಿ ತಿಳಿಸಿದ್ದಾರೆ. ವಿಭಜನೆಯಾದ ಮೂರು ತಿಂಗಳ ನಂತರ ಬರೆದ ಪತ್ರದಲ್ಲಿ ಹೀಗೆ ನೆನಪಿಸಿದ್ದರು:

> *"ನಮ್ಮಲ್ಲಿ ಮುಸ್ಲಿಂ ಅಲ್ಪಸಂಖ್ಯಾತರಿದ್ದಾರೆ. ಅವರು ಬೃಹತ್ ಸಂಖ್ಯಾ ಪ್ರಮಾಣದಲ್ಲಿದ್ದು ಬೇರೆ ಎಲ್ಲಾದರೂ ಹೋಗಲು ಬಯಸಿದರೂ ಅವರಿಂದ ಹೋಗಲಾಗದು. ಇದು ಮೂಲಭೂತ ವಿಷಯ. ಇದರ ಬಗ್ಗೆ ಚರ್ಚೆ ಇಲ್ಲ. ಇದರಲ್ಲಿ ಎರಡನೆ ಮಾತಿರಲಾರದು. ಪಾಕಿಸ್ತಾನದ ಪ್ರಚೋದನೆ ಏನೇ ಇರಲಿ, ಅಲ್ಲಿರುವ ಮುಸ್ಲಿಮೇತರರನ್ನು ಎಷ್ಟೇ ಕ್ರೂರವಾಗಿ ನಡೆಸಿಕೊಳ್ಳುತ್ತಿರಲಿ, ಅವರಿಗೆ ಏನೆಲ್ಲ ಕಷ್ಟಗಳನ್ನು ಕೊಡುತ್ತಿರಲಿ, ನಾವು ನಮ್ಮಲ್ಲಿರುವ ಅಲ್ಪಸಂಖ್ಯಾತರನ್ನು ನಾಗರಿಕ ರೀತಿಯಲ್ಲಿ ನೋಡಿಕೊಳ್ಳಬೇಕು, ನಡೆಸಿಕೊಳ್ಳಬೇಕು. ಅವರಿಗೆ ನಾವು ಪ್ರಜಾಸತ್ತಾತ್ಮಕ ರಾಷ್ಟ್ರದ ನಾಗರಿಕರ ಹಕ್ಕುಗಳನ್ನು ಒದಗಿಸಬೇಕು. ಇದನ್ನು ನೆರವೇರಿಸುವುದರಲ್ಲಿ ನಾವು ವಿಫಲರಾದರೆ ಅದೊಂದು ಮನಸ್ಸನ್ನು ಕೊರೆಯುವ ವ್ರಣವಾಗುತ್ತದೆ. ಅಖೈರಾಗಿ ಈ ಹುಣ್ಣು ಇಡೀ ರಾಜಕೀಯ ವ್ಯವಸ್ಥೆಯನ್ನು ವಿಷಮಗೊಳಿಸಿ ಅದನ್ನು ನಾಶಮಾಡುವುದು."*

ಇದೇ ಪತ್ರದಲ್ಲಿ, ನೆಹರೂ ಕೋಮು ರಾಜಕಾರಣದ ವಿಷ ಹರಡದಂತೆ ಸಾರ್ವಜನಿಕ ಸೇವೆಯ ಬಗ್ಗೆ ನಿಗಾವಹಿಸಬೇಕಾದುದರ ಮಹತ್ವದ ಬಗ್ಗೆ ಗಮನ ಸೆಳೆದಿದ್ದರು.

ಇದು ನೆಹರೂ ಅವರು ಅತ್ಯಗತ್ಯವಾಗಿ ಮಧ್ಯ ಪ್ರವೇಶಿಸಿ ಮಾತನಾಡಲೇಬೇಕಾದ ವಿಷಯವಾಗಿತ್ತು. ಕಾರಣೀಭೂತವಾದ ಒಂದು ಮುಖ್ಯಾಂಶವೆಂದರೆ, ಆಸ್ತಿ ಜಗಳಗಳು. ಏಕೆಂದರೆ, ಕೆಲವೊಂದು ಪ್ರದೇಶಗಳಲ್ಲಿ ಅತ್ಯುತ್ಸಾಹಿ ಅಧಿಕಾರಿಗಳು ಹಿಂದೂಗಳು ಮತ್ತು ಸಿಖ್ ನಿರಾಶ್ರಿತರಿಗೆ ತಮ್ಮ ಮನೆ ಇತ್ಯಾದಿ ಆಸ್ತಿಗಳನ್ನು ಬಿಟ್ಟುಕೊಡುವಂತೆ ಮುಸ್ಲಿಮರಿಗೆ ತಾಕೀತು ಮಾಡುತ್ತಿದ್ದರು. ಪ್ರಧಾನ ಮಂತ್ರಿಯವರು ಗಾಂಧಿ ಜಯಂತಿಯ ವೇದಿಕೆಯಿಂದ, ನಮ್ಮ ರಾಷ್ಟ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮುಸ್ಲಿಮರ ಮನಸ್ಸಿನಲ್ಲಿ ಅನಿಶ್ಚಿತತೆ ಮತ್ತು ಅಭದ್ರತೆಯ ಭಾವನೆ ಮೂಡಿಸುವಂಥ ವಾತಾವರಣ ಸೃಷ್ಟಿಸುವುದರ ವಿರುದ್ಧ ಎಚ್ಚರಿಕೆ

ನೀಡಿದ್ದರು. ಇವುಗಳ ಪರಿಣಾಮ ದೂರಗಾಮಿಯಾಗಿದ್ದು, ಭಾರತ ಮಾತ್ರವಲ್ಲ ಕಾಶ್ಮೀರಕ್ಕೂ ವ್ಯಾಪಿಸಬಹುದು. ಇದು ವಿದೇಶಗಳಲ್ಲಿ ನಮ್ಮ ಕೀರ್ತಿ-ಪ್ರತಿಷ್ಠೆಗಳಿಗೆ ಕುಂದುಂಟುಮಾಡುತ್ತದೆ. ಒಂದೆರಡು ಮನೆ ಅಥವಾ ಅಂಗಡಿಗಳ ಮೇಲೆ ದಾಳಿಯಿಂದ ಇಲ್ಲಿ ನಮಗೇನೂ ಮಹಾ ಹಾನಿ ಎನ್ನಿಸದಿರಬಹುದು. ಆದರೆ ವಿದೇಶಗಳಲ್ಲಿ ಇಂಥ ಘಟನೆಗಳು ನಮಗೆ ಕಳಂಕಕಾರಿಯಾಗುತ್ತವೆ, ಅದರಿಂದ ನಮಗೆ ಹಾನಿಯಾಗುತ್ತದೆ ಎಂದೂ ನೆಹರೂ ತಿಳುವಳಿಕೆ ಹೇಳಿದ್ದರು.

ಪಾಕಿಸ್ತಾನ ಈ ವಿಷಯದಲ್ಲಿ ತುಂಬಾ ಪಾಷಾಣ ಹೃದಯದಿಂದ ವರ್ತಿಸುತ್ತಿದೆ, ನಿರ್ದಯ ನೀತಿ ಅನುಸರಿಸುತ್ತಿದೆ ಎಂಬುದನ್ನು ಪ್ರಧಾನಿ ಒಪ್ಪಿಕೊಂಡಿದ್ದರು. "ಆದರೆ ನಾವು ಪಾಕಿಸ್ತಾನವನ್ನೇ ಅನುಕರಿಸಲಾಗದು. ಅಥವಾ ಪಾಕಿಸ್ತಾನದ ಆದರ್ಶಗಳನ್ನು ಅನುಕರಿಸಲಾಗದು. ಎರಡು ರಾಷ್ಟ್ರಗಳ ಸಿದ್ಧಾಂತ ನಂಬಿರುವ ಅವರು ಬಹಿರಂಗವಾಗಿ ಇಸ್ಲಾಂ ಧರ್ಮ ರಾಷ್ಟ್ರ ತಾವೆಂದು ಘೋಷಿಸಿದ್ದಾರೆ. ನಾವು ಈ ಸಿದ್ಧಾಂತವನ್ನು ತಿರಸ್ಕರಿಸಿದ್ದೇವೆ. ಎಲ್ಲ ಧರ್ಮಗಳಿಗೂ ಸಂಪೂರ್ಣ ರಕ್ಷಣೆ ನೀಡುವ ಜಾತ್ಯತೀತ ರಾಷ್ಟ್ರ ನಾವೆಂದು ಘೋಷಿಸಿದ್ದೇವೆ. ನಾವು ನಮ್ಮ ಆದರ್ಶಗಳಂತೆ, ಘೋಷಣೆಗಳಂತೆ ಬದುಕಬೇಕು. ವಿಶೇಷವಾಗಿ, ಗಾಂಧಿ ಜಯಂತಿಯ ದಿವಸವಾದ ಇಂದು, ಗಾಂಧೀಜಿ ನಮಗೆ ಏನನ್ನು ಬೋಧಿಸಿದರು ಹಾಗೂ ಏತಕ್ಕಾಗಿ ಪ್ರಾಣತ್ಯಾಗ ಮಾಡಿದರು ಎಂಬುದನ್ನು ನಾವು ಸ್ಮರಿಸಬೇಕಾಗಿದೆ" ಎಂದು ನೆಹರೂ ರಾಷ್ಟ್ರವನ್ನು ಜಾಗ್ರತಗೊಳಿಸುವ ಪ್ರಯತ್ನ ಮಾಡಿದ್ದರು.

1951-52ರ ಚುನಾವಣೆಯಲ್ಲಿ ಕೋಮು ಸಂಸ್ಥೆಗಳು ನೆಹರೂ ಅವರ ಮುಖ್ಯ ಗುರಿಯಾಗಿದ್ದವು. ಭಾರತವನ್ನು 'ಹಿಂದೂ ಪಾಕಿಸ್ತಾನ' ಮಾಡಲಾಗುವುದು ಎನ್ನುವ ಘೋಷಣೆ ಮುಂದಿಟ್ಟುಕೊಂಡು ಚುನಾವಣೆಯನ್ನು ಗೆಲ್ಲಲಾಯಿತು. ಆದರೆ ಬಹುಸಂಖ್ಯಾತರಿಗಿಂತ ಭಿನ್ನವಾದ ಸಂಸ್ಕೃತಿ ಮತ್ತು ನಂಬಿಕೆಗಳನ್ನು ಹೊಂದಿದ್ದ ಭಾರತೀಯರ ಹಕ್ಕುಗಳ ಬಗ್ಗೆ ನೆಹರೂ ಅವರಿಗೆ ಚಿಂತೆ ತಪ್ಪಿರಲಿಲ್ಲ. ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರ ಸ್ಥಾನಗಳಲ್ಲಿ ಇಲ್ಲದೇ ಇರುವುದು ಅವರ ಚಿಂತೆಯ ವಿಶೇಷ ಅಂಶವಾಗಿತ್ತು. ರಕ್ಷಣಾ ಪಡೆಗಳಲ್ಲಿ ಮುಸ್ಲಿಮರು ತೀರಾ ಕಡಿಮೆ ಸಂಖ್ಯೆಯಲ್ಲಿದ್ದರು. ಸಚಿವಾಲಯದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. "ಪ್ರತಿಯೊಬ್ಬರಲ್ಲೂ, ಪ್ರತಿಯೊಂದು ಸಮುದಾಯದಲ್ಲೂ ಸಹಭಾಗಿತ್ವದ ಪ್ರಜ್ಞೆ, ಲಭ್ಯವಿರುವ, ಒದಗಿಸಲಾಗುತ್ತಿರುವ ಅವಕಾಶಗಳು ಮತ್ತು ಲಾಭಗಳಲ್ಲಿ ತಾವು ಪೂರ್ಣ ಪಾಲುದಾರರೆಂಬ ಪ್ರಜ್ಞೆ ಜನರಲ್ಲಿ ಮೂಡಿಸದೇ ಇರುವುದರ ಪರಿಣಾಮವಿದು" ಎಂಬುದು ನೆಹರೂ ಅವರ ಅರಿವಿಗೆ ಬಂದಿತ್ತು. "ಭಾರತ ಸ್ಥಿರ, ಸುಭದ್ರ ಜಾತ್ಯತೀತ ರಾಷ್ಟ್ರವಾಗಬೇಕಾದರೆ ನಮ್ಮ ಅಲ್ಪಸಂಖ್ಯಾತರಿಗೆ ನ್ಯಾಯ ಒದಗಿಸುವುದು ನಮ್ಮ ಮುಖ್ಯ ಕಾಳಜಿಯಾಗಬೇಕು. ಹೀಗೆ ಅವರಲ್ಲಿ ಭಾರತ ತಮ್ಮ ತೌರುಮನೆ ಎನ್ನುವಂಥ ಭಾವನೆ ಮೂಡಿಸಬೇಕು" ಎಂದು ಅವರು ಮುಖ್ಯಮಂತ್ರಿಗಳಿಗೆ ತಿಳಿಸಿದ್ದರು.

V

ಭಾರತದಲ್ಲಿ ಉಳಿದುಕೊಂಡಿದ್ದ ಮುಸ್ಲಿಂ ನಾಯಕರಲ್ಲಿ ಮಾನ್ಯರಾದ ರಾಜಕೀಯ ನಾಯಕರೆಂದರೆ ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರು. ಸಂಯುಕ್ತ ಭಾರತದಲ್ಲಿ ಹಿಂದೂಯೇತರರು ಶಾಂತಿ-ಗೌರವಗಳಿಂದ ಬದುಕಿ ಬಾಳ್ವೆ ಮಾಡುವುದು ಸಾಧ್ಯವೆಂದು ಇವರು ನಂಬಿದ್ದರು. ಇದು, ಮೊಹಮದ್ ಅಲೀ ಜಿನ್ನಾ ಅವರಿಗೆ ತದ್ವಿರುದ್ಧವಾದ ಭಾವನೆಯಾಗಿತ್ತು. ನೆಹರೂ ಅವರು ಅಲಂಕಾರಿಕ ಭಾಷೆಯಲ್ಲಿ ಸೂತ್ರೀಕರಿಸಿ ಹೇಳಿದಂತೆ, ಮೌಲಾನಾ ಅವರು "ಭಾರತದಲ್ಲಿ ಕ್ರಮೇಣವಾಗಿ ಬೆಳೆದ ಮಹಾನ್ ಸಮ್ಮಿಶ್ರ ಸಂಸ್ಕೃತಿಯ ಶ್ರೇಷ್ಠ ಪ್ರತಿನಿಧಿಯಾಗಿದ್ದರು". ಅವರು, "ಒಂದಾದ ಮೇಲೊಂದರಂತೆ ಭಾರತಕ್ಕೆ ನದಿಗಳೋಪಾದಿಯಲ್ಲಿ ಹರಿದುಬಂದು ಭಾರತೀಯ ಜೀವನ ಸಾಗರದಲ್ಲಿ ಸಂಗಮಿಸಿದ ವಿವಿಧ ಸಂಸ್ಕೃತಿಗಳ ಸಮನ್ವಯದ ಸಾಕಾರ ಪುರುಷರಾಗಿದ್ದರು".

ವಿಭಜನೆಯಿಂದ ಅಜಾದರಿಗೆ ತೀವ್ರ ನೋವಾಗಿತ್ತು. ವಿಭಜನೆಯನ್ನು ತಮ್ಮ ಜೀವಮಾನದ ಕಾಯಕದ ವೈಫಲ್ಯ ಎಂದೇ ಭಾವಿಸಿದ ಅವರು ಪಕ್ಷ ರಾಜಕಾರಣದಿಂದ ಹಿಂದೆ ಸರಿದರು. (ಅವರು ಜನಸಮುದಾಯದ ನಾಯಕನಿಗಿಂತ ಹೆಚ್ಚಾಗಿ ಮಿಂಚಿದ್ದು ವಿದ್ವಾಂಸರಾಗಿಯೇ, ಅವರದು ವಿದ್ವತ್ತಿನ ಮನೋಧರ್ಮವಾಗಿತ್ತು). ಅಜಾದರು ಕೇಂದ್ರ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿದ್ದರು. ಶಿಕ್ಷಣ ಸಚಿವರಾಗಿ ಅವರು ಭಾರತೀಯ ಸಾಹಿತ್ಯ, ಸಂಗೀತ, ನೃತ್ಯ ಮತ್ತು ಕಲೆಗಳ ಪಾಲನೆ-ಪೋಷಣೆಗಾಗಿ ಹೊಸ ಅಕಾಡೆಮಿಗಳನ್ನು ಸ್ಥಾಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಸೈಫ್ ತ್ಯಾಬ್ಜಿ ಕಾಂಗ್ರೆಸ್ ಪಕ್ಷದ ತರುಣ ನಾಯಕರಾಗಿದ್ದರು. ಪ್ರಖ್ಯಾತ ರಾಷ್ಟ್ರೀಯವಾದಿ ಕುಟುಂಬಕ್ಕೆ ಸೇರಿದವರು. ಕಾಂಗ್ರೆಸ್ ಪಕ್ಷದ ಪ್ರಾರಂಭ ಕಾಲದ ಅಧ್ಯಕ್ಷರ ಮೊಮ್ಮಗನಾದ ತ್ಯಾಬ್ಜಿ ಕೇಂಬ್ರಿಜ್‌ನಲ್ಲಿ ಎಂಜಿನಿಯರಿಂಗ್ ಶಿಕ್ಷಣ ಪಡೆದ ಆಧುನಿಕ ಮನೋಭಾವದ ವ್ಯಕ್ತಿಯಾಗಿದ್ದರು. ತ್ಯಾಬ್ಜಿ ಕಾಂಗ್ರೆಸ್ ಪಕ್ಷ ಮತ್ತು ಮುಸ್ಲಿಂ ಸೇತುವಿನಂತಿದ್ದರು. 1955ರಲ್ಲಿ ಆಗಿನ ಪ್ರಭಾವಿ ಉರ್ದು ಪತ್ರಿಕೆಯಾದ 'ಇಂಕ್ವಿಲಾಬ್'ಗೆ ಹಲವಾರು ಲೇಖನಗಳನ್ನು ಬರೆದಿದ್ದರು. ಈ ಲೇಖನಗಳೆಲ್ಲ ನಂತರ ಇಂಗ್ಲಿಷ್‌ಗೆ ಭಾಷಾಂತರಿಸಿ "ದಿ ಫ್ಯೂಚರ್ ಆಫ್ ಮುಸ್ಲಿಮ್ಸ್ ಇನ್ ಇಂಡಿಯಾ" ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು. 1952ರ ಚುನಾವಣೆಯಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ಸಿಗೆ ಮತ ನೀಡಿದ್ದರು. ಅದರ ವಿರೋಧ ಪಕ್ಷಗಳಿಗಿಂತ ನೆಹರೂ ನಾಯಕತ್ವದ ಕಾಂಗ್ರೆಸ್ ನಂಬಿಕೆಗೆ ಅರ್ಹವಾದ ಪಕ್ಷ ಎಂಬುದು ಬಹುತೇಕ ಮುಸ್ಲಿಮರ ಭಾವನೆಯಾಗಿತ್ತು. ಮುಸ್ಲಿಮರು ಭಾರತದ ಪ್ರಮುಖ ಪಕ್ಷವೊಂದಕ್ಕೆ ಕೇವಲ ಮತಹಾಕುವುದಲ್ಲ, ಆ ಪಕ್ಷವನ್ನು ಸೇರಬೇಕು ಹಾಗೂ ಅದರ ನೀತಿ ರೂಪಣೆಯಲ್ಲಿ ಪ್ರಭಾವ ಬೀರಬೇಕು ಎಂಬುದು ಸೈಫ್ ತ್ಯಾಬ್ಜಿಯವರ ಅಭಿಪ್ರಾಯವಾಗಿತ್ತು.

ಕಾಂಗ್ರೆಸ್ ಪ್ರಜಾಸತ್ತಾತ್ಮಕ ಸಂಸ್ಥೆ. ಅದರ ರಾಷ್ಟ್ರೀಯ ಮಂಡಳಿಯಲ್ಲಿ ವಿವಿಧ ರಾಜ್ಯಗಳಿಂದ ಚುನಾಯಿತರಾದ ಪ್ರತಿನಿಧಿಗಳಿದ್ದಾರೆ. ಈ ಪ್ರತಿನಿಧಿಗಳನ್ನು ಆಯ್ಕೆ ಮಾಡಿದವರು

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸದಸ್ಯರು. ಕಾಂಗ್ರೆಸ್ ಸದಸ್ಯತ್ವಕ್ಕೆ ಖರ್ಚು ಮಾಡಬೇಕಾದದ್ದು ನಾಲ್ಕಾಣೆ ಮಾತ್ರ. ಭಾರತದ ಉದ್ದಗಲ ವ್ಯಾಪಿಸಿರುವ ಮುಸ್ಲಿಮರು ಎಲ್ಲ ಜಿಲ್ಲೆಗಳಲ್ಲೂ ಕಾಂಗ್ರೆಸ್ ಸದಸ್ಯರಾಗಬಹುದು. ತನ್ಮೂಲಕ ಸಂಸ್ಥೆಯ ವರಿಷ್ಠ ನಾಯಕರ ಆಯ್ಕೆಯಲ್ಲಿ, ಉನ್ನತ ಮಟ್ಟದಲ್ಲಿ ತಮ್ಮ ಪ್ರಭಾವ ಬೀರಬಹುದು ಎನ್ನುವುದು ತ್ಯಾಬ್ಜಿಯವರ ಆಶಯವಾಗಿತ್ತು. ಸಹಧರ್ಮೀಯರನ್ನೂ ರಾಷ್ಟ್ರದ ಸಾಂಸ್ಕೃತಿಕ ಜೀವನದಲ್ಲಿ ತೊಡಗಿಕೊಳ್ಳುವಂತೆ ಅವರು ಆಗ್ರಹಪಡಿಸುತ್ತಿದ್ದರು. ದಾಂಗುಡಿಯಿಡುತ್ತಿರುವ ಹೊಸ ಸಂಸ್ಕೃತಿ, ಸಾಧ್ಯವಾದಷ್ಟೂ ವೈವಿಧ್ಯಮಯವೂ, ಸಂಪದ್ಭರಿತವೂ, ಸಾಧ್ಯವಾದ ಎಲ್ಲ ಮೂಲಗಳಿಂದ ಶಕ್ತಿ-ಸಂಪತ್ತನ್ನೂ ಹೀರಿಕೊಳ್ಳುವಂಥಾದ್ದೂ ಆಗಿರಬೇಕೆಂಬುದು ದೇಶಭಕ್ತ ಭಾರತೀಯನಾಗಿ ತ್ಯಾಬ್ಜಿಯವರ ನಿಲುವಾಗಿತ್ತು. ಬೇರೆ ಎಲ್ಲ ಭಾರತೀಯರಂತೆ ಮುಸ್ಲಿಮರೂ ಭಾರತ ನಿರ್ಮಾಣ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಅವರು ಕರೆ ನೀಡಿದ್ದರು. ಆದರೆ, ಮುಸ್ಲಿಮರು ಕೈಕಟ್ಟಿ ಕುಳಿತರೆ, ಭಾರತದ ಹೊಸ ಸಂಸ್ಕೃತಿ, ಹನ್ನೊಂದನೆ ಶತಮಾನದ, ಬ್ರಿಟಿಷರ ಆಗಮನ ಕಾಲದ ಸಂಸ್ಕೃತಿಗಿಂತ ಹೆಚ್ಚಿನದೇನನ್ನೂ ಸಾಧಿಸಲಾಗುವುದಿಲ್ಲ. ಆಗಿನ ಸಾಧನೆಗಳಿಗೂ ಹೊಸ ಭಾರತೀಯ ಸಂಸ್ಕೃತಿಗೂ ಕಿಂಚಿತ್ ಮಾತ್ರ ಸಂಬಂಧವೂ ಇಲ್ಲದಂತಾಗುತ್ತದೆ. ಇದರಿಂದಾಗಿ, ಎಲ್ಲ ಭಾರತೀಯರೂ ಕಷ್ಟಗಳನ್ನು ಎದುರಿಸಬೇಕಾಗಿ ಬರುತ್ತದೆ. ಈ ಕಷ್ಟ-ನಷ್ಟಗಳಿಗೆ ಮುಸ್ಲಿಮರಾದ ಭಾರತೀಯರೇ ಹೊಣೆಗಾರರಾಗಬೇಕಾಗುತ್ತದೆ ಎಂದು ತ್ಯಾಬ್ಜಿ ಖಂಡಿತವಾಗಿ ಹೇಳಿದ್ದರು.

ಮುಸ್ಲಿಮರು ಮಾನವಿಕ ವಿಷಯಗಳನ್ನೇ ಓದಿ ವಿದ್ಯಾವಂತ ನಿರುದ್ಯೋಗಿಗಳ ಪಂಕ್ತಿಗೆ ಸೇರುವ ಬದಲು ತಾಂತ್ರಿಕ ಹಾಗೂ ವಾಣಿಜ್ಯ ಶಿಕ್ಷಣಗಳಲ್ಲಿ ಹೆಚ್ಚಿನ ಆಸಕ್ತಿ ತೋರಬೇಕೆಂದು ತ್ಯಾಬ್ಜಿ ಸಲಹೆ ಮಾಡಿದ್ದರು. ಮಾನವಿಕ ವಿಷಯಗಳ ಅಧ್ಯಯನದಲ್ಲೂ "ನಮ್ಮ ಇಸ್ಲಾಂ ಸಂಸ್ಕೃತಿಯನ್ನು ಗತಕಾಲದ ಪಳೆಯುಳಿಕಯ ಪರಿಶುದ್ಧತೆಯಲ್ಲೇ" ಉಳಿಸಿಕೊಳ್ಳುವ, ಕಾಪಾಡುವ ಪ್ರಯತ್ನಗಳನ್ನು ಅವರು ಖಂಡಿಸಿದ್ದರು. ತಮ್ಮ ಉರ್ದು ಭಾಷೆಯ ಅವನತಿಗೆ ದುಃಖಿಸುವ ಬದಲು ಮುಸ್ಲಿಮರು, ಬೇರು ಬಿಡುತ್ತಿರುವ ದೇವನಾಗರಿ ಲಿಪಿಯ ಹಿಂದಿಯನ್ನು ಅಂಗೀಕರಿಸಬೇಕೆಂದು, ಒಪ್ಪಿಕೊಳ್ಳತಕ್ಕದ್ದೆಂದೂ ಅವರು ಕರೆ ನೀಡಿದ್ದರು. ದೇವನಾಗರಿಯಲ್ಲಿ ಉರ್ದು ಸಾಹಿತ್ಯ ರಚನೆಯಾಗಬೇಕು, ಆಗ ಉರ್ದು ಸಾಹಿತ್ಯ ಹೆಚ್ಚು ಸಮಕಾಲೀನವಾಗಲು ಸಾಧ್ಯ. ಹಾಗೂ ಹೊಸದಾಗಿ ಬೆಳೆಯುತ್ತಿರುವ ಹಿಂದಿ ಭಾಷಾಸಂಪತ್ತನ್ನು ಸಮೃದ್ಧಿಗೊಳಿಸಲು ಸೂಕ್ತ ಪದಗಳನ್ನು, ನುಡಿಗಟ್ಟುಗಳನ್ನು ಉರ್ದುಸಾಹಿತಿಗಳು ಸೂಚಿಸಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು.

ಮೌಲಾನಾ ಅಜಾದ್ ಮತ್ತು ಸೈಫ್ ತ್ಯಾಬ್ಜಿಯವರು ಮುಸ್ಲಿಮರನ್ನು ಕಾಂಗ್ರೆಸ್ ಪಕ್ಷಕ್ಕೆ ಸೆಳೆದು ಅವರನ್ನು ಕಾಂಗ್ರೆಸ್ ಎಂಪಿಗಳನ್ನಾಗಿಸುವ ಪ್ರಯತ್ನ ಮಾಡಿದರೆ ಇನ್ನು ಕೆಲವು ಮುಸ್ಲಿಂ ಸಮುದಾಯಗಳು ತಮ್ಮದೇ ರಾಜಕೀಯ ಪಕ್ಷದ ಮೂಲಕ ಪ್ರತಿನಿಧಿಸುವುದು ಉತ್ತಮವೆಂದು ವಾದಿಸಿದ್ದವು. 1953ರ ಅಕ್ಟೋಬರಿನಲ್ಲಿ ಹೊಸ ರಾಜಕೀಯ ಪಕ್ಷ ಸ್ಥಾಪಿಸುವ

ಬಗ್ಗೆ ಚರ್ಚಿಸಲು ಅಲಹಾಬಾದಿನಲ್ಲಿ ಮುಸ್ಲಿಂ ಬುದ್ಧಿಜೀವಿಗಳು ಮತ್ತು ವೃತ್ತಿನಿರತರ ಒಂದು ಸಭೆ ನಡೆಯಿತು. "ಮುಸ್ಲಿಮರ ಅಲ್ಪಸಂಖ್ಯಾತ ಹಕ್ಕುಗಳನ್ನು ರಕ್ಷಿಸಲು ಹಾಗೂ ಮುಸ್ಲಿಮರು ಗೌರವಾನ್ವಿತವಾಗಿ ಬದುಕಲು ಅನುವು ಮಾಡಿಕೊಡುವುದಕ್ಕಾಗಿ ಪ್ರತ್ಯೇಕ ಮುಸ್ಲಿಂ ರಾಜಕೀಯ ಪಕ್ಷವೊಂದರ ಅಗತ್ಯವಿದೆ" ಎಂಬುದು ಇವರ ವಾದವಾಗಿತ್ತು. ಶಾಸಕಾಂಗದಲ್ಲಿ ಹಾಗೂ ಉನ್ನತ ಮಟ್ಟದ ನಾಗರಿಕ ಸೇವೆಗಳಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ಸಾಲದು. ಪ್ರಾತಿನಿಧ್ಯ ಪ್ರಮಾಣ ಕಡಿಮೆಯಾಗಿದೆ ಎಂಬುದು ಇವರ ಕಳವಳವಾಗಿತ್ತು. ಈ ಸಭೆಯ ಅಧ್ಯಕ್ಷತೆ ವಹಿಸಿದ್ದವರು ಕಲ್ಕತ್ತೆಯ ಮಾಜಿ ಮೇಯರ್ ಒಬ್ಬರು. ಈಗಿನ ಧೋರಣೆ ಮುಂದುವರಿದರೆ "ಮುಸ್ಲಿಮರಿಗೆ ಆರ್ಥಿಕವಾಗಿ ಪಾರ್ಶ್ವವಾಯು ಬಡಿಯುತ್ತದೆ, ಅವರ ಸಂಸ್ಕೃತಿ ಸಾಯುತ್ತದೆ, ಅವರು ಒಡೆದು ಛಿದ್ರವಾಗುತ್ತಾರೆ. ರಾಜಕೀಯವಾಗಿ ಜೀತದಾಳುಗಳಾಗುತ್ತಾರೆ" ಎನ್ನುವುದು ಅಧ್ಯಕ್ಷರ ಅಭಿಮತವಾಗಿತ್ತು. ಆರು ತಿಂಗಳ ನಂತರ ದೆಹಲಿಯ ಜಮಾ ಮಸೀದಿ ಸಭೆಯೊಂದರಲ್ಲಿ ಮಾತನಾಡಿದ ಉತ್ತರ ಪ್ರದೇಶ ಜಮಾತ್‌ನ ಕಾರ್ಯದರ್ಶಿಗಳು, ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ ವಿರೋಧಿಯಾಗಿದ್ದು ಹಿಂದೂ ಪರವಾಗಿದೆ ಎಂದು ವಾಗ್ದಾಳಿ ನಡೆಸಿದರು. "ಭವಿಷ್ಯದ ಸಂಭವನೀಯ ಘಟನೆಗಳನ್ನು ಎದುರಿಸಲು ಭಾರತದ ಮುಸ್ಲಿಮರು ಒಂದು ನಾಯಕತ್ವದಲ್ಲಿ ಸಂಘಟಿರಾಗಲು ಇದು ಸಕಾಲ" ಎಂದು ಕಾರ್ಯದರ್ಶಿ ಹೇಳಿದ್ದರು.

ಏತನ್ಮಧ್ಯೆ, ದಕ್ಷಿಣ ಭಾರತದಲ್ಲಿ ಈಗಾಗಲೇ ಈ ನಿಟ್ಟಿನಲ್ಲಿ ವಾಸ್ತವಿಕ ಹೆಜ್ಜೆಗಳನ್ನಿಟ್ಟಾಗಿತ್ತು. 1951ರ ಸೆಪ್ಟಂಬರಿನಲ್ಲಿ, ಮದ್ರಾಸಿನಲ್ಲಿ 'ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್' ಅಸ್ತಿತ್ವಕ್ಕೆ ಬಂತು. ಹೆಸರು ಮತ್ತು ಗುಣಲಕ್ಷಣಗಳಲ್ಲಿ ಹೊಸ ಪಕ್ಷ ವಿಭಜನಪೂರ್ವ ಪಕ್ಷವಲ್ಲ ಎಂಬುದನ್ನು ತೋರಿಸಿಕೊಡುವ ಪ್ರಯತ್ನವಿತ್ತು. ಇದನ್ನು ವಿಭಜನೆಪೂರ್ವ ಮುಸ್ಲಿಂ ಲೀಗ್ ಹೋಲುತ್ತದೆ ಎಂದು ಕೆಲವರು ಭಾವಿಸಬಹುದಾಗಿತ್ತು. ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರ ಧರ್ಮ, ಸಂಸ್ಕೃತಿ ಮತ್ತು ಅರ್ಥವ್ಯವಸ್ಥೆ ಹಾಗೂ ಇತರ ನ್ಯಾಯಬದ್ಧ ಹಕ್ಕುಗಳು ಮತ್ತು ಹಿತಾಸಕ್ತಿಗಳ ರಕ್ಷಣೆ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ ಧ್ಯೇಯವಾಗಿತ್ತು. ಜೊತೆಗೆ, ಭಾರತ ಒಕ್ಕೂಟದ ಸ್ವಾತಂತ್ರ್ಯ ಮತ್ತು ಗೌರವಗಳನ್ನು ರಕ್ಷಿಸುವ, ಎತ್ತಿಹಿಡಿಯುವ ಪ್ರತಿಜ್ಞೆಯನ್ನೂ ಮಾಡಿತ್ತು. ಅನೇಕ ವರ್ಷಗಳ ನಂತರ, ನಗರದ ಮುಸ್ಲಿಮರ ಪ್ರಾತಿನಿಧಿಕ ಪಕ್ಷವಾಗಿ ಹೈದರಾಬಾದಿನಲ್ಲಿ ಮಜಲೀಸ್ ಇತ್ತಿಹಾದ್-ಉಲ್-ಮುಸ್ಲಿಮಿನ್ ಪಕ್ಷ ಹುಟ್ಟಿಕೊಂಡಿತು. 1957ರ ಚುನಾವಣೆಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತಾದರೂ ಒಂದೇ ಒಂದು ಸ್ಥಾನ ಗೆಲ್ಲುವುದು ಅದರಿಂದ ಸಾಧ್ಯವಾಗಿತ್ತು. ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ತನ್ನ ಭದ್ರಕೋಟೆಯಾದ ಕೇರಳದಲ್ಲಿ ಹೆಚ್ಚು ಯಶಸ್ವಿಯಾಗಿತ್ತು. 1960ರ ಮಧ್ಯಂತರ ಚುನಾವಣೆಯಲ್ಲಿ ಅದು ಹತ್ತು ಸ್ಥಾನಗಳನ್ನು ಗೆದ್ದಿತ್ತು.

VI

ಭಾರತೀಯ ಮುಸ್ಲಿಮರಲ್ಲಿ ಒಂದು ಅನನ್ಯತೆ ಇದೆ. ಅವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಅವರಿಗೆ ತಮ್ಮದೇ ಆದ ಒಂದು ರಾಷ್ಟ್ರವಿಲ್ಲ. ಇವರು ಇರಾನ್-ಇರಾಕ್ ಅಥವಾ ಪಾಕಿಸ್ತಾನದ ಮುಸ್ಲಿಮರಂತಲ್ಲ. ಇವರು, ಇತರ ಅಸಂಖ್ಯಾತ ಜನರೊಂದಿಗೆ, ಹೊಸ ಭಾರತೀಯ ಗಣರಾಜ್ಯದಲ್ಲಿ ಪೌರತ್ವವನ್ನು ಹಂಚಿಕೊಂಡಿದ್ದಾರೆ. ಇವರು ವಿಶ್ವದಲ್ಲಿ ಗಣನೀಯ ಗಾತ್ರದ ಮುಸ್ಲಿಂ ಸಮುದಾಯವಾಗಿದ್ದಾರೆ. ಹಿಂದೆ ಎಂದೂ ಹೀಗಿರಲಿಲ್ಲ. ಆದರೆ ಈಗ ಇದು ಸತ್ಯ–ಎಂದು 1957ರಲ್ಲಿ ಡಬ್ಲ್ಯು.ಸಿ. ಸ್ಮಿತ್ ತನ್ನ ಇಸ್ಲಾಮಿನ ಇತಿಹಾಸ ಗ್ರಂಥದಲ್ಲಿ ಬರೆದಿದ್ದಾರೆ.

ಭಾರತೀಯ ಮುಸ್ಲಿಮರು ದೊಡ್ಡ ಪ್ರಮಾಣದಲ್ಲಿರುವ ಅಲ್ಪ ಸಂಖ್ಯಾತರು ಹಾಗೂ ಸುಲಭವಾಗಿ ಪಕ್ಕಾಗುವಂಥವರು. ಇವರು ಹಿಂದೂ ಕೋಮುವಾದದ ಬೆದರಿಕೆಗೆ ಪಕ್ಕಾದವರು, ಹಾಗೆಯೇ ಪಾಕಿಸ್ತಾನದ ಪ್ರಚೋದನೆಗಳಿಗೂ ಪಕ್ಕಾದವರು. ಪಾಕಿಸ್ತಾನದ ನಾಯಕರು ಭಾರತದ ಜಾತ್ಯತೀತ ನೀತಿಯನ್ನು ಅಪಹಾಸ್ಯ ಮಾಡಿದ್ದುಂಟು ಹಾಗೂ ಭಾರತೀಯ ಮುಸ್ಲಿಮರಿಗೆ, ತಮ್ಮ ರಾಷ್ಟ್ರಕ್ಕೆ ಅವಿಧೇಯರಾಗಿ, ನಿಷ್ಠೆ ತೋರದೆ ನಡೆದುಕೊಳ್ಳುವಂತೆ ಪ್ರೇರಣೆ-ಪ್ರಚೋದನೆಗಳನ್ನು ನೀಡಿದ್ದುಂಟು. ಮುಸ್ಲಿಮರು, ಸಾಮಾನ್ಯವಾಗಿ ಭಾರತ-ಪಾಕಿಸ್ತಾನ ಬಾಂಧವ್ಯವನ್ನು ಅದೃಷ್ಟಾಧೀನವೆಂದು ಭಾವಿಸಿದ್ದರು. ವಿಶೇಷವಾಗಿ ಪಾಕಿಸ್ತಾನ ತನ್ನ ದೇಶದಲ್ಲಿರುವ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುವ ವಿಷಯದಲ್ಲೂ ಅದೃಷ್ಟಾಧೀನ-ವಿಧಿಬರಹ ಎಂಬ ಧೋರಣೆಯನ್ನೇ ತಾಳಿದ್ದರು. ಹೀಗಾಗಿ, ಪೂರ್ವ ಪಾಕಿಸ್ತಾನದಿಂದ ಓಡಿ ಬಂದ ಹಿಂದೂಗಳ ಅಸಮಾಧಾನ, ಹೊಸದಾಗಿ ಸಂಭವಿಸಿದ ಒಂದು ಗಡಿ ಘಟನೆ ಅಥವಾ ಕಾಲುವೆ ನೀರು ವಿವಾದ ವಿಕೋಪ, ನಿರಾಶ್ರಿತರ ಆಸ್ತಿವಿಚಾರ ಇಂಥ ಯಾವುದೇ ಒಂದು ಘಟನೆಯೂ ಭಾರತದೊಳಗಿನ ಮುಸ್ಲಿಮರ ಮೇಲೆ ಒಂದಲ್ಲ ಒಂದು ರೀತಿ ಪರಿಣಾಮ ಬೀರುತ್ತಿತ್ತು; ಪ್ರತಿಧ್ವನಿಸುತ್ತಿತ್ತು.

ವಿಭಜನೆಗೆ ಗಂಟುಹಾಕಲಾದ ಮತ್ತೊಂದು ಸಮಸ್ಯೆಯೆಂದರೆ ವಿಶ್ವಾಸಾರ್ಹ ಮಧ್ಯಮ ವರ್ಗದ ಕೊರತೆ. ವಿಭಜನೆಯ ನಂತರ ಮುಸ್ಲಿಂ ಅಧಿಕಾರಿಗಳು, ವಕೀಲರು, ವೈದ್ಯರು, ವಿದ್ವಾಂಸರು, ಬುದ್ಧಿಜೀವಿಗಳು, ಉದ್ಯಮಿಗಳು ಹಿಂದೂಗಳ ಪ್ರತಿಸ್ಪರ್ಧೆ ಇಲ್ಲದೇ ಪುರೋಭಿವೃದ್ಧಿ ಹೊಂದಲು ಹೆಚ್ಚಿನ ಸಂಖ್ಯೆಯಲ್ಲಿ ನೂತನ ಇಸ್ಲಾಂ ರಾಷ್ಟ್ರಕ್ಕೆ ವಲಸೆ ಹೋದರು. ಭಾರತದಲ್ಲಿ ಉಳಿದುಕೊಂಡವರು ಹೆಚ್ಚಾಗಿ ಬಡವರ್ಗದ ಕೂಲಿ ಕಾರ್ಮಿಕರು, ಕೂಲಿಕಾರರು, ರೈತರು ಹಾಗೂ ಕುಶಲಕರ್ಮಿಗಳು. ಈ ಬಡ ಮುಸ್ಲಿಮರಿಗೆ ಸ್ವತಂತ್ರವಾದ, ವಿವೇಕಯುತವಾದ ನಾಯಕತ್ವದ ಅಗತ್ಯವಿತ್ತು. ಈ ಬಗ್ಗೆ, ಸೂಕ್ಷ್ಮ ದೃಷ್ಟಿಯ ಬ್ರಿಟಿಷ್ ಅಧಿಕಾರಿಯೊಬ್ಬ ಹೀಗೆ ಬರೆದಿದ್ದಾನೆ:

> "ವಿಭಜನೆಯ ಒಂದು ಶಾಪವೆಂದರೆ ಬಂಗಾಳದ ಮುಸ್ಲಿಮ್ ಅಧಿಕಾರಿಗಳೆಲ್ಲ ಪಾಕಿಸ್ತಾನಕ್ಕೆ ಹೊರಟುಹೋದದ್ದು. ಪಾಕಿಸ್ತಾನವನ್ನು ಆಯ್ಕೆಮಾಡಿಕೊಂಡದ್ದು. ಇದರಿಂದಾಗಿ, ಪಶ್ಚಿಮ ಬಂಗಾಳದಲ್ಲಿ ಸೇವೆಯಲ್ಲಾಗಲೀ ಅಥವಾ ಬೇರೆಡೆಯಾಗಲೀ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವವರು, ಅವರ ಹಿತಕಾಯುವವರು, ಅವರನ್ನು ರಕ್ಷಿಸುವವರು ಇಲ್ಲದಂತಾಯಿತು".

ಈ ಪರಿಸ್ಥಿತಿಗೆ ಭಾಗಶಃ ಅಪವಾದವೆಂದರೆ ಕಾಶ್ಮೀರ. ಇಲ್ಲಿ, 1947-1953ರ ಶೇಖ್ ಅಬ್ದುಲ್ಲಾ ಆಡಳಿತದ ಅವಧಿಯಲ್ಲಿ ಮುಸ್ಲಿಮರಿಗೆ ಕೃಷಿ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ವೃತ್ತಿಗಳನ್ನು ಕೈಗೊಳ್ಳಲು ಹೆಚ್ಚಿನ ಉತ್ತೇಜನ ನೀಡಲಾಯಿತು. ಎಲ್ಲಕ್ಕಿಂತ ಮಿಗಿಲಾಗಿ ಶಿಕ್ಷಣಕ್ಕೆ ಹೆಚ್ಚು ಗಮನ ಕೊಟ್ಟು, ಶೈಕ್ಷಣಿಕ ಸೌಲಭ್ಯಗಳನ್ನು, ಅವಕಾಶಗಳನ್ನು ಕಲ್ಪಿಸಲಾಗಿತ್ತು. ಮಹಿಳೆಯರಿಗಾಗಿ ಪ್ರತ್ಯೇಕ ಶಾಲಾಕಾಲೇಜುಗಳನ್ನು ತೆರೆದದ್ದು ಶೇಖರ ಕಾಲದ ದೂರದೃಷ್ಟಿಯ ಕ್ರಮಗಳಲ್ಲಿ ಒಂದು. ಶ್ರೀನಗರದ ಮಹಿಳೆಯರ ಕಾಲೇಜು ಶಿಕ್ಷಣ ಗುಣಮಟ್ಟದ ಉತ್ಕೃಷ್ಟತೆಯಲ್ಲಿ ರಾಷ್ಟ್ರವ್ಯಾಪಿ ಕೀರ್ತಿಗೆ ಭಾಜನವಾಗಿತ್ತು. ಭಾರತದ ಬೇರೆಡೆಗಳಲ್ಲಿ ಮುಸ್ಲಿಮರು ಹೆಚ್ಚಾಗಿ ಕೂಲಿನಾಲಿ ಮಾಡುವ ದುಡಿಯುವ ವರ್ಗಕ್ಕೆ ಸೇರಿದವರಾಗಿದ್ದು ಶಿಕ್ಷಣದಲ್ಲಿ, ಶಾಸಕಾಂಗದಲ್ಲಿ, ಆಡಳಿತದಲ್ಲಿ ಹಾಗೂ ಇತರ ವೃತ್ತಿ ಉದ್ಯಮಗಳಲ್ಲಿ ಅವರಿಗೆ ಸೂಕ್ತ ಪ್ರಾತಿನಿಧ್ಯ ಇರಲಿಲ್ಲ.

ಇನ್ನೊಂದೆಡೆ ಭಾರತದ ರಾಜಕೀಯ ನಾಯಕತ್ವ ಜಾತ್ಯತೀತ ರಾಷ್ಟ್ರ ನಿರ್ಮಾಣಕ್ಕಾಗಿ ಪ್ರಯತ್ನಿಸುತ್ತಿತ್ತು ಹಾಗೂ ಅಲ್ಪಸಂಖ್ಯಾತರಲ್ಲಿ "ಭಾರತ ನಮ್ಮದು ನಾವು ಇಲ್ಲಿಯವರು" ಎನ್ನುವ ಹಕ್ಕು ಬಾಧ್ಯತೆಯ ಭಾವನೆಯನ್ನು, ವಿಶ್ವಾಸವನ್ನು ಮೂಡಿಸುವ ಪ್ರಯತ್ನಗಳೂ ಸಾಗಿದ್ದವು. ಇದರಲ್ಲಿ ನೆಹರೂ ಅವರದೇ ಪ್ರಮುಖ ಪಾತ್ರ. ಇವರಿಗೆ ಗಾಂಧಿ ಪಂಥಾನುಯಾಯಿಗಳಾದ ಉಳಿದ ಕಾಂಗ್ರೆಸ್ಸಿಗರ ಬೆಂಬಲವಿತ್ತು. ಈ ಕಾರ್ಯದಲ್ಲಿ ನೆಹರೂಗೆ ಸಹಾಯಕವಾಗಿದ್ದರು. 1956ರಲ್ಲಿ ಅಹಮದಾಬಾದಿನಲ್ಲಿ ಬೀದಿ ಜಗಳಗಳು, ಘರ್ಷಣೆಗಳು ದೊಡ್ಡದಾಗಿ ಹಬ್ಬುವ ಆತಂಕ ಮೂಡಿದಾಗ, ಶಾಂತಿ ಮೂಡಿಸಲು ಮುಖ್ಯಮಂತ್ರಿ ಮುರಾರ್ಜಿ ದೇಸಾಯಿಯವರು ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಕಾಶ್ಮೀರದ ವಿಷಯದಲ್ಲಿ ನಮ್ಮ ವಾದ ಮಂಡಿಸಲು ಇಂಥ ಪ್ರಸಂಗಗಳು ನಮ್ಮ ನೆರವಿಗೆ ಬಂದಿದ್ದವು. ಇದರಲ್ಲಿ ಶುದ್ಧಾಂಗ ನಂಬಿಕೆಯೂ ಇತ್ತು. ರಾಜತಾಂತ್ರಿಕ ವರಸೆಗಳೂ ಇದ್ದವು. ಮುಸ್ಲಿಮರ ಮೇಲೆ ದಾಳಿ ನಡೆದರೆ ಕಾಶ್ಮೀರ ಕಣಿವೆ ಬಗ್ಗೆ ಭಾರತದ ಪಕ್ಕಾ ಸ್ಥಾಪನೆ ದುರ್ಬಲಗೊಳ್ಳುತ್ತಿತ್ತು. ಇಂಥದೊಂದು ಹೆದರಿಕೆಯೂ ಇತ್ತು. ಮುಸ್ಲಿಮರ ವಿರುದ್ಧ ಸೇಡು ತೀರಿಸಿಕೊಳ್ಳುವ ಹಿಂದೂ ಬಹುಸಂಖ್ಯಾತರ ಅತಿಭಯಂಕರ ಪ್ರೇರಣೆ-ಪ್ರಚೋದನೆ-ಆವೇಗಗಳನ್ನು ನಿಯಂತ್ರಿಸಲು ಮಾನವೀಯತೆ ಮತ್ತು ಜಾತ್ಯತೀತತೆ ಹೆಸರಿನಲ್ಲಿ ಹಿಂದೂ ನಾಯಕರುಗಳು ನಡೆಸಿದ ಪ್ರಯತ್ನಗಳು ಸಣ್ಣ ವಿಷಯವೇನಲ್ಲ.

ಭಾರತದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರನ್ನು ನಿರ್ನಾಮಗೊಳಿಸುವ ದಳ್ಳುರಿ ಏಳುವುದೆಂದು, ವಿಭಜನೆಯ ನಂತರ ಹೆದರಿಕೆಯುಂಟಾಗಿತ್ತು. ಪ್ರತಿಯಾಗಿ, ಮುಷಿರುಲ್ ಹಸನ್ ಅವರು ಹೇಳಿರುವಂತೆ, 1950ರಲ್ಲಿ ಕೋಮು ತಾಪ ಕಡಿಮೆಯಾಗಿತ್ತು. ಕೋಮು ಗಲಭೆಗಳ ಚಂಡಮಾರುತದ ನಂತರ ಪರಿಸ್ಥಿತಿ ಶಾಂತಗೊಂಡಿತ್ತು. ಕೋಮುಗಲಭೆಗಳ ಸಂಖ್ಯೆಯಲ್ಲಿ ಇಳಿಮುಖವಾಗಿತ್ತು. ಅಲ್ಲಿ, ಆಗಾಗ್ಗೆ ಸಣ್ಣಪುಟ್ಟ ಗಲಭೆಗಳು ಸಂಭವಿಸಿದ್ದಿರಬಹುದು. ಸಂಶಯ, ಬಿಕ್ಕಟ್ಟುಗಳು ತಲೆದೋರಿದ್ದುಂಟು. ಆದರೆ 1920, 1930 ಅಥವಾ 1940ರ ದಶಕಗಳಲ್ಲಿ ಕಂಡಂಥ ಹಿಂಸಾತ್ಮಕ ಕೋಮು ಗಲಭೆಗಳು ನಡೆಯಲಿಲ್ಲ. 1950ರ ಗಲಭೆಗಳಿಗೆ ಭಾಷೆ, ಜನಾಂಗೀಯತೆ, ವರ್ಗ ಮತ್ತು ಜಾತಿಗಳು ಕಾರಣಗಳಾಗಿದ್ದವು.

1961ರ ಜಬ್ಬಲ್ಪುರ ಕೋಮು ಗಲಭೆಯಿಂದ ಈ ಶಾಂತಿಗೆ ಭಂಗಬಂತು. ಈ ಗಲಭೆಯಲ್ಲಿ ಐವತ್ತು ಮಂದಿ ಭಾರತೀಯರು, ಹೆಚ್ಚಾಗಿ ಮುಸ್ಲಿಮರು, ಹತರಾದರು. ಆದರೆ 1963-64ರ ಚಳಿಗಾಲದಲ್ಲಿ ಶ್ರೀನಗರದ ಹಜರತ್ ಬಲ್ ಮಸೀದಿಯಿಂದ ಪವಿತ್ರ ಕೇಶ ಕಳುವಾದಾಗ ಸಂಭವಿಸಿದ ಗಲಭೆಗೆ, ಪೂರ್ವ ಪಾಕಿಸ್ತಾನದಲ್ಲಿ ಹಿಂದೂಗಳ ಮೇಲೆ ನಡೆದ ದಾಳಿಗೆ ಹೋಲಿಸಿದರೆ ಜಬ್ಬಲ್ಪುರ ಘಟನೆ ಒಂದು ಜುಜುಬಿ ಜಗಳದಂತೆಯೇ ತೋರುತ್ತದೆ. ಆಗ ಪೂರ್ವ ಪಾಕಿಸ್ತಾನದಿಂದ ಸಾವಿರಾರು ಮಂದಿ ನಿರಾಶ್ರಿತರು ಭಾರತಕ್ಕೆ ಓಡಿಬಂದಿದ್ದರು. ಹೀಗೆ ಬಂದವರ ಕಣ್ಣೀರ ಕಥೆಗಳು ಕೋಮುತಾಪವನ್ನು ಹೆಚ್ಚಿಸಿದವು. ಮುಸ್ಲಿಮರ ವಿರುದ್ಧ ಸೇಡಿನ ಕಾರ್ಯಾಚರಣೆ ನಡೆಯಿತು. ಕಲ್ಕತ್ತೆಯ ಸುತ್ತಮುತ್ತ ಈ ಕೋಮು ಗಲಭೆಗಳಲ್ಲಿ 400ಕ್ಕೂ ಹೆಚ್ಚು ಮಂದಿ ಸತ್ತರು. ಇವರಲ್ಲಿ ಮುಕ್ಕಾಲು ಪಾಲು ಜನ ಮುಸ್ಲಿಮರು. ಈ ಗಲಭೆಗಳಲ್ಲಿ ಕೆಲವೊಂದು ಭೂದಾಹಿಗಳಿಂದ ಪ್ರೇರಿತವಾದದ್ದು. ಅಕ್ರಮ ವಸತಿದಾರರ ಕಾಲನಿಗಳನ್ನು ನಿರ್ನಾಮಗೊಳಿಸಿ ಆ ಜಾಗವನ್ನು ಮರು ಮಾರಾಟಕ್ಕಾಗಿ ಅಭಿವೃದ್ಧಿಗೊಳಿಸುವುದು ಭೂದಾಹಿಗಳ ಉದ್ದೇಶವಾಗಿತ್ತು. ಜಮ್‌ಶೆಡ್ಪುರ ಮತ್ತು ರೂರ್ಕೆಲಾ ಉಕ್ಕು ಕೈಗಾರಿಕಾ ನಗರಗಳಲ್ಲಿ ತೀವ್ರ ಸ್ವರೂಪದ ಗಲಭೆಗಳಾದವು. ಇಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಹತರಾದರು. ಅವರಲ್ಲಿ ಮುಸ್ಲಿಮರೇ ಹೆಚ್ಚು.

ಈ ವೇಳೆಗೆ ದೇಶದ ವಿಭಜನೆಯಾಗಿ ಎರಡು ದಶಕಗಳಾಗಿತ್ತು. ಆದಾಗ್ಯೂ ಅದರ ಶಿಲ್ಕು ಉಳಿದಿತ್ತು. ಮದ್ರಾಸಿನ ಮುಸ್ಲಿಮ್ ನಾಯಕರೊಬ್ಬರು ವ್ಯಥೆಪಟ್ಟಿರುವಂತೆ-

> *"ಪಾಕಿಸ್ತಾನದಲ್ಲಿ ಏನೇ ಸಂಭವಿಸಲಿ ಭಾರತದ ಮುಸ್ಲಿಮರ ಮೇಲೆ ಅದು ಪರಿಣಾಮ ಬೀರುತ್ತದೆ. ವಿಶೇಷವಾಗಿ, ಪಾಕಿಸ್ತಾನದ ಘಟನೆಗಳು ಭಾರತದ ಪತ್ರಿಕೆಗಳಲ್ಲಿ ಉತ್ಪ್ರೇಕ್ಷೆಯಿಂದ ವರದಿಯಾದಾಗ ಮುಸ್ಲಿಮರನ್ನು ದ್ವೇಷಿಸುವ ಜನರು ಮತ್ತು ಪಕ್ಷಗಳು ಇಂಥ ಅವಕಾಶಗಳ ಪೂರ್ಣ ಲಾಭ ಪಡೆದುಕೊಳ್ಳುತ್ತವೆ. 1963-64ರ ಗಲಭೆಗಳು ಇಂಥ ಭೀತಿಯನ್ನು ಬಲಗೊಳಿಸಿವೆ."*

VII

ಮುಸ್ಲಿಮರಂತೆ, ಅಸ್ಪೃಶ್ಯರೂ ಭಾರತದಾದ್ಯಂತ ಹರಡಿಕೊಂಡಿದ್ದರು. ಮುಸ್ಲಿಮರಂತೆ ಅವರೂ ಬಡವರು, ಕಳಂಕಿತರು ಹಾಗೂ ಮೇಲ್ಜಾತಿಯವರ ದುರಾಗ್ರಹಪೂರಿತ ಹಿಂಸಾಚಾರಕ್ಕೆ ಗುರಿಯಾದವರು. ಅಸ್ಪೃಶ್ಯರು ಹಳ್ಳಿಗಾಡುಗಳಲ್ಲಿ ವಾಸವಾಗಿದ್ದರು. ಕೂಲಿಗಾರಿಕೆ, ಕೃಷಿ, ಚಮ್ಮಾರಿಕೆ ಮತ್ತು ಝಾಡಮಾಲಿ ಕೆಲಸ ಇವರ ವೃತ್ತಿಗಳಾಗಿದ್ದವು. ಹಿಂದೂ ಸಂಪ್ರದಾಯದ ಕಟ್ಟಳೆಗಳ ಪ್ರಕಾರ ಅಸ್ಪೃಶ್ಯರ ಸ್ಪರ್ಶದಿಂದ ಮೇಲ್ಜಾತಿಯವರಿಗೆ ಮೈಲಿಗೆಯಾಗುತ್ತದೆ. ಕೆಲವು ಪ್ರದೇಶಗಳಲ್ಲಿ ಕೆಳಜಾತಿಯವರು ಕಣ್ಣಿಗೆ ಬಿದ್ದರೂ ಮೈಲಿಗೆ ಎಂಬ ನಂಬಿಕೆ ಇತ್ತು. ಅಸ್ಪೃಶ್ಯರಿಗೆ ನೆಲ, ನೀರು ಇತ್ಯಾದಿಗಳನ್ನು ನಿರಾಕರಿಸಲಾಗಿತ್ತು. ಅವರ ಮನೆಗಳೂ ಊರ ಹೊರಗೇ ಇರುತ್ತಿದ್ದವು.

ಬ್ರಿಟಿಷರ ಕಾಲದಲ್ಲಿ ಅಸ್ಪೃಶ್ಯರು ಕೆಲವರಿಗೆ ಗ್ರಾಮ ಜೀವನದ ನರಕವಾಸದಿಂದ ಮುಕ್ತಿ ದೊರೆಯಿತು. ಇವರಿಗೆ ಸೈನ್ಯದಲ್ಲಿ, ಕಾರ್ಖಾನೆಗಳಲ್ಲಿ, ನಗರ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳು ತೆರೆದುಕೊಂಡವು. ಆದರೆ ಇಲ್ಲೂ ಅಸ್ಪೃಶ್ಯರಿಗೆ ದೊರಕುತ್ತಿದ್ದುದು ಕೀಳು ಕೆಲಸಗಳೇ, ಗುಲಾಮ ಚಾಕರಿಯೇ. ಜೊತೆಗೆ ಹೀನಾಯ.

ಗಾಂಧೀಜಿಯವರು ಅಸ್ಪೃಶ್ಯರಿಗೆ ಹರಿಜನ ಅಥವಾ ದೇವರ ಮಕ್ಕಳೆಂದು ನಾಮಕರಣ ಮಾಡಿದ್ದರು. ಭಾರತದ ಸಂವಿಧಾನ ಅಸ್ಪೃಶ್ಯತೆಯನ್ನು ನಿಷೇಧಿಸಿತು. ಅಸ್ಪೃಶ್ಯ ಸಮುದಾಯಗಳನ್ನು ಪ್ರತ್ಯೇಕ ಪರಿಶಿಷ್ಟದಲ್ಲಿ ಸೇರಿಸಿತು. ಆದ್ದರಿಂದ ಅಸ್ಪೃಶ್ಯರ ಹೊಸ ಹೆಸರು ಪರಿಶಿಷ್ಟ ಜಾತಿ ಎಂದಾಯಿತು. ಆದರೆ 1950ರ ಗ್ರಾಮೀಣ ಪ್ರದೇಶಗಳ ಜನಾಂಗೀಯ ವಿವರಣೆಯಂತೆ ಅಸ್ಪೃಶ್ಯತೆ ಆಚರಣೆ ಇನ್ನೂ ಮುಂದುವರಿದಿದೆ. ಪರಿಶಿಷ್ಟ ಜಾತಿಯವರಲ್ಲಿ ಕೆಲವೇ ಮಂದಿ ಜಮೀನು ಹೊಂದಿದ್ದಾರೆ. ಹೆಚ್ಚು ಮಂದಿಗೆ ಹೊಲಗದ್ದೆ ಇಲ್ಲ. ಅವರು ಇನ್ನೂ ಸಾಮಾಜಿಕ ದುರಾಚಾರಗಳಿಗೆ, ಲೈಂಗಿಕ ಶೋಷಣೆಗಳಿಗೆ ಬಲಿಪಶುಗಳಾಗಿ ಬದುಕುತ್ತಿದ್ದಾರೆ. ಆದರೆ ಈ ಜನಾಂಗೀಯ ಅಧ್ಯಯನ ವಿವರಣೆಯಲ್ಲಿ ಸಮಾಜದ ಕೆಳಗಿನಿಂದ ಬದಲಾವಣೆಗಳಾಗುತ್ತಿರುವುದರ ಸೂಚನೆ ಇದೆ. ನಿಧಾನವಾಗಿ ಬದಲಾವಣೆಯಾಗುತ್ತಿದೆಯೆಂದು ಅಧ್ಯಯನದಿಂದ ಕಂಡು ಬಂದಿದೆ. ಕೆಲವು ಪ್ರದೇಶಗಳಲ್ಲಿ ಕೆಳಜಾತಿಯವರು ಹೀನಾಯದ ಕೆಲಸಗಳನ್ನು ಮಾಡಲು ನಿರಾಕರಿಸುತ್ತಿದ್ದಾರೆ. ಅವರು ಬಿಟ್ಟಿ ಹೊರೆ ಹೊರುವುದಿಲ್ಲ. ಈಗ ಮೇಲ್ಜಾತಿಯವರು ತಮ್ಮ ಹೆಂಗಸರ ಮಾನಹರಣ ಮಾಡುವುದನ್ನು ನೋಡಿಕೊಂಡು ಸುಮ್ಮನಿರುವುದಿಲ್ಲ. ಕೆಳಜಾತಿಯವರು ಈಗ ಕೆಲಸಕ್ಕೆ ಹೆಚ್ಚಿನ ಕೂಲಿ ಕೇಳುತ್ತಿದ್ದಾರೆ. ಕೃಷಿ ಮಾಡಲು ಭೂಮಿ ಕೇಳುತ್ತಿದ್ದಾರೆ. ಕೆಲವೊಮ್ಮೆ ಇವರ ಬೇಡಿಕೆಗಳ ಹಿಂದೆ ಕಮ್ಯುನಿಸ್ಟರ ಕುಮ್ಮಕ್ಕಿದೆ.

ನಗರಗಳಲ್ಲಿ ಕೆಳಜಾತಿಯವರು ಸಂಘಟಿತರಾಗಿ ತಮ್ಮ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸುತ್ತಿದ್ದಾರೆ. ದೆಹಲಿಯ ಮುನಿಸಿಪಾಲಿಟಿಯ ಬೀದಿ ಗುಡಿಸುವವರು ವಾಲ್ಮೀಕಿ ಜಾತಿಗೆ ಸೇರಿದವರು. ಇವರು ಕಮ್ಯುನಿಸ್ಟರ ಪ್ರೋತ್ಸಾಹದಿಂದ ಸಂಘ ಕಟ್ಟಿಕೊಂಡರು. 1953ರಲ್ಲಿ

ಈ ಸಂಘ ದೆಹಲಿ ಮುನಿಸಿಪಲ್ ಕಾರ್ಪೋರೇಷನ್ನಿಗೆ ತನ್ನ ಬೇಡಿಕೆಗಳ ಪಟ್ಟಿ ಸಲ್ಲಿಸಿತು. ಹೆಚ್ಚಿನ ವೇತನ ಮತ್ತು ಉತ್ತಮ ಸೇವಾಸ್ಥಿತಿಗತಿಗಳು ಇವರ ಮುಖ್ಯ ಬೇಡಿಕೆಗಳಾಗಿದ್ದವು. ಬೀದಿ ಗುಡಿಸುವವರು ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಮ್ಮ ಬಲ ಪ್ರದರ್ಶಿಸಿದರು. ಮುಷ್ಕರ ಕಾಲದಲ್ಲಿ ಒಮ್ಮೆ ಪೊಲೀಸರ ಜೊತೆ ಘರ್ಷಣೆಯೂ ಸಂಭವಿಸಿತು. "ಇವರ ಹೋರಾಟ ಕೇವಲ ಹೆಚ್ಚಿನ ವೇತನಕ್ಕಾಗಿ ಮಾತ್ರ ನಡೆಸಿದ ಹೋರಾಟವಾಗಿರಲಿಲ್ಲ. ಘನತೆ-ಗೌರವ ಹಾಗೂ ವಾಲ್ಮೀಕಿ ಜನಾಂಗದ ವೃತ್ತಿಯ ಮೌಲ್ಯ ಪಾವಿತ್ರ್ಯಗಳಿಗಾಗಿ ನಡೆಸಿದ ಹೋರಾಟವಾಗಿತ್ತು" ಎಂದು ಇತಿಹಾಸಕಾರರೊಬ್ಬರು ಬರೆದಿದ್ದಾರೆ.

VIII

1950ರ ದಶಕದಲ್ಲಿ ಪ್ರಕಟವಾದ ಅಸ್ಪೃಶ್ಯತಾ ಆತ್ಮ ಚರಿತ್ರೆಗಳ ಪ್ರಕಾರ ಅದೊಂದು ಅಡೆತಡೆಯಿಲ್ಲದ ಜಾತಿವೈಷಮ್ಯಗಳ, ಪ್ರಭೇದಗಳ ಪ್ರವಾಹವಾಗಿತ್ತು. ಜಾತಿ ಮತ್ತು ಧರ್ಮಗಳ ಪೂರ್ವಾಗ್ರಹಗಳು ಅತಿರೇಕವೂ ಆಕ್ರಮಣಶೀಲ ಪ್ರವೃತ್ತಿಯವೂ ಆಗಿದ್ದವು. ಆದರೆ ಈ ಎಲ್ಲ ಪೂರ್ವಾಗ್ರಹಗಳನ್ನು ನಿಷ್ಕ್ರಿಯರಾಗಿ ಒಪ್ಪಿಕೊಳ್ಳುವ ಕಾಲ ಮುಗಿದಿತ್ತು. ಕಾನೂನಿನ ರೀತ್ಯ ಕೆಲವೊಂದು ಸ್ಥಾನಗಳು ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿದ್ದವು. ಕೆಲವು ರಾಜ್ಯ ಸರ್ಕಾರಗಳು ಅಸೌಲಭ್ಯಿತ ಕುಟುಂಬಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವ ನೀತಿಯನ್ನು ಪ್ರಾರಂಭಿಸಿದವು. ಇಲ್ಲಿ, ದೀನದಲಿತರ ಮಕ್ಕಳಿಗೆ ಮೊದಲನೆಯ ತಲೆಮಾರಿನ ವಿದ್ಯಾವಂತರನ್ನು ಮೀರಿಸಿ ಮುನ್ನುಗ್ಗಲು ಅವಕಾಶಗಳಿದ್ದವು. ಒಂದು ಅಂದಾಜಿನ ಪ್ರಕಾರ ಸ್ವಾತಂತ್ರ್ಯದ ಮೊದಲ ದಶಕದಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ದ್ವಿಗುಣಗೊಂಡಿತ್ತು, ಇದರಲ್ಲಿ ಅಸ್ಪೃಶ್ಯರ ಸಂಖ್ಯೆ ಎಂಟ್ಹತ್ತು ಪಟ್ಟು ಹೆಚ್ಚಿತ್ತು. ವಿಶ್ವವಿದ್ಯಾನಿಲಯಗಳಲ್ಲೂ ಹಿಂದೆಂದಿಗಿಂತ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿದ್ದರು.

ಎರಡನೆಯ ಮಾರ್ಗ, ಸರ್ಕಾರಿ ಉದ್ಯೋಗಗಳದು. ಸರ್ಕಾರ ಹಾಗೂ ಸರ್ಕಾರದ ನೆರವಿನಿಂದ ನಡೆಯುತ್ತಿರುವ ಸಂಸ್ಥೆಗಳ ಹುದ್ದೆಗಳಲ್ಲಿ ಶೇ 15ರಷ್ಟು ಹುದ್ದೆಗಳು ಪರಿಶಿಷ್ಟ ಜಾತಿಯವರಿಗೆ ಮೀಸಲಾದವು. ಮತ್ತೆ 1947ರ ನಂತರ, ಸಚಿವಾಲಯಗಳು, ಸರ್ಕಾರಿ ನೆರವಿನ ಶಾಲೆಗಳು, ಆಸ್ಪತ್ರೆಗಳು, ಕಾರ್ಖಾನೆಗಳಲ್ಲಿ ಹಾಗೂ ಮೂಲ ಸೌಕರ್ಯ ಯೋಜನೆಗಳಲ್ಲಿ ಮೀಸಲಾತಿಯನ್ನು ವಿಸ್ತರಿಸಲಾಯಿತು. ನಿಕರವಾದ ಅಂಕಿಸಂಖ್ಯೆಗಳ ಸಂಗ್ರಹ ಕಷ್ಟಸಾಧ್ಯವಾದರೂ, ಸ್ವಾತಂತ್ರ್ಯ ಬಂದ ನಂತರದ ಎರಡು ದಶಕಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಲಕ್ಷಾಂತರ ಹುದ್ದೆಗಳನ್ನು ಸೃಷ್ಟಿಸಲಾಯಿತು. ಇವೆಲ್ಲವೂ ಪ್ರಮುಖ ಸ್ಥಾನಮಾನದ ಹುದ್ದೆಗಳಾಗಿದ್ದವು. ಈ ಹುದ್ದೆಗಳಿಗೆ ನೇಮಕಗೊಳ್ಳುವವರಿಗೆ ಪಿಂಚಣಿ, ಆರೋಗ್ಯ ಸೇವೆ ಮೊದಲಾದ ಸೌಕರ್ಯ ಸವಲತ್ತುಗಳು ದೊರೆಯುತ್ತಿದ್ದವು. ತಾತ್ವಿಕವಾಗಿ ಸರ್ಕಾರದ ಎಲ್ಲ ಸ್ತರಗಳಲ್ಲೂ ಮೀಸಲಾತಿ ಇತ್ತು. ಆದರೆ ವ್ಯಾವಹಾರಿಕವಾಗಿ,

ಕೆಳಹಂತದ ಮೀಸಲು ಹುದ್ದೆಗಳು ನೇಮಕಾತಿ ಇಲ್ಲದೆ ಖಾಲಿ ಇರುತ್ತಿದ್ದವು. 1966ರಲ್ಲಿ, ಹಿರಿಯ ಆಡಳಿತಾಧಿಕಾರಿ ಶ್ರೇಣಿಯಲ್ಲಿ ಕೇವಲ ಶೇ 1.77ರಷ್ಟು ಮಂದಿ ಕೆಳಜಾತಿಯ ಭಾರತೀಯರಿದ್ದರು. ಶೇ 8.86ರಷ್ಟು ಗುಮಾಸ್ತೆ ಹುದ್ದೆಗಳು ಮತ್ತು ಶೇ 17.94ರಷ್ಟು ಜವಾನರ ಹುದ್ದೆಗಳು ಪರಿಶಿಷ್ಟರಿಗೆ ದೊರೆತಿದ್ದವು.

ಲೋಕಸಭೆ ಹಾಗೂ ರಾಜ್ಯ ವಿಧಾನ ಸಭೆಗಳಲ್ಲೂ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಶೇ 15ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ. ಇದಲ್ಲದೆ ಸಾರ್ವತ್ರಿಕ ಮತದಾನದಲ್ಲೂ, ಮೀಸಲಲ್ಲದ ಕ್ಷೇತ್ರಗಳಲ್ಲೂ ಇವರು ಚುನಾವಣೆಯ ಫಲಿತಾಂಶದ ಮೇಲೆ ಪ್ರಭಾವ ಬೀರಲು ಸಾಧ್ಯವಿದೆ. ಅನೇಕ ಕಡೆಗಳಲ್ಲಿ ಪರಿಶಿಷ್ಟ ಜಾತಿಯವರು ದೊರೆತ ಅವಕಾಶಗಳ ಪ್ರಯೋಜನ ಪಡೆದುಕೊಂಡಿರುವುದುಂಟು. ಆಗ್ರದ ಕೆಳಜಾತಿಯ ರಾಜಕಾರಣಿ ಹೇಳುವಂತೆ, "ತನ್ನ ಮತದಾರರಿಗೆ ರಾಜಕೀಯದ ಗಹನತೆಗಳು, ಜಟಿಲತೆಗಳು ಅರ್ಥವಾಗದೇ ಹೋಗಬಹುದು, ಆದರೆ ಅವರಿಗೆ ತಮ್ಮ ಓಟಿನ ಶಕ್ತಿ ಮಹತ್ವಗಳ ಅರಿವು ಇದೆ. ಅದರ ಪ್ರಯೋಜನ ಪಡೆದುಕೊಳ್ಳಲು ಅವರು ಬಯಸುತ್ತಾರೆ". ರಾಷ್ಟ್ರೀಯ, ಪ್ರಾಂತೀಯ, ಸ್ಥಳೀಯ ಹೀಗೆ ಎಲ್ಲ ಹಂತಗಳಲ್ಲೂ, ಎಲ್ಲ ಚುನಾವಣಾ ಸಂದರ್ಭಗಳಲ್ಲೂ ಇದನ್ನು ಅವರು ಅರ್ಥಮಾಡಿಕೊಂಡಿದ್ದಾರೆ. 1950ರ ಪ್ರಾರಂಭದಲ್ಲೇ ಪರಿಶಿಷ್ಟ ಜಾತಿಯವರು ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಮೇಲ್ವರ್ಗದ ಜಮೀನ್ದಾರರ ಆಯ್ಕೆ ತಪ್ಪಿಸಲು ಮೈತ್ರಿ ಮಾಡಿಕೊಂಡ ಉದಾಹರಣೆಗಳಿವೆ. ಓಟು ಒಂದು ಚೌಕಾಸಿಯ ಸಾಧನವೆಂಬುದು ಅವರಿಗೆ ಮನವರಿಕೆಯಾಗಿತ್ತು. ಉತ್ತರ ಪ್ರದೇಶದ ಗ್ರಾಮವೊಂದರ ಚಮ್ಮಾರರು, ತಮ್ಮ ಮಾಳದಲ್ಲಿ ನಡೆದಿರುವ ಪ್ರಾಣಿಗಳ ಮೃತದೇಹಗಳ ವಿಲೇವಾರಿಯನ್ನು ಊರಾಚೆಗೆ ಸ್ಥಳಾಂತರಿಸುವುದಾದಲ್ಲಿ ನಿಮಗೆ ಬೆಂಬಲ ನೀಡುತ್ತೇವೆ ಎಂದು ಮೇಲ್ಜಾತಿಯ ಅಭ್ಯರ್ಥಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು.

ಅನ್ವಯಾರ್ಥಕ ಕ್ರಮಗಳಿಂದ ಅನೇಕ ಮಂದಿ ಪರಿಶಿಷ್ಟ ಜಾತಿಯವರಿಗೆ ನಿಜವಾದ ಅನುಕೂಲಗಳಾದವು. ಈಗ ರೈತ ಕಾರ್ಮಿಕರ ಮಕ್ಕಳೂ ಲೋಕಸಭೆ ಸದಸ್ಯರಾಗಬಹುದಿತ್ತು. ಸರ್ಕಾರದಲ್ಲಿ ನಾಲ್ಕನೆ ದರ್ಜೆ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರ ಮಕ್ಕಳು ಐ.ಪಿ.ಎಸ್. ಅಧಿಕಾರಿಗಳಾಗಬಹುದಿತ್ತು. ಆದರೆ ಅನ್ವಯಾರ್ಥಕ ಕ್ರಮಗಳು ಹೊಸದೊಂದು ಕಳಂಕವನ್ನೂ ತಂದವು. ಫಲಾನುಭವಿಗಳಿಗೆ ಹಿಂದೆಂದಿಗಿಂತಲೂ ಹೆಚ್ಚು ದೃಢವಾಗಿ ಅವರ ಜಾತಿಯ ಹಣೆಪಟ್ಟಿಗಳನ್ನು ಹಚ್ಚಲಾಯಿತು. ಮೇಲ್ವರ್ಗದ ಜಾತಿಗಳಲ್ಲಿ ಅನುಮಾನ, ಪ್ರತಿಭಟನೆಗಳು ಶುರುವಾದವು. ಫಲಾನುಭವಿಗಳಲ್ಲಿ ತಮ್ಮ ಸಮುದಾಯದ ಬಂಧು ಬಾಂಧವರನ್ನು ನಿರ್ಲಕ್ಷಿಸುವ ಅಥವಾ ಮರೆತೇ ಬಿಡುವಂಥ ಮನೋಭಾವ ಬೆಳೆಯತೊಡಗಿತು. ವಿದ್ವಾಂಸರೊಬ್ಬರು ಸಿನಿಕತನದಿಂದ ಬರೆದಿರುವಂತೆ, "ತಮ್ಮ ಸಲುವಾಗಿ ಪಡೆದುಕೊಳ್ಳುವ ಸಣ್ಣಪುಟ್ಟ ಅನುಕೂಲಗಳಿಂದ, ಲಾಭಗಳಿಂದ ಅಲ್ಪತೃಪ್ತರಾಗಿ, ಸುಲಭತೃಪ್ತರಾಗಿ ಸ್ವಯಂ ಮಗ್ನರಾದ ಸಾಮಾನ್ಯ ಜನರ ಸಮೂಹವೊಂದನ್ನು" ಮೀಸಲಾತಿ ಸೃಷ್ಟಿಸಿತ್ತು.

ಆರ್ಥಿಕ ಅಭಿವೃದ್ಧಿಯೇ ಸಾರ್ವತ್ರಿಕ ಗತಿಶೀಲತೆಯ ಅಂತಿಮ ಮಾರ್ಗವಾಗಿತ್ತು. ಕೈಗಾರೀಕರಣ ಮತ್ತು ನಗರೀಕರಣಗಳಿಂದಾಗಿ ಹೊಸ ಉದ್ಯೋಗವಕಾಶಗಳು ಹಳ್ಳಿಗಾಡಿನಿಂದ

ಹೊರವಲಯದಲ್ಲೇ ಸೃಷ್ಟಿಯಾದವು. ಇದರಿಂದ ಹಳ್ಳಿಯವರು ವಲಸೆ ಹೋಗುವಂತಾಯಿತು. ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳಲ್ಲೂ ಪರಿಶಿಷ್ಟ ಜನರಿಗೆ ದೊರೆಯುತ್ತಿದ್ದುದು ಹೆಚ್ಚು ಕೌಶಲವಿಲ್ಲದ, ಹೆಚ್ಚು ಲಾಭದಾಯಕವಲ್ಲದ ಹುದ್ದೆಗಳೇ. ಹಳ್ಳಿಗಳಿಂದ ನಗರ ಪಟ್ಟಣಗಳಿಗೆ ಬಂದವ್ದೇ ಬೌದ್ಧಿಕ ಬೆಳವಣಿಗೆಗಳಿಗೆ ಹೆಚ್ಚಿನ ಅವಕಾಶ, ಆಸ್ಪದಗಳು ದೊರೆತವು. ಉತ್ತರ ಪ್ರದೇಶದಿಂದ ಮುಂಬಯಿಗೆ ಬಂದು ಗಿರಣಿಯೊಂದರಲ್ಲಿ ಕಾರ್ಮಿಕನಾದವನಿಗೆ ನಗರದ ವಸ್ತು ಸಂಗ್ರಹಾಲಯಗಳಲ್ಲಿ ಆಸಕ್ತಿ ಬೆಳೆಯಿತು. ವಿಶೇಷವಾಗಿ ಅಲ್ಲಿನ ಗಾಂಧಾರ ಕಲೆಯಲ್ಲಿ ಅಭಿರುಚಿ ಹುಟ್ಟಿತು. ಕೆಲವೊಮ್ಮೆ ಆರ್ಥಿಕ ಅನುಕೂಲಗಳೂ ಆದವು. ಆಗ್ರಾದ ಜಾಟವರ ಉದಾಹರಣೆಯನ್ನೇ ನೋಡಬಹುದು. ಇವರು ಜಾತಿಯಿಂದ ಚಮ್ಮಾರರು, ಬೂಟು-ಚಪ್ಪಲಿ ಹೊಲೆಯುವವರು. ಮಧ್ಯ ಪ್ರಾಚ್ಯ ಮತ್ತು ಸೋವಿಯತ್ ಒಕ್ಕೂಟದಲ್ಲಿ ಇವರ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದ್ದೇ ಈ ಮಂದಿಯ ಲೋಕದಲ್ಲಿ ಬಣ್ಣಬಣ್ಣದ ಬದಲಾವಣೆಗಳಾದವು. ಜಾಟವರಲ್ಲಿ ನಗರ ಮೋಹ, ನಿಷ್ಠೆಗಳು ಹೆಚ್ಚಿದವು. ನಗರದಲ್ಲಿ ಸ್ವಂತ ಮನೆಗಳನ್ನು ಖರೀದಿಸಿದರು ಅಥವಾ ಕಟ್ಟಿಕೊಂಡರು. ಇವರಲ್ಲಿ ಕೆಲವರು ಚಮ್ಮಾರಿಕೆಯನ್ನು ಸ್ವಯಂ ಉದ್ಯೋಗವಾಗಿ ಮುಂದುವರಿಸಿದರೆ ಇನ್ನು ಕೆಲವರು ತಮ್ಮದೇ ಆದ ಬೂಟು-ಚಪ್ಪಲಿ ತಯಾರಿಸುವ ಕಾರ್ಖಾನೆಗಳನ್ನು ಆರಂಭಿಸಿದರು. ಈ ಕಾರ್ಖಾನೆಗಳಲ್ಲಿ ಚಮ್ಮಾರರಿಗೆ ಅವರು ಸ್ವಯಂ ಉದ್ಯೋಗದಿಂದ ಗಳಿಸುತ್ತಿದ್ದುದಕ್ಕಿಂತ ಹೆಚ್ಚಿನ ಸಂಬಳ ಸಿಗುವಂತಾಯಿತು. ಹೀಗೆ ಹೆಚ್ಚು ಸಂಪಾದಿಸುವ ಆಸೆ ಹುಟ್ಟಿತು. 1960ರಲ್ಲಿ ಒಬ್ಬ ಕುಶಲಕರ್ಮಿಯ ಮಾಸಿಕ ವೇತನ 250 ರೂಪಾಯಿ. ಅದೇ ಗಿರಣಿ ಕಾರ್ಮಿಕನ ವೇತನ 100 ರೂಪಾಯಿ. ಅನೇಕ ವೇಳೆ ಕುಶಲಕರ್ಮಿಗಳಲ್ಲದ ಕಾರ್ಮಿಕರ ವೇತನ ಇನ್ನೂ ಕಡಿಮೆಯಿರುತ್ತಿತ್ತು. ಲಾಭ ಹಂಚಿಕೆಯಲ್ಲಿ ತಾರತಮ್ಯವಿತ್ತು. ಆದಾಗ್ಯೂ ಮಾರುಕಟ್ಟೆಯಿಂದಾಗಿ ಅವರ ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಸ್ಥಾನಮಾನಗಳು ಉತ್ತಮಗೊಂಡವು. 1900ರ ಪೂರ್ವದ ದಿನಗಳಿಗೆ ಹೋಲಿಸಿದರೆ ಅಜಗಜಾಂತರ ವ್ಯತ್ಯಾಸವಿತ್ತು. ಆಗ ಜಾಟವರು ಸಣ್ಣಪುಟ್ಟ ಚಮ್ಮಾರರು, ಕೂಲಿಗಳಾಗಿದ್ದರು. ಈಗ ಅವರು ನಗರದ ಉದ್ಯೋಗಿಗಳಾಗಿದ್ದರು.

IX

ಮುಸ್ಲಿಮರಂತೆಯೇ ಪರಿಶಿಷ್ಟ ಜಾತಿಯವರೂ ಕಾಂಗ್ರೆಸ್ಸಿಗೆ ಪ್ರಮುಖವಾದ ಮತಬ್ಯಾಂಕ್ ಆದರು. ಕಾಂಗ್ರೆಸ್ಸಿನ ಪ್ರತಿಸ್ಪರ್ಧಿ ಪಕ್ಷಗಳಿಗಿಂತ ಮಹಾತ್ಮರ ಪಕ್ಷವೇ ಪರಿಶಿಷ್ಟ ಜಾತಿಯವರಿಗೂ ನಂಬಲರ್ಹವೆನಿಸಿತ್ತು. ಉದಾಹರಣೆಗೆ 1957ರ ಚುನಾವಣೆಯ ಫಲಿತಾಂಶ ಗಮನಿಸಬಹುದು. ಲೋಕಸಭೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾದ 76 ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷ 64 ಸ್ಥಾನಗಳನ್ನು ಗೆದ್ದಿತ್ತು. ರಾಜ್ಯ ವಿಧಾನಸಭೆಗಳ 469 ಮೀಸಲು ಸ್ಥಾನಗಳಲ್ಲಿ ಕಾಂಗ್ರೆಸ್ 361 ಸ್ಥಾನಗಳಲ್ಲಿ ಜಯಶಾಲಿಯಾಗಿತ್ತು.

ಪರಿಶಿಷ್ಟ ವರ್ಗಕ್ಕೆ ಮೀಸಲಿಡಲಾದ ಸ್ಥಾನಗಳನ್ನೂ ಲೆಕ್ಕಕ್ಕೆ ಹಿಡಿದಾಗ ಲೋಕಸಭೆಯ ಪ್ರತಿ ನಾಲ್ವರು ಸದಸ್ಯರಲ್ಲಿ ಒಬ್ಬರು ಹೆಚ್ಚಿನ ಸವಲತ್ತುಗಳಿಲ್ಲದ ಕೌಟುಂಬಿಕ ಹಿನ್ನೆಲೆಯಿಂದ ಬಂದವರಾಗಿದ್ದರು. ಆದಾಗ್ಯೂ ಜವಹರಲಾಲ್ ನೆಹರೂ ಸಂಪುಟ ಮೇಲ್‌ಜಾತಿಯವರಿಂದಲೇ ತುಂಬಿಹೋಗಿತ್ತು. ಇದರಿಂದ ಅವರಿಗೆ ಚಿಂತೆಯಾಗಿತ್ತು. ಅವರು ತಮ್ಮ ಸ್ನೇಹಿತರೊಬ್ಬರ ಬಳಿ ಈ ಚಿಂತೆಯನ್ನು ಹೀಗೆ ತೋಡಿಕೊಂಡಿದ್ದರು: "ನನ್ನ ದೊಡ್ಡ ಸಮಸ್ಯೆ ಎಂದರೆ ಸೂಕ್ತ ಬ್ರಾಹ್ಮಣೇತರರನ್ನು ಹೆಕ್ಕಿ ತೆಗೆಯುವುದು." ಸೂಕ್ತ ಬ್ರಾಹ್ಮಣೇತರರನ್ನು ಶಿಫಾರಸು ಮಾಡುವಂತೆ ನೆಹರೂ ಈ ಸ್ನೇಹಿತರನ್ನು ಕೇಳಿಕೊಂಡಿದ್ದರು. ಇದರ ಫಲವಾಗಿ ಬೆಳಕಿಗೆ ಬಂದವರು ಮದ್ರಾಸಿನ ಶ್ರೀಮತಿ ಚಂದ್ರಶೇಖರ್. ಈಕೆ ಪರಿಶಿಷ್ಟ ಜಾತಿಯ ವಿದ್ಯಾವಂತ ಮಹಿಳೆಯಾಗಿದ್ದು ಉಪಸಚಿವೆಯಾದರು.

ಕೇಂದ್ರ ಸಂಪುಟದಲ್ಲಿ ಉನ್ನತಸ್ಥಾನ ಪಡೆದವರೆಂದರೆ ಬಿಹಾರಿನ ಜಗಜೀವನ ರಾಮ್. ಚಮ್ಮಾರರ ಕುಟುಂಬದಲ್ಲಿ ಜನಿಸಿದ ಜಗಜೀವನರಾಮ್ ತಮ್ಮ ಗ್ರಾಮದಿಂದ ಹೈಸ್ಕೂಲು ಮೆಟ್ಟಿಲೇರಿದ ಮೊದಲಿಗರಾಗಿದ್ದರು. ಹಾಗೆಯೇ ಬನರಾಸ್ ಹಿಂದೂ ವಿಶ್ವವಿದ್ಯಾಲಯದ ಮೆಟ್ಟಿಲೇರಿ ಪದವೀಧರರಾದವರು. ಪದವಿ ಪಡೆದ ನಂತರ ಗಾಂಧಿ ಸತ್ಯಾಗ್ರಹಕ್ಕೆ ಸೇರಿಕೊಂಡರು. ಅವರು ಶ್ರದ್ಧೆ ದುಡಿಮೆಗಳಿಂದಾಗಿ 1947ರ ನಂತರ ಹಲವಾರು ಸಂಪುಟ ಸ್ಥಾನಗಳನ್ನು ಪಡೆದರು. ಕೇಂದ್ರ ಸಂಪುಟದಲ್ಲಿ ಜಗಜೀವನರಾಮ್ ಕಾರ್ಮಿಕ, ಸಂಪರ್ಕ, ಗಣಿ, ರೈಲ್ವೆ ಮೊದಲಾದ ಪ್ರಮುಖ ಖಾತೆಗಳನ್ನು ನಿರ್ವಹಿಸಿದ್ದರು. ಜಗಜೀವನರಾಂ ದಕ್ಷ ಆಡಳಿತಗಾರರೆಂದು ಹೆಸರುವಾಸಿಯಾಗಿದ್ದರು. ಆದರೆ ಗಾಂಧಿ ಸತ್ಯಾಗ್ರಹದ ಹಿನ್ನೆಲೆಯಲ್ಲಿ ನಿರೀಕ್ಷಿಸಲಾಗುವ ಸಂಪೂರ್ಣ ಸ್ವಚ್ಛವಾದ ಬದುಕು ಅವರಿಂದ ಸಾಧ್ಯವಾಗಿರಲಿಲ್ಲ. ಬಹುಶಃ ಅವರ ಕೌಟುಂಬಿಕ ಹಿನ್ನೆಲೆಯಲ್ಲಿ ಅವರದೇ ಶೈಲಿಯ ಬದುಕು ಅಳವಡಿಸಿಕೊಳ್ಳುವುದು ಅಗತ್ಯವಾಗಿತ್ತೇನೋ.

ಆದರೆ ದಿವ್ಯಶಕ್ತಿಯ ಪರಿಶಿಷ್ಟ ಜಾತಿ ನಾಯಕರು ಕಾಂಗ್ರೆಸ್ಸಿನ ಹೊರಗಿದ್ದರು. ಅವರು ಬಿ.ಆರ್. ಅಂಬೇಡ್ಕರ್. ಪಕ್ಷೇತರರಾಗಿ ಅಂಬೇಡ್ಕರ್ ನೆಹರೂ ಸಂಪುಟ ಸೇರಿದ್ದರು. 1951ರಲ್ಲಿ ಸಂಪುಟ ತೊರೆದು ತಮ್ಮ ಪರಿಶಿಷ್ಟ ಜಾತಿ ಒಕ್ಕೂಟವನ್ನು ಪುನರಾರಂಭಿಸಿದರು. 1952ರ ಚುನಾವಣೆಯಲ್ಲಿ ಅಂಬೇಡ್ಕರ್ ಪಕ್ಷ ದಯನೀಯ ಸೋಲನ್ನು ಅನುಭವಿಸಿತು. ನಂತರ ಅಂಬೇಡ್ಕರ್ ಅವರು ರಾಜ್ಯಸಭೆಗೆ ಆಯ್ಕೆ ಹೊಂದಿದರು. ಈ ವೇಳೆಗೆ ಹಿಂದೂ ಧರ್ಮದ ದೀರ್ಘಕಾಲೀನ ವಿರೋಧಿಯಾಗಿದ್ದ ಅಂಬೇಡ್ಕರ್ ಪೂರ್ವಿಕರ ಕಟ್ಟಿನಿಂದ ಹೊರಬರುವ ಮಾರ್ಗಗಳನ್ನು ಹುಡುಕಲಾರಂಭಿಸಿದ್ದರು. ಅವರು, ಸಿಖ್ ಧರ್ಮ ಸೇರಲು ಯೋಚಿಸಿದ್ದರು. ನಂತರ ಇಸ್ಲಾಂ, ನಂತರ ಕ್ರಿಶ್ಚಿಯನ್ ಧರ್ಮ ಸೇರುವ ಬಗ್ಗೆಯೂ ಆಲೋಚಿಸಿದ್ದರು. ಆಖೈರಾಗಿ ಅಂಬೇಡ್ಕರ್ ಬೌದ್ಧಧರ್ಮವನ್ನು ಸ್ವೀಕರಿಸಿದರು. ಭಾರತದ ನೆಲದಲ್ಲೇ ಹುಟ್ಟಿದ ಬೌದ್ಧ ಧರ್ಮ ಅಂಬೇಡ್ಕರ್ ಅವರ ವೈಚಾರಿಕ ಮನೋಭಾವಕ್ಕೆ, ಸಮಾನತೆಯ ಮನೋಧರ್ಮಕ್ಕೆ ಒಗ್ಗುವಂಥಾದ್ದಾಗಿತ್ತು.

ಕೇಂದ್ರ ಸಂಪುಟದಿಂದ ಹೊರಬಂದ ನಂತರ ಅಂಬೇಡ್ಕರ್ ಬುದ್ಧ ಹಾಗೂ ಬೌದ್ಧ ಧರ್ಮದ ಸಾಹಿತ್ಯದಲ್ಲಿ ಮುಳುಗಿಹೋದರು. ಅವರು ಮಹಾಬೋಧಿ ಸಂಘದ ಸದಸ್ಯರಾದರು. ಆಗ್ನೇಯ ಏಷ್ಯಾದ ಬೌದ್ಧ ಧರ್ಮೀಯ ರಾಷ್ಟ್ರಗಳಲ್ಲಿ ಪ್ರವಾಸ ಕೈಗೊಂಡರು. 1956ರ ಮೇ ತಿಂಗಳಲ್ಲಿ, ಮುಂಬಯಿಯಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಅಂಬೇಡ್ಕರ್ ಅವರು ತಾವು ವರ್ಷಾಂತ್ಯದೊಳಗೆ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವುದಾಗಿ ಪ್ರಕಟಿಸಿದರು. ಅವರ ಅಗಾಧ ಅಧ್ಯಯನದ ಫಲವಾದ "ದಿ ಬುದ್ಧ ಅಂಡ್ ಹಿಸ್ ಧರ್ಮ" ಗ್ರಂಥ ಪ್ರಕಟಣೆಯ ಕೊನೆಯ ಹಂತದಲ್ಲಿತ್ತು. ಮತಾಂತರ ಸಮಾರಂಭವನ್ನು ಮುಂಬಯಿಯಲ್ಲಿ ನಡೆಸುವುದೋ ಪ್ರಾಚೀನ ಬೌದ್ಧ ಕೇಂದ್ರವಾದ ಸಾರಾನಾಥದಲ್ಲೋ ಎಂದು ಅಂಬೇಡ್ಕರ್ ಯೋಚಿಸಿದ್ದರು. ಮುಂಬಯಿಯಲ್ಲಿ ಆದರೆ ಅಪಾರ ಪ್ರಚಾರ ಸಿಗುತ್ತಿತ್ತು. ಆದರೆ ಆಖೈರಾಗಿ ನಾಗಪುರವನ್ನು ಆಯ್ಕೆ ಮಾಡಿಕೊಂಡರು. ನಾಗಪುರ ಭಾರತದ ಮಧ್ಯಭಾಗದಲ್ಲಿದ್ದು ಇಲ್ಲಿ ಅಂಬೇಡ್ಕರ್ ಅಪಾರವಾದ ಶಿಷ್ಯ ವರ್ಗವನ್ನು ಹೊಂದಿದ್ದರು. 1956ರ ಅಕ್ಟೋಬರ್ 15ರಂದು ನಾಗಪುರದಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಅಂಬೇಡ್ಕರ್ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು. ಅವರ ಜೊತೆ ಹಲವಾರು ಮಂದಿ ಅನುಯಾಯಿಗಳು ಬೌದ್ಧಧರ್ಮ ಸ್ವೀಕರಿಸಿದರು. ಆರು ವಾರಗಳ ನಂತರ ಅಂಬೇಡ್ಕರ್ ಹಠಾತ್ತನೆ ಮರಣ ಹೊಂದಿದರು. ಮುಂಬಯಿಯಲ್ಲಿ ಅಂಬೇಡ್ಕರ್ ಅವರ ಪಾರ್ಥಿವ ಶರೀರವನ್ನು ಸಮಾಧಿ ಮಾಡಲಾಯಿತು. ಸಮಾಧಿಯ ಶಿರೋಭಾಗದಲ್ಲಿ ಬುದ್ಧನ ಪ್ರತಿಮೆಯೊಂದನ್ನು ಪ್ರತಿಷ್ಠಾಪಿಸಲಾಯಿತು. ಹತ್ತು ಲಕ್ಷ ಮಂದಿ ಅಂಬೇಡ್ಕರ್ ಅಂತಿಮಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಮರಣಕಾಲಕ್ಕೆ ಸ್ವಲ್ಪ ಮುಂಚೆ ಅಂಬೇಡ್ಕರ್ ಅವರು ಹೊಸ ಪಕ್ಷವೊಂದನ್ನು–ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಆರಂಭಿಸಲು ನಿರ್ಧರಿಸಿದ್ದರು. ರಿಪಬ್ಲಿಕನ್ ಪಕ್ಷ 1957ರಲ್ಲಿ ವಿಧ್ಯುಕ್ತವಾಗಿ ರಚನೆಯಾಯಿತು. ಈ ಪಕ್ಷದ ನಾಯಕರು ಮತ್ತು ಅನುಯಾಯಿಗಳು ಅಂಬೇಡ್ಕರರಂತೆ ಮಹಾರ್ ಜಾತಿಯವರಾಗಿದ್ದರು. ಮಹಾರ್ ಜಾತಿಯವರೇ ಹೆಚ್ಚು ಮಂದಿ ತಮ್ಮ ನಾಯಕನಂತೆ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದರು. ನಾಗಪುರ ಪ್ರದೇಶದ ಮಹಾರ್‌ಗಳಿಗೆ ಅಂಬೇಡ್ಕರ್ ಆರಾಧ್ಯ ದೈವವಾಗಿದ್ದರು. ಅವರು ಬದುಕಿದ್ದಾಗಲೇ ಮಹಾರ್ ಜನರು ಅಂಬೇಡ್ಕರ್ ಹುಟ್ಟುಹಬ್ಬವನ್ನು ತುಂಬ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಅವರ ಭಾವಚಿತ್ರದೊಂದಿಗೆ ಹಳ್ಳಿ-ನಗರ-ಪಟ್ಟಣಗಳಲ್ಲಿ ಮೆರವಣಿಗೆ ನಡೆಸುತ್ತಿದ್ದರು. ಅಂಬೇಡ್ಕರ್ ಪಟ್ಟಣಗಳಲ್ಲಿ ಪ್ರವಾಸ ಕೈಗೊಂಡಾಗ ಕಾರ್ಮಿಕರು ಅವರ ಭಾಷಣ ಕೇಳಲು ಸಾವಿರಾರು ಸಂಖ್ಯೆಯಲ್ಲಿ ಹಾಜರಾಗುತ್ತಿದ್ದರು. ಮಹಿಳೆಯರು ಅವರ ಸಭೆಗಳಿಗೆ ಮದುವೆಯ ದಿಬ್ಬಣದಂತೆ ಹೋಗುತ್ತಿದ್ದರು. ಹೆಂಗಸರು ಅಂಬೇಡ್ಕರ್ ಅವರ ಸ್ತುತಿಗೀತೆಗಳನ್ನು ಹಾಡುತ್ತಿದ್ದರು.

ಬಡವರ ಮೇಲೆ ಭೀಮ ಕುಡಿನೋಟ
ಬೀರಿದ ಮುಹೂರ್ತದಿಂದಲೇ
ನಮ್ಮ ಬಲ ಬೆಳೆಯಿತು

ಎನ್ನುವುದು ಸ್ತುತಿಗೀತೆಯೊಂದರ ಪಲ್ಲವಿಯಾಗಿತ್ತು.

ಆದರೆ ಮಹಾರ್‌ಗಳು ಮಾತ್ರವಷ್ಟೇ ಅಲ್ಲದೆ ಬೇರೆಡೆಗಳಲ್ಲೂ ಅಂಬೇಡ್ಕರ್ ಬಗ್ಗೆ ಅಪಾರವಾದ ಗೌರವವಿತ್ತು. ಉತ್ತರ ಭಾರತದಲ್ಲಿ ಅಂಬೇಡ್ಕರ್ ಅವರ ಘನ ಪಾಂಡಿತ್ಯವನ್ನು ಜನ ಮೆಚ್ಚಿಕೊಂಡಿದ್ದರು. ಅಂಬೇಡ್ಕರ್ ಕೊಲಂಬಿಯಾ ಮತ್ತು ಲಂಡನ್ ವಿಶ್ವವಿದ್ಯಾನಿಲಯಗಳ ಡಾಕ್ಟರೇಟ್ ಪದವಿಗಳಿಸಿದ್ದರು. ಅಲ್ಲದೆ ಭಾರತದ ಸಂವಿಧಾನ ಶಿಲ್ಪಿಯೆಂದು ಜನ ಅವರ ಬಗ್ಗೆ ಗೌರವಾದರಗಳನ್ನು ಹೊಂದಿದ್ದರು. ಅವರ ರಾಜಕೀಯ ಸಾಧನೆಗಳನ್ನು ಮೆಚ್ಚಿಕೊಂಡಿದ್ದರು. ಪರಿಶಿಷ್ಟ ಜಾತಿಯಲ್ಲಂತೂ ಹೈಸ್ಕೂಲು ಕಾಲೇಜು ಮೆಟ್ಟಿಲು ಹತ್ತಿದವರಿಗೆ, ಹಳ್ಳಿಗಳಿಂದ ಹೊರಬಂದವರಿಗೆ ಅಂಬೇಡ್ಕರ್ ಒಂದು ಆದರ್ಶ ಮೂರ್ತಿಯಾಗಿದ್ದರು. ಮೇಲ್ಜಾತಿಯ ಕೋಟೆ ಕೊತ್ತಲ ಭಗ್ನಗೊಳಿಸಿದ ಅಂಬೇಡ್ಕರ್ ತಮ್ಮ ಅನುಯಾಯಿಗಳಿಗೆ ಈ ನಿಟ್ಟಿನಲ್ಲಿ ಉತ್ತೇಜಕ ಶಕ್ತಿಯಾಗಿದ್ದರು, ಪ್ರೇರಕ ಶಕ್ತಿಯಾಗಿದ್ದರು.

ಅಂಬೇಡ್ಕರ್ ತಮ್ಮ ಅನುಯಾಯಿಗಳಿಗೆ ನೀಡಿದ ಘೋಷಣೆ: "ಸುಶಿಕ್ಷಿತರಾಗಿ, ಸತ್ಯಾಗ್ರಹಿಗಳಾಗಿ, ಸಂಘಟಿತರಾಗಿ". ಅಂಬೇಡ್ಕರ್ ಜನತಾ ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದರು. ಈ ಸಂಸ್ಥೆ ಶಾಲೆ-ಕಾಲೇಜುಗಳನ್ನು ನಡೆಸುತ್ತಿತ್ತು. ಈ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಪಡೆದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಅಂಬೇಡ್ಕರ್ ಅವರನ್ನು ಆಪ್ತ ಮಾರ್ಗದರ್ಶಿಯೆಂದೇ ಭಾವಿಸುತ್ತಿದ್ದರು. ಪರಿಶಿಷ್ಟ ಜಾತಿಯ ಬುದ್ಧಿವಂತರಿಗಂತೂ ಅಂಬೇಡ್ಕರ್ ಸಾಹಿತ್ಯ ಓದುವುದು ಕಡ್ಡಾಯವಾಯಿತು. ಅಂಬೇಡ್ಕರ್ ಪುಸ್ತಕಗಳು, ಕರಪತ್ರಗಳು ಪರಿಶಿಷ್ಟ ಜಾತಿಯ ಸ್ನೇಹಿತರ ಮಧ್ಯೆ ಕೈಯ್ಯಿಂದ ಕೈಗೆ ಹಸ್ತಾಂತರವಾಗುತ್ತಿದ್ದವು. ಸರ್ಕಾರದ ವಿದ್ಯಾರ್ಥಿ ವೇತನ ಪಡೆದು ಮುಂಬಯಿಯ ಸಿದ್ಧಾರ್ಥ ಕಾಲೇಜು ಸೇರಿದ ಹಡಗು ಕಟ್ಟೆಯ ನೌಕರನೊಬ್ಬನ ಮಗ ನಿಯತಕಾಲಿಕಗಳಿಗೆ ಲೇಖನಗಳನ್ನು ಬರೆಯಲಾರಂಭಿಸಿದ, ಚರ್ಚಾಗೋಷ್ಠಿಗಳಲ್ಲಿ ಪಾಲ್ಗೊಳ್ಳಲಾರಂಭಿಸಿದ. ಇವನ ಲೇಖನದ ಚರ್ಚೆಯ ವಿಷಯ "ಅಂಬೇಡ್ಕರ್ ಮತ್ತು ಅವರ ದಲಿತ ಚಳವಳಿ" ಆಗಿರುತ್ತಿತ್ತು.

ಅಂಬೇಡ್ಕರ್ ಅವರ ಸಾನ್ನಿಧ್ಯ, ಅವರ ಮಹತ್ವ, ಪರಿಶಿಷ್ಟ ಜಾತಿ ಮತ್ತು ಅಲ್ಪ ಸಂಖ್ಯಾತರ ನಡುವಣ ಅಗಾಧವಾದ ಅಂತರವನ್ನು ಪ್ರಮುಖವಾಗಿ ತೋರಿಸುತ್ತದೆ. ಪರಿಶಿಷ್ಟ ಜಾತಿ ಮತ್ತು ಅಲ್ಪ ಸಂಖ್ಯಾತರ ನಡುವೆ ಹೋಲಿಕೆ ಮಾಡಲು ನಾನು ಈ ಮೊದಲು ಪ್ರಯತ್ನಿಸಿರುವುದು ಸರಿಯಷ್ಟೆ. ಮುಸ್ಲಿಮರಿಗೆ ಲೋಕಸಭೆ, ವಿಧಾನಸಭೆಗಳಲ್ಲಿ, ಸಚಿವಾಲಯಗಳಲ್ಲಿ ಮೀಸಲಾತಿ ಸೌಲಭ್ಯ ಇಲ್ಲ. ಅಥವಾ ಸ್ವತಂತ್ರ ಭಾರತದಲ್ಲಿ ಮುಸ್ಲಿಂ ಸಮುದಾಯಕ್ಕೆ ಅಂಬೇಡ್ಕರ್ ಅವರಂಥ ವರ್ಚಸ್ಸಿನ ಪ್ರಭಾವಿ ನಾಯಕತ್ವ ಇಲ್ಲ. ಅವರಲ್ಲಿ ಸಂಚಲನಕ್ಕೆ ಸ್ಫೂರ್ತಿದಾಯಕವಾಗುವಂಥ ನಾಯಕತ್ವ ಇಲ್ಲ. ಅಂಬೇಡ್ಕರ್ ಬದುಕಿದ್ದಾಗಲೂ

ಸ್ಫೂರ್ತಿದಾತರು, ಮರಣಾ ನಂತರದ ದಶಕಗಳ ನಂತರ ಈಗಲೂ ಸ್ಫೂರ್ತಿದಾಯಕ ನೇತಾರರು.

X

1949ರ ಮಾರ್ಚಿ ತಿಂಗಳಿನಲ್ಲಿ ದೆಹಲಿ ಸುತ್ತಮುತ್ತಣ ಹಳ್ಳಿಗಳ ಪರಿಶಿಷ್ಟ ಜಾತಿಯ ಸದಸ್ಯರ ತಂಡವೊಂದು ದೆಹಲಿಯಲ್ಲಿ ಮಹಾತ್ಮಾಗಾಂಧಿ ಸ್ಮಾರಕಕ್ಕೆ ಭೇಟಿ ನೀಡಿತು. ಇವರೆಲ್ಲರೂ ಜಾಟ್ ಜಮೀನ್ದಾರರಿಂದ ತಮ್ಮ ನೆಲೆಗಳಿಂದ ಹೊರದೂಡಲ್ಪಟ್ಟವರಾಗಿದ್ದರು. ಹಿಂದೊಮ್ಮೆ ಜೀತದಾಳುಗಳಾಗಿದ್ದ ಇವರಿಗೆ ಈಗ ಸ್ಥಳೀಯ ಚುನಾವಣೆಗಳಲ್ಲಿ ಸ್ಪರ್ಧಿಸುವಷ್ಟು ಹಾಗೂ ಹಳ್ಳಿಯ ಗೋಮಾಳದಲ್ಲಿ ದನ ಮೇಯಿಸುವಷ್ಟು ಧೈರ್ಯ ಬಂದಿದೆ ಎಂಬುದೇ ಜಮೀನ್ದಾರರ ಕೋಪವಾಗಿತ್ತು. ದೆಹಲಿ ನಗರದ ಹೃದಯ ಭಾಗದಲ್ಲೇ ನಿರ್ವಸತಿಗರಾದ ಈ ಬಹಿಷ್ಕೃತರು ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. ರಾಷ್ಟ್ರಪಿತನ ಸ್ಮಾರಕ ಸ್ಥಳದಲ್ಲೇ ಅವನೇ ಹಾಕಿಕೊಟ್ಟ ಪ್ರತಿಭಟನಾ ಮಾರ್ಗವನ್ನು ಇವರು ಅನುಸರಿಸಿದ್ದರು. ಈ ಬಹಿಷ್ಕೃತರ ಸತ್ಯಾಗ್ರಹ ಅನೇಕರ ಕಣ್ ಸೆಳೆಯಿತು. ಸ್ಮಾರಕಕ್ಕೆ ಬಂದು ಗೌರವ ಸಲ್ಲಿಸುತ್ತಿದ್ದ ಗಾಂಧಿ ಅನುಯಾಯಿಗಳು, ಕೇಂದ್ರ ಮಂತ್ರಿಮಂಡಲದ ಸದಸ್ಯರು ಇತ್ಯಾದಿ ಗಣ್ಯರ ಗಮನವನ್ನೂ ಸೆಳೆಯಿತು.

ಈಗ ಇನ್ನೊಂದು ಪ್ರಕರಣ ನೋಡೋಣ. ಇದು ನಗರ ಪ್ರದೇಶದ್ದು. ಲೋಕಸಭೆಗೆ ಹೊಸದಾಗಿ ಆಯ್ಕೆ ಹೊಂದಿದ್ದ ಪರಿಶಿಷ್ಟ ಜಾತಿಯ ಎಂ.ಪಿ. ಯೊಬ್ಬರು ತನ್ನ ಹುಟ್ಟೂರಾದ ಸಿತಾಪುರದಲ್ಲಿರುವ ಬಾರ್ ಅಸೋಸಿಯೇಷನ್‌ನ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ್ದರು. ನಾಲ್ಕು ತಿಂಗಳಾದರೂ ಇವರ ಅರ್ಜಿಯನ್ನು ಇತ್ಯರ್ಥ ಪಡಿಸದೇ ಬಾಕಿ ಉಳಿಸಲಾಗಿತ್ತು. ಅನಂತರ ಸದಸ್ಯತ್ವ ನೀಡಲಾಗುವುದೆಂದೂ ಆದರೆ ಆತ ಕೈತೊಳೆಯುವ ಕೋಣೆಯನ್ನು ಬಳಸುವಂತಿಲ್ಲವೆಂದೂ ಮುಸ್ಲಿಂ ಸೇವಕ ಮಾತ್ರ ಆತನ ಸೇವಾ ಉಪಚಾರಗಳನ್ನು ನೋಡಿಕೊಳ್ಳುವನೆಂದೂ ಈ ಅರ್ಜಿದಾರ ಎಂ.ಪಿ.ಗೆ ತಿಳಿಸಲಾಯಿತು. ಎಂ.ಪಿ. ಇದನ್ನು ಪ್ರಧಾನಮಂತ್ರಿಯವರ ಗಮನಕ್ಕೆ ತಂದರು. ಪ್ರಧಾನಮಂತ್ರಿಯವರು ಮಧ್ಯ ಪ್ರವೇಶಿಸಿ ಯಾವುದೇ ಪೂರ್ವ ಶರತ್ತುಗಳಿಲ್ಲದೆ ಸದಸ್ಯತ್ವ ನೀಡುವಂತೆ ಆದೇಶಿಸಿದರು.

ಆದರೆ ರಾಷ್ಟ್ರದ ಉಳಿದೆಡೆ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದ ಪರಿಶಿಷ್ಟ ಜಾತಿಯವರು ಈ ಎಂ.ಪಿ. ಯಷ್ಟೇ ಅದೃಷ್ಟವಂತರಾಗಿರಲಿಲ್ಲ. ಸ್ವತಂತ್ರ ಭಾರತದಲ್ಲಿ ಪರಿಶಿಷ್ಟ ಜಾತಿಯ ಜನರ ಮೇಲೆ ನಡೆಸಲಾಗುತ್ತಿರುವ ಅತ್ಯಾಚಾರಗಳ ನೂರಾರು ಉದಾಹರಣೆಗಳನ್ನು ಸಮಾಜಶಾಸ್ತ್ರಜ್ಞರಾದ ಎನ್.ಡಿ. ಕಾಂಬ್ಳೆಯವರು ಸಂಕಲಿಸಿದ್ದಾರೆ. ಕಾಂಬ್ಳೆಯವರ ಸಂಶೋಧನೆಯ ಕೆಲವು ದೃಷ್ಟಾಂತಗಳನ್ನು ಇಲ್ಲಿ ಕೊಡಲಾಗಿದೆ:

ಏಪ್ರಿಲ್ 1951: ಮುಂಬಯಿಯ ಮಾತುಂಗಾದಲ್ಲೊಂದು ಕಾರ್ಮಿಕರ ಶಿಬಿರ. ಕಾರ್ಖಾನೆಯ ಕಾರ್ಮಿಕರ ತಂಡವೊಂದು ಅಂಬೇಡ್ಕರ್ ಜಯಂತಿ ಬಗ್ಗೆ ಒಂದು

ನಾಟಕ ಪ್ರದರ್ಶಿಸುತ್ತಾರೆ. ಮೇಲ್ಜಾತಿಯ ಯುವಕರು ಈ ನಾಟಕಕ್ಕೆ ಭಂಗ ತಂದು, ಪ್ರದರ್ಶನದ ಮೇಲೆ ಮುಗಿಬಿದ್ದು ನಟನಟಿಯರ ಮೇಲೆ ಹಲ್ಲೆ ನಡೆಸಿದ್ದಾರೆ ಮತ್ತು ವೇದಿಕೆಗೆ ಹಾನಿಯುಂಟು ಮಾಡಿದ್ದಾರೆ.

ಜೂನ್ 1951: ಹಿಮಾಚಲ ಪ್ರದೇಶದ ಒಂದು ಹಳ್ಳಿ. ಪರಿಶಿಷ್ಟ ಜಾತಿಯವರ ಸಮ್ಮೇಳನವೊಂದರ ಮೇಲೆ ರಜಪೂತ ಜಮೀನ್ದಾರರು ಹಲ್ಲೆ ನಡೆಸಿದ್ದಾರೆ. ಪರಿಶಿಷ್ಟ ಜಾತಿಯವರನ್ನು ದೊಣ್ಣೆಗಳಿಂದ ಹೊಡೆದು, ಅವರ ನಾಯಕರುಗಳನ್ನು ಹಗ್ಗಗಳಿಂದ ಕಟ್ಟಿ ದನದ ದೊಡ್ಡಿಗೆ ದೂಡಲಾಗಿದೆ.

ಜುಲೈ 1951: ಮುಂಬಯಿ ರಾಜ್ಯದ ಜಲಗಾಂವ್ ಜಿಲ್ಲೆಯ ಒಂದು ಹಳ್ಳಿಯ ಪಾಠಶಾಲೆ. ಸಂಸತ್ತಿನಲ್ಲಿ ಹಿಂದೂ ಸಂಹಿತೆ ಮಸೂದೆ ಮಂಡಿಸಿದ್ದಕ್ಕಾಗಿ ಬ್ರಾಹ್ಮಣ ಶಿಕ್ಷಕ ಅಂಬೇಡ್ಕರ್ ಅವರನ್ನು ನಿಂದಿಸುತ್ತಾನೆ. ಇದಕ್ಕೆ ಪರಿಶಿಷ್ಟ ಜಾತಿ ಬಾಲಕನೊಬ್ಬ ಪ್ರತಿಭಟಿಸುತ್ತಾನೆ. ಈ ಬಾಲಕನನ್ನು ಹೊಡೆದು ಶಾಲೆಯಿಂದ ವಜಾ ಮಾಡಲಾಯಿತು.

ಜೂನ್ 1952: ಮದ್ರಾಸ್ ರಾಜ್ಯದ ಮಧುರೆ ಜಿಲ್ಲೆಯ ಒಂದು ಗ್ರಾಮ. ಪರಿಶಿಷ್ಟ ಜಾತಿಯ ಯುವಕನೊಬ್ಬ ಸ್ಥಳೀಯ ಹೋಟೆಲಿಗೆ ಹೋಗಿ ಗಾಜಿನ ಲೋಟದಲ್ಲಿ ಚಹಾ ಕೊಡುವಂತೆ ಕೇಳುತ್ತಾನೆ. ಸಂಪ್ರದಾಯದ ಪ್ರಕಾರ ಪರಿಶಿಷ್ಟ ಜಾತಿಯವರಿಗೆ ಬಿಸಾಡಲಿಟ್ಟಿರುವ ತೆಂಗಿನ ಕರಟದಲ್ಲಿ ಚಹ ಕೊಡಬೇಕು. ಆದರೆ ಯುವಕ ತನಗೆ ಗಾಜಿನ ಲೋಟದಲ್ಲೆ ಚಹಾ ನೀಡುವಂತೆ ಪಟ್ಟು ಹಿಡಿದಾಗ ಹಿಂದೂಗಳು ಅವನನ್ನು ಒದ್ದು, ತಲೆಗೆ ಹೊಡೆದು ಹೊರಕ್ಕೆ ತಳ್ಳಿದ್ದರು.

ಜೂನ್ 1957: ಮಧ್ಯಭಾರತದ ಪರಬಣಿ ಜಿಲ್ಲೆಯ ಒಂದು ಗ್ರಾಮ. ಹೊಸದಾಗಿ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದವರು ಸತ್ತ ದನಕರುಗಳ ತೊಗಲು ಸುಲಿಯಲು ನಿರಾಕರಿಸಿದರು. ಹಿಂದೂಗಳು ಇವರಿಗೆ ಬಹಿಷ್ಕಾರ ಹಾಕಿದರು. ಕೆಲಸ ಕೊಡಲಿಲ್ಲ. ದೈಹಿಕ ಪ್ರತೀಕಾರದ ಬೆದರಿಕೆ ಹಾಕಿದರು.

ಮೇ 1959: ಮುಂಬಯಿ ರಾಜ್ಯದ ಅಹಮದ್‌ನಗರ ಜಿಲ್ಲೆಯ ಒಂದು ಹಳ್ಳಿ. ಬೌದ್ಧ ಧರ್ಮೀಯರ ವಿವಾಹದ ಮೆರವಣಿಗೆಯೊಂದಕ್ಕೆ ಗ್ರಾಮದೊಳಗೆ ಗ್ರಾಮ ಹೆಬ್ಬಾಗಿಲಿನಿಂದ ಪ್ರವೇಶಿಸಲು ಅನುಮತಿ ನಿರಾಕರಿಸಲಾಯಿತು. ಬೌದ್ಧ ಧರ್ಮೀಯ ಮದುವೆಯ ದಿಬ್ಬಣ ಹೆಬ್ಬಾಗಿಲಿನಿಂದಲೇ ಗ್ರಾಮ ಪ್ರವೇಶಿಸಲು ಪ್ರಯತ್ನಿಸಿದಾಗ ಅವರ ಮೇಲೆ ದೊಣ್ಣೆ, ಕಲ್ಲುಗಳಿಂದ ಹಲ್ಲೆ ನಡೆಸಲಾಯಿತು.

ಅಕ್ಟೋಬರ್ 1960: ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಒಂದು ಹಳ್ಳಿ. ಸವರ್ಣೀಯ ಹಿಂದೂಗಳು ಪರಿಶಿಷ್ಟ ಜಾತಿಯ ಕೊಪ್ಪಲು ಒಂದಕ್ಕೆ ನುಗ್ಗಿ ಅಲ್ಲಿದ್ದ ಬುದ್ಧನ ವಿಗ್ರಹವನ್ನು ಒಡೆದು ಚೂರುಚೂರು ಮಾಡಿದರು.

ಈ ಕೆಲವು ಪ್ರಕರಣಗಳಷ್ಟೇ ಅಲ್ಲ. ಇಂಥವು ನೂರಾರು, ಸಾವಿರಾರು. ಇವೆಲ್ಲವೂ ಅಗಾಧವಾಗಿರುವ ಸಂಕ್ಷೋಭೆಯನ್ನು ಎತ್ತಿ ತೋರಿಸುತ್ತವೆ. ಭಾರತದ ಉದ್ದಗಲ ಪ್ರಜಾಸತ್ತಾತ್ಮಕ ರಾಜಕಾರಣದ ಗಾಳಿ ಬೀಸಲಾರಂಭಿಸಿದ ನಂತರ ಪರಿಶಿಷ್ಟ ಜಾತಿಯವರು ತಮ್ಮ ಹಕ್ಕೊತ್ತಾಯಕ್ಕೆ ಶುರು ಮಾಡಿದರು. ಶಾಲೆ ಕಾಲೇಜು, ಕಾರ್ಖಾನೆಗಳು, ಕಚೇರಿಗಳು ಮತ್ತು ಶಾಸನ ಸಭೆಗಳಲ್ಲಿನ ಮೀಸಲಾತಿಯಿಂದಾಗಿ, ಅಂಬೇಡ್ಕರ್ ಅವರ ಸ್ಫೂರ್ತಿಯಿಂದಾಗಿ ಪರಿಶಿಷ್ಟ ಜಾತಿಯವರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಂತಾಗಿತ್ತು. ಸಂವಿಧಾನದ ವಿಧಿಗಳು ಅವರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದ್ದವು. ಹೀಗಾಗಿ ಇದೆಲ್ಲದರಿಂದ ಉತ್ತೇಜಿತರಾದ ಪರಿಶಿಷ್ಟ ಜಾತಿಯವರು ಹಳೆಯ ಮರ್ಯಾದೆಯ-ಮಣಿಯುವ ಮಾರ್ಗ ಬಿಟ್ಟು ಉಲ್ಲಂಘನೆಯ ಒರಟು ಮಾರ್ಗವನ್ನು ಹಿಡಿದರು. ಇದು ಕೆಲವೊಮ್ಮೆ, ಸಮಾಜದಲ್ಲಿ ತಾವೇ ಉತ್ಕೃಷ್ಟರೆಂಬ ಮನೋಭಾವದವರನ್ನು ಕೆರಳಿಸುತ್ತಿತ್ತು. ಅವರು ಕೆಟ್ಟದಾಗಿ ಪ್ರತಿಕ್ರಿಯಿಸುತ್ತಿದ್ದರು.

XI

1925-26ರಲ್ಲಿ ಪ್ರಸಿದ್ಧ ಆಂಗ್ಲ ಲೇಖಕ ಆಲ್ಡಸ್ ಹಕ್ಸ್‌ಲೀ ಬ್ರಿಟಿಷ್ ಭಾರತ ಯಾತ್ರೆ ಕೈಗೊಂಡಿದ್ದ. ಅವನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾನ್ಪುರ ಅಧಿವೇಶನದಲ್ಲಿ ಭಾಗವಹಿಸಿ, ಸ್ವಾತಂತ್ರ್ಯಕ್ಕಾಗಿ ಆಗ್ರಹಪಡಿಸುವ ರೋಷಾವೇಶದ ಭಾಷಣಗಳನ್ನು ಕೇಳಿದ್ದ. ಭಾರತೀಯರ ಈ ಆಸೆ-ಆಕಾಂಕ್ಷೆಗಳ ಬಗ್ಗೆ ಹಕ್ಸ್‌ಲೀಗೆ ಸಹಾನುಭೂತಿ ಇತ್ತು. ಆದರೆ ಇವರೆಲ್ಲ ಕೇವಲ ಮೇಲ್ಜಾತಿಯ ಹಿಂದೂಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಾರೆ ಎಂಬುದು ಅವನ ಚಿಂತೆಯಾಗಿತ್ತು. ಅವನು ತನ್ನ ಪ್ರವಾಸದ ಅನುಭವ ಕಥನದಲ್ಲಿ ಹೀಗೆ ಬರೆದಿದ್ದಾನೆ:

> *"ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆನ್ನುವುದು ಸಂಶಯಾತೀತವಾದದ್ದು. ಆದರೆ ಶುರುವಿನಲ್ಲಿ ಸಂಕಷ್ಟಕ್ಕೊಳಗಾಗುವವರು ಕೆಳಜಾತಿಯ ಜನಸಾಮಾನ್ಯರೇ. ಅಲ್ಲಿ, ಕೆಳಜಾತಿಯವರ ಮೇಲೆ ಮೇಲ್ಜಾತಿಯವರ ಉತ್ಕೃಷ್ಟತೆ ಮತ್ತು ಪ್ರಾಬಲ್ಯಗಳು ಧಾರ್ಮಿಕನಿರ್ದೇಶಿತ ಸಿದ್ಧಾಂತಗಳಾಗಿವೆ. ಆಡಳಿತ ನಡೆಸುವ ಕೆಲವೇ ಮಂದಿ ಹಲವಾರು ಜನರ ಹಕ್ಕುಗಳ ಬಗ್ಗೆ ಮುತುವರ್ಜಿ ವಹಿಸುತ್ತಾರೆಂದು ನಿರೀಕ್ಷಿಸಲಾಗದು. ಹಕ್ಕುಗಳ ಸೊಲ್ಲೂ ಸಂಪ್ರದಾಯ ನಡವಳಿಕೆಗೆ ವಿರುದ್ಧವಾದ ಅಭಿಪ್ರಾಯವಿದ್ದಂತೆ..."*

ಇದಾದ ಎರಡು ದಶಕಗಳ ನಂತರ ಭಾರತ ಸ್ವಾತಂತ್ರ್ಯ ಪಡೆಯಿತು. ಜಾತಿ-ಮತ-ಧರ್ಮ-ಲಿಂಗ ಈ ಯಾವ ಭೇದಗಳನ್ನೂ ಪರಿಗಣಿಸದೇ ಸಂವಿಧಾನ ಎಲ್ಲ ಪ್ರಜೆಗಳಿಗೂ ಸಮಾನ ಹಕ್ಕುಗಳನ್ನೂ ಕೊಟ್ಟಿತು. ಕೆಳಜಾತಿಯವರಿಗೆ, ಶತಶತಮಾನಗಳಿಂದ ಅನುಭವಿಸಿದ ನೋವಿಗೆ ಪರಿಹಾರದೋಪಾದಿಯಲ್ಲಿ ವಿಶೇಷ ಹಕ್ಕುಗಳನ್ನು ನೀಡಲಾಯಿತು. ಆದರೆ, ಸಂವಿಧಾನ ರಚನಾಸಭೆಯಲ್ಲಿ ಪರಿಶಿಷ್ಟ ಜಾತಿಯ ಸದಸ್ಯರೊಬ್ಬರು ಹೇಳಿದಂತೆ, ಸರ್ಕಾರದ

ಕಾನೂನಿನಲ್ಲಿರುವುದೇ ಒಂದು ಆದರೆ ವಾಸ್ತವಿಕ ಆಚರಣೆಯೇ ಬೇರೊಂದು. ಜಾತಿ ಪೂರ್ವಾಗ್ರಹಗಳ ಬಗ್ಗೆ ಸುಧಾರಕರುಗಳಿಂದ ವಿರೋಧ ವ್ಯಕ್ತವಾಗುತ್ತಲೇ ಬಂದಿದೆ. ಗೌತಮ ಬುದ್ಧನಿಂದ ಹಿಡಿದು ಮಹಾತ್ಮ ಗಾಂಧಿಯವರೆಗೆ ಶತಮಾನಗಳಿಂದ ಜಾತಿಯ ಪೂರ್ವಾಗ್ರಹಗಳ ಬಗ್ಗೆ ವಿರೋಧದ ಅಲೆ ಎದ್ದಿದೆ. ಆದಾಗ್ಯೂ ಅಸ್ಪೃಶ್ಯತೆಯಿಂದ ಭೂತದಿಂದ ಮುಕ್ತಿ ಪಡೆಯುವುದು ಇವರೆಲ್ಲರಿಗೂ ಅಸಾಧ್ಯವಾಗಿದೆ. ಹೀಗಿರುವಾಗ ಇನ್ನು ಕಾನೂನಿನ ಪರಿಣಾಮ ಏನಾದೀತು? ಎಂದು ಪ್ರಶ್ನಿಸಿದ ಸದಸ್ಯರು, ಅವರೇ ಉತ್ತರವನ್ನೂ ಒದಗಿಸಿದ್ದರು:

> *"ಕಾನೂನುಗಳಿಂದ, ಶಾಸನಗಳಿಂದ ಅಸ್ಪೃಶ್ಯತೆ ಒಂದು ಅಂಗುಲದಷ್ಟೂ ನಿವಾರಣೆಯಾಗಿಲ್ಲ. ಅಥವಾ ಅಸ್ಪೃಶ್ಯತೆಯ ಕಳಂಕ ಹೋಗಿಲ್ಲ. ಈ ಕಳಂಕ ಹೋಗಬೇಕಾದರೆ, ಭಾರತದಿಂದ ತೊಲಗಬೇಕಾದರೆ ಹಿಂದೂಗಳು ಬದಲಾಗಬೇಕು. ಅವರ ಹೃದಯ ಪರಿವರ್ತನೆಯಾಗಬೇಕು. ಸ್ವಾಮಿ, ಅಸ್ಪೃಶ್ಯತೆ ನಿರ್ನಾಮವಾಗುತ್ತದೆ ಎಂಬ ನಂಬಿಕೆ, ಭರವಸೆ ನನಗಿಲ್ಲ. ಈಗ ಹಿಂದೂಗಳಿಗೆ ಉಳಿದಿರುವ ಮಾರ್ಗವೆಂದರೆ ಅಸ್ಪೃಶ್ಯತೆಯನ್ನು ಯಾವ ರೀತಿ ಆಚರಿಸಬಾರದು ಎಂಬುದು..."*

ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯರ ಸ್ಥಾನ-ಮಾನಗಳ ಬಗ್ಗೆ, ಹಾಗೂ ಇನ್ನೊಂದು ದೊಡ್ಡ ಸಮುದಾಯವಾದ ಅಭದ್ರ ಮುಸ್ಲಿಮರ ಭವಿಷ್ಯದ ಬಗ್ಗೆ ನಿರಾಶೆಯುಂಟಾಗಿತ್ತು. ಆಶಾದಾಯಕ ಪರಿಸ್ಥಿತಿ ಇರಲಿಲ್ಲ. 1951ರಲ್ಲಿ ಭಾರತ-ಪಾಕಿಸ್ತಾನಗಳಲ್ಲಿ ಪ್ರವಾಸ ಮಾಡಿದ, ಇಸ್ಮಾಯಿಲಿ ಪಂಥದ ಪ್ರಭಾವಿ ನಾಯಕ ಆಘಾಖಾನ್ ಎರಡೂ ಗಡಿಗಳ ಮುಸ್ಲಿಮರಲ್ಲಿ ವಿಪರೀತವಾದ ಭಯ-ಭೀತಿಗಳು ಮನೆಮಾಡಿರುವುದನ್ನು ಕಂಡಿದ್ದರು. ವಿಶೇಷವಾಗಿ ಭಾರತದಲ್ಲಿ ಮುಸ್ಲಿಮರು ಭೀತಿಗ್ರಸ್ತರಾಗಿರುವರೆಂಬುದು ಅವನ ಗ್ರಹಿಕೆಯಾಗಿತ್ತು. ಆಘಾಖಾನ್ ನೆಹರೂಗೆ ಹೀಗೊಂದು ಪತ್ರ ಬರೆದಿದ್ದರು:

> *"ಮುಸ್ಲಿಮರಲ್ಲಿರುವ ಭಯಭೀತಿಗಳನ್ನು ನಿಮ್ಮೊಡನೆ ಹಂಚಿಕೊಳ್ಳಲಿಚ್ಛಿಸುತ್ತೇನೆ. ಐದು ಅಥವಾ ಹತ್ತು ವರ್ಷಗಳ ನಂತರ ಹಿಂದೂ ಮಹಾಸಭಾ ಸರ್ಕಾರ ಬರಬಹುದು, ಈಗಿನ ಪೂರ್ವ ಪಶ್ಚಿಮ ಪಾಕಿಸ್ತಾನಗಳನ್ನು ಒಂದುಗೂಡಿಸಿ ಅಖಂಡ ಭಾರತ ಅವರ ಗುರಿಯಾಗಬಹುದು, ಅವರ ವಿದೇಶಾಂಗ ನೀತಿಯಾಗಬಹುದು, ಅವರ ಪರಮೋಚ್ಚ ರಾಜಕಾರಣವಾಗಬಹುದು... ಇದು ಮುಸ್ಲಿಮರ ಮನದಲ್ಲಡಗಿರುವ ಭೀತಿ..."*

ಹಿಂದೂ ಕಟ್ಟಾಭಿಮಾನಿಯಾದ ಈ ಪಕ್ಷ ಅಧಿಕಾರಕ್ಕೆ ಬಂದರೆ, ಪರಮಾಣು ಸ್ಫೋಟದಿಂದ, ಕಾಶ್ಮೀರದ ಮೂಲಕ ಪಾಕಿಸ್ತಾನಕ್ಕೆ ಹರಿಯುತ್ತಿರುವ ನದಿಗಳ ದಿಕ್ಕುಗಳನ್ನೂ ಬದಲಾಯಿಸಬಹುದೆಂಬುದು ಈ ಮುಸ್ಲಿಂ ನಾಯಕರ ಆತಂಕವಾಗಿತ್ತು. ಇಂಥ ಕ್ರಮ ಜರುಗಿದಲ್ಲಿ ಪಾಕಿಸ್ತಾನ ಮಂಡಿಯೂರಿ ಕುಳಿತುಕೊಳ್ಳಬೇಕಾದಂಥ ಪರಿಸ್ಥಿತಿ ಉದ್ಭವಿಸಬಹುದು

ಎಂದು ಊಹಿಸಿದ್ದ ಆಘಾಖಾನ್ ಅರಬ್ ಪ್ರಪಂಚದ ಸಾಮ್ಯತೆಯನ್ನೂ ನೀಡಿದ್ದರು. ಅರಬ್ ಪ್ರಪಂಚದಲ್ಲಿ, ಸೂಡಾನ್, ನೈಲ್ ನದಿ ಈಜಿಪ್ಟಿಗೆ ಹರಿಯದಂತೆ ಅದರ ದಿಕ್ಕು ತಪ್ಪಿಸುವ ಸಿದ್ಧತೆ ನಡೆಸಿದೆ. ಮುಸ್ಲಿಂ ಈಜಿಪ್ಟಿಗೆ ಕ್ರಿಶ್ಚಿಯನ್ ಸೂಡಾನ್ ಹೇಗೋ ಹಾಗೆ ಹಿಂದೂ ಭಾರತ ಮುಸ್ಲಿಂ ಪಾಕಿಸ್ತಾನಕ್ಕೆ ಗಂಡಾಂತರಕಾರಿಯಾಗಬಹುದು ಎನ್ನುವುದು ಆಘಾಖಾನರ ಅಭಿಪ್ರಾಯವಾಗಿತ್ತು. "ನನ್ನ ಅನುಭವಕ್ಕೆ ಬಂದಂತೆ, ನನ್ನ ಭಾವನೆಯಂತೆ ಈ ನೀರಿನ ಪ್ರಶ್ನೆಯಿಂದಾಗಿಯೇ ಮುಸ್ಲಿಮರಲ್ಲಿ ಸರ್ವನಾಶದ ಭೀತಿಯ ವಾತಾವರಣ ತಲೆದೋರಿದೆ... ಈಜಿಪ್ಟಿನಲ್ಲಿ ತಲೆದೋರಿರುವ ಇದೇ ರೀತಿಯ ಭೀತಿಯ ಪ್ರತಿಕೃತಿ".

ಆಘಾಖಾನರ ಪತ್ರ ಮೂರು ಕಾರಣಗಳಿಂದಾಗಿ ಗಮನಾರ್ಹವೆನ್ನಿಸುತ್ತದೆ. ಒಂದು: ವಿಶ್ವದಾದ್ಯಂತ ಮುಸ್ಲಿಮರಿಗೆ ಕಿರುಕುಳ ಕೊಡಲಾಗುತ್ತಿದೆ ಎಂಬುದಕ್ಕೆ ಇತ್ತೀಚಿನ ನಿದರ್ಶನ ಇದು. ಎರಡು: ಭಾರತೀಯ ಮುಸ್ಲಿಮರು ಮತ್ತು ಪಾಕಿಸ್ತಾನದ ಕಲ್ಯಾಣ ಮತ್ತು ಹಿತಾಸಕ್ತಿಗಳನ್ನು ಸಮೀಕರಿಸುವುದು ಸುಲಭ. ಆಖೈರಾಗಿ, ಭಾರತ ಗಣರಾಜ್ಯ, ಇನ್ನು ಹತ್ತು ವರ್ಷಗಳೊಳಗೆ ಹಿಂದೂ ರಾಷ್ಟ್ರವಾಗಿಬಿಡುತ್ತದೆ ಎನ್ನುವ ಭವಿಷ್ಯ ನುಡಿದಿರುವುದಕ್ಕಾಗಿ.

ಆಘಾಖಾನ್ ಮತ್ತು ಆಲ್ಡಸ್ ಹಕ್ಸ್‌ಲೀ ಈ ಇಬ್ಬರು ಮಹನೀಯರುಗಳು ವ್ಯಕ್ತಪಡಿಸಿರುವ ಸಂದೇಹಗಳಲ್ಲಿ ಸರಿ-ತಪ್ಪುಗಳೆರಡೂ ಇವೆ. ಸಾಮಾಜಿಕ ಪೂರ್ವಗ್ರಹಗಳು, ಪೂರ್ವಕಲ್ಪನೆಗಳು ಮುಂದುವರಿದಿವೆ ಎಂಬುದು ಸರಿ. ವರಿಷ್ಠ ರಾಜಕೀಯ ನಾಯಕತ್ವದ ಉದ್ದೇಶಗಳನ್ನು ಕುರಿತ ಸಂದೇಹ ತಪ್ಪು. ಏಕೆಂದರೆ ಆಡಳಿತ ನಡೆಸಿದ ಕೆಲವರು ಅನೇಕ ಮಂದಿಯ ಹಕ್ಕುಗಳ ಬಗ್ಗೆ ತುಂಬಾ ಕಾಳಜಿ ವಹಿಸಿದ್ದರು. 1959ರಲ್ಲಿ, ಅಂದರೆ ಸ್ವಾತಂತ್ರ್ಯ ಬಂದ ಒಂದು ದಶಕದ ನಂತರ, ನೆಹರೂ ಅವರ ಕಡುವಿರೋಧಿಯಾಗಿದ್ದ ಸಂಪಾದಕರೊಬ್ಬರು ತುಂಬಾ ಜುಲುಮೆಯಿಂದ ಎರಡು ಅಂಶಗಳನ್ನು ಮಾನ್ಯ ಮಾಡಿದ್ದಾರೆ. ಒಂದು: ಜಾತ್ಯತೀತ ರಾಷ್ಟ್ರದ ಸೃಷ್ಟಿ. ಎರಡು: ಅಸ್ಪೃಶ್ಯರಿಗೆ ಸಮಾನ ಹಕ್ಕುಗಳನ್ನು ನೀಡಿದ್ದು. ವಿಭಜನೆಯ ನಂತರ ಪ್ರತಿಗಾಮಿ ಶಕ್ತಿಗಳು ತಲೆ ಎತ್ತಿದ್ದನ್ನು ಪ್ರಸ್ತಾಪಿಸಿರುವ ಈ ಸಂಪಾದಕರು, "ನೆಹರೂ ಅವರು ಸ್ವಲ್ಪ ದೌರ್ಬಲ್ಯ ವ್ಯಕ್ತಪಡಿಸಿದ್ದರೂ ಈ ಶಕ್ತಿಗಳು ಈ ರಾಷ್ಟ್ರವನ್ನು ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸಿಬಿಡುತ್ತಿದ್ದವು, ಹಿಂದೂ ರಾಷ್ಟ್ರದಲ್ಲಿ ಅಲ್ಪಸಂಖ್ಯಾತರು ಯಾವುದೇ ಪ್ರಮಾಣದ ಸುರಕ್ಷತೆ-ಸುಭದ್ರತೆಗಳಿಲ್ಲದೆ ಬದುಕುವುದು ಸಾಧ್ಯವಾಗುತ್ತಿರಲಿಲ್ಲ" ಎಂದು ಬರೆದಿದ್ದಾರೆ. ಅಸ್ಪೃಶ್ಯರಿಗೆ, ಸಾರ್ವಜನಿಕ ಜೀವನದಲ್ಲಿ ಹಾಗೂ ಸರ್ಕಾರದ ಎಲ್ಲ ಕ್ರಮಗಳಲ್ಲಿ ಸಂಪೂರ್ಣ ಹಕ್ಕುಗಳನ್ನು ನೀಡಬೇಕು ಹಾಗೂ ಜಾತ್ಯತೀತ ಭಾರತದಲ್ಲಿ ಮನುಷ್ಯನ ಸಮಾನತೆಯನ್ನು ಎಳ್ಳಷ್ಟೂ ಕೊರತೆ ಬರದಂತೆ ಪಾಲಿಸಬೇಕೆಂದು ಬಿಗಿಪಟ್ಟು ಹಿಡಿದು ಸಮಾನತೆಯನ್ನು ತಂದುಕೊಟ್ಟ ಕೀರ್ತಿ ಆಚಂದ್ರಾರ್ಕವಾಗಿ ನೆಹರೂ ಅವರಿಗೆ ಸಲ್ಲಬೇಕು.

ಖಡಾಖಂಡಿತವಾಗಿ ಹೇಳುವುದಾದರೆ, ಸರ್ಕಾರದ ನೀತಿ ಮತ್ತು ಜನಸಮುದಾಯದಲ್ಲಿ ಅದರ ಪಾಲನೆ ನಡುವೆ ಜಾರುವಿಕೆ ಇತ್ತು. ಜಾತ್ಯತೀತತೆ ಮತ್ತು ಸಾಮಾಜಿಕ ಸಮಾನತೆಗಳನ್ನು ಪಾಲಿಸಿ, ಪೋಷಿಸುವ ಕಾನೂನುಗಳು ಶಾಸನಗ್ರಂಥಗಳಲ್ಲಿದ್ದವು. ಆದರೆ

ಬಹುತೇಕ ಮುಸ್ಲಿಮರು, ಬಹುತೇಕ ಪರಿಶಿಷ್ಟ ಜಾತಿಗಳವರು ಬಡವರಾಗಿಯೇ ಉಳಿದಿದ್ದರು. ಅವರುಗಳನ್ನು ಅಲ್ಪರೆಂದು ಕಡೆಗಣಿಸಲಾಗಿತ್ತು. ಹಿಂಸಾಚಾರದ ಬೆದರಿಕೆ ಎಂದೂ ದೂರವಾಗಿರಲಿಲ್ಲ. ಆದಾಗ್ಯೂ, ರಕ್ತಸಿಕ್ತಜನಿತ ರಾಷ್ಟ್ರದ ಹಿನ್ನೆಲೆ ಹಾಗೂ ಪಾಕಿಸ್ತಾನದ ಸತತ ಪ್ರಚೋದನೆಗಳ ಮಧ್ಯೆಯೂ ಭಾರತ ಸರ್ಕಾರ ರಾಷ್ಟ್ರವನ್ನು ಧರ್ಮದೊಂದಿಗೆ ಮಿಳಿತಗೊಳಿಸಲು ನಿರಾಕರಿಸಿದ್ದು ಸಣ್ಣ ವಿಷಯವೇನಲ್ಲ. ಸಾಮಾಜಿಕ ಸಂಸ್ಥೆಗಳ ಪುನಶ್ಚೇತನ ಹಾಗೂ ವಿಶೇಷವಾಗಿ ಪವಿತ್ರ–ಪಾವನವೆನಿಸಿದ ಸನಾತನ ಇತಿಹಾಸ ಇವುಗಳ ಮಧ್ಯೆಯಿದ್ದುಕೊಂಡೂ ಜಾತಿ ಪದ್ಧತಿಯಲ್ಲಿ ಸಾಧ್ಯವಾದಷ್ಟೂ ಬದಲಾವಣೆಗಳಾಗಿರುವುದು ಅಸಾಧಾರಣವಾದುದೇ ಸರಿ. ಅಸ್ಪೃಶ್ಯತೆ ನಿವಾರಣೆಯಲ್ಲಿ ಸಾಧಿಸಿರುವ ಪ್ರಗತಿ ಅಥವಾ ಎಲ್ಲ ಪ್ರಜೆಗಳಿಗೂ ಸಮಾನ ಹಕ್ಕುಗಳನ್ನು ಕಲ್ಪಿಸುವುದರಲ್ಲಿ ಆಗಿರುವ ಪ್ರಗತಿ ಏಕರೀತಿಯದಾಗಿಲ್ಲ. ಉತ್ಕಂಠಿತ ಸುಧಾರಣಾವಾದಿಗಳ ಮಾನದಂಡಗಳಿಂದ ನೋಡಿದರೆ ಪ್ರಗತಿ ತುಂಬ ನಿಧಾನವಾಗಿದೆ, ಆಮೆಗತಿಯಲ್ಲಿ ನಡೆದಿದೆ. ಆದರೂ ಭಾರತ ಸ್ವಾತಂತ್ರ್ಯ ಪಡೆದ ಮೊದಲ ಹದಿನೇಳು ವರ್ಷಗಳಲ್ಲಿ ಹಿಂದಿನ 1700 ವರ್ಷಗಳಿಗಿಂತ ಹೆಚ್ಚಿನ ಪ್ರಗತಿ ಆಗಿದೆ.

○

ಮುಂದಿನ ಸಂಪುಟದಲ್ಲಿ


- ಜನಪ್ರಿಯ ರಾಜಕೀಯ ಸಿದ್ಧಾಂತದ ಉಗಮ
- ಘಟನಾವಳಿಗಳ ಇತಿಹಾಸ
- ಭರತವಾಕ್ಯ: ಹೇಗುಳಿದಿದೆ ಭಾರತ



1. ಬ್ರಿಟಿಷ್ ಭಾರತದ ವಿಭಜನೆ : ಸಮಾಲೋಚನ ಸಭೆಯಲ್ಲಿ ಲಾರ್ಡ್ ಮೌಂಟ್‌ಬ್ಯಾಟನ್;
ಎಡ ತುದಿಯಲ್ಲಿ ಜವಹರಲಾಲ್ ನೆಹರೂ, ಬಲತುದಿಯಲ್ಲಿ ಮೊಹಮದ್ ಅಲಿ ಜಿನ್ನಾ–1947.

2. ನವದೆಹಲಿಯಲ್ಲಿ ಲಾರ್ಡ್ ಮತ್ತು ಲೇಡಿ ಮೌಂಟ್‌ಬ್ಯಾಟನ್ ಜೊತೆ
ಜವಹರಲಾಲ್ ನೆಹರೂ – 1947.





3. ಉಕ್ಕಿನ ಮನುಷ್ಯ ವಲ್ಲಭಭಾಯಿ ಪಟೇಲ್ (1875-1950): ರಾಜರ ಸಂಸ್ಥಾನಗಳ ವಿಲೀನವನ್ನು ಸಾಧಿಸಿದ ಚಾಣಾಕ್ಷರು, ಭಾರತೀಯ ಸಂವಿಧಾನದ ರಚನೆಯಲ್ಲಿ ಮಹತ್ವದ ಪಾತ್ರಧಾರಿ.



4. ಬಿ.ಆರ್. ಅಂಬೇಡ್ಕರ್ (1892-1956): ಕೆಳಜಾತಿ ವರ್ಗಗಳ ಚೈತನ್ಯದ ಚಿಲುಮೆ;
ಭಾರತೀಯ ಸಂವಿಧಾನದ ಕರಡು ರಚನಾ ಸಮಿತಿ ಅಧ್ಯಕ್ಷ.



5. ಗಾಂಧೀಜಿಯವರ ಅಂತಿಮಯಾತ್ರೆಯಲ್ಲಿ ಪಾಲ್ಗೊಳ್ಳಲು ಧಾವಿಸುತ್ತಿರುವ ಜನಸಾಮಾನ್ಯರು.
ಜನವರಿ 31, 1948.

6. ಗುಡಾರಗಳ ನಗರ : ದೆಹಲಿಯ ಕಿಂಗ್ಸ್‌ವೇ ಶಿಬಿರದಲ್ಲಿ ಪೂರ್ವ ಪಂಜಾಬಿನ ನಿರಾಶ್ರಿತರ ನೆಲೆ – 1948.





7. ಕಲ್ಕತ್ತೆಯಲ್ಲಿ ಬಂಗಾಳ ನಿರಾಶ್ರಿತರ ಪ್ರತಿಭಟನಾ ಮೆರವಣಿಗೆ – 1950.




8. ಪೊಟ್ಟಿ ಶ್ರೀರಾಮುಲು (1901–1952) : ಆಂಧ್ರ ಪ್ರದೇಶದಲ್ಲಿ ಭಾಷಾವಾರು ರಾಜ್ಯ ರಚನೆಗೆ ಆಗ್ರಹಪಡಿಸಿ ನಿರಶನ ಸತ್ಯಾಗ್ರಹ ಕೈಗೊಂಡ ಹುತಾತ್ಮ.

9. ಮಾಸ್ಟರ್ ತಾರಾಸಿಂಗ್
(1885–1967) :
ಧರ್ಮ ಬೋಧಕರು, ಸತ್ಯಾಗ್ರಹಿ;
ಪ್ರತ್ಯೇಕ ಸಿಖ್ ರಾಜ್ಯಕ್ಕಾಗಿ
ಸುದೀರ್ಘ ಹೋರಾಟ ನಡೆಸಿದವರು.



10. ಹಿಂದೂ ಸಂಹಿತೆಗಳ ಸುಧಾರಣೆ
ವಿವಾದ : ಖ್ಯಾತ ವ್ಯಂಗ್ಯಚಿತ್ರಕಾರ
ಆರ್.ಕೆ. ಲಕ್ಷ್ಮಣ್
ದೃಷ್ಟಿಯಲ್ಲಿ – 1949–1950.





11. ಎಂ.ಎಸ್. ಗೋಲ್ವಾಲ್ಕರ್ (1906-1973) ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಧಾನ ಸಂಚಾಲಕರು.



12. ಜವಹರಲಾಲ್ ನೆಹರೂ ಮತ್ತು ಶೇಖ್ ಅಬ್ದುಲ್ಲಾ – ಶ್ರೀನಗರ, 1949.

13. ಕೆಳಗಿನ ಚಿತ್ರ: ಶ್ರೀನಗರದಲ್ಲಿ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿರುವ ಜವಹರಲಾಲ್ ನೆಹರೂ; ಎಡಬದಿಯಲ್ಲಿ ಶೇಖ್ ಅಬ್ದುಲ್ಲಾ.





14. ರಾಷ್ಟ್ರದ ಮೊದಲ ಮಹಾಚುನಾವಣೆ : ನವದೆಹಲಿಯಲ್ಲಿ ಮತ ಚಲಾಯಿಸಲು ಸಾಲುಗಟ್ಟಿರುವ ಮತದಾರರು – ಫೆಬ್ರವರಿ, 1952.



15. 1952ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರಕಟಿಸಿದ ಚುನಾವಣಾ ಭಿತ್ತಿ ಪತ್ರ.



16. ದೆಹಲಿ ವಿಮಾನ ನಿಲ್ದಾಣದಲ್ಲಿ ಸೋವಿಯತ್ ನಾಯಕರಾದ ಎನ್.ಎ. ಬುಲ್ಗಾನಿನ್ ಮತ್ತು ಎನ್.ಎಸ್. ಕ್ರುಶ್ಚೇವ್ ಅವರನ್ನು ಸ್ವಾಗತಿಸುತ್ತಿರುವ ಜವಹರಲಾಲ್ ನೆಹರೂ – 1955.


17. ಜವಹರಲಾಲ್ ನೆಹರೂ ಮತ್ತು ಚೈನಾದ ಪ್ರಧಾನ ಮಂತ್ರಿ ಚಾ ಎನ್ ಲಾಯ್ – 1956.




18. ಧೀಮಂತ ಮುತ್ಸದ್ದಿ ಚಕ್ರವರ್ತಿ
ರಾಜಗೋಪಾಲಾಚಾರಿಯವರ ಜೊತೆ
ಜವಹರಲಾಲ್ ನೆಹರೂ – 1959.




19. ಜಯಪುರದ ಮಹಾರಾಣಿ
ಗಾಯತ್ರಿ ದೇವಿಯವರ ಜೊತೆ
ಜವಹರಲಾಲ್ ನೆಹರೂ –
ನವದೆಹಲಿ, 1955.





20. ವಿ.ಕೆ. ಕೃಷ್ಣ ಮೆನನ್ (1997–1974): ನೆಹರೂ ಅವರ ನೆಚ್ಚಿನ ಮಿತ್ರ; ರಕ್ಷಣಾ ಸಚಿವರಾಗಿದ್ದಾಗ ವಿವಾದಾತ್ಮಕ ವ್ಯಕ್ತಿ.




21. ಜೆ.ಬಿ. ಕೃಪಲಾನಿ: ಬ್ರಿಟಿಷ್ ಆಳ್ವಿಕೆ ವಿರುದ್ಧ, ಸ್ವತಂತ್ರ ಭಾರತದ ಸರ್ಕಾರಗಳ ವಿರುದ್ಧ ಹೋರಾಡಿದ ನಾಯಕ.




22. ನೆಹರೂ ಪ್ರತಿಮೆಯನ್ನು ಅವಲೋಕಿಸುತ್ತಿರುವ ಲಾಲ್ ಬಹದೂರ್ ಶಾಸ್ತ್ರಿ.




23. ಟಿಬೆಟ್ ನಾಯಕ, ಧರ್ಮಗುರು ದಲಾಯಿ ಲಾಮಾ ಜೊತೆ ಲಾಲ್ ಬಹದೂರ್ ಶಾಸ್ತ್ರಿ – ನವದೆಹಲಿ 1965.



24. ನಾಗಾ ಚಳುವಳಿ
ಸಂಘಟಿಸಿದ ಹೋರಾಟಗಾರ
ಅಂಗಾಮಿ ಜಮು ಫಿಜೋ.



25. ಫಿಜೋ ಜನ್ಮಸ್ಥಳ
ಖೋನೋಮಾ
ಗ್ರಾಮದಲ್ಲಿರುವ ಹುತಾತ್ಮರ
ಸ್ಮರಣ ಫಲಕ.



ಜಿ. ಎನ್. ರಂಗನಾಥ ರಾವ್ ಹುಟ್ಟಿದ್ದು 1942ರಲ್ಲಿ, ಬೆಂಗಳೂರು ಜಿಲ್ಲೆಯ ಹಾರೋಹಳ್ಳಿಯಲ್ಲಿ. ಶಿಕ್ಷಣ ಹೊಸಕೋಟೆಯಲ್ಲಿ, ಬೆಂಗಳೂರು ನಗರದಲ್ಲಿ. ವೃತ್ತಿಯಿಂದ ಪತ್ರಕರ್ತರಾಗಿರುವ ಅವರು ತಾಯಿನಾಡು, ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಸುಧಾ, ಮಯೂರ ಪತ್ರಿಕೆಗಳಲ್ಲಿ ಉಪಸಂಪಾದಕರಾಗಿ, ಕಾರ್ಯನಿರ್ವಾಹಕ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ರಾವ್ ಸಂವೇದನಾಶೀಲ ಸಾಹಿತ್ಯ ವಿಮರ್ಶೆಗೆ, ಸೊಗಸಾದ ಅನುವಾದಕ್ಕೆ ಹೆಸರಾದವರು. ಹೊಸ ತಿರುವು, ಮಾಸ್ತಿಯವರ ನಾಟಕಗಳು, ಒಳನೋಟ, ಹಿಂದಣ ಹೆಜ್ಜೆ, ಅನ್ಯೋನ್ಯ, ಗುಣ–ದೋಷ ಮುಖ್ಯ ವಿಮರ್ಶಾ ಕೃತಿಗಳು. ಶೇಕ್ಸ್‌ಪಿಯರ್‌ನ ರೋಮಿಯೋ ಜೂಲಿಯಟ್ ಮತ್ತು ಆಂಟನಿ ಕ್ಲಿಯೋಪಾತ್ರ, ಬ್ರೆಕ್ಟನ ಚಾಕ್ ಸರ್ಕಲ್, ಅನ್ವಿಯ ಅಂತಿಗೊನೆ, ಜೀನ್ ಜೆನೆಯ ದಿ ಬ್ಲ್ಯಾಕ್ಸ್, ಟಾಲ್‌ಸ್ಟಾಯ್‌ನ ಡೆತ್ ಆಫ್ ಇವಾನ್ ಇಲ್ಯಿಚ್, ಸೋಲ್ಜೆನಿತ್ಸಿನ್‌ನ ಇವಾನ್ ದೆನಿಸೊವಿಚ್, ಕಾಫ್ಕ ಕತೆಗಳು, ಓ ಹೆನ್ರಿ ಕತೆಗಳು, ಜೆ.ಡಿ.ಬರ್ನಾಲ್‌ನ ಸೋಶಿಯಲ್ ಸೈನ್ಸ್ ಇನ್ ಹಿಸ್ಟರಿ ಅವರು ಅನುವಾದಿಸಿರುವ ಕೃತಿಗಳು. ಇದೀಗ ರಾಮಚಂದ್ರ ಗುಹ ಅವರ ಇಂಡಿಯಾ ಆಫ್ಟರ್ ಗಾಂಧಿ (ಬಾಪೂ ನಂತರದ ಭಾರತ) ಕೃತಿಯ ಭಾಷಾಂತರ. ಸಂದೇಶ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್, ಖಾದ್ರಿ ಶಾಮಣ್ಣ ಪ್ರಶಸ್ತಿ ಅವರು ಪಡೆದಿರುವ ಮುಖ್ಯ ಪುರಸ್ಕಾರಗಳು.

ಬಾಪೂ ನಂತರದ

ಭಾರತ

ಇದೊಂದು ಮೈ ಜುಂ ಎನ್ನಿಸುವ ಕಥಾನಕ. ಓದುಗರನ್ನು ಗತಕಾಲದಲ್ಲಿ ಮುಳುಗಿಸಿ ವರ್ತಮಾನದಲ್ಲಿ ತೇಲಿಸುವ ಈ ಕಥಾನಕದಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಅರವತ್ತೈದು ವರ್ಷಗಳ ಜ್ವಲಂತ ಚಿತ್ರವಿದೆ. ಸ್ವಾತಂತ್ರ್ಯದ ಸಂಭ್ರಮ, ವಿಭಜನೆಯ ನೋವು, ರಾಜಮಹಾರಾಜರ ತಂಟೆ-ತಕರಾರು, ಈಶಾನ್ಯದಲ್ಲಿ ಸಿಡಿದ ಕಿಡಿಗಳು, ಕಾಶ್ಮೀರದ ತವಕ ತಲ್ಲಣಗಳು, ತುರ್ತು ಪರಿಸ್ಥಿತಿಯ ಅತಿರೇಕಗಳು, ಪಕ್ಷ ರಾಜಕೀಯ, ಅಭಿವೃದ್ಧಿಯ ಆಯಾಮಗಳು, ಆರ್ಥಿಕ ಪ್ರಗತಿ, ಜನ ಸಾಮಾನ್ಯರ ದನಿಮಾರ್ದನಿಗಳು, ದುಃಖದುಮ್ಮಾನಗಳು ಇವೆಲ್ಲವೂ ಇಲ್ಲಿವೆ. ಜೊತೆಗೆ ಗಾಂಧೀಜಿ, ನೆಹರೂ, ಪಟೇಲ್, ಅಂಬೇಡ್ಕರ್, ಜಿನ್ನಾ, ಮುರಾರ್ಜಿ, ಶಾಸ್ತ್ರಿ, ಜೆಪಿ, ಇಂದಿರಾ ಗಾಂಧಿ, ಚರಣ್ ಸಿಂಗ್, ಹೀಗೆ ತಮ್ಮ ವರ್ಚಸ್ಸಿನಿಂದ, ಸಾಧನೆಗಳಿಂದ ಇತಿಹಾಸ ನಿರ್ಮಿಸಿದವರೆಲ್ಲರೂ ಇದ್ದಾರೆ. ವಿದ್ವತ್ಪೂರ್ಣ ಅಧ್ಯಯನಕ್ಕೆ, ಶಾಸ್ತ್ರಬದ್ಧ ಸಂಶೋಧನೆಗೆ, ಎಚ್ಚರ ತಪ್ಪದ ವಿಶ್ಲೇಷಣೆಗೆ ಹೆಸರಾಗಿರುವ ಅಂತರರಾಷ್ಟ್ರೀಯ ಖ್ಯಾತಿಯ ಇತಿಹಾಸಕಾರ ರಾಮಚಂದ್ರ ಗುಹ ಅವರ ಈ ಬೃಹದ್ಗ್ರಂಥ ಕೇವಲ ಚರಿತ್ರೆಯಲ್ಲ; ಇದೊಂದು ಭಾರತವೆಂಬ ಬಹುಭಾಷೆಯ, ಬಹು ಸಂಸ್ಕೃತಿಯ, ಬಹುಮುಖೀ ಸಮಾಜದ ವಿರಾಟ್ ಸ್ವರೂಪ.

ವಸಂತ ಪ್ರಕಾಶನ
ನಂ. 360, 10ನೇ 'ಬಿ'ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು - 560 011
ದೂರವಾಣಿ: 22443996
email: vasantha_prakashana@rediffmail.com

ISBN 93-81001-01-4

ಬೆಲೆ ರೂ.290